ಆದಿಲಶಾಹಿ ಸಾಹಿತ್ಯ ಸಂಪುಟ : ೭

ಜಹೂರ್ ಬಿನ್ ಜುಹೂರಿ ವಿರಚಿತ

ಮೊಹಮ್ಮದ ನಾಮಾ

ವಚನಪಿತಾಮಹ ಡಾ॥ ಫ.ಗು. ಹಳಕಟ್ಟಿ ಸಂಶೋಧನ ಕೇಂದ್ರ
ಬಿ.ಎಲ್.ಡಿ.ಇ. ಸಂಸ್ಥೆ, ವಿಜಯಪುರ

ಆದಿಲಶಾಹಿ ಸಾಹಿತ್ಯ ಸಂಪುಟ : ೭

ಜಹೂರ್ ಬಿನ್ ಜುಹೂರಿ

ವಿರಚಿತ

ಮೊಹಮ್ಮದ ನಾಮಾ

ಆದಿಲಶಾಹಿ ಸಾಹಿತ್ಯ ಸಂಪುಟ : ೭

ಜಹೂರ್ ಬಿನ್ ಜುಹೂರಿ

ವಿರಚಿತ

ಮೊಹಮ್ಮದ ನಾಮಾ

ಅನುವಾದಕರು

ಡಾ. ಮಹನೂರ್ ಜಮಾನಿ ಬೇಗಂ

ಪ್ರೊ. ಎ.ಎಚ್. ಮಾಸಾಪತಿ

(ಪುಟ ೧ ರಿಂದ ೧೯೦)

ಫಕೀರ್ ಮುಹಮ್ಮದ ಕಟ್ಪಾಡಿ

ಮೌಲಾನಾ ಸಯ್ಯದ್ ರಶೀದ್ ಎ.ಅಲ್. ಖಾಸಿಮಿ

(ಪುಟ ೧೯೧ ರಿಂದ ४೧೮)

ವಚನಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ

ಬಿ.ಎಲ್.ಡಿ.ಇ. ಸಂಸ್ಥೆ, ಬಿಜಾಪುರ

Mohammad Nama : Parsian work.
Kannada translation by Dr. Mahnoor Zamani Begam, Prof.A.H. Masapati, Fakeer Muhmmad Katpadi, Moulana Sayyad Rashid A.Al Khasimi

Published by : **Dr. P.G.Halakatti Research Centre,**
B.L.D.E. Association, Bijapur, Karnataka

Edition : **2015**

Pages : **xxii + 418 = 440**

Copies : **1000**

Price : **Rs. 200.00**

Typeset : **Dr. P. G. Halakatti Research Centre,** Bijapur

Printed : **Print Point,** Bengaluru. Mob : 9739067359

ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆರ್ಥಿಕ ಅನುದಾನದ ನೆರವಿನಿಂದ ಈ ಪುಸ್ತಕ ಪ್ರಕಟವಾಗಿದೆ.

ಮೊಹಮ್ಮದ ನಾಮಾ : ಪರ್ಶಿಯನ್ ಕೃತಿ.
ಅನುವಾದಕರು : ಡಾ. ಮಹನೂರ್ ಜಮಾನಿ ಬೇಗಂ, ಪ್ರೊ. ಎ.ಎಚ್. ಮಾಸಾಪತಿ, ಫಕೀರ್ ಮುಹಮ್ಮದ ಕಟ್ಪಾಡಿ ಮೌಲಾನಾ ಸಯ್ಯದ್ ರಶೀದ್ ಎ.ಅಲ್. ಖಾಸಿಮಿ

ಪ್ರಕಾಶಕರು : **ವಚನಪಿತಾಮಹ ಡಾ.ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ,**
ಬಿ.ಎಲ್.ಡಿ.ಇ. ಸಂಸ್ಥೆ, ಬಿಜಾಪುರ

ಹಕ್ಕುಗಳು : **ಪ್ರಕಾಶಕರು**

ಆವೃತ್ತಿ : **ಪ್ರಥಮ ೨೦೧೫**

ಪುಟಗಳು : **xxii + ೪೧೮ = ೪೪೦**

ಪ್ರತಿಗಳು : ೧೦೦೦

ಬೆಲೆ : ರೂ. ೨೦೦.೦೦

ಡಿ.ಟಿ.ಪಿ. : **ವಚನಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ, ಬಿಜಾಪುರ**

ಮುದ್ರಣ : **ಪ್ರಿಂಟ್ ಪಾಯಿಂಟ್,** ಬೆಂಗಳೂರು.
ಮೊ. ೯೭೩೯೦೬೭೩೫೯

*

ಆದಿಲ್‌ಶಾಹಿ ಸಾಹಿತ್ಯ ಅನುವಾದ ಸಮಿತಿ

ಅಧ್ಯಕ್ಷರು

ಡಾ. ಎಂ.ಎಂ. ಕಲಬುರ್ಗಿ

ನಿರ್ದೇಶಕರು

ಡಾ. ಕೃಷ್ಣ ಕೊಲ್ಹಾರಕುಲಕರ್ಣಿ

ಸದಸ್ಯರು

ಡಾ. ಬಿ.ಜಿ. ಮೂಲಿಮನಿ

ಡಾ. ರಹಮತ್ ತರೀಕೆರೆ

ಶ್ರೀ ರಂಜಾನ್ ದರ್ಗಾ

ಡಾ. ಎಚ್. ಜಿ. ದಡ್ಡಿ

ವಿಶೇಷ ಆಮಂತ್ರಿತ ಸದಸ್ಯರು

ಶ್ರೀ ಶಿವಯೋಗಿ ಎಸ್. ತಂಬಾಕೆ

ಡಾ. ಎಂ. ಎಸ್. ಮದಭಾವಿ

ಮೌಲಾನಾ ಮಹಬೂಬುರ್ ರಹಮಾನ ಮದನಿ

ಪದನಿಮಿತ್ತ ಸದಸ್ಯರು

ಜಿಲ್ಲಾಧಿಕಾರಿಗಳು, ಬಿಜಾಪುರ

ಸಹಾಯಕ ನಿರ್ದೇಶಕರು,

ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬಿಜಾಪುರ

*

ಅಧ್ಯಕ್ಷರ ಮಾತು

ಎಂ. ಎಂ. ಕಲಬುರ್ಗಿ

ವಿಜಾಪುರದ ಬಿ.ಎಲ್.ಡಿ. ಶಿಕ್ಷಣ ಸಂಸ್ಥೆ ಇತ್ತೀಚಿನ ದಿನಗಳಲ್ಲಿ ಸಾಂಸ್ಕೃತಿಕ ಸಂಸ್ಥೆಯಾಗಿಯೂ ಬೆಳೆಯುತ್ತಲಿದೆ. ಈ ಸಂಸ್ಥೆಯ ಭಾಗವಾಗಿರುವ 'ವಚನಪಿತಾಮಹ ಡಾ॥ ಫ.ಗು. ಹಳಕಟ್ಟಿ ಸಂಶೋಧನ ಸಂಸ್ಥೆ'ಯ ಇಂದಿನ ಕಾರ್ಯ ಮತ್ತು ಕಾರ್ಯಕ್ರಮಗಳು ಇದಕ್ಕೆ ಉದಾಹರಣೆಯೆನಿಸಿವೆ.

ಡಾ॥ ಫಗು.ಹಳಕಟ್ಟಿಯವರದು ಕೇವಲ ವ್ಯಕ್ತಿಕಲ್ಯಾಣಕೇಂದ್ರಿತ ವ್ಯಕ್ತಿತ್ವವಲ್ಲ, ಸಮಾಜಕಲ್ಯಾಣ ಕೇಂದ್ರಿತ ವ್ಯಕ್ತಿತ್ವ. ಇದಕ್ಕೆ ತಕ್ಕಂತೆ ಅವರ ಹೆಸರಿನ ಈ ಸಂಸ್ಥೆ ಎಲ್ಲ ಸಮಾಜಗಳನ್ನು–ಸಾಮಾಜಿಕರನ್ನು 'ಇವ ನಮ್ಮವ, ಇವ ನಮ್ಮವ, ಇವ ನಮ್ಮವ' ಎಂಬ ಆದರ್ಶದಲ್ಲಿ ಬೆಳೆಯುತ್ತಲಿದೆ. ಇದಕ್ಕೆ ಸಾಕ್ಷಿಯಾಗಿದೆ, ಈ ಸಂಸ್ಥೆ ಕೈಗೆತ್ತಿಕೊಂಡಿರುವ 'ಆದಿಲ್‌ಶಾಹಿ ಸಾಹಿತ್ಯ ಅನುವಾದ ಯೋಜನೆ'.

ಮಧ್ಯಕಾಲೀನ ಭಾರತೀಯ ಇತಿಹಾಸದಲ್ಲಿ ವಿಜಾಪುರದ ಆದಿಲ್‌ಶಾಹಿಗಳ ಹೆಸರು ಪ್ರಸಿದ್ಧವಾದುದು, ಸುಪ್ರಸಿದ್ಧವಾದುದು. ಏಕಕಾಲಕ್ಕೆ ಉತ್ತರದ ಮೊಗಲರೊಂದಿಗೆ, ದಕ್ಷಿಣದ ವಿಜಯನಗರದವರೊಂದಿಗೆ ಸಂಘರ್ಷ–ಸಮನ್ವಯದಿಂದ ೧೪೮೯–೧೬೮೬ರ ವರೆಗೆ ರಾಜ್ಯಭಾರಮಾಡಿದ ರಾಜಮನೆತನವಿದು. 'ದಿನೇ ಇಲಾಹಿ' ಖ್ಯಾತಿಯ ಮೊಗಲ್ ಮನೆತನದ ಅಕಬರನಂತೆ 'ದಾದೇ ಇಲಾಹಿ' ಖ್ಯಾತಿಯ ಆದಿಲ್‌ಶಾಹಿ ಮನೆತನದ ಜಗದ್ಗುರು ೨ನೆಯ ಇಬ್ರಾಹಿಮ್ ಬಾದಶಹನು ಸಮನ್ವಯಸಮಾಜ ಸ್ಥಾಪಿಸಲು ನಿರತನಾದುದು ಗಮನಾರ್ಹವೆನಿಸಿದೆ.

ಈ ಮನೆತನದ ಎಂಟು ಜನ ಅರಸರು ಸಾಹಿತಿಗಳು–ಸಾಹಿತ್ಯಪ್ರೇಮಿಗಳು. ಈ ಸಾಹಿತ್ಯ ಲೌಕಿಕ–ಧಾರ್ಮಿಕ ಎರಡೂ ಆಯಾಮಗಳಲ್ಲಿ ಬಿಚ್ಚಿ ಬೆಳೆದಿದೆ. ಹಿಂದೂಗಳದು ಪುರಾಣಪ್ರಜ್ಞೆಯಾದರೆ, ಮುಸಲ್ಮಾನರದು ಇತಿಹಾಸಪ್ರಜ್ಞೆ. ಈ ಪ್ರಜ್ಞೆಗೆ ಅನುಗುಣವಾಗಿ ಇವರ ಆಸ್ಥಾನದಲ್ಲಿ–ಇವರ ರಾಜ್ಯದಲ್ಲಿ ಸುಮಾರು ೨೦ ಕೃತಿಗಳು ಹುಟ್ಟಿಕೊಂಡಿವೆ.

ಸಮಕಾಲೀನ ರಾಜಕೀಯದೊಂದಿಗೆ ಜೀವನದ ಇತರ ಕ್ಷೇತ್ರಗಳನ್ನೂ ಚಿತ್ರಿಸಿದ ಈ ಸಾಹಿತ್ಯದ ಬಹುಭಾಗ ಪ್ರಕಟವಾಗದೆ, ಕನ್ನಡಕ್ಕೆ ಅನುವಾದವಾಗದೆ ಉಳಿದಿದ್ದಿತು. ಈ ದೊಡ್ಡ ಆಕರವನ್ನು ಕೈಬಿಟ್ಟು ಈವರೆಗೆ ಇತಿಹಾಸ ಬರೆದುದು ವಿಷಾದದ ಸಂಗತಿಯಾಗಿದೆ. ಇದಕ್ಕೆ ಕಾರಣ, ಈ ಸಾಹಿತ್ಯ ಪರ್ಶಿಯನ್, ದಖನಿ–ಉರ್ದು ಭಾಷೆಯಲ್ಲಿರುವುದು ಮತ್ತು ಈ ಅರಸರು ಅನ್ಯರೆಂದು ಭಾವಿಸಿರುವುದು. 'ವಚನಪಿತಾಮಹ ಡಾ॥ ಫ.ಗು. ಹಳಕಟ್ಟಿ ಸಂಶೋಧನ ಸಂಸ್ಥೆ' ಈ ಯಾವುದೇ ಭಿನ್ನತೆ ಪರಿಗಣಿಸದೆ ಪ್ರಸ್ತುತ ಯೋಜನೆಯನ್ನು ಕೈಗೆತ್ತಿಕೊಂಡಿದೆ.

ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆರ್ಥಿಕ ಅನುದಾನದ ನೆರವಿನಿಂದ ಈ ಯೋಜನೆ ಅಸ್ತಿತ್ವಕ್ಕೆ ಬಂದಿದೆ. ಇದನ್ನು ಒದಗಿಸುವಲ್ಲಿ ತೀವ್ರ ಆಸಕ್ತಿ ವಹಿಸಿದವರು ಈ ಹಿಂದೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರಾಗಿದ್ದ ಶ್ರೀ ಗೋವಿಂದ ಕಾರಜೋಳ ಅವರು. ಈ ಆಸಕ್ತಿಯನ್ನು ಮುಂದುವರಿಸುತ್ತಲಿರುವವರು ಇಂದು ಸಚಿವರಾಗಿರುವ ಶ್ರೀಮತಿ ಉಮಾಶ್ರೀ ಅವರು. ಸಹಕರಿಸಿದವರು ಈ ಇಲಾಖೆಯ ಅಧಿಕಾರಿಗಳು. ಇವರಿಗೆ ನಾವು ಕೃತಜ್ಞರಾಗಿದ್ದೇವೆ.

ಬಿ.ಎಲ್.ಡಿ ಶಿಕ್ಷಣ ಸಂಸ್ಥೆ ನಮಗೆಲ್ಲ ಹೆಮ್ಮೆಯ ಮಾದರಿ. ಈ ರೀತಿಯಲ್ಲಿ ಇದನ್ನು ಬೆಳೆಸುತ್ತಲಿರುವವರು ಅಧ್ಯಕ್ಷರಾದ ಶ್ರೀ ಎಂ.ಬಿ. ಪಾಟೀಲರು. ಈ ಸಂಸ್ಥೆಯ ಅಂಗವಾಗಿರುವ 'ವಚನಪಿತಾಮಹ ಡಾ॥ ಫ.ಗು. ಹಳಕಟ್ಟಿ ಸಂಶೋಧನ ಸಂಸ್ಥೆ'ಗಾಗಿ ತ್ರಿಕರಣಪೂರ್ವಕ ದುಡಿಯುತ್ತಲಿರುವವರು ಇದರ ಅಧ್ಯಕ್ಷರಾದ ಶ್ರೀ ಶಿವಯೋಗಿ ತಂಬಾಕೆಯವರು. ಇವರಿಬ್ಬರ ಪ್ರೋತ್ಸಾಹ–ನೆರವುಗಳಿಗೆ, ಈ ಯೋಜನೆಯ ಸಲಹಾಮಂಡಳಿಯ ಸದಸ್ಯರ ಮಾರ್ಗದರ್ಶನಕ್ಕೆ, ಅನುವಾದ ಕಾರ್ಯದಲ್ಲಿ ವಿದ್ವಾಂಸರು ನೀಡಿದ ಸಹಕಾರಕ್ಕೆ ಅಭಿನಂದನೆಗಳು.

ಸರಕಾರ ರೂಪಿಸಿದ ಸಲಹಾಮಂಡಳಿಯ ನಿರ್ದೇಶನದಂತೆ ಈ ಯೋಜನೆಗಾಗಿ ಡಾ॥ ಫ.ಗು. ಹಳಕಟ್ಟಿ ಭವನದಲ್ಲಿ ಒಂದು ಸ್ವತಂತ್ರ ಕಾರ್ಯಾಲಯವನ್ನು, ಅಗತ್ಯ ಸಿಬ್ಬಂದಿವರ್ಗವನ್ನು ಅಸ್ತಿತ್ವಕ್ಕೆ ತರಲಾಯಿತು. ಈ ಮಣಿಹಕ್ಕೆ ಡಾ॥ ಕೃಷ್ಣ ಕೊಲ್ಹಾರಕುಲಕರ್ಣಿ ಅವರು ನಿರ್ದೇಶಕರಾಗಿ ಲಭಿಸಿರುವುದು ಒಂದು ಸುಯೋಗವೆಂದೇ ಭಾವಿಸುತ್ತೇವೆ. ಮೊದಲಿನಿಂದಲೂ ಆದಿಲ್‌ಶಾಹಿ ಸಾಹಿತ್ಯ–ಸಂಸ್ಕೃತಿಗಳ ಅಧ್ಯಯನದಲ್ಲಿ ನಿಮಗ್ನರಾದ ಇವರು ಈ ಯೋಜನೆಗಾಗಿ ದುಡಿದ ರೀತಿ ಅನನ್ಯವಾದುದು. ಹಸ್ತಪ್ರತಿ–ಮುದ್ರಿತಪ್ರತಿಗಳ ಸಂಗ್ರಹ, ಸೂಕ್ತ ಅನುವಾದಕರ ಆಯ್ಕೆ, ಅವರಿಂದ ಕೆಲಸಮಾಡಿಸಿಕೊಳ್ಳುವ ರೀತಿ, ಅನುವಾದಗಳ ಪರಿಷ್ಕರಣ–ಪ್ರಕಟಣೆ ಇತ್ಯಾದಿಗಳಿಗಾಗಿ ಇವರು ತ್ರಿವಿಕ್ರಮಪ್ರಜ್ಞೆಯಿಂದ ಶ್ರಮಿಸಿದ್ದಾರೆ. ಇವರೊಂದಿಗೆ ಫ.ಗು. ಹಳಕಟ್ಟಿ ಸಂಶೋಧನ ಸಂಸ್ಥೆಯ ಕಾರ್ಯದರ್ಶಿಗಳಾದ ಡಾ॥ ಎಂ.ಎಸ್. ಮದಭಾವಿ ಅವರು ನಿರಪೇಕ್ಷ ಭಾವದಿಂದ ಹಗಲಿರುಳು ದುಡಿದಿದ್ದಾರೆ. ಇವರೊಂದಿಗೆ ಮಿಕ್ಕ ಸಿಬ್ಬಂದಿವರ್ಗದವರು ಸಹಕರಿಸಿದ ರೀತಿಯೂ ಸ್ಮರಣೀಯವಾಗಿದೆ. ಇವರೆಲ್ಲರಿಗೂ ಕೃತಜ್ಞತೆಗಳು.

■

*

ಪ್ರಸ್ತಾವನೆ

ಸಮಿತಿ ಸದಸ್ಯರು

ಮಧ್ಯಯುಗೀನ ಭಾರತದ ಚರಿತ್ರೆಯಲ್ಲಿ ವಿಜಯಪುರದ ಆದಿಲಶಾಹಿಗಳ ಪಾತ್ರ ಬಹು ಮುಖ್ಯವಾಗಿದೆ. ದಕ್ಷಿಣ ಭಾರತದ ಬಹುಪಾಲು ಪ್ರದೇಶವನ್ನು ಅವರು ವಿಜಯಪುರ ಕೇಂದ್ರದಿಂದ ಆಳಿದರು. ಇಂದಿನ ಅಖಂಡ ಕರ್ನಾಟಕವನ್ನು ಅವರು ಸುಮಾರು ಒಂದು ಶತಮಾನದಷ್ಟು ಕಾಲ ತಮ್ಮ ಅಂಕಿತದಲ್ಲಿ ಇಟ್ಟುಕೊಂಡಿದ್ದರು. ಹೀಗಾಗಿ ಆದಿಲಶಾಹಿಗಳ ಚರಿತ್ರೆಯನ್ನು ಅಭ್ಯಸಿಸದೆ ಕರ್ನಾಟಕದ ಚರಿತ್ರೆ ಪೂರ್ಣಗೊಳ್ಳುವುದಿಲ್ಲ.

ಈ ಆದಿಲಶಾಹಿಗಳ ರಾಜ್ಯವು ಕ್ರಿ.ಶ. ೧೪೮೯ರಿಂದ ೧೬೮೬ರ ವರೆಗೆ ಅಸ್ತಿತ್ವದಲ್ಲಿದ್ದಿತು. ೮ ಜನ ಬಾದಶಹರು ಆಳಿದರು. ಈ ಬಾದಶಹರುಗಳ ವ್ಯಕ್ತಿತ್ವ ವರ್ಣಮಯವಾಗಿದ್ದಿತು. ಸಾಹಿತ್ಯ, ಸಂಗೀತ, ಕಲೆ, ವಾಸ್ತುಶಿಲ್ಪ, ಧರ್ಮ ಜೊತೆಗೆ ರಾಜಕಾರಣ ಇವುಗಳಲ್ಲೆಲ್ಲ ಇವರು ತಮ್ಮದೇ ಆದ ಮುದ್ರೆಯನ್ನು ಒತ್ತಿ ಹೋಗಿದ್ದಾರೆ.

ಇಂದು ಜಗತ್ತಿನಲ್ಲೆಲ್ಲ ಓದುತ್ತಿರುವ ಭಾರತೀಯ ಮುಸಲ್ಮಾನರ ಚರಿತ್ರೆಯಾಗಿರುವ 'ತಾರೀಖೆ ಫರಿಶ್ತಾ' [ಪರ್ಶಿಯನ್] ಕೃತಿಯ ಕರ್ತೃ ಮುಹಮ್ಮದ್ ಕಾಸಿಮ ಫರಿಶ್ತಾ, ಎರಡನೆಯ ಇಬ್ರಾಹಿಮ ಆದಿಲಶಾಹ (ಕ್ರಿ.ಶ.೧೫೮೦–೧೬೨೭)ನ ಅಸ್ಥಾನದಲ್ಲಿದ್ದುಕೊಂಡು ಈ ಗ್ರಂಥವನ್ನು ಬರೆದನು. ಅದರಂತೆ ಇನ್ನೂ ಹಲವಾರು ಜನ ಇತಿಹಾಸಕಾರರು, ಕವಿಗಳು ಆದಿಲಶಾಹಿ ಆಸ್ಥಾನದಲ್ಲಿ ಇದ್ದುಕೊಂಡು ಕೃತಿಗಳನ್ನು ರಚಿಸಿದ್ದಾರೆ. ಅವುಗಳೆಲ್ಲ ಅಂದು ಪ್ರಚಲಿತದಲ್ಲಿದ್ದ ಪರ್ಶಿಯನ್ ಇಲ್ಲವೆ ದಖನಿ–ಉರ್ದು ಭಾಷೆಗಳಲ್ಲಿ ರಚಿತವಾಗಿವೆ.

ನಾಡಿನ ವಿಶ್ವವಿದ್ಯಾಲಯಗಳು, ಭಾರತೀಯ ಇತಿಹಾಸ ಅನುಸಂಧಾನ ಇತ್ಯಾದಿ ಸಂಸ್ಥೆಗಳು ಇತಿಹಾಸದ ಕೆಲಸ ಮಾಡುತ್ತಿದ್ದರೂ ಆದಿಲಶಾಹಿಗಳ ವಿಷಯದಲ್ಲಿ ಆಗಬೇಕಾದಷ್ಟು ಆಗಲಿಲ್ಲ. ಅದಕ್ಕೆ ಕಾರಣ, ಬಹುಶಃ ಅಧ್ಯಯನಕ್ಕೆ ಬೇಕಾಗುವ ಮೂಲ ಆಕರಗಳು ವಿಶ್ವದಾದ್ಯಂತ ಚದರಿ ಹೋಗಿರುವುದು ಮತ್ತು ಅವು ಪರ್ಶಿಯನ್, ದಖನಿ–ಉರ್ದು

ಭಾಷೆಗಳಲ್ಲಿರುವುದು. ಈ ಕೊರತೆಯನ್ನು ಗಮನಿಸಿ ವಿಜಯಪುರ ಆದಿಲಶಾಹಿ ಕಾಲದ ಸಾಹಿತ್ಯವನ್ನು ಕನ್ನಡದಲ್ಲಿ ಪ್ರಕಟಿಸುವ ಪ್ರಯತ್ನವಾಗಿದೆ 'ಆದಿಲಶಾಹಿ ಸಾಹಿತ್ಯ ಅನುವಾದ ಯೋಜನೆ'.

ಹಂಪಿಯ ಕನ್ನಡ ವಿಶ್ವವಿದ್ಯಾಲಯಕ್ಕೆ ಸಂಲಗ್ನವಾಗಿರುವ ವಿಜಯಪುರ ಬಿ.ಎಲ್.ಡಿ.ಇ. ಸಂಸ್ಥೆಯ ವಚನಪಿತಾಮಹ ಡಾ.ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರವು ಕಳೆದ ದಶಕದಿಂದ ಸಂಶೋಧನಕ್ಷೇತ್ರದಲ್ಲಿ ಅಪರೂಪದ ಕೆಲಸವನ್ನು ಮಾಡುತ್ತಿದೆ. ಡಾ. ಫ.ಗು. ಹಳಕಟ್ಟಿ ಅವರ ಸಮಗ್ರಸಾಹಿತ್ಯವನ್ನು ೧೫ ಸಂಪುಟಗಳಲ್ಲಿ ಸಂಪಾದಿಸಿ ಪ್ರಕಟಿಸಿದೆ. ೮ ವಿದ್ಯಾರ್ಥಿಗಳು ವಿವಿಧ ವಿಷಯಗಳಲ್ಲಿ ಪಿಎಚ್.ಡಿ ಪದವಿಗಳನ್ನು ಪಡೆದಿದ್ದಾರೆ. ಇನ್ನೂ ಹಲವರು ಪದವಿ ಪಡೆಯುವ ದಾರಿಯಲ್ಲಿದ್ದಾರೆ. ಇದಕ್ಕೆಲ್ಲ ಬಿ.ಎಲ್.ಡಿ.ಇ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಎಂ.ಬಿ.ಪಾಟೀಲ ಅವರ ನಿರಂತರ ಬೆಂಬಲವೇ ಕಾರಣವಾಗಿದೆ. ಅವರ ಆಸಕ್ತಿಯಂತೆ ಸಂಶೋಧನ ಕೇಂದ್ರವು 'ಆದಿಲಶಾಹಿ ಸಾಹಿತ್ಯ ಅನುವಾದ ಯೋಜನೆ'ಯನ್ನು ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಕಳಿಸಿತು. ಯೋಜನೆಯ ಮಹತ್ವವನ್ನು ಗುರುತಿಸಿ ಕರ್ನಾಟಕ ಸರಕಾರವು, ಡಾ. ಎಂ.ಎಂ. ಕಲಬುರ್ಗಿ ಅವರ ಅಧ್ಯಕ್ಷತೆಯಲ್ಲಿ ಡಾ. ಬಿ.ಜಿ.ಮೂಲಿಮನಿ, ಡಾ. ರಹಮತ್ ತರೀಕೆರೆ. ಶ್ರೀ ರಂಜಾನ್ ದರ್ಗಾ. ಡಾ. ಕೃಷ್ಣ ಕೊಲ್ಹಾರಕುಲಕರ್ಣಿ ಮತ್ತು ಡಾ. ಎಚ್.ಜಿ.ದಡ್ಡಿ– ಸದಸ್ಯರನ್ನೊಳಗೊಂಡ ಒಂದು ಸಮಿತಿಯನ್ನು ರಚಿಸಿ ಇದಕ್ಕೆ ಅನುಮತಿ ನೀಡಿತು.

ದಿನಾಂಕ ೧೨–೩–೨೦೧೩ರಂದು ನಡೆದ ಸಮಿತಿಯ ಪ್ರಥಮ ಸಭೆಯಲ್ಲಿ ಡಾ. ಕೃಷ್ಣ ಕೊಲ್ಹಾರಕುಲಕರ್ಣಿ ಅವರು ಈ ಯೋಜನೆಯ ನಿರ್ದೇಶಕರಾಗಿರಬೇಕೆಂದು, ಸಂಶೋಧನಕೇಂದ್ರದ ಅಧ್ಯಕ್ಷರಾದ ಶ್ರೀ ಶಿವಯೋಗಿ ತಂಬಾಕೆ ಮತ್ತು ಕಾಯದರ್ಶಿ ಡಾ. ಎಂ.ಎಸ್.ಮದಭಾವಿ ಅವರು ಸಮಿತಿಯ ಪದನಿಮಿತ್ತ ಸದಸ್ಯರಾಗಬೇಕೆಂದು ನಿರ್ಣಯಿಸಲಾಯಿತು.

ದಿನಾಂಕ ೧೫–೬–೨೦೧೩ರಂದು ನಡೆದ ಸಮಿತಿಯ ಎರಡನೆಯ ಸಭೆಯಲ್ಲಿ ಪರ್ಶಿಯನ್, ಅರೇಬಿಕ್, ದಖನಿ–ಉರ್ದು ಭಾಷೆಗಳಲ್ಲಿ ವಿದ್ವಾಂಸರಾದ ಮೌಲಾನಾ ಮಹಬೂಬುರ್ ರಹಮಾನ ಮದನಿ ಅವರನ್ನು ವಿಶೇಷ ಆಮಂತ್ರಿತ ಸದಸ್ಯರೆಂದು ತೀರ್ಮಾನಿಸಲಾಯಿತು.

ಇದು ಭಾರತದಲ್ಲಿಯೇ ಒಂದು ಅಪರೂಪದ ಯೋಜನೆ. ಮಧ್ಯಯುಗೀನ ಆದಿಲಶಾಹಿಗಳ ಕಾಲದಲ್ಲಿ ರಚಿತಗೊಂಡ ಎಲ್ಲ ಸಾಹಿತ್ಯವನ್ನು ಕನ್ನಡಕ್ಕೆ ತರುವುದು ಯೋಜನೆಯ ಮುಖ್ಯ ಉದ್ದೇಶ.

ಪ್ರಾರಂಭದಲ್ಲಿ ಆದಿಲಶಾಹಿ ಚರಿತ್ರೆಗೆ ಸಂಭಂಧಪಟ್ಟ ಈ ಕೆಳಗಿನ ಸಮಕಾಲೀನ ಕೆಲವು ಚರಿತ್ರ ಗ್ರಂಥಗಳ ಪಟ್ಟಿಯನ್ನು ಮಾಡಲಾಯಿತು. ಅವು ದೊರೆಯುವ ಸಂಭಾವ್ಯ ಸ್ಥಳಗಳನ್ನೂ ಹೀಗೆ ಗುರುತಿಸಲಾಯಿತು.

೧. **ಮುಹಮ್ಮದ ಕಾಸೀಮ ಫರಿಶ್ತಾ** : ತಾರೀಖೆ ಫರಿಶ್ತಾ [ಪರ್ಶಿಯನ್].
ಇಂಗ್ಲಿಷ್‌ಗೆ ಅನುವಾದ ಕ್ಯಾಪ್ಟನ್ ಬ್ರಿಗ್ಸ [ಕ್ರಿ.ಶ. ೧೮೮೯], ಮೂಲ ಪರ್ಶಿಯನ್ ಹಸ್ತಪ್ರತಿ ಮುಂಬಯಿ ಅರ್ಕೀವ್ಸ, ಸಾಲಾರ ಜಂಗ ವಸ್ತುಸಂಗ್ರಹಾಲಯ ಹೈದರಾಬಾದ ಇತ್ಯಾದಿಗಳಲ್ಲಿ ಲಭ್ಯ.

೨. **ಅಬ್ದುಲ್ಲಾ ದೆಹಲವಿ** : ಇಬ್ರಾಹಿಮನಾಮಾ [ದಖನಿ].
ಪ್ರಕಟವಾಗಿದೆ. ಮೂಲ ದಖನಿ ಹಸ್ತಪ್ರತಿ ಮುಂಬಯಿ ಅರ್ಕೀವ್ಸ ಮತ್ತು ಸಾತಾರಾದ ಔಂಧ ಅರ್ಕೀವ್ಸದಲ್ಲಿವೆ.

೩. **ಅಸದಬೇಗ** : ವಾಕಿಯಾತೆ ಅಸದಬೇಗ [ಪರ್ಶಿಯನ್].
ಚಾಪ್‌ಮನ್‌ನಿಂದ ಅನುವಾದವಾಗಿದೆ [೧೮ನೆ ಶತ]. ನಂತರ ಪಿ.ಎಂ.ಜೋಶಿ ಅವರಿಂದಲೂ, ಜೊತೆಗೆ ಇಲಿಯಟ್ ಮತ್ತು ಡೌಸನ್ ಸಂಪುಟ ೬ರಲ್ಲಿಯೂ ಭಾಗಶಃ ಅನುವಾದ. ಇದರ ಹಸ್ತಪ್ರತಿಯು ಆಂಧ್ರಪ್ರದೇಶ ಪ್ರಾಚೀನ ಹಸ್ತಪ್ರತಿಗಳ ಸಂಗ್ರಹ ಹೈದರಾಬಾದಿನಲ್ಲಿ ಲಭ್ಯ.

೪. **ಕಾಜಿ ನೂರುಲ್ಲಾ** : ತಾರೀಖೆ ಅಲಿ ಆದಿಲಶಹ [ಪರ್ಶಿಯನ್].
ಮೂಲ ಹಸ್ತಪ್ರತಿಗಳು ಮುಂಬಯಿ ಅರ್ಕೀವ್ಸ, ಇಂಡಿಯಾ ಆಫೀಸ ಲಾಯಬ್ರರಿ ಲಂಡನ್ ಮತ್ತು ಬ್ರಿಟಿಶ್ ಮ್ಯುಜಿಯಮ್ ಲಾಯಬ್ರರಿ ಲಂಡನ್, ಸಾಲಾರಜಂಗ ವಸ್ತುಸಂಗ್ರಹಾಲಯ(ಹೈದರಾಬಾದ್)ಗಳಲ್ಲಿ ಲಭ್ಯ.

೫. **ಜುಹೂರ್ ಬಿನ್ ಜುಹೂರಿ** : ಮುಹಮ್ಮದನಾಮಾ [ಪರ್ಶಿಯನ್].
ಹಸ್ತಪ್ರತಿಯು ಪ್ರಾಚ್ಯ ವಸ್ತುಸಂಗ್ರಹಾಲಯ ವಿಜಯಪುರದಲ್ಲಿ ಲಭ್ಯ ಭಾಗಶಃ ಬಿ.ಡಿ. ವರ್ಮಾರಿಂದ ಇಂಗ್ಲಿಷನಲ್ಲಿ ಅನುವಾದ.

೬. **ನುಸ್ರತಿ** : ಅಲಿನಾಮಾ [ದಖನಿ].
ಪ್ರಕಟವಾಗಿದೆ. ಪ್ರತಿ ದುರ್ಲಭ.

೭. **ಮೌಲ್ವಿ ಬಶೀರುದ್ದೀನ ಅಹ್ಮದ** : ವಾಕಿಯಾತೆ ಮಮಲಿಕತ್ ವಿಜಯಪುರ [ಉರ್ದು].
ಕರ್ನಾಟಕ ಉರ್ದು ಅಕಡೆಮಿಯಿಂದ ಪ್ರಕಟ. ಮೂಲಪ್ರತಿ ಸಾಲಾರಜಂಗ ಮ್ಯುಜಿಯಮ್ ಹೈದರಾಬಾದದಲ್ಲಿ ಲಭ್ಯ.

೮. **ಮುಹಮ್ಮದ ಹಾಶೀಮ ಘುಜೂನಿ**: ಘುತುಹತೆ ಆದಿಲಶಾಹಿ [ಪರ್ಶಿಯನ್].
ಮುಂಬಯಿ ಅರ್ಕೀವ್ಸ ಬ್ರಿಟಿಶ್ ಇಂಡಿಯಾ ಲಾಯಬ್ರರಿ ಲಂಡನ್‌ಗಳಲ್ಲಿ ಹಸ್ತಪ್ರತಿಗಳಿವೆ.

೯. **ಮೀರ್ ರಫೀಯುದ್ದೀನ ಶಿರಾಜಿ** : ತಜ್ಕಿದತುಲ್ ಮುಲೂಕ [ಪರ್ಶಿಯನ್].
ಸಾಲಾರಜಂಗ ವಸ್ತುಸಂಗ್ರಹಾಲಯ ಹೈದರಾಬಾದದಲ್ಲಿ ಹಸ್ತಪ್ರತಿ ಲಭ್ಯ.

೧೦. **ಶೇಖ್ ಜೈನುದ್ದೀನ ಅಲ್ ಮಾಬಾರಿ** : ತುಹಫತುಲ್ ಮುಜಾಹಿದೀನ [ಅರೇಬಿಕ್].
ಇಂಗ್ಲಿಷ್ ಅನುವಾದ ಪ್ರಕಟವಾಗಿದೆ.

೧೧. **ಸೈಯದ ಅಲಿ ಬಿಲಗ್ರಾಮಿ** : ತಾರೀಖೆ ದಖನ್ ೪ ಸಂಪುಟಗಳು [ಉರ್ದು].

೧೨. **ಸಯ್ಯದ ಮೊಹಿಯುದ್ದೀನ ಪೀರಜಾದಾ**: ಅಹವಾಲೆ ಸಲಾತೀನ ವಿಜಯಪುರ [ಪರ್ಶಿಯನ್].
ಬ್ರಿಟಿಶ್ ವಸ್ತುಸಂಗ್ರಹಾಲಯ ಲಂಡನ್, ಹಸ್ತಪ್ರತಿ ಸಂಖ್ಯೆ ೨೬೨೭೦.

೧೩. **ಫಿತೂರಖಾನ ವಲ್ಲದ ಅಸದಖಾನ ಲ್ಯಾರಿ** : ತಾರೀಖೆ ಹಪ್ತಕುರ್ಸೀ [ಪರ್ಶಿಯನ್].
ಸಾಲಾರಜಂಗ ವಸ್ತು ಸಂಗ್ರಹಾಲಯ, ಹೈದರಾಬಾದ. ಇಂಡಿಯಾ ಆಫೀಸ ಲಾಯಬ್ರರಿ ಲಂಡನ್‌ಗಳಲ್ಲಿ ಹಸ್ತಪ್ರತಿ ಲಭ್ಯ.

೧೪. **೨ನೆಯ ಇಬ್ರಾಹಿಮ ಆದಿಲಶಹ** : ಕಿತಾಬೆ ನವರಸ [ದಖನಿ].
ಪ್ರಕಟವಾಗಿದೆ.

೧೫. **ಮುಹಮ್ಮದ್ ಇಬ್ರಾಹಿಮ್ ಜುಬೇರಿ** : ರೌಜತುಲ್ ಔಲಿಯಾ ಎ ವಿಜಯಪುರ [ಪರ್ಶಿಯನ್].
ಆಂಧ್ರಪ್ರದೇಶ ಪ್ರಾಚ್ಯ ಹಸ್ತಪ್ರತಿ ಸಂಗ್ರಹ ಹೈದರಾಬಾದದಲ್ಲಿ ಹಸ್ತಪ್ರತಿ ಲಭ್ಯ. ಸಂಖ್ಯೆ ೧೪೮೧೩.

೧೬. **ಮುಹಮ್ಮದ್ ಇಬ್ರಾಹಿಮ್ ಜುಬೇರಿ** : ಬಸಾತೀನೆ ಸಲಾತೀನ [ಪರ್ಶಿಯನ್].
ಮರಾಠೀ ಅನುವಾದದಿಂದ ಕನ್ನಡಕ್ಕೆ ಅನುವಾದ ಆಗಿದೆ. ಪರ್ಶಿಯನ್ ಹಸ್ತಪ್ರತಿ ಸಾಲಾರಜಂಗ ವಸ್ತುಸಂಗ್ರಹಾಲಯ ಹೈದರಾಬಾದದಲ್ಲಿ ಲಭ್ಯ.

೧೭. **ಮೀರ ಅಹಮದ ಅಲಿಖಾನ** : ಗುಲದಸ್ತಾ ಎ ವಿಜಯಪುರ [ದಖನಿ].
ಆಂಧ್ರಪ್ರದೇಶ ಆರ್ಕೀವ್ಸದಲ್ಲಿ ಹಸ್ತಪ್ರತಿ ಲಭ್ಯ. ಸಂಖ್ಯೆ ೧೯೩.

೧೮. **ಅಬುಲ ಹಸನ ಕಾದಿರಿ** : ಶಾಹಿಪತ್ ಇ ಹುದಾ [ಪರ್ಶಿಯನ್].
ಸಾಲಾರಜಂಗ ವಸ್ತುಸಂಗ್ರಹಾಲಯ ಹೈದರಾಬಾದದಲ್ಲಿ ಹಸ್ತಪ್ರತಿ ಲಭ್ಯ.

೧೯. **ಆದಿಲಶಾಹಿಕಾಲದ ಫರ್ಮಾನುಗಳು ಮತ್ತು ಸನದುಗಳು** : ಭಾರತ ಇತಿಹಾಸ ಸಂಶೋಧಕ ಮಂಡಳ ಪುಣೆ, ವಿಜಯಪುರ ವಸ್ತುಸಂಗ್ರಹಾಲಯ ಮತ್ತು ಇತರ ಸ್ಥಳಗಳಲ್ಲಿ ಲಭ್ಯ.

ಹೀಗೆ ಪಟ್ಟಿಮಾಡಿ, ಹಸ್ತಪ್ರತಿಗಳ ಶೋಧಕ್ಕೆ ತೊಡಗಲಾಯಿತು. ಸಾಲಾರಜಂಗ ವಸ್ತುಸಂಗ್ರಹಾಲಯ, ಆಂಧ್ರಪ್ರದೇಶ ಆರ್ಕೀವ್ಸ ಹೈದರಾಬಾದ, ಭಾರತೀಯ ಪುರಾತತ್ವ

ಇಲಾಖೆ ವಸ್ತುಸಂಗ್ರಹಾಲಯ, ಗೋಳಗುಮ್ಮಟ ವಿಜಯಪುರ– ಈ ಕೇಂದ್ರಗಳಿಂದ ಕೆಳಗಿನ ಹಸ್ತಪ್ರತಿಗಳು ದೊರೆತವು.

೧. ಕಾಜಿ ನೂರುಲ್ಲಾ : ತಾರೀಖೆ ಅಲಿ ಆದಿಲಶಹ [ಪರ್ಶಿಯನ್]

೨. ಮೀರ್ ರಫೀಯುದ್ದೀನ ಶಿರಾಜಿ : ತಜ್ಕಿದತುಲ್ ಮುಲೂಕ [ಪರ್ಶಿಯನ್]

೩. ಫಿತೂರಖಾನ ವಲ್ಲದ ಅಸದಖಾನ ಲ್ಯಾರಿ : ತಾರೀಖೆ ಹಪ್ತಕುರ್ಸೀ [ಪರ್ಶಿಯನ್]

೪. ಮೀರ ಅಹಮದ ಅಲಿಖಾನ : ಗುಲದಸ್ತಾ ಎ ವಿಜಯಪುರ [ದಖನಿ]

೫. ಜುಹೂರ್ ಬಿನ್ ಜುಹೂರಿ : ಮುಹಮ್ಮದನಾಮಾ [ಪರ್ಶಿಯನ್]

ಹಸ್ತಪ್ರತಿಗಳನ್ನು ಒದಗಿಸಿದ ಮೇಲೆ ಕಾಣಿಸಿದ ಎಲ್ಲ ಸಂಸ್ಥೆಗಳ ಮುಖ್ಯಸ್ಥರಿಗೆ ನಮ್ಮ ಕೃತಜ್ಞತೆಗಳು. ಇದಲ್ಲದೆ, ಫರಿಶ್ತಾನ ತಾರೀಖೆ ಫರಿಶ್ತಾದ ಇಂಗ್ಲಿಷ್ ಮತ್ತು ಉರ್ದು ಅನುವಾದಗಳು, ಅಬ್ದುಲ್ಲಾ ದೇಹಲವಿಯ ಇಬ್ರಾಹೀಮನಾಮಾದ ಹಿಂದಿ ಮತ್ತು ಉರ್ದು ಅನುವಾದಗಳು, ಕವಿ ನುಸ್ರತಿಯ ಅಲಿನಾಮಾ, ಈಶ್ವರದಾಸ ನಗರ್‌ನ ಫುತೂಹತ್ ಅಲಂಗೀರ ಕೃತಿಯ ಇಂಗ್ಲಿಷ್ ಅನುವಾದ ಮತ್ತು ನೂರಾರು ಪರ್ಶಿಯನ್ ಮೂಲ ಮತ್ತು ಮರಾಠಿ ಅನುವಾದದ ಆದಿಲಶಾಹಿ ಫರ್ಮಾನುಗಳು ದೊರೆತವು. ಉಳಿದ ಹಸ್ತಪ್ರತಿಗಳನ್ನು ದೊರಕಿಸಬೇಕಾಗಿದೆ.

ಹೀಗೆ ಸಾಮಗ್ರಿಯನ್ನು ಸಂಗ್ರಹಿಸಿ ಅನುವಾದ ಕೆಲಸ ಪ್ರಾರಂಭ ಮಾಡಲಾಯಿತು. ಪರ್ಶಿಯನ್, ದಖನಿ ಮತ್ತು ಉರ್ದು ಭಾಷೆಗಳ ಈ ವಿದ್ವಾಂಸರನ್ನು ಕನ್ನಡ ಅನುವಾದ ಕಾರ್ಯದಲ್ಲಿ ತೊಡಗಿಸಿಕೊಳ್ಳಲಾಯಿತು.

೧. ಮೌಲಾನಾ ಮಹಬೂಬುರ್ ರಹಮಾನ ಮದನಿ, ವಿಜಯಪುರ.

೨. ಶ್ರೀ ಬಿ. ಜಯಾಚಾರ್ಯ, ಯಾದಗಿರಿ.

೩. ಶ್ರೀಮತಿ ಬಾನು ಮುಷ್ತಾಕ್, ಹಾಸನ.

೪. ಡಾ. ಅಬ್ದುಲ್ ಹಮೀದ, ತಿಪಟೂರು.

೫. ಶ್ರೀ ಎಂ.ಎನ್ ನದಾಫ, ವಿಜಯಪುರ

೬. ಪ್ರೊ. ವಸಂತ ಕುಷ್ಟಗಿ, ಗುಲಬರ್ಗಾ.

೭. ಶ್ರೀಮತಿ ರತ್ನಾ ಮಣ್ಣೂರ, ಗುಲಬರ್ಗಾ.

೮. ಡಾ. ಅಮೀರುದ್ದೀನ್ ಖಾಜಿ, ವಿಜಯಪುರ.

೯. ಶ್ರೀ ಹಸನ ನಯೀಮ ಸುರಕೋಡ, ರಾಮದುರ್ಗ.

೧೦. ಡಾ. ಬಿ ರಘೋತ್ತಮರಾವ ದೇಸಾಯಿ, ಬೆಂಗಳೂರು.

೧೧. ಶ್ರೀಮತಿ ವಿದ್ಯಾ ಗುಮಾಸ್ತೆ, ವಿಜಯಪುರ

೧೨. ಡಾ. ಆರ್.ಕೆ. ಕುಲಕರ್ಣಿ, ವಿಜಯಪುರ

ಇವರ ಸಹಕಾರದಿಂದ ಮೊದಲ ಹಂತದ ೬ ಸಂಪುಟಗಳು,

೧. ತಾರೀಖೆ ಫರಿಶ್ತಾ: ೪ ಸಂಪುಟಗಳು.

೨. ಬಸಾತೀನೆ ಸಲಾತೀನ: ೫ನೆಯ ಸಂಪುಟ.

೩. ಇಬ್ರಾಹೀಮ ನಾಮಾ [ದಖನಿ], ಗುಲದಸ್ತಾಯೆ ವಿಜಯಪುರ [ದಖನಿ], ತಾರೀಖೆ ಹಫ್ತಕುರ್ಸಿ [ಪರ್ಶಿಯನ್], ಫುತುಹತೆ ಅಲಂಗೀರ (ಭಾಗಶಃ) [ಪರ್ಶಿಯನ್]– ಇವೆಲ್ಲ ಸೇರಿ ೬ನೆಯ ಸಂಪುಟ.

ಹೀಗೆ ೬ ಸಂಪುಟಗಳಲ್ಲಿ ಸುಮಾರು ನಾಲ್ಕು ಸಾವಿರ ಪುಟಗಳ ಸಾಹಿತ್ಯ ಕಳೆದ ವರುಷ (೨೦೧೪) ಪ್ರಕಟವಾಗಿವೆ. ಇದೀಗ ಏಳನೆಯ ಸಂಪುಟವಾಗಿ ಮಹಾಕವಿ ಜಹೂರ್ ಬಿನ್ ಜುಹೂರಿ ವಿರಚಿತ ಮುಹಮ್ಮದ ನಾಮಾ ಕಾವ್ಯ ಪ್ರಕಟವಾಗುತ್ತಿದೆ. ಈ ಕಾವ್ಯವನ್ನು ಡಾ. ಮಹನೂರ್ ಜಮಾನಿ ಬೇಗಂ, ಡಾ. ಎ.ಎಚ್. ಮಾಸಾಪತಿ, ಫಕೀರ್ ಮುಹಮ್ಮದ ಕಟ್ಪಾಡಿ, ಮೌಲಾನಾ ಸಯ್ಯದ್ ರಶೀದ್ ಎ.ಅಲ್ ಖಾಸಿಮಿ ಅನುವಾದಿಸಿದ್ದಾರೆ. ಎಂಟನೆಯ ಸಂಪುಟವಾಗಿ ಮುಲ್ಲಾ ನುಸ್ರತಿ ವಿರಚಿತ ಅಲಿನಾಮಾ ಮತ್ತು ತಾರೀಖೇ ಸಿಕಂದರಿ ಎರಡು ಕಾವ್ಯಗಳು ಪ್ರಕಟವಾಗುತ್ತಿವೆ. ಇವುಗಳನ್ನು ಕ್ರಮವಾಗಿ ಡಾ. ಮುಹಮ್ಮದ್ ಸಿಬ್ಘತ್‌ಉಲ್ಲಾಹ್ ಮತ್ತು ಡಾ. ವಿಠ್ಠಲರಾವ ಟಿ. ಗಾಯಕ್ವಾಡ್ ಅವರುಗಳು ಅನುವಾದಿಸಿದ್ದಾರೆ. ಈ ಸಂಪುಟಗಳನ್ನು ಅನುವಾದಿಸಿದ ಅನುವಾದಕರಿಗೆ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ.

'ಆದಿಲಶಾಹಿ ಸಾಹಿತ್ಯ ಅನುವಾದ ಯೋಜನೆ'ಗೆ ಅನುದಾನ ನೀಡಿದ ಕರ್ನಾಟಕ ಸರಕಾರಕ್ಕೆ, ಯೋಜನೆಯನ್ನು ಯಶಸ್ವಿಯಾಗಿ ಕಾರ್ಯಗತಗೊಳಿಸುವಲ್ಲಿ ಸಹಕರಿಸುತ್ತಿರುವ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಎಲ್ಲ ಅಧಿಕಾರಿಗಳಿಗೆ ಮತ್ತು ಈ ದಿಶೆಯಲ್ಲಿ ನಿರಂತರ ಸಹಾಯಹಸ್ತ ನೀಡುತ್ತಿರುವ ಬಿ.ಎಲ್.ಡಿ.ಇ. ಸಂಸ್ಥೆಯ ಅಧ್ಯಕ್ಷರಾದ ಶ್ರೀ ಎಂ.ಬಿ. ಪಾಟೀಲ, ಸಂಶೋಧನ ಕೇಂದ್ರದ ಅಧ್ಯಕ್ಷರಾದ ಶ್ರೀ ಶಿವಯೋಗಿ ತಂಬಾಕೆ ಅವರಿಗೆ ಕೃತಜ್ಞತೆಗಳು.

ಸಂಪುಟಗಳು ಪ್ರಕಟವಾಗುವ ಪ್ರತಿ ಹಂತದಲ್ಲಿ ಸಹಕಾರ ನೀಡಿದ, ವಿಜಯಪುರ ಜಿಲ್ಲೆಯ ಅಂದಿನ ಜಿಲ್ಲಾಧಿಕಾರಿಗಳಾಗಿದ್ದ ಶ್ರೀ ಶಿವಯೋಗಿ ಕಳಸದ, ಶ್ರೀ ರಿತ್ವಿಕ್ ರಂಜನ್ ಪಾಂಡೆ ಮತ್ತು ಇಂದಿನ ಜಿಲ್ಲಾಧಿಕಾರಿಗಳಾದ ಶ್ರೀ ಡಿ. ರಣದೀಪ ಅವರನ್ನು, ಈ ಯೋಜನೆಯ ಸಲಹಾ ಸಮಿತಿ ಸದಸ್ಯರ ಮಾರ್ಗದರ್ಶನವನ್ನು, ಕನ್ನಡ ಮತ್ತು ಸಂಸ್ಕೃತಿಇಲಾಖೆಯ ಸಹಾಯಕ ನಿರ್ದೇಶಕರಾದ ಡಾ. ಸೋಮಶೇಖರ ವಾಲಿ, ಬಿ.ಎಲ್.ಡಿ.ಇ. ಸಂಸ್ಥೆಯ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರದ ಸಂಯೋಜನಾಧಿಕಾರಿಗಳಾದ ಡಾ. ಎಂ.ಎಸ್. ಮದಭಾವಿ ಅವರ ಶ್ರಮವನ್ನು ಪ್ರೀತಿಯಿಂದ ಸ್ಮರಿಸುತ್ತೇವೆ.

ಮುಖಪುಟ ವಿನ್ಯಾಸಗೊಳಿಸಿದ ಶ್ರೀ ಕೆ.ಕೆ.ಮಕಾಳಿ ಹಾಗೂ ಅಂದವಾಗಿ ಮುದ್ರಿಸಿದ ಬೆಂಗಳೂರಿನ ಪ್ರಿಂಟ್ ಪಾಯಿಂಟ್‌ನ ಶ್ರೀ ಬಿ.ಸಿ.ಪಾಟೀಲ (ಹೆಬ್ಬಾಳ) ಮತ್ತು ಅವರ ಸಿಬ್ಬಂದಿಯನ್ನು ನೆನೆಯುತ್ತೇವೆ.

■

*

ನಿರ್ದೇಶಕರ ಮಾತು

ಡಾ. ಕೃಷ್ಣ ಕೊಲ್ಹಾರಕುಲಕರ್ಣಿ

ಮಹಮ್ಮದ ಆದಿಲಶಹ [ಕ್ರಿ.ಶ.೧೬೨೭–೧೬೫೬]ನ ಆಸ್ಥಾನದಲ್ಲಿದ್ದ ಮುಹಮ್ಮದ ಜುಹೂರನು 'ಮೊಹಮ್ಮದನಾಮಾ' ಎಂಬ ಇತಿಹಾಸವನ್ನು ಬರೆದನು. ಆತ ಎರಡನೆಯ ಇಬ್ರಾಹಿಮ ಆದಿಲಶಹನ ಆಸ್ಥಾನದಲ್ಲಿದ್ದ ಸುಪ್ರಸಿದ್ಧ ಕವಿ ಮುಲ್ಲಾ ಜುಹೂರಿಯ ಮಗ. ಮುಹಮ್ಮದ ಆದಿಲಶಹನು ರಫಿಯುದ್ದೀನ ಶಿರಾಜಿ ಬರೆದ 'ತಜ್‌ಕಿರಾತ–ಅಲ್–ಮುಲುಕ' ಎಂಬ ಇತಿಹಾಸ ಗ್ರಂಥವನ್ನು ಕ್ರಿ.ಶ. ೧೬೪೧ರಲ್ಲಿ ಒಂದು ದಿನ ಮುಹಮ್ಮದ ಜುಹೂರನಿಗೆ ಕೊಟ್ಟು ಇಂಥದೊಂದು ಇತಿಹಾಸವನ್ನು, ವಿಶೇಷವಾಗಿ ದಕ್ಷಿಣ ಭಾರತದಲ್ಲಿಯ ತನ್ನ ರಾಜ್ಯ ವಿಸ್ತಾರದ ವಿವರಗಳನ್ನು ಬರೆಯಲು ಹೇಳಿದನಂತೆ. ಅದು ತುಂಬ ಪಾಂಡಿತ್ಯಪೂರ್ಣವಾಗಿಯೂ ಸುಂದರವಾದ ಶೈಲಿಯಲ್ಲಿಯೂ ಇರಬೇಕೆಂದು ಆದೇಶಿಸಿದನಂತೆ. ಅದರಂತೆ ಮಹಮ್ಮದ ಜುಹೂರನು, ಮಹಮ್ಮದ ಆದಿಲಶಹನ ೩೦ ವರುಷಗಳ ಆಡಳಿತದ ವಿವರಗಳನ್ನು ತುಂಬ ಪರಿಶ್ರಮ ಪಟ್ಟು ಬರೆದಿದ್ದಾನೆ. ಆದ್ದರಿಂದಲೇ 'ಮೊಹಮ್ಮದನಾಮಾ' ಮಹಮ್ಮದ ಆದಿಲಶಹನ ಆಡಳಿತದ ಅಧಿಕೃತ ದಾಖಲೆಯಾಗಿ ಉಳಿದಿದೆ. ಅದು ಒಂದು ಸುಂದರ ಕಾವ್ಯವೂ ಆಗಿದೆ. ಕಾವ್ಯದಲ್ಲಿ ಯುದ್ಧಗಳು, ಯಾತ್ರೆಗಳು, ಮದುವೆಯ ಸಂದರ್ಭಗಳು ಸುಂದರವಾಗಿ ವರ್ಣಿತವಾಗಿವೆ. ಅಲ್ಲದೆ ಸಾಮಾಜಿಕ ಸಮಾರಂಭಗಳು, ಮದುವೆಗಳು, ವಾರ್ಷಿಕ ಹಜ್ ಯಾತ್ರೆಗಳು ಮತ್ತು ಕೆಲವು ಪ್ರಮುಖ ಕಟ್ಟಡಗಳನ್ನು ಕಟ್ಟಿದ ವರುಷಗಳ ಉಲ್ಲೇಖವೂ ಇದೆ. ಹೀಗಾಗಿ ಅಂದಿನ ಸಾಮಾಜಿಕ ಪರಿಸರವನ್ನು ಅಭ್ಯಸಿಸಲು ಇದು ಒಳ್ಳೇಯ ಆಕರ ಗ್ರಂಥವಾಗಿ ಉಳಿದಿದೆ.

ವಿಜಾಪುರದ ಆದಿಲಶಾಹಿಗಳು ನಡೆಸಿದ ಮಲೆನಾಡು ಹಾಗೂ ಕರ್ನಾಟಕದ ಜೈತ್ರ ಯಾತ್ರೆಗಳ ವಿವರಗಳು 'ಮೊಹಮ್ಮದ ನಾಮಾ'ದಲ್ಲಿ ಬಂದಷ್ಟು ಇನ್ನಾವ

ಗ್ರಂಥಗಳಲ್ಲೂ ಬಂದಿಲ್ಲವೆಂಬುದು ವಿದ್ವಾಂಸರ ಮತ. ಮಹಮ್ಮದ ಆಶದಿಲಶಹನು ಕರ್ನಾಟಕ ಮತ್ತು ಮಲೆನಾಡುಗಳನ್ನು ಗೆದ್ದ ಬಗ್ಗೆ ಇದೊಂದೇ ಅಧಿಕೃತ ಆಧಾರ ಗ್ರಂಥವಾಗಿದೆ. ಈ ಗ್ರಂಥದ ಭಾಗಶಃ ಅನುವಾಶದವನ್ನು ಪ್ರೊ. ಭಾಗವತ ದಯಾಳ ವರ್ಮಾ ಅವರು ಇಂಗ್ಲೀಷಿನಲ್ಲಿ ಅನುವಾದ ಮಾಡಿದ್ದಾರೆ. ಅದು ೧೯೩೦ರಲ್ಲಿ ಎನ್. ಸಿ. ಕೇಳಕರ ಅವರು ಸಂಪಾದಿಸಿದ, ಪುಣೆಯ ಭಾರತ ಇತಿಹಾಸ ಸಂಶೋಧಕ ಮಂಡಳದವರು ಪ್ರಕಟಿಸಿದ 'ಶಿವಾಜಿ ನಿಬಂಧಾವಲಿ'ಯ ಎರಡನೆಯ ಸಂಪುಟದಲ್ಲಿ ಪ್ರಕಟವಾಗಿದೆ.

ಈ ಗ್ರಂಥದ ಪರ್ಶಿಯನ್ ಹಸ್ತಪ್ರತಿಯು ಪಂಜಾಬಿನ ಕಪೂರ್ಥಲ ಸಂಸ್ಥಾನದ ಪುಸ್ತಕ ಸಂಗ್ರಹಾಲಯದಲ್ಲಿ ಮಾತ್ರ ಇದ್ದುದನ್ನು ೧೯೨೦-೩೦ರ ಮಧ್ಯ ಸರ್ ಜದುನಾಥ ಸರಕಾರರು ಮೊದಲು ಪತ್ತೆ ಹಚ್ಚಿದರು. ೧೯೨೯ರ ಮಾಡರ್ನ ರಿವ್ಯೂದಲ್ಲಿ ಅವರು ಈ ಕುರಿತು ಬರೆದರು. ಅನಂತರ ಆ ಪ್ರತಿಯನ್ನು ಸರ್ ಜದುನಾಥ ಸರಕಾರ ಅವರಿಂದ ಪುಣೆಯ ಫರ್ಗ್ಯೂಸನ್ ಕಾಲೇಜಿನ ಪರ್ಶಿಯನ್ ವಿದ್ವಾಂಸ ಪ್ರೊ. ಭಗವದ್ದಯಾಳ ವರ್ಮಾ ಅವರು ಪಡೆದು ಅದರ ಸಾರಾಂಶವನ್ನು ಇಂಗ್ಲೀಷಿನಲ್ಲಿ ಪ್ರಕಟಿಸಿದದರು.

ಇದರ ಇನ್ನೊಂದು ಪ್ರತಿಯು ವಿಜಾಪುರದ ವಸ್ತು ಸಂಗ್ರಹಾಲಯದಲ್ಲೂ ಇದೆ ಎಂದು ತಿಳಿದುಬಂದಿತು. ಅದರ ಕಾಗದ, ಮಸಿ, ಲೇಖನ ಪದ್ಧತಿಯಿಂದ ಅದು ೨೦ನೆಯ ಶತಮಾನದಲ್ಲಿ ನಕಲು ಮಾಡಿದ ಪ್ರತಿಯಾಗಿರಬೇಕು. ಗ್ರಂಥದ ಕೊನೆಯಲ್ಲಿ ಅದನ್ನು ನಕಲು ಮಾಡಿದವನು 'ಸಯ್ಯದ ಫಸೀಹ ಅಹಮದ ದೀಬಾಜಿ' ಊರು ನರಹಟ, ಜಿಲ್ಲೆ ಗಯಾ, ಕ್ರಿ.ಶ. ೧೯೨೦'ಎಂದು ನಮೂದಾಗಿದೆ. ಬಹುಶಃ ಸರ್ ಜದುನಾಥ ಸರಕಾರ ಅವರಿಂದ ಈ ಗ್ರಂಥದ ಪತ್ತೆಯಾದ ನಂತರ ಅದನ್ನು ಮೇಲೆ ಹೇಳಿದವನು ನಕಲು ಮಾಡಿರುವ ಸಾಧ್ಯತೆ ಇದೆ. ಆದರೆ ಅದು ದೂರದ ಗಯಾ ಜಿಲ್ಲೆಯಿಂದ ವಿಜಾಪುರ ವಸ್ತು ಸಂಗ್ರಹಾಲಯಕ್ಕೆ ಹೇಗೆ ಬಂದಿತು ಎಂಬುದು ಮಾತ್ರ ಗೊತ್ತಾಗಿಲ್ಲ.

ಇಲ್ಲಿ ಅನುವಾದಕ್ಕೆ ಬಳಸಿದ್ದು ವಿಜಾಪುರ ವಸ್ತು ಸಂಗ್ರಹಾಲಯದ ಪ್ರತಿ. ಅದನ್ನು ಡಿಜಿಟಲ್ ನಕಲು ಮಾಡಿಕೊಳ್ಳಲು ದೆಹಲಿಯ ಪುರಾತತ್ವ ಇಲಾಖೆ ಅನುಮತಿ ಕೊಟ್ಟಿತು. ಅವರಿಗೂ ಮತ್ತು ವಿಜಾಪುರ ಪುರಾತತ್ವ ಇಲಾಖೆಯ ಮುಖ್ಯಸ್ಥರಿಗೂ ಕೃತಜ್ಞತೆಗಳು.

ಕಾವ್ಯವು ಗಾತ್ರದಲ್ಲಿ ದೊಡ್ಡದಾಗಿದ್ದರಿಂದ ಎರಡು ಭಾಗಗಳನ್ನಾಗಿ ಮಾಡಿ, ಬೆಂಗಳೂರಿನ ಪರ್ಶಿಯನ್ ವಿದ್ವಾಂಸೆ ಡಾ. ಮಹನೂರ್ ಝುಮಾನಿ ಬೇಗಂ ಮತ್ತು ಫಕೀರ ಮಹಮ್ಮದ ಕಟ್ಪಾಡಿ ಅವರಿಗೆ ಕೊಟ್ಟಿತು. ಅವರು ಪ್ರೊ. ಎ.ಎಚ್. ಮಾಸಾಪತಿ,

ಮೌಲಾನಾ ಸಯ್ಯದ ರಶೀದ ಎ. ಅಲ್ ಖಾಸಿಮಿ ಅವರ ಸಹಕಾರದಿಂದ ಸುಂದರವಾಗಿ ಕನ್ನಡದಲ್ಲಿ ಅನುವಾದಿಸಿ ಕೊಟ್ಟಿದ್ದಾರೆ. ಮೂಲ ಕಾವ್ಯದಲ್ಲಿ ಅಧ್ಯಾಯಗಳಿಲ್ಲ. ಓದಲು ಸುಲಭವಾಗುವಂತೆ ಅಧ್ಯಾಯಗಳಲ್ಲಿ ವಿಂಗಡಿಸಲಾಗಿದೆ. ಕರಡು ಪ್ರತಿಯನ್ನು ತಿದ್ದುವಲ್ಲಿ ಸಹಾಯ ನೀಡಿದವರು ಡಾ. ಎಂ.ಎಸ್. ಮದಭಾವಿ. ಇವರೆಲ್ಲರಿಗೂ ಕೃತಜ್ಞತೆಗಳು.

ಈ ಯೋಜನೆಯನ್ನು ರೂಪಿಸುವಲ್ಲಿ, ಮುನ್ನಡೆಸುವಲ್ಲಿ ಉದ್ದಕ್ಕೂ ಮಾರ್ಗದರ್ಶನ ನೀಡಿದ ಸಮಿತಿಯ ಅಧ್ಯಕ್ಷರಾದ ಡಾ. ಎಂ.ಎಂ. ಕಲಬುರ್ಗಿ ಮತ್ತು ಸಹಕಾರವಿತ್ತ ಸಮಿತಿಯ ಸದಸ್ಯರಿಗೆ ಕೃತಜ್ಞತೆಗಳು.

ಮುಖಪುಟ ವಿನ್ಯಾಸಗೊಳಿಸಿದ ಶ್ರೀ ಕೆ.ಕೆ.ಮಕಾಳಿ ಹಾಗೂ ಅಂದವಾಗಿ ಮುದ್ರಿಸಿದ ಬೆಂಗಳೂರಿನ ಪ್ರಿಂಟ್ ಪಾಯಿಂಟ್‌ನ ಶ್ರೀ ಬಿ.ಸಿ.ಪಾಟೀಲ (ಹೆಬ್ಬಾಳ) ಮತ್ತು ಅವರ ಸಿಬ್ಬಂದಿಯನ್ನು ನೆನೆಯುತ್ತೇವೆ.

■

ಜಹೂರ್ ಬಿನ್ ಜುಹೂರಿ
ವಿರಚಿತ

ಮೊಹಮ್ಮದ ನಾಮಾ

ಅನುವಾದಕರು
ಡಾ. ಮಹನೂರ್ ಜಮಾನಿ ಬೇಗಂ
ಪ್ರೊ. ಎ.ಎಚ್. ಮಾಸಾಪತಿ
(ಪುಟ ೧ ರಿಂದ ೧೯೦)
ಫಕೀರ್ ಮುಹಮ್ಮದ ಕಟ್ಪಾಡಿ
ಮೌಲಾನಾ ಸಯ್ಯದ್ ರಶೀದ್ ಎ.ಅಲ್. ಖಾಸಿಮಿ
(ಪುಟ ೧೯೧ ರಿಂದ ೪೧೮)

*

ಅಧ್ಯಾಯ – ೧

ಸರ್ವ ಜನರ ಹೃದಯ ಸಿಂಹಾಸನದ ಮೇಲೆ ಆಳ್ವಿಕೆ ಮಾಡುವ ಅರಸನು ಅದ್ವಿತೀಯ ಮತ್ತು ಅನುಪಮನಾಗಿದ್ದಾನೆ. ಅವನು ಪ್ರವಾದಿಯ ಕಿರೀಟವನ್ನು, ಎಲ್ಲ ಪ್ರವಾದಿಗಳ ಮುಖ್ಯಸ್ಥ 'ಹಜರತ್ ಮೊಹಮ್ಮದ ಮುಸ್ತಫಾ ಸೊಲ್ಲಲ್ಲಾಹು ಅಲೈಹಿ ವೊ ಅಲೆಹಿ' ಅವರ ಶಿರದ ಮೇಲೆ ಇಟ್ಟನು. ಜಗತ್ತಿನ ಸಕಲ ಜೀವಿಗಳು ದೇವರ ಪವಿತ್ರವಾದ ಬೆಳಕಿಗೆ ವಂದನೆ ಸಲ್ಲಿಸಿ, ದೇವರು ಒಬ್ಬನೇ ಎಂಬುದನ್ನು ಸ್ವೀಕರಿಸಿ; ಆತನ ಆಜ್ಞಾನುಸಾರ ನಡೆಯಬೇಕು. ಇದೇ ಪ್ರಕಾಶದಲ್ಲಿ ಪ್ರಥಮ ಮಾನವನು (ಅರ್ಥಾತ್: ಆದಮ್ ೧) ದೇವರು ಸೃಷ್ಟಿಸಿದ ಜಗತ್ತಿನ ದರ್ಶನ ಪಡೆದನು.

ಶೋಧಕರು 'ತೂರ್, ಪರ್ವತದ ಮೇಲೆ, ದೇವರ ಅನ್ವೇಷಣೆಯ ಕಣಿವೆಯಲ್ಲಿ ಸಂಚರಿಸುವಾಗ; ದಿವ್ಯ ಜ್ವಾಲೆಯಿಂದ ಆಘಾತಗೊಂಡು, ಮೂರ್ಛೆ ಹೊಂದಿದರು. ಪ್ರಜ್ಞಾವಸ್ಥೆಗೆ ಬಂದನಂತರ ದೇವರ ಆಜ್ಞಾನುಸಾರ; 'ದೇವರ ಆತ್ಮವು ಒಂದು ರಹಸ್ಯವಾಗಿದೆ'. ('ಜಾತೆ ಪಾಕ್ ಏಕ ರಾಜ ಹೈ') ಎಂದು ಅರಿತು ಅವರು ಮುಂದೆ ಸಾಗಿದರು.

ಪ್ರವಾದಿಯ ಹೆಸರಿನಲ್ಲಿ ಕೈಕೊಳ್ಳುವಂತಹ ಸಕಲ ಕಾರ್ಯಗಳು; ಹೃದಯವನ್ನು ಆಕರ್ಷಿಸುತ್ತವೆ. ಪ್ರವಾದಿಯನ್ನು ತಲುಪುವ ಯಾವುದೇ ವ್ಯಕ್ತಿಯನ್ನು ದೇವರು ತಿಳಿಯುತ್ತಾನೆ.

ಯಾವ ಜಾಲದಲ್ಲಿ, ದೇವರು ತನ್ನ ಆತ್ಮದ ಬೀಜಗಳನ್ನು ಹಾಕಿದ್ದನೋ; ಆ ಜಾಲವು ಪ್ರವಾದಿಯ ಕೇಶರಾಶಿ ಆಗಿದೆ.

ಜಗತ್ತಿನ ಅಸ್ತಿತ್ವದ ಪ್ರಥಮ ದಿನದಿಂದ ಅಂತಿಮ ದಿನದವರೆಗೆ ದೇವರ ಏಕೈಕತೆಯಲ್ಲಿ ವಿಶ್ವಾಸ ಹೊಂದಿದವರ ರಾಜ್ಯದ ಒಡೆಯನಾಗಿದ್ದಾನೆ. ಊಹೆಯ

ಮೂಲಕ ದೇವರ ಪ್ರಶಂಸೆಯ ಪವಿತ್ರವಾದ ಸರಹದ್ದು ತಲುಪಬೇಕೆಂಬುದು; ಆತನನ್ನು ತಲುಪದೇ ಇರುವ ಸಮಾನವಾಗಿದೆ. ಖಿಲ್‌ಜುಮ್ ಮತ್ತು ಅಮಾನ್ ನದಿಗಳ ನೀರಿನಿಂದ ತುಂಬಿದ ಬಟ್ಟಲಿನಿಂದ, ಬಾಯಾರಿಕೆಯ ತುಟಿಯಿಂದ ಒಂದೇ ಉಸಿರಿನಲ್ಲಿ ನೀರನ್ನು ಬಾಯಿಯಲ್ಲಿ ಹೀರಿಕೊಂಡಂತಾಗುತ್ತದೆ. ಊಹೆಯ ಪ್ರಮಾಣಪತ್ರವನ್ನು ಕೈಯಲ್ಲಿ ಹಿಡಿದುಕೊಂಡು; ದೇವರ ಸಾನಿಧ್ಯವನ್ನು ತಲುಪುವುದು, ಯಾರಿಂದಲೂ ಸಾಧ್ಯವಿಲ್ಲ.

ದೇವರ ಪ್ರಶಂಸೆಯನ್ನು ವ್ಯಕ್ತಪಡಿಸುವ ಕಾರ್ಯವು ಕವಿಗಳ ಸಾಮರ್ಥ್ಯವನ್ನು ಮೀರಿಸುತ್ತದೆ. ಬೌದ್ಧಿಕ ಹೂಡಿಕೆಯು ದೇವರ ಸ್ತುತಿಯ ಭಂಡಾರವನ್ನು ಕೊಂಡುಕೊಳ್ಳಲಾರದು. ಪ್ರಶಂಸೆಯ ಸಾಕ್ಷ್ಯನುಡಿಕಾರನು ದೇವರ ಸೌಂದರ್ಯವನ್ನು ಬಹಿರಂಗಗೊಳಿಸಲು ಕೊಡುವಂತಹ ನಿದರ್ಶನಗಳು; ಊಹಾಕಾರರನ್ನು ಆಶ್ಚರ್ಯಚಕಿತಗೊಳಿಸುತ್ತವೆ. ದೇವರ ಸ್ತುತಿಯ ಶಿರದ ಎತ್ತರವು ವರ್ಣನಾತೀತವಾಗಿದೆ. ದೇವರ ಸ್ತುತಿಯ ಶ್ರೇಣಿಯು 'ಇಹ–ಪರ' ಎರಡೂ ಜಗತ್ತುಗಳಿಗಿಂತಲೂ ಉನ್ನತವಾಗಿದೆ. ಜಗತ್ತಿನ ಉಗಮವು, ದೇವರ ಸಮುದ್ರದ ಒಂದು ತೆರೆಯಿಂದ ಉದ್ಭವಿಸಿದಂತಹ ಪ್ರಯೋಜನವಾಗಿದೆ.

'ಸುಬ್ಹಾನ್ ಅಲ್ಲಾ' (ದೇವರ ಸ್ತುತಿ)

ರಾಜ–ಮಹಾರಾಜರ ಸಾಮ್ರಾಜ್ಯದ ನಿರಂತರವಾದ ಮುಂದುವರಿಯುವಿಕೆಯು; ದೇವರ ನಾಮಸ್ಮರಣೆಯ ಪ್ರಮಾಣ ಪತ್ರವಾಗಿದೆ. ದೇವರ ನಾಮಸ್ತುತಿಯ ಆಸಕ್ತಿಯಿಂದ ಪ್ರೇರಿತವಾದ ಪ್ರತಿಯೊಂದು ಹೃದಯದ ಮಾತು; ನಾಲಿಗೆಯ ತುದಿಯ ಮೇಲೆ ಧಾವಿಸಿ ಬರುತ್ತದೆ. ಏಕೇಶ್ವರಿವಾದದ ಪರಿಕಲ್ಪನೆಯು ಒಂದೊಂದು ಸಲ ಕವಿಗಳು ಕೈಯಲ್ಲಿ ಹಿಡಿದಿರುವ ಕಾಗದವನ್ನು ಆಶ್ಚರ್ಯದ ದರ್ಪಣವನ್ನಾಗಿ ಪರಿವರ್ತಿಸುತ್ತದೆ. ದೇವರ ಕರ–ಕುಶಲತೆಯ ದೃಶ್ಯದಲ್ಲಿ ವ್ಯಕ್ತವಾಗುವ ನಾವೀನ್ಯತೆಯಿಂದ; ಎಲ್ಲ ಸಮಯದಲ್ಲಿಯೂ ಆಶ್ಚರ್ಯವು ಹರಡುತ್ತದೆ.

ದೇವರ ಕರ–ಕುಶಲತೆಯ ದೃಶ್ಯವು ತನ್ನ ಅಪಾರ ನೂತನತೆಯ ಮೃದುತ್ವದ ದೆಸೆಯಿಂದ; ದರ್ಶಕರನ್ನು ಆಶ್ಚರ್ಯಚಕಿತಗೊಳಿಸುತ್ತದೆ. ಯಾರು ತಮ್ಮ ಕೈಗಳನ್ನು ಗುಲಾಬಿ ಹೂವಿನ ನೀರಿನಿಂದ ತೊಳೆದಿರುವುದಿಲ್ಲವೊ ಮತ್ತು ಗುಲಾಬಿ ಹೂವನ್ನು ಕೈಯಲ್ಲಿ ಹಿಡಿದಿರುವದಿಲ್ಲವೋ; ಅವರಿಗೆ ಮನಮೋಹಕವಾದ ಮಲ್ಲಿಗೆ ಹೂವಿನ ಮೃದುತ್ವ ತಿಳಿಯುವುದಿಲ್ಲ. ಪ್ರೇಮವೆಂಬ ಮದ್ಯದ ಉನ್ಮಾದದಿಂದ ತುಂಬಿದ ಜನರ ತಲೆಯಲ್ಲಿ, ದೇವರನ್ನು ಕಾಣುವ ಉನ್ಮಾದವು ಎಷ್ಟರ ಮಟ್ಟಿಗೆ ತುಂಬಿರುತ್ತದೆಂದರೆ: ಸೂರ್ಯನ ರಕ್ತವರ್ಣದ ಪ್ರಕಾಶದಲ್ಲಿ ಮಿಂದಿರುವ ಪ್ರತಿ ಮುಂಜಾನೆಯೊಂದಿಗೆ ಅವರು ಪಿಸುಮಾತನಾಡುವರೇ ಹೊರತು; ಬೇರೆ ಯಾರೊಂದಿಗೂ ಮಾತನಾಡುವದಿಲ್ಲ.

ದೇವರ ಶಕ್ತಿ \ಸಾಮರ್ಥ್ಯದ ನೆರಳು ಅವರ ಹೃದಯದಲ್ಲಿ ಎಂತಹ ಉಷ್ಣತೆಯನ್ನು ಸೃಷ್ಟಿಸುವದೆಂದರೆ : ಜಗತ್ತಿನಾದ್ಯಂತ ಬೆಳಕು ನೀಡುವ ಸೂರ್ಯನಿಂದ ಹೊರಸೂಸಿದ್ದ ಕಣಗಳೆಂಬ ಸೈನ್ಯದ ದಾಳಿಯನ್ನು ದಮನಗೊಳಿಸುತ್ತದೆ.

ವಿಶ್ವದಲ್ಲಿ ದೇವರು ಸೃಷ್ಟಿಸಿದಂತಹ ವಿವಿಧ ಖಗೋಳ–ಕಾಯಗಳು; ದೃಢವಾಗಿ ನಿಂತಿರುವ ಜನರ ಸುಸ್ಥಿರತೆಯನ್ನು ಪಾದರಸದ ಚಂಚಲತೆಯಂತೆ ಅಸ್ಥಿರಗೊಳಿಸುತ್ತವೆ. ಅವರು ದೇವರ ಸರ್ವಶ್ರೇಷ್ಠವಾದ ಸೃಜನಶೀಲತೆಯಿಂದ ಪ್ರಭಾವಿತರಾಗುವದರಿಂದ ಅವರ ಗರ್ವಭಂಗವಾಗಿ ವಿಶ್ವದ ಅಸ್ತಿತ್ವವನ್ನು ಪ್ರಶಂಸಿಸುತ್ತಾರೆ. ಅವರು ಆಶ್ಚರ್ಯಚಕಿತರಾಗಿ, ದೇವರ ದಾಸರಾಗುತ್ತಾರೆ. ದೇವರ ಸಾನಿಧ್ಯದಲ್ಲಿ ಸಮರ್ಪಿತರಾಗಿ ಆತನ ಅಪಾರ ಮಹಿಮೆಯನ್ನು ನಿರೂಪಿಸುತ್ತಾರೆ. ದೇವರ ಹಿರಿಮೆಯ ಕಿರೀಟವನ್ನು ಅವರು ತಮ್ಮ ಶಿರದ ಮೇಲೆ ಧರಿಸುತ್ತಾರೆ. ಉಭಯ ಜಗತ್ತುಗಳ ವಿನ್ಯಾಸವು ಅದರ ಮೇಲೆ ಮುದ್ರಿತವಾಗಿರುವಂತೆ ಅನಂತತೆಯ ಉಂಗುರವನ್ನು ಪ್ರಾಮಾಣಿಕ ಜನರ ಹೃದಯಗಳ ಅಮೂಲ್ಯವಾದ ರತ್ನ\ವಜ್ರಗಳಿಂದ ಶೃಂಗರಿಸುತ್ತಾರೆ. ಮನೋರಂಜನೆಯ ಮರುಭೂಮಿಯಲ್ಲಿ ನಕ್ಷತ್ರಗಳಿಂದ ತುಂಬಿದ ಆಕಾಶವನ್ನು ನಿರ್ಮಿಸಿ, ಸುಮಧುರ ಗೀತೆಗಳ ದೃಶ್ಯಗಳನ್ನು ದೇವರ ಕೌಶಲ್ಯಪೂರ್ಣವಾದ ಕಲೆಯು ಪ್ರದರ್ಶಿಸುತ್ತದೆ. ಹಾಗೂ ತಿರುಗಣಿ ಮಡುವು ರೂಪಿಸಿ ಅದನ್ನು ಮುತ್ತುಗಳಿಂದ ತುಂಬಲಾಗಿದೆ. ಬೆಳ್ಳಿಯಂತೆ ಮಿನುಗುವ ನೂತನ ಚಂದ್ರನ ಶಾಖೆಯ ಮೇಲೆ ಬಂಗಾರಬಣ್ಣದ ನಕ್ಷತ್ರಗಳ ಮೊಗ್ಗುಗಳನ್ನು ಅರಳಿಸಿ, ಸಪ್ತಋಷಿ ಪುಂಜದ ಮಲ್ಲಿಗೆಯಂತಹ ಹೂಗುಚ್ಛವನ್ನು ನಿಶೆಯ ಪರಿಮಳ ಭರಿತ ಹುಲ್ಲಿನೊಂದಿಗೆ ಕಟ್ಟಲಾಗಿದೆ. ಹಸಿರು–ನೀಲಿ ವರ್ಣದ ಹುಲ್ಲಿನ ಕಠಾರಿಗಳನ್ನು ಪರ್ವತಗಳ ಟೊಂಕದಲ್ಲಿ ಸುದೃಢವಾಗಿ ಹೂಳಲಾಗಿದೆ ಮತ್ತು ಅಗ್ನಿ ಸುರಿಯುವ ಮಿಂಚಿನ ಖಡ್ಗದಿಂದ ಮೋಡಗಳು ಕೈಗಳಿಗೆ ಶಕ್ತಿಯನ್ನು ನೀಡಲಾಗಿದೆ. ಒಂದು ಹನಿ ನೀರನ್ನೂ ಸಹ ಚಲ್ಲದೇ ತೆರೆಗಳನ್ನೆಬ್ಬಿಸುವ ಸಮುದ್ರಕ್ಕೆ ಗುರಿರಹಿತ ಮೈದಾನದಲ್ಲಿ ಕಮಾನು ತಯಾರಿಕೆಯ ಕವಾಯತ್ತನ್ನು ದೇವರು ಮಾಡಿಸುತ್ತಾನೆ.

ತೆರೆಗಳ ಕಮಾನಿನಂತಹ ಕೈಗಳು ತಿರುಗಣಿ ಮಡುವಿನ ಆಳವನ್ನು ಪ್ರವೇಶ ಮಾಡಿ; ಸಿಂಪೆ\ಕಪ್ಪೆಚಿಪ್ಪುಗಳನ್ನು ಅಡಗುದಾಣಗಳಿಂದ ಸಾಗರದ ಮೇಲ್ಭಾಗಕ್ಕೆ ಹೊರಗೆಳೆದು ತಂದು ನಗೆ ಬೀರುತ್ತವೆ. ಈ ಪ್ರಕ್ರಿಯೆಯಿಂದ ಸಂತುಷ್ಟಗೊಂಡು ಮೋಡವು ಪ್ರತಿಯೊಂದು ನೀರ್ಗುಳ್ಳೆಯನ್ನು ತೋಯಿಸಿ, ಬೆಳ್ಳಿಯ ಲೇಪನವನ್ನು ಹಚ್ಚುತ್ತದೆ. ಶೇರ್‌ವಾದ ಮೀನುಹಿಡಿಯುವಂತಹ ಸುರಕ್ಷಿತ ದಾರಿಯನ್ನು ಪ್ರಾತಃಕಾಲವು ಬೆಳಕಿನಿಂದ ಪ್ರಕಾಶಮಾನಗೊಳಿಸುತ್ತದೆ. ಸಮಗ್ರ ದೇಹವು, ಅರಳಿದ ಮೊಗ್ಗಿನಂತಹ ಹೃದಯವಾಗಿ ನಯನ ಮತ್ತು ಹೃದಯದ ಪರದೆಗಳು ಭಗ್ನವಾಗುವಂತಹ ಆನಂದಮಯ ಸಮಯವಿದಾಗಿದೆ.

ಒಂದೇ ಕ್ಷಣದಲ್ಲಿ ಶಮೆಯು ಜ್ಯೋತಿಯನ್ನು ಬೆಳಗಿಸಿ ದ್ವಂದ್ವವನ್ನು ಅಂತ್ಯಗೊಳಿಸಿದೆಯೋ ಎಂಬಂತೆ; ಮನೋರಂಜನೆಯ ಕೂಟವನ್ನು ಉನ್ಮತ್ತವಾಗಿ ಶೃಂಗರಿಸಲಾಗುತ್ತದೆ. ನಿಕಟವರ್ತಿಗಳು ನಡುವಿನ ಅಂತರದಿಂದ ಮುಕ್ತರಾಗುತ್ತಾರೆ. ಹೊಸದಾಗಿ ಬೆಳೆದು ನಿಂತಿರುವ ಹುಲ್ಲು ಬಾಗುವಂತೆ ದೈವೀ ಸೇವೆಗೆ ಸಮರ್ಪಿತವಾದ ಉದ್ಯಾನದಲ್ಲಿ ಶಿರಬಾಗಿದ ಹೂಗಳು ಆಸೆ\ಆಕಾಂಕ್ಷೆಗಳನ್ನು ಪೂರ್ಣಗೊಳಿಸುವ **'ಕಾಬಾ'ದ** ದಿಶೆಯಲ್ಲಿ ತಲೆಬಾಗಿಸುತ್ತವೆ. ಹರಿಯುವ ನೀರು ದಾರಿಯ ಮೇಲೆ ಶಿರಬಾಗಿ ಪ್ರವಹಿಸುತ್ತ ಶುದ್ಧವಾಗುವಂತೆ ಆಜ್ಞಾಧಾರಕತೆಯ ಮಾರ್ಗದಲ್ಲಿ ಮುನ್ನಡೆಯುವ ವ್ಯಕ್ತಿಯು ಅದೇ ಪ್ರಕಾರ ಪರಿಶುದ್ಧ ಸ್ವರೂಪವನ್ನು ಹೊಂದುತ್ತಾನೆ. ಪ್ರತ್ಯೇಕವಾಗಿ ಆಸೀನರಾಗಿ, ದೇವರ ರಹಸ್ಯವನ್ನು ತಿಳಿಯುವಂತವರಿಗೆ ಕ್ಷಣಾರ್ಧದಲ್ಲಿ ತಮ್ಮ ಧ್ಯೇಯ ಸಾಧನೆಯು ಕಷ್ಟಸಾಧ್ಯವಾಗುತ್ತದೆ. ಏಕೆಂದರೆ, ಮಾರ್ಗದ ಧೂಳಿಯನ್ನು ಗಾಳಿಯ ಕಾಲುಗಳಿಂದ ಅಂದಾಜುಮಾಡುವ ಪ್ರಕ್ರಿಯೆಯು ದೇವರ ರಹಸ್ಯ ತಿಳಿಯುವ ತಜ್ಞರಿಗೆ ಅವಮಾನಕರ ಸಂಗತಿ ಆಗಿದೆ. ಅಮರತ್ವ ನೀಡುವಂತಹ ನೀರಿನ ಬಾವಿ (ಆಬೆ ಹಯಾತ್ ಚಷ್ಮಾ) ತಲುಪುವದು. ಮರುಭೂಮಿಯಲ್ಲಿ ವಾಸಿಸುವಂತಹ ಫಕೀರರ ಧ್ಯೇಯವಾಗಿರುವುದಿಲ್ಲ. ಮೀನು ನೀರಿನಲ್ಲಿ ಜೀವಂತವಾಗಿರುವಂತೆ ಬೆಳಕಿನ ಆಕಾಂಕ್ಷೆಗಳಾದ ವ್ಯಕ್ತಿಗಳು ತಮ್ಮ ಹೃದಯದಲ್ಲಿ ವ್ಯಾಪಿಸಿರುವ ಉನ್ಮಾದದೊಂದಿಗೆ ಜೀವಿಸುತ್ತಾರೆ. ಭ್ರಮೆಯ ಕೊಳ್ಳದ (ಕಣಿವೆ) ಆಕಾಂಕ್ಷೆ ಹೊಂದಿರುವಂತಹ ಬಾಯಾರಿಕೆಯ ವ್ಯಕ್ತಿಗಳನ್ನು ಅಗ್ನಿಯು ಸುಡುವಂತೆ ನೀರು ದಹಿಸಿ ಭಸ್ಮಗೊಳಿಸುತ್ತದೆ.

ಸಮಗ್ರ ಜಗತ್ತನ್ನು ಬೆಳಗಿಸುವ ಸೂರ್ಯನ ಸನ್ನಿಧಿಯಲ್ಲಿ ಸಂಚರಿಸುವ ಧೂಳಿಯ ಕಣಗಳಂತೆ, ಚೈತನ್ಯಮಯ ಸಂಗೀತ ಶ್ರಾವಣದ ಸಮಯದಲ್ಲಿ ಇಂತಹ ಪವಿತ್ರ ಹೃದಯದ ವ್ಯಕ್ತಿಗಳ ಮೌನದಲ್ಲಿ ನಿರಂತರವಾಗಿ ಕಂಡುಬರುವ ಪ್ರಕಾಶದ ನಿರೀಕ್ಷಣೆಯ ದೆಸೆಯಿಂದ ಅವರ ಆತ್ಮವು ನರ್ತಿಸಲಾರಂಭಿಸುತ್ತದೆ. ಈ ದೀಪದ ಹುಳುಗಳ ಹೃದಯದ ಬೀಗವು ಬೀಗದ ಕೈ ಇಲ್ಲದೇ ಜ್ವಾಲೆಯನ್ನು ಹೊರಹೊಮ್ಮಿಸುತ್ತದೆ. ಚಟಪಟಿಗೆ ಒಳಗಾಗದೇ ಪತಂಗಗಳ ಆತ್ಮಕ್ಕೆ ಶಾಂತಿ ದೊರೆಯಲಾರದು. ಗೆಳೆಯರ ವರ್ತುಳವು ಬಾಯಾರಿಕೆಯೊಂದಿಗೆ ಸಂಬಂಧಿಸಿರುತ್ತದೆ ಹಾಗೂ ಧ್ಯೇಯ ಶೋಧಕರು ತಮ್ಮ ಅಭಿಲಾಷೆಯನ್ನು ಸಂತೃಪ್ತಗೊಳಿಸಿಕೊಳ್ಳುವರು. ದೂರದೃಷ್ಟಿ ಸಂಪನ್ನ ವ್ಯಕ್ತಿಗಳು ಇಂತಹ ಸಂಗತಿಯನ್ನು ಗಮನಿಸಿ, ಹೃದಯದಲ್ಲಿ ದೇವರ ಅಸ್ತಿತ್ವವನ್ನು ಗುರುತಿಸಿಕೊಳ್ಳುವರು. ಸೂರ್ಯ ಕಿರಣಗಳು ತೀಕ್ಷ್ಣವಿಲ್ಲದರ ಪರಿಣಾಮವಾಗಿ ಧೂಳಿಕಣಗಳ ಬೇಟಿ ಆಡುವುದಿಲ್ಲ. ಪ್ರತ್ಯೇಕವಾಗಿ ಆಸೀನರಾದ ವ್ಯಕ್ತಿಗಳು ಶ್ರವಣ ಮಾರ್ಗದ ಮುಖಾಂತರ ದೇವರ ದರ್ಶನ ಪಡೆಯುವರು ಒಂದು ಬಿಂದುವಿನ ಸುತ್ತಲೂ 'ಕಂಪಾಸ್' ತಿರುಗಿಸದಿದ್ದರೆ ಒಂದು ವರ್ತುಳವಾಗಲಾರದು.

ದೇವರ ಕರ–ಕೌಶಲ್ಯ ಗುರುತಿಸುವ ವ್ಯಕ್ತಿಯು ದೇವರ ಸೃಷ್ಟಿಯನ್ನು ನೋಡಿ ಆಶ್ಚರ್ಯಚಕಿತನಾಗುತ್ತಾನೆ. ಯಾವುದೇ ಕಾರ್ಯದ ಆರಂಭದಲ್ಲಿಯೇ ಅದರ ಅಂತ್ಯದ ಬಣ್ಣವು ಗೋಚರಿಸುತ್ತದೆ. ಯಾವ ಮುಚ್ಚಿದ ಕಣ್ಣುಗಳು ಬಾದಾಮಿಯಂತೆ ಗೆಳೆಯನ ಹೃದಯದ ರಹಸ್ಯವನ್ನು ಕಾಪಾಡುತ್ತವೆಯೋ ಅಂತಹ ಕಣ್ಣುಗಳು ಪ್ರಜ್ಞಾ ಸಂಪನ್ನವಾಗಿರುತ್ತವೆ. ಪ್ರತ್ಯೇಕವಾಗಿ ಮೌನದಿಂದ ಕುಳಿತಿರುವ ವ್ಯಕ್ತಿಗಳು ವಾಸ್ತವಿಕತೆಯ ರಹಸ್ಯಗಳನ್ನು ಪ್ರಕಟಿಸುವ ಸಾಮರ್ಥ್ಯವನ್ನು ಹೊಂದಿದ್ದಾರೆ.

ಕಿವಿಗಳು ಮಾತುಗಳ ರುಚಿಯನ್ನು ಶೋಧಿಸುತ್ತವೆ.

ಏಕೆಂದರೆ : ಮಾತನಾಡದಂತೆ ನಾಲಿಗೆಗೆ ಹೊಲಿಗೆ ಹಾಕಲಾಗಿದೆ.

ನೀನು ಮಾರ್ಗದ ಮೇಲಿನ ಕಲ್ಲಿನ ಹೊರತಾಗಿ ಬೇರೆ ಯಾರೊಂದಿಗೂ ಸಂಬಂಧವಿಡಬೇಡ.

ಏಕೆಂದರೆ : ಒಂದು ಬಿಂದುವು ಕಂಪಾಸಿನ ಕಾಲಿನಲ್ಲಿ ಕೈದಿಯಾಗಿರುತ್ತದೆ.

ಜಗತ್ತಿನ ಉದ್ಯಾನದಲ್ಲಿ ದೊರಕುವ ಅಪಾರ ನೈಸರ್ಗಿಕ ಸೃಷ್ಟಿಯ ಉಲ್ಲಾಸದಲ್ಲಿ ಮುಳುಗಿ ದೇವರ ಏಕತೆಯ ಪ್ರಶಂಸಕರು ಆತನ ಗುಣಗಾನ ಮಾಡುತ್ತಾರೆ. ಅವರು ತಮ್ಮ ಶರೀರವೆಂಬ ಭೂಮಿಯಿಂದ ಬಂಡಾಯ ಪ್ರೇರೇಪಿಸುವ ಸ್ವಾರ್ಥದ ವೃಕ್ಷವನ್ನು ಕಿತ್ತೆಸೆಯುತ್ತಾರೆ ಮತ್ತು ಸ್ವಾತಂತ್ರ್ಯದ ಶಾಖೆಯ ಮೇಲೆ ಕುಳಿತು ದೇವರ ಏಕತ್ವದ ಗೀತೆಗಳನ್ನು ಹಾಡುತ್ತಾರೆ.

ದೇವರು ಹೃದಯದ ರಹಸ್ಯ ತಿಳಿಯುವಂತೆ ಸೃಷ್ಟಿಸಿದ್ದಾನೆ.
ತನ್ನ ಕರ–ಕುಶಲತೆಯಿಂದ ವಿಶ್ವವನ್ನು ನಿರ್ಮಿಸಿದ್ದಾನೆ.
ಈ ಜಗತ್ತು ಆತನ ಕರ–ಕುಶಲತೆಯ ದರ್ಪಣವಾಗಿದೆ.
ಆಕಾಶವು ಆತನ ಕೌಶಲ್ಯಪೂರ್ಣ ರಹಸ್ಯಗಳ ಭಂಡಾರವಾಗಿದೆ.

ಆತನು ಭೂಮಿಗೆ ಸಾಮ್ರಾಟನ ಸಿಂಹಾಸನದ ಅಪೂರ್ವ ಸೌಂದರ್ಯ ದಯಪಾಲಿಸಿದ್ದಾನೆ.

ದೇವರ ಅಜ್ಞಾನುಸಾರ, ಸಕಲ ಸೃಷ್ಟಿಯು ಉದ್ಭವಿಸಿದ ಒಂದು ಶ್ರೇಷ್ಠವಾದ ದೃಶ್ಯವಿದಾಗಿದೆ.

ದೇವರ ಸ್ತುತಿ ಮತ್ತು ದೇವರಿಗೆ ಸಲ್ಲಿಸಲಾಗುವ ಕೃತಜ್ಞತಾ ಭಾವನೆಯು ಆತನನ್ನು ಅರಿಯುವ ವ್ಯಕ್ತಿಗಳ ಭವ್ಯತೆಯನ್ನು ಪ್ರದರ್ಶಿಸುವ ವೇದಿಕೆ ಆಗಿದೆ. ಸಂಶಯವು ತೇಜೋಮಯ ಕಣ್ಣುಗಳನ್ನು ಹೊಂದಿದ ವ್ಯಕ್ತಿಗಳ ದಾರಿಯ ಧೂಳಿ ಆಗಿದೆ. ಪರಿಕಲ್ಪನೆಯ ಸೂಕ್ಷ್ಮತೆಯನ್ನು ಗುರುತಿಸುವ ವ್ಯಕ್ತಿಗಳ ಬುದ್ಧಿವಂತಿಕೆಯು

ದೇವರ ಪರಿಚಯುದ ಭಂಡಾರದವರೆಗೆ ತಲುಪುವ ಮಾಂತ್ರಿಕತೆಯನ್ನು ಜಾಗ್ರತಗೊಳಿಸಬೇಕೆಂದು ತಿಳಿಸುತ್ತದೆ. ಅದಕ್ಕಾಗಿ ಸ್ವಯಂ ಅಲಂಕೃತವಾಗಲು ವಿಚಾರಮಾಡಿ; ತಮ್ಮ ಅಸಮರ್ಥತೆಯನ್ನು ಕುರಿತು ಸ್ವಯಂ-ಅಪಹಾಸ್ಯ ಮಾಡಿಕೊಳ್ಳುತ್ತಾರೆ. ದೇವರನ್ನು ಸ್ತುತಿಸುವ ಆರಂಭದಲ್ಲಿ ಅಂತ್ಯದ ಚಹರೆಯನ್ನು ತೋರಿಸಲು ಅಸಮರ್ಥರಾಗುತ್ತಾರೆ. ಈ ವ್ಯಕ್ತಿಗಳ ಗೌರವ\ಘನತೆಯ ನಕ್ಷತ್ರವು ಇಂತಹ ಅಪಯಶಸ್ಸಿನ ಆಘಾತ ಮತ್ತು ಮತ್ತು ಭಯದಿಂದ ತೇಜೋವಿಹೀನವಾಗುತ್ತದೆ. ಅಪಜಯವನ್ನು ಅನುಭವಿಸಿದ ವ್ಯಕ್ತಿಗಳು ಕ್ಷಮೆಯನ್ನು ಕೇಳಲಾರಂಭಿಸುತ್ತಾರೆ. ಇವರ ಕ್ಷಮೆಯು ಪರಿಣಾಮ ಬೀರುತ್ತದೆ. ಹಾಗೂ ಇವರ ಮುಖದ ಮೇಲೆ ಯಶಸ್ಸಿನ ದೀಪ ಬೆಳಗಲಾರಂಭಿಸುತ್ತದೆ. ದೇವರ ಸಾಮ್ರಾಜ್ಯವನ್ನು ಗುರುತಿಸಲು ಪರಿಣಿತರಾದ ವ್ಯಕ್ತಿಗಳ ಕೀರ್ತಿಯ ಧ್ವನಿಯು ದೇವದೂತರವರೆಗೆ ತಲುಪುವಂತೆ ಕಠಿಣವಾದ ಹೋರಾಟದ ಪರ್ವತದ ಮೇಲೆ ಅವರು ತಮ್ಮ ಕುದುರೆಗಳನ್ನು ಓಡಿಸುತ್ತಾರೆ.

'ಭೂಮಿ ಮತ್ತು ಸಾಗರವನ್ನು ಸೃಷ್ಟಿಸಿದಂತಹ ಧ್ಯೇಯವು ಇಂತಹ ಶ್ರೇಷ್ಠವಾದ ಮುತ್ತುಗಳ ಸಂಪಾದನೆ ಆಗಿದೆ, ಇಂತಹ ವ್ಯಕ್ತಿಗಳು ದೈವ ಹಾಗೂ ಮೌಲ್ಯದ ಕೂಟದಲ್ಲಿ ಬಟ್ಟಲಿನ ಮದ್ಯಪಾನ ಮಾಡುತ್ತಾರೆ, ಅವರ ಶಿರದ ಮೇಲೆ ಕಿರೀಟವಿರುತ್ತದೆ. ಅವರು ಯಾವಾಗಲೂ ಸಿಂಹಾಸನದ ಮೇಲೆ ಆಸೀನರಾಗಿ ಅದನ್ನು ಶೋಭಾಯಮಾನಗೊಳಿಸುತ್ತಾರೆ, ಅವರು ಮುತ್ತುಗಳ ಕಾಂತಿಯಂತೆ ಮಿತ್ರರ ಸಮ್ಮುಖದಲ್ಲಿ ಪ್ರತ್ಯಕ್ಷರಾಗುತ್ತಾರೆ'.

ಹಣೆಯಿಂದ ಬೆವರಿನ ಹನಿಗಳು ಜಾರಿ ಬೀಳುವಂತೆ ಗ್ರಹಣಶಕ್ತಿ-ಸಂಪನ್ನ ಲೇಖನಿಯ ಅಗ್ರಭಾಗದ ಮೂಲಕ ಕವಿತೆಗಳ ತಂತುಗಳನ್ನು ಶೋಧಿಸಲಾರಂಭಿಸುತ್ತಾರೆ. ಆಕಾಶ ಸಂಚಾರ ಮಾಡುವ ಚಿಂತನೆಯು ಬುದ್ಧಿವಂತಿಕೆಯ ಮೈದಾನದಲ್ಲಿ ಅಶ್ವಾರೋಹಿಯಂತೆ ಓಡುತ್ತದೆ. ಆದರೆ ಪ್ರಶಂಸೆಯ ಮೈದಾನದಲ್ಲಿ ಲೇಖನಿಯ ಬರ್ಚಿಗಳನ್ನು ಎಸೆಯದಿದ್ದರೆ, ಮತ್ತೇನನ್ನು ಶೋಧಿಸಲು ಸಾಧ್ಯ.

'ದೇವರ ಗುಣಗಾನದ ವಿಷಯದಲ್ಲಿ ಬುದ್ಧಿವಂತಿಕೆಯು ತನ್ನ ನಾಲಿಗೆ ತೆರೆಯಲು ನಾಚಿಕೆ ವ್ಯಕ್ತಪಡಿಸುತ್ತದೆ, ಮೊಗ್ಗಿನಂತೆ ನಾಲಿಗೆಯು ಬಾಯಿಯ ಮೇಲೆ ಬೀಗ ಮುದ್ರೆ ಹಾಕಿದೆ, ಅಮರತ್ವ ಹಾಗೂ ನಶ್ವರತೆಯೊಂದಿಗೆ ಅಂಟಿಕೊಂಡಿರುವ ಮಾನವನು ದೇವರ ಉದ್ಯಾನದ ಹುಲ್ಲು ಆಗಿದ್ದಾನೆ, ನಾವು ಮತ್ತು ನನ್ನದೆಂಬ ಧ್ವನಿಯು; ದೇವರ ಉಪ್ಪಿನ ಪಾತ್ರೆಯ ಉಪ್ಪು ಆಗಿದೆ, ದೇವರ ಬಟ್ಟಲಿನಲ್ಲಿ ಉದ್ಭವಿಸುವ ಬೀಜಾಂಕುರದಂತೆ, ವಿಶ್ವದ ಜನನವಾಗಿದೆ, ಮದ್ಯದ ಪಿಪಾಯಿಯ ತಳಭಾಗದಲ್ಲಿ ಸಂಗ್ರಹಿತವಾದ ಮದ್ಯದಿಂದ ಭೂಮಿಯ ಮೇಲ್ಭಾಗ ಮತ್ತು ಸಮಯವನ್ನು ದೇವರ ಜಾಣ್ಮೆಯು ಸೃಷ್ಟಿಸಿದೆ, ದೇವರ ದೆಸೆಯಿಂದ ಜ್ಞಾನ ಮತ್ತು ಕ್ರಿಯೆಯ ಸಾಗುವಳಿಯು ವಿನೂತನವಾಗಿ ಹಚ್ಚಹಸುರಾಗಿದೆ, ಜಾರಿ ಹೋಗುವ ಸಮಯದ ಪ್ರಾಪ್ತಿಯು ದೇವರ ದಯಾಪೂರ್ಣ ಗುಣದ ಬಗೆಗಿನ ಜ್ಞಾನದ ಹೊರತಾಗಿ ಬೇರೇನೂ ಅಲ್ಲ'.

ಪ್ರಾಚೀನ ಮತ್ತು ನೂತನ ಸೃಷ್ಟಿಯನ್ನು ಕುರಿತು ಪೀಠಿಕೆ ಬರೆಯುವವರು. ಹಳೆಯ ಹಾಗೂ ಹೊಸ ಕಾರ್ಯಗಳ ಗುರುತಿನ ಮೆಟ್ಟಿಲುಗಳನ್ನು ತೋರಿಸುತ್ತಾರೆ. ವಿಶ್ವದ ಏರಿಳಿತಗಳ ಅಂತರವನ್ನು ಪ್ರಕಟಿಸುತ್ತಾರೆ. ಅಸ್ತಿತ್ವ ಅಥವಾ ಅಸ್ತಿತ್ವ ವಿಹೀನತೆಯ ಯಾವುದೇ 'ಬಂಡವಾಳ' ಇರಲಿಲ್ಲವೆಂದು ಅವರು ಗ್ರಹಿಸುತ್ತಾರೆ. ದೇವರು ಸ್ವಯಂ–ಸೃಷ್ಟಿಸಿದ ಚಮತ್ಕಾರಗಳನ್ನು ನಿರೀಕ್ಷಿಸುವ ಕಾರ್ಯದಲ್ಲಿ ಅವರು ತಲ್ಲೀನರಾಗುತ್ತಾರೆ. ಸರ್ವಶ್ರೇಷ್ಠನಾದ ದೇವರ ಏಕತ್ವದ ಮಾಪನ ಮಾಡುವ ವಿಧಾನದ ಬಗೆಗೆ ನಿರೂಪಿಸುತ್ತಾರೆ. ಆದರೆ ದೇವರ ಏಕತ್ವದ ಬಗೆಗಿನ ಅವರ ನಿರೂಪಣೆಯು ಅಪೂರ್ಣವಾಗಿರುತ್ತದೆ.

'ಏಕಾಂಗಿಯಾಗಿ ಕುಳಿತಿರುವ ಪವಿತ್ರ ಹೃದಯದ ವ್ಯಕ್ತಿಗಳು, ಇರುಳಿನಲ್ಲಿ ದೀಪ ಬೆಳಗಿಸಿ, ರಾತ್ರಿಯನ್ನು ಪ್ರಾತಃಕಾಲದಲ್ಲಿ ಪರಿವರ್ತಿಸುತ್ತಾರೆ, ಆದಿಯಿಂದ ಅಂತ್ಯದವರೆಗೆ ಜಗತ್ತು ಅವರದಾಗಿರುತ್ತದೆ, ಏಕತ್ವದ ಮುತ್ತುಗಳನ್ನು ಒಂದು ದಾರದಲ್ಲಿ ಪೋಣಿಸುತ್ತಾರೆ, ಅವರು ರಹಸ್ಯಾತ್ಮಕ ಉದ್ಯಾನದ ಕವಿತೆಗಳನ್ನು ಹಾಡುವ ಹಕ್ಕಿಗಳಾಗಿದ್ದಾರೆ, ಪ್ರಾರ್ಥನೆ\ಕಾಣಿಕೆಯ ಜಗತ್ತಿನ ಭ್ರಾಂತಿಯನ್ನು ಅವರು ಸಹಿಸುತ್ತಾರೆ, ವೈಭವಪೂರ್ಣ ದೃಶ್ಯಗಳ ಸಾಮ್ರಾಜ್ಯದ ಮೂಲಕ, ದೇವರ ಉದಾರತೆಯ ಅಂದಾಜು ಮಾಡುತ್ತಾರೆ'.

ನಿರಂತರವಾದ ಅಸ್ತಿತ್ವ ಹೊಂದಿರುವ ಮಹಾರಾಜನು ಆವಾಸರಹಿತ ಔನ್ನತ್ಯವನ್ನು ತಲುಪಿ, ಸ್ವರ್ಗೀಯ ಸ್ಥಾನವನ್ನು ಹೊಂದುವಂತಹ ವ್ಯಕ್ತಿಗೆ ಆತನ ಹಿರಿಮೆಗೆ ಸಮಾನವಾದ ಕಿರೀಟವನ್ನು ದಯಪಾಲಿಸಿ ಆತನ ಸ್ಥಾನಮಾನವನ್ನು ಸ್ಥಿರಗೊಳಿಸಿದನು. ಆತನ ಕೈಯಲ್ಲಿ ಒಂದು ಅತ್ಯಂತ ಅಮೌಲ್ಯವಾದ ಗ್ರಂಥವನ್ನು ಇಡಲಾಗಿದೆ. ಅದು ಕೇವಲ ದೇವರ ಪ್ರಶಂಸೆಯ ಮುತ್ತುಗಳು ಹಾಗೂ ಪ್ರವಾದಿಯ ಸ್ತುತಿಯ ಆಭರಣಗಳಿಂದ ಅಲಂಕೃತವಾಗಿರದೇ ಅದೊಂದು ಪ್ರಾಚೀನ ಖಗೋಳ ಪಂಚಾಂಗ ಆಗಿದೆ. ಮಕ್ಕಳ ಸರಳತೆ\ಮುಗ್ಧತೆಯಂತಹ ಅಭ್ಯಾಸದ ಪುಟಗಳೊಂದಿಗೆ ಸಂಯೋಜಿಸಿ, ಸೂಕ್ಷ್ಮವಾಗಿ ಒಟ್ಟಿಗೆ ಹೆಣೆಯಲಾಗಿದೆ.

'ಸ್ವರೂಪ ಮತ್ತು ಅರ್ಥವನ್ನು ಆವರಿಸಿದಂತಹ ಮಹಮ್ಮದ ಅರಬಿ, ಪ್ರವಾದಿಯ ನಾಮದ ಮೃದುತ್ವದಿಂದ ಮಾತುಗಳು ಆಸಕ್ತಿಪೂರ್ಣವಾಗುತ್ತವೆ, ಅದೃಶ್ಯನಾದ ಪ್ರವಾದಿಯು ಹೂವಿನಂತೆ ಪರದೆಯಿಂದ ಹೊರಬರುತ್ತಾನೆ, ಆತನ ದಿವ್ಯ ಸನ್ನಿಧಿಯಲ್ಲಿ ಬೆಳಗಿನಿಂದ ಸಾಯಂಕಾಲದವರೆಗೆ ನಿರ್ಣಯ ಕೈಕೊಳ್ಳಲಾಗುತ್ತದೆ, ಪ್ಯಾನ್ಸಿ ಮತ್ತು ಕಾಡು ಗುಲಾಬಿ ಹೂವಿನ ದಳಗಳಿಂದ ರತ್ನಗಂಬಳಿ ಹಾಸಲಾಗುತ್ತದೆ, ಪ್ರವಾದಿಯ ಮಾರ್ಗದ ಮುಳ್ಳುಗಳು, ಚಿತ್ರ ಬರೆಯುವ ಲೇಖನಿಯ ತುದಿಯಂತೆ, ಉಭಯ ಜಗತ್ತುಗಳ ಪ್ರೇಕ್ಷಕರ ದಿನಚರಿಯನ್ನು ಶೃಂಗರಿಸಲಾಗುತ್ತದೆ, ಕೌಶಲ್ಯ ಪೂರ್ಣ ಶ್ರೇಷ್ಠತೆಯ ಸೂರ್ಯನ ಅಂಚಿನ ಧೂಳಿಯು ಬೆಳಕಿನಲ್ಲಿ ಆವೃತವಾದ ಚಾದರಿನಂತೆ ಆಕಾಶದ ಮೇಲೆ ಪಸರಿಸುತ್ತದೆ, ಪ್ರವಾದಿಯ ಮಾರ್ಗದ

ರತ್ನಗಂಬಳಿಯಿಂದ, ಆಕಾಶಕ್ಕೆ ಗೌರವ ಪ್ರಾಪ್ತವಾಗುತ್ತದೆ, ಆ ಮಾರ್ಗವು ದೇವರ ದರ್ಗಾ ತಲುಪುತ್ತದೆ. ದರ್ಗಾದಲ್ಲಿರುವ ವ್ಯಕ್ತಿಗಳಿಂದ ದರ್ಗಾಕ್ಕೆ ಸನ್ಮಾನ ದೊರಕುತ್ತದೆ'.

ಸತ್ಯವನ್ನು ನೋಡುವ ಕಣ್ಣು ಮತ್ತು ವಾಸ್ತವಿಕತೆಯಿಂದ ತುಂಬಿದ ಹೃದಯ ನಿಸ್ಸಂದೇಹವಾಗಿಯೂ ಅರಸ ಹಾಗೂ ಜೊತೆಗಾರರೆನಿಸುತ್ತಾರೆ. ಅದೃಷ್ಟಶಾಲಿ ಮತ್ತು ಹಿರಿಮೆಯ ಸಿಂಹಾಸನದ ಮೇಲೆ ಆಸೀನರಾದ ಜನರು ಅವರ ಪೂಜ್ಯವಾದ 'ಆಕಾಶ ಗುಂಬಜ'ವನ್ನು ಪ್ರಾರ್ಥನೆಯ ಕೇಂದ್ರಬಿಂದು ಎಂದು ಪರಿಗಣಿಸುತ್ತಾರೆ. ಅವರ ನೆರಳಿನ ಆಕಾಶದ ಧ್ವಜವು ಜಗತ್ತಿನ ಹಿರಿಮೆಯನ್ನು ಹೆಚ್ಚಿಸುತ್ತದೆ.

"ಆದಿಲ್" ಸಂತಾನದ ಅರಸನ ಶಿರೋನಾಮವು 'ಖುಸ್ರೋಗಾಜಿ– ಇರುತ್ತದೆ, ಖುಸ್ರೋಗಾಜಿಯು ಉದಾರತೆ ಹಾಗೂ ಧೈರ್ಯದ ಸಾಕಾರಮೂರ್ತಿ ಆಗಿದ್ದಾರೆ, ಆತನ ಭಯದಿಂದ ಪ್ರತಿ ಪ್ರಾತಃಕಾಲವು ವೈರಿಯ ಶಿರದಂತೆ ಭೂಮಿಯ ಮೇಲೆ ಪತನವಾಗುತ್ತದೆ, ಆಕಾಶದ ಮಹಾಸರ್ಪವು ತನ್ನ ಬಾಯಿಯಿಂದ ಸೂರ್ಯನ ಆಟದ ಗೋಲಿಯನ್ನು ಹೊರಗೆ ಎಸೆಯುತ್ತದೆ, ದೇವತೆಗಳು ಹಾಗೂ ರಾಜರ ಹಣೆಯು / ನೊಸಲು ಆತನ ದ್ವಾರದ ಮೇಲೆ ಶರಣಾಗತವಾಗುತ್ತದೆ, ವಯೋವೃದ್ಧ ಆಕಾಶವು ಆತನ ಮಾರ್ಗದ ಧೂಳಿಯನ್ನು ತನ್ನ ಮಾಳಿಗೆಯನ್ನಾಗಿ ಮಾಡಿಕೊಳ್ಳುತ್ತದೆ, ಒಂಭತ್ತು ಆಕಾಶಗಳು ಮತ್ತು ನಾಲ್ಕು ಮಹಾಭೂತಗಳು ಆತನನ್ನು ಅಪ್ಪಿಕೊಳ್ಳುತ್ತವೆ, ಆರು ದಿಕ್ಕುಗಳು ಹಾಗೂ ಎಂಟು ಸ್ವರ್ಗಗಳು ಆತನ ದೃಷ್ಟಿಯಲ್ಲಿ ಒಂದೇ ಉದ್ಯಾನದಂತೆ ಕಾಣುತ್ತವೆ'.

ಕ್ರಮಬದ್ಧತೆಯ ಸೇವಕರ ಒಡೆಯ ಜೀವನ ಕಾರಂಜಿಯ ವಿಜೇತ ಕಾಲ ಮತ್ತು ಭೂಮಿಯ ಮೇಲೆ ನ್ಯಾಯದ ವಿಸ್ತರಣಾಕಾರ, ಬಂಡುಕೋರರ ಹೃದಯಗಳನ್ನು ಭಗ್ನಗೊಳಿಸುವವ ಆಡಳಿತೆಯಲ್ಲಿ ನೂತನ ಹುದ್ದೆಗಳ ನಿರ್ಮಾಪಕ ಸಾಮ್ರಾಜ್ಯದ ತೆರಿಗೆ ವಸೂಲುಕಾರ ಮೌಲ್ಯ ಮತ್ತು ಅಧಿಕಾರದ ಪೀಠಿಕೆಯ ಆರಂಭಕಾರ, ಮೃದುತ್ವ ಹಾಗೂ ಪ್ರತಿಷ್ಠೆಯ ಬಗೆಗಿನ ಆಳವಾದ ಚಿಂತಕ ಆಸೆ–ಆಕಾಂಕ್ಷೆಗಳನ್ನು ಪೂರ್ಣಗೊಳಿಸುವವ ಬೇಡಿಕೆಗಳನ್ನು ಜಯಘೋಷದೊಂದಿಗೆ ಸ್ವಾಗತಿಸುವವ, ನುಡಿಯುವ ವ್ಯಕ್ತಿಗಳ ರಹಸ್ಯವನ್ನು ತಿಳಿಯುವವ ಸತ್ಯದ ನ್ಯಾಯಾಧೀಶ, ದಯೆ/ ಕರುಣೆಯನ್ನು ಹರಡುವ ವೀರಾಗ್ರಣಿ, ವಿಜಯದ ಮುಂದಾಳು, ಗೆಲುವಿನ ಖಡ್ಗದ ಮಿಂಚು, ಯಶಸ್ಸು ಮತ್ತು ಸುದೈವವೆಂಬ ಉಂಗುರದ ಅಮೂಲ್ಯ ಹರಳು, ತೇಜೋಮಯ ಸದಸದ್ವಿವೇಕದ ಕಿರಣ, ವಿಶ್ವ ಬೆಳಗುವಂತಹ ಪ್ರಾತಃಕಾಲದ ಉತ್ತೇಜನಕಾರ.

ಆತನ ರಾತ್ರಿಯಲ್ಲಿ ಎಂತಹ ಪ್ರಕಾಶವಿರುತ್ತದೆಂದರೆ: ಒಂದು ವೇಳೆ ಈ ಬೆಳಕು ಸಪ್ತಋಷಿ ಪುಂಜದ ಅತಿ ಸಣ್ಣ ತಾರೆಯನ್ನು ಸ್ಪರ್ಶಿಸಿದರೆ ಜಗತ್ತನ್ನು ಬೆಳಗಿಸುವ ಸೂರ್ಯಪ್ರಕಾಶದ ಐದು ಪಟ್ಟು ಅಧಿಕವಾಗಿ ಮಿಂಚುತ್ತದೆ. ಆತನು ಸುಗ್ಗಿಯ

ಕಾಲಕ್ಕಿಂತಲೂ ಮೊದಲಿಗೆ ಮಾಗಿದಂತಹ ಬುದ್ಧಿವಂತಿಕೆಯ ವೃಕ್ಷದ ಫಲವಾಗಿದ್ದಾನೆ. ಏಳನೆಯ ಆಕಾಶದ ವೈಭವದ ಶಾಖೆಯ ಮೇಲೆ ಅರಳಿದ ಸುಮನವಾಗಿದ್ದಾನೆ. ಆತನು ಸೃಜನಶೀಲ ಸಾಮ್ರಾಜ್ಯದ ಸಾಮ್ರಾಟನಾಗಿದ್ದಾನೆ. ಸೀಜರ್ ದೊರೆಯ ಸೇವಕರು ಆತನ ಅರಮನೆ ಮತ್ತು ಅದರ ಭವ್ಯತೆಯ ರಕ್ಷಕರಾಗಿದ್ದಾರೆ. ಸಿಕಂದರನಂತಹ ಶ್ರೀಮಂತ ವ್ಯಕ್ತಿಗಳು, ಆತನ ನಿವಾಸದ ಹೊಸ್ತಿಲಿನ ಹತ್ತಿರ ಕುಳಿತುಕೊಳ್ಳುತ್ತಾರೆ. ಹಾತೀಮನಂತೆ ದಾನನೀಡುವ ಆತನ ನಿವಾಸದ ಬಾಗಿಲಿನ ಮುಂದೆ ಯಾಚಕರು ನಿಂತಿರುತ್ತಾರೆ. ಆತನ ರಣಾಂಗಣದ ಧೂಳಿಯು ರುಸ್ತುಮನ ಧೈರ್ಯವನ್ನು ಕರಗಿಸುತ್ತದೆ. ಆತನ ವೈಭವದ ಮಹಾಪಥದ ಮೇಲ್ಭಾಗವು ಆಕಾಶ ಜೀವಿಗಳ ಹಣೆಯಂತೆ ವಿಶಾಲವಾಗಿದೆ. ಆತನ ಸೌಂದರ್ಯದ ದೃಶ್ಯಗಳ ಮೈದಾನವು ವಾಸ್ತವಿಕತೆಯನ್ನು ಕಾಣುವಂತಹ ವ್ಯಕ್ತಿಗಳ ದೃಷ್ಟಿ ಸಾಮರ್ಥ್ಯಕ್ಕೆ ಸಮರ್ಪಿತವಾಗಿದೆ. ಆತನ ನಿವಾಸದ ಮೊಳೆಯ ತುದಿಯು ಆಕಾಶ ತಿರುಗುವಂತಹ ಕೇಂದ್ರ ಬಿಂದುವಾಗಿದೆ. ಆತನ ನಿವಾಸದ ಕಥೆಯು ಬುದ್ಧಿವಂತಿಕೆ ಮತ್ತು ತಿಳುವಳಿಕೆಯ ಸಂಪುಟವಾಗಿದೆ. ಆತನ ಸಭೆಯ ದೀಪದ ಬೆಳಕು ನಕ್ಷತ್ರಗಳ ಮಳೆ ಸುರಿಯಲು ನಿರತವಾಗಿದೆ. ಭೂಮಿಯ ಮೇಲೆ ಆತನ ಆಳ್ವಿಕೆಯ ಶಾಸನಗಳು ಆತನ ಪರಿಪೂರ್ಣ ಮನಸ್ಸಿನ ಪರಣಾಮಗಳಾಗಿವೆ.

"ಆತನ ಕರುಣೆಯ ಗಾಳಿಯು ಹುಲ್ಲಿನ ಮೈದಾನದ ಮೇಲೆ ಚಲಿಸಿದಾಗ ಹುಲ್ಲು ಹೊಸತನ ಪಡೆದು, 'ಸಿದ್ಧೆರಾಹ ಹಾಗೂ ತೂಬಾ' ಆಗುತ್ತದೆ"

(ಸಿದೆರಾಹ್ = ಏಳನೇ ಆಕಾಶದ ಒಂದು ವೃಕ್ಷ

ತೂಬಾ = ಸ್ವರ್ಗದ ಒಂದು ವೃಕ್ಷ.)

ಅರಸನು ಶಿರಬಾಗಿ ಮಾಡುವ ಪ್ರಾರ್ಥನೆಯು ತೋರಿಸುವ ಗುರುತು\ಸಂಜ್ಞೆಯು ಆತನ ವೈಭವದ ಸನ್ನದು ಆಗಿ ಪರಿಣಮಿಸುತ್ತದೆ. ಆತನ ದಯಾಪೂರ್ಣವಾದ ಲೇಖನಿಯ ಬರವಣಿಗೆಯು ಶ್ರೇಷ್ಠ ತಲೆಮಾರುಗಳ ಆಧಾರದ ದಾಖಲೆಯಾಗಿದೆ. ಆತನ ದೃಢತೆಯು ಜಗತ್ತನ್ನು ಸಂರಕ್ಷಿಸುವಂತಹ ದೇವರ ಶಕ್ತಿಯ ಬಲಿಷ್ಠವಾದ ಭುಜವಾಗಿದೆ. ಆತನ ಹುಬ್ಬಿನ ಅಂಚಿನ ಚಲನವಲನೆಯು ಹಿರಿಯ ದೊರೆಗಳ ಹೃದಯಗಳನ್ನು ಸಂತೃಪ್ತಗೊಳಿಸುತ್ತದೆ.

ದೇವರು ಒಂದು ಇರುವೆಗೆ ಪ್ರವಾದಿ ಸುಲೇಮಾನರ ಸ್ಥಾನವನ್ನು ದಯಪಾಲಿಸಿದನು. ಇಂತಹ ಅನುಕರುಣೆಯ ಸ್ವರೂಪವಾಗಿ ವರದಾನದ ಕಾರ್ಯಗಳು ಅನುಷ್ಠಾನಗೊಳ್ಳುತ್ತವೆ. ಸೀಪೆಗಳಿಗೆ ಮುತ್ತುಗಳ ವರದಾನ ನೀಡುವಂತೆ, ಆತನ ಉದಾರತೆಯ ಕೀರ್ತಿಯ ಪ್ರಭಾವದಿಂದ ಜಗತ್ತಿನ ಜನರನ್ನು ಮುತ್ತು-ರತ್ನಗಳಿಂದ ಗೌರವಿಸಲಾಗುತ್ತದೆ. ಮುತ್ತುಗಳನ್ನು ಸೃಷ್ಟಿಸುವಂತಹ ಆತನ ಮಳೆ ಸುರಿಸುವ

ಸಾಮರ್ಥ್ಯದಿಂದ ನಾಚಿಕೆಗೊಂಡು ಯಾಚಕರು, ತಮ್ಮ ಹಣೆಯಿಂದ 'ಅಮಾನ್' ನದಿಯ ನೀರಿನಂತೆ ಬೆವರು ಸುರಿಸುತ್ತಾರೆ. ಜಗತ್ತಿನಲ್ಲಿ ಸುಖ-ಶಾಂತಿ ಪ್ರಾಪ್ತವಾಗುವುದರ ಪರಿಣಾಮಸ್ವರೂಪವಾಗಿ ಆತನ ದಯೆಯು ವಿಶಾಲವಾಗಿದೆ. ಅವಿಶ್ರಾಂತ ಧೂಳಿಯ ಕಣಗಳುಳ್ಳ ಹಣೆಯ ಮೇಲೆ ಮಿಂಚಿನ ಮುದ್ರೆಯು ಅಂಕಿತವಾಗಿ ಅವುಗಳು ವಿಶ್ರಾಂತಿ ಪಡೆಯುವ ಮಟ್ಟಿಗೆ ದರ್ಪಣದಲ್ಲಿ ಆತನ ಅದ್ವಿತೀಯ ಸೌಂದರ್ಯದ ಪ್ರತಿಬಿಂಬವು ಗೋಚರಿಸುತ್ತದೆ. ಭೂಮಿ ಮತ್ತು ಆಕಾಶದಲ್ಲಿ ನೆಲೆಸಿರುವ ಜೀವಿಗಳು ಆತನೆಡೆಗೆ ಶಿರಬಾಗಿಸಿ ವಂದನೆ ಸಲ್ಲಿಸುತ್ತವೆ. ಆತನು ಸೃಷ್ಟಿಸಿದ ಕಸ್ತೂರಿ ಮೃಗದ ಸುಗಂಧ ದ್ರವ್ಯವನ್ನು ಪಡೆಯುವ ಅಪಾರವಾದ ಆಸಕ್ತಿಯಿಂದ ಪ್ರೇರಿತರಾದ ಅಪರಾಧಿಗಳು – ಪಾಪಮುಕ್ತರಾಗಿ ಚೀನಾ ಮತ್ತು ಖತಾ ನಗರ ಪ್ರದೇಶಗಳು ಸುಗಂಧಭರಿತವಾಗಿವೆ. ಆತನ ಸೂರ್ಯನ ನೆರಳು ಪೃಥ್ವಿಯ ಅಂಚಿನವರೆಗೆ ವಿಸ್ತರಿಸಿದೆ. ಆತನ ಭದ್ರತೆಯ ಕ್ಷೇತ್ರದ ಫಸಲು, ಶಾಂತಿ-ಸುರಕ್ಷತಾ ವಲಯಕ್ಕೆ ಸಲ್ಲಿಸಬೇಕಾದಂತಹ ತೆರಿಗೆ ಆಗಿದೆ.

ಒಂದು ವೇಳೆ ನೂತನ ಚಂದಿರ ಆಶಕ್ತ ತೋಳು ಆತನ ದೃಢತೆಯ ಸಹಾಯದಿಂದ ಕತ್ತಲೆಯಿಂದ ಆವೃತವಾದ ಆಕಾಶ-ಕಮಾನು ಸೃಷ್ಟಿಸಿ ಹಿಂತಿರುಗಿ ಬರುವ ನಕ್ಷತ್ರಗಳ ಮೇಲೆ ಆಕ್ರಮಣ ಮಾಡಿದರೆ, ಒಂದು ಸಣ್ಣ ನಕ್ಷತ್ರವು ಭಯಗ್ರಸ್ತವಾಗಿ ಶುಕ್ರಗ್ರಹದ ಗಡಿಭಾಗದಲ್ಲಿ ನೇತಾಡುತ್ತದೆ. ಬೆಳ್ಳಿಯಂತಹ ಉಡುಪು ಧರಿಸಿದ ಪ್ರಾತಃಕಾಲವು ಮಿನುಗುವ ನಕ್ಷತ್ರ ಬಾಣದ ದಾರಿಯ ಮೇಲೆ ಧೂಳಿಯಂತೆ ಉದ್ಭವಿಸುತ್ತದೆ. ನ್ಯಾಯದ ನಗಾರಿಯಿಂದ ಹೊರಹೊಮ್ಮುವ ಗೀತೆಯ ಪ್ರಭಾವದಿಂದ ಭಗ್ನವಾದ ರೆಕ್ಕೆಯುಳ್ಳ ಸಣ್ಣ ಪಕ್ಷಿಯನ್ನು ಸ್ವಲ್ಪ ಸಮಯದವರೆಗೆ ಗಿಡುಗವು ತನ್ನ ಮೊನುಚಾದ ಉಗುರುಗಳಿಂದ ಹಿಡಿದುಕೊಂಡು ಶಾಂತವಾಗಿ ವಿಹರಿಸುತ್ತದೆ.

ಸಂತೋಷ-ವಿಲಾಸದಿಂದ ಅಲಂಕೃತವಾದ ಆತನ ಕೂಟದಲ್ಲಿ ಧೂಳಿಕಣಗಳ ನಿಯಮಾನುಸಾರ ಸೂರ್ಯನ ಸ್ವರ್ಣಮಯ ನಗಾರಿಯನ್ನು ಆಕಾಶವು ಬಾರಿಸುತ್ತದೆ. ಆತನ ವೈಭವ\ಗೌರವದ ಅಂಗಳದಲ್ಲಿ ಸಂಚರಿಸುವ ಪ್ರಾತಃಕಾಲೀನ ಗಾಳಿಯು ಜಗತ್ತಿನ ಉದ್ಯಾನದಲ್ಲಿ ಬೀಸಲು ಆರಂಭಿಸಿದರೆ ಪರ್ವತ ಹಾಗೂ ಮರುಭೂಮಿಯ ಮೇಲೆ ಹುಲ್ಲಿನ ಪ್ರತಿಯಾಗಿ ನೀಲಿ-ಆಕಾಶ ಗೋಚರಿಸಲಾರಂಭಿಸುವದು. ಆತನ ಶ್ರೇಷ್ಠತೆಯ ಶ್ರೇಣಿಯನ್ನು ಸ್ವಲ್ಪ ಪ್ರಮಾಣದಲ್ಲಿಯೂ ಸಹ ವರ್ಣಿಸಲು ಸಾಧ್ಯವಿಲ್ಲವೆಂಬ ಹಿರಿದಾದ ಸಂಶಯುವು ಪವಿತ್ರವಾದ ಶಕ್ತಿ-ಸಂಪನ್ನನಿಗೆ ಇದೆ. ಆದರೆ ವಿನಯಪೂರ್ವಕವಾಗಿ ಚಮತ್ಕಾರ ಪ್ರದರ್ಶಿಸುವಂತಹ ಲೇಖನಿಯಂತೆ ನಾಚಿಕೆಯಿಂದ ಶಿರಬಾಗಿಸಿ ಶರಣಾಗುವಂತಹ ಕ್ಷಮಾಯಾಚನೆಯು ಪ್ರಸ್ತುತವಿದೆ.

'ಆತನ ಪ್ರಶಂಸೆಯು, ಬುದ್ಧಿವಂತರಿಗೆ ಅಸಂಭವದ ಮಾತು ಆಗಿದೆ, ಒಂದು ಕಣವು ಆಕಾಶದ ನೌಕೆಗೆ ಲಂಗರು ಎಳೆಯಲಾರದು, ಹರಿಯುವ ನೀರನ್ನು ಸೌಮ್ಯತೆಯಿಂದ

ತಡೆಗಟ್ಟಿದರೆ ಒಂದು ತೆರೆಯು ಸಹ ಸಾಗರದ ಮೇಲ್ಭಾಗದ ಮೇಲೆ 'ಸಿಕಂದರನ ಗೋಡೆ' (ಸಿದ್ದೆ ಸಿಕಂದರಿ) ಆಗಿ, ಪರಿಣಮಿಸುತ್ತದೆ, ದೇವರ ಸ್ತುತಿಯ ದೆಸೆಯಿಂದ ನನ್ನ ಸ್ವಭಾವವು ಸೂಕ್ಷ್ಮತೆಯನ್ನು ಕಾಣುತ್ತದೆ, ನನ್ನ ಪ್ರೇಯಸಿಯ ಒಂದು ಕೂದಲಿನಿಂದ ಒಂದು ಸಂಪೂರ್ಣವಾದ ಕಾಗದದ ಮೇಲೆ ನಾನು ಗೆರೆಗಳನ್ನು ಎಳೆಯಬಲ್ಲೆನು'.

ಪ್ರವಾದಿ ಮೊಹಮ್ಮದರಂತಹ ಗುಣ-ಸಂಪನ್ನರಾದ ಮಹಾರಾಜನನ್ನು ಪ್ರಶಂಸೆ ಮಾಡುವ ಪ್ರಯತ್ನವು ಸೂರ್ಯೋದಯದ ಸ್ಥಾನವನ್ನು ಅಣುಗಳಿಂದ ಮಾಪನ ಮಾಡುವಂತೆ ಕಾಣುತ್ತದೆ.

'ದಕ್ಷಿಣದ ಸಿಂಹಾಸನಾಧೀಶ್ವರನು, ಜಗತ್ತಿನ ದೊರೆ ಆಗಿದ್ದಾನೆ, ಆತನ ಹೊಸ್ತಿಲಿನ ಮೇಲೆ ಮಾಡುವ ನಮನವು ಆಕಾಶದ ಮೇಲೆ ಕಿರೀಟವಿಡುವ ಸಮಾನವಾಗಿದೆ, ಏಕೇಶ್ವರಿವಾದದ ವಿರೋಧಿಗಳ ಶಿರಗಳನ್ನು ಆತನು ಭೂಮಿಯ ಮೇಲೆ ಪತನಗೊಳಿಸುತ್ತಾನೆ, ಪೃಥ್ವಿಯ ಮೇಲಿನ ನಿರೀಶ್ವರವಾದಿಗಳನ್ನು ಅಂತ್ಯಗೊಳಿಸುತ್ತಾನೆ, ಏಕೈಕ ದಾಳಿಯಲ್ಲಿ ಸಂಪೂರ್ಣ ಕರ್ನಾಟಕದ ಮೇಲೆ ವಿಜಯ ಸಾಧಿಸಿದ್ದಾನೆ, ಸಬತ್ ನಗರದಿಂದ ಸಾಧಿಸಿದ್ದಾನೆ. ರಾಮೇಶ್ವರದ ಬಂದರದವರೆಗಿನ ಪ್ರದೇಶವನ್ನು ಸ್ವಾಧೀನಪಡಿಸಿ ಕೊಂಡಿದ್ದಾನೆ, ಪ್ರಥಮ ಮಾನವನ (ಆಡ್ಯಾಮ್) ಕಾಲದಿಂದ ಇಂದಿನವರೆಗೆ ಯಾವ ಅರಸನೂ ಸಹ ಇಂತಹ ವಿಧಾನದಲ್ಲಿ ಪ್ರವಾದಿ ಮೊಹಮ್ಮದರ ಧರ್ಮದ ಪ್ರಶಂಸೆಯನ್ನು ಮಾಡಿರುವದಿಲ್ಲ, ಧರ್ಮವನ್ನು ಮುನ್ನಡೆಸುವ ಮೊಹಮ್ಮದನೆಂಬ ನಾಮದ ಅರಸನು ತನ್ನ ಖಡ್ಗದ ಸಾಮರ್ಥ್ಯದಿಂದ ವಿಜಯ ಹಾಗೂ ಯಶಸ್ಸು ಪ್ರಕಟಿಸಿದನು, ಧಾರ್ಮಿಕ ಭಾಷಣದಲ್ಲಿ ಒಂದು ವೇಳೆ ಆತನ ಆಂಗ್ವೆಯ ಮೇಲೆ ಪ್ರವಾದಿಯು ನುಡಿದ ವಚನಗಳನ್ನು ಬರೆದರೆ; ಅವುಗಳು ಮುತ್ತಿನ ಹಾರವಾಗಿ ಆಕಾಶದ ಔನ್ನತ್ಯವನ್ನು ತಲುಪುತ್ತವೆ'.

ದೇವರು ಜಗತ್ತನ್ನು ಸೃಷ್ಟಿಸುವ ದಿನ ಪ್ರವಾದಿ ಮೊಹಮ್ಮದ ಪೈಗಂಬರರ ಮುಖಾಂತರ ಜಗತ್ತಿನ ಆರಂಭ ಮತ್ತು ಅಂತ್ಯದ ಬಗೆಗೆ ತಿಳುವಳಿಕೆ ನೀಡಿದ ಅದೇ ದಿನದಂದು ದೇವರು ಜಗತ್ತಿನ ಪ್ರಗತಿಗಾಗಿ ಜನರಿಗೆ ಪ್ರಯೋಜನ ನೀಡಲು ಹಾಗೂ ರಾಜರಿಗೆ ಆಶ್ರಯ ಕೊಡುವ ಮಹಾರಾಜನ ಕಾಲವನ್ನು ಶೃಂಗರಿಸಲು ಸತ್ಯಧರ್ಮದ ಶಾಸನಗಳನ್ನು ಪ್ರವಾದಿ ಮೊಹಮ್ಮದರ ನಾಮಧಾರಿಯಾದ 'ಮಹಾರಾಜಾ ಮೊಹಮ್ಮದ ಆದಿಲ್ ಶಾ ಗಾಜಿ' ಅವರ ನಾಮದ ಮೂಲಕ ಜಾರಿಗೊಳಿಸಿ ದೇವರು ಸಂತೃಪ್ತನಾದನು. ಈ ಕಾಲವು ಜಗತ್ತಿನ ಆರಂಭದೊಂದಿಗೆ ಸಂಬಂಧ ಹೊಂದಿರುವ ಹಿನ್ನೆಲೆಯಲ್ಲಿ ದೇವರನ್ನು ಸ್ತುತಿಸಬೇಕು. ಒಂದು ಸಾವಿರ ವರ್ಷದ ನಂತರವೂ ಸಹ ಪ್ರವಾದಿ ಮೊಹಮ್ಮದರ ಹೆಸರಿಗೆ ಅನುರೂಪನಾದ ಈ ಮಹಾರಾಜನು ಧರ್ಮಪಾಲಕ ಮತ್ತು ನ್ಯಾಯಪ್ರಸಾರಕನಾಗಿದ್ದಾನೆ. ಜಗತ್ತಿಗೆ ಗೌರವ/ಘನತೆ ನೀಡುವಂತಹ ಸಿಂಹಾಸನದ ಮೇಲೆ ಕುಳಿತುಕೊಂಡು ಸಾಮ್ರಾಜ್ಯದ ವ್ಯವಹಾರಗಳನ್ನು ದೃಢತೆಯಿಂದ ನಿರ್ವಹಿಸುತ್ತಾನೆ.

ಧರ್ಮ ಮತ್ತು ಸಂಪತ್ತಿನ ಶಾಸನಗಳನ್ನು ಕಾರ್ಯಗತಗೊಳಿಸಿ ವೈಭವವನ್ನು ಸಾಕಾರಗೊಳಿಸಿ ಪೂಜ್ಯನಾಗಿದ್ದಾನೆ.

'ರಹಸ್ಯಗಳನ್ನು ಸರಿಯುವ ದೇವರು ಪ್ರತಿಯೊಂದು ಕಾರ್ಯದ ಬಗೆಗೆ ತಿಳಿಯುತ್ತಾನೆ, ಆತನ ಸ್ಮರಣೆಯು ಹೃದಯಗಳನ್ನು ಸಂರಕ್ಷಿಸುತ್ತದೆ, ರಾಜರ ಆಡಳಿತಾತ್ಮಕ ಜವಾಬ್ದಾರಿಯನ್ನು ವ್ಯಾಪಕಗೊಳಿಸುತ್ತದೆ, ಪ್ರಾಮಾಣಿಕ ಜನರ ಹೃದಯಗಳನ್ನು ಪರಿಶುದ್ಧಗೊಳಿಸುತ್ತದೆ, ಮೊಹಮ್ಮದ ಶಾ ಗಾಜಿಯ ದರ್ಬಾರದಿಂದ ರಾಜರಿಗೆ ಗೌರವದ ಕಿರೀಟ ಪ್ರಾಪ್ತವಾಗುತ್ತದೆ, ಭಾಗ್ಯವಂತ ಹಾಗೂ ಜಗತ್ತಿನ ದಾನಿಗೆ ಶುಭ ಹಾರೈಕೆ, ಆತನು ಪ್ರಪಂಚದ ಕುದುರೆ ಸವಾರನಾಗಿ ಜಗತ್ತಿನ ದಾರಿಯ ಧೂಳಿಯನ್ನು ಪುನರ್ ನವೀಕರಣಗೊಳಿಸಿದ್ದಾನೆ. ಈ ದೊರೆಯು ಕೈಯಲ್ಲಿ ಖಡ್ಗಧಾರಣ ಮಾಡುತ್ತಲೇ, ಕಪ್ಪು ಮೋಡಗಳಲ್ಲಿ ಮಿಂಚು ಹೆದರಿ ನೀರಾಗುತ್ತದೆ. ಆತನ ಹಣೆಯು ಶುಭೋದಯದ ಪ್ರಾತಃಕಾಲವನ್ನು ವಿಸ್ತಾರಗೊಳಿಸುತ್ತದೆ. ಆತನ ಉಡುಪಿನ ಅಂಚಿನ ಧೂಳಿಯು ರೂಪಕದ ಚೈತನ್ಯವಾಗಿದೆ. ಸಿಕಂದರನಂತಹ ರಾಜನು, ಆತನ ಬಾಗಿಲಿನ ಮುಂದೆ ಕಾವಲುಗಾರನಾಗಿದ್ದಾನೆ. ಆತನ ವರ್ಣನೆಯ ಪ್ರಯತ್ನವು ಮಾನವನ ಸಾಮರ್ಥ್ಯಕ್ಕೆ ಅಸಾಧ್ಯವಾಗಿದೆ, ಆಕಾಶವೂ ಆತನ ಉಡುಪಿನ ಕೆಳಭಾಗವನ್ನು ಸ್ಪರ್ಶಿಸಲಾರದು'.

ವೈಭವ-ಔನ್ನತ್ಯದ ಬೈತಲೆ ಹೊಂದಿರುವ ನಗರದ ಮತ್ತು ಸುದೈವದ ಸಾಮ್ರಾಜ್ಯದ ಮೇಲೆ ಆಳ್ವಿಕೆ ನಡೆಸುವ ಹಜರತ್ ಬಾದಶಾಹ ಗಾಜಿಯು; ದಿವ್ಯ ನಿರ್ಲಕ್ಷತೆಯಿಂದ ಸುಂದರವಾದ ಭಾಷೆಯಲ್ಲಿ 'ಮುಸ್ತತಾಬ್ ಖಾನ್ ಬಾಬಾ' ಎಂದು ಬಿರುದು ಸಂಪನ್ನರಾದ ನವಾಬ್ ಮೊಹಮ್ಮದ ಮುಸ್ತಫಾಖಾನ್ ಅವರಿಗೆ ನುಡಿದರು.

"ಜಗತ್ತಿನ ೧/೪ರಷ್ಟು ಜನಸಂಖ್ಯೆಯ ಮೇಲೆ ಆಳ್ವಿಕೆ ನಡೆಸುವಂತಹ ಮಹಾರಾಜರ ಒಂದು ಪಟ್ಟಿಯನ್ನು ತಯಾರಿಸಬೇಕು. ಅದರಲ್ಲಿ ನಮ್ಮ ಆಳ್ವಿಕೆಯ ನಿರಂತರವಾದ ಆಸ್ಥಾನದ ವೈಭವ-ಔನ್ನತ್ಯದ ವರ್ಣನೆ ಮಾಡಬೇಕು.

ಇಂತಹ ನಿರೂಪಣೆಯನ್ನು ಕಾರ್ಯಗತಗೊಳಿಸುವ ಸಂಕೇತವು ಮಹಾರಾಜನ ಮನೆತನದಲ್ಲಿ ಪಾಲನೆ-ಪೋಷಣೆ ಹೊಂದಿದಂತಹ ವಿದ್ವಾಂಸನಾದ ಜಹೂರ್ ಬಿನ್ ಜುಹೂರಿಯ ದಿಶೆಯಲ್ಲಿ ಇತ್ತು. ಮಹಾರಾಜರ ಆಜ್ಞಾನುಸಾರ ಪವಿತ್ರ ದೃಷ್ಟಿಯ ಬಾಬಾಖಾನರು ತಮ್ಮ ನಿವಾಸಕ್ಕೆ ಆಗಮಿಸಲು ಜಹೂರ್ ಬಿನ್ ಜುಹೂರಿ ಅವರಿಗೆ ಆಮಂತ್ರಣ ನೀಡಿದರು. ಇಂತಹ ಅದ್ಭುತ ಗ್ರಂಥದ ಶಿರೋನಾಮೆಯನ್ನು 'ಮೊಹಮ್ಮದನಾಮಾ' ಎಂದು ನಾಮಕರಣ ಮಾಡಿದ ಕೃತಿಯನ್ನು ರಚಿಸುವಂತಹ ಸುವಾರ್ತೆಯನ್ನು ಮಹಾರಾಜರು ತಿಳಿಸಿ ಶಾಶ್ವತವಾದ ಕೀರ್ತಿಯನ್ನು ನೀಡಲಾಗಿದೆ. ಸಪ್ತ ಭೂಖಂಡಗಳ ಮೇಲೆ ಸಂತೋಷ ಆನಂದದ ಬಾಗಿಲನ್ನು ತೆರೆಯಲಾಗಿದೆ.

'ಭೂಮಿ ಮತ್ತು ಸಾಗರದ ಸಾಮ್ರಾಟನು ಬಾಗಿಲು ತೆರೆದಿರುವನೆಂಬ ಧ್ವನಿ ಕೇಳಿಬಂದಾಗ, ಜಗತ್ತು ಮದ್ಯದ ಬಟ್ಟಲಿನಂತೆ ಸಂತೋಷದಿಂದ ತುಂಬಿತು. ಚಕ್ರಗತಿಯಲ್ಲಿ ತಿರುಗುವ

ಆಕಾಶವು ಬಿಸಿಯಾದ ರೊಟ್ಟಿ ಆಯಿತು. ನೂತನ ಚಂದ್ರನು ಆನಂದಭರಿತನಾಗಿ ತನ್ನ ಪಂಜದಿಂದ ಬೆಳ್ಳಿ ಚಿಕ್ಕೆಯ ಮುಂಗಾಲನ್ನು ಸ್ವಾಧೀನಪಡಿಸಿಕೊಂಡನು. ದೇವದೂತರ ಜಗತ್ತಿನಲ್ಲಿ ಸಂತೋಷದ ನಗಾರಿಗಳ ಧ್ವನಿ ಕೇಳಿಸಿತು. ಆಕಾಶವು ಪೃಥ್ವಿಯ ಮೇಲೆ ವೈಭವದ ಬಾಗಿಲು ತೆರೆಯಿತು'.

■

*

ಅಧ್ಯಾಯ - ೨

ಸ್ವರ್ಗವಾಸಿಯಾದ ರಾಣಿ ಸುಲ್ತಾನಾ ಮತ್ತು ಅಲ್ಲಾನ ಕೃಪೆಯಿಂದ ಹಜರತ್ ಬಾದಶಾಹ ಗಾಜಿಯ ಇತಿಹಾಸದ ಆರಂಭ.

ಜಾಗ್ರತವಾದ ಸೌಭಾಗ್ಯ ಮತ್ತು ಶಾಶ್ವತವಾದ ಸಂಪತ್ತು ಪ್ರಾಪ್ತವಾಯಿತು. ಏಕೆಂದರೆ : ವಾಸ್ತವಿಕ ಸಂಗತಿ ಹಾಗೂ ಅರ್ಥವನ್ನು ತಿಳಿಯುವ ಗೌರವ ಪ್ರಾಪ್ತವಾಗಿದೆ. ಸ್ವಲ್ಪ ಪ್ರಯತ್ನ ಮತ್ತು ಪರಿಶ್ರಮದ ನಂತರ 'ಗಾಜಿ' ಎಂಬ ಬಿರುದಾಂಕಿತ ಶ್ರೇಷ್ಠ ಗುಣಸಂಪನ್ನ ಮಹಾರಾಜರ ಅಂತಃಪುರದ ಸುತ್ತಲೂ ಸಂಚರಿಸಿದೆನು. ಶ್ರದ್ಧೆಯ ಶಕ್ತಿಶಾಲಿಯಾದ ಬಾಹುಗಳನ್ನು ಹಿಡಿದು ನನ್ನ ಧ್ಯೇಯವನ್ನು ಸಾಧಿಸಿದೆನು. ಬರವಣಿಗೆಯ ಅಲೆಗಳಿಗೆ ಮುತ್ತುಗಳ ಮಿಂಚು ಕೊಡಬೇಕಾಗಿದೆ. ಫಲಭರಿತವಾದ ಖಜೂರ್ ವೃಕ್ಷದಲ್ಲಿ ಹೆಚ್ಚುವರಿ ಫಲಗಳನ್ನು ತುಂಬಬೇಕಾಗಿದೆ. ಅನುಮಾನದ ವೃಕ್ಷವನ್ನು ಅದರ ಪ್ರಶಂಸೆಯ ಮೋಡಗಳಿಂದ ನವೀನಗೊಳಿಸಿ ಲಜ್ಜೆಯ ಮಾರ್ಗದಲ್ಲಿ ಮುಳ್ಳುಗಳನ್ನು ಸೃಷ್ಟಿಸಬಾರದು. ಪ್ರಧಾನ ವಿಷಯದ ಸತ್ವವನ್ನು ಅದರ ಪ್ರಶಂಸೆಯ ಸಾಗರದಲ್ಲಿ ಮುಳುಗಿಸಿ ಭ್ರಮೆಯನ್ನುಂಟು ಮಾಡಬಾರದು. ವಾಸ್ತವಿಕತೆಯ ಮುಖದ ಮೇಲೆ ಆವರಿಸಿರುವ ರೂಪಕಾಲಂಕಾರದ ಪರದೆಯನ್ನು ತೆಗೆದು ಹಾಕುವಂತೆ ಆಳವಾದ ಅಧ್ಯಯನ ಮತ್ತು ಚಿಂತನೆಯಿಂದ ಈ ಅಮೂಲ್ಯವಾದ ಕೃತಿಯನ್ನು ರಚಿಸಬೇಕಾಗಿದೆ. ಜಗತ್ತಿಗೆ ಫಲವತ್ತತೆ ಹಾಗೂ ಪ್ರಯೋಜನ ಲಭಿಸುವಷ್ಟು ಮಹಾರಾಜರಿಗೆ ಜ್ಞಾನೋದಯವಿದೆ. ಆತನ ಹಣೆಯ ಪ್ರಕಾಶದಿಂದ ಮಿಂಚಿಗೆ ಬೆಳಕು ಪ್ರಾಪ್ತವಾಗುತ್ತದೆ. ಆತನ ಹೃದಯ-ದರ್ಪಣವು ಹೊಸ ವರ್ಷದ ಪ್ರಥಮದಿನದ (ನೌರೋಜ್) ಪ್ರಾತಃಕಾಲದೊಂದಿಗೆ ಸಂಭಾಷಣೆ ಮಾಡುತ್ತದೆ.

'ಆತನು ದರ್ಬಾರಿಗೆ ತೆರಳುವ ಮಾರ್ಗದಲ್ಲಿ ಯಾರಾದರೂ ನಡೆಯಲಾರಂಭಿಸಿದರೆ,

ಎದೆಯು ಪವಿತ್ರವಾಗುತ್ತದೆ ಆತನ ಹೃದಯದ ರಹಸ್ಯಗಳು ಬಹಿರಂಗಗೊಳ್ಳುತ್ತವೆ. ಆತನು ಮೌಲ್ಯ ಮತ್ತು ಗೌರವದ ಬೈತಲೆ ಹೊಂದಿರುವ ನಗರದ ಕಿರೀಟವಾಗಿದ್ದಾನೆ. ಪವಿತ್ರ ಹೃದಯದ ಜನರು ಆತನ ಬಾಗಿಲಿನ ಮುಂದೆ ಒಂದೇ ಪಂಕ್ತಿಯಲ್ಲಿ ನಿಂತಿರುತ್ತಾರೆ. ಆತನ ದಾನ/ಕಾಣಿಕೆಗಳ ಮೇಲೆ ಜನರ ಗಮನವಿರುತ್ತದೆ. ಆತನ ನಾಮ ಸ್ಮರಣೆಯಿಂದ ಬಾಯಾರಿಕೆಯಿಂದ ಬಳಲುವ ವ್ಯಕ್ತಿಗಳಿಗೆ ಅಮರತ್ವದ ಜಲ ಪ್ರಾಪ್ತವಾಗುತ್ತದೆ. ಧರ್ಮ ಮತ್ತು ಸಂಪತ್ತಿನ ಸಂರಕ್ಷಕರಿಗೆ ಆತನ ನಾಮದಿಂದ ಧೈರ್ಯ ದೊರಕುತ್ತದೆ.ವಿದ್ಯೆ ಹಾಗೂ ಕ್ರಿಯಾಶೀಲತೆಯ ತಳಹದಿಯ ನಿರ್ಮಾಣವು ಆತನ ಸ್ವಭಾವವಾಗಿದೆ. ಪ್ರಾಮಾಣಿಕತೆ ಮತ್ತು ಪಾರದರ್ಶಕತೆಯು ಆತನ ಹೊಲದ ಹಸಿರು ಹುಲ್ಲು ಆಗಿದೆ. ನಮ್ರತೆ ಹಾಗೂ ಪ್ರೀತಿಯು ಆತನ ದಸ್ತರ್‌ಖಾನೆಯ ಉಪ್ಪಾಗಿದೆ. ಆತನು ಆಡಳಿತೆಯ ನೂತನ ಶ್ರೇಣಿಗಳನ್ನು ಶೋಧಿಸುತ್ತಾನೆ. ಆತನು ಸುದೈವದ ಮುನ್ನುಡಿಯ ಅರ್ಥವಾಗಿದ್ದಾನೆ. ಆತನ ಸೈನ್ಯವು ವಿಜಯದ ಉದ್ಯಾನದಲ್ಲಿ ವಸಂತಋತುವನ್ನು ತರುತ್ತದೆ. ಆತನ ಕಠಾರಿಯು ಅಗ್ನಿಕಣಗಳಿಂದ ತುಂಬಿದ ಧಗಧಗಿಸುವ ಜ್ವಾಲೆ ಆಗಿದೆ'.

ವಿನಯ ಸಂಪನ್ನನಾದ ಸೈನಿಕ ಮಹಾರಾಜನ ಗುಣವೈಶಿಷ್ಟತೆಯು ಹೀಗೆ ಇರುತ್ತದೆ. ಆತನ ದೃಢತೆಯ ನಗಾರಿಯ ಧ್ವನಿ ಕೇಳಿದಾಗ ಮಂಗಳಗ್ರಹದಂತಹ ಉಗ್ರಸ್ವರೂಪರಾದ ಉಕ್ಕಿನಂತಹ ಸ್ಥೂಲಕಾಯದ ಸೈನಿಕರ ಪಂಕ್ತಿಯು ಪಾದರಸದ ಧಾರೆಯಂತೆ ಕರಗಿ, ಮಹಾಪ್ರವಾಹವಾಗಿ ಎಲ್ಲೆಡೆಗೆ ವ್ಯಾಪಕವಾಗಿ ಚದುರಿ ಹೋಗುತ್ತದೆ. ಆತನ ಶೌರ್ಯ ಮತ್ತು ದೃಢತೆಯನ್ನು ಅಂದಾಜು ಮಾಡಲು ಸಾಧ್ಯವಿಲ್ಲ. ಆತನ ಖಡ್ಗದ ಮಿಂಚು, ಸಮಗ್ರ ಜಗತ್ತನ್ನು ಗೆಲ್ಲುವ ಸಾಮರ್ಥ್ಯ ಹೊಂದಿದೆ. ಆತನ ಕೊಳಲು ವೈರಿಗಳ ದುರ್ದೈವವನ್ನು ಬರೆಯುವ ಲೇಖನಿಯಾಗಿದೆ.

'ಈ ದೊರೆಯು ಯುದ್ಧದ ದಿನ, ಒಂದು ವೇಳೆ ಸೂರ್ಯನಂತೆ, ಹಣೆಯ ಮೇಲೆ ಮೂಡಿರುವ ನಿರಿಗೆಯಿಂದ ಕ್ರೋಧದ ಖಡ್ಗವನ್ನು ಜಗತ್ತಿನ ಮೇಲೆ ಪ್ರಯೋಗಿಸಿದರೆ, ಆತನ ಘನತೆಯ ಹೆದರಿಕೆಯಿಂದ ಅಂಗೈತುಂಬ ನೀರಿನಂತೆ, ಕ್ಷಣಾರ್ಧದಲ್ಲಿ ಒಂಭತ್ತು ಆಕಾಶಗಳು ಪೃಥ್ವಿಯ ಮೇಲೆ ಪತನವಾಗುತ್ತದೆ'.

ದೇವರನ್ನು ಸ್ತುತಿಸಬೇಕು ಏಕೆಂದರೆ : ಮಹಾರಾಜನ ಗೌರವ ವೈಭವದ ಕೀರ್ತಿಯು ಏಳನೆಯ ಆಕಾಶದಲ್ಲಿ ವಾಸಿಸುವಂತಹ ಏಕೇಶ್ವರಿವಾದದಲ್ಲಿ ನಿಷ್ಠೆ ಹೊಂದಿರುವ ಜೀವಿಗಳ ಕಿವಿಯವರೆಗೆ ತಲುಪುತ್ತದೆ. ಆತನ ದಾನ-ಕಾಣಿಕೆಗಳ ವರ್ಷಾಧಾರೆಯ ದೆಸೆಯಿಂದ ಸಾಗರದ ಆಳದಿಂದ ಮೇಲೆದ್ದು ಬರುವಂತಹ ಮುತ್ತಿನ ತೆರೆಗಳ ಸ್ಥಾನವು ಸಪ್ತ-ಋಷಿ ಪುಂಜಕ್ಕಿಂತಲೂ ಹೆಚ್ಚಾಗಿರುತ್ತದೆ. ಆತನ ಬಹುಮಾನ ದಾನಕ್ಕಾಗಿ ನೀಸ್ವಾದ ಮಳೆಯು ಸಾಗರಕ್ಕೆ ಪ್ರಶಾಂತಿ ನೀಡಿ ಸಾಗರ ತಳದ ಭೂಮಿಯ ಆಳದಲ್ಲಿ ಮುತ್ತುಗಳ ಗಣಿಯನ್ನು ಸೃಷ್ಟಿಸುತ್ತದೆ. ದ್ರಾಕ್ಷಿಯ ಕ್ಷೇತ್ರಗಳು ಫಕೀರರಿಗೆ

ಮತ್ತು ಮುತ್ತು-ರತ್ನಗಳ ಭಂಡಾರಗಳು ಸುದೈವಿಗಳಿಗಾಗಿ ಇರುತ್ತವೆ. ಆತನ ದಾನ-ಕಾಣಿಕೆಯ ಸಂಪತ್ತು ಪರ್ವತ ಹಾಗೂ ಬಯಲು ಪ್ರದೇಶದಲ್ಲಿ ಹರಡಿಕೊಂಡಿದೆ. ಇಂತಹ ಪ್ರದೇಶದ ಮೇಲ್ಭಾಗದ ಮೇಲೆ ಹೆಜ್ಜೆಯ ಗುರುತುಗಳಂತೆ ದ್ರಾಕ್ಷಿಬಳ್ಳಿಯ ಚೀಲಗಳು ಬಿದ್ದಿವೆ. ಆತನ ಕಾಣಿಕೆಗಳು ದಸ್ತರಖಾನ್‌ದಿಂದ ಅನುಕಂಪ ಮತ್ತು ಉಪಕಾರದ ಕಣಗಳನ್ನು ಆಯ್ದು ಬಡವರಿಗೆ ನೀಡಲಾಗುತ್ತದೆ. ಆತನು ಸೃಷ್ಟಿಸಿದ ಉದ್ಯಾನದಲ್ಲಿ ಅರಳಿದ ಹೂಗಳಿಂದ ವಾತ್ಸಲ್ಯ ಹಾಗೂ ಪ್ರೇಮದ ಗುಲಾಬಿ ಜಲವನ್ನು ವಿಶ್ವದ ಮೇಲೆ ಸಿಂಪಡಿಸಲಾಗುತ್ತದೆ. ಒಣ ಹುಲ್ಲಿನ ನೆರಳು ಪರ್ವತವನ್ನು ಕಾಲುಗಳಿಂದ ಹಿಡಿದು, ಮರುಭೂಮಿಯ ಮಾರ್ಗದ ಮೇಲೆ ಎಳೆದುಕೊಂಡು ಹೋಗುವಂತೆ ಆತನ ಆಕರ್ಷಣೆ ಮತ್ತು ಪ್ರತಿಷ್ಠೆಯ ಸಾಮರ್ಥ್ಯವು ಅತ್ಯುನ್ನತವಾಗಿದೆ.

ನ್ಯಾಯ ವಿತರಣೆಯ ಸಮಯದಲ್ಲಿ ಆತನು ಯಾವುದಾದರೊಂದು ದಿನ ವೇದನಾಗ್ರಸ್ಥನಾಗಿ ಪ್ರೇಯಸಿಯ ಕೇಶರಾಶಿಯಲ್ಲಿ ಬಂಧಿತನಾದರೆ, ಪ್ರಾತಃಕಾಲದ ಗಾಳಿಯು ಆತನನ್ನು ಕೇಶ-ಬಂಧನದಿಂದ ಮುಕ್ತಗೊಳಿಸುತ್ತದೆ. ಶಾಂತಿ-ಸುರಕ್ಷತಾ ಅರಮನೆಯ ನಿರ್ಮಾಣದಲ್ಲಿ ನಿರತರಾದ ಅಧಿಕಾರಿಗಳಿಗೆ ಶ್ರೇಣಿಗೆ ಅನುಸಾರವಾಗಿ ಎಚ್ಚರಿಕೆಯನ್ನು ನೀಡಲಾಗುತ್ತದೆ. ಒಂದು ವೇಳೆ ಯಾರಾದರೂ ಸಾಗರಕ್ಕೆ ತೆರಳಿ ಯಾವುದಾದರೊಂದು ನೀರ್ಗುಳ್ಳೆಯನ್ನು ಭಗ್ನಗೊಳಿಸಿದರೆ, ಹವಳದ ಶಾಖೆಯಿಂದ ಆತನನ್ನು ಎಳೆದು ಎಚ್ಚರಿಕೆ ನೀಡಬೇಕು. ಒಂದು ವೇಳೆ ರಸ್ತೆಯ ಮೇಲೆ ಧೂಳಿಯು ತೀವ್ರಗತಿಯಿಂದ ಚಲಿಸಲಾರಂಭಿಸಿದರೆ, ಹಾವಿನ ಥಳಿಸಿದ ತಲೆಯಂತೆ ಧೂಳಿಯ ಶಿರವನ್ನು ಬಡಿದು ರಸ್ತೆಯ ಮೇಲೆ ಹಾಕಬೇಕು. ಒಳಿತು ಮತ್ತು ಕೆಡುಕು ತೂಕ ಮಾಡುವ ಸಂದರ್ಭದಲ್ಲಿ ತಕ್ಕಡಿಯ ದಂಡವು ಜ್ವಾಲೆಯಾಗಿ ಪರಿಣಮಿಸುವುದು. ಅದರ ಲೆಕ್ಕಾಚಾರ ಮಾಡುವ ಭಯದಿಂದ ಅಗ್ನಿಯು ಜಲವಾಗಿ ಭೂಮಿಯ ಮೇಲೆ ಪತನವಾಗುತ್ತದೆ. ನ್ಯಾಯ ನಿರ್ಣಯದ ಕಾಲದಲ್ಲಿ ಕ್ರೋಧಗ್ರಸ್ತವಾದ ಸಿಂಹವು ಜಿಂಕೆಗಳನ್ನು ನೋಡಿ ಹಿಂತಿರುಗಿ ಓಡಿ ಹೋಗಿ, ತನ್ನ ಜೊತೆಗಾರರೊಂದಿಗೆ ಸೇರಿಕೊಳ್ಳುತ್ತದೆ.

'ಆತನ ಕಟ್ಟುನಿಟ್ಟಿನ ನ್ಯಾಯ-ನಿರ್ಣಯದಿಂದಾಗಿ ಪರ್ವತ ಹಾಗೂ ಬಯಲು ಪ್ರದೇಶದಲ್ಲಿ ಕೋಲಾಹಲ ಉದ್ಭವಿಸುತ್ತದೆ. ಜಿಂಕೆಗಳ ಪಂಕ್ತಿಯು ಸಿಂಹ ಮತ್ತು ಚಿರತೆಗಳ ಮಾರ್ಗದ ಆತಂಕದ ಗೋಡೆಯಾಗಿ ಪರಿಣಮಿಸುತ್ತದೆ'.

ನ್ಯಾಯ-ನಿರ್ಣಯದ ಶಾಸನಗಳ ಕರ್ತೃ ಗೌರವಾನ್ವಿತ ರಾಜರಿಗೆ ಜ್ಞಾನ-ದಾತ ಬೆಹ್ರಾಮ್ ದೊರೆಯಂತೆ ಹಬ್ಬ-ಉತ್ಸವಗಳ ಆಚರಣಾಕಾರ, ಜಮ್‌ಶೀದ್ ರಾಜನಂತೆ ಮದ್ಯಪಾನ ಆಸಕ್ತ, 'ಹುಮಾ' ಪಕ್ಷಿಯಂತಹ ಸಾಮರ್ಥ್ಯ-ಸಂಪನ್ನ, ನಿರಂತರ ಜೀವಿಸುವ ದೇವರನ್ನು ಅರಿಯುವ ಮತ್ತು ಧರ್ಮಕ್ಕೆ ಆಶ್ರಯ ನೀಡುವಂತಹ

ಸ್ವರ್ಗವಾಸಿ ಇಬ್ರಾಹೀಂ ಆದಿಲ್‌ಶಾಹ ಹಾಗೂ ರಾಣಿ ಸುಲ್ತಾನ ಅವರ ಸುಪುತ್ರನಾದ ಹಜರತ್ ಸುಲ್ತಾನ್ ಮೊಹಮ್ಮದ ಬಾದಶಾಹ ಗಾಜಿಯ ವಿಜಯ-ಸಂಪನ್ನವಾದ ಪಾದರಸದಂತಹ ಖಡ್ಗದ ಆಶ್ರಯದಲ್ಲಿ 'ಇಸ್ಲಾಂಧರ್ಮದ ಜ್ಯೋತಿ' ಬೆಳಗುತ್ತದೆ. ಆತನ ನ್ಯಾಯಾಲಯದ ಆವರಣದಿಂದ ಬೀಸುವ ಗಾಳಿಯು ಎಲ್ಲರ ನಾಲಿಗೆಯ ಮೇಲೆ ಆತನ ಪ್ರಶಂಸೆಯ ಮುದ್ರೆಯನ್ನು ಒತ್ತಲಾಗಿದೆಯೆಂದು, ಜಗತ್ತಿನ ಉದ್ಯಾನದಲ್ಲಿ ಸ್ತುತಿಸುತ್ತದೆ. ಇಂತಹ ಶುಭ-ನಾಮವನ್ನು ಬರೆಯುವ ಸಂದರ್ಭದಲ್ಲಿ ಕಾಗದ ಮತ್ತು ಲೇಖನಿಯನ್ನು ಕೈಗೆತ್ತಿಕೊಳ್ಳುವ ಕಾರ್ಯವು ಬರಹಗಾರನಿಗೆ ಪ್ರತಿಷ್ಠೆಯ ವಿಷಯವಾಗಿದೆ. ಆದರೆ ಆಳವಾಗಿ ಚಿಂತನೆ ಮಾಡದಿರುವ ಅವಸರದ ಬರವಣಿಗೆಯು ಸೂಕ್ತವಾಗುವುದಿಲ್ಲ. ಏಕೆಂದರೆ, ಪ್ರವಾದಿ ಮೊಹಮ್ಮದರ ನಾಮ ಹೊಂದಿರುವ ಮಾನವ ಜನಾಂಗ ಕಲ್ಯಾಣದ ಬಿರುದಾಂಕಿತನಾದ ಮಹಾರಾಜನ ಶ್ರೇಣಿಯನ್ನು ಸ್ಪಷ್ಟವಾಗಿ ವಿವರಿಸುವ ಅಗತ್ಯವಿದೆ. ಆದುದರಿಂದ ಮಹಾರಾಜನಾದ ಗಾಜಿಯ ನಾಮ ಪ್ರಸ್ತಾವನೆಯ ಸಂದರ್ಭದಲ್ಲಿ ಶಿರವನ್ನು ಗೌರವಪೂರ್ಣವಾಗಿ ಬಾಗಿಸಿ, ಬರವಣಿಗೆಯ ಮಾರ್ಗವನ್ನು ಕ್ರಮಿಸಬೇಕು. ಮಹಾರಾಜಾ ಗಾಜಿಯ ಉನ್ನತ ಸ್ಥಾನದ ತಂದೆಯ ಹೆಸರನ್ನು ಉಲ್ಲೇಖಿಸುವಾಗ ಸ್ವರ್ಗದ ಸಾಮ್ರಾಟನೆಂದು ಸೂಚ್ಯವಾಗಿ ಹೇಳಬೇಕು. ತಾಯಿಯ ಹೆಸರನ್ನು ಉಲ್ಲೇಖಿಸುವಾಗ ಅವರ ಪಾವಿತ್ರ್ಯತೆಯನ್ನು ಲಕ್ಷ್ಯದಲ್ಲಿಟ್ಟುಕೊಂಡು ಪವಿತ್ರವಾದ ಅರ್ಥಭರಿತ ಶಬ್ದ, 'ತಾಜುಲ್ ಮಹಜರಾತ್' (ಅರ್ಥಾತ್, 'ಪರ್ದಾ ಸ್ತ್ರೀಯರ ಕಿರೀಟ') ಎಂಬ ಬರವಣಿಗೆಯು ಸೂಕ್ತವಾಗಿದೆ.

ಸುದೈವ ಮತ್ತು ಹಣೆಬರಹದ ಕ್ಷಿತಿಜದಿಂದ ಹಜರತ್ ಮಹಾರಾಜನ ಜನನದ ವರ್ಣನೆಯ ಆರಂಭ

ನಕ್ಷ ಬಂದದ (ಸೂಫಿವಾದದ ಒಂದು ವಿಚಾರಧಾರೆ) ವ್ಯಕ್ತಿಗಳು ಕಾರ್ಯಗಳ ಜ್ಞಾನವನ್ನು ಹೊಂದಿದ್ದಾರೆ. ಆಕಾಶದ ಕಾರ್ಯಗಾರದಲ್ಲಿ ಅನುಷ್ಠಾನಗೊಳ್ಳುವ ಕಾರ್ಯಗಳನ್ನು ಅಪೇಕ್ಷಿಸುತ್ತಾರೆ. ಪ್ರಾರ್ಥನೆ ಹಾಗೂ ಪ್ರಶಂಸೆಯನ್ನು ಸಂಕ್ಷಿಪ್ತ ಹಂತದಲ್ಲಿ ಸಮರ್ಪಿಸಿ ಜಗತ್ತಿನಲ್ಲಿ ತಮ್ಮ ಧ್ಯೇಯಗಳನ್ನು ಸಾಧಿಸುತ್ತಾರೆ. ಸಪ್ತಋಷಿ ಪುಂಜದ ಉನ್ನತಶ್ರೇಣಿಯ ನಕ್ಷತ್ರಗಳ ಸೇವೆ ಮಾಡುವಂತಹ ವ್ಯಕ್ತಿಗಳನ್ನು ಸೂರ್ಯನು ಮಾನ್ಯತೆ ಹಾಗೂ ಗೌರವದ ನೆರಳಿನಲ್ಲಿ ಪೋಷಿಸುತ್ತಾನೆ. ಈ ವ್ಯಕ್ತಿಗಳು ಸೂರ್ಯನ ಪ್ರಕಾಶವನ್ನು ಹೆಚ್ಚಿಸುತ್ತಾರೆ. ನೂತನ ಚಂದ್ರನಂತೆ ಅಡಿಯಿಂದ ಮುಡಿಯವರೆಗೆ ನಾಲಿಗೆಯಾಗಿ, ಅಭಿನಂದನೆ ಸಲ್ಲಿಸುವ ಕ್ರಮಗಳನ್ನು ಯಾವೂದೇ ಪ್ರಮಾದ ಮಾಡುವುದಿಲ್ಲ. ದೇವರನ್ನು ಅರಿಯುವ ಕ್ಷೇತ್ರದ ಸೂಕ್ಷ್ಮತೆಗಳನ್ನು ಪರೀಕ್ಷಿಸಿ ವಾಸ್ತವಿಕ ಸಂಗತಿಯನ್ನು ಭವಿಷ್ಯ ತಿಳಿಸುವ ಸಂಖ್ಯಾಶಾಸ್ತ್ರಜ್ಞರು ಬಹಿರಂಗಗೊಳಿಸುತ್ತಾರೆ. ಅಂಧಶ್ರದ್ಧೆಯ ಮಗುವಿನ ರಟ್ಟೆಯ ಮೇಲೆ ಮಹಾಭೂತ ಮತ್ತು ಆಕಾಶಕಾಯಗಳ ಸಂಗತಿಯ ಮಣಿಗಳನ್ನು ಬಂಧಿಸಿ, ಸಂಪತ್ತಿನಿಂದ ತುಂಬಿದ ಆಕಾಶವನ್ನು

ಶೃಂಗರಿಸುತ್ತಾರೆ. ಪಂಚಾಂಗದಿಂದ ಪ್ರಕಟವಾಗುವ ಪರಿಣಾಮ ಸ್ವರೂಪವಾಗಿ ಆವೇಶದಿಂದ ನಡೆಯುವ ಯುದ್ಧಕ್ಕೆ ವಿಶ್ರಾಂತಿ ದೊರಕಿತು. ಬುದ್ಧಿಯ ಕಂಪಾಸನ್ನು ಕೈಯಿಂದ ಎಸೆದು ಯುದ್ಧವನ್ನು ಅಂತ್ಯಗೊಳಿಸುವ ಕ್ರಮವನ್ನು ಕೈಕೊಳ್ಳಲಾಯಿತು.

'ಈ ಕಾರ್ಯವು ತಾರಾಲಯದ ನಿರೀಕ್ಷಕರ ಸಾಹಸವಾಗಿದೆ. ಒಂದು ಬಿಂದುವಿನ ಸುತ್ತಲೂ ಕಂಪಾಸು ನಿರ್ಮಿಸುವದು. ಯಾವನಾದರೂ ತನ್ನ ಹೃದಯ ಶೋಧಿಸುತ್ತಿರುವನೋ, ಆತನ ತಲೆಯು ಆಕಾಶಕ್ಕಿಂತಲೂ ಮೇಲೆ ಏಳುತ್ತದೆ'.

ಪೃಥ್ವಿಯಲ್ಲಿ ಆಕಾಶದಂತಹ ಗುಣ ಮತ್ತು ದೈವೀಯ ಮೌಲ್ಯವನ್ನು ಯಾರು ಸೃಷ್ಟಿಸಿದ್ದಾರೆಂಬ ಸೂಕ್ಷ್ಮತೆಗಳನ್ನು ಶೋಧಿಸುವ ಬುದ್ಧಿಯು ಅನೇಕ ವರ್ಷಗಳಿಂದ ಆಳವಾದ ಯೋಚನೆಯಲ್ಲಿ ನಿರತವಾಗಿತ್ತು. ಸೂರ್ಯನ ದೀಪದಿಂದ ಬೆಳಗಿಸಿದ ಯಾವ ಸಮಾರೋಹದ ಪ್ರಕಾಶವು ಇದನ್ನು ಬಹಿರಂಗಗೊಳಿಸಿದೆ? ಇದರ ಗೌರವ–ಔನ್ನತ್ಯದ ಪರಂಪರೆಯನ್ನು ಪ್ರವಾದಿಗಳ ಪವಿತ್ರವಾದ ಕುಟುಂಬದೊಂದಿಗೆ ಯಾರು ಸಂಯೋಜಿಸಿದ್ದಾರೆ.?

ಪ್ರವಾದಿ ಜಿಬ್ರಾಯಿಲ್‌ನು ಆಜ್ಞಾಧಾರಕತೆಯೊಂದಿಗೆ ದೇವರ ಮಹಾನತೆ ಮತ್ತು ಸೌಂದರ್ಯದ ಪರದೆಯ ಮೂಲಕ ದಿವ್ಯ ಪ್ರೇರಣೆಯ ಕಿವಿಗಳಿಂದ ಕೇಳಿದರು. ಆತನು ಮಾತನಾಡುವ ಶಕ್ತಿಯಿಂದ ವಂಚಿತನಾಗಿ, ಬುದ್ಧಿ ಹಾಗೂ ಜ್ಞಾನದ ಜ್ವಾಲೆಯು ಉದ್ಭವಿಸಿತು. ದೇವರ ರಹಸ್ಯ ಸ್ಥಳದಲ್ಲಿ ಪಾದಾರ್ಪಣೆ ಮಾಡಿ, ದೇವರ ಸಾಮೀಪ್ಯ ಮತ್ತು ಉನ್ನತಿಯ ಲಿಖಿತವಾದ ಚಿನ್ಹೆಯನ್ನು ದೊರಕಿಸಿಕೊಳ್ಳುವಷ್ಟು ಪ್ರಜ್ಞೆಯು ಜಿಬ್ರಾಯಿಲ್‌ನಿಗೆ ಇರಲಿಲ್ಲ. ಅವನು ಬೇಗನೆ ಹೊರಬಂದನು. ಸ್ನೇಹ ಗೀತೆ ಹಾಡಿ: ದೇವರ ಭವ್ಯತೆ, ಸೌಂದರ್ಯ ಉತ್ತಮ / ಶಾಶ್ವತವಾದ ಮಹಾನತೆಯನ್ನು; ಧರ್ಮ ಸಂರಕ್ಷಕನಾದ ಮಹಾರಾಜನಿಗೆ ನ್ಯಾಯದೊಂದಿಗೆ ನೀಡಲಾಗಿದೆಯೆಂದು ಬಾಗಿಲಿನ ಮೇಲೆ ಸದ್ದು ಮಾಡುವ ವ್ಯಕ್ತಿಗಳು. ಜಿಬ್ರಾಯಿಲ್‌ನಿಂದ ತಿಳಿದರು. ಮಹಾರಾಜನ ಸುದೈವವು ಜಾಗ್ರತವಾಗುವ ವಿಷಯದಲ್ಲಿ ಏಳು ಖಂಡಗಳ ಅಶ್ವಾರೋಹಿಗಳ ಸಪ್ತ ನಕ್ಷತ್ರಗಳ ಗುಂಪು, ಮಹಾರಾಜನ ಗೌರವ ಮತ್ತು ಉನ್ನತಿಯ ಕಡೆಗೆ ಎಳೆದು ತಂದಿತು. ಸಪ್ತಋಷಿಪುಂಜದ ನಕ್ಷತ್ರಗಳು ಉತ್ತಮ ಗುಣದ ಮಹಾರಾಜನ ವೈರಿ ಆಗಲಿಲ್ಲ. ಪ್ರವಾದಿಗಳ ಒಳಿತನ್ನು ಬಯಸುವ ಪೈಗಂಬರರವರೆಗೆ ತಕರಾರು ತಲುಪಿಸಿ ಅವರಿಂದ ನ್ಯಾಯವನ್ನು ಪಡೆಯಲಾಯಿತು.

'ಯಾವ ದಿಶೆಯಲ್ಲಿ ಗಮನ ಹರಿಯುವದೋ, ಆಕಾಶವು ವಿಜಯ ಮತ್ತು ಯಶಸ್ಸಿನ ಸುವಾರ್ತೆಯನ್ನು ತಿಳಿಸುತ್ತದೆ. ಸಾಮ್ರಾಜ್ಯದಲ್ಲಿ ಮಹಾರಾಜನಿಂದ ಇಸ್ಲಾಂ ಧರ್ಮನೆಲೆಸಿದೆ. ನಿರೀಶ್ವರಿವಾದವು ನಾಶವಾಗಿದೆ. ರಣಾಂಗಣದ ಪಂಕ್ತಿಗಳಲ್ಲಿ ಆತನ ಖಡ್ಗದಿಂದ, ವಿಜಯದ ಸೂರ್ಯನು ಉದಯಿಸಿದ್ದಾನೆ'.

ಸೌಂದರ್ಯ ಹಾಗೂ ವೈಭವ ಸಂಗಮದ ಶುಭಪ್ರಾತಃಕಾಲ ಆರಂಭವಾಗುವ ಮೊದಲು ಅಮೌಲ್ಯವಾದ ಹಸಿರು ರತ್ನದಿಂದ ಜಟಿತವಾದ ಮಹಾರಾಜನ ಖಡ್ಗದ ಕೌಶಲ್ಯವು ವಿಜಯ ಮತ್ತು ಯಶಸ್ಸಿನ ಮದುಮಗಳನ್ನು ಶೃಂಗರಿಸಿತು. ಸ್ವರ್ಗವಾಸಿ ಮಹಾರಾಜನ ಗೌರವಾನ್ವಿತ ವಸ್ತ್ರದ ಅಂಚಿನಿಂದ ಬರುವ ಆಕರ್ಷಕ ಹಾಗೂ ಘನತೆವೆತ್ತ ಗಾಳಿಯ ಸುದೃಢವಾದ ಅಲೆಯು ದೂರದೃಷ್ಟಿಯ ಅನುಮಾನ ಅನಿಸಿಕೆಯನ್ನು ಹೊಂದಿ, ಈ ಮಾತಿನಲ್ಲಿ ಬುದ್ಧಿವಂತಿಕೆಯನ್ನು ಕಂಡುಕೊಂಡು, ಆಡಳಿತಾತ್ಮಕ ಧೋರಣೆಯ ಮೇಲ್ವಿಚಾರಣೆ ಮಾಡುವಂತಹ ನಿಯೋಜಿತ ಅಧಿಕಾರಿಗೆ ಹಲವಾರು ಸಲ ತಿಳಿಸಿದೆ. "ನಾವು ಯಾವಾಗಲೂ ಸಾಮಾನ್ಯ ಮತ್ತು ವಿಶಿಷ್ಟ ಜನರ ಯೋಗ್ಯ-ಕ್ಷೇಮ, ಸಂರಕ್ಷಣೆ ಹಾಗೂ ಇಸ್ಲಾಂ ಧರ್ಮದ ಸುದೃಢತೆಯನ್ನು ಕುರಿತು; ಲಕ್ಷ್ಯವಿಡಬೇಕು."

ಆಳ್ವಿಕೆಯ ಕಿರೀಟ ಪ್ರಾಪ್ತವಾಗುವಂತಹ ಹಾಗೂ ಆಳ್ವಿಕೆಯ ಶಾಸನಗಳನ್ನು ಅನುಷ್ಠಾನಗೊಳಿಸುವಂತಹ ಸುದೈವಿ ಮತ್ತು ಉನ್ನತ ಶ್ರೇಣಿಯ ರಾಜಕುಮಾರರ ದ್ವಾರದೆಡೆಗೆ ನಾನೆಂದಿಗೂ ಪಾದಾರ್ಪಣೆ ಮಾಡಿಲ್ಲ. ಆದರೆ, ದೈವಿಕ ಕೃಪೆಯಿಂದ ಹೃದಯ ಪವಿತ್ರವಾಗಿರುವುದರಿಂದ ನನ್ನ ದೇಹದ ಮಣ್ಣಿನ ಬೆಳಕಿನ ಸಹಾಯದಿಂದ ದೇವರ ಜ್ಞಾನ ಹೊಂದಿದ ಮೊಹಮ್ಮದನನ್ನು ಗುರುತಿಸಬೇಕು. ಜಗತ್ತನ್ನು ನಿರ್ಮಾಣ ಮಾಡಿದ ದೇವರು ನನ್ನನ್ನು ಇದೇ ಕಾರ್ಯಕ್ಕಾಗಿ ಸೃಷ್ಟಿಸಿದ್ದಾನೆಂಬ ಭರವಸೆಯನ್ನು ಹೊಂದಿದ್ದೇನೆ. ಧರ್ಮದ ಆಶ್ರಯದಾತ ಮತ್ತು ದಕ್ಷಿಣದ ಅತ್ಯುನ್ನತ ವಂಶದ ಮಹಾರಾಜರ ಪರಂಪರೆಗೆ ಸಂಬಂಧಿಸಿದ 'ಮೊಹಮ್ಮದ' ಎಂಬ ನಾಮದ ಮಹಾರಾಜನಿಗೆ ಗೌರವಿಸಿ; ಆಕಾಶದ ಛತ್ರಿಯ ನೆರಳಲ್ಲಿ ಪೋಷಣೆ ಹೊಂದುವಂತಹ ಜಗತ್ತನ್ನು ಮಹಾರಾಜನ ನೆರಳಿನಲ್ಲಿ ತರಲು ಬಯಸುತ್ತೇನೆ. ಅನೇಕ ಸಲ ಮುತ್ತುಗಳನ್ನು ಚಲ್ಲಲಾಗಿದೆಯೋ ಎಂಬಂತೆ. ಭಾಷೆಯ ಚಮತ್ಕಾರಿಕ ವಿವರಣೆಯಿಂದ ಇಂತಹ ಶಬ್ದಗಳು ಸೃಷ್ಟಿಯಾಗುತ್ತವೆ. ವಿನಯ ಮತ್ತು ವಿನಮ್ರತೆಯ ಸಹಾಯದಿಂದ ಪ್ರಾರ್ಥಿಸುತ್ತೇನೆ.

ಓ ಸುದೈವದ ಭಂಡಾರದಾತನೇ ರಾಜಪ್ರಭುತ್ವದ ಪಂಜು ಬೆಳಗಿಸುವವನೇ! ದೇವರ ಕಾಣಿಕೆಯ ಒಂದು ಹನಿಯು, ಅಪೇಕ್ಷಿತ ಭೂಮಿಯ ಮೇಲೆ ಸುರಿದರೆ; ಸಾಗರವು ಸ್ವಯಂ-ಉಪ್ಪು ನಿರ್ಮಾಪಕನೆಂದು ಭಾವಿಸುವದು.

'ಓ, ದೇವರೇ! ನೀನೇ ಎಲ್ಲ ರಹಸ್ಯ ತಿಳಿದವನಾಗಿರುವೆ. ನಿನ್ನ ಕರುಣೆಯ ಬಾಗಿಲು ಯಾವಾಗಲೂ ತೆರೆದಿರುತ್ತದೆ. ರತ್ನವ್ಯಾಪಾರಿಯ ಮೇಲೆ ಕೃಪೆ ಮಾಡು, ಆತನ ಮೇಲೆ ನಿನ್ನ ನೆರಳು ಬಿದ್ದರೆ, ಮಹಾರಾಜನ ಕಿರೀಟವು ಜಗತ್ತನ್ನು ಪ್ರಕಾಶಮಾನಗೊಳಿಸುವದು. ನನ್ನ ಸುದೈವಿ ವೃಕ್ಷವನ್ನು ಫಲಭರಿತ ಮಾಡು. ಅದರ ನೆರಳು ಏಳನೆಯ ಆಕಾಶದ ವೃಕ್ಷದವರೆಗೆ ತಲುಪಿ ಅದನ್ನು ಸೇರಿಕೊಳ್ಳುವಂತಾಗಲಿ. ನಿರಂತರವಾದ ಕೃಪೆಯಿಂದ ನಾಯಕತ್ವವನ್ನು

ಬಹಿರಂಗಪಡಿಸು. ಅದರಿಂದ ಮೊಹಮ್ಮದನ ಧರ್ಮವು ಶಾಶ್ವತವಾಗಿರಲಿ. ಅದರ ಬೆಳಕಿನಿಂದ ಜಗತ್ತನ್ನು ಪ್ರಕಾಶಮಾನಗೊಳಿಸು. ಮಹಾರಾಜನು ದೇವರ ಆಜ್ಞೆಯ ಒತ್ತೆಯಾಳು ಆಗಲಿ'.

ಉನ್ನತ ತಲೆಮಾರಿನ ಜನರ ಅಪೇಕ್ಷೆಗಳ ಪೂರ್ಣತೆಯು ಸರ್ವಶಕ್ತಿವಂತನ ನಿರಂತರವಾದ ಅದ್ವಿತೀಯ ಕಾಣಿಕೆಯ ಅಧಿಕಾರದ ಮೇಲೆ ಅವಲಂಬಿತವಾಗಿದೆ. ಆದುದರಿಂದ ಸ್ವರ್ಗವಾಸಿ ಮಹಾರಾಜನ ಪ್ರಾರ್ಥನೆಯು ಗೋಲಾಕಾರದ ಸ್ವೀಕೃತಿಯ ದ್ವಾರದ ಮೇಲಿನ ಪರದೆಯನ್ನು ತೆರೆದು, ಒಳಗೆ ಪ್ರವೇಶಿಸಿ; ಸ್ವೀಕೃತವಾಯಿತು. ಸ್ವಲ್ಪ ಸಮಯದಲ್ಲಿಯೇ ಮಹಾರಾಜಾ ಗಾಜಿಯ ಅಸ್ತಿತ್ವದ ಮುತ್ತಿನ ಧ್ವಜವು ಹಾರಾಡಿತು. ಕಣ್ಣಿನ ದೃಷ್ಟಿ ಚಲಿಸುವವರೆಗೆ ಆತನ ಗಾಂಭೀರ್ಯ ಮತ್ತು ಹಿರಿತನದ ವೈಭವು ಕಂಡುಬರುತ್ತದೆ. ವಚನ ನೀಡಿದ ಅವಧಿಯು ಪೂರ್ಣವಾಗುವ ಶುಭಸಮಯ ಬಂದಿತು.

ಜಗತ್ತಿನ ೧/೪ ರಷ್ಟು ಭಾಗದಲ್ಲಿ ವಾಸವಾಗಿರುವ ಜನಸಂಖ್ಯೆಯು ಗೌರವಾನ್ವಿತನ ಜನನದ ಸಂತೋಷ–ವಾರ್ತೆಯನ್ನು ಕೇಳಿ; ಸಂಭ್ರಮಾಚರಣೆ ಮಾಡಿತು. ಈ ಸುವಾರ್ತೆಯನ್ನು ಆಲಿಸಿ, ಆಕಾಶ ಜೀವಿಗಳ ಕಿವಿಯಲ್ಲಿ ಘಂಟಾನಾದ ಕೇಳಲಾರಂಭಿಸಿತು. ನಿರ್ಲಜ್ಜವಾದ ದರ್ಪಣವು ಲಜ್ಜಾಭರಿತವಾಗಿ ಮಿಂಚುವ ಹಣೆಯುಳ್ಳ ಪ್ರೇಯಸಿಯರ ಪ್ರತಿಬಿಂಬವನ್ನು ತೋರಿಸಲಾರದಷ್ಟು ಭೂಮಿಯನ್ನು ಪರಿಶುದ್ಧಗೊಳಿಸಲಾಯಿತು. ವಾಸ್ತವಿಕತೆಯ ಪ್ರೇಕ್ಷಕರು ತಮ್ಮ ಬುದ್ಧಿವಂತಿಕೆಯ ಕಣ್ಣಲ್ಲಿ ಕಾಣಿಕೆ ನೀಡುವಂತಹ ಪ್ರಕೃತಿಯ ಆಶ್ಚರ್ಯಚಕಿತ ಮಾಡುವ ದೃಶ್ಯದ ಅಂಜನ ಹಚ್ಚಿ ನೋಡುವ ನಿರೀಕ್ಷೆಯಲ್ಲಿದ್ದರು. ಮಹಾನ್ ಆಕಾಶವು ಘನತೆಯ ಕಿರೀಟಧಾರಣೆ ಮಾಡಿ, ಗೌರವದ ಸಿಂಹಾಸನದ ಮೇಲೆ ಆಸೀನಗೊಳಿಸುವಂತೆ ಒಂದು ಶಾಶ್ವತ ಹಾಗೂ ಅದ್ಭುತವಾದ ಸೌಂದರ್ಯವಿದೆ. ಸ್ವರ್ಗವಾಸಿಯಾದ ಮಹಾರಾಜನು ಈ ಮಹೋನ್ನತ ಬಹುಮಾನದ ಅಭಿನಂದನೆ ಸಲ್ಲಿಸಲು, ಅಭಿಮಾನ ಮತ್ತು ಗೌರವದ ಬೈತಲೆಯ ಮೇಲೆ ಆರಾಧನಾ ಸಾಷ್ಟಾಂಗವೆರಗುವಿಕೆಯ ಕಿರೀಟ ಧಾರಣೆ ಮಾಡಿದನು. ಸ್ವಾಭಾವಿಕವಾಗಿ ಸಿಂಹಾಸನದಿಂದ ಮೇಲೆದ್ದು; ದೇವರ ಕಾಣಿಕೆಯನ್ನು ಸ್ವೀಕರಿಸಿದನು ಮತ್ತು ವೈಭವದೊಂದಿಗೆ ಸೈನ್ಯದ ಧ್ವಜವನ್ನು ಆಕಾಶದೆತ್ತರಕ್ಕೆ ಹಾರಿಸಿದನು.

'ಖುಸ್ರೋ ಗಾಜಿಯ ಜನನದಿಂದ ಜಗತ್ತು ದಾನ/ಕಾಣಿಕೆಗಳಿಂದ ಅಲಂಕೃತವಾಯಿತು. ಸೂರ್ಯನನ್ನು ಸ್ವಾಗತಿಸಲು ಬುದ್ಧಿವಂತಿಕೆಯು ಆಕಾಶದ ಮೇಲೆ ಬಂದಿತು'.

ವಿಜಯ ಮೈದಾನದ ಅಗ್ರ ಅಶ್ವಾರೋಹಿ ಹಾಗೂ ಹೃದಯ ಸಂತುಷ್ಟಗೊಳಿಸುವ ದರ್ಬಾರಿನ ಸಿಂಹಾಸನಾಧೀಶ್ವರ ಹಜರತ್ ಮಹಾರಾಜಾ ಗಾಜಿಯ ಮುಖದರ್ಶನ ಮಾಡಿದನು. ಭೋಗವಿಲಾಸದ ಕೂಟವನ್ನು ಶೃಂಗರಿಸಿ, ಜಗತ್ತಿನ ಜನರಿಗಾಗಿ

ಸಂತೋಷಭರಿತ ಔತಣದ ದ್ವಾರಗಳನ್ನು ತೆರೆದನು. ಈ ಶುಭ ಸೂಚಕ ಸಮಾರಂಭದ ಅಭಿನಂದನೆಯ ಕೋಲಾಹಲವು ಸಂತೋಷದಿಂದ ಹಾಡುವಂತೆ ಆಕಾಶ ಜೀವಿಗಳನ್ನು ಪ್ರೇರೇಪಿಸಿತು. ಸಂತಸದ ಕ್ಷಿತಿಜದಲ್ಲಿ ಶಾಂತಿ ಸುರಕ್ಷತೆಯ ಪ್ರಾತಃಕಾಲದ ಪಕ್ಷಿಗಳು ಇಂಪಾಗಿ ಹಾಡಲಾರಂಭಿಸಿದವು. ಜಗತ್ತಿನ ಮೇಲೆ ನೂತನ ವಸಂತ ಋತು ಆವರಿಸಿತು. ಹಸಿರು ಬಣ್ಣದ ಆಕಾಶವು ಅವಮೌಲ್ಯವಾದ ಹಸಿರು ವರ್ಣದ ರತ್ನದಂತೆ ಕಳೆದುಹೋಗಿತ್ತು. ಹುಲ್ಲಿನ ಮೈದಾನವು ದೃಷ್ಟಿಗೋಚರವಾಯಿತು. ಹುಲ್ಲಿನ ಮಧ್ಯದಿಂದ ಅಲ್ಲಲ್ಲಿ ಆಕಾಶವು ಜನರನ್ನು ನೋಡುತ್ತ, ಅವರೊಂದಿಗೆ ಕಣ್ಣುಮುಚ್ಚಾಲೆಯ ಕ್ರೀಡೆಯಲ್ಲಿ ನಿರತವಾಗಲು ಬಯಸುತ್ತದೆ. ಆದರೆ ಆಕಾಶಕ್ಕೆ ಯಾವ ವ್ಯಕ್ತಿಯೂ ದೊರಕುವುದಿಲ್ಲ.

'ಜಗತ್ತು ಮಿತಿಮೀರಿದ ಹಸಿರುತನದಿಂದ ಇಂತಹ ಬೆಳವಣಿಗೆಗೆ ಹೊಂದಿದೆ. ಇದರ ಹಸಿರಿನಿಂದ ಮೇಲಿನ ಜಗತ್ತು ಫಲದಾಯಕವಾಗಿದೆ'.

ರಾತ್ರಿಯಲ್ಲಿ ಪ್ರೇಮಿಯು ಪ್ರಿಯತಮೆಯೊಂದಿಗೆ ಮಿಲನವಾಗುವ ಹಾಗೂ ಚುಂಬಿಸುವ ಯೋಚನೆಯಿಂದ ಪ್ರಿಯತಮೆಯ ಬಾಹುಗಳಲ್ಲಿ ಲೀನವಾಗಲು ಬಯಸುವಂತೆ ಬಿದಿರು ವೃಕ್ಷದ ಎಲೆಗಳು ಸಂತೋಷ ಮತ್ತು ವಿರಾಮದ ಹಸಿರುತನದಿಂದ ಈ ಪ್ರಕಾರ ಬೆಳವಣಿಗೆ ಹೊಂದಿವೆ. ಮದ್ಯಪಾನ ಮಾಡಿಸುವ ಜಗತ್ತು, ಭೋಗ ಹಾಗೂ ಯಶಸ್ಸಿನ ಬಟ್ಟಲು ಹಿಡಿದು; ಗೀತೆ ಹಾಡುವ ಕಾಲದಿಂದ, ಸಂತೋಷದ ಗೀತೆಯನ್ನು ಹಾಡಿಸುತ್ತದೆ.

'ದೇವರ ಆಜ್ಞೆಯು ಜಗತ್ತಿನ ಸಭೆಯಲ್ಲಿ ಬಹಿರಂಗಗೊಂಡಿದೆ. ಶಾಸನ ಮತ್ತು ಕೊಳಲಿನಿಂದ, ಶಾಸನಕರ್ತನನ್ನು ಬಂಧಿಸಲಾಗಿದೆ. ಆಕಾಶವನ್ನು ಸಣ್ಣ ಮದ್ದಳೆಯ ಧ್ವನಿಯ ಜೊತೆಗಾರನನ್ನಾಗಿ ಮಾಡಲಾಗಿದೆ. ನಮಗಾಗಿ ಭೋಗ–ವಿಲಾಸದ ಬಾಗಿಲು ತರೆಯಲಾಗಿದೆ. ಮದ್ಯದ ಬಟ್ಟಲಿಗಾಗಿ, ಆಕಾಶಕ್ಕೆ ಏಕೆ ಕೈಚಾಚಬೇಕು?ರಾತ್ರಿಗಳು ಚಂದ್ರನಂತಾಗಿ, ಹಗಲುಗಳು ಸೂರ್ಯನಂತಾಗಿವೆ'.

ಬಂಗಾರದ ಹಗ್ಗಗಳಿಂದ ಕಟ್ಟಿದ ಸುಂದರವಾದ ಡೇರೆಗಳು ಪರಸ್ಪರ ಸ್ಪರ್ಧಿಸುತ್ತವೆ. ಅವುಗಳ ವೈಭವ ಮತ್ತು ಪ್ರತಿಷ್ಠೆಯ ಸಮಾಚಾರವು; ಏಳನೇ ಆಕಾಶದಲ್ಲಿ ದೇವಚರ ಜಿಬ್‌ರೀಲರ ಅಂತಿಮ ಗಡಿಯವರೆಗೆ ತಲುಪಿದೆ. ಸಂದೇಶವಾಹಕರು ಅತ್ಯುತ್ಸಾಹಿತರಾಗಿ ಮದ್ಯಪಾನ ಮಾಡುತ್ತ, ಮುಗುಳು ನಗೆಯನ್ನು ಹರಡುತ್ತ ನರ್ತಿಸುತ್ತಾರೆ. ಎಲ್ಲೆಡೆಗೆ ಹೊಸಜಗತ್ತು, ಹೊಸ ಆಕಾಶ ವ್ಯಕ್ತವಾಗಿದೆ. ಯಶಸ್ಸಿನ ಉದ್ಯಾನದ ನವಯುವಕರು ಯೌವನವೆಂಬ ಅಹಂಕಾರದ ಮದ್ಯದಿಂದ; ಪ್ರೇಕ್ಷಕರ ಹೃದಯಗಳ ಬಾಟಲಿಗಳನ್ನು ತುಂಬಿದ್ದಾರೆ. ಒಂದು ಕ್ಷಣವೂ ಸಹ, ಅವರ ತುಟಿಗಳು ಮದೋನ್ಮತ್ತವಾದ ಮುಗುಳು ನಗೆಯಿಂದ ಮುಚ್ಚುವುದಿಲ್ಲ.

'ಅವರ ಪ್ರಬಲ ಆಸೆಯಿಂದ, ಕೂಟದ ಹೂಗಳಂತೆ, ಪ್ರೇಮಿಗಳ ಬಾಯಿಯಿಂದ ಮಾತನಾಡುವ ಸಾಮರ್ಥ್ಯವನ್ನು ಅಪಹರಿಸಿದ್ದಾರೆ'.

ಸುಂದರವಾದ ಮಲ್ಲಿಗೆ ಹೂವಿನಂತಹ ದೇಹಉಳ್ಳ, ಗೀತೆಹಾಡುವ ಮತ್ತು ಜಗತ್ತಿನ್ನೊಂದಿಗೆ ಸಹಕರಿಸಿ ನಡೆಯುವ ಹರಿಣಿಗಳ ಬೆಡಗು-ಭಿನ್ನಾಣಗಳಿಂದ; ಸಾರಂಗಿ ಹಾಗೂ ಸಣ್ಣ ಮದ್ದಳೆಯ ಧ್ವನಿ ಮತ್ತು ಚುಂಬನ ಧ್ವನಿಯು ಏಕಪ್ರಕಾರವಾಗಿ ಭಾಸವಾಗುವಂತೆ ಸೌಭಾಗ್ಯ ಹಾಗೂ ಭೋಗ ವಿಲಾಸದ ವಾದ್ಯವನ್ನು ನುಡಿಸಲಾಗಿದೆ.

'ಹಾಡುವವರ ತುಟಿಯಲ್ಲಿ, ಚುಂಬನದ ಹೂಗಳು ಅರಳುವ ದೆಸೆಯಿಂದ, ತಂಬೂರಿಯಿಂದ ಹೊರಹೊಮ್ಮುವ ಗೀತೆಯಂತೆ, ನಗುವಿನ ಧ್ವನಿಯು ಬರುತ್ತಿತ್ತು'.

ಮಾಣಿಕ್ಯದಂತಹ ತುಟಿ ಹೊಂದಿದ, ಮುತ್ತು ಧರಿಸಿದ ಹಿಂದುಸ್ತಾನಿ ನರ್ತಕಿಯರು ಪಚ್ಚೆಯ ಥಳಕು-ಬಳಕಿನಿಂದ ಫಲವತ್ತಾಗಿ, ನರ್ತಿಸಲು ಆರಂಭಿಸಿದ್ದಾರೆ. ನರ್ತಕಿಯರ ಹೃದಯವನ್ನು ಸಂತುಷ್ಟಗೊಳಿಸುವ ಸ್ವಾಭಾವಿಕವಾದ ಭಾವ-ಭಂಗಿಯು ಪ್ರೇಕ್ಷಕರ ಪ್ರಕಾಶಮಾನವಾದ ಗಲ್ಲವನ್ನು ಮಿಂಚಿನಂತೆ ಬೆಳಗಿಸುತ್ತದೆ.

'ಅನುರಾಗಿಗಳನ್ನು ಆರಾಧಿಸುವ ಪ್ರೇಮಿಗಳ ಈ ನೃತ್ಯ, ವಿರಹದ ಒಂದು ರಾತ್ರಿಯ ಮೇಲೆ ಮಿಲನದ ನೂರು ಪ್ರಾತಃಕಾಲಗಳನ್ನು ತೆರೆಯುತ್ತದೆ. ಕೈಗಳನ್ನು ಬಂಧಿಸಿದಂತೆ, ಅವರು ನೃತ್ಯದಲ್ಲಿ ತಲ್ಲೀನರಾಗಿದ್ದಾರೆ. ಈ ನೃತ್ಯವು ವಿವೇಕಶಾಲಿಗಳ ಹೃದಯವನ್ನು ತನ್ನೆಡೆಗೆ ಆಕರ್ಷಿಸುತ್ತದೆ'.

ಹೊಸ ಚಂದ್ರನಂತಹ ಹುಬ್ಬುಗಳೊಂದಿಗೆ ನಮ್ಮಿಳಿತವಾದ ಪ್ರೇಯಸಿಯರು ಹಬ್ಬದ ಮುಂಜಾನೆ ನಗುತ್ತಿದ್ದಾರೆ. ಓರ್ವ ಪ್ರಸಿದ್ಧ ಮಾಟಗಾರನ ಜಾದೂವಿನ ಭಾವ-ಭಂಗಿಯಲ್ಲಿ ಬಂಧಿತರಾಗಿದ್ದಾರೆ. ಪನ್ನಂಬರು ಮಿಶ್ರಿತ ಒಂದು ಸುಗಂಧ ಚೂರ್ಣ ಮತ್ತು ಕಸ್ತೂರಿ ಮಿಶ್ರಿತವಾದ ಚಂದನವನ್ನು; ಸಾವಿರಾರು ಯಾತ್ರಿಕರ ತಂಡದ ಪೋಷಾಕುಗಳ ಪ್ರತಿಯೊಂದು ಸುಗಂಧಭರಿತ ದಾರವು, ಚೀನಾ ಮತ್ತು ಖತಾ ದೇಶವನ್ನು ದಾರಿದ್ರ್ಯದ ನಿಂದನೆಯಿಂದ ಸಂರಕ್ಷಿಸುವಷ್ಟು ಜಗತ್ತುಗಳ ನಿರ್ಮಾಣದಲ್ಲಿ ಬಳಕೆ ಮಾಡಲಾಗಿದೆ. ಕಸ್ತೂರಿ ಹಾಗೂ ಗುಲಾಬಿಯ ಸುಗಂಧದ ಹೆಚ್ಚಳದಿಂದ ಜಗತ್ತಿನ ಮೆದುಳು; ಸಾಗರದಲ್ಲಿ ಉದ್ಭವಿಸುವ ಗುಳ್ಳೆಗಳು ತಾತಾರ ದೇಶದ ಹರಿಣಿಗಳ ಕಸ್ತೂರಿ ಚೀಲದ ಸುಗಂಧದಿಂದ ತುಂಬಿ, ಆಚೆಗೆ ಜಿಗಿಯುವಷ್ಟು ಸುಗಂಧಮಯವಾಗಿತ್ತು. ಉದ್ಯಾನ ಮತ್ತು ಹೂದೋಟಗಳ ಸೃಷ್ಟಿಯ ಸೆರಗಿನಲ್ಲಿ ಪಾಲನೆ ಹೊಂದಿ ಚಲಿಸುವ ಗಾಳಿಯು ಸುಮನ ಸಂಗ್ರಾಹಕರ ಮಡಿಲಲ್ಲಿ ಹೂಗಳ ಮೊಗ್ಗಿನ ಪ್ರತಿಯಾಗಿ ಪನ್ನಂಬರ ಮಿಶ್ರಿತವಾದ ಗುಳಿಗೆಗಳನ್ನು ಹಾಕುತ್ತದೆ. ಹೊಸದಾಗಿ ಆಗಮಿಸಿದ ಗಾಯಕರು ನಿರಾಶೆಯಲ್ಲಿ ಮುಳುಗಿರುವ ಬಡವರನ್ನು ಸಂತೋಷದಿಂದ ತಮ್ಮ ಮಡಿಲಲ್ಲಿ ಎಳೆದುಕೊಂಡು, ಶ್ರೀಮಂತರನ್ನಾಗಿ ಮಾಡುತ್ತಾರೆ. ಭೂಮಿಯ

ಕಾನೂನಿನ ನಿರ್ಬಂಧದಿಂದ, ಎಲ್ಲ ಸುಂದರ ನವವಧುಗಳಿಗಿಂತಲೂ ಹೆಚ್ಚಾಗಿ ಮನಸ್ಸನ್ನು ಸೆರೆಹಿಡಿಯುವಂತಾಗಿದೆ. ಹಟಮಾರಿ ಆಕಾಶವು ಮಾರುಕಟ್ಟೆಯ ಅಂಗಡಿಗಳ ಶೃಂಗಾರವನ್ನು ಅವಲೋಕಿಸಿ, ಯೋಗ್ಯವಾದ ಮಾರ್ಗದಲ್ಲಿ ಮುನ್ನಡೆಯುತ್ತದೆ.

'ಶುಭಕಾರಕ ಮಾರುಕಟ್ಟೆಯ ಗಗನಗಳು, ಪ್ರೇಮಿಗಳ ಬೀದಿಯಲ್ಲಿ ವಿಷಯಾಸಕ್ತರಂತೆ. ಮಾಣಿಕ್ಯದಂತಹ ತುಟಿ ಪನ್ನಂಬರಯುಕ್ತ ಕೇಶರಾಶಿಯುಳ್ಳ, ಪ್ರೇಮಿಗಳು ಮಧ್ಯದ ಬಟ್ಟಲಿನಂತೆ ಎಲ್ಲೆಡೆಗೆ ತೂರಾಡುತ್ತಾರೆ. ಜಗತ್ತಿಗೆ ಸೌಂದರ್ಯ ನೀಡುವ ಮಲ್ಲಿಗೆಯಂತಹ ದೇಹದ ವ್ಯಕ್ತಿಗಳು, ಹೊಸ ವರ್ಷದ ಹಬ್ಬದ ವಾತಾವರಣವನ್ನು ಸೃಷ್ಟಿಸಿದ್ದಾರೆ. ದಕ್ಷಿಣದ ಪ್ರೇಮಿಗಳು ತಮ್ಮ ಭಾವ-ಭಂಗಿಗಳಿಂದ, ಚುಂಬನ ಪ್ರಕ್ರಿಯೆಯಿಂದ ನಗೆಯ ಬಾಗಿಲು ತೆರೆದಿದ್ದಾರೆ. ಮೌನದೊಂದಿಗೆ ಕಣ್ಣು-ಸನ್ನೆಯ ಸಂಕೇತದಿಂದ, ಸಂತೋಷದ ಸಾಮಾನು ಸರಬರಾಜು ಮಾಡಲಾಗಿದೆ. ಬೆಡಗು-ಬಿನ್ನಾಣದ ಪ್ರೇಯಸಿಯರ ಸ್ತನಗಳು, ಕೈಯಲ್ಲಿ ಹಿಡಿದಂತಹ ದಾಳಿಂಬೆಯಂತೆ ಭಾಸವಾಗುತ್ತವೆ'.

ಜಗತ್ತಿನಲ್ಲಿ ಆವರಿಸಿದ ವಸಂತ ಋತುವು, ಖಿನ್ನ ಮನಸ್ಸಿನ ಜನರ ಹೃದಯದ ಗಂಟು ಬಿಚ್ಚಿ, ಗುಂಗುರು ತಲೆಗೂದಲಿನ ಸುಗಂಧ ಭರಿತ ಹುಲ್ಲನ್ನು ತೋಳುಗಳ ಮೇಲೆ ಹರಡಿದೆ. ಸುಂದರ ವ್ಯಕ್ತಿಗಳ ಹೆಚ್ಚಳದಿಂದ ಪ್ರತಿಬೀದಿ, ಮೊಹಲ್ಲಾ ಮತ್ತು ಮಾರುಕಟ್ಟೆಯಲ್ಲಿ ಹೊಸ ವಂಸತ ವ್ಯಾಪಿಸಿದೆ. ನಿರ್ಮಲ ಎದೆಯವರು, ಹೃದಯದ ಗಾಜುಗಳು; ಪ್ರೇಮಿಗಳ ಉನ್ನತ ಹುಬ್ಬುಗಳ ಮೆಹರಾಬ್ (ಗೋಲಾಕಾರದ ಬಾಗಿಲು) ಮೇಲೆ; ಭಗ್ನವಾಗುತ್ತಿದ್ದವು. ಅವರ ರೆಪ್ಪೆಗಳ ಮೇಲೆ ಪಿತೂರಿ ಇತ್ತು. ಆದರೆ ಅವರ ಕೈಗಳು ಅಲ್ಲಿಯವರೆಗೆ ತಲುಪುತ್ತಿರಲಿಲ್ಲ. ಆಕಾಶದಿಂದ ಪೀಡಿತರಾದ ವ್ಯಕ್ತಿಗಳ ಫಿರ್ಯಾದಿ ಪತ್ರವು; ದೇವರಿಗೆ ಕೃತಜ್ಞತೆ ಸಲ್ಲಿಸುವ ಸಂಪುಟದಷ್ಟು, ಭೋಗವಿಲಾಸ, ದಾನದ ಸಂಪತ್ತು ಹಾಗೂ ಭದ್ರತೆಯ ಸಾಮಾನುಗಳು ಅಗ್ಗವಾಗಿವೆ.

'ಶಹಾ ಗಾಜಿಯ ಹೃದಯ ತೆರೆಯುವ ಸೌಂದರ್ಯದಿಂದ, ಆಕಾಶವು ಸಂತುಷ್ಟವಾಗಿ, ಆತನ ಮಾರ್ಗದ ಸುತ್ತಲೂ ತಿರುಗುತ್ತಿತ್ತು. ಈ ಬಗೆಯಲ್ಲಿ ಜಗತ್ತು ಹಚ್ಚಹಸಿರು ಹಾಗೂ ಸಂತೃಪ್ತವಾಗಿದೆ. ಬುಲ್‌ಬುಲ್ ಹಕ್ಕಿಯ ಗೂಡುಗಳು ಹೂಗಳಾಗಿವೆ'.

ಅತ್ಯುನ್ನತ ಸನ್ಮಾನ್ಯರ ಜನನ ದಿನಾಂಕ : ರವಿವಾರ ರಾತ್ರಿ (ಝಿಲ್ಕಾಯದಾ) ಇಸ್ಲಾಮಿ ಸಂವತ್ಸರದ ಹನ್ನೊಂದನೇ ತಿಂಗಳು ೧೦೨೨ (ಹಿಜ್ರಿ) ಹಿಜರಿ ಶಕೆಯ ಪ್ರಾತಃಕಾಲದ ತೇಜಸ್ಸು.

ಆಂತರಿಕ ಮತ್ತು ಬಾಹ್ಯ ಸಂಗತಿ ತಿಳಿಯುವ, ಸುವಾರ್ತೆ ಪಡೆಯುವ ದೂರದರ್ಶಿ ವ್ಯಕ್ತಿಗಳಿಗೆ ಚಿರಂತನತೆಯ ಸಂದೇಶ ಪ್ರಾಪ್ತವಾಯಿತು. ಸೌಭಾಗ್ಯದ ಶಕುನವಿಡುವ ಆ ನಕ್ಷತ್ರಗಳ ಭಾಗ್ಯಶಾಲಿ ಹಣೆಯಿಂದ ಉತ್ತಮತೆಯ ಸೂರ್ಯನು ಬೆಳಗಲಾರಂಭಿಸಿ, ಪ್ರಕಾಶವನ್ನು ಹರಡುತ್ತಾನೆ. ಮಹಾರಾಜರಿಂದ ಲಭಿಸುವ ಗೌರವ ವಸ್ತ್ರಕ್ಕೆ ಶಾಶ್ವತತೆಯು

ದೊರಕುತ್ತದೆ. ವೃತ್ತಾಂತದ ಪಂಕ್ತಿಯಲ್ಲಿ ಸ್ಥಾನಗಳನ್ನು ಶೃಂಗರಿಸಿ ಬಿಡುಗಡೆಯ ಧ್ವಜವನ್ನು ಏರಿಸಿದಂತಹ ಈ ಗೌರವವು ಯೋಗ್ಯವಾಗಿದೆ. ಧೈರ್ಯವಂತರು ಮತ್ತು ಪರಿಪೂರ್ಣತೆ ಹೊಂದಿದ ವ್ಯಕ್ತಿಗಳ ಭಾಷೆಯನ್ನು ಪ್ರಾಮಾಣಿಕತೆಯಿಂದ ಪರಿಜ್ಞಾನದ ಬಂಡವಾಳ ರೂಪದಲ್ಲಿ ಸಂಗ್ರಹಿಸಲಾಗಿದೆ. ಧ್ಯೇಯಗಳು ಪ್ರಾಪ್ತವಾಗಲು ಈ ಮಾತುಗಳು ಪರಿಣಾಮಕಾರಿ ಆಗಿವೆ. ಕಾವಿಯಾನಿ ಧ್ವಜದಂತೆ ಬರವಣಿಗೆ ಮಾಡುವ ರಾಜಮಾನ್ಯ ಲೇಖನಿಗೆ, ನ್ಯಾಯ–ನೀತಿಯ ಸಿಂಹಾಸನದ ಮೇಲೆ ಆಸೀನನಾದ ಮಹಾರಾಜನ ಸ್ವಭಾವದ ಮೂಲಕ; 'ಅರ್ಥಗಳ ಸಾಮ್ರಾಜ್ಯದ ದೊರೆ' ಎಂದು, ಸಾಬೀತು ಮಾಡಿದ್ದೇನೆಂಬುದು, ಅತಿ ಶ್ರೇಷ್ಠತೆಯ ಸೂಕ್ತವಾದ ಪ್ರಶಂಸೆಯಾಗಿದೆ. ಧೀಮಂತಿಕೆ ಹಾಗೂ ಸಾಹಿತ್ಯಶಾಸ್ತ್ರದ ನಗರಗಳಿಂದ ವಾಕ್ಸಾಮರ್ಥ್ಯ/ಭಾಷಣ ಕಲೆಯ ತೆರಿಗೆಯನ್ನು ಸಂದಾಯ ಮಾಡಿದ್ದೇನೆ.

ಗದ್ಯ ಮತ್ತು ಪದ್ಯದ ಸಿಂಹಾಸನದ ಮೇಲೆ ಆಸೀನರಾದ ಜನರಿಗೆ ಮೊಹಮ್ಮದರಂತಹ ವ್ಯಕ್ತಿತ್ವ ಸಂಪನ್ನರಾದ ಹಜರತ್ ಬಾದಶಾಹರ ಗುಣಗಳ ಮೂಲಕ; ಸೃಷ್ಟಿಕರ್ತನು ಶಾಶ್ವತವಾದ ಕೀರ್ತಿಯನ್ನು ನೀಡಿದ್ದಾನೆಂಬ ಈ ಗೌರವಕ್ಕಿಂತಲೂ ಹೆಚ್ಚಾಗಿ ಬೇರೆ ಯಾವ ಅಂತಸ್ತು ಪ್ರಾಪ್ತವಾಗಲು ಸಾಧ್ಯವಿತ್ತು? ಮಹಾರಾಜರ ಪ್ರಶಂಸಾ ಪರೀಕ್ಷೆಯ ಉಪಕಾರದ ಭಾರದಿಂದ ಮದೋನ್ಮತ್ತವಾಗಿ, ಮಧುಶಾಲೆಯ ಬಾಗಿಲಿನ ಹತ್ತಿರ ಮೂಲಾರ್ಥದ ಅಂಗಡಿಯನ್ನು ತೆರೆಯಲಾಗಿದೆ. ಮಹಾ ಅದೃಷ್ಟಶಾಲಿಯ ಸಾಮ್ರಾಜ್ಯವು ದೇವರ ಅನುಯಾಯಿಗಳ ದರ್ಗಾದ ಮೇಲೆ ಜಯಸಂಪಾದಿಸುವಂತೆ; ದೇವರು ಮಾಡಿದ್ದಾನೆ. ಸಿಂಹಾಸನದ ಮೇಲೆ ಕುಳಿತಿರುವ ಮಹಾರಾಜನಿಗೆ ಯಾವುದೇ ದಸ್ತಾವೇಜು ಇಲ್ಲದೇ; ದೇವರ ವೈಭವದ ಬಾಗಿಲಿನವರೆಗೆ ತಲುಪುವ ಮಾರ್ಗವನ್ನು ನಾಲ್ಕನೇ ಆಕಾಶವು ನಿರ್ಮಿಸಿದೆ.

'ವಿಶಿಷ್ಟ ಮತ್ತು ಸಾಮಾನ್ಯ ಜನರು ಅರಮನೆಗೆ ತಲುಪುವ ಕೋಲಾಹಲವು ಆಕಾಶ ಗಂಗೆಯನ್ನು ಸೃಷ್ಟಿಸಿದೆ, ಮಹಾರಾಜನ ಕಾವಲುಗಾರನು ದಂಡದಿಂದ ಆಕಾಶಕಾಯದ ಮೇಲೆ ಕುರುಹು ಮೂಡಿದೆ. ಮಹಾರಾಜನ ವೈಭವದ ಉನ್ನತ ಅಂತಸ್ತಿನ ದೆಸೆಯಿಂದ ಏಳನೇ ಆಕಾಶವು, ಆತನ ದರ್ಬಾರಿನ ಮಣ್ಣಿನಿಂದ ಹಣೆಯ ಪ್ರತಿರೂಪದಂತೆ ಪ್ರಕಟವಾಗಿದೆ'.

ಆತನ ಮಹಾನ್ ಅರಮನೆಯ ಶಿಖರದ ಕಮಾನುಗಳು ಶನಿಗ್ರಹದ ಶ್ರೇಷ್ಠತೆಯ ಕಿರೀಟಗಳಾಗಿವೆ. ಆತನ ಧೈರ್ಯ ಉದ್ಯಾನದಲ್ಲಿ ಬೆಳೆದ ಪೈರುಪಚ್ಚೆಯು, ಏಳು ಸಮುದ್ರಗಳನ್ನು ಮಂಜುಹನಿಯ ಅರ್ಧಭಾಗವೆಂದು ಅಂದಾಜು ಮಾಡುತ್ತದೆ. ರೋಮನ್ನರ ಏಳನೇ ತಿಂಗಳಿನ ಮಳೆಯ ಉಪಕಾರದಿಂದ ಲಜ್ಜಿತವಾಗಿ ಸಮುದ್ರವು ಕಣ್ಣು ತಪ್ಪಿಸಿಕೊಂಡು ಶಿರಬಾಗಿಸಿದೆ. ದಾನಿಯ ಇಂತಹ ಅಪರಾಧದಿಂದ ಮೋಡಗಳಿಗೆ ನೀರು ಕೊಡುವ ಹಾಗೆ ಹಾಗೂ ಮಳೆ ಬರುವಂತೆ ಯಾರು ಮಾಡುವರು?

ಸಮುದ್ರದ ದೇಹದಿಂದ ಅಲೆಗಳ ಉಕ್ಕಿಬರುವಿಕೆಯು ಸ್ಥಗಿತವಾಗುವಂತೆ ಸಮುದ್ರದ ಗಂಟಲನ್ನು ಒತ್ತಲಾಗಿದೆ. ಹದ್ದಿನಂತಹ ನಕ್ಷತ್ರವು (ನಸ್ರೆ ತಾಯರ್) ಆತನ ನಾಮ-ವೈಭವದ ಮೂಲೆಯ ಮೇಲೆ ಕುಳಿತುಕೊಂಡರೆ ಕಾಲುಗಳ ಪ್ರತಿಯಾಗಿ ಅದು ಒಂಭತ್ತನೇ ಆಕಾಶವನ್ನು ಹೆಕ್ಕಿ ತಿನ್ನುತ್ತದೆ. ನಕ್ಷತ್ರಗಳ ರಾಜನು (ಚಂದ್ರನು) ಆತನ ಮನೆತನಕ್ಕೆ ಗೌರವ ಸಲ್ಲಿಸುವ ಬಗೆಯಲ್ಲಿ, ಸಾಷ್ಟಾಂಗ ಮಾಡುವ ಅಭ್ಯಾಸದಲ್ಲಿ ನಿರತನಾಗಿದ್ದನೆಂಬುದು ಆತನ ಜನನದ ಪ್ರಾತಃಕಾಲ ಪೂರ್ವದಲ್ಲಿ ದೇವರ ಮುಖಾಂತರ ಮಹಾರಾಜನಿಗೆ ಗೊತ್ತಾಗಿತ್ತು. ಹೊಸ ಚಂದ್ರನ ಕಣ್ಣಿನ ಹುಬ್ಬನ್ನು ಮಹಾರಾಜನ ಕಠಾರಿಯ ಕೋಶದಿಂದ ಹೋಲಿಕೆ ಮಾಡಿರದಿದ್ದರೆ; ಚಂದ್ರನು ನಕ್ಷತ್ರಗಳ ದೃಷ್ಟಿಯಲ್ಲಿ ಅಸಫಲತೆಯ ಹೊಂಡದಲ್ಲಿ ಬೀಳುತ್ತಿದ್ದನು.

ಸೌಭಾಗ್ಯ ಮತ್ತು ಸಂಪತ್ತು ಹೊಂದಿದ ವ್ಯಕ್ತಿಗಳ ಕಾರ್ಯಗಳ ಪ್ರಥಮ ದಿನದಿಂದಲೇ ಚಿರಸ್ಥಾಯಿ ಆಗಿವೆ. ಗೌರವ ಹಾಗೂ ಸಂಪತ್ತನ್ನು ಶಾಶ್ವತಗೊಳಿಸಿದ ದೇವರನ್ನು ಸ್ಮರಿಸಬೇಕು. ರಾಜಧಾನಿಗೆ ಭದ್ರತೆಯನ್ನು ನೀಡಿ; ಅವರ ರೀತಿ-ನೀತಿ/ಪದ್ಧತಿಯನ್ನು ಜಗತ್ತಿನ ಅಂತ್ಯದವರೆಗೆ ಶಾಶ್ವತಗೊಳಿಸಿದನು. ಹಜರತ್ ಬಾದಶಾಹ ಗಾಜಿಯು ಮೊಹಮ್ಮದರಂತೆ ಗುಣಸಂಪನ್ನನಾದ ವ್ಯಕ್ತಿಯ ದಿವ್ಯ ದರ್ಶನದ ಪ್ರಕಟನೆಯು, ಸೃಷ್ಟಿಯ ಸಾಕ್ಷಾತ್ಕಾರದ ಮೂಲಸ್ಥಾನವಾಗಿದ್ದಾನೆ. ಅತ್ಯುನ್ನತ ಮೌಲ್ಯ ಮತ್ತು ಗೌರವದ ಪವಿತ್ರವಾದ ಅಂಗಳದ ಒಂದು ಶುಭಸೂಚಕ ಪಕ್ಷಿಯಂತಹ (ಹುಮಾ) ಪಾವಿತ್ರ್ಯತೆಯ ಪಾತಿವ್ರತ್ಯದ ಉದ್ಯಾನದ ಪರಿಮಳ, ದೇವರ ಕೃತಜ್ಞತಾರ್ಪಣೆಯ ಸುಗಂಧ, ಸಭ್ಯತೆ/ಸೌಜನ್ಯತೆಯ ಉಂಗುರದ ಅಮೌಲ್ಯ ಹರಳು, ಪ್ರವಾದಿತ್ವ ಹಾಗೂ ದೇವಸಾಮಿಪ್ಯದ ಪರದೆ ಬಿದ್ದಿರುವ ವಧುಶಯ್ಯೆಯ ಕೊಠಡಿಯಲ್ಲಿ ಕುಳಿತಿರುವಂತಹ ದೇವರ ಕೃಪೆಯ ದರ್ಪಣ, ಅನಂತ ಪುಣ್ಯದ ಬಂಡವಾಳ, ಮರ್ಯಾದಸ್ಥ ಪರದೆಗಳ ಸಂಪುಟ, (ರಹಸ್ಯಾಂಗಗಳನ್ನು ಅಡಗಿಸಿಡುವ ಮಾನಿನಿ ಮಹಾರಾಜನ ಹುದ್ದೆಯ ಯೋಜನೆ, ಅಮೌಲ್ಯ ಮುತ್ತುಗಳ ಉದ್ಯಾನದ ಹೊಸ ಫಲ ರಾಜಮನೆತನದ ಶ್ರೀಮಂತಿಕೆಯ ರಾಜಕುಮಾರಿ, ಸೌಭಾಗ್ಯ ಗ್ರಂಥದ ಪರಿಣಾಮ, ಗೌರವಾದರದ ಕಾವ್ಯದ ಅತ್ಯುತ್ತಮ ನುಡಿಯ ಅರ್ಥ, ಮಹಾನತೆ ಹಾಗೂ ಭವ್ಯತೆಯ ಶಾಶ್ವತವಾದ ಜನ್ಮಸ್ಥಾನ, ಮಾನವಕಲ್ಯಾಣ ಅಪೇಕ್ಷಿಸುವ ಮನೆತನದ ಸಮೃದ್ಧಿ, ಸಿಂಹ-ಶಕ್ತಿಸಂಪನ್ನ ಕುಟುಂಬದ ಪಾವಿತ್ರ್ಯ, ಪರದೆಯಲ್ಲಿರುವ ಅತ್ಯುನ್ನತ ದರ್ಜೆಯ ಹಜರತ್ ತಾಜ್ ಸುಲ್ತಾನಾ ಸಾಹೇಬರ ಮನೆತನದ ಪರಂಪರೆಯು ಪ್ರವಾದಿಗಳೊಂದಿಗೆ ಸಂಬಂಧಿಸಿದೆ. ಅವರ ವಂಶವೃಕ್ಷವು ಕರ್ಬಲಾದ ಮಹಾರಾಜನ ಶಿರೋನಾಮೆಯೊಂದಿಗೆ ಅಲಂಕೃತವಾಗಿದೆ. ಹಜರತ್ ಬಾದಶಾಹಾ ಗಾಜಿಗಿಂತಲೂ ಮೊದಲಿನ ಎಲ್ಲ ಭೂಖಂಡಗಳಲ್ಲಿ ಉತ್ತಮವಾದ ಯಮನ್ ದೇಶಕ್ಕಿಂತಲೂ ಶ್ರೇಷ್ಠವಾದ ಪವಿತ್ರನಗರ, 'ನವರಸ'ದಲ್ಲಿ ದೇವರ ಯುಕ್ತಿಗೆ ಅನುಸಾರವಾಗಿ, ಅತ್ಯುನ್ನತ ಸನ್ಮಾನ್ಯರ ಜನನ ರವಿವಾರ ರಾತ್ರಿ

ಇಸ್ಲಾಮಿ ಸಂವತ್ಸರದ ಹನ್ನೊಂದನೇ ತಿಂಗಳು ೧೧೨೨ ಹಿಜರಿ ಶಕೆಯ ಪ್ರಾತಃಕಾಲ ಹಜರತ್ ಬಾದಶಾಹ ಗಾಜಿಯ ಜನನದ ತೇಜಸ್ಸಿಗೆ ಜನ್ಮನೀಡಿ, ಮಹಾರಾಜರು ಮತ್ತು ಸಾಮ್ರಾಜ್ಯಕ್ಕೆ ಬೆಳಕು ನೀಡಿದರು. ದೇವರ ಕೃಪೆಯ ಈ ಸಾಕ್ಷಿಯ ಪಾಲನೆ-ಪೋಷಣೆಯ ಆಸಕ್ತಿಯು 'ತಾಜುಲ್ ಮಹಜರಾತ್'ರಲ್ಲಿ ಉಂಟಾಗುವುದರಿಂದ ದೇವರ ಪ್ರೀತಿ ಸಮ್ಮಿಳಿತವಾದಂತಹ ಶುದ್ಧವಾದ ಹಾಲಿನಲ್ಲಿ ಆ ಪ್ರೀತಿಯ ಜೀವದ ದ್ರವರೂಪದ ಬೆಲ್ಲವನ್ನು ಸೇರಿಸಿದರು.

ಪ್ರಾತಃಕಾಲದ ಮುಂಬೆಳಕು ಮಿಂಚಲಾರಂಭಿಸಿತ್ತು. ಆ ಹಾಲಿನ ಹನಿಯು ಹಜರತ್ ಬಾದಶಾಹ ಗಾಜಿಗೆ ಬದುಕಿನ ವರದಾನ ನೀಡಿ, ಶಾಶ್ವತವಾದಂತಹ ತೃಪ್ತಿಯನ್ನು ಬಹಿರಂಗಗೊಳಿಸಿತು. ಆತನ ಸುಖಪ್ರಾಪ್ತಿಗಾಗಿ ಮುತ್ತುಗಳಿಂದ ಅಲಂಕೃತವಾದ ತೊಟ್ಟಿಲನ್ನು ತಯಾರಿಸಲಾಯಿತು. ಜಗತ್ತನ್ನು ಜಯಿಸುವ ಧೈರ್ಯದಿಂದ ಗಾಳಿಯಲ್ಲಿ ಹಾರಾಡುವ ಸುಲೇಮಾನನ ಸಿಂಹಾಸನದಂತಹ ಪ್ರಕೃತಿಯನ್ನು ರೂಪಿಸಲಾಯಿತು. ನಾಯಕರ ಪ್ರವಾಸಿ ಗೃಹ ಮತ್ತು ಸರದಾರರ ಆಜ್ಞಾಪಾಲಕರಿಂದ, ಮರಿಯಂನಂತಹ ಪವಿತ್ರರಾದ ದಾಸಿಯರನ್ನು; ಅರಸನಿಗೆ ಅಮೃತ ನೀಡಲು ಹಾಜರುಪಡಿಸಲಾಯಿತು. ಪ್ರತಿ ಅಮೌಲ್ಯ ದಾದಿಯ ಮುಖದ ಮೇಲೆ ಬಾದಶಾಹಾ ಗಾಜಿಯ ದೃಷ್ಟಿ ಬೀಳುತ್ತಲೇ; ಆತನು ತನ್ನ ದೃಷ್ಟಿಯನ್ನು ಬೇರೆಡೆಗೆ ತಿರುಗಿಸಿದನು. ಆತನ ನೈಜವಾದ ಅರಸು ಸ್ವಭಾವವು ಅಮೃತ ಪಾನ ಮಾಡಲು ಅಪೇಕ್ಷಿಸಲಿಲ್ಲ. ಇದನ್ನು ಅವಲೋಕಿಸಿದ ಮಹಾರಾಜನ ಅರಮನೆಯ ಅಂಗಳದಲ್ಲಿದ್ದ ಮರ್ಯಾದಸ್ಥರು ಗಾಬರಿ ಆದರು. ಈ ಅರಸನಿಗೆ ದೈವೀ ಪ್ರೇರಣೆ ಆಗಿರುವಂತೆ ಕಾಣುತ್ತದೆ. ಯಾವ ದಾದಿಯ ಕಡೆಗೂ ಗಮನ ಹರಿಸುವದಿಲ್ಲವೆಂದು ಭಾವಿಸಿದರು. ಇಂತಹ ಆಶ್ಚರ್ಯ ಮತ್ತು ಭಾವನೆಯ ಸಂದರ್ಭದಲ್ಲಿ ದೇವಸಾಮಿಪ್ಯ ಹೊಂದಿದ ಮನೆತನದ ಜ್ಯೋತಿ 'ಕಿಶ್ವರ ಜಾನ್' 'ಹೈ ಹೈ ಮಾ' ಎಂಬ ನಾಮದಿಂದ ಪ್ರಸಿದ್ಧಳಾದ ಧರ್ಮನಿಷ್ಠೆ ಹಾಗೂ ಪಾವಿತ್ರ್ಯತೆ ಹೊಂದಿದ ಮಹಿಳೆಯು ಕೈಗಳನ್ನು ಕಟ್ಟಿಕೊಂಡು ಶಿಷ್ಟಾಚಾರದೊಂದಿಗೆ ಬಂದು ನಿಂತಳು. ಬಾದಶಾಹಾ ಗಾಜಿಯ ಮನಮೆಚ್ಚುವ ದೃಷ್ಟಿಯು, ಆ ಸಂಪೂರ್ಣವಾದ ಮರ್ಯಾದಸ್ಥ ಹಾಗೂ ಗೌರವಾನ್ವಿತ ಮಹಿಳೆಯ ಮೇಲೆ ಕೇಂದ್ರೀಕೃತವಾಗಿ ಆತನ ಮುಖದಲ್ಲಿ ನಸುನಗೆ ಅರಳಿತು ಮತ್ತು ಆ ಮಹಿಳೆಯಲ್ಲಿ ಆತನಿಗೆ ಆಸಕ್ತಿ ಇರುವಂತಹ ಸಂಕೇತ ದೊರಕಿತು. ಆ ಆಜ್ಞಾಪಾಲಕ ದಾದಿಗೆ ದಿವ್ಯವಾಣಿ ತಿಳಿದ ತಕ್ಷಣ ಅವಳು ದೇವರಿಗೆ ಸಾಷ್ಟಾಂಗವೆರಗಿದಳು. ಅದೃಷ್ಟ ಹಾಗೂ ಸೌಭಾಗ್ಯದಿಂದ ದಾದಿಯ ಹುದ್ದೆಗೆ ನೇಮಕವಾಗುವ ಗೌರವ ಪ್ರಾಪ್ತವಾಗಿ ಆಕೆಯ ಸ್ಥಾನಮಾನವು ಆಕಾಶದ ಸಮಾನವಾಯಿತು. ಶ್ಲಾಘನೀಯ ಸಾಕ್ಷಿಯ ಬಹಿರಂಗವಾದ ಮಹಿಮೆಯನ್ನು ವೀಕ್ಷಿಸಿದ ನಂತರ ಹೈಮಾಳ ಅನುಪಮವಾದ ಶಕ್ತಿಯಿಂದ ಆಶ್ಚರ್ಯ ಚಕಿತಳಾಗಿ, ತಾಜುಲ್ ಮಹಜರಾತ್ ಇನ್ನೂ ಹೆಚ್ಚಿನ ಕೃತಜ್ಞತೆಯನ್ನು ದೇವರಿಗೆ

ಸಲ್ಲಿಸಿದಳು. ಹಜರತ್‌ಶಾಹ ಫಿರ್ದೋಸನು ದೇವರಿಗೆ ಕೃತಜ್ಞತಾರ್ಪಣೆ ಮಾಡಿ, ಸಾಮ್ರಾಜ್ಯದ ಶಾಂತಿಯನ್ನು ಲಕ್ಷ್ಯದಲ್ಲಿಟ್ಟುಕೊಂಡು ಏಳು ಖಂಡಗಳ ಇಷ್ಟಾರ್ಥ ಸಿದ್ಧಿಸುವವನನ್ನು; ಅರಸೊತ್ತಿಗೆಯ ವೈಭವ-ಪ್ರತಿಷ್ಠೆಯೊಂದಿಗೆ ಎತ್ತಿಕೊಂಡು ತನ್ನ ತಾಯಿಯ ಬಳಿಗೆ ತಂದನು. ಆಕೆಯು ರಾಬಿಯಾ ಬಸ್ರಿಯಂತಹ ಪವಿತ್ರ ಸ್ತ್ರೀಆಗಿದ್ದಳು. ಆಕೆಯ ಕೃಪೆಯ ನೆರಳಿನಲ್ಲಿ ಆತನು ಪಾಲನೆ-ಪೋಷಣೆ ಹೊಂದಿ, ಅತಿ ಬುದ್ಧಿವಂತನಾಗಿದ್ದನು. ಆಕೆಯನ್ನು ಅಪಾರ ಗೌರವದಿಂದ, 'ಬಡಿ ಸಾಹೇಬ' ಎಂದು ಕರೆಯಲಾಗುತ್ತಿತ್ತು.

"ನಿಮ್ಮ ಪ್ರೀತಿ-ವಾತ್ಸಲ್ಯದ ನೆರಳಿನಲ್ಲಿ ಪೋಷಣೆ ಹೊಂದಿ, ಬೆಳೆದಿದ್ದೇನೆ. ಮಕ್ಕಳು-ಮೊಮ್ಮಕ್ಕಳನ್ನು ಕಂಡಿದ್ದೇನೆ. ಸಾಮ್ರಾಜ್ಯವೆಂಬ ಉದ್ಯಾನದ ಈ ನೂತನ ಸಸಿಯೂ ಸಹ; ಹಜರತ್ ವಾಲಿದಾ ಬುಜುರ್ಗವಾರ್ ಅವರ ಶುಭಕಾರಕ ಲಕ್ಷ್ಯದಿಂದ, ಶಾಶ್ವತವಾದ ಸ್ಥಿರತೆಯೊಂದಿಗೆ ವಿದ್ಯೆಯನ್ನು ಸಂಪಾದಿಸಲಿ. ಅವರ ಶ್ರೇಷ್ಠತೆಯ ಆಶ್ರಯದ ನೆರಳಿನಲ್ಲಿ ಅತ್ಯುನ್ನತ ದರ್ಜೆಯ 'ಸಿದ್ರತುಲ್ ಮುನ್‌ತಹ' (ಏಳನೇ ಆಕಾಶದಲ್ಲಿ ದೇವಚರ ಜಿಬ್‌ರೀಲರ ಅಂತಿಮ ಗಡಿ) ತಲುಪಲಿ ಎಂದು ದೇವರ ಕೃಪೆಯ ಆಕಾಂಕ್ಷೆ ಹೊಂದಿದ್ದೇನೆ.

"ಸಂರಕ್ಷಕನಾದ ದೇವರು ಇದಕ್ಕಾಗಿಯೇ ನನಗೆ ದೀರ್ಘಾಯುಷ್ಯವನ್ನು ನೀಡಿದ್ದಾನೆ! ಜಗತ್ತಿಗೆ ದಾನ-ಕಾಣಿಕೆ ಕೊಡುವ ಮತ್ತು ವಿಜಯ ನೀಡುವ ಈ ಬಾದಶಾಹನ ಸಂಪ್ರದಾಯವನ್ನು ಚನ್ನಾಗಿ ಆಚರಿಸುವ ಪ್ರಯತ್ನಗಳು ಜರುಗಲಿ, ಮೇಲ್ವಿಚಾರಣೆ ಹಾಗೂ ವ್ಯವಸ್ಥೆಯಲ್ಲಿ ಯಾವುದೇ ಕಾರಣದಿಂದ ನಾನು ಕೊರತೆ ಮಾಡಬಾರದು." ಎಂದು ಹಜರತ್ ಬಡಿ ಸಾಹೇಬರು ಇಂತಹ ಬಹುಮಾನ ಮತ್ತು ಅಭಿಮಾನಕ್ಕಾಗಿ ಅಭಿನಂದನೆ ಸಲ್ಲಿಸಿದರು.

ಶಹಭಾಸ್! ಒಳ್ಳೆಯದಾಯಿತು. ವೈಭವ ಹಾಗೂ ಗೌರವದ ಶಾಶ್ವತತೆಗಾಗಿ ಆಕಾಶವು ಇಂತಹ ಹಿರಿಯ ಬಹುಮಾನ ನೀಡಿ; ಪ್ರಾರ್ಥನೆಗಾಗಿ ಎತ್ತಿದ ಕೈಗಳನ್ನು ಸೂರ್ಯ ಮತ್ತು ಚಂದ್ರನ ಹಸ್ತಗಳಿಂದ ಸ್ವೀಕರಿಸಿದ್ದಾನೆ. ಅನಂತ ದಿವ್ಯದರ್ಶನದ ಧ್ವಜವನ್ನು ಸಂಪೂರ್ಣ ಜಗತ್ತಿನ ಮೇಲೆ ಹಾರಿಸಿದ್ದಾನೆ. ಬಾದಶಾಹನ ಭೋಗ-ವಿಲಾಸದ ಅರಮನೆಯ ನಿವಾಸಿಗಳು ಶಿಷ್ಟಾಚಾರದ ಆಭರಣಗಳಿಂದ ಸ್ವಯಂ ಅಲಂಕೃತರಾಗಿದ್ದಾರೆ. ಸುಖ ಜೀವನದ ಮದ್ಯದ ಅಮಲಿನಿಂದ ಬಟ್ಟಲಿನಂತೆ ತುಂಬಿ ತುಳುಕಿ ನಗುತ್ತ ತಮ್ಮ ಸ್ಥಾನದಿಂದ ಮೇಲೆದ್ದು ಹೋಗಿ, ಜಗತ್ತಿನ ಶಯನ ಗೃಹದಲ್ಲಿ ಅತಿ ಸುಂದರ ವ್ಯಕ್ತಿಗಳ ಸೌಂದರ್ಯದ ಬೆಳಕಿನಿಂದ ಪ್ರಾತಃಕಾಲ ನಿದ್ರೆಯಿಂದ ಜಾಗ್ರತರಾಗುವವರ ಹಣೆಯನ್ನು ಅನುಪಮವಾದ ಅಲ್ಲಾಹನ ವಿಧೇಯಕತೆ ಹಾಗೂ ಅನುಸರಣೆಯ ಪ್ರಕಾಶದಿಂದ ಬೆಳಗಿಸಲಾಗಿದೆ. ಜಗತ್ತಿನ ಉದ್ಯಾನವು ಸಂತೋಷದ ಮೋಡಗಳ ಹನಿಗಳಿಂದ ಹಚ್ಚ-ಹಸಿರಾಗಿದೆ. ಹರಿಣಿಯಂತಹ ನಯನವುಳ್ಳ, ಸುಗಂಧಭರಿತ

ಉಡುಪು ಧರಿಸಿದ, ಕೇಸರಿಯ ಸೀಸೆಗಳನ್ನು ಕೈಯಲ್ಲಿ ಹಿಡಿದುಕೊಂಡು, ನಗುತ್ತಿರುವ, ಹೆಚ್ಚು ಅಮಲೇರಿದ, ಬಣ್ಣ ಎರಚುವ ಭಾವ–ಭಂಗಿಯಲ್ಲಿ ಓಡಾಡುತ್ತ; ಸುಂದರಿಯರು ಪರಿಸರಕ್ಕೆ ಕೇಸರಿಬಣ್ಣ ನೀಡಿ, ಸಮ–ವರ್ಣಗೊಳಿಸಿದ್ದಾರೆ.

ಈ ಸುಂದರ ವ್ಯಕ್ತಿಗಳು ಸೂರ್ಯನಂತೆ ದೇವದೂತನನ್ನು ಹೊರಗೆ ತಂದಿದ್ದಾರೆ. ಅರಳಿದ ಮೊಗದವರು ನಾಚಿಕೆಯಿಂದ ಬೆವರಿದ ಮುಖದಿಂದ ಗುಲಾಬಿಯಂತಹ ಮೃದುವಾದ ಮುಖಪರದೆಯನ್ನು ತೆರೆದು ಜಗತ್ತನ್ನು ಲಜ್ಜೆಯ ನಿರಿನಿಂದ ಸ್ವರ್ಗದ ಅಲಂಕೃತವಾದ ಉದ್ಯಾನದಂತೆ ಅತ್ಯುನ್ನತಗೊಳಿಸಿದ್ದಾರೆ. ಮೋಹಕತೆಯ ಉದ್ಯಾನದ ಎತ್ತರದ ನಿಲುವಿನ ಸುಂದರಿಯರು. ಚಂದನ ಮತ್ತು ಕಸ್ತೂರಿ ಲೇಪನದಿಂದ ರಾಜ ಸಮಾನರಂತೆ ಕಾಣಿಸಿಕೊಂಡು, ಆನಂದದ ವೈಶಾಲ್ಯವಾಗಿದ್ದಾರೆ. ಎದೆಯನ್ನು ಪರಿಶುದ್ಧಗೊಳಿಸುವ ಚಂದನವು ಸುಂದರ ಪ್ರೇಯಸಿಯರ ಹೃದಯಗಳಿಗೆ ತಂಪುನೀಡಿ, ಶೃಂಗಾರವನ್ನು ಸುಖಮಯಗೊಳಿಸಿದೆ. ಬೆಳ್ಳಿಯಂತಹ ಕಾಲು ಹಾಗೂ ಬಂಗಾರದಂತಹ ಸೊಂಟ ಉಳ್ಳವರು, ಆತ್ಮಕ್ಕೆ ಶಾಂತಿಕೊಡುವ ಸಂಪ್ರದಾಯಸ್ಥರು ಸಂತೋಷದಿಂದ ಕೈಗಳನ್ನು ಹೊರತೆಗೆದು ಅಲ್ಲಾಡಿಸಿ, ಎಂದಿಗೂ ಅಂತ್ಯವಿಲ್ಲದಂತಹ ಭೋಗ–ವಿಲಾಸ ನೀಡುತ್ತಾರೆ. ಹೂಗಳ ತಟ್ಟೆಯನ್ನು ತಲೆಯ ಮೇಲೆ ಹೊತ್ತುಕೊಂಡು ಆರಾಧಕರು, ಜಗತ್ತಿಗೆ ಆಗಮಿಸಿದ ನೂತನ ವಸಂತದ ಪಾಲನೆ–ಪೋಷಣೆ ಮಾಡುತ್ತಾರೆ. ಪ್ರೇಮಿಗಳು ಸೇವಂತಿ ಹೂವಿನಂತಹ ಕಿವಿಯ ಓಲೆ ಧರಿಸಿ, ತೋಳತೆಕ್ಕೆಯನ್ನು ತೆರೆದು, ಅರ್ಧತೆರೆದ ನಯನಗಳ ರೆಪ್ಪೆಯ ತುದಿಯಿಂದ ನಿರಾಶಾಭರಿತ ಹೃದಯಗಳ ಗಂಟು ಬಿಚ್ಚುತ್ತಾರೆ. ಮತ್ತು ಉದ್ದೇಶದ ಆಭರಣಗಳೊಂದಿಗೆ ಸ್ವಯಂಅಲಂಕೃತರಾಗಿ ದರ್ಶಕರ ಜೊತೆಗೆ ಪಿಸುಮಾತನಾಡುತ್ತಾರೆ. ಗುಂಗುರು ಕೂದಲಿನ, ಬೆಂಕಿಯಂತೆ ಕೆಂಪಾದ ಕಪೋಲ ಉಳ್ಳವರು; ಬಂಗಾರದ ಕಾಲಿನ ಆಭರಣದ (ಪಾಜೇಬ್) ಚಲನೆಯಿಂದ; ಖಲಖ್ ಹಾಗೂ ಘರ್ಖಾರ್‌ದ (ತುರ್ಕಸ್ತಾನದ ನಗರ) ಪ್ರೇಮಿಗಳ ಮಾರ್ಗವನ್ನು ಪ್ರತಿಬಂಧಿಸುತ್ತಾರೆ. ಗಾಲಿಯಾ (ಕಸ್ತೂರಿ ಮತ್ತು ಕರ್ಪೂರದ ಮಿಶ್ರ ಸುವಾಸನೆ / ಪೆನ್ನಂಬರ) ಪರಿಮಳವು; ಚೀನ್ ಹಾಗೂ ಖತಾದ ಪ್ರೇಮಿಗಳಿಂದ ಬರುವಂತಹ ಕಸ್ತೂರಿಯ ಸುಗಂಧದ ಮೇಲೆ ಪ್ರಾಬಲ್ಯವನ್ನು ಸಾಧಿಸಿದೆ. ಖುತನ್‌ದ (ಚೀನಾದ ಒಂದು ನಗರ) ಕಸ್ತೂರಿ ಮೃಗದ ಚೀಲಗಳನ್ನು ಹೊರಗೆ ಹಾಕಿದೆ. ಹುಲ್ಲಿನ ಮಾರ್ಗದ ಮೇಲೆ ಇಟ್ಟಿರುವ ಅಗ್ಗಿಷ್ಟಿಗೆಯಿಂದ ಹೊರಸೂಸುವ ಪನ್ನಂಬರದ ಹೊಗೆಯ; ಸುಗಂಧ ವನಸ್ಪತಿಯ ಕೆಂಪು ತುರಾಯಿಯ ಮೇಲೆ ಚಲಿಸಲಾರಂಭಿಸಿದರೆ: ಆಕಾಶವಾಸಿಗಳ ಉಡುಪುಗಳು ಸುವಾಸನೆಯಿಂದ ಘಮ–ಘಮಿಸುತ್ತವೆ ಮತ್ತು ದೇವಚರರ ಹೃದಯಗಳು ಮುತ್ತುಗಳಿಂದ ಅಲಂಕೃತವಾದ ಕಮಾನುಗಳಲ್ಲಿ ಇಟ್ಟಿರುವಂತಹ ಗುಲಾಬಿ ಶೀಸೆಗಳಂತೆ ಪ್ರಕಟವಾಗುತ್ತದೆ. ಮಂದಹಾಸದ ಮಾರಾಟಗಾರರು ಮದ್ಯದ

ಬಟ್ಟಲಿನಿಂದ ಕುಡಿದು, ಅಮೃತದ ಚಿಲುಮೆಯ ಸಂಕುಚಿತ ಮನಸ್ಸಿಗೆ ಛೀಮಾರಿ ಹಾಕಿ, ಮದ್ಯದ ಬಟ್ಟಲುಗಳನ್ನು ನೀಡುತ್ತಾರೆ.

'ಗೀತೆಗಳನ್ನು ಹಾಡುವವರು ಹೃದಯಗಳನ್ನು ಸಂತುಷ್ಟಗೊಳಿಸಲು ಸ್ವಯಂ ಅಲಂಕೃತರಾಗಿದ್ದಾರೆ. ಮದ್ಯಪಾನ ಮಾಡಿ, ಸಂತೋಷದ ಬಟ್ಟಲಾಗಿದ್ದಾರೆ. ಸ್ವಾರ್ಥಿಪ್ರೇಮಿಗಳ ಗಲ್ಲಗಳ ಪ್ರತಿಬಿಂಬದಿಂದ, ನಿವಾಸಗಳ ಮೇಲೆ ಸೂರ್ಯನ ಹೂಗಳು ಅರಳಿವೆ. ಸೂಚಿಪರ್ಣಿ ಮರದಂತಹ ಎತ್ತರದ ನಿಲುವಿನ, ಬೆಡಗು ಬಿನ್ನಾಣ ಪ್ರದರ್ಶಿಸುವವರು ಹೊರಗೆ ಬಂದಿದ್ದಾರೆ. ಸಂತೋಷದ ಗೀತೆಗಳನ್ನು ಹಾಡುತ್ತಾರೆ. ಸಂತೋಷದಿಂದ ಗೆಳೆಯರನ್ನು ಹೊರಗೆ ಎಳೆದು ತಂದಿದ್ದಾರೆ. ಸುಂದರ ಕಾಲುಗಳಲ್ಲಿ ಬಂಗಾರದ 'ಪಾಜೇಬ್' ಧರಿಸಿ, ಮುಖಗಳನ್ನು ಅನುರಾಗಿಗಳಂತೆ ಶೃಂಗರಿಸಿಕೊಂಡಿದ್ದಾರೆ. ದಕ್ಷಿಣದ ಪ್ರೇಯಸಿಯರಿಂದ, ಕಾಶ್ಮೀರದ ನವಯುವಕರು ಲಜ್ಜಿತರಾಗಿ ಆಸೆಪಡುವುದಿಲ್ಲ. ಒನಪು-ವೈಯ್ಯಾರದ ಪೋಷಕರು, ರೇಷ್ಮೆ ವಸ್ತ್ರಧರಿಸಿದ ಜನರು, ಅಡಿಯಿಂದ ಮುಡಿಯವರೆಗೆ, ಬೆಡಗು-ಬಿನ್ನಾಣದ ಮದ್ಯದಿಂದ ಆವೇಶಭರಿತರಾಗಿದ್ದಾರೆ. ಕಣ್ಣಿಗೆ ಕಾಣದಂತಹ ರಹಸ್ಯವನ್ನು ಸಂರಕ್ಷಿಸುವ ಸುಂದರಿಯರು ಒನಪು-ವೈಯಾರದಿಂದ ಮಾತನಾಡುತ್ತಾರೆ. ಇಂತಹ ಪ್ರಬಲ ಆಸೆಯಿಂದ ಹೂಗಳಂತೆ ಅರಳಿದ್ದಾರೆ. ಎಲ್ಲಿಯವರೆಗೆ ಜಗತ್ತು ಭೋಗ-ವಿಲಾಸದಿಂದ ಸಮೃದ್ಧವಾಗಿದೆಯೋ, ಖುಸ್ರೋ ಗಾಜಿಯ ಬಿರುದು ಶಾಶ್ವತವಾಗಿರುತ್ತದೆ'.

ಸಂಕೋಚ ಮತ್ತು ಅತಿಶಯೋಕ್ತಿಯ ಹೊರತಾಗಿ, ರಾಜಯೋಗ್ಯವಾದ ಸಮಾರಂಭವನ್ನು ಈ ರೀತಿಯಲ್ಲಿ ಆಚರಿಸಲಾಯಿತು. ಒಂದು ವೇಳೆ, ಜಮ್‌ಸೀದ್ ದೊರೆಯು ಇದನ್ನು ಕನಸಿನಲ್ಲಿ ಕಂಡಿದ್ದರೆ, ಆಶಾಭಗ್ನವಾದ ಜನರ ಕಣ್ಣೀರಿನ ಹಾಗೆ, ಆತನ ಕಣ್ಣಿನ ಬಟ್ಟಲಿನಿಂದ ರಕ್ತದ ಹನಿ ಸುರಿಯುತ್ತಿತ್ತು. ಒಂದುವೇಳೆ, ಕೀಖ್‌ಬಾದರಾಜನು ಇಂತಹ ಚಿತ್ತಾಕರ್ಷಕವಾದ ಸಮಾರಂಭವನ್ನು ಕಂಡಿದ್ದರೆ, ತನ್ನ ಅಧಿಕಾರ ಮತ್ತು ಸಂಪತ್ತನ್ನು ನಾಶಗೊಳಿಸಿ, ಕ್ಷಮಾಯಾಚನೆ ಮಾಡುತ್ತಿದ್ದನು. ದೇವದೂತರ ಚೈತನ್ಯಮಯವಾದ ಮೆದುಳನ್ನು ಸಂತೋಷ ಸುಗಂಧಗಳು, ಸ್ವರ್ಗದ ಶೃಂಗಾರದ ಮೇಲೆ ಅಸೂಯೆಪಡುವಂತೆ ಮಾಡುತ್ತವೆ. ಅಭ್ಯರ್ಥಿಗಳ ಅಪೇಕ್ಷೆಯ ವೃಕ್ಷವು ಸಂತೋಷ ಪ್ರಾಪ್ತಿಗಾಗಿ ತನ್ನ ಬೇರುಗಳನ್ನು ನಾಲ್ಕು ಕಡೆ ಓಡಿಸುತ್ತದೆ. ಉದ್ಯಾನದಲ್ಲಿ ಮೊಗ್ಗುಗಳ ಬಂದಿಗೆಯಿಂದ ಹೊರಹೊಮ್ಮುವ ಗುಲಾಬಿ ಮದ್ಯದಿಂದ ಉಂಟಾಗಿರುವ ನಾದವು; ಅಂತ್ಯಗೊಳ್ಳುವಂತೆ; ಅತಿ ಸುಂದರ ಸುರಾಂಗನೆಯರು ಕುಡಿಸುವ ಗುಟುಕು; ಜಗತ್ತಿನ ಮೇಲೆ ಆವರಿಸಿದ ಹೊಸ ವಸಂತವನ್ನು ಪವಿತ್ರಗೊಳಿಸುತ್ತದೆ. ಮಾಣಿಕ್ಯ ಮಿಶ್ರಿತವಾದ ಪಚ್ಚೆವರ್ಣದ ಹೂಜಿಯು, ಮುಂಜಾನೆಯ ಜಟಿಲತೆಯನ್ನು ನ್ಯಾಯ ಸಮ್ಮತಗೊಳಿಸುತ್ತದೆ. ಮತ್ತು ಅಡಗಿದ ಸೂಕ್ಷ್ಮ ವಿಷಯವನ್ನು ಕುರಿತು; ಮಾತನಾಡುವವರ ಮುಖದ ಮಿಂಚಿನ ರಹಸ್ಯವನ್ನು ಬಯಲು ಮಾಡುತ್ತದೆ.

'ಮದ್ಯದ ಭಾವಾವೇಶದಿಂದ ಬೀಗದ ಕೈ ದೊರಕುತ್ತದೆ. ಅದರಿಂದ ಸಂತೋಷದ ಬೀಗ ತೆರೆಯುತ್ತದೆ. ಸುರಾಂಗನೆಯ ಸೆರಗಿನಿಂದ ಕೈಯನ್ನು ಹಿಂತೆಗೆದುಕೊಳ್ಳಬೇಡ, ಆಕೆಯಿಂದ ಶುಭವು ಪ್ರಕಟವಾಗುವವರೆಗೆ'.

ದೇವರ ಪ್ರಶಂಸೆ ಮಾಡಬೇಕು. ದೇವರ ಮುಖಾಂತರ, ಬಾದಶಾಹ ಗಾಜಿಗಿಂತಲೂ ಮೊದಲು, ಆತನ ಕುದುರೆಯ 'ರಿಕಾಬು' ರುಸ್ತುಮ್ ಪಹಲ್ವಾನನ 'ಮರ್ಯಾದೆ' ಆಗಿತ್ತು. ಆತನ ಹಗ್ಗದ ಏಣಿಯ ಸುರಳಿಯು ಪರ್ವೇಜ್ ಮತ್ತು ಖಾರೂನ್‌ರ ಕುತ್ತಿಗೆಯ ಅಲಂಕಾರವಾಗಿತ್ತು. ಸಾಮ್ರಾಜ್ಯದ ಸ್ಥಿರತೆಯ ಉದ್ಯಾನದಲ್ಲಿ ಸೌಭಾಗ್ಯದ ವೃಕ್ಷವು, ವೈಭವದ ಮಾಟದಿಂದ ದಿನನಿತ್ಯ ಫಲದಾಯಕವಾಗುತ್ತದೆ. ಆತನ ಬೆಳಕಿನ ತೀರ್ಮಾನದ ಪ್ರಕಾಶದಿಂದ, ಸೃಷ್ಟಿಯ ಅಸ್ತಿತ್ವದ ರಾತ್ರಿ ಕಳೆಯುವ ಸ್ಥಳದಲ್ಲಿ ಪ್ರತಿಯೊಂದು ಕೂದಲಿನ ಬೇರಿನಿಂದ ತೇಜೋಮಯ ಪ್ರಾತಃಕಾಲದ ಹೂಗಳು ಅರಳುತ್ತವೆ. ಇವುಗಳ ಮುಖಾಂತರ ವೃದ್ಧ ಆಕಾಶಕ್ಕೆ ಅದರ ಹುಟ್ಟಿನಿಂದ ಇಂದಿನವರೆಗೆ ವೈಭವದ ಸಾಮಾನು ದೊರಕಲಿ ಎಂಬ ದೇವರ ಮಹಾನ್ ಯುಕ್ತಿ ಇತ್ತು. ಜನನ ಪ್ರಕಟನೆಯ ರಾಜಮಾರ್ಗದಲ್ಲಿ ಆಸೆ ತುಂಬಿದ ಕಂಗಳು ಹಜರತ್ ಬಾದಶಾಹ ಗಾಜಿಯೊಂದಿಗೆ ಸಂಪರ್ಕ ಹೊಂದಿವೆ. ನಿರೀಕ್ಷೆಯ ಮರುಭೂಮಿಯಲ್ಲಿ ವ್ಯಾಕುಲಗೊಂಡು ಅಲೆದಾಡುವಂತಹ ವ್ಯಕ್ತಿಗೆ ಸುದೀರ್ಘ ಕಾಲದ ನಂತರ ಅನಂತದ ಸಮೀಪದ ದೇವಾನುಗ್ರಹದಿಂದ ಈ ಸಂಪತ್ತು ಪ್ರಾಪ್ತವಾಗಿದೆ. ಮುಂಜಾನೆಯವರೆಗೆ ಕಂಡುಬರುವ ಎರಡು ನಕ್ಷತ್ರಗಳ ಬೆಳಕು ಕಾಣುತ್ತಲೇ ಅಸಹಾಯಕ ಕಾಲುಗಳು; ಗೌರವ ನೀಡುವಂತಹ ಆ ಮಹಾಮಹಿಮನ ಹೊಸ್ತಿಲಿನ ಹತ್ತಿರ ಸಾಷ್ಟಾಂಗವೆರಗುವ ಹಣೆಯನ್ನು ತಂದವು. ಸಾಷ್ಟಾಂಗವೆರಗುವ ಮತ್ತು ಬಾಧ್ಯತೆಯನ್ನು ಸಮರ್ಪಿಸುವ ಸಂಪ್ರದಾಯಗಳನ್ನು ಆದ್ಯತೆಯೊಂದಿಗೆ ಆಚರಿಸಲಾಯಿತು.

'ಆತನ ಗೃಹಕ್ಕೆ ಶಕ್ತಿ-ಸಂಪನ್ನತೆ ಹಾಗೂ ದುರ್ಬಲತೆಗಳಿದ್ದವು, ಆಕಾಶವು ಆತನ ಶಕ್ತಿ ಮತ್ತು ಭೂಮಿಯು ಆತನ ದುರ್ಬಲತೆ ಆಗಿತ್ತು'.

ಬಾದಶಹನ ಶ್ರೇಷ್ಠತೆ ಹಾಗೂ ಮಹಾಘನತೆಯ ಸೂರ್ಯಪ್ರಕಾಶವು ಸಾಮ್ರಾಜ್ಯದ ಉದಯ ಸ್ಥಾನದ ಬೆಳಕನ್ನು ಅಳತೆ ಮಾಡುವ ಸಾಧನವಾಯಿತು. ಭೋಗ-ವಿಲಾಸದ ರಾಗ ಮತ್ತು ನಿಸ್ಸಂಶಯುವಾದವನ್ನು ತಿಳಿದುಕೊಂಡು ನಂತರ ಅದ್ವಿತಿಯನಾದ ದೇವರಿಗೆ ಅನೇಕ ಪ್ರಾರ್ಥನೆಗಳ ಮೂಲಕ ಕೃತಜ್ಞತೆ ಸಲ್ಲಿಸಿದನು. ರಾಜ್ಯಾಡಳಿತೆಯ ಸಿಂಹಾಸನದ ಮೇಲೆ ಆಸೀನರಾಗಿ ಅಭಿಮಾನ ಹಾಗೂ ಘನತೆಯ ಬೈತಲೆಯ ಮೇಲೆ ಸ್ವಾಭಿಮಾನದ ಕಿರೀಟ ಧರಿಸಿದನು. ದೇವರ ಸಹಾಯದಿಂದ ಈ ಬೆಲೆಯುಳ್ಳ ಮುತ್ತಿನ ಹೆಜ್ಜೆ ಇಡುವ ವ್ಯಾಪ್ತಿಯು ಮುಂದೆ ನಡೆಯುವ ವೈಭವದಿಂದ ನಮ್ಮ ಮಹಾನ್ ಪೂರ್ವಜರ ಹೆಸರು ಜಗತ್ತಿನ ಪ್ರತಿಷ್ಠಿತ ರಾಜವಂಶ ವೃಕ್ಷದ

ರಾಜಮುದ್ರೆ ಆಗಿದೆ. ಇಂತಹ ರಾಜನ ಸೌಭಾಗ್ಯದ ಜನನದ ಸಂತಸದ ಸಮಾಚಾರದ ಸಂದರ್ಭದಲ್ಲಿ ಜಗತ್ತಿನ ಭಂಡಾರವನ್ನು ತ್ಯಾಗ ಮಾಡಿ, ಉನ್ನತ ದರ್ಜೆಯ ದೊರೆಗಳ ಸ್ಥಾನಮಾನವನ್ನು ಹೆಚ್ಚಿಸುವ ಫಲಿತಾಂಶವನ್ನು ಬಹಿರಂಗಪಡಿಸುವ ವ್ಯವಸ್ಥೆ ಮಾಡಲಾಗಿದೆ. ಸಂಕಲ್ಪದ ಪರಿಶುದ್ಧತೆ ಮತ್ತು ವಿಶ್ವಾಸದ ಪ್ರಾಮಾಣಿಕತೆಯ ಸಮಾಚಾರವು, ಅಭಿಲಾಷೆಗಳನ್ನು ಪ್ರೇರೇಪಿಸುವವರ ಆಸೆಗಳ ಕ್ಷೇತ್ರಗಳಿಗೆ ಕೊಡುಗೆಗಳ ಮಳೆಯನ್ನು ತಂದು, ಸಸ್ಯಶಾಮಲಗೊಳಿಸುತ್ತದೆ. ಹೃದಯಗಳನ್ನು ಸಂತುಷ್ಟಗೊಳಿಸುವ ಶಾಸನಗಳು ನೂತನವಾಗಿವೆ ಮತ್ತು ಚೇತೋಹಾರಿಯಾದ ಆಹ್ವಾನವನ್ನು ತೀವ್ರತೆಯಿಂದ ನೀಡಲಾಗುತ್ತದೆ. ಕೃಪೆಯ ವಾದ್ಯವಾದಕರು ಕೆಂಪುವರ್ಣದ ಮದ್ಯದ ಅಮಲಿನಲ್ಲಿ ಮತ್ತರಾಗಿ, 'ಚಂಗ್' ಎಂಬ ಪ್ರಸಿದ್ಧ ವಾದ್ಯವನ್ನು ನುಡಿಸುತ್ತಾರೆ. ತಂಬೂರಿಯ ಮಾಂತ್ರಿಕತೆಯನ್ನು ಜಾಗ್ರತಗೊಳಿಸುವವರು ಮೊಗ್ಗುಗಳ ಸುತ್ತಲೂ ಹಾರಾಡಿ, ಗೀತೆಗಳನ್ನು ಹಾಡುವ ಬುಲ್‌ಬುಲ್ ಪಕ್ಷಿಯಂತಹ ಸ್ವರದ ಜಾಲವನ್ನು ಹರಡಿ, ಉಪಕಾರ ಮಾಡುವ ವ್ಯಕ್ತಿಗಳ ಎದುರಿಗೆ ನೈಪುಣ್ಯತೆಯೊಂದಿಗೆ ಅತಿ ಸುಂದರ ಗೀತೆಗಳ ಸೆರಗನ್ನು ಹಾಸಿದ್ದಾರೆ. ವಾದ್ಯದ ಗೆಜ್ಜೆಗಳು ದೇವರ ಮಹಿಮೆಯನ್ನು ಸಮ್ಮತಿಸುತ್ತವೆ. ಆದರೆ ಅಕಸ್ಮಾತ್ತಾಗಿ ಸುಂದರ ಗಾಯಕರ ಎದುರಿಗೆ ಆಸೀನರಾದವರು ಸ್ವೇಚ್ಛಾಚಾರದಿಂದ ವೃತ್ತವನ್ನು ಕಲುಷಿತಗೊಳಿಸುತ್ತಾರೆ. ಹವಳದಂತಹ ತುಟಿಯುಳ್ಳ ಸುಂದರಿಯರ ಕಾರ್ಯದರ್ಶಿಗಳು ಸ್ವರಗಳಲ್ಲಿ ಲಾಲಿತ್ಯವನ್ನು ತರಲು (ಹವಳದ ಟೊಂಗೆಯನ್ನು ಪಗಡೆ ಆಟದ ದಾಳದಂತೆ) ಕೊಳಲಿನ ರಂಧ್ರವನ್ನು ತಯಾರಿಸಿದ್ದಾರೆ. 'ಕಾನೂನ್' ಎಂಬ ಪಿಯಾನೊದಂತಹ ವಾದ್ಯಬಾರಿಸುವ ತಜ್ಞರು, ತುರ್ಕಿದೇಶದ ನೂತನ ಗೀತೆಯಿಂದ, ತಾಳ್ಮೆ ಮತ್ತು ಬುದ್ಧಿವಂತಿಕೆಯ ನಗರವನ್ನು ಧ್ವಂಸಗೊಳಿಸಲು, ಸೊಕ್ಕಿದ ಕುದುರೆ ಮರಿಯನ್ನು ಓಡಿಸುತ್ತಾರೆ. ಹೊಸ ಹರಿಣಿಗಳು ಮಾಂತ್ರಿಕ ಹಾಗೂ ವಂಚಕ ಭಾವ-ಭಂಗಿಯಿಂದ, ಗಝುಲ್ ಹಾಡಿ, ತಾಳ್ಮೆಯ ಗುರಿಯ ಮೇಲೆ ಹಾರಿ, ಅದನ್ನು ಓಡಿಸುತ್ತವೆ. 'ಚಗಾನಾ' ಎಂಬ ವಾದ್ಯದ ಮೇಲೆ ಬೀಳುವ ಕೈಯ ಹೊಡೆತವು ಎಲ್ಲರೂ ನರ್ತಿಸುವಂತೆ ಸಜ್ಜುಗೊಳಿಸುತ್ತದೆ. ಸಂಗೀತಗಾರನ ಧ್ವನಿಯು ಜೀವನದ ಏರಿಳಿತವನ್ನು ಅಂತ್ಯಗೊಳಿಸುವಷ್ಟು ಸಾರಂಗಿಯ ತಂತಿಗಳು ಗೀತೆಗಳ ಸಾಗರದ ನೀರುಗುಳ್ಳೆ ಆಗಿ ಸಂತೋಷ ನೀಡುತ್ತವೆ.

'ಗೀತೆ ಹಾಡುವವನು ವಾದ್ಯದಲ್ಲಿ ಇಷ್ಟೊಂದು ಮಗ್ನನಾಗುತ್ತಾನೆ. ಆತನ ಉಡುಪಿನ ಪ್ರತಿಯೊಂದು ಎಳೆಯಿಂದ ಗೀತೆ ಹೊರಹೊಮ್ಮುತ್ತದೆ'.

ಸಭೆಯಲ್ಲಿ ಲಘು ಹಾಸ್ಯದ ಪರಾಮರ್ಶಕರು, ಗುಲಾಬಿ ಎಸಳಿನಂತಹ ತುಟಿಯುಳ್ಳವರ ಒನಪು-ಒಯ್ಯಾರವನ್ನು ಅವರ ಹೊಸತನ ಮತ್ತು ಸೌಂದರ್ಯದಿಂದ ಮಾಪನ ಮಾಡುತ್ತಾರೆ. ವರ್ಣರಂಜಿತ ವ್ಯಕ್ತಿಗಳು, ವಿಷಯ ಮತ್ತು ಅರ್ಥದ ಉದ್ಯಾನಕ್ಕೆ ಸ್ಪಷ್ಟತೆಯ ಗಾಳಿ ನೀಡಿ, ಪ್ರಶಂಸೆಯ ಹೂಗಳು ಸುರಿಯುವಂತೆ ಮಾಡುತ್ತಾರೆ.

ಪರಿಪೂರ್ಣತೆಯ ಕ್ಷೇತ್ರದ ಅಮೌಲ್ಯವಾದ ಮುತ್ತುಗಳು. ಬುದ್ಧಿವಂತಿಕೆಯ ಕೌಶಲ್ಯದ ಮಿಂಚಿನಿಂದ ಅವರನ್ನು ಎಲ್ಲರೂ ಅಪೇಕ್ಷಿಸುವಂತೆ ಮಾಡಿಕೊಳ್ಳುತ್ತವೆ. ಜಗತ್ತನ್ನು ಪ್ರಕಾಶಮಾನಗೊಳಿಸುವ ಈ ಸಂತೋಷ ಕೂಟಕ್ಕಾಗಿ ಬಡವರ ಅಗತ್ಯಗಳು ಪೂರ್ಣಗೊಂಡು, ಅವರ ಜೇಬು ಮತ್ತು ಸೆರಗು, ಸಾಗರ ಹಾಗೂ ಗಣಿ ಆಗಿವೆ ಎನ್ನುವಷ್ಟು ಸಂಪತ್ತು/ಮುತ್ತುಗಳನ್ನು ನಿವಾಳಿಸಲಾಗುತ್ತದೆ. ಪ್ರತಿಯೊಂದು ಸೆರಗಿನಲ್ಲಿದ್ದಂತಹ ಅಮೌಲ್ಯವಾದ ಮುತ್ತುಗಳು ಮತ್ತು ಮಿನುಗುವ ರತ್ನಗಳ ಕಿರಣಗಳು, ಗಾಳಿಯಲ್ಲಿ ದಿಗ್ಭ್ರಮೆಗೊಳಿಸುವ ಕಣಗಳಂತೆ ಮಿಂಚು ಹರಡುತ್ತವೆ. ಮಾಣಿಕ್ಯ, ಪಚ್ಚೆ ಹಾಗೂ ವಜ್ರದ ನೆರಳಿನಿಂದ ಭೂಮಿ ಮತ್ತು ಸಾಗರಗಳು ಸಂಪೂರ್ಣವಾಗಿ ಅಲಂಕೃತವಾದ ಸಂತೃಪ್ತಿಯ ಊಟದ ಹಾಸನ್ನು ನೀಡಲಾಗಿದೆ. ಅಚ್ಚುಮೆಚ್ಚಿನ ಊಟದ ಹಾಸು ಹರಡಿ, ಹದಿನೆಂಟು ಸಾವಿರ ಪ್ರಕಾರದ ರುಚಿಕರ ಆಹಾರದ ರಾಶಿಯನ್ನು ಹಾಕಲಾಗಿದೆ. ತಾಜಾ ಹಣ್ಣುಗಳು ಸಿಹಿಯು ಪ್ರೇಯಸಿಯರ ಸಿಹಿಯಾದ ತುಟಿಗಳ ಸಂದರ್ಶನದ ಕಾಮನೆಯಿಂದ, ವಿರಹದ ವಿಷ ಸೇವಿಸಿದಂತಹ ಜನರ ಮುದುಡಿದ ಬಾಯಿಯನ್ನು ತೆರೆದಿದೆ. ಮಧುರ ಭಾವ-ಭಂಗಿಯ ಮಾಧುರ್ಯವನ್ನು ಅಪೇಕ್ಷಿಸುವವರು, ಅಲೆದಾಡಿ ಸುಖವನ್ನು ಪಡೆಯುತ್ತಾರೆ. ಮತ್ತು ಅವರ ಚಂಚಲವಾದ ಹೃದಯಕ್ಕೆ ಶಾಂತಿ ದೊರಕುತ್ತದೆ. ಜಗತ್ತನ್ನು ಗೆದ್ದು, ಕೊಡುಗೆಯ ಉಪಕಾರ ಸ್ಮರಣೆಯು ಆರಂಭವಾಗಿ ರೇಷ್ಮೆ ಬಟ್ಟೆ ಧರಿಸಿರುವ ಆಕಾಶವು ನಿಲುವಂಗಿ ಧರಿಸಿದವರ ಸೆರಗು ಹಿಡಿಯಲು ಸಾಧ್ಯವಾಗುವಂತೆ ಜನರಿಗೆ ಸಂಪತ್ತಿನ ಉಡುಗೊರೆ ನೀಡಲಾಯಿತು. ಭಾಗ್ಯಶಾಲಿ ಶಿರಗಳ ಮೇಲೆ ಗೌರವದ ಕಿರೀಟ ಇಡಲಾಯಿತು. ಸಂತೋಷ ತುಂಬಿದ ಜಗತ್ತಿನ ಜನರಲ್ಲಿ ಅಭಿನಂದನೆಯನ್ನು ಹೀಗೆ ಸಲ್ಲಿಸಲಾಯಿತು. ಪ್ರೇಮ ತುಂಬಿದ ಹೃದಯಗಳ ಶೂನ್ಯತೆಯು, ಪ್ರೇಮಿಗಳ ಸಂದರ್ಶನ ಸಂಪತ್ತಿನಿಂದ ವಿನೂತನವಾಯಿತು.

'ಜಗತ್ತು ಭೋಗ-ವಿಲಾಸದಿಂದ ಈ ತೆರನಾಗಿ ಆನಂದ ಹೊಂದಿದೆ. ಮಕ್ಕಾದಲ್ಲಿ ಝುಮ್‌ಝುಮ್ ಭಾವಿಯ ಜಲದಿಂದ ಹರ್ಷಗೊಳ್ಳುವಂತೆ'.

ಸಾಮ್ರಾಜ್ಯವನ್ನು ವಿಸ್ತರಿಸುವ ಪ್ರಸಿದ್ಧ ಮಂತ್ರಿಗಳು ಮತ್ತು ವಿಜಯ ಸಂಪಾದನೆ ಮಾಡುವ ಸೈನ್ಯದ ಅತ್ಯುನ್ನತ ಗೌರವಾನ್ವಿತ ಸರದಾರರು ಅಭಿನಂದನೆಯ ಶಿಷ್ಟಾಚಾರಗಳೊಂದಿಗೆ ಹಜರತ್ ಬಾದಶಾಹ ಗಾಜಿಯ ಜನನದ ಅಭಿನಂದನೆ ನೀಡುವ ಸಲುವಾಗಿ, ಬಾದಶಾಹ ಫಿರ್ದೋಸನ ಆಸ್ಥಾನವನ್ನು ತಲುಪಿದರು. ಮಂತ್ರಿ ಮಾಗಧರು, ಧರ್ಮ ಮತ್ತು ಸಂಪತ್ತಿನಲ್ಲಿ ವಿಶ್ವಾಸ ಉಳ್ಳವರು ಅಮೌಲ್ಯ ಉಡುಗೊರೆ ಪಡೆಯುವ ಸನ್ಮಾನ್ಯತೆಯಿಂದ ಸಪ್ತಋಷಿ ನಕ್ಷತ್ರಗಳ ಸಮೂಹದವರೆಗೆ ಶಿರಗಳನ್ನು ಎತ್ತರಿಸಿಕೊಂಡರು. ಸುವಾರ್ತೆಯನ್ನು ಮಾಪನ ಮಾಡುವ ನಗಾರಿಯ ಧ್ವನಿಯು ಪವಿತ್ರ ನಗರದ ದೂರದೃಷ್ಟಿಯ ವ್ಯಕ್ತಿಗಳಿಗೆ ದರ್ಶನದ ಭಾಗ್ಯ ಪಡೆಯುವ ಸುವಾರ್ತೆಯನ್ನು ತಿಳಿಸಿತು. ಮಹಾರಾಜನಿಗೆ ಸಮೀಪವರ್ತಿಗಳಾದ ಕಲಾಕಾರರು

ಪ್ರತಿಯೊಂದು ಕೌಶಲ್ಯದಲ್ಲಿ ತಜ್ಞರಾಗಿದ್ದರು. ಅವರು ತಮ್ಮ ಪರಿಜ್ಞಾನದ ಕೋಲಾಹಲವನ್ನುಂಟು ಮಾಡಿದರು. ಅವರು ವಿಚಾರದ ಕಂಪಾಸನ್ನು ಹೃದಯದ ಬಿಂದುವಿನ ಸುತ್ತಲೂ ತಿರುಗಿಸಿ ಆಕಾಶ ಮತ್ತು ನಕ್ಷತ್ರಗಳ ನಿಜಸ್ಥಿತಿಯಿಂದ ಪರಿಚಿತರಾದರು. ಜಗತ್ತಿಗೆ ಬೆಳಕು ನೀಡುವ ಸೂರ್ಯನಿಗೆ ಗ್ರಹೋನ್ನತಿ ಮಾಪಕದಿಂದ ಪರೀಕ್ಷಿಸಿ, ಹುಮಾಯೂನ್ ಪಕ್ಷಿಯಂತಹ ಅತ್ಯುನ್ನತ ಅದೃಷ್ಟದ ಮತ್ತು ಪ್ರವಾದಿಯಂತಹ ಸ್ವಭಾವ ಹೊಂದಿದ ಬಾದಶಹನ ಸ್ಥಾನ–ಮಾನವನ್ನು ವೀಕ್ಷಣಾಲಯದಲ್ಲಿ ಇಷ್ಟೊಂದು ಚೆನ್ನಾಗಿ ತಿಳಿದುಕೊಂಡಿದ್ದರು. ಅವರಿಗಿಂತಲೂ ಮೊದಲಿನ ಖಗೋಲ ತಜ್ಞರು ಅರಿಯಲು ಅಸಮರ್ಥರಾಗಿದ್ದರು. ಊಹನೆ, ಪಂಚಮಹಾಭೂತ ಹಾಗೂ ಆಕಾಶಕಾಯಗಳ ಅನುಸಾರವಾಗಿ ಪಂಚಾಂಗವನ್ನು ಪರಿಶೀಲಿಸಿ, ಬಾದಶಾಹನ ಜನ್ಮ ಪತ್ರಿಕೆಯ ಮಾದರಿಯನ್ನು ತಯಾರಿಸಲಾಗಿದೆ. ಈ ಜನ್ಮ ಪತ್ರಿಕೆಯು ವೈಭವ ಮತ್ತು ಲಾವಣ್ಯದ ಇಂತಹ ಸಾಕ್ಷಿಯ ಸೌಭಾಗ್ಯದ ಸೂರ್ಯನಿಂದ ಬೆಳಗುವ ಹೃದಯಗಳ ಮಿಂಚಿನ ಜನನದ ಸ್ಥಾನವನ್ನು ದೇವರ ಪ್ರಕಾಶವು ಉದ್ಭವಿಸುವ ಸ್ಥಳವೆಂದು ದೃಢಪಡಿಸಲಾಗಿದೆ. ಅದರಿಂದ ವೀಕ್ಷಣೆಯ ಮೇಲೆ ಭರವಸೆ ಇಡುವಂತಹ ಪದ್ಧತಿಯ ದೇವಾನುಗ್ರಹದಿಂದ ಇಷ್ಟಾರ್ಥ ಸಿದ್ಧಿಯ ಅತ್ಯುನ್ನತ ಸ್ಥಾನವನ್ನು ತಲುಪಬಹುದಾಗಿದೆ. ಆನಂತರ ದೇವರ ಕೃಪೆಯು ಜನತೆಯ ಪರಿಸ್ಥಿತಿಯೊಂದಿಗೆ ಸೇರಿ, ಹಜರತ್ ಬಾದಶಾಹ ಗಾಜಿಯ ಸುದೈವದ ಶಕ್ತಿಯು ವೀಕ್ಷಣಾಲಯದ ವೀಕ್ಷಕರ ಸಹಾಯಕವಾಗುತ್ತದೆ. ಸೂಕ್ಷ್ಮತೆಗಳನ್ನು ಬರೆಯುವ ಲೇಖನಿಗೆ ಪಂಚಾಂಗದ ಶ್ರೇಷ್ಠತೆಯ ಆಭರಣಗಳಿಂದ ದಿನಂಪ್ರತಿ ವಿಕಾಸವಾಗುವ ಸೌಂದರ್ಯವು ದೊರಕುತ್ತದೆ. ಮತ್ತು ಸುದೈವದ ಜನ್ಮ ಪತ್ರಿಕೆಯಲ್ಲಿ ದಿವ್ಯವಾಣಿ ಹಾಗೂ ಅಂತರ್ಜ್ಞಾನವಿರುತ್ತದೆ. ದೇವರಜ್ಞಾನ ಹೊಂದಿದವರಿಗೆ ಅವರ ಪದ್ಧತಿಯನ್ನು ಹೆಚ್ಚಿಸುವಂತಹದ್ದಾಗಿ ಎಲ್ಲರ ಎದುರಿಗೆ ಜ್ಞಾನ ಮತ್ತು ಒಳದೃಷ್ಟಿಯ ಬಾಗಿಲನ್ನು ತೆರೆಯಲಾಗಿದೆ.

ಬಾದಶಾಹ ಫಿರ್ದೋಸನಿಗೆ ಮಹಾರಾಜಾ ಗಾಜಿಯ ಸುದೈವದ ದರ್ಜೆಯ ಸಮಾಚಾರ ತಿಳಿದಾಗ ಧರ್ಮರಕ್ಷಕನಾದ ಈ ದೊರೆಯ ಆಳ್ವಿಕೆಯಲ್ಲಿ ಯಾವುದೇ ಆಡಳಿತಗಾರನು, ತೆರಿಗೆ ಸಂದಾಯ ಮಾಡದೇ ಗೌರವದಿಂದ ತಲೆ ಎತ್ತಿ ನಿಲ್ಲಲಾರನು. ಯಾವುದೇ ದೇಶವು ಆಕ್ರಮಣ ಅಥವಾ ಹೋರಾಟದ ಉದ್ದೇಶದಿಂದ ಅಡಗುದಾಣದಿಂದ ತಲೆಯೆತ್ತಿ ನಿಂತರೆ, ಅದು ತನ್ನ ಗೌರವದಿಂದ ವಂಚಿತವಾಗಿ, ಮರುಭೂಮಿಯ ಮಾರ್ಗದಲ್ಲಿ ಪಲಾಯನ ಮಾಡಬೇಕಾಗುತ್ತದೆ. ಒಂದು ವೇಳೆ ಆಕಾಶವು ಆತನ ಹುಬ್ಬಿನ ಮೇಲೆ ಒಂದು ನೆರಿಗೆಯನ್ನು ಕಂಡರೆ, ಬೈತಲೆಯಿಂದ ತಲೆಯ ಹಿಂಭಾಗದವರೆಗೆ, ನೂತನ ಚಂದ್ರನ ಕೈಯಿಂದ ಹೊಡೆಯುತ್ತದೆ. ಅತ್ಯುನ್ನತ ದರ್ಜೆಯ ಸನ್ಮಾನ್ಯನ ಸೌಭಾಗ್ಯದ ಉನ್ನತಿಗೆ ಸಂಬಂಧಿಸಿದ ಸ್ಥಾನ–ಮಾನದಿಂದ ಬಾದಶಾಹ ಫಿರ್ದೋಸನು ಜಗತ್ತಿನಲ್ಲಿ ಎಲ್ಲೆಡೆಗೆ ಸಂತೋಷವನ್ನು ಹರಿಡಿದ್ದಾನೆ.

ದೇವರ ಪ್ರಶಂಸೆ ಮತ್ತು ಕೃತಜ್ಞಾರ್ಪಣೆಯ ಧ್ವಜವನ್ನು ಹಾರಿಸಿ, ಸಾಮ್ರಾಜ್ಯದ ಈ ಕಣ್ಣಿನ ವಿಜಯ ಹಾಗೂ ಯಶಸ್ಸಿನ ಶಾಶ್ವತತೆಗಾಗಿ ಪ್ರಾರ್ಥನೆಯ ಕೈ ಎತ್ತಿದ್ದಾನೆ. ಆತನು ತನ್ನ ಎದೆಯನ್ನು ಬಾದಶಾಹ ಗಾಜಿಯ 'ವಿಶ್ರಾಂತ ಧಾಮ' ಎಂದು ಪರಿಗಣಿಸಿ; ವಾಸ್ತವಿಕತೆಯನ್ನು ತಿಳಿಯುವ ಹೃದಯದ ಆಸನದ ಮೇಲೆ, ಪ್ರೀತಿ-ಪ್ರೇಮದ ನಿಜಸ್ಥಿತಿಯನ್ನು ಬರೆದುಕೊಂಡಿದ್ದಾನೆ. ಪ್ರವಾದಿಯ ಸಹನಾಮದ ಮೂಲಕವಾಗಿ, ಆತನ ಪ್ರವಾದಿತ್ವದಲ್ಲಿ ಉಭಯ ಜಗತ್ತುಗಳು ಬರುತ್ತವೆ. ಏಕತ್ವದ ಕಿರೀಟವನ್ನು ಬಾದಶಾಹ ಗಾಜಿಯ ಶಿರದ ಮೇಲೆ ಇಡಲಾಗಿದೆ. ಮೊಹಮ್ಮದರಂತಹ ಚಾರಿತ್ರ ಹೊಂದಿದ ಬಾದಶಾಹನ 'ಅಸ್ತಿತ್ವದ ಮುತ್ತು', ಸ್ಥಾನ ಮತ್ತು ತೇಜೋಮಯ ಧರ್ಮದ ಬೇರಿಗೆ ಸುದೃಢತೆ ಲಭಿಸಿತು. ಕತ್ತಲೆಯಲ್ಲಿ ಮುಳುಗಿದ ನಾಸ್ತಿಕತೆಯು ನಾಶವಾಗುತ್ತ ಸಾಗಿತು.

'ಬಾದಶಾಹ ಗಾಜಿಯ ಜನನದ ಪುಣ್ಯದಿಂದ ಜಗತ್ತು ಹರ್ಷಭರಿತವಾಗಿದೆ. ಸೂರ್ಯನ ದೀಪವು ಬಾದಶಾಹನ ಕೆನ್ನೆಯಿಂದ ಉದ್ಯಾನವಾಗಿ ಪರಿಣಮಿಸಿದೆ'.

ನಿರಂತರವಾಗಿ, ನೆರೆ-ಹೊರೆಯ ದೇಶಗಳಿಂದ ಸಂದೇಶಗಳು ಬರುತ್ತವೆ. ಜಗತ್ತಿನ ಇತರ ದೊರೆಗಳು ವಿವಿಧ ಪ್ರಕಾರದ ಕಾಣಿಕೆ ಹಾಗೂ ರಾಜಮಾನ್ಯವಾಗದ ಇನಾಮುಗಳನ್ನು ಬಾದಶಾಹ ಫಿರ್ದೋಸನಿಗೆ ಕಳುಹಿಸುತ್ತಾರೆ. ಅಭಿನಂದನೆಗೆ ಅಗತ್ಯವಾದ ವಸ್ತುಗಳ ರೂಪದಲ್ಲಿ ಹಜರತ್ ಬಾದಶಾಹ ಗಾಜಿಯ ವಿಧೇಯತೆಯ ಸಾಂಪ್ರದಾಯಗಳ ಆಜ್ಞಾಪಾಲನೆ ಆಗುತ್ತದೆ. ಗೌರವ ಮತ್ತು ಸಂಪತ್ತನ್ನು ದೃಢಪಡಿಸಲು ಹಾಗೂ ಪ್ರತಿಕಾರದ ಮಟ್ಟವನ್ನು ತಲುಪಲು ಬುದ್ಧಿವಂತಿಕೆ ಮತ್ತು ದೂರದರ್ಶಿತ್ವವಿದೆ.

ಇಷ್ಟರವರೆಗೂ, ಬ್ರಾಹ್ಮಣರು ದೃಢವಾದ ಮತ್ತು ವಿಶ್ವಾಸಪೂರ್ಣ ಮಾರ್ಗದ ಮೇಲೆ ಇದ್ದಾರೆ.

'ಆತನ ಅರಮನೆಗೆ ಹಗಲು-ರಾತ್ರಿಗಳು ಸಾಷ್ಟಾಂಗ ನಮನ ಸಲ್ಲಿಸುತ್ತಿದ್ದವು. ಸೂರ್ಯ ಹಾಗೂ ಚಂದ್ರನನ್ನು ಒಳಗೊಂಡು ಕಳಬಾದ ದಿಕ್ಸೂಚಿಯಾದ ಆಕಾಶವೂ ಸಹ'.

ಹೊಸ ಪ್ರಕಾರದಲ್ಲಿ ಕವಿತೆ ರಚಿಸುವವರ ಲೇಖನಿಯ ತುದಿಗೆ 'ಹುಮಾ' ಪಕ್ಷಿಯ ಕೀರ್ತಿಯು ಪ್ರಾಪ್ತವಾಗಿದೆ. ಅವರ ಲೇಖನಿಯ ಬಿಂದುಗಳು, 'ಖಾಫ್ರ್' ಪರ್ವತದ ಮೇಲೆ ವಾಸಿಸುವ 'ಅಂಬಾ ಪಕ್ಷಿ' ಯಂತೆ ಉನ್ನತ ಆಕಾಶದ ಮೇಲೆ ಅನುಚಿಂತನೆಯ ಆಸನದ ಮೇಲೆ ಕುಳಿತು ಮಧು-ಶಾಲೆಯ ಧರ್ಮಿಷ್ಠ ಜನರ ಜೊತೆಗೆ ದಿವ್ಯಜ್ಞಾನದ ಮದ್ಯಸೇವನೆ ಮಾಡುತ್ತಾರೆ. ಅವರು ತಮ್ಮನ್ನು ಅಪೇಕ್ಷಿಸುವವರ ಪ್ರಶಂಸೆಯಲ್ಲಿ ಅತಿಶಯೋಕ್ತಿ ಮತ್ತು ಅಹಂಕಾರವನ್ನು ವ್ಯಕ್ತಪಡಿಸುತ್ತಾರೆ. ಬಾದಶಾಹ ಗಾಜಿಯ ಗುಣಗಾನದಲ್ಲಿ ಅತಿಶಯೋಕ್ತಿ ಹಾಗೂ ಅಹಂಕಾರದ ಕೌಶಲ್ಯ ಪ್ರದರ್ಶನವು ಕಾವ್ಯದ ದರ್ಜೆಯನ್ನು ತುಚ್ಛಗೊಳಿಸಿದಂತಾಗುತ್ತದೆ. ನಿರೂಪಿತವಾದ ನುಡಿಗಳು

ಸತ್ಯವಾಗಿರಬೇಕು. ಈ ನುಡಿಗಳ ಸತ್ಯದ ಸಾಕ್ಷಿಯು ಪ್ರವಾದಿಯಂತಹ ಸ್ವಭಾವ ಹೊಂದಿದ ಬಾದಶಾಹ ಗಾಜಿಯನ್ನು ಕುರಿತು ಕೋಲಾಹಲ ಸೃಷ್ಟಿಸುವಂತಹ ಗ್ರಂಥವಾಗಿದೆ. ಅದರ ಶಿರೋನಾಮೆಯನ್ನು ಹಜರತ್ ಬಾದಶಾಹನು 'ಮೊಹಮ್ಮದ ನಾಮಾ' ಎಂದು ಕರೆದು ಶಾಶ್ವತವಾದ ಕೀರ್ತಿಯನ್ನು ನೀಡಿದ್ದಾನೆ. ಭೂಮಿ ಹಾಗೂ ಆಕಾಶದ ಭಂಡಾರಗಳ ಬಾಗಿಲನ್ನು ನಮ್ಮೆಲ್ಲರಿಗಾಗಿ ತೆರೆದಿದ್ದಾನೆ.

'ದಕ್ಷಿಣದ ಅರಸನ ಸೌಭಾಗ್ಯದ ಜನ್ಮಪತ್ರಿಕೆ, ಬಾದಶಾಹ ಗಾಜಿಯ ಬಿರುದು, 'ಸಪ್ ಸಿಕನ್' (ಅರ್ಥಾತ್, ವೈರಿ ಸೈನ್ಯದ–ಪಂಕ್ತಿಗಳನ್ನು ಭಗ್ನಗೊಳಿಸುವವ), ಆತನ ಕೃಪಾ ಕಟಾಕ್ಷಕ್ಕೆ ಪಾತ್ರನಾದ ವ್ಯಕ್ತಿಯು ಶ್ರೀಮಂತನಾಗುತ್ತಾನೆ. ಆತನ ಚಲನೆಯಿಂದ ಸೌಭಾಗ್ಯದ ಪ್ರಾತಃಕಾಲದಲ್ಲಿ ಉಸಿರು ತುಂಬುತ್ತದೆ. ಆತನ ವಿವರಣ ಪಟ್ಟಿಯು ಸತ್ಯವಂತರ ಕಾರ್ಯಾಗಾರವಾಗಿದೆ. ಆತನು ಮಾಡಿದ ಪ್ರತಿಯೊಂದು ಕಾರ್ಯವು ನೂರಾರು ದೀರ್ಘ ಕಥೆಗಳ ಅಲಂಕಾರವಾಗುತ್ತದೆ'.

ಹಜರತ್ ಬಾದಶಾಹನ ಸಿಂಹಾಸನಾರೋಹಣ ಮತ್ತು ಆಡಳಿತ ನಿರ್ವಹಣೆಯು ಜಗತ್ತನ್ನು ಪ್ರಕಾಶ ಮಾನಗೊಳಿಸುವಂತಹ ಸಮಾರಂಭವಾಗಿದೆ. ಪವಿತ್ರವಾದ ವೈಭವ–ವಿಲಾಸದ ಕಿರೀಟ ಧರಿಸಿ ಮಿಂಚುವಂತಹ 'ಲೋಕಪಾಲಕನ ಮುತ್ತು' ಸಿಂಹಾಸನಾರೋಹಣ ಮಾಡಿದ್ದಾನೆ. ಆತನ ಮಿನುಗುವ ಹಣೆಯಿಂದ ಹೊರಹೊಮ್ಮುವ ಪ್ರವಾದಿಯಂತಹ ಪವಾಡ ಸದ್ರಶವಾದ ಬೆಳಕನ್ನು ಕಂಡು ಇದು ದೇವರ ಬೆಳಕಿನ ಉಗಮ ಸ್ಥಾನವಾಗಿದೆ ಎಂದು ಪ್ರಕಾಶಮಾನವಾದ ದೃಷ್ಟಿ ಹೊಂದಿದವರು ಅರಿತುಕೊಂಡರು. ಆತನ ಅತ್ಯುನ್ನತ ದರ್ಜೆಯ ದರ್ಬಾರಿನ ದೀವಟಿಗೆಯ ನೆರಳು, ದಿವ್ಯಜ್ಞಾನದ ಮಾರ್ಗದಲ್ಲಿ ನಡೆಯುವವರಿಗೆ ಕಾಆಬಾದ ಸುತ್ತಲೂ ತಿರುಗಲು ತಲುಪಿಸಿತು. ಆತನ ಪವಾಡದ ವಿಜಯ ಧ್ವಜಗಳ ಲಾವಣ್ಯದಿಂದ ನಾಲ್ಕು ಮೂಲವಸ್ತುಗಳು ಅಲಂಕೃತವಾದವು. ಮತ್ತು ಆತನ ಚಿಲುಮೆಯಂತಹ ಕರುಣೆಯಿಂದ ಆರು ದಿಕ್ಕುಗಳ ಉದ್ಯಾನಗಳು ಅರಳಿ, ಹೃದಯದ ಮೊಗ್ಗುಗಳನ್ನು ಶೃಂಗರಿಸಿದವು. ಆತನ ಖಡ್ಗದ ತೀಕ್ಷಣತೆಯು ವಿಜಯ ಹಾಗೂ ಯಶಸ್ಸಿನ ಗ್ರಂಥ ವಿವರಣೆಯ ಅಮೌಲ್ಯ ರತ್ನವಾಗಿದೆ. ಆತನ ಶಕ್ತಿಶಾಲಿ ಹಿಡಿತವು, ದೈವಾಜ್ಞೆಯನ್ನು ತನ್ನ ವಶಕ್ಕೆ ತೆಗೆದುಕೊಂಡಿದೆ. ಆತನ ನ್ಯಾಯದ ಮುನ್ನುಡಿಯು ಕ್ಷಿತಿಜದ ಸಮಗ್ರತೆಯನ್ನು ಶೃಂಗರಿಸಿದೆ. ಆತನ ದರ್ಬಾರಿನಲ್ಲಿ ಸಾಷ್ಟಾಂಗ ನಮನ ಸಲ್ಲಿಸುವವರ ಹಣೆಯ ಮೇಲೆ ಸೌಭಾಗ್ಯದ ನಕ್ಷತ್ರವು ಮಿನುಗುತ್ತದೆ. ಆತನ ಆಡಳಿತೆಯ ವಿಧಾನದಲ್ಲಿ ಲೋಕ ರಕ್ಷಣೆಯ ಕಾನೂನು ಸಜ್ಜುಗೊಂಡಿದೆ. ಹುಮಾಯೂನ್‌ನ ಶುಭನಾಮದ ಮೇಲೆ ಸಾಷ್ಟಾಂಗ ನಮನ ಸಲ್ಲಿಸಲು ಗರ್ವದ ತಲೆಯು ಬಾಗುತ್ತದೆ. ಮತ್ತು ಪ್ರಭುತ್ವದ ಪ್ರಶಂಸೆ ಮಾಡಲಾಗುತ್ತದೆ. ಜಮ್‌ಸೀದ್ ದೊರೆಯ ಉಂಗುರದ ಹರಳು. ಈ ಬಾದಶಾಹನ ಉಂಗುರದ ಸರಿಸಮಾನವಾಗುವ ಹಂಬಲದಲ್ಲಿ ತನ್ನ ಪರಿಧಿಯಲ್ಲಿ

ಬೆಳೆದು, ಇನ್ನೂ ಹೆಚ್ಚಾಗತೊಡಗಿತು. ಜಗತ್ತಿನ ಛತ್ರಿಯ ನೆರಳು ವಿದ್ಯೆಯ ಸುಪ್ರಸಿದ್ಧ ಸೂರ್ಯರ ಉಡುಪನ್ನು ಶೃಂಗರಿಸುತ್ತದೆ. ವೈಭವಪೂರ್ಣ ರಾಜಧಾನಿಯ ಸಾಷ್ಟಾಂಗ ನಮನಗಳು ಮೊದಲಿನ ಬಾದಶಾಹರ ದರ್ಜೆಯ ಬಂಡವಾಳದ ಮಾಪನವಾಗಿದೆ. ಯುದ್ಧ ಧ್ವಜವು ಹಾರಾಡಿದಾಗ, ನಕ್ಷತ್ರಗಳ ರೂಪ ಮತ್ತು ಆಕಾಶಗಳ ಪರಿಶೀಲನೆಯು ಬಹಿರಂಗವಾಗುತ್ತದೆ. ಪೃಥ್ವಿಯ ಆಕಳಿನ ಬೆನ್ನನ್ನು ಮೀನುಗಾರರ ಜಾಲವನ್ನಾಗಿ ಪರಿವರ್ತಿಸುವಷ್ಟು ಅನ್ವೇಷಣೆಯ ಬಾಣದ ತುದಿಯು ತೀಕ್ಷ್ಣವಾಗಿರುತ್ತದೆ. ಒಳ್ಳೆಯ ಸ್ವಭಾವದ ಬಾಣಗಳು ಸತ್ಯವನ್ನು ನಂಬುವವರ ಹೃದಯದಲ್ಲಿ ಪ್ರವೇಶಿಸುತ್ತವೆ. ಮಿಂಚುವ ಖಡ್ಗದ ಸಿಡಿಲು ಕ್ಷಣಾರ್ಧದಲ್ಲಿ ಏಳನೆಯ ಆಕಾಶವನ್ನು ತಲುಪುತ್ತದೆ. ಗುರಾಣಿಯ ಗುಮ್ಮಟವು ಎದುರಾಳಿಗಳ ಅಹಂಕಾರದ ಹಣೆಯ ಮೇಲಿನ ಕುಯುಕ್ತಿ ಮತ್ತು ಪ್ರತಿಕಾರವನ್ನು ನಾಶಪಡಿಸುತ್ತದೆ. ಆತನ ಕ್ರೋಧದ ಅಗ್ನಿಯ ಜ್ವಾಲೆಗಳು ಮಂಗಳ ಗ್ರಹವನ್ನು ಸಹ ಕರಿಕಾಳಿನಂತೆ ದಹಿಸಿ ದೇವದೂತರ ಮಡಿಲಿನಲ್ಲಿ ಹಾಕುತ್ತವೆ. ಆತನ ಬಾಣದ ಮೊಗ್ಗು ಪ್ರತಿಯೊಂದು ಉದ್ಯಾನದಲ್ಲಿ ವಿಜಯ ಹಾಗೂ ಯಶಸ್ಸಿನ ಹೊಸ ವಸಂತವನ್ನು ಹರಡುತ್ತದೆ. ಆತನ ಧನುಸ್ಸಿನ ಹುಬ್ಬಿನ ಕೋನವು ರಣರಂಗದಲ್ಲಿ ಭಲ್ಲೆಯ ಪೇಚಿನಲ್ಲಿ ಪ್ರವೇಶಿಸಿ, ಪೇಚನ್ನು ತೆರೆಯುತ್ತದೆ. ಒಂದು ವೇಳೆ ಆತನ ಗಾಂಭೀರ್ಯವು 'ಕೊಹೆಖಾಪ್' (ತುರ್ಕಸ್ಥಾನದ ಪ್ರಸಿದ್ಧ ಪರ್ವತ) ಮೇಲೆ ತನ್ನ ಘನತೆಯ ಪಾದವನ್ನು ದೃಢವಾಗಿ ಇಟ್ಟರೆ, ಆ ಪರ್ವತವು ನೀರ್ಗುಳ್ಳೆಯಂತೆ ಭೂಮಿಯಲ್ಲಿ ಹೂತು ಹೋಗಿ, 'ಜಯಹೂನ್' ಮಹಾನದಿಯ ತಳದಿಂದ ಒಂದು ತರಂಗದಂತೆ ಮೇಲೇಳುತ್ತದೆ. ಘನತೆಯ ಮೌಲ್ಯಮಾಪನ ಮಾಡಲು ಸಾಧ್ಯವಿಲ್ಲ. ಒಂದು ವೇಳೆ, ಮೌಲ್ಯಮಾಪನದ ಅಪರಾಧ ಮಾಡಿದರೆ, ತಕ್ಕಡಿಯ ಮುಳ್ಳಿನಿಂದ ತಕ್ಕಡಿಯ ತಟ್ಟೆಯಲ್ಲಿ ಎಚ್ಚರಿಕೆಯ ಹೊಲಸು ಹಿಂಡಲಾಗುತ್ತದೆ.

ಆತನ ದಾನ ಮತ್ತು ಕಾಣಿಕೆಯ ಮಳೆಯು ಭೂಮಿಯನ್ನು ಸುವರ್ಣಮಯ ಜಲದ ಮೈದಾನವನ್ನಾಗಿ ಮಾಡಿದೆ. ನೀಸಾದ ಮೋಡದ ಹನಿಯು ಖುಲ್‌ಜುಮ್ ಹಾಗೂ ಅಮ್ಮಾನ್ ಮಹಾನದಿಗಳಲ್ಲಿ ಕೋಲಾಹಲವನ್ನುಂಟು ಮಾಡುತ್ತದೆ. ಆತನ ಗೌರವಾನ್ವಿತ ಅಂತಃಪುರದಿಂದ ಬರುವ ತಂಗಾಳಿಯು ಜಗತ್ತನ್ನು ಗುಲಾಬಿಯ ಪಕಳೆಗಳಂತೆ ಸುಗಂಧಮಯಗೊಳಿಸುತ್ತದೆ. ಆತನ ಪ್ರೇಮ–ಪ್ರಕಾಶದ ಬಿಸಿಯು ವಿಶ್ವಾಸಿಕರ ಬೆಳ್ಳಿಯ ಲೇಪನ ಹಚ್ಚಿದಂತಹ ಕನ್ನಡಿಯನ್ನು ವಾಸ್ತವಿಕತೆಯ ಭಂಡಾರವೆಂದು ತಿಳಿಯುತ್ತದೆ. ಆತನ ಸನ್ಮಾರ್ಗದರ್ಶಕ ನದಿಯ ಬೆವರು ಹೃದಯದ ನೈರ್ಮಲ್ಯದಿಂದ ದೇವಾನುಗ್ರಹವನ್ನು ನೀಡುತ್ತದೆ. ಒಂದು ವೇಳೆ ಸಾರ್ವತ್ರಿಕ ಕರುಣೆ ಮತ್ತು ಅಗ್ನಿಯು ಜೊತೆಗೂಡಿ ಅಪಕ್ವ ಹೃದಯ ಹಾಗೂ ಮಕ್ಕಳಂತಹ ಸ್ವಭಾವ ಉಳ್ಳವರಲ್ಲಿ ಔದಾರ್ಯವನ್ನು ಪೋಷಿಸುವ ಪ್ರಯತ್ನ ಮಾಡಿದರೆ, ಜ್ವಾಲೆಯ ಎದೆಯಿಂದ ಹೊಗೆಯ ಬದಲಾಗಿ, ದ್ರಾಕ್ಷಿರಸದ ಕಾರಂಜಿಯು ಅಂತ್ಯದವರೆಗೆ ಆವೇಶದಿಂದ ಚಿಮ್ಮುತ್ತಿರುವುದು.

ಕೊತವಾಲನ ಪರಿಶೀಲನೆಯಿಂದ ಹೆದರಿ, ಪ್ರಾತಃಕಾಲದ ಗಾಳಿಯು ಮೊಗ್ಗುಗಳ ಜೇಬಿನಲ್ಲಿ ಅಡಗಿದ ಹೂವಿನ ಬಟ್ಟಲನ್ನು ಬಹಿರಂಗಗೊಳಿಸುತ್ತದೆ. ಕತ್ತಲೆಯು ಆತನ ಸಂರಕ್ಷಣೆಗಾಗಿ, ಚಂದ್ರನ ಬೆಳ್ಳಿಯ ಗೋಲವನ್ನು ಪ್ರತ್ಯಕ್ಷಗೊಳಿಸುತ್ತದೆ.

'ಒಂದು ವೇಳೆ ಗಾಳಿಯ ಪಕ್ಷಿಯು ನೀರ್ಗುಳ್ಳೆಯಲ್ಲಿ ಗೂಡುಕಟ್ಟಿದರೆ, ಆತನ ರಕ್ಷಣೆಗಾಗಿ ಸುದೈವದಿಂದ ತರಂಗದ ಶಾಖೆಯಲ್ಲಿ ಸುಕ್ಕು ಉದ್ಭವಿಸುತ್ತದೆ. ಯಾವಾಗ ಕತ್ತಲೆಯ ಮೇಲೆ ಚಂದ್ರನು ನರ್ತಿಸುತ್ತಾನೋ, ಆತನ ರಕ್ಷಣೆಗಾಗಿ, ದೊಡ್ಡ ಗಿಡುಗವು ಪ್ರಾತಃಕಾಲದವರೆಗೆ ಕ್ರೀಡಾಪಟುವಿನ ಚಮತ್ಕಾರ ತೋರಿಸುತ್ತದೆ'.

ಕೊಡುಗೆಯ ಮಧ್ಯದ ಒಂದು ಗುಟುಕು, ಮರ್ಯಾದೆಯ ಹಂಬಲಉಳ್ಳ ಬಾಯಾರಿಕೆಯ ತುಟಿಗಳಿಗೆ; ಮದ್ಯದ ಬಟ್ಟಲಿನ ಪ್ರಮಾಣಕ್ಕೆ ಅನುಸಾರವಾಗಿ, ಸಂತೋಷ ನೀಡುತ್ತದೆ. ಜಾಗ್ರತಿಯ ಸಂಪತ್ತಿನ ನಿರೀಕ್ಷಣೆ ಮಾಡುವ ಜನರು, ತೇಜೋಮಯ ಹೃದಯ ಹೊಂದಿದವರಿಗೆ ಸ್ವಾತಂತ್ರ್ಯದ ಸಂತೋಷ ನೀಡುವಂತಹ ಬಾದಶಾಹನ ಮಾರ್ಗದ ಧೂಳಿಯ ರುಚಿಯಿಂದ ತಮ್ಮ ಕಣ್ಣಿನ ಟಿಪ್ಪಣೆ ಪುಸ್ತಕವನ್ನು ಶೃಂಗರಿಸುತ್ತಾರೆ. ಖಾದ್ಯಪದಾರ್ಥಗಳನ್ನು ನಿರ್ಲಕ್ಷಿಸುವ ಬಡವರು ದೇವರ ಶೋಧನೆಯಲ್ಲಿ ನಿರತರಾಗುತ್ತಾರೆ. ಅರಬಸ್ಥಾನದ ಮರುಭೂಮಿಯಲ್ಲಿ, ಬಾದಶಾಹನ ಪ್ರೇಮದ ಗೀತೆಗಳನ್ನು ಹಾಡುತ್ತ, ಅಲೆದಾಡುವ ಜನರನ್ನು; ದೇವರ ಮಾರ್ಗ ತಿಳಿಯುವ ಸಾಕ್ಷ್ಯವೆಂದು; ಬಡವರು ಪರಿಗಣಿಸುತ್ತಾರೆ. ದೃಶ್ಯ ಕಾರ್ಯಾಲಯದ ಚಿತ್ರಕಾರರು, ದೇವರ ಪಾದಗಳ ಗುರುತನ್ನು ತಮ್ಮ ಜೀವನಗ್ರಂಥದ ಶಿರೋನಾಮೆಯೆಂದು ಸ್ವೀಕರಿಸುತ್ತಾರೆ. ಕಣ್ಣಿನ ರೆಪ್ಪೆಯ ಕೂದಲಿನ ಲೆಮಿನಿಯ ತುದಿಯನ್ನು ಕೈಯಲ್ಲಿ ಹಿಡಿದು ದೇವರ ಕಲ್ಪನೆಯ ದೃಷ್ಟಾಂತಗಳ ಬಗೆಗೆ ಚಿಂತನೆ ಮಾಡುತ್ತಾರೆ. ಬಾದಶಾಹನ ತರಬೇತಿಯ ಶದ್ಧ ಸಿಹಿ ನೀರಿನ ಪ್ರಯೋಜನದಿಂದ; ಜಗತ್ತಿನ ನಿರ್ಮಾಣವನ್ನು ಕುರಿತು, ಪರಿಶ್ರಮಿಸುವಂತಹ ಹೊಸ ಜನರಿಗೆ ಯಶಸ್ಸು ಪ್ರಾಪ್ತವಾಗಿದೆ. ಬಾದಶಾಹನ ಪೀತವರ್ಣದ ಕುದುರೆಯ ಪಾದರಕ್ಷೆಯನ್ನು ಆಲಂಗಿಸುವ ಅಪೇಕ್ಷೆಯಿಂದ; ಹಬ್ಬದ ಹೊಸ ಚಂದ್ರನು ಅಭಿನಂದನೆ ಸಲ್ಲಿಸುತ್ತಾನೆ. ದೇವರ ಸ್ತುತಿಯ ಮೂಲಕ ವಿಷಯದ ಅಪರೂಪದ ಮುತ್ತು; ಚಿಂತನೆಯ ಮಹಾನದಿಯಿಂದ ಫಲವತ್ತಾಗಿ ಹೊರಹೊಮ್ಮಿದೆ. ಅರ್ಥದ ಮೇಲೆ ಲಕ್ಷ್ಯವಿಡುವವರು ಬಾದಶಾಹನ ಪರಾಕ್ರಮವನ್ನು ಪ್ರಶಂಸಿಸಿ; ಶಬ್ಧಗಳ ಪರದೆಯಲ್ಲಿ ಶಾಶ್ವತವಾದಂತಹ ಕೀರ್ತಿಯನ್ನು ಪಡೆದಿದ್ದಾರೆ. ಸೌಂದರ್ಯ/ ಲಾವಣ್ಯ ಭಂಡಾರದ ವ್ಯಕ್ತವಾದ ಅಮೌಲ್ಯ ಹರಳು, ಬಾದಶಾಹನ ಸ್ವಭಾವವು ಅದನ್ನು ಸ್ವೀಕರಿಸುವಂತೆ, ಸ್ವಯಂ ಶೃಂಗರಿಸಿಕೊಂಡಿದೆ. ಬಾದಶಾಹನ ಔದಾರ್ಯಪೂರ್ಣವಾದ ಸಂತೋಷದ ವಾರ್ತೆಯನ್ನು ಪಡೆದು, ಉದ್ವಿಗ್ನವಾದ ಕೇಶರಾಶಿಯುಳ್ಳ ಅಪ್ಸರೆಯರಂತಹ ಸುಂದರಿಯರು ತಮ್ಮ ಸೂಕ್ಷ್ಮವಾದ ಹೃದಯದಲ್ಲಿ ಹರುಷ ಹೊಂದಿ; ಹಾರಾಟ ಮಾಡುತ್ತಾರೆ. ಚಂದ್ರಮುಖಿಯರ ಗುಂಗುರು ತಲೆಗೂದಲಿನ

ಉರುಳು; ಮಿಂಚುವ ಹಣೆಯ ಎಡ-ಬಲದಲ್ಲಿ, ಸುಂದರವಾದ 'ಫಿತ್ರಾಕ್' (ಅರ್ಥಾತ್, ಬೇಟೆಯಾಡಿದ ಮೃಗಗಳನ್ನು ಕಟ್ಟಲು ಬಳಕೆ ಮಾಡುವಂತಹ ಚರ್ಮದ ಪಟ್ಟಿ)ಯಂತೆ ನೇತಾಡಿ; ಸೌಂದರ್ಯವನ್ನು ದ್ವಿಗುಣಗೊಳಿಸಿದೆ. ಮಿಂಚುವ ಸೂರ್ಯನನ್ನು ಸ್ವಾಗತಿಸಲು ಜಗತ್ತಿನ ಪ್ರಖ್ಯಾತ ಜನರು ಸಂತಸದಿಂದ ದೇವರ ದರ್ಗಾದಲ್ಲಿ ಸಾಷ್ಟಾಂಗ ನಮನ ಸಲ್ಲಿಸಲು ಮುನ್ನಡೆಯುತ್ತಾರೆ.

'ದೇಶಕ್ಕೆ ಔನ್ನತ್ಯ ನೀಡುವ ದೇವರು, ಬಾದಶಾಹ ಗಾಜಿಯ ಆಳ್ವಿಕೆಯಲ್ಲಿ, ಹೊಸ ವಸಂತಕ್ಕೆ ಮತ್ಸರ ಉಂಟಾಗುವಂತೆ ಈ ಜಗತ್ತನ್ನು ನಿರ್ಮಿಸಲಾಗಿದೆ. ಈ ಜಗತ್ತು ಆತನಿಂದ ವರ್ಣಮಯವಾಗಿದೆ. ಒಂದು ಬೆಂಕಿಯ ಕಿಡಿಯಿಂದ, ಮಾಣಿಕ್ಯದ ರಾಶಿಯು ಜ್ವಾಲೆ ಆಗುತ್ತದೆ. ಚಿಲುಮೆಯಂತಹ ಆತನ ಬಹುಮೌನದಿಂದ ತರಂಗದಂತೆ ಅವ್ಯಾಹತವಾಗಿ, ಎಲ್ಲ ಕಾಲದಲ್ಲಿ ಸಾಗರದ ಸಾವಿರಾರು ಮುತ್ತುಗಳು ವ್ಯಕ್ತವಾಗುತ್ತವೆ. ಆತನ ತೇಜೋಮಯ ತೀರ್ಮಾನ ಪರಿಣಾಮವು ಜಗತ್ತಿನ ಮೇಲೆ ಈ ರೀತಿ ಆಗುತ್ತದೆ. ಪೂರ್ವ-ಪಶ್ಚಿಮದ ಸಕಲ ಕಾರ್ಯಗಳಲ್ಲಿ, ಆತನ ಪ್ರಕಾಶ-ಪ್ರಕಟವಾಗುತ್ತದೆ'.

ಬಾದಶಾಹನ ಆಡಳಿತಾತ್ಮಕ ಕಾರ್ಯಗಳ ವ್ಯವಸ್ಥೆಯಲ್ಲಿ ದೇವರ ಅಸ್ತಿತ್ವ ಹಾಗೂ ಗುಣಗಳ ಬೆಳಕು ಪ್ರವೇಶಿಸುತ್ತದೆ. ದಿಟ್ಟವಾದ ಹೆಜ್ಜೆಯ ಏರ್ಪಾಡಿನಿಂದ ಧರ್ಮ ಮತ್ತು ಜಗತ್ತಿನ ಕಠಿಣ ಕಾರ್ಯಗಳು ಸುಲಭವಾಗುತ್ತವೆ. ಈ ಕಾರ್ಯಕ್ಕಾಗಿ, ಪ್ರವಾದಿ ಸುಲೇಮಾನರ ಉಂಗುರದ ಹರಳಿನಂತೆ; ದೊರೆಗಳ ಸಮೂಹವು ವಿವಿಧ ಸ್ಥಾನಗಳಲ್ಲಿ ನಿಯೋಜಿತವಾಗಿದೆ. ಈ ಕಾರ್ಯಾಗಾರದ ಚಟುವಟಿಕೆಗಳು, ದೇವರ ಕಾರ್ಯದಂತೆ ಪೂರ್ಣವಾಗಲಿ. ಆಳ್ವಿಕೆಯ ವೈಭವ ಹಾಗೂ ಲೋಕಪರಿಪಾಲನೆಯ ಅಂತಸ್ತಿನ ಪ್ರಶಂಸೆಯಾಗಲಿ. ಜಗತ್ತಿನ ಭಾಗ್ಯವನ್ನು ಸಮೃದ್ಧಗೊಳಿಸುವ ಇಂತಹ ದೊರೆಗಳ ದೃಢತೆಯ ಬಲದಿಂದ ಮತ್ತು ದೇಶವನ್ನು ವಿಸ್ತರಿಸುವ ಶಾಸನಗಳು, ಆಡಳಿತಾತ್ಮಕ ಕಾನೂನಿನ ತರಬೇತಿಯಿಂದ ಶೋಧಿಸಲಾದ ಜಗತ್ತನ್ನು ಶೃಂಗರಿಸುವ ಮಾರ್ಗದಿಂದ, ಲೋಕಪರಿಪಾಲನೆ ಹಾಗೂ ವಿಜಯವನ್ನು ಸ್ಥಿರ ಮತ್ತು ಸಾಹಸಮಯಗೊಳಿಸಿರುವದರಿಂದ ದೇವರನ್ನು ಸ್ತುತಿಸಬೇಕು. ಹಜರತ್ ಬಾದಶಾಹ ಗಾಜಿಯ ಅಭಿನಂದನಾ ಪತ್ರವನ್ನು ಈ ಮುನ್ನುಡಿಯ ಮುಖಾಂತರ, ವಿಜಯದ ಶೀರ್ಷಿಕೆಯಿಂದ ಶೃಂಗರಿಸಲಾಗಿದೆ.

'ಪ್ರತಿಯೊಂದು ದೇಶಕ್ಕೆ ವೈಭವ-ಪ್ರತಿಷ್ಠೆಯ ಹೊಸ ಕಾಂತಿಯ ನೀಡಿಕೆಯು ಶುಭವಾಗಲಿ, ನಿನ್ನ ನಗಾರಿಯ ಧ್ವನಿಯು, ವಿಜಯ ಹಾಗೂ ಯಶಸ್ಸಿನ ಔತಣ ನೀಡುತ್ತದೆ. ನಿನ್ನ ಖಡ್ಗವು ಕೈಯಲ್ಲಿ ಬಂದಾಗ; ವೈರಿಯು ತನ್ನ ಶಿರದ ದಾಳವನ್ನು ಹತಾಶನಾಗಿ, ಕೆಳಗೆ ಬಾಗಿಸುತ್ತಾನೆ; ಹಾರಾಟದ ಸಮಯದಲ್ಲಿ, ನಿನ್ನ ವೈಭವ-ಗಾಂಭೀರ್ಯದ ಶಿಖರದ ಕಮಾನಿನ ಸುತ್ತಲೂ ಹಾರಾಟ ಮಾಡಿ; ಆಕಾಶದ ಪಕ್ಷಿಯು ಆಕಾಶ ಗಂಗೆಯಿಂದ ದೊಡ್ಡಗರಿಯನ್ನು ಎಸೆಯುತ್ತದೆ.

ಸಮಯದ ಲೇಖಕನು ನಿನ್ನ ಸಂರಕ್ಷಣೆಯ ಸಹಾಯದಿಂದ; ಕೂದಲಿನ ದಾರದಿಂದ ಜ್ವಾಲೆಯ ಪುಟದ ಮೇಲೆ ಗೆರೆಗಳನ್ನು ಎಳೆಯುತ್ತಾರೆ; ನಿನ್ನ ಅಂಗೈಯ ಮೋಡದಿಂದ, ಜಗತ್ತಿನ ಪ್ರಥಮ ದಿನ; ಆಕಾಶಗಳ ಮೇಲೆ ಮುತ್ತುಗಳನ್ನು ಪಸರಿಸಲಾಗಿದೆ'.

ಬಾದಶಾಹ ಗಾಜಿಯ ವೈಭವದ ಪ್ರಕಟನೆಯು ಸರ್ವಸಂಪೂರ್ಣತೆಯ ಆರಂಭ ಮತ್ತು ಅಂತ್ಯದ ಹೊಣೆಗಾರನಂತೆ ಇತ್ತು. ಎಳೆ ವಯಸ್ಸಿನ ಆರಂಭದಲ್ಲಿ ಕುಶಾಗ್ರಮತಿಯಾದ ವೃದ್ಧನು ತನ್ನ ಜ್ಞಾನಭರಿತವಾದ ಹಣೆಯಿಂದ ಬಾದಶಾಹನ ಗೌರವಾನ್ವಿತವಾದ ಭೂಮಿಯ ಮೇಲೆ ಸಾಷ್ಟಾಂಗ ನಮನ ಸಲ್ಲಿಸಿದನು. ಕೃತಜ್ಞತೆಯನ್ನು ವ್ಯಕ್ತಪಡಿಸುವ ನುಡಿಯಿಂದ, ಹೊಸ ಜೀವನ ತುಂಬುವ ರಹಸ್ಯವನ್ನು ಮನಮುಟ್ಟುವಂತೆ ಬಹಿರಂಗಗೊಳಿಸಿದ್ದಾನೆ.

'ನಿನ್ನ ಸ್ವಭಾವದ ದರ್ಪಣದಲ್ಲಿ ಪ್ರತಿಬಿಂಬ ಮೂಡಿದಾಗ, ಒಂದೇ ದೃಷ್ಟಿಯಲ್ಲಿ ಸಾವಿರಾರು ಪ್ಲಾಟೊ(ತತ್ವಜ್ಞಾನಿ)ಗಳು ಜನ್ಮ ತಳೆಯುತ್ತಾರೆ'.

ಕಾಲದ ಚಂಚಲತೆಯ ಕ್ರೀಡಾಂಗಣದ ಮಾಹಿತಿಯನ್ನು ಪಡೆದ ನಂತರ ಮಾನವನ ವಿಭಿನ್ನ ಪ್ರಕಾರಗಳ ಬಗೆಗೆ ಚರ್ಚೆ ನಡೆಯುವಾಗ; ಅರಸತ್ವದ ಶಾಸನಗಳನ್ನು ರಚಿಸಲಾಯಿತು. ಅರಸರು ಮತ್ತು ದೇವದೂತರ ಔನ್ನತ್ಯ ಹಾಗೂ ಮಹಾಘನತೆಯ ದರ್ಶನದಿಂದ, ಆಳ್ವಿಕೆಯ ವಿಧಾನವನ್ನು; ನಿದ್ರೆ ಮತ್ತು ವಿಶ್ರಾಂತಿಯ ಮಾದರಿಯ ಮೂಲಕ, ಮೌಲ್ಯಮಾಪನ ಮಾಡಲು ಸಾಧ್ಯವಿದೆ. ಆತನ ಮಂದಸ್ಮಿತ ಹಾಗೂ ಮಾತನಾಡುವ ಶೈಲಿಯಿಂದ, ಧರ್ಮ ಮತ್ತು ಸಂಪತ್ತಿನ ವಿಜಯದ ಸುವಾರ್ತೆಯು ಪ್ರಾಪ್ತವಾಗುತ್ತದೆ. ಆತನ ತೋಟ್ಟಲಿನ ವಿಶ್ರಾಂತಿ ಧಾಮದಲ್ಲಿ, ಸಿಂಹಾಸನ ಹಾಗೂ ಕಿರೀಟದ ಶೃಂಗಾರವು ಆಡಳಿತಾತ್ಮಕ ಶಾಸನಗಳ ಮುನ್ನುಡಿ ಆಯಿತು. ದೂರದೃಷ್ಟಿಯುಳ್ಳ ವಿಮರ್ಶಕರ ಕಣ್ಣಿನ ಮೂಲಕ, ಆತನು ತನ್ನ ಪವಿತ್ರ ದೃಷ್ಟಿಯಿಂದ, ಮಹಾನತೆಯ ಔನತ್ಯದವರೆಗೆ ಹಾರಾಟ ಮಾಡುತ್ತಾನೆ. ಭೂಮಿಯು ಆತನ ಉನ್ನತಿ ಸಾಧನೆಯ ಅಂತಸ್ತಿನ ಮೇಲೆ ಕೃಪೆ ಮಾಡಿ; ಇನ್ನಿತರ ಸುದೈವಿಗಳಿಗೆ ಕ್ಷಿತಿಜದ ಮೇಲೆ ಆರೋಹಣ ಮಾಡುವ ಸಾಮಗ್ರಿಯನ್ನು ನೀಡಿದೆ. ಹೆಗಲ ಮೇಲೆ ಇನ್ನೂ ಆತನ ಪರಿವರ್ತನಶೀಲ ಸ್ಥಾನಮಾನದ ಭಾರವಿದ್ದಾಗ;ಆಕಾಶವು ಬೆಳ್ಳಿಯಂತಹ ಪ್ರಾತಃಕಾಲದ ಮುಚ್ಚಳವನ್ನು ತೆಗೆದುಕೊಂಡು ಬಂದು; ಸೂರ್ಯನ ಸುತ್ತಲೂ ಸುವರ್ಣಮಯ ವೃತ್ತವನ್ನು ಎಳೆದು ಸಾಷ್ಟಾಂಗ ನಮನ ಸಲ್ಲಿಸುತ್ತ, ಓಡುತ್ತ ಸಾಗಿತು.

'ಆತನ ದರ್ಗಾದ ಗುಲಾಮರಿಗೆ ವೈಭವದ ಹೊರತಾಗಿ ಏನೂ ಬೇಡ'.

ಹಾಲಿನಲ್ಲಿ ಹಿಟ್ಟು ವರ್ತುಳಾಕಾರದಲ್ಲಿ ಮಿಲನ ಹೊಂದುವಂತೆ; ಆತನ ದಾನವು ಅಂದಾಜಿಗಿಂತಲೂ ಅಧಿಕವಾಗುತ್ತದೆ.

ಪ್ರವಾದಿಯ ಧರ್ಮದ ಮಧುಪಾನ ಮಾಡುವ ಪರಿಶುದ್ಧ ಜನರು ಯಾವ ಕಪ್ಪು ಕುದುರೆಗಳ ನಿರೀಕ್ಷೆಯಲ್ಲಿದ್ದರೋ, ಅವರಿಗೆ ಅಂತಹ ಕುದುರೆಗಳು ಪ್ರಾಪ್ತವಾಗಿವೆ. ಪರಲೋಕದ ಶಾಂತಿಯ ಆಕಾಂಕ್ಷಿಗಳು 'ಎಹ್ರಾಮ್' (ಹಜ್ ಯಾತ್ರಿಕರು ಧರಿಸುವಂತಹ ಒಂದು ವಿಶಿಷ್ಟವಾದ ಉಡುಪು) ಧರಿಸದೇ; ಉದ್ದೇಶಿತ ಕಳಬಾದ ಪ್ರದಕ್ಷಿಣೆ ಮಾಡಲು; ಆತನ ಉನ್ನತ ದರ್ಗಾದೆಡೆಗೆ ಸಾಷ್ಟಾಂಗ ನಮನ ಸಲ್ಲಿಸುತ್ತ ಓಡಿದರು. ಮಧುಶಾಲೆಯಲ್ಲಿ ಆಸೀನರಾದ ದೇವಸ್ತುತಿಕಾರರು ಹಾಗೂ ದೇವರ ನಾಮದ ಕುಡುಕರು, ಒಂದು ವೇಳೆ–'ತಹಲೀಲ್' ('ಲಾ ಇಲಾಹ ಇಲ್ಲಲ್ಲಾಹು'ದ ಜಪ) ಮತ್ತು ಪರಿಶುದ್ಧತೆಯ ಬಟ್ಟಲು ಪಾನಮಾಡದೇ; ಪ್ರಶಂಸೆಯ ಕೋಲಾಹಲ ಮಾಡುತ್ತ, ಸಂತೃಪ್ತಿಯ ಸಾರಾಯಿ ಅಂಗಡಿಯಲ್ಲಿ ಆಸೀನರಾದ ಅಮಲೇರಿದ ಜನರು; ಬಟ್ಟಲಿನಂತಹ ಮೋಡಗಳ ಹನಿಗಳಿಂದ, ಬಾದಶಾಹ ಗಾಜಿಯನ್ನು ಎಚ್ಚರಗೊಳಿಸಿದ್ದಾರೆ. ಆತನ ಕಾಲದ ಸ್ಮರಣೆಯಲ್ಲಿ ಮಗ್ನರಾಗುತ್ತಿದ್ದರೆ, ಜೀವನದ ವಾಸ್ತವಿಕತೆಯ ಪರಿಚಯ ಭಂಡಾರಗಳ ಕೋಶಾಧಿಕಾರಿಗಳು, ಪವಿತ್ರವಾದ ಇಚ್ಛೆಯೊಂದಿಗೆ ದೇವಸ್ತುತಿಯನ್ನು ಸ್ವಯಂ ಹಾಡಿ, ಆತನ ಮಾರ್ಗದ ಮಣ್ಣಿನ ಮೇಲೆ ನಿವಾಳಿಸುತ್ತಿದ್ದರು. ಚಿಂತನೆಯ ಜಗತ್ತಿನ ದಿವ್ಯವಾಣಿಯನ್ನು ನಿರೂಪಿಸುವ ವ್ಯಕ್ತಿಗಳ ಲೇಖನಿಯ ವೃಕ್ಷವು; 'ಸಿದ್ರೆರಾಹ್' (ಏಳನೇ ಆಕಾಶದ ಒಂದು ವೃಕ್ಷ) ಮತ್ತು 'ತೂಬಾ' (ಸ್ವರ್ಗದ ಅತ್ಯಂತ ಸುಗಂಧ ಭರಿತವಾದ ಒಂದು ವೃಕ್ಷ) ಕ್ಕೆ ಸಮಾನವಾಗಿದೆ. ಆತನ ಸ್ಮರಣೆಯಲ್ಲಿ, ಜಿಬ್ರಾಯಿಲ್‌ನೊಂದಿಗೆ ಹಾರಾಟ ಮಾಡಿ, ಪ್ರವಾದಿಯಂತಹ ಸ್ವಭಾವವುಳ್ಳ ಬಾದಶಾಹನ ಸ್ತುತಿಯಲ್ಲಿ; ಅತ್ಯುನ್ನತ ಸ್ಥಾನವನ್ನು ತಲುಪುವರು.

'ಓ! ಧೈರ್ಯಶಾಲಿ ಸಾಮ್ರಾಜ್ಯದ ಬಾದಶಾಹ ಖುಸ್ರೊ ಗಾಜಿ, ನೀನು, ಬುದ್ಧಿವಂತಿಕೆಯ ಸೂರ್ಯನಂತೆ ಆಕಾಶದ ಮೇಲೆ ಪರ್ಯಟನ ಮಾಡುತ್ತಿರುವೆ. ನಿನ್ನ ನ್ಯಾಯದ ಕಾರಣದಿಂದ ಜಗತ್ತು ಉದ್ಯಾನವಾಗಿದೆ. ಹೆಬ್ಬಾವಿನ ಬಾಯಿಯಲ್ಲಿ ಹೂಮಳೆ ಸುರಿಸುವ ಅಗ್ನಿಯನ್ನು ನೀಡಿರುವೆ. ಯಾವನಾದರೂ ಬುದ್ಧಿವಂತಿಕೆಯೊಂದಿಗೆ ಸ್ವಲ್ಪಮಟ್ಟಿಗೆ ವಿರೋಧ ಮಾಡುವನೋ, ಆತನ ಹೆಗಲು ಹಿಡಿದು, ಸಿಂಹದ ಹಸ್ತದಿಂದ ನಷ್ಟಗೊಳಿಸುತ್ತಾನೆ; ಮುತ್ತುಗಳನ್ನು ದಾನಮಾಡುವ ನಿನ್ನ ಕೈಯ ನೆರಳು, ನೀರಿನ ಮೇಲೆ ಬಿದ್ದರೆ; ಸಾಗರದ ಆಳದಲ್ಲಿ ಹವಳದ ಹಸ್ತದಿಂದ ಮುತ್ತುಗಳು ಪತನವಾಗುತ್ತವೆ. ಆತನ ಮಾರ್ಗದ ಸ್ತುತಿಯನ್ನು ವಿವರಿಸಲಾರಂಭಿಸಿದರೆ, ಕಾವ್ಯದ ಸೂರ್ಯನಂತೆ ನಾಲಿಗೆಯಿಂದ ಕಣಗಳ ಸರಣಿಯು (ಹಾರವು) ಉದುರುತ್ತದೆ'.

ಶಾಶ್ವತವಾಗಿರುವ ಆನೇ ಬಾದಶಾಹನ ಶಾಂತಿಯ ಫಲದಿಂದ, ಪ್ರಾತಃಕಾಲದಲ್ಲಿ ನಿದ್ರೆಯಿಂದ ಜಾಗ್ರತರಾಗುವವರು, ಪ್ರತಿಷ್ಠೆ ಮತ್ತು ವೈಭವ ಪೀಠವನ್ನು ಅಂದಾಜು ಮಾಡಿ; ನಾಲ್ಕು ಮಹಾಭೂತಗಳು (ಭೂಮಿ, ಜಲ, ಅಗ್ನಿ ಹಾಗೂ ವಾಯು) ಮತ್ತು ಆರು ದಿಕ್ಕುಗಳ (ಪೂರ್ವ, ಪಶ್ಚಿಮ, ಉತ್ತರ, ದಕ್ಷಿಣ, ಆಕಾಶ ಹಾಗೂ ಪಾತಾಳ) ಪ್ರದೇಶಗಳನ್ನು ತೆರೆಯುವವರು; ಔನ್ನತ್ಯ ಮತ್ತು ಮಹಾಘನತೆಯ ಶ್ರೇಷ್ಠತೆಯಿಂದ,

ತಕ್ಕಡಿಯ ನಕ್ಷತ್ರ ರಾಶಿಯನ್ನು ತನ್ನ ವೈಭವದ ಮುತ್ತಿನ ಆಭರಣಗಳ ಪೆಟ್ಟಿಗೆ ಮಾಡಿ ಪದ್ಯದ ಶ್ರೇಷ್ಠವಾದ ಪಂಕ್ತಿಯಿಂದ ಶೃಂಗರಿಸಿ; ತಕ್ಕಡಿಯ ನಕ್ಷತ್ರ ರಾಶಿಯನ್ನು ಸಂರಕ್ಷಿಸುತ್ತಾರೆ. ಪ್ರಕಾಶ ಹರಡುವಿಕೆಯನ್ನು ಗಮನದಲ್ಲಿಟ್ಟುಕೊಂಡು, ಸೂರ್ಯನ ಸ್ಥಾನಗಳ ಪ್ರತಿಬಿಂಬ ರಚಿಸಿ ಹಜರತ್ ಬಾದಶಾಹ ಗಾಜಿಯ ಸಮೃದ್ಧಿಯ ಸಾಕ್ಷಿ ನೀಡುವಂತಹ ಸೌಂದರ್ಯದ ಬೆಳಕಿನ ದೀವ್ಯಜ್ಯೋತಿ ದರ್ಶನದಿಂದ; ಸಂಪೂರ್ಣ ಶರೀರವು ಆಶ್ಚರ್ಯಭರಿತವಾದ ನೇತ್ರವಾಯಿತು. ಮಾನವನ ಹುಟ್ಟುಗುಣದ ಬೆಳಕಿನ ಜ್ಞಾನವನ್ನು ಹೊಂದಿದಂತಹ ವ್ಯಕ್ತಿಗಳು; ಸರ್ವಶ್ರೇಷ್ಠನಾದ, ಜಗತ್ತಿಗೆ ಪ್ರಗತಿ ನೀಡುವಂತಹ, ಸಿಂಹಾಸನಾರೂಢನಾದ, ಮಿನುಗುವ ಈ ನಕ್ಷತ್ರದಿಂದ ಸೌಭಾಗ್ಯವಂತರಾಗಿದ್ದಾರೆ. ಈತನ ಕೃಪೆಯ ನದಿ ತರಂಗಗಳು ಜಗತ್ತಿನ ಹೊಸ ವಸಂತವನ್ನು; ಅತ್ಯಧಿಕ ಹಚ್ಚಹಸಿರು ಮತ್ತು ಹರ್ಷಮಯಗೊಳಿಸಿವೆ. ಯಶಸ್ಸಿನ ಆಕಾಂಕ್ಷಿಗಳಾದ ಪ್ರೇಮಿಗಳ ಮಾರ್ಗದ ಮೇಲೆ ಬೀಸುವಂತಹ ದುರ್ಬಲವಾದ ಗಾಳಿಯು, ಮಾರ್ಗದ ಮೇಲೆ ಬೆಳೆದ ನೂತನ ಹುಲ್ಲಿಗೆ ಸ್ವರ್ಗಿಯ ಸುಮನಗಳಂತಹ ನಾಲಿಗೆಯನ್ನು ನೀಡಿದೆ.

ಕಾಲದ ಉದ್ಯಾನವು, ಆತನ ಹಿಂದಿನ ಪ್ರಯೋಜನದ ಸೌಭಾಗ್ಯದಿಂದ; ಬೆಳವಣಿಗೆಯ ಶಕ್ತಿಯನ್ನು ಪೋಷಿಸುವಂತಹ ಉನ್ನತವಾದ ನಾಮವನ್ನು ನೀಡಿದೆ. ಎತ್ತರದ ನಿಲುವಿನ ಜಾಜೀಕಾಯಿ ಮರವು ತನ್ನ ಶಾಖೆಗಳ ಹೊಡೆದಾಟದಿಂದ; ಅತಿ ಸುಂದರಿಯರ ಕೇಶರಾಶಿಯನ್ನು, ಅವರ ಹೆಗಲ ಮೇಲೆ ಹರಡಿದೆ. ಆಕಾಶದಂತಹ ಔನ್ನತ್ಯದ ಸಂದೇಹವಿಡುವಂತಹ ದರ್ಗಾದ ಅನುಯಾಯಿಗಳ ಬೆಂಬಲದಿಂದ; ಆಗಸದಷ್ಟು ಎತ್ತರಕ್ಕೆ ಬೆಳೆದಿದೆ. ಮತ್ತು ತನ್ನ ನೆರಳಲ್ಲಿ ಪಾರಿವಾಳ ಜಾತಿಗೆ ಸೇರಿದಂತಹ ಪಕ್ಷಿಯಂತೆ; ದೇವದೂತರಿಗೆ ಸ್ಥಾನ ನೀಡಿದೆ. ಭೂಮಿಯ ಹುಲ್ಲಿನ ಬೆಳವಣಿಗೆಯಿಂದ ಕೊಳಲುವಾದಕರಂತೆ ಹಾಡಲಾರಂಭಿಸಿದೆ. ಉದ್ಯಾನದ ಚಿತ್ತಾಕರ್ಷಕವಾದ ಸಭೆಗೆ ಸೂಫಿಗಳ ಸಮಿತಿಯ ತೇಜಸ್ಸು ಪ್ರಾಪ್ತವಾಗಿದೆ. ಬೆಳ್ಳಿಯಂತಹ ಮೀನಖಂಡ (ಪಿಂಡ್ಲಿ) ಹಾಗೂ ಮಲ್ಲಿಗೆ ಹೂವಿನಂತಹ ಮುಂಗೈಯ ಮಾರ್ಗದ ಮೇಲೆ ನಿಧಾನವಾಗಿ ಬೀಸುವ ಪ್ರಾತಃಕಾಲದ ಗಾಳಿಯು, ಕೆಂಪುಬಣ್ಣದ ಸುಮನ ಮತ್ತು ಗುಲಾಬಿಯ ಬಟ್ಟಲುಗಳಿಂದ ವಿರೋಧಿಗಳಿಗೆ ಅಮಲೇರಿಸಿ, ಅವರು ಒಟ್ಟಾಗಿ ಆಸೀನರಾಗಲು ಅಪೇಕ್ಷಿಸುತ್ತದೆ. ಸೂಫಿಗಳು ಸಂಗೀತ ಆಲಿಸುವಾಗ, ನರ್ತಿಸಲಾರಂಭಿಸುವಂತೆ; ಮೋಡಗಳು ಮಳೆಯ ಹೊಡೆತದಿಂದ ಮಿಂಚನ್ನು ಗಾಳಿಯ ಮೇಲೆ ನರ್ತಿಸುವಂತೆ ಮಾಡುತ್ತವೆ. ನದಿಗಳು ತರಂಗಗಳ ನಗಾರಿಗಳಿಂದ ಕೈಮುದ್ದಳೆಯ ಧ್ವನಿಯನ್ನು ಹೊರಹೊಮ್ಮಿಸಿ, ಪ್ರಖ್ಯಾತವಾಗಿವೆ. ನೀರ್ಗುಳ್ಳೆಗಳ ನೃತ್ಯದ ವೈಖರಿಯು, 'ಅಮರತ್ವ ಜಲಾಶಯ'ದ ದಂಡೆಯ ಮೇಲೆ; ಪರಮಾತ್ಮನ ಸಾಮರ್ಥ್ಯವು ಒಬ್ಬ ಪ್ರವಾದಿಗೆ (ಖಿಜರ್) ಪರಮಾಶ್ಚರ್ಯವನ್ನು ನೀಡಿದೆ. ವೈಭವ-ಭೋಗ-ವಿಲಾಸದ ಕೀರ್ತಿಯು, ಜಲ ಮತ್ತು ಭೂಮಿಯ ಮೇಲಿನ ಜೀವಿಗಳ ಕಿವಿಯ ಆಭರಣವಾಗಿದೆ. ಸಾಗರದ

ಮಧ್ಯದಿಂದ, ಮೀನುಗಳ ರೆಕ್ಕೆಗಳ ಚಪ್ಪಾಳೆಯ ಧ್ವನಿಯು ಉದ್ಭವಿಸುತ್ತದೆ. ಗುಲಾಬಿ ಹೂಗಳ ರಾಶಿಯ ಮೇಲೆ ಬಿದ್ದಿರುವ ಬುಲ್‌ಬುಲ್ ಪಕ್ಷಿಗಳು; ಪರ್ವತಶ್ರೇಣಿಗಳನ್ನು ಎಲ್ಲೆಡೆಗೆ ಮರುಭೂಮಿಯನ್ನಾಗಿ ಪರಿವರ್ತಿಸಿವೆ.

ಎಲ್ಲ ಪ್ರವಾದಿಗಳ ನುಡಿಗಳಿಗೆ ಪರಮಾತ್ಮನ ಸ್ತುತಿಯ ಅಂದಾಜಿನ ಮೂಲಕ, ವಾಕ್ಸಾಮರ್ಥ್ಯದ ಸ್ಥಾನ–ಮಾನ ಪ್ರಾಪ್ತವಾಗಿದೆ. ದೇವತ್ವದ ಜ್ಞಾನಿಗಳು ಶರೀರದಲ್ಲಿ, ಆತ್ಮದ ಲೇಖನಿಯ ಧ್ವನಿಯಿಂದ ಜೀವನೋತ್ಸಾಹ ಚಲಿಸಲಾರಂಭಿಸುವದೆಂದು; ನಕ್ಷತ್ರಶಾಸ್ತ್ರದ ಗ್ರಂಥಕರ್ತರು ತಿಳಿಯುತ್ತಾರೆ. ಅವರು ಹೃದಯದ ವಾಸ್ತವಿಕತೆಯ ದರ್ಪಣದಿಂದ, ನಕ್ಷತ್ರಗಳ ದೂರದ ಸ್ಥಾನ/ಚಲನಾವೇಗವನ್ನು ಅಳೆಯುವ ಉಪಕರಣವನ್ನು ಕೈಯಲ್ಲಿ ಹಿಡಿದುಕೊಂಡು; ಸಜ್ಜನರ ಅದೃಷ್ಟದ ಜಾತಕ ಬರೆದು, ಗೌರವಾನ್ವಿತ ಹಾಗೂ ಮಹತ್ವದ ವ್ಯಕ್ತಿಗಳಾಗಿದ್ದಾರೆ. ಅವರು ಸಮೀಕ್ಷಿಸುವ ಲೇಖನಿಯಿಂದ ಪುಟದ ಮೇಲೆ ಬಿಂದುಗಳನ್ನು ಹಾಕಿ; ಅದನ್ನು ನಕ್ಷತ್ರಭರಿತ ಆಕಾಶವನ್ನಾಗಿ ಮಾಡಿದ್ದಾರೆ. ಈ ದೊಡ್ಡ ದಾನಕ್ಕಾಗಿ, ಕೃತಜ್ಞತೆ ಸಲ್ಲಿಸುವ ಸದವಕಾಶವಿದಾಗಿದೆ. ಕಾಲದ ಶುಭಕಾರಕ ಘಳಿಗೆಯಲ್ಲಿ, ಪವಿತ್ರನಗರ ಮಹಮ್ಮದಪುರದ ವ್ಯಾಪ್ತಿಯೊಳಗಿನ ಪ್ರತಿಯೊಂದು ಗುಮ್ಮಟವು; ಸಂಪೂರ್ಣ ಜ್ಯೋತಿನಿಲಯವಾಗಿ ತಲೆ ಎತ್ತಿ ನಿಂತಿದೆ. ಗುಮ್ಮಟ ಶಿಖರದ ಕಮಾನಿನ ಶಿಲೆಯು; ಸೂರ್ಯ–ಚಂದ್ರನ ಪ್ರಕಾಶದ ಒರೆಗಲ್ಲಾಗಿದೆ. ವೈಭವ–ಪ್ರತಿಷ್ಠೆಯ ತೇಜೋಮಯ ಸಭೆಯ ಶೃಂಗಾರವು ದಿನದಿಂದ ದಿನಕ್ಕೆ ಹೆಚ್ಚುತ್ತ ಸಾಗಿದೆ.

'ಪರಿಶುದ್ಧತೆಯಿಂದ ತುಂಬಿದ ಸಮಾರಂಭವು ಹೃದಯವನ್ನು ಉದ್ದೀಪನಗೊಳಿಸುವಂತಹದಾಗಿದೆ. ಜಗತ್ತು ನೌರೋಜ್ ಹಬ್ಬದ ಪ್ರಾತಃಕಾಲವಾಗಿದೆ. ಸ್ವಯಂ ಅಲಂಕೃತರಾದ ಸೂರ್ಯನಂತಹ ರೂಪಹೊಂದಿದ ಪ್ರೇಮಿಗಳಂತೆ, ಆಕಾಶದ ಕೈಗಳ ಮೇಲೆ ಸಂಧ್ಯಾರಾಗದ ಮದರಂಗಿಯನ್ನು ಹಚ್ಚಲಾಗಿದೆ. ಸಭೆಯನ್ನು ಶೃಂಗರಿಸಿ, ಉತ್ಸಾಹಭರಿತಗೊಳಿಸಲಾಗಿದೆ. ಬಂಗಾರದ ಡೇರೆಯು ಉದ್ಭವಿಸಿದಂತೆ ಕಾಣುತ್ತದೆ. ಈ ಸಮಾರಂಭದಲ್ಲಿ ಸಮಗ್ರ ಆಕಾಶವು ಓಡುತ್ತ ಬರುತ್ತದೆ. ಜಗತ್ತಿನ ಪರಮ ಸುಂದರ ಪ್ರೇಯಸಿಯರ ನೃತ್ಯದಿಂದ. ಸ್ವರ್ಗದಲ್ಲಿ ಗುಲಾಬಿಯ ಹೂಗಳನ್ನು ಹರಡಲಾಗುತ್ತದೆ. ಅಪರೂಪದ ಪ್ರಕಾರದ ಸುಂದರಿಯರ ಹೃದಯದ ಉಷ್ಣತೆಯಿಂದ; ಎಲ್ಲರೂ ಕುಶಾಗ್ರಮತಿಗಳಾಗಿದ್ದಾರೆ; ಆಕಾಶದ ಕೈಯಿಂದ ಚಂದ್ರ–ಸೂರ್ಯರ ಬಟ್ಟಲುಗಳು. ಈ ಮನಸ್ಸನ್ನು ಸೆರೆಹಿಡಿಯುವ ಸಭಾ ಸ್ಥಾನದಲ್ಲಿ ಪತನವಾಗುತ್ತವೆ; ಈ ಬಗೆಯಲ್ಲಿ ಕಾಲದ ಉದ್ಯಾನವು ನೂತನವಾಗಿದೆ. ಹೇಗೆಂದರೆ; ಕೈಗಳ ಸುತ್ತುಮುತ್ತಲೂ ಇರುವದರಿಂದ ಮಣ್ಣು ಬಟ್ಟಲಾಗುತ್ತದೆ. ಗುಲಾಬಿ, ಪೈರು ಪಚ್ಚೆ ಮತ್ತು ಮಲ್ಲಿಗೆಯ ಪ್ರತಿಬಿಂಬದಿಂದ; ಭೂಮಿಯ ಮೇಲೆ ಕಾಮನಬಿಲ್ಲಿನ ಅಲೆಗಳು ಉಕ್ಕಿಬರುತ್ತವೆ. ಸಾಗರದಂತೆ ದಾನ ನೀಡುವ ಸ್ವಭಾವದಿಂದ, ಹೊಸ ಚಂದ್ರನ ನಾಲಿಗೆಯು ನಕ್ಷತ್ರಗಳ

ಮತ್ತು ಸುರಿಸುವಂತಾಗಿದೆ. ಸೂರ್ಯನೂ ಸಹ, ಧರ್ಮವಂತ ಬಾದಶಾಹನೊಂದಿಗೆ ಜೊತೆಗೂಡಿದ್ದಾನೆ. ಆಕಾಶದ ಎದೆಯು ಸಂಪೂರ್ಣವಾಗಿ, ಪ್ರಮಾಣ ಪತ್ರವಾಗಿದೆ'.

ವಿಜಯ ಹಾಗೂ ಸೌಭಾಗ್ಯವನ್ನು ಮುನ್ನಡೆಸುವ, ಜಗತ್ತಿನ ಮಾನವಂತ ಮತ್ತು ಶಕ್ತಿಶಾಲಿಯಾದ ಬಾದಶಾಹನು; ಒಂದು ಸಾವಿರದ ಎಪ್ಪತ್ತನೆಯ ಹಿಜ್ರಿಯ ಸುಪ್ರಸಿದ್ಧವಾದ ಮೊಹರಮ್ ತಿಂಗಳಿನ ಬುಧವಾರದ ಮಧ್ಯಾಹ್ನದ ಎರಡು ಘಂಟೆಗೆ ಸಿಂಹಾಸನಾರೂಢನಾಗಿ; ಪ್ರಪಂಚದ ನಾಲ್ಕು ಮಹಾಭೂತಗಳ ಅಂತಸ್ತನ್ನು ಹೆಚ್ಚಿಸಿದ್ದಾನೆ. ದೇದೀಪ್ಯಮಾನವಾದ ಛತ್ರಿಯ ನೆರಳು; ಜಗತ್ತು ಹಾಗೂ ಕಾಲವನ್ನು ತನ್ನ ಪರಮೋಚ್ಚ ಶ್ರೇಣಿಯ ವ್ಯಾಪ್ತಿಯಲ್ಲಿ ತೆಗೆದುಕೊಂಡಿದೆ. ಕಿರೀಟದ ಉತ್ತರಾಧಿಕಾರತ್ವದ ಅಂತಸ್ತು, ಮತ್ತೊಮ್ಮೆ ಶಕ್ತಿ-ಸಂಪನ್ನರಾದ ತಳಹದಿಯ ಮೇಲೆ ಸುದೃಢವಾಗಿ, ಸಾಮ್ರಾಜ್ಯದ ಕಟ್ಟಡಕ್ಕೆ ಶಾಶ್ವತವಾದ ವೈಭವ-ಘನತೆಯನ್ನು ನೀಡಿದೆ. ಅಂತಸ್ತು ಮಾಪನ ಮಾಡಿ, ಪ್ರವಚನದಲ್ಲಿ ದರ್ಜೆಗಳನ್ನು ವಿವರಿಸುವ ದೆಸೆಯಿಂದ; ಪ್ರವಚನ ಪೀಠವು ಆಕಾಶವನ್ನು ತನ್ನ ವ್ಯಾಪ್ತಿಯಲ್ಲಿ ತೆಗೆದುಕೊಳ್ಳುವಂತಹ ತರಂಗವಾಗಿದೆ. ಒಂದು ವೇಳೆ, ಮಸೀದೆಯು ಇಮಾಮರ (ಸಭಾಧ್ಯಕ್ಷರ) ಮುಂದಾಲೋಚನೆಗಾಗಿ, ಧರ್ಮ ಹಾಗೂ ಸಂಪತ್ತು ಉಳ್ಳವರ ಅಭಿಮುಖ ಕೇಂದ್ರದ ಪರವಾಗಿ ಪ್ರಾರ್ಥನೆಯ ಕೈಗಳನ್ನೆತ್ತಿದರೆ; ಕೃತಾಜ್ಞತಾರ್ಪಣೆಗಾಗಿ ನಿಲ್ಲುವಂತಾಗುತ್ತದೆ.

'ಖುಸ್ರೋ ಗಾಜಿಯ ನಾಮದಿಂದ, ನಾಣ್ಯದ ಮೌಲ್ಯವು ಹೆಚ್ಚುತ್ತದೆ. ಆತನ ಶಿರದ ಸುತ್ತುಮುತ್ತಲೂ ಆಕಾಶವು ತಿರುಗುತ್ತದೆ ಮತ್ತು ಸೂರ್ಯನು ಸಾಷ್ಟಾಂಗ ನಮನ ಸಲ್ಲಿಸುತ್ತಾನೆ. ದುರಾಶೆ ಹಾಗೂ ಬಯಕೆಯ ಮಾರ್ಗವು ಸಂಪೂರ್ಣವಾಗಿ ಮುಚ್ಚಿದಂತೆ, ದಿರಹಮ್ ಮತ್ತು ದೀನಾರ್ ನಾಣ್ಯಗಳಿಂದ, ಜಗತ್ತು ತುಂಬಿ ಹೋಗಿದೆ. ಎಲ್ಲೆಡೆಗೆ ದಿರಹಮ್ ನಾಣ್ಯದ ಹರಡುವಿಕೆಯಿಂದ ಭೂಮಿಯು ನಕ್ಷತ್ರಗಳಿಂದ ತುಂಬಿದೆ. ದೀನಾರ ನಾಣ್ಯದ ಹರಡುವಿಕೆಯಿಂದ ಆಕಾಶದ ಮೇಲೆ ಪ್ರಾತಃಕಾಲದ ಹೊಳಪು ಪಸರಿಸಿದೆ'.

ಎಂದಿಗೂ ಮುಚ್ಚದ ಅಲ್ಲಾಹನ ಕೃಪೆಯ ದ್ವಾರಗಳಂತೆ, ಬಾದಶಾಹನ ಭಂಡಾರದ ಬಾಗಿಲು ಜಗತ್ತಿನ ಜನರಿಗಾಗಿ ತೆರೆದಿದೆ. ಬಾದಶಾಹನ ಸುದೈವದ ನೆರಳಿನಿಂದ, ಸಂತೋಷಭರಿತವಾದ ಹಣೆಯ ಅದೃಷ್ಟವು, ಜಗತ್ತಿನ ಸಂರಕ್ಷಣೆಯ ದರ್ಪಣವಾಗಿದೆ. ಉನ್ನತ ಸ್ಥಾನದ ಉತ್ತರಾಧಿಕಾರತ್ವದ ವಿಶ್ವಾಸವು ವಿಭಿನ್ನ ಧರ್ಮಗಳಲ್ಲಿ ಪಕ್ಷಪಾತ ಮಾಡುವ ಜನರನ್ನು ನಿರಾಕರಿಸಿ, ಭೇದ-ವಿರೋಧದ ಸಂಘರ್ಷಣೆಯಿಂದ ಮುಕ್ತಗೊಳಿಸಿದೆ. ಪ್ರವಾದಿಯ ತೇಜೋಮಯ ಧರ್ಮದ ವಾಸ್ತವಿಕ ಸ್ಥಿತಿಯ ತಜ್ಞ ಹಾಗೂ ಪ್ರಕಟಣೆಯ ಆಕಾಂಕ್ಷಿಯೆಂದು, ಬಾದಶಾಹನನ್ನು ಪರಿಗಣಿಸಲಾಗಿದೆ. ಸಂಶಯಾತೀತವಾದ ಜ್ಞಾನದ ಅಧ್ಯಯನವು ಎಪ್ಪತ್ತೆರಡು ಸಮುದಾಯಗಳ ಪದ್ಧತಿ ಆಗಿದೆ. ಕಿರಿಯ ಮತ್ತು ಹಿರಿಯ ಸಾಮ್ರಾಜ್ಯಗಳ ರಾಜಾಜ್ಞೆಯು, ಬಾಹ್ಯ ಹಾಗೂ

ಆಂತರಿಕ ದೇಶಗಳ ಆಡಳಿತೆಯ ತಳಹದಿ ಆಗಿದೆ. ಹಜರತ್ ಬಾದಶಾಹ ಗಾಜಿಯ ವ್ಯವಸ್ಥೆಯ ಅನುಗ್ರಹದ ಶಿರೋನಾಮೆಯಿಂದ ಸಿದ್ಧವಾಗಿ, ಶಾಶ್ವರವಾಗಿರುವ ಪ್ರಕಟಣೆ ಆಗಿದೆ. ದೇವಾಶ್ರಮುದ (ರಾಜನ) ವೈಭವದ ಸೂರ್ಯನು, ಬಾದಶಾಹನ ಆಧೀನದಲ್ಲಿರುವ ಸಾಮ್ರಾಜ್ಯದ ಮೇಲೆ ಅಷ್ಟೇ ಅಲ್ಲ, ಆತನ ನೆರೆಹೊರೆಯ ಪ್ರದೇಶಗಳಲ್ಲಿ ಸಹ, ಪ್ರಕಾಶಿಸುತ್ತಾನೆ. ಸಮಗ್ರ ಜಗತ್ತಿಗೆ ಸಂಪತ್ತನ್ನು ವಿತರಿಸುವ ಆಹ್ವಾನ ನೀಡಲಾಗಿದೆ. ಸಾಗರ, ಬಂಗಾರ ಹಾಗೂ ಮುತ್ತಿನ ಗಣಿಗಳ ಅಡಗಿದ ರಹಸ್ಯವು ಸಂಪೂರ್ಣವಾಗಿ ಪ್ರಕಟವಾಗಿದೆ. ಬಂಗಾರ–ಬೆಳ್ಳಿ ಸಂಗ್ರಹಿಸುವ ದೆಸೆಯಿಂದ, ವಿಶಾಲವಾದ ಆಕಾಂಕ್ಷೆಯ ಗುರಾಣಿಯು ಸಿದ್ಧವಾಗಿದೆ. ಸೈನಿಕರಿಗೆ ಸಹಾಯ ಮಾಡುವದರಿಂದ ಸೌಭಾಗ್ಯದ ನಗಾರಿಯ ಕೃಪೆಯ ಪರಿಣಾಮ ಮಾಡುವ ಧ್ವನಿಯು ತಮ್ಮ ಆಸೆಗಳನ್ನು ಪೂರ್ತಿಗೊಳಿಸಲು ಬಯಸುವವರನ್ನು ಪರದೆಯಿಂದ ಹೊರಗೆ ತಂದಿದೆ. ಒಂಭತ್ತು ಆಕಾಶಗಳ ಅಡಗಿದ ರಹಸ್ಯವನ್ನು ಹಕ್ಕಿಗಳ ಕೂಗಿನಿಂದ ತುಂಬಿದ ಕಹಳೆಯು ಅತ್ಯಲ್ಪ ಬೆಲೆಯಲ್ಲಿ ಬಹಿರಂಗಗೊಳಿಸಿದೆ.

ಶಾಂತಿ ಮತ್ತು ಸಮೃದ್ಧಿಯ ಗಾಳಿಯ ಬಾಗಿಲಿನಿಂದ ಪ್ರವೇಶಿಸಿ, ಒಳಗಡೆ ಬಂದಿದೆ. ನೂತನ ಚಂದ್ರನು ಶಾಂತಿ ಹಾಗೂ ಬಯಕೆಯ ಪೂರ್ಣ ಚಂದ್ರನ ಧನಸ್ಸು ಆಗಿದ್ದಾನೆ. ಬಾಣವು ತುದಿಯ ಮೊಗ್ಗಿನ ಫಲವತ್ತತೆಯಿಂದ ಹೂವಿನ ಶಾಖೆಗಳ ಮೇಲೆ ಹುಟ್ಟುವಂತಹ ಮೊನಚಾದ ಮುಳ್ಳಿನಂತೆ ವಿರೋಧಿಗಳಿಗೆ ಮೇಲಿಂದ ಮೇಲೆ ತಲೆ ನೋವಾಗಿ, ಗಾಬರಿಗೊಳಿಸಿದೆ. ಖಡ್ಗ ಇರುವ ಒರೆಯ ಮುಖದ ಮೇಲೆ ಹಿಡಿಕೆಯ ಮುದ್ರೆ ಒತ್ತಿ, ಮಿತ್ರತ್ವದ ವಿಜಯ ದ್ವಾರದ ಮೇಲೆ ಪ್ರೇಮದೊಂದಿಗೆ ಜಿಗಿದು, ನೆಪಮಾಡುವ ಕಾಲದ ಹಳೆಯ ದ್ವೇಷದ ಧೂಳಿಯ ನದಿಯನ್ನು ತನ್ನ ಎಡೆಯ ದರ್ಪಣದಿಂದ ತೊಳೆಯಲಾಗಿದೆ. ಭೋಗ–ವಿಲಾಸದ ಸಭೆಯನ್ನು ಶೃಂಗರಿಸುವ ಕೋಲಾಹಲದ ಆವೇಶದಿಂದ, ಆನಂದದ ಶಿಖರವನ್ನೇರಿ ಮೇಲಿನ ಜಗತ್ತಿನಲ್ಲಿ ವಾಸಿಸುವವರು ನರ್ತಿಸಲಾರಂಭಿಸಿದ್ದಾರೆ. ಆಕಾಶದ ಸಭೆಯಲ್ಲಿರುವವರ ಜಿಪುಣತೆಯು ಪವಿತ್ರ ಚುಂಬನದ ರತ್ನಗಂಬಳಿಯನ್ನು ಹುಡುಕಲು; ಒಬ್ಬರು ಇನ್ನೊಬ್ಬರಿಗಿಂತ ಮುನ್ನಡೆಯುವ ಓಟದಲ್ಲಿ ನಿನ್ನ ಉನ್ನತ ಸ್ಥಾನಕ್ಕೆ ತಲುಪುವಂತಹ ಗೌರವವನ್ನು ಸಂಪಾದಿಸಿ, ಒಳಿತನ್ನು ಅಪೇಕ್ಷಿಸುವವರು ಮತ್ತು ಬಡಾಯಿಕೋರರು ಆಗಿದ್ದಾರೆ. ತ್ವರಿತವಾಗಿ ಓಡಿ, ಎಲ್ಲರಿಗಿಂತಲೂ ಮೊದಲು ತಲುಪುವಂತಹ ಆಜ್ಞಾಪಾಲಕನ ಹಣೆಯ ಮೇಲೆ ಕೃತಜ್ಞತೆ ಸಲ್ಲಿಸುವ ಸಾಷ್ಟಾಂಗ ನಮನದ ಚಿನ್ಹೆ ಇದೆ. ಅವನ ತೇಜೋಮಯ ಹಣೆಯು ಈ ಆಕಾಶದ ಹೊಸ್ತಲಿನ ಸಾಷ್ಟಾಂಗ ನಮನಗಳಿಂದ ಪೋಷಿತವಾಗಿದೆ. ಅವನು ಈ ಮಾತುಗಳನ್ನು ಒಪ್ಪಿಕೊಳ್ಳುತ್ತ, ಮುಂದೆ ಬಂದು; ಹೃದಯುವನ್ನು ಸಂತುಷ್ಟಗೊಳಿಸುವಂತಹ ಈ ರಹಸ್ಯವನ್ನು ಬಹಿರಂಗಗೊಳಿಸಿದನು.

'ಒಂದು ವೇಳೆ ಚಂದ್ರನು ನಿನ್ನ ಸಭೆಯ ದೀಪದಿಂದ ಪ್ರಭಾವಿತನಾಗಿದ್ದರೆ; ತನ್ನ ಹೊಳಪಿನಿಂದ ಸೂರ್ಯನನ್ನು ಭೂಮಿಯ ಮೇಲೆ ಕೆಡಹುತ್ತಿದ್ದನು. ಒಂದು ವೇಳೆ ನಿನ್ನ ತೇಜೋಮಯ ಅಭಿಪ್ರಾಯದ ವಾರ್ತೆ ಖುತನ್‌ದ (ಚೀನಾದ ಒಂದು ನಗರ) ಕಾವ್ಯಕ್ಕೆ ಗೊತ್ತಾಗಿದ್ದರೆ. ಚೀನಾದ ಹರಿಣಿಗಳ ಕಸ್ತೂರಿಯ ಚೀಲದಿಂದ ನಕ್ಷತ್ರಗಳನ್ನು ಉದುರಿಸಲಾಗುತ್ತಿತ್ತು. ದೇವಾಜ್ಞೆಸಂಗ್ರಹದ ಲೇಖಕನಾದ ಬುಧನು (ಗ್ರಹ) ಲೇಖನಿಯ ಶಿರವನ್ನು ಬಾಗಿಸಿ, ಶ್ರೇಷ್ಠವಾದ ಶಿರೋನಾಮೆಯನ್ನು ಬರೆದಿದ್ದಾನೆ. ಓ! ನಿನ್ನ ನಾಮದಿಂದ ಧರ್ಮ ಹಾಗೂ ಸಂಪತ್ತಿನ ಅರಮನೆಯು ಸುದೃಢವಾಗಿದೆ. ನಿನ್ನ ಲೇಖನಿಯ ಚುಕ್ಕೆಯು ದೇವಬಲದ ಒರೆಗಲ್ಲಾಗಿದೆ. ನಿನ್ನ ಮಹಾನತೆಯ ಉದ್ಯಾನದ ಹಕ್ಕಿಗಳು ನಕ್ಷತ್ರಗಳಲ್ಲಿ ಗೂಡು ಕಟ್ಟುತ್ತವೆ. ನಿನ್ನ ದರ್ಗಾದ ಕಾಬಾದ ಯಾತ್ರಿಕರು ಆಕಾಶದ ಮೇಲೆ ಸವಾರಿ ಮಾಡುತ್ತಾರೆ. ನಿನ್ನ ಬಾಣದಂತಹ ಸಮಯೋಚಿತವಾದ ರಹಸ್ಯಗಳು ಜಗತ್ತಿನಲ್ಲಿ ಬೇರೆಡೆಗೆ ಎಲ್ಲಿಯೂ ದೊರಕುವುದಿಲ್ಲ. ನಿನ್ನ ಖಡ್ಗದ ಗುಣಗಾನವು, ಕಾವ್ಯವನ್ನು ಅತಿಶಯವಾಗಿ ಪ್ರಕಾಶಮಾನಗೊಳಿಸಿದೆ. ನಿನ್ನ ಕಠಾರಿಯ ಗುಣದ ತಂಡವು ಆಯ್ಕೆ ಮಾಡಿ, ವಿರೋಧಿಗಳನ್ನು ತಮ್ಮ ಸ್ಥಳದಿಂದ ತೆರವು ಮಾಡುತ್ತದೆ. ವೃದ್ಧನಾದ 'ಬುಖತಿ' (ಒಂದು ಶ್ರೇಷ್ಠ ಪ್ರಕಾರದ ಒಂಟೆ) ಆಕಾಶಕ್ಕೆ ರಕ್ತ ತರಂಗದ ಲಗಾಮು ಕೊಡುತ್ತದೆ'.

ಸುಮಧುರ ಧ್ವನಿಯನ್ನು ಹೊಂದಿ, ಸಂತೋಷದ ಅರಣ್ಯದಲ್ಲಿ ಸುಖವಾಗಿ ಆಸೀನರಾದಂತಹ ತಂಗುದಾಣವನ್ನು ಗುರುತಿಸುವವರು; ಬಾದಶಾಹನ ಗೀತೆಗಳನ್ನು ಹಾಡುವವರ ಸಭೆಯಿಂದ ನಿರ್ಗಮಿಸುವಾಗ, ಡೇರೆಯ ಮುಂಭಾಗದ ಪರದೆಯಲ್ಲಿ ಮತ್ತೊಮ್ಮೆ ಗೀತೆಗಳನ್ನು ಹಾಡಲಾರಂಭಿಸಿದರು. ಈ ಪ್ರಕಾರವಾಗಿ, ಸಂತೋಷದ ಗೀತೆ ಹಾಡಿ ಸ್ವಯಂ-ಖ್ಯಾತರಾಗಿದ್ದಾರೆ.

'ಒಂದು ವೇಳೆ ಗಾಯಕನು ನಿನ್ನ ಸಭೆಯ ಗುಣಗಾನದ ಗೀತೆ ಹಾಡಿದರೆ, ಸಾಹಿತ್ಯಿಕ ಕೈಪಿಡಿಯಿಂದ ಗೀತೆಗಳ ಬದಲು, ವಿಶೇಷತೆಗಳು ಹೊರಹೊಮ್ಮುತ್ತವೆ. ಒಂದು ವೇಳೆ ನಿನ್ನ ವೈರಿಯು 'ಕಾನೂನ್'(ಒಂದು ಬಗೆಯ ವಿಶಿಷ್ಟ ವಾದ್ಯ)ವನ್ನು ಸ್ವಾಧೀನಪಡಿಸಿಕೊಂಡರೆ; ಗೀತೆಯ ಧ್ವನಿಯು ಆ ವಾದ್ಯದ ಕೆಳಗಿನಿಂದ ಬಾಣದಂತೆ ಹೊರಬರಲು ಪ್ರಯತ್ನಿಸುತ್ತದೆ'.

ನಕ್ಷತ್ರಗಳ ಗುಂಪಿನ ನಾಯಕನಾದ ಪೂರ್ವದ ಅರಸನು (ಸೂರ್ಯನು) ಸ್ವಯಂ-ಸುಲ್ತಾನನ ಆರಾಧಕರಲ್ಲಿ ಓರ್ವನೆಂದು ಭಾವಿಸಿ; ಶಿಷ್ಟಾಚಾರದ ತೆರಿಗೆ ಕೊಡುವವನಾಗಿದ್ದಾನೆ ಮತ್ತು ಸಂಪೂರ್ಣವಾದ ಮಿಂಚು-ಮೆರಗಿನಿಂದ ಪ್ರಶಂಸೆ ಮಾಡುತ್ತಾನೆ.

'ಓ! ಪೂರ್ವದ ಹೃದಯಗಳ ಸೂರ್ಯನೇ ನಿನ್ನ ಎದುರಿಗೆ ಹಾಜರ್ ಇರುವ, ಆಕಾಶಗಳನ್ನು ಕಣಗಳ ತೂಕದಿಂದ ವಿವರಿಸು. ಜಗತ್ತಿನಲ್ಲಿ ಸ್ವಂತದ ನೆರಳಿನಿಂದ ಉದ್ಯಾನ ನಿರ್ಮಿಸಲು ಸಾಧ್ಯವಿದೆ. ನಿನ್ನ ದರ್ಗಾದ ಸುತ್ತಲೂ ಪ್ರದಕ್ಷಿಣೆ ಮಾಡುವ ಪ್ರತಿಯೊಬ್ಬರೂ

ಅರಿತಿದ್ದಾರೆ. ಇದು ಮೋಡವಲ್ಲ, ಆದರೆ ಆತನ ಹಣೆಯಿಂದ ಪ್ರತ್ಯೇಕಿಸಲ್ಪಟ್ಟ ಚರ್ಮವಾಗಿದೆ. ಆತನ ಸಾಷ್ಟಾಂಗ ನಮನ ಸಲ್ಲಿಕೆಯಿಂದ, ಆಕಾಶವು ಪವಿತ್ರವಾದ ಹೊಸ್ತಿಲಾಗಿದೆ'.

ಮೀನರಾಶಿಯು ವಿಜಯಿಯಾದ ಸೈನಿಕನಂತೆ, ಆತನ ಮೇಲೆ ದೃಷ್ಟಿ ಹರಿಸಿ ಆಶ್ಚರ್ಯಚಕಿತನಾಗಿ, ಈಟಿ(ಭಾಲೆ)ಯನ್ನು ಅಪಾರ ಸಂತೋಷದಿಂದ ತೀಡುತ್ತದೆ ಮತ್ತು ಅನೈಚ್ಛಿಕವಾಗಿ ಈ ಸೂಕ್ಷ್ಮವಾದ ವಿಷಯವು ಅದರ ನಾಲಿಗೆಯ ಮೇಲೆ ಬರುತ್ತದೆ.

'ನಿನ್ನ ಯುದ್ಧಭೂಮಿಯ ಸಿಂಹದ ಪ್ರಥಮ ದಾಳಿ. ತನ್ನ ಪ್ರಭಾವವನ್ನು ಆಕಾಶದಲ್ಲಿ ಮಕರ ಮತ್ತು ಮೇಷ ರಾಶಿಯ ಮೇಲೆ ಹೆಚ್ಚಾಗಿ ಹಾಕುತ್ತದೆ. ತೆರೆದ ಕಣ್ಣುಗಳಂತೆ ಮಿತ್ರರನ್ನು ವಿಶೇಷವಾದ ರೀತಿಯಲ್ಲಿ ಕಾಣುತ್ತಾನೆ. ನಿನ್ನ ಖಡ್ಗವನ್ನು ಕಂಡು, ವೈರಿಯ ಸ್ಥಿತಿಯು ಬದಲಾಗುತ್ತದೆ. ಶೂರ ಸೈನ್ಯದ ವಿಜಯವು ನಿನ್ನ ಖಡ್ಗದ ಸಾಮರ್ಥ್ಯವಾಗಿದೆ. ರಕ್ತಸುರಿಸುವ ವೈರಿಗಳು ಎರಡೂ ಬದಿಗಳಲ್ಲಿ ಹತರಾಗಿ ಪತನವಾಗಿದ್ದಾರೆ'.

ಗುರುಗ್ರಹವು ಈ ಭವ್ಯವಾದ ದರ್ಗಾದ ಖರೀದಿ ಮಾಡಿದ ಗುಲಾಮನಾಗಿದ್ದನು. ಬಾದಶಾಹ ಗಾಜಿಯ ಸನ್ನಿಧಾನದಲ್ಲಿ ಹಾಜರಾಗುವ ಸದವಕಾಶವನ್ನು ಪಡೆದು, ಸಾಷ್ಟಾಂಗ ನಮನ ಸಲ್ಲಿಸುತ್ತ ಪ್ರಶಂಸೆಯ ರಾಜ ಮಾರ್ಗದ ಮೇಲೆ ಈ ಬಗೆಯಲ್ಲಿ ಓಡಿದನು.

'ನೀನು ಮಿತ್ರತ್ವದ ಸಂಪತ್ತಿನಿಂದ ಪ್ರತಿಯೊಬ್ಬನನ್ನು ಕೊಂಡುಕೊಳ್ಳುವೆ. ಉಂಗುರ ಖರೀದಿಸಿದರೆ, ಆಕಾಶವು ಮುಂಗಡಹನ ನೀಡುತ್ತದೆ. ಒಂದು ಸಂಜ್ಞೆಯಲ್ಲಿ ಹಲವಾರು ಜಗತ್ತುಗಳನ್ನು ಸೃಷ್ಟಿಸುತ್ತಾನೆ. ಸಮಗ್ರ ಜಗತ್ತಿಗೆ ದಾನ ನೀಡಲು, ನಿನ್ನಂತಹ ಧರ್ಮಿಷ್ಠನು ಬಯಸುತ್ತಾನೆ'.

ಅಂಕಿ-ಅಂಶಗಳ ಪ್ರಕಾರ, ಅಪಾರ ಸಂಪತ್ತಿನ ಒಡೆಯನೆಂದು ಒಪ್ಪಿಕೊಳ್ಳಲಾಗಿದೆಯೆಂದು ಏಳನೇ ಆಕಾಶದ ಸಂರಕ್ಷಕನು ತಿಳಿಯುತ್ತಾನೆ. ಇದೇ ಪ್ರಕಾರದ ಪ್ರಮಾಣದಲ್ಲಿ ಆತನು ಸೌಭಾಗ್ಯವನ್ನು ಸಂಗ್ರಹಿಸಿ, ಗುರುಗ್ರಹಕ್ಕಿಂತಲೂ ಹೆಚ್ಚಿನ ಸ್ಥಾನವನ್ನು ಹೊಂದಿದ್ದಾನೆ. ಅವನು ಸ್ವಯಂ ದೇವರ ಧ್ಯಾನದಲ್ಲಿ ತಲ್ಲೀನರಾದ ಜನರ ಸೇವೆಯ ಗುರುತಿನಿಂದ; ದೃಢವಾದ ನಿಷ್ಠಾವಂತನಾಗಿದ್ದಾನೆ. ಆಜ್ಞಾಪಾಲನೆಯ ಸಂಪ್ರದಾಯಗಳಲ್ಲಿ ಅತಿ ಮುಂದೆ ಸಾಗಿ, ಅರಸತ್ವದ ವರ್ಣನೆಯ ದ್ವಾರಗಳನ್ನು ಮಿತ್ರರಿಗಾಗಿ ತೆರೆಯುತ್ತಾನೆ.

'ಒಂದು ವೇಳೆ, ನಿನ್ನ ಸಭೆಯ ಬಟ್ಟಲು ಆಕಾಶಗಳಿಗೆ ದೊರೆತರೆ; ಶನಿಗ್ರಹದ ಹಣೆಯಿಂದ ಶ್ರೇಯಸ್ಸನ್ನು, ಸೂರ್ಯನ ಕಾಂತಿಯು ಎಸೆದು ಬಿಡುತ್ತದೆ. ಪ್ರೇಮಿಗಳ ವಚನಗಳ ಮೇಲೆ ವಿಶ್ವಾಸವಿಟ್ಟು, ನಿರಾತಂಕವಾಗಿ ಆಸೀನರಾಗುವಷ್ಟು; ನಿನ್ನ ಆಳ್ವಿಕೆಯಲ್ಲಿ ಜಗತ್ತು

ಕೇಡು/ತೊಡಕುಗಳಿಂದ ಮುಕ್ತವಾಗಿದೆ. ಕಣ್ಣಿನಾಕಾರದ ಹೂವು ಒಂದು ವೇಳೆ, ಕಪ್ಪು ಉಡುಪನ್ನು ಕಾಡಿಗೆ/ ಅಂಜನ ಮಾಡಿದರೆ; ನಿನ್ನ ಲೆಕ್ಕಾಚಾರವು ಕಾಡಿಗೆ ಹಚ್ಚಿದ ಕಣ್ಣಿನಿಂದ ಕಡ್ಡಿಯನ್ನು ಎಳೆದುಕೊಳ್ಳುತ್ತದೆ. ಒಂದು ವೇಳೆ ನಿನ್ನ ಕೇಡುಬಯಸುವವರು ತಮ್ಮ ಶರೀರದ ಮೇಲೆ ಶ್ರೀಗಂಧ ಲೇಪಿಸಿಕೊಂಡರೆ; ಬೆಂಕಿಯ ಕಿಡಿಯು ಬೂದಿಯಂತೆ ಚಿತ್ರಕಾರನಾಗುತ್ತದೆ. ಒಂದು ವೇಳೆ ನಿನ್ನ ಅಭಿಪ್ರಾಯಗಳ ಆಶ್ರಯದಿಂದ ಸ್ವಲ್ಪ ಸಹಾಯ ಬೇಡಿದರೆ, ಹಿಂದಿನ ಎಲ್ಲ ಪ್ರತಿಮೆಗಳ ಸಮೂಹವನ್ನು, ದರ್ಪಣವು ಪ್ರಸ್ತುತಪಡಿಸುತ್ತದೆ. ಜೀವ ಬಲಿದಾನ ಮಾಡುವ ನಿನ್ನ ಸೈನಿಕರು, ಕಷ್ಟ–ನಷ್ಟ ನಿವಾರಿಸುವ ಪ್ರಯತ್ನದಲ್ಲಿ ನಿರತರಾಗಿರುತ್ತಾರೆ. ವೈರಿಗಳ ಹೃದಯ ಗೆಲ್ಲುವದರ ಹೊರತಾಗಿ, ತೋಳುಗಳಲ್ಲಿ 'ತಾವೀಜ್'(ತಾಯಿತ) ಕಟ್ಟುವದಿಲ್ಲ'.

ಆತನ ಹೆಸರು ವಿಜಯದ ವ್ಯವಸ್ಥೆಯನ್ನು ತ್ವರಿತಗೊಳಿಸುತ್ತದೆ. ಇಸ್ಲಾಂ ಶಾಶ್ವತಗೊಳಿಸುವಂತಹ, ಸಿಕಂದರನಂತಹ ಔನ್ನತ್ಯ ಸಂಪನ್ನ, ದಾರಾನಂತಹ ದರ್ಪಹೊಂದಿದ, ಧರ್ಮ ಹಾಗೂ ಇಸ್ಲಾಂದ ಕಿರೀಟಧಾರಿಯಾದ ಬಾದಶಾಹನೊಂದಿಗೆ ಜೊತೆಗೂಡಿ ಗೌರವ ಸಂಪನ್ನ ದೇಶಗಳ ಯುದ್ಧದ ಪ್ರಯತ್ನಗಳನ್ನು ಯಶಸ್ವಿಗೊಳಿಸುತ್ತಾನೆ. ಉನ್ನತ ವಂಶದ ಪ್ರಮಾಣಿಕತೆ ಮತ್ತು ವಿಶ್ವಾಸಾರ್ಹತೆಯ ವ್ಯಕ್ತಿಗಳು ಧ್ಯೇಯ ಹಾಗೂ ಅಗತ್ಯಗಳನ್ನು ಸಾಧಿಸುವ ಕಾರ್ಯದಲ್ಲಿ ಮಗ್ನರಾಗುತ್ತಾರೆ. ನಂಬಿಕೆ ಮತ್ತು ಪರಿಶುದ್ಧ ಮನಸ್ಸಿನೊಂದಿಗೆ. ಭವ್ಯವಾದ ಉತ್ತರಾಧಿಕಾರತ್ವದ ಉಡುಗೊರೆ/ವಿಧೇಯತೆಯ ಸದವಕಾಶವನ್ನು ಹುಡುಕಿ, 'ಸಾರಥಿ' (ಅಯ್ಯುಬ್) ಎಂಬ ನಕ್ಷತ್ರ ಪುಂಜದ ಔನ್ನತ್ಯದ ಮೇಲೆ ಹೆಗ್ಗಳಿಕೆಯ ಧ್ವಜವನ್ನು ಹಾರಿಸುತ್ತಾರೆ. ದೃಢವಾಗಿ ಎದ್ದು ನಿಲ್ಲುವಂತಹ ಜನರ ಅದೃಷ್ಟವು, ಅವರನ್ನು ರಾಜಧಾನಿಗೆ ತಲುಪಿಸುತ್ತದೆ. ಪ್ರಾರ್ಥನೆಯಲ್ಲಿ ನಿರತರಾದ ದೇವರ ಪುರಾತನ ಪ್ರಜೆಗಳಿಗಾಗಿ, ಶಾಶ್ವತತೆಯ ಸೌಭಾಗ್ಯವು ಶಿರಬಾಗಿಸಿ ಆಗಮಿಸುತ್ತದೆ. ವಚನ ಬದ್ಧರಾದ ಗುಲಾಮರಿಗೆ ಶಾಶ್ವತವಾದ ಸಂಪತ್ತು ಪ್ರಾಪ್ತವಾಗುತ್ತದೆ. ವಿಜಯ ಸಂಪಾದನೆ ಮಾಡಿದ ಸೈನ್ಯದ ಧ್ವಜವಾಹಕನ ನೆರಳಿನಲ್ಲಿ, ಸ್ವರ್ಗಿಯ ವಿಜಯವು ಜಗದಾದ್ಯಂತ ಕೀರ್ತಿಯನ್ನು ಸಂಪಾದಿಸುತ್ತದೆ. ಇತರ ಅಧಿಕಾರ ಹೊಂದಿದ ನಾಯಕರು ಹಾಗೂ ಎಲ್ಲ ಖ್ಯಾತ ಮಂತ್ರಿಗಳು ಸದಾ ಕೃತಜ್ಞತಾರ್ಪಣೆ ಮಾಡಿ, ತಮ್ಮ ಪ್ರತಿಷ್ಠೆ ಮತ್ತು ಅಂತಸ್ತಿನ ತಳಹದಿಯನ್ನು ಸುದೃಡಗೊಳಿಸಿಕೊಂಡಿದ್ದಾರೆ. ಅದ್ವಿತೀಯರಾದ ಪರಿಪೂರ್ಣ ಸ್ವಭಾವದ ವ್ಯಕ್ತಿಗಳ ಬುದ್ಧಿವಂತಿಕೆಯು, ಸಮಗ್ರತೆಯ ಉದ್ಯಾನದ ಹೂಗುಚ್ಛದ ಸುಮನವಾಗಿದೆ. ಪರಿಚಯದ ಸಾರಾಯಿಯ ತುಳುಕುವಿಕೆಯಿಂದ; ಅವರು ಅಧಿಕ ಬುದ್ಧಿವಂತರಾಗಿದ್ದಾರೆ. ಬಾದಶಾಹನ ಸಿಂಹಾಸನಾರೋಹಣದ ಜಾತಕ ಬರೆದು, ಅವರು ವಾಸ್ತವಿಕತೆಯ ದಿಕ್ಸೂಚಿ ಉಪಕರಣವನ್ನು; ಸೂಕ್ಷ್ಮತೆಗಳ ಅವಲೋಕನಾಕಾರರ ಮುಂದೆ ಇಟ್ಟಿದ್ದಾರೆ. ಉಭಯ ಜಗತ್ತುಗಳ ಸಂಬಂಧವನ್ನು ತಮ್ಮ 'ಪಗಡಿ (ಪೇಟಾ) ತುರಾಯಿ' ಎಂದು ಭಾವಿಸಿ, ಬುದ್ಧಿವಂತಿಕೆಯ ಮೈದಾನದಲ್ಲಿ ಪ್ರಖ್ಯಾತರಾಗಿದ್ದಾರೆ.

'ಬಾದಶಾಹ ಗಾಜಿಯ ಅದೃಷ್ಟದ ಜಾತಕ ಬರವಣಿಗೆಯು; ಅದ್ವಿತೀಯ ದೇವಬಲ ಸಂಪನ್ನರ ಪ್ರತಿಷ್ಠೆ ಮತ್ತು ದೇವಾಜ್ಞೆಯಲ್ಲಿ ಹೆಚ್ಚಳ ಮಾಡಿದೆ. ಶಹಭಾಶ್! ಉನ್ನತ ಭಾವನಾತ್ಮಕತೆಯ ದೆಸೆಯಿಂದ ಆಕಾಶ ನಾಮಾ; ಆತನ ಸಂಪತ್ತಿನ ಉದ್ಯಾನದ ಸೂರ್ಯಕಾಂತಿಯ ಬದಲಾಗಿ, ಸೂರ್ಯನಾಗಿದ್ದಾನೆ. ಬುದ್ಧಿವಂತಿಕೆಯು ಯಾವ ಪ್ರಕಾರವಾಗಿ, ಬಾದಶಾಹನ ಅದೃಷ್ಟದ ಜಾತಕ ನೋಡಿದೆಯೋ, ಸೌಭಾಗ್ಯದ ಸಾಕ್ಷ್ಯ ನೀಡುವವರ ಕಣ್ಣುಗಳು ತೆರೆದಿವೆ. ಹರಿಯುವ ನೀರಿನಿಂದ ಯಾವ ಬಗೆಯಲ್ಲಿ ಹುಲ್ಲಿನ ಪ್ರತಿಬಿಂಬ ವ್ಯಕ್ತವಾಗುತ್ತದೆಯೋ; ಅದರ ಜೋತಿಷ್ಯದ ಕೋಷ್ಠಕದಿಂದ (ಜದವಲ್) ಒಂಭತ್ತು ಆಕಾಶಗಳ ರಹಸ್ಯ ಬಹಿರಂಗವಾಗಿತ್ತು'.

ಪ್ರವಾದಿಗಳ ಪ್ರಮುಖ ಹಜರತ್ ಮೊಹಮ್ಮದ ಮುಸ್ತಫಾರ ಪರಿಪೂರ್ಣ ಮಟ್ಟದ ಸೌಂದರ್ಯವು; ತೇಜೋಮಯ ದೃಷ್ಟಿ ಹೊಂದಿದವರ ಕಣ್ಣುಗಳನ್ನು, ದೇವರ ಪರಿಚಯದ ಬಗೆಗಿನ ಅವರ ದೃಷ್ಟಿಶಕ್ತಿಯ ಜ್ವಾಲೆಯು ಪ್ರಜ್ವಲಿಸುವಂತೆ ತೆರೆಯಿತು. ಬಾದಶಾಹ ಗಾಜಿಯ ಸಿಂಹಾಸನಾರೋಹಣದ ನಿರೂಪಣೆ ಮತ್ತು ವಿವರಣೆಯಿಂದ ಇತರ ರಾಜ್ಯಗಳಲ್ಲಿ ಸಿಂಹಾಸನಾರೂಢರಾದ ರಾಜರು ಉಜ್ವಲವಾದ ಆಳ್ವಿಕೆಯ ಶಾಸನ ಹಾಗೂ ವಿಜಯ ಸಂಪಾದನೆಯ ನಿಯಮಗಳನ್ನು ಕಲಿತುಕೊಂಡಿದ್ದಾರೆ. ಜಗತ್ತನ್ನು ಶೃಂಗರಿಸುವ ಆಕಾಶದ ವರ್ಣನೆ ಮಾಡಿ, ಸೌಭಾಗ್ಯವು ಹೆಮ್ಮೆಪಡುತ್ತದೆ ಮತ್ತು ವಿರೋಧ ವ್ಯಕ್ತಪಡಿಸುವ ಜನರ ಕಿವಿಗಳನ್ನು ಜಜ್ಜಿಬಿಡುತ್ತದೆ. ಸಂಭ್ರಮದಿಂದ ಶೃಂಗಾರಗೊಂಡ ಕಿರೀಟದ ಸಮೃದ್ಧಿಯಿಂದ, ಸುಂದರ ನಕ್ಷತ್ರವು ದೃಷ್ಟಿಯನ್ನು ಪಡೆದಿದೆ. ಆತನ ಹಣೆಯ ಉದಯ ಸ್ಥಾನದಿಂದ ಏಳು ದೇಶಗಳ ದ್ವಾರಗಳ ಮೇಲೆ ಶಾಶ್ವತತೆಯ ಸೂರ್ಯನು ಪ್ರಕಾಶಿಸುತ್ತಾನೆ.

'ಪ್ರಕಾಶದಿಂದ ತುಂಬಿದ ಜಗತಿನಂತೆ, ಪ್ರಾತಃಕಾಲವಾಗಿದೆ; 'ತೂರ್' ಪರ್ವತದ ದಿವ್ಯ ಜ್ಯೋತಿಯಂತೆ, ಆಕಾಶದ ಮೇಲೆ ವಿದ್ಯೆಯು ಹರಡಿದೆ. ಧರ್ಮದ ಬಾದಶಾಹ 'ಮೊಹಮ್ಮದ ಶಾ'ನ ಕಿರೀಟವು; ಸೂರ್ಯನಿಗೆ ಅಸೂಯೆ, ಚಂದ್ರನಿಗೆ ಅಭಿಮಾನವಾಗಿದೆ. ಆತನ ಮುಖದಿಂದ ಸೌಭಾಗ್ಯದ ಹೂವು ತಾಜಾ ಆಗಿದೆ. ಆತನ ಹುಬ್ಬಿನಿಂದ ಹೊಸ ಚಂದ್ರನು ಪರದೆಯಲ್ಲಿ ಅಡಗಿದ್ದಾನೆ. ಚೀನದಲ್ಲಿ ಪ್ರೇಯಸಿಯರ ಹುಬ್ಬಿನ ಪಿತೂರಿಯು, ಆತನ ನ್ಯಾಯದ ಹೆದರಿಕೆಯಿಂದ ಗುಪ್ತವಾಗಿದೆ. ಒಂದು ವೇಳೆ, ಬುಲ್‌ಬುಲ್ ಪಕ್ಷಿಗಳು ಚಿಲಿಪಿಲಿ ನಾದ ಮಾಡಲಾರಂಭಿಸಿದರೆ; ಬುಲ್‌ಬುಲ್ ಪಕ್ಷಿಗಳ ಗಲಾಟೆಯ ಉಗಮಸ್ಥಾನವನ್ನು ಮುಚ್ಚಿಬಿಡುತ್ತಾನೆ. ಆತನ ಸಲಹೆಗಳು ಸಮಸ್ಯೆಗಳನ್ನು ಪರಿಹರಿಸುತ್ತವೆ. ಆತನ ಪ್ರೇಮವು ಹೃದಯಗಳಲ್ಲಿ ಮನೆ ಮಾಡುತ್ತದೆ. ಆತನ ಕಪೋಲಗಳಿಂದ (ಆದಿಜ್), ಜಗತ್ತು ಉದ್ಯಾನವಾಗುತ್ತದೆ. ಆತನನ್ನು ಕಂಡು, ಸೂರ್ಯನ ಕಣ್ಣು ಪ್ರಕಾಶಮಾನವಾಗುತ್ತದೆ. ಆತನ ಸಂಪತ್ತಿನ ಮಾರ್ಗದಲ್ಲಿ ಆಗಮಿಸುವವರು ಯಶಸ್ವಿ ಆಗುತ್ತಾರೆ. ಆತನ ನಾಮಸ್ಮರಣೆ ಮಾಡುವ ಪ್ರತಿಯೊಬ್ಬನು, ಉತ್ತಮ ಹೆಸರು ಪಡೆಯುತ್ತಾನೆ'.

ವಿಜಯ ಮತ್ತು ಯಶಸ್ಸಿನ ದೇಶಗಳ ಸಿಂಹಾಸನವನ್ನು ಅಲಂಕರಿಸುವವ, ಸಂಪತ್ತು ಹಾಗೂ ಹಿರಿತನದ ಹೆಗ್ಗಳಿಕೆಯ ಜಗತ್ತಿಗೆ ಉನ್ನತಿ ನೀಡುವವ; ನಿರ್ದಾಕ್ಷಿಣ್ಯ ಸಾಮ್ರಾಜ್ಯದ ಚಕ್ರವರ್ತಿಯಾದ ಬಾದಶಾಹ ಮೊಹಮ್ಮದ ಗಾಜಿಯು ಸಂಪೂರ್ಣವಾದ ದೃಢತೆಯಿಂದ, ಸಿಂಹಾಸನದ ಮೇಲೆ ಆಸೀನನಾಗಿದ್ದಾನೆ. ಅವನು ವೈಭವ ಮತ್ತು ಶಕ್ತಿಯ ಕಿರೀಟವನ್ನು ಧರಿಸಿದ್ದಾನೆ; ಮಹಾ ಅದೃಷ್ಟದ ಔನ್ನತ್ಯದ ಮೇಲೆ ಆಡಳಿತೆಯ ಧ್ವಜ ಹಾರಿಸಿದ್ದಾರೆ. ಭೂಮಿಯ ಬೆಳವಣಿಗೆಯ ಪ್ರಭಾವದಿಂದ, ಆಕಾಶದ ಪಕ್ಷಿಯು ಬುದ್ಧಿವಂತ ಯುವಕರ ಕೈಗೆ ಸೂರ್ಯನ ಹಾರಾಟ ನೀಡಿ– ಉದ್ಯಾನದ ಮಾರ್ಗದಲ್ಲಿ ಸಂತೋಷದಿಂದ ಆಸೀನರಾಗುವಂತೆ ಜಗತ್ತಿನ ಹೊಸ ವಸಂತದ ಪಾಲನೆ–ಪೋಷಣೆ ಆಗಲಾರಂಭಿಸಿದೆ. ಬಾದಶಾಹನ ಸ್ವರ್ಣಲೇಪಿತ ಛತ್ರಿಯು ಜಗತ್ತಿನ ವಿಲಾಸದ ಅಭಿನಂದನೆ ಸಲ್ಲಿಸುವವರಿಗೆ, ಮುತ್ತುಗಳಿಂದ ಅಲಂಕೃತವಾದ ಹಸಿರು ವರ್ಣದ ಗೌರವ ವಸ್ತ್ರ ನೀಡಿ, ಆಕಾಶಕ್ಕಿಂತಲೂ ಅಧಿಕ ಸ್ಥಾನ–ಮಾನ ಕೊಟ್ಟಿದೆ. ಆಸ್ಥಾನದ–ಆಪ್ತಮಿತ್ರರು ಮತ್ತು ಆಯ್ಕೆಹೊಂದಿದ ಸನ್ಮಾನ್ಯ ವ್ಯಕ್ತಿಗಳು ಅಮೌಲ್ಯವಾದ ಪೀಠದಲ್ಲಿ ಆಸೀನರಾಗಿ, ಶಾಶ್ವತವಾದ ಗೌರವಾದರಗಳನ್ನು ಹೊಂದಿ, ವೈಭವ–ವಿಲಾಸದ ಜಗತ್ತಿನ ಬುದ್ಧಿವಂತರಿಗೆ ಆಶ್ಚರ್ಯವನ್ನುಂಟು ಮಾಡಿದ್ದಾರೆ.

'ಬಾದಶಾಹನ ಸಿಂಹಾಸನಾರೋಹಣ ಸಮಾರಂಭದ ಸಂತೋಷಪಡಿಸುವ ವೈಭವದಿಂದ, ಆಕಾಶವು ಮಾರ್ಗದ ಹಾಸಿಗೆ ಆಗಿದೆ. ಭೂಮಿಯು ಸುಗಂಧಭರಿತವಾಗಿದೆ. ಬಾದಶಾಹನ ಅತ್ಯುನ್ನತ ಅದೃಷ್ಟದ ನೆರಳಿನಿಂದ, 'ಸುಹಾ' ನಕ್ಷತ್ರವು ಸೂರ್ಯ ಮತ್ತು ಚಂದ್ರನ ಕರೀಟದ ಮುತ್ತಾಗಿದೆ. 'ಫರೀದೂನ್' (ಇರಾನ್ ದೇಶದ ಮಹಾಪ್ರತಾಪಶಾಲಿ ರಾಜ) ವಂಶದ ವಿಜಯಸಂಪನ್ನ ವ್ಯಕ್ತಿಗಳು; ಸಿಂಹಾಸನದ ಸುತ್ತ ಮುತ್ತಲು ಪಂಕ್ತಿಬದ್ಧರಾಗಿ ನಿಂತಿದ್ದಾರೆ. ಗೌರವ–ಮಾನ್ಯತೆಯ ವೃಕ್ಷದ ಬೆಳವಣಿಗೆಯಿಂದ; ಆಕಾಶದಲ್ಲಿ ಎಲ್ಲೆಡೆಗೆ ಬುಲ್‌ಬುಲ್ ಪಕ್ಷಿಗಳು ಕಾಣಿಸಿಕೊಳ್ಳುತ್ತವೆ. ಜಗತ್ತು ಉದ್ಯಾನವಾಗಿದೆ. ವಿಶ್ವವು ಅರಳಿದೆ. ಸೂರ್ಯಕಾಂತಿ ಹೂಗಳು ತಲೆಯತ್ತಿ ನಿಂತಿವೆ. ಧರ್ಮದ ಬಾದಶಾಹನ ಛತ್ರಿಯ ನೆರಳಿನಿಂದ. ಭೂಮಿಯು ಪನ್ನಂಬರ ಬಣ್ಣದ ಉಂಗುರದ ಹರಳಾಗಿದೆ. ಸೈನಿಕರ ಶಿರಗಳು ಸಾಷ್ಟಾಂಗ ನಮನ ಸಲ್ಲಿಸುತ್ತವೆ. ಬಾದಶಾಹನ ಕೃಪೆಯಿಂದ, ಸಾಗರವು ಮುತ್ತುಗಳಿಂದ ತುಂಬಿದೆ'.

ಗೌರವಾನ್ವಿತ ನಾಯಕರು ಮತ್ತು ವಿಜಯ ಸಂಪನ್ನರಾದ ಅಧಿಕಾರಿಗಳು ಹಜರತ್ ಬಾದಶಾಹ ಗಾಜಿಯ ವೈಭವ–ವಿಲಾಸದ ರಾಜಧಾನಿಗೆ ಸಾಷ್ಟಾಂಗ ನಮನ ಸಲ್ಲಿಸುತ್ತ ಪ್ರತಿಷ್ಠಿತರು ಹಾಗೂ ಭಾಗ್ಯಶಾಲಿಗಳೂ ಆಗಿದ್ದಾರೆ. ಇತರ ಉನ್ನತ ಶ್ರೇಣಿಯ ಸಿಂಹಾಸನದ ಉತ್ತರಾಧಿಕಾರತ್ವದ ವ್ಯಕ್ತಿಗಳಲ್ಲಿ ನವಾಬ್ ಮುಸ್ತಫಾ ಖಾನನ ಉನ್ನತ ಸ್ವಭಾವದಲ್ಲಿ ಜ್ಞಾನದ ರತ್ನಗಳು ಮಿಂಚುತ್ತವೆ. ಅವನು ಶುಭದಾಯಕ ಪ್ರಯತ್ನ ಹಾಗೂ ಏರ್ಪಾಡಿನಿಂದ ಪ್ರಾಮಾಣಿಕತೆ ಮತ್ತು ಶ್ರದ್ಧೆಯ ಬೇರುಗಳು ಸುದೃಢವಾಗಿವೆ. ಹೊಸ ಸನ್ನದುಗಳ ಮಂಜೂರಾತಿಗಾಗಿ, ನವಾಬ್ ಮುಸ್ತಫಾ ಖಾನನು ಬಾದಶಾಹನ

ನೂತನ ವಸಂತದ ಸಭೆಯಲ್ಲಿ ಪ್ರವೇಶಿಸಿದನು ಹಾಗೂ ಶಾಶ್ವತವಾದ ಸಂತೃಪ್ತಿಯನ್ನು ಪಡೆದನು. ಆಡಳಿತ ವ್ಯವಸ್ಥೆಯ ಕೆಲವು ವಿಷಯಗಳಲ್ಲಿ ತಜ್ಞನಾಗಿದ್ದ, ಕುತಂತ್ರ ಮತ್ತು ಒಳಸಂಚಿನಿಂದ ಸಂಪತ್ತನ್ನು ಲೂಟಿ ಮಾಡುವವರ ಕುವಿಖ್ಯಾತ ಸರದಾರ ಹಾಗೂ ಬಾದಶಾಹ ಫಿರ್ದೋಸ್‌ರ ಆಳ್ವಿಕೆಯಲ್ಲಿ ಹವಾಲ್ದಾರ್ ಹುದ್ದೆಯಿಂದ ವಜಾ ಹೊಂದಿ ಬಂಧಿತನಾಗಿದ್ದನು. ಓರ್ವ ಗುಲಾಮನನ್ನು ಕಾರಾಗೃಹದಿಂದ ಬಿಡುಗಡೆಗೊಳಿಸಿದಂತಹ ನವಾಬ್ ಮುಸ್ತಾತಾಬ್‌ನನ್ನು ನವಾಬ್ ಮುಸ್ತಫಾಖಾನನು ವ್ಯವಹಾರ ನೀತಿಯನ್ನು ಗಮನದಲ್ಲಿಟ್ಟುಕೊಂಡು, ಬಾದಶಾಹನ ಎದುರಿಗೆ ಹಾಜರು ಪಡಿಸಿದನು. 'ಖಾಸ್‌ಖಾನಿ' ಮತ್ತು 'ಕೋಟೆಯ ಹವಾಲ್ದಾರ್' ಎಂಬ ಬಿರುದುಗಳನ್ನು ಅವರಿಬ್ಬರಿಗೆ ಕೊಡಲಾಯಿತು. ಮಿರ್ಜಾ ಮೊಹಮ್ಮದ ಅಮೀನ್‌ಲಾರಿ ಎಂಬ ಹೆಸರಿನಿಂದ ಘನತೆವೆತ್ತ ಸನ್ಮಾನ್ಯ ನವಾಬ್ ಪ್ರಸಿದ್ಧನಾಗಿದ್ದನು. ರಾಜನ ಕೃಪೆಯ ಸಂತೋಷದಲ್ಲಿ 'ಮುಸ್ತಫಾ ಖಾನ್' ಎಂಬ ಬಿರುದಿನಿಂದ ಗೌರವದ ಮೈದಾನದಲ್ಲಿ ಹೆಮ್ಮೆಯ ಧ್ವಜವನ್ನು ಹಾರಿಸಿದನು. ದೂರದೃಷ್ಟಿಯಿಂದ, ರಾಜನ ಹತ್ತಿರ ಇರುವ ವ್ಯವಹಾರಗಳನ್ನು ಕ್ರೂರನಾದ ಖಾಸ್‌ಖಾನ್‌ನಿಂದ ಸ್ವಾಧೀನಪಡಿಸಿಕೊಂಡನು. ಏಕೆಂದರೆ: ಎಲ್ಲಿಯವರೆಗೆ ದೇಹದಲ್ಲಿ ಪ್ರಾಣವಿದೆಯೋ, ಅವನು ಒಳಸಂಚು ನಡೆಸಲು ತಲೆ ಎತ್ತದಿರಲಿ, ಆ ಮಾರ್ಗದಲ್ಲಿ ಹೆಜ್ಜೆ ಹಾಕದಿರಲಿ ಮತ್ತು ವಾಗ್ದಾನ ಮಾಡಿದ ಕರಾರುಗಳನ್ನು ಅನುಷ್ಠಾನಗೊಳಿಸಲಿ.

ಈ ವಚನಗಳ ಪಾಲನೆಗೆ ಸಿದ್ಧವಾದ ನಂತರ, ಖಾಸಖಾನನು ಆಡಳಿತೆಯ ಪೀಠದ ಮೇಲೆ ಆಸೀನನಾದನು. ಸಭೆಯಲ್ಲಿ ಮುತ್ತಿಗೆ ಹಾಕಿ, ತನ್ನ ಅಪಶಕುನದ (ನಾಮುಬಾರಕ್) ಸೋದರನಿಗೆ, ಮುಬಾರಕ್‌ಖಾನ್, ಎಂಬ ಬಿರುದು ನೀಡಿ ಪ್ರಸಿದ್ಧಗೊಳಿಸಿ, ಸಂರಕ್ಷಣೆಗಾಗಿ ಬಾಗಿಲು ತೆರೆದನು. ನವಾಬ್ ಮುಸ್ತಾತಾಬ್‌ನು ಮಹೋನ್ನತ ಸನ್ನಿಧಿಯ ಎದುರಿಗೆ ಹಾಜರಾಗಿ, ತನ್ನ ವಿಶ್ರಾಂತಿ ಗೃಹಕ್ಕೆ ತೆರಳಿದನು ಮತ್ತು ಖಾಸ್‌ಖಾನನನ್ನು ಸಾಮ್ರಾಜ್ಯದ ಮಹತ್ಕಾರ್ಯದ ಸಮಸ್ಯೆ ಹಾಗೂ ಪರಿಹಾರದಲ್ಲಿ ಸಹಭಾಗಿಯಾಗಿ ಮಾಡಿ; ಸಂಪೂರ್ಣವಾದ ಆಡಳಿತೆಯ ಹತೋಟಿಯನ್ನು ಖಾಸ್‌ಖಾನನ ವಶಕ್ಕೆ ಕೊಟ್ಟನು.

ಸಾಮ್ರಾಜ್ಯದ ಮಹತ್ವದ ಸಮಸ್ಯೆಗಳನ್ನು ಪರಿಹರಿಸುವ ಏರ್ಪಾಡು, ಖಾಸಖಾನನ ಸಲಹೆಯಿಂದ ಆಗುತ್ತಿತ್ತು. ಆದುದರಿಂದ ಬಾದಶಾಹನ ಆಳ್ವಿಕೆಗೆ ಸಂಬಂಧಿಸಿದ ಸರ್ವ ವ್ಯವಹಾರಗಳು; ಖಾಸಖಾನನ ನಿಯಂತ್ರಣಕ್ಕೆ ಒಳಪಟ್ಟಿದ್ದವು. ಅಹಂಕಾರದ ಬೆಂಕಿಯ ಹೊಗೆಯು ಮೆದುಳಿನ ರಂಧ್ರದಿಂದ ಒಳಗೆ ಪ್ರವೇಶಿಸಿ, ಆತನ ಮೆದುಳು ರಹಿತ ತಲೆಯನ್ನು ದುರ್ದೈವದ ಹೊಗೆಯಿಂದ ತುಂಬಿದ ಮಣ್ಣಿನ ಪಾತ್ರೆಯನ್ನಾಗಿ ಮಾಡಿತ್ತು. ದುರಭಿಮಾನದ ಸಾರಾಯಿಯ ಕೆನೆಯ ಪರಿಣಾಮದಿಂದ ಆತನ ಘರ್ಜನೆಯು ಪ್ರತಿಕ್ಷಣ ಹೆಚ್ಚಾಗುತ್ತಿತ್ತು. ಒಮ್ಮೊಮ್ಮೆ ಬಾದಶಾಹನ ವ್ಯವಹಾರಗಳ

ತೋರಿಕೆಯು ನವಾಬ ಮುಸ್ತತಾಬ್‌ನ ಅನುಮತಿಯಿಂದ ಆಗುತ್ತಿತ್ತು. ಹಜರತ್ ಬಾದಶಾಹ ಗಾಜಿಯು ಬಾಹ್ಯ ಹಾಗೂ ಆಂತರಿಕ ವಾಸ್ತವಾಂಶದಿಂದ ಪರಿಚಿತನಾಗಿದ್ದನು. ಸಾಮ್ರಾಜ್ಯದ ಮಹತ್ಕಾರ್ಯದ ಸುವ್ಯವಸ್ಥೆಯನ್ನು; ಅಲ್ಲಾಹನ ದೇವಾನುಗ್ರಹದಿಂದ ನವಾಬ್ ಮತ್ತು ಖಾಸಖಾನ್‌ನನ್ನು ನೇಮಿಸಿ, ದಿನ-ರಾತ್ರಿ ಮಹಾನ್ ಧೈರ್ಯವನ್ನು ನೀಡಿ, ಯಶಸ್ಸು ಆರಂಭಿಸಿದನು.

ನಾಲ್ಕು ದಿಕ್ಕಿನಲ್ಲಿ ಸಂತೋಷ ಪಸರಿಸಿತು. ಯಾವಾಗಲೂ ಹೃದಯಕ್ಕೆ ಸಂತೋಷ ಉಂಟಾಗಲು ಮತ್ತು ಭೋಗ-ವಿಲಾಸದಲ್ಲಿ ಜೀವನ ಕಳೆಯುವ ಕಾರಣದಿಂದ ಜನರು ಸಂತೋಷ ಹಾಗೂ ಪ್ರಬಲವಾದ ಆಸೆಯಿಂದ ಮದೋನ್ಮತ್ತರಾದರು. ಎಲ್ಲೆಡೆಗೆ ಬೆಳಕು ಹರಡುವ ಸೂರ್ಯನು ಕಾಣಲಾರಂಭಿಸಿದನು.

'ನಿರಂತರ ಅಭಿನಂದನೆಯಿಂದ ಸಾರಾಯಿಯ ಗಡಿಗೆಯು ದೊಡ್ಡದಾಯಿತು. ಸಾರಾಯಿಯ ಬಟ್ಟಲಿಗೆ ಬಡ್ತಿ ದೊರಕಿದ ದೆಸೆಯಿಂದ ಸಂತೋಷಾಚರಣೆ ಮಾಡುವವರಿಗೆ ಪ್ರಾತಃಕಾಲ ಉಂಟಾಯಿತು. ದೇವಭಕ್ತರ ಜೇಬು ಜಪಮಾಲೆಯ ಬಂಡವಾಳದಿಂದ ಖಾಲಿ ಆಗಿದೆ. ಆರಾಧನಾಲಯದ (ಖಾನ್‌ಖಾ) ಹೊರಗೋಡೆಗಳು ಸಾರಾಯಿ ಮಾರಾಟದ ಮಾರುಕಟ್ಟೆಗಳಾಗಿವೆ'.

ಪಶ್ಚಿಮದಿಂದ ಪೂರ್ವದವರೆಗೆ ಭೂಮಿಯ ಮೇಲ್ಭಾಗವು ಮಿಂಚುವ ಮಾಣಿಕ್ಯದ ತುಂಡಾಗಿರುವಂತೆ; ಕಾಲದ ಸಭೆಯಲ್ಲಿ ಸಾರಾಯಿಯ ಹೂಜಿ ಹಿಡಿದ ಜನರು ಕೆಂಪು ಸಾರಾಯಿಯ ಗುಟುಕು ಕುಡಿಯುತ್ತಾರೆ. ಹೂವಿನಂತಹ ದೇಹ ಹೊಂದಿದ ಮತ್ತು ಮಲ್ಲಿಗೆಯಂತಹ ಕಪೋಲಉಳ್ಳವರು ಬೀದಿ ಹಾಗೂ ಬಾಜಾರದಲ್ಲಿ ಸಂತೋಷದಿಂದ ಸಂಚರಿಸುತ್ತಾರೆ. ಯಾವಾಗಲೂ ವಸಂತಕಾಲ ಹೊಂದಿರುವ ಉದ್ಯಾನದ ಬುಲ್‌ಬುಲ್ ಹಕ್ಕಿಗಳು ಯಶಸ್ಸಿನ ತಳಹದಿಯನ್ನು ನಿರ್ಮಿಸಿವೆ. ತುರಾಯಿ ಮತದಂತಹ ಉನ್ನತ ನಿಲುವು ಹೊಂದಿರುವ ವ್ಯಕ್ತಿಗಳು ಹೃದಯವನ್ನು ಆಕರ್ಷಿಸುವ ಬಗೆಯಲ್ಲಿ ಸಂಚರಿಸುತ್ತ; ಆಕಾಶದ ಮೇಲೆ ಹಾರಾಡುವ ಸ್ವತಂತ್ರ್ಯವಾದ ಪಕ್ಷಿಗಳನ್ನು 'ಖುಮ್ರಿ' ಪಕ್ಷಿಯಂತೆ ತಮ್ಮ ಭಾವ-ಭಂಗಿಯಲ್ಲಿ ಸೆರೆಹಿಡಿಯುತ್ತಾರೆ. ಸೂರ್ಯನಂತಹ ಹಣೆಯುಳ್ಳ, ಪ್ರಾತಃಕಾಲದಂತಹ ಮುಖ ಹೊಂದಿದವರು; ಹೃದಯದ ಆಸಕ್ತಿಯ ಉಷ್ಣತೆಯಿಂದ, ಬೆವರು ತುಂಬಿದ ಮುಖದೊಂದಿಗೆ ಹೊರಗೆ ಬಂದಿದ್ದಾರೆ.

'ದಕ್ಷಿಣದ ಪ್ರೇಯಸಿಯರಿಂದ ಆಕಾಶದ ಮೇಲೆ ಗುರುತು ಮೂಡಿವೆ. ಚಂದ್ರ ಮತ್ತು ಸೂರ್ಯನಿಂದ ಬಿದ್ದಿರುವ ಕಲೆಗಳ ಮೇಲೆ ಇನ್ನಷ್ಟು ಕಲೆಗಳು ಬಿದ್ದಿವೆ'.

ಹೊಸ ಚಂದ್ರನಂತಹ ಹುಬ್ಬು ಮತ್ತು ಹರಿಣಿಯಂತಹ ಕಣ್ಣುಗಳುಳ್ಳವರು ರೆಪ್ಪೆಗಳ ಸನ್ನೆಗಳಿಂದ ದರ್ಶಕರ ತಾಳ್ಮೆಯ ಏಣಿಯನ್ನು ಭಗ್ನಗೊಳಿಸುತ್ತಾರೆ. ಬೆಡಗು-ಬಿನ್ನಾಣದ ಉದ್ಯಾನದ ಮೊಗ್ಗುಗಳ ಬಾಯಿ ಹೊಂದಿದವರು; ಮಧುರ ತುಟಿಗಳ ಪಕಳೆಗಳಿಂದ;

ಅರ್ಧ ಅರಳಿದ ಪುಷ್ಪಗಳಂತೆ ನಸು-ನಗೆಯನ್ನು ಹರಡುತ್ತಾರೆ. ವಿರಹಿಗಳ ಬಡಾವಣೆಯ ಬಡ ಜನರು ಸಂದರ್ಶನದ ಹಣವನ್ನು ಒಟ್ಟುಗೂಡಿಸಿ; ಶ್ರೀಮಂತರಾಗಿದ್ದಾರೆ.

ಸಾರಾಯಿಯ ಬಟ್ಟಲಿನ ಮೇಲೆ ಶಿರವಿಡುವಂತಹ ನೀಲಿ ಆಕಾಶವು, ಕುಡುಕರಿಗೆ ಮರ್ಯಾದೆ ಕೊಡಲು ತಲೆಬಾಗಿಸುತ್ತದೆ. ನಂತರ ಗಾಡಿಯಲ್ಲಿ ಆಸೀನರಾದ ಪ್ರಾರ್ಥನಾ ಗೀತೆಗಳ ಗಾಯಕರು, ಕಾಲದ ಪಾವಿತ್ರ್ಯತೆಯ ದೆಸೆಯಿಂದ ಕೈಯನ್ನು ಹಿಂತೆಗೆದುಕೊಳ್ಳದೇ ಪವಿತ್ರವಾದ ಸಾರಾಯಿಯ ಬಟ್ಟಲನ್ನು ಕೈಯಲ್ಲಿ ಹಿಡಿದುಕೊಂಡಿದ್ದಾರೆ. ವಾಸ್ತವಿಕ ಹಾಗೂ ಅವಾಸ್ತವಿಕ ಜಗತ್ತಿನ ಪವಿತ್ರ ಹೃದಯಿಗಳು ಬಾದಶಾಹ ಗಾಜಿಯ ಕೃಪೆ ಮತ್ತು ಕೊಡುಗೆಯ ಅಭಿನಂದನೆ ಸಲ್ಲಿಸಲು, ಸಂತೋಷದ ಗೀತೆ ಹಾಡುತ್ತಾರೆ.

'ಪ್ರತಿಯೊಂದು ಉದ್ಯಾನದಲ್ಲಿ ಸುಖದ ಹೂಗಳು ಅರಳಿವೆ. ನಾಲಿಗೆಯಲ್ಲಿ ಕವನದ ಮೊಗ್ಗುಗಳು ಅರಳಿವೆ. ಜಗತ್ತಿನಲ್ಲಿ ಹಿಂಸೆಯ ಗುರುತು ಸಿಗುವದಿಲ್ಲ. ಜಗತ್ತಿನ ಎದೆಯಲ್ಲಿ ವೈರತ್ವ ಕಂಡುಬರುವದಿಲ್ಲ. ಎಷ್ಟೊಂದು ಸಂತೋಷ! ದೇವರನ್ನು ತಿಳಿಯುವವರ ಭಾಗ್ಯವು. ಬಾದಶಾಹನ ಮುಖದ ಪ್ರತಿಬಿಂಬವಾಗಿದೆ. ಆತನ ಮುಖದರ್ಶನ ಮಾಡುವ ಪ್ರತಿಯೊಬ್ಬನೂ ಗುಣಸಂಪನ್ನನಾಗುತ್ತಾನೆ. ದೇವರ ಬೆಳಕಿನ ಉದಯ ಸ್ಥಾನವಾಗುತ್ತಾನೆ. ಆತನ ಖಡ್ಗವನ್ನು ನೋಡುವವನು ಒಂದು ವೇಳೆ ಹೆದರಿದರೆ; ವೈರಿಯ ರಕ್ತವು ಆಮ್ಲವಾಗುತ್ತದೆ. ಮುಂದೆ ಸಾಗುವ ಕುದುರೆ ಸವಾರರ ತಂಡದ ಧೂಳಿಯು, ವಿಜಯದ ಪ್ರಾತಃಕಾಲವಾಗಿದೆ. ಜಗತ್ತಿನ ಸೂರ್ಯನು, ಆತನ ಭಾಗ್ಯದ ನಕ್ಷತ್ರವಾಗಿದ್ದಾನೆ'.

ಬುದ್ಧಿಶಕ್ತಿ ಮತ್ತು ಒಳದೃಷ್ಟಿಯ ಜಗತ್ತಿನ ರಾಜದಿಂದ ತೆರಿಗೆ ಪಡೆಯುವ ಪುರಾತನ ಸಾಮ್ರಾಜ್ಯದ ಬಾದಶಾಹ ಹಜರತ್ ಗಾಜಿಯು ಸುದೀರ್ಘ ಸಮಯದವರೆಗೆ ಧ್ಯೇಯ ಸಾಧನೆ ಹಾಗೂ ವಿಜಯ ಸಂಪಾದನೆಯ ಕಾರ್ಯದಲ್ಲಿ ನಿರತನಾಗಿದ್ದನು. ಆತನು ಜಗತ್ತಿನ ಸಂರಕ್ಷಕರಾದ ಮತ್ತು ವಿಜಯಶಾಲಿಗಳಾದ ಪವಿತ್ರ ಹೃದಯಿಗಳಿಗಾಗಿ ಸಂಪತ್ತಿನ ಬಾಗಿಲುಗಳನ್ನು ತೆರೆಯುತ್ತಿದ್ದುದರಿಂದ; ಜಗತ್ತಿನ ಇತರ ರಾಜರಿಗೆ ಹಜರತ್ ಬಾದಶಾಹ ಗಾಜಿಯ ನಿರ್ದಾಕ್ಷಿಣ್ಯತೆಯ ಮೇಲೆ ದ್ವೇಷ ಉಂಟಾಯಿತು.

ಸೌಭಾಗ್ಯ ನಕ್ಷತ್ರದ ಬಿರುದು ಹೊಂದಿದ ಬಾದಶಾಹ ಗಾಜಿಯು ತನ್ನ ಯೌವನದ ಆರಂಭಿಕ ಅಮಲು ಪಡೆಯುವುದಲ್ಲದೇ ಸರದಾರರು ಮತ್ತು ಮುಂದಾಳುಗಳ ಮೂಲಕ, ಸಾರ್ವಜನಿಕರನ್ನು ಕುರಿತು ಯಾವ ಪ್ರಕಾರವಾಗಿ ಸಂಪೂರ್ಣವಾದ ಮಾಹಿತಿ ಹೊಂದಿರುತ್ತಾನೆ. ಉನ್ನತ ಧೈರ್ಯ ಮತ್ತು ಪ್ರಗತಿಪರ ಸ್ವಭಾವದಿಂದ ಸಾಮ್ರಾಜ್ಯದ ಮಹತ್ಕಾರ್ಯಗಳನ್ನು ಕಾರ್ಯಗತಗೊಳಿಸುವ ಉತ್ತರಾಧಿಕಾರತ್ವದ ಆಸ್ಥಾನಿಕರನ್ನು ನೇಮಿಸುತ್ತಾನೆ. ಯಾವುದೇ ಇತರ ಭಾಗ್ಯಶಾಲಿ ರಾಜನು ಇಂತಹ ಆಳವಾದ ದೃಷ್ಟಿಕೋನವನ್ನು ಹೊಂದಿರುವುದಿಲ್ಲ. ರಕ್ತಹೀರುವ ತೀಕ್ಷ್ಣವಾದ ಆತನ

ಖಡ್ಗವು ಒರೆಯಿಂದ ಹೊರಗೆ ಬರದಿದ್ದರೂ ಸಹ ತಲೆ ಎತ್ತಿ ನಿಂತಿದೆ. ಅತಿ ಶೀಘ್ರವಾಗಿ ಹೊರಬೀಳುವ ಬಾಣವು ಇನ್ನೂ ತನಕ ಹೊರಬೀಳದೇ ಗುರಿ ಇಡುವದರಲ್ಲಿ ಪ್ರಖ್ಯಾತವಾಗಿದೆ. ಇತ್ಯಾದಿ ವಿಷಯಗಳನ್ನು ಕುರಿತು ಇತರ ರಾಜರು ಅನುಮಾನ ಹಾಗೂ ಆಶ್ಚರ್ಯದಿಂದ ಪರಸ್ಪರ ಚರ್ಚೆಮಾಡಲಾರಂಭಿಸಿದರು. ಇಂತಹ ದುಷ್ಟ ಯೋಚನೆಗಳಿಂದ ವಿರೋಧದ ಧ್ವಜವು ಬಹಿರಂಗಗೊಂಡಿತು. ಸುರಕ್ಷಿತವಾದ ಸುತ್ತುಮುತ್ತಲಿನ ರಾಜ್ಯಗಳಿಂದ ದಂಗೆಗಳು ತಲೆ ಎತ್ತಿದವು. ದಂಗೆಕೋರರ ಪೈಕಿ, ಅಸಾಧ್ಯವನ್ನು ಸಾಧಿಸುವ ಆಸೆಯಿಂದ ವಿರೋಧಿಸುತ್ತಿದ್ದವರಲ್ಲಿ ಎಲ್ಲರಿಗಿಂತಲೂ ಮೊದಲು ದಂಗೆಯ ಬಿರುಗಾಳಿ ಎಬ್ಬಿಸುವವನು 'ನಿಜಾಮ್‌ಶಾ ಬಹರಿ' ಆಗಿದ್ದನು. ಆದುದರಿಂದ ಈ ದಿಶೆಯಲ್ಲಿ ಬರೆಯಲಾಗುತ್ತದೆ.

ನಿಜಾಮ್‌ಶಾ ಬಹರಿಯ ಬಂಡಾಯದ ಉತ್ತೇಜನ ಹಾಗೂ ಮುನ್ನೆಚ್ಚರಿಕೆಗಾಗಿ ವಿಜಯದ ಸ್ಮರಣೀಯ ಕಾರ್ಯಗಳನ್ನು ಕೈಕೊಂಡ ಸೈನ್ಯದ ಪ್ರತಿನಿಯೋಜನೆ.

ಭಾಷಣ ಕಲೆ ಹಾಗೂ ಚತುರತೆಗೆ ಉತ್ತೇಜನ ಕೊಡುವಂತಹ ಬುದ್ಧಿವಂತಿಕೆ ಮತ್ತು ಜ್ಞಾನ ಮಾರ್ಗದ ವ್ಯವಸ್ಥಾಪಕರು ತಮ್ಮ ಮಹಾಘನತೆ ಹಾಗೂ ಶ್ರೇಷ್ಠತೆಯಿಂದ ದೈವತ್ವವನ್ನು ತಲುಪಿದ್ದರು. ಜಗತ್ತಿನ ಸಂರಕ್ಷಣೆಯ ಅಮಲಿನಲ್ಲಿದ್ದಂತಹ ಜಾಣ್ಮೆ ಹಾಗೂ ಬುದ್ಧಿವಂತಿಕೆಯ ಪೀಠದ ಮೇಲೆ ಆಸೀನರಾದ ಜನರು ತಮ್ಮ ಬುದ್ಧಿವಂತಿಕೆಯಿಂದ ಆಕಾಶದ ಮುದ್ರೆ ಹಾಕಿದ ಗಡಿಗೆಯಿಂದ ವಿವೇಚನೆಯ ಪವಿತ್ರವಾದ ಸಾರಾಯಿಯನ್ನು ಹನಿಸಿದರು. ಈ ಬಗೆಯಲ್ಲಿ ಹನಿಸಿದ ಬುದ್ಧಿವಂತಿಕೆಯ ಸ್ಪಷ್ಟವಾದ ವಿವರಣೆಯ ಬಟ್ಟಲನ್ನು ಜಗತ್ತಿನ ಸಭೆಯಲ್ಲಿ ಸುತ್ತಿಸಲಾಯಿತು.

ಯಾವುದೇ ಕಾರಣವಿಲ್ಲದೇ ಗರ್ವ ಮತ್ತು ಅಹಂಭಾವದ ಅಮಲಿನಲ್ಲಿ ನಿಜಾಮ್‌ಶಾ ಬಹರಿಯು ಬಂಡಾಯವನ್ನು ಬಯಸಿದನು. ಕೆಲವು ದೋಷಪೂರ್ಣ ದೃಷ್ಟಿಕೋನವುಳ್ಳವರು ಮತ್ತು ಎಚ್ಚರಗೇಡಿಗಳ ಕೆರಳಿಸುವಿಕೆ / ಪ್ರೇರೇಪಣೆಯಿಂದ ತನ್ನ ಪುರಾತನ ಸಾಮ್ರಾಜ್ಯವನ್ನು ಹಜರತ್ ಬಾದಶಾಹ ಗಾಜಿಯಿಂದ ಹಿಂತಿರುಗಿ ಪಡೆಯಲು ಅಪೇಕ್ಷಿಸಿದನು. ಅವನು ಇಂತಹ ಅಸಾಧ್ಯವಾದುದರ ಬಯಕೆ (ತಮ ಏ ಖಾಮ್) ಹಾಗೂ ನಿರರ್ಥಕವಾದ ಶೈಲಿಯಿಂದ 'ಬೆಹ್ರಾಮ್' ದೊರೆಯಂತಹ ಪ್ರತಿಕಾರದ ಶಕ್ತಿವಿಹೀನ ಸೈನ್ಯದೊಂದಿಗೆ, ಬಾದಶಾಹ ಗಾಜಿಯ ಸಾಮ್ರಾಜ್ಯದೆಡೆಗೆ ಸಾಗಿದನು. ಸಾಷ್ಟಾಂಗ ನಮನ ಸಲ್ಲಿಸುವವರ ಕಿವಿಯಿಂದ, ಈ ಸಮಾಚಾರವು ರಾಜರಿಗೆ ಆಶ್ರಯದಾತನಾದ ಬಾದಶಾಹನ ದರ್ಬಾರದಲ್ಲಿ ತಲುಪಿದಾಗ, ವಿಜಯ ಮತ್ತು ಯಶಸ್ಸಿನ ಪ್ರಪಂಚದ ಬಾದಶಾಹನು ತನ್ನ ವಿಜಯಸಂಪನ್ನ ಸೈನ್ಯದ ಸಮರ್ಥ ಮಂತ್ರಿಗಳು ಮತ್ತು ಖ್ಯಾತ ಸರದಾರರೊಂದಿಗೆ ಸೈನ್ಯವನ್ನು ಮುನ್ನಡೆಸಿದನು.

'ಬಾದಶಾಹ ಗಾಜಿಯ ಸೈನ್ಯವು ರವಾನೆ ಆದಾಗ, ಸಮಗ್ರ ಜಗತ್ತಿನಲ್ಲಿ ಕೋಲಾಹಲ

ಉಂಟಾಯಿತು, ಯುದ್ಧದ ಹೆದರಿಕೆಯು ಹೃದಯಗಳಲ್ಲಿ ತುಂಬಿತು, ಸೂರ್ಯನಂತೆ ಆಕಾಶದ ಮುಖವು ಹಳದಿ ಆಯಿತು, ಪ್ರತಿಯೊಂದು ದಿಕ್ಕಿನಿಂದ ಗಲಭೆ ತಲೆ ಎತ್ತಿತು. ಪ್ರೇಯಸಿಯರ ರೆಪ್ಪೆಗಳ ಸುಗಂಧಯುತ್ತ ಏಣಿಯಂತೆ, ಥಳಕು-ಬಳಕಿನ ಧೈರ್ಯದ ಜನರ ಹೊರತಾಗಿ, ಆಕಾಶದಲ್ಲಿರುವ ಸೂರ್ಯನಂತೆ, ದಂಗೆಯು ರೂಪಗೊಂಡಿತು'.

ಇತರ ಸಹಾಯ ಕೊಡುವ ಹಾಗೂ ಸ್ವೀಕರಿಸುವ ಮಂತ್ರಿಗಳು ಮತ್ತು ಸರದಾರರು, ಪಂಕ್ತಿಗಳನ್ನು ಭೇದಿಸಲು ಹಾಗೂ ಲೂಟಿಕೋರರ ಮೇಲೆ ದಾಳಿ ಮಾಡುವ ಸೈನ್ಯದೊಂದಿಗೆ ಸಾಮ್ರಾಜ್ಯದ ಸುತ್ತಮುತ್ತಲೂ ರಾತ್ರಿಯಲ್ಲಿ ಆಕ್ರಮಣಕಾರರಂತೆ ಅಲ್ಲಿಗೆ ತಲುಪಿದರು. ನಿಜಾಮ್‌ನ ಸೈನ್ಯವು ದೂರದಿಂದ ಕಾಣಲಾರಂಭಿಸಿತು. ಎರಡೂ ಸೈನ್ಯಗಳು ಪರಸ್ಪರ ಪಂಕ್ತಿಬದ್ಧವಾಗಿ ಯುದ್ಧವನ್ನು ಆರಂಭಿಸಿದವು.

'ದಕ್ಷಿಣದ ಧೈರ್ಯಶಾಲಿಗಳು ಪಂಕ್ತಿಗಳನ್ನು ರೂಪಿಸಿದರು; ಗಾಳಿಯಲ್ಲಿ ಅಗ್ನಿಯಿಂದ ಜ್ವಾಲೆಗಳು ಉದ್ಭವಿಸಲಾರಂಭಿಸಿದವು'.

ಯುದ್ಧದ ಕೋಲಾಹಲವು ಬಿಸಿ ಏರಿತು. ಮಿಂಚುವ ಖಡ್ಗಗಳಿಂದ ಅವುಗಳ ವಾಸ್ತವಿಕ ಗುಣವು, ಬೆಂಕಿಯ ಕಿಡಿಗಳಂತೆ ಜಗಿಯಲಾರಂಭಿಸಿತು.

ವಿಜಯಿ ಸೈನ್ಯಗಳಿಗೆ ಸಹಾಯ ತಲುಪಿಸಲಾಯಿತು. ಮದೋನ್ಮತ್ತವಾದ ಕರಿಯ ಆನೆಗಳು ದಿಗ್ಭ್ರಮೆಗೊಂಡ ಕಾರಣದಿಂದ ನೀಲಿ ಆಕಾಶವು ವಿಚಿತ್ರವಾದ ದೇಹವುಳ್ಳ ಆನೆಗಳ ಕಿವಿಗಳ ಪ್ರತಿಬಿಂಬದಂತೆ ಗೋಚರಿಸಲಾರಂಭಿಸಿತು. ಮುಂಭಾಗದಲ್ಲಿ ಅಲ್ಲಲ್ಲಿ ಸೈನಿಕರನ್ನು ನಿಲ್ಲಿಸಲಾಯಿತು. ಸಿಡಿಮದ್ದಿನ ಮೂಲಕ ಯುದ್ಧವನ್ನು ಆರಂಭಿಸುವ ನಿರ್ಣಯ ಕೈಕೊಳ್ಳಲಾಯಿತು. ಉಕ್ಕಿನ ಹೃದಯದ ಸಮರ ವೀರರು ಸಿಡಿಲಿನಂತೆ ಮಿಂಚುವ ಬಂದೂಕುಗಳಿಗೆ ವಿಶ್ರಾಂತಿ ನೀಡಲಿಲ್ಲ. ತೋಪುಗಳಿಂದ ಸುರಿಯುತ್ತಿದ್ದ ಜ್ವಾಲೆಗಳು ಮತ್ತು ಹೊಡೆತದ ಪೆಟ್ಟಿನಿಂದ ಇರುವೆಗಳ ಗುಂಪಿನಂತಹ ಬೆಂಕಿಯ ಕಿಡಿಗಳು ಭೂಮಿಯಿಂದ ಹೊರಗೆ ಹಾರಲಾರಂಭಿಸಿದವು. ಆಕಾಶದಲ್ಲಿದ್ದು ಜಗತ್ತಿಗೆ ಬೆಳಕು ನೀಡುವಂತಹ ಸೂರ್ಯನ ಉದಯ ಸ್ಥಾನವನ್ನು ಒಂದು ಕೂದಲಿನ ಆವರಣದಿಂದ ನೋಡಿದರೂ ಸಹ ಸೂರ್ಯ ಹಾಗೂ ಕಪ್ಪುವರ್ಣೀಯನ ನಡುವೆ ಯಾವುದೇ ವ್ಯತ್ಯಾಸವಿಲ್ಲದಷ್ಟು ರಣಾಂಗಣದ ಧೂಳಿ, ತೋಪು ಮತ್ತು ಬಂದೂಕುಗಳ ಹೊಗೆಯಿಂದ ವಾತಾವರಣವು ಕಪ್ಪಾಗಿತ್ತು.

ಎರಡೂ ಸೈನ್ಯಗಳು ಅತ್ಯುತ್ಸಾಹದಿಂದ ಪರಸ್ಪರ ಕಾದಾಟದಲ್ಲಿ ನಿರತವಾಗಿವೆ. ದೇವಾಜ್ಞೆಯ ಸಮುದ್ರದಲ್ಲಿ ಕೋಲಾಹಲ ಉಂಟಾಗಿದೆ. ಧೀರರ ರಕ್ತದಿಂದ ನೀಲಿ ಬಣ್ಣದ ಆಕಾಶದ ಮೇಲೆ ರಸ ಸಿಂಧೂರವನ್ನು ಅಂತರ್ಲೀನಗೊಳಿಸಲಾಗಿದೆ. ಹೃದಯದ ತುಣುಕುಗಳ ಮಳೆಯಿಂದ ವರ್ಣಲೇಪಿತರಾದ ವೈರಿಗಳು ಭೂಮಿಯ ಮೇಲೆ ಕಿಲುಬಿನ ಪುಡಿಯ ಗುಡ್ಡೆ ಆಗಿದ್ದಾರೆ. ಕಬ್ಬಿಣದಿಂದ ಮಾಡಿದಂತಹ ಬೆನ್ನುಳ್ಳ

ಗುರಾಣಿಯು, ಒಂದು ವೇಳೆ ಆಗ ಆಕಾಶದ ಬೆಂಬಲಿಗವಾಗಿರದಿದ್ದರೆ ಆಕಾಶದ ಏಳನೇ ಬೆನ್ನಿನಿಂದ ಯಾರ ಗುರುತೂ ಸಹ ಸಿಗುತ್ತಿರಲಿಲ್ಲ. ವೀರತ್ವ ಅರಣ್ಯದ ಹುಲಿಗಳ ಹೆದರಿಕೆಯಿಂದ, ಖಡ್ಗದ ತುದಿಯ ಹೊರತಾಗಿ ಇತರ ಯಾರಿಗೂ ಉಸಿರಾಡಿಸುವ ಶಕ್ತಿ ಇರುವದಿಲ್ಲ. ಬೆಳಗಿನಿಂದ ಸಾಯಂಕಾಲದವರೆಗೆ, ಯುದ್ಧದ ಯಂತ್ರವು ಚಲಿಸುತ್ತದೆ. ಯುದ್ಧನಿರತರಾದ ಧೈರ್ಯಶಾಲಿ ಸೈನಿಕರು ಮಿಂಚುತ್ತಿರುವ ಕಬ್ಬಿಣದ ತುದಿಯಿಂದ ಗಾಯಗೊಂಡು ಮರಣಹೊಂದುತ್ತಾರೆ.

ಹಗಲು ಅಂತ್ಯವಾದಾಗ ಇರುಳಿನ ಕಪ್ಪು ಧ್ವಜವು ಕತ್ತಲೆಯಲ್ಲಿ ಮುಳುಗುತ್ತಿರುವಂತೆ ಗೋಚರಿಸಿತು. ನಿಜಾಮಶಾಹಿ ಸೈನಿಕರು ಹೋರಾಟದ ಶಕ್ತಿಯನ್ನು ಕಳೆದುಕೊಂಡು ಡೇರೆಗಳನ್ನು ಕೀಳಲಾರಂಭಿಸಿದರು. ವೈರಿಗಳು ಪಲಾಯನ ಮಾಡಿದರೆಂದು ತಿಳಿದು, ಹಜರತ್ ಬಾದಶಾಹ ಗಾಜಿಯ ಸೈನಿಕರು ಸಮಾಧಾನ ಹೊಂದಿ ತಮ್ಮ ಡೇರೆಗಳಿಗೆ ಹಿಂತಿರುಗಿ ಬಂದರು. ನಿಜಾಮ್‌ಶಾಹಿಯ ಸಮಾಚಾರವಾಹಕರು. ಹೊಂಚುಹಾಕುವ ಸ್ಥಳದಿಂದ ದಾಳಿ ಮಾಡಿದರು. ವಿಜಯ ಸಂಪನ್ನರಾದ ವೀರಸೈನಿಕರು ಸಮಾಚಾರ ಕೊಡಲು ಒಳಗೆ ಪ್ರವೇಶಿಸಿದರು. ಒಳಗೆ ಧಾವಿಸಿ ಬಂದ ಸಾದತ್ ಖಾನ್ ಮತ್ತು ಈತಮಾದ್‌ಖಾನರು ಹಣೆಬರಹದ ರಹಸ್ಯವನ್ನು ಅರಿತಿದ್ದರು.

'ಆಕಾಶದ ಮೇಲೆ ಹಾರಾಡುವ ಗಿಡುಗವು ನರಿಯನ್ನು ಕಾಲಿನಿಂದ ಹಿಡಿದು ಅಲ್ಲಿಗೆ ಎಳೆತಂದಿತು. ಅರಣ್ಯದ ಹುಲಿಗೆ ಇರುವೆಯ ಮನೆಯಲ್ಲಿ ಸ್ಥಳನೀಡಲಾಗಿತ್ತು'.

■

*

ಅಧ್ಯಾಯ – ೩

ನಿಜಾಮ್‌ಶಾಹನ ಸೈನ್ಯದ ಕ್ರೋಧ ಮತ್ತು ಕೋಲಾಹಲದ ಧ್ವಜವನ್ನು ಮತ್ತೊಮ್ಮೆ ಹಾರಿಸುವುದು

ಆರಂಭ ಹಾಗೂ ಅಂತ್ಯದ ವರ್ಣನೆಯ ಸುಂದರ ಮೈದಾನದ ಅದ್ವಿತೀಯ ಅಶ್ವಾರೋಹಿಗಳು ಸಾಂಪ್ರದಾಯಿಕ ಮೈದಾನದಲ್ಲಿ ದಾಳಿ ಮಾಡಿದರು. ಎರಡೂ ಸೈನ್ಯಗಳ ನಡುವೆ ಯುದ್ಧದ ಸಂಗತಿಯು ಸ್ಥಗಿತಗೊಂಡಿದ್ದರೆ ನಿಜಾಮ್‌ಶಾಹನಿಗೆ ಕೆಲವು ದಂಗೆಕೋರರು ಆಮಿಷ ನೀಡಿ, ಯುದ್ಧ ಮಾಡಲು ಉತ್ತೇಜಿಸಿದ ಪರಿಣಾಮವಾಗಿ ಶಾಹ ಫಿರೋಜ಼ಸನ ಗುಲಾಮರ ವ್ಯವಸ್ಥಾಪಕನಾಗಿದ್ದ ಹಮೀದಖಾನನಿಗೆ ತನ್ನ ಸೇನಾಪತಿಯನ್ನಾಗಿ ಮಾಡಿ ರಾಜಧಾನಿ ಮಹಮ್ಮದಪುರದ ಪರವಾಗಿ, ಸಚೇತಕನನ್ನಾಗಿ ನೇಮಿಸಿದನು.

ಹಜರತ್ ಬಾದಶಾಹ ಗಾಜಿಯ ಇತರ ಮಂತ್ರಿಗಳು ಮತ್ತು ಸರದಾರರು ಕೃಷ್ಣಾನದಿಯ ತೀರದಲ್ಲಿ ಯುದ್ಧದ ಶಸ್ತ್ರಾಸ್ತ್ರಗಳನ್ನು ಸಂಗ್ರಹಿಸಿ ಯುದ್ಧ ಮಾಡಲು ಸಿದ್ಧರಾಗಿ ದಾರಿಯಲ್ಲಿಯೇ ನಿಜಾಮ್‌ಶಾಹಿ ಸೈನಿಕರನ್ನು ಬಂಧಿಸಿ, ಪಥಭ್ರಷ್ಟರಾದ ಅಪರಾಧಿ ವೈರಿಗಳನ್ನು ಹೆಜ್ಜೆಯ ಗುರುತುಗಳಂತೆ ಕಾಲಿನಿಂದ ತುಳಿದು ನಾಶಮಾಡಬೇಕೆಂದು ಅಪೇಕ್ಷಿಸುತ್ತಿದ್ದರು. ಅಷ್ಟರಲ್ಲಿ ವೈಭವ–ಗಾಂಭೀರ್ಯದ ಅಡಗುದಾಣದಿಂದ, ವಿಜಯ–ಸಂಪನ್ನ ಸೈನ್ಯಕ್ಕೆ ಮುನ್ನಡೆಯುವ ಕಾಲುಗಳನ್ನು ರಾಜಧಾನಿಯಡೆಗೆ ಹಿಂತಿರುಗಿಸಬೇಕೆಂಬ ಶುಭವಾದ ಆಜ್ಞೆಯು ತಲುಪಿದ ತಕ್ಷಣ ದಾರಿ ತೆರೆದಿರುವದನ್ನು ಕಂಡ ನಿಜಾಮ್‌ಶಾಹನು ತ್ವರಿತವಾಗಿ ಅಂತರವನ್ನು ಕ್ರಮಿಸಿ ನಗರದ ಸಮೀಪ ತಲುಪಿ "ಬಹಮ್ಮನ್‌ಬಲಿ"ಯ ದ್ವಾರದೆಡೆ ಬಂದು, ಹಿಂಸಾಚಾರ ಹಾಗೂ ನಿರ್ಲಕ್ಷತೆಯನ್ನು ಆರಂಭಿಸಿದಾಗ ಅವನಿಗೆ ಶಿಕ್ಷೆ ದೊರಕಿತು.

ಹಜರತ್ ಬಾದಶಾಹ ಗಾಜಿಯ ಕಡೆಯಿಂದ ಈತಮಾದ್‌ಖಾನ್, ನವಾಬ ಮುಸ್ತಫಾಖಾನ್, ಇಖ್ಲಾಸ್‌ಖಾನ್ ಮತ್ತು ಇತರ ವಿಜಯ ಸಂಪನ್ನರಾದ ಖ್ಯಾತ ಸರದಾರರೊಂದಿಗೆ ಹಜರತ್ ಬಾದಶಾಹ ಗಾಜಿಯ ಶೂರ ಅಶ್ವಾರೋಹಿಗಳು ಹಾಗೂ ಧೈರ್ಯದ ಕಾಲ್ದಳದ ವಿಶಿಷ್ಟವಾದ ಸೈನಿಕರು ಬಂದು, ಕುದ್ರಿ ಕುನ್ನೂರ್‌ದಲ್ಲಿ ಉಭಯ ಸೈನ್ಯಗಳು ಪಂಕ್ತಿ ರಚಿಸಿ, ಸಮರದಲ್ಲಿ ನಿರತವಾದವು. ರಣರಂಗದಲ್ಲಿ ದೃಢವಾಗಿ ನಿಂತಿರುವ ಸೈನಿಕರ ಗುರಾಣಿಗಳ ಮೇಲೆ ಮಿಂಚುವ ಖಡ್ಗಗಳ ತುದಿಯಿಂದ ಬೆಂಕಿಯ ಕಿಡಿಗಳು ಸುರಿದು ಪತನವಾಗುತ್ತಿರುವಂತೆ ಹೃದಯಗಳನ್ನು ಕರಗಿಸುವ ಅಗ್ನಿಯಂತಹ ಯುದ್ಧವು ಪ್ರಜ್ವಲಿಸಿತು. ಮಿನುಗುವ ಖಡ್ಗಗಳ ಮಿಂಚಿನಿಂದ ಕಬ್ಬಿಣದ ಉಡುಪುಧಾರಿ ಸೈನಿಕರ ಶಿರಗಳು ವಜ್ರದ ಗಣಿಗಳಂತೆ ಗೋಚರಿಸುತ್ತಿದ್ದವು. ಅಗಲಿದ ಪ್ರೇಯಸಿಯರ ಸಹನೆ–ಸಹಿಷ್ಣುತೆಯ ಕೊರಳಪಟ್ಟಿಯು ತುಂಡು ತುಂಡಾಗುವ ಹಾಗೆ ರಣರಂಗದ ಶ್ರೇಷ್ಠವಾದ ಮುತ್ತುಗಳ ಗುಣವನ್ನು ಗುರುತಿಸಿ, ಪಚ್ಚೆವರ್ಣದ ಮಾಣಿಕ್ಯದೊಂದಿಗೆ ಮಿತ್ರತ್ವ ಹೊಂದಿದ ಖಡ್ಗಗಳ ತುದಿಯು ಆತ್ಮಗಳ ಗುಣದ ಸುರಿಯುವಿಕೆಯಿಂದ ಪರ್ವತ ಹಾಗೂ ಮರುಭೂಮಿಯ ಸೆರಗುಗಳನ್ನು ಕತ್ತರಿಸುತ್ತದೆ.

ರೆಕ್ಕೆಗಳುಳ್ಳ ಬಾಣಗಳಂತೆ ಪ್ರಾಣಗಳನ್ನು ಕ್ಷೇಮದೊಂದಿಗೆ ರಣಾಂಗಣದಿಂದ ಹೊರಗೆ ತೆಗೆದುಕೊಂಡು ಹೋಗಲು ಮರಣದ ತ್ವರಿತಗತಿಯ ಸಂದೇಶವಾಹನು ಅಪೇಕ್ಷಿಸಿದನು. ಸಿಡಿಲಿನ ನೆರಳಿನಂತಹ ಖಡ್ಗಗಳು ಹಗ್ಗದ ನಿಚ್ಚಣಿಕೆಗಳನ್ನು ಗಡಿಯಿಂದ ಒಂದು ಹೆಜ್ಜೆಯೂ ಸಹ, ಮುಂದೆ ಸಾಗಲು ಬಿಡಲಿಲ್ಲ. ವಿಜಯ ಸಂಪನ್ನ ಸೈನ್ಯದ ಹುಲಿಯಂತಹ ಸೈನಿಕರು ಶೌರ್ಯ–ಧೈರ್ಯ ಹಾಗೂ ಪೌರುಷತ್ವದಿಂದ ಕಾರ್ಯನಿರ್ವಹಿಸುತ್ತಿತುವುದನ್ನು ದುರ್ಬಲ ವೈರಿಗಳು ಕಂಡರು. ಅದರಿಂದ ಅವರನ್ನು ಎದುರಿಸುವ ಧೈರ್ಯ ಪ್ರದರ್ಶಿಸಲಿಲ್ಲ. ದುರ್ಬಲ ವೈರಿಗಳು ಸ್ಥಿರತೆಯ ಕಡಿವಾಣವನ್ನು ಕಿತ್ತಿಕೊಂಡರು. ಸಹಾಯ ನೀಡಿದ ಮತ್ತು ಸಹಾಯ ಪಡೆದ ಯುದ್ಧೋಪಕರಣ ಹೊಂದಿದವರೊಂದಿಗೆ ವಿಜಯದೊಂದಿಗೆ ಸಂಬಂಧಿಸಿದ ಈತಮಾದಖಾನನು ಜೊತೆಗೂಡಿ ದಾಳಿ ಮಾಡಿ, ನಿಜಾಮ್‌ಶಾಹ ಬಹರಿಯ ಸೈನ್ಯವನ್ನು ತೆರೆಯ ರಾಶಿಯಂತೆ ಮಿಂಚುವ ಖಡ್ಗಗಳ ಹೊಡೆತದಿಂದ ಚದುರಿಸಿದನು. ಖಡ್ಗಗಳ ಅಗ್ನಿಯ ಉಷ್ಣತೆಯಿಂದ ನಿಜಾಮ್‌ಶಾಹಿ ಸೈನ್ಯವು ಮೇಣಬತ್ತಿಯಂತೆ ಕರಗಿ ಶಕ್ತಿವಿಹೀನವಾಗಿ ತನ್ನ ಧ್ವಜವನ್ನು ಕೆಳಗೆ ಎಸೆದು, ಓಡಲಾರಂಭಿಸಿತು.

ವಿಜಯಿಗಳಾದ ಯಶಸ್ವಿ ಸೈನಿಕರು ಪರಾಜಿತರಾಗ ಅನೇಕ ಸೈನಿಕರನ್ನು ಬೆನ್ನಟ್ಟಿ ಅವರನ್ನು ನೆಲಸಮಗೊಳಿಸಿದರು. ಸಾಯಂಕಾಲದ ಪ್ರಾರ್ಥನೆಯ ಸಮಯದಲ್ಲಿ ಸಾಕ್ಷಿ ನುಡಿಯುವ ಹಗಲು ಕಸ್ತೂರಿಯಂತಹ ರಾತ್ರಿಯ ಪರದೆಯನ್ನು ತನ್ನ ಮುಖದ ಮೇಲೆ ಹರಡಿಕೊಂಡಾಗ ಮೇಣಬತ್ತಿಯಂತೆ ಆಗಿರುವ ವೈರಿಗಳು ನಿಶಾಕ್ರಮಣ ಮಾಡಿ, ಇಖ್ಲಾಸ್‌ಖಾನನ್ನು ಡೇರೆಯ ದ್ವಾರದಿಂದ ಅಪಹರಣ ಮಾಡಿದರು.

ಪ್ರಾತಃಕಾಲದಲ್ಲಿ ನಕ್ಷತ್ರಗಳ ರಾಜನು ನೀಲಿ ಆವರಣದ ಔನ್ನತ್ಯದ ಮೇಲೆ ಪ್ರತ್ಯಕ್ಷನಾದಾಗ, ನಿಜಾಮ್‌ಶಾಹನು ಅಜಾಗರೂಕತೆಯ ನಿದ್ರೆಯಿಂದ ಎಚ್ಚತ್ತು. ಒಂದು ಕ್ಷಣದ ವಿಳಂಬವಾದರೂ ಸಹ ತನ್ನ ಸಾಮ್ರಾಜ್ಯ ಪತನವಾಗುವದೆಂದು ತಿಳಿದುಕೊಂಡು, ಎಳುತ್ತ ಬೀಳುತ್ತ ಪಾರಾಗುವ ಮಾರ್ಗವನ್ನು ಹಿಡಿದನು. ಪಶ್ಚಾತ್ತಾಪ ಹೊಂದಿ ಲಜ್ಜಿತನಾಗಿ ತನ್ನ ಸಾಮ್ರಾಜ್ಯದೆಡೆಗೆ ಪಲಾಯನ ಮಾಡಿದನು.

'ಬಾದಶಾಹ ಗಾಜಿಯನ್ನು ಎದುರಿಸುವ ಪ್ರತಿಯೊಬ್ಬನ ಹೃದಯವು ಎದೆಯನ್ನು ಭೇದಿಸಿ ಬೆಂಕಿಯ ಕಿಡಿಯಂತೆ ಹೊರಗೆ ಬರುತ್ತದೆ. ವಿಧಿಯ ಬರವಣಿಗೆಯಿಂದ ಆತನ ಕಾಲುಗಳಿಗೆ ಸರ್ಪವು ಸುತ್ತಿಕೊಳ್ಳುತ್ತದೆ. ಎದುರಿಸುವ ವೈರಿಯು ಪಾರಾಗುವ ದಾರಿಯನ್ನು ಅಂಗೀಕರಿಸುತ್ತಾನೆ'.

ನಿಜಾಮ್‌ಶಾಹನ ಸಾಮ್ರಾಜ್ಯದ ತಳಹದಿಯು ನಿರಂತರವಾಗಿ ಸಾಗಿಬಂದಿರುವ ಶಕ್ತಿಶಾಲಿ ಕುಟುಂಬದ ಉತ್ತರಾಧಿಕಾರತ್ವದ ಮೇಲೆ ಶಾಶ್ವತ ಹಾಗೂ ಸುದೃಢವಾಗಿತ್ತು. ಆದರೆ ಶಾಹ ಫಿರೋಜ್‌ಸನ ಅಪಾರ ಉಪಕಾರವನ್ನು ಮರೆತು ಒಪ್ಪಂದವನ್ನು ಭಗ್ನಗೊಳಿಸಿ, ಹಜರತ್ ಬಾದಶಾಹ ಗಾಜಿಯನ್ನು ವಿರೋಧಿಸಿದಂತಹ ನಿಜಾಮ್‌ಶಾಹನು ತನ್ನ ಜೀವನದ ಬಂಡವಾಳವನ್ನು ದುರುದ್ದೇಶದ ಜೂಜಾಟದಲ್ಲಿ ತೊಡಗಿಸಿದನು. ಆತನ ಸ್ಥಿರತೆಯ ಸಾಮಾನು ವಿನಾಶ ಮತ್ತು ಪತನಕ್ಕೆ ಬಲಿಯಾಯಿತು. ಆದುದರಿಂದ ಈ ಮಾತು ಜಗತ್ತಿನ ಸಲಹೆಗಾರರಿಗೆ ಸುಸ್ಪಷ್ಟವಾದ ಆಧಾರವಾಗಿದೆ. ಈ ಬರವಣಿಗೆಯನ್ನು ಸಹ ಇದೇ ಮಾರ್ಗದಲ್ಲಿ ಪ್ರಸ್ತುತಪಡಿಸಲಾಗಿದೆ.

'ವಚನ ಭ್ರಷ್ಟತೆಯು ಜಗತ್ತಿನ ದೃಷ್ಟಿಯಲ್ಲಿ ಸೂಕ್ತವಲ್ಲ. ಅಪಜಯವು ಆತನ ಹೆಜ್ಜೆಯ ಗುರುತುಗಳ ಮೇಲೆ ನಡೆದು, ಆತನ ಪ್ರತಿಯೊಂದು ಹೆಜ್ಜೆಯನ್ನು ತಲುಪುತ್ತದೆ. ವಾಗ್ದಾನ ಭಗ್ನಗೊಳಿಸುವದರಿಂದ ಒಮ್ಮೊಮ್ಮೆ ಆತನು ಅತ್ಯಂತ ಲಜ್ಜಿತನಾಗುತ್ತಾನೆ. ಒಂದು ವೇಳೆ ಪ್ರಯತ್ನಿಸಿದರೆ, ತನ್ನ ಮುಖವನ್ನು ಅಮೃತಶಿಲೆಯನ್ನಾಗಿ ಮಾಡಬಹುದು'.

ಕದಮ್‌ರಾವ್ ನಾಯಕ್‌ವಾಡಿಯು ಬಂಕಾಪೂರ ಕೋಟೆಯಲ್ಲಿ ವಿರೋಧದ ಧ್ವಜ ಹಾರಿಸುವದು ಹಾಗೂ ಮೀರ್‌ಅಲಿ ರಜಾನ ಪುತ್ರನನ್ನು ಬಂಧಿಸುವದು

ಭಾಷಣ ಕಲೆ ಮತ್ತು ವಾಕ್ಪಟುತ್ವದ ಪಹಲ್ವಾನರು ಚಿಂತನೆ ಹಾಗೂ ಭಾವನೆಗಳ ಶಕ್ತಿಯ ಹೊಡೆತದೊಂದಿಗೆ ತಲೆ ಬುರುಡೆಯಿಂದ ಮೆದುಳನ್ನು ಚಲಿಸುತ್ತಿರುವ ಆಕಾಶದ ಮೇಲೆ ಎಸೆದು ಅದಕ್ಕೆ ಪ್ರಾತಃಕಾಲದ ಶುಭ್ರತೆಯ ಹೆಸರು ಕೊಟ್ಟಿದ್ದಾರೆ.

ಉಲ್ಲೇಖಿತವಾದ ಯುದ್ಧದ ನಾಲ್ಕು ತಿಂಗಳು ಗತಿಸಿದ ನಂತರ ಆಕಾಶದ ಔನ್ನತ್ಯದ ಮೇಲೆ ಪ್ರಶಂಸೆಯ ಶಹಭಾಸ್‌ಗಿರಿಯನ್ನು ತಲುಪಿಸಲಾಯಿತು. ಕಟ್ಟಡದ ಶಿಖರ ಕಮಾನುಗಳ ಗುಮ್ಮಟಗಳು ಸುದೃಢತೆ ಮತ್ತು ಎತ್ತರದ ದೆಸೆಯಿಂದ, ಯುದ್ಧ ಪ್ರಿಯವಾದ ಆಕಾಶದ ಔನ್ನತ್ಯದ ಮೇಲೆ ದಂತ ಪ್ರದರ್ಶನ ಮಾಡಿ ನಗುತ್ತಿದ್ದ

ಬಂಕಾಪುರ್ ಕೋಟೆಯಲ್ಲಿ ಕದಮ್‌ರಾವ್ ನಾಯಕ್‌ವಾಡಿಯು ಬಂಡಾಯ ಹಾಗೂ ಆಜ್ಞೋಲ್ಲಂಘನೆಯನ್ನು ಆರಂಭಿಸಿದನು. ಅವನು ಮೂವತ್ತು ಸಾವಿರ ಬಂದೂಕುಧಾರಿ ಸೈನಿಕರನ್ನು ಒಟ್ಟುಗೂಡಿಸಿ, ಅವಕಾಶದ ಹೊಂಚು ಹಾಕಿ ತಂದೆಯ ಸ್ಥಾನದಲ್ಲಿ ಬಂಕಾಪೂರ್ ಕೋಟೆಯಲ್ಲಿದ್ದ ಮೀರ್ ಅಲಿ ರಜಾನ ಪುತ್ರನನ್ನು ಆಜ್ಞೆಮಾಡಿ ಬಂಧಿಸಿದನು. ಅಪಾರ ಸಂಪತ್ತಿನ ಸದಸ್ಯರಿಗೆ ಬಂಡಾಯದ ಸಮಾಚಾರ ತಿಳಿಯುತ್ತಿದ್ದಂತೆ ಬಾದಶಾಹನ ಆಜ್ಞೆಯಿಂದ ವಿಜಯಸಂಪನ್ನ ಸೈನಿಕರೊಂದಿಗೆ ಮಲ್ನಾಡ್ ಶಹರದೆಡೆಗೆ ದ್ವೇಷಉಳ್ಳ ಸತ್ಯನಿಷೇಧಿಗಳ ಮೇಲೆ ದಾಳಿ ಮಾಡಿದಂತಹ ಆಡಳಿತಗಾರನಾದ ಮೀರ್ ಅಲಿ ರಜಾನನ್ನು ಹಿಂತಿರುಗಿ ಕರೆಸಿ, ಕದಮ್‌ರಾವ್ ನಾಯಕ್‌ವಾಡಿಯನ್ನು ನಾಶಮಾಡಲು ನೇಮಿಸಲಾಯಿತು. ಮೀರ್‌ಅಲಿರಜಾನು ಬಂಕಾಪೂರ್ ಹತ್ತಿರ ತಲುಪಿದಾಗ ವಿಜಯ-ಸಂಪನ್ನ ಸೈನ್ಯದ ಸೈನಿಕರು ನಾಲ್ಕು ದಿಕ್ಕಿನಲ್ಲಿ ಯುದ್ಧ ಧ್ವಜಗಳನ್ನು ಹಾರಿಸಿ, ಕೋಟೆಯನ್ನು ಸುತ್ತುಗಟ್ಟಿದರು. ಬೆಂಕಿ ಕಾರುವಂತಹ ತೋಪು ಹಾಗೂ ಬಂದೂಕುಗಳಿಂದ ಬಂಡುಕೋರರ ಮೇಲೆ ದಾಳಿ ಮಾಡಿದರು. ಪ್ರೇಯಸಿಯರ ಅಗಲಿಕೆಯ ದುಃಖದಲ್ಲಿ ಸುಡುತ್ತಿರುವ ಎದೆಯ ಹಾಗೆ ಅವರು ರಣಾಂಗಣದ ಅಹಂಕಾರಿಗಳ ಮೆದುಳನ್ನು ಬೆಂಕಿಯ ಕಿಡಿಗಳಲ್ಲಿ ಸೇರಿಸಿ, ಭೂಮಿಯ ಮೇಲ್ಭಾಗವನ್ನು ಜ್ವಾಲೆ ಮತ್ತು ಬೆಂಕಿಯ ಕಿಡಿಗಳಿಂದ ತುಂಬಿದರು. ವಿಜಯ ಸಂಪನ್ನ ಸೈನಿಕರು ಹೃದಯವನ್ನು ಭೇದಿಸುವ ಬಾಣಗಳಂತೆ ಬಂಡುಕೋರರ ಪ್ರಾಣಗಳನ್ನು ಬಾಣದ ತುದಿಯ ಮೇಲೆ ಕೂದಲಿನ ದಾರದಂತೆ ನೇತಾಡಿಸಿ ಪಾದರಸದಂತಹ ಆಕಾಶದ ಮೊಟ್ಟೆಯೆಡೆಗೆ ತ್ವರಿತಗತಿಯಿಂದ ಹಾರಾಡುವ ಹದ್ದಿನಂತೆ ಎಸೆದು ಬಿಟ್ಟರು.

ಹನ್ನೆರಡು ತಿಂಗಳುಗಳವರೆಗೆ ಜೀವವನ್ನೇ ಸವೆಸಿ ಬಿಡುವಂತಹ ಗೊಂದಲ ಮುಂದುವರಿದಿತ್ತು. ೧೦೩೮ ಹಿಜ್ರಿಯಲ್ಲಿ ರಬಿಉಲ್ ಅವ್ವಲ್‌ದ ೧೦ನೇ ತಾರೀಖಿಗೆ ಅಸ್ಥಿರನಾಗಿದ್ದ ಕದಮ್‌ರಾವ್ ನರಕಕ್ಕೆ ಹೋದನು. ಕದಮ್‌ರಾವ್‌ನ ಹೊರತಾಗಿ ಇತರ ಎಲ್ಲ ಬಂಡುಕೋರರಿಗೆ ಮೀರ್‌ಅಲಿರಜಾನು ಶಿಕ್ಷೆ ವಿಧಿಸಿ; ಏಳೂನೂರು ಬಂಡುಕೋರರ ಕತ್ತರಿಸಿದ ತಲೆಗಳು ಅಪಾರ ನಗದು-ನಾಣ್ಯ ಹಾಗೂ ಸಾಮಾನುಗಳೊಂದಿಗೆ ಸಾಮ್ರಾಜ್ಯದ ಬಾದಶಾಹನ ದರ್ಬಾರದಲ್ಲಿ ಹಾಜರಾದನು. ಅವನು ತನ್ನ ಸೇವೆಗೆ ಅನುಸಾರವಾಗಿ ತನಗಾಗಿ ಸಾಮ್ರಾಜ್ಯದ ಕೃಪೆಯ ದ್ವಾರಗಳನ್ನು ತೆರೆದುಕೊಂಡನು.

'ಬಾದಶಾಹ ಗಾಜಿಯ ದರ್ಬಾರಿನೊಂದಿಗೆ ಸಂಘರ್ಷ ಮಾಡುವ ಪ್ರತಿಯೊಬ್ಬನ ಮಾನ್ಯತೆಯು ಶಿರದಿಂದ ಪಾದದವರೆಗೆ ನಾಶವಾಗುತ್ತದೆ. ಆತನು ಒಂದು ವೇಳೆ ತನ್ನ ಗುಡಿಸಲಿನ ದೀಪ ಬೆಳಗಿಸಿದರೆ ಬತ್ತಿಯ ಶಿರವು ವೈರಿಯ ಬೆರಳ ತುದಿಯನ್ನು ಸರ್ಪದಂತೆ ಕಚ್ಚುವದು. ಒಂದು ವೇಳೆ ಆತನ ಖಡ್ಗದ ಮೋಡವು ಸಾಗರದ ಮೇಲೆ ಬಂದರೆ; ನೀರ್ಗುಳ್ಳೆಗಳು

ರಕ್ತದ ಹನಿಗಳಿಂದ ದಾಳಿಂಬೆಯಂತೆ ಪೂರ್ಣವಾಗುವವು. ಆತನ ಕ್ರೋಧದ ನೆನಪು ಆಕಾಶದ ರಾಶಿಯ ಮೇಲೆ ಬೆಂಕಿಯನ್ನು ಸುರಿಸುತ್ತದೆ. ಆತನ ಕೃಪೆಯ ಲಾವಣ್ಯವು ಜಗತ್ತನ್ನು ಉದ್ಯಾನವನ್ನಾಗಿ ಮಾಡುತ್ತದೆ'.

ರಜ್ಜಬ್ ತಿಂಗಳಿನ ಹದಿನೆಂಟನೆಯ ತಾರೀಖಿಗೆ ಹಜರತ್ ಬಾದಶಾಹನನು ಅಳಿಯತ್ವ ಪೀಠದ ಮೇಲೆ ಆಸೀನನಾಗುವದು.

ಭಾಷಣ ಕಲೆಯಲ್ಲಿ ಆಸಕ್ತಿ ಹೊಂದಿರುವವರು, ಅರ್ಥದ ನೂತನ ಮದುಮಗಳನ್ನು ಅಕ್ಷರಗಳಿಂದ ಅಲಂಕೃತವಾದ ಕೊಠಡಿಯಲ್ಲಿ ತಂದು; ತೋಳ ತೆಕ್ಕೆಯಲ್ಲಿ ಬಂಧಿಸಿದ್ದಾರೆ. ಬಾದಶಾಹನ ವಿವಾಹ ಸಮಾರಂಭದ ಪ್ರಶಂಸೆ ಮತ್ತು ಗುಣವರ್ಣನೆಯಿಂದ ಪ್ರವಾದಿ ಮೊಹಮ್ಮದರ ಧಾರ್ಮಿಕ ತತ್ವಗಳ ಪರಂಪರೆಯು ಮದುವೆ ಹಾಗೂ ನಿಕಾಹ್‌ದ ರೂಢಿಗಳಿಗೆ ಚಾಲನೆ ಕೊಡುವ ಶ್ರೇಣಿಗೆ ಸಂಬಂಧಿಸಿದಂತೆ ಶಾಶ್ವತವಾದ ಸಂತೋಷ ಮತ್ತು ಭೋಗ-ವಿಲಾಸದ ಜಗತ್ತು ಪ್ರಾಪ್ತವಾಗಿದೆ.

ರಜ್ಜಬ್ ತಿಂಗಳಿನ ಹದಿನೆಂಟನೆಯ ತಾರೀಖಿಗೆ ಹಜರತ್ ಬಾದಶಾಹ ಗಾಜಿಯ ಅಳಿಯತ್ವ ಸಮಾರಂಭದ ಪ್ರಖ್ಯಾತಿಯು; ಭೋಗ-ವಿಲಾಸದ ಅತ್ಯುನ್ನತ ದರ್ಜೆಯವದನ್ನು ಯಶಸ್ಸಿನ ಸಾರಾಯಿತು. ಅಮಲಿನಿಂದ ಪ್ರಮತ್ತಗೊಳಿಸಿತ್ತು. ಶಾಂತಿ-ಸಮಾಧಾನದ ಕ್ಷಿತಿಜದಿಂದ ಸಂತೋಷದ ಮುಂಜಾವಿನ ಹಕ್ಕಿಗಳು ಇಂಪಾಗಿ ಹಾಡಲಾರಂಭಿಸಿದವು.

'ಖುಸ್ರೊಗಾಜಿಯ ಹೃದಯವನ್ನು ಸಂತುಷ್ಟಗೊಳಿಸುವ ಸಭೆಯ ಆಸಕ್ತಿಯಿಂದ ಬಟ್ಟಲಿನ ಮಿಂಚು, ಸೂರ್ಯನಂತೆ ಬೆಳೆಯಲಾರಂಭಿಸಿತು'.

ರಾಜರು ಮತ್ತು ಸಾಮ್ರಾಜ್ಯದ ಅವಲೋಕನ ಮಾಡುವವರು ಕರತಾಡನ ಮಾಡುತ್ತ ತಮ್ಮ ಸ್ಥಾನಗಳಿಂದ ಎದ್ದು ಬಂದರು. ನಗರ ಮತ್ತು ಮಾರುಕಟ್ಟೆಯಲ್ಲಿ ತಿರುಗಾಡಲು; ದ್ವಾರ ಹಾಗೂ ಕಿಡಕಿಗಳನ್ನು, ಚಿನ್ನದ ಎಳೆಗಳಿಂದ ನೆಯ್ದ ರೇಷ್ಮೆ ಬಟ್ಟೆ (ಜರ್‌ಬಫ್ತ್), ಹೊಳಪುಳ್ಳ ರೇಷ್ಮೆಬಟ್ಟೆ (ಅತ್‌ಲಸ್) ಹಾಗೂ ಬಹು-ಬೆಲೆಯುಳ್ಳ ಕಪ್ಪು ರೇಷ್ಮೆ ಬಟ್ಟೆ (ಅಕ್‌ಸೂನ್)ಯಿಂದ ಅಲಂಕರಿಸಲಾಗಿತ್ತು. ವರ್ಣಮಯ ಉಡುಪುಧರಿಸಿದ ವೀಕ್ಷಕರು; ಒಳ್ಳೆಯ ಪರಿಣಾಮದ ಸಾಕ್ಷಿ ನುಡಿಯುವ ಹಗಲಿನ ಮುಖದ ಮೇಲೆ ಬಂಗಾರದಿಂದ ತಯಾರಿಸಲ್ಪಟ್ಟ ಸಾದಾ ಅಥವಾ ಬಣ್ಣ ಬಳಿದ ರೇಷ್ಮೆಬಟ್ಟೆ (ಪರಂದ್) ಮತ್ತು ಹೂವಿನ ನಕ್ಷೆಹೊಂದಿದ ರೇಷ್ಮೆಬಟ್ಟೆಯ (ಪರ್ನಿಯಾ) ಪರದೆಗಳನ್ನು ಹಾಕಿದ್ದಾರೆ. ಜಗತ್ತಿನ ಭೋಗವಿಲಾಸದ ಆರಾಧಕರು, ಪವಿತ್ರವಾದ ಸಾರಾಯಿ ಸುರಿಯುವಿಕೆಯ ಧ್ವನಿಯಿಂದ ನೂತನ ವಸಂತದ ಮಲ್ಲಿಗೆಯಂತಹ ಕಪೋಲವುಳ್ಳವರ ಮೇಲೆ ಮಿತ್ರತ್ವದ ಮಾಂತ್ರಿಕತೆಯನ್ನು ಪ್ರಯೋಗಿಸಿ, ಸೌಂದರ್ಯವನ್ನು ಹರಡಿದ್ದಾರೆ. ಪ್ರತಿಯೊಂದು ಮೂಲೆಯಲ್ಲಿ ನೃತ್ಯದ ಕೋಲಾಹಲ ಬಿಸಿಯೇರಿದೆ. ಬೆಡಗು ಬಿನ್ನಾಣದಿಂದ

ಹಾಡುವವರು ಚಪ್ಪಾಳೆ ಬಾರಿಸಿ, ತಾಳ್ಮೆ ಹಾಗೂ ಜಾಗ್ರತಿ ಹೊಂದಿದ ವ್ಯಕ್ತಿಗಳ ಸಹನಾಶಕ್ತಿಯನ್ನು ಅಪಹರಿಸಿದ್ದಾರೆ. ಆತ್ಮವನ್ನು ಸಂತುಷ್ಟಗೊಳಿಸುವಂತಹ ಕೂಟವು, ಈ ಬಗೆಯಲ್ಲಿ ಶೃಂಗರಿಸಲ್ಪಟ್ಟಿದೆ.

'ದಕ್ಷಿಣದ ಸುಂದರಿಯರು ನೃತ್ಯ ಮಾಡುವಾಗ, ತಮ್ಮ ಕಣ್ಣಿನ ರೆಪ್ಪೆಗಳ ಚಲನೆಯಿಂದ ದೇವದೂತರ ಮನದಲ್ಲಿ ದಂಗೆ ಎಬ್ಬಿಸಿದರು. ಉದ್ವಿಗ್ನತೆಯಿಂದ ಅವರ ಹೃದಯಗಳಲ್ಲಿ ಸಂಬಂಧಗಳ ಗಂಟು ಬಿದ್ದಿವೆ. ಟೊಂಕದ ತಲ್ಲಣವು ಪವಾಡ ಮಾಡಿದಂತೆ ಭಾಸವಾಗುತ್ತದೆ. ತುಟಿಗಳ ನಗೆಯು ಉದ್ಯಾನದ ಕೊಠಡಿಯ ಬಾಗಿಲು ತೆರೆದಿದೆ. ತಾಜಾ ಮೊಗ್ಗುಗಳು ಸಕ್ಕರೆಯಿಂದ ತುಂಬಿವೆ'.

ನಾಲ್ವತ್ತು ದಿನಗಳವರೆಗೆ ಜಗತ್ತಿನಲ್ಲಿ ಪ್ರೇಮ, ಸಂತೋಷದ ಧ್ವನಿಗಳು ಪ್ರತಿಧ್ವನಿಸುತ್ತಿದ್ದವು.

ಭೋಗ-ವಿಲಾಸದ ಉದ್ಯಾನದಿಂದ ಬೀಸುವ ಗಾಳಿಯು ಅಭಿಲಾಷೆ ತುಂಬಿದ ಹೃದಯಗಳ ಮೊಗ್ಗುಗಳ ಗಂಟನ್ನು ತೆರೆಯಿತು. ೧೦ನೇ ರಬೀಉಲ್‌ಅವ್ವಲ್‌ದ ರಾತ್ರಿ, ಹಜರತ್ ಬಾದಶಾ ಗಾಜಿಯು ಜಗತ್ತಿನ ಪ್ರವಾಸ ಮಾಡಲು ಆಕಾಶದ ಮೇಲೆ ಓಡುವಂತಹ ಅಶ್ವದ ಮೇಲೆ ಸವಾರಿ ಮಾಡಿದನು. ಸಾಮ್ರಾಜ್ಯದ ಇನ್ನಿತರ ಸರದಾರರು ಮತ್ತು ಆಸ್ಥಾನಿಕರು; ಗುಲಾಮರು ಹಾಗೂ ಸೇವಕಿಯರ ಒಡೆಯನಾದ, ಸಮಗ್ರ ಜಗತ್ತನ್ನು ಬೆಳಗುವ ಸೂರ್ಯನಂತಹ ಬಾದಶಾಹನೊಂದಿಗೆ ಮುನ್ನಡೆದು; ಶಿಸ್ತಿನಿಂದ ಸಾಷ್ಟಾಂಗ ನಮನ ಸಲ್ಲಿಸಿದನು. ಏಳು ದೇಶಗಳ ಬುದ್ಧಿವಂತರು ಪಂಜು ಮತ್ತು ಕಂದೀಲು ಬೆಳಗಿಸಿ, ಜಗತ್ತನ್ನು ಬೆಳಗಿಸುವ ಪ್ರಕಾಶದ ಗೌರವ ವಸ್ತ್ರವನ್ನು ಪಡೆದರು. ಸಾಮ್ರಾಜ್ಯಕ್ಕೆ ಯಶಸ್ಸು ಕೊಡಿಸುವ ಖ್ಯಾತ ಜನರ ಉಶಸ್ಸಿನ ಗೀತೆಗಳಿಗೆ ವೈಭವ ಪ್ರಾಪ್ತವಾಯಿತು. ಗಾಳಿಯ ಬೀಸುವಿಕೆಯಿಂದ ನರ್ತಿಸುವ ಗುಲಾಬಿ ಪಕಳೆಗಳಂತೆ ಕಥೆ ಹೇಳುವವರ ನೃತ್ಯದ ಹೆಚ್ಚಳದಿಂದ ಬೆಳ್ಳಿಯಂತಹ ಭೂಮಿಯು ಕಂಪಿಸಲಾರಂಭಿಸಿತು. ಗುಲಾಬಿ ಹಾಗೂ ಪನ್ನಂಬರದ ಪರಿಮಳದಿಂದ ಹಿರಿಯರು ಮತ್ತು ಕಿರಿಯರ ಮೆದುಳುಗಳು ಕಸ್ತೂರಿ ಹಾಗೂ ಗುಲಾಬಿಯ ಸುವಾಸನೆಯಿಂದ ತುಂಬಿದವು. ಪ್ರವಾಸದ ಎಲ್ಲ ಸಂಪ್ರದಾಯಗಳು ಪೂರ್ಣವಾದ ನಂತರ; ಜಗತ್ತನ್ನು ಶೃಂಗರಿಸುವ ಸಿಂಹಾಸನದ ಮೇಲೆ ಆಸೀನನಾದ ಹಜರತ್ ಶಾದಶಾಹ ಗಾಜಿಯು ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತ ಏಳೂ ದೇಶಗಳಿಗೆ ಶಾಶ್ವತವಾದ ಸಂತೋಷದ ಆಹ್ವಾನ ನೀಡಿದನು.

ಕುತುಬಶಾಹನ ಕಡೆಯಿಂದ ಸಂದೇಶ ಬರುವಿಕೆಯಲ್ಲಿ ವಿಳಂಬ, ಆತನು ಸಾಷ್ಟಾಂಗ ನಮನ ಸಲ್ಲಿಸುತ್ತ ಆಗಮಿಸುವದು ಮತ್ತು ಶಾಹ ಫಿರ್ದೋಸನ ಪುಣ್ಯತಿಥಿಯ ಪ್ರಶಂಸೆ.

ಶುಭ ವಿಚಾರದ ಸಂದೇಶ ವಾಹಕನು ವಿವರಣೆ ಮತ್ತು ವ್ಯಾಖ್ಯಾನದ

ಮರುಭೂಮಿಯನ್ನು ಈ ರೀತಿಯಲ್ಲಿ ಕ್ರಮಿಸಿದನು. ಜಮಾದಿ ಉಲ್ ಔಲ್‌ದ ೧೧ನೇ ತಾರೀಖಿಗೆ ಶಹಾಜಹಾನನ ಬೇಹುಗಾರನಾದ ಶೇಖ್ ಮೊಗಿನಾನು ಚಕ್ರಾಧಿಪತ್ಯದ ಅಪಾರ ಕಾಣಿಕೆ ಹಾಗೂ ಇನಾಮುಗಳನ್ನು ತೆಗೆದುಕೊಂಡು; ರಾಜರಿಗೆ ಆಶ್ರಯದಾತನಾದ ಬಾದಶಾಹ ಗಾಜಿಯ ದರ್ಬಾರಿಗೆ ಬಂದನು ಮತ್ತು ಸಾಮ್ರಾಜ್ಯದ ಕಾಣಿಕೆಗಳೊಂದಿಗೆ ಹಿಂತಿರುಗಿದನು. ಪ್ರತಿಷ್ಠೆ ಹಾಗೂ ಗೌರವದ ಉನ್ನತ ಪೀಠದ ಮೇಲೆ ಆಸೀನನಾಗುವ ಸಾಮ್ರಾಜ್ಯದ ಗೌರವ ವಸ್ತ್ರವನ್ನು ಪಡೆದು, ಜಗತ್ತಿಗೆ ಆಜ್ಞೆ ವಿಧಿಸುವವನ ಆಜ್ಞೆಯಿಂದ ಶಹಾಪೂರದ ಮಧ್ಯಭಾಗದಲ್ಲಿದ್ದ ಬಾಲಾಖಾನೆಗೆ ಬಂದನು. ಬಾದಶಾಹ ಗಾಜಿಯ ಕಾಲ್ದಳ ಮತ್ತು ಅಶ್ವಾರೋಹಿ ಸೈನ್ಯದ ವಿಶಿಷ್ಟವಾದ ಸಹಾಯದಿಂದ ನಿಜಾಮ್‌ಶಾಹಿ ಸಾಮ್ರಾಜ್ಯದ ಅಪಾಯಕಾರಿ ಮಾರ್ಗದಿಂದ ಮುಂದೆಸಾಗಿ ರತ್ನಗಂಬಳಿಯನ್ನು ಚುಂಬಿಸುವ ಸುದೈವೀ ಅವಕಾಶ ಪ್ರಾಪ್ತವಾಯಿತೆಂದು ಕೃತಜ್ಞತೆ ಸಲ್ಲಿಸಿ, ಅವನು ದೇವರ ಪ್ರಶಂಸೆ ಮತ್ತು ಕೃತಜ್ಞತಾರ್ಪಣೆಯ ಅಧ್ಯಾಯವನ್ನು ತೆರೆದನು. ಪ್ರಾಮಾಣಿಕತೆ ಹಾಗೂ ಮಿತ್ರತ್ವದೊಂದಿಗೆ ಸೇವಾಭಾವನೆಯನ್ನು ವಿಸ್ತರಿಸಿದನು. ನಿಜಾಮ್‌ಶಾಹನನ್ನು ಮಧ್ಯದಿಂದ ದೂರಸರಿಸಿ, ಆತನ ಸಾಮ್ರಾಜ್ಯವನ್ನು ಇಬ್ಬರೂ ಮಹಾಪ್ರತಾಪಶಾಲಿ ರಾಜರು ಪರಸ್ಪರ ಹಂಚಿಕೊಳ್ಳಬೇಕು. ಇಬ್ಬರೂ ಚಕ್ರಾಧಿಪತ್ಯದ ಪ್ರೀತಿ–ಪ್ರೇಮ ಮತ್ತು ಒಗ್ಗಟ್ಟಿನಿಂದ ನಡೆದುಕೊಳ್ಳಬೇಕೆಂದು ಒಪ್ಪಂದವಾಯಿತು.

ಅದೇ ಕಾಲದಲ್ಲಿ ಜಮ್‌ಶಿದ್ ರಾಜನಂತಹ ಕುತುಬ್‌ಶಾಹನು ಯಾವುದೇ ವಿಳಂಬವಿಲ್ಲದೇ ಪ್ರತಿ ವರ್ಷ ಉನ್ನತ ದರ್ಬಾರಿಗೆ ಕಾಣಿಕೆಗಳನ್ನು ಕಳುಹಿಸುತ್ತಿದ್ದನು. ಆತನು ಕಳುಹಿಸಿದ ಕಾಣಿಕೆಗಳಲ್ಲಿ ಕೆಲವು ಮಾಣಿಕ್ಯಗಳು ಪ್ರಯೋಜನಕಾರಿ ಆಗಿದ್ದವು. ಹಜರತ್ ಬಾದಶಾಹ ಗಾಜಿಯು ಕೆಲವು ಖ್ಯಾತ ಮಂತ್ರಿಗಳನ್ನು, ಕುತುಬಶಾಹನ ವ್ಯವಹಾರಗಳಿಗಾಗಿ ನೇಮಕ ಮಾಡಿದನು. ಇಂತಹ ಜೀವಸವೆಸಿ ಬಿಡುವಂತಹ ಸಮಾಚಾರದಿಂದ ಕುತುಬ್‌ಶಾಹನು ಗಾಬರಿಗೊಂಡು, ವ್ಯಾಕುಲನಾದನು. ಅವನು ಒಂದು ಲಕ್ಷ ಐವತ್ತು ಸಾವಿರ 'ಹವನ್' ವಿಭಿನ್ನ ಪ್ರಕಾರದ ಆಧಿಪತ್ಯದ ಕಾಣಿಕೆಗಳನ್ನು ರಾಜರಿಗೆ ಆಶ್ರಯದಾತನಾದ ಸುಲ್ತಾನನ ದರ್ಬಾರಿಗೆ ಕಳುಹಿಸಿದನು. ಇಂತಹ ವಿಳಂಬದ ದೆಸೆಯಿಂದ ಬಾದಶಾಹ ಗಾಜಿಯು ತನ್ನ ವಿಜಯ–ಸಂಪನ್ನ ಸೈನ್ಯವನ್ನು ದರ್ಬಾರಿಗೆ ಕರೆಸಿದನು.

ಅರಸನ ದರ್ಬಾರಿನ ಎಲ್ಲ ಆಸ್ಥಾನಿಕರು ಸರ್ವ ಸಮಿತಿಗಳ ವಿಶ್ವಾಸಾರ್ಹ ವ್ಯಕ್ತಿಗಳು ಮತ್ತು ಇತರ ಖ್ಯಾತ ಸೈನಿಕರು ಉನ್ನತವಾದ ಗುಮ್ಮಟದ ಕಳಸವನ್ನು ಹೊಂದಿದಂತಹ (ಖುಬ್ಬ–ಏ–ನೂರ್ ಅರ್ಥಾತ್, ಬೆಳಕಿನ ಕಳಸ) ಜೊಹರಾಪೂರದ ಆಸುಪಾಸಿನಲ್ಲಿ ಆಕಾಶವನ್ನು ಸ್ಪರ್ಶಿಸುವ ಸುಂದರ ಡೇರೆಗಳನ್ನು ಹಾಕಿ ಅದರಲ್ಲಿ ಬನ್ನರಿ ಮತ್ತು ಮಧುರ ಕಂಠದಿಂದ ದೇವಸ್ಮರಣೆ ಮಾಡುವವರ ಗುಂಪುಗಳೂ ಸಹ ಪವಿತ್ರವಾದ ಸಮಾಧಿಯ ಬಳಿ ಆಸೀನರಾಗಿ, ದೇವಸ್ಮರಣೆ ಮಾಡಲು ಆರಂಭಿಸಲಿ

ಎಂದು ೧೦೪೨ ಹಿಜ್ರಿಯಲ್ಲಿ ಬಾದಶಾಹ ಗಾಜಿಯು ಆಧಿಪತ್ಯದ ಆಜ್ಞೆಯನ್ನು ಜಾರಿಗೊಳಿಸಿದನು. ಉನ್ನತ ಮರದ ಮನೆಯಲ್ಲಿರುವಂತಹ ಉನ್ನತ ದರ್ಜೆಯ ಜನರಿಗೆ, ಶಾಹ ಫಿರ್ದೋಸ್ ಬಾದಶಾಹನ ಪುಣ್ಯತಿಥಿಯ ಸಮಾಚಾರ ತಿಳಿಸಲು, ನಗಾರಿ ಹಾಗೂ ಕೋಸ್ (ದೊಡ್ಡ ನಗಾರಿ) ಉಚ್ಚ ಶ್ರೇಣಿಯಲ್ಲಿ ಬಾರಿಸಲಾಯಿತು. ಸಾರಾಯಿ ಕುಡಿದು ಪವಾಡಗಳನ್ನು ಪ್ರದರ್ಶಿಸಿ ನರ್ತಿಸುವವರ ಅತ್ಯುತ್ಸಾಹವು ಜಗತ್ತಿನ ಬುದ್ಧಿವಂತರನ್ನು ಪಾನಮತ್ತರನ್ನಾಗಿ ಮಾಡಿ, ಸಂತುಷ್ಟಗೊಳಿಸಿತು. ಜೊಹರಾಪುರದ ಎಲ್ಲ ಕಟ್ಟಡಗಳನ್ನು ವಿವಿಧ ವರ್ಣಮಯ ಕಂದೀಲುಗಳಿಂದ ಶೃಂಗರಿಸಲಾಗಿತ್ತು.

ಮೇಣಬತ್ತಿ ಮತ್ತು ದೀಪಗಳನ್ನು ಉರಿಸುವದರಿಂದ ಪರ್ವತ ಹಾಗೂ ಮರುಭೂಮಿಯು 'ತೂರ್' ಪರ್ವತದ ಪಂಜಿನಂತೆ ಬೆಳಕಿನಿಂದ ತುಂಬಿತು. ಮೊಹರಮ್ ಪವಿತ್ರ ತಿಂಗಳು ಬಂದಾಗ, ಈ ತಿಂಗಳಿನ ಐದನೆಯ ತಾರೀಖಿಗೆ ಹಜರತ್ ಬಾದಶಾಹ ಗಾಜಿಯು ವೈಭವ-ಸಡಗರದೊಂದಿಗೆ ಚನ್ನರಥಾಮದಿಂದ ಹೊರಗೆ ಜೊಹರಾಪೂರಿಗೆ ಬಂದು, ಪ್ರಾಶಸ್ತ್ರದೊಂದಿಗೆ 'ಫಾತಿಹಾ' ಓದುವ ಸಂಪ್ರದಾಯವನ್ನು ಆಚರಿಸಿದನು. ಜೊಹರಾಪೂರದ ಮಿಂಚಿನ ಸಂಚಾರ ಮಾಡಿ; ಅದರ ಪ್ರತಿಯೊಂದು ಮೂಲೆಯಲ್ಲಿ ನವ ವಸಂತದ ಪಕ್ಷಿಗಳನ್ನು ಕಂಡು ಅವನಿಗೆ ಅಪಾರ ಶಾಂತಿ-ಸಮಾಧಾನವಾಯಿತು. ಆತನು ಅಂತಃಪುರದ ಮರ್ಯಾದಸ್ಥ ಮಹಿಳೆಯರನ್ನು ಸಂಪೂರ್ಣ ಗೌರವ ಸನ್ಮಾನದಿಂದ ಜೊಹರಾಪೂರದಿಂದ ಫಿರ್ದೋಸನ ಸನ್ನಿಧಿಯ ಅಂತಃಪುರಕ್ಕೆ ಕರಸಿಕೊಂಡನು. ಒಂದು ದಿನ ಮತ್ತು ಒಂದು ರಾತ್ರಿ ಭೋಗ-ವಿಲಾಸದೊಂದಿಗೆ ಆ ಅಲಂಕೃತವಾದ ಸ್ಥಾನದಲ್ಲಿ ವಾಸವಾಗಿದ್ದನು. ಅರಸತ್ವದ ಹರಕೆ-ಕಾಣಿಕೆ ನೀಡಿ, ಮಾನವ ಸಮಾಜದ ಅಗತ್ಯಗಳನ್ನು ಪೂರ್ಣಮಾಡುವವನಾದನು. ಸಂಪತ್ತು ಮತ್ತು ಸಮೃದ್ಧಿಯ ಧ್ವಜವನ್ನು ಶಾಶ್ವತವಾದ ಭೋಗ-ವಿಲಾಸದ ಔನ್ನತ್ಯದ ಮೇಲೆ ಹಾರಿಸಿ, ಜಗತ್ತನ್ನು ಶೃಂಗರಿಸುವ ಹಾಗೂ ದೇಶವನ್ನು ಪ್ರದರ್ಶಿಸುವ ಕಾರ್ಯದಲ್ಲಿ ನಿರತನಾದನು. ಈ ತಿಂಗಳಿನ ೧೦ನೇ ತಾರೀಖು ಹಳೆಯ ನಿಜಾಮ್‌ಶಾಹನಿಂದ 'ಹೈಬತ್‌ಖಾನ್' ಎಂಬ ಭದ್ರವಾದ ಕೋಟೆಯ ಹವಾಲ್ದಾರ್‌ನೆಂದು ನೇಮಿಸಲಾಗಿತ್ತು. ಅವನು ನಿಜಾಮ್‌ಶಾಹನ ವಿರೋಧಿಯಾಗಿ; ಶುಭಕಾರಕ ರಾಜಧಾನಿಯ ಸಂರಕ್ಷಕನಿಗೆ ಒಂದು ಪತ್ರವನ್ನು ಬರೆದು, ಪರ್ನಿದಾ ಕೋಟೆಯನ್ನು ಹಜರತ್ ಬಾದಶಾಹ ಗಾಜಿಗೆ ಸಮರ್ಪಿಸುವದಾಗಿಯೂ ಆಕಾಶ ಸದೃಶವಾದ ದರ್ಬಾರಿನ ಯಾರಾದರೊಬ್ಬ ನಂಬಿಗಸ್ಥ ವ್ಯಕ್ತಿಯು ಆಗಮಿಸಿದರೆ ಆತನ ವಶಕ್ಕೆ ಪರ್ನಿದಾ ಕೋಟೆಯನ್ನು ಒಪ್ಪಿಸುವದಾಗಿ ಮನವಿ ಮಾಡಿದನು.

ಹಜರತ್ ಬಾದಶಾಹ ಗಾಜಿಯು ಶುಭಶಕುನದಿಂದ; ಖಾಸ್‌ಖಾನನಿಗೆ ರವಾನೆಯ ಗೌರವ ವಸ್ತ್ರ ನೀಡಿ, ಸೈನಿಕರೊಂದಿಗೆ ಸಜ್ಜುಗೊಳಿಸಿ; ಆಖಾರಿಜ್ವಾನ್‌ನನ್ನು

ಸಂತುಷ್ಟಗೊಳಿಸಲು ಹತ್ತು ಸಾವಿರ ಹವನ್ ನೀಡಿ, ಆ ಕೋಟೆಗೆ ಕಳುಹಿಸಿದನು. 'ಕೋಹೆ ಖಾಫ್'ದಂತಹ ಬೃಹದ್ ಗುಮ್ಮಟ ಹೊಂದಿರುವ ಪರ್ನಿದಾ ಕೋಟೆಯ ಬೀಗದ ಕೈಯನ್ನು ಕಿರುಗಾಳಿಯಲ್ಲಿ ತೇಲುತ್ತಿರುವ ಕಸ-ಕಡ್ಡಿಯ ಹೊರೆಯಂತೆ ಸುಲಭವಾಗಿ, ಉನ್ನತ ದರ್ಬಾರಿನ ಅನುಯಾಯಿಗಳು ಸ್ವೀಕರಿಸಿದರು. ಸುದೈವ ಮತ್ತು ಸಂಪತ್ತಿನ ಸಾಕ್ಷಿ ನುಡಿಯುವ ಮುಖದ ಮೇಲೆ ಆಸೆ-ಆಕಾಂಕ್ಷೆಯ ಕಣ್ಣುಗಳು ತೆರೆದವು.

ನಿಜಾಮ್‌ಶಾಹನನ್ನು ನರಕಕ್ಕೆ ಕಳುಹಿಸುವ ಮತ್ತು ಶಹಾಜಾನಾಬಾದದ ಸರದಾರರು ಮಹಮ್ಮದಪೂರ್ ನಗರದಲ್ಲಿ ತಲುಪುವ ವಿವರಣೆ

ಉಪಕಾರ ಸ್ಮರಣೆ/ಕೃತಜ್ಞತಾರ್ಪಣೆಯ ಸಕ್ಕರೆಯಂತಹ ಸಿಹಿ ಮಾತನಾಡುವವರು; ಕನ್ನಡಿಯಂತಹ ಹೃದಯವನ್ನು ತೆರೆದು, ವಿಶ್ವದ ಸೃಷ್ಟಿಯನ್ನು ಕುರಿತು ಅಪೂರ್ಣವಾದ ಮಾತುಗಳನ್ನು ಆಡಿದ್ದಾರೆ. ಅರ್ಥಗಳ ಸಾಮ್ರಾಜ್ಯವನ್ನು ಜಯಿಸಿ, ರಹಸ್ಯಗಳನ್ನು ಕಂಡುಹಿಡಿಯುವ ಧ್ವಜವನ್ನು ಹಾರಿಸಿದ್ದಾರೆ. ಶಹಾಜಹಾನನ ಬೇಹುಗಾರನಾದ ಶೇಖ್ ಮೊಗಿನಾನ ಜೊತೆಗೆ ಒಪ್ಪಂದ ಮತ್ತು ಮಿತ್ರತ್ವದ ಮೊದಲು ನಿರ್ಧರಿಸಿ, ಶುದ್ಧೀಕರಿಸಿದ ವಿಷಯವೇನೆಂದರೆ: ಇಬ್ಬರೂ ಪರಾಕ್ರಮಶಾಲಿ ಅರಸರು ಪರಸ್ಪರ ಒಮ್ಮತದಿಂದ ನಿಜಾಮ್‌ಶಾಹನನ್ನು ಮಧ್ಯದಿಂದ ದೂರ ಸರಿಸಿ, ಆತನ ಸಾಮ್ರಾಜ್ಯದ ಕೃಷ್ಣಾ ನದಿಯ ಆ ಕಡೆಗಿನ ಭಾಗವನ್ನು ಶಹಾಜಹಾನರು ತನ್ನ ಬಳಕೆಗೆ ತೆಗೆದುಕೊಳ್ಳಲಿ ಮತ್ತು ಈಚೆಗಿನ ಭಾಗವನ್ನು ಹಜರತ್ ಬಾದಶಾಹ ಗಾಜಿಯು ಸ್ವೀಕರಿಸಲಿ.

ನಿಜಾಮ್‌ಶಾಹನು ಬಾದಶಾಹ ಗಾಜಿಯನ್ನು ವಿರೋಧಿಸುವ ಮಾರ್ಗವನ್ನು ಅನುಸರಿಸಿ, ಪ್ರಥಮ ಹೆಜ್ಜೆಯಲ್ಲಿಯೇ ಮೃತ್ಯುಲೋಕಕ್ಕೆ ಸಮೀಪವಾಗಿದ್ದನು. ಆತನ ಸಮಗ್ರ ಸಾಮ್ರಾಜ್ಯವು ಒಪ್ಪಂದದ ಮೇರೆಗೆ ಹಂಚಿಕೆ ಆಯಿತು. ಹಜರತ್ ಬಾದಶಾಹ ಗಾಜಿಯು ಶಹಾಜಹಾನರ ಬೇಹುಗಾರನಿಗೆ ಹಲವು ಬಗೆಯ ಕಾಣಿಕೆಗಳನ್ನು ಕೊಟ್ಟು ಕಳುಹಿಸಿದನು. ಶೇಖ್ ಮೊಗಿನಾ ಹೊರಡುವ ಸಿದ್ಧತೆ ಮಾಡಿಕೊಳ್ಳುತ್ತಿದ್ದಾಗ ಶಹಾಜಹಾನನು ವಾಗ್ದಾನದಲ್ಲಿ ದೋಷಮಾಡಿ, ಕೃಷ್ಣಾ ನದಿಯ ಈಚೆಗಿದ್ದ 'ಕಬಸ್ತ್' ಕೋಟೆಯ ಹತ್ತಿರ ತನ್ನ ಸೈನ್ಯವನ್ನು ನಿಲ್ಲಿಸಿದ್ದಾನೆ ಮತ್ತು ಅತಿ ಶೀಘ್ರವಾಗಿ ಎಚ್ಚರಿಕೆಯಿಂದ ಕಬಸ್ತ್ ಕೋಟೆಯ ಮೇಲೆ ವಿಜಯ ಸಾಧಿಸಲು ಬಯಸುತ್ತಾನೆಂಬ ಸಮಾಚಾರವು ಬಾದಶಾಹ ಗಾಜಿಗೆ ತಿಳಿಯಿತು. ಶಹಾಜಹಾನನು ಒಪ್ಪಂದ ಹಾಗೂ ಮಿತ್ರತ್ವದ ಪೀಠಿಕೆಯನ್ನು ಭಗ್ನಗೊಳಿಸಿದ್ದಾನೆಂಬುದನ್ನು ತಿಳಿದು; ಬಾದಶಾಹ ಗಾಜಿಯು ಬೀದರ್‌ದ ಹವಾಲ್ದಾರ್ ಮುಲ್ಕ್ ಅಮರ್‌ಜಾನ್‌ನಿಗೆ ಆಜ್ಞಾಪಿಸಿದನು. ಆ ಆಜ್ಞೆಗೆ ಅನುಸಾರವಾಗಿ, ಶೇಖ್‌ಮೊಗಿನಾನನ್ನು ಬಂಧಿಸಿ, ಸರ್ಕಾರದಿಂದ ಕೊಡಲಾದ ಯಾವುದೇ ಕಾಣಿಕೆಯನ್ನು ಹಿಂದಿರುಗಿ ಪಡೆಯಲಾಯಿತು.

ಜಗತ್ತಿಗೆ ಆಜ್ಞೆ ವಿಧಿಸುವವನ ಆಜ್ಞೆಯಿಂದ ಮುಲ್ಕ್ ಅಮರ್‌ಜಾನನು ಶಹಾಜಹಾನನ ವಕೀಲನನ್ನು ಮಾರ್ಗದಲ್ಲಿ ಶೀಘ್ರವಾಗಿ ಸೆರೆಹಿಡಿದು ಬೀದರ್ ಕೋಟೆಯಲ್ಲಿ ಬಂಧನದಲ್ಲಿರಿಸಿದನು. ಈ ಸಂಗತಿಯನ್ನು "ನನ್ನ ಬೇಹುಗಾರನನ್ನು ಬಂಧನ ಮುಕ್ತಗೊಳಿಸಿರಿ. ಆತನ ಕೈಗಳು ಮುಕ್ತವಾಗಿದ್ದರೆ. ನಿಮಗೆ ಯಾವುದೇ ಹಾನಿ ಇರುವುದಿಲ್ಲ" ಎಂದು ಶಹಾಜಹಾನನು ಪತ್ರ ಬರೆದನು. ಆತನ ಪತ್ರದ ಯಾವುದೇ ಪರಿಣಾಮ ಪ್ರಾಪ್ತವಾಗಲಿಲ್ಲ ಹಾಗೂ ಬೇಹುಗಾರನಿಗೆ ಬಂಧನದಿಂದ ಬಿಡುಗಡೆ ದೊರಕದಿರುವದರಿಂದ ಶಹಾಜಹಾನನ ಆತ್ಮಾಭಿಮಾನ ಮತ್ತು ಅಸೂಯೆಯ ಅಗ್ನಿಯು ಪ್ರಜ್ವಲಿಸಿತು. ದಕ್ಷಿಣದ ಆಸುಪಾಸು ಅಂದಾಜಿಗಿಂತಲೂ ಅಧಿಕ ಸೈನ್ಯವನ್ನು ನೇಮಿಸುವ ಉಪಾಯವು ಶಹಜಹಾನನಿಗೆ ಹೊಳೆಯಿತು. ಅಂತಿಮವಾಗಿ, ಸಾಮ್ರಾಜ್ಯದ ಸದಸ್ಯನಾಗಿದ್ದ ಶಹಾಜಹಾನನ ಮಾವನಾದ ಆಸಿಫ್‌ಖಾನನನ್ನು ತಮ್ಮ ಪ್ರದೇಶಗಳ ಆಡಳಿತಗಾರರಾಗಿದ್ದ ಹಿಂದುಸ್ತಾನದ ಎಲ್ಲ ಸರದಾರರು, ಅರ್ಥಾತ್, ಅಬ್ದುಲ್ಲಾಖಾನ್ ಉಜ್ಜಕ್ ಜಖ್ಮಿ, ಖಾನಾಜಾದ್‌ಖಾನ್, ಇರಾದ್‌ಖಾನ್, ಬಹದ್ದೂರ್‌ಖಾನ್, ಖ್ವಾಜಾ ಅಬುಲ್ ಹಸನೆಬಕ್ಷಿ, ಅಖೀದತ್‌ಖಾನ್, ರಾಜಾ ಗಜಸಿಂಗ್, ರಾಜಾರಾಮ್ ಮತ್ತು ಇತರ ಹಲವಾರು ಸರದಾರರ ಜೊತೆಗೆ ಈ ದಿಶೆಯಲ್ಲಿ ನೇಮಿಸಲಾಯಿತು. ಆಸಿಫ್‌ಖಾನನು ಅಪಾರ ಸೈನ್ಯದೊಂದಿಗೆ ಗಂಡಾಂತರಕಾರಿ ಸ್ಥಳದಲ್ಲಿ ಅತಿವೇಗವಾಗಿ ಮುನ್ನಡೆದನು. ಅವನು ಹಸನ್‌ಆಬಾದ ನಗರದ ಆಸುಪಾಸು ಬಂದು, ಪೈಶಾಚಕ ಕೃತ್ಯಗಳನ್ನು ಆರಂಭಿಸಿ ಹಲ್ಲೆ ಹಾಗೂ ನಾಶ ಮಾಡಿದನು.

ದೇವಭಕ್ತರ ದೇವಭಕ್ತ ಸೈಯ್ಯದ್ ಮಹಮ್ಮದ್ ಹುಸೇನಿ ಗೇಸೂದರಾಜ್‌ರ ಪವಿತ್ರ ಸಮಾಧಿಯ ಪರಿಚಾರಕರೊಂದಿಗೆ ಅಸಭ್ಯವಾಗಿ ವರ್ತಿಸಲಾರಂಭಿಸಿದ ಆಸಿಫ್‌ಖಾನನು; ಉಭಯ ಜಗತ್ತಿನಲ್ಲಿ ಅಯೋಗ್ಯನೆನೆಸಿ ಇದೇ ಪ್ರಕಾರ ಲೂಟಿ/ ದರೋಡೆ ಮಾಡುತ್ತ ಶಹಾಪುರದಿಂದ ಮೂರು ಮೈಲು ದೂರದಲ್ಲಿದ್ದ ಹೌಜೆರಂಗರೇಜಾನ್‌ದ ಹತ್ತಿರ ತಲುಪಿದನು. ಆತನ ದುಷ್ಟತನದ ಹೆದರಿಕೆಯಿಂದ ಸಾರ್ವಜನಿಕರ ಬಣ್ಣ ಬದಲಾವಣೆಗೊಂಡಿತು. ಉದ್ವಿಗ್ನತೆಗೆ ಆಧೀನರಾದ ಜನರ ದೇಹದಲ್ಲಿ ರಕ್ತವು ಪಾದರಸದಂತೆ ತೀವ್ರವಾಗಿ ಸಂಚರಿಸಿತು.

'ಭಯೋತ್ಪಾದನೆಯ ಸೇಡು ತೀರಿಸಿಕೊಳ್ಳುವಿಕೆಯು ಫಲಪ್ರದವಾಗುತ್ತದೆ. ವಿನಾಶದ ಪರಿಸರವು ಗದ್ದಲ ಮತ್ತು ದಂಗೆಯಿಂದ ತುಂಬುತ್ತದೆ. ಸರ್ವಜೀವಿಗಳು ಭಯಗ್ರಸ್ತವಾಗುತ್ತವೆ. ಎಲ್ಲೆಡೆಗೆ ಉದ್ವಿಗ್ನತೆಯು ಕಂಡುಬರುತ್ತದೆ. ಜಗತ್ತಿನಲ್ಲಿ ಘಟನೆಗಳ ಸಾಗರವು ತೆರೆಗಳನ್ನು ಉಕ್ಕಿಸುತ್ತದೆ. ದಂಗೆಯ ತರಂಗಗಳು ಮನೆ ಮತ್ತು ಮೈದಾನಗಳ ಮೂಲಕ ಚಲಿಸುತ್ತವೆ'.

ದಂಗೆ ಹಾಗೂ ನಾಶದ ಬಿರುಗಾಳಿಯು ಪರ್ವತ ಮತ್ತು ಮರುಭೂಮಿಯನ್ನು ಆವರಿಸಿತು. ಮಣ್ಣು/ಧೂಳು ಆವರಿಸುವ ಬದಲು ಪ್ರಳಯದ ಪ್ರಾತಃಕಾಲ

ಕಾಣಲಾರಂಭಿಸಿತು. ಇಂತಹ ಪ್ರಳಯ ಸಾದ್ರಶವಾದ ಬಿರುಗಾಳಿಯು ಶೌರ್ಯದ ಕಾಡಿನ ಆಕ್ರಮಣಕಾರಿ ಹುಲಿಗಳ ಯಕೃತ್ತನ್ನು (ಜಿಗರ್) ಕರಗಿಸುತ್ತದೆ. ಹಜರತ್ ಬಾದಶಾಹ ಗಾಜಿಯು ತನ್ನ ಹೃದಯದಲ್ಲಿ ದುಃಖ ಆವರಿಸಲು ಆಸ್ಪದ ನೀಡಲಿಲ್ಲ. ಆತನು ಹಸನ್ಮುಖಿಯಾಗಿ ಆಡಳಿತೆಯ ಕಾರ್ಯಗಳನ್ನು ನಿರ್ವಹಿಸುತ್ತಿದ್ದನು. ಪೈಶಾಚಿಕ ಕೃತ್ಯ ಮಾಡುವವರ ಕೋಲಾಹಲವನ್ನು ಅವನು ಹೊಸ ಹಾಡುಗಾರರ ಧ್ವನಿಯೆಂದು ಭಾವಿಸಿದನು. ಬಾದಶಾಹನ ಆಜ್ಞೆಯಿಂದ ಇತರ ಖ್ಯಾತ ಮಂತ್ರಿಗಳು ಹಾಗೂ ವಿಜಯ–ಸಂಪನ್ನ ಸರದಾರರು ತಮ್ಮ ಪ್ರದೇಶಗಳಿಂದ ನಗರಕ್ಕೆ ಆಗಮಿಸಿ ಅಪಾರ ಅಶ್ವಾರೋಹಿಗಳು ಮತ್ತು ಕಾಲ್ದಳದ ಸೈನ್ಯವನ್ನು ಸಜ್ಜುಗೊಳಿಸಿ, ಪ್ರತೀಕಾರದ ಧ್ವಜವನ್ನು ಹಾರಿಸಿದರು.

ಸುಸ್ಥಿತಿಯ ಮಿತಿಯನ್ನು ನಿರ್ಲಕ್ಷಿಸಿ, ಸಂಪೂರ್ಣ ಉತ್ಸಾಹದಿಂದ ವೈರಿಗಳ ಮೇಲೆ ಆಕ್ರಮಣ ಮಾಡಲಾಯಿತು. ದ್ವೇಷದಿಂದ ತುಂಬಿದ ನಿರ್ಭೀತ ಸೈನಿಕರ ಆವೇಶದಿಂದ ಯುದ್ಧವು ಗಂಭೀರ ಸ್ವರೂಪ ತಾಳಿತು. ಆತುರದ ಆಕ್ರಮಣದ ತೀವ್ರತೆಯಿಂದ ಸಮತ ಸಾಗರದಲ್ಲಿ ಅಲೆಗಳು ಉದ್ಭವಿಸಿದವು. ಕಾಳಗದ ಹೃದಯದ್ರಾವಿಕ ಅಗ್ನಿಯ ಉಷ್ಣತೆಯು ಆಕಾಶದಲ್ಲಿರುವ 'ಸಮಾಕ್‌ರಾಮ್ಹೆ' ನಕ್ಷತ್ರದ ಮೆದುಳಿನ ತುಂಡುಮಾಡಿದ ಪೈರಿನಂತೆ ಸಂಪೂರ್ಣ ಚಂದ್ರನು ಕಾಣಲಾರಂಭಿಸಿದನು. ಬಂದೂಕು ಚಲಾಯಿಸುವ ಕಾಲ್ದಳದ ಸೈನ್ಯವು ಎಡ–ಬಲದಿಂದ ದಾಳಿ ಮಾಡಿ, ಸಿಡಿಲಿನಂತಹ ಬಂದೂಕಿನ ದಾಳಗಳಿಂದ ಹೊಸ ಬಣ್ಣಗಳ ಕಸರತ್ತು ಪ್ರದರ್ಶಿಸುವ ಆಕಾಶದೊಂದಿಗೆ ಪೈಪೋಟಿ ಆರಂಭಿಸಿತು.

'ಶಕ್ತಿಶಾಲಿ ಕಾಲ್ದಳದ ಸೈನಿಕರು ಒಮ್ಮೊಮ್ಮೆ ಜಿಗಿಯುತ್ತ, ತ್ವರಿತ ಗತಿಯ ಮಿಂಚಿನ ತರಬೇತಿ ನೀಡುತ್ತಿದ್ದರು. ಒಮ್ಮೊಮ್ಮೆ ಕಪ್ಪು ವರ್ಣದ ಜಿಂಕೆಗಳಂತೆ ಪ್ರತ್ಯಕ್ಷವಾಗುತ್ತಿದ್ದರು. ಆದರೆ, ಹುಲಿಯನ್ನು ನರಿಯಂತೆ ಭಾವಿಸುತ್ತಿದ್ದರು. ವಿಭಿನ್ನ ಬಣ್ಣಗಳಿಂದ ತುಂಬಿದ ಆಕಾಶದ ಮೇಲೆ ಲಿಂಬಿ ಹಣ್ಣಿನಂತಹ ಬಣ್ಣದ ಸೂರ್ಯನನ್ನು ಬಂದೂಕಿನಿಂದ ಕೊಲ್ಲುತ್ತಿದ್ದರು. ಬಂದೂಕುಗಳೊಂದಿಗೆ, ಪಿಸುಮಾತಿನಲ್ಲಿ ನಿರತರಾಗುತ್ತಿದ್ದರು. ಅಡಗಿದ ರಹಸ್ಯವನ್ನು ಮೌನದೊಂದಿಗೆ ತಿಳಿಸುತ್ತಿದ್ದರು'.

ಸಾಗರದ ಆಳದಲ್ಲಿರುವ ಆಕಳಿನ ಎದೆಯಲ್ಲಿ ಬಾಣಗಳ ಹೊಡೆತದಿಂದ ಗಾಯಗೊಂಡು ಸುರಿಯುತ್ತಿರುವ ರಕ್ತದ ದೆಸೆಯಿಂದ; ಆಕಳಿನ ಬೆನ್ನಿಂದ ಮೀನುಗಳು ಹೊರಗೆ ಬಂದವು. ಘಟನೆಗಳ ಮಳೆಯ ಬಾಣಗಳ ಹೆದರಿಕೆಯಿಂದ ಮೃತ್ಯುವು ಬಿಲ್ಲಿನ ಮನೆಗಳಲ್ಲಿ ಅಡಗಿಕೊಂಡಿತು. ಪ್ರಾಮಾಣಿಕ ಚಾರಿತ್ರ್ಯದ ಬಾಣಗಳ ಹೆದರಿಕೆಯಿಂದ ವಂಚನೆಯ ನಡಿಗೆಯ ಆಕಾಶವು ಏಳುತ್ತ ಬೀಳುತ್ತ ಆಕಾಶ ಗಂಗೆಯ ಇಕ್ಕಟ್ಟಾದ ಬೀದಿಯಲ್ಲಿ ಪಲಾಯನ ಮಾಡಿತು.

ಓಡಾಟ ಮತ್ತು ಪ್ರಯತ್ನದ ನಂತರವೂ ಸಹ, ರಣರಂಗದಲ್ಲಿ ಮುಂದೆ ಸಾಗುವುದಿಲ್ಲ. ಆದರೆ ವಿಜಯ-ಸಂಪನ್ನ ಸೈನ್ಯದ ಶೂರ ಸೈನಿಕರು ಪಂಕ್ತಿಗಳನ್ನು ಭಗ್ನಗೊಳಿಸುವ ಹಾಗೂ ವೈರಿಗಳನ್ನು ಪತನಗೊಳಿಸುವ ತಮ್ಮ ಕೌಶಲ್ಯವನ್ನು ಪ್ರದರ್ಶಿಸುತ್ತಾರೆಂಬುದನ್ನು ಕಂಡಂತಹ ಪಾಪ ಕೃತ್ಯ ಮಾಡುವವರು; ಯುದ್ಧದಿಂದ ಹಿಂದೆ ಸರಿದು, ಅಳುತ್ತ, ಅಶಕ್ತರಾಗಿ ತಮ್ಮ ಡೇರೆಗಳ ಬಾಗಿಲಿನಲ್ಲಿ ನುಸುಳಿದರು. ಶಾಬಾನ್ ತಿಂಗಳಿನ ಎರಡನೇ ತಾರೀಖಿಗೆ, ಎದುರಿಸಿ ಯುದ್ಧ ಮಾಡಲು ಹಿಂತಿರುಗಿ ಬಂದು; ವೈರತ್ವದ ಕುದುರೆಗೆ ಯುದ್ಧದ ಕಬ್ಬಿಣದ ಮೊಳೆಯಿಂದ ಪ್ರಚೋದಿಸಿದರು. ವಿಜಯ-ಸಂಪನ್ನ ಸೈನ್ಯದ ಶೂರರು ರಕ್ತ ಹೀರುವ ಖಡ್ಗಗಳನ್ನು ಪ್ರತೀಕಾರದ ಖಡ್ಗ ಇಡುವ ಒರೆಯಿಂದ ಎಳೆದು, ವೈರಿಗಳ ಬಾಗಿಲಿನ ಮೇಲೆ ತೂಗಾಡಿಸಿದರು. ಸೂರ್ಯನ ಬೆಂಕಿಯು ಮಿಂಚುವ ಚಂದ್ರನಂತೆ ಬೂದಿಯ ಮುಷ್ಟಿ ಆಗಿ ಆಕಾಶದ ಮೇಲೆ ಪತನವಾಗಲಾರಂಭಿಸಿದಾಗ ಬಂದೂಕು ಮತ್ತು ತೋಪುಗಳಿಂದ ಸುರಿಯುವ ಅಗ್ನಿಯಿಂದ ಗಾಳಿಯು ಉಷ್ಣವಾಯಿತು.

'ಯುದ್ಧದ ಆಕಾಂಕ್ಷೆಯುಳ್ಳವರ ವೈರತ್ವದ ಮೇಲೆ ಧಿಕ್ಕಾರ, ಬಂದೂಕಿನ ಶಕ್ತಿಯಿಂದ ಹೊಗೆಯನ್ನು ಸೃಷ್ಟಿಸುತ್ತಾರೆ'.

ಯುದ್ಧದ ನೆಪಗಳನ್ನು ಹುಡುಕುವಂತಹ ಪಾಪಕೃತ್ಯಗಳ ಸೈನ್ಯಕ್ಕೆ ತನ್ನ ಧ್ಯೇಯ ಪ್ರಾಪ್ತವಾಗಲಿಲ್ಲವೆಂದು, ಅದು ಲಜ್ಜಿತವಾಗಿ, ತಲೆಬಾಗಿಸಿ ಹಿಂದೆ ಸರಿಯಿತು. ವಿಜಯದ ಮದ್ಯ ಸೇವನೆ ಮಾಡಿದ ಯಶಸ್ವಿ ಸೈನಿಕರು ತಮ್ಮ ವಿಶ್ರಾಂತಿ ಗೃಹಕ್ಕೆ ಬಂದರು. ಶಹಜಹಾನನ ಸೈನ್ಯದ ಐದು ಪ್ರಸಿದ್ಧ ಮಂತ್ರಿಗಳು ಮೃತ ಸೈನಿಕರ ಗುಂಪಿನಲ್ಲಿ ನಾಪತ್ತೆ ಆಗಿದ್ದರು. ಮತ್ತು ಅವರ ಸುಳಿವು ಯಾರಿಗೂ ಸಿಗಲಿಲ್ಲ. ಇತ್ತಕಡೆಗೆ, ಪೇಶ್ ಜಂಗ್‌ಖಾನನ ಪುತ್ರನಾದ ಸಿಕಂದರ್ ಅಲಿಯು ತನ್ನ ಜೀವದ ಬಲಿದಾನ ಮಾಡಿದನು. ನಾಶ ಹೊಂದಿದ, ಪಾಪಕೃತ್ಯ ಮಾಡುವ ಸೈನಿಕರು, ಪ್ರತಿದಿನ ಸೈನ್ಯದೊಂದಿಗೆ ಕ್ಷೇತ್ರದಲ್ಲಿ ರಣರಂಗದ ಗೊಂದಲಕ್ಕೆ ಉತ್ತೇಜನ ನೀಡುತ್ತಿದ್ದರು. ನಗರದ ಯಾವುದೇ ದ್ವಾರದ ಹತ್ತಿರ ತಲುಪಿದರೂ ಸಂಪೂರ್ಣವಾಗಿ ಪರಾಜಯ ಹೊಂದಿ ಹಿಂತಿರುಗುತ್ತಿದ್ದರು. ಇದೇ ಪ್ರಕಾರ ಮುಂಜಾನೆಯಿಂದ ಸಾಯಂಕಾಲದವರೆಗೆ ಬಾಗಿಲಿನಿಂದ ಬಾಗಿಲಿಗೆ ಅಲೆದಾಡುತ್ತಿದ್ದರು.

ವಿಜಯ ಸಂಪನ್ನ ಸೈನ್ಯಗಳ ಪಂಕ್ತಿಭೇದದ ಪ್ರಭಾವದಿಂದ ಪ್ರಾಪ್ತವಾಗುವ ಪ್ರಾಬಲ್ಯದ ಪರೀಕ್ಷಣೆ ಮಾಡಿದ ನಂತರ ಆಸಿಫ್‌ಖಾನನು ತನ್ನ ಎಲ್ಲ ಅನುಭವಿಕ ಮಂತ್ರಿಗಳು ಮತ್ತು ಸರದಾರರಿಗೆ, ಯುದ್ಧ ಮಾಡಿ, ನಗರವನ್ನು ಗೆಲ್ಲಲು ಆಜ್ಞೆ ನೀಡಿ ನುಡಿದನು. "ನಾಳೆ ನಾಲ್ಕೂ ಕಡೆಯಿಂದ ದಾಳಿ ಮಾಡಿ, ಕ್ಷೇತ್ರವನ್ನು ಸ್ವಾಧೀನಪಡಿಸಿಕೊಳ್ಳಬೇಕು ಅಥವಾ ಈ ಜಗತ್ತಿನಿಂದ ನಿಮ್ಮ ಹೆಸರು ಮತ್ತು ಗುರುತನ್ನು ನಾಶಗೊಳಿಸಬೇಕು".

ಇಂತಹ ಪರಿಣಾಮ ರಹಿತ ಅಂದಾಜು ಹಾಗೂ ದೋಷಪೂರ್ಣವಾದ ಅನುಮಾನದಿಂದ ಶಾಬಾನ್‌ದ ತಿಂಗಳಿನ ಒಂಭತ್ತನೇ ತಾರೀಖಿಗೆ ಅರಬೀ ಕುದುರೆಗಳ ಮೇಲೆ ಸವಾರಿ ಮಾಡಿ, ತೆರೆಗಳು ಉದ್ಭವಿಸುವ ತೀಕ್ಷ್ಣವಾದ ಸಾಗರದಂತೆ ಸೈನ್ಯದ ನಂತರ ಸೈನ್ಯಗಳು ನಗರದ ಕಡೆಗೆ ರವಾನೆ ಆದವು. ಪರ್ವತದಂತಹ ವೈಭವದ ಮದೋನ್ಮತ್ತವಾದ ಕಪ್ಪು ಆನೆಗಳನ್ನು ತಮ್ಮ ಸೈನ್ಯಗಳ ಮುಂದೆ ಗೊಂದಲವೆಬ್ಬಿಸಲು ಪ್ರಚೋದನೆ ನೀಡಿದರು. ಪ್ರತಿಯೊಂದು ಆನೆಯ ಬೆನ್ನಿನ ಮೇಲೆ ಚಿತ್ತವೇಧಕ ಹೊಡೆತದ ಪೆಟ್ಟು ಕೊಡುವವರನ್ನು ನಿಲ್ಲಿಸಲಾಗಿತ್ತು.

ತೋಪು ಮತ್ತು ಬಂದೂಕುಗಳ ಧ್ವನಿಯಿಂದ 'ಗುಂಬಜೆ ಖಿಜ್ರಾ'ಕ್ಕಿಂತಲೂ (ಖಿಜ್ರಾದ ಗುಮ್ಮಟ) ಉನ್ನತವಾದ ಪ್ರಳಯ ದಿನದಂತಹ ಕೋಲಾಹಲವೆಬ್ಬಿಸಲಾಯಿತು. ಹಜರತ್ ಬಾದಶಾಹ ಗಾಜಿಯ ಸೈನ್ಯವನ್ನು ಎದುರಿಸುವವರು ಚತುಷ್ಪಾದಗಳ ಗೊರಸಿನ ಅಪ್ಪಳಿಕೆಯಿಂದ ಮಣ್ಣುಪಾಲಾದರು. ವೈಭವಶಾಲಿ ವೀರರ ದೇಹದಿಂದ ಬೇರ್ಪಟ್ಟಂತಹ ಶಿರಗಳು, ಧ್ವಜಗಳ ಹುಲಿಯ ಮುಖದ ಚಿಹ್ನೆಯನ್ನು ರಕ್ತರಂಜಿತಗೊಳಿಸಿದ್ದವು. ಆಯುಧ ಮತ್ತು ಯುದ್ಧದ ಹೃದಯವನ್ನು ಕರಗಿಸುವ ಅಗ್ನಿಯಿಂದ ಪ್ರತಾಪಶಾಲಿಗಳ ಎಲುಬುಗಳ ತಿರುಳು ಸೀಸದಂತೆ ಕರಗಿತು. ಯುದ್ಧದ ಅಗ್ನಿಯಲ್ಲಿ ನಿರತರಾದ ಸೈನಿಕರು ಭಗ್ನವಾದ ರೆಕ್ಕೆಗಳುಳ್ಳ ಭ್ರಮಾಜನಕ ಪಕ್ಷಿಗಳಾಗಿದ್ದರು. ವಿಜಯ-ಸಂಪನ್ನ ಸೈನ್ಯದ ಶೂರ ಸೈನಿಕರು ರಣರಂಗವನ್ನು ನಿಯಂತ್ರಣದಲ್ಲಿಟ್ಟುಕೊಳ್ಳುವ ಜ್ಞಾನ ಹೊಂದಿದ್ದರು. ಅವರು ಸ್ವಯಂ ಸ್ವಲ್ಪ ಹಿಂದೆ ಸರಿದು; ಅಸ್ಥಿರ/ಅಶಕ್ತರಾದ ವೈರಿಗಳನ್ನು ಕಂದಕದ ದಡದಲ್ಲಿ ತಂದರು.

ಗೋಡೆಯ ಮೇಲಿಂದ ಸಿಡಿಲು ಸುರಿಸುವ ತೋಪುಗಳನ್ನು ಹೊತ್ತಿಸಿ, ನಿರಂತರವಾಗಿ ಆಕ್ರಮಣ ಮಾಡುತ್ತಿದ್ದರು. ಈ ಪ್ರಕಾರವಾಗಿ ಜಗಳಗಂಟ ಸ್ವಭಾವದ ಪಾಪಕೃತ್ಯಗಳ ಸೈನಿಕರ ತಾಳ್ಮೆ ಮತ್ತು ಸ್ಥಿರತೆಯ ಪೈರಿನ ಪ್ರತಿಯೊಂದು ರಾಶಿಯಲ್ಲಿ ವ್ಯಾಕುಲತೆ ಉಂಟಾಯಿತು. ಯುದ್ಧದ ಸಮಯದಲ್ಲಿ ತಮ್ಮ ಖಡ್ಗಗಳಿಂದ ಪರ್ವತ ಹಾಗೂ ಮರುಭೂಮಿಯಲ್ಲಿ ರಕ್ತದ ಹೊಳೆ ಹರಿಸಿದಂತಹ ನಗರವಾಸಿಗಳು ಗೋಡೆಗಳ ಶಿಖರದ ಪ್ರತಿಯೊಂದು ಕಮಾನಿನ ಹತ್ತಿರ ಆಶ್ರಯ ಪಡೆದು, ಜೀವನದ ತಳಹದಿಯನ್ನು ಧ್ವಂಸಗೊಳಿಸುವವರ ಬಂದೂಕಿನ ದಾಳಿಯಿಂದ ತಪ್ಪಿಸಿಕೊಳ್ಳಹತ್ತಿದರು. ಪಾಪಕೃತ್ಯ ಮಾಡುವವರ ಮುಂದೆ ಸಂಪೂರ್ಣ ಸ್ಪಷ್ಟತೆಯಿಂದ ಕಪ್ಪು ಪರಿಣಾಮ ಪ್ರಕಟವಾಗಿತ್ತು. ಸಿಡಿಲು ಸುರಿಸುವಂತಹ ಸಿಡಿಮದ್ದುಗಳು ವಿರೋಧಿಗಳ ಪ್ರಜ್ಞೆ ತಪ್ಪಿಸಿದವು. ಅವರು ಗಾಬರಿಗೊಂಡು, ಹಿಂದೆ ಸರಿಯುತ್ತ ಸಾಗಿದರು. ಒಂದೇ ದಿನದಲ್ಲಿ ರಣರಂಗದಲ್ಲಿ ದೃಢ ನಿಲುವು ಮಣ್ಣು ಪಾಲಾಗಿ ನಾಶವಾಗಿರುವುದನ್ನು ಅನ್ವೇಷಣೆಯ ಮೂಲಕ ತಿಳಿದುಕೊಂಡಂತಹ ಆಸೀಫ್‌ಖಾನನು ಶಹಜಹಾನನ ಸರದಾರರಿಗೆ ಯುದ್ಧ ಮಾಡಲು ತಡೆಗಟ್ಟಿದನು. ಅವನ ಶಿರವು ಅವಮಾನದ ಭಾರದಿಂದ ವೃದ್ಧರ ಬಗ್ಗಿನ ಬೆನ್ನಿನಂತೆ

ಬಾಗಿತು. ಚದುರಿದ ಸೈನ್ಯವನ್ನು ಒಂದುಗೂಡಿಸಿ ಸಂಧಾನ ಹಾಗೂ ಮೈತ್ರಿಯ ಮಾರ್ಗದಲ್ಲಿ ಬರಬೇಕು ಮತ್ತು ಕೈಗೆಟಕಿದ ಇದೇ ನೆಪದಿಂದ ಪಲಾಯನ ಮಾಡುವ ದಾರಿಯನ್ನು ಸ್ವೀಕರಿಸಿ, ತನ್ನ ಜೊತೆಗಾರರಲ್ಲಿ ಯಾರಾದರೊಬ್ಬ ವಿಶ್ವಾಸಾರ್ಹ ವ್ಯಕ್ತಿಯನ್ನು ರಾಜರಿಗೆ ಆಶ್ರಯದಾತನಾದ ರಾಜನ ದರ್ಬಾರಿಗೆ ಕಳುಹಿಸಿದನು. ಉನ್ನತ ದರ್ಜೆಯ ಸೇವೆಯಲ್ಲಿರುವ ಓರ್ವ ಆಜ್ಞಾಪಾಲಕನನ್ನು ಕಳುಹಿಸಿದರೆ, ಉಭಯ ಪಕ್ಷಗಳ ನಡುವೆ ಒಪ್ಪಂದವಾಗಿ ಆಸೀಫ್‌ಖಾನನು ತನ್ನ ಜೊತೆಗಾರರೊಂದಿಗೆ ಹಿಂತಿರುಗಿ ಹೋಗಲು ಮನವಿ ಮಾಡಿಕೊಳ್ಳಲಾಯಿತು.

ಹಜರತ್ ಬಾದಶಾಹ ಗಾಜಿಯು ಆಸೀಫ್‌ಖಾನನ ಮನವಿಯ ಆಧಾರದ ಮೇಲೆ ಆ ಕಾಲದಲ್ಲಿ ಖಾಸ್‌ಖಾನನೊಂದಿಗೆ ಸಂಬಂಧ ಹೊಂದಿದವನಾಗಿದ್ದ ಶೇಖ ದಬೀರ್‌ನಿಗೆ ಅನುಮತಿ ನೀಡಿದನು. ಶೇಖ್‌ದಬೀರ್‌ನು ಆಸೀಫ್‌ಖಾನನನ್ನು ಭೆಟ್ಟಿಯಾದ ಏಳು ದಿನಗಳ ನಂತರ; ಸಂಧಾನ ಮತ್ತು ಮೈತ್ರಿಯ ವಿಷಯ ಹಾಗೂ ಮಹತ್ಕಾರ್ಯವನ್ನು ಅನುಷ್ಠಾನಗೊಳಿಸಲು ಸಾಮ್ರಾಜ್ಯದ ನವಾಬನಿಗೆ ಭೆಟ್ಟಿಯಾಗಲು ಆಸೀಫ್‌ಖಾನನು ಅಪೇಕ್ಷಿಸುತ್ತಾನೆಂಬ ಸಮಾಚಾರ ಬಂದಿತು. ವಿಶ್ವಮಾನ್ಯನ ಆಜ್ಞೆಯ ಮೂಲಕ ನವಾಬ ಮುಸ್ತತಾಬ್‌ನು ಆಸೀಫ್‌ಖಾನನ ಹತ್ತಿರ ಹೋದನು. ಒಂದು ದಿನ ಹಾಗೂ ಒಂದು ರಾತ್ರಿ ಗೌರವದೊಂದಿಗೆ ತನ್ನ ಒಬ್ಬ ಆಜ್ಞಾಪಾಲಕನೊಂದಿಗೆ ಏಕಾಂತದಲ್ಲಿ ವಿಚಾರ-ವಿನಿಮಯ ಮಾಡಿ ತನ್ನೊಂದಿಗೆ ಆಸೀಫ್‌ಖಾನನನ್ನು ಕರೆದುಕೊಂಡು ಆಕಾಶದಂತಹ ಉನ್ನತವಾದ ದರ್ಬಾರಿಗೆ ತಲುಪಿ, ಸಂಧಾನ ಮತ್ತು ಮೈತ್ರಿಯ ವಿಷಯವು ಬಡ್ಡಿ ರಹಿತ ಎಪ್ಪತ್ತು ಲಕ್ಷ ಹೂನ್ ನಗದಿಗೆ ನಿರ್ಧಾರಿತವಾಗಿದೆಯೆಂದು; ನವಾಬ್ ಮುಸ್ತತಾಬ್‌ನು ನಿವೇದನೆ ಮಾಡಿದನು.

ಈ ಮಾತನ್ನು ಕೇಳಿದಂತಹ ಹಜರತ್ ಬಾದಶಾಹಗಾಜಿಯು, ನಸು ನಗೆ ಬೀರಿ ನುಡಿದನು. "ಇದು ಯಾವ ಹುಚ್ಚು ಸಾಹಸದ ಬೀಜವಾಗಿದೆ? ಇದನ್ನು ಆಸೀಫ್‌ಖಾನನು ತನ್ನ ಮಿದುಳಿನ ಕೋಲಾಹಲದ ಸ್ಥಾನದಲ್ಲಿ ಬಿತ್ತಿದ್ದಾನೆ. ಇಂದಿನವರೆಗೆ ಸದ್ಯ ಕೈಯಲ್ಲಿರುವ ನಗದು, ನಮ್ಮ ಜಗತ್ತಿನ ಖಡ್ಗಶಕ್ತಿಯ ಹೊಡೆತಗಳಾಗಿವೆ. ಅವುಗಳು ನಮ್ಮ ವಿಜಯ ಹಾಗೂ ಯಶಸ್ಸಿನ ಟಂಕಶಾಲೆಯ ನಾಣ್ಯುಡಿಗಳಾಗಿವೆ."

ಪೈಶಾಚಿಕ ಸ್ವಭಾವದ ಪಾಪಕೃತ್ಯಗಳ ಸೈನಿಕರು, ಒಪ್ಪಂದದಿಂದ ನಿರಾಸೆ ಹೊಂದಿ ಕಳವಳಗೊಂಡು ಬಳಲಿಕೆಯಿಂದ ಪರಾರಿಯಾಗುವ ಉಡುಪು ಧರಿಸಿ; ಶಹಾಪೂರದ ಹೊಂಡದ ಹತ್ತಿರ ತಲುಪಿದರು.

ಆ ನಾಶ ಹೊಂದಿದ ಅಧಿಕಾರಿಗಳಿಗೆ ನಾಲ್ಕೂ ಕಡೆಯಿಂದ ಮಾರ್ಗಗಳು ಮುಚ್ಚಲ್ಪಟ್ಟಾಗ; ಅವರು ಬರಗಾಲದ ಆಪತ್ತಿನಲ್ಲಿ ಬಂಧಿತರಾದರು. ಆರ್ಥಿಕ ದುಸ್ಥಿತಿಯ ದೆಸೆಯಿಂದ, ಪ್ರತಿದಿನ ವೈರಿಗಳ ಹಲವಾರು ಸೈನಿಕರು ಅಂತ್ಯಗೊಳ್ಳುವಂತೆ ಮೃತ್ಯುವು

ಅವರ ನಡುವೆ ವ್ಯಾಪಿಸಿತು. ಹಸಿವೆಯ ಉಗ್ರತೆಯಿಂದ ಅವರು ವೃದ್ಧ ತೋಳಗಳಂತೆ ಪರಸ್ಪರ ಹೊಡೆದಾಟದಲ್ಲಿ ನಿರತರಾದರು. ನಾಚಿಕೆಯಿಂದ ತಮ್ಮ ತಲೆಗಳನ್ನು ಮೊಣಕಾಲಿನ ಭಿಕ್ಷಾಪಾತ್ರೆಗಳಲ್ಲಿ ಹಾಕಿ ಎಂಜಲು ಪಾತ್ರೆಗಳನ್ನು ನೆಕ್ಕಲು ತೊಡಗಿದರು. ಅವರು ತಮ್ಮ ಮಿತ್ರರ ತಲೆಗಳನ್ನು 'ಒಣಗಿದ ರೊಟ್ಟಿ'ಗಳೆಂದು ಭಾವಿಸಿ, ತಿನ್ನುತ್ತ; ವೃದ್ಧ ಚರ್ಮವಾದರು ಅವರ ಬಾಯಿಯಲ್ಲಿ ತಮ್ಮ ನಾಲಿಗೆಯ ಹೊರತಾಗಿ ಯಾವುದೇ ತುತ್ತು ಇರಲಿಲ್ಲ. ಯಾವುದೇ ತಂಗುವ ಸ್ಥಳವನ್ನು ತಲುಪಿದಾಗ, ನಿರಾಸೆ ಹೊಂದಿದ ಸೈನಿಕರಿಗೆ ತಿನ್ನಲು ಮೃತ ಕುದುರೆ ಮತ್ತು ಆನೆಗಳ ಹೊರತಾಗಿ ಏನೂ ಸಿಗುತ್ತಿರಲಿಲ್ಲ. ವೃದ್ಧ ರೋಗಿಗಳು ಕೋಲಿನ ಸಹಾಯದಿಂದ ದಾರಿಯನ್ನು ಕ್ರಮಿಸುವಂತೆ ಸೈನಿಕರು ತಮ್ಮ ಖಡ್ಗಗಳನ್ನು ಭೂಮಿಯ ಮೇಲೆ ಎಳೆದಾಡುತ್ತ ನಡೆಯುತ್ತಿದ್ದರು.

ವಿಜಯ ಸಂಪನ್ನ ಸೈನ್ಯದ ಶೂರರು, ಪರಾಜಿತರಾದ ಸೈನಿಕರನ್ನು ಬೆನ್ನಟ್ಟಿ ಅನೇಕರ ಶಿರಗಳನ್ನು ಚ್ಛೇದಿಸಿ ಅವರನ್ನು ಧ್ವಂಸಗೊಳಿಸಿದರು. ದರ್ಬಾರಿಗೆ ಸಾಷ್ಟಾಂಗ ನಮನ ಸಲ್ಲಿಸುವವರಿಗೆ ಪಾಪಕೃತ್ಯಗಳನ್ನೆಸಗಿ ಪರಾಜಿತರಾದ ಮೊಗಲರ ಸಮಾಚಾರ ತಲುಪಿದಾಗ ಸಂತೃಪ್ತನಾದ ಹಜರತ್ ಬಾದಶಹ ಗಾಜಿಯು, ಖಾಸಖಾನ್ ಮುರವಾರಿಯನ್ನು ತನ್ನ ಸನ್ನಿಧಿಯಲ್ಲಿ ಕರೆದು ಅವನಿಗೆ 'ಸೇನಾನಾಯಕ'ನ ಗೌರವ ವಸ್ತ್ರ ನೀಡಿದನು. ಆಖಾತದ ತಮ್ಮ ಗಡಿಪ್ರದೇಶಕ್ಕೆ ಕರೆದೊಯ್ದು ಆಸೀಫ್‌ಖಾನನನ್ನು ಅಲ್ಲಿಂದ ಹಿಂದುಸ್ತಾನ ಅರ್ಥಾತ್ ಮೊಗಲರ ಸರಹದ್ದಿಗೆ ತಲುಪಿಸಲು ವಿಜಯ-ಸಂಪನ್ನ ಸೈನ್ಯದೊಂದಿಗೆ ಯಾತ್ರೆಯಲ್ಲಿ ನಿರತರಾದ ಮಂತ್ರಿಗಳು ಮತ್ತು ಸರದಾರರ ಸಹಾಯಕ್ಕಾಗಿ ಖಾಸ್‌ಖಾನನನ್ನು ಕಳುಹಿಸಲಾಯಿತು.

ಈ ಮಹಾನ್ ವಿಜಯದ ಸಂತೋಷ-ಸಮಾಚಾರದಿಂದ ಏಳೂ ದೇಶಗಳ ರಾಜರು ಸಂಪೂರ್ಣವಾಗಿ ತೃಪ್ತರಾದರು. ದರ್ಬಾರದ ಪ್ರಶಂಸಕರು ಬಾದಶಾಹನ ವಿಜಯಗೀತೆ/ಲೇಖನ ಬರೆದು ಪೂರ್ವ ಹಾಗೂ ಪಶ್ಚಿಮದ ದೇಶಗಳಿಗೆ ಕಳುಹಿಸಿದರು. ಹಜರತ್ ಬಾದಶಾಹ ಗಾಜಿಯ ಪ್ರಶಂಸೆ ಮಾಡಿ ಆತನ ಮೇಲೆ ಮುತ್ತುಗಳನ್ನು ಸುರಿಸಲಾಯಿತು.

ವಿಜಯ ಗೀತೆ ಮತ್ತು ಬಾದಶಾಹ ಗಾಜಿಯ ಸದ್ಗುಣಗಳು

'ಸಾಮರ್ಥ್ಯವನ್ನು ಗೌರವಿಸುವ ಹಾಗೂ ಉದಾರತ್ವದ ಮಿತ್ರನಾದ ಓ! ಬಾದಶಹನೇ, ನಿನ್ನ ಖಡ್ಗದ ಶಕ್ತಿಯಿಂದ ಸೂರ್ಯನು ಜಗತ್ತನ್ನು ಬೆಳಗಿಸುತ್ತಾನೆ. ನಿನ್ನ ಗುರಾಣಿಯ ಸುಳಿಯಿಂದ ಸಾಗರವು ಪತನವಾಗುತ್ತದೆ. ನಿನ್ನ ಖಡ್ಗವು ಮೊಡಗಳನ್ನು ಸೀಳಿ, ಸಿಡಿಲುಗಳನ್ನು ಗಾಯಗೊಳಿಸುತ್ತದೆ. ನಿನ್ನ ಕ್ರೋಧದ ಬಿರುಗಾಳಿಯು ಆಕಾಶದ ಬತ್ತಳಿಕೆಯನ್ನು ತಲುಪಿದಾಗ ಪತನವಾಗುವ ಪ್ರಕಾಶಮಾನ ನಕ್ಷತ್ರದ ಬಾಣವು ತಲೆಕೆಳಗಾಗಿ ಕೆಳಗೆ ಪಸರಿಸುತ್ತದೆ. ನಿನ್ನ ವಿಜಯ-ಬಾಣದ ಹರಿವಾಣದ ಮೇಲೆ 'ದೇವರ ನಾಮ'ಏದೆ. ಆ ಬರವಣಿಗೆಯ ಪ್ರಭಾವದಿಂದ, ವಿಜಯದ ದ್ವಾರವು ತೆರೆಯುತ್ತದೆ'.

ಮೊಗಲರು ಪರಾರಿ ಆಗುವ ದಾರಿಯಿಂದ ಸುರಕ್ಷಿತವಾಗಿ ತೆರಳಿದ್ದಾರೆಂಬುದನ್ನು ಖಾಸ್‌ಖಾನ್ ಮುರವಾರಿಯು ತಿಳಿದುಕೊಂಡು, ಅವನು ತನ್ನ ವಿಜಯ-ಸಂಪನ್ನ ಸೈನ್ಯದೊಂದಿಗೆ ಪರ್ನಿದಾ ಕೋಟೆಯಲ್ಲಿ ತಂಗಿದರು. ಸೈನ್ಯಗಳಿಗೆ ವಿಶ್ರಾಂತಿ ನೀಡಿ, ಅವನು ಬಾದಶಾಹನ ಆಜ್ಞೆಯ ನಿರೀಕ್ಷಣೆಯಲ್ಲಿ ಕುಳಿತನು.

'ಧರ್ಮದಂತೆ ನಡೆಯುವ ಬಾದಶಾಹನು ಯುದ್ಧದ ದಿನ, ತನ್ನ ಖಡ್ಗವನ್ನು ದೇಹದಿಂದ ದೂರವಿಟ್ಟು ಅಭಿಮಾನದಿಂದ ತಲೆ ಎತ್ತಿದನು. ಆತನ ದಾಳಿಯ ವ್ಯಾಪ್ತಿಯ ಪ್ರತಿಯೊಂದು ತಂಗುದಾಣದ ಪ್ರಯಾಣದಿಂದ ವೈರಿಗಳ ರಕ್ತದ ಪ್ರವಾಹವು ನಿಚ್ಚಣಿಕೆ ಆಗುತ್ತದೆ. ಯಕೃತ್ತು ಸುಟ್ಟಿರುವಂತಹ ಆತನ ವೈರಿಯ ಬಾಯಿಯಲ್ಲಿ ನೀರಿನ ಹೊರತಾಗಿ ಗಾಳಿಯ ಮೂಲಕ ವಿನಾಶದ ಮಣ್ಣಿನ ಧೂಳಿಯು ಬೀಳುತ್ತದೆ'.

ಖಾಸ್‌ಖಾನ್ ಮುರವಾರಿಯು 'ಮುಲ್ಕ್ ಮೈದಾನ್' ತೋಪಿನೊಂದಿಗೆ, ಪರ್ನಿದಾ ಕೋಟೆಯಿಂದ ಬಾದಶಾಹನ ಸನ್ನಿಧಿಗೆ ಆಗಮಿಸುವುದು.

ಉಗ್ರ ಸ್ವಭಾವದ ಮತ್ತು ಉಕ್ಕಿನ ಸಂಕಲ್ಪದ ಜನರು ತಮ್ಮ ಸುಡುತ್ತಿರುವ ಹೃದಯದ ಹೊಗೆಯಿಂದ ಸುತ್ತಮುತ್ತಲು ತಿರುಗುತ್ತಿರುವ ಆಕಾಶದಂತೆ ಸಾವಿರಾರು ಜನರ ವರ್ತುಳವನ್ನು ನಿರ್ಮಿಸಿಕೊಂಡು, ಶಾಂತಿ-ಸಮಾಧಾನದ ಆವರಣವನ್ನು ಹೊಂದುತ್ತಾರೆ. ಉತ್ತಮ ಮಾತುಗಾರಿಕೆ ಮತ್ತು ಲೇಖನ ಸಾಮರ್ಥ್ಯದ ಸಾರಾಯಿಯಲ್ಲಿ ಮಹೋತ್ಸಾಹ ಹೊಂದಿದವರು ವಿಜಯ ಹಾಗೂ ಯಶಸ್ಸಿನ ಅಡಗುದಾಣದಿಂದ ವಿಜಯದ ಬಿರುದು ಹೊಂದಿದವನ ಕಡೆಯಿಂದ, ಬಾದಶಹನ ಆಜ್ಞೆಯು ಮುರವಾರಿಗೆ ತಿಳಿಯಿತು. ಸಿಕಂದರನಂತಹ ವೈಭವವುಳ್ಳ ಮಂತ್ರಿಗಳು ಮತ್ತು ಪರಿಶ್ರಮ ಹಾಗೂ ಓಡಾಟದಲ್ಲಿ ನಿರತರಾದ ಸರದಾರರೊಂದಿಗೆ ಹುಸೇನ್‌ನಿಜಾಮ್‌ಶಾಹರ ಕಾಲದಿಂದ ಪರ್ನಿದಾ ಕೋಟೆಯಲ್ಲಿ ಇದ್ದಂತಹ ಮುಲ್ಕ್‌ಮೈದಾನ್ ತೋಪನ್ನು ನಗರಕ್ಕೆ ತೆಗೆದುಕೊಂಡು ಬರಬೇಕೆಂಬ ಬಾದಶಹನ ಆಜ್ಞೆಯು ಮುರವಾರಿಗೆ ತಲುಪಿದಾಕ್ಷಣ ಅವನು ಜಗತ್ತಿಗೆ ಮಾನ್ಯನಾದ ಬಾದಶಾಹನ ಆಜ್ಞೆಯನ್ನು ಗಮನದಲ್ಲಿಟ್ಟುಕೊಂಡು, ಮುಲ್ಕ ಮೈದಾನ್ ತೋಪನ್ನು ಶೀಘ್ರವಾಗಿ ನಗರಕ್ಕೆ ರವಾನೆ ಮಾಡುವ ಕಾರ್ಯದಲ್ಲಿ ನಿರತನಾದನು.

'ಮುಲ್ಕ್‌ಮೈದಾನದ ಹೊಗಳಿಕೆಯಿಂದ ಬುದ್ಧಿವಂತ ವ್ಯಕ್ತಿಯು, ಆಶ್ಚರ್ಯಚಕಿತನಾಗಿ ಆಕಾಶದಂತೆ ಪೂರ್ಣ ವೃತ್ತವಾಗುತ್ತಾನೆ. ಆತನ ತಲೆಯಿಂದ ಪ್ರಜ್ಞೆಯು ಹೊಗೆಯಂತೆ ಹೊರಹೊಮ್ಮುತ್ತದೆ. ಆಶ್ಚರ್ಯದ ಒತ್ತಡದಿಂದ ಆತನು ಆಕಾಶದಂತೆ ಬಾಗುತ್ತಾನೆ. ಇದು ಎಂತಹ ತೋಪು ಆಗಿದೆ! ಇದು ಅಗ್ನಿಯ ಕಣಗಳನ್ನು ಸುರಿಸಿದಾಗ, ತನ್ನ ಹೊಗೆಯಿಂದ ಗಾಳಿಯನ್ನು ಹೆಬ್ಬಾವುಗಳನ್ನಾಗಿ ಮಾಡುತ್ತದೆ. ಪ್ರಜ್ಞಾವಂತರ ಕಣ್ಣುಗಳಿಗೆ ಅದರ ಉಕ್ಕಿನ ಮುಖವು, ಯಶಸ್ಸಿನ ಆಕಾಶವಾಗಿದೆ ಮತ್ತು ಅದರ ಸಿಡಿಮದ್ದಿನ ಗುಂಡು ಸೂರ್ಯನಾಗಿದ್ದಾನೆ.

ಯುದ್ಧ ಪಂಕ್ತಿಯಲ್ಲಿ ಜ್ವಾಲೆಗಳೊಂದಿಗೆ ಸಂಘರ್ಷಣೆ ಮಾಡುವಾಗ, ಅದರ ಹೊಗೆಯಿಂದ ವೈರಿಯ ಪ್ರಾಣಕ್ಕೆ ಆಪತ್ತು ಉಂಟಾಗುತ್ತದೆ,.

ವೃದ್ಧ ಆಕಾಶದ ಹೆಬ್ಬಾವುಗಳು ಒಂದು ವೇಳೆ, ದ್ವೇಷ ಮತ್ತು ಕ್ರೋಧದಿಂದ ತೋಪಿನ ಬೆಂಕಿ ಸುರಿಸುವ ಸಿಡಿ-ಮದ್ದು ಗುಂಡುಗಳಿಂದ ಹೊಗೆಯಂತೆ ಸುರುಳಿಯಾದರೆ ಅಥವಾ ಕಸ-ಕಡ್ಡಿಯ ಜ್ವಾಲೆಗಳಂತೆ ಗಾಬರಿ ಹಾಗೂ ತಲ್ಲಣಗೊಂಡು ದುರ್ಬಲವಾದರೆ ಅಲ್ಲಿಂದ ಹೊರಬಂದು ತಮ್ಮ ಸ್ಥಳದಲ್ಲಿ ಆಶ್ರಯ ಪಡೆಯುತ್ತವೆ.

ತೋಪಿನ ಅಗ್ನಿಯು ಯಾವುದಾದರೊಂದು ಸುಭದ್ರವಾದ ಕ್ಷೇತ್ರದಲ್ಲಿ ತಲುಪಿದಾಗ ಅಲ್ಲಿ ಹಿಡಿ ತುಂಬ ಬೆಂಕಿ ಮತ್ತು ಭಗ್ನಾವಶೇಷಗಳ ಹೊರತಾಗಿ ಏನೂ ದೊರಕುವುದಿಲ್ಲ. ಖಾಫ್ ಪರ್ವತವು ಈ ತೋಪಿನ ಗುಂಡುಗಳನ್ನು ತಿಂದಿರುವುದರಿಂದ ಹರಳು-ಕಲ್ಲುಗಳನ್ನು 'ಅನ್‌ಖಾ'ಪಕ್ಷಿಗೆ ತಿನ್ನಿಸಲು ಸಾಧ್ಯವಾಗಿದೆ. ಗಾಡಿಯನ್ನು ತೋಪು ಎಳೆಯುವದರಿಂದಲೇ ಭೂಮಿಯ ಆಕಳಿಗೆ ಇಷ್ಟೊಂದು ಭಾರ ಎತ್ತಲು ಸಾಧ್ಯವಾಗಿದೆ. ಇಲ್ಲದಿದ್ದರೆ ಆಕಳಿನ ಬೆನ್ನಿನ ಹೊರಗೆ ಬೆನ್ನೆಲುವಿನ ಹೊರತಾಗಿ ರಕ್ತದಿಂದ ತುಂಬಿದ ಗುಳ್ಳೆಯು ಹೊರಗೆ ಬರುವಂತಹ ವಿಶೇಷವಾದ ಪ್ರಯತ್ನ ಮಾಡುತ್ತಿತ್ತು.

ಅತಿಮಾನುಷ ಕಾರ್ಯವನ್ನು ಬಹಿರಂಗಗೊಳಿಸುವ ಲೇಖನಿಯು ಈ ತೋಪಿನ ವಿವರಣೆ ಹಾಗೂ ಪ್ರಶಂಸೆ ಮಾಡುತ್ತ ಈ ಪ್ರಕಾರವಾಗಿ ಬರೆಯುತ್ತದೆ. ಒಂದು ವೇಳೆ ಪ್ರವಾದಿ ಮೂಸಾನ ಲಾಠಿ/ದೊಣ್ಣೆಯಂತೆ ಹೆಬ್ಬಾವಿನಂತಿರುವ ತೋಪು ಉಸಿರಾಡಿಸಿದರೆ ಏನೂ ಆಶ್ಚರ್ಯವಿಲ್ಲ. ಇಂತಹ ಕಲ್ಪನೆಯ ಹೆದರಿಕೆಯಿಂದ ಇತರ ಎಲ್ಲ ಸರ್ಪಗಳು ಬುಸುಗುಟ್ಟುವಿಕೆಯನ್ನು ಆರಂಭಿಸಿ ಒಂದೇ ಉಸಿರಿನಲ್ಲಿ ಒಂಬತ್ತು ಆಕಾಶಗಳನ್ನು ಕಬಳಿಸಿದರೆ, ಅದು ಆಶ್ಚರ್ಯವೆನಿಸುತ್ತದೆ. ಇದೇ ರೀತಿ ಅನುಪಮವಾದ ಮಹಾನ್ ತೋಪನ್ನು ವೈಭವ-ಗಾಂಭೀರ್ಯದ ಬಾದಶಹನ ಆಜ್ಞೆಯಿಂದ, ಮೊದಲಿನಿಂದಲೂ ತೋಪು ನಗರದಲ್ಲಿ ಇತ್ತೆಂಬ ಸ್ವಾಭಾವಿಕತೆಯೊಂದಿಗೆ ಪರ್ನಿದಾ ಕೋಟೆಯಿಂದ ಅದನ್ನು ನಗರಕ್ಕೆ ತರಲಾಯಿತು. ಮುರವಾರಿಯು ಅದರ ರವಾನೆಗಾಗಿ ಎಲ್ಲ ಬಗೆಯ ಪ್ರಯತ್ನ ಮತ್ತು ವ್ಯವಸ್ಥೆಯನ್ನು ಮಾಡಿದನು. ಅಂದಾಜು ಮೂರು ಸಾವಿರ ಅನುಭವಿಕ ತಜ್ಞರನ್ನು ಕರೆಸಲಾಯಿತು. ಹಸ್ತ ಕೌಶಲ್ಯ ಪ್ರದರ್ಶಿಸುವ ಹಾಗೂ ಸೇವೆ ಮಾಡುವ ಪ್ರಯತ್ನವನ್ನು ಆರಂಭಿಸಲಾಯಿತು. ಸುದೃಢ ಬಾಹುಉಳ್ಳ ಬಡಿಗರು ತಿರುಗುವ ಚಕ್ರದ ಮೇಲೆ ಬಿದಿರನ್ನು ತಿರುಗಿಸಿ ಅದನ್ನು ಸುತ್ತಲಾರಂಭಿಸಿದರು. ಎರಡು ಸಾವಿರ ಸಹನಶೀಲ, ಶಕ್ತಿಶಾಲಿ ಎತ್ತುಗಳನ್ನು ಗಾಡಿ ಎಳೆಯಲು ಕಟ್ಟಲಾಯಿತು.

ಹಾದು ಹೋಗಲು ಅಸಾಧ್ಯವಾದ ಅತಿ ಕಷ್ಟಕರವಾದ ದಾರಿಯಲ್ಲಿ ವೃಕ್ಷಗಳಿಂದ ತುಂಬಿದ ಅರಣ್ಯ ಅಥವಾ ದುರ್ಗಮವಾದ ಪರ್ವತಗಳು ಎದುರಾದರೆ ಫರ್ಹಾದ್‌ನಂತಹ ಕಲ್ಲು ಕತ್ತರಿಸುವವರು ಪರ್ವತಗಳನ್ನು ಅತಿ ಶೀಘ್ರವಾಗಿ ಕೊರೆದು, ಪಾದಗಳ

ಚಿನ್ದೆಯಂತೆ ಅಳಿಸಿ ಹಾಕಿ, ಭೂಮಿಯನ್ನು ಸಮತಳಗೊಳಿಸುತ್ತಿದ್ದರು. ಉಕ್ಕಿನಂತಹ ಹಸ್ತದ ಮರಕೆತ್ತುವ ಸಾಧನದಿಂದ (ಬಾಚಿ) ಕೆಲಸ ಮಾಡುವ ಕಾರ್ಮಿಕರು, ಆಕಾಶದೆತ್ತರಕ್ಕೆ ತಲೆಯೆತ್ತಿ ನಿಂತಿದ್ದ ಪುರಾತನ ವೃಕ್ಷಗಳನ್ನು, ಚಳಿಗಾಲದ ಉದುರುವ ಎಲೆಗಳಂತೆ ಕತ್ತರಿಸುತ್ತಿದ್ದರು. ಮುಲ್ಕ್‌ಮೈದಾನದ ಗಾಡಿಯನ್ನು ಭೂಮಿಯ ಮೇಲೆ ಎಳೆಯುವಂತಹ ಬಲಾಢ್ಯ ಆನೆಗಳ ಭಯಾನಕವಾದ ಘೀಳಿಡುವಿಕೆಯಿಂದ ಪರ್ವತ ಮತ್ತು ಮರುಭೂಮಿಗಳು ಗೋಳಾಡುತ್ತಿದ್ದವು.

ಇದೇ ಸಮಯ ನದಿಯಲ್ಲಿ ಅಲೆಗಳ ವಿಪತ್ತು ಆರಂಭವಾದಾಗ; ಮಹಾಪೂರದ ಬಂಡಾಯ ಮತ್ತು ಅಲೆಗಳ ಆವೇಶದ ಕಾರ್ಯದಲ್ಲಿ ವಿಳಂಬವು ಸೂಕ್ತವಲ್ಲವೆಂದು ಮುರವಾರಿಯು ಭಾವಿಸಿದನು. ಅಪಾರ ಕಟ್ಟಿಗೆ ಮತ್ತು ಹಲಗೆಗಳನ್ನು ಸಂಗ್ರಹಿಸಿ, ಕಟ್ಟಲು ಅವನು ಆಜ್ಞಾಪಿಸಿದನು. ಆಗ ಹಲಗೆಯಂತಹ ಒಂದು ಭಗ್ನವಾದ ದೋಣಿಯು ಗೋಚರಿಸಿತು. ಅದರ ಮೇಲೆ ಮುಲ್ಕ್ ಮೈದಾನ್ ತೋಪನ್ನು ಇಟ್ಟಾಗ, ಅದು ನೀರಿನ ಆಳದಲ್ಲಿ ಜಾರಿತು. ಅದನ್ನು ಅತಿ ಪ್ರಯಾಸದಿಂದ ತಡೆಗಟ್ಟುವ ಕಾರ್ಯದಲ್ಲಿ ತಜ್ಞರು ಸಾಕಷ್ಟು ಶ್ರಮವಹಿಸಿದರು. ಉಕ್ಕಿನ ಪರ್ವತ ಹಾಗೂ ಅಗ್ನಿಯ ಅಂಗಡಿಯಂತಹ ತೋಪನ್ನು ಅಪಾರ ಯತ್ನ ಮತ್ತು ವೃತ್ತಿಪರ ಕೌಶಲ್ಯದಿಂದ ಆಳವಾದ ನೀರಿನಿಂದ ಹೊರಗೆ ತೆಗೆಯಲಾಯಿತು. ನದಿಯ ದಂಡೆಯ ಆಳವಾದ ತಳವು ಸುರೈಯಾ ನಕ್ಷತ್ರದ (ಸಪ್ತ ನಕ್ಷತ್ರ ಸಮೂಹ) ಎತ್ತರಕ್ಕಿಂತಲೂ ಅಧಿಕವೆಂದು ಭಾವಿಸಲಾಗುತ್ತದೆ.

ನದಿಯ ಪ್ರತಿಯೊಂದು ಹನಿಯ ಹತ್ತಿರ ಸಾವಿರಾರು ಖಿಲ್‌ಜುಮ್ ಮತ್ತು ಉಮ್ಮಾನ್ ನದಿಗಳು ಹರಿಯುತ್ತವೆ. ೧೦೪೨ ಹಿಜ್ರಿಯ ಸಫರ್ ತಿಂಗಳಿನ ೧೦ನೇ ತಾರೀಖಿಗೆ ರಾಜಧಾನಿ ಮಹಮ್ಮದ ಪೂರ್ ತಲುಪಿದಾಗ ನಗರದ ಹಲವಾರು ಸುಪ್ರಸಿದ್ಧ ಹಿರಿಯ ಜನರು, ಮುಲ್ಕ್ ಮೈದಾನ್ ತೋಪನ್ನು ನೋಡುವ ಪ್ರಬಲವಾದ ಆಸೆಯಿಂದ ಬಂದು ಸಂತೋಷದಿಂದ ಬಾದಶಾಹನನ್ನು ಪ್ರಶಂಸಿಸತೊಡಗಿದರು.

'ಅಮೌಲ್ಯವಾದ ಮುತ್ತಿನಂತಹ ಬಾದಶಾಹ ಮೊಹಮ್ಮದ ಶಾಹ ಅವನ ಮೇಲೆ ಸಮಗ್ರ ಜಗತ್ತಿಗೆ ಗೌರವವಿದೆ. ಪಾರಿವಾಳವು ಅರಣ್ಯದಲ್ಲಿ ಹಿರಿಯ ಗಿಡಗದ ಮಾತು ಪಾಲಿಸುವಂತೆ ಅವನ ಆಜ್ಞೆಯನ್ನು ಆಕಾಶವು ಪಾಲಿಸುತ್ತದೆ'.

ಜಗತ್ತಿನ ಸಂರಕ್ಷಕನಾದ ಬಾದಶಹನ ಆಜ್ಞೆಯಿಂದ ಮುಲ್ಕ್ ಮೈದಾನದ ಸಂರಕ್ಷಣೆಗಾಗಿ ನಗರದ ಗೋಡೆಯ ಸಮೀಪ ಮಕ್ಕಾ ದ್ವಾರದ ಕಡೆಗೆ ಸುದೃಢ ಮತ್ತು ಸ್ಥಿರವಾದ ಗೋಪುರದ ತಳಹದಿಯನ್ನು ನಿರ್ಮಿಸಲಾಯಿತು. ಈ ಉನ್ನತವಾದ ಗೋಪುರದ ಮೇಲೆ ಅಲ್ವಂದ ಪರ್ವತವು; ವಿಪತ್ತು ಸೃಷ್ಟಿಸುವ ಬೆಂಕಿಯಿಂದ ಭಸ್ಮವಾದ ಕರಿಕಾಳು ಆಗಿದೆ. ಗೋಪುರದ ಗೋಡೆಯ ನೆರಳಿನಲ್ಲಿ ಆಕಾಶವು ಭೂಮಿಯೊಂದಿಗೆ ಜೊತೆಗಾರನಂತೆ ಕುಳಿತುಕೊಂಡು ಗೋಪುರದ ಉನ್ನತ ಕಟ್ಟಡದ ಮೂಲಕ ಮುಲ್ಕ್

ಮೈದಾನವನ್ನು ಒಂಬತ್ತನೆಯ ಆಕಾಶದ ಭವ್ಯತೆಗೆ ತಲುಪಿಸಿದೆ. ಜನರು ತಲೆ ಎತ್ತಿ ದೇವರಿಗೆ ಕೃತಜ್ಞತೆ ಸಲ್ಲಿಸುವಾಗ ಮಿನುಗು ನಕ್ಷತ್ರದ ಬಿರುದು ಸಂಪನ್ನನಾದ ಬಾದಶಾಹ ಗಾಜಿಯನ್ನು ಪ್ರಶಂಸಿಸುತ್ತ ಅವನನ್ನು ಸಾಮ್ರಾಜ್ಯ ಮತ್ತು ಸಾಮ್ರಾಟನ ಕಿವಿಯ ಆಭರಣವೆಂದು ಭಾವಿಸುತ್ತಾರೆ.

'ಓ! ನನ್ನ ದೇವರೆ ಈ ಸುವಿಖ್ಯಾತ ಬಾದಶಾಹನಿಂದ ಧರ್ಮ ಮತ್ತು ಇಸ್ಲಾಂದ ಕಟ್ಟಡವು ಸ್ಥಿರವಾಗಿತ್ತು. ಅವನ ಯೋಚನೆಯು ಜಗತ್ತಿಗೆ ಬೆಳಕು ನೀಡಿತು. ಆತನ ಸ್ತುತಿಯು ಬುದ್ಧಿಯನ್ನು ಸಕ್ರಿಯಗೊಳಿಸಿತು. ಅವನಿಗೆ ಕೆಡುಕು ಬಯಸುವವರು ನಿರಾಸೆ ಹೊಂದಿ ಗಾಳಿಯಲ್ಲಿ ಮಾಯವಾಗುವ ಬೆಂಕಿಯ ಕಿಡಿಯಂತೆ ಭಸ್ಮವಾದರು'.

■

*

ಅಧ್ಯಾಯ – ೪

ಬಾದಶಾಹನ ತೇಜಸ್ಸಿನ ಪುನರ್‌ವರ್ಧನೆ ಮತ್ತು ವಿವಾಹ ಕೂಟದ ಅಲಂಕಾರ

ಮದುಮಗಳನ್ನು ಶೃಂಗರಿಸುವ ವರ್ಣರಂಜಿತ ಯೋಚನೆ ಹೊಂದಿದ ಮಹಿಳೆಯು ಭೂಮಿಯ ಮೇಲೆ ಹಸಿರು ಆಕಾಶದ ವಧು-ಶಯ್ಯಾ ಗೃಹವು ಅರಳಿದ ಹೂಗಳ ನಕ್ಷತ್ರಗಳಿಂದ ಶೃಂಗರಿಸಿರುವಂತೆ ಕೀರ್ತಿಸಂಪನ್ನ ಹೊಸ ಮದುವಣಗಿತ್ತಿಯ ಮುಖದ ಮೇಲೆ ಬಣ್ಣವನ್ನು ಲೇಪಿಸಿದ್ದಾಳೆ. ಪ್ರಕಾಶಮಾನವಾದ ಹಣೆಯುಳ್ಳ ಸುಂದರಿಯರ ಅಂತಃಪುರದ ಮೇಲೆ ಶುಭದಾಯಕ ಭಾಗ್ಯದ ಸುದೈವಿ ಬಾದಶಾಹನ ಕೃಪೆಯ ನೆರಳು ಯಾವಾಗಲೂ ಮಿಂಚುತ್ತಿರುತ್ತದೆ. ಗೀತೆ ಹಾಡುವ ಹಾಗೂ ಚಮತ್ಕಾರ ಪ್ರದರ್ಶಿಸುವಂತಹ ಪ್ರದರ್ಶನಕಾರರ ಸಾಕ್ಷಿಯಾಗಿರುವಂತಹ ಸರ್ವರೂ ದೇವರ ಕಾರ್ಯಾಗಾರದ ಪರದೆಯಿಂದ, ಪ್ರದರ್ಶನ ಮಾಡುತ್ತ ಹೊರಗೆ ಬಂದು ಹಜರತ್ ಬಾದಶಹನನ್ನು ಚುಂಬಿಸುವ ಪ್ರಬಲ ಆಸೆಯಿಂದ ಸಂತೋಷ ಮತ್ತು ಸುಖವನ್ನು ಅನುಭವಿಸುತ್ತಾರೆ.

'ಮೊಹಮ್ಮದ ಶಾಹನು ಜಗತ್ತಿನ ಆಭರಣ ಪೆಟ್ಟಿಗೆಯ ಅದ್ವಿತೀಯ ಮತ್ತು ಇರಾನಿನ ದೊರೆ ಹೋಷಿಂಗ್‌ನು ಮೊಹಮ್ಮದ ಶಾಹನ ಮಾರ್ಗದ ಹಾಸಿಗೆ ಆಗಿದ್ದಾನೆ. ಮೊಹಮ್ಮದ ಶಾಹನ ಕೃಪೆಯ ಮಳೆಯ ಮುಂದೆ, ಮುತ್ತುಗಳಿಗೆ ಯಾವ ಬೆಲೆಯೂ ಇಲ್ಲ. ಜಗತ್ತಿನಲ್ಲಿ ಈ ಮುತ್ತುಗಳು ಕೃಪಣ ಚಿಪ್ಪುಗಳ ಹೊರತಾಗಿ ಯಾರಿಗೂ ಕಾಣಿಸುವುದಿಲ್ಲ'.

ಪ್ರವಾದಿಯ ಪ್ರಕಾಶಮಾನ ಧರ್ಮಕ್ಕೆ ಶಕ್ತಿದಾಯಕ ಮರ್ಯಾದೆ ಮತ್ತು ಔನ್ನತ್ಯಕ್ಕೆ ಜಗತ್ತಿನಲ್ಲಿ ಪ್ರೋತ್ಸಾಹನೆ ನೀಡುವ ಜಗತ್ತಿನ ಮೃದುತ್ವದ ಸಂರಕ್ಷಕ ಐಕ್ಯತೆಯ ಕಿರೀಟಕ್ಕೆ ವೈಭವ ಕೊಡುವ ಹಾಗೂ ವಿಜಯದ ದೃಶ್ಯಗಳನ್ನು ಪ್ರದರ್ಶಿಸುವಂತಹ

ಹಜರತ್ ಬಾದಶಾಹ ಗಾಜಿಯು ಜಗತ್ತಿಗೆ ತನ್ನ ಶುಭದಾಯಕ ಅಳಿಯತ್ವ ಸಮಾರಂಭದ ಸಂತೋಷದಾಯಕ ಸಮಾಚಾರ ನೀಡಿ; ಯಾವಾಗಲೂ ಶಾಶ್ವತವಾಗಿರುವ ಭೋಗದ ಸಾರಾಯಿಯಲ್ಲಿ ಮಗ್ನಗೊಳಿಸಿ ಸೌಭಾಗ್ಯದ ಹೊಸ ವಸಂತಕ್ಕೆ ಹಸಿರುತನವನ್ನು ನೀಡಿದ್ದಾನೆ.

ಗೌರವಾದರದ ಪೆಟ್ಟಿಗೆಯ ಅಮೌಲ್ಯ ಮುತ್ತು ಹಜರತ್ ತಾಜುಲ್ ಮಹಜರಾತ್‌ರ ಖಾಸಾ ಸೋದರ ಮತ್ತು ಪ್ರವಾದಿ ಮೊಹಮ್ಮದರಂತಹ ಸ್ವಭಾವ ಹೊಂದಿದ ಬಾದಶಾಹ ಗಾಜಿಯ ಸೋದರ ಮಾವ ಸೈಯ್ಯದ ಅಬ್ದುರ್‌ಹಮಾನುಲ್ ಹುಸೇನಿಯ ಗೃಹದಲ್ಲಿ ಬಾದಶಾಹ ಗಾಜಿಯ ವಿವಾಹ ಸಂಬಂಧದ ವ್ಯವಸ್ಥೆಯಾದಾಗ ತೀವ್ರವಾದ ಆಸಕ್ತಿ ಮತ್ತು ಸಂತೋಷದಿಂದ ಸಮೀಪ ಮತ್ತು ದೂರದ ಜನರಿಗೆ ಶಾಶ್ವತವಾದ ಪ್ರಸನ್ನತೆ ಹಾಗೂ ಕ್ಷೇಮದಿಂದ ಗೌರವಿಸಲಾಯಿತು. ನಿಧಾನವಾಗಿ ಬೀಸುವ ಗಾಳಿಯು ಆಕಾಂಕ್ಷೆಯ ಉದ್ಯಾನದ ಗಾಳಿ ಸೇವನೆ ಮಾಡುವವರ ಹೃದಯದ ಮೊಗ್ಗಿನಿಂದ ಆಸೆಯ ಗಂಟನ್ನು ಅನಾವರಣಗೊಳಿಸಿತು. ಅತಿಥಿ ಸತ್ಕಾರದ ದೊಡ್ಡ ನಗಾರಿ ಹಾಗೂ ನಗಾರಿಯ ಹೊಸತನವನ್ನು ಕೊಡುವ ಧ್ವನಿಗಳು ಸೌಭಾಗ್ಯ ಕಟ್ಟಡದ ಆಧಾರ ಶಿಲೆಯಾದವು.

ಸುಖ ಜೀವನ ಮತ್ತು ಭೋಗ-ವಿಲಾಸ ಸಾಗರದ ಅಲೆಗಳು ಎಲ್ಲಕ್ಕಿಂತಲೂ ಎತ್ತರ ಆಕಾಶದ ಔನ್ನತ್ಯವನ್ನು ತಲುಪಿದವು. ಜರಿಯಿಂದ ಕುಸುರು ಕೆಲಸ ಮಾಡಿರುವ ಜಮಖಾನೆಗಳ ಸೌಂದರ್ಯವು ಭೂಮಿಯನ್ನು ಮಾನಿ(ಓರ್ವ ಪ್ರಸಿದ್ಧ ರೋಮನ್ ಚಿತ್ರಕಾರ) ಹಾಗೂ ಬಹಜಾದ್ (ಶಾಹ ಇಸ್ಮಾಯಿಲ್ ಸಫ್‌ವಿ ಆಳ್ವಿಕೆಯಲ್ಲಿ ಜೀವಿಸಿದ್ದ ಒಬ್ಬ ಸುವಿಖ್ಯಾತ ಚಿತ್ರಕಾರ) ಅವರು ಮತ್ಸರಪಡುವಂತಹ ಹಾಳೆಯನ್ನಾಗಿ ಮಾಡಿದೆ. ಜಗತ್ತನ್ನು ಬೆಳಗಿಸುವ ಸೂರ್ಯನು ಹೊರಡುವ ಸ್ಥಳವಾಗಿರುವುದರಿಂದ ಉತ್ತುಂಗತೆಯನ್ನು ಪಡೆದಿರುವ ಆಕಾಶವು, ಬಂಗಾರದ ಹಗ್ಗಗಳಿಂದ ಕಟ್ಟಿರುವ ಡೇರೆಗಳ ಔನ್ನತ್ಯದಿಂದ ಸ್ವಯಂ ಗಾಬರಿಯ ತಿರುಗಣಿ ಮಡುವಿನಲ್ಲಿ ಸಿಲುಕಿದೆ. ದೇಶ ಹಾಗೂ ನಗರದ ದ್ವಾರ ಮತ್ತು ಗೋಡೆಗಳನ್ನು ಮಕಮಲ್ಲು ಬಟ್ಟೆ ಹಾಗೂ ಬಂಗಾರದ ಸರಿಗೆಗಳಿಂದ ನೇಯ್ದ ಬಟ್ಟೆಗಳಿಂದ ಶೃಂಗರಿಸಲಾಗಿದೆ. ಸ್ವಯಂ ಅಲಂಕೃತರಾದ ನರ್ತಕರು ಸಾರಾಯಿಯ ಅಮಲಿನಲ್ಲಿ ನಗುತ್ತ ನರ್ತಿಸುತ್ತಾರೆ. ಜಗತ್ತಿನ ಭೋಗವಿಲಾಸದ ಗೃಹದಲ್ಲಿ ಗೀತೆ ಹಾಡುವ ಸುಂದರ ಜನರ ನೃತ್ಯವು ಶ್ರೋತೃಗಳ ಕಿವಿಗಳನ್ನು ಗೀತೆಗಳ ಮುತ್ತುಗಳಿಂದ ತುಂಬಿದೆ.

ಚಂಗ್(ಪ್ರಸಿದ್ಧ ವಾದ್ಯ), ಖಾನೂನ್, ಬರಬತ್(ಸಾರಂಗಿ/ವೀಣೆ) ಮತ್ತು ಆರ್ಗನ್ (ಅರ್‌ಗನೂನ್) ವಾದ್ಯಗಳ ಧ್ವನಿಗಳು ಜಗತ್ತಿನ ಜನವಸತಿ ಪ್ರದೇಶಗಳನ್ನು ಸಂತುಷ್ಟಗೊಳಿಸಿದವು. ಪ್ರತಿಯೊಂದು ಉದ್ಯಾನದಲ್ಲಿ ಯಾವಾಗಲೂ ಅರಳುವ ಹೂಗಳು ಜನರ ಮುಂಡಾಸದ ತುದಿಯಿಂದ ಗುಲಾಬಿ ಪರಿಮಳ ಸಿಂಪಡಿಸತೊಡಗಿದವು. ಚಂಗ್ ಮತ್ತು ಕೈ ಮದ್ದಳೆಯ ಧ್ವನಿಯು ಮಿಂಚುವ ಹಣೆಯುಳ್ಳ ಸುಂದರ ವ್ಯಕ್ತಿಗಳ

ಚಮತ್ಕಾರ ಹಾಗೂ ಹಾಡುಗಾರಿಕೆಯಿಂದ ಎಲ್ಲೆಡೆಗೆ ಅವರನ್ನು ಪ್ರಸಿದ್ಧಗೊಳಿಸಿತು. ಜಗತ್ತಿನಲ್ಲಿ ಯಾವಾಗಲೂ ಸುಖ–ಸಂತೋಷ–ಶೋಧಿಸುವವರಿಗೆ ಧ್ಯೇಯವು ಪ್ರಾಪ್ತವಾಗಿ, ಅವರು ಯಶಸ್ವಿಯಾದರು. ನಾಲ್ವತ್ತು ದಿನಗಳವರೆಗೆ ಸಂತೋಷಾಚಾರಣೆಯ ಪರಂಪರೆಯು ಜಾರಿಯಲ್ಲಿತ್ತು. ಉಲ್ಲೇಖಿತವಾದ ತಿಂಗಳಿನ ಹನ್ನೆರಡನೆಯ ತಾರೀಖಿಗೆ, ಎಲ್ಲರ ಬುದ್ಧಿಯಲ್ಲಿ ಆಶ್ಚರ್ಯ ಉಂಟಾಗುವಂತೆ ಹಜರತ್ ಬಾದಶಾಹ ಗಾಜಿಯ ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ಹೆಗ್ಗಳಿಕೆ ಹಾಗೂ ವೈಭವದಿಂದ ತುಂಬಿದ ಅರಸರ ಸಭೆಯನ್ನು ಅಲಂಕರಿಸಲಾಯಿತು. ಮದುವೆಯ ಮಂತ್ರ ಓದಿಸಲು ಗೌರವಾನ್ವಿತ ಮತ್ತು ಸಮರ್ಥರಾದ ಕಾಜಿಗಳನ್ನು (ನ್ಯಾಯಾಧೀಶರು) ಕರೆದು; ಗೌರವಿಸಲಾಯಿತು. ಅಂತಃಪುರದ ಶೃಂಗಾರದಿಂದ ಹಜರತ್ ಬಾದಶಾಹ ಗಾಜಿಯು ಸಂತುಷ್ಟಗೊಂಡು ಒಲವು ಉಳ್ಳವನಾಗಿ ಆಕಾಶದ ಬಟ್ಟಲನ್ನು ಭೋಗ–ವಿಲಾಸದ ಸಾರಾಯಿಯ ಅಮಲಿನಿಂದ ತುಂಬಿದನು.

'ಬಾದಶಾಹನ ಸಂತೋಷ ಕೂಟದ ಪ್ರಿಯ ಜನರ ನೆರಳಿನಿಂದ, ಆಕಾಶದವರೆಗೂ ಎಲ್ಲರ ತಲೆಯ ಮೇಲೆ ಸೂರ್ಯ ಬೆಳಗುತ್ತಿದ್ದನು. ಯಾವಾಗ ನಾನು ಆತನ ಅಂತಃಪುರದ ಶ್ರೇಷ್ಠತೆಯ ಬಗೆಗೆ ಬರೆಯುತ್ತೇನೆಯೋ, ಆಗ ಚುಕ್ಕೆಗಳು ಸಂತೋಷದಿಂದ ಪತಂಗಗಳಂತೆ ಲೇಖನಿಗೆ ಪ್ರದಕ್ಷಿಣೆ ಹಾಕುತ್ತವೆ. ಮಂಜಿನಿಂದ ಆತನ ಅಂಗೈಯ ಮೋಡದ ಪುಣ್ಯದಿಂದ ಹುಲ್ಲಿಗೆ ಆಗುವಂತೆ, ಆಕಾಶದ ಉದ್ಯಾನವು ಯಾವಾಗಲೂ ಹಚ್ಚಹಸಿರಾಗಿದೆ. ಆತನ ಕೊಡುಗೆಯ ಮೋಡದಿಂದ ಜಗತ್ತು ಯಾವಾಗಲೂ ಉದ್ಯಾನವಾಗಿದೆ. ಆತನ ಯೋಚನೆಯ ಬೆಳಕಿನಿಂದ ಯುಗದ ನೇತ್ರವು ಪ್ರಕಾಶಮಾನವಾಗಿದೆ'.

ಹಜರತ್ ಬಾದಶಹನೊಂದಿಗೆ ಅಬ್ದುಲ್ಲಾ ಕುತುಬಶಾಹನ ಸೋದರಿಯ ವಿವಾಹದ ವಿವರಣೆ

ಆಸುಪಾಸು ಅದೃಷ್ಟ ಮತ್ತು ಶಕ್ತಿಯು ತಿರುಗುತ್ತಿರುವಂತಹ ಗೌರವ–ಗಾಂಭೀರ್ಯದ ಜಗತ್ತಿನ ಸುದೈವೀ ಜನರು ದೀನ–ಭಾವ ಹಾಗೂ ನಮ್ರತೆಯಿಂದ ತಮ್ಮ ಹಣೆಯನ್ನು ಬಾದಶಹ ಗಾಜಿಯ ಮಾರ್ಗದ ಧೂಳಿಯ ಮೇಲೆ ಇಟ್ಟು ಹೆಮ್ಮೆಯ ಬೈತಲೆಯಿಂದ ಕೃತಜ್ಞತಾರ್ಪಣೆಯನ್ನು ಸಲ್ಲಿಸುತ್ತಾರೆ. ಆಮ್‌ಶೀದ್‌ನಂತಹ ದೊರೆ ಅಬ್ದುಲ್ಲಾ ಕುತುಬಶಾಹನು ಹಜರತ್ ಬಾದಶಹ ಗಾಜಿಗಾಗಿ ತನ್ನ ಉನ್ನತ ವಂಶದ ಸೋದರಿಯ ಮದುವೆಯ ಪ್ರಸ್ತಾಪದ ಸಮಾಚಾರ ಕೇಳಿದಾಗ; ಗೌರವಾದರದ ಪರದೆಯಲ್ಲಿರುವ ತನ್ನ ಸೋದರಿಯನ್ನು ತನ್ನಿಂದ ದೂರಮಾಡಲು ಅಪೇಕ್ಷಿಸಲಿಲ್ಲ. ಅವನು ತನ್ನ ಪ್ರಾಣಕ್ಕಿಂತಲೂ ಹೆಚ್ಚಿನ ಪ್ರೀತಿಯ ಸೋದರಿಗಾಗಿ ಕ್ಷಮೆ ಕೋರಿ ಈ ವಿಷಯವನ್ನು ನಿರ್ಲಕ್ಷಿಸಿದನು. ಈ ವಾರ್ತೆಯನ್ನು ತಿಳಿದ ತಕ್ಷಣ ಹಜರತ್ ಬಾದಶಾಹ ಗಾಜಿಯು ನವಾಬ್‌ಖಾನ್ ಬಾಬಾ ಮತ್ತು ಖಾಸ್‌ಖಾನರನ್ನು ಕರೆದು ಆಜ್ಞಾಪಿಸಿದನು. "ಕುತುಬಶಾಹನ ವಿರುದ್ಧ ವರ್ತನೆ ಮಾಡುತ್ತಾನೆ. ನಮ್ಮ ಸಾಮ್ರಾಜ್ಯದ ವಿಜಯ–

ಸಂಪನ್ನ ಸೈನ್ಯವನ್ನು ಗೋಲಕೊಂಡದ ಕಡೆಗೆ ಕಳುಹಿಸಿರಿ. ಆಚೆಗಿನ ಕುತುಬಶಾಹನ ಪ್ರದೇಶವು ನಮ್ಮ ಜಾಗತಿಕ ಆಜ್ಞೆಯನ್ನು ಅನುಸರಿಸುವ ಆಜ್ಞಾಪಾಲಕನಾಗಬೇಕು".

ಬಾದಶಾಹನ ಆಜ್ಞಾನುಸಾರ ಖಾಸಖಾನ್ ಮುರವಾರಿಯನ್ನು ವಿಜಯಸಂಪನ್ನ ಸೈನ್ಯದೊಂದಿಗೆ ಕಠಿಣವಾದ ಕಾರ್ಯವನ್ನು ಸುಲಭಗೊಳಿಸಲು ಆಯ್ಕೆ ಮಾಡಲಾಯಿತು. ಈ ಸಮಾಚಾರ ತಿಳಿದಾಗ, ಕುತುಬಶಾಹನು ಗಾಬರಿಗೊಂಡನು. ಅತಿ ಶೀಘ್ರವಾಗಿ, ಹಜರತ್ ಬಾದಶಾಹ ಗಾಜಿಯ ಆಜ್ಞೆಯನ್ನು ಪಾಲಿಸುವ ಮೂಲಕ ಪರಿಹಾರವನ್ನು ಪಡೆದನು.

ಇಂತಹ ಗೌರವದ ಹೆಚ್ಚಳವನ್ನು ಮಹಾ ಉಪಕಾರವೆಂದು ಭಾವಿಸಿ, ಮನಮೆಚ್ಚುವಂತಹ ವಿವಿಧ ಪ್ರಕಾರದ ಕಾಣಿಕೆ/ಕೊಡುಗೆಗಳು ಮತ್ತು ಮನೋಹರ ಬರವಣಿಗೆಯ ಪತ್ರದೊಂದಿಗೆ ತನ್ನ ಮಂತ್ರಿಯನ್ನು ರಾಜರಿಗೆ ಆಶ್ರಯದಾತನಾದ ಬಾದಶಾಹನ ದರ್ಬಾರಿಗೆ ಕಳುಹಿಸಿದನು. ಪ್ರೇಮ ಹಾಗೂ ಐಕ್ಯತೆಯ ತಳಹದಿಯು ದೃಢವಾಗಲಾರಂಭಿಸಿತು. ಹಜರತ್ ಬಾದಶಾಹ ಗಾಜಿಯ ವಿವಾಹ ಸಮಾರಂಭದ ವ್ಯವಸ್ಥೆಯನ್ನು ಮಾಡಲಾರಂಭಿಸಿದನು. ವೈಭವದ ಸೈನ್ಯ ಸೇವಕರು, ಮೋಡದಂತೆ ಮಂದಗತಿಯ ಸಮುದ್ರದ ಹಾಗೆ ಗಾಂಭೀರ್ಯದ ಆನೆಗಳು ಹಾಗೂ ಬಂಗಾರದ ಗೊರಸು ರಕ್ಷೆ ಮತ್ತು ರತ್ನಖಚಿತವಾದ ಲಗಾಮು ಹೊಂದಿದ ಕುದುರೆಗಳೊಂದಿಗೆ ಹೈದರಾಬಾದಿಗೆ ತೆರಳಿದರು. ಎರಡೂ ಕಡೆಗಳಿಂದ ಭ್ರಮಾಜನಕ ಮತ್ತು ಅಂದಾಜುಮೀರಿದ ಸಾಮ್ರಾಜ್ಯದ ಸುಖ-ಸಂತೋಷದಲ್ಲಿ ತೇಜಸ್ಸನ್ನು ಹೆಚ್ಚಿಸಲಾಯಿತು. ದೃಢತೆಯ ಸಿಂಹಾಸನದ ಮೇಲೆ ಆಸೀನರಾಗಿ ಹಜರತ್ ಬಾದಶಾಹ ಗಾಜಿಯು ಲೋಕ ರಕ್ಷಣೆಯ ಮಧ್ಯದಲ್ಲಿ ಮಗ್ನನಾದನು.

ನಾಲ್ಕು ಮಹಾಭೂತಗಳು ಹಾಗೂ ಆರು ದಿಕ್ಕುಗಳು, ಗಾಢವಾದ ಆಸಕ್ತಿ ಮತ್ತು ಸಂತೋಷದಲ್ಲಿ ಜೋಲಾಡಹತ್ತಿದವು. ಶುಭದಾಯಕ ಸಮಾರಂಭದ ಅಲಂಕಾರವು ಹಿರಿ-ಕಿರಿಯರಿಗೆ ಸಂತೋಷ ನೀಡಿತು. ಜಾಜಿಮಲ್ಲಿಗೆಯಂತಹ ಬಾಹುಗಳುಳ್ಳ ಮಧ್ಯಪಾನ ಮಾಡಿಸುವವರು ಮುಂದೆ ಬರುವದರಿಂದ ತಾಳ್ಮೆ ಹಾಗೂ ಪ್ರಜ್ಞಾವಂತ ಅಭಿಮಾನಿಗಳ ಕೈಯಿಂದ ಅವರ ಬಟ್ಟಲು ಜಾರಿ ಬಿದ್ದಿತು. ಅಧಿಕ ಬಣ್ಣ ಹರಡುವಿಕೆಯಿಂದ ಆಕಾಶದ ಕಿಲುಬಿನ ಬಣ್ಣದ ಭಾವಣಿಯು ಕೆಂಪು ಬಣ್ಣದ ಹೂವಿನ ಎಲೆಯಂತೆ ಬಣ್ಣದಲ್ಲಿ ಮುಳುಗಿದೆ. ಪರಿಮಳ ಸೃಷ್ಟಿಸುವ ಹೂಗಳ ಸುಗಂಧವು ಆಕಾಶದ ಅರಳಿದ ಹೂವಿಗೆ ಗುಲಾಬಿಯ ಬುಗ್ಗೆಯನ್ನಾಗಿ ಮಾಡಿದೆ. ಪ್ರಿಯವಾದ ಭಕ್ಷ್ಯಗಳ ಊಟದ ವಸ್ತ್ರ(ದಸ್ತರ್‌ಖಾನ್) ಹರಡುವದರಿಂದ ಆಕಾಶವು ಪ್ರಜ್ಞಾಹೀನವಾಗಿದೆ.

'ದೇವರ ಶಕ್ತಿ ಮತ್ತು ಅದೃಷ್ಟದ ಗೌರವವು, ಬಾದಶಾಹನ ಆಜ್ಞಾಪಾಲಕವಾಗಿವೆ. ಜಗತ್ತು ಸಂಪೂರ್ಣವಾಗಿ ಸುಖ-ಸಂತೋಷದಲ್ಲಿ ಮುಳುಗಿದೆ. ಪ್ರಾಣದ ಡೇರೆಯ ಪಾಲನೆ/

ಪೋಷಣೆಯು, ವಿಲಾಸದಲ್ಲಿ ನಿರತವಾಗಿದೆ. ಅದರ ನೆರಳು ತನ್ನ ಔನ್ನತ್ಯದಿಂದ ಸೂರ್ಯನ ಮೇಲೆ ಬೀಳುತ್ತದೆ. ಬರಿದಾಗುವ ಲಜ್ಜೆಯಿಂದ ಸ್ವಯಂ–ಜಿಪುಣವಾಗಿಲ್ಲ. ಕಾಲ ಮೇಲೆ ಕಂಬದಂತೆ ನಿಂತು, 'ಸಿದ್ದೆರಾಹ' ಆಗಿದೆ. ಡೇರೆಯ ಕೆಳಗೆ ನರ್ತಕರ ಗುಲ್ಲು ಗಲಾಟೆಯಿಂದ ಭೂಮಿಯು ಗಾಳಿಯಲ್ಲಿ ಹಾರುವ ಹೂವಿನ ಎಲೆಯಂತೆ ನರ್ತಿಸಲಾರಂಭಿಸಿದೆ'.

ಮಖಮಲ್ಲು ಮತ್ತು ಚಿನ್ನದ ಸರಿಗೆಗಳಿಂದ ನೆಯ್ದ ಬಟ್ಟೆಯ ಡೇರೆಗಳ ನಿರ್ಮಾಣ, ಸಾದಾ ರೇಷ್ಮೆ ಬಟ್ಟೆ ಹಾಗೂ ಹೂವಿನ ವಿನ್ಯಾಸವುಳ್ಳ ರೇಷ್ಮೆ ಬಟ್ಟೆಯ ಛಾವಣಿ ಹಾಕುವುದರಿಂದ ಭಾಗ್ಯಹೀನ, ಪೀಡಿತ ಮತ್ತು ಅಶಕ್ತ ಜನರಿಗೆ ಸೂರ್ಯನ ಬಿಸಿಲಿನ ತಾಪದಿಂದ ಬಿಡುಗಡೆ ದೊರೆತಿದೆ. ಸ್ವರ್ಣಮಯ ಟೊಂಕ, ಕಾವೇರಿದ ಕಪೋಲ ಹಾಗೂ ಧಗಧಗಿಸುವ ಅಭಿಲಾಷೆಯ ಅಗ್ನಿಉಳ್ಳವರ ನೃತ್ಯವು ಉಪ್ಪರಿಗೆಯ ಔನ್ನತ್ಯದಲ್ಲಿರುವವರ ಹೃದಯಗಳಲ್ಲಿ ನಕ್ಷತ್ರಗಳ ಕಿಡಿಗಳಿಂದ ದಾಳಿ ಮಾಡಿದೆ. ನಗರ ಮತ್ತು ದೇಶವನ್ನು ಅನುಪಮ ಪ್ರೇಯಸಿಯರ ಸೌಂದರ್ಯದ ದರ್ಪಣದಂತೆ ಶೃಂಗರಿಸಿ, ಮಿಂಚಿಸಲಾಗಿದೆ. ತೋಟಗಾರನು ತೋಟಗಾರಿಕೆಯ ಜ್ಞಾನದಿಂದ ಮಾರುಕಟ್ಟೆಯ ಅಂಗಳಕ್ಕೆ ಸ್ವರ್ಗೋದ್ಯಾನಕ್ಕಿಂತಲೂ ಹೆಚ್ಚಿನ ಮಾನ್ಯತೆ ನೀಡಿದ್ದಾನೆ.

'ಭೂಮಿಯಿಂದ ಆಕಾಶದವರೆಗೆ ಶಿರವನ್ನು ಎತ್ತಿದಂತಹ ಖಜ್ಜೂರ್ ವೃಕ್ಷಗಳಿಂದ, ಜಗತ್ತಿನ ಜನರಂತೆ ಆಕಾಶಕ್ಕೆ ಕೃತಜ್ಞತಾರ್ಪಣೆ ಮಾಡುತ್ತಾರೆ. ತಮ್ಮ ಹಸ್ತ ಕೌಶಲ್ಯದಿಂದ ಔನ್ನತ್ಯಪಡೆದ ಈ ವೃಕ್ಷಗಳ ಹೊರತಾಗಿ ಇವುಗಳಿಗಿಂತಲೂ ಹೆಚ್ಚು ಭಾರ ಎತ್ತಿರುವ ವೃಕ್ಷಗಳನ್ನು ಯಾರೂ ಕಂಡಿಲ್ಲ'.

ಮೇಣಬತ್ತಿ ಹಾಗೂ ದೀಪದ ಬೆಳಕಿನಿಂದ ಪತಂಗಗಳೊಂದಿಗೆ ದೇವದೂತರೂ ಸಹ ಹಾರಾಡಲಾರಂಭಿಸಿದ್ದಾರೆ. ತಿರುಗುತ್ತಿರುವ ಹಸಿರು ಆಕಾಶದ ಕಂದೀಲಿನ ರೆಕ್ಕೆಗಳು ವೃದ್ಧವಾಗಿದ್ದರೆ ವರ್ಣಮಯ ಕಂದೀಲಗಳ ನಡುವೆ ಸ್ವಯಂ ತೆರೆದುಕೊಳ್ಳುತ್ತಿದ್ದವು.

'ಕಂದೀಲಿನ ಬುರ್ಖಾದಿಂದ ಮೇಣಬತ್ತಿಯ ಜ್ವಾಲೆಯು ಬಹಿರಂಗಗೊಂಡಿದೆ. ಆದುದರಿಂದ ಪರದೆಯಿಂದ ಗೆಳತಿಯ ಮುಖವು ಕಾಣಲಾರಂಭಿಸಿತು'.

ಅಂದಾಜು ಎರಡು ತಿಂಗಳುಗಳವರೆಗೆ ಪ್ರಾಣದ ಪಾಲನೆ/ಪೋಷಣೆ ಮಾಡುವ ಈ ಸಮಾರಂಭವು ಹೃದಯವನ್ನು ಪವಿತ್ರಗೊಳಿಸುವ ಪದ್ಧತಿಗೆ ಉತ್ತೇಜನ ಕೊಡುವದರ ಜೊತೆಗೆ ಜಗತ್ತಿಗೆ ಸಂತೋಷ ನೀಡುತ್ತಿತ್ತು.

ಜಮಶೀದನಂತಹ ವೈಭವದ ಬಾದಶಾಹ ಕುತುಬಶಾಹನು, ಹಜರತ್ ಬಾದಶಾಹ ಗಾಜಿಯ ಸಂಬಂಧದ ಉನ್ನತ ಕಾಣಿಕೆಯನ್ನು ಸ್ವೀಕರಿಸಿ ಮಹಾಪುರುಷತ್ವ ಮತ್ತು ಉತ್ತುಂಗತೆಯ ಗುಣ ಹೊಂದಿದ ದೇವರಿಗೆ ಸ್ತುತಿಮಾಡಿ, ತನ್ನ ವಂಶದ ಉತ್ತರಾಧಿಕಾರತ್ವ ಕಟ್ಟಡದ ಮರ್ಯಾದೆಯನ್ನು ಹೆಚ್ಚಿಸಿದನು.

'ಶಹಬ್ಬಾಸ್! ಬಾದಶಾಹ ಗಾಜಿಯ ದ್ವಾರದ ಪ್ರದಕ್ಷಿಣೆಯು ನಷ್ಟವನ್ನು ಸ್ವೀಕರಿಸಿತು. ಅನುಪಮ ದೇವರು ಸೃಷ್ಟಿಸಿದ ನಮ್ಮ ಅದೃಷ್ಟದ ಗೌರವವನ್ನು ಹೆಚ್ಚಿಸಿ, ಮಿಲನದ ರಾತ್ರಿ ಯಾವ ಪ್ರಕಾರವಾಗಿ, ಪ್ರಿಯಕರರು ಅಭಿನಂದನೆ ಸಲ್ಲಿಸಲು ಸಾಷ್ಟಾಂಗ ನಮನ ಮಾಡುತ್ತಾರೆಯೋ, ಅವನ ದ್ವಾರದ ಮಣ್ಣಿನ ಮೇಲೆ ಆಕಾಶವು ಹಣೆಯನ್ನು ತಿಕ್ಕುತ್ತಿತ್ತು'.

ಜಮ್‌ಶೀದನಂತಹ ಬಾದಶಾಹ ಕುತುಬಶಾಹನು ತನ್ನ ವೈಭವ-ಗಾಂಭೀರ್ಯಕ್ಕೆ ಅನುಸಾರವಾಗಿ, ಆದರೆ ಇದಕ್ಕಿಂತಲೂ ನೂರು ಪಟ್ಟು ಅಧಿಕವಾದ ಸುಖ-ಸಂತೋಷದ ಬಂಡವಾಳವನ್ನು ಒದಗಿಸಿದನು. ಸುಸ್ಪಷ್ಟವಾದ ಇಸ್ಲಾಮೀ ಕಾನೂನಿನ ಆಭರಣಗಳಿಂದ ಸ್ವರ್ಗದಂತಹ ಸಭೆಯನ್ನು ಶೃಂಗರಿಸಲಾಯಿತು. ಮೊಹಮ್ಮದ ಪೈಗಂಬರ ವಂಶಜರ ಮಹಾತ್ಮರು ಉನ್ನತ ಖಾಜಿಗಳು ಮತ್ತು ಗೌರವಾನ್ವಿತ ವಿದ್ವಾಂಸರನ್ನು ಆಮಂತ್ರಿಸಲಾಯಿತು. ಸಭಿಕರು ಅನುಪಮ ಬಾದಶಾಹ ಗಾಜಿಯನ್ನು ಗೌರವ-ಸನ್ಮಾನದ ದರ್ಬಾರಿನಲ್ಲಿ ಸಿಂಹಾಸನದ ಮೇಲೆ ಆಸೀನಗೊಳಿಸಿ, ಮಹೋನ್ನತ ಅಳಿಯತ್ವ ದಿನದಿಂದ ದಿನಕ್ಕೆ ವೃದ್ಧಿಯಾಗುವ ಸಂಪತ್ತು ಹಾಗೂ ಶಾಶ್ವತವಾದ ಸುದೈವೀ ಸಮಾರಂಭದ ಅಭಿನಂದನೆ ಸಲ್ಲಿಸಿದರು. ಮಾನವೀಯತೆ ಮತ್ತು ಯೋಗ್ಯತೆಯಿಂದ ಶೂನ್ಯವಾದ ಮುರವಾರಿಯು, ತನಗಿಂತಲೂ ಕೆಳಮಟ್ಟದ ವ್ಯಕ್ತಿಯೊಂದಿಗೆ ವರ್ತಿಸುವಂತೆ, ಬಾದಶಾಹ ಕುತುಬಶಾಹನೊಂದಿಗೆ ನಡೆದುಕೊಂಡನು. ಜಗತ್ತಿಗೆ ಆಜ್ಞೆನೀಡುವಂತಹ ಬಾದಶಾಹ ಗಾಜಿಗೆ ಗೌರವ ನೀಡುವ ಕಾರ್ಯದಲ್ಲಿ ಬಾದಶಾಹ ಕುತುಬಶಾಹನು ಯಾವುದೇ ಕೊರತೆ ಮಾಡಲಿಲ್ಲ. ಅತಿಥಿ ಸತ್ಕಾರದ ಕಾರ್ಯ ಮುಕ್ತಾಯವಾದ ನಂತರ, ಉನ್ನತ ದರ್ಜೆಯ ಮದುಮಗಳನ್ನು ಗೌರವ-ಸೌಜನ್ಯದೊಂದಿಗೆ ಅಮೌಲ್ಯವಾದ ರತ್ನಗಳಿಂದ ಅಲಂಕೃತವಾದ ಪಲ್ಲಕ್ಕಿಯಲ್ಲಿ ಆಸೀನಗೊಳಿಸಲಾಯಿತು. ಅಂದಾಜಿಗಿಂತಲೂ ಹೆಚ್ಚು ವರದಕ್ಷಿಣೆ ನೀಡಲಾಯಿತು. ನಾಲ್ವತ್ತು ಬಲಾಢ್ಯ, ಅದ್ವಿತೀಯ ಆನೆಗಳು ಭೂಮಿಯನ್ನು ಮಾಪನಮಾಡುವ ಹಾಗೂ ಆಕಾಶದ ಪ್ರವಾಹ ಕೈಕೊಳ್ಳುವಂತಹ ಎರಡು ನೂರು ಕುದುರೆಗಳು ಮತ್ತು ವಿಭಿನ್ನ ಪ್ರಕಾರದ ಕಾಣಿಕೆಗಳನ್ನು ನೀಡಿ, ಶುಭ ಘಳಿಗೆಯಲ್ಲಿ ರಾಜಧಾನಿ ಮಹಮ್ಮದಪುರಕ್ಕೆ ಕಳುಹಿಸಿಕೊಡಲಾಯಿತು.

ನೂತನ ಮದುಮಗಳ ಪಲ್ಲಕ್ಕಿಯು ಬಾದಶಾಹನ ಅಂತಃಪುರದ ಸಮೀಪಕ್ಕೆ ಬಂದಾಗ; ಮೊಹಮ್ಮದರಂತಹ ಸ್ವಭಾವ ಹೊಂದಿದ ಹಜರತ್ ಬಾದಶಾಹ ಗಾಜಿಯು ರಸೂಲ್‌ಪುರದಲ್ಲಿ ವೈಭವದ ಧ್ವಜವನ್ನು ಪ್ರದರ್ಶಿಸಿದನು. ರಾತ್ರಿಯ ಕಪ್ಪು ಉಡುಪು, ಮುತ್ತುಗಳಿಂದ ಅಲಂಕೃತವಾದ ಮಧುಶಯ್ಯೆಯ ಮೇಲೆ ಆವರಿಸಿದಾಗ, ಬಾದಶಾಹ ಗಾಜಿಯು ವಾಯು ವಿಹಾರದ ಆಕಾಂಕ್ಷೆಯಿಂದ ತ್ವರಿತವಾಗಿ ಸಾಗುವ ಹಂಬಲದಿಂದ ದ್ವಿವರ್ಣಉಳ್ಳ ಕುದುರೆಯ ಮೇಲೆ ಶೀಘ್ರವಾಗಿ ಸವಾರಿ ಮಾಡಿ, ದೇವರ ದಿವ್ಯ

ದರ್ಶನದಿಂದ ಘನತೆ ಮತ್ತು ಶ್ರೇಷ್ಠತೆಯ ಗುಣಗಳ ನೆರಳಿನಿಂದ ವಿಶ್ವದ ಪರ್ಯಟನ ಮಾಡಿದನು.

'ರಾತ್ರಿಯಲ್ಲಿ ಪರ್ಯಟನಕ್ಕಾಗಿ ಜಗತ್ತಿನ ಪರ್ಯಟನ ಮಾಡುವ ಕುದುರೆಯ ಮೇಲೆ, ದಕ್ಷಿಣದ ಸಿಂಹಾಸನಾಧೀಶ್ವರನು ದರ್ಶನದ ಆಕಾಂಕ್ಷೆಯಿಂದ ಏರಿದಾಗ, ಒಂಬತ್ತು ಆಕಾಶಗಳಿಂದ ಸಂತೋಷದ ದೊಡ್ಡ ನಗಾರಿಯ ಧ್ವನಿಯು ಕೇಳಿ ಬರತೊಡಗಿತು. ಹಿರಿ–ಕಿರಿಯರು ಸುಖ–ಸಂತೋಷದ ಧ್ವನಿಯನ್ನು ಹೊರಹೊಮ್ಮಿಸಿದರು. ಬೆರಳಿನ ಸನ್ನೆಯಿಂದ ನರ್ತಕರ ಪಾದಗಳು, ಚಿತ್ರದ ಹಾಳೆಯಂತೆ ಭೂಮಿಯನ್ನು ಹೂ–ಬಳ್ಳಿಗಳಿಂದ ತುಂಬಿದವು. ಒನಪು–ಒಯ್ಯಾರಗಾರ್ತಿಯರಾದ ಈ ಪ್ರೇಯಸಿಯರ ಹೊರತಾಗಿ ಯಾರೂ ನೋಡಿಲ್ಲ, ಏನೆಂದರೆ: ಸೂರ್ಯನು ಕಣಗಳಂತೆ ಒಂದು ಕ್ಷಣವೂ ಸಹ ನಿಲ್ಲುವುದಿಲ್ಲ. ಚೀನಾ ದೇಶದಿಂದ ಅಪಾರ ಪ್ರಮಾಣದ ಕಸ್ತೂರಿಯ ಚೀಲಗಳನ್ನು ಸುರಿಸಲಾಯಿತು. ತತ್ತಾರದ ಜಿಂಕೆಗಳ ಕಸ್ತೂರಿಯ ಚೀಲಗಳಿಂದ ಹೃದಯಗಳು ಭಗ್ನವಾದವು. ನೃತ್ಯದ ಸಮಯದಲ್ಲಿ ಇನಾಮುಗಳ ಮಳೆಯು ಆರಂಭವಾದಾಗ, ಬೆಂಕಿಯ ಕಿಡಿಗಳಂತೆ, ಪ್ರೇಮಿಗಳ ಹೃದಯಗಳು ಗಾಳಿಯಲ್ಲಿ ತೆರಳಿದವು'.

ಹೃದಯಗಳನ್ನು ತೆರೆಯುವ ಸಂತೋಷದ ದೊಡ್ಡ ನಗಾರಿ ಮತ್ತು ನಗಾರಿಗಳ ಧ್ವನಿಯು; ಜಗತ್ತಿನ ಯಶಸ್ವೀ ಸಿಂಹಾಸನಗಳ ಮೇಲೆ ಆಸೀನರಾದವರ ಕಿವಿಗಳಲ್ಲಿ ಪ್ರತಿಧ್ವನಿಸಲಾಯಿತು. ಶುಭ ಸಮಾರಂಭದ ಅಭಿನಂದನೆಯ ಗದ್ದಲವು; ಪಾದರಸದ ಗೊಮ್ಮಟದಂತಹ ಆಕಾಶದಲ್ಲಿ ಸುತ್ತಲಾರಂಭಿಸಿತು. ಸಂತುಷ್ಟನಾಗಿ ನಗುತ್ತ, ಸಂತೋಷದ ಸಾರಾಯಿಯ ಅಮಲಿನಲ್ಲಿ ಮಗ್ನನಾಗಿ, ಬಾದಶಾಹ ಗಾಜಿಯು ಜಗತ್ತಿನ ಉದ್ಯಾನದ ಹೊಸತನಕ್ಕಾಗಿ ಸುಖ–ಸಂತೋಷದ ಮಧು–ಶಯ್ಯೆಯನ್ನು ಅಲಂಕರಿಸುವ ಕಾರ್ಯದಲ್ಲಿ ನಿರತನಾದನು.

ಅವನು ಸಂಪೂರ್ಣ ಗೌರವ–ಸನ್ಮಾನದಿಂದ ಉನ್ನತಶ್ರೇಣಿಯ ಮದುಮಗಳ ಪಲ್ಲಕ್ಕಿಯನ್ನು ತನ್ನೊಂದಿಗೆ ತೆಗೆದುಕೊಂಡು ಶಾಶ್ವತವಾದ ವೈಭವ ಗಾಂಭೀರ್ಯದ ತನ್ನ ಗೃಹಕ್ಕೆ ತೆರಳಿದನು. ಉನ್ನತ ದರ್ಜೆಯ ಎಲ್ಲ ಮಂತ್ರಿಗಳು ಮತ್ತು ಸರದಾರರೂ ಸಹ ತಮ್ಮ ಅಮೌಲ್ಯವಾದ ಉಡುಪುಗಳಲ್ಲಿ ಅಲಂಕೃತರಾಗಿ, ಮುನ್ನಡೆಯುವ ಗೌರವ ಪಡೆದರು. ಎಲ್ಲ ಜನರು ಅಪಾರ ಸಂತೋಷದಿಂದ ಹಾಡುತ್ತ, ಕರತಾಡನ ಮಾಡುತ್ತ ಜಗತ್ತನ್ನು ಸಂತುಷ್ಟಗೊಳಿಸುವ ಸಮಾರಂಭವನ್ನು ಸ್ವಾಗತಿಸುತ್ತ ಜರದ ಗಿಲೀಟು ಮಾಡಿದ ಅಗ್ಗಿಷ್ಟಿಕೆಯಿಂದ ಉದ್ಭವಿಸುವ ಪನ್ನಂಬರ ಹಾಗೂ ಊದಿನ ಹೊಗೆಯು ತಿರುಗುತ್ತಿರುವ ಆಕಾಶವನ್ನು ತಾತಾರದ ಕಸ್ತೂರಿಯ ಚೀಲಗಳಂತೆ ಪರಿಶುದ್ಧ ಕಸ್ತೂರಿಯಲ್ಲಿ ನೆಲೆಗೊಳಿಸಿತ್ತು. ಪಂಜು ಮತ್ತು ಕಂದೀಲುಗಳನ್ನು ಬೆಳಗುವದರಿಂದ ಆಕಾಶದ ಎತ್ತಿನಂತಹ ಎರಡನೆಯ ನಕ್ಷತ್ರ ರಾಶಿಯ ಕೊಂಬು,

ಪ್ರಕಾಶ ಹರಡುವ ಸೂರ್ಯನ ಉದಯ ಸ್ಥಾನದ ಬುಗ್ಗೆ ಆಗಿದೆ. ಗಾಳಿಯಲ್ಲಿ ಟೊಂಗೆ ಹಾಗೂ ಹೂಗಳನ್ನು ಹರಡುವಂತಹ ಸಿಡಿಮದ್ದಿನ ವೃಕ್ಷಗಳನ್ನು ಬಾದಶಾಹನ ದರ್ಬಾರಿನಿಂದ ರಸೂಲ್‌ಪೂರದವರೆಗೆ ಅಲ್ಲಲ್ಲಿ ಇಟ್ಟು ಅಗ್ನಿಸ್ಪರ್ಶಮಾಡಲಾಗುತ್ತಿತ್ತು.

'ನಳಿಕೆಗಳಿಗೆ ಅಗ್ನಿ ಸ್ಪರ್ಶಮಾಡುವದರಿಂದ, ಬಂಗಾರದ ವೃಕ್ಷಗಳ ದರ್ಶನವಾಗುತ್ತದೆ. ವರ್ಣಮಯ ಹೂಗಳ ಸುರಿಯುವಿಕೆಯಿಂದ ಭೂಮಿಯು ಉದ್ಯಾನವಾಗುತ್ತದೆ. ನಳಿಕೆಗಳ ಗದ್ದಲದಿಂದ ನಗರವು ಥಳಕು–ಬೆಳಕಿನಲ್ಲಿ ಮುಳುಗಿತ್ತು. ಸಿಡಿಮದ್ದಿನ ಹೆಬ್ಬಾವುಗಳು, ಬಾದಶಾಹನ ವೈರಿಗಳ ಮೇಲೆ ಬೆಂಕಿ ಸುರಿಯುತ್ತಿದ್ದವು. ಪ್ರತಿಯೊಂದು ನಕ್ಷತ್ರದಿಂದ ಸಾವಿರಾರು ಸೂರ್ಯರು ಉದಯಿಸುತ್ತಿದ್ದರು. ಎಲ್ಲೆಡೆಗೆ ಆಕಾಶದ ದಿಶೆಯೆಡೆಗೆ ಗಾಳಿಯಲ್ಲಿ ಬಾಣಗಳು ಹಾರುತ್ತಿದ್ದವು'.

ಏಳನೆಯ ಆಕಾಶದಲ್ಲಿ ದೇವಚರ ಜಿಬ್‌ಶೀಲರ ಕೊನೆಯ ಗಡಿಯ ಉನ್ನತದರ್ಜೆಯ ಜನರು; ಜಗತ್ತನ್ನು ಶೃಂಗರಿಸುವ, ಸಂತೋಷ ನೀಡುವಂತಹ ಸಮಾರಂಭದ ದೃಶ್ಯದಿಂದ, ಕಣ್ಣಿನಲ್ಲಿ ಕಾಡಿಗೆ ಹಚ್ಚಿ ನಿರ್ಮಾಪಕನ ಕಲಾಕೌಶಲ್ಯವನ್ನು ವೀಕ್ಷಿಸುತ್ತಿದ್ದರು. ಹಜರತ್ ಬಾದಶಾಹ ಗಾಜಿಯು ಪ್ರಸನ್ನನಾಗಿ ನಗುತ್ತ, ಸಂಪೂರ್ಣ ವೈಭವ ಮತ್ತು ಗಾಂಭೀರ್ಯದೊಂದಿಗೆ ತನ್ನ ಗೃಹವನ್ನು ಪ್ರವೇಶಿಸಿದನು.

ಆಸೆ–ಆಕಾಂಕ್ಷೆಗಳ ಅಂತಃಪುರದಿಂದ ಬೀಸುವ ತಣ್ಣನೆಯ ಗಾಳಿಯಿಂದ ಅವನು ಜಗತ್ತಿನ ಸಭೆಯನ್ನು ಶಾಶ್ವತವಾದಂತಹ ವಸಂತ ಋತುವಿನ ಉದ್ಯಾನವನ್ನಾಗಿ ಮಾಡಿದನು.

'ಆಕಾಶವು ಬಾದಶಾಹನ ಗೃಹದ ಮೇಲೆ ತನ್ನ ಶಿರಬಾಗಿಸಿತು. ಅಂಗೈಯ ಮೋಡದಿಂದ ಆತನ ಜೇಬು ಮುತ್ತುಗಳಿಂದ ತುಂಬಿದೆ. ಆತನ ಗೌರವ–ಪ್ರತಿಷ್ಠೆಯ ಉದ್ಯಾನದಲ್ಲಿ 'ಮರ್ದುಮ್‌ಗಿಯಾಹ್' ಎಂಬ ಹುಲ್ಲಿನ ಬದಲಾಗಿ, ಆಕಾಶದ ವೃಕ್ಷಕ್ಕೆ ಸೂರ್ಯ–ಚಂದ್ರರ ಹಣ್ಣುಗಳು ಬೆಳೆದಿವೆ. ಬಾದಶಾಹನ ಪ್ರಶಂಸೆಯಿಂದ ಗಾಳಿಯಲ್ಲಿ ಹಾರುವ ಪ್ರಬಲ ಆಸಕ್ತಿಯಿಂದ, ನನ್ನ ಲೇಖನಿಯ 'ಹುಮಾ' ಪಕ್ಷಿಯು ಹಾಳೆಯ ಬಾಹು ಮತ್ತು ರೆಕ್ಕೆಗಳನ್ನು ಹಚ್ಚಿಕೊಂಡಿದೆ'.

■

*

ಅಧ್ಯಾಯ – ೫

ಆಸಿಫ್‌ಖಾನನ ಅಪಜಯದಿಂದ ಶಹಜಹಾನನ ಉದ್ವಿಗ್ನತೆ ಮತ್ತು ಮಹಾಬತ್‌ಖಾನನನ್ನು ದಕ್ಷಿಣಕ್ಕೆ ಕಳುಹಿಸುವುದು

ಶಹಜಹಾನನ ಆಜ್ಞೆಯಿಂದ ಆಸಿಫ್‌ಖಾನನು ರಾಜಧಾನಿ ಮಹಮ್ಮದಪುರದ ಮೇಲೆ ದಾಳಿಯ ನಿರ್ಧಾರ ಮಾಡಿದಾಗ ಹಜರತ್ ಬಾದಶಾಹ ಗಾಜಿಯ ಸೈನ್ಯದ ಕೈಯಿಂದ ಸ್ಪಷ್ಟವಾದ ಅಪಜಯ ಹೊಂದಿ, ಪಲಾಯನದ ದಾರಿಯಲ್ಲಿ ನಡೆದಂತೆ ಯುದ್ಧದಲ್ಲಿ ಜಯಶಾಲಿಯಾದ ಪಂಕ್ತಿ ಭೇದಕ ಸೈನಿಕರು ಧೈರ್ಯದ ಕುದುರೆಗಳನ್ನು ವಿಜಯ ಮತ್ತು ಯಶಸ್ಸಿನ ದೇಶದ ಮೇಲೆ ಓಡಿಸಿದನು. ಶಹಜಹಾನನು ಆಸಿಫ್‌ಖಾನನ ಮೇಲೆ ಅತಿಯಾದ ಆಕ್ಷೇಪ ಮಾಡಿ, ಅವನನ್ನು ಸೆರೆಮನೆಗೆ ಕಳುಹಿಸಿದನು. ಈ ಕಲಹದ ಪರಿಹಾರಕ್ಕಾಗಿ, ಲಾಹೋರದಿಂದ ಮಹಾಬತ್‌ಖಾನನನ್ನು ಕರೆಯಿಸಿ ಬಹ್ರಾನ್‌ಪೂರ್ ಪ್ರಾಂತದ ಒಡೆಯನನ್ನಾಗಿ ಮಾಡಿದನು. ನಿಜಾಮ್‌ಶಾಹನಿಗಿಂತಲೂ ಮೊದಲು ದೌಲತಾಬಾದದಲ್ಲಿ ಇದ್ದಂತಹ ಮಲೀಕ್ ಅಂಬರನ ಪುತ್ರನಾದ ಫತೇಖಾನನು ತನ್ನ ಕಾರ್ಯದಲ್ಲಿ ಯಶಸ್ಸು ಸಾಧಿಸಲು ನಿಜಾಮ್‌ಶಹಾನನ್ನು ಕೊಂದು, ನಿಜಾಮ್‌ಶಾಹನ ಏಳು ವರ್ಷದ ಪುತ್ರನನ್ನು ಬಾದಶಹನನ್ನಾಗಿ ಮಾಡಿದನು. ಪ್ರಯಾಣದ ಸಂದರ್ಭದಲ್ಲಿ ಈ ಸಮಾಚಾರವು ಮಹಾಬತ್‌ಖಾನನಿಗೆ ತಿಳಿದಾಗ, ಅವಕಾಶದ ಹೊಂಚು ಹಾಕಿ, ಅಪಾರ ಸೈನ್ಯದೊಂದಿಗೆ ದೌಲತಾಬಾದಿನ ಕಡೆಗೆ ಸಾಗಿದನು.

ಈ ಕಠಿಣ ಕಾರ್ಯ ಸಾಧನೆಗಾಗಿ ಹಜರತ್ ಬಾದಶಾಹ ಗಾಜಿಯು ತನ್ನ ವಿಜಯ–ಸಂಪನ್ನ ಸೈನ್ಯವನ್ನು ಮೊದಲೇ ಕಳುಹಿಸಿದ್ದನು. ಈ ಸಮರ್ಥವಾದ ಸೈನ್ಯವು ತಲುಪುವಷ್ಟರಲ್ಲೇ, ಮಹಾಬತ್‌ಖಾನನು ಶೀಘ್ರವಾಗಿ ಬಂದು, ದೌಲತಾಬಾದ್ ತಲುಪಿ, ತನ್ನ ಸೈನ್ಯವನ್ನು ಆ ಸಣ್ಣ ಪಟ್ಟಣದ ಹತ್ತಿರ ನಿಲ್ಲಿಸಿದ್ದನು. ಈ ಘಟನೆಯಿಂದ

ಚಿಂತಾಗ್ರಸ್ತನಾದ ಫತೇಖಾನನು ಹಜರತ್ ಬಾದಶಹ ಗಾಜಿಯ ಸನ್ನಿಧಿಗೆ ಒಂದು ನಿವೇದನೆಯನ್ನು ಕಳುಹಿಸಿದನು.

ಮಹಾಬತ್‌ಖಾನನು ಅಪಾರ ಸೈನ್ಯದೊಂದಿಗೆ ದೌಲತಾಬಾದಿನೊಳಗೆ ಪ್ರವೇಶಿಸಿದ್ದಾನೆ. ಕೋಟಿಯಲ್ಲಿ ಉಗ್ರಾಣ ಹಾಗೂ ಖಜಾನೆಯು ಬರಿದಾಗಿದೆ. ಹಸಿವೆಯಿಂದ ಸೈನಿಕರು ತಮ್ಮ ದೇಹ ಪ್ರವೇಶಿಸಿದ ಬಾಣದ ಹಿಂಭಾಗದಂತೆ ಬಾಯ್ದೆರೆದು ಬಿದ್ದಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ, ಬಾದಶಾಹ ಗಾಜಿಯು ಕೃಪೆಮಾಡಿ, ಉಗ್ರಾಣ ಹಾಗೂ ಖಜಾನೆಯನ್ನು ನೀಡಬೇಕು. ಮತ್ತು ನಿಮಗೆ ಋಣಿಯಾಗಿರುವ ನನ್ನಂಥ ಗುಲಾಮನಿಗೆ ಸೈನಿಕರನ್ನು ಸಜ್ಜುಗೊಳಿಸಲು ಸಹಾಯ ಮಾಡಿದರೆ ನಾನು ದೌಲತಾಬಾದಿನ ಕೋಟೆ, ಅದರ ಸಿಂಹಾಸನ ಮತ್ತು ಉತ್ತರಾಧಿಕಾರಿಗಳೊಂದಿಗೆ ಹಿಂತಿರುಗಿಸಿ ಕೊಡುತ್ತೇನೆಂದು ಫತೇಖಾನನು ಬೇಡಿಕೊಂಡಿದ್ದನು.

ಈ ವಿಷಯವನ್ನು ಖಾಸಖಾನನು ಬಾದಶಾಹ ಗಾಜಿಗೆ ತಲುಪಿಸಿದನು. ಬಾದಶಾಹನು ಅತಿ ಸಂತುಷ್ಟನಾಗಿ, ಸೇನಾಪತಿಯ ಗೌರವ ವಸ್ತ್ರ ನೀಡಿ, ನಗದು ಹಣ ಮತ್ತು ಹೇರಳ ಸಾಮಾನುಗಳನ್ನು ಕೊಟ್ಟು: ರುಸ್ತುಮನಂತಹ ಪಂಕ್ತಿ ಭೇದಕ ವೀರರ ಸೈನ್ಯವನ್ನೊದಗಿಸಿದನು. ಫತೇಖಾನನಿಗೆ ವಿಜಯಪ್ರಾಪ್ತವಾದರೆ, ವಿಜಯದ ವಾರ್ತೆಯನ್ನು ಮುರವಾರಿಯ ಹೆಸರಿನಲ್ಲಿ ಬರೆದು ಅದನ್ನು ಬಹಿರಂಗಗೊಳಿಸ ಲಾಗುವುದು. ಫತೇಖಾನನಿಗೆ ಸಾಮಾನುಗಳನ್ನು ತಲುಪಿಸಿ, ಅವನ ಹೊರತಾಗಿ ಎಲ್ಲ ಮೊಗಲರಿಗೆ ಶಿಕ್ಷೆ ವಿಧಿಸಬೇಕೆಂಬ ಭರವಸೆ ನೀಡಲಾಗಿತ್ತು.

ಇಂತಹ ಅನುಮಾನದ ದೆಸೆಯಿಂದ ಮೊಗಲರೊಂದಿಗಿನ ಯುದ್ಧವನ್ನು ಮುಂದೂಡಲಾಯಿತು. ಮುರವಾರಿಯು ಜನರನ್ನು ಪೀಡಿಸುವ ಮತ್ತು ಅನುಚಿತ ವರ್ತನೆ ಮಾಡುವಂತಹ ಸ್ವಭಾವ ಹೊಂದಿದ್ದನು. ಅವನಿಗೆ ಫತೇಖಾನನು ಎಷ್ಟೋ ಪತ್ರಗಳನ್ನು ಬರೆದು ಕೋಟೆಯಲ್ಲಿ ಉಗ್ರಾಣ ಹಾಗೂ ಖಜಾನೆಯು ಬರಿದಾಗಿದೆ. ಅಲ್ಪ-ಸ್ವಲ್ಪ ಉಳಿದಂತಹ ಉಗ್ರಾಣವನ್ನು ನೋಡಿ, ಹಸಿವೆಯ ಭಯದಿಂದ ತನಗೆ ಉಸಿರಾಡಿಸಲು ಸಾಧ್ಯವಾಗುವದಿಲ್ಲ. ದೌಲತಾಬಾದ್‌ವನ್ನು ಮೊಗಲರ ದೌರ್ಜನ್ಯದಿಂದ ರಕ್ಷಿಸಲು ತನಗೆ ಸಾಮಾನುಗಳನ್ನು ಬೇಗನೇ ಕಳುಹಿಸಿಕೊಡಬೇಕೆಂದು ಮನವಿ ಮಾಡಿದನು. ಆದರೆ ಮುರವಾರಿಯ ಪ್ರತಿಕ್ರಿಯೆಯು ಫತೇಖಾನನಿಗೆ ವಿರುದ್ಧವಾಗಿತ್ತು. 'ಉಗ್ರಾಣವನ್ನು ಏಕೆ ಕೇಳುತ್ತಿರುವೆ? ಎದ್ದೇಳು! ಕೋಟೆಯ ಬೀಗದ ಕೈಯನ್ನು ತೆಗೆದುಕೊಂಡು ನನ್ನ ಹತ್ತಿರ ಬಾ! ಅಂದರೆ : ಸಂಪತ್ತು ನಿನಗೆ ದೊರಕುವುದು. ಒಂದು ವೇಳೆ ನೀನು ಬರದಿದ್ದರೆ, ಕೈಕಾಲು ಕಟ್ಟಿ ದೌಲತಾಬಾದಿನ ಗೋಪುರದಿಂದ ಕಂದಕದಲ್ಲಿ ಎಸೆದು ಬಿಡುವೆ' ಎಂದು ಮುರವಾರಿಯು ನುಡಿದನು.

ಫತೇಖಾನನು ಮುರವಾರಿಯ ವರ್ತನೆಯಿಂದ ಅತೃಪ್ತನಾಗಿ ಮಹಾಬತ್

ಖಾನನಿಗೆ ಮನವಿ ಸಲ್ಲಿಸಿದನು. 'ನಾನು ದೌಲತಾಬಾದ್‌ವನ್ನು ಶಹಾಜಹಾನನಿಗೆ ಕೊಡುತ್ತೇನೆ. ಆದರೆ, ಒಂದು ಕರಾರು ಇದೆ : ನೀವು ಪ್ರತಿಯೊಂದು ವಿಷಯದಲ್ಲಿ ನನಗೆ ಸಹಕರಿಸಬೇಕು ಎಂದು ಫತೇಖಾನನು ತಿಳಿಸಿದನು. ಮಹಾಬತ್‌ಖಾನನು ಈ ಸಂತೋಷದ ಸಮಾಚಾರವನ್ನು ಕೇಳಿ ದೇವರಿಗೆ ಕೃತಜ್ಞತೆಯನ್ನು ಸಲ್ಲಿಸಲು, ಭೂಮಿಯ ಮೇಲೆ ಶಿರಬಾಗಿಸಿದನು. ಹೇರಳವಾದ ಸಾಮಾನುಗಳು ಮತ್ತು ನಗದು ಹಣವನ್ನು ಕರಾರು ಪತ್ರದೊಂದಿಗೆ, ತನ್ನ ಪುತ್ರನಾದ ಇರಾದ್‌ಖಾನ್‌ನನ್ನು ಫತೇಖಾನನ ಹತ್ತಿರ ಕಳುಹಿಸಿದನು. ವಾಗ್ದಾನದ ಪದ್ಧತಿ ಪೂರ್ಣವಾದ ನಂತರ, ಫತೇಖಾನನು ದೌಲತಾಬಾದ್ ಕೋಟೆಯನ್ನು ಮೊಗಲರಿಗೆ ಸಮರ್ಪಿಸಿದನು. ಮಹಾಬತ್‌ಖಾನನು ತನ್ನ ಪುತ್ರನನ್ನು ಸೈನಿಕರು ಹಾಗೂ ಸಹಾಯಕರೊಂದಿಗೆ ದೌಲತಾಬಾದಿನ ಸಂರಕ್ಷಣೆಗಾಗಿ ಅಲ್ಲಿ ಇಟ್ಟು; ತಾನು ಹಿಂತಿರುಗುವ ಸಂಕೇತವಾಗಿ ದೊಡ್ಡ ನಗಾರಿಯನ್ನು ಬಾರಿಸಲು ತಿಳಿಸಿದನು.

ನಿಜಾಮ್‌ಶಾಹನ ಪುತ್ರ ಮತ್ತು ಫತೇಖಾನ್‌ನನ್ನು ಸೆರೆಹಿಡಿದು ಅವರನ್ನು ತನ್ನೊಂದಿಗೆ ಕರೆದುಕೊಂಡು, ಬುರ್ಹಾನ್‌ಪುರದ ಮಾರ್ಗದಲ್ಲಿ ಮುನ್ನಡೆದನು. ಹಸಿವೆಯ ದೆಸೆಯಿಂದ ಮೊಗಲರು ತಮ್ಮ ಸ್ವಂತದ ಒಂಟಿ ಮತ್ತು ಕುದುರೆಗಳನ್ನು ಕೊಂದು, ತಿನ್ನುತ್ತಿದ್ದರು. ಅನೇಕರು ಕಾಲ್ನಡಿಗೆಯಿಂದ ಸಾಗುತ್ತಿದ್ದರು. ಉನ್ಮಾದದ ಅಗ್ನಿಯಿಂದ ಅವರ ಸಂಪೂರ್ಣ ದೇಹವು ರೊಟ್ಟಿ ತಾಗಿಸುವ ಭಟ್ಟಿಯಂತೆ ಹೊಟ್ಟೆ ಮತ್ತು ಬಾಯಿ ಆಗಿತ್ತು. ಅವರು ಪ್ರತಿಯೊಂದು ಕಾರ್ಯಕ್ಕಾಗಿ 'ಬೂದಿಯ ರಾಶಿ'ಯಂತೆ ಭೂಮಿಯ ಮೇಲೆ ಕುಳಿತುಕೊಳ್ಳುತ್ತಿದ್ದರು. ಮಣ್ಣನ್ನು ನೆಕ್ಕಿ, ತಮ್ಮ ನಾಲಿಗೆಯನ್ನು ಪೊರಕೆಯೆಂದು ಭಾವಿಸಿ, ದಾರಿಯಲ್ಲಿ ಯಾವುದೇ ಕಸಕಡ್ಡಿ ದೊರಕಿದರೆ, ಅದನ್ನು ಸಂಗ್ರಹಿಸುತ್ತಿದ್ದರು. ಪ್ರತಿದಿನ ಹೆಚ್ಚುತ್ತಿರುವ ದೌರ್ಬಲ್ಯದಿಂದ ಆರು ಮೈಲು ದಾರಿಯನ್ನು ಕ್ರಮಿಸಲು ಸಾಧ್ಯವಾಗುತ್ತಿರಲಿಲ್ಲ.

ಮುರವಾರಿಯು ಸೇನಾಪತಿ ಆಗಿರುವದರಿಂದ ಲಜ್ಜಿತರಾಗಿ, ಹಜರತ್ ಬಾದಶಾಹ ಗಾಜಿಯ ನಾಯಕರು ಯುದ್ಧ ಮಾಡುತ್ತಿರಲಿಲ್ಲ. ಅವರು ಹಿಂದಿರುಗಿ ಹೋಗುವ ಮೊಗಲರನ್ನು ಬೆನ್ನಟ್ಟಿದರು. ಮಹಾಬತ್‌ಖಾನನು ಲಂಚರೂಪದಲ್ಲಿ ಅಪಾರ ಹಣವನ್ನು ಕಳುಹಿಸಿ, ವಿನಮ್ರತೆಯೊಂದಿಗೆ ಮೊಗಲರ ಬಿಡುಗಡೆಗೆ ಪ್ರಾರ್ಥಿಸಿದನು. ಈ ಪ್ರಕಾರವಾಗಿ ಅವನು ಹಿಂದುಸ್ತಾನ ದೇಶವನ್ನು ತಲುಪಿದನು. ದೌಲತಾಬಾದಿನ ಭದ್ರವಾದ ಕೋಟೆಯನ್ನು ಯುದ್ಧ ಮತ್ತು ಕೊಲೆ ಮಾಡದೇ ಗೆದ್ದುಕೊಂಡು, ಈ ಸೇವೆಯ ಮೂಲಕ ಶಹಜಹಾನನ ಕೃಪೆಗೆ ಫತೇಖಾನನು ಪಾತ್ರನಾಗಿದ್ದನು. ಮುರವಾರಿಯ ದುರಾಚಾರ ಹಾಗೂ ಚಾರಿತ್ರ್ಯಹೀನತೆಯಿಂದ ದೌಲತಾಬಾದಿನ ಕೋಟೆಯು ಮೊಗಲರ ವಶವಾಗಿತ್ತು. ಆದುದರಿಂದ ಮುರವಾರಿಯು ನಾಚಿಕೆಯ ಭಾರದಿಂದ ಶಿರಬಾಗಿಸಿ ಲಜ್ಜಿತನಾಗಿ ನಗರಕ್ಕೆ ಬಂದನು.

ಈ ಘಟನೆಯು ಜರುಗಿದ ಸ್ವಲ್ಪ ಸಮಯದ ನಂತರ, ಮುರವಾರಿಯು ಶಹಾಜಿ ಭೋಸ್ಲೆಯೊಂದಿಗೆ ಕೂಡಿ ಚಂಬರ್ ಕೋಟೆಗೆ ತ್ವರಿತಗತಿಯಿಂದ ಸಾಗಿ, ನಿಜಾಮ್‌ಶಾಹನ ಪುತ್ರನೊಬ್ಬನ ಶಿರದ ಮೇಲೆ ರಾಜನ ಛತ್ರಿಯನ್ನು ಏರಿಸಲು, ದೋಷಪೂರ್ಣ ಸಂಶಯ ಹಾಗೂ ವಿನಾಶದ ರೂಢಿಯಿಂದ ಯೋಚಿಸಿದನು. ಕೇವಲ ಒಳಿತು ಮತ್ತು ಕಾರ್ಯಕುಶಲತೆಯ ಸಂಶಯವನ್ನು ಸೃಷ್ಟಿಸಿ, ಬುದ್ಧಿಯ ದೋಷದಿಂದ ಲಾಭರಹಿತವಾದ ಅನುಮಾನ ಹೊಂದುವ ಮುರವಾರಿಯನ್ನು ಹಜರತ್ ಬಾದಶಹ ಗಾಜಿಯ ಪರವಾಗಿ ಸಜ್ಜುಗೊಳಿಸಲಾದ ಸೈನ್ಯದೊಂದಿಗೆ ಚಂಬರ್‌ಗೆ ಕಳುಹಿಸಲಾಯಿತು. ಮುರವಾರಿಯು ಚಂಬರ್‌ದಲ್ಲಿ ತನ್ನ ಆಗಮನದ ಧ್ವಜವನ್ನು ಹಾರಿಸಿದಾಗ ನಿಜಾಮ್‌ಶಾಹನ ಉತ್ತರಾಧಿಕಾರಿಗಳಿಂದ ಶಿಕ್ಷೆಗೆ ಒಳಗಾಗಿ, ಪಿತೂರಿ ಹಾಗೂ ಗೊಂದಲಕ್ಕೆ ಕಾರಣನಾದನು.

ನಿಜಾಮಶಾಹನು ಪುನಃ ಪ್ರತ್ಯಕ್ಷನಾಗುವ ಕಾರಣದಿಂದ ಮಹಾಬತ್‌ಖಾನನ ದ್ವೇಷದ ಧ್ವಜದ ಹಾರಾಟ

ಬುದ್ಧಿವಂತಿಕೆಯ ಔನ್ನತ್ಯದ ಮೇಲೆ ಎತ್ತರದ ಹಾರಾಟ ಮಾಡುವವರು ಸ್ಪಷ್ಟವಾದ ವಿವರಣೆ ಮತ್ತು ಹೇಳಿಕೆಯ ವಾತಾವರಣದಿಂದ ತಿಳುವಳಿಕೆ ಹೊಂದಿ, ಯೋಚನೆ ಮಾಡಲಾರಂಭಿಸಿದರು. ನಿಜಾಮ್‌ಶಾಹನು ಪುನಃ ಜನ್ಮವೆತ್ತಿದ ಸಂಗತಿಯನ್ನು ತಿಳಿದು, ಮಹಾಬತ್‌ಖಾನನು ವ್ಯಾಕುಲನಾಗಿ ಅಶಾಂತಿ ಹೊಂದಿದ್ದನು. ಮಾನಸಿಕ ಉದ್ವೇಗದ ದೆಸೆಯಿಂದ ಜೇನ್ನೊಣಗಳ ಗೂಡಿನಂತೆ ಗೊಂದಲವೆಬ್ಬಿಸಿದನು. ಸೈನಿಕರು ಹಾಗೂ ಸಹಾಯಕರನ್ನು ಸಜ್ಜುಗೊಳಿಸಿ ಯುದ್ಧದ ಆಯುಧಗಳನ್ನು ಸಂಗ್ರಹಿಸತೊಡಗಿದನು. ಶಹಾಜಹಾನನ ಆಜ್ಞೆಯ ಮೇರೆಗೆ, ರಾಜಕುಮಾರ ದಾರಾ ಶಿಕೊನನ್ನು ಬುಹ್ರಾನ್‌ಪುರಕ್ಕೆ ಕರೆತಂದು ನಾಲ್ಕುಪಟ್ಟು ಅಧಿಕ ಸೈನ್ಯದೊಂದಿಗೆ ಉದ್ದೇಶಿತವಾದ ಪರ್ನಿದಾ ಕೋಟೆಯ ಕಡೆಗೆ ತಲುಪಿದನು. ಲಡಾಯಿಕೋರ ಮೊಗಲರು ತೀವ್ರವಾದ ಯುದ್ಧವನ್ನು ಪ್ರಾರಂಭಿಸಿದರು. ಕೋಟೆಯನ್ನು ಸುತ್ತುಗಟ್ಟಿ ಕನ್ನಕೊರೆಯುವ ಕೆಲಸವನ್ನು ಆರಂಭಿಸಿದರು. ಪರ್ನಿದಾ ಕೋಟೆಯಲ್ಲಿದ್ದ ಬಹಾದ್ದೂರ್ ಸೈನಿಕರು ಸೈನ್ಯವನ್ನು ಸಜ್ಜುಗೊಳಿಸಿ; ಮೊಗಲರ ಮೇಲೆ ದಾಳಿ ಮಾಡಿದರು.

ಅವರು ತಮ್ಮ ಆಕ್ರಮಣದ ಬಿರುಗಾಳಿಯಿಂದ ಹಾಳೆಯಂತಹ ದುರಾಚಾರಿಗಳನ್ನು ವಿನಾಶದ ತಿರುಗಣಿ ಮಡುವಿನಲ್ಲಿ ತಳ್ಳಿದರು. ಹಜರತ್ ಬಾದಶಾಹ ಗಾಜಿಯ ಸರದಾರರು ಉದಾಹರಣೆಗಾಗಿ, ರುಸುಮೆ ಜಮಾ, ಬೇಶ್‌ಜಂಗ್‌ಖಾನ್, ಫರ್ಹಾದ್‌ಖಾನ್, ಆಂಕಸ್‌ಖಾನ್ ಮತ್ತು ಇತರರು ಕೋಟೆಯ ಎದುರಿಗೆ ಬಂದು; ರಕ್ತಹೀರುವ ಖಡ್ಗಗಳಿಂದ ಹಗಲು–ರಾತ್ರಿ ವೈರಿಗಳ ಸೈನ್ಯದ ಮೇಲೆ ದಾಳಿ ಮಾಡಿ, ಅವರನ್ನು ನಾಶಗೊಳಿಸುತ್ತಿದ್ದರು. ವಿಜಯ–ಸಂಪನ್ನ ವೀರರ ಖಡ್ಗಗಳ ಮೋಡಗಳು; ಅಧಿಕ ರಕ್ತಸುರಿಸಿ, ಪರ್ವತ ಹಾಗೂ ಮೈದಾನಗಳಲ್ಲಿ ಅತ್ಯುತ್ಸಾಹದಿಂದ ಹರಿಯುವ

ನದಿಗಳನ್ನು ಲಜ್ಜೆಗೊಳಪಡಿಸಿದವು. ತಿರುಗುತ್ತಿರುವ ಆಕಾಶವು ಖುಲ್‌ಝುಮ್‌ದ ರಕ್ತದಂತಹ ಮುಖದ ಮೇಲಿನ ಗುಳ್ಳೆಗಳನ್ನು ನೀರಿನ ತೇಪೆ ಮಾಡಿದಂತೆ, ತನ್ನ ತಿರುಗುತ್ತಿರುವ ಚಕ್ರದಿಂದ ವೈರಿಗಳ ಶಿರಗಳನ್ನು ಯುದ್ಧಭೂಮಿಯಲ್ಲಿ ಸೇರಿಸಿತು.

'ಯಾವುದು ಚಕ್ರದ ತಿರುಗುವಿಕೆಯಿಂದ ಹರಿಯುವ ರಕ್ತದಲ್ಲಿ ಜನ್ಮ ತಳೆಯುತ್ತದೆಯೋ, ಅದು ಗುಳ್ಳೆ ಅಲ್ಲ, ಯಾವುದು ಯುದ್ಧದ ಅಮಲಿನಿಂದ ವೈರಿಗಳನ್ನು ಪರಾಜಯ ಗೊಳಿಸುತ್ತದೆಯೋ; ಅದು ಗುಳ್ಳೆ ಆಗಿದೆ'.

ಯುದ್ಧ ಮತ್ತು ಕೊಲೆಯ ಬಿರುಗಾಳಿಯು, ನಾಲ್ಕು ತಿಂಗಳುಗಳವರೆಗೆ ಅತಿ ಉಗ್ರವಾದ ಸ್ವರೂಪ ಹೊಂದಿತ್ತು. ತೋಪು ಹಾಗೂ ಬಂದೂಕುಗಳ ಹೊಡೆತದಿಂದ ಮೊಗಲರು ಮೀನುಗಾರನ ಬಲೆಯಲ್ಲಿ ಸಿಲುಕಿದ ಮೀನುಗಳಂತೆ ತಳಮಳಗೊಳ್ಳುತ್ತಿದ್ದರು. ಅವರು ಮೇಲಿಂದ ಮೇಲೆ ತಮ್ಮ ಡೇರೆಗಳ ನಡುವೆ ಜಿಗಿಯುತ್ತಿದ್ದರು. ಮತ್ತು ಊದಿನ ಅಗ್ಗಿಷ್ಟಿಕೆಯಂತೆ ಹೊರಹೊಮ್ಮುವ ಕಿಡಿಗಳಂತೆ ಕತ್ತಲಿನ ಮಣ್ಣಿನಲ್ಲಿ ಕುಳಿತುಕೊಳ್ಳುತ್ತಿದ್ದರು. ಗೋಪುರದ ದ್ವಾರದಾಚೆಗೆ ಸುರಂಗ ನಿರ್ಮಾಣವು ಅಸಾಧ್ಯವೆಂದು ತಿಳಿದಾಗ, ಕಲ್ಲು ಕೊರೆಯುವಂತೆ ಹಗಲು-ರಾತ್ರಿ ಕಠಿಣ ಪರಿಶ್ರಮ ಮಾಡುವ ಮತ್ತು ಪರಿಶ್ರಮದ ಪ್ರತಿಫಲ ದೊರಕದಿರುವದರಿಂದ ಅವರು ನಿರಾಶೆ ಹೊಂದಿ, ಶೋಕತಪ್ತರಾದರು. ಯುದ್ಧ ಹಾಗೂ ಮುತ್ತಿಗೆಯು ದೀರ್ಘಕಾಲೀನವಾಗಿದ್ದರಿಂದ ಮಹಾಬತ್‌ಖಾನನು ಅತೀವ ದುಃಖಿತ ಮತ್ತು ಸಂಕಟಭರಿತನಾದನು.

ನಾಚಿಕೆ ಮತ್ತು ಅಪಮಾನದ ಭಾವನೆಯಿಂದ ಮಹಾಬತ್‌ಖಾನನ ಹೆಜ್ಜೆಗಳು ಅಸಹಾಯಕವಾಗಿ ಪಲಾಯನದ ದಾರಿಯಲ್ಲಿ ಸಾಗಿದವು. ಸಂರಕ್ಷಣೆಯ ದೃಷ್ಟಿಯಿಂದ ರಾಜಕುಮಾರ ದಾರಾಶಿಕೊನಿಗೆ ಬಂಗಾರದ ಛತ್ರಿಯು ಬದಲು; ಉಕ್ಕಿನ ಗುರಾಣಿಯೊಂದಿಗೆ ಸೈನ್ಯದ ನಡುವೆ ಇಡಲಾಯಿತು. ಶಹಾಜಹಾನನು ಕರೆಕಳುಹಿಸಿರುವ ನೆಪ ಮಾಡಿ ಮಹಾಬತ್‌ಖಾನನು ಹಿಂದುಸ್ತಾನದೆಡೆಗೆ ನಡೆದನು. ಹಜರತ್ ಬಾದಶಾಹ ಗಾಜಿಯು ಅನುಭವಿಕ ಸೈನಿಕರು ಮೊಗಲರನ್ನು ಬೆನ್ನಟ್ಟಿ; ಅವರನ್ನು ಧ್ವಂಸಗೊಳಿಸುತ್ತಿದ್ದರು. ರುಸ್ತುಮ್‌ನಂತಹ ಖಾನ್‌ಜಫರ್‌ನು, ಒಂದು ವೇಳೆ ಆ ಸಂದರ್ಭದಲ್ಲಿ ಮೊಹಮ್ಮದನಂತಹ ಸ್ವಭಾವ ಹೊಂದಿದ ಹಜರತ್ ಬಾದಶಾಹ ಗಾಜಿಯ 'ಜೀವದಾನದ ಆಜ್ಞೆ'ಯನ್ನು ಮನ್ನಿಸದಿದ್ದರೆ; ಪಲಾಯನ ಹೊಂದುವ ವೈರಿಗಳ ಸೈನ್ಯದ ಯಾವುದೇ ಸೈನಿಕನನ್ನು ಜೀವಂತವಾಗಿ ಉಳಿಸುತ್ತಿರಲಿಲ್ಲ. ಅನೇಕ ಮೊಗಲರ ಹತ್ತಿರ ದೌರ್ಬಲ್ಯ ಮತ್ತು ಅಶಕ್ತಿಯು ಮಾತ್ರ ಉಳಿದಿತ್ತು. ಅವರು ತಮ್ಮ ಕಣ್ಣುಗಳ ಕತ್ತಲೆಯಿಂದ ನೀರನ್ನು ಸುಟ್ಟಿರುವ ಹೊಟ್ಟೆಯೆಂದು ಭಾವಿಸುತ್ತಿದ್ದರು. ಯಾವುದೇ ತಂಗುವ ಸ್ಥಳವನ್ನು ತಲುಪಿದಾಗ; ಮಹಾಬತ್‌ಖಾನನು ತೆರಿಗೆ ಮತ್ತು ಕಂದಾಯದ ರೂಪದಲ್ಲಿ ಹಜರತ್‌ಬಾದಶಾಹ ಗಾಜಿಯ ಮಂತ್ರಿಗಳಿಗೆ ಅಪಾರ ನಗದು ಹಣ ಕೊಡುತ್ತಿದ್ದನು. ಇದೇ ಪ್ರಕಾರವಾಗಿ, ಅವನು ಬುರ್ಹಾನ್‌ಪೂರ್ ತಲುಪಿದನು.

‘ಬಾದಶಾಹ ಗಾಜಿಯು ಯುದ್ಧದ ದಿನ, ಅವನ ಖಡ್ಗದಿಂದ ‘ವಿಜಯದ ನಾಮ’ವನ್ನು ಉನ್ನತಗೊಳಿಸಿದಾಗ, ಆತನ ಸೈನ್ಯದ ಧೂಳಿಯಿಂದ ತಿರುಗುತ್ತಿರುವ ಆಕಾಶವು, ಹಗ್ಗದ ಕುಣಿಕೆಯಲ್ಲಿ ಕುತ್ತಿಗೆ ಹಾಕಿ, ಪತನವಾಯಿತು’.

■

*

ಅಧ್ಯಾಯ – ೬

ಸ್ವರ್ಗದಂತಹ ಸಾಮ್ರಾಜ್ಯದ ಸ್ಮರಣೆ
ಮತ್ತು
ಹಜರತ್ ಬಾದಶಾಹ ಗಾಜಿಯ ಸಿಂಹಾಸನಾರೋಹಣದ
ಸಂಗತಿಯ ಪ್ರಸ್ತಾವನೆ

ಅರ್ಥಗಳ ವ್ಯಾಪ್ತಿಯ ಅಮೌಲ್ಯವಾದ ಮುತ್ತುಗಳು ಮತ್ತು ಸಾಹಿತ್ಯಶಾಸ್ತ್ರವೆಂಬ ಆಕಾಶದ ಸುಪ್ರಸಿದ್ಧ ನಕ್ಷತ್ರಗಳು; ಬಾದಶಾಹನ ಪ್ರಶಂಸೆಯ ಸಂಪತ್ತಿನ ಮೂಲಕ ದೇವರನ್ನು ಗುರುತಿಸುತ್ತವೆ. ಬಾದಶಾಹನ ಸುದೈವದ ದರ್ಶನವು ಪ್ರಕಾಶಮಾನ ದೃಷ್ಟಿಉಳ್ಳವರ ನಯನಗಳನ್ನು ದೇವರ ಪ್ರಕಾಶದ ಉಗಮಸ್ಥಾನವನ್ನಾಗಿ ಮಾಡುತ್ತದೆ. ಅವನ ವೈಭವ ವೃಕ್ಷದ ರಾಜದರ್ಶನವು, ಸಪ್ತನಕ್ಷತ್ರ ಸಮೂಹದ ಫಲಗಳ ಆಕಾಶಗಳನ್ನು, ಗೌರವವೆಂಬ ಉದ್ಯಾನದ ಅದೃಷ್ಟಶಾಲಿಗಳ ಸೆರಗಿನಲ್ಲಿ ಹಾಕುತ್ತದೆ. ನುಡಿಯ ಮೌಲ್ಯ ಮತ್ತು ವೈಭವವನ್ನು ಶಾಶ್ವತವಾದ ಆಕಾಶದ ಔನ್ನತ್ಯದ ಮೇಲೆ ತಲುಪಿಸಲಾಗಿದೆ. ಇಬ್ರಾಹೀಮ್ ಎಂಬ ಹೆಸರಿನ ಸ್ವರ್ಗವಾಸಿಯಾದ ಬಾದಶಾಹನು; ನಿಜ ಸ್ನೇಹಿತನ ಗುಣ–ಸಂಪನ್ನ, ಸಮಾನತೆ ಮತ್ತು ನ್ಯಾಯದ ಅತ್ಯುತ್ತಮ ಕಾರ್ಯಕರ್ತ ಮಹಾ ಅದೃಷ್ಟಶಾಲಿಗಳ ವ್ಯವಹಾರ ಸಂಸ್ಥಾಪಕ, ಜಗತ್ತಿನ ರಕ್ಷಣಾ ಶ್ರೇಣಿಗಳ ಅನುಷ್ಠಾನಕಾರ, ಆಕಾಶದಂತಹ ಎತ್ತರದ ವೈಭವ–ಗಾಂಭೀರ್ಯದ ಅವಶ್ಯಕತೆಗಳ 'ಕಾಬಾ', ಪರಿಚಾರಕರ ಸಿಕಂದರ್, ದಾರಾನಂತಹ ವೈಭವದ ಮಹೋನ್ನತ ಬಾದಶಾಹ, ಖುಬಾದನಂತಹ ಮೌಲ್ಯಯುಕ್ತ, ಫರಿದೂನ್ ಬಾದಶಾಹನಂತೆ ವಿಜಯದ ಮದ್ಯಪಾನಾಸಕ್ತ, ಹಾತೀಮ್‌ನಂತಹ ಇನಾಮು/ಕೊಡುಗೆಗಳ ಜನ್ಮಸ್ಥಾನ, ಕರುಣೆಯ ಬುಗ್ಗೆಯ ಬೇವರು, ಬುದ್ಧಿವಂತರ ಜ್ಞಾನದ ಉಗಮಸ್ಥಾನದ ಪರಿಪೂರ್ಣತೆ, ಯೋಜನಾ ತಯಾರಿಕೆಯ

ಸಭೆಯಲ್ಲಿರುವ ಯೋಜನಾ ನಿರ್ಮಾಪಕರ ಮಾರ್ಗದರ್ಶಕ, ಬುದ್ಧಿವಂತಿಕೆಯ ನುಡಿ ಸಂಗ್ರಹದ ಅರ್ಥರಚನಾಕಾರ, ಗೌರವದ ಜಗತ್ತಿನಲ್ಲಿ ಪ್ರತಿಷ್ಠಿತ ಜಾಗ್ರತೆಯ ಅಭಿವೃದ್ಧಿಕಾರ, ಆಕಾಂಕ್ಷೆಯ ಜಗತ್ತಿನ ನಿರಪೇಕ್ಷಿಗಳ ಹೃದಯಪ್ರಿಯ, ದೇವರ ಪರಿಚಯದ ಆಭರಣ ಪೆಟ್ಟಿಗೆಯ ಅಮೌಲ್ಯ ಮುತ್ತುಗಳ ಮೌಲ್ಯ-ಜ್ಞಾನಿ, ಜ್ಞಾನವೆಂಬ ಆಕಾಶದ ಔನ್ನತ್ಯದ ಮೇಲೆ ಹಾರುವ ವ್ಯಕ್ತಿಗಳಿಗೆ ಜಾಲ ಹಾಸುವವ, ಪ್ರವಚನದಲ್ಲಿರುವ ಪವಿತ್ರವಾದ ದಿವ್ಯಪ್ರೇರಣಾ ಸೂಕ್ಷ್ಮತೆಯ ಜ್ಞಾನ-ಸಂಪನ್ನ, ಪ್ರಯತ್ನದ ಮೂಲಕ ಸೌಭಾಗ್ಯ ನಿರ್ಮಿಸುವ ಶಕ್ತಿಶಾಲಿ ಅದೃಷ್ಟ ನಿರ್ಮಾಪಕ.

ಶಾಶ್ವತವಾಗಿರುವ ಸಂಪತ್ತು ಮತ್ತು ಪುಣ್ಯದ ಬಲಗೈಯಿಂದ ಸುದೈವವೆಂಬ ಪ್ರಾತಃಕಾಲದ ಮುಖದರ್ಶಕ; ಅಲಂಕೃತವಾದ ಬಂಗಾರ ಬಣ್ಣದ ರಾಜಮುದ್ರೆ ಹೊಂದಿದ ಕಿರೀಟದೊಂದಿಗೆ ಆಕಾಶದ ಔನ್ನತ್ಯದವರೆಗೆ ತಲೆ ಎತ್ತುವವ; ಸುಲೇಮಾನನಂತಹ ಸಿಂಹಾಸನದ ಮೇಲೆ ಆಸೀನರಾದ ರಾಜರ ಗೌರವದ ಸಂರಕ್ಷಕ; ಶಬ್ದಕೋಶಗಳಿಗೆ ಶಬ್ದಗಳನ್ನು ನೀಡುವವ; ಬುದ್ಧಿಗೆ ಆರೋಗ್ಯದಾತ; ಜ್ಞಾನವೆಂಬ ಲೇಖನಿಯ ಚುಕ್ಕೆಗಳ ಅರ್ಥನಿರೂಪಕ; ಏಕದೇವ ವಿಶ್ವಾಸಿಗಳ ಪರಿಪೂರ್ಣ ಹೃದಯದ ಕೇಂದ್ರಬಿಂದು; ಸಾಗರವಾಗಿ ಆಕಾಶವನ್ನು ಆವರಿಸಿದ ಹೃದಯವಂತ; ಎಂಟನೆಯ ಆಕಾಶದಂತಹ ಕರಾವಳಿಯ ತರಂಗ; ಸೇವೆಯ ಶಿಷ್ಟಾಚಾರಗಳ ಜ್ಞಾನಿ; ಅರ್ಧಶೇರ್ ಮತ್ತು ಅರ್ಧವಾನ್‌ರಂತಹ ರಾಜರಿಗೆ ನಿಯಮ ಬೋಧಕ; ನ್ಯಾಯದ ವಾದ್ಯ ಬಾರಿಸುವ; ನೌಶೀರ್ವಾನನಂತಹ ನ್ಯಾಯಗ್ರಂಥಗಳ ರಚನಾಕಾರ; ಕ್ಯೂಮರಸ್‌ರಾಜನ ವಾರಸುದಾರರಂತಹ ಸೌಭಾಗ್ಯದ ಒಡೆಯ; ದೇವ-ಭಯ ಹೊಂದಿದ ಮುಚ್ಚಿದ ನಾಲಿಗೆಗಳನ್ನು ಶಕ್ತಿ-ದಾಯಕ; ಸತ್ಯಶೋಧಕ ಬಾದಶಾಹ, ವಾಸ್ತವಿಕತೆಗಳನ್ನು ಅರಿಯುವಂತಹ ಶಾಹ ಫಿರ್ದೋಸ್ ಇಬ್ರಾಹೀಮ್ ಆದಿಲ್‌ಶಾಹನು ದೇವರ ಶ್ರೇಷ್ಠತೆ ಮತ್ತು ಕೃಪೆಯಿಂದ ನಾಲ್ವತ್ತೆಂಟು ವರ್ಷಗಳವರೆಗೆ, ಸಂಪೂರ್ಣ ಸ್ಥಿರತೆಯಿಂದ, ವೈಭವ-ಗಾಂಭೀರ್ಯದ ಸಿಂಹಾಸನದ ಮೇಲೆ ಆಸೀನನಾಗಿ ನ್ಯಾಯದೊಂದಿಗೆ ರಾಜ್ಯಾಡಳಿತ ಮಾಡಿದನು ಮತ್ತು ಜಗತ್ತನ್ನು ಶೃಂಗರಿಸಿದನು. ಅವನು ಯಾಚಕರಿಗೆ ನ್ಯಾಯ ಹಾಗೂ ಕಾಣಿಕೆಗಳ ಬಾಗಿಲುಗಳನ್ನು ತೆರೆದನು.

ಪ್ರಾಚೀನ ಇತಿಹಾಸವನ್ನು ಕುರಿತು ಸಂಗ್ರಹಿಸಿದಂತಹ ವ್ಯಕ್ತವಾದ ಮಾತುಗಳ ಒಪ್ಪಂದದ ಅನುಸಾರವಾಗಿ, ಹಿಂದಿನ ಎಲ್ಲ ಬಾದಶಾಹರಲ್ಲಿ ಯಾವುದೇ ವೈಭವ-ಗಾಂಭೀರ್ಯದ ಬಾದಶಾಹನು; ಧರ್ಮ, ನ್ಯಾಯ, ಸಾಮಾನ್ಯ ನಿಯಮ ಮತ್ತು ದಯೆಯಲ್ಲಿ, ಶಾಹ ಫಿರ್ದೋಸನ ಮಟ್ಟವನ್ನು ತಲುಪುವದಿಲ್ಲ. ಫಕೀರನ ಹಾಸಿಗೆಯ ಮೇಲೆ ಮಲಗುವಂತಹ ವ್ಯಾಕುಲರಾದ ಜನರ ತಲೆದಿಂಬಿನ ಹತ್ತಿರ ಸುಖದ ಪ್ರಾತಃಕಾಲವಾಗುವಂತೆ; ಈತನ ಅಂತಿಮ ಕಾಲದಲ್ಲಿ ಶಾಂತಿ ಹಾಗೂ ಸುರಕ್ಷತೆಯು ಅಧಿಕವಾಗಿತ್ತು.

ಬರಿದಾದ ಮತ್ತು ಕಡಿಮೆ ಧೈರ್ಯದ ಗುಳ್ಳೆಗಳ ಮೇಲೆ ಖುಲ್‌ಜುರ್ಮದ ಮೋಡದಿಂದ ತೊಟ್ಟಿಕ್ಕುವ ಅಮಾನ್ ನದಿಯ ಹನಿಗಳಂತೆ; ಆತನ ಇನಾಮು ಹಾಗೂ ದಾನಗಳ ತುಂತುರ ಮಳೆಯು ಮೇಲಿಂದ ಮೇಲೆ ಆಗುತ್ತಿತ್ತು.

'ಆತನ ದಾನದ ಗುಣಗಾನದಿಂದ, ನಾನು ಒಂದು ವೇಳೆ ಸ್ವಲ್ಪ ಗಳಿಸಿದ್ದರೆ, ನುಡಿಯ ಆಭರಣ ಪೆಟ್ಟಿಗೆಯಿಂದ, ಮುತ್ತುಗಳ ಗಂಟಿನಂತೆ ಮಾತುಗಳ ಲಡಿಯು ಬಿಚ್ಚುತ್ತ ಸಾಗುವುದು'.

ಜಗತ್ತಿನ ಸೃಷ್ಟಿಯ ಪ್ರಥಮ ದಿನದಿಂದಲೇ ದೇವರ ಪವಿತ್ರವಾದ ಬೆಳಕಿನ ಈ ಸಾಕ್ಷಿಗೆ ಜಗತ್ತಿನ ಕಾರ್ಯಗಳನ್ನು ಪೂರ್ಣಗೊಳಿಸುವ ಹೊಣೆಗಾರಿಕೆಯನ್ನು ನೀಡಲಾಗಿತ್ತು. ಅವನು ತನ್ನ ಅಪಾರ ಕೃಪೆಯ ಶ್ರೇಷ್ಠತೆಯಿಂದ, ರಾಜ್ಯಾಡಳಿತೆ ಮತ್ತು ಜಗತ್ತಿನ ಕಲ್ಯಾಣದ ಸಾಮರ್ಥ್ಯವನ್ನು ಶುದ್ಧವಾದ ಹಾಗೂ ಹೊಸದಾಗಿ ಪಡೆದಂತಹ ಜ್ಞಾನ ಮತ್ತು ಬುದ್ಧಿವಂತಿಕೆಯ ಮೂಲಕ; ಜನ್ಮತಃ ಬಾದಶಾಹರ ಜಗತ್ತಿನ ಸಂರಕ್ಷಣೆಯ ವಿಧಾನಗಳ ಪಟ್ಟಿಯನ್ನು, ದೂರದೃಷ್ಟಿಯಿಂದ ಪರಿಶೀಲಿಸಿದ್ದನು. ಇಂತಹ ಸಲಹೆಗಾರರು ಬರೆದಿರುವ ವ್ಯವಸ್ಥೆಯ ಶ್ರೇಣಿಗಳ ಸುಧಾರಣೆ ಮಾಡಿ, ಅವುಗಳನ್ನು ಜಗತ್ತಿನ ಜನರಿಗಾಗಿ ಅಂಗೀಕರಿಸಿದ್ದನು. ಐಕ್ಯತೆಯ ಮೌಲ್ಯಕ್ಕೆ ಉತ್ತೇಜನ ನೀಡಿ; ವೈಭವ–ಗಾಂಭೀರ್ಯದ ಕಿರೀಟವನ್ನು ಶಾಶ್ವತಗೊಳಿಸುವ ಶಕ್ತಿಯನ್ನು ಸಂಪಾದಿಸಿದ್ದನು. ಆತನು ತನ್ನ ಎಲ್ಲ ಉತ್ತಮ ಹಾಗೂ ಆಜ್ಞಾಪಾಲಕ ಪುತ್ರರಲ್ಲಿ ಹಜರತ್ ಬಾದಶಾಹ ಗಾಜಿಯನ್ನು ಮಹಾನ್ ಸಾಮ್ರಾಜ್ಯ ಮತ್ತು ಉನ್ನತವಾದ ಉತ್ತರಾಧಿಕಾರತ್ವಕ್ಕೆ ಯೋಗ್ಯನೆಂದು, ತಿಳಿದುಕೊಂಡಿದ್ದನು. ಆತನ ಅರಸತ್ವದ ಸಾಧನೆ ಹಾಗೂ ವ್ಯವಸ್ಥೆಗೆ ಅನುಗುಣವಾಗಿ, ವೈಭವ–ಗಾಂಭೀರ್ಯದ ಜಗತ್ತಿನ ಮಹಾನ್ ಬುದ್ಧಿವಂತರ ಹತ್ತಿರ ಸುದೀರ್ಘ ಸಮಯದವರೆಗೆ ಪ್ರಾಪ್ತವಾಗಲು ಅಸಾಧ್ಯವಾದ ಪದ್ಧತಿಯ ಸೂಕ್ಷ್ಮತೆಗಳಿಗೆ ಈ ಅದ್ವಿತೀಯ ಬಾದಶಾಹನ ಅಪ್ರತಿಮವಾದ ತರಬೇತಿಯು; ದಿನದಿಂದ ದಿನಕ್ಕೆ ಮೇಲಿಂದ ಮೇಲೆ ಲಕ್ಷ್ಯವಹಿಸಿತು.

ಸಾಮ್ರಾಜ್ಯವನ್ನು ಸುಭದ್ರಗೊಳಿಸುವಂತಹ ಅಂಶಗಳನ್ನು ಕುರಿತು; ಆತನು ಗುಪ್ತಚಾರರ ಸಭೆಯಲ್ಲಿ ಹಲವಾರು ಸಲ ಸಾಮ್ರಾಜ್ಯದ ಕಾರ್ಯದರ್ಶಿಗಳು ಮತ್ತು ತನ್ನ ನಿಕಟ ಸಂಬಂಧಿಕರೊಂದಿಗೆ ಚರ್ಚೆ ಮಾಡಿದ್ದನು. ಆತನ ನಂತರ, ಅತ್ಯುನ್ನತವಾದ ಹಿರಿಮೆಯನ್ನು ತಲುಪಿದ ಸಿಂಹಾಸನವನ್ನು ಶಾಶ್ವತಗೊಳಿಸಲು ಜಗತ್ತಿಗೆ ಕೊಡುಗೆ ನೀಡುವಂತಹ ಇಂತಹ ಬಾದಶಾಹನ ಅವಶ್ಯಕತೆ ಇತ್ತು. ವೈಭವ–ಗಾಂಭೀರ್ಯದ ಮಿಂಚುವ ಮುತ್ತಿನ ಆಳ್ವಿಕೆಯ ಪ್ರಭಾವದಿಂದ ತನ್ನ–ತನ್ನ ವಂಶದ ಉತ್ತರಾಧಿಕಾರತ್ವದ ಕಟ್ಟಡವು, ಗೌರವ–ಘನತೆಯ ಸಾಮ್ರಾಜ್ಯಗಳ ಉನ್ನತ ರಾಜರ ವಾಸಸ್ಥಳ ಮತ್ತು ಆಶ್ರಯಸ್ಥಾನವಾಗಬೇಕು. ನಾಯಕತ್ವ ಹಾಗೂ ಅರಸತ್ವದ ಈ ಸಂಗ್ರಹದ ಚಹರೆಯು ಹೃದಯವನ್ನು ಸಂತುಷ್ಟಗೊಳಿಸುವ ಪ್ರತಿಯೊಂದು ಭಾವ–ಭಂಗಿಯಿಂದ, ತನಗೆ

ಯಾವಾಗಲೂ ಶಾಶ್ವತವಾದಂತಹ ಹೊಸ ಬಗೆಯ ಹಿರಿತನದ ಪ್ರಮಾಣ ದೊರಕುತ್ತದೆ. ಈ ಹೇಳಿಕೆಯು ಎಂದಿಗೂ ಪತನವಾಗಲಾರದಂತಹ ಶಾಶ್ವತವಾದ ಭದ್ರತೆಯ ನಿರ್ಣಾಯಕ ಪ್ರಮಾಣವಾಗಿದೆ.

ಬಾದಶಾಹನ ಉನ್ನತ ಮತ್ತು ವೈಭವದ ದರ್ಬಾರಿನಲ್ಲಿದ್ದ ಎಲ್ಲ ಜನರ ಸ್ಥಾನಗಳಿಗೆ ಉನ್ನತಿ ನೀಡಿ ಹಾಗೂ ಹೆಚ್ಚಳ ಮಾಡಿ; ಶಾಶ್ವತವಾದ ಅಭ್ಯರ್ಥಿಗಳನ್ನಾಗಿ ಮಾಡಲಾಗಿದೆ. ಜಗತ್ತಿನ ಜನರಿಗೆ ಯಾವಾಗಲೂ ಶಾಶ್ವತವಾಗಿರುವ ಭೋಗ ಮತ್ತು ಸಂತೃಪ್ತಿಯನ್ನು ದಯಪಾಲಿಸಲಾಗಿದೆ.

ಅವನು ಪರಿಶುದ್ಧ ಹೃದಯ ಮತ್ತು ದೇವರನ್ನು ತಿಳಿಯುವ ಪವಿತ್ರ ಜನರಿಗೆ ಆಗಾಗ ಬಾದಶಾಹ ಗಾಜಿಯ ಪ್ರೀತಿ-ಪ್ರೇಮದ ಸಿಂಪಡಿಕೆ ಮಾಡಿ; ಸೌಭಾಗ್ಯಶಾಲಿ ಹಾಗೂ ರಾಜ್ಯಾಡಳಿತೆಯ ನಕ್ಷತ್ರದ ಉನ್ನತವಾದ ಹಣೆಯ ಮೇಲೆ ಸಾಮ್ರಾಜ್ಯದ ಕಣ್ಣಿನ ಬೆಳಕನ್ನು ಬಹಿರಂಗಗೊಳಿಸಿದ್ದನು. ಜಗತ್ತನ್ನು ಶೃಂಗರಿಸುವ ಅಭಿಮತದ ನೆರಳಿನಿಂದ ಸ್ವಯಂ ಜಗತ್ತನ್ನು ಅಲಂಕರಿಸಿ; ಶೃಂಗಾರದಲ್ಲಿ ಇನ್ನಷ್ಟು ಹೆಚ್ಚಳ ಮಾಡಿದ್ದನು. ಶಾಹ ಫಿರ್ದೋಸನು ಬಾದಶಾಹ ಗಾಜಿಯ ತರಬೇತಿಯಲ್ಲಿ ಮೇಲ್ನೋಟಕ್ಕೆ ವೈಭವ ಪ್ರದರ್ಶಿಸಿದ್ದನು ಮತ್ತು ಅಂತರಂಗದಲ್ಲಿ ಗಾಜಿಯ ವಿಧೇಯತೆಯಲ್ಲಿ ತನ್ನಂಥವರಿಗೆ ಕಾಣಿಕೆ ನೀಡಿದ್ದನು. ಪುರಾತನ ಶ್ರದ್ಧೆಗೆ ಅನುಸಾರವಾಗಿ; ಎಲ್ಲ ಉನ್ನತ ವೈಭವದ ರಾಜರು ಆತನ ಆಜ್ಞೆಯನ್ನು ಪಾಲಿಸುತ್ತ, ಆಜ್ಞಾಧಾರಕರಾಗಿದ್ದರು. ಸಂತೃಪ್ತಿಯ ಅಗತ್ಯವಾದ ಸಾಮಾನುಗಳು ಹಾಗೂ ಸಂತೋಷಪಡಿಸುವ ಸಂಪ್ರದಾಯಗಳಿಗೆ ಪ್ರಾಶಸ್ತ್ಯ ನೀಡಿ, ಅನುಷ್ಠಾನಗೊಳಿಸುತ್ತಿದ್ದರು. ಎಲ್ಲ ಗೌರವಾನ್ವಿತ ಮತ್ತು ಹಿರಿಯ ರಾಜಕುಮಾರರಲ್ಲಿ, ವಿದ್ಯೆಯ ಸೂರ್ಯ, ಜಮ್‌ಶೀದ್‌ನಂತಹ ಶುಭದಾಯಕ ಹೆಜ್ಜೆಯುಳ್ಳ ಬಾದಶಾಹನಿಗೆ ಕಡಿಮೆ ವಯಸ್ಸು ಆಗಿದ್ದರೂ; ಪವಿತ್ರವಾದ ಸಹವಾಸದಲ್ಲಿ ಸತ್ಯವನ್ನು ಕಾಣುವಂತಹ ತನ್ನ ಕಣ್ಣೆದುರಿಗೆ ಬಾದಶಾಹ ಗಾಜಿಯನ್ನು ಇಟ್ಟುಕೊಳ್ಳುತ್ತಿದ್ದನು. ಆತನ ವೈಭವ-ಸೌಂದರ್ಯದ ಕಿರಣಗಳ ಮೇಲೆ ದೇವರ ದಿವ್ಯದರ್ಶನವು ಬೆಳಕು ಸುರಿಸುತ್ತಿತ್ತು.

ಹಜರತ್ ಬಾದಶಾಹ ಗಾಜಿಯ ಹೃದಯಕ್ಕೆ ಸಂತೋಷವನ್ನುಂಟು ಮಾಡುವ ಮುಖದ ದರ್ಶನ ಮಾಡದೇ ಅವನಿಗೆ ಒಂದು ಕ್ಷಣವೂ ಸಹ; ಸುಖ-ಶಾಂತಿ ದೊರಕುತ್ತಿರಲಿಲ್ಲ. ಆ ವೈಭವಶಾಲಿ ಆಕಾಶದ ಸೂರ್ಯನಂತಹ ಸ್ವಭಾವದ, ನಿರಂತರ ಲಾಭದಾಯಕವಾದ ಬೆಳಕಿನ ಉಲ್ಲೇಖವನ್ನು ಸ್ವೀಕರಿಸಿ; ಆತನ ಬಗೆಗೆ ಅಭಿಮಾನ ವ್ಯಕ್ತಪಡಿಸುತ್ತಿದ್ದನು. ವೈಭವ-ಗಾಂಭೀರ್ಯವನ್ನು ಶೃಂಗರಿಸುವ ಆತನ ಸಹವಾಸದಿಂದ ಒಂದು ಕ್ಷಣವೂ ತನ್ನನ್ನು ಬೇರ್ಪಡಿಸಲು ಬಯಸುತ್ತಿರಲಿಲ್ಲ. ಸಾಮ್ರಾಜ್ಯದ ಸಮಸ್ಯೆಗೆ ಪರಿಹಾರ ಶೋಧಿಸುವ ಕಾರ್ಯದಲ್ಲಾಗಲಿ ಹಾಗೂ ಉನ್ನತ ದರ್ಜೆಯ ರಾಜರೊಂದಿಗೆ ವಿಚಾರ-ವಿನಿಮಯ ಮಾಡಲು, ಅವರನ್ನು ಕರೆಕಳುಹಿಸುವ ಸಂದರ್ಭದಲ್ಲಾಗಲಿ;

ಪ್ರಪ್ರಥಮವಾಗಿ ಉನ್ನತದರ್ಜೆಯ ನಾಯಕನನ್ನು ಆತನ ಬುದ್ಧಿವಂತಿಕೆಯ ದೆಸೆಯಿಂದ ಮೊದಲು ಕರೆಕಳುಹಿಸಲಾಗುತ್ತಿತ್ತು.

ಆನಂತರ ಇತರ ಬುದ್ಧಿವಂತ, ಸ್ಥಿರಚಿತ್ತದ ಮತ್ತು ಸೂಕ್ತ ಸಲಹೆಗಾರರನ್ನು ರಹಸ್ಯ ಸ್ಥಳದಲ್ಲಿ ಕರೆಕಳುಹಿಸಿ, ಏಕಾಂತದಲ್ಲಿ ಸಲಹೆ-ಸೂಚನೆ ಕೊಡುವಂತಹ ಗೌರವವನ್ನು ನೀಡಲಾಗುತ್ತದೆ. ಒಂದು ವೇಳೆ ಅಕಸ್ಮಾತಾಗಿ ಜಗತ್ತಿಗೆ ಆಜ್ಞೆ ನೀಡುವ ಬಾದಶಾಹ ಗಾಜಿಯ ಆಗಮನದಲ್ಲಿ ಸ್ವಲ್ಪ ವಿಳಂಬವಾದರೆ, ಸಾವಿರಾರು ಅಭಿಮಾನಿಗಳು ಹಾಗೂ ಕಾವಲುಗಾರರೊಂದಿಗೆ, ಆತನ ಬರುವಿಕೆಯ ನಿರೀಕ್ಷೆಯಲ್ಲಿ ಶಹಾ ಫಿರ್ದೋಸನು ರಹಸ್ಯ ಸ್ಥಳದಿಂದ ಹೊರಗೆ ಬರುತ್ತಿದ್ದನು. ಪೂರ್ಣ ಸ್ಥಿರತೆಯೊಂದಿಗೆ, ಸ್ವಾಗತ ಸಂಪ್ರದಾಯಗಳ ಅನುಷ್ಠಾನ ಮಾಡಲಾಗುತ್ತಿತ್ತು. ಯಾವಾಗಲಾದರೂ ಯೋಜನೆ ರೂಪಿಸುವ ಮತ್ತು ಪರಸ್ಪರ ಒಪ್ಪಂದದಿಂದ ಕಾರ್ಯನಿರ್ವಹಿಸಲು; ಬುದ್ಧಿವಂತಿಕೆ ಹಾಗೂ ಚಾಣಾಕ್ಷತನ ಇದ್ದರೂ ಸಹ; ವಿಳಂಬ ಮತ್ತು ಅನುಮಾನವಾದರೆ, ತನ್ನ ದೃಷ್ಟಿಯು ವೈಭವ-ಗಾಂಭೀರ್ಯದ ಪರಿಧಿಯನ್ನು ಆವರಿಸಿದಂತೆ, ಈ ಅದ್ವಿತೀಯ ಮುತ್ತಿನ ಪರಿಪೂರ್ಣವಾದ ಸೌಂದರ್ಯದ ಮೇಲೆ ಬೀಳುತ್ತದೆ. ಇಂತಹ ಸಮಯದಲ್ಲಿ ಯಾವಾಗಲೂ ಆತನ ಹಿರಿತನದ ಜ್ಞಾನ ಮತ್ತು ಬುದ್ಧಿವಂತಿಕೆಯ ಪ್ರಭಾವದಿಂದ ತನ್ನ ತಿಳುವಳಿಕೆಯ ಕಣ್ಣಿನ ಬೆಳಕು ಮಿಂಚುತ್ತದೆ. ಆತನು ಜಗತ್ತಿನ ಆರಂಭ ಹಾಗೂ ಅಂತ್ಯದ ಈ ರಹಸ್ಯದ ಪ್ರಕಾಶ ಮತ್ತು ಔನ್ನತ್ಯದ ಸಮೃದ್ಧಿಯಿಂದ, ಕಣ್ಣು ರೆಪ್ಪೆ ಮುಚ್ಚುವ ಕ್ಷಣಾರ್ಧದಲ್ಲಿ, ಪ್ರತಿನಿಧಿಯ ರೂಪದಲ್ಲಿ ಅದರ ಪರಿಹಾರವನ್ನು ಶೋಧಿಸಿ, ಪಂಕ್ತಿ ಬದ್ಧಗೊಳಿಸಿ ಎದುರಿಗೆ ಪ್ರಸ್ತುತಪಡಿಸಲಾಗುತ್ತದೆ. ಮೇಲಿಂದ ಮೇಲೆ ದೈವಿಕ ಪ್ರೇರಣೆಯಿಂದ ಸಾಮರ್ಥ್ಯವನ್ನು ಬಹಿರಂಗಗೊಳಿಸುವಂತಹ ಈ ಮಾತುಗಳನ್ನು ಹೇಳಲಾಗುತ್ತಿತ್ತು.

ಪ್ರತಿಯೊಂದು ಉನ್ನತ ಯೋಜನೆಯನ್ನು ರೂಪಿಸುವಾಗ, ಅನುಭವಿಕ ಮತ್ತು ಬುದ್ಧಿವಂತ ಜನರು ಸೂಕ್ಷ್ಮತೆ ಹಾಗೂ ವಾಸ್ತವಿಕತೆಗಳನ್ನು ಪ್ರಸ್ತುತಪಡಿಸಿ, ಚಿಂತನೆಯಲ್ಲಿ ನಿರತರಾದಾಗ; ಸ್ವಲ್ಪ ಸಮಯವೂ ಸಹ ತಲೆ ಎತ್ತುವದಿಲ್ಲ. ಬಾದಶಾಹನು ಯಾರ ಸಹಾಯವೂ ಇಲ್ಲದೇ, ಯೋಜನೆಯನ್ನು ಸರಳವಾದ ವಿಧಾನದಿಂದ ಮನೋರಂಜನೆಯಂತೆ ರಚಿಸುತ್ತಾನೆ. ಮಹಾನ್ ಸಂರಕ್ಷಕನಾದ ದೇವರು ತನಗೆ ಇಂತಹ ಅದ್ವಿತೀಯ ಪುತ್ರನನ್ನು ದಯಪಾಲಿಸಿದ್ದಾನೆ. ರಾಜವಂಶದ ಇಂತಹ ಸಮರ್ಥ ಉತ್ತರಾಧಿಕಾರಿಗಳಿಗೆ ದೀರ್ಘಾಯುಷ್ಯ ಮತ್ತು ಶಾಶ್ವತವಾದ ಸಂಪತ್ತಿಗಾಗಿ ಮುಂಜಾನೆಯಿಂದ ಸಾಯಂಕಾಲದವರೆಗೆ ಜಪಮಾಡಿ, ಅನುಪಮ ಸೃಷ್ಟಿಕರ್ತನ ಆರಾಧನೆ ಹಾಗೂ ಪೂಜೆಯಲ್ಲಿ ಶಾಹ ಫಿರ್ದೋಸನು ಸತ್ಯವಾದ ಮಾರ್ಗದಲ್ಲಿ ದೃಢತೆಯಿಂದ ನಡೆದು ನಿರಂತರವಾಗಿ ಜಗತ್ತಿನ ರಕ್ಷಣೆ ಮತ್ತು ಆಡಳಿತೆಯ ಕಾರ್ಯಗಳನ್ನು ಅನುಷ್ಠಾನಗೊಳಿಸುತ್ತಿದ್ದನು.

ಶಾಹ ಫಿರ್ದೋಸನು ದೇವರ ಸಾಮೀಪ್ಯ ಹೊಂದಿದ ಜನರಿಂದ ಪ್ರಯೋಜನೆ ಪಡೆದು; ಜಗತ್ತಿನ ಜನಭರಿತ ಪ್ರದೇಶಗಳ ಜನರಿಗೆ ಲಾಭವನ್ನು ತಲುಪಿಸುತ್ತಿದ್ದನು. ಏಕಾಂತ ಅಥವಾ ಸಭೆಯಲ್ಲಿದ್ದಾಗ; ಹಜರತ್ ಬಾದಶಾಹ ಗಾಜಿಯ ಪ್ರಶಂಸೆ ಮತ್ತು ಗುಣವರ್ಣನೆಯ ಶಿಷ್ಟಾಚಾರ ನಿರ್ವಹಿಸುತ್ತಿದ್ದನು. ಅಲ್ಪ ವಯಸ್ಸಿನಲ್ಲಿ ಈ ಭಾಗ್ಯಶಾಲಿಯಾದ ಆಕಾಶದಂತಹ ಸಿಂಹಾಸನದ ಮೇಲೆ ಆಸೀನನಾಗುವ ಬಾದಶಾಹನಿಗೆ ತನ್ನ ತಂದೆಯ ತರಬೇತಿಯ ಮೇಲ್ವಿಚಾರಣೆಯಲ್ಲಿ ಒಂದು ವೇಳೆ ಇರಿಸಿರದಿದ್ದರೆ, ಜಗತ್ತಿನ ಮೇಲ್ವಿಚಾರಣೆ ಮತ್ತು ಆಳ್ವಿಕೆಯ ಬಗೆಗೆ ಅನುಭವ ಹಾಗೂ ಆಡಳಿತೆಯ ಕೌಶಲ್ಯ ಹೊಂದಿರುವ ಬುದ್ಧಿವಂತರ ಕಣ್ಣುಗಳು ಆಶ್ಚರ್ಯಚಕಿತಗೊಳ್ಳುತ್ತಿದ್ದವು.

ದೇಶಗಳ ವ್ಯವಸ್ಥೆಯನ್ನು ಕುರಿತು ರೆಪ್ಪೆಗಳಿಗೆ ಚಲನೆ ನೀಡಿ, ಕಣ್ಣಿನ ಹುಬ್ಬುಗಳನ್ನು ಅರಳಿಸಿ, ಕಣ್ಣುಗಳು ಬುದ್ಧಿವಂತಿಕೆಯಿಂದ ಕಾರ್ಯನಿರ್ವಹಿಸುವ ಸನ್ನೆ ಮಾಡುತ್ತವೆ. ಪರಿಣಾಮ ಸ್ವರೂಪವಾಗಿ ಬಾದಶಾಹ ಫಿರ್ದೋಸನ ಪವಿತ್ರವಾದ ಹೃದಯವು ಯಾವಾಗಲೂ, ಸತ್ಯ ಮತ್ತು ವಾಸ್ತವಿಕತೆಯ ಅನ್ವೇಷಣೆಯಲ್ಲಿ ಯಾವ ಅನುಮಾನವೂ ಇಲ್ಲದೇ ತಲ್ಲೀನವಾಗಿ; ದೇವತ್ವವನ್ನು ತಿಳಿಯುವ ಸೂಕ್ತವಾದ ಉತ್ಸಾಹವನ್ನು ಹೊಂದಿತ್ತು. ಎರಡೂ ಜಗತ್ತುಗಳ ತೆರಿಗೆ ಹಾಗೂ ಕಂದಾಯವನ್ನು ನಿರ್ಲಕ್ಷಿಸಿ, ನಿರಂತರವಾಗಿ ದೇವರನ್ನು ತಿಳಿಯುವ ಕಾರ್ಯಗಳಲ್ಲಿ ಆತನು ಸಂತೋಷಪಡುತ್ತಿದ್ದನು. ಅಂತ್ಯ ಕಾಲದಲ್ಲಿ ಇಂದ್ರಿಯಾಸಕ್ತಿಗಳನ್ನು ತ್ಯಜಿಸಿದ್ದನು. ಹೃದಯ ನೈರ್ಮಲ್ಯ ಹಾಗೂ ವಾಸ್ತವಿಕತೆಯ ಹಂತಗಳು, ಧರ್ಮಶಾಸ್ತ್ರ ಮತ್ತು ದಿವ್ಯಜ್ಞಾನದ ತಂಗುದಾಣಗಳನ್ನು ಕ್ರಮಿಸಿ; ಇಂದ್ರಿಯಗಳೊಂದಿಗೆ ಯುದ್ಧದ ದಾರಿಯನ್ನು ಸ್ವೀಕರಿಸಿ, ಜಗತ್ತಿನಿಂದ ದೂರವಾಗಲು ಹಾಗೂ ರಹಸ್ಯ ಸ್ಥಳದಲ್ಲಿ ಆಸೀನನಾಗುವ ವಿಶಾಲವಾದ ಮಾರ್ಗದ ರಂಧ್ರಗಳನ್ನು ಆತನು ಮುಚ್ಚುತ್ತಿದ್ದನು.

ಇದೇ ವಿಧಾನದಲ್ಲಿ, ಒಂದು ದೀರ್ಘಾವಧಿಯವರೆಗೆ, ದೇಶದ ಸಿಂಹಾಸನದ ಮೇಲೆ ಆಸೀನನಾಗಿ ಏಕಾಂತದಲ್ಲಿ ಕುಳಿತಿರುವ ಜನರ ಹೃದಯಗಳನ್ನು ವಿನಮ್ರತೆ, ಅಪೇಕ್ಷೆ ಮತ್ತು ಭರವಸೆಯ ದಿಶೆಯಲ್ಲಿ ಸಾಂತ್ವನಪಡಿಸಿ, ವಾಸ್ತವಿಕತೆ ಹಾಗೂ ಕಾಲ್ಪನಿಕತೆಯ ಮರುಭೂಮಿಯಲ್ಲಿ ಚಿಂತಾಗ್ರಸ್ತರಾದವರಿಗೆ ಅವರ ಇಚ್ಛೆಗೆ ಅನುಸಾರವಾಗಿ ಜೀವಿಸಲು ಸ್ವಾತಂತ್ರ್ಯ ನೀಡಿದ್ದನು. ಶಹಾ ಫಿರ್ದೋಸನ ಪವಿತ್ರವಾದ ಅಸ್ತಿತ್ವದ ಮೇಲೆ ಮಾನವನ ಸ್ವಭಾವದಲ್ಲಿ ಕಂಡುಬರುವ ದೌರ್ಬಲ್ಯದ ಚಂಚಲತೆಯು ಆರಂಭವಾದಾಗ; ಪ್ಲಾಟೋನಂತಹ ಜ್ಞಾನ, ಅರಿಸ್ಟಾಟಲ್‌ನಂತಹ ಬುದ್ಧಿವಂತಿಕೆ ಹೊಂದಿದ ಮತ್ತು ಬುಅಲಿಸೀನಾನನ್ನು ಭೂಮಿಯ ಕೆಳಗೆ ಕರತಾಡನ ಮಾಡಿಸಿ, ನರ್ತಿಸಲು ಸನ್ನದ್ಧಗೊಳಿಸಿದಂತಹ ವೈದ್ಯರು ತಮ್ಮ ವೈದ್ಯಕೀಯ ಅನುಭವದಿಂದ ಶಹಾ ಫಿರ್ದೋಸನ ಚಿಕಿತ್ಸೆಯಲ್ಲಿ ನಿರತರಾದರು.

ರೋಗವು ಉಲ್ಬಣಿಸಲಾರಂಭಿಸಿತು. ತಜ್ಞರಾದ ವೈದ್ಯರು ನಾಡಿ ಪರೀಕ್ಷೆ ಮಾಡಿ; ನಕಾರಾತ್ಮಕವಾಗಿ ಪ್ರತಿಕ್ರಿಯಿಸುವದರ ಹೊರತಾಗಿ, ಅವರು ಏನೂ ಮಾಡಲು ಸಾಧ್ಯವಾಗಲಿಲ್ಲ. ಚಿರಂತನ ವೈದ್ಯನಾದಂತಹ ದೇವರಿಂದ ಆಜ್ಞೆ ಬಂದ ಕಾರಣ, ಯಾವುದೇ ಚಿಕಿತ್ಸೆ ಫಲಕಾರಿ ಆಗಲಿಲ್ಲ.

'ಹಿರಿಯ ಬಾದಶಾಹನ ಆಯುಷ್ಯವು ಅಂತ್ಯ ತಲುಪಿತ್ತು. ಚಿಕಿತ್ಸಕರ ಪ್ರಯತ್ನಗಳು ಹೇಗೆ ತಾನೇ ಫಲಿಸಲು ಸಾಧ್ಯ?, ಎಷ್ಟು ಪಥ್ಯಮಾಡಲಾಯಿತೋ, ಅಷ್ಟರ ಮಟ್ಟಿಗೆ ರೋಗ ಉಲ್ಬಣಿಸಿತು. 'ತಬಾಶೀರ್' ಔಷಧೀಯು, ಜ್ವರದ ಅಗ್ನಿಯನ್ನು ಇನ್ನಷ್ಟು ತೀವ್ರಗೊಳಿಸಿತು. ಗುಲಾಬಿಯ ಹಿಂಡಿದ ರಸವು ಮೆದುಳಿನ ಬೆಂಕಿ ಹೆಚ್ಚಿಸಿತು. ದೇಹದ ಮೇಲೆ ಚಂದನ ಲೇಪಿಸಿದಾಗ, ಉರಿ ಉಂಟಾಗುತ್ತಿತ್ತು. ಅಮರತ್ವದ ಜಲಪಾನ ಮಾಡಿಸಿದಾಗ ಹೂವು ಕಚ್ಚಿಸಿಕೊಂಡವನಂತೆ ನರಳಾಡುತ್ತಿದ್ದನು. 'ನೋಷದಾರು' ತಿನ್ನಿಸಿದಾಗ, ಅದು ಸ್ವಯಂ-ವಿಷವಾಗುತ್ತಿತ್ತು'.

ಕಾಯಿಲೆಯು ಉಗ್ರಸ್ವರೂಪ ತಳೆದಿರುವ ದೆಸೆಯಿಂದ ದುರ್ಬಲ/ಅಸ್ಥಿರವಾದ ಪ್ರವಾಸಿ ಮಂದಿರದಿಂದ ನಿರ್ಗಮಿಸಿ; ಇನ್ನೊಂದು ನಿಲುಗಡೆಗೆ ತೆರಳುವ ಸಮಯ ಬಂದಿದೆಯೆಂದು, ಶಾಹ ಫಿರ್ದೋಸನು ತಿಳಿದುಕೊಂಡಿದ್ದನು. ಹಜರತ್ ಬಾದಶಾಹ ಗಾಜಿಯನ್ನು ತನ್ನ ಬಳಿಗೆ ಕರೆದು, ಆಡಳಿತೆಯ ರಹಸ್ಯಗಳ ಭಂಡಾರ ಮತ್ತು ಸಾಮ್ರಾಜ್ಯದ ಹಸ್ತಾಂತರವನ್ನು ಕುರಿತು, ಪ್ರೀತಿ ಹಾಗೂ ಕೃಪೆಯಿಂದ ಹಲವಾರು ಬಗೆಯ ಉಪದೇಶ ಮಾಡಿದನು.

"ಓ! ಅರಸತ್ವದ ಉಗಮಸ್ಥಾನ ಬೆಳಗುವ ಸೂರ್ಯನೇ !
ಓ! ಅರಸತ್ವ ಮತ್ತು ಸೌಭಾಗ್ಯ ಸಂಪನ್ನತೆ !

ಈಗ ನನಗೆ ಅನುಪಮ ಮಹಾಮಹಿಮನ ಆಜ್ಞೆಯಿಂದ, ಶಾಶ್ವತವಾದ ಜಗತ್ತಿನ ವಿಜಯಕ್ಕಾಗಿ ವಿನಾಶದ ಬಯಲಿನಿಂದ ನಿರ್ಗಮಿಸುವ ಕುದುರೆಯನ್ನು ಆರೋಹಣ ಮಾಡಿ, ಅದನ್ನು ಓಡಿಸಬೇಕಾಗಿದೆ" ಎಂದು ಶಾಹ ಫಿರ್ದೋಸನು ನುಡಿದನು.

"ನೀನೇ ನನ್ನ ಅತಿ ಗೌರವಾನ್ವಿತ ಉತ್ತರಾಧಿಕಾರಿ ಆಗಿರುವೆ. ಜಗತ್ತಿಗೆ ಪ್ರದರ್ಶಿಸಲು ಮೊದಲಿನಿಂದಲೂ ಉತ್ತರಾಧಿಕಾರತ್ವದ ಸಿಂಹಾಸನದ ಮೇಲೆ ಆಸೀನನಾಗುವ ಅವಕಾಶ ಮತ್ತು ಗೌರವವನ್ನು ನೀಡಲಾಗಿದೆ. ಜಗತ್ತಿನ ಜನರ ಉದ್ದೇಶ ಹಾಗೂ ಅಗತ್ಯಗಳನ್ನು ಪೂರ್ಣಗೊಳಿಸಲು; ಉತ್ತರಾಧಿಕಾರತ್ವದ ಗೌರವ ವಸ್ತ್ರವನ್ನು ಸಹ ನೀಡಲಾಗಿದೆ. ಹೃದಯವನ್ನು ದೃಢಗೊಳಿಸು ಹಾಗೂ ಧೈರ್ಯದಿಂದ ಕಾರ್ಯನಿರ್ವಹಿಸು. ಮಾನವ ಜಾತಿಯು, ಮೃತ್ಯುವಿನಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ನಿನ್ನ ವೈಭವ ಅಂತಸ್ತಿನ ಮೇಲೆ ದುಃಖದ ಪ್ರಭಾವ ಬೀಳದಿರಲಿ. ಜಗತ್ತಿನ ಭಂಡಾರದಿಂದ ನಿನಗೆ ದೊರೆತ ಆಯುಷ್ಯದ ಬಂಡವಾಳವನ್ನು ಉತ್ತಮ ಚಾರಿತ್ರ್ಯ, ದಾನ-

ಧರ್ಮಕೊಡುಗೆ ಹಾಗೂ ಕರುಣೆಯಲ್ಲಿ ತೊಡಗಿಸಿ, ಜನರ ಹೃದಯಗಳನ್ನು ಗೆಲ್ಲಬೇಕು. ಸಮಾನತೆ ಮತ್ತು ನ್ಯಾಯದ ಬೇರನ್ನು ದೃಢಗೊಳಿಸಲು ಪ್ರಯತ್ನಿಸು. ನ್ಯಾಯವು ನಿರಂತರವಾಗಿ ಅನುಷ್ಠಾನಗೊಳ್ಳುವಂತಹ ಅಮೃತದ ಉಗಮಸ್ಥಾನವಾಗಲಿ. ಒಂದು ವೇಳೆ ಹಿರಿ-ಕಿರಿಯರು ಅಸಭ್ಯತೆಯಿಂದ ತಪ್ಪು ಮಾಡಿದರೆ, ಅವರನ್ನು ಸಹನೆ/ತಾಳ್ಮೆಯೊಂದಿಗೆ ಕ್ಷಮಿಸಬೇಕು. ಏಕೆಂದರೆ : ನಿಂದನೆಯ ವೃಕ್ಷದಲ್ಲಿ ಮರ್ಯಾದೆ ಹಾಗೂ ಪ್ರಯೋಜನಕಾರಿ ಫಲಗಳು ಬೆಳೆಯುವದಿಲ್ಲ. ದುಃಖಿತರು ಮತ್ತು ಬಡವರ ಅವಶ್ಯಕತೆಗಳನ್ನು ಧರ್ಮ ಹಾಗೂ ಜಗತ್ತಿನ ಮಹತ್ಕಾರ್ಯಗಳೆಂದು ಭಾವಿಸಿ, ಅವುಗಳ ಪೂರ್ಣಗೊಳಿಸುವಿಕೆಯು ನಿಜವಾದ ಸತ್ಕಾರ್ಯ ಹಾಗೂ ಕಲ್ಯಾಣವಾಗಿದೆ." ಎಂದು ಶಾಹ ಫಿರ್ದೋಸನು ತಿಳಿಸಿದನು.

'ಚಾರಿತ್ರ್ಯ, ದಾನ-ಧರ್ಮ ಮತ್ತು ನ್ಯಾಯದೊಂದಿಗೆ ಕಾರ್ಯಮಾಡಲು, ಸತ್ಯದ ಹೊರತಾಗಿ ಯಾರನ್ನೂ ನಂಬಬೇಡ, ಅತ್ಯಾಚಾರಿಗಳ ಕಾಲುಗಳನ್ನು ಪತನಗೊಳಿಸು. ಆದುದರಿಂದ ಗದ್ದಲ-ಗಲಭೆ ಉಂಟಾಗದಿರಲಿ, ಅತ್ಯಾಚಾರದ ಅವಶೇಷವೂ ಸಹ ಉಳಿಯದಂತೆ ಅದನ್ನು ಬೇರು ಸಹಿತ ಕಿತ್ತೆಸೆದು ಬಿಡು. ನ್ಯಾಯವು ಆಕಾಶದಂತಿದೆ ಮತ್ತು ಅದರ ಪ್ರಗತಿಯು ಶಾಶ್ವತತೆಯ ಕಾರಣವಾಗಿದೆ. ಅತ್ಯಾಚಾರವು ನೀರಿನ ತೀಕ್ಷ್ಣವಾದ ಪ್ರವಾಹದಂತಿದೆ ಮತ್ತು ಅದರ ತೆರೆಯು ವಿನಾಶದ ಕಾರಣವಾಗುತ್ತದೆ. ಮೊಹಮ್ಮದನ ಧರ್ಮವು ಜೀವಂತವಾಗಿರುವಂತೆ, ಸಿಂಹಾಸನ ಮತ್ತು ಕಿರೀಟವನ್ನು ಶೃಂಗರಿಸು'.

ಹೃದಯ ಸಂತುಷ್ಟಗೊಳಿಸುವ ಉಪದೇಶದ ರೂಪದಲ್ಲಿ ವಿಭಿನ್ನ ಪ್ರಕಾರದ ಬೋಧನೆ ಹಾಗೂ ಮರಣ ಹೊಂದುವಾಗ ನೀಡುವ ಉಪದೇಶ ಕೊಟ್ಟ ನಂತರ ಶಾಹ ಫಿರ್ದೋಸನು ದೇಶದ ಸಲಹೆಗಾರನಾದ ಮೊಹಮ್ಮದ ಅಮೀನ್ ಲಾಹೂರಿಯ ಕಡೆಗೆ ಸಲಹೆ ಪಡೆಯುವಂತೆ ನೋಡಿದನು. ಲಾಹೂರಿಯು ಮಹತ್ಕಾರ್ಯ ಮತ್ತು ರಾಜರ ವಾಸಸ್ಥಾನ/ವ್ಯವಹಾರಗಳ ಪ್ರಸ್ತಾವನೆ ಕೊಡುವಂತಹ ತನ್ನ ಜೊತೆಗಾರರು ಹಾಗೂ ದರ್ಬಾರಿನ ನಿಕಟವರ್ತಿಗಳಲ್ಲಿ ಎಲ್ಲರಿಗಿಂತಲೂ ಹೆಚ್ಚು ಪ್ರಸಿದ್ಧನಾಗಿದ್ದನು. ಅವನು ಧೀಮಂತಿಕೆಯಿಂದ ಕಾರ್ಯನಿರ್ವಹಿಸುವ ಮತ್ತು ಬುದ್ಧಿಕಲಿಸುವ ಕಾರ್ಯದಲ್ಲಿ, ಪ್ಲಾಟೊ ನಂತಹ ಜನರಿಗಿಂತಲೂ ಮುಂದೆ ಸಾಗುತ್ತಿದ್ದನು. ಅವನನ್ನು ಕರೆ ಕಳುಹಿಸಿ ಶಾಹ ಫಿರ್ದೋಸ್ ನುಡಿದನು. "ಬಾದಶಾಹ ಗಾಜಿಯು ನನ್ನ ರಾಜಪ್ರತಿನಿಧಿ ಮತ್ತು ಜಗತ್ತಿನ ಬಾದಶಾಹನಾಗಿದ್ದಾನೆ. ನನ್ನ ನಂತರ ಸಾಮ್ರಾಜ್ಯದ ಕಿರೀಟ ಹಾಗೂ ಸಿಂಹಾಸನವು, ಬಾದಶಾಹ ಗಾಜಿಗೆ ಪ್ರಾಪ್ತವಾಗಬೇಕು. ಈ ಕಾರ್ಯದ ವಿಧಿ-ವಿಧಾನಗಳನ್ನು ಆರಂಭಿಸಿ; ಪೂರ್ಣಗೊಳಿಸುವ ಪ್ರಯತ್ನಗಳಲ್ಲಿ ಅಗತ್ಯವಾದ ಸಾಮಾನುಗಳ ವ್ಯವಸ್ಥೆ ಮಾಡಬೇಕು. ಪಿತೂರಿ-ದಂಗೆ ಮಾಡುವ ಸ್ವಭಾವದ ವ್ಯಕ್ತಿಗಳು ನಡೆಸುವ ಚಟುವಟಿಕೆಗಳನ್ನು ಕುರಿತು, ಸದಾ ಜಾಗ್ರತವಾಗಿರಬೇಕು. ಒಂದು ವೇಳೆ ನನ್ನ ಉಯಿಲಿಗೆ ವಿರುದ್ಧವಾಗಿ ಕಾರ್ಯಾಚರಣೆ ಮಾಡಿದರೆ, ಸ್ವಯಂ ತನ್ನ ಸತ್ಯ

ಮತ್ತು ವಿಶ್ವಾಸದ ನಾಶದ ಸಾಮಾನು ಖರೀದಿಸಿದಂತಾಗುತ್ತದೆ. ನಾನು ದೇವರ ದರ್ಬಾರಿನಲ್ಲಿ, ನನ್ನ ಸಾಮೀಪ್ಯ ಹಾಗೂ ಹಾಜರಾತಿಯ ದೆಸೆಯಿಂದ ಭವಿಷತ್ತಿನಲ್ಲಿ ಪ್ರಳಯದ ದಿನ ಪುಣ್ಯಫಲ ಮತ್ತು ಪಾಪದ ಪ್ರತಿಫಲದ ಮೌಲ್ಯಮಾಪನಕಾರರ ಸಹಾಯದಿಂದ ನಿಮಗೆ ಕಠಿಣವಾದ ಶಿಕ್ಷೆ ವಿಧಿಸುವೆನು",

ದೇಶದ ಸಲಹೆಗಾರ ಮಿರ್ಜಾ ಮೊಹಮ್ಮದ ಅಮೀನನಿಗೆ, ಈ ಮಹಾನ್ ವ್ಯವಹಾರದ ಹೊಣೆಗಾರ ಮತ್ತು ಕಾರ್ಯನಿರ್ವಾಹಕನನ್ನಾಗಿ ಮಾಡಲಾಯಿತು. ಈ ಕಾರ್ಯವನ್ನು ಪೂರ್ಣಗೊಳಿಸಲು ತನ್ನ ಮಹತ್ಕಾರ್ಯ ಮತ್ತು ಸರ್ಕಾರಿ ವ್ಯವಹಾರಗಳ ಜ್ಞಾನವು ತನಗೆ ಸಹಾಯ ನೀಡುವದು, ಅದರ ಸಹಾಯದಿಂದ ಈ ಕಾರ್ಯವನ್ನು ಪೂರ್ಣಗೊಳಿಸುವ ಸಂಗತಿಯನ್ನು, ದೂರದೃಷ್ಟಿ ಹಾಗೂ ಪರಿಣಾಮಕಾರಿತ್ವದ ದೆಸೆಯಿಂದ, ಬಾದಶಾಹನಿಗೆ ತಿಳಿಸಲಾಯಿತು. ಮಿರ್ಜಾ ಮೊಹಮ್ಮದನ ವಿನಂತಿಯ ಮೇರೆಗೆ ಶಾಹ ಫಿರ್ದೋಸನು ದೌಲತ್ ಖಾಸ್‌ಖಾನನನ್ನು ಕರೆಕಳುಹಿಸಿದನು. ದೌಲತ್ ಖಾಸ್‌ಖಾನನು ಕೋಟೆಯಲ್ಲಿ ಖಾಸಗಿ ಸೇವಕರ ಸರದಾರನಾಗಿದ್ದನು. ಮತ್ತು ಮಹತ್ಕಾರ್ಯ ವ್ಯವಹಾರಗಳ ತಯಾರಿಕೆ ಹಾಗೂ ಮುನ್ನಡೆಸುವಿಕೆಯಲ್ಲಿ ತಜ್ಞನಾಗಿದ್ದನು. ಅವನು ಅತ್ಯಂತ ಗಾಂಭೀರ್ಯತೆ ಮತ್ತು ಕಠಿಣತೆಯಿಂದ ಕಾರ್ಯನಿರ್ವಹಿಸುತ್ತಿದ್ದನು.

ಮಿರ್ಜಾ ಮೊಹಮ್ಮದ ಅಮೀನನ ಆಜ್ಞಾಪಾಲನೆ ಮಾಡಲು ಹಾಗೂ ಅನುರೂಪತೆಯಿಂದ ಕಾರ್ಯಮಾಡಲು, ದೌಲತ್‌ಖಾಸ್‌ಖಾನನನ್ನು ನೇಮಿಸಲಾಯಿತು. ಅರಸತ್ವದ ನಿಯಮಗಳನ್ನು ದೃಢಗೊಳಿಸುವ ಸಂಬಂಧದಲ್ಲಿ ಹಜರತ್ ಬಾದಶಾಹ ಗಾಜಿಯು ರಾಜನಾಗುವ ವ್ಯವಹಾರದ ಪ್ರಸ್ತಾವನೆಯನ್ನು ಕುರಿತು, ಮಾಡಿರುವ ಬೋಧನೆ ಮತ್ತು ಉಯಿಲಿಗೆ ಹೊಸ ರೂಪವನ್ನು ಕೊಟ್ಟು, ಅದನ್ನು ಅನುಷ್ಠಾನಗೊಳಿಸುವ ಕ್ರಮವನ್ನು ಕೈಕೊಳ್ಳಲಾಯಿತು. ಆಡಳಿತೆಯ ಆಸನದ ಈ ಸೂಕ್ಷ್ಮವಾದ ಯೋಜನೆಯನ್ನು ಅನುಷ್ಠಾನಗೊಳಿಸಲು ಪ್ರಸ್ತುತಪಡಿಸಿದ ಸ್ವಲ್ಪೇ ಸಮಯದಲ್ಲಿ ಮೃತ್ಯುವಿನ ಸಂದೇಶವಾಹಕನು ಕ್ಷಮಾಶೀಲನಾದ ದೇವರ ಕೃಪೆಯನ್ನು ತಲುಪಿಸಲು ಆಗಮಿಸಿದನು.

ಕ್ಷಮಾದಾನದ ಆಶ್ರಯದಾತನಾದ ಬಾದಶಾಹನು ಸಂತೋಷದಿಂದ ಶಾಶ್ವತವಾಗಿ ದೇವರೊಂದಿಗಿರುವ ಸಾಗರದಲ್ಲಿ ಮುಳುಗಿ, ಸ್ವರ್ಗದ ಸಿಂಹಾಸನದ ಮೇಲೆ ಆಸೀನನಾದನು. ೧೦೨೭ ಹಿಜ್ರಿಯ ಮೊಹರಮ್ ತಿಂಗಳಿನ ೧೧ನೇ ತಾರೀಖಿಗೆ ಹೃದಯ ಕಂಪಿಸುವ ಭಯಾನಕ ನುಡಿಯು ಪ್ರಕಟವಾಯಿತು. ಈ ಜೀವನವನ್ನೇ ಸವೆಸಿ ಬಿಡುವಂತಹ ಘಟನೆಯಿಂದ ನಗರ ಮತ್ತು ದೇಶದ ಹಿರಿ–ಕಿರಿಯರು ದುಃಖದಲ್ಲಿ ಮುಳುಗಿದರು. ಭೂಮಿಯ ಶೋಕ ಪರ್ವತದ ಭಾರದ ಕೆಳಗೆ, ಕೊರಳ ಪಟ್ಟಿಯನ್ನು

ಹರಿದುಕೊಂಡಂತಹ ಸಂಕಷ್ಟ–ಪೀಡಿತನಂತೆ, ಗೋಳಾಟ ಮಾಡಲಾರಂಭಿಸಿತು. ಆಕಾಶವು ಸ್ವಯಂ–ಮಿತ್ರರಹಿತವಾಗಿ ಆತ್ಮಹತ್ಯ ಮಾಡಿಕೊಳ್ಳುವ ಬಯಕೆಯಿಂದ ಆಕಾಶ ಗಂಗೆಯ ಖಡ್ಗವನ್ನು ಎಳೆದು ಕೊಂಡಿತು. ಜಗತ್ತನ್ನು ಬೆಳಗಿಸುವ ಸೂರ್ಯನು ಸ್ವರ್ಗದ ಬಾದಶಾಹನ ಈ ದರ್ಗಾವನ್ನು ಬೆಳಗಿಸಲು ಹೊರಬಂದು ಉದ್ವಿಗ್ನಗೊಂಡು; ಅಗ್ನಿಯನ್ನು ಸುರಿಸತೊಡಗಿದನು.

ಆತನ ದಾನದ ಮಳೆಯಿಂದ ಪ್ರಯೋಜನ ಪಡೆದಂತಹ ತರಂಗ ಎಬ್ಬಿಸುವ ಸಾಗರವು ಇಂತಹ ಅರಸತ್ವದ ಮುತ್ತನ್ನು ಎಲ್ಲಿಂದ ಪಡೆಯಲು ಸಾಧ್ಯವೆಂದು ಯೋಚಿಸಲಾರಂಭಿಸಿತು. ಗಾಬರಿಗೊಂಡು ಹುಡುಕುತ್ತಿರುವ ಸಾಗರವು, ವ್ಯಾಕುಲತೆಯ ನೀರಿನ ಸುಳಿಯಲ್ಲಿ ಪತನವಾಯಿತು. ಹಿರಿ–ಕಿರಿಯರ ಕಣ್ಣೀರಿನ ಮಹಾಪೂರವು ಬಯಲು ಹಾಗೂ ಪರ್ವತಗಳ ಏರಿಳಿತಗಳಿಂದ ನದಿಯಂತೆ ಪ್ರವಹಿಸಲಾರಂಭಿಸಿತು. ಈ ಕಾರ್ಯದಲ್ಲಿ ಒಂದು ಕ್ಷಣದ ವಿಳಂಬವೂ ಸಹ, ಜಗತ್ತಿನ ವಿನಾಶ ಮತ್ತು ಆಶ್ರಯವಿಹೀನತೆಯ ಕಾರಣವಾಗಲು ಸಾಧ್ಯವಿರುವದರಿಂದ ಬಾದಶಾಹನ ಒಪ್ಪಂದದ ಮೇರೆಗೆ ದೇಶದ ಎಲ್ಲ ಆಸ್ಥಾನಿಕರು ಹಾಗೂ ಸಾಮ್ರಾಜ್ಯದ ಸದಸ್ಯರು ಬಾದಶಾಹನ ದರ್ಬಾರಿನಲ್ಲಿ ಸಮಾವೇಶಗೊಂಡರು.

ದೇಶದ ಸಲಹೆಗಾರನಾದ ಮಿರ್ಜಾ ಮೊಹಮ್ಮದ ಅಮೀನ್ ದೌಲತ್‌ಖಾಸ್‌ಖಾನ್, ಇಖ್ಲಾಸ್‌ಖಾನ್ ಮತ್ತು ಶಾನವಾಜ್‌ಖಾನ್ ಏಕಾಂತದಲ್ಲಿ ಸಮಾಲೋಚನೆ ಮಾಡಿದರು. ಶಾಹ ಫಿರ್ದೋಸನ ಉಯಿಲಿನ ಮೇರೆಗೆ ಯಾವಾಗಲೂ ಶಾಶ್ವತವಾಗಿರುವ ಕಿರೀಟ ಹಾಗೂ ಸಿಂಹಾಸನವನ್ನು ರಾಜರು ಮತ್ತು ತೆರಿಗೆ ಕೊಡುವ ದೇಶಗಳ ನಾಯಕರ ನಾಯಕನಾದ ಹಜರತ್ ಬಾದಶಾಹ ಗಾಜಿಗೆ ಸಮರ್ಪಿಸಲಾಯಿತು. ಜಗತ್ತಿಗೆ ಆಜ್ಞೆ ಕೊಡುವವನ ಆಜ್ಞೆಯಿಂದ ಎಲ್ಲ ಹಿರಿಯ ನಾಯಕರು, ಹಿರಿಯರು ಹಾಗೂ ಉನ್ನತ ದರ್ಜೆಯ ಸರದಾರರು ಜಹರಾಪೂರದ ಚೈತನ್ಯದಾಯಕ ಸಮಾಧಿಯೆಡೆಗೆ ತೆರಳಿದರು. ದೇಶದ ಇತರ ಜನರು ರೀತಿ–ಸಂಪ್ರದಾಯಸ್ಥರು, ಸನ್ಮಾನ್ಯರು, ಹಿರಿ–ಕಿರಿಯರು, ಅತಿ ಶ್ರೇಷ್ಠರು ಹಾಗೂ ಸಂಬಂಧಿಕರು ಶೋಕಾಚರಣೆ ಮಾಡುತ್ತ ನಡೆದರು.

ಇಂತಹ ನಿಯಮ ಮತ್ತು ಆಚರಣೆಗಳನ್ನು ಸೀಜರ್ (ರೋಮ್‌ದ ಚಕ್ರವರ್ತಿ) ಹಾಗೂ ಖಾಖಾನ್ (ಸುಲ್ತಾನ್) ಕನಸಿನಲ್ಲೂ ಕಂಡಿದ್ದರೆ; ಶಾಹ ಪಿರ್ದೋಸನ ವೈಭವ–ಗಾಂಭೀರ್ಯದ ಅಂತಿಮ ಯಾತ್ರೆಯ ದೃಶ್ಯದಿಂದ ನಾಚಿಕೆಪಟ್ಟುಕೊಂಡು, ಲಜ್ಜೆಯ ಬೆವರು ನಿರಂತರವಾಗಿ ಅವರ ಮುಖದಿಂದ ಪತನವಾಗುತ್ತಿತ್ತು.

ಜಹರಾಪೂರ ತಲುಪಿ, ಶಾಹ ಫಿರ್ದೋಸನ ಶವಸಂಸ್ಕಾರ ಮಾಡಿ; ನಗರಕ್ಕೆ ಹಿಂತಿರುಗಿ ಬಂದನಂತರ ಸಂಪೂರ್ಣ ಪ್ರಾಮಾಣಿಕತೆ ಮತ್ತು ವಿಶ್ವಾಸದಿಂದ ಸನ್ನದ್ಧರಾಗಿ; ಆಡಳಿತಗಾರರು ದೇಶದ ಕಾರ್ಯಗಳಲ್ಲಿ ನಿರತರಾದರು.

ಈ ರಾಜಕುಮಾರನು ಬಾದಶಾಹನಾಗುವದರಿಂದ ಸಂಭವಿಸಬಹುದಾದ ಗದ್ದಲ-ಗಲಭೆಯು ನಿಸ್ಸಂದೇಹವಾಗಿಯೂ ಆಗಲಿಲ್ಲ. ಊಹನಾಶಕ್ತಿ, ಭಯ ಮತ್ತು ಗಲಾಟೆಯ ಬದಲು, ಸಂತೋಷದ ವ್ಯವಸ್ಥೆ ಹಾಗೂ ಭೋಗಾಪೇಕ್ಷೆಯ ವಾತಾವರಣವಿತ್ತು. ಹೃದಯಕ್ಕೆ ಮೊದಲಿಗಿಂತಲೂ ಸಾವಿರ ಪಟ್ಟು ಹೆಚ್ಚು ಸಂತೋಷ ಪ್ರಾಪ್ತವಾಯಿತು. ಬಾದಶಾಹ ಗಾಜಿಯ ಸಂಕಲ್ಪವು ಜನರ ಕ್ಷೇಮ, ಕಲ್ಯಾಣ ಮತ್ತು ಶಾಂತಿಯೆಡೆಗೆ ಯಾವಾಗಲೂ ಇತ್ತು. ಜೀವರಾಶಿಗಳ ದುಃಖ-ಚಿಂತೆಯನ್ನು, ಭೋಗ-ವಿಲಾಸದಲ್ಲಿ ಪರಿವರ್ತಿಸಬೇಕೆಂಬುದು, ದೇವರ ಆಪೇಕ್ಷೆ ಆಗಿತ್ತು.

ಜಗತ್ತಿಗೆ ಪ್ರಗತಿ ನೀಡುವಂತಹ ವೈಭವ-ಗಾಂಭೀರ್ಯವು ಹಜರತ್ ಬಾದಶಾಹ ಗಾಜಿಯ ಜಗತ್ತಿನ ಮೇಲೆಆವರಿಸಿತ್ತು. ಎಲ್ಲೆಡೆಗೆ ಸಂತೋಷದ ಗೀತೆಗಳು ಕೇಳಿ ಬರುತ್ತಿದ್ದವು. ವೈಭವ-ವೃಕ್ಷದ ಬೆಳವಣಿಗೆಯು ದುಃಖ-ಚಿಂತೆಯ ಮೇಲೆ ಆಕ್ರಮಣ ಮಾಡಿತ್ತು. ಕೈರೋದ (ಈಜಿಪ್ತಿನ-ರಾಜಧಾನಿ) ವೈರಿಯಂತೆ ತನ್ನ ಸರ್ವಸ್ವವನ್ನು ಕಳೆದುಕೊಂಡು, ವಿನಾಶದ ಮರುಭೂಮಿಯಲ್ಲಿ ಮಾಯವಾಯಿತು. ಸೌಭಾಗ್ಯ ಮತ್ತು ಸಂಪತ್ತಿನ ಮುಖದೆಡೆಗ ಇದ್ದಂತಹ ಆಕಾಶದಂತೆ ನೆರಳು ನೀಡುವ ಸಿಂಹಾಸನದ ಬೆನ್ನಿನ ದಿಕ್ಕು, ಜಗತ್ತನ್ನು ಮುನ್ನಡೆಸುವಂತಹ ಬಾದಶಾಹನ ಸಿಂಹಾಸನಾರೋಹಣದ ಸಂತೋಷದಿಂದ ಸೌಭಾಗ್ಯದ ಸಾಕ್ಷಿಯಂತೆ ಮುಂದೆ ಬಂದು, ಎದೆ ತೆರೆದು ನಿಂತಿತು.

ರಾಜದರ್ಶನದ ಛತ್ರಿಯ ಮಗ್ಗಲಿನ ಮೂಳೆಗಳನ್ನು ಅಗಲಿಕೆಯ ದುಃಖದಿಂದ ವ್ಯಕ್ತವಾಗಿ ಎಣಿಕೆ ಮಾಡಲು ಸಾಧ್ಯವಿತ್ತು. ತಿರುಗುತ್ತಿರುವ ಆಕಾಶವು ಸೂರ್ಯನಂತಹ ಹಣೆಯುಳ್ಳ ಗೊಮ್ಮಟದ ಪ್ರತಿಷ್ಠೆ ಮತ್ತು ಸಾಮರ್ಥ್ಯವನ್ನು ಕಣಗಳ ಸಹಾಯದಿಂದ, ಬುದ್ಧಿವಂತ ಜನರ ಮುಂದೆ ಪ್ರಕಟಗೊಳಿಸುವಂತೆ; ಸಂತೋಷ ಹಾಗೂ ನವೀನತೆಯ ಪ್ರಭಾವದಿಂದ ಈ ಬಗೆಯಲ್ಲಿ ಬೆಳವಣಿಗೆ ಹೊಂದಿವೆ. ನಾಲ್ಕು ಮಹಾಭೂತ್‌ಗಳು ಮತ್ತು ಆರು ದಿಕ್ಕುಗಳನ್ನು ಸಂತುಷ್ಟಗೊಳಿಸಲು; ಅಭಿನಂದನೆಯ ದೊಡ್ಡ ನಗಾರಿಯ ಧ್ವನಿಯು ಎಲ್ಲೆಡೆಗೆ ಪಸರಿಸಿದೆ. ವೈಭವ-ಸಂತೋಷದ ರತ್ನಗಂಬಳಿಯು ವರ್ಣಮಯತೆಯಿಂದ, ಸ್ವರ್ಗದಲ್ಲಿ ಬಂದಿರುವ ನೂತನ ವಸಂತದ ಮಾರ್ಗದಲ್ಲಿ ಬೆಳೆದಿರುವ ಹೊಸ ಹುಲ್ಲಿನಂತೆ ಭೂಮಿಯ ಮೇಲಿನ ದೃಶ್ಯವು ಕಾಣಲಾರಂಭಿಸಿತು.

ಹಸಿರು-ನೀಲಿ ಆಕಾಶದ ಗೊಮ್ಮಟದಲ್ಲಿ ಶುಕ್ರಗ್ರಹದ ಪ್ರಸಿದ್ಧ ವಾದ್ಯದ ಸಂತೋಷ-ಆಸಕ್ತಿಯ ಧ್ವನಿಯು ಕೇಳಿಸುತ್ತದೆ. ದೇವದೂತರ ಜಪಮಾಲೆ ಹಾಗೂ ಗೀತೆ ಹಾಡುವವರ ತಂಬೂರಿಯಲ್ಲಿ ಸಂಬಂಧವು ವ್ಯಕ್ತವಾಗುತ್ತದೆಂದು; ಅದರ ಪ್ರಭಾವದ ಆನಂದದಿಂದ ದೇವದೂತರು ತಿಳಿದುಕೊಂಡಿದ್ದರು. ದೇವದೂತರು ತಮ್ಮ ವಾಸಸ್ಥಳ ಮತ್ತು ಆಸನದಿಂದ ನರ್ತಿಸುತ್ತ ಹೊರಗೆ ಬಂದರು. 'ಲಾ ಇಲಾಹ ಇಲ್ಲಲ್ಲಾಹ್'ದ ಜಪ ಮಾಡುತ್ತ, ಪರಿಶುದ್ಧತೆಯಿಂದ ಹಾಡಲು-ಬಾರಿಸಲು ತೊಡಗಿದರು. ಭೂಮಿಯ ಮೇಲೆ

ವ್ಯಾಪಿಸಿರುವ ಎಲ್ಲ ಜನರು ಸಂತೋಷದ ಧ್ವನಿಯನ್ನು ಕೇಳಿದರು. ಮತ್ತು ವಸಂತಋತು ಆವರಿಸಿತು.

'ಧರ್ಮದ ಪೋಷಣೆ ಮಾಡುವ ಬಾದಶಾಹ ಮೊಹಮ್ಮದಶಾಹ ಗಾಜಿಯ ಆಳ್ವಿಕೆಯಲ್ಲಿ, ಯಶಸ್ಸಿನ ಚಲಿಸುವ ಗಾಳಿಯಿಂದ ಸಂಪೂರ್ಣ ಜಗತ್ತು ಉದ್ಯಾನವಾಯಿತು, ಆತನ ದಾನದ ಪ್ರಭಾವದಿಂದ, ಭಿಕ್ಷೆ ಬೇಡುವ ದಾರಿಯಲ್ಲಿ ಕುಳಿತ ಫಕೀರರಿಗಾಗಿ, ವಸ್ತ್ರದ ಅಂಚಿನಲ್ಲಿ ಇರುವ ಧೂಳಿಯ, ಮುತ್ತುಗಳನ್ನು ಸುರಿಸುವ ಮೋಡವಾಯಿತು. ರಕ್ತ ಸುರಿಸುವ ಆತನ ಖಡ್ಗದ ಭಯದಿಂದ, ಸಾಗರದೊಳಗೆ ಮೊಸಳೆಗಳಿಗಾಗಿ ನೀರನ್ನು ಕವಚವನ್ನಾಗಿ, ಪರಿವರ್ತಿಸಿದಂತಹ ಅದು ತರಂಗವಲ್ಲ, ಆತನ ವೈರಿಗಳ ಪ್ರಯತ್ನಗಳು ಅವರ ಅಂತಸ್ತು ಕಡಿಮೆ ಮಾಡುವುದರ ಹೊರತಾಗಿ ಯಾವುದೇ ಹೆಚ್ಚಳ ಮಾಡುವುದಿಲ್ಲ. ಸೂಜಿಯ ಸಾವಿರಾರು ವಸ್ತ್ರಗಳ ಹೊಲಿಗೆ ಮಾಡಿದರೂ ಸಹ, ಅದು-ನಗ್ನವಾಗಿರುತ್ತದೆ. ಒಂದು ವೇಳೆ, ಜಗತ್ತು ಆತನ ದಾನದ ಒಂದು ಗುಟುಕು ಕುಡಿದರೆ, ಗಣಿಯ ಆಳದಿಂದ ಮಾಣಿಕ್ಯಗಳು ಗುಳ್ಳೆಗಳಂತೆ ಕುದಿದು ಹೊರಬರುತ್ತದೆ, ಜಗತ್ತು ಅಸ್ತಿತ್ವದಲ್ಲಿರುವವರೆಗೆ, ಪ್ರವಾದಿಯ ಧರ್ಮದ ತಳಹದಿಯು ಶಾಶ್ವತವಾಗಿರಲಿ, ಆತನ ದರ್ಗಾದ ನೆರಳಿನಲ್ಲಿ ಆಕಾಶವು ತನ್ನ ಗೃಹವನ್ನು ನಿರ್ಮಿಸಲಿ'.

ಪ್ರವಾದಿತ್ವಕ್ಕೆ ಆಶ್ರಯ ನೀಡುವ ವಂಶದ ಅರಸತ್ವ ವೈಭವ-ಗಾಂಭೀರ್ಯದ ಮತ್ತು ಮಹಿಳೆಯರ ಕಿರೀಟವೆನಿಸಿದ ರಾಣಿಯ ಸ್ಮರಣೆ

ಗೌರವ ಹಾಗೂ ಕೃಪೆಯ ಜಗತ್ತಿನ ದೊರೆಗಳು ಮೊದಲ ಅಂತಸ್ತಿನಲ್ಲಿ ಪ್ರಯತ್ನ ಮತ್ತು ವ್ಯವಸ್ಥೆಗಳ ಹಂತಗಳನ್ನು ಕ್ರಮಿಸಿದ್ದಾರೆ. ೧೦೪೩ ಹಿಜರಿಯಲ್ಲಿ ಅರಸತ್ವದ ವೈಭವ-ಗಾಂಭೀರ್ಯ ಮನೆತನದ, ಪ್ರವಾದಿತ್ವಕ್ಕೆ ಆಶ್ರಯ ನೀಡುವ ವಂಶದ ರಾಣಿ ಆಲಾ ಹಜರತ್ ತಾಜ್ ಸುಲ್ತಾನ್ ಸಾಹೇಬಳಿಗೆ ಕಾಯಿಲೆ ಉಂಟಾಯಿತು. ದಿನದಿಂದ ದಿನಕ್ಕೆ ರೋಗದ ಉಗ್ರತೆಯು ಹೆಚ್ಚಾಗುತ್ತ ಸಾಗಿತು. ಹೊಸ ಜೀವನ ನೀಡುವ ಹಾಗೂ ವಿರಹಿಗಳ ಉರಿಯುತ್ತಿರುವ ಜ್ವರವನ್ನು ಎಲುವಿನಿಂದ ಹೊರಗೆಳೆಯುವಂತಹ ತಜ್ಞರಾದ ವೈದ್ಯರು ರಾಣಿಯ ಚಿಕಿತ್ಸೆಯಲ್ಲಿ ಅಸಫಲತೆಯನ್ನು ವಿನಮ್ರತೆಯಿಂದ ಒಪ್ಪಿಕೊಂಡರು. ಹಜರತ್ ತಾಜುಲ್ ಮಹಜರಾತ್ ಬಿದಿಗೆಯ ಚಂದ್ರನ ರೂಪದಲ್ಲಿ ಅಸ್ವಸ್ಥತೆಯ ಹಾಸಿಗೆಯ ಮೇಲೆ ಮಲಗಿದ್ದಳು. ಸಂಪೂರ್ಣ ದೇಹವು ಜ್ವರದ ತಾಪದಿಂದ ಸೂರ್ಯನಂತೆ ಉರಿಯತೊಡಗಿತ್ತು. ನಾಶಹೊಂದುವ ಜಗತ್ತನ್ನು ನೋಡುವ ಆಸೆಯಿಂದ, ಕಣ್ಣುಗಳನ್ನು ಮುಚ್ಚಿಕೊಂಡು; ಪ್ರಾಣದ ಬೆಲೆಯುಳ್ಳ ಮುತ್ತು, ಮೋಕ್ಷದ ಕಿರೀಟವನ್ನು ಶೃಂಗರಿಸುವದೆಂದು ತಿಳಿದುಕೊಳ್ಳಲಾಗಿತ್ತು. 'ನಿಶ್ಚಯವಾಗಿಯೂ ನಾವು ಅಲ್ಲಾಹನವರು ಮತ್ತು ಅಲ್ಲಾಹನ ಕಡೆಗೆ ಹಿಂದಿರುಗುವವರು', ಎಂಬ ಕುರಾನಿನ ಸೂಕ್ತದ ಧ್ವನಿಯು ಎಲ್ಲೆಡೆಯಿಂದ ಕೇಳಿ ಬರುತ್ತಿತ್ತು.

'ಜಗತ್ತು ಸಂತಾಪದ ಕತ್ತಲೆಯಲ್ಲಿ ಮುಳುಗಿತು, ಸಪ್ತಋಷಿ ಪುಂಜವು ಆಕಾಶದ ಮೃತದೇಹವಾಗಿ ಪರಿಣಮಿಸಿತು'.

ಎದೆಯನ್ನು ಭೇದಿಸುವ ಈ ಘಟನೆಯಿಂದ ನಕ್ಷತ್ರಗಳ ರಾಜನು ಪ್ರಾತಃಕಾಲದ ರೂಪದಲ್ಲಿ ತನ್ನ ಉಡುಪನ್ನು ಹರಿದು, ಕೊರಳ ಪಟ್ಟಿಯನ್ನು ಭೇದಿಸಿದನು. ಜನರ ಗೋಳಾಟದ ಹೆಚ್ಚಳದಿಂದ ದೇವದೂತರ ಕಿವಿಗಳು; ಕಷ್ಟದಲ್ಲಿ ಸಿಲುಕಿದ ಜನರ ಕಣ್ಣುಗಳಂತೆ ರಕ್ತದ ಕಾರಂಜಿಗಳಾಗಿದ್ದವು. ಬಾದಶಾಹನ ದರ್ಬಾರಿನಲ್ಲಿ ಎಲ್ಲ ಪ್ರತಿಷ್ಠಿತರು ಮತ್ತು ಸಜ್ಜನರು ಸಮಾವೇಶಗೊಂಡು; ಮೇಣಬತ್ತಿಯಂತೆ ಅಡಿಯಿಂದ ಮುಡಿಯವರೆಗೆ ಶೋಕದಲ್ಲಿ ಉರಿಯಲಾರಂಭಿಸಿದರು. ಪರದೆಯಲ್ಲಿದ್ದ ಲಜ್ಜಿತ ಮಾನಿನಿಯನ್ನು ಜಗತ್ತಿನ ಕಾಬಾದಂತಹ ಗೌರವಾನ್ವಿತ ಮಕ್ಕಾ ದ್ವಾರದ ಕಡೆಗೆ ಜಹರಾಪೂರದ ಉದ್ಯಾನದಲ್ಲಿ ಶಾಹ ಫಿರ್ದೋಸನ ಸಮಾಧಿಯ ಸಮೀಪ ಪವಿತ್ರವಾದ ಮಣ್ಣಿನಲ್ಲಿ ಸಮರ್ಪಿಸಲಾಯಿತು.

'ವಿಷಯಾಸಕ್ತರಾದ ಕೆಲವು ಜನರ ಹೊರತಾಗಿ, ಜಗತ್ತಿನಲ್ಲಿ ಕಡಿಮೆ ಜನರು ಸಂತೋಷದಿಂದ ಉಸಿರಾಡಿಸಿರಬಹುದು, ದೃಷ್ಟಿಗೆ ಗೋಚರಿಸುವಂತಹದು, ಆಕಾಶ ಗಂಗೆ ಅಲ್ಲ, ಆಕಾಶದ ಎದೆಯಿಂದ ದುಃಖ–ಸೂಚಿಸುವಂತಹದು, ಆಕಾಶ–ಗಂಗೆ ಆಗಿದೆ'.

■

*

ಅಧ್ಯಾಯ - ೭

ಖಾಸ್‌ಖಾನನ ಮೆದುಳಿನಲ್ಲಿ ವಿನಾಶದ ಗಾಳಿ ಬೀಸುವಿಕೆ ಮತ್ತು ಖಾಸ್‌ಖಾನನಿಂದ ನವಾಬ್‌ಖಾನ್ ಬಾಬಾನ ಬಂಧನ ಹಾಗೂ ಬಾದಶಾಹನ ಸೂಚನೆಯ ಮೇರೆಗೆ ನವಾಬ್‌ಖಾನ್-ಬಾಬಾನ ಬಿಡುಗಡೆ

ಭಾಗ್ಯಶಾಲಿ ಜನರು ತಮ್ಮ ಸೌಭಾಗ್ಯಶಾಲಿ ಬಾಹುಗಳ ಸಾಮರ್ಥ್ಯದಿಂದ; ಜಗತ್ತನ್ನು ಬೆಳಗಿಸುವ ಸೂರ್ಯನ ಕೀರ್ತಿಯನ್ನು ಸ್ಪಷ್ಟವಾಗಿ ವಿವರಿಸಿ, ಖಾಸ್‌ಖಾನ್‌ನನ್ನು ವಜಾಗೊಳಿಸಿದರು.

ಬಾದಶಾಹನ ಸಿಂಹಾಸನಾರೋಹಣದ ನಂತರ, ಕೆಲವು ಘಟನೆಗಳು ಶೀಘ್ರಗತಿಯಲ್ಲಿ ಜರುಗಿದವು. ಖಾಸಖಾನನ ಗೌರವ ಮತ್ತು ವೈಭವದ ತಳಹದಿಯು ಕ್ರಮೇಣವಾಗಿ ಕಲ್ಪಿಸಲೂ ಸಹ ಅಸಾಧ್ಯವಾದಂತಹ ಹಂತಕ್ಕೆ ತಲುಪಿತು. ಆತ್ಮ ಪ್ರಶಂಸೆ ಹಾಗೂ ಅಹಂಕಾರದ ಮೊಳೆಯು ಆತನ ಮೆದುಳಿನ ಕಮಾನು ಗೂಡಿನ ಎದುರಿಗೆ ಸ್ವಾರ್ಥದ ಪರದೆಯನ್ನು ಎಳೆದಿತ್ತು. ಎಳೆದಿರುವ ತಂತಿಯ ಮೇಲೆ ಕುಳಿತಿರುವ ಮೊಳೆಯಂತೆ ಆತನ ದೇಹದ ಪ್ರತಿಯೊಂದು ಕೂದಲಿನ ತುದಿಯ ಮೇಲೆ ವಿನಾಶದ ಗಾಳಿಯು ಆಸೀನವಾಗಿತ್ತು.

'ಆತನ ದೇಹದಲ್ಲಿ ಅಹಂಕಾರವು ರಕ್ತವಾಗಿ ಹರಿದಾಡುತ್ತಿತ್ತು, ಆತನು ಆತ್ಮ-ಪ್ರಶಂಸೆಯಿಂದ ಅಹಂಕಾರಿ ಆಗಿದ್ದನು. ಆತನ ಹಾರಾಟವು ಅವನ ಕಣ್ಣುಗಳನ್ನು ಮುಚ್ಚಿಬಿಟ್ಟಿತ್ತು. ಅಹಂಕಾರದ ಕಾಡಿಗೆಯು ಆತನ ಧ್ವನಿಯನ್ನು ಸೆರೆಹಿಡಿದಿತ್ತು'.

ಖಾಸ್‌ಖಾನನ ಖಾಸಗಿ ಲೇಖಕರಲ್ಲಿ ಒಬ್ಬನೆಂದು ಪರಿಗಣಿಸಲ್ಪಟ್ಟಿದ ಮುರವಾರಿ

ಬಹಮ್ಮನನನ್ನು; ಖಾಸ್‌ಖಾನನು 'ಸೇನಾಪತಿ' ಎಂದು ನೇಮಿಸಿದನು. ಸ್ವಾಧೀನಪಡಿಸಿಕೊಂಡಿರುವ ದೇಶಗಳ ಮೇಲ್ವಿಚಾರಕರನ್ನಾಗಿ ಖಾಸ್‌ಖಾನನು ತನ್ನ ಸಂಬಂಧಿಕರನ್ನು ನೇಮಿಸಿದನು. ದೇವರನ್ನು ಆರಾಧಿಸುವವರಿಗಿಂತಲೂ ಹೆಚ್ಚಾಗಿ, ನಾಸ್ತಿಕರಿಗೆ ಸಹಾಯ ಮಾಡಿ; ಅವರಿಗೆ ಆದ್ಯತೆ ನೀಡಿದನು. ಆತನ ಅಯೋಗ್ಯ ಸೋದರನಾದ ಹುಸೇನ್‌ಖಾನ್‌ನಿಗೆ ಪಥಭ್ರಷ್ಟತೆ, ದುರಾಚಾರ, ದಬ್ಬಾಳಿಕೆ ಮತ್ತು ಅನ್ಯಾಯುದ ಸ್ವೇಚ್ಛಾಚಾರಿ ಅಧಿಕಾರವನ್ನು ಕೊಟ್ಟನು. ಚಾರಿತ್ರ್ಯವಿಹೀನನಾದ ಹುಸೇನ್‌ಖಾನನು ದುರಾಚಾರಿಗಳು ಹಾಗೂ ಪುಂಡರೊಂದಿಗೆ ಸೇರಿಕೊಂಡು, ಬೀದಿ ಮತ್ತು ಮಾರುಕಟ್ಟೆಗಳಲ್ಲಿ ಅಸಭ್ಯವಾಗಿ ವರ್ತಿಸುತ್ತ ತಿರುಗಾಡುತ್ತಿದ್ದನು. ಹಿರಿ–ಕಿರಿಯರನ್ನು ವಿನಾಕಾರಣ, ಪೀಡಿಸುತ್ತ ತೊಂದರೆ ಕೊಡುತ್ತಿದ್ದನು.

'ಅವನ ಹೆಸರು ದೋಷಪೂರ್ಣವಾಗಿ ಹುಸೇನ್‌ಖಾನ್ ಆಗಿತ್ತು. ಏಕೆಂದರೆ : ಅವನು ಸಭ್ಯ ಜನರ ಹೆಸರಿನ ಮೇಲಿನ ಕಪ್ಪು ಚುಕ್ಕೆ ಆಗಿದ್ದನು. ಅವನ ಚಾರಿತ್ರ್ಯವು ಪೈಶಾಚಿಕ ಮತ್ತು ಲಕ್ಷಣಗಳು ರಾಕ್ಷಸೀಯ ಆಗಿದ್ದವು. ಆತನು ನಿರ್ದಯಿ ಬಲಾತ್ಕಾರಿ ಮತ್ತು ಹಿಂಸಾಚಾರಿ ಆಗಿದ್ದನು. ಹಗಲು–ರಾತ್ರಿ ಜಗಳದ ಹೊರತಾಗಿ, ಆತನಿಗೆ ಯಾವುದೇ ಕೆಲಸವಿರಲಿಲ್ಲ. ಒಂದು ಕ್ಷಣವೂ ಸಹ ಇಂತಹ ಕೆಲಸಗಳಿಂದ ವಿಶ್ರಾಂತಿ ಹೊಂದುತ್ತಿರಲಿಲ್ಲ. ಆತನ ವಸ್ತ್ರದ ಅಂಚಿನ ಮೇಲೆ ಪಾಪ ಕಾರ್ಯದ ಧೂಳಿ ಇತ್ತು. ಆತನ ಕೊರಳಿನಲ್ಲಿ ಅಪರಾಧಗಳ ಕಂಠ–ಕಡಗವಿತ್ತು. ಆತನ ದೇಹದ ಕೂದಲುಗಳು ಚೇಳಿನ ಕೊಂಡಿ ಆಗಿದ್ದವು. ಆತನ ಉಡುಪಿನ ದಾರಗಳು ಹಾವುಗಳಾಗಿದ್ದವು'.

ಆನರ ಮೇಲೆ ದಬ್ಬಾಳಿಕೆ ಹಾಗೂ ಪೀಡನೆ ಮಾಡದಿರುವಂತೆ ಖಾಸ್‌ಖಾನನು ತನ್ನ ಸೋದರನನ್ನು ನಿಯಂತ್ರಿಸುತ್ತಿರಲಿಲ್ಲ. ಆತನು ನಿರ್ದಯಿ ಮುರವಾರಿಯನ್ನು ತನ್ನ ತಂದೆಯ ಸಮಾನನೆಂದು; ಪರಿಗಣಿಸಿದ್ದನು. ಸಾಮ್ರಾಜ್ಯದ ಮಹಾತ್ಕಾರ್ಯ ಮತ್ತು ವ್ಯವಹಾರಗಳಲ್ಲಿ ಮುರವಾರಿಯ ಅರ್ಥವಿಹೀನವಾದ ನುಡಿಗಳನ್ನು ಅನುಷ್ಠಾನಗೊಳಿಸಲು ಪ್ರಯತ್ನಿಸುತ್ತಿದ್ದನು. ಇದೇ ಪ್ರಕಾರ, ಸುಮಾರು ನಾಲ್ಕು ವರ್ಷಗಳು ಗತಿಸಿದವು. ಎಲ್ಲಿಯವರೆಗೆ ನವಾಬ್‌ಖಾನ್ ಬಾಬಾ ತಮ್ಮ ನಡುವೆ ಇರುವನೋ, ಅಲ್ಲಿಯ ತನಕ ಜನರ ದೃಷ್ಟಿಯಲ್ಲಿ ತಮಗೆ ಗೌರವ/ಘನತೆ ದೊರಕುವುದಿಲ್ಲ. ಆದುದರಿಂದ ನವಾಬ್‌ಖಾನ್ ಬಾಬಾನನ್ನು ಬಂಧಿಸುವದರಲ್ಲಿಯೇ ಬುದ್ಧಿವಂತಿಕೆ ಇದೆ. ಹೊಸ ಅರ್ಥ ವ್ಯವಸ್ಥೆಯ ತಳಹದಿಯನ್ನು ಸುದೃಢಗೊಳಿಸಲು, ಸಾಮ್ರಾಜ್ಯದ ಕಾರ್ಯಗಳು ಮುದ್ರೆಯನ್ನು ತನಗೆ ಸಮರ್ಪಿಸಬೇಕೆಂದು; ಮುರವಾರಿ ಬಹಮ್ಮನನು, ಖಾಸ್‌ಖಾನನಿಗೆ ತಿಳಿಸಿದನು. ಖಾಸ್‌ಖಾನನು ಮುರವಾರಿಯ ವಂಚಕ ನುಡಿಗಳನ್ನು ಅನುಸರಿಸಿ ಕ್ರೂರವಾದ ಮಾರ್ಗದಲ್ಲಿ ಪಾದಾರ್ಪಣೆ ಮಾಡಿದನು. ನವಾಬ್ ಖಾನ್‌ಬಾಬಾನಿಗೆ ಮಾಡಿದ ವಾಗ್ದಾನವನ್ನು ಖಾಸ್‌ಖಾನನು ಭಗ್ನಗೊಳಿಸಿದನು. ಸಾಮ್ರಾಜ್ಯದ ವ್ಯವಹಾರಗಳ ಮುದ್ರೆಯನ್ನು ಯಾಚಿಸಲು ತನ್ನ ಮಹಲ್ದಾರನನ್ನು (ಅರಮನೆಯ ಕಾವಲುಗಾರ) ನವಾಬ್‌ಖಾನ್ ಬಾಬಾನ ಬಳಿಗೆ ಕಳುಹಿಸಿದನು.

ಖಾಸಖಾನನೂ ಹಣಕಾಸು ಮಂತ್ರಿ ಆಗಿರದಿದ್ದರೂ ಸಹ; ಬಾದಶಾಹನ ಅನುಮತಿ ಇಲ್ಲದೇ ಸಾಮ್ರಾಜ್ಯದ ಕಾರ್ಯಗಳಿಗಾಗಿ ಮುದ್ರೆಯನ್ನು ಯಾಚಿಸುತ್ತಾನೆಂಬುದನ್ನು ತಿಳಿದುಕೊಂಡು ಲಜ್ಜೆ ಮತ್ತು ಮತ್ಸರದಿಂದ ನವಾಬ್‌ಖಾನ್‌ಬಾಬಾನು ಅಂತಹ ಯಾಚನೆಗೆ ಮನ್ನಣೆ ನೀಡಲಿಲ್ಲ. ಖಾಸ್‌ಖಾನನು ದಂಗೆ/ಹಿಂಸಾಚಾರ ಹರಡಲು ಅವಕಾಶ ಹುಡುಕುತ್ತಿದ್ದಾಗ; ಇದೇ ನೆಪದಲ್ಲಿ ವಿರೋಧವನ್ನು ಆರಂಭಿಸಿದನು. ಮುರವಾರಿಯನ್ನು ಸೈನ್ಯದೊಂದಿಗೆ ಸಜ್ಜುಗೊಳಿಸಿ, ನವಾಬ್‌ಖಾನ್ ಬಾಬಾನ ಮೇಲೆ ಆಕ್ರಮಣ ಮಾಡಲು ನೇಮಿಸಿದ್ದನು. ಮುರವಾರಿಯು ಆಗಮಿಸುವ ಸಮಾಚಾರ ಖ್ಯಾತನಾಗಿದ್ದ ನವಾಬ್‌ಖಾನಬಾಬಾನಿಗೆ ತಿಳಿದಾಗ ಮುರವಾರಿಯನ್ನು ಎದುರಿಸಲು ಯುದ್ಧಕ್ಕಾಗಿ ಅನುಭವಸ್ಥರಾದ ಸೈನಿಕರಿಗೆ ಉತ್ತೇಜನ ನೀಡಿದನು.

ಎರಡೂ ಕಡೆಗಳಿಂದ ಪ್ರತಿಕಾರದ ಅಗ್ನಿಯು ನೀಲಾಕಾಶದವರೆಗೆ ಜ್ವಾಲೆಗಳನ್ನು ಹರಡಿತು. ಮುಂಜಾನೆಯಿಂದ ಸಾಯಂಕಾಲದವರೆಗೆ ಯುದ್ಧ ಮಾಡುತ್ತ ಮುರವಾರಿಯು ನವಾಬ್‌ಖಾನ್‌ಬಾಬಾನ ಮನೆಯ ಆಸುಪಾಸು ತಿರುಗುತ್ತಿದ್ದನು. ಖಾಸ್‌ಖಾನನು ಕೋಟೆಯ ವಠಾರದ ಗೊಮ್ಮಟದ ಛಾವಣಿಯಿಂದ ನವಾಬ್‌ಖಾನನ ಮನೆಯ ಮೇಲೆ ಗುಂಡಿನ ಮಳೆ ಸುರಿಸುತ್ತಿದ್ದನು. ನವಾಬ್‌ಖಾನ್‌ಬಾಬಾನಿಗೆ ಹಜರತ್ ಬಾದಶಾಹ ಗಾಜಿಯೊಂದಿಗೆ ಸತ್ಯ ಮತ್ತು ಶ್ರದ್ಧೆ ಇದ್ದರೂ ಸಹ; ನವಾಬ್‌ಖಾನನಿಗೆ ಈ ಗಂಡಾಂತರಕಾರಿ ಬೆಂಕಿಯಿಂದ ಬಿಡುಗಡೆ ಸಿಗಲಿಲ್ಲ. ಇದೇ ಪ್ರಕಾರ ಗದ್ದಲ-ಕೋಲಾಹಲದೊಂದಿಗೆ ಏಳು ದಿನಗಳು ಗತಿಸಿದವು. ಎಂಟನೆಯ ದಿನ ಖಾಸ್‌ಖಾನನು ದುಃಖ/ಕ್ರೋಧದಿಂದ ಹಾವಿನಂತೆ ಕಳವಳಗೊಂಡು ಗಾಯಗೊಂಡ ಮೃತವ್ಯಕ್ತಿಯಂತೆ ಚೇಳಿನ ಆಜ್ಞಾಪಾಲಕರ ಜೊತೆಗೆ ತನ್ನ ಹೆಜ್ಜೆಗಳನ್ನು ಕೋಟೆಯಿಂದ ಹೊರಗೆ ಹಾಕಿದನು. ಅವನು ನವಾಬ್‌ಖಾನಬಾಬಾನನ್ನು ಸೆರೆಹಿಡಿಯಲು ಹಜರತ್ ಬಾದಶಾಹ ಗಾಜಿಯ ಖಾಸಗಿ ಸೈನ್ಯವನ್ನು ಮುರವಾರಿಯ ಜೊತೆಗೆ ಕಳುಹಿಸಿದನು.

ಅತ್ಯುತ್ತಮ ಶ್ರೇಣಿಯ ನವಾಬನಿಗೆ ಖಾಸಗಿ ಸೈನ್ಯದ ಆಗಮನದ ಸಮಾಚಾರ ತಿಳಿದಾಗ, ಪರಾಕ್ರಮದಿಂದ ಯುದ್ಧ ಮಾಡುವಂತಹ ತನ್ನ ವೀರ ಸೈನಿಕರು ಯುದ್ಧ ಮಾಡದಿರುವಂತೆ ಅವನು ನಿರ್ಬಂಧಿಸಿದನು. ಖಾಸ್‌ಖಾನನು-ಬಾದಶಾಹನ ಖಾಸಗಿ ಸೈನ್ಯವನ್ನು ತಮ್ಮೆಡೆಗೆ ಕಳುಹಿಸಿದ್ದಾನೆ ಇಂತಹ ಪರಿಸ್ಥಿತಿಯಲ್ಲಿ ಯುದ್ಧ ಮಾಡಿದರೆ, ಆಕಾಶದಂತಹ ದರ್ಬಾರಿಗೆ ದ್ರೋಹಮಾಡಿದಂತಾಗುತ್ತದೆಯೆಂದು; ನವಾಬ್‌ಖಾನ್ ಬಾಬಾನು ಅಸದ್‌ಖಾನನಿಗೆ ತಿಳಿಸಿದನು. ಅಸದ್‌ಖಾನನು ಯುದ್ಧವನ್ನು ತಡೆಗಟ್ಟಿದಾಗ; ತನಗೆ ಉತ್ತಮ ಅವಕಾಶ ದೊರಕಿತೆಂದು ಭಾವಿಸಿ ಮುರವಾರಿಯು ನವಾಬ್‌ಖಾನ್‌ಬಾಬಾನ ಮನೆಯ ಕಡೆಗೆ ಸಾಗಿದನು. ಆ ಅನುಪಮವಾದ ಮನೆಯ ಮೇಲೆ ತೋಪು ಮತ್ತು ಬಂದೂಕಿನಿಂದ ಆಕ್ರಮಣ ಮಾಡಿ;ಅದನ್ನು ಅಗ್ನಿಯ ಗೃಹವನ್ನಾಗಿ ಮಾಡಿದನು. ನಾಲ್ಕೂ ದಿಕ್ಕುಗಳಿಂದ ಮನೆಯನ್ನು ಭಗ್ನಗೊಳಿಸಿ

ನವಾಬ್‌ಖಾನ್‌ಬಾಬಾ, ಅಸದ್‌ಖಾನ್ ಹಾಗೂ ಮಿರ್ಜಾ ನೂರುದ್ದೀನ ಮಹಮ್ಮದನನ್ನು ಸೆರೆಹಿಡಿದು ವಠಾರದಲ್ಲಿ ಮೇಲ್ವಿಚಾರಕನ ಸ್ವಾಧೀನದಲ್ಲಿ ಇಡಲಾಯಿತು. ಮೂರು ದಿನಗಳ ನಂತರ ಅವರನ್ನು ಪಲ್ಕಾನೂಹ್ ಕೋಟೆಗೆ ಕಳುಹಿಸಿ, ಕೈದಿಗಳನ್ನಾಗಿ ಮಾಡಲಾಯಿತು.

'ಬುದ್ಧಿವಂತಿಕೆಯ ಕಾರ್ಯದ ವಾಗ್ದಾನವನ್ನು ಕಾರ್ಯಗತಗೊಳಿಸಲು ತಲುಪಿದಾಗ, ಅಕಸ್ಮಾತಾಗಿ ಉಡುಪಿನ ಗಂಟು ಅವನನ್ನು ಸೆರೆಹಿಡಿಯಿತು. ಸಂಕುಚಿತ ಹೃದಯ ಹೊಂದಿದ ಕಾರಣದಿಂದ ದೇಹದಲ್ಲಿ ಪ್ರಾಣ ತುಂಬದಾಯಿತು. ಪ್ರತಿಯೊಂದು ಕೂದಲಿನ ಬೇರು, ಸೆರೆಮನೆಯ ಕೊಠಡಿಯಂತೆ ಕಾಣಲಾರಂಭಿಸಿತು. ಪ್ರಯತ್ನದ ಮಾರ್ಗದಲ್ಲಿ ಹೆಜ್ಜೆ ಇಟ್ಟ ತಕ್ಷಣ. ತನ್ನದೇ ಉಡುಪಿನ ದೆಸೆಯಿಂದ ಹೊಂಡದಲ್ಲಿ ಬಿದ್ದನು. ಉಕ್ಕಿನ ಪರ್ವತವಾಗಿದ್ದರೆ, ತನ್ನ ಸ್ಥಾನದಿಂದ ಮೇಲೇಳುತ್ತಿತ್ತು. ತನ್ನ ಪಾದಗಳಿಂದ ತನ್ನದೇ ಪಾದಗಳ ಚಿನ್ಹೆಯನ್ನು ನಾಶಗೊಳಿಸಿದನು'.

ನವಾಬ್‌ಖಾನ್ ಬಾಬಾನನ್ನು ಸೆರೆಹಿಡಿದು ಖಾಸ್‌ಖಾನನು ಅಪಾರ ಗರ್ವಹೊಂದಿದ್ದನು. ಧರ್ಮಬಾಹಿರ ಕಾರ್ಯಮಾಡಿದ ದೆಸೆಯಿಂದ, ಆತನ ತಲೆಯಲ್ಲಿ ಕೋಲಾಹಲ ಉಂಟಾಯಿತು. ಅವನು ತನ್ನ ಕಾರ್ಯವನ್ನು ಸ್ಥಿರಗೊಳಿಸಲು, ಬಾದಶಾಹನ ದರ್ಬಾರಿನ ಹಲವಾರು ನಂಬಿಗಸ್ತರನ್ನು ಬಾದಶಾಹನ ಸೇವೆಯಿಂದ ಪದಚ್ಯುತಿಗೊಳಿಸಿ; ಅವರ ಸ್ಥಾನಗಳಲ್ಲಿ ತನ್ನ ಆಜ್ಞೆಪಾಲಿಸುವ ವ್ಯಕ್ತಿಗಳನ್ನು ನೇಮಿಸುತ್ತಿದ್ದನು. ಅವಿಧೇಯತೆ ಮತ್ತು ದ್ವೇಷದ ಧ್ವಜವನ್ನು ಹಾರಿಸಿ; ಪಾಪದ ಕಾರ್ಯ ಮಾಡಲಾರಂಭಿಸಿದನು. ಖಾಸ್‌ಖಾನನ ಕ್ರೌರ್ಯದ ಸಮಾಚಾರವು ಹೊರಗಿನ ದೇಶಗಳನ್ನು ತಲುಪಿದಾಗ, ಅಲ್ಲಿಯ ಮಂತ್ರಿಗಳು ಹಾಗೂ ನಾಗರಿಕರು ಹಜರತ್ ಬಾದಶಾಹ ಗಾಜಿಗೆ ಮುನ್ನೆಚ್ಚರಿಕೆ ಕೊಡಲಾರಂಭಿಸಿದರು. ಅವರು ಖಾಸ್‌ಖಾನನ ಕ್ರೌರ್ಯದ ಒತ್ತಡದ ಬಗೆಗೆ, ಏಕಾಭಿಪ್ರಾಯ ಹೊಂದಲು ಬಾದಶಾಹ ಗಾಜಿಯನ್ನು ಪ್ರೇರೇಪಿಸಿ; ನಗರದ ಕಡೆಗೆ ಲಕ್ಷ್ಯವಿಡಲು ಗಮನ ಸೆಳೆದರು.

ಖಾಸ್‌ಖಾನನು ತನ್ನ ಒಳಿತಿನ ಯಾವುದೇ ಆಸೆ ಕಾಣದಿರುವಾಗ; ಹೆದರಿಕೆಯಿಂದ ಚಿಂತಾಗ್ರಸ್ತನಾದನು. ಅವನು ಅವಿಧೇಯತೆಯ ಮಾರ್ಗದಲ್ಲಿ ನಡೆದು, ಕೋಟೆಯನ್ನು ಮೊಗಲರಿಗೆ ಸಮರ್ಪಿಸಲು; ಶೇಖ್ ದಬೀರನನ್ನು ಗುಪ್ತವಾಗಿ ಶಹಾಜಹಾನನ ಬಳಿಗೆ ಕಳುಹಿಸಿದನು. ಈಗಾಗಲೇ ಉಲ್ಲೇಖಿಸಿದ ಮಂತ್ರಿಗಳು ನಡೆಸಿದ ಕೋಲಾಹಲವನ್ನು ನಿಯಂತ್ರಿಸಲು ಮುರವಾರಿಯನ್ನು ತನ್ನ ಸೈನ್ಯದೊಂದಿಗೆ ಶೀಘ್ರವಾಗಿ ಕಳುಹಿಸಿದನು. ಅಷ್ಟರಲ್ಲಿಯೇ ರುಸ್ತುಮೆ ಜಮಾ ಅಪಾರ ಸೈನ್ಯದೊಂದಿಗೆ ನಗರದ ಸಮೀಪ ತಲುಪಿದನು. ಖಾಸ್‌ಖಾನನು ಸುದೃಢವಾದ ಕೋಟೆಯ ಆವರಣದ ದ್ವಾರಗಳನ್ನು ತೆರೆದಾಗ; ವಿರೋಧದ ಬೆಂಕಿಯು ಪ್ರಜ್ವಲಿಸಿತು. ರುಸ್ತುಮೆ ಜಮಾನು

ವಿರೋಧದ ಬೆಂಕಿಯನ್ನು ನಂದಿಸಲು ಸಾಕಷ್ಟು ಪ್ರಯತ್ನಿಸಿದನು. ಸಾಮ್ರಾಜ್ಯದ ಕೆಲವು ಆಸ್ಥಾನಿಕರನ್ನು ಅವರ ಮನೆಗಳ ಹೊರಗೆ ಸೆರೆಹಿಡಿಯಲಾಗಿದೆ. ಅವರು ಮೊದಲಿನಿಂದಲೂ ಇಲ್ಲಿಯವರೆಗೆ ದಂಗೆಯನ್ನು ಸ್ಥಗಿತಗೊಳಿಸಲು ಪ್ರಯತ್ನಿಸಿಲ್ಲವೆಂದು ಸಲಹೆಯ ರೂಪದಲ್ಲಿ ಡಂಗುರ ಸಾರಲಾಯಿತು.

ಖಾಸ್‌ಖಾನನನ್ನು ಜೀವಂತವಾಗಿರಲು ಬಿಟ್ಟರೆ, ಜಗತ್ತು ಮತ್ತು ಜಗತ್ತಿನ ಜನರನ್ನು ಭಯದಲ್ಲಿ ಮುಳುಗಿಸಿದಂತಾಗುತ್ತದೆಂದು ಹಜರತ್ ಬಾದಶಾಹ ಗಾಜಿಯು ತಿಳಿದುಕೊಂಡನು. 'ಖಾನೆಖಾನಾನಿ' ಮತ್ತು 'ಖಾನ್‌ಮೊಹಮ್ಮದ-ಮೊಹಮ್ಮದ ಶಾಹಿ' ಎಂಬ ಅತ್ಯುನ್ನತ ಬಿರುದಿನಿಂದ ಸನ್ಮಾನಿತನಾಗಿ ಕೀರ್ತಿಶಾಲಿ ಆಗಿದ್ದ, ಆಗಿನ ಕಾಲದಲ್ಲಿ ಸಂದೇಶ ವಾಹಕರ ನಾಯಕನೆಂದು ಪ್ರಸಿದ್ಧನಾಗಿದ್ದ ವಿಜಯಶಾಲಿ ಇಖ್ಲಾಸ್‌ಖಾನನನ್ನು ಬಾದಶಾಹ ಗಾಜಿಯು ತನ್ನ ಸನ್ನಿಧಿಗೆ ಕರೆಕಳುಹಿಸಿದನು. ಸಂಭಾಷಣೆ ಮಾಡುತ್ತ ಆತನು ನುಡಿದನು. ಜೀವನದ ಭಂಡಾರದಲ್ಲಿ ಬಿಡುವಿನ ನಗದು ಇರುವವರೆಗೆ ನಮ್ಮ ಕಾರ್ಯವನ್ನು ಮಾಡಬೇಕು.

ಖಾನ್ ಮೊಹಮ್ಮದ ಮೊಹಮ್ಮದ ಶಾಹಿಯು, ಬಾದಶಾಹನ ಇಂಗಿತಾರ್ಥವನ್ನು ತಿಳಿದು; ಅಪಾರ ಸಂತೋಷ ಹೊಂದಿದನು. ಆತನು ಖಾಸ್‌ಖಾನನನ್ನು ವಜಾಗೊಳಿಸಲು ನಿರ್ಧರಿಸಿದನು. 'ಕರೀಮ್ ಶರ್ಜಾಹ್' ಎಂಬ ಬಿರುದಿನಿಂದ ಖ್ಯಾತನಾಗಿದ್ದ ಕರೀಮ್‌ಮಹಲ್ದಾರ್ ಹಾಗೂ ಮಿಯಾಜಿ ಸರ್‌ಶುಲ್ಕ್‌ನ ಪುತ್ರನಾದ ಹಸನ್‌ಖಾನ್ ಇವರಿಬ್ಬರೊಂದಿಗೆ; ಖಾಸ್‌ಖಾನ್‌ನನ್ನು ಕೊಲ್ಲುವದರ ಬಗೆಗೆ ಚರ್ಚಿಸಿ, ಹಜರತ್ ಬಾದಶಾಹ ಗಾಜಿಯ ಇಂಗಿತಾರ್ಥವನ್ನು ಅವರಿಗೆ ತಿಳಿಸಿದನು ಮತ್ತು ವಾಗ್ದಾನದ ಕರಾರುಗಳನ್ನು ವಿವರಿಸಿದನು. ಬಾದಶಾಹ ಗಾಜಿಯ ಸಂಕೇತದ ಅನುಸಾರವಾಗಿ; ಕರೀಮ್‌ಶರ್ಜಾಹ್ ಹಾಗೂ ಹಸನ್‌ಖಾನನನ್ನು ಕ್ರೂರನಾದ ಖಾಸ್‌ಖಾನನನ್ನು ಕೊಲ್ಲಲು ನೇಮಿಸಿದನು.

ಅವರು ೧೦೩೮ ಹಿಜರಿಯ ಬುಧವಾರದಂದು ಖಾಸ್‌ಖಾನನನ್ನು ಕೊಲ್ಲಲು ದರ್ಬಾರಿಗೆ ಬಂದು, ಅವಕಾಶದ ನಿರೀಕ್ಷಣೆಯಲ್ಲಿ ಕುಳಿತುಕೊಂಡರು. ಅಷ್ಟರಲ್ಲಿಯೇ ತನ್ನ ಕಾರ್ಯಕ್ಕಾಗಿ ಹಜರತ್ ಬಾದಶಾಹ ಗಾಜಿಯ ದರ್ಬಾರಿಗೆ ತೆರಳಿದ್ದ ಖಾಸ್‌ಖಾನನು ಹೊರಗೆ ಬಂದು; ತನ್ನ ಮನೆಯ ಕಡೆಗೆ ಹೋಗಲಾರಂಭಿಸಿದನು. ಒಮ್ಮಿಂದೊಮ್ಮೆಲೆ ಜಿಂಕೆಯ ಮೇಲೆ ಹುಲಿಯು ದಾಳಿ ಮಾಡುವಂತೆ ಅಥವಾ ಹೆಗ್ಗಿಡಗವು ಒಂದು ಸಣ್ಣ ಪಕ್ಷಿಯ ಮೇಲೆ ಆಕ್ರಮಣ ಮಾಡುವಂತೆ ಕರೀಮ್-ಶರ್ಜಾಹ್‌ನು ದ್ವೇಷ ತುಂಬಿದ ಖಾಸ್‌ಖಾನನ ಎದೆಯ ಮೇಲೆ ಕಠಾರಿಯಿಂದ ದಾಳಿ ಮಾಡಿದನು. ಖಾಸ್‌ಖಾನನು ನೋಡುವಷ್ಟರಲ್ಲಿಯೇ, ಅವನು ಕಣ್ಮರೆಯಾದನು. ದಾರಿಯು ನಿರಾತಂಕವಾಗಿರುವದನ್ನು ಕಂಡಂತಹ ಮಿಯಾಜಿ ಸರ್‌ಶುಲ್ಕ್‌ನ ಪುತ್ರನು;

ಧೈರ್ಯದಿಂದ ಇನ್ನೊಂದು ದೊಡ್ಡ ಗಾಯವನ್ನು ಮಾಡಿದನು. ಇಂತಹ ಪ್ರಬಲವಾದ ಗಾಯದ ನಂತರವೂ ಸಹ ದುರ್ದೈವಿಯಾದ ಖಾಸ್‌ಖಾನನು ಗಾಬರಿಗೊಂಡು ತನ್ನ ಮನೆಯ ಕಡೆಗೆ ನಡೆದನು.

ಇಂತಹ ಪರಿಸ್ಥಿತಿಯನ್ನು ಕಂಡು, ಖಾನ್ ಮೊಹಮ್ಮದ್ ಮೊಹಮ್ಮದ್ ಶಾಹಿಗೆ ಸಂಶಯ ಉಂಟಾಯಿತು. ಒಂದು ವೇಳೆ, ಖಾಸ್‌ಖಾನನು ಜೀವಂತವಾಗಿ ಉಳಿದರೆ, ಸಾವಿರಾರು ಗೊಂದಲಗಳು ಉದ್ಭವಿಸುವವೆಂದು ಭಾವಿಸಿ. ಅವನು ಧೈರ್ಯ ಮತ್ತು ಪೌರುಷದಿಂದ ಕಿರುದಾರಿಯಿಂದ ಹೊರಗೆ ಹೋಗಿ, ಖಾಸ್‌ಖಾನನನ್ನು ಹಿಡಿದುಕೊಂಡು; ವಠಾರದ ಒಳಗೆ ಬಂದನು. ಜಗತ್ತಿಗೆ ಆಜ್ಞೆ ನೀಡುವವನ ಆಜ್ಞೆಯಿಂದ ಖಾಸ್‌ಖಾನನ ಮನೆಯ ಗೋಡೆಯ ಒಳಗೆ, ಅವನ ಭಗ್ನವಾದ ಶಿರವನ್ನು ದೇಹದಿಂದ ಬೇರ್ಪಡಿಸಿದನು.

ದುರ್ದೈವಿ ಪುತ್ರನಾದ ಮುಬಾರಕ್‌ಖಾನನನ್ನು, ಹಸನಖಾನನು ತನ್ನೊಂದಿಗೆ ಆನೆಯ ಮೇಲೆ ಕುಳ್ಳಿರಿಸಿಕೊಂಡು; ಕಂದಕದ ಕಡೆಗೆ ಕರೆತಂದು, ಅವನನ್ನು ಮಣ್ಣುಗೂಡಿಸಿದನು. ಜಗತ್ತಿನ ಬಂಡುಕೋರರಿಗೆ ಎಚ್ಚರಿಕೆ ಕೊಡಲು ಖಾಸ್‌ಖಾನ್ ಮತ್ತು ಮುಬಾರಕ್‌ಖಾನನ ಶಿರಗಳನ್ನು ಬುಟ್ಟಿಯಲ್ಲಿಟ್ಟು ರುಸ್ತುಮೆ ಜಮಾನನ ಬಳಿಗೆ ಕಳುಹಿಸಿದನು.

'ಸ್ವಯಂ ಆಡಂಬರಕ್ಕಾಗಿ ತಲೆಯೆತ್ತುವ ಪ್ರತಿಯೊಂದು ತೆನೆಯ ಶಿರವನ್ನು, ರೈತನು ಕತ್ತರಿಸಿ, ಭೂಮಿಯ ಮೇಲೆ ಎಸೆಯುತ್ತಾನೆ. ತನ್ನ ಕೊಡುಗೆಗಳನ್ನು ಗುರುತಿಸಲು ಅಸಮರ್ಥನಾದ ವ್ಯಕ್ತಿಗೆ, ಆತನ ಭಿಕ್ಷಾಪಾತ್ರೆಯಾಗಿ, ಕಪ್ಪು ಮಣ್ಣಿನ ಹೊರತಾಗಿ ಏನೂ ಕಾಣುವದಿಲ್ಲ'.

ಹಸನ್‌ಖಾನನ ಸೋದರನಾದ ದಾವೂದಖಾನನು, ಹಜರತ್ ಬಾದಶಾಹ ಗಾಜಿಯನ್ನು ಯಾವಾಗಲೂ ಸತ್ಯವಾದ ಹೃದಯ ಮತ್ತು ಶುದ್ಧವಾದ ಮನಸ್ಸಿನಿಂದ ಅರಾಧಿಸುತ್ತಿದ್ದನು. ಅವನು ಖಾಸ್‌ಖಾನನನ್ನು ಬರಗಾಲದ ಆಪತ್ತಿನಿಂದ ರಕ್ಷಿಸಿದ್ದನು. ಮಳೆಯು ಇನ್ನೂ ಸುರಿಯದಿದ್ದರೂ ಸಹ; ಜನರ ನಿರೀಕ್ಷೆಯನ್ನು ಹಚ್ಚಹಸಿರು ಹಾಗೂ ನವೀನಗೊಳಿಸಿತ್ತು. ಅರಳಿದ ಹೃದಯಗಳ ಜಗತ್ತಿನ ಜನರ ಬೈತಲೆಯ ಮೇಲೆ ಮುತ್ತು ಸುರಿಯುವ ಮೋಡವು, ನೀಲಿರೇಷ್ಮೆಯ ಚಪ್ಪರವನ್ನು ಹರಡಿತ್ತು. ಸ್ಥಿರತೆಯ ಸಿಂಹಾಸನದ ಮೇಲೆ, ಸಾಮ್ರಾಜ್ಯದ ವೈಭವ ಗಾಂಭಿರ್ಯದೊಂದಿಗೆ, ಹಜರತ್ ಬಾದಶಾಹ ಗಾಜಿಯು ಆಸೀನನಾಗಿ, ಜಗತ್ತಿನ ಜನರ ಸಂತೋಷಕ್ಕಾಗಿ ಸೌಭಾಗ್ಯದ ಬಟ್ಟಲನ್ನು ವಿತರಿಸುತ್ತಿದ್ದನು. ಭಾಗ್ಯಶಾಲಿ ಛತ್ರಿಯ ನೆರಳಿನಲ್ಲಿ ಧರ್ಮ ಮತ್ತು ಸಂಪತ್ತಿನ ಉದ್ಯಾನದ ವಾಯುಸೇವನೆ ಮಾಡುವವರಿಗೆ, ಶಾಶ್ವತವಾದ ಸಂಪತ್ತಿನ ಸೌಭಾಗ್ಯದಿಂದ ವೈಭವ-ಗಾಂಭೀರ್ಯದ ಔನ್ನತ್ಯದ ಮೇಲೆ ಇರುವಂತಹ

'ಹುಮಾ' ಪಕ್ಷಿಯನ್ನಾಗಿ ಮಾಡಲಾಗಿತ್ತು. ಬಾದಶಾಹ ಗಾಜಿಯು ಅನೇಕ ಪ್ರಕಾರದ ಶುಭದಾಯಕ ಫಲಿತಾಂಶಗಳಿಂದ ಇತರ ಮಂತ್ರಿಗಳು ಹಾಗೂ ಅಧಿಕಾರಿಗಳಿಗೆ ಗೌರವ ಮತ್ತು ಬೆಡಗು ನೀಡಿದ್ದನು.

ಮುಜಫರುದ್ದೀನ ಖಾನ್ ಮೊಹಮ್ಮದನು ಮಂತ್ರಿ ಪದವಿಯನ್ನು ಹೊಂದಿ ಸಾಮ್ರಾಜ್ಯದ ಆಡಳಿತಾಧಿಕಾರ ವ್ಯಾಪ್ತಿಯ ಮಾಹಿತಿ ಪಡೆದನು. ನವಾಬ್‌ಖಾನ ಬಾಬಾನಿಗೆ ದೇಶದ ವ್ಯವಹಾರಗಳ ಹುದ್ದೆಯನ್ನು ನೀಡಲಾಯಿತು. ಅತಿಶ್ರೇಷ್ಠನಾದ ಅಹಮ್ಮದ ಖಾನನನ್ನು ಕಾವಲುಗಾರರ ಮುಖ್ಯಸ್ಥನನ್ನಾಗಿ ನೇಮಿಸಲಾಯಿತು. ಬಾದಶಾಹನ ನಿಕಟವರ್ತಿಗಳಲ್ಲಿ ಪ್ರತಿಯೊಬ್ಬರಿಗೆ, ಅವರ ಸೇವೆಗೆ ಅನುಸಾರವಾಗಿ ಗೌರವಾದರ ವಸ್ತ್ರಗಳನ್ನು ನೀಡಲಾಯಿತು. ಸಾಮ್ರಾಜ್ಯದ ಮಹತ್ಕಾರ್ಯ ಹಾಗೂ ಆಡಳಿತೆಯ ವ್ಯವಹಾರಗಳು ಅತ್ಯುತ್ತಮವಾಗಿ ಸಾಗುತ್ತಿದ್ದವು. ಆದುದರಿಂದ ಹಜರತ್ ಬಾದಶಾಹ ಗಾಜಿಯು ನವಾಬ್‌ಖಾನ್‌ಬಾಬಾನನ್ನು ಕರೆತರಲು ಉನ್ನತಶ್ರೇಣಿಯ ಹಿರಿಯ ಸೈಯದ್ (ಮುಹಮ್ಮದ್ ಪೈಗಂಬರರ ವಂಶಜ)ನನ್ನು, (ಶಾಹ ಹಸನ್ ಫಕರ್ ಆಬಾದಿ), ಮಲ್ಕಾನೂಹ್ ಕೋಟೆಗೆ ಕಳುಹಿಸಿದನು. ಅವನು ಒಂಬತ್ತು ದಿನಗಳ ಅವಧಿಯಲ್ಲಿ ನವಾಬ್‌ಖಾನ್‌ಬಾಬಾನನ್ನು ಗೌರವಾದರದೊಂದಿಗೆ, ನಗರಕ್ಕೆ ಕರೆದುಕೊಂಡು ಬಂದನು. ಹಜರತ್ ಬಾದಶಾಹ ಗಾಜಿಯು ಸಾಮ್ರಾಟನ ಅನುಗ್ರಹ ಮತ್ತು ರಾಜ ಮನ್ನಣೆಯಿಂದ, ನವಾಬ್‌ಖಾನಬಾಬಾನನ್ನು ಸನ್ಮಾನಿಸಿ, ಅವನಿಗೆ ದೇಶದ ವ್ಯವಹಾರಗಳ ಹುದ್ದೆಯನ್ನು ದಯಪಾಲಿಸಿದನು. ಆತನ ದರ್ಜೆ ಹಾಗೂ ವೈಭವವನ್ನು ಮೊದಲಿಗಿಂತಲೂ ಸಾವಿರ ಪಟ್ಟು ಹೆಚ್ಚಿಸಲಾಯಿತು.

'ಏಕೆಂದರೆ : ದೇವರು ಬುದ್ಧಿವಂತರ ಸಂರಕ್ಷಕನು, ಆತನ ದಾರಿಯ ಮೇಲಿನ ನಿರಾಸೆಯ ಮುಳ್ಳಿನಿಂದ ಹೂ ಅರಳಿಸಿದನು, ಗರಗಸದಂತಹ ಖಡ್ಗವು, ಮುತ್ತುಗಳನ್ನು ಸುರಿಯಲಾರಂಭಿಸಿತು. ಆತನ ದೃಷ್ಟಿಯು ಬೆಂಕಿಯಿಂದ ನೀರು ಹನಿಸುತ್ತಿತ್ತು. ಆತನ ಪಾದವು ಒಂದುವೇಳೆ ಶಿಲೆಯನ್ನು ಸ್ಪರ್ಶಿಸಿದರೆ, ಅದು ಬಂಗಾರವಾಗುತ್ತಿತ್ತು. ಆತನ ದಾರಿಯ ಮಣ್ಣಿನ ಮೇಲೆ, ಆಕಾಶವು ತನ್ನ ಶಿರವನ್ನು ಇಡುತ್ತಿತ್ತು.ಕೆಳಮಟ್ಟದಿಂದ ಸೌಭಾಗ್ಯವು ತಲೆ ಎತ್ತುತ್ತಿತ್ತು. ಹೌದು, ಸಾಗರವು ದಾರಿದ್ರ್ಯವನ್ನು ಪ್ರದರ್ಶಿಸುವದಿಲ್ಲ. ಪರಾಕ್ರಮವು ಆತನ ಶಿರದ ಸಂಪತ್ತು ಆಗಿದೆ. ಅವನು ಎಲ್ಲಿಗೆ ಹೋದರೂ, ದೇವರು ಆತನಿಗೆ ಸಹಾಯ ಮಾಡುತ್ತಾನೆ. ಶಹಾಜಹಾನನ ಪರ್ನಿದಾ ಕೋಟೆಯ ಪರಾಜಯ'.

ಇದೇ ಕಾರಣದಿಂದ ಅಪಾಯಕಾರಿ ಉದ್ದೇಶಗಳಿಂದ ದೌಲತಾಬಾದ್ ತಲುಪುವುದು ಮತ್ತು ತನ್ನ ದೇಶಕ್ಕೆ ಹಿಂತಿರುಗಿ ಹೋಗುವುದು

ಧೈರ್ಯದ ಸಾರಾಯಿಯಲ್ಲಿ ಮಗ್ನರಾದ ಜನರು ಜನ್ಮತಃ ಭಾಗ್ಯಶಾಲಿಗಳನ್ನು ತಮ್ಮ ದರ್ಜೆಗಿಂತಲೂ ಕಡಿಮೆಯೆಂದು ಭಾವಿಸಿ; ಬುದ್ಧಿವಂತಿಕೆ ಹಾಗೂ ಪರಿಚಯದ

ಸಾರಾಯಿ ಅಂಗಡಿಯಲ್ಲಿ ಕುಳಿತುಕೊಂಡರು. ಮಹಾಬತ್‌ಖಾನನು ಶಹಾಜಹಾನನ ಆಜ್ಞೆಯಿಂದ ಅಪಾರ ಸೈನ್ಯದೊಂದಿಗೆ, ಪರ್ನಿದಾ ಕೋಟೆಯ ಪ್ರದೇಶದಲ್ಲಿ ತಲುಪಿದನು. ಈ ಕೋಟೆಯ ಆವರಣದಲ್ಲಿ ಸುದೀರ್ಘವಾದ ಅವಧಿಯವರೆಗೆ ಸುರಂಗ ಕೊರೆಯಲು ವಿಫಲನಾಗಿ ನಾಚಿಕೆಯಿಂದ ಶಿರಬಾಗಿಸಿದನು. ಇದೇ ಕಾರಣದಿಂದ ರಹಸ್ಯವಾಗಿ ಹಿಂದುಸ್ತಾನಕ್ಕೆ ಹೋಗಿ ಪೂರ್ವನಿವೇದಿತವಾದ ಕಾರಣದಿಂದ, ಶಹಾಜಹಾನನ ಆಗಮನಕ್ಕಾಗಿ ಸಜ್ಜುಮಾಡಿದನು.

ಮನಸ್ಸಿಲ್ಲದ ಮನಸ್ಸಿನಿಂದ ರಾಜಧಾನಿ ಆಗ್ರಾದಿಂದ ಶಹಾಜಹಾನನು ರಾಜಧಾನಿ ಮಹಮ್ಮದಪೂರಿಗೆ ಅಪಾರ ಸೈನ್ಯ, ಇತರ ಪ್ರಸಿದ್ಧ ಮಂತ್ರಿಗಳು ಮತ್ತು ಸರದಾರರೊಂದಿಗೆ ಬಿರುಗಾಳಿಯಂತೆ ಕೋಲಾಹಲ ಮಾಡುತ್ತ, ಸಾಗರದಂತೆ ಅಪಾರ ಉತ್ಸಾಹದಿಂದ ತೆರಳಿದನು. ಮರುಭೂಮಿಯನ್ನು ದಾಟುವ, ನೆಗೆಯುವ, ಜಿಗಿಯುವ ಕುದುರೆಗಳು ಹಾಗೂ ಆಕಾಶವನ್ನು ಸ್ಪರ್ಶಿಸುವ ಆನೆಗಳಿಂದ ಪರ್ವತ ಮತ್ತು ಮರುಭೂಮಿಗಳು ಕಂಪಿಸಲಾರಂಭಿಸಿದವು. ದೌಲತಾಬಾದಿನಲ್ಲಿ ಇದೇ ವೈಭವ/ಅಂತಸ್ತಿನಿಂದ ಶ್ರೇಷ್ಠತೆಯ ಧ್ವಜವು ಹಾರಾಡಿತು.

ಶಹಾಜಹಾನನ ಆಗಮನದಿಂದ ಜನರ ಹೃದಯದಲ್ಲಿ ಮೊಗಲರ ಹೆದರಿಕೆ ಆವರಿಸಿತು. ಜನರು ತಮ್ಮ ಮನೆಯ ದಾರಿಯನ್ನು ಮರೆತರು. ಹಿಂದುಸ್ತಾನದ ಅತ್ಯುನ್ನತ ಬಾದಶಾಹ ಶಹಾಜಹಾನನು ಸ್ವಯಂ ದಕ್ಷಿಣದ ಕಡೆಗೆ ಆಗಮಿಸುತ್ತಾನೆಂಬ ಹೆದರಿಕೆಯಿಂದ, ವೀರ ಪುರುಷರ ಹೃದಯಗಳು, ಅವರ ಎದೆಗಳಲ್ಲಿ ಕರಗಿದವು ಮತ್ತು ಕಣ್ಣುಗಳು ಅರಳಿದವು. ಶಹಾಜಹಾನನು ದೌಲತಾಬಾದಿಗೆ ತಲುಪಿದ ಸಮಾಚಾರ ತಿಳಿದಾಗ, ಬಾದಶಾಹ ಗಾಜಿಯು ಕೇಳಿಸಿಕೊಂಡರೂ ಸಹ, ಕೇಳದಿರುವಂತೆ ಇದ್ದನು. ಭೋಗ-ವಿಲಾಸ ಹಾಗೂ ಸೌಭಾಗ್ಯದ ಕೂಟವನ್ನು ಏರ್ಪಡಿಸಿ, ಭೋಗದ ಬಟ್ಟಲಿನ ಪಾನ ಮಾಡಲಾರಂಭಿಸಿದನು. ಅವನು ಸ್ವಾಧೀನಪಡಿಸಿಕೊಂಡ ದೇಶಗಳ ಸರಹದ್ದುಗಳ ಸಂರಕ್ಷಣೆ ಮತ್ತು ಮೇಲ್ವಿಚಾರಣೆಯನ್ನು ಖಚಿತಪಡಿಸಿಕೊಳ್ಳಲು; ಮೊಗಲರು ಮುನ್ನುಗ್ಗದಂತೆ ಪ್ರತಿಬಂಧಿಸಲು ಹಾಗೂ ದಂಗೆ/ಯುದ್ಧ ಮಾಡುವವರ (ಅರ್ಥಾತ್, ವಿರೋಧಿಗಳ) ತಲೆಗಳನ್ನು ದೇಹದಿಂದ ಬೇರ್ಪಡಿಸಲು ಕೆಲವು ವಿಜಯ-ಸಂಪನ್ನ ಮಂತ್ರಿಗಳನ್ನು ನೇಮಿಸಿದನು.

ಉನ್ನತ ಧೈರ್ಯದ ಬಾದಶಾಹ ಗಾಜಿಯ ಸಾಮ್ರಾಜ್ಯದ ಶಾಸನಗಳ ಬಳಕೆಯಿಂದ ಮತ್ತು ಹೆದರಿಸಿ-ಬೆದರಿಸಿ, ವೈರತ್ವದ ಬಟ್ಟಲು ಪಾನ ಮಾಡುವಂತಹ ದಾರಿ ತಪ್ಪಿದವರನ್ನು ಆಕಾಶದಂತಹ ಉನ್ನತ ದರ್ಜೆಯಿಂದ ವಜಾಗೊಳಿಸಿ ಅವರನ್ನು ಒಂದು ಹಿಡಿ ಮಣ್ಣೆಂದು ಪರಿಗಣಿಸುತ್ತಾನೆ. ಅವನು ಜಗತ್ತನ್ನು ರಕ್ಷಿಸುವಂತಹ ತನ್ನ ಖಡ್ಗದ ಶಕ್ತಿಯಿಂದ ಕ್ಷಣ-ಕ್ಷಣಕ್ಕೂ ವಿಜಯವನ್ನು ಸಂಪಾದಿಸುತ್ತ; ಸಾಗುತ್ತಾನೆಂಬುದನ್ನು

ತಿಳಿದುಕೊಂಡ ಶಹಾಜಹಾನನು ತನ್ನ ಸೈನ್ಯವು ಹಜರತ್ ಬಾದಶಾಹ ಗಾಜಿಯ ಸಾಮ್ರಾಜ್ಯದಲ್ಲಿ ಪ್ರವೇಶಿಸದಂತೆ ನಿರ್ಬಂಧಿಸಿದನು. ಸಾಹಸ ಮತ್ತು ಚುರುಕುತನದ ಕುದುರೆಗಳ ಲಗಾಮುಗಳನ್ನು ಎಳೆದಿಡಲು ಸೂಚಿಸಿದನು.

ಶಹಾಜಹಾನನು ಮೊಗಲರನ್ನು ವಿನಾಶ ಮತ್ತು ವಿಪತ್ತಿನಿಂದ ತಡೆಗಟ್ಟಿ, ದೌಲತಾಬಾದ ಕೋಟೆಯ ವೀಕ್ಷಣೆಯ ಕಾರ್ಯದಲ್ಲಿ ನಿರತನಾದನು. ಶಹಾಜಹಾನನು ಪ್ರವಾದಿಯ ಪವಿತ್ರವಾದ ಧರ್ಮವನ್ನು ಗೌರವಿಸುತ್ತಾನೆ. ಮುಸಲ್ಮಾನರು ಪರಸ್ಪರ ಯುದ್ಧ ಮಾಡಬೇಕೆಂದು ಅವನು ಬಯಸುವದಿಲ್ಲಯೆಂಬುದನ್ನು; ಹಜರತ್ ಬಾದಶಾಹ ಗಾಜಿಯು ತಿಳಿದುಕೊಂಡನು. ನಿರ್ಧಾರಿತವಾದ ವಿಧಾನದಿಂದ ಶಹಜಹಾನನೊಂದಿಗೆ ಒಪ್ಪಂದ ಮತ್ತು ಸಲಹೆ ಪಡೆಯಬೇಕು. ಯಾವುದೇ ಕಾರಣದಿಂದ, ದಿಗ್ಭ್ರಮೆಗೊಳ್ಳಬಾರದೆಂದು, ನವಾಬ್‌ಖಾನ್ ಬಾಬಾನನ್ನು ಕರೆಕಳುಹಿಸಿ, ಬಾದಶಾಹ ಗಾಜಿ ನುಡಿದನು.

ಸಾಮ್ರಾಜ್ಯದ ಧ್ಯೇಯ ಸಂರಕ್ಷಕನಾದ ನವಾಬ್‌ಖಾನ ಬಾಬಾನು ಬುದ್ಧಿವಂತಿಕೆ ಹಾಗೂ ಉಪಾಯಗಳ ಸಹಾಯದಿಂದ ನಾವೆಯನ್ನು ಸಾಗರದ ತರಂಗಗಳಲ್ಲಿ ತೇಲಿಬಿಟ್ಟಿದ್ದನು. ಬಿರುಗಾಳಿ ಉಂಟಾದಾಗ ಅಸ್ಥಿರವಾದ ಬೆಂಕಿಯ ಕಿಡಿಗಳ ಸೈನ್ಯವನ್ನು ನೌಕೆಯ ಮೇಲೆ ಎಸೆಯಲಾಯಿತು. ಅಮ್ಮಾನ್ ಸಮುದ್ರದಲ್ಲಿ ಹವಳದ ಟೊಂಗೆಯಂತೆ ಜ್ವಾಲೆಗೆ ಉತ್ತೇಜನ ನೀಡಿಕೆಯು ಅತಿ ಸುಲಭವಾದ ಕಾರ್ಯವೆಂದು ಅರಿತನು. ಮೊಹಮ್ಮದ ನಂತಹ ಸ್ವಭಾವ ಹೊಂದಿದ ಬಾದಶಾಹನ ಆಜ್ಞೆಯ ಮೇರೆಗೆ, ಮಹತ್ಕಾರ್ಯ ಮಾಡುವ ಹೊಣೆಗಾರ ವ್ಯಕ್ತಿಗಳಿಗೆ ವಿವಿಧ ಬಗೆಯ ರಾಜಕಾರಣಿ ಮತ್ತು ಇನಾಮು ನೀಡಿ, ವೈಭವ–ಗಾಂಭೀರ್ಯದಿಂದ ದೌಲತಾಬಾದಿಗೆ ಶಹಾಜಹಾನನ ಬಳಿಗೆ ಕಳುಹಿಸಿದನು. ಯಾವಾಗಲೂ ಎರಡೂ ಕಡೆಗಳಿಂದ ಮಿತ್ರತ್ವದ ವೈಭವ–ಗಾಂಭೀರ್ಯದ ಕಾಣಿಕೆಗಳ ವಿನಿಮಯ ಹಾಗೂ ರಾಜರ ಭೆಟ್ಟಿಯ ಸಂಪ್ರದಾಯಗಳನ್ನು ವಿಶ್ವಾಸಾರ್ಹವಾಗಿ ಅನುಷ್ಠಾನಗೊಳಿಸಬೇಕು. ನಿಜಾಮ್‌ಶಾಹಿಯ ಕೃಷ್ಣಾ ನದಿಯ ಆಚೆಗಿನ ಪ್ರದೇಶಗಳು ಶಹಾಜಹಾನನ ಬಳಕೆಗೆ ಒಳಪಡಬೇಕು. ಪ್ರತಿವರ್ಷ ಹಿಂದುಸ್ತಾನದ ಗಾಜಿಯ ರಾಜಧಾನಿಯ ಸ್ವಾಧೀನಕ್ಕೆ ಒಳಪಡಬೇಕು. ಪ್ರತಿ ವರ್ಷ ಹಿಂದುಸ್ತಾನದ ರಾಜರು ಬೇಡಿಕೆ ಸಲ್ಲಿಸದಿದ್ದರೂ ಸಹ; ಮೊದಲಿನಿಂದಲೂ ದಕ್ಷಿಣದ ರಾಜರು ನೀಡುತ್ತಿದ್ದ ತೆರಿಗೆ ಹಾಗೂ ಆದಾಯವನ್ನು ರದ್ದುಗೊಳಿಸಬೇಕು.

ಶಹಾಜಹಾನನೊಂದಿಗಿನ ಒಪ್ಪಂದ–ಸಲಹೆ ಪಡೆಯುವ ವ್ಯವಹಾರಗಳು ಬಗೆಹರಿದವು.

ಇಬ್ಬರೂ ಮಹಾನ್ ಅದೃಷ್ಟಶಾಲಿ ಬಾದಶಾಹನ ಗೌರವಾನ್ವಿತ ಹಾಗೂ ಆಜ್ಞಾಪಾಲಕ ಪುತ್ರರ ನಡುವೆ ಶಾಶ್ವತವಾಗಿ ಇದೇ ಪ್ರಕಾರ, ಸೌಹಾರ್ದತೆಯ

ಸಂಬಂಧಗಳು ಮುಂದುವರಿಯಬೇಕು. ಶಹಾಜಹಾನನು ಸಂಧಾನ ಪತ್ರವನ್ನು ಬಂಗಾರದ ಹಲಗೆಯ ಮೇಲೆ ಬರೆಯಿಸಿ, ಹಜರತ್ ಬಾದಶಾಹ ಗಾಜಿಗೆ ಕಳುಹಿಸಿದನು. ಶಹಾಜಹಾನನ ಸೇವಕನು ಅಪಾರ ಕಾಣಿಕೆಗಳೊಂದಿಗೆ, ಸಂರಕ್ಷಣಾರ್ಹವಾದ ಸಂಧಾನ ಪತ್ರವನ್ನು ತೆಗೆದುಕೊಂಡು; ರಾಜರಿಗೆ ಸಂರಕ್ಷಣೆ ನೀಡುವಂತಹ ರಾಜನ ದರ್ಬಾರಿಗೆ ಎಂದು, ಅತ್ಯುನ್ನತ ಶ್ರೇಣಿಯ ಬಾದಶಾಹನಿಗೆ ಸಮರ್ಪಿಸಿದನು. ಅವನು ಪ್ರವಾದಿ ಮೊಹಮ್ಮದನಂತಹ ಸ್ವಭಾವ ಹೊಂದಿದ ಬಾದಶಾಹನ ಕೃಪೆ ಹಾಗೂ ಕಾರುಣ್ಯದಿಂದ ಭಾಗ್ಯಶಾಲಿ ಆದನು. ಶಹಾಜಹಾನನು ದೌಲತಾಬಾದಿನಿಂದ ರವಾನೆಯಾಗಿ, ರಾಜಧಾನಿ ಆಗ್ರಾಕ್ಕೆ ಬಂದನು. ಹಜರತ್ ಬಾದಶಾಹ ಗಾಜಿಯು ನವಾಬ್‌ಖಾನ್ ಬಾಬಾನಿಗೆ, ಸಾಮ್ರಾಜ್ಯದ ಅಪಾರ ಇನಾಮುಗಳನ್ನು ನೀಡಿ; ಏಳೂ ದೇಶಗಳ ಕಾರ್ಯದರ್ಶಿಗಳು ಅಸೂಯೆ ಪಡುವಂತೆ ಮಾಡಿದನು.

ತಾಜ್‌ಜಹಾನ್ ಬೇಗಮ್‌ರ ಮನೆಯಲ್ಲಿ, ನಕ್ಷತ್ರ ಗೊಮ್ಮಟದಂತಹ ನವಾಬ್‌ಖಾನ್ ಬಾಬಾನ ಅಳಿಯತ್ವದ ಆಸನದ ಜೊತೆಗೆ ಹಜರತ್ ಬಾದಶಾಹ ಗಾಜಿಯು ಆಸೀನನಾಗುವುದು.

೧೦೪೨ ಹಿಜರಿಯಲ್ಲಿ ಪ್ರವಾದಿ ಮೊಹಮ್ಮದನಂತಹ ಸ್ವಭಾವ ಹೊಂದಿದ ಮತ್ತು 'ಗಾಜಿ' ಎಂಬ ಬಿರುದು-ಸಂಪನ್ನನಾದ ಹಜರತ್ ಬಾದಶಾಹನು ಶಾಶ್ವತವಾಗಿರುವ ಪ್ರಬಲ ಆಸಕ್ತಿ ಹಾಗೂ ಸೌಭಾಗ್ಯದಿಂದ ಭೋಗ ಮತ್ತು ಸಂತೋಷದ ಪೀಠವನ್ನು ಶೃಂಗರಿಸುವಂತೆ; ಮಧುಶಯ್ಯೆಯ ನಿರ್ಮಾಣದ ಕಾರ್ಯವನ್ನು ನಿರೀಕ್ಷಿಸುವವರು ಬುದ್ಧಿವಂತಿಕೆ ಮತ್ತು ದೃಷ್ಟಿಶಕ್ತಿಯ ಪರದೆಯ ಸಾಕ್ಷಿ ನುಡಿಯುವವರಿಗೆ ಹೃದಯಕ್ಕೆ ಪ್ರಿಯವಾಗುವಂತಹ ವರ್ಣರಂಜಿತ ಅಂಶಗಳನ್ನು ಪ್ರದರ್ಶಿಸಿದ್ದಾರೆ.

ಸಾಮ್ರಾಜ್ಯದ ಅತ್ಯುತ್ತಮ ನವಾಬ್‌ಖಾನ ಬಾಬಾನಿಗೆ ಅಳಿಯತ್ವ ಮತ್ತು ವಿವಾಹ ಸಮಾರಂಭದ ಸಂತೋಷದ ಸಮಾಚಾರ ತಿಳಿಸಿ; ಅತ್ಯಧಿಕ ಕೃಪೆಯಿಂದ ಹಿರಿತನ ಹಾಗೂ ಬೆಡಗು ನೀಡಲಾಯಿತು. ನಕ್ಷತ್ರ ಗೊಮ್ಮಟದಂತಹ ಗೌರವ-ಮರ್ಯಾದೆ ಹೊಂದಿದ ನವಾಬ್‌ಖಾನ್‌ಬಾಬಾ ಮತ್ತು ಉನ್ನತ ಸ್ಥಾನದ ಹಜರತ್ ತಾಜ್‌ಜಹಾನ್‌ಬೇಗಮ್‌ಳನ್ನು ವಿವಾಹದ ಬಂಧನದಲ್ಲಿ ಕಟ್ಟಲಾಯಿತು. ಅತಿಥಿ ಸತ್ಕಾರದ ದೊಡ್ಡ ನಗಾರಿಯ ಧ್ವನಿಯು ಗೌರವ-ಘನತೆಯ ಔನ್ನತ್ಯದ ಆಕಾಶದವರೆಗೆ ತಲುಪಿತು. ಕೃಪೆಯ ನಗಾರಿಯ ಧ್ವನಿಯು, ಒಂಬತ್ತನೆಯ ಆಕಾಶದ ಮೇಲೆ ಸಂತೋಷದಿಂದ ಕೇಳಿ ಬಂದಿತು. ಭೋಗ-ಸಂತೋಷದ ಗೀತೆಗಳು, ಜಗತ್ತಿಗೆ ಹೊಸ ಜೀವನ ನೀಡುವ ಜನರಿಗೆ, ಸೂರ್ಯನ ನೆರಳಿನ ಬಟ್ಟಲಿನಿಂದ ಸಾರಾಯಿ ಕುಡಿಸಲಾರಂಭಿಸಿದವು.

'ಪ್ರಾತಃಕಾಲವಾಯಿತು, ಮತ್ತೊಮ್ಮೆ ಸೂರ್ಯನು ಜಗತ್ತಿನ ಪಾಠ ಓದಲು ಆರಂಭಿಸಿದನು. ಹೊಸ ಜೀವನದಾತನಿಗೆ ಸೂರ್ಯನು, ಸಾರಾಯಿಯ ಬಟ್ಟಲು ನೀಡಿದನು. ಮದ್ಯಪಾನಸಕ್ತರಿಗೆ ದೇವಭಕ್ತನು ಅಭಿನಂದನೆ ಸಲ್ಲಿಸಿದನು. ಪ್ರಸಿದ್ಧ ವಾದ್ಯ (ಚಂಗ್) ಮತ್ತು ವೀಣೆಯೊಂದಿಗೆ ಪ್ರವಚನ ಪೀಠದ ಮೇಲೆ ಉಪನ್ಯಾಸ ನೀಡದನು'.

ಗೀತೆಗಳ ಗಾಯಕರು ತಂಬೂರಿ ಬಾರಿಸಿ, ತಮ್ಮ ತಂಬೂರಿಯ ತಂತಿಗಳಿಂದ ದೇವದೂತರ ಪ್ರಾಣವನ್ನು ಸಂಯೋಜಿಸಿ, ಹೃದಯವನ್ನು ಆಕರ್ಷಿಸಲು ಮತ್ತು ಅವರ ಉತ್ಸಾಹವನ್ನು ಹೆಚ್ಚಿಸಲಾರಂಭಿಸಿದರು. ನಗರ ಹಾಗೂ ಮಾರುಕಟ್ಟೆಗಳಲ್ಲಿ ಅಲ್ಲಲ್ಲಿ ಮಕಮಲ್ಲು ಬಟ್ಟೆ ಮತ್ತು ಚಿನ್ನದ ಸರಿಗೆಗಳಿಂದ ನೇಯ್ದ ಬಟ್ಟೆಯ ಡೇರೆ ಹಾಗೂ ಬಂಗಾರ ಲೇಪಿತ ಕಳಸಹೊಂದಿದ ಆಕಾಶದಂತಹ ಎತ್ತರ-ಅಗಲವಾದ ಚಪ್ಪರಗಳ ಮೇಲೆ ಸೂರ್ಯನು ಹೊಳೆಯಲಾರಂಭಿಸಿದನು.

'ಚಪ್ಪರವೆನ್ನಬೇಡಿರಿ, ವೈಭವ-ಗಾಂಭಿರ್ಯದ ಆಕಾಶವೆಂದು ಕರೆಯಿರಿ. ಅದರ ವಸ್ತ್ರದ ಅಂಚಿನ ದೆಸೆಯಿಂದ ಒಂಬತ್ತನೆಯ ಆಕಾಶವು ನಾಶವಾಯಿತು. ಬೇಟೆಗಾರನು ಬೇಟೆಯ ಪಾದಗಳ ಚಿನ್ಹೆಯ ಮೇಲೆ ತೆರಳುವನೇನೋ ಎಂಬಂತೆ, ಅದರ ನೆರಳು ಸೂರ್ಯನೆಡೆಗೆ ಸಾಗುತ್ತದೆ'.

ಬೆಳ್ಳಿಯಂತಹ ದೇಹ ಮತ್ತು ಸ್ಥೂಲವಾದ ಮೀನಖಂಡ ಹೊಂದಿದ ನರ್ತಕಿಯರು. ಸುಖ-ಭೋಗ ಪಡೆಯುವ ಜಗತ್ತಿನ ಜನರಿಗೆ ಭೋಗ ಹಾಗೂ ಸೌಭಾಗ್ಯದ ಪರಂಪರೆಯನ್ನು ಸೃಷ್ಟಿಸಿದ್ದಾರೆ. ಅತಿ ಸುಂದರ ವ್ಯಕ್ತಿಗಳ ಉಡುಪಿನ ಅಂಚಿನಿಂದ ಬೀಸುವ ಗಾಳಿಯು, ಮುದ್ದಾಗಿ ಬೆಳೆದ ಹಿರಿ-ಕಿರಿಯರ ಹೃದಯದ ಮೊಗ್ಗು ಅರಳಿಸಿ, ಸಂತೋಷದ ಉದ್ಯಾನವನ್ನಾಗಿ ಮಾಡಿದೆ. ಅನುಪಮ ಮತ್ತು ಅಪ್ರತಿಮವಾದ ಕುಶಲ ಕೆಲಸಗಾರರು ಹಾಗೂ ಅದ್ವಿತೀಯ ಶಿಲ್ಪಿಗಳು, ಕೀರ್ತಿಯ ಧ್ವಜವನ್ನು ಸ್ಥಾಪಿಸಿ, ಪ್ರತಿಯೊಂದು ಧ್ವಜದ ಹತ್ತಿರ ರೋಮ್ ಜಂಗ್ ಚೀನ ಮತ್ತು ಯುರೋಪದ ನಗರಗಳ ಸಹಸ್ರಾರು ವರ್ಣಮಯ ಆಟಿಗೆಗಳನ್ನು ಕೇಸರಿ, ಕಪ್ಪು ಪನ್ನಂಬರ ಮತ್ತು ಶುದ್ಧ ಕಸ್ತೂರಿಯಿಂದ ತುಂಬಿ, ನರ್ತಕಿಯರಿಗೆ ಅತ್ಯುತ್ಸಾಹವನ್ನುಂಟು ಮಾಡಲಾಯಿತು. ಕುದುರೆಗಳ ಸಮೂಹ ಹಾಗೂ ನೌಕರರನ್ನು ಶೃಂಗರಿಸಲಾಯಿತು.

ಇವೆಲ್ಲ ವರ್ಗಗಳೊಂದಿಗೆ ಶಹಾಜಹಾನನ ಸೇವಕ ಮತ್ತು ಶಾಹ ಅಬ್ಬಾಸನು ವೈಭವ-ಗಾಂಭೀರ್ಯದೊಂದಿಗೆ ಕಾಲ್ನಡಿಗೆಯಿಂದ; ಹಜರತ್ ಬಾದಶಾಹ ಗಾಜಿಯ ದರ್ಬಾರಿಗೆ ಬಂದರು. ಅವರು ಬಾದಶಾಹನ ಇನಾಮುಗಳನ್ನು ಪಡೆದು, ಅಭಿಮಾನದಿಂದ ತಲೆ ಎತ್ತಿದರು. ಎರಡೂ ಕಡೆಗಳಿಂದಲೂ, ವಿವಾಹ ಸಮಾರಂಭದ ವಿಧಿ-ವಿಧಾನಗಳನ್ನು ಸಡಗರದಿಂದ ಅನುಷ್ಠಾನಗೊಳಿಸಲಾಯಿತು. ಉಲ್ಲೇಖಿತ ತಿಂಗಳಿನ ಹನ್ನೊಂದನೆಯ ದಿನಾಂಕದಂದು ಪ್ರವಾದಿ ಮೊಹಮ್ಮದನಂತಹ ಸ್ವಭಾವದ ಹಜರತ್

ಬಾದಶಾಹ ಗಾಜಿಯು; ಸೋಮವಾರ ರಾತ್ರಿ ಕಪ್ಪು ಕುದುರೆಯ ಮೇಲೆ ಆರೋಹಣ ಮಾಡಿ, ವಿಹಾರಕ್ಕಾಗಿ ಹೊರಟನು.

ಇಬ್ಬರು ಮಹಾನ್ ರಾಜರ ಸಾಮ್ರಾಜ್ಯಗಳ ಇತರ ಸದಸ್ಯರು ಆಸ್ಥಾನಿಕರು ಮತ್ತು ಪರ್ದಾಧಾರಿಗಳು ಹಜರತ್ ಬಾದಶಾಹ ಗಾಜಿಯ ಮುಂದೆ ಸಾಗಿದರು. ಬಾದಶಾಹನ ಶ್ರೇಷ್ಠತೆ ಹಾಗೂ ಘನತೆಯ ಠೀವಿಯು ಜಗತ್ತು ಮತ್ತು ಜಗತ್ತಿನ ಜನರನ್ನು ಮಹಾಘನತೆಯ ದರ್ಪದಲ್ಲಿ ಪ್ರಮತ್ತಗೊಳಿಸಿತು. ಅತಿಥಿ ಸತ್ಕಾರದ ದೊಡ್ಡ ನಗಾರಿ ಮತ್ತು ನಗಾರಿಯ ಧ್ವನಿಯು ಜಗತ್ತನ್ನು ಸಂತೋಷ ಹಾಗೂ ಯಶಸ್ಸಿನ ಧ್ವನಿಗಳಿಂದ ತುಂಬಿತು. ದೇವದೂತರು ಪತಂಗಗಳೊಂದಿಗೆ ಹಾರಾಟ ಮಾಡಲಾರಂಭಿಸಿರುವಂತೆ ಚಿತ್ತಾಕರ್ಷಕವಾದ ಪಂಜು ಮತ್ತು ಕಂದೀಲುಗಳನ್ನು ವೈಭವದಿಂದ ಬೆಳಗಿಸಲಾಯಿತು. ಒಂದು ವೇಳೆ, ನಕ್ಷತ್ರಗಳನ್ನು ಸೃಷ್ಟಿಸುವಂತಹ ಆಕಾಶವು ಬೆಳಕು ಹರಡುವ ಸೂರ್ಯನ ಪಂಜನ್ನು ಆ ರಾತ್ರಿ ತನ್ನ ಕೈಯಲ್ಲಿ ಹಿಡಿದಿರದಿದ್ದರೆ, ಪಂಜು ಹಿಡಿಯುವ ಜನರು ಸ್ವಯಂ ಪ್ರದರ್ಶಿತರಾಗಲು ತಲೆಯನ್ನು ಮೇಲೆತ್ತುತ್ತಿದ್ದರು.

ಹಜರತ್ ಬಾದಶಾಹ ಗಾಜಿಯು ಶಾಶ್ವತವಾದ ದೃಢತೆ ಹಾಗೂ ದಿನದಿಂದ ದಿನಕ್ಕೆ ಹೆಚ್ಚುವಂತಹ ವೈಭವ–ಗಾಂಭೀರ್ಯದಿಂದ ಹೊಸ ವಸಂತವನ್ನು ಸೃಷ್ಟಿಸಿದನು. ಸಂತೋಷದ ಕೊಠಡಿಯೊಳಗೆ ಹೂಗಳನ್ನು ಹರಡಿ, ಭೋಗ–ಸಂತೋಷದ ರತ್ನಗಂಬಳಿಯನ್ನು ವರ್ಣಮಯಗೊಳಿಸಲಾಯಿತು ಮತ್ತು ಎರಡೂ ಜಗತ್ತುಗಳಲ್ಲಿ ಐಕ್ಯತೆಯ ಧ್ವಜವನ್ನು ಶೃಂಗರಿಸಲಾಯಿತು.

ಹಜರತ್ ಸೈಯದ್ ಮೊಹಮ್ಮದ ಹುಸೇನಿ ಗೇಸೂರರಾಜ್‌ರ ಸಮಾಧಿಯ ಪ್ರದಕ್ಷಿಣೆ ಮಾಡಿ, ಹಜರತ್ ಬಾದಶಾಹ ಗಾಜಿಯು ಸಂತುಷ್ಟನಾಗುವುದು.

ಹಜರತ್ ಬಾದಶಾಹ ಗಾಜಿಯು ಅಪಾರ ಸತ್ಯ ಮತ್ತು ಸಾಮ್ರಾಟನ ಶ್ರದ್ಧೆಯಿಂದ, ಹಜರತ್ ಸೈಯದ್ ಮೊಹಮ್ಮದ ಹುಸೇನಿ ಗೇಸೂದರಾಜ್‌ರ ಮಹಾನ್ ಸಮಾಧಿಯ ಪ್ರದಕ್ಷಿಣೆ ಮಾಡಲು ನಿರ್ಧರಿಸಿದಾಗ ಆಕಾಂಕ್ಷೆಗಳ ಕಾಬಾದ ಯಾತ್ರಿಕರು ಸ್ವಯಂ ತಮ್ಮ ಪ್ರಾರ್ಥನೆಗಳಿಂದ ಉನ್ನತ ಶ್ರೇಣಿಯನ್ನು ಅಲ್ಲಿ ಬಹಮ್ಮನ್ ಹಳ್ಳಿಯ ದ್ವಾರದ ಪರಿಸರವು, ಬಾದಶಾಹನ ತಲುಪಿದ್ದಾರೆ.

೧೦೪೭ ಹಿಜರಿಯ ಒಳ್ಳೆಯ ಅದೃಷ್ಟ ಮತ್ತು ಸಮೃದ್ಧಿಯ ವೈಭವದ ಧ್ವಜಗಳ ಪ್ರದರ್ಶನದ ಸ್ಥಳವಾಯಿತು. ಶಾಶ್ವತವಾದ ಸಂಪತ್ತು ಹಾಗೂ ಸೌಭಾಗ್ಯದ ದೊಡ್ಡ ನಗಾರಿಯು ಭಾವನಾಪರವಶಗೊಳಿಸಿತು. ಈ ವರ್ಷದ ಹನ್ನೆರಡನೆಯ ತಿಂಗಳಿನ ಸೋಮವಾರ ದಿನದಂದು, ಹಜರತ್ ಬಾದಶಾಹ ಗಾಜಿಯು ರವಾನೆಯಾಗಿ ತನ್ನ ಸಂಪೂರ್ಣವಾದ ಗಮನವನ್ನು ಈ ಅನುಪಮ ಮತ್ತು ಸಂಶಯಾತೀತನಾದ

ಸಂತನ ಸಮಾಧಿಯ ಮೇಲೆ ಕೇಂದ್ರೀಕರಿಸಿದನು. ಅವನು ಅಪಾರ ಆಸಕ್ತಿಯಿಂದ ಹೃದಯ ನೈರ್ಮಲ್ಯದ ತಂಗುದಾಣಗಳನ್ನು ದಾಟಿ; ಜಗತ್ತಿನ ಇಷ್ಟಾರ್ಥಗಳನ್ನು ಪೂರ್ಣಗೊಳಿಸುವವನಾದನು.

ಗುರುವಾರದಂದು ರಾಜರಿಗೆ ಆಶ್ರಯ ನೀಡುವ ಮತ್ತು ದೇವರನ್ನು ಗುರುತಿಸುವ ಬಾದಶಾಹನು; ಧರ್ಮ ಹಾಗೂ ಜಗತ್ತಿನ ಒಡೆಯನಾದ ಹಜರತ್ ದೇಸೂದರಾಜ್‌ರ ಆಕಾಶದಂತಹ ಗೊಮ್ಮಟದ ಎದುರಿಗೆ ಇರುವ ಆತ್ಮಕ್ಕೆ ಸಂತೋಷ ನೀಡುವಂತಹ ಹೊಂಡದ ಬದಿಯ ತೆರೆಗಳು ಅಮೃತದ ಚಿಲುಮೆಯನ್ನು ಅಪಹಾಸ್ಯಗೊಳಿಸುತ್ತವೆ. ಗೊಮ್ಮಟದ ಕಳಸವು ಸಾಮ್ರಾಟನ ವೈಭವ/ಗಾಂಭೀರ್ಯದಿಂದ, ಏಳನೆಯ ಆಕಾಶವನ್ನು ಮೀರಿಸುತ್ತದೆ. ವಿಳಂಬ ಮಾಡದೇ ತನ್ನ ಕೈ ಹಿಡಿಯುವಂತಹ ಧರ್ಮಗುರುವಿನ ದರ್ಗಾವನ್ನು ತಲುಪಿ ಆಕಾಶದಂತಹ ಪ್ರವಾದಿತ್ವ ಹಾಗೂ ದೈವಸಾಮಿಪ್ಯದ ವೇದಿಕೆ ಮತ್ತು ಆತ್ಮಸಂತುಷ್ಟಗೊಳಿಸುವ ಹೊಸ್ತಿಲಿನ ಮೇಲೆ ಸಾಮ್ರಾಟನ ವೈಭವ/ಗಾಂಭೀರ್ಯವನ್ನು ಸಮರ್ಪಿಸಿದಾಗ; ಸತ್ಯ ಹಾಗೂ ಶ್ರದ್ಧೆಯುಳ್ಳ ಜನರು ಅಪಾರ ಪ್ರಶಂಸೆ ಮಾಡಿದರು. ಅವನು ನಂಬಿಕೆಯೊಂದಿಗೆ ಫಾತಿಹಾ ಮಾಡಿ, ಈ ಪದ್ಧತಿಯನ್ನು ಸ್ಥಾಪಿಸಿದನು. ಜಗತ್ತನ್ನು ಗೆಲ್ಲುವ ಹಾಗೂ ಶೃಂಗರಿಸುವ ವಿಷಯದಲ್ಲಿ; ಸಂಪತ್ತು ಮತ್ತು ಸಮೃದ್ಧಿಯ ಅಧ್ಯಾಯಗಳನ್ನು ತೆರೆದನು.

‘ಮದೀನಾದ ಸತ್ಯ–ಆರಾಧಕರಿಗಾಗಿ, ಖುಸ್ರೊ ಗಾಜಿಯು, ದರ್ಗಾದ ಪ್ರದಕ್ಷಿಣೆ ಮಾಡಿ, ಹಜ್‌ದ ಕಾಣಿಕೆಯನ್ನು ಜಾರಿಗೊಳಿಸಿದನು’.

ಹಜರತ್ ಬಾದಶಾಹನು ಹರಕೆ/ಕಾಣಿಕೆ ನೀಡಿ, ಸಾಮ್ರಾಟನ ವೈಭವ ರೀವಿಯ ದರ್ಬಾರಿನಲ್ಲಿ, ಸ್ಥಿರವಾದ ಸಿಂಹಾಸನದ ಮೇಲೆ ಶಾಶ್ವತವಾದ ಸೌಭಾಗ್ಯದ ಕಿರೀಟ ಧರಿಸಿದನು. ಅವನು ತನ್ನ ಹೃದಯಕ್ಕೆ ಸಂತೋಷ ನೀಡುವ ಜನ್ಮದಿನದ ಸಮಾರಂಭವನ್ನು ಮುಕ್ತಾಯಗೊಳಿಸಿ ಧರ್ಮ ಮತ್ತು ಜಗತ್ತಿನ ಒಡೆಯನಾದ ಹಜರತ್ ಸೈಯದುಲ್ ಔಲಿಯಾರ ಉರ್ಸ್‌ನಲ್ಲಿ, ಸಂತೋಷಾಚರಣೆಯ ಪದ್ಧತಿಗೆ ಪ್ರೋತ್ಸಾಹನೆ ನೀಡಿದನು. ಮತ್ತು ಯಶಸ್ಸಿನ ಧ್ವಜವನ್ನು ಜಗತ್ತಿನ ಎತ್ತರಕ್ಕೆ ಹಾರಿಸಿದನು. ಉಲ್ಲೇಖಿತವಾದ ತಿಂಗಳಿನ ಹದಿನಾರನೆಯ ತಾರೀಖಿಗೆ ಹಜರತ್ ಖುತಬುಲ್ ಅಖ್ತಾಬ್‌ರ ಉರ್ಸ್ ಮುಕ್ತಾಯವಾದಾಗ; ಮೊಹಮ್ಮದನಂತಹ ಸ್ವಭಾವದ ಬಾದಶಾಹನು ದೇವಸಾಮಿಪ್ಯ ಹೊಂದಿದವರನ್ನು ಕರೆಕಳುಹಿಸಿ; ಜಗತ್ತನ್ನು ಶೃಂಗರಿಸುವ ಸಾಮಾನುಗಳನ್ನು ಪೂರೈಸಲು ಆಜ್ಞಾಪಿಸಿದನು. ಡೇರೆಗಳ ನೆರಳು ಸಪ್ತ ನಕ್ಷತ್ರಗಳ ಸಮೂಹದವರೆಗೆ ತಲೆ ಎತ್ತಿ, ‘ಹುಮಾ’ ಪಕ್ಷಿಯಂತೆ ದೇವದೂತರನ್ನು ಮಿತ್ರತ್ವದ ಜಾಲದಲ್ಲಿ ಸೆಳೆದಿದೆ. ಡೇರಿಗಳ ಹಗ್ಗಗಳನ್ನು ಎಳೆದು, ಸೂರ್ಯನಂತೆ ಪ್ರಕಾಶ ಹರಡುವ ಸಾವಿರಾರು ಕಂದೀಲುಗಳನ್ನು ಕಟ್ಟಿ; ಗಾಳಿಯಲ್ಲಿ ಕೆಲವು ಆಕಾಶ–ಗಂಗೆಗಳನ್ನು

ತೂಗಾಡಿಸಲಾಯಿತು. ವೀಕ್ಷಿಸುವಂತಹ ಪ್ರಕಾಶಮಾನ ದೃಷ್ಟಿ–ಸಂಪನ್ನ ಜನರು, ಮೇಣಬತ್ತಿ ಮತ್ತು ದೀಪ ಬೆಳಗಿಸಿ; ರತ್ನ ವ್ಯಾಪಾರಿಗಳಂತೆ ಅಲ್ಲಲ್ಲಿ ತಮ್ಮೆದುರಿಗೆ ರಾತ್ರಿ ಮಿನುಗುವ ಶಿಲೆಯ (ಶಬ್‌ಚರಾಗ್) ರಾಶಿಯನ್ನು ಹರಡಿದರು.

ಉನ್ನತ ಶ್ರೇಣಿಯ ಗೊಮ್ಮಟ ಕಳಸದ ಸುಂದರ ದೃಶ್ಯವು ದೇವರ ಸಾಮರ್ಥ್ಯದ ಬಗೆಗೆ; ಆಕಾಶ ಜೀವಿಗಳನ್ನು ಆಶ್ಚರ್ಯಚಕಿತಗೊಳಿಸಿತು. ಹೃದಯ ಸಂತುಷ್ಟಗೊಳಿಸುವ ಸಮಾಧಿಯ ಪರಿಶುದ್ಧತೆಯು; ಪವಿತ್ರವಾದ ಧರ್ಮಾಚರಣೆ ಮಾಡುವ ಶುದ್ಧ ಹಾಗೂ ನಿರ್ಮಲ ಹೃದಯವಂತರನ್ನು, ಸತ್ಯ ಮತ್ತು ಪವಿತ್ರತೆಯಡೆಗೆ ಕರೆಸಿಕೊಂಡಿದೆ.

'ಒಂದು ವೇಳೆ, ಅಣುವಿಗೆ ಪವಿತ್ರ ಸಮಾಧಿಯ ಹೊರಗೋಡೆಯ ಒಳಗೆ ಪ್ರವೇಶಿಸುವ ಅವಕಾಶ ದೊರೆತರೆ, ಅದು ದೇವರನ್ನು ಗುರುತಿಸುವವರ ಹೃದಯದಂತೆ, ವಿಶಾಲವಾದ ಪ್ರಪಂಚವಾಗುತ್ತದೆ. ಸಮಾಧಿಯ ಗೋಡೆಯ ನೆರಳು, ವೈಭವ ಗಾಂಭೀರ್ಯದ ಉಡುಪು ಆಗಿದೆ. ಸಮಾಧಿಯ ತಳಹದಿಯು ಜೀವನದ ಅರಮನೆಯಂತೆ ದೃಢವಾಗಿದೆ'.

ಹಜರತ್ ಬಾದಶಾಹ ಗಾಜಿಯ ಪರಿಶುದ್ಧವಾದ ಸಂಕಲ್ಪವು ಜನರ ಅವಶ್ಯಕತೆಗಳನ್ನು ಪೂರ್ಣಗೊಳಿಸುತ್ತದೆ. ಅವನು ಮಹಾನ್ ಸಮಾಧಿಯ ಪರಿಚಾರಕರಿಗೆ ಸಾಮ್ರಾಟನ ಗೌರವ ಮತ್ತು ಇನಾಮು ನೀಡಿ ಅವರನ್ನು ಯಶಸ್ವಿಗೊಳಿಸಿ ಅವರ ಸಂಪೂರ್ಣ ದೇಹವನ್ನು ಪ್ರಾರ್ಥನೆಯ ನಾಲಿಗೆಯನ್ನಾಗಿ ಮಾಡಿದನು. ಜಗತ್ತನ್ನು ಸಂತುಷ್ಟಗೊಳಿಸುವ 'ಉರ್ಸ' ಮುಕ್ತಾಯವಾದ ಮೂರು ದಿನಗಳ ನಂತರ ಹಜರತ್ ಬಾದಶಾಹ ಗಾಜಿಯು; ವಿವಿಧ ಹುದ್ದೆಗಳ ಜನರ ಉದ್ದೇಶ ಮತ್ತು ತಾತ್ಪರ್ಯಗಳನ್ನು ಪೂರ್ಣಗೊಳಿಸಿ, ಅವರಿಗೆ ಪ್ರಯೋಜನಗಳನ್ನು ನೀಡಿ; ಜಗತ್ತನ್ನು ಮಾಪನ ಮಾಡುವ ಕುದುರೆಯ ಲಗಾಮನ್ನು ನಗರದೆಡೆಗೆ ತಿರುಗಿಸಿದನು.

ಜಿಲ್‌ಹಜ್ಜಾ ತಿಂಗಳಿನ ಹತ್ತನೆಯ ತಾರೀಖಿಗೆ ಪವಿತ್ರವಾದ ಧ್ವಜದಲ್ಲಿ ಅರ್ಧ ಚಂದ್ರನ ಚಿನ್ಹೆಯ ಹೆಚ್ಚಳ ಮಾಡಿ; ರಾಜಧಾನಿ ಮಹಮ್ಮದಪುರದ ಅಂಗಳವನ್ನು, 'ಶಜರೆ ತೂರ್' (ಪ್ರವಾದಿ ಮೂಸಾರಿಗೆ ದಿವ್ಯಜ್ಯೋತಿ ಕಂಡುಬಂದ ವೃಕ್ಷ) ಉದ್ಯಾನವನ್ನಾಗಿ ಮಾಡಲಾಯಿತು. ಈ ಉರ್ಸ್‌ದಲ್ಲಿ ಕೋಲಾಹಲಕರ 'ಮೊಹಮ್ಮದ ನಾಮಾ'ದ ಲೇಖಕನು, ಪವಿತ್ರವಾದ ಸಮಾಧಿಯ ಪ್ರಶಂಸೆ, ಗುಣ ವರ್ಣನೆ ಹಾಗೂ ಹಜರತ್ ಬಾದಶಾಹ ಗಾಜಿಯ ಕೃತಜ್ಞತೆಯನ್ನು ಒಳಗೊಂಡಿರುವ ಒಂದು ಪ್ರಸಂಶಾ ಗೀತೆಯನ್ನು (ಖಸೀದಾ) ಬರೆದು; ಬಾದಶಾಹ ಗಾಜಿಯ ಸನ್ನಿಧಿಗೆ ಅರ್ಪಿಸಿದನು.

ಲೇಖಕನಿಗೆ ಈ ಪ್ರಶಂಸಾ ಗೀತೆಗಾಗಿ ಸಾಮ್ರಾಟನ ಹಿರಿಯ ಕಾಣಿಕೆಗಳನ್ನು ನೀಡಲಾದುದರಿಂದ; ಆತನ ಶಿರವು ಅಭಿಮಾನದಿಂದ; ಗೌರವ ಘನತೆಯ ಆಕಾಶಕ್ಕೇರಿತು. ಸಾಹಿತ್ಯಶಾಸ್ತ್ರ ಮತ್ತು ಸೂಕ್ಷ್ಮ ವಿಷಯ ತಜ್ಞರಾದ ಅನುಪಮ ಶಬ್ದೋತ್ಪತ್ತಿ ಬಲ್ಲವರಂತೆ ಗೌರವ ಹಾಗೂ ಪರಿಶ್ರಮದಿಂದ ಸಂಪಾದಿಸಿದಂತಹ

ಹೃದಯವನ್ನು ಅಲಂಕರಿಸುವ ಮಾತುಗಳನ್ನು ಈ ಪುಟಗಳಲ್ಲಿ ಬಹಿರಂಗಗೊಳಿಸಿರುವುದರಿಂದ ಸೌಭಾಗ್ಯದ ಗೌರವ ವಸ್ತ್ರವನ್ನು ನೀಡಲಾಯಿತು. ಈಶ್ರೇಷ್ಠವಾದ ಪ್ರಭಾವಶಾಲಿ ಪ್ರಶಂಸಾ ಗೀತೆಯನ್ನು ದೇವಾನುಗ್ರಹ ಮತ್ತು ಅನುಮೋದನೆಯಿಂದ ಸಂಪೂರ್ಣವಾಗಿ ಸ್ಮರಿಸಬೇಕು.

ಸಮಾಧಿಯ ಪ್ರಶಂಸಾಗೀತೆ (ಖಸೀದಾ)

'ಜಗತ್ತಿನ ಒಡೆಯನ ಸಮಾಧಿಯು, ಧರ್ಮ ಮತ್ತು ಜಗತ್ತಿನ 'ಅಭಿಮುಖ ಕೇಂದ್ರವು (ಕಾಬಾ), ಪೃಥ್ವಿಯ ಸಂರಕ್ಷಕನ ಕೃಪೆಯಂತೆ ಜಗತ್ತನ್ನು ಶೃಂಗರಿಸಿದೆ, ಸಮಾಧಿಯ ಉನ್ನತವಾದ ಗೊಮ್ಮಟವು ವಿಶ್ವದ ಅಲಂಕಾರವಾಗಿದೆ, ಸಮಾಧಿಯು ಆಕಾಶದ ಎದೆಯ ಜಾಗ್ರತ ಹೃದಯವಾಗಿದೆ, ಸೂರ್ಯನಂತೆ ಮಿಂಚುವ ಸಮಾಧಿಯ ಕಳಸದ ಹಣೆಯು, ಪೃಥ್ವಿಯನ್ನು ಬೆಳಗಿಸಿ, ಜಗತ್ತಿನ ಆರಂಭ ಹಾಗೂ ಅಂತ್ಯದ ರಹಸ್ಯವನ್ನು ಬಹಿರಂಗಗೊಳಿಸಿದೆ, ಈ ಉನ್ನತ ಶ್ರೇಣಿಯ ಸಮಾಧಿಗೆ ಹಿರಿಮೆ ನೀಡುವ ಹಣೆಯಿಂದ ಮಾಡುವ ಸಾಷ್ಟಾಂಗ ನಮಸ್ಕಾರವು, ಅಂತ್ಯದವರೆಗೆ ಭೂಮಿಯ ಮೇಲೆ ಅಸ್ತಿತ್ವದಲ್ಲಿರುವ ಮರ್ಯಾದೆಯ ಮುದ್ರೆ ಆಗಿದೆ. ಸಮಾಧಿಯ ತಳಹದಿಯ ಒಂದು ಇಟ್ಟಿಗೆಯಿಂದ ನಾಲ್ಕು ಮಹಾಭೂತಗಳಾಗಿವೆ. ಇದರ ನೆರಳು ಸಮಗ್ರ ಪೃಥ್ವಿಗೆ ಆಶ್ರಯ ನೀಡುವ ಸ್ಥಾನವಾಗಿದೆ. ಸಮಾಧಿಯ ಗೊಮ್ಮಟದ ಆರಂಭದಿಂದ ಆಕಾಶವು ಇದರ ಸ್ಥಾನವನ್ನು ಗುರುತಿಸಿದೆ. ಮಹಮ್ಮದರ ಜ್ಯೋತಿಯು ಇದರ ತಳಹದಿಯ ಕೊನೆಯಿಂದ ದೂರದವರೆಗೆ ನೋಡಿದೆ. ಸಮಾಧಿಯ ಗೋಡೆಯ ಮಣ್ಣು ಸೂರ್ಯ–ಚಂದ್ರರ ಬೇರಿನ 'ರಸ–ಸಿದ್ಧಿ' ಆಗಿದೆ. ಇದರ ನೆರಳಿನಿಂದ ಪ್ರಾತಃಕಾಲದ ಪಾದರಸವು ಸ್ಥಿರವಾಗುತ್ತದೆ. ಸಮಾಧಿಯ ಆತ್ಮವನ್ನು ಸಂತುಷ್ಟಗೊಳಿಸುವ ಅಂಗಳವನ್ನು ಪ್ರತಿದಿನ ಗುಡಿಸುವುದರಿಂದ, ಅದರ ಸೆರಗಿನಲ್ಲಿರುವ ಆತ್ಮಗಳು ದೇವರ ಸಾಮಿಪ್ಯ ಹೊಂದುವ ದೇವದೂತ ಆಗುತ್ತವೆ. ಅದರ ಗೊಮ್ಮಟವು ಆಕಾಶದ ಬೈತಲೆಯ ಕಿರೀಟವಾಗಿದೆ. ಅದರ ಕಳಸವು ಆಕಾಶ ಉಂಗುರದ ಅಮೌಲ್ಯ ಹರಳು ಆಗಿದೆ. ಪೃಥ್ವಿಯ ಆಕಳಿನ ಎದೆಯಲ್ಲಿ ಖಡ್ಗದ ಮೀನಿನ ಸ್ವರ್ಗವಿರುವಂತೆ, ಅದರ ಭದ್ರವಾದ ತಳಹದಿಯಲ್ಲಿ ವೈಚಾರಿಕತೆಯು ಸಮ್ಮಿಳಿತವಾಗಿದೆ, ಅದರ ಮಣ್ಣಿನಿಂದ ಅನಂತತೆಯ ಸಾಗರದ ನೀರು ಅರ್ಥವಿಹೀನವಾಗಿದೆ. ಅದರ ತಳಹದಿಯ ಶಿಲೆಯ ಕೆಳಗೆ ಜೀವನದ ಖಜಾನೆಯನ್ನು ಹೂಳಲಾಗಿದೆ. ಪ್ರಾತಃ ಕಾಲದಲ್ಲಿ ಅದರ ಅಗ್ಗಿಷ್ಟಿಕೆಗಳಿಂದ ಸುಗಂಧ ಭರಿತ ಹೊಗೆಯು ಹೊರಹೊಮ್ಮಿದಾಗ, ಆಕಾಶದಲ್ಲಿ ಸೂರ್ಯನು ಪರಿಮಳದ ಕಪ್ಪು ವೃತ್ತವಾಗುತ್ತಾನೆ. ಅದರ ಸುಗಂಧ ತುಂಬಿದ ಮಣ್ಣಿನ ಧೂಳಿಯಿಂದ ಆಕಾಶದ ಮೇಲ್ಭಾಗದ ಮೇಲೆ, ದೇವದೂತರು ಚೀನಾದ ಮರಭೂಮಿಯಿಂದ ಜಿಂಕೆಗಳಂತೆ ಆಗುತ್ತಾರೆ. ಅದರ ಬಂಗಾರ ಲೇಪಿತವಾದ ಕಳಸದ ಕೊಂಡಿಯ ಗುಣಗಾನದಿಂದ ನಾನು ಸ್ವಲ್ಪ ನಗದು ಹಣ ಸಂಪಾದಿಸಿದರೆ, ಜಗತ್ತು ಅಸ್ತಿತ್ವದಲ್ಲಿರುವವರೆಗೆ ಸೂರ್ಯ–ಚಂದ್ರರು ತಮ್ಮ ಹಣೆಯಿಂದ ನನ್ನ ಕಾವ್ಯವನ್ನು ಮಿಂಚುವಂತೆ ಮಾಡುವರು, ಮುಂಬೆಳಕಿನಲ್ಲಿ ಹೊಳೆಯುವ ಸೂರ್ಯನು ಆತನ ದ್ವಾರದ ಹೊಸ್ತಿಲಿನಿಂದ,

ಉಂಗುರದಲ್ಲಿ ಘಟಿತವಾದ ಮಾಣಿಕ್ಯದಂತೆ ಕಾಣುತ್ತಾನೆ, ಸಮಾಧಿಯ ನಿರ್ಮಲವಾದ ಜಗಲಿ ಸ್ವಚ್ಛತೆಯಿಂದ ಪವಿತ್ರವಾದ ಧರ್ಮದ ಅನುಯಾಯಿಗಳ, ನಿರ್ಮಲ ಹೃದಯವು ನಿಸ್ಸಂದೇಹವಾದ ಜ್ಞಾನದಂತೆ ದರ್ಪಣವಾಗುತ್ತದೆ. ಒಂದು ವೇಳೆ ಅದರ ಅಗ್ಗಿಷ್ಟಿಕೆಯ ಹೊಗೆಯಿಂದ ಗಾಳಿಯು ಸುಗಂಧಭರಿತವಾದರೆ, ಆಕಾಶದಲ್ಲಿ ಸೂರ್ಯನು ಸುಗಂಧ ವನಸ್ಪತಿಯ ಗೊಂಚಲು ಆಗುತ್ತಾನೆ. ಪ್ರವಾದಿ ಯೇಸುವಿನ ಮಾತೆಯ ಕೈ ತೋಳಿನಿಂದ ಯೇಸುವಿನ ಆತ್ಮದ ಮೊಗ್ಗು ಜನಿಸಿದಂತೆ, ಈ ಸಮಾಧಿಯಿಂದ ಹೊರಹೊಮ್ಮುವ ಗಾಳಿಯು ವಸಂತಋತುವನ್ನು ಸೃಷ್ಟಿಸುತ್ತದೆ. ನಡೆದಾಡುವಾಗ ಈ ಸಮಾಧಿಯ ಶುಭ್ರವಾದ ಕಾಂಕ್ರೀಟು ನೆಲದ ದರ್ಶನದಿಂದ, ದೃಷ್ಟಿಯು ರೆಪ್ಪೆಗಳಿಂದ ಜಾಜಿ ಮಲ್ಲಿಗೆಯ ವಸಂತವನ್ನು ಸೃಷ್ಟಿಸುತ್ತದೆ ಎಂದು ಅನಿಸುತ್ತದೆ. ಈ ದರ್ಗಾದ ಮಣ್ಣಿನಿಂದ ಸೌಭಾಗ್ಯ ಮತ್ತು ಸಂಪತ್ತನ್ನು ದೂರ ಇಡಲು ಸಾಧ್ಯವಿಲ್ಲ. ಉನ್ನತ ಧೈರ್ಯವಂತರ ಅಗತ್ಯಗಳನ್ನು ಪೂರ್ಣಗೊಳಿಸುವಂತಹ 'ಕಾಬಾ' ಇದೇ ಆಗಿದೆ. ಈ ಉನ್ನತ ಸಮಾಧಿಯ ದ್ವಾರದ ಎತ್ತರದ ಭವ್ಯ ಬಾಗಿಲಿನ ಮೇಲೆ, ವಿಜಯ-ಸಂಪನ್ನ ಸಂತನ ಸೇವೆಯಲ್ಲಿ ವಿಜಯದ ಕುರಾನಿನ ಸೂಕ್ತವಿದೆ. ಹಜರತ್ ಗೇಸು ದರಾಜ್‌ರ ಕೇಶಗಳು ಜಗತ್ತು ಮತ್ತು ಧರ್ಮದ ನಗರ ದ್ವಾರಗಳ ವಿಜಯವನ್ನು ಸ್ಮರಣೆಗೆ ತಂದಾಗ, ಆ ಕ್ಷಣವು ಅತಿ ಶುಭವಾಗಿತ್ತು. ಭರವಸೆಯ ಆಧಾರದ ಮೇಲೆ ಖುಸ್ರೊ ಗಾಜಿ ಮಹಮ್ಮದ ಶಾಹನ ಸಂಪೂರ್ಣ ದೇಹವು, ನಕ್ಷತ್ರಗಳ ರಾಜನಂತೆ ಸಾಷ್ಟಾಂಗ ನಮನ ಸಲ್ಲಿಸಿತು. ಸಂತನು ಜಗತ್ತಿನ ಸಂರಕ್ಷಣೆಯ ಭಾಗ್ಯವಾದನೇನೋ ಎಂಬಂತೆ, ಬಾದಶಾಹನ ಪ್ರಕಾಶಮಾನವಾದ ಅದೃಷ್ಟವು ಹಜರತ್ ಮಗದೂಮ್‌ರ ಅನುಯಾಯಿ ಆಯಿತು. ಸಂತನ ತೀರ್ಮಾನಗಳ ಕೊತವಾಲನು, ಜಗತ್ತನ್ನು ಶೃಂಗರಿಸಲು ನಿರತನಾಗಿದ್ದಾನೆ. ಮೇಣಬತ್ತಿಯು ಉಂಗುರ ಕಟ್ಟುವ ಅಮೌಲ್ಯ ಕಲ್ಲನ್ನು ತನ್ನೊಳಗೆ ಇಟ್ಟುಕೊಳ್ಳುವಂತೆ ಬಾದಶಾಹ ಗಾಜಿಯು ಸೂರ್ಯನಂತಹ ಸಂತನಿಗೆ ಸ್ಥಾನ ನೀಡಿದ್ದಾನೆ. ಸಂತನ ಪ್ರೇಮದಲ್ಲಿ ಮುಳುಗಿದ ಪ್ರತಿಯೊಬ್ಬನ ತಲೆಯ ಸುತ್ತಮುತ್ತಲೂ ಆಕಾಶವು ತಿರುಗಲಾರಂಭಿಸುತ್ತದೆ. ಆತನನ್ನು ದ್ವೇಷಿಸುವಂತಹ ಪ್ರತಿಯೊಬ್ಬನ್ನನ್ನು ಭೂಮಿಯೊಳಗೆ ಎಳೆದುಕೊಳ್ಳಲಾಗುತ್ತದೆ. ಬಾದಶಾಹ ಗಾಜಿಯು ಆತನಲ್ಲಿ ಶ್ರದ್ಧೆ ಹೊಂದಿರುವುದರಿಂದ ಜನರ ಉದ್ದೇಶವು ಪೂರ್ಣಗೊಂಡಿದೆ. ಶಹಭಾಶ್! ಬಾದಶಾಹ ಗಾಜಿಯ ಪವಿತ್ರವಾದ ಸಂಕಲ್ಪವು ವೈಭವ-ಗಾಂಭೀರ್ಯ ತಂದಿದೆ. ಕೇವಲ ಖಡ್ಗದ ಶಕ್ತಿಯಿಂದ ಎರಡೂ ಜಗತ್ತುಗಳನ್ನು ಗೆಲ್ಲಲು ಸಾಧ್ಯವಿಲ್ಲ, ಬಾದಶಾಹನ ಶ್ರದ್ಧೆಯು ಧರ್ಮದ ಬಾಹುಗಳ ಶಕ್ತಿ ಆಗಿದೆ. ಹೃದಯವನ್ನು ಸಂತುಷ್ಟಗೊಳಿಸುವ ಹುಬ್ಬುಗಳ ತುದಿಯನ್ನು ನೀನು ಯಾವಾಗ ಏರಿಸುವೆಯೋ, ಆಗ, ಹಬ್ಬದ ಚಂದ್ರನಿಂದ ಪೃಥ್ವಿಯ ಮುಖದ ಮೇಲೆ ತರಂಗಗಳು ಏಳುತ್ತವೆ, ಒಂದು ವೇಳೆ ಬಾದಶಾಹನ ಕೈಯ ಉಂಗುರವು ಸಂತೋಷದಿಂದ ಸಾಮ್ರಾಜ್ಯವನ್ನು ನೋಡಿದರೆ, ಉಂಗುರದ ವೃತ್ತವು ಜಮ್‌ಶೀದ್ ರಾಜನ ಕಣ್ಣಿನಂತೆ ಕಾಣುತ್ತದೆ. ಇನಾಮುಗಳ ಮೋಡವು ಸಂಪತ್ತಿನ ಮಳೆ ಸುರಿಸಲಾರಂಭಿಸಿದಾಗ, ಫಕೀರರಿಗಾಗಿ ಸಂಪತ್ತಿನ ನದಿಯು ಹರಿಯಲಾರಂಭಿಸುತ್ತದೆ. ಒಂದು ವೇಳೆ ನಿನ್ನ ಸೈನ್ಯದ ಮೇಲೆ ಬೀಸುವ ಗಾಳಿಯನ್ನು ಅಪಹರಿಸಿ ಸಾಗರದೆಡೆಗೆ ಅದರ

ದಿಕ್ಕನ್ನು ತಿರುಗಿಸಿದರೆ, ಸಾಗರದಿಂದ ತರಂಗಗಳ ಬದಲು ಶಕ್ತಿಶಾಲಿಯಾದ ಸೈನ್ಯವು ಎದ್ದು ನಿಲ್ಲುವುದು. ಜನರ ಪಾಲನೆ/ಪೋಷಣೆ ಮಾಡುವ ಮತ್ತು ನ್ಯಾಯವನ್ನು ವಿಸ್ತರಿಸುವಂತಹ ಓ, ಬಾದಶಾಹನೇ! ಸ್ವಯಂ ನನ್ನ ಕಾಲದ ಕಾವ್ಯದ ಅರಸನು ನಿಮ್ಮ ಸೇವೆಯಲ್ಲಿ ನಿರತನಾಗಿದ್ದಾನೆ. ನಿಮ್ಮ ಗುಣಗಾನದ ಮುತ್ತುಗಳಿಂದ ಉಭಯ ಜಗತ್ತುಗಳನ್ನು ತುಂಬಿ ಬಹಿರಂಗಗೊಳಿಸಿದ್ದೇನೆ. ಇದೇ ಪ್ರಕಾರವಾಗಿ ಅರ್ಥವರ್ಣನೆ ಮಾಡುವ ಸ್ವಭಾವವನ್ನು ನನ್ನಲ್ಲಿ ಸೃಷ್ಟಿಸು, ನನ್ನಂತೆ ಯಾರೂ ಕಳವಳ ಅನುಭವಿಸಿ ಅಸೂಯೆ ಪಡಲು ಅವಕಾಶ ಕೊಡಬಾರದು. ನನ್ನ ಸುಂದರ ಬರವಣಿಗೆಯ ದೆಸೆಯಿಂದ ಲೇಖಕರೇಕೆ ನನ್ನ ಬಗೆಗೆ ಅಸೂಯೆ ಪಡಬೇಕು? ವಿಚಾರದ ಮರುಭೂಮಿಯಲ್ಲಿ ವಿಫಲರಾದ ಜನರಿಗಾಗಿ ನನ್ನ ಸ್ವಭಾವವು ಅರ್ಥದ ಪರಿಶುದ್ಧ ಜಲ ಹೊರಹೊಮ್ಮಿಸುವ ಕಾರಂಜಿ ಆಗಿದೆ. ಶಾಸನಬದ್ಧವಾಗಿ ಪ್ರಾರ್ಥನೆ ಸಲ್ಲಿಸುವಾಗ ನಾನು ನಿನ್ನ ಗುಣಗಾನದಲ್ಲಿ ಜಿಪುಣತೆಯನ್ನು ತೋರಿಸುತ್ತೇನೆ. ಜಪಮಾಡುವಾಗ ಗುಣಗಾನದ ಧ್ವನಿಯನ್ನು ಸಂಪೂರ್ಣ ಶಕ್ತಿಯಿಂದ ಆಕಾಶದವರೆಗೆ ಉನ್ನತಗೊಳಿಸುತ್ತೇನೆ. ದೇವರನ್ನು ಗುರುತಿಸುವವರು ತಮ್ಮ ಇಷ್ಟಾರ್ಥ ಪೂರ್ಣಗೊಳಿಸುವವರೆಗೆ ವಿಶ್ವಾಸದೊಂದಿಗೆ ಪ್ರಾಣದೀಪದ ಬೆಳಕನ್ನು ಹೆಚ್ಚಿಸುತ್ತಾರೆ. ಇನಾಮುಗಳ ಹರಿವಾಣದ ಮೇಲೆ ಫಕೀರರಂತೆ, ತುಣುಕು ಹೆಕ್ಕುವವರಿಗಾಗಿ, ಆಕಾಶವು ಯಾವಾಗಲೂ ಮಿಂಚುವ ನಕ್ಷತ್ರಗಳನ್ನು ನೀಡುತ್ತದೆ'.

ಹಜರತ್ ಬಾದಶಾಹ ಗಾಜಿಯು ರಂದೋಲಾನಿಗೆ ಶಹಾಜಹಾನನ ಎರಡನೆಯ ಬಂದರು ಸ್ಥಳದಲ್ಲಿ; ಎಕ್‌ಪರಿಯ ಕೋಟೆಗೆ ಕಳುಹಿಸುವುದು

ಕರ್ನಾಟಕ ಮತ್ತು ಮಲೆನಾಡಿನ ಮಹತ್ಕಾರ್ಯಗಳ ಬಗೆಗೆ, ದಕ್ಷಿಣದ ಪುರಾತನ ಬಾದಶಾಹರ ಕಾಲದಿಂದ; ಶಾಹ ಫಿರ್ದೋಸನ ಅವಧಿಯವರೆಗೂ ಸಹ; ಸೂಕ್ತವಾದ ವ್ಯವಸ್ಥೆ ಮಾಡಲಾಗಿರಲಿಲ್ಲ. ಈ ಪ್ರದೇಶಗಳ ಮೇಲೆ ಜಯ ಸಂಪಾದಿಸಲು ಹಜರತ್ ಬಾದಶಾಹ ಗಾಜಿಯು ಧೈರ್ಯದಿಂದ ಕ್ರಮಗಳನ್ನು ಕೈಕೊಂಡನು. ಧರ್ಮ ಹಾಗೂ ಇಸ್ಲಾಂದ ಪ್ರದೇಶಗಳ ಯಶಸ್ಸಿನೊಂದಿಗೆ ವ್ಯವಸ್ಥೆ ಮಾಡುವಂತಹ ಬಾದಶಾಹನ ಹೆಸರಿನ ಒಂದು ರಾಜಮುದ್ರೆಯಲ್ಲಿ ವೈಭವ-ಗಾಂಭೀರ್ಯದ ಜಗತ್ತಿನ ರಾಜರ ಪ್ರಜೆಗಳು, ಆಡಳಿತ ಮತ್ತು ಸಾಮ್ರಾಜ್ಯದ ಸಂರಕ್ಷಣೆಯ ರಾಜಾಜ್ಞೆಯನ್ನು ಶೃಂಗರಿಸಲಾಗಿದೆ.

ಈ ಪ್ರದೇಶದ ಬಂಡುಕೋರರಲ್ಲಿ ಖ್ಯಾತನಾಗಿದ್ದ ರಾಮರಾಜನನ್ನು ಜಗತ್ತನ್ನು ಸಂರಕ್ಷಿಸುವಂತಹ ಖಡ್ಗದಿಂದ ನಾಶಗೊಳಿಸಲಾಯಿತು. ಎಲ್ಲ ನಿರ್ದಯಿ ಸ್ವಭಾವದ ನಾಸ್ತಿಕರ ರಾಜ್ಯಗಳನ್ನು ಮೂರು ವರ್ಷಗಳ ಅವಧಿಯಲ್ಲಿ ಜಯಿಸಿ, ಬಂಡುಕೋರರ ಕಿವಿಗಳಲ್ಲಿ ವಿಮರ್ಶೆಯ ಬಳೆಯನ್ನು ತೊಡಿಸಲಾಯಿತು. ಒಂದು ವೇಳೆ ಅವರು ಆಜ್ಞಾಪಾಲಕರಾಗಿ ಬಾದಶಾಹನೊಂದಿಗೆ ಸತ್ಯವಾದ ಹೃದಯ ಮತ್ತು ವಿಶ್ವಾಸದಿಂದ ಮಿತೃತ್ವ ಸಂಪಾದಿಸಿ, ಬಾದಶಾಹನ ಉನ್ನತವಾದ ಸೌಭಾಗ್ಯದಲ್ಲಿ ಅಲ್ಪ ಅದೃಷ್ಟವನ್ನಾದರೂ

ಪಡೆಯಲು ಬಯಸಿದರೆ; ರಾಜಮುದ್ರೆಯಲ್ಲಿ ಲಿಖಿತವಾದ ವಚನವನ್ನು ತಿಳಿದುಕೊಳ್ಳುತ್ತಿದ್ದರು. ಹಜರತ್ ಬಾದಶಾಹ ಗಾಜಿಯು ೧೦೩೦ ಹಿಜ್ರಿಯಲ್ಲಿ ಪ್ರವಾದಿ ಮಹಮ್ಮದನ ಪ್ರಕಾಶಮಾನವಾದ ಧರ್ಮವನ್ನು ಶಕ್ತಿಶಾಲಿಗೊಳಿಸಿ ಮುನ್ನಡೆಸಲು ಉನ್ನತವಾದ ಧೈರ್ಯವನ್ನು ತೋರಿಸಿದನು. ದರ್ಬಾರಿನಲ್ಲಿ ಪಾಲನೆ-ಪೋಷಣೆ ಹೊಂದಿದ ಒಂದು ಕುಟುಂಬಕ್ಕೆ ಸೇರಿದಂತಹ ಫರ್ಹಾದ್‌ಖಾನನ ಪುತ್ರನಾದ ರಂದೋಲಾಖಾನನನ್ನು ಬಾದಶಾಹನು ಸಂತೋಷದ ದರ್ಬಾರಿನಲ್ಲಿ ಕರೆಕಳುಹಿಸಿ, ಆತನಿಗೆ 'ರುಸ್ತುಮೆ ಜಮಾ' ಎಂಬ ಬಿರುದು ನೀಡಿ ಸೇನಾಪತಿಯ ಗೌರವ ವಸ್ತ್ರದ ಕಾಣಿಕೆ ನೀಡಿದನು.

ಈ ಪ್ರದೇಶಗಳ ಗಡಿಭಾಗಗಳ ಸರಹದ್ದಿನ ಏರ್ಪಾಡಿಗಾಗಿ ಎಚ್ಚರಿಕೆವಹಿಸಲು ರುಸ್ತುಮೆ ಜಮಾನಿಗೆ ತಿಳಿಸಲಾಯಿತು. ವೀರಭದ್ರನು ಎಕ್‌ಪರಿ ಕೋಟೆಯಲ್ಲಿ ಅಪಾರ ಭಂಡಾರ ಅನೇಕ ಕುದುರೆ ಸವಾರರು, ಕಾಲ್ದಳದ ಸೈನ್ಯ, ಸೇವಕ\ಪರಿಚಾರಕರು ಹಾಗೂ ಭದ್ರವಾದ ವಠಾರದಲ್ಲಿ ಬೀಡುಬಿಟ್ಟು, ಆಜ್ಞೋಲ್ಲಂಘನೆ ಮಾಡುತ್ತಿದ್ದನು. ಅವನಿಂದ ಕರ ಮತ್ತು ಕಂದಾಯ ಪಡೆಯಲು ಅವನನ್ನು ಸಜ್ಜುಗೊಳಿಸಲು ರುಸ್ತುಮೆ ಜಮಾನನ್ನು ಕಳುಹಿಸಲಾಯಿತು. ವಿಜಯಸಂಪನ್ನ ಸೈನ್ಯದೊಂದಿಗೆ ರುಸ್ತುಮೆ ಜಮಾನು, ಮಲೆನಾಡಿನ ಸರಹದ್ದಿಗೆ ತಲುಪಿದಾಗ ನಾಸ್ತಿಕರ ದೇಶದಲ್ಲಿ ಕ್ರಾಂತಿ ಉಂಟಾಯಿತು. ಅಪರಾಧಿಗಳು ಮತ್ತು ವಿಧ್ವಾಂಸಕ ಕೃತ್ಯಗಳಲ್ಲಿ ನಿರತರಾದವರ ನಡುವೆ ಇದ್ದಂತಹ ಸಹನಶೀಲ ಜನರು ಎಲ್ಲರೂ ಸೇರಿ ಹೆದರಿಕೆಯಿಂದ ಮನೆಗಳಲ್ಲಿ ಅಡಗಿ ಕುಳಿತರು. ವಿಜಯ ಸಂಪನ್ನ ಸೈನ್ಯದ ಆಗಮನದ ಸಮಾಚಾರ ತಿಳಿದು; ಬಸವಪಟ್ಟಣದ ರಾಜನಾದ ಕನಕ ನಾಯಕನು ಗಾಬರಿಗೊಂಡು, ಚಿಂತಾಕ್ರಾಂತನಾದನು.

ಉನ್ನತ ದರ್ಬಾರಿನ ಪ್ರಜೆಗಳಲ್ಲಿ ತಾನಾಗಿಯೇ ಸೇರಿಕೊಂಡು ಬಾದಶಾಹನ ಆಜ್ಞಾಪಾಲಕನಾಗಬೇಕೆಂದು ಸ್ವಯಂ-ಮುನ್ನಡೆಯಲು ಕನಕನಾಯಕನು ದೂರದೃಷ್ಟಿಯಿಂದ ಯೋಚನೆ ಮಾಡಿದನು. ಅವನೊಂದಿಗೆ ಸದಾ ಕಾಲ ಕಲಹದಲ್ಲಿ ತೊಡಗಿರುತ್ತಿದ್ದ ವೀರಭದ್ರನನ್ನು ತನ್ನ ಮಾರ್ಗದಿಂದ ತೆಗೆದು ಹಾಕಲು ಬಯಸಿದನು. ಅವನು ಸ್ವಯಂ ರುಸ್ತುಮೆ ಜಮಾನನ್ನು ಭೇಟಿಯಾಗಿ ಒಪ್ಪಂದ ಮಾಡಿಕೊಂಡು, ಬಾದಶಾಹನ ಆಜ್ಞಾಪಾಲನೆ ಮಾಡಲಾರಂಭಿಸಿದನು.

"ನೀವು ಕರ್ನಾಟಕ ಮತ್ತು ಮಲೆನಾಡಿನ ಮೇಲೆ ವಿಜಯ ಸಂಪಾದಿಸಲು ಅಪೇಕ್ಷಿಸುತ್ತಿರುವಾಗ ಮೊದಲು ನೀವು ಎಕ್‌ಪರಿ ಕೋಟೆಯನ್ನು ಸ್ವಾಧೀನಪಡಿಸಿಕೊಳ್ಳಲು ಮುಂದೆ ಸಾಗಿರಿ. ನೀವು ಸಾಗಲು ಬಯಸುತ್ತಿರುವ ಮಾರ್ಗವು ಅತ್ಯಂತ ಗಂಡಾಂತರಕಾರಿ ಹಾಗೂ ಭಯಾನಕವಾಗಿದೆ. ಯಾರೂ ಅಲ್ಲಿ ಹೋಗಿಲ್ಲ ಹಾಗೂ ಹೋಗುವುದೂ ಸಹ ಅಸಾಧ್ಯವಾಗಿದೆ. ವಿಜಯ-ಸಂಪನ್ನ ಸೈನ್ಯವು ವೀರಭದ್ರನ ಸಮೀಪ ತಲುಪುವ

ತನಕ ಯಾವುದೇ ಸಮಾಚಾರ ಅವನಿಗೆ ಗೊತ್ತಾಗದಂತೆ ನಾನು ನಿಮಗೆ ಒಂದು ಅಜ್ಞಾತ ಮಾರ್ಗದಿಂದ ಎಕ್‌ಪರಿ ಕೋಟೆಯವರೆಗೆ ತಲುಪಿಸುವೆನು. ಆದರೆ ಒಂದು ಕರಾರು ಇದೆ. ಬಾದಶಾಹನ ಸ್ವಾಧೀನದಲ್ಲಿರುವ ಪ್ರದೇಶಗಳೊಂದಿಗೆ ನಮ್ಮ ಹಳೆಯ ಸಂಬಂಧಗಳನ್ನು ಕಾಯಂಗೊಳಿಸಲು ಶಿಫಾರಸ್ಸು ಮಾಡಿರಿ ಹಾಗೂ ನಿಮ್ಮ ಸಾಮ್ರಾಜ್ಯದಿಂದ ನನಗಾಗಿ ಒಂದು ಲಕ್ಷ ಹೂನ್ ತರಿಸಿ ಕೊಡಿರಿ" ಎಂಬ ಒಂದು ಕರಾರಿನೊಂದಿಗೆ ಕಾರ್ಯಕೈಗೊಳ್ಳಲು ಕನಕನಾಯಕನು ಕೋರಿದನು.

ಈ ಕರಾರನ್ನು ರುಸ್ತುಮೆ ಜಮಾನು ಸಮ್ಮತಿಸಿ, ಕನಕನಾಯಕನನ್ನು ಸಮಾಧಾನಪಡಿಸಿ ಅವನಿಗೆ ಧೈರ್ಯ ನೀಡಿದನು. ಅವನನ್ನು ತನ್ನೊಂದಿಗೆ ಕರೆದುಕೊಂಡು ಎಕ್‌ಪರಿಯೆಡೆಗೆ ಸಾಗಿದನು. ಹಲವಾರು ಸ್ಥಳಗಳು ಮತ್ತು ತಂಗುದಾಣಗಳನ್ನು ದಾಟಿ, ಎಕ್‌ಪರಿಯ ಆಸುಪಾಸು ತಲುಪಿದಾಗ ವಿಜಯ-ಸಂಪನ್ನ ಸೈನ್ಯದ ಅಪ್ರತಿಮ ಅಶ್ವಾರೋಹಿಗಳು ಅತ್ಯುತ್ಸಾಹದಿಂದ ಆಕಾಶದ ಜೌನ್ನತ್ಯದ ಮೇಲೆ ಏರಿ, ನಾಲ್ಕೂ ಕಡೆಗಳಿಂದಲೂ ಮದ್ಯಪಾನ ಮತ್ತರಾದವರಂತೆ ಹಾಗೂ ಅಯೋಗ್ಯ ವ್ಯಕ್ತಿಗಳ ಮೆದುಳು ನಿಷ್ಕ್ರೀಯವಾಗುವಂತೆ ಚುರುಕುತನ ಮತ್ತು ಶೌರ್ಯದ ಕುದುರೆಗಳನ್ನು ಕೋಟೆಯಲ್ಲಿ ಓಡಿಸಿದರು.

ಕಬ್ಬಿಣದ ಶಿರಸ್ತ್ರಾಣಗಳನ್ನು ಭೇದಿಸುವಂತಹ ಖಡ್ಗಗಳ ಸಂಚಲನದಿಂದ ವಿನಾಶಕಾರಿ ಬಂಡುಕೋರರು ಪರಾಜಿತರಾದರು.

'ಸಾಗರದಂತಹ ವೈಭವ-ಗಾಂಭೀರ್ಯದ ಪರಾಕ್ರಮಿಗಳ ಕೈಗಳಿಂದ, ಮರುಭೂಮಿ ಮತ್ತು ಪರ್ವತದ ಹೃದಯಗಳು ಭಗ್ನವಾದವು. ಯುದ್ಧ ನಿರತರ ಖಡ್ಗಗಳ ಮಿಂಚಿನಿಂದ, ಪೂರ್ವ-ಪಶ್ಚಿಮದವರ ದ್ವಾರಗಳಿಗೆ ಸೂರ್ಯನು ಅಗ್ನಿ ಸ್ಪರ್ಶ ಮಾಡಿದನು. ಅರಣ್ಯ ಮತ್ತು ಜನಭರಿತ ಪ್ರದೇಶಗಳು ರಕ್ತದಿಂದ ಕೆಂಬಣ್ಣ ಪಡೆದವು, ಕರುಳಿನ ಕುಡಿಗಳಿಂದ ಭೂಮಿಯು ಕರಗಿತು'.

ವೀರಭದ್ರನು ಏಳುತ್ತ-ಬೀಳುತ್ತ ಕಸನೌಲ್ ದುರ್ಗದ ಕೋಟೆಯೆಡೆಗೆ ಓಡಿ ಹೋದನು. ಅವನು ಪಲಾಯನದ ಮಾರ್ಗವನ್ನು ಅನುಸರಿಸಿ, ತನ್ನ ಪ್ರಾಣವನ್ನು ಸಂರಕ್ಷಿಸಿಕೊಂಡನು. ವಿಜಯ ಮತ್ತು ಯಶಸ್ಸಿನ ಗಾಳಿಯು ಇಸ್ಲಾಂ ಧರ್ಮದ ಹೊಸ ವಸಂತ ಋತುವಿನ ದ್ವಾರದಿಂದ ಒಳಗೆ ಬೀಸಲಾರಂಭಿಸಿತು. ಪ್ರಪಂಚವನ್ನು ಶೃಂಗರಿಸುವಂತಹ ಕ್ಷಿತಿಜದಿಂದ ಪ್ರಾತಃಕಾಲವು ಜಗತ್ತನ್ನು ನಿದ್ರೆಯಿಂದ ಎಚ್ಚರಿಸುವಂತೆ ಕಾಣಲಾರಂಭಿಸಿತು. ರುಸ್ತುಮೆ ಜಮಾನು ಎಕ್‌ಪರಿಯ ಕೋಟೆಯನ್ನು ಸ್ವಾಧೀನಪಡಿಸಿಕೊಂಡು ಅಂದಾಜು ಒಂದು ತಿಂಗಳಿನವರೆಗೆ ಅಲ್ಲಿ ಇದ್ದನು. ಹಾಗೂ ಬಾದಶಾಹ ಗಾಜಿಗೆ ನೀಡಿದ ಆಶ್ವಾಸನೆಯ ಗೌರವವನ್ನು ರಕ್ಷಿಸಿದನು. ಅವನು ವೀರಭದ್ರನ ರಾಜ್ಯದಿಂದ ಕನಕನಾಯಕನಿಗೆ ಒಂದು ಲಕ್ಷ ಹೂನ್ ನೀಡಿದನು.

ವೀರಭದ್ರನು ಆಶ್ರಯಪಡೆದಿದ್ದ ಕಸನೌಲ್ ದುರ್ಗದ ಕೋಟೆಯ ಮೇಲೆ ವಿಜಯ-ಸಂಪನ್ನ ಸೈನ್ಯದೊಂದಿಗೆ ರುಸ್ತುಮೆ ಜಮಾನು ಆಕ್ರಮಣ ಮಾಡಿದನು. ಹಜರತ್ ಬಾದಶಾಹ ಗಾಜಿಯ ಸೈನಿಕರು ಅಲ್ಲಿಗೆ ತಲುಪುತ್ತಲೇ, ತಿರುಗುತ್ತಿರುವ ಆಕಾಶವನ್ನು ಹಾವಿನಂತಹ ಹಗ್ಗದ ಕುಣಿಕೆಯ ಬಳಿ ಇರುವ ಶಿರಸ್ತ್ರಾಣವೆಂದು ಭಾವಿಸಲಾಯಿತು. ವಠಾರದ ಸುತ್ತಲೂ ಮುತ್ತಿಗೆ ಹಾಕಿ, ರಣಕಹಳೆ ಬಾರಿಸುವವರು, ಯುದ್ಧದ ದೊಡ್ಡ ಡೋಲು ಹಾಗೂ ನಗಾರಿಗಳ ಧ್ವನಿಗಳು; ಗಾಬರಿಗೊಂಡ ವೈರಿಗಳ ಮೆದುಳನ್ನು ಹಿಂಜುತ್ತಿರುವ ಅರಳೆಯಂತೆ ಕಿವಿಗಳ ಮಾರ್ಗದಿಂದ ಹೊರಗೆ ತಂದವು.

'ದ್ವೇಷವನ್ನು ಕ್ಷಮಿಸುವಂತಹ ವೀರರ ಗರ್ಜನೆಗಳಿಂದ, ಉಭಯ ಜಗತ್ತುಗಳ ತಾಳ್ಮೆ ಮತ್ತು ಶಾಂತಿಯು ಮಾಯವಾಗಿದೆ, ಆ ಸಮಯ ಆರ್ತನಾದ/ಚೀರಾಟದ ಹೆದರಿಕೆಯಿಂದ ಆಕಾಶವು, ಕಿವಿಗಳಲ್ಲಿ ಪ್ರಾತಃಕಾಲದ ಅರಳೆಯನ್ನು ಇಟ್ಟಿತ್ತು'.

ವಿಜಯ-ಸಂಪನ್ನ ಸೈನ್ಯದ ವೀರ ಸೈನಿಕರು ಬಂದಿದ್ದಾರೆ ಮತ್ತು ಅವರು ಖಡ್ಗದಿಂದ ಆಕ್ರಮಣ ಮಾಡಿ, ಮಿಥುನ ರಾಶಿಯಲ್ಲಿ ರಂಧ್ರವನ್ನುಂಟು ಮಾಡಿ; ಪೃಥ್ವಿಯ ಆಕಳಿನ ನಿತಂಬದ ಕೊಚ್ಚಿದ ಮಾಂಸ ಮಾಡಬಲ್ಲವರೆಂಬುದು, ವೀರಭದ್ರನಿಗೆ ಗೊತ್ತಾದಾಗ ಅವನು ಗಾಬರಿಗೊಂಡು, ನೀರಿನ ಸುಳಿಯಂತೆ ಕೆಳಗೆ ಬಿದ್ದನು.

ವೀರಭದ್ರನು ಬಾದಶಾಹನ ಸೇನಾಪತಿಗೆ ವಿಧೇಯನಾಗಿ, ಆಜ್ಞಾಪಾಲನೆ ಮಾಡುತ್ತ; ಹಜರತ್ ಬಾದಶಾಹ ಗಾಜಿಗೆ ಅರವತ್ತು ಲಕ್ಷ ಹೊನ್ ಮತ್ತು ತನ್ನ ಅರ್ಧರಾಜ್ಯವನ್ನು ತೆಗೆದುಕೊಳ್ಳಲು ಒಪ್ಪಿಕೊಳ್ಳುವಂತೆ ಸೇನಾಪತಿಯನ್ನು ಪ್ರೇರೇಪಿಸಿದನು. ವಿಜಯ-ಸಂಪನ್ನನಾದ ರುಸ್ತುಮೆ ಜಮಾನು ನಿಗದಿತ ಬಂಡವಾಳಹಾಗೂ ಅಪಾರ ಸಾಮಾನುಗಳೊಂದಿಗೆ ಜಗತ್ತಿಗೆ ಸಂರಕ್ಷಣೆ ನೀಡುವಂತಹ ಬಾದಶಾಹನ ದರ್ಬಾರಿಗೆ ತಲುಪಿದನು. ಅವನು ಸಾಮ್ರಾಟನ ಇನಾಮುಗಳನ್ನು ಪಡೆದು; ಅದ್ವಿತೀಯ ವ್ಯಕ್ತಿಯಾದನು.

■

*

ಅಧ್ಯಾಯ – ೮

ಕರ್ನಾಟಕ ಮತ್ತು ಮಲೆನಾಡನ್ನು ಜಯಿಸಲು, ರುಸ್ತುಮೆ ಜಮಾನನ್ನು ಎರಡನೆಯ ಸಲ ಕಳುಹಿಸುವುದು.

ಯಶಸ್ಸು ಸಂಪಾದಿಸಿದ ವಿಜಯಸಂಪನ್ನ ಜನರು ತಮ್ಮ ಹುಬ್ಬುಗಳ ಸಂಕೇತದಿಂದ ಹೃದಯ ಸಾಮ್ರಾಜ್ಯಗಳ ಮೇಲೆ ವಿಜಯ ಸಂಪಾದಿಸಿದ್ದಾರೆ. ಬಾದಶಾಹನ ಕೃಪೆಯಿಂದ ರುಸ್ತುಮೆ ಜಮಾನು ಎಕ್‌ಪರಿ ಕೋಟೆಯ ಮೇಲೆ ವಿಜಯ ಸಂಪಾದಿಸಿದ ನಂತರ, ಕೆಲವು ದಿನಗಳವರೆಗೆ ಸುಖ–ಸಂತೋಷದ ರುಚಿಯನ್ನು ಅನುಭವಿಸಿದ್ದಾನೆ. ಆನಂತರ ಬಾದಶಾಹನ ಆಜ್ಞೆಗೆ ಅನುಸಾರವಾಗಿ; ಕರ್ನಾಟಕ ಹಾಗೂ ಮಲೆನಾಡಿನ ರಾಜ್ಯಗಳೆಡೆಗೆ ಎರಡನೆಯ ಸಲ ತೆರಳಿದನು. ಅನುಮೋದಿಸಲ್ಪಟ್ಟ ಮತ್ತು ವಿಜಯ ಸೈನ್ಯದೊಂದಿಗೆ ಅವನು ತುಂಗಭದ್ರಾ ನದಿಯನ್ನು ದಾಟಿದಾಗ, ತಾರ್‌ಪರಿಯ ಕೋಟೆಯ ಮೇಲೆ ದಾಳಿ ಮಾಡಿ, ಅವೆಲ್ಲ ಪ್ರದೇಶಗಳನ್ನು ತನ್ನ ವಶಕ್ಕೆ ಪಡೆಯಲು ಬಯಸಿದನು. ಭೂತದಂತಹ ಸ್ವಭಾವದ ಘೂಂಕಾರ ಮಾಡುವ ನಾಸ್ತಿಕರ ಮೇಲೆ ರುಸ್ತುಮೆ ಜಮಾನ ವಿನಾಶದ ಹೆದರಿಕೆಯು ಆವರಿಸಿತು. ಇದೇ ಕಾರಣದಿಂದ 'ಮತಿವರಾನ್' ಎಂದು ಕರೆಯಿಸಿಕೊಳ್ಳಲ್ಪಡುತ್ತಿದ್ದ ಆ ಪ್ರದೇಶಗಳ ಅರಸರು, ಯಾವುದೇ ವಿಜಯ ರಾಜರ ಎದುರಿಗೆ ತಲೆ ಬಾಗಿಸಿರಲಿಲ್ಲ.

ವಿಜಯ–ಸಂಪನ್ನ ಸೈನಿಕರ ಭೀತಿಯಿಂದ ಪರಾಜಿತರಾಗಿ ತಮ್ಮ ಚಿಂತಾಕ್ರಾಂತವಾದ ತಲೆಗಳನ್ನು ನಾಚಿಕೆಯಿಂದ ಅವರು ಮೊಣಕಾಲುಗಳ ಮೇಲೆ ಇಟ್ಟುಕೊಂಡರು. 'ತಾರ್‌ಪರಿಯ ಕೋಟೆಯು ಮಹಾನ್ ಸಾಮ್ರಾಜ್ಯದ ಆಳ್ವಿಕೆಗೆ ಒಳಗಾದರೆ, ಕರ್ನಾಟಕ ಮತ್ತು ಮಲೆನಾಡಿನ ರಾಜ್ಯಗಳು ಸಂಪೂರ್ಣವಾಗಿ ಇಸ್ಲಾಂಧರ್ಮದ ಸಾಮ್ರಾಟರ ವಶವಾಗುವವು. ಬಾದಶಾಹ ಗಾಜಿಯ ಸೈನ್ಯವು ಈ

ದಿಕ್ಕಿನಲ್ಲಿ ಮುನ್ನಡೆಯದಿರಲಿ, ಈಗ ಇಂತಹ ಪ್ರಯತ್ನ ಮಾಡಿರಿ ಎಂಬ ಸಮಾಚಾರವನ್ನು ರಹಸ್ಯ ಮಾರ್ಗದಿಂದ; ಕನಕನಾಯಕನಿಗೆ ತಿಳಿಸಲಾಯಿತು. ಕನಕನಾಯಕನ ಅಂತರಂಗವೂ ಸಹ ಬಹಿರಂಗದಂತೆ ಕೃತಜ್ಞತೆಯ ಕತ್ತಲೆಯಲ್ಲಿ ಮುಳುಗಿತ್ತು.

ಅವನು 'ಮತಿವರಾನ್'ರ ಧರ್ಮಾಜ್ಞೆಗೆ ಅನುಸಾರವಾಗಿ ನಡೆದನು. 'ತಾರ್ತ್‌ಪರಿಯ ಮಾರ್ಗದಲ್ಲಿ ಗಿಡಮರಗಳಿಂದ ತುಂಬಿದ ಅನೇಕ ಅರಣ್ಯಗಳು ಹಾಗೂ ಭಯಾನಕ ಪರ್ವತಗಳು ಕಂಡುಬರುತ್ತವೆ. ಈ ದಾರಿಯಲ್ಲಿ ಸುಲಭವಾಗಿ ಸಂಚರಿಸಲು ಸಾಧ್ಯವಿಲ್ಲ. ತಾರ್ತ್‌ಪರಿಯ ಮಹತ್ಕಾರ್ಯವನ್ನು ಈಗಿನ ಮಟ್ಟಿಗೆ ತಡೆಹಿಡಿದು; ಪಂಗಳೂರ್ ಕೋಟೆಯ ಮೇಲೆ ಸೈನ್ಯವನ್ನು ಏರಿಸಿರಿ. ಅಲ್ಲಿ ಗೇನಿಗೋಂದಾನು ಅಪಾರ ಭಂಡಾರ ಹೊಂದಿ, ಆತ್ಮಪ್ರತಿಷ್ಠೆಯನ್ನು ಪ್ರದರ್ಶಿಸುತ್ತಾನೆ. ಪಂಗಳೂರ್ ಕೋಟೆಯನ್ನು ಸ್ವಾಧೀನಪಡಿಸಿಕೊಂಡಾಗ, ಅಗಣಿತವಾದ ಸಾಮಾನು ಮತ್ತು ಸಂಪತ್ತು ಕೈ ಸೇರುವುದು. ಇದು ಸಮಯದ ಔಚಿತ್ಯವಾಗಿದೆ' ಎಂದು ಕನಕನಾಯಕನು, ವಂಚನೆ ಮಾಡುವಂತಹ ಯೋಜನೆಗೆ ಅನುಗುಣವಾಗಿ; ರುಸ್ತುಮೆ ಜಮಾನಿಗೆ ಹೇಳಿದನು.

ಕಸ್ತೂರಿ ರಂಗನ ಸ್ವಾಧೀನದಲ್ಲಿರುವಂತಹ ಶಿರಿಯ ಕೋಟೆಯನ್ನು ಪಡೆದು, ತನಗೆ ಕೊಡಬೇಕೆಂದು, ಕನಕನಾಯಕನು ಅರಿಕೆ ಮಾಡಿಕೊಂಡನು. ರುಸ್ತುಮೆ ಜಮಾನು ಕನಕನಾಯಕನ ಪಿತೂರಿತನವನ್ನು ತಿಳಿದುಕೊಂಡರೂ ಸಹ; ಆತನ ಕೋರಿಕೆಯನ್ನು ಸಮ್ಮತಿಸಿದನು. ಹಜರತ್ ಬಾದಶಾಹ ಗಾಜಿಯ ಮೇಲೆ ವಿಶ್ವಾಸವಿಟ್ಟು, ತನ್ನ ಹೃದಯದಲ್ಲಿ ಯಾವುದೇ ಸಂಶಯಕ್ಕೆ ಆಸ್ಪದ ನೀಡಲಿಲ್ಲ. ಅವನು ಇತರ ಮಂತ್ರಿಗಳೊಂದಿಗೆ ಪಂಗಳೂರ್ ಕಡೆಗೆ ಸಾಗಿದನು.

'ಸಾಮ್ರಾಜ್ಯಗಳ ಪರಾಕ್ರಮಶಾಲಿ ರಾಜರು, ದೇಶವನ್ನು ವಿಸ್ತರಿಸಲು ಮುನ್ನಡೆದರು, ಶಾಸನಬದ್ಧವಾಗಿ ಭೂಮಿಯಿಂದ ಬರುವ ಆದಾಯವು, ಆಕಾಶಕ್ಕೆ ಸಮಾನವೆನಿಸಲು ಅದು ಗುರಾಣಿ ಆಗುತ್ತದೆ, ಪ್ರೇಯಸಿಯರಂತೆ ಗುರಿ ಇಟ್ಟು, ಸಮಾನತೆಯನ್ನು ತಲುಪುತ್ತಾರೆ. ಮಾರ್ಗದ ಧೂಳಿಯನ್ನು ಕಣ್ಣಲ್ಲಿ ತುಂಬಿಕೊಂಡು, ಕಾಡಿಗೆ ಮಾಡಿಕೊಳ್ಳುತ್ತಾರೆ. ಬಾಣದ ತುದಿಯಿಂದ ಅವರು ಪ್ರತ್ಯಕ್ಷರಾಗುತ್ತಾರೆ, ಆಕಾಶ ಗಂಗೆಯ ರಕ್ತನಾಳವು, ಶಸ್ತ್ರ ಸಲಾಕಿಗಳಿಂದ ತುಂಬುತ್ತದೆ, ಮೇಲಿಂದ ಮೇಲೆ ಕುದುರೆಗಳ ಸವಾರಿ ಮಾಡಿ, ಆಕಾಶದ ಔನ್ನತ್ಯದ ಮೇಲೆ ಧ್ವಜಗಳನ್ನು ಹಾರಿಸುತ್ತಾರೆ'.

ಎತ್ತರದ ಧ್ವಜಗಳ ರಸ-ಸಿಂಧೂರದಂತಹ ಬಟ್ಟೆಯ ತುಂಡುಗಳು ಗಾಳಿಯಲ್ಲಿ ಚಲಿಸುತ್ತಿದ್ದರೆ; ಆಕಾಶದ ಮೇಲೆ ಕರಗಿದ ಮಾಣಿಕ್ಯದಂತಹ ಆವೃತವಾದ ಕೆಂಬಣ್ಣದಲ್ಲಿ ತರಂಗಗಳು ಈಜುತ್ತಿರುವಂತೆ ಕಾಣುತ್ತವೆ. ಸ್ವಯಂ ಅಲಂಕೃತರಾದ ಪ್ರೇಯಸಿಯರ ಮುಖದ ಮೇಲಿಂದ ಪರದೆಯನ್ನು ತೆಗೆದು ಹಾಕಲಾಗಿದೆಯೋ ಎಂಬಂತೆ; ವಿಜಯ

ಮತ್ತು ಯಶಸ್ಸಿನ ಸಾಕ್ಷಿದಾರರ ವಿಜಯದ ದೊಡ್ಡ ನಗಾರಿಯ ಧ್ವನಿಯು ಆಗಿದೆ. ವಿಜಯ-ಸಂಪನ್ನ ಸೈನ್ಯದ ಯಶಸ್ವೀ ಸೈನಿಕರು ಪಲಂಗಲೂರಿನ ಮಾರ್ಗವನ್ನು ಕ್ರಮಿಸಿದಾಗ; ರುಸ್ತುಮೆ ಜಮಾನು ವ್ಯವಹಾರ ನೀತಿಗೆ ಶಿರಾದ ಕೋಟೆಯನ್ನು ಜಯಿಸಲು; ಶಸ್ತ್ರಾಸ್ತ್ರಧಾರಿ ಸೈನಿಕರೊಂದಿಗೆ, ಅಫಜಲ್‌ಖಾನನನ್ನು ತನಗಿಂತಲೂ ಮೊದಲು ಕಳುಹಿಸಿದನು.

ಶಿರಾಕೋಟೆಗೆ ಮುತ್ತಿಗೆ ಹಾಕಿ ಕುಳಿತುಕೊಂಡಿರಬೇಕೆಂದು, ಅಫಜಲ್‌ಖಾನನಿಗೆ ಆಜ್ಞಾಪಿಸಲಾಯಿತು. ಅಷ್ಟರಲ್ಲಿಯೇ ರುಸ್ತುಮೆ ಜಮಾನು ಹಿಂದಿನಿಂದ ಸ್ವಯಂ ಅಲ್ಲಿಗೆ ತಲುಪುವದಾಗಿ ತಿಳಿಸಿದನು. ಅಫಜಲ್‌ಖಾನನು ಶೀಘ್ರಗತಿಯಿಂದ ಮಾರ್ಗದ ತಂಗುದಾಣ/ತಂಗು ಘಟ್ಟಗಳನ್ನು ದಾಟಿ; ಶಿರಾದ ಕೋಟೆಯ ವಠಾರವನ್ನು ತಲುಪಿದನು. ಆಗ, ಕಸ್ತೂರಿ ರಂಗನು ಇಸ್ಲಾಂ ಧರ್ಮದ ವೀರರ ಹೆದರಿಕೆಯಿಂದ ಧೈರ್ಯವನ್ನು ಕಳೆದುಕೊಂಡು, ಅಫಜಲಖಾನನಿಗೆ ಭೇಟಿಯಾಗಿ ಸಂರಕ್ಷಣೆಯ ಮನವಿ ಮಾಡಿಕೊಂಡು, ತನ್ನ ಧ್ಯೇಯ ಸಾಧನೆಯಲ್ಲಿ ಯಶಸ್ವಿಯಾಗಲು ಕೋಟೆಯಿಂದ ಹೊರಗೆ ಬಂದನು.

'ಯಾವ ವ್ಯಕ್ತಿಯನ್ನು ಆಕಾಶವು ಕಾಲಿನಿಂದ ತುಳಿಯಲು ಬಯಸುತ್ತದೆಯೋ, ಒಂದು ವೇಳೆ (ಅಂತಹ ವ್ಯಕ್ತಿಯು) ಸಿಂಹಾಸನದ ಮೇಲೆ ಆಸೀನನಾದರೆ, ಸ್ವಯಂ ಸಿಂಹಾಸನದಿಂದ ಪತನವಾಗುತ್ತಾನೆ'.

ದುರ್ದೈವದಿಂದ, ಭೇಟಿಯ ಸಂದರ್ಭದಲ್ಲಿ ಕೆಲವು ಅಪ್ರಿಯವಾದ ಮಾತುಗಳು ವ್ಯಕ್ತವಾದುದರಿಂದ ಫಿತೂರಿ/ಕೋಲಾಹಲ ಉದ್ಭವಿಸಿತು. ಅದೇ ಸಮಯ ಅಫಜಲ್‌ಖಾನನು ಕಸ್ತೂರಿ ರಂಗನನ್ನು ಕೊಂದನು. ಕಸ್ತೂರಿ ರಂಗನ ಜೀವನದ ಅಂತ್ಯವಾದ ನಂತರ; ಆತನ ಆಜ್ಞಾಪಾಲಕರು ಕೋಟೆಯ ಒಳಗೆ ಓಡಿ ಹೋಗಿ ವಠಾರದ ದ್ವಾರವನ್ನು ಭದ್ರವಾಗಿ ಮುಚ್ಚಿ; ಯುದ್ಧವನ್ನು ಆರಂಭಿಸಿದರು. ಅದೇ ಕಾಲದಲ್ಲಿ ರುಸ್ತುಮೆ ಜಮಾನು ಬುಸುಗುಟ್ಟುವ ಹೆಬ್ಬಾವಿನಂತೆ ಪರಾಕ್ರಮಶಾಲಿ ಸೈನಿಕರೊಂದಿಗೆ ಅಲ್ಲಿಗೆ ಆಗಮಿಸಿದನು. ಅವನು ಸಣ್ಣ ಪಟ್ಟಣವನ್ನು ವಶಪಡಿಸಿಕೊಳ್ಳಲು ಎಲ್ಲ ಅನುಭವಿಕ ಸೈನಿಕರಿಗೆ ಎಚ್ಚರಿಕೆ ನೀಡಿದನು.

ರಣರಂಗದ ಎಲ್ಲ ವೀರ ಸೈನಿಕರು, ರಕ್ತಹರಿಸುವ ಖಡ್ಗಗಳನ್ನು ಪ್ರತಿಕಾರದ ಒರೆಯಿಂದ ಸೆಳೆದು; ಸಣ್ಣ ಪಟ್ಟಣವನ್ನು ಸ್ವಾಧೀನಪಡಿಸಿಕೊಳ್ಳುವ ಕಾರ್ಯದಲ್ಲಿ ನಿರತರಾದರು. ತೀಕ್ಷ್ಣವಾದ ಖಡ್ಗಗಳನ್ನು ಝುಳಪಿಸಿ, ಕತ್ತರಿಸಿದ ಶಿರಗಳ ಗುಡ್ಡೆ ಹಾಕಿದರು. ಅಣುಗಳ ಸುತ್ತಲೂ ತಿರುಗುತ್ತ ಸೂರ್ಯನು ಅವುಗಳನ್ನು ಗಾಳಿಯಲ್ಲಿ ಹಾರಿಸಿದನು. ಪಟ್ಟಣದಲ್ಲಿ ಬೀಡುಬಿಟ್ಟಿದ್ದ ವಿದ್ಯುತ್ತಿನಂತಹ ಮಿಂಚಿನ ವೇಗದ ಸೈನಿಕರು ಯುದ್ಧದ ಹಿಂಸಾಚಾರದಿಂದ, ಎಲ್ಲೆಡೆಗೆ ಓಡಾಟ ಮಾಡಲು ಆರಂಭಿಸಿದರು. ಅವರ

ಸಂಪೂರ್ಣ ದೇಹವನ್ನು, ಕ್ರೋಧ ಮತ್ತು ವೈರತ್ವದ ಬೆಂಕಿಯು ದಹಿಸಲಾರಂಭಿಸಿತು. ಅವರು ಬಂದೂಕಿನ ಕಾರ್ಯಾಚರಣೆಯಲ್ಲಿ ನಿರತರಾದರು. ತೋಪು ಮತ್ತು ಬಂದೂಕಿನ ಧ್ವನಿಯು, ವೀರ ಸೈನಿಕರ ಕಿವಿಗಳ ಪರದೆಗಳಿಗೆ ಗಾಯವನ್ನುಂಟು ಮಾಡಿ; ಅವುಗಳಲ್ಲಿ ಜರಡಿಯಂತಹ ರಂಧ್ರಗಳನ್ನು ಮಾಡಿತು. ಪ್ರತಿಯೊಂದು ರಂಧ್ರದಿಂದ ಉರಿಯುತ್ತಿರುವ ಕಿಡಿಗಳ ಬೀಜ-ರಾಶಿಯು, ಅವರ ಮೇಲೆ ಪತನವಾಗುತ್ತಿತ್ತು.

'ಜ್ವಾಲೆಯು ಸ್ವಯಂ ಕಿಡಿಗಳಂತೆ ತುಂಡು ತುಂಡಾಗುವಂತೆ, ಕ್ರೋಧ ಹಾಗೂ ದ್ವೇಷದ ಬೆಂಕಿಯು ಉಗ್ರಸ್ವರೂಪ ಹೊಂದಿತು, ಗಾಳಿಯು ಉಷ್ಣತೆಯಿಂದ ದರ್ಪಣದಂತಹ ಖಡ್ಗವು, ನೀರಿನ ಕಾಲುವೆಯಂತೆ, ಒರೆಯಿಂದ ಹೊರಗೆ ಬಂದಿದೆ'.

ದೀಪದ ಬತ್ತಿಯೊಂದಿಗೆ, ಕಂದೀಲಿನ ಹಿಡಿಕೆಯೂ ಸಹ ಉರಿಯಲಾರಂಭಿಸಿದಂತೆ; ಯುದ್ಧ ಮತ್ತು ವೈರತ್ವದ ಅಗ್ನಿಯು ತೀಕ್ಷ್ಣವಾಯಿತು. ದುರ್ದೈವಿ ವೈರಿಗಳು ಸಮರ ಶಕ್ತಿಯನ್ನು ಕಳೆದುಕೊಂಡು, ತೋಪು ಹಾಗೂ ಬಂದೂಕಿನ ಕಾರ್ಯಾಚರಣೆಯನ್ನು ಸ್ಥಗಿತಗೊಳಿಸಿದರು. ಪ್ರೇಯಸಿಯರ ಉರಿಯುತ್ತಿರುವ ಎದೆಯಂತೆ; ಉಷ್ಣವಾಗುವ ಯುದ್ಧದ ಕೋಲಾಹಲವು ಲಾಲಸೆ ತುಂಬಿದ ನಿರಾಸೆಯ ಹೃದಯಗಳಂತೆ ತಣ್ಣಗಾಯಿತು.

ಬರಿದಾದ ಹೊಟ್ಟೆಯುಳ್ಳ ತೋಪು, ಕ್ಷಾಮಪೀಡಿತ ಜನರು ಹಸಿವೆಯಿಂದ ಬಳಲುವ ಕಣ್ಣುಗಳನ್ನು ಹೊಂದಿದವರಂತೆ; ಒಂದು ತುತ್ತಿನ ಆಸೆಯಲ್ಲಿ ಬಾಯ್ದೆರೆದು ಬಿದ್ದತ್ತು. ಉದ್ದವಾದ ಕೈಗಳುಳ್ಳ ಬಂದೂಕುಗಳು, ವಿನಾಶ ಮತ್ತು ಧ್ವಂಸಕತೆಗೆ ಬಲಿಯಾದ ಜನರಂತೆ ಗುಂಡುಗಳ ನಗದು ಸುರಿಸುವಿಕೆಯನ್ನು ಸ್ಥಗಿತಗೊಳಿಸಿದ್ದವು. ಸ್ಥಿರತೆ ಹಾಗೂ ಕರಾರುಗಳ ಮೇಲೆ ದೃಢವಾಗಿರುವ ಜನರು ವೈರಿಗಳನ್ನು ಅಲುಗಾಡಿಸಿದ್ದಾರೆಂಬುದನ್ನು ಯಶಸ್ಸಿನ ಫಲ ಪಡೆದಂತಹ ಸೈನಿಕರು ಕಂಡಾಗ; ಸಿಡಿಲು ಸುರಿಸುವ ಖಡ್ಗವನ್ನು ಅಪರಾಧಿಗಳಾದ ನಾಸ್ತಿಕರ ರಕ್ತ ಹರಿಸಲು ಧ್ವಜವನ್ನಾಗಿ ಪರಿವರ್ತಿಸಿ ಹಜ್ಜೆಯ ಮೇಲೆ, ಪಿತೂರಿ ಮತ್ತು ದಂಗೆಯ ಬಿರುಗಾಳಿಯನ್ನು ಎಬ್ಬಿಸಿದರು. ಮೂರನೆಯ ದಿನ ಪಟ್ಟಣದ ವಠಾರವು ವೈಭವಶಾಲಿ ಸಾಮ್ರಾಜ್ಯದ ವಿಜಯದ ವ್ಯಾಪ್ತಿಯಲ್ಲಿ ಬಂದಾಗ, ಇಸ್ಲಾಂ ಧರ್ಮದ ಸೂರ್ಯನು ಪ್ರತಿಷ್ಠೆ ಹಾಗೂ ಗೌರವದ ಔನ್ನತ್ಯದ ಮೇಲೆ ಪ್ರತ್ಯಕ್ಷನಾದನು. ರಕ್ತ ಸುರಿಸುವಂತಹ ತಲೆಗಳನ್ನು ಒಟ್ಟುಗೂಡಿಸಿ ತಂದು, ಕಟ್ಟಡವನ್ನು ವರ್ಣಮಯಗೊಳಿಸಿರೆಂದು, ರುಸ್ತುಮೆ ಜಮಾನು ಆಜ್ಞಾಪಿಸಿದನು. ಸೈನಿಕರು ತಮ್ಮ ಪ್ರಾಣತ್ಯಾಗ ಮಾಡಿ, ಆವೇಶಭರಿತ ನದಿಯಂತೆ, ಕಗ್ಗೊಲೆ ಹಾಗೂ ಯುದ್ಧ ಮಾಡುತ್ತ ಕೋಟೆಯ ಹೊರಗಡೆ ನಡೆದರು. ವಿಜಯ-ಸಂಪನ್ನ ಸೈನ್ಯದ ಯಶಸ್ವೀ ಸೈನಿಕರು ವಿಪತ್ತಿನಲ್ಲಿ ಸಿಲುಕಿದ ಜನರ ಮಾರ್ಗದರ್ಶಕರ ದಾರಿಯನ್ನು

ಪ್ರತಿಬಂಧಿಸಿ ಕೊಲ್ಲಲಾರಂಭಿಸಿದರು. ವೀರರ ಖಡ್ಗಗಳಿಂದ ಬೀಸುವ ಗಾಳಿಯು, ಯುದ್ಧದ ಪರಿಸರವನ್ನು ರಕ್ತ ಸುರಿಸುವ ತಲೆಗಳಿಂದ ತುಂಬಿತು. ಬರ್ಚಿ ತುದಿಗಳ ಚಲನವಲನೆಯು, ಆಕಾಶವನ್ನು ಯಕೃತ್ತಿನಂತೆ ಭಗ್ನಗೊಳಿಸಿತು.

ಬಿಲ್ಲುಗಳಿಂದ ಹೊರಡುವ ಬಾಣಗಳ ಗುಂಪು, ಹಾವಿನಿಂದ ಕಚ್ಚಿಸಿಕೊಂಡವರಂತೆ; ವೈರಿಗಳ ಜೀವನವನ್ನು ಗಂಡಾಂತರಕ್ಕೆ ಸಿಲುಕಿಸಿದವು. ಮಿಂಚುವ ಬಾಣಗಳ ತುದಿಯ ಶಸ್ತ್ರಸಲಾಕಿಗಳು, ಅಪರಾಧಿಗಳಾದ ನಾಸ್ತಿಕರ ದೇಹಗಳಲ್ಲಿ ವಿಷವನ್ನು ಬೆರೆಸಿದವು. ಶೌರ್ಯ ಮತ್ತು ದ್ವೇಷವನ್ನು ಪ್ರದರ್ಶಿಸುವ ಉದ್ದೇಶದಿಂದ, ಕೋಟೆಯ ಹೊರಗೆ ಬಂದಂತಹ ಬಂಡುಕೋರರ ಗುಂಪುಗಳು ಗಾಬರಿಗೊಂಡು; ಪ್ರಾಣವನ್ನು ಕಳೆದುಕೊಂಡವು. ಗುಲಾಮರ ಒಡೆಯನಾದ ಬಾದಶಾಹನ ವೀರ ಸೈನಿಕರಿಗೆ ಅಪಾರ ಸಾಮಾನುಗಳು ಹಾಗೂ ಸಂಪತ್ತು ಪ್ರಾಪ್ತವಾದವು. ಶಿರಾದ ಕೋಟೆಯನ್ನು ಸ್ವಾಧೀನಪಡಿಸಿಕೊಂಡು, ಅಗಣಿತ ಸಾಮಾನು ಮತ್ತು ಸಂಪತ್ತಿನೊಂದಿಗೆ ವೈವಿಧ್ಯಮಯ ಕಾಣಿಕೆಗಳನ್ನು; ರುಸ್ತುಮೆ ಜಮಾನು ಬಾದಶಾಹನ ಸನ್ನಿಧಿಗೆ ಕಳುಹಿಸಿದನು. ಬಾದಶಾಹನ ವಾಗ್ದಾನದ ಪ್ರಕಾರ, ಕನಕನಾಯಕನಿಗೆ ಶಿರಾದ ಕೋಟೆಯನ್ನು ನೀಡಲಾಯಿತು.

ಬಾದಶಾಹನ ಸುದೈವದಿಂದ, ರುಸ್ತುಮೆ ಜಮಾನು ಶಿರಾದ ಕೋಟೆಯ ಮೇಲೆ ವಿಜಯ ಸಾಧಿಸುವುದು.

ಬಾದಶಾಹನ ವೈಭವ-ಗಾಂಭೀರ್ಯದ ಆಶ್ರಯದಲ್ಲಿ ರುಸ್ತುಮೆ ಜಮಾನು ಶಿರಾ ಕೋಟೆಯ ಮೇಲೆ ವಿಜಯ ಸಾಧಿಸಿದನೆಂದು; ಪ್ರವಾದಿಯ ಧರ್ಮದ ಉನ್ನತ ಜನರು, ಹಜರತ್ ಬಾದಶಾಹ ಗಾಜಿಯನ್ನು ಪ್ರಶಂಸಿದ್ದಾರೆ. ವಿಜಯ ಸಂಪನ್ನ ಸೈನಿಕರೊಂದಿಗೆ ರುಸ್ತುಮೆ ಜಮಾನು ಪಲಂಕಲೂರ್ ಕಡೆಗೆ ತ್ವರಿತಗತಿಯಿಂದ ಸಾಗಿದನು. ಅವನು ಪಲಂಕಲೂರ್ ಪ್ರದೇಶವನ್ನು ತಲುಪಿದಾಗ; ಮೈದಾನ ಮತ್ತು ಪರ್ವತ ಶಿಖರಗಳ ಮೇಲೆ ಪ್ರಾಣಿಗಳು ಚಲಿಸುವ ಸದ್ದು; ಅವಾಚ್ಯ ನಾಲಿಗೆಯ ವೈರಿಗಳ ತಲೆಗಳನ್ನು ಭಿಕ್ಷಾಪಾತ್ರೆಗಳಂತೆ ಭಗ್ನಗೊಳಿಸುತ್ತಿತ್ತು.

ರಣರಂಗದ ಉಷ್ಣತೆಯಿಂದ ಮಿಂಚುವ ಬಾಣಗಳು, ಗಾಯಗೊಂಡ ಸೈನಿಕರ ರಕ್ತರಂಜಿತ ಕಣ್ಣೀರಿನಂತೆ; ಅಣುವಿನ ಸಂಕುಚಿತವಾದ ವರ್ತುಳದ ಕಣ್ಣಿನಿಂದ ಹೊರಗೆ ಜಿಗಿಯುತ್ತಿದ್ದವು. ಜಗತ್ತನ್ನು ಬೆಳಗುವ ಸೂರ್ಯನು ಬಾವಲಿಯಂತೆ ದುರ್ಬಲನಾಗಿ ಕತ್ತಲೆಯ ಒತ್ತಡದಿಂದ ಭೂಮಿಯ ಮೇಲೆ ಎದೆಯನ್ನು ಸ್ಪರ್ಶಿಸಿ ಮಲಗಿದ್ದನೆಂಬಂತೆ, ತೋಪು ಮತ್ತು ಬಂದೂಕುಗಳ ಹೊಗೆಯ ಬಾಹುಳ್ಯದಿಂದ ಪರಿಸರವು ಕಪ್ಪಾಗಿತ್ತು. ರಾತ್ರಿಯ ಕತ್ತಲೆಯಲ್ಲಿ, ಮಸುಕಾದ ಖಡ್ಗಗಳು; ರತ್ನಾಭರಣಗಳ ಭಂಡಾರದ ಅಪಹರಣಕಾರರಂತೆ; ತಮ್ಮ ಕೈಗಳನ್ನು ಪ್ರಾಣಗಳ ನಗದು ನಾಶಗೊಳಿಸಲು ತೆರೆದವು.

ರಣರಂಗದ ಹುಲಿಗಳ ಆಕ್ರಮಣದ ಗರ್ಜನೆಯು, ಹುಲಿಗಳನ್ನು ಕಂಡು ಹೆದರಿ ಪಲಾಯನ ಮಾಡುವ ಜಿಂಕೆಗಳಂತೆ; ವೃದ್ಧ ಆಕಾಶದ ತೋಳವನ್ನು ಜಗಿಯಲು ಪ್ರೇರೇಪಿಸಿತು. ಖಡ್ಗಗಳ ಮೋಡಗಳು ಭೂಮಿಯನ್ನು ಜಲಭರಿತಗೊಳಿಸಿದರೆ; ಬೆಳಕು ಹರಡುವ ಸೂರ್ಯನು ನೀರಿನಲ್ಲಿ ತೊಯ್ದು ದರ್ಪಣದಂತೆ ಬಣ್ಣದಲ್ಲಿ ಮುಳುಗಲಾರಂಭಿಸಿದನು. ಆಕಾಶದ ಬರ್ಚಿಯು ಇರಾನ್‌ದ ದೊರೆ ಜಾಹಾಕ್‌ನ ಬೆಂಕಿಸುರಿಸುವ ನಾಲಿಗೆಯುಳ್ಳ ಸರ್ಪದಂತೆ; 'ಸಿಮಾಕ್‌ರಾಮೆ' ನಕ್ಷತ್ರದ ಹಿಂಭಾಗದಿಂದ ವೈರಿಗಳ ಕೆಂಪಾದ ಎದೆಗಳಂತೆ ತಲೆ ಎತ್ತಿದಾಗ, ವೀರರ ಕಠಾರಿಗಳು ಆಕಾಶದ ನೀಲಿ ಭಾವಣಿಯಲ್ಲಿಯೂ ಸಹ ರಂಧ್ರ ಮಾಡಿದವು.

ಉಕ್ಕಿನ ತುದಿಯುಳ್ಳ ಬಾಣಗಳ ಹಕ್ಕಿಗಳು ವಿಳಂಬ ಮಾಡದೇ ಗಾಯಗೊಂಡಿರುವ ವ್ಯಕ್ತಿಯಿಂದ ಆತನ ಸಾಮಾನುಗಳನ್ನು ಲೂಟಿ ಮಾಡುವಂತೆ; ವೈರಿಗಳ ತುಕ್ಕು ಹಿಡಿದ ಎದೆಗಳಿಂದ ಹೃದಯಗಳನ್ನು ಕಸಿದುಕೊಂಡವು. ರಣರಂಗದ ಭಟ್ಟಿಯಲ್ಲಿ ಜ್ವಾಲೆಗಳನ್ನು ಹೆಚ್ಚಿಸುವ ಪ್ರವೃತ್ತಿಯುಳ್ಳವರ ಬಿಸಿ ರಕ್ತದ ತರಂಗಗಳು; ಭೂಮಿಯ ಮೇಲ್ಭಾಗವನ್ನು ಬೆಂಕಿಯ ಸಂಕೋಲೆಯಲ್ಲಿ ಬಂಧಿಸಿದ. ತ್ವರಿತ ಗತಿಯಿಂದ ಹಾರುವ ಬಾಣಗಳು ಧೂರ್ತರಂತೆ ಬಿಲ್ಲು ತಂತಿಯ ಮೇಲೆ ಕಾಲಿಟ್ಟು, ಕುಟಿಲತೆಯಿಂದ ಹೊರಹೊಮ್ಮಿ ಪ್ರಾಣಗಳನ್ನು ನಾಶ ಮಾಡುತ್ತಿದ್ದವು.

'ಆಕಾಶವು ಡಾಂಬಿಕವಾಗುವಂತೆ, ಎರಡೂ ಕಡೆಗಳಿಂದ ಯುದ್ಧ-ಕಲಹದ ಆವೇಶವು ಹೆಚ್ಚಾಯಿತು. ಆಕಾಶವು ಕೊಲೆಯಾಗುತ್ತಿರುವವರ ಬಾಹುಗಳಲ್ಲಿ, ತನ್ನನ್ನು ನೂರಾರು ಪ್ರಕಾರಗಳಿಂದ ಅಡಗಿಸಿಕೊಂಡಿತು, ದ್ವೇಷದ ಬೆಂಕಿಯು ಉಷ್ಣತೆಯಿಂದ ವೈರಿಗಳ ಹೃದಯಗಳು, ಬಂದೂಕಿನಿಂದ ಹೊರಹೊಮ್ಮುವ ಗುಂಡುಗಳಂತೆ ಸಿಡಿದೆದ್ದವು'.

ಎರಡೂ ಕಡೆಗಳಲ್ಲಿ ಕಗ್ಗೊಲೆ ಮತ್ತು ಯುದ್ಧದ ಶೃಂಖಲೆಯು ಅಂದಾಜು ಮೂರು ದಿನಗಳ ಮಿತಿಯನ್ನು ಮೀರಿ ನಡೆಯಿತು. ಮುತ್ತಿಗೆ ಹಾಕಿದಂತಹ ಸಣ್ಣ ಪಟ್ಟಣದ ವಠಾರವು ಶಕ್ತಿಶಾಲಿ ಸಾಮ್ರಾಜ್ಯದ ಸ್ವಾಧೀನಕ್ಕೆ ಬಂದಿತು. ವಿಜಯ ಸಂಪನ್ನ ಸೈನಿಕರ ವಶಕ್ಕೆ ಪಟ್ಟಣವು ಬಂದಿರುವುದನ್ನು ಕಂಡು; ಕನಕನಾಯಕನೊಂದಿಗಿನ ರಹಸ್ಯ ಸಮಾಲೋಚನೆಯನ್ನು ನಿಲ್ಲಿಸಿ; ಕಪನಿಕೋಂದಾನು ಸ್ವಯಂ ಕಾರ್ಯ ನಿರತನಾದನು. ಕನಕ ನಾಯಕನ ತಲೆಯಲ್ಲಿ ಯಾವಾಗಲೂ ಪಿತೂರಿ ಹಾಗೂ ದಂಗೆಯು ತುಂಬಿರುತ್ತಿತ್ತು. ಕಪನಿಕೋಂದಾನ ಇಂತಹ ಕುಟಿಲತೆಯ ದೆಸೆಯಿಂದ ಕನಕನಾಯಕನು ತನ್ನ ಎಂಬತ್ತೆರಡು ಸಾವಿರ ಕುದುರೆ ಸವಾರರನ್ನು ಹಿಂದಕ್ಕೆ ಕರೆಯಿಸಿಕೊಂಡನು. ಈ ಘಟನೆಯ ಸಮಾಚಾರ ರುಸ್ತುಮೆ ಜಮಾನನಿಗೆ ತಿಳಿದಾಗ; ಅವನು ಕನಕನಾಯಕನ ಡೇರೆಯ ಕಡೆಗೆ ಧಾವಿಸಿದನು. ಅವನಿಗೆ ಗೊತ್ತಾದ ಸಂಗತಿಯ ಮೇರೆಗೆ; ಕನಕ ನಾಯಕನಿಗೆ ಸಾಮ್ರಾಜ್ಯದ ಇನಾಮುಗಳನ್ನು ನೀಡಿ, ಸಂತುಷ್ಟಗೊಳಿಸಿದನು. ರುಸ್ತುಮೆ ಜಮಾನು ಕನಕನಾಯಕನನ್ನು ತನ್ನೊಂದಿಗೆ ಕರೆದುಕೊಂಡು ಹೋಗಿ ಕೋಟೆಯನ್ನು

ವಶಪಡಿಸಿಕೊಳ್ಳಲು ನೇಮಿಸಿದನು. ಆಗ, ಕನಕನಾಯಕನು ರುಸ್ತುಮೆ ಜಮಾನನಿಗೆ ಅರಿಕೆ ಮಾಡಿ, "ಈಗ ಕೋಟೆಯನ್ನು ವಶಪಡಿಸಿಕೊಳ್ಳುವ ಕಾರ್ಯವನ್ನು ಸ್ಥಗಿತಗೊಳಿಸುವುದು ಒಳ್ಳೆಯದು. ಏಕೆಂದರೆ: ಸಣ್ಣ ಪಟ್ಟಣವನ್ನು ವಶಪಡಿಸಿಕೊಳ್ಳುವ ಕಾರ್ಯದಲ್ಲಿ ಉನ್ನತ ಶ್ರೇಣಿಯ ಹಲವಾರು ವೀರರು ಗಾಯಗೊಂಡಿದ್ದಾರೆ. ಹೊಸ ಸೈನಿಕರು ಅಶ್ವಾರೋಹಿಗಳು ಮತ್ತು ಅಪಾರ ಸಂಪತ್ತನ್ನು ಸಂಗ್ರಹಿಸಿ; ವೈರಿಯು ಕೋಟೆಯಲ್ಲಿ ಆಸೀನನಾಗಿದ್ದಾನೆ. ಈಗ ಕೋಟೆಯ ಮೇಲಿನ ದಾಳಿಯು ಕೈಗೆ ಸಿಕ್ಕಿರುವ ಅವಕಾಶವನ್ನು ಕಳೆದುಕೊಳ್ಳುವಂತಾಗುತ್ತದೆ. ಈ ಬಂಡುಕೋರನೊಂದಿಗೆ ಒಪ್ಪಂದ ಮಾಡಿಕೊಂಡು, ಯಾವುದೇ ವಿಧಾನದಿಂದ ಅವನನ್ನು ಕೋಟೆಯಿಂದ ಹೊರಗೆ ಕರೆದುಕೊಂಡು ಬರುವುದೇ ಸಮಯದ ಔಚಿತ್ಯವಾಗಿದೆ" ಎಂದು ತಿಳಿಸಿದನು.

ಈ ನುಡಿಗಳನ್ನು ಕೇಳಿದ ರುಸ್ತುಮೆ ಜಮಾನು ಕನಕನಾಯಕನಿಗೆ ಸೂಚಿಸಿದನು. "ನಿಮ್ಮ ಮಂತ್ರಿಯನ್ನು ಕೋಟೆಯೊಳಗೆ ಕಳುಹಿಸಿ, ಕೆಲವು ಯೋಗ್ಯವಾದ ಕಾಣಿಕೆಗಳನ್ನು ಕಪನಿಕೋಂದಾನಿಗೆ ಕೊಡಿರಿ". ಕನಕನಾಯಕನ ಮಂತ್ರಿಯು ಕಪನಿಕೋಂದಾನನ್ನು ಭೇಟಿಯಾಗಿ ಕಾಣಿಕೆಗಳನ್ನು ನೀಡಿದನು ಮತ್ತು ಒಪ್ಪಂದ ಪತ್ರವನ್ನು ಕಳುಹಿಸುವ ಬಗೆಗೆ ತಿಳಿಸಿದನು. ವಿನಮ್ರತೆಯಿಂದ ಆಜ್ಞಾಪಾಲಕನಾಗಲು ಕಪನಿಕೋಂದಾನು ಸಮ್ಮತಿಸಿ; ಪಲಂಕಲೂರ್ ಕೋಟೆಯನ್ನು ಸಂಪೂರ್ಣ ಸಾಮಾನು ಹಾಗೂ ಸಂಪತ್ತಿನೊಂದಿಗೆ, ರುಸ್ತುಮೆ ಜಮಾನು ಸ್ವಾಧೀನಕ್ಕೆ ಒಪ್ಪಿಸಿದನು. ಕಪನಿಕೋಂದಾನು ಶರಣಾಗತಿಯ ಬಳೆಯನ್ನು ಕಿವಿಯಲ್ಲಿ ಧರಿಸಿ, ವಿಜಯ ಸಂಪನ್ನ ಸೈನ್ಯದೊಂದಿಗೆ ಸಮಾವೇಶಗೊಂಡನು. ದೇಶದ ರಕ್ಷಣೆ ಮತ್ತು ಮೇಲ್ವಿಚಾರಣೆಗಾಗಿ ರುಸ್ತುಮೆ ಜಮಾನು ಶಹಾಜಿ ಭೋಸ್ಲೆಯನ್ನು ನೇಮಿಸಿದನು.

ಬಂಡುಕೋರ ತನವನ್ನು ಅತ್ಯುನ್ನತ ಮಟ್ಟಕ್ಕೆ ಏರಿಸಿದ್ದ ಶ್ರೀರಂಗಪಟ್ಟಣದ ರಾಜನಿಗೆ ಮುನ್ನೆಚ್ಚರಿಕೆ ನೀಡಲು; ರುಸ್ತುಮೆ ಜಮಾನು ಅಲ್ಲಿಂದ ಮುಂದೆ ಸಾಗಿದನು. ವಿಜಯದ ದೊಡ್ಡ ನಗಾರಿಯ ಧ್ವನಿಯು ಜಗತ್ತಿನ ಪ್ರಖ್ಯಾತರ ಕಿವಿಯವರೆಗೆ ತಲುಪಿತು. ಅವನು ಶ್ರೀರಂಗಪಟ್ಟಣವನ್ನು ಸಮೀಪಿಸಿದಾಗ; ವಿಜಯ–ಸಂಪನ್ನ ಸೈನ್ಯದ ಯಶಸ್ವಿ ಸೈನಿಕರು ಯುದ್ಧದ ಘೋಷಣೆಯನ್ನು ಮಾಡಿದರು. ವೃದ್ಧ ಆಕಾಶದ ಹೆಬ್ಬಾವಿನಂತೆ, ವಠಾರದ ಸುತ್ತಲೂ ಅವರು ಮುತ್ತಿಗೆ ಹಾಕಿದರು. ಎರಡೂ ಕಡೆಗಳಿಂದಲೂ ಯುದ್ಧವು, ಅಂದಾಜು ಒಂದು ತಿಂಗಳಿನ ದೀರ್ಘಾವಧಿಯವರೆಗೆ ಸಾಗಿತು.

"ಶಕ್ತಿಶಾಲಿ ಸಾಮ್ರಾಜ್ಯದ ಕೆಲವು ವಿಶ್ವಾಸಾರ್ಹರಾದ ವ್ಯಕ್ತಿಗಳೊಂದಿಗೆ ಶ್ರೀರಂಗಪಟ್ಟಣದ ಕೋಟೆಯನ್ನು ನನಗೆ ಕೊಡಿರಿ. ನಾನು ಕಾಣಿಕೆ ರೂಪದಲ್ಲಿ ಐದು ಲಕ್ಷ ಹೊನ್ ಮತ್ತು ವೈವಿಧ್ಯಮಯ ಇನಾಮುಗಳನ್ನು ಆಕಾಶದಂತಹ ಔನ್ನತ್ಯದ ಆಸ್ಥಾನಿಕರಿಗೆ ನೀಡುವೆನು" ಎಂದು ತಿಳಿಸಿದನು. ಶ್ರೀರಂಗಪಟ್ಟಣದ ಅರಸನು ತನ್ನ

ಶರಣಾಗತಿಯ ಕಂಠಪಟ್ಟಿಯನ್ನು ಕಿವಿಯ ಆಭರಣವೆಂದು; ಭಾವಿಸಿದ್ದಾನೆಂಬುದನ್ನು ರುಸ್ತುಮೆ ಜಮಾನು ಕಂಡನು. ಸಾಮ್ರಾಟನ ಕೃಪೆಯಿಂದ ರುಸ್ತುಮೆ ಜಮಾನು ಶ್ರೀರಂಗಪಟ್ಟಣದ ಅರಸನಿಗೆ ಸಮಾಧಾನ ನೀಡಿದನು. ತಂತ್ರಗಾರಿಕೆಯಿಂದ ಸಾಮಿಪ್ಯ ಹೊಂದಿದಂತಹ ವಿಶ್ವಾಸಾರ್ಹ ಸರದಾರರಲ್ಲಿ ಓರ್ವನಾದ ಖಾಜೀ ಸಯೀದನನ್ನು ಕನಕನಾಯಕನೊಂದಿಗೆ; ಅಲ್ಲಿಂದ ದೊರಕುವ ಹಣಕಾಸನ್ನು ತೆಗೆದುಕೊಂಡು ಬರುವಂತಹ ಮೇಲ್ವಿಚಾರಣೆಗಾಗಿ ಅಲ್ಲಿ ನಿಯೋಜಿಸಿ; ವಿಜಯ-ಸಂಪನ್ನ ಸೈನ್ಯದೊಂದಿಗೆ ಸ್ವಯಂ ಹಿಂತಿರುಗಿ, ರಾಜರಿಗೆ ಆಶ್ರಯದಾತನಾದ ಬಾದಶಾಹನ ದರ್ಬಾರಿಗೆ ತೆರಳಿದನು.

ರುಸ್ತುಮೆ ಜಮಾನು ಬಾದಶಾಹ ಗಾಜಿಯ ಕಾಣಿಕೆಗಳನ್ನು ಪಡೆದು; ಆತನ ಕೃಪಾದೃಷ್ಟಿಗೆ ಪಾತ್ರನಾದನು. ಶ್ರೀರಂಗ ಪಟ್ಟಣದ ಅರಸನು ನೀಡಿದಂತಹ ಹಣವು ಖಾಜೀ ಸಯೀದನ ಕೈ ಸೇರಿದ ನಂತರ, ಅವನು ಬಾದಶಾಹನ ದರ್ಬಾರಿಗೆ ಖಾಜೀ ಸಯೀದನೊಂದಿಗಿನ ಮೈತ್ರಿಯ ಲಗಾಮನ್ನು ಮುರಿದು, ಬಸವಪಟ್ಟಣದ ಕೋಟೆಯೆಡೆಗೆ ಪಲಾಯನ ಮಾಡಿದನು. ಬಸವಪಟ್ಟಣವು ರುಸ್ತುಮೆ ಜಮಾನನ ಆಜ್ಞಾಪಾಲಕರ ಸ್ವಾಧೀನದಲ್ಲಿರುವುದನ್ನು ಕನಕನಾಯಕನು ಸಹಿಸುತ್ತಿರಲಿಲ್ಲ. ಇಂತಹ ಅಪ್ರಬುದ್ಧವಾದ ತಿಳಿವಳಿಕೆ ಹಾಗೂ ದೋಷಪೂರ್ಣವಾದ ವಿಚಾರದಿಂದ, ಬಸವಪಟ್ಟಣದ ಭದ್ರವಾದ ವಠಾರಕ್ಕೆ ಹೋದನು.

ಬಸವಪಟ್ಟಣದ ಕೋಟೆಯ ಗೋಪುರಗಳ ಗಾಂಭೀರ್ಯ ಮತ್ತು ಘನತೆಯು, ಸಂರಕ್ಷಣಾ ಧಾಮವನ್ನು ಶೃಂಗರಿಸಿತ್ತು. ಕನಕನಾಯಕನು ಇಂತಹ ಸಂರಕ್ಷಣಾ ಧಾಮವನ್ನು ಪ್ರವೇಶಿಸಿ, ವಿಶೇಷವಾದ ಪ್ರಯತ್ನ ಮಾಡಲಾರಂಭಿಸಿದನು. ಆ ಸ್ಥಳದ ಎಲ್ಲ ರಾಜರನ್ನು ತನ್ನೊಂದಿಗೆ ಕರೆದುಕೊಂಡು, ಆಜ್ಞೋಲ್ಲಂಘನೆ ಹಾಗೂ ಬಂಡುಕೋರತನದ ತಲೆಯನ್ನು ಎತ್ತರಿಸಿದನು.

'ಕೀಳು ಉದ್ದೇಶಗಳ ರಾಜನು, ಒಂದು ವೇಳೆ ಆಕಾಶವನ್ನು ತಲುಪಿದರೆ, ಬಕೀಟಿನಿಂದ ಬಾವಿಯ ತಗ್ಗಿನಲ್ಲಿ ಪತನವಾಗುತ್ತಾನೆ, ಆತನ ದರ್ಗಾದಿಂದ ದೂರವಾದ ಪ್ರತಿಯೊಬ್ಬನು, ತನ್ನ ಮೇಲೆ ವಿನಾಶದ ಬಾಗಿಲು ತೆರೆದುಕೊಳ್ಳುತ್ತಾನೆ, ಆತನು ತಜ್ಞ-ಹೃದಯವಂತರ ಮೇಲೆ ಕೃಪೆ ತೋರಿಸುತ್ತಾನೆ. ಆತನು ಯಾರನ್ನು ಪ್ರೀತಿಸುತ್ತಾನೋ, ಅವರ ಹೃದಯಗಳು ಯಶಸ್ಸನ್ನು ಸಂಪಾದಿಸುತ್ತವೆ'.

ಮತ್ತೊಮ್ಮೆ ಕನಕನಾಯಕನು ಬಂಡುಕೋರನಾಗುವುದು ಮತ್ತು ಬಾದಶಾಹನ ಕಡೆಯಿಂದ ಮುನ್ನೆಚ್ಚರಿಕೆ ನೀಡಲು ರುಸ್ತುಮೆ ಜಮಾನನ್ನು ನೇಮಿಸುವುದು.

ಧೀಮಂತಿಕೆ ಹಾಗೂ ಕಾವ್ಯದ ದೇಶಗಳ ಮೇಲೆ ಸೈನ್ಯವೇರಿಸುವವರು; ಕಾವ್ಯ ಮತ್ತು ಗದ್ಯವನ್ನು ಶೃಂಗರಿಸಿ ಜಗತ್ತನ್ನು ಜಯಿಸಿದ್ದಾನೆ. ವಿಶ್ವಾಸಾರ್ಹನಾದ ಖಾಜೀ ಸಯೀದನು ಶ್ರೀರಂಗಪಟ್ಟಣದಿಂದ ಐದು ಲಕ್ಷ ಹೂನ್‌ದೊಂದಿಗೆ ಆಗಮಿಸಿ ಬಾದಶಾಹ

ಗಾಜಿಯ ದರ್ಬಾರಿನ ರತ್ನಗಂಬಳಿಯನ್ನು ಚುಂಬಿಸಿ, ಜಂಬ ಪ್ರದರ್ಶನ ಮಾಡಿ, ಒಳಿತನ್ನು ಅಪೇಕ್ಷಿಸುವವನಾಗಿ; ಕನಕನಾಯಕನು ಬಂಡುಕೋರನಾಗಿರುವ ಸಮಾಚಾರವನ್ನು ರಾಜಧಾನಿಯ ಆಸ್ಥಾನಿಕರಾಗಿ ತಿಳಿಸಿದನು. ಕನಕನಾಯಕನು ಬಸವಪಟ್ಟಣದಲ್ಲಿ ಹೊತ್ತಿಸಿದ ಪಿತೂರಿ ಮತ್ತು ದಂಗೆಯ ಬೆಂಕಿಯನ್ನು ಆರಿಸಲು ಕರ್ನಾಟಕ ಹಾಗೂ ಮಲೆನಾಡಿನ ಇತರ ರಾಜರನ್ನು ತನ್ನೊಂದಿಗೆ ಸೇರಿಸಿಕೊಂಡು, ಪ್ರತಿಕಾರದ ಮಾರ್ಗವನ್ನು ಅನುಸರಿಸುತ್ತಿದ್ದ ಕನಕನಾಯಕನನ್ನು ಪ್ರತಿಬಂಧಿಸಲು ವಿಜಯಿಯಾದ ರುಸ್ತುಮೆ ಜಮಾನನ್ನು ದರ್ಬಾರಿನ ಇತರ ಎಲ್ಲ ಮಂತ್ರಿಗಳೊಂದಿಗೆ ಹಜರತ್ ಬಾದಶಾಹ ಗಾಜಿಯು ನೇಮಿಸಿದನು.

ರುಸ್ತುಮೆ ಜಮಾನು ಇತರ ಎಲ್ಲ ಮಂತ್ರಿಗಳು ಮತ್ತು ಪಂಕ್ತಿ ಭೇದಕರಾದ ರುಸ್ತುಮ್‌ನಂತಹ ಪರಾಕ್ರಮಶಾಲಿ ನಾಯಕರೊಂದಿಗೆ, ಬಸವಪಟ್ಟಣದೆಡೆಗೆ ಸಾಗಿದನು. ಒಂದು ಯೋಜನೆಯ ಪ್ರಕಾರ ವೀರಭದ್ರನಿಗೆ ಧೈರ್ಯ ನೀಡಿ, ಅವನನ್ನು ಸಂತುಷ್ಟಗೊಳಿಸಲು ಒಂದು ಒಪ್ಪಂದ ಪತ್ರವನ್ನು ರುಸ್ತುಮೆ ಜಮಾನನು ಕಳುಹಿಸಿದನು. "ಈಗ ನಮಗೆ ಬಸವಪಟ್ಟಣದ ಸಮಸ್ಯೆಯು ಎದುರಾಗಿದೆ. ಕನಕನಾಯಕನನ್ನು ನಡುವಿನಿಂದ ತೆಗೆದುಹಾಕಿ, ಅವನಿಗೆ ಶಿಕ್ಷೆ ನೀಡಲು ಬಯಸುತ್ತೇವೆ. ಈ ಒಪ್ಪಂದ ಪತ್ರ ತಲುಪುತ್ತಲೇ ಹಕ್‌ಪರಿ ಕೋಟೆಯ ವಿಜಯದ ಸಮಯದಲ್ಲಿ ನಾವು ಕನಕನಾಯಕನಿಗೆ ಕೊಟ್ಟಿದ್ದ ನಿನ್ನ ಮೊದಲಿನ ದೇಶಕ್ಕೆ ಹಿಂತಿರುಗಿ ಹೋಗು, ಅದನ್ನು ಮರಳಿ ಪಡೆದು; ನಿನಗೆ ಕೊಡಲಾಗುವುದು" ಎಂದು ತಿಳಿಸಲಾಗಿತ್ತು. ಈ ಒಪ್ಪಂದದ ಶಿಷ್ಟಾಚಾರಗಳು ಪೂರ್ಣಗೊಂಡ ನಂತರ, ವೀರಭದ್ರನು ಜಗತ್ತಿಗೆ ಆಜ್ಞೆ ನೀಡುವ ಬಾದಶಾಹನ ಆಜ್ಞಾಪಾಲಕನಾದನು.

ರುಸ್ತುಮೆ ಜಮಾನು ವಿಜಯದ ಧ್ವಜಗಳನ್ನು ಬಸವಪಟ್ಟಣ ಪ್ರದೇಶದಲ್ಲಿ ಹಾರಿಸಿದನು. "ಕೋಟೆಯನ್ನು ವಶಪಡಿಸಿಕೊಳ್ಳುವ ಕಾರ್ಯದಲ್ಲಿ ಯಾವುದೇ ಅಲುಗಾಟ ಮಾಡಬೇಡಿರಿ. ಕೋಟೆಯನ್ನು ಅದರ ಎಲ್ಲ ಸಾಮಾನುಗಳೊಂದಿಗೆ ವಿಜಯ–ಸಂಪನ್ನ ಸೈನ್ಯದ ವಶಕ್ಕೆ ಕೊಡಿರಿ. ಎಚ್ಚರಿಕೆಯ ಕಿವಿಗಳಿಂದ ಅಜಾಗರೂಕತೆಯ ಅರಳೆಯನ್ನು ತೆಗೆದು, ತಲೆಯನ್ನು ವಿನಮ್ರತೆ ಹಾಗೂ ದೀನತೆಯಿಂದ ಉಪಯೋಗಿಸಿರಿ" ಎಂದು ರುಸ್ತುಮೆ ಜಮಾನು ಕನಕನಾಯಕನಿಗೆ ಹೇಳಿ ಕಳುಹಿಸಿದನು.

ಆರಂಭದಲ್ಲಿ ಕನಕನಾಯಕನು ವಿರೋಧವನ್ನು ತ್ಯಜಿಸಲಿಲ್ಲ. ಕೋಟೆಯ ಸುದೃಢತೆ ಕುದುರೆ ಸವಾರರು ಮತ್ತು ಕಾಲ್ದಳದ ಬಾಹುಳ್ಯದಿಂದ ಅವನು ಅತಿ ಅಹಂಕಾರಿ/ ಗರ್ವಿಷ್ಠನಾದನು. ಆಕಾಶದೆತ್ತರದ ಉನ್ನತ ಪರ್ವತಗಳಿಂದ ಆವೃತವಾದ ಬಸವಪಟ್ಟಣದ ಪ್ರದೇಶದಲ್ಲಿ ಘಟ್ಟಗಳ ಮೇಲೆ ಕಾವಲು ಇಡಲು, ಅಲ್ಲಲ್ಲಿ ಎಪ್ಪತ್ತು ಸಾವಿರ ಕಾಲ್ದಳದ ಬಂದೂಕುಧಾರಿಗಳನ್ನು ಅವನು ನೇಮಿಸಿದನು.

ಈ ಸಮಾಚಾರ ತಿಳಿದಾಗ, ರುಸ್ತುಮೆ ಜಮಾನು, ಎಲ್ಲ ಮಂತ್ರಿಗಳು ಮತ್ತು ನಾಯಕರನ್ನು ಕರೆದು ನುಡಿದನು.

"ಅಸ್ಥಿರವಾದ ನಾಸ್ತಿಕರ ಸೈನ್ಯದ ಬಾಹುಳ್ಯ ಹಾಗೂ ವಠಾರದ ಸ್ಥಿರತೆಯಿಂದ ಹೆದರಬಾರದು. ಪ್ರವಾದಿಯಂತಹ ಲಕ್ಷಣ ಹೊಂದಿದ ಹಜರತ್ ಬಾದಶಾಹನ ಸುದೈವದ ಪುಣ್ಯದಿಂದ ಅರ್ಧ ಆಕ್ರಮಣದಲ್ಲಿಯೇ ಈ ವಠಾರವನ್ನು ಕೆಳಗಿನಿಂದ ನಾಶ ಮಾಡುವುದು ಮತ್ತು ಅಶ್ವಾರೋಹಿ ರಾಜರನ್ನು ಸೆರೆಯಾಳುಗಳನ್ನಾಗಿ ಮಾಡಿಕೊಳ್ಳುವುದು. ಅತಿ ಸುಲಭವಾಗಿದೆ. ಇಂದಿನ ಯುದ್ಧದ ದಿನ ಹಜರತ್ ಬಾದಶಾಹ ಗಾಜಿಯ ಋಣವನ್ನು ತೀರಿಸಬೇಕಾಗುತ್ತದೆ".

ಹಜರತ್ ಬಾದಶಾಹ ಗಾಜಿಯ ಹೆಸರನ್ನು ಕೇಳಿದಾಗ, ಇತರ ಮಂತ್ರಿಗಳು ಹಾಗೂ ನಾಯಕರು, ಸಂಪೂರ್ಣವಾದ ಗೌರವದಿಂದ ಸಾಷ್ಟಾಂಗ ನಮನ ಸಲ್ಲಿಸಿ, ಕೌಶಲ್ಯದಿಂದ ತಮ್ಮ ಶಿರಗಳನ್ನು ಒಂಬತ್ತನೆಯ ಆಕಾಶದ ಎತ್ತರದವರೆಗೆ ಉನ್ನತಗೊಳಿಸಿದರು. ಪ್ರಾಣತ್ಯಾಗ ಮಾಡುವ ಒಪ್ಪಂದ ಮತ್ತು ವಾಗ್ದಾನದ ವಿಧಾನಗಳನ್ನು ಪೂರ್ಣಗೊಳಿಸಿ ರಣರಂಗದ ವೀರರ ಜೊತೆಗೆ ಸಮಾವೇಶಗೊಂಡರು. ಸ್ಥಿರಚಿತ್ತರಾಗಿ ಬಸವಪಟ್ಟಣವನ್ನು ವಶಪಡಿಸಿಕೊಳ್ಳಲು, ಧೈರ್ಯದಿಂದ ಪ್ರಯತ್ನ ಮಾಡಲಾರಂಭಿಸಿದರು. ರುಸ್ತುಮೆ ಜಮಾನು ಮೂರು ಕಡೆಗಳಿಂದ ಆಕ್ರಮಣ ಮಾಡಲು ಯೋಜನೆಯನ್ನು ರೂಪಿಸಿದನು. ಶಕ್ತಿಶಾಲಿ ಮಂತ್ರಿಗಳು ಹಾಗೂ ನಾಯಕರನ್ನು ಎರಡು ಗುಂಪುಗಳಲ್ಲಿ ಅವನು ವಿಂಗಡಣೆ ಮಾಡಿದನು. ಮುಂಜಾನೆ ನಕ್ಷತ್ರಗಳ ರಾಜನು ಸ್ವರ್ಣಲೇಪಿತ ಧ್ವಜವನ್ನು ಹಿಡಿದು, ಪಾದರಸದಂತಹ ಆಕಾಶದ ಮೇಲೆ ಪ್ರತ್ಯಕ್ಷನಾಗಲಾರಂಭಿಸಿದಾಗ, ರುಸ್ತುಮೆ ಜಮಾನು ಮಹಾನ್ ವೀರರೊಂದಿಗೆ ಬಸವಪಟ್ಟಣದ ಕೋಟೆಯೆಡೆಗೆ ನಡೆದನು. ಅವನು ವಠಾರದಿಂದ ಒಂದೂವರೆ ಮೈಲು ದೂರದಲ್ಲಿ ಬೀಡು ಬಿಟ್ಟನು. ವಠಾರದ ದೊಡ್ಡ ಬಾಗಿಲಿನ ಹತ್ತಿರ ಯುದ್ಧದ ಕೋಲಾಹಲವನ್ನುಂಟು ಮಾಡಲು; ಅಫಜಲ್‌ಖಾನ್, ಶಹಾಜಿ ಭೋಸ್ಲೆ, ಬದಾಜಿ ಹಾಗೂ ಬಾದಶಾಹ ಗಾಜಿಯ ಕೆಲವು ಹೊಸ ಸೈನಿಕರಿಗೆ ರುಸ್ತುಮೆ ಜಮಾನು ಆಜ್ಞಾಪಿಸಿದನು.

ಸೈದಿ ರೆಹಾನ್ ಸೋಲಾಪುರಿ, ಹುಸೇನಿ ಅಂಬರ್‌ಖಾನ್ ಮತ್ತು ಬೀಶ್‌ಜಂಗ್‌ಖಾನ್, ಅವರನ್ನು ರುಸ್ತುಮೆ ಜಮಾನು ಎರಡನೆಯ ದ್ವಾರದ ಕಡೆಗೆ ನೇಮಿಸಿದನು. ಅಲೀ ಖುದಾವಂದ್‌ಖಾನ್, ಮಹಮ್ಮದ ಯಾಖೂತ್‌ಖಾನ್ ಸಾರನಿ ಹಾಗೂ ಆಲಕಸ್ ಖಾನನನ್ನು ಮೂರನೆಯ ದ್ವಾರದ ಹತ್ತಿರ ನೇಮಿಸಿದನು.

'ಖ್ಯಾತಿವೆತ್ತ ಮತ್ತು ಹುಲಿಯಂತೆ ಆಕ್ರಮಣ ಮಾಡುವ ವೀರರು, ವಠಾರದೆಡೆಗೆ ನಿರಂತರವಾಗಿ ಓಡಲಾರಂಭಿಸಿದರು, ವೈರತ್ವದ ಕುದುರೆಗಳು ಉಗ್ರತೆಯಿಂದ ದಾಳಿ ಮಾಡಿದವು, ದೇಶಗಳು ಹಾಗೂ ರಾಜರವರೆಗೆ ಗದ್ದಲವೆದ್ದಿತು, ಆಕಾಶದ ಮಿತಿಯು

ಬಿಲ್ಲಿನ ಕೋನವಾದಂತೆ, ಬಾಣಗಳು ಜಿಗಿಯಲಾರಂಭಿಸಿದವು, ವೀರರ ಘೋಷಣೆಗಳು ಉಗ್ರತೆಯಿಂದ ಎತ್ತರಕ್ಕೆ ಏರಿದವು. ಆಕಾಶವು ಯೋಚನೆಯ ಮಾರ್ಗವನ್ನು ಕಳೆದುಕೊಂಡಿತು. ರಕ್ತ ಹರಿಸುವ ಖಡ್ಗವು ಶಿರಗಳಲ್ಲಿ ರಂಧ್ರಕೊರೆಯಿತು.ಕೋಹೆ ಕಾಫ್‌ದಂತಹ ಪರ್ವತವು ರಕ್ತದ ನದಿಯಲ್ಲಿ ಮುಳುಗಲಾರಂಭಿಸಿತು, ಪಿತೂರಿ ಸೃಷ್ಟಿಸುವ ಈ ಸಮಯದಲ್ಲಿ ಆಕಾಶಕ್ಕೆ ರಹಸ್ಯವಾಗಿ ನಿಯಂತ್ರಿಸುವ ನಾಲಿಗೆಯು ದೊರಕಿತು. ಯುದ್ಧ ನಿರತರಿಗೆ ಜೀವನವು ಕಠಿಣವಾಯಿತು, ಬಂದೂಕುಗಳ ಪೀಡನೆಯು ಅವರನ್ನು ಇಕ್ಕಟ್ಟಿಗೆ ಸಿಲುಕಿಸಿತು'.

ಎಲ್ಲ ಜಯಶಾಲಿ ಮಂತ್ರಿಗಳು ಹಾಗೂ ನಾಯಕರು ಒಟ್ಟಾಗಿ ಮತ್ತೊಂದು ಸಲ ದಾಳಿ ಮಾಡಿದರು. ವೈರತ್ವ ಸಾಧಿಸುವ ನಾಸ್ತಿಕರು ಎಂಬತ್ತು ಸಾವಿರ ಬೆಂಕಿ ಸುರಿಸುವ ಬಂದೂಕುಗಳನ್ನು ಖ್ಯಾತ ವೀರರ ಮೇಲೆ ಚಲಾಯಿಸಿ ಯುದ್ಧದ ಅಗ್ನಿಯನ್ನು ಉದ್ದೀಪನಗೊಳಿಸಿದರು. ಪಂಕ್ತಿಯನ್ನು ಭೇದಿಸುವ ಪರಾಕ್ರಮಶಾಲಿ ಸೈನಿಕರು ವಿಳಂಬ ಮಾಡದೇ ಯುದ್ಧದ ಧ್ವಜವನ್ನು ಹಾರಿಸಿ, ಹಟಮಾರಿ ಸ್ವಭಾವದ ಆಕಾಶದ ಮುಖದ ಮೇಲೆ ನೇರವಾಗಿ ಬಾಣ ಬಿಡುವ ಕಾರ್ಯಾಚರಣೆಯನ್ನು ಆರಂಭಿಸಿದಾಗ; ನರಸಿಂಗಾ ಮತ್ತು ತುರಮ್‌ನ ಪ್ರಳಯ ಕಾಲದಂದು ಊದುವ ಕಹಳೆಯಂತಹ ಭಯಾನಕ ಧ್ವನಿಗಳು, ಪರ್ವತ ಹಾಗೂ ಮರುಭೂಮಿಯನ್ನು ತುಂಬಿದವು.

ದ್ವೇಷದಿಂದ ತುಂಬಿದ ಎದೆಯುಳ್ಳವರ ಯುದ್ಧದ ಆವೇಶವು ಕವಚಧಾರಿ ಆಕಾಶದೆಡೆಗೆ ಗಾಯಮಾಡಲಾರಂಭಿಸಿತು. ವಜ್ರಗಳಿಂದ ಅಲಂಕೃತವಾದ ಖಡ್ಗಗಳಿಂದ ಸುರಿಸಲ್ಪಡುವ ರಕ್ತವು, ರಣರಂಗದ ಪರಿಸರವನ್ನು ಮಾಣಿಕ್ಯ ಮಾರಾಟಗಾರರ ಅಂಗಡಿಯ ಮೇಲೆ ಅಸೂಯೆಪಡುವಂತೆ ಮಾಡಿತು. ದೇಹಗಳನ್ನು ಸ್ಪರ್ಶಿಸುವ ಬಾಣಗಳ ತುದಿಯ ಚಲನೆಯು; ವೀರರ ಹೃದಯಗಳನ್ನು ಅಗಿದು, ಸಾರಾಯಿ ಸೀಸೆಯಿಂದ ಆಕಾಶದ ಕಿವಿಯವರೆಗೆ ತಲುಪಿಸಿತು. ಮೋಡಗಳು ಸಾಗರದಿಂದ ಮೇಲೆದ್ದು ಪವನಶಕ್ತಿಯ ಮೂಲಕ ಅತ್ಯುತ್ಸಾಹದಿಂದ ಓಡಲಾರಂಭಿಸುವಂತೆ ವೀರರ ರಕ್ತವು ಆವೇಶಭರಿತವಾಗಿ ಉಕ್ಕಿನ ಕವಚಗಳು ಮೇಲೆದ್ದವು. ಬೆಂಕಿ ಸುರಿಸುವ ಖಡ್ಗಗಳು ದೃಢವಾಗಿ ಎದುರಿಸುವಂತಹ ವೀರರ ಶಕ್ತಿಯಿಂದ ಮಿಂಚುವ ಸಾವಿರಾರು ಸಿಡಿಲುಗಳನ್ನು ವೈರಿಗಳ ತಲೆಗಳ ಮೇಲೆ ಒಮ್ಮಿಂದೊಮ್ಮೆ ಪತನಗೊಳಿಸಿದವು.

'ಎಲ್ಲ ದಿಶೆಯಿಂದಲೂ ಯುದ್ಧದ ಕೋಲಾಹಲ ಕಂಡುಬಂದಿತು, ಆಕಾಶದ ತಳಹದಿಯಿಂದ ಧೂಳಿಯು ಏಳಲಾರಂಭಿಸಿತು, ಖಡ್ಗ, ಬಾಣ ಮತ್ತು ಬರ್ಚಿಗಳ ಗಾಯದಿಂದ, ರಕ್ತದ ತರಂಗಗಳು ಪರಾಕ್ರಮಿಗಳ ದೇಹದ ಮೇಲೆ ಕವಚವಾದವು'.

ಕಗ್ಗೊಲೆ ಹಾಗೂ ಯುದ್ಧದ ಹೆಣಗಾಟವು ಸುದೀರ್ಘವಾಯಿತು. ಅಫಜಲ್‌ಖಾನನು ತಲೆಯ ಮೇಲೆ ಬಂಗಾರದ ಕವಚವನ್ನು ಧರಿಸಿ, ಕುದುರೆಯ ಅಲಂಕೃತವಾದ ಕಡಿವಾಣವನ್ನು ಹಿಡಿದು; ಕಾಲ್ಪನಿಕ ಸಂದೇಶವಾಹಕನಿಗೂ ಸಹ

ಹೋಗಲು ಅಧೈರ್ಯವನ್ನುಂಟು ಮಾಡುವ ತಗ್ಗು-ದಿನ್ನೆಯ ಪ್ರದೇಶದ ಮೇಲೆ ಕುದುರೆಯನ್ನು ಓಡಿಸಿದನು. ಅವನು ವಠಾರದ ಹೆಬ್ಬಾಗಿಲನ್ನು ತಲುಪಿ, ದ್ವಾರದ ಎದುರಿಗೆ ದೃಢವಾಗಿ ನಿಂತಿದ್ದ ಕ್ರೂರ ಸ್ವಭಾವದ ನಾಸ್ತಿಕರ ಗುಂಪನ್ನು ತಲೆಕತ್ತರಿಸುವ ಖಡ್ಗದಿಂದ ಅಸಹಾಯಕಗೊಳಿಸಿ, ಸಣ್ಣ ಪಟ್ಟಣವನ್ನು ವಶಪಡಿಸಿಕೊಂಡನು.

ಸಣ್ಣ ಪಟ್ಟಣವು ಕೈತಪ್ಪಿ ಹೋಗಿದೆಯೆಂಬುದನ್ನು ಕಂಡು; ಕನಕನಾಯಕನ ಅಸೂಯೆಯ ಅಗ್ನಿಯು ಆತನ ಶಿರದಿಂದ ಪಾದದವರೆಗೆ ಹೊತ್ತಿಕೊಂಡಿತು. ಆತನು ಆತ್ಮಾಭಿಮಾನದಿಂದ ಕಾರ್ಯನಿರ್ವಹಿಸಿ, ಎಂಬತ್ತೆರಡು ಸಾವಿರ ಸೈನಿಕರೊಂದಿಗೆ, ಅಫಲಲ್‌ಖಾನನ ಮೇಲೆ ನಿರಂತರವಾಗಿ ದಾಳಿ ಮಾಡಿದನು. ಒಂದು ವೇಳೆ 'ಸಾಮ್‌ನರಿಮಾನ್' (ರುಸ್ತುಮನ ಅಜ್ಜನ ಹೆಸರು) ಅಲ್ಲಿ ಪ್ರತ್ಯಕ್ಷವಾಗಿ ಇದ್ದರೆ, ಅವನು ಅಭಯಾಶ್ರಯ ಬೇಡುತ್ತ, ಪರಾಜಯವನ್ನು ಸ್ವೀಕರಿಸುತ್ತಿದ್ದನು. ಆದರೆ, ಅಫಜಲ್‌ಖಾನನು ದೃಢತೆಯಿಂದ ನಾಸ್ತಿಕರ ಗುಂಪನ್ನು ಎದುರಿಸಿದನು. ಕನಕನಾಯಕನು ಅವಮಾನಭರಿತ ಅಪಜಯವನ್ನು ಹೊಂದಿ, ವಠಾರದೊಳಗೆ ಓಡಿ ಹೋದನು. ಹುಸೇನಿ ಅಂಬರ್‌ಖಾನ್ ಹಾಗೂ ಇತರ ಸರದಾರರು, ಅಫಜಲ್‌ಖಾನನ ಕಾರ್ಯಸಾಧನೆಯನ್ನು ವೀಕ್ಷಿಸಿ, ಎರಡೂ ಕಡೆಗಳಿಂದ ವಠಾರದ ಮೇಲೆ ಆಕ್ರಮಣ ಮಾಡಿದರು. ಅವರು ಅಂದಾಜು ಮೂರು ಸಾವಿರ ಮೂರು ನೂರು ದೆವ್ವದಂತಹ ನಾಸ್ತಿಕರನ್ನು ಧ್ವಂಸಗೊಳಿಸಿದರು. ಹಗಲಿನ ನಾಲ್ಕು ಗಂಟೆಗೆ ಸಣ್ಣ ಪಟ್ಟಣವು ಮಹಾನ್‌ವೀರರ ವಶವಾಯಿತು.

ಕನಕನಾಯಕನು ತನ್ನ ಅಪವಿತ್ರವಾದ ಕಾರ್ಯದಿಂದ ಪಶ್ಚಾತ್ತಾಪದ ಸಾಗರದಲ್ಲಿ ಮುಳುಗಿದನು. ಅವನು ತನ್ನ ಪ್ರಾಣ ರಕ್ಷಿಸಲು ಕೋರಿದನು. ಮತ್ತು ಸಂರಕ್ಷಣೆ ಹೊಂದಲು ಕರಾರು ಪಡೆದನು. ಪ್ರಳಯದಿಂದ ಹೆದರಿ ಕಂಪಿಸುವ ಚರಿತ್ರವಿಹೀನ ಅಪರಾಧಿಯಂತೆ ಲಜ್ಜಿತನಾಗಿ ಕೋಟೆಯಿಂದ ಹೊರಗೆ ಬಂದನು. ಅವನನ್ನು ರುಸ್ತುಮೆ ಜಮಾನು ತನ್ನ ಡೇರೆಯ ಹತ್ತಿರ ಕರೆದು; ಮೇಲ್ವಿಚಾರಕರ ವಶಕ್ಕೆ ಒಪ್ಪಿಸಿದನು. ಉನ್ನತ ದರ್ಬಾರಿನ ನಂಬಿಗಸ್ತರಲ್ಲಿ ಒಬ್ಬನಿಗೆ ಕೋಟೆಯನ್ನು ಒಪ್ಪಿಸಿ, ನಾಲ್ವತ್ತು ಲಕ್ಷ ಹೂನ್ ಮತ್ತು ವಿವಿಧ ಪ್ರಕಾರದ ಅಮೌಲ್ಯವಾದ ಕಾಣಿಕೆಗಳನ್ನು; ಬಾದಶಾಹ ಗಾಜಿಯ ದರ್ಬಾರಿಗೆ ಕಳುಹಿಸಿದನು.

ಕೋಟೆಯನ್ನು ವಶಪಡಿಸಿಕೊಂಡು ಕೆಲವು ದಿನಗಳು ಗತಿಸಿದ ನಂತರ, ಪಟಿಂಗನಾದ ಕನಕನಾಯಕನನ್ನು ವಶಪಡಿಸಿಕೊಂಡಿದ್ದ ಅಧಿಕಾರಿಗಳಲ್ಲಿ ಒಬ್ಬನನ್ನು ಕನಕನಾಯಕನು ತನ್ನ ಕಡೆಗೆ ಸೆಳೆದುಕೊಂಡಿದ್ದನು. ಇಂತಹ ಚರಿತ್ರವಿಹೀನ ದೋಷವನ್ನು ಕಂಡು, ರುಸ್ತುಮೆ ಜಮಾನಿಗೆ ವಿಪರೀತ ಕೋಪ ಉಂಟಾಯಿತು. ಎಲ್ಲ ವಿದ್ರೋಹಿಗಳು ಮತ್ತು ಬಂಡುಕೋರರಿಗೆ ಎಚ್ಚರಿಕೆ ನೀಡಲು, ಅವನು ಕನಕನಾಯಕನನ್ನು ಕಬ್ಬಿಣದ ಪಂಜರದಲ್ಲಿ ಬಂಧಿಸಿ, ನಗರಕ್ಕೆ ಕಳುಹಿಸಿದನು.

'ಬಾದಶಾಹನ ಆಜ್ಞೆಯಿಂದ ವಿಮುಖನಾಗುವ ಯಾವುದೇ ವ್ಯಕ್ತಿಯು, ತನ್ನ ಕೃತ್ಯದ ಶಿಕ್ಷೆಯನ್ನು ಪಡೆಯುತ್ತಾನೆ, ಆತನ ಶಿರವನ್ನು ಖಡ್ಗದಿಂದ ಇಬ್ಭಾಗ ಮಾಡಲಾಗುತ್ತದೆ, ಆತನ ಕೊಲೆಗಾಗಿ, ಮರಣ–ಶಿಕ್ಷೆ ನೀಡುವವನು ಓಡುತ್ತಾನೆ'.

ವಚನ ಭ್ರಷ್ಟನಾದ ಕನಕನಾಯಕನಿಗೆ ಆತನ ಶಿಕ್ಷೆಯು ದೊರಕಿದಾಗ, ಕರ್ನಾಟಕ ಹಾಗೂ ಮಲೆನಾಡಿನ ರಾಜರು; ಮಹಾನ್ ಪರಾಕ್ರಮಿಗಳ ಹೆದರಿಕೆಯಿಂದ ನಿರಾಸೆ ಹೊಂದಿದರು. ಅವರ ತಲೆಗಳು ಜಡಿಯಲಾದ ಮೊಳೆಗಳಂತೆ, ಅವರ ದೇಹಗಳಲ್ಲಿ ಹುಗಿದು ಹೋದವು. ಹಜರತ್ ಬಾದಶಾಹ ಗಾಜಿಯು, ವಿಜಯಿಯಾದ ಮಂತ್ರಿಗಳು ಮತ್ತು ನಾಯಕರಿಗಾಗಿ ಬಂಗಾರದ ಗೊರಸು ರಕ್ಷೆ, ಮುತ್ತು ಜಡಿದ ಕಡಿವಾಣ ಹೊಂದಿದ ಕುದುರೆಗಳೊಂದಿಗೆ ರತ್ನಖಚಿತ ಕಠಾರಿ, ಸೊಂಟದ ಪಟ್ಟಿ ಹಾಗೂ ಮಹೋನ್ನತ ದರ್ಬಾರಿನಲ್ಲಿ ಆಸೀನರಾಗಲು ಅತಿ ಅಮೌಲ್ಯವಾದ ಆಸನಗಳ ಕಾಣಿಕೆಗಳನ್ನು ರುಸ್ತುಮೆ ಜಮಾನ ಬಳಿಗೆ ಕಳುಹಿಸಿದನು.

'ಸಾಮ್ರಾಜ್ಯದ ಆಡಳಿತಗಾರರ ಸೌಭಾಗ್ಯದಿಂದ ಜಗತ್ತಿನಲ್ಲಿ ಪ್ರವಾದಿಯ ಧರ್ಮವು ಶಾಶ್ವತವಾಯಿತು. ಆತನ ಖಡ್ಗದಿಂದ ವಿಜಯದ ಹೆಸರು ಉನ್ನತವಾಯಿತು. ಆತನ ಹೊರತಾಗಿ ಯಾರಿಗೂ ವಿಜಯದ ಬಟ್ಟಲು ಮೇಲಿಂದ ಮೇಲೆ ದೊರಕಲಿಲ್ಲ. ಆತನು ಮುತ್ತುಗಳಿಂದ ಅಲಂಕೃತವಾದ ಖಡ್ಗವನ್ನು ಕೈಗೆತ್ತಿಕೊಂಡಾಗ, ವಿಜಯದ ಮುಖವು ಪ್ರಕಟವಾಗುತ್ತದೆ'.

■

*

ಅಧ್ಯಾಯ - ೯

ಚಿಕನಾಯಕನ್ ಹಳ್ಳಿಯಲ್ಲಿ ವಿರೋಧಿ ಧ್ವಜದ ಹಾರಿಸುವಿಕೆ ಮತ್ತು ಸೈನ್ಯದ ನಿಗದಿಪಡಿಸುವಿಕೆ

ವಿಜಯ ಹಾಗೂ ಯಶಸ್ಸಿನ ಸಾಮ್ರಾಜ್ಯದ ವೀರರು; ಧರ್ಮ ಮತ್ತು ಸಂಪತ್ತಿನ ಶಾಶ್ವತತೆಯಿಂದ ಜಗತ್ತಿಗೆ ಪ್ರಗತಿಯನ್ನು ನೀಡಿ; ಜೀವನ ಸಾಗಿಸಿದ್ದಾರೆ. ಬಸವಪಟ್ಟಣದ ಕೋಟೆಯು ಮಹೋನ್ನತ ಸಾಮ್ರಾಜ್ಯದ ಆಡಳಿತಗಾರರ ಸ್ವಾಧೀನಕ್ಕೆ ಬಂದಾಗ; ರುಸ್ತುಮೆ ಜಮಾನು ವಠಾರದ ಒಳಗೆ ವಾಸ್ತವ್ಯ ಮಾಡಿದನು.

ಅವನು ಅಫಜಲ್‌ಖಾನನನ್ನು ಶಸ್ತ್ರಧಾರು ಸೈನ್ಯದೊಂದಿಗೆ ಮುಂದಕ್ಕೆ ಕಳುಹಿಸಿದನು. ಅಫಜಲ್‌ಖಾನನು ಚಿಕನಾಜಕನ್ ಹಳ್ಳಿಯನ್ನು ತಲುಪಿದಾಗ ಅವಸರದ ಅವಿವೇಕಿಗಳು ರಣರಂಗದ ಆಸುಪಾಸು ಕೋಲಾಹಲವನ್ನು ಕಡಿಮೆ ಮಾಡಿದರು. ಅಹಂಕಾರ ತುಂಬಿದ ತಲೆಯುಳ್ಳ ಚಿಕನಾಜಕನ್ ಹಳ್ಳಿಯ ರಾಜನು, ಇಸ್ಲಾಂ ಧರ್ಮದ ಖ್ಯಾತರ ಹೆದರಿಕೆಯಿಂದ ತಲ್ಲಣಗೊಂಡು, ಅಶಾಂತನಾದನು. ಅವನು ದೂರದೃಷ್ಟಿಯಿಂದ ಅಫಜಲ್‌ಖಾನನಿಗೆ ಹೇಳಿಕೆಯನ್ನು ಕಳುಹಿಸಿದನು. "ನಾನು ಹಜರತ್ ಬಾದಶಾಹನಿಗೆ ವಿಧೇಯನಾಗಬೇಕು ಮತ್ತು ಆಜ್ಞಾ ಉಲ್ಲಂಘನೆಯ ಮಾರ್ಗವನ್ನು ತ್ಯಜಿಸಬೇಕು. ನಾನು ಪ್ರತಿಯೊಂದು ಸಂದರ್ಭದಲ್ಲಿ ವಿಜಯಿಗಳಾಗಿ ಸೇವೆಯ ಸಾಮಾನುಗಳನ್ನು ತಲುಪಿಸುತ್ತೇನೆ. ಇದರಲ್ಲಿಯೇ ನನ್ನ ಕಲ್ಯಾಣವಿದೆ". ಅವನಿಗೆ ಈ ಪ್ರದೇಶದಿಂದ ಪ್ರತಿವರ್ಷ ಒಂದು ಲಕ್ಷ ಹೂನ್ ದೊರಕುತ್ತವೆ. ಇಪ್ಪತ್ತು ಸಾವಿರ ಹೂನ್ ಆತನಿಗೆ ನೀಡಿ, ಕೋಟೆಯನ್ನು ಬಳಕೆ ಮಾಡಿಕೊಳ್ಳಲು ಮತ್ತು ಬೇಲೂರಿನ ಕಡೆಗೆ ಮುಂದೆ ಸಾಗಲು, ಅವನು ಕೋರಿದನು.

ವಿಜಯ-ಸಂಪನ್ನ ಸೈನ್ಯವು ಬೇಲೂರಿನ ವಠಾರದ ಹತ್ತಿರ ತಲುಪಿದಾಗ; ರುಸ್ತುಮೆ ಜಮಾನು ಬಸವಪಟ್ಟಣದಿಂದ ರವಾನೆ ಆಗಿ, ಚಿಕನಾಜಕನ್ ಹಳ್ಳಿಗೆ ಬಂದನು. ಅವನು ತನ್ನ ಕುದುರೆ ಸವಾರರು ಮತ್ತು ಸೈನಿಕರನ್ನು ಇತರ ಮಂತ್ರಿಗಳು ಹಾಗೂ ನಾಯಕರೊಂದಿಗೆ ಅಫಜಲ್‌ಖಾನನ ಸಹಾಯಕ್ಕಾಗಿ ನೇಮಿಸಿದನು.

ಅಫಜಲ್‌ಖಾನನು ವಿಜಯ-ಸಂಪನ್ನ ಸೈನಿಕರೊಂದಿಗೆ ಬೇಲೂರು ಕೋಟೆಗೆ ಮುತ್ತಿಗೆ ಹಾಕಿದಾಗ; ವಿಜಯಶಾಲಿಗಳು ಎಲ್ಲೆಡೆಗೆ ಕಗ್ಗೊಲೆ ಮತ್ತು ಯುದ್ಧದ ಬಿರುಗಾಳಿಯನ್ನು ಎಬ್ಬಿಸಿದರು. ಕಾಠಿಣ್ಯತೆ ಹಾಗೂ ಸುದೃಢತೆಯ ಬಾಹುಗಳ ಶಕ್ತಿಯಿಂದ ಚರಿತ್ರಹೀನ ವೈರಿಗಳ ಸಂಬಂಧದಂತೆ, ಪರ್ವತವನ್ನು ಭಗ್ನಗೊಳಿಸಲಾಯಿತು. ತೋಪುಗಳು ಮತ್ತು ಸಿಡಿಲಿನಂತಹ ಬಂದೂಕುಗಳನ್ನು ರಣರಂಗದಲ್ಲಿ ತೊಡಗಿಸಿದಂತಹ ಬೇಲೂರಿನ ರಾಜನಾದ ವೆಂಕಟ ತಪ್ಪಿಯು, ಕೋಟೆಯೊಳಗೆ ಆಸೀನನಾಗಿದ್ದನು. ಈ ವೃದ್ಧ ಪೃಥ್ವಿಯ ಮೇಲೆ ಎರಡೂ ಕಡೆಗಳಿಂದ ಪ್ರತಿಕಾರದ ಬೆಂಕಿಯ ಜ್ವಾಲೆಗಳನ್ನು ಉದ್ದೀಪನಗೊಳಿಸಲಾಯಿತು. ಸಮರ ವೀರರು ಬೆಂಕಿ ಸುರಿಸುವ ಖಡ್ಗಗಳು ಮತ್ತು ಹೃದಯ ಭೇದಕವಾದ ಬಾಣಗಳೊಂದಿಗೆ ಅಧರ್ಮಿಗಳಾದ ಅವಿಧೇಯರನ್ನು ಎದುರಿಸಲು ಸಿದ್ಧರಾದರು. ವಿಳಂಬ ಮಾಡದೇ ತ್ವರಿತಗತಿಯಿಂದ ಚಲಿಸುವ ಬಾಣಗಳು ಅರ್ಧದಾರಿಯಲ್ಲಿಯೇ ತಮ್ಮ ತೀಕ್ಷ್ಣವಾದ ತುದಿಗಳಿಂದ ಬೆಂಕಿ ಸುರಿಸುವ ಗುಂಡುಗಳಲ್ಲಿ ವೀರರ ಪ್ರಾಣದಂತೆ ಒಳಗೆ ನುಸುಳುತ್ತಿದ್ದವು. ಖಡ್ಗ ಮತ್ತು ಬರ್ಚಿಗಳ ನದಿಯ ಆರ್ದ್ರತೆಯಿಂದ, ಪ್ರತಿಯೊಂದು ಗುರಾಣಿಯ ಮೇಲೆ ಪ್ರತಿಯೊಂದು ಹೆಜ್ಜೆಯಲ್ಲಿ ಗಾಯದ ಹೂಗಳು ಅರಳುತ್ತ ಸಾಗಿದವು. ಯುದ್ಧ ನಿರತರಾದ ವ್ಯಕ್ತಿಗಳ ರಕ್ತದ ತರಂಗಗಳು ಪ್ರೇಮಿಗಳ ರಕ್ತ ಕಣ್ಣೀರಿನ ಪ್ರವಾಹದಂತೆ ನೀಲಿ ಮೊಗಸಾಲೆಯ ಮೇಲೆ ಹರಿಯಲಾರಂಭಿಸಿದವು. ಉಕ್ಕಿನ ಹಸ್ತಗಳುಳ್ಳ ಸೈನಿಕರ ಎದೆಗಳು, ಬಂದೂಕಿನ ಗುಂಡುಗಳ ಆಗಮನ ನಿರ್ಗಮನದ ದೆಸೆಯಿಂದ ಬೆಂಕಿಯ ಚರ್ಮದ ಚೀಲಗಳಾದವು.

'ರಣರಂಗದಲ್ಲಿ ಅಗ್ನಿಯು ಜಿಗಿಯುತ್ತಿದ್ದಂತೆ, ಬಂದೂಕಿನಿಂದ ಜ್ವಾಲೆಗಳು ತಲೆ ಎತ್ತಿದ್ದವು, ಕವಚದೊಳಗೆ ಬಾಣಗಳಿಂದ ತುಂಬಿದ ಎದೆಯ ಕವಚವು, ಪ್ರಾಣಪಕ್ಷಿಗಳ ರೆಕ್ಕೆಗಳಲ್ಲಿ ಗಂಟು ಹಾಕಿತು'.

ಯುದ್ಧದ ಪ್ರಯತ್ನದಿಂದ ಕೋಟೆಯು ಬೇಗನೆ ವಶವಾಗುವದಿಲ್ಲವೆಂಬುದನ್ನು ಅಫಜಲ್‌ಖಾನನು ಕಂಡು, ಕೋಟೆಯಲ್ಲಿ ಸುರಂಗ ಕೊರೆಯಲು ಮತ್ತು ವಠಾರದ ಗೊಮ್ಮಟಗಳನ್ನು ಅಸ್ಥಿರವಾದ ವೈರಿಗಳ ಮುಖದ ಕಳೆಗುಂದಿದ ಬಣ್ಣದಂತೆ, ಭಗ್ನಗೊಳಿಸಲು ಆಜ್ಞಾಪಿಸಿದನು. ಅದೇ ಸಮಯ ಶಕ್ತಿಶಾಲಿ ಬಾಹುಗಳುಳ್ಳ ಸುರಂಗ ಕೊರೆಯುವ ತಜ್ಞರು ಪ್ರಯತ್ನ ಮಾಡಿ ವಠಾರದ ತಳಹದಿಯಲ್ಲಿಎರಡು ಸುರಂಗ ಕೊರೆದು, ಪ್ರತಿಯೊಂದರಲ್ಲಿ ಸಿಡಿಮದ್ದು ತುಂಬಿದ ಪೆಟ್ಟಿಗೆಗಳನ್ನಿಟ್ಟು ಬೆಂಕಿ ಹಚ್ಚಿದರು. ವೈಭವಶಾಲಿ ಗೊಮ್ಮಟಗಳು ಸ್ಫೋಟಗೊಂಡು, ಆಶ್ರಯಧಾಮದ ಪ್ರತಿಯೊಂದು

ಶಿಲೆಯು ಎತ್ತರದ ಮೇಲೆ ತುಂಡಾಗಿ, ಹಾರಾಡುವಂತಹ ಹದ್ದಿನಂತೆ, ದೂರದೃಷ್ಟಿಯ ಬುದ್ಧಿವಂತರ ಕಣ್ಣಿನಿಂದ ಮಾಯವಾಯಿತು. ಈ ಮಟ್ಟದ ದಂಗೆ ಹಾಗೂ ನಷ್ಟದ ಹೊರತಾಗಿಯೂ ಸಹ; ಬೇಲೂರಿನ ಅರಸನು ತನ್ನ ಸ್ಥಾನದಿಂದ ಅಲುಗಾಡಲಿಲ್ಲ. ಅವನು ತನ್ನ ಕುದುರೆ ಸವಾರರು ಮತ್ತು ಕಾಲ್ದಳ ಸೈನ್ಯದ ಸಹಾಯದಿಂದ ವಠಾರದ ಪ್ರತಿಭಟನೆಯನ್ನು ಇನ್ನಷ್ಟು ಬಲಗೊಳಿಸಿದನು.

ತೋಪುಗಳ ಜ್ವಾಲೆ ಹಾಗೂ ಬಂದೂಕುಗಳ ಹೊಡೆತದಿಂದ, ಕೋಟೆಯ ಅಧಿಕಾರ ಮತ್ತು ಅಸೂಯೆಯ ಬಾಗಿಲುಗಳು ಸಂಪೂರ್ಣವಾಗಿ ತೆರೆದವು. ವಿಜಯ-ಸಂಪನ್ನ ಸೈನ್ಯದ ವೀರ ಸೈನಿಕರು ಸೂರ್ಯೋದಯದ ಸಮಯದಿಂದ ದುರ್ದೈವಿ ವಿರೋಧಿಗಳ ಮೇಲೆ ವಿಜಯ ಸಂಪಾದಿಸಿದರು. ಪ್ರತಿರಾತ್ರಿ ಬಾವಲಿಯಂತೆ ಸೂರ್ಯನ ಮೇಲೆ ದಾಳಿ ಮಾಡಲು ಬಯಸುತ್ತಿದ್ದ ಚರಿತ್ರ ಹೀನರಾದ ನಾಸ್ತಿಕರು; ವಿಜಯಿ ಸೈನ್ಯದ ಕೈಯಿಂದ ಪರಾಜಿತರಾಗಿ, ಕೋಟೆಯಲ್ಲಿ ಹಿಂದುರುಗಿ ಓಡಿ ಹೋದರು. ಎರಡೂ ಕಡೆಗಳಿಂದ, ಅಂದಾಜು ನಾಲ್ಕು ತಿಂಗಳವರೆಗೆ ಇದೇ ತರಹ ಕಗ್ಗೊಲೆ ಹಾಗೂ ಯುದ್ಧ ಮುಂದುವರಿಯಿತು. ಬೇಲೂರಿನ ಕೋಟೆಯನ್ನು ಸ್ವಾಧೀನಪಡಿಸಿಕೊಳ್ಳಲು ಇಷ್ಟೊಂದು ನಿರ್ಲಕ್ಷ್ಯ ಮತ್ತು ವಿಳಂಬ ಏಕೆ ಆಗಿದೆ ಎಂಬುದನ್ನು ಕೇಳಬೇಕೆಂದು, ಬಾದಶಾಹ ಗಾಜಿಯು ರುಸ್ತುಮೆ ಜಮಾನನಿಗೆ ಆಜ್ಞೆ ನೀಡಿದನು.

ಬಾದಶಾಹನ ಆಜ್ಞೆಯು ತಲುಪುತ್ತಲೇ ಎಲ್ಲ ಖ್ಯಾತ ಮಂತ್ರಿಗಳು ಮತ್ತು ನಾಯಕರು ಇನ್ನೊಮ್ಮೆ ವಠಾರದ ಮೇಲೆ ದಾಳಿ ಮಾಡಿ, ಎಲ್ಲ ಅಸ್ಥಿತರಾದ ನಾಸ್ತಿಕರನ್ನು ಕೋಟೆಯ ತಳಹದಿಯಂತೆ ನೆಲಸಮ ಮಾಡಿದರು. "ಒಂದು ವೇಳೆ ಬೇಲೂರು ಕೋಟೆಯನ್ನು ಸ್ವಾಧೀನಪಡಿಸಿಕೊಳ್ಳುವ ಕಾರ್ಯದಲ್ಲಿ ನನ್ನಿಂದ ವಿಳಂಬವಾದರೆ; ಬಾದಶಾಹನ ಕ್ರೋಧಾಗ್ನಿಯು ಭೂಮಿ ಮತ್ತು ಸಾಗರವನ್ನು ಹುಲ್ಲು ಕಡ್ಡಿಯಂತೆ ಸುಟ್ಟು ಭಸ್ಮಗೊಳಿಸಲಾಗುವದು" ಎಂದು ಬಾದಶಾಹನ ಆಜ್ಞೆಯ ಮೇರೆಗೆ ರುಸ್ತುಮೆ ಜಮಾನು ಚಿಕ್ಕನಾಯಕನ ಹಳ್ಳಿಯಿಂದ ಆಜ್ಞಾಪಿಸಿದನು. ಬೇಲೂರಿನ ಅರಸನಿಗೆ ಈ ಸಮಾಚಾರ ತಲುಪಿದಾಗ ಹೆದರಿಕೆ ಹಾಗೂ ನಿರಾಸೆಯಿಂದ ಅವನ ತಾಳ್ಮೆ ಮತ್ತು ಸ್ಥಿರತೆಯು ಕಳೆದು ಹೋಯಿತು.

ಅವನು ಇತರ ಅರಸರಂತೆ ಒಪ್ಪಂದ ಮಾಡಿಕೊಳ್ಳಲು ವಿವಶನಾಗಿ ತನ್ನ ಸಂದೇಶವಾಹಕನನ್ನು ರುಸ್ತುಮೆ ಜಮಾನ ಹತ್ತಿರ ಕಳುಹಿಸಿದನು. ರುಸ್ತುಮೆ ಜಮಾನು ಬೇಲೂರಿನ ಕೋಟೆಯ ಬದಲು, ಅವನಿಗೆ ಸಕ್ರಿಪಟ್ಟಣವನ್ನು ಕೊಟ್ಟನು. ಮತ್ತು ವಶಪಡಿಸಿಕೊಂಡ ಅಪಾರ ಸಾಮಾನುಗಳನ್ನು ಮಹೋನ್ನತ ದರ್ಬಾರಿಗೆ ಕಳುಹಿಸಿದನು. ವಿಜಯ-ಸಂಪನ್ನ ಸೈನ್ಯವು ಚಿಕನಾಯಕನ ಹಳ್ಳಿಯ ಕೋಟೆಯಲ್ಲಿ ವಿಶ್ರಾಂತಿ ಪಡೆಯಲು ವಾಸ್ತವ್ಯ ಹೂಡಿತು. ವಿಜಯದಿಂದ ಪ್ರಾಪ್ತವಾದ ಸಾಮಾನುಗಳನ್ನು ಒಟ್ಟುಗೂಡಿಸಲು ಒಂಬತ್ತನೆಯ ಆಕಾಶದವರೆಗೆ; ಸೇನಾಪತಿಯ ದೊಡ್ಡ ನಗಾರಿಯನ್ನು ಬಾರಿಸಲಾಯಿತು.

‘ಖುಸ್ರೊ ಗಾಜಿಯ ದೃಷ್ಟಿಯು ಯಾರ ಮೇಲಾದರೂ ಸ್ಥಿರವಾದರೆ, ಅಂತಹ ವ್ಯಕ್ತಿಗೆ ಪದೋನ್ನತಿ ನೀಡಿ, ಆಕಾಶದ ಔನ್ನತ್ಯಕ್ಕೆ ಏರಿಸಲಾಗುತ್ತದೆ, ಯಾರಿಗಾದರೂ ಆಕಾಶದ ಮೇಲೆ ಸ್ಥಾನ ದೊರೆತರೆ ಅವನು ಸೂರ್ಯನಂತೆ, ಆತನ ದರ್ಬಾರಿನಲ್ಲಿ ಸಾಷ್ಟಾಂಗ ನಮನ ಸಲ್ಲಿಸಲು ತೊಡಗುತ್ತಾನೆ’.

ಬೇಲೂರಿನ ಕೋಟೆಯನ್ನು ಜಯಿಸಿದ ನಂತರ, ವಿಜಯಿ ಅಫಜಲ್‌ಖಾನನು ತುಮಕೂರಿನ ಕೋಟೆಯ ಕಡೆಗೆ ರವಾನೆ ಆಗುವುದು.

ಗೌರವಾನ್ವಿತ ದರ್ಬಾರಿನ ಸಾಮೀಪ್ಯ ಹೊಂದಿದವರು. ಸೌಭಾಗ್ಯಶಾಲಿ ಮತ್ತು ಪುಣ್ಯಾತ್ಮನಾದ ಬಾದಶಾಹನ ಮಾರ್ಗದರ್ಶನದಿಂದ; ಧರ್ಮ ಹಾಗೂ ಸಂಪತ್ತಿನ ಮಾರ್ಗವನ್ನು ಕ್ರಮಿಸಿದ್ದಾರೆ. ವಿಜಯಿ ಅಫಜಲ್‌ಖಾನನು ಹಜರತ್ ಬಾದಶಾಹ ಗಾಜಿಯ ಉನ್ನತವಾದ ಅದೃಷ್ಟದಿಂದ, ಬೇಲೂರಿನ ಕೋಟೆಯನ್ನು ಜಯಿಸಿದ ನಂತರ; ಕುದುರೆ ಸವಾರರು ಮತ್ತು ಸೈನಿಕರನ್ನು ಸಜ್ಜುಗೊಳಿಸಿ, ತುಮಕೂರಿನ ಕೋಟೆಯೆಡೆಗೆ ರವಾನೆ ಆದನು. ರುಸ್ತುಮ್ ಜಮಾನು ಚಿಕನಾಯಕನ್ ಹಳ್ಳಿಯಿಂದ ಹೊರಟು, ಬೇಲೂರಿನ ಕೋಟೆಗೆ ಬಂದನು. ಹಾಗೂ ತನ್ನ ಜೊತೆಗಾರರನ್ನು ಅಲ್ಲಿ ಬಿಟ್ಟು; ಅಫಜಲ್‌ಖಾನನನ್ನು ಹಿಂಬಾಲಿಸಿದನು. ಅಫಜಲ್‌ಖಾನನು ಅಪಾರ ಸೈನಿಕರೊಂದಿಗೆ, ಹಲವಾರು ತಂಗುದಾಣ ಮತ್ತು ತಂಗುಘಟ್ಟಗಳನ್ನು ದಾಟಿ, ತುಮಕೂರಿನ ಕೋಟೆಯ ಎದುರಿಗೆ ತಲುಪಿದಾಗ, ಮಹಾನ್ ವೀರರು ಪ್ರತಿಕಾರದ ಮೈದಾನದಲ್ಲಿ ಕ್ರೋಧ ಹಾಗೂ ಶೌರ್ಯದ ಕುದುರೆಗಳನ್ನು ಓಡಿಸಲಾರಂಭಿಸಿದರು. ಆಕಾಶದ ಔನ್ನತ್ಯವನ್ನು ಸ್ಪರ್ಶಿಸುವ ಪರ್ವತದಂತಹ ಆನೆಗಳ ಸೈನ್ಯವನ್ನು ವ್ಯವಸ್ಥೆಗೊಳಿಸಿ ವಠಾರಕ್ಕೆ ಮುತ್ತಿಗೆ ಹಾಕಿದರು. ಹೆಬ್ಬಾವಿನಂತಹ ಸೊಂಡಿಲು ಉಳ್ಳ ಆನೆಗಳ ಆವೇಶವು ಆ ಸ್ಥಳದಲ್ಲಿ ವೈರತ್ವ ಹೊಂದಿದ ನಾಸ್ತಿಕರ ಆಕ್ರೋಶವು ಕೊಲ್ಲುವಂತಹ ವಿಷದಂತೆ ಎದೆಯನ್ನು ಭೇದಿಸಿ, ವಿನಾಶದ ಮಣ್ಣಿನಲ್ಲಿ ಲೀನವಾಯಿತು. ಕಹಳೆ ಮತ್ತು ಬಿಗಿಲಿನ ಕೋಲಾಹಲವು ಆಕಾಶಗಳ ಎದೆಗಳನ್ನು ಸಂಕಷ್ಟದಲ್ಲಿ ಸಿಲುಕಿದ ಜನರ ಮುಖಗಳಂತೆ ಗಾಯಗೊಳಿಸಿತು. ತೀಕ್ಷ್ಣವಾದ ಖಡ್ಗಗಳ ಮಿಂಚು, ಜಗತ್ತನ್ನು ಬೆಳಗಿಸುವ ಸೂರ್ಯನ ಕಿರಣಗಳನ್ನು ಲೇಖಕರ ಲೇಖನಿಯಂತೆ ಕೊರೆಯಿತು.

‘ಬಾದಶಾಹ ಗಾಜಿಯ ವೀರರು, ಎಲ್ಲರೂ ಪ್ರಾಣತ್ಯಾಗ ಮಾಡಲು ನಿರತರಾದರು, ಎಲ್ಲೆಡೆಗೆ ಗುರಾಣಿಗಳು ತಿರುಗಲಾರಂಭಿಸಿದವು, ಗದೆಯು ಆಕಾಶದ ಬಾಹುಗಳನ್ನು ಸೋಲಿಸಿತು, ವೈರಿಗಳನ್ನು ಬಾಣಗಳಿಂದ ತಳಮಳಗೊಳಿಸಲಾಯಿತು, ಧಡಿಯು/ಜೀನು ಬಾಣತಯಾರಕರ ಗೃಹವಾಯಿತು. ಬರ್ಚಿಗಳು ಏಳನೇ ಆಕಾಶದ ರಹಸ್ಯ ಜ್ಞಾನಿ ಆದವು, ಸೈನ್ಯದ ಧೂಳಿಯ ಕೆಳಗೆ ಭೂಮಿಯು ಮಾಯವಾಯಿತು’.

ಉಕ್ಕಿನ ಗೊರಸುಳ್ಳ ಕುದುರೆಗಳ ಓಡಾಟವು, ಭೂಮಿಯ ಮೇಲ್ಭಾಗವನ್ನು;

ಬಿರುಗಾಳಿಯಲ್ಲಿ ಸಿಲುಕಿದ ನೌಕೆಯಂತೆ ಏಳಲು ಮತ್ತು ಆಸೀನವಾಗಲು ಸನ್ನದ್ಧಗೊಳಿಸಿತು. ಮೈದಾನ ಹಾಗೂ ಪರ್ವತಗಳ ಮಾರುಕಟ್ಟೆಗಳಲ್ಲಿ ಧೂಳು/ಮುಸುಕಿನ ಬದಲಾಗಿ ಬೆಂಕಿಯ ಕಿಡಿಗಳು ಮೇಲೇಳಲಾರಂಭಿಸಿದವು. ತಿರುಗುತ್ತಿರುವ ಆಕಾಶದ ಹಾಳೆಯಿಂದ, ಭೀತಿಯ ಸಾಗರದ ತರಂಗಗಳು ಮತ್ತೊಮ್ಮೆ ಏಳಲಾರಂಭಿಸಿದವು. ತುಮಕೂರಿನ ಅರಸನು ಕೋಲಾಹಲದ ಪರಿಸ್ಥಿತಿಯನ್ನು ಕಂಡು, ತಾಳ್ಮೆ ಹಾಗೂ ಸ್ಥಿರತೆಯ ಕಡಿವಾಣವನ್ನು ಕೈ ಬಿಟ್ಟನು. ಅವನು ಅಸಹಾಯಕನಾಗಿ, ನಮ್ರತೆ ಮತ್ತು ದೀನತೆಯಿಂದ ಆಜ್ಞಾ ಪಾಲನೆಯ ಮಾರ್ಗದಲ್ಲಿ ಪಾದಾರ್ಪಣೆ ಮಾಡಿದನು. ಭಂಡಾರ, ಕುದುರೆ ಹಾಗೂ ಆನೆಗಳೊಂದಿಗೆ ತುಮಕೂರಿನ ಕೋಟೆಯನ್ನು ಅಫಜಲ್‌ಖಾನನ ವಶಕ್ಕೆ ಕೊಟ್ಟನು. ಅಷ್ಟರಲ್ಲಿ ರುಸ್ತುಮೆ ಜಮಾನು ವಿಜಯ-ಸಂಪನ್ನ ಸೈನ್ಯದೊಂದಿಗೆ ಬೇಲೂರಿನ ಕೋಟೆಯ ಕಡೆಯಿಂದ ಅಲ್ಲಿಗೆ ತಲುಪಿದನು. ತುಮಕೂರಿನ ಅರಸನು ಕೊಟ್ಟಂತಹ ಸಾಮಾನುಗಳನ್ನು ಪಡೆದು; ರಾಜರಿಗೆ ಆಶ್ರಯದಾತನಾದ ಸಾಮ್ರಾಟನ ದರ್ಬಾರಿಗೆ ಕಳುಹಿಸಿದನು.

'ಆಕಾಶವು ಯಾವ ಬಾದಶಾಹನ ದ್ವಾರಸೇವಕರೆಡೆಗೆ, ಪ್ರತಿರಾತ್ರಿ ನಕ್ಷತ್ರಗಳ ಭಂಡಾರ ಕಳುಹಿಸುತ್ತದೆ, ಆತನ ಧೈರ್ಯದ ಶಕ್ತಿಯಿಂದ ಪ್ರತಿಯೊಂದು ಹನಿಯು ಎಚ್ಚರಿಕೆಯ ಮೋಡವಾಗಿ, 'ಖಿಲ್‌ಜುಮ್' ನಂತಹ ಸಾಗರದ ದೇಹದಿಂದ ತರಂಗಗಳ ನರಗಳನ್ನು ಮೇಲೆಳೆದು ತರುತ್ತದೆ'.

ಸಾಮ್ರಾಜ್ಯವನ್ನು ವಿಸ್ತರಿಸಲು ರಹಸ್ಯ ಕೊಠಡಿಯಲ್ಲಿ ಸಮಾಲೋಚನೆ ಮಾಡುವವರು ತಮ್ಮ ಧೈರ್ಯದ ಶಕ್ತಿಯಿಂದ ವಿಜಯ ಮತ್ತು ಯಶಸ್ಸನ್ನು ಪಡೆದರು. ಬೇಲೂರು ಹಾಗೂ ತುಮಕೂರಿನ ಕೋಟೆಗಳನ್ನು, ಹಜರತ್ ಬಾದಶಾಹ ಗಾಜಿಯ ವಿಜಯದ ವ್ಯಾಪ್ತಿಯಲ್ಲಿ ಸಮಾವೇಶಗೊಳಿಸಲಾಯಿತು. ರುಸ್ತುಮೆ ಜಮಾನು ಒಂದು ಯೋಜನೆಗೆ ಅನುಸಾರವಾಗಿ, ಸಂಪೂರ್ಣ ಕರ್ನಾಟಕ ದೇಶದ ಅರಸನಾಗಿದ್ದ ರಾಯಲ್ ವೇಲೂರನೊಂದಿಗೆ ಒಪ್ಪಂದ ಮಾಡಿಕೊಂಡನು.

"ನಾವು ಒಟ್ಟಾಗಿ ಆಳ್ವಿಕೆ ಮಾಡೋಣ" ಎಂಬ ಒಪ್ಪಂದಕ್ಕೆ ಅನುಗುಣವಾಗಿ ಜಯಿಸಿದ ಪ್ರತಿಯೊಂದು ಕೋಟೆಯ ಸಾಮಾನುಗಳನ್ನು ಕುದುರೆ ಮತ್ತು ಆನೆಗಳ ಜೊತೆಗೆ ಜಗತ್ತನ್ನು ಸಂರಕ್ಷಿಸುವ ಬಾದಶಾಹನ ದರ್ಬಾರಿಗೆ ಕಳುಹಿಸಿಕೊಡಲಾಯಿತು. ಬರಿದಾದ ಕೋಟೆಯನ್ನು ರಾಯಲ್ ವೇಲೂರನಿಗೆ ತೆರವು ಮಾಡಿಕೊಡಲಾಯಿತು. ವಾಗ್ದಾನದ ಷರತ್ತುಗಳು ಅನುಷ್ಠಾನಗೊಂಡ ನಂತರ, ರುಸ್ತುಮೆ ಜಮಾನು ರಾಯಲ್ ವೇಲೂರನಿಗಾಗಿ ಮಹೋನ್ನತ ಬಾದಶಾಹನಿಂದ ಛತ್ರಿಯನ್ನು ತರಿಸಿ, ಸಾಮ್ರಾಟನ ಕೃಪೆಯಿಂದ ಆತನಿಗೆ ಗೌರವ ನೀಡಲಾಯಿತು. ಆದರೆ, ಅಪಯಶಸ್ಸಿನ ಮುಳ್ಳು, ಈ ದುರ್ದೈವಿಯ ಸೆರಗಿಗೆ ಅಂಟಿಕೊಂಡಿತ್ತು. ರಾಯಲ್ ವೇಲೂರನು ವಾಗ್ದಾನದ

ಷರತ್ತುಗಳಿಗೆ ಅನುಸಾರವಾಗಿ ನಡೆದುಕೊಳ್ಳಲಿಲ್ಲ. ಅವನು ಆಜ್ಞೋಲ್ಲಂಘನೆ ಮಾಡಿ, ದಂಗೆಯನ್ನು ಆರಂಭಿಸಿದನು. ಆಸುಪಾಸಿನ ರಾಜರನ್ನು ಒಂದುಗೂಡಿಸಿ, ವಿರೋಧವನ್ನು ವ್ಯಕ್ತಪಡಿಸಿದನು. ಒಂದು ವೇಳೆ, ಬೆಂಕಿಯ ಜ್ವಾಲೆಗಳು ಆತನನ್ನು ಸ್ವಯಂ ಆವರಿಸಿದರೆ; ಜಗತ್ತಿಗೆ ಬೆಳಕು ನೀಡುವ ಸೂರ್ಯನಿಗೆ ಯಾವ ನಷ್ಟವಾಗಲು ಸಾಧ್ಯವಿದೆ? ಅಥವಾ ಕೈಯಲ್ಲಿ ಹಿಡಿದ ಹಗ್ಗದ ಉರಿತದಿಂದ ಹಗ್ಗಕ್ಕೆ ತಳಮಳ ಉಂಟುಮಾಡಿದರೆ, ಆಕಾಶಕ್ಕೆ ಯಾವ ಹಾನಿ ಆಗಬಲ್ಲದು? ಇಂತಹ ವಿಷಯವನ್ನು ಕುರಿತು ಆತನು ಸ್ವಲ್ಪವೂ ಸಹ ಯೋಚಿಸಲಿಲ್ಲ.

ರಾಯಲ್ ವೇಲೂರನು ನೇರವಾದ ಮಾರ್ಗದಿಂದ ದಾರಿ ತಪ್ಪಿದ್ದಾನೆ ಮತ್ತು ರುಸ್ತುಮೆ ಜಮಾನ ಅಸ್ತಿತ್ವವನ್ನು ನಿರ್ಲಕ್ಷಿಸಿದ್ದಾನೆಂಬುದನ್ನು; ಕಂಡುಕೊಂಡಂತಹ ರುಸ್ತುಮೆ ಜಮಾನು ಇತರ ಕೋಟೆಗಳೆಡೆಗೆ ಸಾಗಿದನು. ಹಜರತ್ ಬಾದಶಾಹ ಗಾಜಿಯ ಸುದೈವದಿಂದ, ಅಲ್ಪ ಸಮಯದಲ್ಲಿಯೇ, ಕೆಲವು ಸುಭದ್ರವಾದ ವಠಾರಗಳನ್ನು ಜಯಿಸಿದನು. ಒಂದು ವೇಳೆ, ಪ್ರತಿಯೊಂದು ಕೋಟೆಯ ವಿಜಯಗ್ರಂಥವನ್ನು ಬರೆದರೆ ಅಥವಾ ವಿವರಿಸಿದರೆ; ಪ್ರತಿಯೊಂದು ಪಂಕ್ತಿಯ ಆಧಾರದ ಮೇಲೆ ಸಾವಿರಾರು ವಿಜಯ ಗ್ರಂಥಗಳನ್ನು ರಚಿಸಬಹುದು. ರಾಯಲ್ ವೇಲೂರನು ರುಸ್ತುಮೆ ಜಮಾನ ವಿಜಯಗಳನ್ನು ಅವಲೋಕಿಸಿದಾಗ, ಆಶ್ಚರ್ಯಚಕಿತನಾದನು. ಅವನು ಕ್ಷಮೆ ಕೋರಲು, ವಿಜಯಿ ರುಸ್ತುಮೆ ಜಮಾನಿಗೆ ಒಂದು ಪತ್ರ ಬರೆದನು.

"ನಿಮ್ಮ ಕೃಪೆಯಿಂದ ಒಂದುವೇಳೆ ನನ್ನ ಅಪರಾಧವನ್ನು ಕ್ಷಮಿಸಿದರೆ ಮತ್ತು ಇನ್ನೊಮ್ಮೆ ಸಹಾಯ ಮಾಡಿದರೆ, ನನ್ನ ಪ್ರಸ್ತಾವನೆಗಾಗಿ ನಾನು ಐವತ್ತು ಲಕ್ಷ ಹೂನ್ ಕೊಡುವೆನು" ಎಂದು ರಾಯಲ್‌ವೇಲೂರನು, ರುಸ್ತುಮೆ ಜಮಾನಿಗೆ ತಿಳಿಸಿದನು. ವಂಚಕನಾದ ರಾಯಲ್‌ನ ಪತ್ರವನ್ನು ರುಸ್ತುಮೆ ಜಮಾನು ವಿಶ್ವಾಸಪೂರ್ಣವಾದ ದೃಷ್ಟಿಯಿಂದ ಕಾಣಲಿಲ್ಲ. ಏಕೆಂದರೆ: ಹಲವಾರು ಜನರೊಂದಿಗೆ ಪ್ರಾಮಾಣಿಕವಾದ ವ್ಯವಹಾರವು ಬುದ್ಧಿವಂತರ ನಿಯಮವಲ್ಲ.

'ಶಕ್ತಿ ಇರುವವರೆಗೆ ಹಟಮಾರಿ ಆಕಾಶದಿಂದ, ಸತ್ಯವನ್ನು ಸಂಪಾದಿಸುವ ಯಾವುದೇ ಕಾರಣವನ್ನು ಹುಡುಕಬೇಡ, ನೀಚರಿಂದ ಗೌರವ ಪಡೆಯುವ ಆಸೆಯು, ಸ್ವಂತದ ಗೌರವವನ್ನು ತನ್ನ ಕಾಲಕೆಳಗೆ ತುಳಿಯುವ ಸಮಾನವಾಗಿದೆ'.

ಅಂತಿಮವಾಗಿ ರುಸ್ತುಮೆ ಜಮಾನು ಎಲ್ಲ ಮಂತ್ರಿಗಳು ಮತ್ತು ನಾಯಕರ ಸಲಹೆಯ ಮೇರೆಗೆ, ಒಳಿತನ್ನು ಕಂಡನು. ಮೊದಲು ಮಂಜೂರು ಮಾಡಲಾದ ಒಪ್ಪಂದದ ಮೇರೆಗೆ, ಸುರಂಗ ರಾಜನನ್ನು ಕುಂದಲ್ ಕೋಟೆಯಿಂದ ಕರೆಕಳುಹಿಸಿ, ಆತನ ತಲೆಯ ಮೇಲೆ ಛತ್ರಿ ಏರಿಸಲಾಯಿತು. ಅವನನ್ನು ಜೊತೆಗೆ ಕರೆದುಕೊಂಡು, ಸಮರ್ಥ ಹಾಗೂ ವಿಜಯಶಾಲಿ ವೀರರೊಂದಿಗೆ ಬಾಲಾಪೂರ ಕೋಟೆಯ ಪ್ರದೇಶದಲ್ಲಿ

ವಿಜಯದ ಧ್ವಜವನ್ನು ಹಾರಿಸಲಾಯಿತು. ಬಾಲಾಪುರದ ಅರಸನು ಯುದ್ಧದ ಶಸ್ತ್ರಾಸ್ತ್ರಗಳನ್ನು ಪೂರೈಸಿ ವಠಾರದ ದ್ವಾರಗಳನ್ನು 'ಸಿದ್ದೆ ಸಿಕಂದರಿ'ಗಿಂತಲೂ (ಸಿಕಂದರ್ ಚಕ್ರವರ್ತಿಯ ಭದ್ರವಾದ ಗೋಡೆ) ಹೆಚ್ಚು ಭದ್ರಗೊಳಿಸಿದನು. ತೋಪು ಮತ್ತು ಬಂದೂಕುಗಳ ಜ್ವಾಲೆಗಳಿಂದ ಅಗ್ನಿಯ ಮಹಾಪೂರದ ತರಂಗಗಳನ್ನು ಔನ್ನತ್ಯದ ಅಂತಿಮ ಘಟ್ಟದ ಮೇಲೆ ತಲುಪಿಸಲಾಯಿತು. ಇಸ್ಲಾಂ ಧರ್ಮದ ವೀರರು ಪ್ರತಿಕಾರದ ಖಡ್ಗವನ್ನು ಎತ್ತರಿಸಿ, ವಠಾರದ ಸುತ್ತಲೂ ನಾಲ್ಕೂ ಕಡೆಗೆ ಓಡಲಾರಂಭಿಸಿದರು. ಚರಿತ್ರಹೀನ ನಾಸ್ತಿಕರ ತಲೆಗಳನ್ನು ಪತನಗೊಳಿಸಿ ಲಗಾಮ್ ಮುರಿದ ಆಕಾಶದ ಹೆಣ್ಣು ಒಂಟೆಯನ್ನು ಅಪಾರ ಭಾರದ ಕೆಳಗೆ ಎಳೆದುಕೊಳ್ಳಲಾಯಿತು. ಕಗ್ಗೊಲೆ ಹಾಗೂ ಯುದ್ಧದ ಬಿರುಗಾಳಿಯು ಸಾಗರದ ಆಳದಲ್ಲಿ ಪರ್ವತದಂತಹ ವೈಭವಹೊಂದಿದ ಉಕ್ಕಿನಂತಹ ದೇಹದ ಮೊಸಳೆಗಳ ಕಣ್ಣುಗಳನ್ನು ಮಣ್ಣಿನಿಂದ ತುಂಬಿತು.

ಪಿತೂರಿ ಮತ್ತು ದಂಗೆಯ ಹಠಾತ್ತನೆ ದಾಳಿಗಳು, ವಿರೋಧದ ಮರುಭೂಮಿಯಲ್ಲಿ ಅಲೆದಾಡುತ್ತಿರುವವರ ತಲೆಗಳನ್ನು ಕತ್ತರಿಸಿದವು. ಅಶಾಂತ ಮೆದುಳಿನ ವೈರಿಗಳು ವ್ಯರ್ಥವಾಗಿ ಕಾಲಹರಣ ಮಾಡಿದರು.

'ಹುಲಿಗಳಂತೆ ಆಕ್ರಮಣಕಾರರ ಖಡ್ಗಗಳಿಂದ ಹೆದರಿ, ಮಿಂಚುವ ಸೂರ್ಯನು 'ಸುಹಾ' ನಕ್ಷತ್ರದಲ್ಲಿ ಅಡಗಿದನು, ತೀಕ್ಷ್ಣವಾದ ಬಾಣಗಳ ತುದಿಯ ರಕ್ತದ ಮಳೆಯಿಂದ, ಗುರಾಣಿಯು ಮಾಣಿಕ್ಯ ಸೋಸುವ ಜರಡಿ ಆಯಿತು, ಕಠಾರಿ ಹಿಡಿದ ವೀರರ ಕೈಯಿಂದ, ಆಕಾಶವು ತನ್ನ ಸ್ಥಾನದಿಂದ ಜಿಗಿದು, ರಕ್ತದಲ್ಲಿ ಆಸೀನವಾಯಿತು'.

ಖಡ್ಗಗಳು ಮತ್ತು ಬರ್ಚಿಗಳ ನದಿಯ ನೀರು ನಾಸ್ತಿಕರ ಅಸ್ತಿತ್ವದ ಕತ್ತಲೆಯನ್ನು ನಿವಾರಿಸಿತು. ಪರ್ವತಗಳ ಸೊಂಟದ ಮೇಲೆ ಹೊಸ ಹುಲ್ಲಿನ ಬದಲಾಗಿ ರಕ್ತ ಸುರಿಸುವ ಕಠಾರಿಗಳು ಪ್ರತ್ಯಕ್ಷವಾದವು. ಬಂದೂಕಿನ ಅಗ್ನಿ ಸುರಿಸುವ ಗುಂಡುಗಳ ಹಾರುವಿಕೆಯಿಂದ ತಿರುಗುತ್ತಿರುವ ಆಕಾಶಕ್ಕೆ ನಕ್ಷತ್ರಗಳ ನಗದಿನಿಂದ ತುಂಬಿ; ಅಶಾಂತಿಯ ತಿರುಗಣೆ ಮಡುವಿನಲ್ಲಿ ಮುಳುಗಿಸಿತು. ಕ್ಷಣಕ್ಷಣಕ್ಕೂ ಬಾಣಗಳ ಹಾರುವಿಕೆಯು ಉಕ್ಕಿನಂತಹ ವೀರರ ಎದೆಗಳನ್ನು ತುದಿಯುಳ್ಳ ಮಾಣಿಕ್ಯದ ಭಂಡಾರಗಳನ್ನಾಗಿ ಮಾಡಿದೆ. ಅಂದಾಜು ಒಂದು ತಿಂಗಳಿನವರೆಗೆ ರಕ್ತದಾಹಿ ನಾಸ್ತಿಕರು ವಠಾರದ ಒಳಗಿನಿಂದ ವಿಜಯಿ ವೀರರ ಮೇಲೆ ಆಕ್ರಮಣ ಮಾಡುತ್ತಿದ್ದರು. ರಣರಂಗದಲ್ಲಿ ದೃಢವಾಗಿ ಎದುರಿಸುವುವರು ಈ ವೀರರ ದುಃಖ ಮತ್ತು ಕ್ರೋಧದ ಬೆಂಕಿಯ ಉಷ್ಣತೆಯಿಂದ ದುರ್ಬಲರಾಗಿ ಕಂದಕದಲ್ಲಿ ಜಿಗಿಯುತ್ತಿದ್ದರು. ಕೋಟೆಯು ಬೇಗನೇ ಸ್ವಾಧೀನಕ್ಕೆ ಒಳಗಾಗುವದಿಲ್ಲವೆಂಬುದನ್ನು ವಿಜಯ-ಸಂಪನ್ನ ಸೈನ್ಯದ ವೀರರು ಕಂಡಾಗ ವಿಶೇಷವಾದ ಪ್ರಯತ್ನ ಮಾಡಿ, ವಠಾರದ ಕಂದಕವನ್ನು ಎದುರಾಳಿಗಳ ತಲೆ

ಬುರುಡೆಯಂತೆ ಮಣ್ಣುಗೂಡಿಸಲಾರಂಭಿಸಿದರು. ಬಾಲಾಪೂರದ ಅರಸನು ಇಂತಹ ಪರಿಸ್ಥಿತಿಯಿಂದ ಗಾಬರಿಗೊಂಡು; ತಾಳ್ಮೆ ಹಾಗೂ ಬುದ್ಧಿಯನ್ನು ಕಳೆದುಕೊಂಡನು.

ಅವನು ಪೂರ್ಣಪ್ರಮಾಣದಲ್ಲಿ ಅಸಹಾಯಕನಾಗಿ ತನ್ನ ಕೋಟೆಯನ್ನು ಅದರ ಎಲ್ಲ ಸಾಮಾನುಗಳೊಂದಿಗೆ ಸ್ವಾಧೀನಪಡಿಸಿಕೊಳ್ಳಬೇಕೆಂದು ರುಸ್ತುಮೆ ಜಮಾನೊಂದಿಗೆ ಒಪ್ಪಂದ ಮಾಡಿಕೊಂಡನು. ಅರವತ್ತು ಸಾವಿರ ಹೂನ್ ಕೊಟ್ಟು; ರುಸ್ತುಮೆ ಜಮಾನು ವಶಪಡಿಸಿಕೊಂಡನು. ಮತ್ತು ಉನ್ನತ ಸಾಮ್ರಾಜ್ಯದ ಸರದಾರರಲ್ಲಿ ಒಬ್ಬನನ್ನು ಕೋಟೆಯಲ್ಲಿ ನೇಮಿಸಿ, ಕೊಳ್ಳೆಹಾಲ್ ಕೋಟೆಯ ಮೇಲೆ ದಾಳಿಮಾಡಿದನು. ಕೊಳ್ಳೆಹಾಲ್ ಅರಸನು ಐವತ್ತು ಸಾವಿರ ಕಾಲ್ದಳದ ಬಂದೂಕುಧಾರಿ ಸೈನ್ಯದೊಂದಿಗೆ ಅಂದಾಜು ನಾಲ್ವತ್ತು ದಿನಗಳವರೆಗೆ ಹೋರಾಟ ಮಾಡಿದನು. ಈ ಹೋರಾಟದಿಂದ ಆತನಿಗೆ ಪ್ರಯೋಜನವಿಲ್ಲವೆಂಬುದು ಆತನಿಗೆ ತಿಳಿದಾಗ, ಕೊಳ್ಳೆಹಾಲ್ ಕೋಟೆಯನ್ನು ಅದರ ಸರ್ವ ಸಾಮಾನುಗಳೊಂದಿಗೆ ರುಸ್ತುಮೆ ಜಮಾನ ವಶಕ್ಕೆ ಕೊಟ್ಟನು. ಬರಿದಾದ ಕೋಟೆಯನ್ನು ರುಸ್ತುಮೆ ಜಮಾನು ಸುರಂಗರಾಜನಿಗೆ ಒಪ್ಪಿಸಿದನು. ಸುರಂಗರಾಜನು ಕೋಟೆಯನ್ನು ಪಡೆಯಲು ಯಾವುದೇ ಹೋರಾಟ ಮಾಡಿರಲಿಲ್ಲ. ಆದರೆ ಹಜರತ್ ಬಾದಶಾಹ ಗಾಜಿಯ ಒಪ್ಪಂದದ ಗೌರವಕ್ಕೆ ಅನುಗುಣವಾಗಿ ವೈಭವ-ಗಾಂಭಿರ್ಯದ ಮೈದಾನದಲ್ಲಿ ಉನ್ನತ ಅದೃಷ್ಟದ ಧ್ವಜವನ್ನು ಹಾರಿಸಲಾಯಿತು. ರುಸ್ತುಮೆ ಜಮಾನು ಮಹೋನ್ನತ ಧೈರ್ಯದ ಬಾದಶಾಹನ ಕೃಪೆಯ ಮೂಲಕ, ಬಾಲಾಪೂರ ಮತ್ತು ಕೊಳ್ಳೆಹಾಲ್ ಕೋಟೆಗಳನ್ನು ಜಯಿಸಿದನು. ಅವನು ಅಪಾರ ಪ್ರಮಾಣದ ಎಲ್ಲ ಸಾಮಾನುಗಳನ್ನು ರಾಜಧಾನಿಗೆ ಕಳುಹಿಸಿದನು.

'ಸಾಮ್ರಾಟನ ಅಪಾರ ಅನುಗ್ರಹವು, ಸಾಮ್ರಾಜ್ಯದ ನಾಯಕರಿಗೆ ಅಸೂಯೆಯ ಕಾರಣವಾಯಿತು. ಆತನ ಮಾರ್ಗದ ಧೂಳಿಯು, ಉನ್ನತಾಧಿಕಾರಿ ಅಲಂಕಾರವಾಯಿತು. ಆತನು ಯಾವಾಗ ರಣರಂಗವನ್ನು ತನ್ನ ಜೀವನದ ಸಾಮಾನು ಮಾಡಿಕೊಂಡನೋ, ಆತನ ಖಡ್ಗ ಕೌಶಲ್ಯದ ತಂಡವು ಮುನ್ನಡೆಯಲಾರಂಭಿಸಿತು. ಅದೇ ಕ್ಷಣದಲ್ಲಿ ಶಾಶ್ವತತೆಯ ದೇಶದಿಂದ ಪ್ರಳಯದ ಧೂಳಿಯು ಹಾರಿತು, ಅದೇ ಸಮಯ ಎರಡೂ ಜಗತ್ತಿನ ಹಾನಿಯು ಲಾಭದಲ್ಲಿ ಬದಲಾವಣೆ ಹೊಂದಿತು'.

ಈ ರುಸ್ತುವೇಜಿನಲ್ಲಿ ಬಾದಶಾಹ ಗಾಜಿಯ ಪ್ರಶಂಸೆ ಮತ್ತು ಗುಣವರ್ಣನೆ ಮಾಡುವ ಸಾಮರ್ಥ್ಯವಿಲ್ಲ. ದೇವರ ಇಚ್ಛೆ ಇದ್ದರೆ ಪ್ರವಾದಿಯಂತಹ ಸ್ವಭಾವವುಳ್ಳ ಬಾದಶಾಹ ಗಾಜಿಯ ಪುಣ್ಯಕಾರ್ಯಗಳಿಗೆ ಸಂಬಂಧಿಸಿದಂತೆ ಮುಂದುವರಿದು ಸುಧಾರಕರ ವಿಜಯಗ್ರಂಥದಲ್ಲಿ ಬರೆಯಲಾಗುವುದು.

ವಿಜಯಿ ರುಸ್ತುಮೆ ಜಮಾನು ಶಿರಾಕೋಟೆಯನ್ನು ಜಯಿಸಿದ ನಂತರ ಪಲಂಕೂರದ ಕೋಟೆಯೆಡೆಗೆ ಧಾವಿಸುವುದು.

ಕರ್ನಾಟಕ ಮತ್ತು ಮಲೆನಾಡಿನ ಲಾಭದಾಯಕ ಪ್ರದೇಶಗಳು, ಶಾಶ್ವತವಾದ ಸಂಬಂಧ ಹೊಂದಿದ ಬಾದಶಾಹ ಗಾಜಿಯ ಆಳ್ವಿಕೆಯಲ್ಲಿ ಇಸ್ಲಾಂಧರ್ಮದ ನಗರಗಳಾಗಿದ್ದವು. ಅವುಗಳ ಪ್ರಯೋಜನಕಾರಿ ಹವಾಗುಣದಿಂದ ಈ ಆನಂದದಾಯಕ ಪುಟಗಳನ್ನು ಸ್ವಲ್ಪಮಟ್ಟಿಗೆ ಅಲಂಕರಿಸಲಾಗಿದೆ. ಉಭಯ ಲೋಕಗಳ ಕೃಷಿ ಉತ್ಪಾದನೆಯು ಇವುಗಳ ಪ್ರತಿಯೊಂದು ಕಾಳಿನಂತಹ ಚುಕ್ಕೆಯಲ್ಲಿ ದೊರಕುತ್ತದೆ. ದೇವರನ್ನು ಪ್ರಶಂಸಿಸಬೇಕು! ಇವು ಆತ್ಮಕ್ಕೆ ಚೈತನ್ಯ ನೀಡುವ ದೇಶಗಳಾಗಿವೆ. ಇವುಗಳ ಪ್ರತಿಯೊಂದು ಗ್ರಾಮವು ನಿರಂತರವಾಗಿ ಜನನಿಬಿಡವಾಗಿದ್ದು; ಫಲವತ್ತತೆಯ ದೃಷ್ಟಿಯಿಂದ ಇಜಿಪ್ತ್ ಹಾಗೂ ಸಿರಿಯಾದಿಂದ ಪ್ರಾಪ್ತವಾಗುವ ಕಂದಾಯವನ್ನು ಅಪಹಾಸ್ಯಗೊಳಿಸುತ್ತದೆ.

ಈ ಭೂಮಿಯ ಮೇಲೆ ವಾಸಿಸುವುವರ ಬಾಗಿಲು ಮತ್ತು ಛಾವಣಿಗಳಿಂದ ಪ್ರಾತಃಕಾಲ ಹಾಗೂ ಸಾಂಯಂಕಾಲ ಫ಼ರೀದೂನ್ ರಾಜನಂತಹ ಗಾಂಭೀರ್ಯ\ವೈಭವವು ಉತ್ತರ ಧ್ರುವದ ಹತ್ತಿರ ಇರುವಂತಹ ಎರಡು ನಕ್ಷತ್ರಗಳ ಬೈತಲೆಯ ಮೇಲೆ ಸುರಿಯುತ್ತದೆ. ರೈತನು ಯಾವಾಗಲೂ ತನ್ನ ಹೊಲದ ಪೈರುಗಳ ಶ್ರೇಷ್ಠವಾದ ಮುತ್ತಿನ ರಾಶಿಯನ್ನು ತೆನೆಗಳನ್ನು ಸಂಗ್ರಹಿಸುವವರಿಗೆ ನೀಡುತ್ತಾನೆ. ರೈತನು ಮೇಲಿಂದ ಮೇಲೆ ಆಹಾರದ ಉಗ್ರಾಣಗಳನ್ನು ತುಂಬಿ ಅಗಣಿತವಾದ ಉಪಕಾರದ ಭಾರವನ್ನು ಆಕಾಶದ ತಲೆಯ ಮೇಲೆ ಹೊರಿಸುವುದಿಲ್ಲ. ಈ ಭೂಮಿಯ ಮೇಲೆ ಉದ್ಭವಿಸುವಂತಹ ಪಚ್ಚೆವರ್ಣದ ಉಡುಪು ಧರಿಸಿದ ಪ್ರತಿಯೊಂದು ಸಸಿಯು ಹಸಿರು-ನೀಲಿ ವರ್ಣದ ಅಮೌಲ್ಯವಾದ ಹರಳಿನಂತಹ ಧ್ವಜದ ಶಿರವನ್ನು ಜಗತ್ತಿನಲ್ಲಿ ಆಕಾಶದ ಔನ್ನತ್ಯಕ್ಕೆ ಏರಿಸುತ್ತದೆ. ಅದು ಸಿದ್ದೆರಾಹ್ ವೃಕ್ಷಗಳ ನೆರಳಿನ ತೇಪೆಯಾಗಿ ಸ್ವರ್ಗದ ಪರಿಚಾರಕರಿಗೆ ಸುಖದ ಸಂದೇಶ ನೀಡುತ್ತದೆ.

ಫಲಭರಿತವಾದ ಟೊಂಗೆಗಳ ನೃತ್ಯವು ನೆಲ ಮತ್ತು ಜಲದ ಯಾತ್ರಿಕರ ಜೇಬು ಹಾಗೂ ಸೆರಗುಗಳಲ್ಲಿ ಬೆಳೆದು ನಿಂತಿರುವ ಶ್ರೇಷ್ಠ ಬಗೆಯ ಹೊಸ ಹಣ್ಣುಗಳನ್ನು ಉದುರಿಸುತ್ತದೆ. ಜಂಬು-ನೇರಳ ವೃಕ್ಷಗಳು ತಮ್ಮ ಟೊಂಗೆಗಳ ದಾಳಿಯಿಂದ ಹೊಸ ವಂಸತದ ವಲಯದಿಂದ ಹೂ ಹರಿಯುವವರ ತಲೆಯ ಮೇಲೆ ಗುಲಾಬಿ ಸೀಸೆಗಳನ್ನು ಬಲವಾಗಿ ಒಡೆಯುವುದಿಲ್ಲವೆಂಬಂತೆ ಪಾಲನೆ\ಪೋಷಣೆ ಪಡೆದಿಲ್ಲ. ಕಾಳುಗಳಿಂದ ತುಂಬಿದ ದಾಳಿಂಬೆಗಳನ್ನು ಅವುಗಳ ದಂತಪ್ರದರ್ಶಿಸುವ ನಗೆಯು ಯುಮನ್ ದೇಶದ ಮಾರುಕಟ್ಟೆಗಳಲ್ಲಿ ಅಮೌಲ್ಯವಾದ ಕೆಂಪು ಕಲ್ಲಿನ ಮಾರಾಟಗಾರರನ್ನು ಪರಾಜಯಗೊಳಿಸುವಂತೆ ಕೊಯ್ಯುವದಿಲ್ಲ. ಮಾವಿನ ಮರಗಳು ಕಲ್ಲು ಸಕ್ಕರೆಯ ಪಾಕದಲ್ಲಿ ಕಸ್ತೂರಿ ಹಾಗೂ ಕೇಸರಿಯನ್ನು ಮಿಶ್ರಣಮಾಡುವದಿಲ್ಲ. ಆದರೆ ಆಧ್ಯಾತ್ಮಿಕ ಹುಟ್ಟುಗುಣ ಉಳ್ಳವರಿಗೆ ರುಚಿ ನೀಡುವ ಶಾಶ್ವತವಾದ ಜೀವನದ ಪಾನಕದಲ್ಲಿ ಹೊಸ ಆತ್ಮವನ್ನು ತುಂಬುತ್ತದೆ.

'ನಮ್ಮ ರುಚಿಗಾಗಿ ಸಿಹಿಯ ನೀಡಿಕೆಯು ಮಾವಿನ ಹಣ್ಣಿನ ಗುಣ ವಿಶೇಷತೆ ಆಗಿದೆ, ಈ ವಿಷಯದಲ್ಲಿ ಇತರ ಹಣ್ಣುಗಳ ಹೆಸರಿನ ಪ್ರಸ್ತಾಪವು ದೋಷಪೂರ್ಣವಾಗಿದೆ'.

ಈ ದೇಶದ ಬಗೆ ಬಗೆಯ ಹಣ್ಣುಗಳ ಪ್ರಶಂಸೆ ಮಾಡುತ್ತ, ಅವುಗಳ ಸ್ವಾದದ ವಿವರಣೆ ನೀಡಲು ತುಟಿಗಳು ತೆರೆಯುವುದಿಲ್ಲ. ಗಾಳಿಯು ಉದ್ಯಾನದ ದಿಶೆಯಲ್ಲಿ ಚಲಿಸಿದರೆ ಅದರ ಕೋಮಲತೆಯಿಂದ ಉದ್ದೇಶಿತ ಹಣ್ಣುಗಳನ್ನು ಸುರಕ್ಷಿತವಾಗಿ ಕಿತ್ತಿಕೊಳ್ಳಬಹುದಾಗಿದೆ. ಪ್ರತಿ ಮುಂಜಾನೆ ಉದ್ಯಾನದಲ್ಲಿ ಅರಳುವ ಮೊಗ್ಗುಗಳ ಧ್ವನಿಯಲ್ಲಿ ಸ್ವರ್ಗದ ಬುಲ್‌ಬುಲ್ ಪಕ್ಷಿಗಳ ಇಂಪಾದ ಹಾಡು ಕೇಳಿಸುವಷ್ಟರ ಮಟ್ಟಿಗೆ ಗಾಳಿಯಿಂದ ಸಂತೋಷ ಹಾಗೂ ಆಸಕ್ತಿಯು ಜಾಗ್ರತವಾಗುತ್ತದೆ. ದ್ರಾಕ್ಷಿಹಣ್ಣಿನ ಗೊಂಚಲುಗಳು ದ್ರಾಕ್ಷಿಯ ಬಳ್ಳಿಯ ಮಂಟಪದಿಂದ ನೇತಾಡುವಂತಹ ಸಾವಿರಾರು ಮಧ್ಯದ ಮಡಿಕೆಗಳಂತೆ ಕಾಣುವಿಕೆಯು ಬೆಳವಣಿಗೆಯ ಗುಣವಿಶೇಷತೆ ಆಗಿದೆ.

ಪ್ರತಿಯೊಂದು ಎಲೆಯ ನೆರಳಿನಲ್ಲಿ ಭೋಗ-ಸಂತೋಷದ ಬಂಡವಾಳವನ್ನು ಹಿಂಡಲಾಗಿದೆ. ಹೊಸದಾಗಿ ಉದ್ಭವಿಸಿದ ವರ್ಣಮಯ ಉಡುಪುಗಳನ್ನು ಧರಿಸಿದ ಸಸಿಗಳು ಬೆವರು ಸುರಿಯುವ ಮುಖಗಳಿಂದ ಪರದೆಯನ್ನು ಸರಿಸಿ, ಪ್ರೇಕ್ಷಕರ ಹೃದಯಗಳನ್ನು ಕಿತ್ತುಕೊಳ್ಳುವ ಕಾರ್ಯದಲ್ಲಿ ನಿರತವಾಗಿವೆ. ಗೀತೆಗಳನ್ನು ಹಾಡಿ, ಚಮತ್ಕಾರ ಪ್ರದರ್ಶಿಸುವಂತಹ ಎತ್ತರದ ನಿಲುವಿನವರು ಬೆಡಗು-ಬಿನ್ನಾಣದ ನಿಯಮಗಳನ್ನು ಅನುಸರಿಸಿ; ಹೃದಯವನ್ನು ಸಂತುಷ್ಟಗೊಳಿಸುವ ಸ್ಥಳದಲ್ಲಿ ಪ್ರೇಯಸಿಯರ ಜೊತೆಗೂಡಿ ವಾದ್ಯ ಬಾರಿಸುತ್ತಾರೆ. ಎತ್ತರದ ನಿಲುವಿನವರು ನದೀ ತೀರದಲ್ಲಿ ವಾಯುವಿಹಾರ ಮಾಡುತ್ತ ಮದ್ಯಪಾನ ಮಾಡಲು ಒಲವು ತೋರುತ್ತಾರೆ. ಭೋಗ-ಸಂತೋಷದ ಉದ್ಯಾನವನ್ನು ಅರಳಿಸಿ, ಮೊಗ್ಗುಗಳಿಂದ ತುಂಬಿದ ಟೊಂಗೆಯು, ಹೂವಿನ ಮಾರಾಟದಲ್ಲಿ ನಿರತವಾಗಿದೆ.

'ಭಗ್ನವಾದ ಗಾಜುಗಳ ಅಣುಗಳಿಂದ ಮಂಜುಹನಿಯಂತೆ ಯಾವುದೇ ತೊಂದರೆ ಆಗದಷ್ಟು, ಅಮಲೇರಿದ ವ್ಯಕ್ತಿಗಳ ಕಾಲುಗಳಿಗೆ ಗಾಳಿಯಲ್ಲಿ ಆದ್ರತೆ ಇದೆ, ಪ್ರಾತಃಕಾಲದ ಗಾಳಿಯು ಹುಲ್ಲಿನ ತರಂಗಗಳಿಂದ ಎದೆಯನ್ನು ತೇಲಿಸುತ್ತದೆ. ಆದರೆ ಏನು ಪ್ರಯೋಜನ? ದಾರಿಕಾರನನ್ನು ದಂಡೆಗೆ ಎಳೆದು ತರುವದಿಲ್ಲ'.

ಸೇವಂತಿಗೆ ಮತ್ತು ಕೆಂಪುಬಣ್ಣದ ಹೂವಿನ ಪಕಳೆಗಳ ಬಾಹುಳ್ಯದಿಂದ ಬೀಸುತ್ತಿರುವ ಗಾಳಿಯು ನಗರ ಹಾಗೂ ಮಾರುಕಟ್ಟೆಗಳ ಬೀದಿಗಳಲ್ಲಿ ಅಲೆಮಾರಿಗಳಂತೆ ತಿರುಗಾಡಿ ಕುವಿಖ್ಯಾತವಾಗಿದೆ. ಹೊಸ ವಸಂತದ ಅಂತಃಪುರದಲ್ಲಿ ವಾಸಿಸುವ ಪರ್ದಾಧಾರಿಗಳ ಮುಖದ ಮೇಲೆ ಮೋಡವು ಹನಿಗಳನ್ನು ಸಿಂಪಡಿಸಿ, ಕೊಠಡಿಯಲ್ಲಿ ಆಸೀನಳಾದ ನೂತನ ಮದುಮಗಳಂತೆ ಮುತ್ತುಗಳ ಪರದೆಯನ್ನು ಹಾಕಲಾಗಿದೆ. ತುರಾಯಿ ಮರದ ನೆರಳು ಕಾಡುಪಾರಿವಾಳದ ಬಂಧನದ ಬಳೆಗೆ ನಿರಂತರವಾಗಿ

ಹೊಳಪು ನೀಡುತ್ತದೆ. ಬುಲ್‌ಬುಲ್ ಪಕ್ಷಿಯನ್ನು ಆಲಂಗಿಸುವ ಆಸಕ್ತಿಯಿಂದ ಸ್ವಯಂ-ಅಲಂಕೃತರಾಗುವ ಪ್ರೇಯಸಿಯರಂತೆ, ಪರದೆಯೊಳಗೆ ಹೂವು ಸ್ವಯಂ-ಶೃಂಗರಿಸಿಕೊಳ್ಳುತ್ತದೆ. ಸಂಪಿಗೆಯ ಹೊಸ ಮರಗಳು ಉದ್ಯಾನದ ಪ್ರೇಮಿಗಳನ್ನು ಎಡ ಮತ್ತು ಬಲದಿಂದ ಗಟ್ಟಿಯಾಗಿ ಬಿಗಿದು ದಂಡೆಗೆ ಎಳೆದು ತರುತ್ತವೆ. ಅವು ಸಿದ್ದೆರಾಹ್ ಹಾಗೂ ತೂಬಾ ವೃಕ್ಷಗಳಿಂದ ಲಜ್ಜಿತವಾಗುವುದಿಲ್ಲ. ಸುಗಂಧವನ್ನು ಹರಡಿ, ಖತಾ ಮತ್ತು ಖತನ್‌ದ ಮರುಭೂಮಿಯ ಕಸ್ತೂರಿ ಸೃಷ್ಟಿಸುವ ಜಿಂಕೆಗಳಿಗೆ ಸಾವಿರಾರು ಅನುರೂಪವಾದ ನಿಂದನೆಗಳನ್ನು ಮಾಡುತ್ತವೆ. ಈ ಪ್ರದೇಶಗಳ ಹುಲ್ಲಿನ ಮೈದಾನಗಳ ಕಾಲುಗಳನ್ನು ಚುಂಬಿಸಲು ಸ್ವರ್ಗದ ಹೂಗಳು, ಮಂಜಿನ ಹನಿಗಳಂತೆ ಒಂದು ವೇಳೆ ಜಾರಿ ತಲುಪದಿದ್ದರೆ, ಸ್ವರ್ಗದ ಮೇಲ್ವಿಚಾರಕನು ಈ ಸ್ವರ್ಗದ ಮೇಲೆ ಸಂತೃಪ್ತಿಯ ಸೆರಗು ಹಾಸುತ್ತಾನೆ. ಸೋಸನ್ ಹೂಗಳು (ನೀಲಿ, ಬಿಳಿ ಹಾಗೂ ಕೆಂಪು ಮಿಶ್ರಿತ ಬಣ್ಣದ ಹೂಗಳು) ಅನುಮಾನದಿಂದ ಸೂಕ್ಷ್ಮತೆಗಳನ್ನು ಶೋಧಿಸುವುವರಂತೆ ತಲೆಬಾಗಿಸಿವೆ. ಬಹುಶಃ ಅವುಗಳು ಯಾವಾಗಲಾದರೂ ಮಂಜಿನ ರಹಸ್ಯವನ್ನು ಅರಿತುಕೊಳ್ಳಬಹುದು.

'ಅರಳದ ಮೊಗ್ಗುಗಳು ಪ್ರೇಯಸಿಯರಂತೆ ಲಜ್ಜೆಯಿಂದ, ರಹಸ್ಯಜ್ಞಾನಿಗಳ ಹೃದಯಗಳನ್ನು ರಹಸ್ಯವಾಗಿ ಉಷ್ಣಗೊಳಿಸುತ್ತವೆ. ಪ್ರಾತಃಕಾಲದೊಂದಿಗೆ ಜಾಜಿಮಲ್ಲಿಗೆಗಳ ವಸಂತ ಋತುವಿನ ಆಗಮನ ಆಗುತ್ತದೆ. ಮೋಡಗಳು ಸುಗಂಧ ವನಸ್ಪತಿಯ ಮುಂಗುರುಳುಗಳಲ್ಲಿ ಸಿಲುಕುತ್ತವೆ, ಹುಲ್ಲಿನ ಪ್ರತಿಬಿಂಬದಿಂದ ಕಾಲುವೆಯ ಕುಟಿಲನೀರು, ಮಣ್ಣಿನಲ್ಲಿ ಹಸಿರು-ನೀಲಿ ಬಣ್ಣದ ಮಿಶ್ರಣ ಮಾಡಿ, ಮುಂದೆ ಸಾಗುತ್ತದೆ. ಉಪವನದ ಸಭೆಯಲ್ಲಿ ಪಕಳೆಗಳ ನಾಲಿಗೆಯು, ಧರ್ಮದ ಬಾದಶಾಹನ ಪ್ರಶಂಸೆಯಲ್ಲಿ ಮುತ್ತುಗಳನ್ನು ಹರಡುತ್ತದೆ. ಜಗತ್ತಿನ ತೋಟವು ನಿರಂತರವಾಗಿ ಹಚ್ಚ-ಹಸಿರಾಗಿರಲಿ, ಉದ್ಯಾನದಂತೆಯೇ ಸೀಸೆ ಹಾಗೂ ಬಟ್ಟಲಿನಿಂದ ಪ್ರಾತಃಕಾಲದ ಸಾರಾಯಿ ಕುಡಿಯುತ್ತಿರಲಿ, ಮೊಹಮ್ಮದ ಶಾಹ ಗಾಜಿಯ ದರ್ಬಾರಿನಿಂದ ಅದೃಷ್ಟಗಳು ಎತ್ತರವಾಗಲಿ'.

■

*

ಅಧ್ಯಾಯ – ೧೦

ವಿಜಯಿ ಖಾನ್‌ಖಾನನ ಏರ್ಪಾಡಿನ ಮೂಲಕ ಬಾದಶಾಹಪುರದ ನಿರ್ಮಾಣ

ಹಿರಿಯ ಜಗತ್ತಿನ ಮಹೋನ್ನತ ದರ್ಜೆಯ ವ್ಯಕ್ತಿಗಳು, ಗೌರವ–ವೈಭವವನ್ನು ಸುದೃಢಗೊಳಿಸಲು, ಗೌರವಾದರಗಳಿಂದ ಸಾಹಸ ಮಾಡಿದರು. ೧೦೪೭ ಹಿಜ್ರಿಯಲ್ಲಿ ಹೃದಯಾಕರ್ಷಕವಾದ ಒಂದು ಅರಮನೆಯನ್ನು ನಿರ್ಮಿಸಲು ಹಜರತ್ ಬಾದಶಾಹ ಗಾಜಿಯು ನಿರ್ಧರಿಸಿದನು. ಉನ್ನತ ದರ್ಜೆಯ ಜನರು ಸಾಷ್ಟಾಂಗ ನಮನ ಸಲ್ಲಿಸುವ ಸ್ಥಾನವನ್ನಾಗಿ ಮಾಡಲು; ಸಾಮ್ರಾಟನ ಅನುಗ್ರಹದಿಂದ ಮಹೋನ್ನತ ಶ್ರೇಣಿಯ ಕಟ್ಟಡವನ್ನು ಬಾದಶಾಹಪುರದಲ್ಲಿ ನಿರ್ಮಿಸಲಾಯಿತು. ಜಗತ್ತಿಗೆ ಆಜ್ಞೆ ಮಾಡುವುವನ ಆಜ್ಞೆಯಿಂದ ಸಾಮ್ರಾಟನ ದರ್ಬಾರಿಗೆ ಸಂಬಂಧಿಸಿದ ಸಾಮ್ರಾಜ್ಯದ ಓರ್ವ ಸದಸ್ಯನಾಗಿದ್ದ ಉನ್ನತ ದರ್ಜೆಯ ಖಾನ್‌ಖಾನನಿಗೆ ಬಾದಶಾಹಪುರದಲ್ಲಿ ಆಕಾಶದಂತಹ ಕಟ್ಟಡ ನಿರ್ಮಿಸಲು ಏರ್ಪಾಡು ಮಾಡುವ ಸಾಮಾನುಗಳನ್ನು ಪೂರೈಸಲಾಯಿತು. ಅಂದಾಜು ಐದು ಸಾವಿರ ತಜ್ಞರಾದ ವಾಸ್ತುಶಿಲ್ಪಿಗಳು ಈ ಕಲಾಕೃತಿಯಲ್ಲಿ ತಮ್ಮ ಪ್ರಾವೀಣ್ಯತೆಯನ್ನು ಪ್ರದರ್ಶಿಸಲಾರಂಭಿಸಿದರು. ಈ ಕಟ್ಟಡವನ್ನು ಪೂರ್ಣಗೊಳಿಸಲು, ಅವರು ತಮ್ಮ ಸಾಮರ್ಥ್ಯವನ್ನು ಬಹಿರಂಗಗೊಳಿಸಿ; ಪೂರ್ವ ದಿಕ್ಕಿನ ಸೂರ್ಯನ ಸ್ವರ್ಣಲೇಪಿತವಾದ ಗೊಮ್ಮಟಕ್ಕೆ ಸಮಾನ ಮಾಡಿದರು.

ದೇವರ ಸ್ತುತಿ ಆಗಲಿ! (ಸುಭಾನಲ್ಲಾ) ಇದೆಂತಹ ಆತ್ಮಸಂತೃಪ್ತಿ ಮತ್ತು ಹೃದಯ ಸಂತುಷ್ಟಗೊಳಿಸುವ ಕಟ್ಟಡವಾಗಿದೆ. ಇದರ ದೃಢವಾದ ಗೋಡೆಯ ತಳಹದಿಯ ಶಕ್ತಿಯು ಅರಮನೆಯ ಅಸ್ತಿತ್ವವನ್ನು ಶಾಶ್ವತವಾದ ದೃಢತೆಯಿಂದ ನಿಲ್ಲಿಸಿದೆ. ಏಳನೆಯ ಆಕಾಶವು ಇದರ ಛಾವಣಿಯ ಬೆನ್ನಿಗೆ ಹೊಂದಿಕೊಂಡು ಆಜ್ಞಾಪಾಲಕ ಪುತ್ರನಂತೆ

ಜಗತ್ತಿನಲ್ಲಿ ಎಲ್ಲೆಡೆಗೆ ಇದರ ಧ್ವಜ ಹಾಗೂ ಪ್ರಬುದ್ಧತೆಯನ್ನು, ಎತ್ತರಿಸಿದೆ. ಅದು ತನ್ನ ಹಣೆಯಿಂದ ಈ ಅನುಪಮ ಗೊಮ್ಮಟಕ್ಕೆ ಸಾಷ್ಟಾಂಗ ನಮನ ಸಲ್ಲಿಸಿ, ಸೌಭಾಗ್ಯವನ್ನು ಸಂಪಾದಿಸುವುದರಿಂದ ಇದು ಮಹೋನ್ನತ ಶ್ರೇಣಿಗೆ ತಲುಪಿದೆ. ಇದರ ಹಣೆಯ ಮೇಲೆ ಕತ್ತಲೆಯ ಬದಲಾಗಿ, ಪ್ರಾತಃಕಾಲದ ಬೆಳಕು ಮಿಂಚುತ್ತದೆ. ಇದರ ಅಂಗಳದಲ್ಲಿ ವಾಸಿಸುವುವರು ಅಲೆದಾಟ ಮಾಡುವಾಗ; ನಕ್ಷತ್ರಗಳ ಸೈನ್ಯವನ್ನು ಇರುವೆಗಳ ಪಂಕ್ತಿಗಳೆಂದು ಭಾವಿಸಿ, ಕರುಣೆಯಿಂದ ಆ ಸ್ಥಳದ ಮೇಲೆ ಕಾಲಿಡುವುದಿಲ್ಲ. ಆಕಾಶವನ್ನು ಈ ಇರುವೆಗಳ ಮುಂದೆ ಹಾಕಿದಂತಹ ಕಾಳೆಂದು ತಿಳಿದು; ಸುಲೇಮಾನನ ಸ್ಥಾನಕ್ಕೆ ಪ್ರಾಧಾನ್ಯತೆ ನೀಡುವುದಿಲ್ಲ.

'ಮಣ್ಣಿನ ಮೇಲ್ಭಾಗದ ಮೇಲೆ ಅದರ ತಳಹದಿಯು ಇಷ್ಟೊಂದು ಹರಡಿದೆ. ಮೀನಿನ ಕಣ್ಣು, ಪೃಥ್ವಿಯ ಆಕಳಿನ ಬೈತಲೆಯಿಂದ ನೇರವಾಗಿ ಅದರ ಮೇಲೆ ಜಿಗಿಯುತ್ತದೆ. ಮಣ್ಣಿನ ಮೇಲೆ ಬಿದ್ದಿರುವ ಹೆಜ್ಜೆಯ ಗುರುತಿನ ಕಲ್ಪನೆಯಿಂದ ಪತನವಾಗಿದೆ. ಅದರ ಭಾವಣೆಯಿಂದ ಕೆಳಗೆ ನಿಂತಿರುವ ವ್ಯಕ್ತಿಯನ್ನು ನೋಡುವ ಅನುಮಾನವೂ ಸಹ ಆಗುವುದಿಲ್ಲ'.

ಇದರ ಅದ್ವಿತೀಯ ಗೊಮ್ಮಟವನ್ನು ನೋಡಲು, ಆಕಾಶದ ದುರ್ಬಲ ಎದೆಯು, ವಿಶಾಲವಾದ ಹೃದಯವನ್ನು ಪಡೆಯುವ ಕಲ್ಪನೆ ಮಾಡಿದರೆ; ಅದು ಇಂತಹ ಭ್ರಮೆಯಿಂದ ಹೊರಗೆ ಬರಬಹುದು. ದೇವದೂತರು ಅದರ ಸುತ್ತ-ಮುತ್ತಲೂ ಪ್ರದಕ್ಷಣೆ ಹಾಕುವ ಆಸೆಯಿಂದ ಹಾರದಿದ್ದರೆ, ಅದೇ ಸಮಯ ಅವರು ರೆಕ್ಕೆಗಳಿಂದ ವಂಚಿತರಾಗುತ್ತಾರೆ.

ಒಂದು ವೇಳೆ ಅದರ ತಳಹದಿಯ ಸುದೃಢತೆಯು ಪರ್ವತಕ್ಕೆ ಪ್ರಾಪ್ತವಾದರೆ, ಅದು ನಾಚಿಕೆಯ ಭಾರದಿಂದ ಭೂಮಿಯ ಕೆಳಗೆ ಮುಳುಗಿ, ಸಾಗರದ ಒಳಗಿನಿಂದ ನೀರ್ಗುಳ್ಳೆಯಂತೆ ಹೊರಗೆ ಬರುವುದು. ಬಂಗಾರದ ಸೂರ್ಯನ ದರ್ಪಣವು ತಿರುಗುತ್ತಿರುವ ಆಕಾಶದಿಂದ ಪ್ರಕಟವಾಗಿ, ರತ್ನಗಳಿಂದ ಅಲಂಕೃತವಾದ ಇಂತಹ ಅರಮನೆಯನ್ನು ನೋಡುವುವರೆಗೆ ಜಗತ್ತಿಗೆ ತೇಜಸ್ಸು ನೀಡುವ ಬಾದಶಾಹಪುರದ ಕಟ್ಟಡದಂತಹ ನಿದರ್ಶನವನ್ನು ಕನಸಿನಲ್ಲಿಯೂ ಸಹ, ಕಂಡಿರಲಿಲ್ಲ. ಸೂರ್ಯ ಅದರ ಕಲ್ಪನೆ ಅಥವಾ ಸಮಾಚಾರವಾಗಲಿ ಇರಲಿಲ್ಲ.

'ಒಂದು ವೇಳೆ ಅದರ ಹೊಸ್ತಿಲಿನ ಆಸುಪಾಸು ಪ್ರತಿಯೊಂದು ಹೆಜ್ಜೆಯ ಮೇಲೆ, ಆಕಾಶದಂತಹ ಸಾವಿರಾರು ಕಟ್ಟಡಗಳು ನಿರ್ಮಾಣವಾಗುವುದಾದರೆ, ಬಂಗಾರ-ಬೆಳ್ಳಿಯ ಪರೀಕ್ಷಕನಂತೆ ಯಾವನು ಒರೆಗಲ್ಲ ಮೇಲೆ ತಿಕ್ಕುತ್ತಾನೆಯೋ, ತೋರಿಕೆಗೆ, ಅದರ ತಳಹದಿಯ ಶಿಲೆಯ ಸುತ್ತಮುತ್ತಲೂ ಸೂರ್ಯನು ತಿರುಗುತ್ತಾನೆ, ಒಂದು ವೇಳೆ ಅದರ ಭಾವಣೆಯ ಮೇಲೆ ಹಕ್ಕಿಯು ಗೂಡುಕಟ್ಟಿದರೆ, ಆಕಾಶದ ಒಂದು ಕಾಲ್ಪನಿಕ ಪಕ್ಷಿಯು ತನ್ನ ಮೊಟ್ಟೆಯಿಂದ ತಲೆಯನ್ನು ಹೊರಗೆ ತರುತ್ತದೆ'.

ಇಂತಹ ಮಹೋನ್ನತ ಕಟ್ಟಡದ ತಳಹದಿಯನ್ನು ನಿರ್ಮಿಸಲು, ಅನುಪಮ ಕಟ್ಟಡದ ನಿರ್ಮಾಪಕರು, ಒಂದು ವೇಳೆ, ತಮ್ಮ ಜೀವನದ ಬಹಳಷ್ಟು ಭಾಗವನ್ನು ತ್ಯಾಗ ಮಾಡಿದರೂ ಸಹ; ಅದರ ಸುದೃಢವಾದ ತಳಹದಿಯ ಒಂದು ಕಲ್ಲನ್ನು ಸೂಕ್ತವಾಗಿ ಇಡಲಾರರು. ಹಜರತ್ ಬಾದಶಾಹ ಗಾಜಿಯ ಆಜ್ಞೆಯಿಂದ ಒಂದು ವರ್ಷದ ಅವಧಿಯಲ್ಲಿ ಅದನ್ನು ಪೂರ್ಣಗೊಳಿಸಲಾಯಿತು. ನಾಲ್ಕೂ ದಿಕ್ಕುಗಳಿಂದ ಅಲ್ಲಿಗೆ ತಲುಪಲು ಸಾಧ್ಯವಾಗುವುಂತೆ ಅದರ ಎದುರಿಗೆ ಒಂದು ಮಾರುಕಟ್ಟೆಯ ಮಾರ್ಗವನ್ನು ನಿರ್ಮಿಸಲಾಯಿತು. ಬಾದಶಾಹಪುರದ ದಾರಿಯನ್ನು ಕ್ರಮಿಸುವುದರಿಂದ ಎರಡೂ ಜಗತ್ತುಗಳ ಸಂಪತ್ತು ಪ್ರಾಪ್ತವಾಗುತ್ತದೆ. ಬಂದರುಗಳಲ್ಲಿ ಆಗಮನ ಮತ್ತು ನಿರ್ಗಮನ ಮಾಡುವುವರು, ಒಂದು ವೇಳೆ ಬಾದಶಾಹಪುರದ ಮಾರುಕಟ್ಟೆಯಲ್ಲಿ ತಮ್ಮ ಕಾರ್ಯವನ್ನು ನಿರ್ವಹಿಸದಿದ್ದರೆ; ಅವರು ಅರ್ಥವಿಹೀನವಾದ ಅಕ್ಷರದಂತೆ, ವಿಶ್ವಾಸದ ದೃಷ್ಟಿಯಿಂದ ಪತನವಾಗುತ್ತಾರೆ.

ಪ್ರವಾದಿ ಸುಲೇಮಾನರ ಉಂಗುರದ ಮೇಲೆ ಕೆತ್ತಲಾದ ದೇವರ ನಾಮವು; ಉಂಗುರದ ಮುಂಗಡ ಹಣ ಆಯಿತು. ದಲ್ಲಾಳಿಗಳಿಗೆ ಸಂಪತ್ತಿನ ಭಂಡಾರವು ನಿರಾಂತಕವಾಗಿ ದೊರಕುತ್ತದೆ. ಪೂರ್ಣಮಾಹಿತಿ ಹೊಂದಿದ ರತ್ನ ವ್ಯಾಪಾರಿಗಳು ರತ್ನಗಳಿಂದ ತುಂಬಿದ ಅಂಗಡಿಗಳೊಂದಿಗೆ ಬಾದಶಾಹ-ಪುರಕ್ಕೆ ಬಂದಿದ್ದಾರೆ. ಶಾಂತಿ ಮತ್ತು ಸಂರಕ್ಷಣೆಯ ಹಾಸುಬಟ್ಟೆಯ ಮೇಲೆ ಆಸೀನರಾಗಿ, ಸಂತೋಷದಿಂದ ಜೀವನ ಸಾಗಿಸುತ್ತಾರೆ.

‘ಖುಸ್ರೊ ಗಾಜಿಯ ಆಳ್ವಿಕೆಯಲ್ಲಿ ಸಂತೋಷದ ಅತಿರೇಕದಿಂದ, ಪರಿಶುದ್ಧ ನೀರಿನಲ್ಲಿರುವ ಮೀನಿನಂತೆ ಮಿಂಚುತ್ತಾರೆ. ಈ ಉದ್ಯಾನದಲ್ಲಿ ಬೀಸುವ ಗಾಳಿಯು ಒಂದು ವೇಳೆ ಖತನ್‌ನಗರದ ಮೇಲೆ ಬೀಸಲಾರಂಭಿಸಿದರೆ, ಹರಿಣಗಳ ಕೊಂಬುಗಳು, ಕಸ್ತೂರಿಯ ಚೀಲಗಳಿಂದ ತುಂಬುವವು, ಒಂದು ವೇಳೆ, ಆತನ ದ್ವಾರದ ಫಕೀರನು ಆತನನ್ನು ಪ್ರಶಂಸಿಸಿದರೆ, ತಿಂಗಳು/ವರ್ಷಗಟ್ಟಲೆ ಆತನ ಜೇಬು ಮತ್ತು ಸೆರಗು, ಮುತ್ತುಗಳ ಭಾರದಿಂದ ಹರಿದು ಹೋಗುತ್ತದೆ’.

ಲೌಕಿಕ ಶಿಕ್ಷಣ ಸಂಪಾದನೆಗಾಗಿ ರಾಜಕುಮಾರ ಅಲಿಯನ್ನು ಪಾಠಶಾಲೆಯಲ್ಲಿ ಆಸೀನಗೊಳಿಸುವ ವೃತ್ತಾಂತ

ಪ್ರವಾದಿಯಂತಹ ಸ್ವಭಾವ ಹೊಂದಿದ ಹಜರತ್ ಬಾದಶಾಹ ಗಾಜಿಯು ಸಮಗ್ರ ಜಗತ್ತಿನ ರಾಜಕುಮಾರನಾದ ಶಹಜಾದಾ ಅಲಿಯ ಶಿಕ್ಷಣದ ಸಂತೋಷ ಸಮಾಚಾರದ ಮೂಲಕ; ವೈಭವ-ಗಾಂಭೀರ್ಯದ ಹಣೆಗೆ ಉನ್ನತಿ ನೀಡುವಂತಹ ಸಾಮ್ರಾಜ್ಯದ ದೃಷ್ಟಿ-ಶಕ್ತಿಗೆ ಅಹಂಕಾರ ಮತ್ತು ಪ್ರತಿಷ್ಠೆಯ ಅತಿ ಸುಂದರವಾದ ಉಡುಪು ತೊಡಿಸಿದ್ದಾನೆಂದು; ಜಗತ್ತಿನ ನಿರ್ಮಾಣದ ಶಿಕ್ಷಣ ಹೊಂದಿದವರು

ಅರಿತುಕೊಂಡರು. ಜಗತ್ತಿಗೆ ಆಜ್ಞೆ ನೀಡುವುವನ ಆಜ್ಞೆಯಿಂದ, ವಿಜಯ ಶ್ರೇಣಿ ಹೊಂದಿದ ಅಹಮ್ಮದ್‌ಖಾನನು ಸಾಂಪ್ರದಾಯಿಕವಾಗಿ ನಗಾರಿಯನ್ನು ಬಾರಿಸಿ; ಉನ್ನತ ಸ್ಥಾನದ ಶ್ರೇಷ್ಠ ಜನರಿಗೆ 'ಶಿಕ್ಷಣ ಆರಂಭ'ದ ಸಮಾಚಾರ ತಿಳಿಸಿ, ಶಾಶ್ವತವಾಗಿ ತಲೆ ಎತ್ತಿ ನಿಲ್ಲುವ ಪ್ರತಿಷ್ಠೆ/ಗೌರವ ನೀಡಲಾಯಿತು.

೧೦೫೬ ಹಿಜ್ರಿಯಲ್ಲಿ ಗೊಮ್ಮಟದ ಎದುರಿಗಿನ ಮೈದಾನದಲ್ಲಿ ಕಂದಕದ ದಂಡೆಯಲ್ಲಿ ಸಭೆಯನ್ನು ವ್ಯವಸ್ಥೆಗೊಳಿಸಲಾಯಿತು. ಆಶ್ಚರ್ಯದ ಚಿತ್ರಣ ಬರೆದರು. ಪರಿಶುದ್ಧತೆಯ ಪರದೆಯ ತನಕ ತಲುಪುವುವರಿಗಾಗಿ ಸಾಮ್ರಾಟನ ಗೌರವ/ವೈಭವದ ದರ್ಬಾರನ್ನು ಶೃಂಗರಿಸಲಾಯಿತು. ಚಮತ್ಕಾರ ಪ್ರದರ್ಶಿಸುವ ನರ್ತಕಿಯರು ಹಾಡುಗಳ ಬಾಹುಳ್ಯದಿಂದ ಪ್ರೇಕ್ಷಕರ ಸಂತೋಷವನ್ನು ಹೆಚ್ಚಿಸಿದರು. ಸಾಗರ ಮುಖದ ಮೇಲೆ ಏಳುವ ತರಂಗಗಳು, ಗಾಯಕರಂತೆ ಹಾಡಲಾರಂಭಿಸಿದಾಗ; ಸಂತೋಷದ ಗೀತೆಗಳು ಹರಡಿದವು. ಕೈ ಮದ್ದಳೆಯ ಧ್ವನಿಯು ಧೂಳಿಯ ವೃತ್ತದಂತೆ ಮರುಭೂಮಿಯ ನಡುವೆ ಮೇಲೇರಿತು. ಸಾಮ್ರಾಟನ ಹಾಸು ಬಟ್ಟೆಯನ್ನು ಹರಡಲಾಗಿರುವುದರಿಂದ ಭೂಮಿಯ ಮೇಲ್ಭಾಗವು ಸುಲೇಮಾನನ ಸಿಂಹಾಸನಕ್ಕೆ ಮತ್ಸರವನ್ನುಂಟು ಮಾಡಲಾರಂಭಿಸಿತು.

ಎಲ್ಲ ಪ್ರಶಂಸನಾರ್ಹರಾದ ವಿದ್ವಾಂಸರು ಹಾಗೂ ಕವಿಗಳು, ಬಾದಶಾಹನ ಗೌರವ/ಪ್ರತಿಷ್ಠೆಯ ಪ್ರಥಮ ಶ್ರೇಣಿಯಲ್ಲಿ ಸ್ಥಾನಪಡೆದರು. ಉನ್ನತ ದರ್ಜೆಯ ಎಲ್ಲ ನಾಯಕರು ಮತ್ತು ಉನ್ನತ ಸೈನ್ಯಾಧಿಕಾರಿಗಳು ತಮ್ಮ ಗೆಳೆಯರೊಂದಿಗೆ ಆಸೀನರಾಗಿ ಅಭಿಮಾನದ ಧ್ವಜವನ್ನು ಏರಿಸಿದರು. ಸಾಮರ್ಥ್ಯವೆಂಬ ಸಂಪತ್ತಿನ ಒಡೆಯನಾದ ಮೌಲಾನಾ ಖಾಜೀ ಸಯೀದನು, ಜಗತ್ತಿನ ರಾಜಕುಮಾರನಿಗೆ ಕುರಾನಿನ ಹತ್ತು ಸೂಕ್ತಗಳನ್ನು ಅಧ್ಯಯನ ಮಾಡಿಸುವ ಗೌರವಾದರವನ್ನು ಹೊಂದಿ, ಕೀರ್ತಿಸಂಪನ್ನನಾದನು.

ರಾಜಕುಮಾರನಾದ ಅಲಿಯ 'ಪಾಠ ಆರಂಭ ಸಮಾರಂಭ'ದ (ಮಕ್‌ತಬ್) ಮಾನ್ಯತೆ ಮತ್ತು ಶ್ರೇಷ್ಠತೆಯೊಂದಿಗೆ ಶಿಸ್ತಿನಿಂದ ಆಸೀನನಾಗಿ ಎದುರಿಗೆ ಓದುವ ಹಲಗೆಯನ್ನಿಟ್ಟು ಕುರಾನಿನ ಸೂಕ್ತಗಳನ್ನು ಓದಿ, ಅವನು ಪ್ರಾರ್ಥನೆಗಾಗಿ ಕೈ ಎತ್ತಿದನು.

"ಪ್ರವಾದಿಯಂತಹ ಸ್ವಭಾವದ ನನ್ನ ತಂದೆಯ ವೈಭವ-ಗಾಂಭೀರ್ಯವು ಶಾಶ್ವತವಾಗಿರಲಿ!" ಎಂದು ಪ್ರಾರ್ಥಿಸಿದನು.

'ಜಗತ್ತಿನ ಪಾಠಶಾಲೆಯಲ್ಲಿ ಹಾಳೆಯು ಹಸಿರಾಗಿರುವುವರೆಗೆ, ಸೂರ್ಯನು ಬಾದಶಾಹನ ಪ್ರಶಂಸೆಯಲ್ಲಿ ಮಗ್ನನಾಗಿದ್ದನು, ಓ, ದೇವರೇ! ನೀನು ಜಗತ್ತಿನ ಸಾಮ್ರಾಜ್ಯಕ್ಕೆ ದಾನ ನೀಡು, ಜಗತ್ತಿನಲ್ಲಿ, ಬಾದಶಾಹನ ಆಡಳಿತ ವ್ಯವಸ್ಥೆಯನ್ನು ಶಾಶ್ವತಗೊಳಿಸು'.

ಬಾದಶಾಹನ ಆಜ್ಞೆಯ ಮೇರೆಗೆ, ಬಾದಶಾಹಪೂರ ಕಟ್ಟಡದ ನಿರ್ಮಾಣ

ಅಂತಸ್ತಿನ ಅರಮನೆಯಲ್ಲಿ ಆಸೀನರಾದವರು ಆಕಾಶದ ಔನ್ನತ್ಯದವರೆಗೆ ಅಭಿಮಾನ ಶಿರವನ್ನು ಎತ್ತರಿಸಿದರು. ಆಸುಪಾಸಿನ ದೇಶಗಳಿಂದ ಕಟ್ಟಡ ನಿರ್ಮಾಣದ ಕಲೆಯಲ್ಲಿ ತಜ್ಞರಾದಂತಹ ಕಟ್ಟಡ ಕಾರ್ಮಿಕರನ್ನು ಒಟ್ಟುಗೂಡಿಸಿ, ಸುದೃಢವಾದ ತಳಹದಿ ಹೊಂದಿದಂತಹ ಅರಮನೆಯನ್ನು ದೃಢತೆಯ ಆಕಾಶದೆತ್ತರದವರೆಗೆ ತಲುಪಿಸಬೇಕೆಂದು; ೧೦೫೨ ಹಿಜ್ರಿಯಲ್ಲಿ ದರ್ಬಾರಿನಿಂದ ಆಜ್ಞೆಯು ಪ್ರಾಪ್ತವಾಯಿತು. ಜಗತ್ತಿಗೆ ಆಜ್ಞೆ ನೀಡುವ ಬಾದಶಾಹನ ಆಜ್ಞೆಯಮೇರೆಗೆ, ಸಾಮ್ರಾಜ್ಯದ ಸದಸ್ಯನಾದ ವಿಜಯಿ ಖಾನ್‌ಖಾನಾನು ಈ ವಿಷಯದಲ್ಲಿ ಸಂಪೂರ್ಣ ಲಕ್ಷ್ಯವಹಿಸಿದನು. ಎರಡು ವರ್ಷಗಳ ಅವಧಿಯಲ್ಲಿ ಅವನು ಇಂತಹ ಅನುಪಮವಾದ ಕಟ್ಟಡವನ್ನು ಪೂರ್ಣಗೊಳಿಸಿದನು.

ಪರಿಶುದ್ಧತೆಯಿಂದ ಜಗತ್ತನ್ನು ಶೃಂಗರಿಸುವ ಪಡಶಾಲೆಯು ಸತ್ಯಮಾರ್ಗದ ಮೇಲೆ ನಡೆಯುವ ಉನ್ನತ ಧೈರ್ಯದ ಜನರಿಗೆ ಸಿದ್ದೆರಾಹದ ಸ್ತಂಭಗಳ ನೆರಳಿನಲ್ಲಿ ತನ್ನ ಹಣೆಯನ್ನು ಸತ್ಯದ ಬಂಡವಾಳದಿಂದ ಅಲಂಕರಿಸಿ ವಿಶ್ವಾಸದೊಂದಿಗೆ ತಲೆ ಎತ್ತುವವರನ್ನಾಗಿ ಮಾಡಿದೆ. ಹಿರಿತನಕ್ಕೆ ಪದೋನ್ನತಿ ನೀಡುವ ಛಾವಣಿಯ ದೃಶ್ಯವು ದೃಷ್ಟಿಯು ಪ್ರಪಂಚದ ಪರೀಕ್ಷಕರ ನೋಟವನ್ನು ಮಹತ್ವ ಮತ್ತು ಶಕ್ತಿಯ ಆಕಾಶದ ಅಕ್ಷಯವನ್ನಾಗಿ ಮಾಡಿದೆ.

'ಈ ಪಡಸಾಲೆಯು ಪ್ರಪಂಚಕ್ಕೆ ಉನ್ನತಿನೀಡುವ ಪ್ರಾಣವಾಗಿದೆ, ಇದರ ದೃಶ್ಯವು ಪೃಥ್ವಿಯ ಜನರಿಗೆ ಹೊಸ ವರ್ಷದ ಹಬ್ಬದಂತಿದೆ, ಕಿಡಕಿಯಿಂದ ಛಾವಣಿಯ ದೂರವು ಒಂದು ಹೆಜ್ಜೆಯಲ್ಲಿತ್ತು. ಸೂರ್ಯನು ಅದರ ಕೈಯಿಂದ ಪೋಷಣೆ ಪಡೆದ ಪಕ್ಷಿ ಆಗಿದ್ದಾನೆ'.

ಅದರ ಅಂಗಳದಲ್ಲಿ ಬಂಗಾರದ ನಕ್ಷತ್ರಗಳ ಹೂವುಗಳಿಂದ ತುಂಬಿದ ಆಕಾಶವು ಅಮಲೇರಿದ ನವಿಲಿನಂತೆ ಅಲೆದಾಟದಲ್ಲಿ ಮಗ್ನವಾಯಿತು. ಅದರ ಹೃದಯವನ್ನು ತೆರೆಯುವ ಕಿಡಕಿಯ ಮೇಲಿನ ತಟ್ಟುವಿಕೆಯ ಶಬ್ದವು, ಗೀತೆಗಳನ್ನು ಹಾಡುವ ಹಾಗೂ ಚಮತ್ಕಾರಗಳನ್ನು ಪ್ರದರ್ಶಿಸುವ ಪ್ರೇಯಸಿಯರಿಗೆ ನೃತ್ಯ ಮಾಡಲು ಕಲಿಸಿದೆ. ಅದರ ಕಳಸದ ಬಂಗಾರ ಲೇಪಿತ ಛತ್ರದ ಜಗತ್ತನ್ನು ಮಿಂಚಿಸುವ ಬೆಳಕಿನಿಂದ ಪ್ರೇಕ್ಷಕರ ರೆಪ್ಪೆಗಳ ಮೇಲೆ ತೂರ್ ಪರ್ವತದ ಜ್ವಾಲೆಯಂತಹ ಸಾವಿರಾರು ಪಂಜುಗಳು ಉರಿಯಲಾರಂಭಿಸುತ್ತವೆ. ಸೂರ್ಯನನ್ನು ಬಂಗಾರ ಪರೀಕ್ಷಿಸುವ ಒರೆಗಲ್ಲು ಮಾಡಿ; ನ್ಯಾಯದೊಂದಿಗೆ ಬಾಗಿಲು ಮತ್ತು ಗೋಡೆಗಳ ಸಮಸ್ಯೆಯನ್ನು ಪರಿಹರಿಸಿ, ಅರಮನೆಯನ್ನು ಬಂಗಾರ ಲೇಪಿತಗೊಳಿಸಿ ತೋರಿಸಲಾಗಿದೆ. ಅದರ ವರ್ಣಮಯ ದರ್ಪಣಗಳ ಪ್ರತಿಬಿಂಬದಿಂದ, ದೇಶಗಳು ಹಾಗೂ ದೊರೆಗಳ ಆಶ್ಚರ್ಯದ ಬಟ್ಟಲುಗಳು ತುಂಬಿವೆ.

'ಇಂತಹ ಅರಮನೆಯನ್ನು ಬುದ್ಧಿವಂತರು ಕನಸಿನಲ್ಲಿಯೂ ಕಂಡಿಲ್ಲ. ಅದರ ನೆರಳು, ಸಮಯ ಮತ್ತು ಭೂಮಿಯ ಉಡಿಗೆ-ತೊಡಿಗೆ ಆಗಿದೆ, ಆಕಾಶದ ಬೈತಲೆಯ ಮೇಲೆ ಸಪ್ತತಾರಾ ಮಂಡಲದ ವಲಯವು, ಪ್ರತಿ ರಾತ್ರಿಯಲ್ಲಿ ಅದರ ಭಾವಣಿಯ ಭಾರದಿಂದ ಬಾಗುತ್ತದೆ. ಬೆಳ್ಳಿಯಂತಹ ಬಾಹುಗಳುಳ್ಳ ಮಲ್ಲಿಗೆಯ ಜೇಬಿನಿಂದ ಹೂವಿನಂತೆ, ಇರುಳಿನಲ್ಲಿ ಅದರ ಗೊಮ್ಮಟದಿಂದ ತೇಜಸ್ವಿ ನಕ್ಷತ್ರಗಳು ಪ್ರಕಟವಾಗುತ್ತವೆ. ಅದರ ಸ್ತಂಭಗಳು ತಮ್ಮ ಸ್ಥಾನದಿಂದ ಮೇಲೆದ್ದು ಆಕಾಶದೊಂದಿಗೆ ಸಂಭಾಷಣೆ ಮಾಡುವಂತೆ ಕಾಣುತ್ತವೆ, ನಿನ್ನ ಸತ್ಯದೊಂದಿಗೆ ಇತರರೂ ಸಹ ನಿನ್ನೊಂದಿಗೆ ಆಸೀನರಾಗಬೇಕು. ಒಂದು ವೇಳೆ ಆಕಾಶವು ಔನ್ನತ್ಯದ ಮೇಲಿದ್ದರೂ ಸಹ; ಸಹಭಾಗಿತ್ವವನ್ನು ಹೊಂದಿದೆ, ಅದರ ತಳಹದಿಯ ದೆಸೆಯಿಂದ ಭೂಮಿಯ ಸ್ಥಾನವೂ ಸಹ ಗೌರವಾನ್ವಿತವಾಯಿತು. ಅದು ಕೊಳವನ್ನು ಶಾಶ್ವತವಾಗಿ ತನ್ನೆದುರಿಗೆ ದರ್ಪಣದಂತೆ ಇಟ್ಟುಕೊಂಡಿದೆ, ಗರ್ವಿಷ್ಠರಾದ ವ್ಯಕ್ತಿಗಳು ಸ್ವಯಂ-ಅಲಂಕೃತರಾದ ಪ್ರೇಯಸಿಯರಂತೆ, ಸ್ಮರಣೆಗೆ ತಂದಿರುವ ವಿವರಣೆಯು, ಅರ್ಥದ ತರಂಗಕ್ಕಿಂತಲೂ ಹೆಚ್ಚು ಸಂಕೀರ್ಣವಾಗಿದೆ, ಹಕ್ಕಿಗಳ ಪ್ರಶಂಸೆಯ ಚಿಲಿಪಿಲಿ ನಾದವು, ಕಾರಂಜಿಗಿಂತಲೂ ಅಧಿಕವಾಗಿದೆ'.

ಅದರ ಶಾಂತಿದಾಯಕ ಅಂಗಳದಲ್ಲಿ ಆತ್ಮ-ಸಂತೋಷ ನೀಡುವಂತಹ ಕೊಳವಿದೆ. ಮುತ್ತುಗಳನ್ನು ಸೃಷ್ಟಿಸುವ ಮೋಡವು, ಅದರ ಕಾರಂಜಿಯ ಮುತ್ತುಗಳ ಮಳೆಯಿಂದ ಎಲ್ಲ ಸಾಗರಗಳನ್ನು ಮುತ್ತುಗಳಿಂದ ತುಂಬಿಸಿ; ತನ್ನ ಸೆರಗಿನಲ್ಲಿ ಎಳೆದುಕೊಂಡಿದೆ. ಖಿಲ್‌ಜುಮ್ ಸಾಗರವು ತನ್ನ ಕುಗ್ಗಿದ ಆಕಾಂಕ್ಷೆಯ ದೆಸೆಯಿಂದ, ಕೊಳದ ಅತಿ ಸುಂದರವಾದ ಜೇಬಿನ ಅರ್ಧ ಹನಿ ನೀರ್ಗುಳ್ಳೆಯ ಸರಿಸಮಾನವೆಂದೂ ಸಹ, ಪರಿಗಣಿಸುವುದಿಲ್ಲ. ಮಿಂಚುವ ನಕ್ಷತ್ರಗಳನ್ನು ಪ್ರಕಟಿಸುವ ಆಕಾಶವು ಮೀನಿನಂತೆ ತನ್ನ ಶುಭ್ರತೆಯನ್ನು ಈ ಮಹೋನ್ನತ ಕೊಳದ ಮೂಲಕ ಜನರಿಗೆ ಪ್ರದರ್ಶಿಸುತ್ತದೆ. ಅದರ ತರಂಗಗಳ ಉಗುರುಗಳು ದಾಹದ ತುಟಿಗಳ 'ಹೃದಯದ ಗಂಟ'ನ್ನು, ಮಿನುಗುವ ತಾರೆಗಳ ಚಿಲುಮೆಯಂತೆ ಬಿಚ್ಚುತ್ತವೆ.

'ಒಂದು ವೇಳೆ ಅದರ ಒಂದು ಹನಿಯು ಯಾರದೇ ಕೈ ಮೇಲೆ ಪತನವಾದರೆ, ಆತನ ಕೈಯು ಅಮೃತಪಾನ ಮಾಡಿದ ಪ್ರವಾದಿ ಖಿಜರ್‌ನಂತೆ ಆಗುತ್ತದೆ. ವಿವೇಕ-ಸಂಪನ್ನರ ಹೃದಯವು ಪ್ರೇಯಸಿಯರ ಮೀನಗಂಡದಂತೆ (ಮೊಣಕಾಲಿನಂತೆ), ಅದರ ಮೀನನ್ನು ಕೋಮಲತೆಯಿಂದ, ಒಡಿಸಿಕೊಂಡು ಹೋಗುತ್ತದೆ'.

ಕಟ್ಟಡ ನಿರ್ಮಾಣ ತಜ್ಞರು ಸಂಪೂರ್ಣ ಪ್ರಯತ್ನ ಹಾಗೂ ಏರ್ಪಾಡಿನಿಂದ ವಠಾರಿನ ಕಂದಕದ ಮೈದಾನದಲ್ಲಿ ನಿರ್ಮಿಸಿದಂತಹ ನಾಲ್ಕು ಬೃಹದಾಕಾರದ ಕಮಾನುಗಳು; ನದಿಯ ತರಂಗಗಳ ಹೋರಾಟದಿಂದ ಅಸ್ತವ್ಯಸ್ತವಾಗಿದ್ದರೂ ಸಹ, ಅತ್ಯಧಿಕ ದೃಢತೆಯೊಂದಿಗೆ ತಳಹದಿ ನಿರ್ಮಿಸಿದಂತಹ 'ದಾದ್ ಮಹಲ್' (ನ್ಯಾಯದ ಅರಮನೆ) ಅದನ್ನು ವಠಾರದ ಗೋಪುರ/ಗೊಮ್ಮಟದೊಂದಿಗೆ ಒಂದುಗೂಡಿಸಲಾಗಿದೆ.

'ಜಗತ್ತನ್ನು ಶೃಂಗರಿಸುವ ಈ ಅರಮನೆಯು ಅಸ್ತಿತ್ವಕ್ಕೆ ಬಂದಾಗ, ಅದರ ನೆರಳು ಆಕಾಶಕ್ಕೆ ಚಪ್ಪರ ಆಯಿತು, ಅರಮನೆಯ ಪ್ರದಕ್ಷಿಣೆ ಮಾಡಿ, ಅದರ ತೇಜಸ್ಸಿನಿಂದ ನಾನು ಸೆರೆಯಾಳಾದೆನು, ಅದರ ಗೋಡೆಗಳು 'ಖೋರ್‌ನಖ್'ನ (ಇರಾಕಿನ ದೊರೆ ಬೆಹರಾಂಗೋರನ ಭವ್ಯವಾದ ಅರಮನೆ) ಮಹಲಿನ ಗೋಡೆಗಳಿಗೆ ಕಪಾಳಮೋಕ್ಷ ಮಾಡುತ್ತವೆ, ಅದರ ಕಳಸದ ಕೊಂಡಿಯಿಂದ ಹೃದಯದ ಸೂರ್ಯನಿಗೆ ಬಿಸಿ ಏರಿತು, ಅರಮನೆಯ ತಳಹದಿಯಿಂದ ಅಸೂಯೆಹೊಂದಿ, ಆಕಾಶದ ತಲೆಯು ಮೃದು ಆಯಿತು. ಪ್ರತಿದಿನ ಇದೇ ಭಾವಣಿಯ ಮೇಲೆ ವಾಸಿಸಬೇಕೆಂಬ, ಲಾಲಸೆಯು ಹುಮಾ ಪಕ್ಷಿಗೆ ಉಂಟಾಯಿತು, ಅರಮನೆಯ ನೆರಳಲ್ಲಿ ಬರುವ ಯಾವುದೇ ವ್ಯಕ್ತಿಯು, ತನಗಾಗಿ ಸಂಪತ್ತಿನ ಬಾಗಿಲನ್ನು ತೆರೆದುಕೊಳ್ಳುತ್ತಾನೆ'.

ಹಜರತ್ ಬಾದಶಾಹನು ಕಾರ್ಯನೀತಿಯ ತಳಹದಿಯ ಮೇಲೆ ನವಾಬ್‌ಖಾನ್ ಬಾಬಾನನ್ನು ಬಂಧಿಸುವುದು ಮತ್ತು ಬಿಡುಗಡೆ ಮಾಡುವುದು

ದೇವರು ಇಚ್ಛಿಸಿದಂತೆ ಶಾಶ್ವತವಾಗಿರುವ ಸಂಪತ್ತು ಹಾಗೂ ಸತ್ಕಾರ್ಯದ ಬಾಗಿಲುಗಳು ಗೌರವಸ್ಥರಿಗಾಗಿ ತೆರೆಯಲಿ. ಮೊದಲು ಅವರನ್ನು ಪರೀಕ್ಷೆಯ ಬಟ್ಟೆಯಲ್ಲಿ ಕರಗಿಸುವ ನಿರಾಸೆಯ ಬೆಂಕಿಯಿಂದ ಪರೀಕ್ಷಿಸಲಾಯಿತು. ಹಜರತ್ ಬಾದಶಾಹ ಗಾಜಿಯು ಸತ್ಯದ ವಿಶ್ವಾಸ ಮತ್ತು ನಂಬಿಕೆಯ ಪರಿಶೀಲನೆಗಾಗಿ, ಖಾನ್‌ಬಾಬಾನನ್ನು ಸೆರೆಹಿಡಿದು ಬಲ್ಗಾನೋಹ್ ಕೋಟೆಗೆ ಕಳುಹಿಸಿದನು ಹಾಗೂ ಹಿಂತಿರುಗಿ ಕರೆಸಿಕೊಂಡನು. ೧೦೫೫ ಹಿಜ್ರಿಯಲ್ಲಿ ಆಕಾಶದ ಸುತ್ತುವಿಕೆ ಮತ್ತು ನಕ್ಷತ್ರಗಳ ಪ್ರಭಾವವು (ಸಪ್ತ ತಾರೆಗಳ ಸಂಗಮದ ಪರಿಣಾಮ) ಬಾಬಾ ಖಾನ್ ಮೇಲೆ ಆಗುವುದಿದೆಯೆಂಬ ಸಂಗತಿಯನ್ನು ಬುದ್ಧಿವಂತಿಕೆಯನ್ನು ಪೋಷಿಸುವ ಪ್ರಜ್ಞಾವಂತರು ಅರಿತಿದ್ದಾರೆ. ಸಪ್ತ ತಾರೆಗಳ ಸಂಗಮದ ಘಟನೆ ಮುಗಿದ ನಂತರ ಮಹಾ ಅದೃಷ್ಟಶಾಲಿ ಹಜರತ್ ಬಾದಶಾಹ ಗಾಜಿಯು, ಕೃಪೆಗಳ ಆವೇಶದಿಂದ ಸಾಮ್ರಾಜ್ಯದ ಕೇಂದ್ರ ಬಿಂದು ಎನಿಸಿದ ನವಾಬ್‌ಖಾನ್‌ಬಾಬಾನನ್ನು ಹಿಂತಿರುಗಿ ಕರೆಸಿಕೊಂಡನು.

ವಿಶ್ವದ ಒಡೆಯನಾದ ಅಲ್ಲಾನ ಯುಕ್ತಿಯನ್ನು ಅನುಷ್ಠಾನಗೊಳಿಸಿ, ನವಾಬ್‌ಬಾಬಾನನ್ನು ಸೆರೆಹಿಡಿಯಲು, ಹಜರತ್ ಬಾದಶಾಹ ಗಾಜಿಯು; ಸಾಮ್ರಾಜ್ಯ ಸದಸ್ಯನಾದ ಖಾನ್‌ಖಾನಾನನ್ನು ಕಳುಹಿಸಿದನು. ಜಗತ್ತಿಗೆ ಆಜ್ಞೆ ನೀಡುವವನ ಆಜ್ಞೆಯ ಮೇರೆಗೆ, ಖಾನ್‌ಖಾನಾನು ನವಾಬ್‌ಖಾನ್ ಬಾಬಾನನ್ನು ಬಂಧಿಸಿ, ಬಲ್ಗಾನೋಹ್ ಕೋಟೆಯಲ್ಲಿ ಇಟ್ಟನು. ಕೋಟೆಯ ವಠಾರದ ವ್ಯಾಪ್ತಿಯು, ತಿರುಗುತ್ತಿರುವ ಆಕಾಶವನ್ನು ಕಂಪಾಸಿನ ಚುಕ್ಕೆಯಂತೆ, ಕೇಂದ್ರದಲ್ಲಿ ಇಟ್ಟಿತ್ತು ಮತ್ತು ಅದರ ಆಳವಾದ ಕಂದಕವು, ಭೂಮಿಯ ಏಳನೆಯ ಪದರನ್ನು 'ಗಿರವಿ ಇಟ್ಟ ವಸ್ತು' ಎಂದು ಪರಿಗಣಿಸಿತ್ತು.

'ಆಕಾಶವು ಪರದೆಯಲ್ಲಿ ಅಡಗಿ, ಕೆಲವು ಆಟಗಳನ್ನು ಆಡುತ್ತಿತ್ತು, ಅದನ್ನು ಬುದ್ಧಿವಂತರ

ಯೋಚನೆಯು ಪರಾಜಯಗೊಳಿಸಿತು. ಗೊಂಬೆ–ಆಟಗಾರನು ಪರದಾ–ರಹಿತನಾದಾಗ, ಪರದೆಯೊಳಗೆ ಸನ್ನೆ ಮಾಡುವುವನು ಆಸೀನನಾಗಿದ್ದನು'.

ಈ ಘಟನೆಯು ಜರುಗಿ, ಸುಮಾರು ಒಂದು ತಿಂಗಳು ಕಳೆದ ನಂತರ ನವಾಬ್‌ಖಾನ್ ಬಾಬಾನನ್ನು ಕರೆದುಕೊಂಡು ಬರಲು, ಅರಮನೆಯ ಕಾವಲುಗಾರರಲ್ಲಿ ಓರ್ವನಾದ ಅಬ್ದುಲ್ ರಝಾಕ್‌ನನ್ನು ಅನೇಕ ಇನಾಮುಗಳೊಂದಿಗೆ ಹಜರತ್ ಬಾದಶಾಹ ಗಾಜಿಯು ಬಲ್ಗಾನೋಹ್ ಕೋಟೆಗೆ ಕಳುಹಿಸಿದನು. ಒಂಬತ್ತು ದಿನಗಳ ನಂತರ, ನವಾಬ್‌ಖಾನ್‌ಬಾಬಾನು ನಗರದ ಆಸುಪಾಸಿನಲ್ಲಿ ತಲುಪಿದಾಗ; ಜನರ ರಕ್ಷಕ ಹಾಗೂ ಕರುಣಾಮಯನಾಗಿದ್ದ ಹಜರತ್ ಬಾದಶಾಹ ಗಾಜಿಯು ದೃಢತೆಯೊಂದಿಗೆ ಸ್ವಾಗತಿಸಲು, ನಗರದ ಹೊರಗೆ ಹೋಗಿ ನವಾಬ್‌ಖಾನ್‌ಬಾಬಾನನ್ನು ನಗರಕ್ಕೆ ಕರೆದುಕೊಂಡು ಬಂದನು. ಆತನನ್ನು ಸಾಮ್ರಾಟನ ಅನುಗ್ರಹದಿಂದ ಸನ್ಮಾನಿಸಿ; ಸಹವಾಸ ಮತ್ತು ಸಮಾನ ಮಟ್ಟದ ವಿಶಿಷ್ಠ ಹಾಗೂ ಪ್ರಸಿದ್ಧ ವ್ಯಕ್ತಿಯನ್ನಾಗಿ ಮಾಡಿದನು.

'ಶಹಭಾಸ್! ಸಾಮ್ರಾಟ ಗಾಜಿಯ ಸಂಪತ್ತಿನ ಕೈಗಳು, ಜಮಸೀದ್ ರಾಜನ ಭಗ್ನವಾದ ಕಿರೀಟವನ್ನು ಶಿರದ ಮೇಲೆ ಇಡುವಂತೆ ಮಾಡುತ್ತವೆ, ಒಂದು ವೇಳೆ, ಅವನ ಬುದ್ಧಿವಂತಿಕೆಯ ಮೋಡದಿಂದ ಒಂದು ಹನಿಯು ಭೂಮಿಯ ಮೇಲೆ ಪತನವಾದರೆ, ಸಾಗರವು ಒಂದು ಹನಿಯಲ್ಲಿ, ಸಾವಿರ ಮುಳುಗು ಹಾಕುತ್ತದೆ'.

ಪರಾಕ್ರಮಶಾಲಿ ದೇಶದ ವಿಜಯಿಗಳು, ಖಡ್ಗದಂತಹ ಪಾವಿತ್ರ್ಯತೆಯನ್ನು ಪರೀಕ್ಷಿಸಲು ಒಂದನ್ನು 'ಆಕಾಶ' ಮತ್ತು ಇನ್ನೊಂದನ್ನು 'ಭೂಮಿ' ಎಂದು ಕರೆದರು. 'ಗಾಜಿ' ಎಂಬ ಬಿರುದು ಹೊಂದಿದ್ದ ಸಾಮ್ರಾಟನ ಸದ್ಗುಣಗಳ ದೆಸೆಯಿಂದ ಜಗತ್ತಿನ ಆರಂಭ ಮತ್ತು ಅಂತ್ಯದ ಘೋಷಣಾ ಹಲಗೆಯ ಮೇಲೆ 'ಅಲ್ಲಾನ ಸಹಾಯದಿಂದ ವಿಜಯವು ಸಮೀಪದಲ್ಲಿದೆ' ಎಂದು ಬರೆಯಲಾಗಿದೆ. ಆತನ ವೈಭವದ ಸೂರ್ಯನ ಬೆಳಕು, ನಾಶವಾಗುವ ಅಣುವನ್ನು ದೇವರನ್ನು ಗುರುತಿಸುವುವರ ಹೃದಯದಂತೆ ಸಂಪೂರ್ಣ ವಿಶ್ವವನ್ನು ಸುತ್ತುವರಿಯುವಂತೆ ಮಾಡಿದೆ. ಆತನ ಖಡ್ಗದ ಸಿಡಿಲಿನಂತಹ ಮಿಂಚು ಕತ್ತಲೆಯಲ್ಲಿ ಬಿದ್ದಿರುವ ವಿರೋಧಿಗಳ ಮುಖದ ಮೇಲಿನ ಅಹಂಕಾರದ ಪರದೆಗಳನ್ನು ತೆಗೆದು ಹಾಕಿದೆ. ಹಜರತ್ ಬಾದಶಾಹ ಗಾಜಿಯ ಗುಣವರ್ಣನೆಯ ಬಗೆಗಿನ ಲಕ್ಷ್ಯವಹಿಸುವಿಕೆಯು; ಜಗತ್ತಿನ ಅಂತ್ಯದವರೆಗೆ ಇರುವಂತಹ ಸಂಪತ್ತು, ಕಲ್ಪನೆ ಹಾಗೂ ಸಂಶಯವನ್ನು ಮೀರಿದಂತಹ ಸೌಭಾಗ್ಯದ ಸಾಕ್ಷಿ ಆಗಿದೆ.

'ಬಾದಶಾಹ ಗಾಜಿಯ ಸುದೈವದ ಹಣೆಯ ತೇಜಸ್ಸಿನಿಂದ, ಆತನ ಹೊಸ್ತಿಲು, ಭೂಮಿ ಮತ್ತು ಆಕಾಶದ ಸಾಷ್ಟಾಂಗ ನಮನ ಸಲ್ಲಿಸುವ ಸ್ಥಳವಾಗಿದೆ. ಖೈಸರ್ ಹಾಗೂ ಖಾಖಾನ್ ದೊರೆಗಳ ವೈಭವ ಮತ್ತು ದಾರಾ ರಾಜನ (ಇರಾನಿನ ಪ್ರಸಿದ್ಧ ಅರಸು) ಸಂಪತ್ತು. ಆತನ ಅರಮನೆಯ ಹೊಸ್ತಿಲಿನ ದೆಸೆಯಿಂದ ಕಾಂತಿಹೀನವಾಗಬಹುದು, ಖತನ್

ಪ್ರದೇಶದ ಹರಿಣಿಯಂತೆ ಲೇಖನಿಯು ಚುಕ್ಕಿಗಳನ್ನು ಬರೆದು ಕಸ್ತೂರಿಯ ಚೀಲಗಳನ್ನು ನೀಡಿದೆ, ಒಂದುವೇಳೆ, ಈ ಗುಣದಿಂದ ಸ್ವಲ್ಪ ಸುಂದರವಾದ ಗದ್ಯವನ್ನು ಬರೆಯಬಹುದಾದರೆ, ಎಷ್ಟೊಂದು ಚನ್ನಾಗಿರಬಹುದಾತ್ತು. ಆತನ ಸ್ಮರಣೆಯಿಂದ ಒಂದು ವೇಳೆ, ಸಾಗರದಂತಹ ದಯೆಯನ್ನು ಹುಡುಕಿದರೆ, ಜೀವನದ ದೊಡ್ಡ ಢೋಲಿನಂತೆ ತರಂಗದಂತಹ ಚರ್ಮದ ಪಟ್ಟಿಯಿಂದ ಧ್ವನಿಯು ಉಂಟಾಗುವುದು, ಒಂದು ವೇಳೆ ಆಕಾಶವು ಸ್ವಪ್ನದಲ್ಲಿ ಆತನ ಖಡ್ಗದ ಹೊಡೆತ ಕಂಡರೆ, ಗಾಯಗೊಂಡ ಹರಿಣಿಯಂತೆ, ಬೆನ್ನಿನ ಮೂಲಕ ಪತನವಾಗುತ್ತದೆ, ವೃಷಭದ ಎದೆಯಿಂದ ಹುಲಿಯ ಹಸ್ತವು (ಮುಷ್ಟಿ) ಹೊರಬೀಳುವುದು. ಮಂಗಳ ಗ್ರಹದ ಪರಿಭ್ರಮಣ ಪಥವು ಮಿಥುನ ರಾಶಿಯ ಬೈತಲೆಯನ್ನು ಸ್ಪರ್ಶಿಸಿದರೆ, ವೈರಿಯ ನೀರಿನಲ್ಲಿ ಕಡ್ಡಿಯಂತೆ ಅದರ ಭೀತಿಯಿಂದ ಪತನವಾಗುತ್ತಾನೆ. ಸಾಗರದ ಮೇಲ್ಭಾಗದಲ್ಲಿ ಪ್ರತಿಯೊಂದು ನೀರ್ಗುಳ್ಳೆಯು ಶಿಲಾರಾಳ ಆಗುತ್ತದೆ. ಪ್ರಿಯಕರನ ಹೃದಯ–ದರ್ಪಣದಲ್ಲಿ ಪ್ರೇಯಸಿಯ ಪ್ರತಿಬಿಂಬದಂತೆ, ಆತನ ಕಠಾರಿಯಿಂದ ವಿಜಯದ ಮುಖವು ಸಾಕಾರಗೊಳ್ಳುತ್ತದೆ, ಯಾವುದಾದರೊಂದು ವೇಳೆ ಯಾರಾದರೂ ಆತನ ಪ್ರಶಂಸೆ ಮಾಡಲು ಬಯಸಿದರೆ, ಉನ್ನತ ಬುದ್ಧಿವಂತಿಕೆ ಮತ್ತು ಅನುಮಾನದಿಂದ ಆತನ ಪ್ರಶಂಸಕನಾಗುವನು'.

ಅನುಪಮ ಶಕ್ತಿಶಾಲಿ ದೇವರು ತನ್ನ ಅನಂತ ಮಹಿಮೆಯನ್ನು ಈ ಬಾದಶಾಹ ಗಾಜಿಯ ವಿಜಯಶಾಲಿ ಬಾಹುಗಳ ಸಾಮರ್ಥ್ಯದಿಂದ ಜಗತ್ತಿನ ರಾಜರಿಗೆ ಪ್ರಕಟಗೊಳಿಸಿ, ಅದರಿಂದ ಎಲ್ಲ ರಾಜರು ಸುಲೇಮಾನ್‌ನಂತಹ ಅಲ್ಲಾನ ಮುದ್ರೆ ಹೊಂದಿದ ಉಂಗುರವನ್ನು ಪಡೆಯಲಿ. ಬಾದಶಾಹನು ಯಾರು ಆಗುತ್ತಾನೆ ಹಾಗೂ ಬಾದಶಾಹತ್ವದ ಅರ್ಥವೇನೆಂಬುದನ್ನು ತಿಳಿದುಕೊಳ್ಳಲಿ ಎಂದು ಬಯಸಿದನು. ಇದೇ ಅನಾದಿ ಕಾಲದ ಕಾರ್ಯನೀತಿಗೆ ಅನುಸಾರವಾಗಿ ೧೦೫೩ ಹಿಜ್ರಿಯಲ್ಲಿ ಔನ್ನತ್ಯ ಮತ್ತು ಮಹಾಘನತೆಯ ಜಗತ್ತಿನ ಬುದ್ಧಿವಂತರಿಗೆ ಆಶ್ಚರ್ಯಚಕಿತಗೊಳಿಸುವ ಆತ್ಮಚರಿತ್ರೆಯನ್ನು ವಿವರವಾಗಿ ರಚಿಸಲಾಯಿತು.

ಹಜರತ್ ಬಾದಶಾಹ ಗಾಜಿಯು ಅಂತಿಮ ಪ್ರವಾದಿಯ ಪ್ರಕಾಶಮಾನ ಧರ್ಮಕ್ಕೆ ಶಕ್ತಿ ನೀಡುವ ಹಾಗೂ ಅದನ್ನು ಉನ್ನತೀಕರಣಗೊಳಿಸುವ ಆಕಾಂಕ್ಷೆಯನ್ನು ಹೊಂದಿದಾಗ; ಹಜರತ್ ಅಲಿಯ ಖಡ್ಗದಂತಹ ಲಕ್ಷಣ ಹೊಂದಿದ ಖಡ್ಗದ ಹೊಡೆತದಿಂದ ಕರ್ನಾಟಕ ಮತ್ತು ಮಲೆನಾಡಿನ ಸರ್ವಪ್ರದೇಶಗಳನ್ನು ತನ್ನ ವಶಕ್ಕೆ ಪಡೆದು; ಕತ್ತಲೆಯಲ್ಲಿ ವಾಸಿಸುವಂತಹ ನಾಸ್ತಿಕರನ್ನು ನಾಶಗೊಳಿಸಿದನು. ದೇವರ ಈ ಸಂದೇಶ ಹಾಗೂ ದೇವರ ಪರವಾಗಿ ವ್ಯಕ್ತವಾದ ಮಾತುಗಳನ್ನು; ಈ ರೀತಿಯಲ್ಲಿ ಬರೆಯಬೇಕಾಗುತ್ತದೆ.

ಕರ್ನಾಟಕ ಮತ್ತು ಮಲೆನಾಡಿನ ಎಲ್ಲ ಪ್ರದೇಶಗಳಲ್ಲಿ ಅನೇಕ ಮಸೀದೆ ಹಾಗೂ ಖಾನ್‌ಖಾಹ್ (ಧರ್ಮಶಾಲೆ)ಗಳು; ಪ್ರವಾದಿಯ ಧರ್ಮದ 'ಶಾಂತಿಧಾಮ' ಆಗಿವೆಯೆಂಬ ಮಾತು, ಬಾದಶಾಹನ ಕಿವಿಗೆ ತಲುಪಿತು. ವಶಕ್ಕೆ ತೆಗೆದುಕೊಳ್ಳಲಾಗಿರ

ದಂತಹ ಕೆಲವು ಭದ್ರವಾದ ಕೋಟೆಗಳನ್ನು ಬಾದಶಾಹ ಗಾಜಿಯ ನಿರ್ದೇಶನದಿಂದ ಗೆಲ್ಲಬೇಕಾಗಿದೆ. ಯಾವುದೇ ಕೋಟೆಯು ದೃಢತೆ ಮತ್ತು ಔನ್ನತ್ಯದಲ್ಲಿ ತಕ್ರಿಯ ಸುದೃಢವಾದ ಕೋಟೆಗೆ ಸಮಾನವಾಗಿಲ್ಲ. ಅದರ ತಳಹದಿಯ ದೃಢತೆಯನ್ನು 'ಖಾರೂನ್' (ಪ್ರವಾದಿ ಮೂಸಾನ ತಂದೆಯ ಸೋದರನ ಪುತ್ರ ಹಾಗೂ ಮಹಾನ್ ಧನಿಕ)ನ ತಲೆಯ ಮೇಲೆ ಮಣ್ಣನ್ನು ಜರಡಿ ಮಾಡುತ್ತದೆ/ಸೋಸುತ್ತದೆ. ಅದರ ಆಕಾಶದಂತಹ ಶಿಖರದ ಕಮಾನುಗಳು ಸೂರ್ಯನನ್ನು ತಮ್ಮೊಂದಿಗೆ ಅಂಟಿಸಿ ಕೊಳ್ಳುತ್ತವೆ.

'ಬಾದಶಾಹನ ವೈರಿಗಳು ಗದೆಯನ್ನು ಎಸೆದಾಗ, ಅಪಶಕುನದ ಮಣ್ಣಿನಲ್ಲಿ ಪತನವಾಗುವಷ್ಟು ಅದು ಉನ್ನತವಾಗಿದೆ, ಕಣ್ಣಿಗೆ ಕಾಣದಂತಹ ಚುಕ್ಕಿಗಳಂತೆ ತುಣುಕುಗಳಾಗುತ್ತವೆ, ಅವುಗಳಿಗೆ ಏನಾಗುತ್ತದೆಂಬುದು, ಮಾನವನಿಗೆ ತಿಳಿಯುವುದಿಲ್ಲ'.

ಈ ಸಂಗತಿಯನ್ನು ಅರಿತು, ಹಜರತ್ ಬಾದಶಾಹ ಗಾಜಿಯು, ವಿಜಯ ಸಂಪಾದನೆಯ ಸಾಮರ್ಥ್ಯವನ್ನು ಸಜ್ಜುಗೊಳಿಸಿದನು. ಮೊದಲಿನಿಂದಲೂ ಸೇನಾಪತಿಯ ಸ್ಥಾನದಲ್ಲಿ ನೇಮಕಗೊಂಡಿದ್ದ ರುಸ್ತುಮೆ ಜಮಾನನ್ನು ಬಾದಶಾಹನು ತಕ್ರಿ ಕೋಟೆಯನ್ನು ಜಯಿಸಲು ಆಜ್ಞಾಪಿಸಿದನು. ಈ ಕೋಟೆಯನ್ನು ಕುರಿತು ವಿವರಿಸಲಾದ ಗಾಂಭೀರ್ಯ ಮತ್ತು ಕಾಠಿಣ್ಯದ ಗೊರತಾಗಿಯೂ ಸಹ ಎಲ್ಲ ಸಮರ್ಥಕರು ಹಾಗೂ ಸಹಾಯ ಪಡೆದ ಮಂತ್ರಿಗಳು ಮತ್ತು ನಾಯಕರೊಂದಿಗೆ ಜೊತೆಗೂಡಿ ರುಸ್ತುಮೆ ಜಮಾನು ತಕ್ರಿ ಕೋಟೆಯ ಗೆಲುವಿನ ಬಗೆಗೆ; ಗಾಬರಿಗೊಂಡು, ಚಿಂತಾಕ್ರಾಂತನಾಗಿದ್ದನು. ಒಳಗೆ ಪ್ರವೇಶಿಸಿದ ನಂತರ ಹೊರಗೆ ಬರಲು ಅಸಾಧ್ಯವಾದಂತಹ ವೃಕ್ಷಗಳಿಂದ ಆವೃತವಾದ ಅರಣ್ಯಗಳು ಮತ್ತು ಗಂಡಾಂತರಕಾರಿ ಪರ್ವತಗಳನ್ನು ಕುರಿತು, ಅವನು ಯೋಚಿಸುತ್ತಿದ್ದನು.

ಇಂತಹ ವಠಾರಕ್ಕೆ ಮುತ್ತಿಗೆ ಹಾಕಲು ಎಂತಹ ಕ್ರಮವನ್ನು ಕೈಕೊಳ್ಳಬೇಕೆಂಬ ಬಗೆಗೆ, ಅಂತಿಮವಾಗಿ ಕನಕನಾಯಕನ ಮಾರ್ಗದರ್ಶನದ ಮೇರೆಗೆ ಆ ಪ್ರದೇಶದ ಭೂ-ಮಾಲೀಕರಲ್ಲಿ ಓರ್ವಪ್ರಮುಖ ಜಮೀನ್ದಾರನಿಂದ ಆ ಮಾರ್ಗದ ಏರಿಳಿತಗಳ ಮಾಹಿತಿಯನ್ನು ಪಡೆದುಕೊಂಡು ರುಸ್ತುಮೆ ಜಮಾನು ಶೀಘ್ರವಾಗಿ ಅಂತರವನ್ನು ಕ್ರಮಿಸಿ, ತಕ್ರಿಯ ದ್ವಾರವನ್ನು ತಲುಪಿದನು. ಕೋಟೆಯೊಳಗಿನವರಿಗೆ ಈ ಸಮಾಚಾರ ತಿಳಿಯುವ ಮೊದಲು ವಿಜಯಿ ಸೈನ್ಯದ ವೀರರು ನಾಲ್ಕೂ ದಿಕ್ಕುಗಳಿಂದ ಕೋಟೆಯ ಮೇಲೆ ದಾಳಿ ಮಾಡಿ, ಅದನ್ನು ವಶಪಡಿಸಿಕೊಂಡರು. ಈ ಬಾರಿ ರುಸ್ತುಮೆ ಜಮಾನು ಸ್ಥಿರತೆ ಮತ್ತು ಸ್ಥೈರ್ಯದ ದೃಷ್ಟಿಯಿಂದ ಮೊದಲಿನ ಪ್ರಯತ್ನಗಳಿಗಿಂತಲೂ ಸಾವಿರಾರು ಪಟ್ಟು ಹೆಚ್ಚಿನ ಶಕ್ತಿಯನ್ನು ವಿನಿಯೋಗಿಸಿದನು. ಈ ಘಟನೆಯ ನಂತರದ ಅವಧಿಯಲ್ಲಿ ಹಜರತ್ ಬಾದಶಾಹ ಗಾಜಿಯ ಪರವಾಗಿ, ತಕ್ರಿ ಕೋಟೆಯ ಹವಾಲ್ದಾರಿಕೆಗಾಗಿ

ನೇಮುಕವಾಗಿದ್ದ ಅಜ್ಞಾತ ವ್ಯಕ್ತಿಗಳು ಅಜಾಕರೂಕತೆಯ ಸಾರಾಯಿಯಲ್ಲಿ ಪ್ರಮತ್ತರಾಗಿದ್ದರು. ಮತ್ತು ವಠಾರದ ರಕ್ಷಣಾ ಕಾರ್ಯವನ್ನು ನಿರ್ಲಕ್ಷಿಸಿ, ಹಾಸ್ಯ-ವಿನೋದದಲ್ಲಿ ಮಗ್ನರಾಗಿದ್ದರು.

'ಅವರ ಮೆದುಳುಗಳು ಪ್ರಮತ್ತತೆಯ ಸಂಕಟದಲ್ಲಿ ಸಿಲುಕಿಕೊಂಡಿದ್ದವು, ಅವರ ಕಿವಿಗಳಲ್ಲಿ ಅಜಾಗರೂಕತೆಯ ಅರಳಿ ತುಂಬಿತ್ತು. ಆಲಸ್ಯವು ಅವರನ್ನು ಸ್ವಾಧೀನಪಡಿಸಿಕೊಂಡಾಗ, ಪರಿಶ್ರಮದಿಂದ ಅವರ ಹಣೆಯ ಮೇಲೆ ಬೆವರು ಸುರಿಯುತ್ತಿತ್ತು, ಆಕಾಶವು ಪ್ರತಿಯೊಬ್ಬ ವಚನಭ್ರಷ್ಟನಂತೆ ಅವರೊಂದಿಗೂ ಸಹ ದ್ವಂದ್ವ ಬಣ್ಣ ತೋರಿಸಿತು, ಅವರ ತಲೆಯ ಮೇಲಿನ ಹೂಗಳೂ ಸಹ ಕಲ್ಲಿನ ರಾಶಿ ಆಗುತ್ತಿದ್ದವು'.

ಇದೇ ಕಾರಣದಿಂದ ಆ ಭೂಮಿಯ ವಾರಸುದಾರರಾಗಿದ್ದ ಹಾಗೂ ಅಡಗುವ ಸ್ಥಳಗಳಿಂದ ನಿಕಟ ಸಂಪರ್ಕ ಹೊಂದಿದ್ದ ಕಠಿಣ ಹೃದಯಿಗಳಾದ ನಾಸ್ತಿಕರನ್ನು ಜೊತೆಗೆ ಕರೆದುಕೊಂಡು, ಸಪೂಪ್ ನಾಯಕನು ಅವಕಾಶಕ್ಕಾಗಿ ಕಾಯ್ದುಕುಳಿತು, ಕೋಟೆಯನ್ನು ಸ್ವಾಧೀನಪಡಿಸಿಕೊಂಡನು. ಯುದ್ಧದ ಶಸ್ತ್ರಾಸ್ತ್ರಗಳನ್ನು ಪಡೆಯಲು ಮತ್ತು ಖಜಾನೆ/ಉಗ್ರಾಣವನ್ನು ಸಂಗ್ರಹಿಸುವ ಕಾರ್ಯದಲ್ಲಿ ಯಾವುದೇ ನಿರ್ಲಕ್ಷ್ಯ ಮಾಡಲಿಲ್ಲ.

ಕೋಟೆಯನ್ನು ಸುದೃಢ ಮತ್ತು ಉನ್ನತಗೊಳಿಸಲಾಗಿದೆ. ಒಂದು ವೇಳೆ ಕಾಲದ ಮುಖ್ಯ ಠಾಣೆದಾರನು ಕೋಟೆಯ ಸುಭದ್ರವಾದ ಗೋಪುರವನ್ನು ಭಗ್ನಗೊಳಿಸುವ ಉದ್ದೇಶದಿಂದ ಖಾಫ್‌ಪರ್ವದ ಶಿಖರವನ್ನು ಕವಟೆಯಲ್ಲಿ (ಕಲ್ಲೆಸೆಯುವ ಸಾಧನ) ಇಟ್ಟು, ತಿರುಗುತ್ತಿರುವ ಆಕಾಶಕ್ಕೆ ಕೊಟ್ಟರೆ, ಕಣ್ಣುಗಳಿಗೆ ಮಕ್ಕಳ ಆಟದ ಮೈದಾನದ ತಕ್ಕಡಿಯಂತೆ ಕಂಡುಬರುತ್ತದೆ.

'ಈ ರೀತಿ ಕೋಟೆಯು ಕೈತಪ್ಪಿ ಹೋಯಿತು. ಎಲ್ಲರ ಬುದ್ಧಿವಂತಿಕೆಯು, ಪೈಪೋಟಿಯಲ್ಲಿ ವಿಫಲವಾಯಿತು. ಜಗದಾದ್ಯಂತ ಇದರ ಪ್ರಚಾರವಾಯಿತು. ಆಕಾಶಕ್ಕೂ ಸಹ, ಈ ಸಮಾಚಾರ ತಲುಪಿತು'.

ಈ ಘಟನೆಯಿಂದ ಕಾರ್ಯನೀತಿಯ ಮೌಲ್ಯಮಾಪನ ಮಾಡುವಂತಹ ಎಲ್ಲ ಬುದ್ಧಿವಂತರು ಚಿಂತಾಕ್ರಾಂತರಾದರು. ಕಗ್ಗೊಲೆ ಹಾಗೂ ಯುದ್ಧದ ಒತ್ತಡದ ಸಾಮರ್ಥ್ಯದಿಂದ ರಕ್ತದಾಹಿ ನಾಸ್ತಿಕರ ಕೈಗಳಿಂದ ತಕ್ರಿ ಕೋಟೆಯನ್ನು ಎರಡನೆಯ ಸಲ ಜಯಿಸುವ ಶಕ್ತಿಯು ಇತರ ಯಾವುದೇ ಮಹಾ ಅದೃಷ್ಟಶಾಲಿ ಅರಸನಿಗೆ ಇಲ್ಲ ಮತ್ತು ಇರಲಿಲ್ಲವೆಂಬ ನಿರ್ಣಯಕ್ಕೆ ಅವರು ಸಂಕೋಚದ ಮೊಣಕಾಲಿನ ಮೇಲೆ ಯೋಚನೆಯ ಶಿರವಿಟ್ಟು ತಲುಪಿದರು. ಈ ಸಂಗತಿಯನ್ನು ಹಜರತ್ ಬಾದಶಾಹ ಗಾಜಿಯು ಅರಿತಾಗ; ಆತನ ಧರ್ಮದ ಗೌರವವು ಅವಮಾನದ ಸೆರಗನ್ನು ಸ್ಪರ್ಶಿಸಿತು. ಪ್ರತಿಯೊಂದು ಹನಿಯು ಎಲ್ಲಕ್ಕಿಂತಲೂ ತೀವ್ರವೇದನೆಯ ಬುಗ್ಗೆಯನ್ನು

ತೆರೆಯುವಂತಹ ಬಾದಶಾಹ ಗಾಜಿಯ ಕ್ರೋಧದ ಸಾಗರವು, ಅತ್ಯಂತ ಕೋಪಗ್ರಸ್ತವಾಯಿತು. ಕ್ರೋಧ ಮತ್ತು ತೀವ್ರ ವೇದನೆಯ ಬಿರುಗಾಳಿಯ ತರಂಗಗಳಿಂದ ಸೂರ್ಯನ ಅಗ್ನಿಯ ಚೆಂಡು ಒಂಬತ್ತನೆಯ ಆಕಾಶದ ನಾವೆಯ ನೌಕಾಪಟ ಆಗಿದೆ.

'ಅವನ ಕ್ರೋಧದ ವ್ಯಾಪ್ತಿಯು ಇಷ್ಟೊಂದು ಶಕ್ತಿಯಿಂದ ಆವರಿಸಿತು. ಆಕಾಶವು ಸಾರಾಯಿಯ ಮಡಿಕೆಯಂತೆ, ಕೋಲಾಹಲದಿಂದ ತುಂಬಿತು. ವಿಜಯಿ ಬಾದಶಾಹನು ಯುದ್ಧದ ಧ್ಯೇಯದಿಂದ ಉಗ್ರಸ್ವರೂಪದ ಸಾಗರದಂತೆ, ತನ್ನ ಸ್ಥಾನದಿಂದ ಮೇಲೆದ್ದು ಬಂದನು'.

ಬಾದಶಾಹನ ವೈಭವ-ಅಂತಸ್ತಿನ ಅಡಗುವ ಸ್ಥಳದಿಂದ ಪಂಕ್ತಿಗಳನ್ನು ಭೇದಿಸುವುವರು ಮತ್ತು ರುಸ್ತುಮನ ವಂಶದ ಮೊಸಳೆಗಳಂತೆ ಆಕ್ರಮಣ ಮಾಡುವ ಪರಾಕ್ರಮಿಗಳ ತಂಡವನ್ನು ಜಗತ್ತಿಗೆ ಆಜ್ಞೆ ಮಾಡುವುವನ ಆಜ್ಞೆಯಿಂದ ಕರೆಕಳುಹಿಸಲಾಯಿತು. ಎಲ್ಲ ವಿಜಯಿ ಮಂತ್ರಿಗಳು ಹಾಗೂ ನಾಯಕರು ಯುದ್ಧದ ಅನುಭವಿಕ ವೀರರೊಂದಿಗೆ ಮೊಹಮ್ಮದನಂತಹ ಸ್ವಭಾವ ಹೊಂದಿದ ಬಾದಶಾಹ ಗಾಜಿಯ ವಿಜಯದ ಸೂಕ್ತಗಳುಳ್ಳ ಧ್ವಜಗಳ ನೆರಳಿನಲ್ಲಿ ಅಭಿಮಾನದಿಂದ, ಔನ್ನತ್ಯದವರೆಗೆ ತಲೆ ಎತ್ತಿದರು.

ಆರು ಗಂಟೆಗೆ, ಜಿಖೈದಾ ತಿಂಗಳಿನ ಚಂದ್ರದರ್ಶನವಾದ ನಂತರ ಬುಧುವಾರ ಮಧ್ಯರಾತ್ರಿಯಲ್ಲಿ ಜಗತ್ತಿನ ಮಾಪನ ಮಾಡುವ ಕುದುರೆಯ ಕಡಿವಾಣವನ್ನು, ರಾಜಧಾನಿ ಮಹಮ್ಮದಪುರದಿಂದ ಮಲೆನಾಡಿನ ಪ್ರದೇಶದೆಡೆಗೆ ತಿರುಗಿಸಲಾಯಿತು.

'ಕುದುರೆಗಳ ಗೊರಸುಗಳಿಂದ ಭೂಮಿಯ ವಿಸ್ತಾರವು, ಉಂಗುರಕ್ಕೆ ಕಟ್ಟುವ ಅಮೌಲ್ಯವಾದ ಹರಳಿನಂತೆ ಮುದ್ರೆಯಿಂದ ತುಂಬಿತು. ತಲೆ ಎತ್ತಿದ ಸೈನಿಕರಿಗೆ ಗುರಾಣಿಯಿಂದ, ನೇರವಾಗಿ ಇನ್ನೊಂದು ಉನ್ನತ ದರ್ಜೆಯನ್ನು ನೀಡಲಾಯಿತು. ಸೂರ್ಯನ ಧ್ವಜದ ವೀರರು, ಜಗತ್ತಿನ ರಾಜನೊಂದಿಗೆ ಅಶ್ವಾರೋಹಿಗಳಾಗಿ, ತಲೆಬಾಗಿಸಿ, ಮುನ್ನಡೆದರು. ಆಕಾಶಕ್ಕೂ ಸಹ, ಗೌರವ ನೀಡಿಕೆಯನ್ನು ಕಲಿಸಿದರು'.

ಪರ್ವತದಂತಹ ಆತುರದ ಅವಿವೇಕಿಗಳ ಕೋಲಾಹಲ ಮತ್ತು ಕ್ರೋಧಗ್ರಸ್ತವಾದ ಹುಲಿಗಳ ಓಡಾಟದಿಂದ ಕಠಿಣ ಹೃದಯಿಗಳಾದ ನಾಸ್ತಿಕರ ಹೆಜ್ಜೆಗಳು ಅಸ್ಥಿರವಾದವು. ಮೈದಾನದಲ್ಲಿ ತೀಕ್ಷ್ಣಗತಿಯಿಂದ ಓಡುವ ಕುದುರೆಗಳ ಗೊರಸುಗಳ ಹೊಡೆತವು; ದಾರಿ ತಪ್ಪಿಸುವ ಸ್ವಭಾವದ ಮರುಭೂಮಿಯಲ್ಲಿ ಅಲೆದಾಡುವುವರನ್ನು ಗಾಬರಿಗೊಳಿಸಿತು. ಕುರಾನಿನ ಒಂದು ಸೂಕ್ತದ ಪ್ರಕಾರ ಭೂಮಿಯ ಮೇಲೆ ಭೂಕಂಪನವಾಯಿತು. ಜಿಖೈದಾ ತಿಂಗಳಿನ ಹತ್ತನೆಯ ದಿನಾಂಕಕ್ಕೆ ಬಂಕಾಪುರದ ಮೈದಾನವು ವಿಜಯ-ಸಂಪನ್ನ ಸೈನಿಕರ ಅಪಾರ ಡೇರೆಗಳಿಂದ ತುಂಬಿತು.

ವಿಜಯದ ದೊಡ್ಡ ನಗಾರಿಯ ಧ್ವನಿಯು ಆಕಾಶದ ಔನ್ನತ್ಯವನ್ನು ತಲುಪಿತು. ನರಸಿಂಗನ ಶಬ್ದ ಮತ್ತು ಶಹನಾಯಿ ಬಾರಿಸುವ ಧ್ವನಿಯು ಉನ್ನತ ಸ್ಥಾನದ ದೇವಚರರ ಕಿವಿಗಳಿಗೆ ತಲುಪಿತು. ಅತಿ ವೇಗದ ಹೆಚ್ಚಳದಿಂದ ಭೂಮಿಯು ಕೃಪಣರಂತೆ ಸಂಕುಚಿತವಾಗಿ, ಅದು ತನ್ನ ಧೂಳಿಯ ಹಗ್ಗದ ಏಣಿಯ ಉರುಳಿನಿಂದ ತನ್ನನ್ನು ನೀಲಾಕಾಶದ ಛಾವಣಿಯ ಮೇಲೆ ಎಳೆದುಕೊಂಡಿತು. ಹಜರತ್ ಬಾದಶಾಹ ಗಾಜಿಯ ಪ್ರತಾಪದ ಅವತರಣದ ಪ್ರಚಾರದಿಂದ, ಅವಿಶ್ವಾಸಿಕರಾದ ನಾಸ್ತಿಕರ ಪ್ರದೇಶದಲ್ಲಿ ಕ್ರಾಂತಿ ಉಂಟಾಯಿತು. ಈ ನಗರವಾಸಿಗಳು ಭಯ–ಭೀತರಾಗಿ ಒಮ್ಮಿಂದೊಮ್ಮೆಲೇ, ಜನಿವಾರದ ಸುರುಳಿ ಹಾವಿನಂತಹ ಬೀದಿಗಳ ಮೂಲಕ ಪಲಾಯನ ಮಾಡಲಾರಂಭಿಸಿದರು. ಕೋಟೆಯ ಅಧಿಕಾರ–ಅಹಂಕಾರದಲ್ಲಿ ಮುಳುಗಿದ್ದ ಚರಿತ್ರಹೀನನಾದ ಸಪೂಪ್ ನಾಯಕನು ವೈರತ್ವದ ಬೆಂಕಿಯನ್ನು ಹೆಚ್ಚಿಸಿ, ವಿರೋಧವನ್ನು ಆರಂಭಿಸಿದ್ದನು. ಅವನು ಊಹಾನಾಶಕ್ತಿ ಮತ್ತು ಹೆದರಿಕೆಯನ್ನು ಸಹಿಸಲಾಗದೇ ವಠಾರದಲ್ಲಿ ಅಡಗಿಕೊಂಡು ಕೇವಲ ತಿರುವು–ಮುರುವು ಆಗುವ ತಿಳುವಳಿಕೆಯನ್ನು ಹೊಂದಿದ್ದನು.

ಅವನು ಕೋಟೆಯನ್ನು ತನ್ನ ಸ್ವಾಧೀನದಲ್ಲಿದ್ದ ಅಧಿಕಾರಿಗೆ ಕೊಟ್ಟು ಆಸುಪಾಸಿನ ಭಾಗಗಳನ್ನು ಸುದೃಢಗೊಳಿಸಿಕೊಂಡಿದ್ದನು. ಗುಲ್ಲು–ಗಲಾಟೆ ಮತ್ತು ದಂಗೆಯನ್ನುಂಟು ಮಾಡಲು, ಚರಿತ್ರಹೀನರಾದ ನಾಸ್ತಿಕರ ಸಮೂಹದೊಂದಿಗೆ ಹಿಂಭಾಗದಿಂದ ವಠಾರದ ಹೊರಗೆ ಓಡಿ ಹೋದನು. ಅವನು ದಾರಿಯ ಏರಿಳಿತ ಹಾಗೂ ಭಯಾನಕ ಗುಹೆಗಳನ್ನು ಇಂದ್ರಜಾಲದ ವಿಚಿತ್ರಪ್ರದರ್ಶನದ ಸ್ಥಳಗಳನ್ನಾಗಿ ಮಾಡಿದನು. ಪರ್ವತದ ಪ್ರತಿಯೊಂದು ಕಣಿವೆಯ ತುದಿಯಲ್ಲಿ ಅವನು ಸಿಡಿಲಿನಂತಹ ವೇಗದ ಕಾಲ್ದಳ ಸೈನಿಕರನ್ನು ವೃದ್ಧ ವೃಕ್ಷಗಳ ಟೊಂಗೆಗಳ ನಡುವೆ ಅಡಗಿಸಿ, ಕುಳ್ಳಿರಿಸಿದ್ದನು. ಅವರ ಬಂದೂಕುಗಳ ಪ್ರಾಣಹರಣಕಾರಿ ಗುಂಡುಗಳು ಯುದ್ಧ ಮಾಡುವುವರ ಮೇಲೆ ಬೀಳುತ್ತಿದ್ದವು.

'ಪರ್ವತ ಮತ್ತು ಬಯಲು ಪ್ರದೇಶಗದಲ್ಲಿ ನಾಸ್ತಿಕರು ಹೆಚ್ಚಾಗಿ ಪ್ರತ್ಯಕ್ಷವಾದರು. ವೃಕ್ಷಗಳ ಮೇಲೆ ಟೊಂಗೆಗಳ ಬದಲು ಬೆಂಕಿ ಸುರಿಸುವ ಬಂದೂಕುಗಳಿದ್ದವು. ಬೆಂಕಿಯ ಉಷ್ಣತೆಯಿಂದ, ಗಾಳಿಯು ಬಿಸಿಯಾಯಿತು. ಆಕಾಶದ ಪಕ್ಷಿಯು ಹೊಸ ಚಂದ್ರನಿಂದ ತನ್ನ ಚುಂಚು ತೆರೆಯಿತು'.

ಚರಿತ್ರಹೀನನಾದ ಸಪೂಪ್‌ನಾಯಕನ ಪಿತೂರಿ ಪ್ರೇರೇಪಿಸುವ ಸಂಗತಿಯು; ಹಜರತ್ ಬಾದಶಾಹ ಗಾಜಿಗೆ ತಿಳಿದಾಗ, ಈ ಮಹಾತ್ಕಾರ್ಯವನ್ನು ಜಯಿಸಲು, ಸಾಮ್ರಾಜ್ಯದ ಕೇಂದ್ರ ಬಿಂದು ಎನಿಸಿದ ನವಾಬ್‌ಖಾನ್‌ಬಾಬಾ ಮತ್ತು ಸಾಮ್ರಾಜ್ಯದ ಸದಸ್ಯನಾದ ಮುಜಫರುದ್ದೀನ ಖಾನ್‌ಖಾನಾನಿಗೆ 'ಸೇನಾಪತಿಯ ಗೌರವ ವಸ್ತ್ರ'

ನೀಡಿ; ಇಪ್ಪತ್ತು ಸಾವಿರ ಶಸ್ತ್ರಾಸ್ತ್ರಧಾರಿ, ತಜ್ಞರಾದ ಸರದಾರರು ಹಾಗೂ ನಾಯಕರನ್ನು ನೇಮಿಸಿದನು. ಅವರಲ್ಲಿ ಪ್ರತಿಯೊಬ್ಬರು ಕಬ್ಬಿಣದ ಟೊಪ್ಪಿಗೆಯಲ್ಲಿ ರಂಧ್ರ ಕೊರೆಯುವ ಮತ್ತು ಮಂಗಳ ಗ್ರಹದಂತೆ ಭಯಾನಕ ಆಗಿದ್ದರು.

ವಿಜಯ–ಸಂಪನ್ನ ಸೈನ್ಯವು ತಕ್ರಿ ಕೋಟೆಯ ಸಮೀಪ ತಲುಪಿದಾಗ ವಿಜಯಿ ಸೈನಿಕರು ಆಕ್ರಮಣ ಹಾಗೂ ಸುಲಿಗೆ ಮಾಡಲಾರಂಭಿಸಿದರು. ವೈರಿಗಳ ಸೈನ್ಯದ ಸುಲಿಗೆ ಮಾಡುವುವರು ದಾರಿ ತಪ್ಪಿಸಿ; ಧರ್ಮದ ವೀರರ ಮಾರ್ಗವನ್ನು ಮುಚ್ಚಿದರು. ಅರ್ಧಕಣ್ಣು ಮುಚ್ಚಿ ಕಣ್ಣು ತೆರೆಯುವುದರೊಳಗೆ ನಿರ್ಲಜ್ಜ ಬಂದೂಕುಗಳಿಂದ ಸ್ವಯಂ ಆಕ್ರಮಣ ಮಾಡಿ, ಹುಲಿಯಂತಹ ವೀರರ ಹೃದಯಗಳನ್ನು ರಣರಂಗದಿಂದ ವಿಚಲಿತಗೊಳಿಸಿ, ಅವರನ್ನು ದಮನ ಮಾಡಲು ಹಾಗೂ ಚದುರಿಸಲು ಆರಂಭಿಸಿದರು. ಅವರು ಸಾಗರ ಪಟ್ಟಣದ ಸಮೀಪ ತಲುಪಿದಾಗ, ಅಲ್ಲಿಂದ ತಕ್ರಿ ಕೋಟೆಯು ಮೂರುಮೈಲು ಅಂತರದಲ್ಲಿತ್ತು. ವಿಜಯಿ ಸರದಾರ್ ಖಾನ್‌ಖಾನಾನು ಕಾಲ್ದಳ ಮತ್ತು ಕುದುರೆ ಸವಾರರ ಸೈನ್ಯವನ್ನು ಸಜ್ಜುಗೊಳಿಸಿ, ಚುರುಕು ಹಾಗೂ ಶೌರ್ಯದ ಕುದುರೆಯನ್ನೇರಿ ಅಲ್ಲಿಂದ ಓಡಿಸಿದನು.

ದ್ವೇಷ ಪ್ರವೃತ್ತಿಯ ನಾಸ್ತಿಕರು ಬಂದೂಕುಗಳನ್ನು ಚಲಾಯಿಸಿ ಉಕ್ಕಿನ ಕವಚ ಧರಿಸಿದ ವೀರರ ಎದೆಗಳನ್ನು ಚರ್ಮದ ಚೀಲಗಳನ್ನಾಗಿ ಮಾಡಲಾರಂಭಿಸಿದರು. ಖಾನ್‌ಖಾನಾನು ಅಪಾರ ಸಾಹಸದಿಂದ ಯಾವ ಹೆದರಿಕೆಯೂ ಇಲ್ಲದೇ, ಈ ಪ್ರಳಯದಂತಹ ಬಿರುಗಾಳಿಯ ಮಧ್ಯದಿಂದ ಮುನ್ನಡೆದು, ಸಾಗರದ ಕೋಟೆಯನ್ನು ತಲುಪಿದನು. ಊರಿನ ಗೋಡೆಯ ಪಕ್ಕದಲ್ಲಿ ಒಂದು ದೊಡ್ಡ ಕೆರೆ ಇತ್ತು. ಖಾನ್‌ಖಾನಾನು ಅರಣ್ಯದ ವೃಕ್ಷಗಳನ್ನು ಕಡಿದು, ಖುಲ್‌ಜುಮ್‌ದಂತಹ ವೈಭವದ ಕೆರೆಯನ್ನು 'ಉರುವಲು ಕಟ್ಟಿಗೆಯ ದಿನ್ನೆ' ಮಾಡಿದರು. ವಿಜಯ ಸಂಪನ್ನ ಸೈನ್ಯದ ಆತ್ಮಬಲಿದಾನ ಮಾಡುವ ಸೈನಿಕರು, ಖಾನ್‌ಖಾನಾನ ಧೈರ್ಯ ಮತ್ತು ಶೌರ್ಯವನ್ನು ಕಂಡು ಧೈರ್ಯದಿಂದ ವೃಕ್ಷಗಳ ಮೂಲಕ ಕೆರೆಯನ್ನು ದಾಟಲಾರಂಭಿಸಿದರು. ಒಬ್ಬರು ಇನ್ನೊಬ್ಬರ ಕೈಗಳನ್ನು ಹಿಡಿದು, ಕೆರೆಯ ಗೋಡೆಯ ಮೇಲಿಂದ ಊರೊಳಗೆ ಜಿಗಿದರು. ಚರಿತ್ರಹೀನರಾದ ನಾಸ್ತಿಕರ ಕೈಕಾಲುಗಳು ತಣ್ಣಗಾಗಿ ಭಯ–ಭೀತಿಯಿಂದ ಅವರು ಅರಣ್ಯದೆಡೆಗೆ ಓಡಲಾರಂಭಿಸಿದರು. ಅದೇ ದಿನ, ಸಣ್ಣ ಪಟ್ಟಣವಾದ ಸಾಗರವು ಉನ್ನತ ಸಾಮ್ರಾಜ್ಯದ ಅಧಿಕಾರಿಗಳ ವಶವಾಯಿತು.

ಈ ಹುಲಿಯಂತಹ ಸೈನಿಕರು ಸಾಯಂಕಾಲದ ಪ್ರಾರ್ಥನೆಯ ಸಮಯದಲ್ಲಿ ಮಿಂಚುವ ತಾರೆಗಳೊಂದಿಗೆ, ಪಾದರಸದಂತಹ ವಠಾರದ ವಿಜಯಿದ್ವಾರದ ಮುಂದೆ, ಆಕ್ರೋಶವನ್ನು ತೋರಿಸಲಾರಂಭಿಸಿದರು. ಎದುರಿಗೆ ಬೆಂಕಿಸುರಿಸುವ ಬಾಣಗಳ ಚಲನೆಯಿಂದ ಕಾಣುವಂತಹ ಆಕಾಶಗಂಗೆಯ ಎದೆಯ ಮೇಲೆ ಬಂದೂಕುಗಳನ್ನು

ಚಲಾಯಿಸಲಾರಂಭಿಸಿದರು. ಕುದುರೆಗಳ ಸವಾರರ ಸೈನ್ಯದ ಸರದಾರರ ಸ್ಥಾನ ನೀಡಲಾಗಿದ್ದ ಆ ವೀರರು ಕೋಟೆಯ ಅಧಿಕಾರಿಗಳಾದರು.

ಅವರು ಸಣ್ಣ ಪಟ್ಟಣದ ಅಂಗಡಿ ಸಾಲುಗಳನ್ನು ತಮ್ಮ ಗುರಾಣಿಗಳನ್ನಾಗಿ ಮಾಡಿಕೊಂಡು, ಮುಖವನ್ನು ವಠಾರದ ಬಾಗಿಲಿನ ಕಡೆಗೆ ತಿರುಗಿಸಿಕೊಂಡರು. ಮುಜಫರುದ್ದೀನ ಖಾನ್‌ಖಾನಾನು ವಠಾರದ ಎದುರಿಗೆ ಕಂದಕದ ದಂಡೆಯಲ್ಲಿ ಮೂರು ಮೈಲು ದೂರದವರೆಗೆ ತೀಕ್ಷ್ಣ ದೃಷ್ಟಿ ಹೊಂದಿದ ಕಾಲ್ದಳದ ಸೈನಿಕರನ್ನು ನೇಮಿಸಿದನು. ತೋಪು ಮತ್ತು ಬಂದೂಕಿನ ಮಳೆಯು ವಿಜಯ-ಸಂಪನ್ನ ಸೈನಿಕರ ಬೈತಲೆಯ ಮೇಲೆ ಜ್ವಾಲೆಗಳನ್ನು ಸುರಿಸಲಾರಂಭಿಸಿತು. ವಠಾರದ ಒಳಗೆ ಹಾಗೂ ಹೊರಗಿನಿಂದ ರಣರಂಗದ ಪ್ರಾಣ ಕರಗಿಸುವ ಬೆಂಕಿಯ ನಾಲಿಗೆಗಳು ಹರಡಲಾರಂಭಿಸಿದವು. ವಿಜಯದ ಪ್ರವೃತ್ತಿಯುಳ್ಳ ಪ್ರಾಣ ತ್ಯಾಗಮಾಡುವುವರು ಚದುರಂಗದಾಟದ ಮೈದಾನವೆಂದು ಭಾವಿಸಿ ರಕ್ತ ಸುರಿಸಲಾರಂಭಿಸಿದರು. ಬಂಡುಕೋರ ಖಡ್ಗವು ವೈರಿಗಳ ತಲೆಗಳನ್ನು ಪತನಗೊಳಿಸಲಾರಂಭಿಸಿತು. ಭಗ್ನಗೊಳಿಸಲಾದ ಎದೆಗಳ ತೆರೆದ ಬಾಯಿಯ ಗಾಯಗಳು, ಅದೃಷ್ಟದ ಅಡಗಿದ ರಹಸ್ಯದ ಪರದೆಯನ್ನು ತೆರೆದವು.

ಕ್ರೋಧಗ್ರಸ್ತರಾದ ಸೈನಿಕರ ರಕ್ತಸುರಿಸುವ ಭರ್ಚಿಗಳು ಆಕಾಶದ ಮೇಲೆ ಸ್ವಾತಿ ನಕ್ಷತ್ರದ ಎದೆಯನ್ನು ಅಗಿಯುವುವರೆಗೆ ತಲೆ ಎತ್ತಿದವು. ಪ್ರಾಣ ಹರಣಕಾರಕ ಯುದ್ಧದ ಆವೇಶವು ಅವರ ಎದೆಗಳ ಉಕ್ಕಿನ ಗುರಾಣಿಗಳನ್ನು ಜಾಜಿಕಾಯಿ ಮರದ ಕಟ್ಟಿಗೆಯಲ್ಲಿ ರಂಧ್ರಕೊರೆಯುವ ಆಯುಧದಂತೆ ಕತ್ತರಿಸಿತು. ರಣರಂಗದ ಹುಲಿಗಳಂತಹ ಸೈನಿಕರ ಘೋಷಣೆಗಳ ಬೆದರಿಕೆಯಿಂದ ಬಾಹು-ಬಂಧ ಧರಿಸಿದ ಆಕಾಶವು ಪ್ರಾತಃಕಾಲದ ಬೆಳಕಿನ ಶುಭ್ರತೆಯಿಂದ ರಣರಂಗದ ಭೂಮಿಯ ಮೇಲೆ ಮೂರ್ಛೆ ಹೊಂದಿ, 'ಅಪಸ್ಮಾರ' ರೋಗದಿಂದ ಭೂಮಿಯ ಮೇಲೆ ಪತನವಾದ ರೋಗಿಯ ಮುಖದಲ್ಲಿ ನೊರೆಯು ಪರದೆಯನ್ನು ಕಟ್ಟುವಂತೆ ಕೆಳಗೆ ಬಿದ್ದಿತು.

ಗಾಳಿಯಲ್ಲಿ ಚಲಿಸುವಂತಹ ಭರ್ಚಿಗಳ ತುದಿಗಳಿಂದ ಸೂರ್ಯನ ಕಿರಣಗಳು ಶಸ್ತ್ರಸಲಾಕಿ ಹಚ್ಚಲಾದ ನರಗಳಂತೆ ರಕ್ತವನ್ನು ತೊಟ್ಟಿಕ್ಕಿಸುತ್ತಿದ್ದವು. ಬಿಲ್ಲುಗಳನ್ನು ಹಿಡಿದ ಸೈನಿಕರು ಆಕಾಶದ ಮೇಲೆ ಎತ್ತಿನ ಕೊಂಬಿನ ವರ್ತುಳವನ್ನು ಸ್ವಚ್ಛಗೊಳಿಸಿ, ಬೆರಳಿನ ಕವಚದಂತೆ ಅದರಲ್ಲಿ ಪೂರ್ಣವಾದ ರಂಧ್ರವನ್ನು ಕೊರೆಯುತ್ತಾರೆ. ಅತಿ ವೇಗದಿಂದ ಚಲಿಸುವ ಯುದ್ಧದ ಬಾಣಗಳು ವೀರರ ಮಧ್ಯೆ ಕಂಡುಬರುವ ನೈಜತೆಯ ದೆಸೆಯಿಂದ ಅಪಕೀರ್ತಿ ಹೊಂದಿದ್ದವು. ಕವಚದ ವರ್ತುಳವನ್ನು ಸಂಪೂರ್ಣ ಉಂಗುರವನ್ನಾಗಿ ಯುದ್ಧದ ವಿಜಯ ಮತ್ತು ಯಶಸ್ಸಿಗೆ ಬಾಣದ ತುದಿಗಳು ಕಾರಣವಾಗಿವೆ. ಅಪಜಯ ಹೊಂದಿದ ವೈರಿಗಳಿಗೆ ವಿರೋಧಿಸುವಂತಹ ಶಕ್ತಿ ಇರಲಿಲ್ಲ. ಅವರು ಏಳುತ್ತ-

ಬೀಳುತ್ತ ವತಾರದೊಳಗೆ ಓಡಿ ಹೋಗಿ, ಕೋಟೆಯ ದ್ವಾರವನ್ನು ಭದ್ರವಾಗಿ ಮುಚ್ಚಿ, ತೋಪು ಹಾಗೂ ಬಂದೂಕುಗಳಿಂದ ದಾಳಿ ಮಾಡಲಾರಂಭಿಸಿದರು. ದೃಢವಾದ ಹೆಜ್ಜೆಯುಳ್ಳವರು ಶಕ್ತಿಯ ಅಂದಾಜು ಮಾಡಿ, ವಿಳಂಬ ಮಾಡದೇ ಬಿಲ್ಲುಗಾರಿಕೆಯನ್ನು ಆರಂಭಿಸಿ; ವತಾರದ ಬಂಡುಕೋರರನ್ನು ವಿನಾಶಕ್ಕೆ ಗುರಿಪಡಿಸಿದರು.

ಬಹುರೂಪಿ ಆಕಾಶವನ್ನು ಬಾಣಗಳ ಕಿಲಿಬಿನ ಬಣ್ಣದ ಬತ್ತಳಿಕೆಯು; ನಕ್ಷತ್ರಗಳ ರಾಜನ ಟೊಂಕದ ಮೇಲೆ ಹೋಲಿಯಿತು. ಸಿಡಿಮದ್ದಿನ ಉರಿಯುವ ಡಬ್ಬೆಗಳನ್ನು ರಕ್ತದಾಹಿ ನಾಸ್ತಿಕರು ವತಾರದ ಮೇಲಿಂದ ಪ್ರತಿಕ್ಷಣ ಎಸೆಯುತ್ತಿದ್ದರು ಮತ್ತು ಮಾಣಿಕ್ಯವರ್ಣದ ಸಾರಾಯಿಯ ಮಡಿಕೆಯೆಂದು ಭಾವಿಸಿ; ಅದರ ಮೂಲವನ್ನು ತಲುಪಲು ಆರಂಭಿಸಿದರು.

'ಎಲ್ಲರ ತಲೆಗಳ ಮೇಲೆ ಗಾಯಗಳುಂಟಾದವು, ವಿಜಯದ ಸಾರಾಯಿ ಅಂಗಡಿಯಲ್ಲಿ ಬಟ್ಟಲುಗಳು ಡಿಕ್ಕಿ ಹೊಡೆದವು, ಸೂರ್ಯನು ಅಣುಗಳ ಹಾಗೆ ತುಂಡು ತುಂಡಾಗುವಂತೆ, ಯುದ್ಧ ಮಾಡುವವರ ಖಡ್ಗಗಳು ತೀಕ್ಷ್ಣವಾದವು. ರಣರಂಗದ ಬೆಂಕಿಯ ಉಷ್ಣತೆಯಿಂದ, ಭೂಮಿಯು ಜ್ವಾಲೆಗಳಿಂದ ಮತ್ತು ಆಕಾಶವು ಬೆಂಕಿಯ ಕಿಡಿಗಳಿಂದ ತುಂಬಿತು'.

ಜ್ವಾಲೆಗಳನ್ನು ಉತ್ತೇಜಿಸುವ ಗಾಳಿಯ ಉಷ್ಣತೆಯ ದೆಸೆಯಿಂದ ಅಶ್ವಾರೋಹಿಗಳು ರಕ್ತಧಾರೆಯೊಂದಿಗೆ ಓಡಲಾರಂಭಿಸಿದರು. ಯುದ್ಧ ಮತ್ತು ಮೀನಿನ ಕಣ್ಣಿನ ಬುಗ್ಗೆಯಿಂದ ಜಿಗಿಯಿತು. ಸುಮಾರು ಐದು ದಿನಗಳವರೆಗೆ ಸಮರ ಸಾಗರವು ಇದೇ ಬಗೆಯ ಗುಲ್ಲು-ಗಲಾಟೆಯಿಂದ ತುಂಬಿತ್ತು. ಇಂತಹ ಭಯಾನಕ ಹಾಗೂ ಗಂಡಾಂತರಕಾರಿ ಬಿರುಗಾಳಿಯಲ್ಲಿ ಸಹ; ಖಾನ್‌ಖಾನಾನು ತನ್ನ ಸ್ಥಾನದಿಂದ ಅಲುಗಾಡಲಿಲ್ಲ. ಒಂದು ದಿನ ಮತ್ತು ಒಂದು ರಾತ್ರಿಯ ಅವಧಿಯಲ್ಲಿ ಉನ್ನತ ದರ್ಜೆಯ ವಾಸ್ತುಶಿಲ್ಪಿಗಳ ಕೈಚಳಕದಿಂದ 'ಯುದ್ಧದ ಕಂದಕ' ನಿರ್ಮಿಸುವ ಎಚ್ಚರಿಕೆಯನ್ನು ವತಾರದಲ್ಲಿದ್ದವರಿಗೆ ನೀಡಲಾಯಿತು. ಏಕೆಂದರೆ: ಅದರ ಭೀತಿಯಿಂದ ಚರಿತ್ರಹೀನರಾದ ನಾಸ್ತಿಕರ ತಂಡದ ಶಕ್ತಿ ಮತ್ತು ಸಹನೆಯನ್ನು ದುರ್ಬಲಗೊಳಿಸುವ ಧ್ಯೇಯವನ್ನು ಹೊಂದಲಾಗಿತ್ತು. ಯುದ್ಧದ ಕಂದಕದ ಮೇಲೆ ತೋಪುಗಳ ಎರಡು ಪಂಕ್ತಿಗಳನ್ನು ನಿಲ್ಲಿಸಲಾಯಿತು.

ತೋಪುಗಳ ಗುಡುಗಿನ ಆಘಾತದಿಂದ ಸಾಗರದೊಳಗೆ ಮೊಸಳೆಗಳ ಎದೆಗಳು ಹವಳದ ಜಾಲದಂತೆ ಟೊಂಗೆಗಳಾಗುವವು. ಜ್ವಾಲೆಗಳು ಸುರಿಯುವುದರಿಂದ ತಿರುಗುತ್ತಿರುವ ಆಕಾಶದ ಔನ್ನತ್ಯದ ಮೇಲೆ ಆಕಾಶಗಂಗೆಯು, ಘೂಂಕಾರ ಮಾಡುವ ಹೆಬ್ಬಾವಿನಂತೆ ಬೆಂಕಿಯನ್ನು ಸುರಿಸಲಾರಂಭಿಸಿತು. ಕಠಿಣಹೃದಯಿಗಳಾದ ನಾಸ್ತಿಕರ ಮನೆಗಳಲ್ಲಿ ನರಕಾಗ್ನಿಯ ಕಿಡಿಗಳ ರಾಶಿಗಳು ಪತನವಾಗಲಾರಂಭಿಸಿದವು. ದುರ್ದೈವ ಮತ್ತು ದುಷ್ಟರಾದ ವಿರೋಧಿಗಳು ಇಂತಹ ಪ್ರಳಯ ತರುವ ಕೋಲಾಹಲವನ್ನು ನೋಡಿದರು. ಪ್ರೇಯಸಿಯರ ಹುಬ್ಬುಗಳ ತಕ್ಕಡಿಗಳಿಂದ ಯಾವ ಪ್ರಕಾರವಾಗಿ ಪ್ರೇಮಿಗಳ

ಹೃದಯಗಳ ನೂರಾರು ತುಂಡುಗಳಾಗುವವೋ ಅದೇ ಪ್ರಕಾರವಾಗಿ ವಿಜಯ ಸಂಪನ್ನ ಸೈನ್ಯದ ವೀರರು ತಮ್ಮ ರಕ್ತ ಸುರಿಸುವ ಕಠಾರಿಯ ತುದಿಯಿಂದ ವಠಾರದ ಗೋಪುರದಲ್ಲಿ ರಂಧ್ರಗಳನ್ನು ಕೊರೆದಿದ್ದಾರೆ.

ವಿಜಯ-ಸಂಪನ್ನ ಸೈನ್ಯದ ವೀರರು, ಕೋಟೆಯ ದ್ವಾರದ ವೃತ್ತವನ್ನು ತಮ್ಮ ಕುದುರೆಗಳ 'ರಿಕಾಬು' (ಅಂಕವಣಿ) ಎಂದು ಭಾವಿಸಿ; ಕ್ರೋಧದ ಕುದುರೆಗಳನ್ನು 'ಮಿಥುನ ರಾಶಿಯ' ಬೈತಲೆಯ ಮೇಲೆ ಓಡಿಸಿದ್ದಾರೆಂಬುದನ್ನು ವಿರೋಧಿಗಳು ಅರಿತುಕೊಂಡರು.

"ಸಂರಕ್ಷಣೆಯಲ್ಲಿ ತೆಗೆದುಕೊಳ್ಳಿರಿ" ಎಂದು ನುಡಿಯುತ್ತ ವೈರಿಗಳು ವಿನಮ್ರತೆಯಿಂದ ಅಂಗಲಾಚಿಸುತ್ತ; ಆಶ್ರಯವನ್ನು ಬೇಡಲಾರಂಭಿಸಿದರು. ಕರ ಮತ್ತು ಕಂದಾಯ ನೀಡುವ ಷರತ್ತಿನ ಮೇಲೆ, ನವಾಬ್ ಬಾಬಾಖಾನ್‌ನೊಂದಿಗೆ ಒಪ್ಪಂದ ಮಾಡಿಕೊಂಡು; ಕೋಟೆಯ ಬೀಗದ ಕೈಯನ್ನು ಉನ್ನತ ಸಾಮ್ರಾಜ್ಯದ ಒಡೆಯರಿಗೆ ಅರ್ಪಿಸಲಾಯಿತು. ಧರ್ಮದ ಹೊಸ ವಸಂತದ ಅಂತಃಪುರದಿಂದ ಯಶಸ್ಸಿಗೆ ಸುಗಂಧದಿಂದ ಕೂಡಿದ ಗಾಳಿಯು ಬೀಸಲಾರಂಭಿಸಿತು. ಸಂತೋಷದ ಪರಿಣಾಮದ ಬಗೆಗೆ ಸಾಕ್ಷಿ ನುಡಿಯುವ ಪ್ರತಿಯೊಂದು ಉದ್ಯಾನದಲ್ಲಿ ಶಾಂತಿ ಹಾಗೂ ಸುರಕ್ಷತೆಯ ಹೂಗಳು ಅರಳಿದವು. ತಕ್ರಿ ಕೋಟೆಯ ವಿಜಯ ಸಂಪಾದನೆಯಲ್ಲಿ ಮುಜಫರೂದ್ದೀನ್ ಖಾನ್‌ಖಾನಾನ ಪರಾಕ್ರಮವು ಪ್ರಯೋಜನಕಾರಿ ಆಯಿತೆಂದು; ಯಾವುದೇ ದಾಕ್ಷಿಣ್ಯ ಮತ್ತು ಅತಿಶಯೋಕ್ತಿ ಇಲ್ಲದೇ ನಿರೂಪಿಸಬೇಕಾಗುತ್ತದೆ.

ಒಂದು ವೇಳೆ ಆ ಕಾಲದಲ್ಲಿ ರುಸ್ತುಮ್‌ನಂತಹ ಪೈಲ್ವಾನರಿದ್ದರೆ; ಅಫ್ರಾಶಿಯಾಬ್‌ನಂತಹ ಸೇನಾಪತಿಯ (ತುರಾನ್‌ದ ಸುವಿಖ್ಯಾತ ಸೇನಾಪತಿ) ಹಣೆಯ ಮೇಲಿನ ನಿರಿಗೆಯನ್ನು ನೋಡಿ; ಪಲಾಯನದ ದಾರಿಯನ್ನು ಹಿಡಿಯುತ್ತಿದ್ದರು. ಒಂದು ವೇಳೆ ಸಾಮ್‌ನರಿಮಾನ್‌ನಂತಹ ಬಲಾಢ್ಯನು, ಈ ರಣರಂಗದ ದೃಶ್ಯವನ್ನು ನೋಡಿದ್ದರೆ, ತನ್ನ ಅಪ್ಸರೆಯಂತಹ ಮಗಳನ್ನು ಕಾಡಿಗೆಯಂತೆ ಕಣ್ಣಿನ ಅಂಚಿನಲ್ಲಿ ಅಡಗಿಸಿಕೊಳ್ಳುತ್ತಿದ್ದನು.

'ದೇವರು ಶಾಶ್ವತವಾಗಿರುವ ಸೌಭಾಗ್ಯದಿಂದ, ಪ್ರವಾದಿಯ ಧರ್ಮದ ತಳಹದಿಗೆ ಶಕ್ತಿಯನ್ನು ನೀಡಿದನು, ಧರ್ಮದ ಪೂರ್ವ ದಿಕ್ಕಿನಿಂದ ಇಸ್ಲಾಂದ ಪ್ರಾತಃಕಾಲವು ಉದಯಿಸಿತು. ಕತ್ತಲೆಯಿಂದ ತುಂಬಿದ ನಾಸ್ತಿಕತೆಯು ಅಂತ್ಯವಾಯಿತು'.

ಈ ಉನ್ನತ ವಿಜಯದ ಸುವಾರ್ತೆಯನ್ನು ಸಂತೋಷದ ವಾರ್ತೆ ನೀಡುವುವನು ಬಾದಶಾಹ ಗಾಜಿಗೆ ತಿಳಿಸಿದಾಗ; ಪ್ರವಾದಿಯಂತಹ ಸ್ವಭಾವದ ಬಾದಶಾಹನು ದೇವರಿಗೆ ಅಪಾರ ಕೃತಜ್ಞತೆ ಸಲ್ಲಿಸಿ; ಆಕಾಶದಂತಹ ಚಕ್ಕಡಿಗಳ ಮೇಲೆ ಮಿಠಾಯಿಗಳನ್ನು ಹೊರಿಸಿ, ನಗರ ಮತ್ತು ಪ್ರದೇಶಗಳಲ್ಲಿ ವಿತರಣೆ ಮಾಡಿದನು.

ಮುಚ್ಚಿದ ತುಟಿಗಳು ಜೇನುತುಪ್ಪ ಪಡೆಯುವ ಲಾಲಸೆಯಿಂದ ತೆರೆದುಕೊಳ್ಳುವಂತೆ ಬೀದಿ ಮತ್ತು ಮಾರುಕಟ್ಟೆಗಳ ಗಾಬರಿಗೊಂಡ ಜನರು ಮಿಠಾಯಿಗಳ ಸ್ವಾದದಿಂದ ಸಂತೃಪ್ತರಾದರು. ವಿಜಯದ ಅಭಿನಂದನೆಯ ಗುಲ್ಲುಗಲಾಟೆಯಿಂದ ಪವಿತ್ರ ಜನರ ಸ್ವಚ್ಛ ಹೃದಯಗಳ ಸೀಸೆಗಳು ಸಂತೋಷ ಮತ್ತು ಪ್ರಮೋದದಿಂದ ತುಂಬಿದವು. ಹಜರತ್ ಬಾದಶಾಹ ಗಾಜಿಯ ಹೃದಯವನ್ನು ಸಂತುಷ್ಟಗೊಳಿಸುವ ಬೆಳಕಿನ ಕಿರಣಗಳಿಂದ, ಸೌಭಾಗ್ಯ ಪ್ರಾತಃಕಾಲದ ಜಾಗ್ರತರಾದ ಅದೃಷ್ಟಶಾಲಿಗಳು ದೇವರ ಹಿರಿಯ ವರ್ಗದ ದಿವ್ಯದರ್ಶನಕ್ಕೆ ಸಾಕ್ಷಿಯಾದರು. ಧರ್ಮ ಹಾಗೂ ಸಂಪತ್ತಿನ ಶ್ರೇಷ್ಠವಾದ ಮುತ್ತು, ಶ್ರದ್ಧೆ/ಗೌರವಾಕಾಶದ ಶುಭ ನಕ್ಷತ್ರಗಳು ಸಾಮ್ರಾಟನ ಕೃಪೆ ಮತ್ತು ಇನಾಮುಗಳ ಹೆಚ್ಚಳದಿಂದ ಜಗತ್ತಿಗೆ ಉದಾಹರಣೆ ಆದರು. ಅಮೌಲ್ಯ ಹಾಗೂ ಚುರುಕುತನದ ಅರಬೀ ಕುದುರೆಗಳ ಮೇಲೆ ವಜ್ರ ಮತ್ತು ರತ್ನಗಳಿಂದ ಘಟಿತವಾದ ಖಡ್ಗಗಳು, ಸೊಂಡಿಲಿನ ಮೇಲೆ ಬಂಗಾರದ ಗೆಜ್ಜೆಗಳುಳ್ಳ ಹಾಗೂ ಹಸ್ತಕ್ಷೇಪ ಮಾಡುವ ಉಕ್ಕಿನಂತಹ ದೇಹದ ಆನೆಗಳನ್ನು ಪ್ರಸಿದ್ಧ ಮಂತ್ರಿಗಳು ಮತ್ತು ಗೌರವಾನ್ವಿತ ನಾಯಕರಿಗೆ ಕೊಡಲಾಯಿತು. ಅವರ ಪ್ರತಿಷ್ಠೆ ಹಾಗೂ ವೈಭವವನ್ನು ಶನಿಗ್ರಹದ ಮಟ್ಟಕ್ಕೆ ಏರಿಸಲಾಯಿತು.

ಎಲ್ಲ ನಂಬಿಗಸ್ತ ನಾಯಕರೊಂದಿಗೆ ನವಾಬ್‌ಖಾನ್ ಬಾಬಾನಿಗೆ ತಕ್ರಿ ಕೋಟೆಯ ಮೇಲ್ವಿಚಾರಣೆ ಮಾಡಲು ಆಜ್ಞೆ ನೀಡಲಾಯಿತು. ಆರ್ಥಿಕ ಹಾಗೂ ಆಡಳಿತಾತ್ಮಕ ಮಹತ್ಕಾರ್ಯಗಳನ್ನು ಅನುಷ್ಠಾನಗೊಳಿಸಿ, ಕೋಟೆಯ ಆಡಳಿತೆಯನ್ನು ಆಕಾಶದಂತಹ ಸಿಂಹಾಸನದ ವ್ಯಾಪ್ತಿಗೆ ತರಲಾಯಿತು. ಮೊಹರಮ್‌ದಂತಹ ಮಾನ್ಯ ತಿಂಗಳಿನ ಹತ್ತನೆಯ ದಿನಾಂಕದ ನಂತರ, ರಾಜಧಾನಿ ಮಹಮ್ಮದ್‌ಪುರಕ್ಕೆ ತೆರಳುವ ಉದ್ದೇಶದಿಂದ ಜಯಿಸಿದ ಸ್ಥಾನವಾದ ಬಂಕಾಪುರದಲ್ಲಿ, ಈ ತಿಂಗಳಿನ ಹದಿಮೂರನೆಯ ದಿನಾಂಕಕ್ಕೆ ಹೊಸ ವರ್ಷದ ಸಮಾರಂಭವನ್ನು ಸಡಗರದಿಂದ ಆಚರಿಸಲಾಯಿತು.

ಅವರು ಉನ್ನತ ಸ್ಥಾನದ ಉತ್ತರಾಧಿಕಾರದ ವಾಸಸ್ಥಾನದೆಡೆಗೆ ಗಮನ ಕೊಟ್ಟರು. ಪ್ರಾತಃಕಾಲದಲ್ಲಿ ಮಹಲಿನ ದ್ವಾರದ ಎದುರಿಗಿನ ಮೈದಾನದಲ್ಲಿ ಹೃದಯವನ್ನು ಸಂತುಷ್ಟಗೊಳಿಸುವ ಹೊಸ ವರ್ಷದ ಸಮಾರಂಭದ ಪರದೆಯು ತೆರೆದಾಗ ಹಜರತ್ ಬಾದಶಾಹ ಗಾಜಿಯು ಧರ್ಮದ ಸ್ಥಿರತೆ ಮತ್ತು ಶಾಶ್ವತವಾದ ವೈಭವ ಗಾಂಭೀರ್ಯದೊಂದಿಗೆ ಅದೃಷ್ಟ ಹಾಗೂ ಸಮೃದ್ಧಿಯ ಸಿಂಹಾಸನದ ಮೇಲೆ ಆಸೀನನಾದನು. ದರ್ಬಾರಿನಲ್ಲಿ ಪ್ರಥಮ ಪಂಕ್ತಿಯಲ್ಲಿ ಕುಳಿತವರು, ರತ್ನಗಂಬಳಿಯನ್ನು ಚುಂಬಿಸುವ ಗೌರವವನ್ನು ಪಡೆದು ಸ್ವಯಂ-ಪ್ರಶಂಸಕರು ಮತ್ತು ಅಹಂಕಾರ ಸಂಪನ್ನರಾದರು. ಗೌರವಾದರಗಳ ಮಧ್ಯದಲ್ಲಿ ಸೇವೆಗಾಗಿ ನಿಂತಿರುವ ಮದ್ಯಪಾನ ಮಾಡಿಸುವ ಪೀತವರ್ಣದ ಬಾಹುಗಳು ಹಾಗೂ ಸೇವಂತಿಗೆಯಂತಹ ಕಪೋಲ ಹೊಂದಿದ ಹೂಜಿಯಂತಹ ಕೊರಳನ್ನು ಸಪ್ತ ಭೂಖಂಡಗಳ ಸಾಮ್ರಾಟನ ಸೇವೆಯಲ್ಲಿ

ಬಾಗಿಸಿ, ಶಾಶ್ವತವಾದ ಸಂತೋಷವನ್ನು ಹೊಂದಿದರು. ಸಂತೋಷದ ಉದ್ಯಾನದಲ್ಲಿ ವಾಯುಸೇವನೆ ಮಾಡುವುವರಿಗಾಗಿ, ವೈವಿಧ್ಯಮಯ ಬಣ್ಣ ಮತ್ತು ಸುಗಂಧದಿಂದ ದಾಹನಿವಾರಕ ಹೂಗಳನ್ನು ಪೂರೈಸಿ ಹಾಗೂ ಗಾಳಿಯಲ್ಲಿ ಕರಗಿದ ಮಾಣಿಕ್ಯದಲ್ಲಿ ಕಸ್ತೂರಿ ಸಿಂಪಡಿಸಿ, ರತ್ನಗಂಬಳಿಯನ್ನು ಹಾಸಲಾಯಿತು.

ಸುಲಲಿತ ಸ್ವಭಾವದ ಮೆದುಳು ಸುಗಂಧ ದ್ರವ್ಯದಿಂದ ಬೀಸುವ ಗಾಳಿಯಲ್ಲಿ ಸಾಹಿತ್ಯಶಾಸ್ತ್ರದ ಅಭ್ಯಾಸ ಮಾಡಿ, ಉದ್ಯಾನ ಮತ್ತು ವಸಂತ ಋತುವಿಗೆ ನಾಚಿಕೆಯನ್ನುಂಟು ಮಾಡಿತು. ಬಾದಶಾಹನ ಪ್ರಶಂಸೆ ಹಾಗೂ ಪ್ರಾರ್ಥನೆಯ ವೃಕ್ಷದಿಂದ ಅರ್ಥದ ಹೂಗಳನ್ನು ಹರಿದು; 'ಫರ್‌ವರ್ದೀನ್' (ಪಾರ್ಸಿಗಳ ಪ್ರಥಮ ತಿಂಗಳು) ತಿಂಗಳನ್ನು ಮತ್ಸರಪಡುವಂತೆ ಮಾಡಲಾಯಿತು.

'ಜಗತ್ತು ಶಾಶ್ವತವಾಗಿ 'ನೌರೋಜ್'ದಿಂದ ಸಂತೋಷ ಹೊಂದಲಿ, ಬಾದಶಾಹನು ಜಗತ್ತಿನ ಸೌಂದರ್ಯಕ್ಕೆ ಉನ್ನತಿ ನೀಡಲಿ, 'ಗಾಜಿ' ಎಂಬ ಬಿರುದಿನ 'ಆದಿಲ್' ಬಾದಶಾಹನಿಗಾಗಿ, ಆಕಾಶವು ತನ್ನ ಹೃದಯದಲ್ಲಿ ಪ್ರೀತಿ/ಪ್ರೇಮ ಹೊಂದಿದೆ, ಯುದ್ಧದ ಯಶಸ್ಸಿನಲ್ಲಿ ಜೀವ ತುಂಬಲು, ಆತನ ಖಡ್ಗದ ಶಕ್ತಿಯು, ಪ್ರವಾದಿಯ ಕಾರ್ಯಮಾಡಿದೆ, ಆತನ ವಿಜಯಿ ಅಶ್ವವು, ಯಾವುದೇ ಸ್ಥಳದಲ್ಲಿ ಓಡಿದಾಗ, ಆತನ ಮಾರ್ಗದ ಧೂಳಿಯು ವಿಜಯದ ತಲೆ ಎತ್ತಿತ್ತು, ಆತನ ದೊಡ್ಡ ನಗಾರಿಯ ಧ್ವನಿಯು ಪ್ರತಿಕ್ಷಣ ಹೆಜ್ಜೆ ಹೆಜ್ಜಯ ಮೇಲೆ ವಿಜಯದ ಸುವಾರ್ತೆ ತಲುಪಿಸುತ್ತಿತ್ತು'.

ಜಗತ್ತಿಗೆ ಕೊಡುಗೆ ನೀಡುವವ, ದೇಶಗಳ ಒಡೆಯ ಶಾಂತಿ ಮತ್ತು ಸಂರಕ್ಷಣೆಯ ಸಿಂಹಾಸನವನ್ನು ಅಲಂಕರಿಸುವುವ, ಪ್ರವಾದಿಯ ಧರ್ಮಕ್ಕೆ ಶಕ್ತಿ ನೀಡುವುವ, ಗೌರವಾನ್ವಿತ/ಬಲಾಢ್ಯ ಜಗತ್ತಿನಿಂದ ಕರಸಂಗ್ರಹಣೆ ಮಾಡುವುವ, ನಿರ್ದಾಕ್ಷಿಣ್ಯದ ಉದಯಸ್ಥಾನದ ಸೂರ್ಯನಾದ ಹಜರತ್ ಬಾದಶಾಹ ಗಾಜಿಯು; ವಿಜಯ ಹಾಗೂ ಶಾಶ್ವತತೆಯೊಂದಿಗೆ ಬಂಕಾಪುರದ ಹೃದಯ ಸಂತುಷ್ಟಗೊಳಿಸುವ ಮೈದಾನದಲ್ಲಿ ಜಗತ್ತಿಗೆ ಶಾಂತಿ ನೀಡುವ ಸಮಾರಂಭವನ್ನು ಪ್ರಶಂಸಿದನು. ಜಗತ್ತನ್ನು ಶೃಂಗರಿಸುವ ಸಾಮ್ರಾಟನ ಧ್ವಜವನ್ನು ಅನಂತ ವೈಭವ-ಗಾಂಭೀರ್ಯದ ಔನ್ನತ್ಯದ ಮೇಲೆ ಹಾರಿಸಲಾಯಿತು. ಸಪ್ತ ಸಾಮ್ರಾಜ್ಯಗಳ ಅದೃಷ್ಟಶಾಲಿ ಛತ್ರಿಯ ಹೊಳಪು ಮತ್ತು ಅಂತಸ್ತಿನ ಸಾಷ್ಟಾಂಗ ನಮನವನ್ನು ಉತ್ತರಧ್ರುವದ ಸಮೀಪ ಇರುವ ಎರಡು ನಕ್ಷತ್ರಗಳಂತಹ ನಾಯಕರ ಬೈತಲೆಯ ಮೇಲೆ, ಧರ್ಮಶಾಸ್ತ್ರದ ವಿಧಿಯನ್ನು ಕಡ್ಡಾಯಗೊಳಿಸಲಾಯಿತು. ದೊಡ್ಡ ನಗಾರಿಯ ಧ್ವನಿಯು ಪ್ರಸಿದ್ಧ ವ್ಯಕ್ತಿಗಳ ಅಪಾರ ಆಸಕ್ತಿ ಹಾಗೂ ಸಂತೋಷದ ಬಗೆಗಿನ ಪುನರಾಗಮನವನ್ನು ಬಹಿರಂಗಗೊಳಿಸಿತು.

ಸಾಮ್ರಾಜ್ಯದ ಒಡೆಯನಾದ ಹಜರತ್ ಬಾದಶಾಹನು ದಾರಿಯ ಎಲ್ಲ ತಂಗು-ಸ್ಥಳಗಳನ್ನು ಸಂತೋಷದಿಂದ ಕ್ರಮಿಸುವಾಗ ಮೂರು ಮೈಲುಗಳ ತನಕ ದಾರಿಯ

ಎರಡೂ ಕಡೆಗೆ ತಲೆ ಎತ್ತಿ ನಿಂತಿದ್ದ ಆ ಎಲ್ಲ ಸೈನಿಕರು ಮತ್ತು ನಾಯಕರನ್ನು ಸಂತೃಪ್ತಗೊಳಿಸಿ, ಬಿಡುಗಡೆ ಮಾಡಿದನು. ಮಾನ್ಯತೆ ಹಾಗೂ ಗೌರವದ ಸಾಂಪ್ರದಾಯಗಳಿಗೆ ಅನುಸಾರವಾಗಿ, ಅವರನ್ನು ಹಿಂತಿರುಗಿ ಸ್ವೀಕರಿಸಲಾಗಿತ್ತು. ಅವರಿಗೆ ಮರ್ಯಾದೆ ಹಾಗೂ ಕಾಣಿಕೆಗಳನ್ನು ನೀಡುವ ಕಾರ್ಯದಲ್ಲಿ ಸ್ವಲ್ಪವೂ ಸಹ ಲೋಪ-ದೋಷ ಆಗಿಲ್ಲ. ಇದೇ ಪ್ರಕಾರ, ಹೃದಯಗಳ ಸಾಮ್ರಾಜ್ಯವನ್ನು ಜಯಿಸುತ್ತ, ಮೊಹರಮ್ ತಿಂಗಳಿನ ಇಪ್ಪತ್ತೈದನೆಯ ದಿನಾಂಕಕ್ಕೆ ರಾಜಧಾನಿ ಮಹಮ್ಮದಪುರದ ಶಾಂತಿದಾಯಕ ಅಂಗಳವನ್ನು, ಬಾದಶಾಹನ ಮುಂದೆ ಸಾಗುವ ಸೇನಾಪಡೆಯ ರಾಜ ಮೆರವಣಿಗೆಯಿಂದ ದೇಶಗಳು ಮತ್ತು ರಾಜರು ಶುಭದಾಯಕ ಸಾಷ್ಟಾಂಗ ನಮನ ಸಲ್ಲಿಸುವಂತಹ ಸ್ಥಾನವನ್ನಾಗಿ ಮಾಡಲಾಯಿತು.

ಸೋಮವಾರ ಮಧ್ಯಾಹ್ನದ ನಾಲ್ಕು ಗಂಟೆಗೆ ಶುಭ ಸಮಯವನ್ನು ನಿಶ್ಚಯಿಸಿ, ನಗರ ವೀಕ್ಷಣೆಯ ಹಂಬಲದಿಂದ ನಗರದ ಮಾರುಕಟ್ಟೆಗಳ ಅಂಗಳವನ್ನು ಮನಮೋಹಕತೆ ಮತ್ತು ಸೌಂದರ್ಯದ ಹೊಸ ವಸಂತದ ಮಂದಸ್ಮಿತದ ಮಾರಾಟಗಾರರಾದ ಸುಂದರಿಯರು ಸಾವಿರಾರು ವರ್ಣಮಯ ನಗೆ ಮಾತುಗಳಿಂದ ಸ್ವಾಧೀನಪಡಿಸಿಕೊಂಡಿದ್ದರು. ಸಿಡಿಲಿನಂತಹ ಸ್ವಭಾವ ಹಾಗೂ ಬುರಾಕ್‌ದಂತಹ ಕುದುರೆಯ ಮೇಲೆ ಶಾಶ್ವತವಾದ ವೈಭವ ಗಾಂಭೀರ್ಯದೊಂದಿಗೆ ಆರೋಹಣ ಮಾಡಿ; ಬಾದಶಾಹನು ಜಗತ್ತನ್ನು ಶೃಂಗರಿಸಲು ಮತ್ತು ಜಯಿಸಲು ಆರಂಭಿಸಿದನು.

'ಜಗತ್ತನ್ನು ಸಂರಕ್ಷಿಸುವ ಧರ್ಮದ ಬಾದಶಾಹನು, ಥಡಿ (ಜೀನು) ಮೇಲೆ ಕಾಲಿಟ್ಟು, ಅದನ್ನು ಶೃಂಗರಿಸಿದನು, ಆತನ ಕುದುರೆಯು ಓಟದ ಪೈಪೋಟಿಯಲ್ಲಿ ಮಗ್ನವಾಯಿತು, ಅದು ಭೂಮಿ ಮತ್ತು ಆಕಾಶದ ಶಿರವನ್ನು ಉನ್ನತಗೊಳಿಸತು, ಲಗಾಮು ನಿಯಂತ್ರಿಸುವ ಆತನ ಕೌಶಲ್ಯದಿಂದ ಸುಂದರಿಯರ ಮುಖದ ಮೇಲೆ, ತ್ವರಿತಗತಿಯ ಓಟದ ಅಭ್ಯಾಸದಂತೆ, ಬೆವರು ಬಂದಿತು, ಆತನ ಕಾಲಿನ ಮೇಲೆ ಯಾವ ದಿನ ಮದರಂಗಿ ಲೇಪಿತವಾಯಿತೋ, ಆ ದಿನ, ಪ್ರೇಯಸಿಯರು ತಮ್ಮ ಕೈಯೊಳಗಿನ ಮದರಂಗಿ ತೊಳೆದುಕೊಂಡರು, ಚಿಪ್ಪುಗಳಿಗೂ ಸಹ, ಮೀನುಗಳಂತೆ ರೆಕ್ಕೆ ನೀಡಿ, ಸಾಗರವು ಶೀಘ್ರವಾಗಿ ಬಿಡುಗಡೆ ಮಾಡಿತು, ಜಪಮಾಲೆಯಲ್ಲಿ ಬಂಧಿತವಾದ ಮಣಿಗಳಂತೆ, ಮಹಾಪೂರವನ್ನೂ ಸಹ ಬಂಧಿಸಿದನು. ತ್ವರಿತವಾಗಿ, ಸ್ಮರಣೆ ಮಾಡಿ ಮಹಾಪೂರಕ್ಕೆ ಮತ್ಸರವನ್ನುಂಟುಮಾಡಿದನು, ಬಿರುಗಾಳಿಯ ಬುದ್ಧಿಯು, ಮೂರ್ಖರ ಬುದ್ಧಿಯಂತೆ ಮಂಕಾಯಿತು, ಅದರೊಂದಿಗೆ ನಡೆದು, ಬಿರುಗಾಳಿಯು ಹೂಗಳಲ್ಲಿ ಹೆಜ್ಜೆ ಇಟ್ಟಿತು. ಆ ಗುಲಾಬಿಯಂತಹ ಪ್ರಿಯ ಕುದುರೆಯ ಪ್ರಶಂಸೆಯಲ್ಲಿ ನಾಲಿಗೆಯು ಹರಿಣಿಯಂತಹ ಪೈರು-ಪಚ್ಚೆಯಂತಹ ಜಾಲವನ್ನು ಹೆಣೆಯಿತು, ಸುಗಂಧ ಭರಿತ ಕೇಶಉಳ್ಳವರು, ಅದರ ಕಾಲಿನ ಆಶ್ರಯದಲ್ಲಿದ್ದರು. ಅದು ಸಜ್ಜನರಿಂದ ಶ್ರೇಷ್ಠತೆಯ ಕರ ವಸೂಲು ಮಾಡಿತು, ಅದರ ಗೊರಸಿನಿಂದ ಗಾಳಿಗೆ ಸುಗಂಧದ ಚೀಲ ದೊರಕಿತು, ಅದರ ಬಾಲದಿಂದ ಹುಮಾ ಪಕ್ಷಿಯು ಬಲೆಯಲ್ಲಿ ಸಿಲುಕಿತು, ಇಂತಹ ಕುದುರೆಯ ಮೇಲೆ ಬಾದಶಾಹ ಗಾಜಿಯು,

ಸ್ವಚ್ಛಂದತೆಯ ವೈಭವದೊಂದಿಗೆ ಆಸೀನನಾಗಿದ್ದನು, ಚಂದ್ರನಂತಹ ಪ್ರೇಯಸಿಯರ ದೃಶ್ಯದಿಂದ, ಆತನ ದೃಷ್ಟಿಯು ಕಾಂತಿದಾಯಕ ಮತ್ತು ಆಕರ್ಷಕವಾಯಿತು, ಮಿಂಚುವ ಸೂರ್ಯನಂತೆ ಯಾವ ದಿಶೆಯಲ್ಲಿ ಮುಖ ತಿರುಗಿಸಿದರೂ ಸಹ, ಎರಡೂ ಜಗತ್ತುಗಳು, ಆತನ ರಿಕಾಬಿನಲ್ಲಿ (ಅಂಕವಣಿ) ಓಡಿ ಬರುತ್ತಿದ್ದವು.

ಉನ್ನತ ಅದೃಷ್ಟದ ಗೌರವಾನ್ವಿತರು ಹಾಗೂ ಅನುಪಮ ಆಜ್ಞಾಪಾಲಕರು ವಿನಮ್ರತೆಯಿಂದ ಮುನ್ನಡೆದರು. ಬಾದಶಾಹನ ಎದುರಿಗೆ ಶಾಶ್ವತವಾದ ಅಭಿಮಾನದಿಂದ ತಲೆ ಎತ್ತಿ, ಧ್ವಜವಾಗಿ ಪರಿಣಮಿಸಿದರು. ನಿಸ್ಸಂದೇಹವಾಗಿ ಬಾದಶಾಹ ಗಾಜಿಯು, ದೃಢತೆಯಿಂದ ಆಳ್ವಿಕೆಯ ಸಿಂಹಾಸನದ ಮೇಲೆ ಆಸೀನನಾಗಿ, ಯಶಸ್ಸಿನ ಬಟ್ಟಲನ್ನು ಕೈಯಲ್ಲಿ ಹಿಡಿದು, ಕೆಂಪು ಸಾರಾಯಿಯ ಹನಿಗಳಿಂದ ಅವರನ್ನು ನಕ್ಷತ್ರಗಳ ಕಳಸಕ್ಕಿಂತಲೂ ಮೇಲೆ ತಲುಪಿಸಿದನು.

'ಜಗತ್ತಿನ ಕೂಟವು ವಿಲಾಸದಿಂದ ತುಂಬಿದೆ, ಸೂರ್ಯನು ಸಾರಾಯಿಯ ತರಂಗದ ಜಾಲದಲ್ಲಿ ಪತನವಾಗಿದ್ದಾನೆ, ಈ ಪ್ರಕಾರವಾಗಿ ಜಗತ್ತು ಸುಖವನ್ನು ಹೊಂದಿದೆ, ಜಗತ್ತಿಗೆ ಸುಖ-ಸಂತೋಷವು ಸಂಪೂರ್ಣವಾಗಿ ಪ್ರಾಪ್ತವಾಗಿದೆ, ಹೃದಯೋದ್ಯಾನಗಳು ಸಂತಸದಿಂದ ಅರಳಿವೆ, ನಾಲಿಗೆಗಳು ಬಾದಶಾಹನಿಗಾಗಿ ಪ್ರಾರ್ಥನೆಯ ಜಪ ಮಾಡುತ್ತವೆ, ಒಂದಿಲ್ಲೊಂದು ಸಮಾರಂಭದ ಶುಭ ಹಾರೈಕೆಯು ಪ್ರಳಯದವರೆಗೆ, ಧರ್ಮದ ಬಾದಶಾಹನಿಗೆ, ಯಾವಾಗಲೂ ದೊರಕುತ್ತಿರಲಿ'.

■

*

ಅಧ್ಯಾಯ – ೧೧

ರಾಜಕುಮಾರನ ವೃತ್ತ ಛೇದನ (ಖತನಾ) ಸಮಾರಂಭ/ಕೂಟದ ಏರ್ಪಾಡು ಮತ್ತು ಜಗತ್ತಿಗೆ ಇನಾಮು ನೀಡುವಿಕೆ

ಅಂತಿಮ ಪ್ರವಾದಿಯ ಪ್ರಕಾಶಮಾನ ಧರ್ಮದ ಅಭಿನಂದನೆಯು; ಶಾಶ್ವತವಾಗಿರುವ ಸಂತೋಷದ ಗೀತೆಯಾಗಿ, ಪ್ರವಾದಿಯಂತಹ ಸ್ವಭಾವದ ಬಾದಶಾಹನ ಉತ್ಸವವನ್ನು ನಿಶಾತಾಬಾದ್ ಮಾರ್ಗದವರೆಗೆ ಸಾಗಿತು. ದೇವರ ಅಪಾರ ಕೃಪೆಯನ್ನೂ ಸಹ ಒಳಗೊಂಡು, ಸಂತೋಷ ಗೀತೆಯನ್ನು ಶಿಷ್ಟಾಚಾರದ ಅಭ್ಯಾಸವನ್ನಾಗಿ ಮಾಡಲಾಯಿತು.

ಅದರಲ್ಲಿ ಬಾದಶಾಹನ ಉನ್ನತ ಲಾವಣ್ಯದ ಗುಣಗಾನ ಮತ್ತು ಪ್ರಾರ್ಥನೆಯನ್ನು ಅರ್ಥದ ದರ್ಪಣದಲ್ಲಿ ನಿರೂಪಿಸಲಾಗಿತ್ತು. ಶಹಭಾಸ್, ಮಂಗಳಕರ ಪರಿಣಾಮದ ಸಂಪತ್ತು ಹಾಗೂ ಅನಂತ ಫಲಿತಾಂಶದ ಸೌಭಾಗ್ಯ! ದೃಢವಾದ ಸಿಂಹಾಸನದ ಬಾದಶಾಹ ಇನಾಮು ಮತ್ತು ದಾನ-ಧರ್ಮ ವಿಧಾನಗಳ ರಚನೆಯ ಆಧಾರ, ವೈಭವ-ಗಾಂಭೀರ್ಯ, ಜಗತ್ತಿನ ಪವಾಡಗಳ ಪ್ರದರ್ಶಕ ಮರ್ಯಾದೆ/ಗೌರವದ ನಿರಂತರತೆಯ ಉಗಮಸ್ಥಾನ ಆರಂಭ ಹಾಗೂ ಅಂತ್ಯದ ಬಟ್ಟಲಿನ ಪ್ರಮತ್ತರ ಮಾದಕತೆ, ಪ್ರಾಣ ಸಂರಕ್ಷಕರ ಹೃದಯದ ಧ್ಯೇಯ ತೀಕ್ಷ್ಣ ದೃಷ್ಟಿ ಸಂಪನ್ನರ ಕಣ್ಣುಗಳ ಕಾಂತಿದಾತ, ಮಹಾ ಅದೃಷ್ಟಶಾಲಿ ದೇಶಗಳಿಂದ ಕರ ವಸೂಲು ಮಾಡುವವ, ಆಳ್ವಿಕೆಯ ಶ್ರೇಣಿಗಳ ಸಂಯೋಜಕ, ಜಮ್‌ಸೀದ್ ರಾಜನಂತಹ ಸೇವಕರ ಒಡೆಯ, ಫರೀದೂನ್‌ನಂತಹ ಸಂಪತ್ತಿನ ಯಜಮಾನ, ಯಶಸ್ಸಿನ ಅತಿ ನಿಕಟವರ್ತಿ, ವಿಜಯಸಾಧಕ, ಮಹೋನ್ನತ ವ್ಯಕ್ತಿಗಳಿಗೆ ನಮನ ಸಲ್ಲಿಸುವವ, ಉನ್ನತ ಜನರ ಕಾರ್ಯಗಳನ್ನು ಅನುಷ್ಠಾನಗೊಳಿಸುವವ, ಸೂಕ್ಷ್ಮ ಸ್ವಭಾವದ ವ್ಯಕ್ತಿಗಳ ಆಸಕ್ತಿ,

ಸೌಂದರ್ಯ ಮತ್ತು ವೈಭವದ ಪ್ರಪಂಚ ಸೂರ್ಯನಂತಹ ಪ್ರೇಯಸಿಯರ ಹೃದಯಗಳಿಗೆ ಸಾಂತ್ವಾನ ನೀಡುವುವ, ಗೌರವ ಹಾಗೂ ಘನತೆಯ ನಕ್ಷತ್ರಗಳನ್ನು ಶೃಂಗರಿಸುವವ, ಆಜ್ಞೆ ಮತ್ತು ಗಾಂಭೀರ್ಯದ ಭಂಡಾರದಲ್ಲಿ, ರತ್ನಾಭರಣಗಳನ್ನು ಸಂಗ್ರಹಿಸುವ ಬಾದಶಾಹನು ೧೦೫೪ ಹಿಜ್ರಿಯಲ್ಲಿ ಸೋಮವಾರದಂದು, ಬೆಳ್ಳಿಯ ಉಡುಪಿನಲ್ಲಿ ಪ್ರಾತಃಕಾಲದ ಸಾಕ್ಷಿಯು 'ಪೈರೋಜಾ'ದಂತಹ (ಒಂದು ಅಮೌಲ್ಯವಾದ ಹಸಿರು ಹಾಗೂ ನೀಲಿ ಬಣ್ಣದ ರತ್ನ) ತಳಹದಿಯ ಮೇಲೆ ನಿರ್ಮಿತವಾದ ಅರಮನೆಯ ಮೇಲೆ ಏರಿ, ಸರ್ವದುರ್ಬಲತೆಗಳಿಂದ ಮುಕ್ತನಾಗಿ, ಪವಿತ್ರನಾದ ದೇವರನ್ನು ಉಪಕಾರ ಸ್ಮರಣೆ ಮತ್ತು ಕೃತಜ್ಞತಾರ್ಪಣೆಯ ಆಭರಣಗಳಿಂದ ತನ್ನ ಅಂದಾಜಿಗಿಂತಲೂ ಹೆಚ್ಚಾಗಿ ಶೃಂಗರಿಸಿದನು. ಅವನು ಆಕಾಶದಂತಹ ಗೌರವದ ದರ್ಬಾರಿಗೆ ಸಾಷ್ಟಾಂಗ ನಮನ ಸಲ್ಲಿಸಿ, ಸೂರ್ಯನ ಹಣೆಯ ಹಾಳೆಯ ಮೇಲೆ ವಿಶ್ವವನ್ನು ಜಯಿಸುವ ಮುದ್ರೆ ಹಾಕಿದಾಗ, ಅವನು ಭೋಗ ಹಾಗೂ ಜಗತ್ತನ್ನು ಗೌರವಿಸುವ ಆಕಾಂಕ್ಷೆಯಿಂದ, ಜಗತ್ತಿಗೆ ವೈಭವ ನೀಡುವವ, ಜಗತ್ತು ಮತ್ತು ಜಗತ್ತಿನ ಜನರ ರಾಜಕುಮಾರನ 'ವೃತ್ತ-ಚ್ಛೇದನ' ಸಮಾರಂಭದ ಆಮಂತ್ರಣ ನೀಡಿದನು.

ಜಗತ್ತಿಗೆ ವೈಭವ ನೀಡುವುವ, ಅನುಪಮ ಗುಣಗಳ ಸಂಗ್ರಹ, ಗಾಂಭೀರ್ಯತೆ ಮತ್ತು ಸೌಂದರ್ಯದ ನಿರೂಪಕ, ಪ್ರಪಂಚೋದ್ಯಾನದ ಹೊಸವೃಕ್ಷ, ಸವಿಮಾತುಗಾರ, ಬುದ್ಧಿವಂತಿಕೆ ಹಾಗೂ ದಿವ್ಯ ಚಕ್ಷುವಿನ ಕೂಟ, ಅತಿ ಶುಭದಾಯಕ ಸೌಭಾಗ್ಯದ ಹೆಜ್ಜೆಯುಳ್ಳವ, ಆದಿ ಮತ್ತು ಅಂತ್ಯದ ವೈಭವ-ಗಾಂಭೀರ್ಯವನ್ನು ಅಲಂಕರಿಸುವ ಹಜರತ್ ರಾಜಕುಮಾರ ಅಲಿಯ ವೃತ್ತ-ಚ್ಛೇದನದ ಹೃದಯ ಸಂತುಷ್ಟಗೊಳಿಸುವ ಸಮಾರಂಭದ ಆಮಂತ್ರಣವನ್ನು ಸಮಗ್ರ ಜಗತ್ತಿಗೆ ನೀಡಿದನು. ದೇವರನ್ನು ತಿಳಿಯುವುವ, ಬಂಗಾರದ ಸಿಂಹಾಸನದ ಮೇಲೆ ಆಸೀನನಾಗುವುವ, ಆಕಾಶಕ್ಕೆ ಘನತೆ ನೀಡುವುವ, ಜಗತ್ತಿಗೆ ಆಜ್ಞೆ ಮಾಡುವ ಬಾದಶಾಹನ ಆಜ್ಞೆಯಿಂದ, ಖೂರ್ನಖ್ ಮಹಲಿನ ಕಾಂತಿಯನ್ನು ಭಗ್ನಗೊಳಿಸುವಂತಹ ಮತ್ತು ಯಾವುದರ ಕಮಾನುಗೂಡುಗಳ ಎದುರಿಗೆ ಆಕಾಶವು ಲಜ್ಜೆಯ ಭಾರದಿಂದ ಒಂದು ಚೌಕ ಇಟ್ಟಿಗೆಯಂತೆ ಪದ್ಮಾಸನ ಹಾಕಿ, ಭೂಮಿಯ ಮೇಲೆ ಕುಳಿತುಕೊಂಡಿರುವಂತಹ ಉನ್ನತ ತಳಹದಿಯ ದಾದ್‌ಮಹಲ್ ಅರಮನೆಯಲ್ಲಿ ಮಿಂಚುತ್ತಿರುವ ಸೂರ್ಯನ ಕಿರಣಗಳಿಂದ ಕಣ್ಣುಗಳು ಕಾಂತಿಯುತವಾಗುವಂತಹ ಆ ಅರಮನೆಯನ್ನು ನೋಡಿ, ತಮ್ಮ ಕಣ್ಣುಗಳನ್ನು ಅದೇ ಪ್ರಕಾರವಾಗಿ ಪ್ರಕಾಶಮಾನಗೊಳಿಸಿಕೊಳ್ಳಲು ಬುದ್ಧಿವಂತರನ್ನು ಕರೆಸಿಕೊಳ್ಳಲಾಯಿತು.

ಹಜರತ್ ಬಾದಶಾಹ ಗಾಜಿಯು ಸೂರ್ಯನಂತಹ ಪ್ರತಿಷ್ಠೆಯ ಆಕಾಶದಂತಹ ಸಿಂಹಾಸನದ ಮೇಲೆ, ನಾಲ್ಕು ದಿಂಬುಗಳ ಉನ್ನತ ಪೀಠವನ್ನು ಆಶ್ರಯಿಸಿ, ಆಸೀನನಾದನು.

‘ಬಾದಶಾಹ ಗಾಜಿಯು ವೈಭವ-ಗಾಂಭೀರ್ಯದ ಸಿಂಹಾಸನದ ಮೇಲೆ ಆಸೀನನಾದಾಗ, ಆಕಾಶದ ಒಂದು ಮೂಲೆಯಿಂದ ದೇವಾಜ್ಞೆಯು ರಿಕಾಬಿನ ಚರ್ಮದ ಪಟ್ಟಿಯನ್ನು ಹೊಡೆಯಿತು. ಬುದ್ಧಿವಂತರ ದೃಷ್ಟಿಯು ಹುಮಾ ಪಕ್ಷಿಯ ರೆಕ್ಕೆ ಆಯಿತು. ಬಾದಶಾಹನನ್ನು ನೋಡಿ, ದೃಷ್ಟಿಗೆ ಶುಭಶಕುನವು ದೊರಕಿತು’.

ಉನ್ನತ ನಾಯಕರು ಹಾಗೂ ಉನ್ನತ ಶ್ರೇಣಿಯ ಮಂತ್ರಿಗಳು ವಿನಮ್ರತೆಯಿಂದ ನಮನ ಸಲ್ಲಿಸಿದರು. ಅಲ್ಲಲ್ಲಿ ನಿಂತು ಸ್ವಯಂ ಪ್ರೇರಣೆಯಿಂದ ಜಗತ್ತಿಗೆ ಕಾಂತಿ ನೀಡುವ ಈ ಸಮಾರಂಭಕ್ಕಾಗಿ ಅಭಿನಂದನೆ ಸಲ್ಲಿಸಲು ತಮ್ಮ ನಾಲಿಗೆಯನ್ನು ತೆರೆದರು.

ಧೀಮಂತಿಕೆಯ ಗುಮ್ಮಟದ ಮಿಂಚುವ ನಕ್ಷತ್ರಗಳು ಹಾಗೂ ಅರ್ಥದ ಪೆಟ್ಟಿಗೆಯ ಶ್ರೇಷ್ಠವಾದ ಮುತ್ತುಗಳು, ಅಭಿಮಾನದ ಧ್ವಜವನ್ನು ಆಕಾಶದ ಛಾವಣಿಯ ಮೇಲೆ ಹಾರಿಸಿದವು. ಹಜರತ್ ಬಾದಶಾಹ ಗಾಜಿಯು ಈ ಪ್ರಾಣದಾಯಕ ಮತ್ತು ಆತ್ಮ-ಸಂತೃಪ್ತಿಗೊಳಿಸುವ ಸಮಾರಂಭವನ್ನು ಆಚರಿಸಿ ಜನರ ಹೃದಯಗಳ ಮೊಗ್ಗುಗಳನ್ನು ಕಂಡು; ಸ್ವರ್ಗದ ಉದ್ಯಾನವು ಮತ್ಸರಪಡುವಂತೆ ಮಾಡಿದನು. ಕೂಟದ ಸ್ಥಳವನ್ನು ಅಪಾರ ಸುಖ-ಸಂತೋಷದಿಂದ ಅಲಂಕರಿಸಲಾಗಿತ್ತು. ವೈವಿಧ್ಯಮಯ ಬಣ್ಣದ ರತ್ನಗಂಬಳಿಯನ್ನು ಹಾಸುವ ದೆಸೆಯಿಂದ ಭೂಮಿಯು ಆಡಂಬರದ ಉಡುಪುಗಳಲ್ಲಿ ಸ್ವಯಂ-ಅಲಂಕೃತರಾದ ಪ್ರೇಯಸಿಯರಂತೆ ಕಂಡುಬರಲಾರಂಭಿಸಿತು. ಬಂಗಾರದ ಹಸ್ತ-ಕೌಶಲ್ಯದಿಂದ ನಿರ್ಮಿತವಾದ ಪಲ್ಲಕ್ಕಿಯ ಬಾಗಿಲು ಹಾಗೂ ಗೋಡೆಗಳ ಮೇಲೆ, ಛಾವಣಿಯವರೆಗೆ, ‘ಸ್ಯಾಟಿನ್’ ಬಟ್ಟೆಯನ್ನು (ಒಂದು ಮೈ ಹೊಳಪಿನ ರೇಷ್ಮೆ ಬಟ್ಟೆ) ತೂಗು ಹಾಕಲಾಗಿತ್ತು. ಚೀನ ಮತ್ತು ಖತಾದ ಕಾರಖಾನೆಗಳಲ್ಲಿ ಉತ್ಪಾದಿಸಲಾದ ‘ಪರ್ನಿಯಾ’ (ಹೂಗಳ ವಿನ್ಯಾಸದ ಒಂದು ಬಗೆಯ ರೇಷ್ಮೆ ಬಟ್ಟೆ) ಹಾಗೂ ‘ದೀಬಾ’ (ನಾಜೂಕಾದ) ರೇಷ್ಮೆ ಬಟ್ಟೆಗಳು ಅದರ ಮುಖದ ಮೇಲಿದ್ದವು. ಸುಗಂಧಭರಿತ ಕೇಶವುಳ್ಳ ಮಿಂಚುವ ಮುಖಗಳಂತೆ, ಬಂಗಾರಲೇಪಿತವಾದ ಕಸ್ತೂರಿ ತುಂಬಿದ ಅಗ್ಗಿಷ್ಟಿಕೆಗಳನ್ನು ತರಲಾಯಿತು. ಬಾದಶಾಹನ ಮುಂದೆ ಆಸನಗಳಲ್ಲಿ ಆಸೀನರಾದ ಜನರು, ಬಾದಶಾಹನ ಗುಣಗಾನ ಹಾಗೂ ಪ್ರಾರ್ಥನೆ ಮಾಡಿ, ತಮ್ಮ ಆಕಾಂಕ್ಷೆಯ ಬಟ್ಟಲನ್ನು ತೆಗೆದುಕೊಂಡು, ಶಾಶ್ವತವಾದ ಭೋಗದ ವಿಶಾಲವಾದ ಪರದೆಯ ಮೇಲೆ ಆಗಾಗ, ಸಾರಾಯಿಯ ಬಟ್ಟಲಿನಿಂದ ಪಾನಮಾಡುತ್ತಿದ್ದರು.

‘ಬಾದಶಾಹನ ಸಮ್ಮೇಳನದ ನೈರ್ಮಲ್ಯವು ಇಷ್ಟೊಂದು ಅಧಿಕವಾಯಿತು. ಪ್ರತಿಯೊಂದು ವಿನೋದದಲ್ಲಿ ಆಕಾಶವು ಹೊಸ ಚಂದ್ರನ ತುಟಿಯನ್ನು ತೆರೆಯುತ್ತದೆ. ಆ ಕೂಟದ ಸಹಭಾಗಿಗಳ ಶಿಸ್ತಿನ ಬಗೆಗೆ ಏನು ಹೇಳಲಿ? ಒಬ್ಬರು ಮತ್ತೊಬ್ಬರೊಂದಿಗೆ ನುಡಿಯುತ್ತಾರೆ ಮತ್ತು ಮಾತು ಕೇಳುತ್ತಾರೆ, ಪರದೆಯಲ್ಲಿ ಅಡಗಿದಂತಹ ಎಲ್ಲವನ್ನು, ರಹಸ್ಯ ಜ್ಞಾನಿಗಳ ಉನ್ನತ ಯೋಚನೆಯ ಆಕಾಶದ ಮೇಲೆ ಬಹಿರಂಗಗೊಳಿಸಿದೆ. ಅಲ್ಲಿ ಎಲ್ಲೆಡೆಗೆ ವಿಲಾಸದ

ಹೂಗಳು ಅರಳಿದ ದೆಸೆಯಿಂದ, ಆಕಾಶದ ಮೆದುಳು ಗುಲಾಬಿ ಹೂಗಳ ಸುಗಂಧದಿಂದ ತುಂಬುತ್ತದೆ, ಒಂದು ವೇಳೆ, ನಾನು ಗಾಯಕರ ಪ್ರಶಂಸೆಯಿಂದ ಸ್ವಲ್ಪ ನಗದು ಪಡೆದರೆ, ಲೇಖನಿಯು ಪ್ರವಾದಿ ದಾವೂದ್ ಗೀತೆಯ ಕಾರ್ಯವನ್ನು ನೆರವೇರಿಸುವನು. ಆ ಹೃದಯಾಕರ್ಷಕ ಕೂಟದಲ್ಲಿ ಸ್ಥಾನ ಪಡೆದ ಯಾರೇ ಆಗಿರಲಿ, ಆತನು ಪ್ರಪಂಚೋದ್ಯಾನ ಪರ್ಯಟನದ ರುಚಿಯನ್ನು ಪಡೆದಿದ್ದಾನೆ'.

ಆಕಾಶವು ಸಾರಾಯಿ ಸೀಸೆಗೆ ಸಾಷ್ಟಾಂಗ ನಮನ ಸಲ್ಲಿಸಿ, ಬಟ್ಟಲನ್ನು ಭೂಮಿಗೆ ಎಸೆಯಿತು. ಜಗತ್ತಿಗೆ ಬೆಳಕು ನೀಡುವ ಸೂರ್ಯನು ಉರಿಸುವಂತಹ ಸಾರಾಯಿಯನ್ನು ಸ್ವೀಕಾರಾರ್ಹವಾದ ತನ್ನ ಅದೃಷ್ಟದ ರೇಖೆ ಎಂದು, ಭಾವಿಸಿದನು. ಲಘು ಹಾಸ್ಯಾಕಾರರನ್ನು ಸಂತೃಪ್ತಗೊಳಿಸುವ ಚಿತ್ತಾಕರ್ಷಕ ತಟ್ಟೆಯನ್ನು ಸಮರ್ಪಿಸಿ, ಅಪಖ್ಯಾತಿ ಹೊಂದಿದನು.

'ಬಾದಶಾಹನ ಕೊಡುಗೆಯ ಪ್ರಭಾವದಿಂದ ಆಕಾಶವು, ಹಳದಿ–ಹಸಿರು ತಿರುಳು ಹೊಂದಿರುವಂತಹದ್ದಾಗಿದೆ'.

ಈ ಸ್ವರ್ಗವಾಸಿಗಳು 'ತೂಬಾ' ವೃಕ್ಷದ ಉಪಕಾರದಿಂದ ಮುಕ್ತರಾಗುವಷ್ಟು ಪ್ರಮಾಣದಲ್ಲಿ, ಸಿಹಿಯಾದ ತಾಜಾ ಹಣ್ಣುಗಳನ್ನು ಕಿತ್ತಿಕೊಳ್ಳಲಾಯಿತು. ವೈವಿಧ್ಯಮಯ ಬಣ್ಣಗಳನ್ನು ಸಿಂಪಡಿಸಿ, ಪ್ರಾತಃಕಾಲದ ಶುಭ್ರವಾದ ಹೊದಿಯುವ ಬಟ್ಟೆಯನ್ನು ಸೂರ್ಯನ ಉಡುಪಿನಂತೆ ಕೇಸರಿ ಬಣ್ಣದಲ್ಲಿ ಮುಳುಗಿಸಲಾಯಿತು. ನಯನಗಳಿಗೆ ತಂಪು ನೀಡುವ ಎಲೆಗಳಂತೆ, ನೀಲಿ ಆಕಾಶವು ದೃಷ್ಟಿಗಳಿಗೆ–ಮನೋಹರವಾಗಿ ಕಾಣಲಾರಂಭಿಸಿತು. ಆತ್ಮಕ್ಕೆ ಚೈತನ್ಯ ನೀಡುವ ಒಂದು ಸುಗಂಧ ಚೂರ್ಣದಲ್ಲಿ ನೆಲೆಸಿದ (ಅಂಗಿಯ) ಕೈತೋಳುಗಳ ಸುವಾಸನೆಯು, ಪ್ರವಾದಿ ಈಸಾನ ಪವಾಡದ ಭವಿಷ್ಯ–ಸೂಚಕವಾಯಿತು.

'ಪ್ರಾತಃಕಾಲದ ಗಾಳಿಯು ಎಲ್ಲೆಡೆಗೆ ಸುಗಂಧದ ಅಂಗಡಿ ತೆರೆಯಿತು. ಗುಲಾಬಿಯ ಪರಿಮಳದಿಂದ ಆಕಾಶವು ಸುಗಂಧ ವ್ಯಾಪಾರಿಯ ಡಬ್ಬಿ ಆಯಿತು. ತಮ್ಮದೇ ಕೈಗಳ ಬೆಂಕಿಯ ಕಿಡಿಗಳಿಂದ ಜ್ವಾಲೆಗಳು ಉದ್ಭವಿಸಲಾರಂಭಿಸಿದಷ್ಟು, ಬಣ್ಣಗಳ ಎರಚಾಟದಿಂದ ಜಗತ್ತು ವರ್ಣಮಯವಾಯಿತು. ಕೆಂಪು ಬಣ್ಣದ ಹೂಗಳ ಪ್ರತಿಬಿಂಬದಿಂದ ಭೂಮಿಯು ಬಣ್ಣದಲ್ಲಿ ಮುಳುಗಿತು, ತುರಾಯಿ ಮರ(ಸರೂ) ಮತ್ತು ಚಿನಾರ್ ವೃಕ್ಷಗಳ ಜೇಬುಗಳಿಂದ ಹವಳದ ಜಾಲಗಳು ಜನಿಸಿದವು'.

ಕಿಲುಬಿನ ಬಣ್ಣದ ಶ್ರೇಷ್ಠ ಬಗೆಯ ಶಾಮಿಯಾನಗಳನ್ನು ಹಾಸುವ ದೆಸೆಯಿಂದ ಆಕಾಶದ ಮೇಲೆ ಓಡಿ ಬಂದ ದೇವದೂತರ ಮುಖಗಳಿಂದ ಅಂತರಿಕ್ಷದಲ್ಲಿ ಮುಸುಕು ಆವರಿಸಿತು. ಡೇರೆಯ ಬಂಗಾರದ ಹಗ್ಗಗಳ ಗಂಟುಗಳು; ಬಡವರ ಜೀವನದ ಗಂಟುಗಳನ್ನು ಬಿಚ್ಚಿದವು.

‘ಪ್ರತಿಯೊಂದು ಡೇರೆಯು ಆಕಾಶದಂತೆ ತಲೆ ಎತ್ತಿದಾಗ, ಆಕಾಶದ ಮೇಲೆ ನಕ್ಷತ್ರಗಳು ಕರಿ-ಕಾಳಿನಂತೆ ಉರಿಯುತ್ತಿದ್ದವು, ಅದರ ಹೃದಯ ಸಂತುಷ್ಟಗೊಳಿಸುವ ನೆರಳು ಎಲ್ಲಿ ಬೀಳುತ್ತದೆಯೋ, ಆ ಮಣ್ಣಿನಿಂದ ಪ್ರಳಯ ಕಾಲದವರೆಗೆ ಸೌಭಾಗ್ಯವು ಜನ್ಮ ತಳೆಯುತ್ತದೆ, ಅದರ ಸ್ತಂಭಗಳು ‘ತೂಬಾ’ ವೃಕ್ಷದಿಂದ ಸುಂಕವನ್ನು ಕೇಳುತ್ತವೆ, ಏಕೆಂದರೆ: ನೇರವಾದ ಮಾರ್ಗದಲ್ಲಿ ನಡೆಯುವುವರು ಅದರ ಪದ್ಧತಿಯನ್ನು ಸ್ವೀಕರಿಸಿದ್ದಾರೆ. ಪ್ರೇಯಸಿಯರು ಸಂತೋಷದಿಂದ ಅದರ ನೆರಳಿನಲ್ಲಿ ಬರುತ್ತಾರೆ. ಅವರು ನಸು ನಗುತ್ತ ಎಲ್ಲೆಡೆಗೆ ಸಂಚರಿಸುತ್ತಿರುತ್ತಾರೆ. ಜೀವ-ತುಂಬುವ ತುಟಿಗಳು ಹಾಗೂ ಹೃದಯ ಸಂತುಷ್ಟಗೊಳಿಸುವ ಮುಖದ ಮೇಲೆ, ಮೋಹದ ದೃಷ್ಟಿ ಬೀರುವ ಪ್ರೇಮಿಗಳು ಸಿಡಿಲಿನಿಂದ ಸುಟ್ಟು ಹೋಗುತ್ತಾರೆ. ದುರುಗುಟ್ಟಿ ನೋಡಿ, ಪ್ರೇಮಿಗಳಿಗೆ ಸಂತುಷ್ಟಪಡಿಸುವ ಪ್ರೇಯಸಿಯರು, ನರ್ತನ ಮಾಡಿ, ನಾಲ್ಕೂ ಕಡೆಗೆ ಆಕ್ರಮಣ ಮಾಡಲು ಮಗ್ನರಾಗುತ್ತಾರೆ. ಕಾಮಾಸಕ್ತ ಜನರು, ಸಾಲುಗಟ್ಟಿ ನಿಲ್ಲುತ್ತಾರೆ. ಪರಾಜಿತರಾಗಿ, ಸುದೃಢವಾದ ಜಗಲಿಯಿಂದ ಕೆಳಗೆ ಬೀಳುತ್ತಾರೆ, ಪ್ರೇಯಸಿಯರ ಕಪೋಲಗಳ ಆಸುಪಾಸು ಅವರ ಕಣ್ಣಿನ ನೋಟ ತಿರುಗುತ್ತದೆ, ಅವರನ್ನು ಕಾಣುವ ಆಸೆಯಲ್ಲಿ ಬುದ್ಧಿಯು ಅನಿಯಂತ್ರಿತವಾಗುತ್ತದೆ’.

ಪ್ರತಿಯೊಂದು ಬೀದಿ ಮತ್ತು ಮಾರುಕಟ್ಟೆಯ ಆರಂಭದಲ್ಲಿ, ಅಲಂಕೃತವಾದ ಶಾಮಿಯಾನಗಳನ್ನು ಕಟ್ಟಲಾಗಿದೆ. ಪ್ರತಿಯೊಂದು ಸುಂದರ, ವಾತಾನುಕೂಲವಾದ ಶಾಮಿಯಾನದ ಕೆಳಗೆ, ಎತ್ತರದ ನಿಲುವು ಹಾಗೂ ವೈಯಾರದ ನಡಿಗೆಯ ನರ್ತಕಿಯರ ಗುಂಪುಗಳು ನರ್ತಿಸುತ್ತವೆ. ತಂಬೂರಿ, ಖಾನೂನ್, ಚಂಗ್, ರಬಾಬ್(ಸಾರಂಗಿ/ವೀಣೆ) ಹಾಗೂ ಆರ್‌ಗೂನೂನ್ ವಾದ್ಯಗಳ ಧ್ವನಿಗಳು, ಭಾವನಾಪರವಶರಾದ ಜನರನ್ನು ಪ್ರಜ್ಞಾಹೀನಗೊಳಿಸಿದವು. ಮಲ್ಲಿಗೆಯಂತಹ ಬಾಹುಗಳು ಕೆಂಪು ಹೂವಿನಂತಹ ಕಪೋಲಗಳುಳ್ಳ ಮದ್ಯಪಾನ ಮಾಡಿಸುವುವರ ಗುಟುಕು ಕುಡಿದು; ಯುವಕರು ಸಪ್ತ ನಕ್ಷತ್ರಗಳ ಸಮೂಹದ (ಸುರೈಯ್ಯಾ ನಕ್ಷತ್ರ) ಔನ್ನತ್ಯದವರೆಗೆ ತಲೆ ಎತ್ತಿದ್ದಾರೆ.

ಹೊಸ ವಿಧಾನದಿಂದ ತೋಟಗಾರಿಕೆ ಮಾಡುವ ತೋಟಗಾರರು ನಗರ ಮತ್ತು ಮಾರುಕಟ್ಟೆಯ ಮೈದಾನದಲ್ಲಿ ನೂತನ ಬಗೆಯ ತೋಟಗಾರಿಕೆಯನ್ನು ಮಾಡಿದ್ದಾರೆ. ಪ್ರತಿಯೊಂದು ವೃಕ್ಷದ ಸುತ್ತು ಮುತ್ತಲೂ ಅತಿ ಸುಂದರ ಸಂತೋಷದಾಯಕ ಆಟಿಗೆಗಳನ್ನು ಕೊರೆದು, ನಿಲ್ಲಿಸಿದ್ದಾರೆ.

‘ಹಸ್ತ-ಕೌಶಲ್ಯಕಾರರು ತೋಟಗಾರಿಕೆ ಮಾಡಿ, ಜಗತ್ತಿನ ಮೈದಾನವನ್ನು ಶೃಂಗಾರಗೊಳಿಸಿ, ಮತ್ಸರವನ್ನುಂಟು ಮಾಡಿದ್ದಾರೆ. ಈ ಹಸ್ತ-ಕೌಶಲ್ಯವನ್ನು ಜಾರಿಗೊಳಿಸುವ ವೃಕ್ಷಗಳ ಹೊರತಾಗಿ, ಇಂತಹ ಸುಂದರ ವೃಕ್ಷಗಳನ್ನು ಯಾರೂ ಎಲ್ಲಿಯೂ ಕಂಡಿಲ್ಲ, ಇದನ್ನು ನೋಡಲು ಎತ್ತರದ ಮಹಾರದಿಂದ ಪ್ರವಾದಿ ಈಸಾನು, ಕಿರಣದ ಏಳೆಯನ್ನು ಕೈಯಲ್ಲಿ ಹಿಡಿದು, ಕೆಳಗೆ ಬಂದಿದ್ದಾನೆ. ನಗರದಲ್ಲಿ ಎಲ್ಲೆಡೆಗೆ, ಇಜಿಪ್ತಿನ ಸಾವಿರಾರು

ಯೂಸುಫ್‌ರು, ತಮ್ಮ ಸೌಂದರ್ಯವನ್ನು ಮಾರುಕಟ್ಟೆಯಲ್ಲಿ ಸ್ವಯಂ ತಂದಿದ್ದಾರೆ, ಕೆಂಪು ಹೂವಿನಂತಹ ಕಪೋಲಉಳ್ಳ ಪ್ರೇಯಸಿಯರ ಮಾಣಿಕ್ಯದಂತಹ ತುಟಿಗಳ ಪ್ರತಿಬಿಂಬದಿಂದ, ಮದ್ಯಪಾನ ಮಾಡುವವರ ಕೈಗಳಲ್ಲಿ ಬಯಸದೇ ಬಟ್ಟಲು ಬಂದಿದೆ'.

ನಿಯಮಗಳಿಗೆ ಅನುಸಾರವಾಗಿ ಸುಂದರವಾದ ಅಂಗಡಿಗಳನ್ನು ಶೃಂಗರಿಸುವುದರಿಂದ ದರ್ಪಣದಂತಹ ಮುಖವುಳ್ಳ ಪ್ರೇಕ್ಷಕರ ಆಸಕ್ತಿಯನ್ನು ಮುಖ ಪರದೆಯ ಸೆರೆಯಿಂದ ಬಿಡುಗಡೆಗೊಳಿಸಿರುವಂತೆ ಮಾರುಕಟ್ಟೆಯ ಮಾರ್ಗಗಳು ಅಲಂಕೃತವಾಗಿವೆ. ಮಿಂಚುವ ಹಣೆಯುಳ್ಳ ಚಂದ್ರನಂತಹ ಪ್ರೇಯಸಿಯರು ಸಂತೋಷದ ಸಾರಾಯಿ ಮತ್ತು ಯೌವನದ ಅಭಿಮಾನದಿಂದ ಸ್ವಯಂ ಸಂಯಮರಹಿತರಾಗಿ ಮದೋನ್ಮತ್ತರಾಗಿ, ಮನೆಗಳ ಬಾಗಿಲು ಹಾಗೂ ಛಾವಣಿಗಳ ಮೇಲೆ ಬಂದಿದ್ದಾರೆ. ಅವರು ತಮ್ಮ ದೃಷ್ಟಿಗಳ ಎಳೆಗಳಿಂದ ಹೃದಯ ಪಕ್ಷಿಗಳ ರೆಕ್ಕೆಗಳನ್ನು ಬಂಧಿಸಿ, ಕಣ್ಣಿ ಸನ್ನೆಯ ಸೆರೆಯಲ್ಲಿ ಕೊಟ್ಟಿದ್ದಾರೆ. ಪಂಜು ಮತ್ತು ಕಂದೀಲುಗಳನ್ನು ಬೆಳಗಿಸುವ ದೆಸೆಯಿಂದ ಜನರ ಆಸೆಗಳ ದೀಪಗಳು ಅವರಿಗೆ 'ವಾದಿ-ಏ-ಐಮನ್'ದ (ತೂರ್ ಪರ್ವದ ಬಲಗಡೆಗೆ ಇರುವ ಕಾಡು) ರಾತ್ರಿ ಕಳೆಯುವ ಸ್ಥಳಗಳ ಪರ್ಯಟನ ಮಾಡಲಾರಂಭಿಸಿದವು. ದಾದ್ ಮಹಲಿನ ಮುಂಭಾಗದಲ್ಲಿ ಬೆಳಗಿಸಿದ ದೀಪಗಳ ಬಾಹುಳ್ಯದಿಂದ ಆಕಾಶದ ಮಿಂಚುವ ಸ್ವರ್ಗೀಯ ಕಾಯಗಳನ್ನು ಸೂರ್ಯನಿಗಿಂತಲೂ ಅಧಿಕಪ್ರಕಾಶಮಾನಗೊಳಿಸಲಾಗಿದೆ.

'ಆಕಾಶದ ಔನ್ನತ್ಯದ ಮೇಲೆ ದಿವ್ಯಪ್ರಕಾಶದ ತರಂಗದಿಂದ, 'ಸುಹಾ' ದಂತಹ ನಕ್ಷತ್ರವು, ಚಂದ್ರ-ಸೂರ್ಯನ ಹೊರಡುವ ಸ್ಥಳವಾಯಿತು. ಹೃದಯಕ್ಕೆ ಸಂತೋಷ ನೀಡುವ ಮತ್ತು ನೆರಳನ್ನು ನಿವಾರಿಸುವ ದೀಪವು, ಚಂದ್ರನಂತಹ ಕಪೋಲಗಳಿಂದ ಬಹಿರಂಗವಾಯಿತು.ದೀಪಗಳ ಪ್ರತಿಬಿಂಬದಿಂದ ಜಗತ್ತು; ಆಕಾಶದಂತೆ ತಾರೆಗಳಿಂದ ತುಂಬಿತು'.

ದೀಪಾಲಂಕಾರದ ಸಂಚಾರವು ಚಲಿಸದ ಮತ್ತು ಚಲಿಸುವ ನಕ್ಷತ್ರಗಳ ಸಂಖ್ಯೆಯನ್ನು ಲಜ್ಜೆಗೊಳ್ಳುವಂತೆ ಮಾಡಿತು. ಅತಿಥಿ ಸತ್ಕಾರದ ನಗಾರಿ ಹಾಗೂ ದೊಡ್ಡ ನಗಾರಿಯನ್ನು ಬಾರಿಸಿ, ಜಗತ್ತಿನ ಜನರ ಆಕಾಂಕ್ಷೆಯ ಕಿವಿಗಳಿಗೆ ಶಾಶ್ವತವಾಗಿರುವ ಭೋಗದ ಸಂತೋಷ ವಾರ್ತೆಯನ್ನು ತಲುಪಿಸಲಾಯಿತು. ರಬೀಉಲ್‌ಅವ್ವಲ್ ತಿಂಗಳಿನ ಚಂದ್ರದರ್ಶನದಿಂದ ಆರಂಭವಾಗಿ, ರಜ್ಜಬ್‌ಉಲ್ ಮುರಜ್ಜಬ್‌ದ ಒಂದನೆಯ ದಿನಾಂಕದವರೆಗೆ; ಸುಖ ಸಂತೋಷದ ಕೂಟವನ್ನು ಇದೇ ಪ್ರಕಾರವಾಗಿ ಅಲಂಕರಿಸಲಾಗುತ್ತಿತ್ತು. ದೇಶದ ಎಲ್ಲ ಆಸ್ಥಾನಿಕರು, ಮಂತ್ರಿ-ಮಾಗಧರು, ಸಾಮ್ರಾಜ್ಯದ ಸದಸ್ಯರು ಮತ್ತು ಎಲ್ಲ ವಿಜಯಿ ಮಂತ್ರಿಗಳು ಮಲ್ನಾಡ್ ಹಾಗೂ ಕರ್ನಾಟಕ ಪ್ರದೇಶಗಳಿಂದ ಅಪಾರ ಉಡುಗೊರೆ/ಕಾಣಿಕೆಗಳೊಂದಿಗೆ ರಾಜರಿಗೆ ಆಶ್ರಯದಾತನಾದ

ಬಾದಶಾಹನ ದರ್ಬಾರಿನಲ್ಲಿ ಸ್ವಯಂ–ಸಾಷ್ಟಾಂಗ ನಮನ ಸಲ್ಲಿಸುತ್ತ ಬಂದಿದ್ದರು. ಉದಾಹರಣೆಗಾಗಿ, 'ರುಸ್ತುಮೆ ಜಮಾ' ಎಂಬ ಬಿರುದಿನಿಂದ ಕರೆಯಲ್ಪಡುತ್ತಿದ್ದ ರಹಮತ್‌ಖಾನ್, ಸೈದಿ ರೆಹಾನ್, ಫರ್ಹಾದ್‌ಖಾನ್, ಬೀಷ್‌ಜಂಗ್‌ಖಾನ್, ಅಫಜಲ್‌ಖಾನ್ ಮತ್ತು ಮಹಮ್ಮದ್ ಯಾಖೂತ್‌ಖಾನ್ ಸಾರ್ನಿಗೆ, ಜಗತ್ತಿಗೆ ಆಜ್ಞೆ ನೀಡುವುವನ ಆಜ್ಞೆಯಿಂದ ಈ ಶುಭದಾಯಕ ಸಮಾರಂಭದಲ್ಲಿ ಅತಿಥಿ ಸತ್ಕಾರದ ಕಾಣಿಕೆಗಳನ್ನು ನೀಡಲಾಯಿತು. ಇದಕ್ಕಾಗಿ ನಾನು ಈ ಪವಿತ್ರವಾದ ಪುಟಗಳಲ್ಲಿ ಎಲ್ಲ ವಿವರಗಳನ್ನು ಸಂಕ್ಷಿಪ್ತವಾಗಿ ಬರೆಯುವ ಪ್ರಯತ್ನ ಮಾಡುತ್ತಿದ್ದೇನೆ.

ಉತ್ತಮ ಸ್ವಭಾವವುಳ್ಳ ಸಾಮ್ರಾಜ್ಯದ ಆಡಳಿತೆಯ ಮೇಲ್ವಿಚಾರಕನಾದ ನವಾಬ್‌ಖಾನ್‌ಬಾಬಾನಿಗೆ ಇನ್ನಷ್ಟು ಹೆಚ್ಚಿನ ಗಾಂಭೀರ್ಯ ಮತ್ತು ಗೌರವವನ್ನು ಕೊಡಲಾಯಿತು. ನವಾಬ್‌ಖಾನ್ ಬಾಬಾನ ಶ್ರೇಷ್ಠತೆಯ ಸಾಗರದ ತರಂಗವು ಹೊಸ ಚಂದ್ರನಂತೆ ಆಕಾಶದ ಔನ್ನತ್ಯವನ್ನು ತಲುಪಿ, ಹಣಕಾಸು ಹಾಗೂ ಆಡಳಿತೆಯ ದೃಷ್ಟಿಕೋನದಿಂದ ಕೆಲವು ವರ್ಷಗಳ ಪ್ರಯತ್ನ ಮತ್ತು ಏರ್ಪಾಡಿನಿಂದ ಅವನು ತನ್ನ ಜೀವನದಲ್ಲಿ ಏನೆಲ್ಲ ಪಡೆದಿದ್ದನೋ ಅದನ್ನು ಉತ್ತಮ ನೀತಿಯೊಂದಿಗೆ ಜಗತ್ತಿಗೆ ಸಂತೋಷದಾಯಕವಾದ ಈ ಸಮಾರಂಭಕ್ಕೆ ಅಭಿನಂದನೆ ಸಲ್ಲಿಸಲು ವ್ಯಯಮಾಡಿದನು. ಅವನು ಶುದ್ಧವಾದ ಬಂಗಾರ ಹಾಗೂ ದೊಡ್ಡ ಮುತ್ತುಗಳಿಂದ ತುಂಬಿದ ಪೆಟ್ಟಿಗೆಗಳನ್ನು ನಗರದ ಸಂರಕ್ಷಣೆಗಾಗಿ ನೇಮಿಸಲಾದ ಸೈನ್ಯದ ತುಕಡಿಯ ಪ್ರತಿಯೊಬ್ಬ ಸೈನಿಕನ ತಲೆಯ ಮೇಲಿಟ್ಟು, ಸಾಲುಸಾಲಾಗಿ ಕಳುಹಿಸಿದನು.

ಚೀನಾದ ರಾಜರು ಬಳಕೆಮಾಡುವ ಪಾರದರ್ಶಕವಾದ ಚೀನಾದ ಪಾತ್ರೆಗಳು ಮತ್ತು ಫೌರ್‌ದ ರಾಜರು ಬಳಕೆ ಮಾಡುವ ಸ್ವಚ್ಛ ಹಾಗೂ ಪಾರದರ್ಶಕವಾದ ದೊಡ್ಡ ತಟ್ಟೆಯನ್ನು ಆಕಾಶದ ಮೇಲೆ ಕಮಾನು ಗೂಡಿನಲ್ಲಿ ಇಡಲಾಗಿರುವಂತೆ ವ್ಯವಸ್ಥೆ ಮಾಡಲಾಗಿತ್ತು. ಬೆಳ್ಳಿ ಮತ್ತು ಬಂಗಾರದ ಭಾರವಾದ ಪಾತ್ರೆಗಳನ್ನು ಭಾರ ಹೊರುವ ಹೆಣ್ಣು ಒಂಟಿಗಳ ಬೆನ್ನಿನ ಮೇಲೆ ಹೇರಲಾಯಿತು. ದೊಡ್ಡ ಒಂಟೆಗಳ ಮೇಲೆ ಸುಂದರವಾದ ಉಣ್ಣೆ ಬಟ್ಟೆ ಮತ್ತು ಅಲಂಕೃತವಾದ ಬೆಲೆಯುಳ್ಳ ಹಾಸುಬಟ್ಟೆಗಳನ್ನು ಹಾಸಿ, ಅನೇಕ ಕಾರವಾನಗಳನ್ನು ಮೈದಾನದಲ್ಲಿ ಒಯ್ಯಲಾಯಿತು. ವೈವಿಧ್ಯಮಯವಾದ ರಾಜರ ಕೊಡುಗೆ ಹಾಗೂ ಕಾಣಿಕೆಗಳನ್ನು ನೀಡಿ; ಸಂತೋಷ ಮತ್ತು ಸಂತೃಪ್ತಿಯನ್ನುಂಟು ಮಾಡಲಾಯಿತು.

'ಸಂಪೂರ್ಣವಾದ ವೈಭವ–ಗೌರವದೊಂದಿಗೆ, ಜಮಸೀದ್ ರಾಜನಂತಹ ವೈಭವದ ನವಾಬನು ನಡೆದಾಗ, ಗದ್ದಲ–ಗಲಾಟೆಯಿಂದ ಜಗತ್ತು ಈ ಬಗೆಯಲ್ಲಿ ತುಂಬಿತು, ನಗರ ಮತ್ತು ಬೀದಿಗಳು ಜನ–ನಿಬಿಡವಾದವು. ಗುಲಾಮರು ಹಾಗೂ ಸೇವಕಿಯರ ಒಡೆಯನಾದ ಬಾದಶಾಹನ ಕೃಪೆಯಿಂದ, ಜಮಸೀದ್ ರಾಜನಂತಹ ಶ್ರೇಣಿಯ ನವಾಬನು ಯಶಸ್ವಿಯಾದನು.

ಆತನ ಹಣೆಯ ಮೇಲೆ ಸಾಷ್ಟಾಂಗನಮನದ ಹೂವೂ ಕಂಡುಬಂದಿತು, ಆತನ ಶಿರವು ಅಭಿಮಾನದಿಂದ ಆಕಾಶವನ್ನು ತಲುಪಿತು. ಅತ್ಯುನ್ನತ ಸೌಭಾಗ್ಯದ ಬಾದಶಾಹನ ಸಭೆಯಲ್ಲಿ, ರಾಜಧಾನಿಯೊಳಗೆ ರತ್ನಗಳನ್ನು ಮೇಲಕ್ಕೆ ಹಾರಿಸಲಾಯಿತು, ಪ್ರತಿ ವರ್ಷ, ಪ್ರತಿದಿನ ಇದೇ ಬಗೆಯ ಸಮಾರಂಭದಿಂದ, ಧರ್ಮದ ಬಾದಶಾಹನಿಗೆ ಅಭಿನಂದನೆಗಳು ಸಲ್ಲುತ್ತಿದ್ದವು'.

ಎರಡನೆಯ ವಿಜಯಿ ಮುಜಫರುದ್ದೀನ್ ಖಾನ್‌ಖಾನಾನು, ತನ್ನ ವೈಭವ ಗಾಂಭೀರ್ಯದ ಅಧಿಕಾರ ಪ್ರದರ್ಶನದಿಂದ ಜಗತ್ತಿನ ಪ್ರಸಿದ್ಧ ಜನರವರೆಗೆ ಈತನ ಹೆಸರು ತಲುಪಿತು. ಅವನ ಕಾಣಿಕೆ ಮತ್ತು ದಾನದ ಪರಿಣಾಮದಿಂದ ಮುತ್ತುಗಳನ್ನು ಸುರಿಸುವ ಮೋಡವು ಸಾಗರದಲ್ಲಿ ದೊಡ್ಡ ಮುತ್ತುಗಳನ್ನು ಸೃಷ್ಟಿಸುವ ಮಳೆಯನ್ನು ಸುರಿಸಿತು. ಅವನಿಗೆ ಕೊಡಲಾದ ಕಾಣಿಕೆಗಳನ್ನು ಕಂಡು, ಜಗತ್ತಿನ ಬುದ್ಧಿವಂತರ ಕಣ್ಣುಗಳು ಆಶ್ಚರ್ಯಚಕಿತವಾಗಿ ಪಕ್ಷಿಗಳಂತೆ ಹಾರಲಾರಂಭಿಸಿದವು.

ರತ್ನಗಳ ಪೆಟ್ಟಿಗೆ, ರತ್ನಖಚಿತವಾದ ಅಸ್ತ್ರಗಳ ಹರಿವಾಣಗಳನ್ನು ಜನರ ತಲೆಯ ಮೇಲಿಟ್ಟು ಕಳುಹಿಸಲಾಯಿತು. ಸಮೃದ್ಧಿಯ ಸಾಕ್ಷಿ ನೀಡುವ ಕಾಲವು ಅವುಗಳ ತೇಜಸ್ಸಿನಿಂದ, ತನ್ನ ಹಣೆಯ ಮೇಲೆ ಮುತ್ತುಗಳ ಪರದೆಯನ್ನು ಹಾಕಿಕೊಂಡಿತು. ಒಂದು ವೇಳೆ ಆಕಾಶವು ಚೀನಾದ ರಾಜರ ಗಾಜಿನಿಂದ ಉತ್ಪಾದಿಸಿದಂತಹ ವಸ್ತುಗಳ ನಡುವೆ ಇದ್ದ ಫೌರ್‌ದಲ್ಲಿ ತಯಾರಾಗಿದ್ದ ದೊಡ್ಡ ತಟ್ಟೆಯಂತೆ ಸ್ವಯಂ ಬಹಿರಂಗಗೊಳಿಸದಿದ್ದರೆ, ಆತನ ವಿಶ್ವಾಸವು ಮಣ್ಣುಪಾಲಾಗುತ್ತಿತ್ತು. ಲೆಕ್ಕಪರಿಶೋಧಕರಿಗೂ ಸಹ, ಲೆಕ್ಕ ಮಾಡುವುದು ಅಸಾಧ್ಯವೆನಿಸುವಷ್ಟು; ಬೆಳ್ಳಿಯಿಂದ ಅಲಂಕೃತವಾದ ಪಾತ್ರೆಗಳ ಸಂಖ್ಯೆ ಇತ್ತು. ಮಖಮಲ್, ಜರ್‌ಬಫ್ ಮತ್ತು ವೃಕ್ಷಗಳಿಂದ ತುಂಬಿದ ಜಗತ್ತಿನ ಕಾರಖಾನೆಯ ಕಾಂತಿಯು ಕಳೆಗುಂದಿದೆ. ಅತಿ ವೇಗದ ಆಕಾಶ ಸಂಚಾರಿಯಾದ ಅರಬೀ ತಳಿಯ ಕುದುರೆಗಳು ಓಡಲಾರಂಭಿಸಿದರೆ, ಖಿಲ್‌ಜುಮ್ ಮತ್ತು ಅಮ್ಮಾನ್ ನದಿಗಳನ್ನು ಮೋಡದಂತೆ, ತಮ್ಮ ಥಡಿಯ (ಜೀನಿನ) ಸೆರಗಿನಿಂದ ನಾಶಗೊಳಿಸುತ್ತಿದ್ದವು. ಕುದುರೆಗಳು ಬಂಗಾರದ ಥಡಿ, ಅಲಂಕೃತವಾದ ಲಗಾಮನ್ನು ಹಾಕಿಕೊಂಡು, ವೈಯಾರದಿಂದ ನಡೆಯಲಾರಂಭಿಸಿದವು.

ವಿಜಯದ ಸಂಕೇತವಾದ ವಿಜಯಿ ಖಾನ್‌ಖಾನಾನು, ರಾಜರ, ರಾಜನ ದರ್ಬಾರಿನ ಪ್ರದಕ್ಷಣೆಯ ವಿಶಿಷ್ಟವಾದ ಬಟ್ಟೆಧರಿಸಿ, ಸೈನಿಕರು ಹಾಗೂ ಅಶ್ವಾರೋಹಿಗಳನ್ನು ಅಲಂಕರಿಸಿ ಮತ್ತು ಸಿದ್ಧಗೊಳಿಸಿ, ಅತ್ಯಮೌಲ್ಯವಾದ ಉಡುಪಿನಲ್ಲಿ ಸ್ವಯಂ ಶೃಂಗರಿಸಿಕೊಂಡನು. ಪಂಜು ಗುಣದ ಉಡುಪು ಧರಿಸಿ, ಬೆಳಕಿನ ಧ್ವಜವನ್ನು ಒಂಬತ್ತನೆಯ ಆಕಾಶದ ಮೊಗಸಾಲೆಯವರೆಗೆ ಎತ್ತರಿಸಿದರು. ಪಂಜುಗಳು ಮತ್ತು ಕಂದೀಲುಗಳು ಬೆಳಗುವುದರಿಂದ ನದಿಯ ನಡುವೆ ಹಸಿರು ಹುಲ್ಲಿನ ಪ್ರತಿಬಿಂಬವು; ಕೆಂಪು ಮೇಣಬತ್ತಿಯಂತೆ ಕಾಣಲಾರಂಭಿಸಿತು.

'ಆಕಾಶದ ಔನ್ನತ್ಯದ ಮೇಲೆ ಬೆಳಕಿನ ಹರಡುವಿಕೆಯಿಂದ, ದೇವಚರರ ಕೂದಲಿನ ಮೇಲೆ ಹೂಗಳು ಮುದ್ರೆ ಒತ್ತಿದವು, ಬಾದಶಾಹನು ಮಿಂಚುವ ಪಂಜಿನ ನೆರಳಿನಿಂದ, ಮಣ್ಣಿನಲ್ಲಿ ಅಡಗಿದ ಕಾಳು-ಹೊರಬರುವಂತೆ, ಅವನು ನಕ್ಷತ್ರವಾಗಿ ಪ್ರಕಟವಾದನು. ಜನಸಮೂಹದಲ್ಲಿ ಎಲ್ಲೆಡೆಗೆ ಪಂಜುಗಳು ತಿರುಗುವುದರಿಂದ, ಆಕಾಶವು ಮೇಣಬತ್ತಿಯ ಹೊಗೆಯಂತೆ ಕಾಣಲಾರಂಭಿಸಿತು. ಪ್ರತಿಯೊಂದು ಪರ್ವತ ಮತ್ತು ಅರಣ್ಯವು ಗುಲಾಬಿ ಹಾಗೂ ಕೆಂಪು ಹೂವಿನ ಬದಲಾಗಿ, ಪಂಜು ಮೇಣಬತ್ತಿ ಹಾಗೂ ಕಂದೀಲುಗಳಿಂದ ತುಂಬಿತು. ಯಶಸ್ಸಿನೊಂದಿಗೆ ಸಂಬಂಧಿಸಿದ ಖಾನನು ರವಾನೆ ಆದಾಗ, ದೇಶ ಮತ್ತು ಧರ್ಮದ ಬಾದಶಾಹನ ದರ್ಬಾರಿನೆಡೆಗೆ, ಚಂದ್ರ-ಸೂರ್ಯನಂತೆ ಕಣ್ಣಿನಿಂದ ಹೆಜ್ಜೆ ಇಟ್ಟನು. ಆತನ ಶಿರದ ನೆರಳು ಬಾದಶಾಹನ ದರ್ಬಾರಿನಲ್ಲಿತ್ತು. ಸೇವೆಯ ಮಾರ್ಗವನ್ನು ಸತ್ಯದಿಂದ ಕ್ರಮಿಸಲಾಗುವಂತೆ, ಬಾದಶಾಹನ ಕೃಪೆಯಿಂದ ಆತನ ಆತ್ಮಗೌರವವೂ ಸಹ ಅಧಿಕವಾಯಿತು'.

ಸನ್ಮಾನ್ಯ ಹಿರಿಯ ಮಂತ್ರಿ ಸೈದಿ ರೆಹಾನ್ ಶೋಲಾಪುರಿಯು ಒಂಬತ್ತನೆಯ ಆಕಾಶದ ಮುಂದೆ ತಲೆ ಬಾಗಿಸಿರಲಿಲ್ಲ. ಗೌರವಾದರದ ಹೆಚ್ಚಳದಿಂದ ಹಾಗೂ ತನ್ನ ಉನ್ನತ ದರ್ಜೆಯ ಮತ್ಸರದಿಂದ ಜಗತ್ತನ್ನು ಬೆಳಗಿಸುವ ಸೂರ್ಯನಿಗೆ, ಚಂದ್ರನಂತೆಯೇ ಕಲೆ ಉಳ್ಳವನಾಗಿ ಮಾಡಿದ್ದನು. ಅವನು ಸೂರ್ಯನನ್ನು ಮಾನ್ಯತೆಯ ಸಾಷ್ಟಾಂಗ ನಮನದಲ್ಲಿ ಮಗ್ನಗೊಳಿಸಿ; ನಮ್ರತೆ ಮತ್ತು ವಿಧೇಯತೆಯೊಂದಿಗೆ ಬಾದಶಾಹನ ಸೇವೆಯಲ್ಲಿ ತೊಡಗಿದನು.

ಅತ್ಯಧಿಕವಾಗಿ ಅಲಂಕಾರ ಮಾಡಿ, ಕೆಂಪು ರತ್ನ, ಮರಕತ/ಪಚ್ಚೆ, ವಜ್ರ, ಹಳದಿ ಬಣ್ಣದ ಅಮೌಲ್ಯವಾದ ಹರಳು (ಪುಷ್ಯರಾಗ), ಮಾಣಿಕ್ಯ ಹಾಗೂ ಮುತ್ತುಗಳಂತಹ ಬಹು-ಮೌಲ್ಯದ ವೈವಿಧ್ಯಮಯ ಇನಾಮುಗಳನ್ನು ಕಂಡು; ಜಗತ್ತಿನ ರತ್ನ ವ್ಯಾಪಾರಸ್ಥರು ಅವುಗಳ ಮೌಲ್ಯದ ಭಾರದಿಂದ, ಉಂಗುರದ ವರ್ತುಳದಂತೆ ಬಾಗಿ, ಆಶ್ಚರ್ಯದಿಂದ ಬಾಯಿ ತೆರೆದಿದ್ದರು. ರತ್ನ ಖಚಿತವಾದ ಒರೆಯಲ್ಲಿಟ್ಟಿರುವ ಟೊಂಕದ ಕಠಾರಿ ಮುತ್ತು ಬೆಳ್ಳಿ-ಬಂಗಾರದ ಇದೇ ಪ್ರಕಾರದ ಅನೇಕ ವಸ್ತುಗಳನ್ನು ತನ್ನ ಅಸಂಖ್ಯಾತ ಸೈನಿಕರು ಹಾಗೂ ಕುದುರೆ ಸವಾರರ ಸಹಾಯದಿಂದ ತೆಗೆದುಕೊಂಡು, ಸಾಷ್ಟಾಂಗ ನಮನ ಸಲ್ಲಿಸುತ್ತ, ಸ್ವೀಕಾರದ ಮಟ್ಟಕ್ಕೆ ತಲುಪಿದನು. ಒಂದು ಕಾಲಾವಧಿಯಿಂದ ಜೊತೆಗಾರ ಮತ್ತು ಗೌರವ/ವೈಭವದ ಜಗತ್ತಿನ ಏಕೈಕ ಮಿತ್ರನಾಗಿದ್ದ ಉನ್ನತ ಗೃಹದ ಒಡೆಯನಾದ ಖಾನ್‌ಜಾದಾ ಖಾನ್ ರುಸ್ತುಮೆ ಜಮಾನು, ತನ್ನ ಎಲ್ಲ ಸೈನಿಕರಿಗೆ ಗೌರವ-ವಸ್ತು ನೀಡಿ, ಹಲವಾರು ಬಗೆಯ ಇನಾಮುಗಳು, ಬಹುಮೌಲ್ಯದ ಕಾಣಿಕೆಗಳು, ಅಪಾರ ನಗದು, ದುರ್ಲಭವಾದ ಹಾಗೂ ಮಿಂಚುವ ರತ್ನಗಳು ಮತ್ತು ದಾಳಿಂಬೆಯ ಬಣ್ಣದ ಮಾಣಿಕ್ಯದ ಆಭರಣಗಳ ಡಬ್ಬಿಗಳೊಂದಿಗೆ ಅತಿಥಿ ಸತ್ಕಾರದ ಅಭಿನಂದನೆಯನ್ನು ಸಲ್ಲಿಸಿದನು. ರಾಜರ ಸಂರಕ್ಷಣೆ ಮಾಡುವಂತಹ ಬಾದಶಾಹ ಗಾಜಿಯ ದೃಷ್ಟಿಯ ನೆರಳಿನಲ್ಲಿ ಅವರು ಜಗತ್ತನ್ನು ಶೃಂಗರಿಸುವ ಹಾಗೂ ಜಯಿಸುವ ವಿಧಾನದಿಂದ ಪರಿಚಿತರಾದರು.

ಇತರ ನವಾಬರಲ್ಲಿ ಪ್ರತಿಯೊಬ್ಬರಿಗೆ ಆಕಾಶದ ಮೇಲೆ ತಲೆ ಎತ್ತುವ ಪ್ರಯೋಜನ ಪ್ರಾಪ್ತವಾಗಿತ್ತು. ಅವರ ವೈಭವ-ಗಾಂಭೀರ್ಯಕ್ಕೆ ಅನುಸಾರವಾಗಿ, ಆದರೆ ಇದಕ್ಕಿಂತಲೂ ನೂರುಪಟ್ಟು ಅಧಿಕವಾಗಿ; ಔತಣ ಕೂಟದ ಪಿಂಚಣಿ ಇನಾಮು ಮತ್ತು ಕಾಣಿಕೆಗಳನ್ನು ಪಡೆದರು. ಸಾಮ್ರಾಜ್ಯದ ಎಲ್ಲ ನಂಬಿಗಸ್ತರು ಹಾಗೂ ಸದಸ್ಯರಿಗೆ ರತ್ನ ಖಚಿತವಾದ ಟೊಂಕದ ಖಡ್ಗ, ಕುದುರೆಗಳ ಮೇಲೆ ಜೀನು/ಥಡಿ ಕಟ್ಟುತ್ತಲೇ ಪಾದರಸದಂತೆ ಕಳವಳಗೊಳ್ಳುತ್ತಿದ್ದ ಮೋಡದಂತೆ ಓಡುವ ಕುದುರೆಗಳು ತಮ್ಮ ಗೊರಸುಗಳ ಚಿನ್ಹೆಗಳಿಂದ ಮೈದಾನದ ಹಾಳೆಯ ಮೇಲೆ, ಅರ್ಧದಾರಿ ಸಾಗುತ್ತಲೇ ಒಂಬತ್ತನೆಯ ಆಕಾಶದಲ್ಲಿ ಅಡಗಿದಂತಹ ರಹಸ್ಯವನ್ನು ಗುರುತಿಸಿಕೊಳ್ಳುತ್ತಿದ್ದವು. ಇಂತಹ ಕುದುರೆಗಳನ್ನು ಕೊಟ್ಟು, ಆಸ್ಥಾನದ ಆಸನಗಳನ್ನು ನೀಡಿ; ಅವರು ಅಭಿಮಾನ ಹಾಗೂ ಗೌರವ ಹೊಂದುವಂತೆ ಮಾಡಿದನು.

ಜೇಬು ಮತ್ತು ಸೆರಗಿನಿಂದ ನಗರವಾಸಿಗಳು ಸಾಕಷ್ಟು ಸಂತೋಷ ಹೂಗಳನ್ನು ತಲೆಗಳ ಮೇಲೆ ಎಸೆದರು. ದೂರದ ದೇಶಗಳಿಂದ ಬಂದಿದ್ದ ಪ್ರಸಿದ್ಧ ಜನರು, ಜಗತ್ತನ್ನು ಶೃಂಗರಿಸುವ ಈ ಸಮಾರಂಭದ ಪ್ರತಿಷ್ಠೆಯ ಬಗೆಗೆ ಕೇಳಿದ್ದರು. ಅವರು ಶ್ರದ್ಧಾ ಪೂರ್ವಕವಾಗಿ ಆಗಮಿಸಿ, ಧ್ಯೇಯಗಳನ್ನು ಸಾಧಿಸುವ ಭಂಡಾರ ಹೊಂದಿರುವ ಆಡಳಿತೆಯಿಂದ; ಶಾಶ್ವತವಾದ ಭೋಗದ ಬಂಡವಾಳವನ್ನು ಪಡೆಯಲು ಶೀಘ್ರವಾಗಿ ಸಮಾವೇಶಗೊಂಡರು. ಜಗತ್ತಿನ ಆ ಎಲ್ಲ ರಾಜರು ಬಾದಶಾಹನ ಆಮಂತ್ರಣ ಮತ್ತು ಅಲಂಕಾರವನ್ನು ಸಮ್ಮತಿಸಿದರು. ಜಗತ್ತನ್ನು ಸಂತುಷ್ಟಗೊಳಿಸುವ ಈ ಸಂತೋಷದ ಸಮಾಚಾರವನ್ನು ಕೇಳಿ; ರಾಜರಿಗೆ ಆಶ್ರಯದಾತನಾದ ಬಾದಶಾಹನ ದರ್ಬಾರಿಗೆ ವೈವಿಧ್ಯಮಯ ಕಾಣಿಕೆ ಹಾಗೂ ರಾಜರ ಇನಾಮುಗಳನ್ನು ಕಳುಹಿಸಿದರು. ವಿಶಿಷ್ಟವಾಗಿ, ಹಿಂದುಸ್ತಾನದ ಸಮಾನ ಭಾಗ್ಯಶಾಲಿ ಬಾದಶಾಹನಾದ ಶಹಾಜಹಾನನು, ಅತಿಥಿ ಸತ್ಕಾರದ ಅಭಿನಂದನೆಯ ವಿಧಿ-ವಿಧಾನಗಳನ್ನು ಸಮ್ಮತಿಸಿ; ಅವುಗಳಿಗೆ ಪ್ರಾಧ್ಯಾನತೆ ನೀಡಿದನು. ಅವನು ಉನ್ನತ ಹಜರತ್ ಬಾದಶಾಹ ಗಾಜಿಯ ದರ್ಬಾರಿಗೆ ಜನರು ಎಂದೂ ಕಂಡಿರಲಾರದಂತಹ ಅಪೂರ್ವ ಕಾಣಿಕೆಗಳನ್ನು ಕಳುಹಿಸಿದನು. ಇಲ್ಲಿಯವರೆಗೆ, ದಕ್ಷಿಣದ ಉನ್ನತ ಮನೆತನದ ಯಾವುದೇ ಉಚ್ಚ ಶ್ರೇಣಿಯ ವೈಭವದ ಬಾದಶಾಹನಿಗೆ ಉನ್ನತ ವೈಭವದ ಹಿಂದೂಸ್ತಾನದ ಬಾದಶಾಹನು ಇಂತಹ ಗೌರವವನ್ನು ನೀಡಿರಲಿಲ್ಲ.

'ಬಾದಶಾಹ ಗಾಜಿಯ ಸೌಭಾಗ್ಯವಾಗಿದೆ, ಏನೆಂದರೆ : ಪ್ರಥಮ ದಿನದಿಂದಲೇ, ಆತನ ದರ್ಬಾರಿನ ಪ್ರದಕ್ಷಿಣೆ ಮಾಡಿ ಆಕಾಶವು ಪ್ರತಿಷ್ಠೆಯನ್ನು ಪಡೆದಿದೆ, ಬಾದಶಾಹನ ದಾರಿಯ ಮಣ್ಣಿನ ಮೇಲೆ, ಯಾರೇ ಆಗಲಿ ಆಕಾಶದಂತೆ ಶಿರ ಬಾಗಿಸಿದರೂ, ಆತನ ಮುಖದ ಮೇಲೆ, ಹಣೆಯಿಂದ ಸೂರ್ಯನ ಹೂಗಳು ಅರಳುತ್ತವೆ'.

ಜಯುಸೀದ್ ರಾಜನಂತಹ ವೈಭವದ ಬಾದಶಾಹನಾದ ಅಬ್ದುಲ್ಲಾ

ಖುತುಬ್‌ಶಾಹನೂ ಸಹ ಅಪೂರ್ವವಾದ ಔತಣ ಕೂಟದ ಕಾಣಿಕೆ ನೀಡುವ ಕಾರ್ಯದಲ್ಲಿ ಯಾವುದೇ ಲೋಪ-ದೋಷ ಮಾಡಲಿಲ್ಲ.

ಅವನು ಸಾಮ್ರಾಟನ ವೈಭವ-ಗಾಂಭೀರ್ಯದೊಂದಿಗೆ; ಅರಸತ್ವದ ಸಡಗರ ಹೊಂದಿದ ಕಾಣಿಕೆಗಳನ್ನು ಕಳುಹಿಸಿದನು. ಇವುಗಳಲ್ಲಿ ಮಾಣಿಕ್ಯದ ಕಿರೀಟದ ಬಗೆಗೆ, ಅಪಾರವಾದ ಮೆಚ್ಚುಗೆಯನ್ನು ವ್ಯಕ್ತಪಡಿಸಲಾಯಿತು. ಜಗತ್ತಿನ ರತ್ನಾಭರಣ ಪರೀಕ್ಷಕರು, ತಮ್ಮ ದೃಷ್ಟಿ ಸಾಮರ್ಥ್ಯವನ್ನು ಪರಿಶೀಲನೆಯ ತಟ್ಟೆಯ ಮೇಲಿಟ್ಟು ಬಲಿಕೊಟ್ಟರು. ಅದರ ಸೌಂದರ್ಯದಿಂದ ನಾಚಿಕೆ ಪಟ್ಟುಕೊಂಡು, ಸುಂದರ ಪ್ರೇಯಸಿಯರು ದಂತಗಳ ಮುತ್ತುಗಳಲ್ಲಿ ತಮ್ಮ ತುಟಿಗಳ ಮಾಣಿಕ್ಯಗಳನ್ನು ಅಡಗಿಸಿ; ಪ್ರೇಮಿಗಳ ಕಣ್ಣುಗಳಿಂದ ತಪ್ಪಿಸಿಕೊಂಡರು.

'ಬಾದಶಾಹನು ಮಾಣಿಕ್ಯದ ಕಿರೀಟವನ್ನು ತನ್ನ ಶಿರದ ಮೇಲೆ ಇಟ್ಟುಕೊಂಡಾಗ, ತನ್ನ ಕಿರೀಟದಿಂದ ಸೂರ್ಯನನ್ನು ನಿಂದಿಸಿದನು, ಯಾರು ಆ ಕಿರೀಟದ ಮೇಲೆ ದೃಷ್ಟಿ ಹರಿಸಿದರೋ, ಅವರೆಲ್ಲ ಕೆಂಪು ಬಣ್ಣದ ಉಡುಪು ಧರಿಸಿದರು'.

ಈಗಾಗಲೇ ಉಲ್ಲೇಖಿತವಾದ ತಿಂಗಳಿನ ಹತ್ತನೆಯ ದಿನಾಂಕದ ಗುರುವಾರ ರಾತ್ರಿ; ಜಗತ್ತು ಮತ್ತು ಜಗತ್ತಿನ ಜನರ ರಾಜಕುಮಾರನ ಮೆರವಣಿಗೆಯ ಸುಖ-ಸಂತೋಷದ ಗುಲ್ಲು-ಗಲಾಟೆಯು ಆರಂಭವಾಯಿತು. ಎಲ್ಲ ಅನುಪಮ ನಾಯಕರು ಹಾಗೂ ಉನ್ನತ ಶ್ರೇಣಿಯ ಸೌಭಾಗ್ಯಶಾಲಿ ಮಂತ್ರಿಗಳು; ವೈಭವ ಗಾಂಭೀರ್ಯದಿಂದ, ಎರಡೂ ಕಡೆಗೆ ಪಂಕ್ತಿಗಳಲ್ಲಿ ನಿಂತರು. ಜಗತ್ತಿಗೆ ಆಜ್ಞೆ ಮಾಡುವುವನ ಆಜ್ಞೆಯಿಂದ, ಶುಭ ಸಮಯದಲ್ಲಿ ಜನರ ಹಜರತ್ ರಾಜಕುಮಾರನನ್ನು ಮಂಗಳಕರ ಕುದುರೆಯ ಮೇಲೆ ಸಂಪೂರ್ಣ ವೈಭವ-ಗೌರವದಿಂದ ಕುಳ್ಳಿರಿಸಿದರು. ಈ ಕುದುರೆಯ ಲಗಾಮು ಮೃದು ಸ್ವಭಾವದ ಸಿಹಿ ಮಾತನಾಡುವ ವೀರನ ಕೈಯಲ್ಲಿತ್ತು. ಎಲ್ಲ ಅದೃಷ್ಟಶಾಲಿ ಸುಪ್ರಸಿದ್ಧ ಮಂತ್ರಿಗಳು ಮತ್ತು ನಾಯಕರು, ಜನರ ರಾಜಕುಮಾರನ ಮುಂದೆ, ತಲೆ ಎತ್ತಿ, ಧ್ವಜವಾಗಿ ಪರಿಣಮಿಸಿದರು.

'ಎಲ್ಲೆಡೆಗೆ ಕೊಳಲಿನ ಧ್ವನಿಯು ಕೇಳಲಾರಂಭಿಸಿತು, ಯುವಕರು ಮತ್ತು ವೃದ್ಧರು ಸಂತೋಷದಿಂದ ಗದ್ದಲ-ಗಲಾಟೆ ಮಾಡಲಾರಂಭಿಸಿದರು. ಕಂದೀಲು ಹಾಗೂ ಪಂಜು ಬೆಳಗಿಸುವುದರಿಂದ, ಆಕಾಶದ ರಹಸ್ಯವು ಸಂಪೂರ್ಣವಾಗಿ ಬಹಿರಂಗಗೊಂಡಿತು'.

ಬೆಂಕಿಯಾಟಗಾರರು ಬೆಂಕಿಯಾಟವನ್ನು ಆರಂಭಿಸಿ, ಗದ್ದಲ-ಗಲಾಟೆಗೆ ಬಿಸಿಯೇರಿಸಿದರು. ಗಾಳಿಯಲ್ಲಿ ಹಾರಾಟ ಮಾಡುವ ನಕ್ಷತ್ರಗಳ ಮಳೆಯು; ವಾತಾವರಣದಲ್ಲಿ ಅಲ್ಲಲ್ಲಿ ಬಂಗಾರದ ತಾರೆಗಳ ಹೂಗಳನ್ನು ಸುರಿಸಿತು. ರತ್ನಗಳಂತಹ ಬೆಂಕಿಯ ಕಿಡಿಗಳ ರಾಶಿಗಳು ಪಾದರಕ್ಷೆಗಳಿಗೆ ಬಿಸಿಯೇರಿಸುತ್ತಿದ್ದವು. ಆಕಾಶವಾಸಿಗಳೂ ಸಹ; ಕೆಳಗಿಳಿದು ಬಂದರು.

‘ಉಂಟಾಗಿರುವ ಗುಲ್ಲು-ಗಲಾಟೆಯಿಂದ, ಆಕಾಶವು ಆವೇಶಭರಿತವಾಯಿತು, ಭೂಮಿಯು ಆವೇಶಗೊಂಡ ಅಗ್ನಿ ಸಾಗರದಂತೆ ಕಂಡುಬಂದಿತು. ಪ್ರೇಮಿಗಳ ಹೆಗಲು ಮತ್ತು ಬಾಹುಗಳು, ಕಣ್ಣೀರಿನಿಂದ ಆಗುವಂತೆ, ಹೂಗಳ ಎಸೆತದಿಂದ, ನಗರ ಹಾಗೂ ಮೈದಾನಗಳು ಉದ್ಯಾನಗಳಾದವು, ಹೂಗಳ ಮಳೆಯಿಂದ, ವಸಂತಋತು ಹರಡಿದೆ, ಪ್ರತಿಯೊಂದು ಉದ್ಯಾನವು ಬುಲ್‌ಬುಲ್ ಪಕ್ಷಿಗೆ ಕಾಣುವ ಜ್ವಾಲೆ ಆಗಿದೆ, ಸುಂದರಿಯರು ಬಾಯ್ದೆರೆಯುತ್ತಲೇ ಹೂಗಳನ್ನು ಉದುರಿಸಿ, ಅಂಗೈಯ ಮೇಲಿಟ್ಟ ಹೂವಿನಂತೆ ಸ್ಥಾನ ಪಡೆದಿದ್ದಾರೆ’.

ನರ್ತಕಿಯರು ಹೃದಯಾಕರ್ಷಕವಾದ ಸುಂದರ ಉಡುಪು ಧರಿಸಿ, ಒಬ್ಬರು ಇನ್ನೊಬ್ಬರ ಕೊರಳಲ್ಲಿ ಕೈ ಇಟ್ಟು, ಟೊಂಕವನ್ನು ಅಲ್ಲಾಡಿಸಿ, ಪ್ರೇಮಿಗಳ ಸಂಬಂಧಗಳನ್ನು ತಮ್ಮ ಕೂದಲಿನ ದಾರದಲ್ಲಿ ಸುತ್ತಿಕೊಳ್ಳುತ್ತಿದ್ದರು. ಹೂಗಳನ್ನು ಹರಿಯುವ ಭಾವ-ಭಂಗಿಯೊಂದಿಗೆ ಆಶ್ಚರ್ಯಚಕಿತರಾಗಿ, ಪ್ರೇಕ್ಷಕರ ಹೃದಯದ ಮೊಗ್ಗುಗಳನ್ನು ಹರಿದು, ಒಬ್ಬರು ಮತ್ತೊಬ್ಬರ ಕೊರಳಲ್ಲಿ ಹಾಕುತ್ತಿದ್ದರು.

‘ಪ್ರೇಮಿಗಳ ಪ್ರಶಂಸೆಯಲ್ಲಿ ಮಾಡಲಾಗುವ ಪ್ರಲಾಪದ ವಿಧಾನಗಳನ್ನು ಕಂಡು, ಎಲ್ಲಿಯವರೆಗೆ ದೃಷ್ಟಿ ಚಲಿಸುವುದೋ ಹೃದಯವು ಕೈತಪ್ಪಿಕೊಳ್ಳುತ್ತಿತ್ತು. ಈ ಮಾಂತ್ರಿಕರು ಎಲ್ಲರನ್ನೂ ತಮ್ಮೆಡೆಗೆ ಆಕರ್ಷಿಸುತ್ತಾರೆ, ಕಣ್ಣು ಸನ್ನೆಯಿಂದ ಒಬ್ಬರು ಇನ್ನೊಬ್ಬರ ತೋಳತೆಕ್ಕೆಯಲ್ಲಿ ಕೈ ಹಾಕುತ್ತಾರೆ. ಈಗ ಹೃದಯವನ್ನು ಎದೆಯೊಳಗೆ ಅಡಗಿಸುವುದರಿಂದ ಏನು ಪ್ರಯೋಜನ?ಏಕೆಂದರೆ: ಈ ಗಂಡಾಂತರ ಸೃಷ್ಟಿಸುವವರು, ಕಣ್ಣುಸನ್ನೆಗಳಿಗೆ ಸಮಾಚಾರ ತಿಳಿಸಿದರು. ತಮ್ಮ ಹೂಗಳಂತಹ ಮುಖಗಳನ್ನು ಬೆವರಿನಿಂದ ಮೃದುಗೊಳಿಸಿ, ನಕ್ಷತ್ರಗಳಂತಹ ಸ್ವಭಾವದವರು, ಲಜ್ಜೆಯಿಂದ ಚಂದ್ರನಾಗಿದ್ದಾರೆ’.

ಸೌಭಾಗ್ಯಶಾಲಿ ಸೂರ್ಯನಂತಹ ಜನರ ಕರತಾಡನವು ವಿರಹಿಗಳ ಬೀದಿಯ ದುರ್ದೈವಿಗಳ ಮುಖದ ಮೇಲೆ ಮಿಲನದ ಮುಂಜಾವಿನ ಕಿಡಕಿಯನ್ನು ತೆರೆದಿದೆ. ಜಿಂಕೆಯ ಕಣ್ಣುಗಳನ್ನು ಮತ್ತು ಹೊಸ ಚಂದ್ರನ ಹುಬ್ಬುಗಳನ್ನು ಹೊಂದಿದವರು. ಜಿಗಿಯುತ್ತಿರುವ ಸನ್ನೆಗಳಿಂದ ನೂತನ ವಸಂತದ ವಿಹಾರಿಗಳೊಂದಿಗೆ ರಂಜನೆ ಮಾಡಿದರು. ಕಸ್ತೂರಿಯ ಸುಗಂಧ ಹರಡುವ ತಮ್ಮ ಕೇಶಗಳಿಂದ ಕಸ್ತೂರಿಯ ಚೀಲ ತಯಾರಿಸಿ; ಚೀನಾ ಹಾಗೂ ಖತಾದ ಯೌವನದ ಹರಿಣಿಗಳ ಜಿಗಿತ-ನೆಗೆತದ ದಾರಿಯನ್ನು ಮುಚ್ಚಿದವು. ಪನ್ನಂಬರ ಮತ್ತು ಊದಿನ ಹೊಗೆಯು, ಜನರ ಮೆದುಳನ್ನು ಸ್ವರ್ಗೋದ್ಯಾನದ ಮೊಗ್ಗುಗಳ ಸುಗಂಧದಿಂದ ತುಂಬಿತು.

‘ಇಂತಹ ಸಂತೋಷದ ಸಮಾರಂಭವು, ಜಗತ್ತಿನಲ್ಲಿ ಎಲ್ಲಿಯೂ ಕಂಡು ಬಂದಿಲ್ಲ, ಸೂರ್ಯ ಮತ್ತು ಚಂದ್ರನಿಂದ, ಆಕಾಶದವರೆಗೆ ಬಟ್ಟಲನ್ನು ತಿರುಗಿಸಲಾಯಿತು’.

ಬಾದಶಾಹನ ಹಿರಿಮೆಯನ್ನು ಶೃಂಗರಿಸುವುವ, ಬಾದಶಾಹನ ಭಂಡಾರದ ಏಕೈಕ ಮುತ್ತು, ಗೌರವ/ವೈಭವದ ಜಗತ್ತಿಗೆ ಉನ್ನತಿ ನೀಡುವಂತಹ ಜನತೆಯ ರಾಜಕುಮಾರನು ಅಮರವಾದ ಸೌಭಾಗ್ಯ ಮತ್ತು ಶಾಶ್ವತವಾದ ವೈಭವ–ಗಾಂಭೀರ್ಯದೊಂದಿಗೆ ವಿಹಾರದಿಂದ ಹಿಂತಿರುಗಿ ಬಂದು; ಪ್ರವಾದಿಯಂತಹ ಸ್ವಭಾವದ ತನ್ನ ತಂದೆಯ ಪಾದ ಚುಂಬನ ಮಾಡಿ, ಅಮರವಾದ ಸೌಭಾಗ್ಯದ ಕಿರೀಟವನ್ನು ಧರಿಸಿದನು. ಉತ್ತರಾಧಿಕಾರತ್ವದ ಆಸನದ ಮೇಲಿದ್ದ ಜನರು 'ಅಭಿನಂದನಾ ಗೀತೆಯ ಕಿವಿ ಓಲೆ'ಯನ್ನು ತೊಡಿಸಿದರು. ಎಲ್ಲ ನಂಬಿಗಸ್ತ ನಾಯಕರು ಇತರ ಪ್ರಸಿದ್ಧ ಸರದಾರರು ಹಾಗೂ ಸೈನಿಕರು ಜರತಾರಿ ಕೆಲಸ ಮಾಡಿದ ಗೌರವ–ವಸ್ತ್ರ ಧರಿಸಿ; ಬಾದಶಾಹನ ಕೃಪೆಯ ಗೌರವವನ್ನು ಪಡೆದರು. ಗುರುವಾರ ರಾತ್ರಿ ಮೂರು ಗಂಟೆಗೆ, ಅಂತಿಮ ಪ್ರವಾದಿಯ ಪ್ರಕಾಶಮಾನವಾದ ಧರ್ಮದ ಸಂಪ್ರದಾಯದಂತೆ; ಜನರ ರಾಜಕುಮಾರ ವೃತ್ತಚ್ಛೇದನದ ವಿಧಿ–ವಿಧಾನವನ್ನು ಆಚರಿಸಲಾಯಿತು.

'ಈ ಬಗೆಯಲ್ಲಿ ಜಗತ್ತಿನ ಉದ್ಯಾನವು ಸಂತೋಷದಿಂದ ತುಂಬಿತು, ಬೀದಿಗಳು ಮತ್ತು ನಗರವು ಉದ್ಯಾನಕ್ಕೆ ಮತ್ಸರವನ್ನುಂಟು ಮಾಡಿದವು. ಎಲ್ಲೆಡೆಗೆ ಮೋಹ/ಪ್ರೇಮ ಕಂಡುಬರಲಾರಂಭಿಸಿತು. ಯಶಸ್ಸಿನ ವೃಕ್ಷವು ಫಲದಾಯಕವಾಯಿತು, ಈ ಪ್ರಕಾರವಾಗಿ, ಜಗತ್ತು ಕಾರ್ಯನಿರತವಾಯಿತು. ಏನೆಂದರೆ; ಪ್ರೇಯಸಿಯು ಪ್ರಿಯಕರನ ಅಭಿಲಾಷಿ ಆದಳು, ಕೂಟದ ಜನರು ಸಂತೋಷದ ಜೊತೆಗಾರರಾದರು, ಧರ್ಮದ ಬಾದಶಾಹನಿಗಾಗಿ ಪ್ರಾರ್ಥನೆ ಸಲ್ಲಿಸಲಾರಂಭಿಸಿದರು, ಒನಪು–ವೈಯಾರದ ಸಾರಾಯಿಯು ನಿರಂತರವಾಗಿ ಆವೇಶದಲ್ಲಿರಲಿ, ದೊಡ್ಡ ಬಟ್ಟಲು ಪಾನ ಮಾಡುವ ಪ್ರೇಯಸಿಯರ ಕಣ್ಣುಗಳಿಂದ, ಹೃದಯವನ್ನು ಶೃಂಗರಿಸುವ ಈ ಸಮಾರಂಭದ ವಿಶೇಷತೆಯಿಂದ ಬುದ್ಧಿಯು, ಬಾದಶಾಹನ ಕೂಟವನ್ನು ಸಂತೋಷದಿಂದ ಅಲಂಕರಿಸುತ್ತಿತ್ತು'.

ಹಜರತ್ ಬಾದಶಾಹನ ಯಶಸ್ಸಿನೊಂದಿಗೆ ಸಂಬಂಧಿಸಿದ ಮುಜಫರುದ್ದೀನ ಖಾನ್‌ಖಾನಾನನ್ನು, ಕರ್ನಾಟಕ ಮತ್ತು ಮಲ್ನಾಡಿನ ವಿಜಯ ಸಂಪಾದನೆಗಾಗಿ ಕಳುಹಿಸಿದನು.

'ಬೆಳಗಾಗುತ್ತಲೇ, ವಿಜಯ ಹಾಗೂ ಯಶಸ್ಸಿನ ಸುವಾರ್ತೆಯು ನನ್ನ ಕಿವಿಗಳಿಗೆ ಕೇಳಿಬಂದಿತು, ಏನೆಂದರೆ; ಖುಸ್ರೋಗಾಜಿಯ ಪ್ರಶಂಸೆಯಿಂದ ಮಾತನ್ನು ಆರಂಭಿಸಿರಿ, ಮೊಹಮ್ಮದ್‌ಶಾಹನ ಛತ್ರಿಯ ನೆರಳು ಜಗತ್ತನ್ನು ವಶಪಡಿಸಿಕೊಂಡಿದೆ, ಓ, ವಿಜಯ–ಸಂಪನ್ನ ಹುಮಾ ಪಕ್ಷಿಯೇ! ಆಕಾಶದೆತ್ತರಕ್ಕೆ ಹಾರಾಟ ಮಾಡು'.

ಅವನ ವೈಭವ–ಗಾಂಭೀರ್ಯದ ಜಗತ್ತಿನೊಂದಿಗೆ ಸಂಬಂಧಿಸಿದ, ಇಸ್ಲಾಂ ಧರ್ಮದ ಪ್ರದೇಶದ ಸುಪ್ರಸಿದ್ಧ ಜನರು ಜಗತ್ತಿನ ಕೀರ್ತಿಯನ್ನು ಸಂಪಾದಿಸಿದ್ದಾರೆ. ಪ್ರವಾದಿಯಂತಹ ಸ್ವಭಾವದ ಈ ಬಾದಶಾಹನ ಗುಣಗಳನ್ನು ವಿವರಿಸುವ ಶಕ್ತಿಯು,

ರಹಸ್ಯ ಜ್ಞಾನಿಗಳು ಹಾಗೂ ಉನ್ನತ ವಿಚಾರದ ಜನರಿಗೆ ಇಲ್ಲ. ಅಂತಿಮವಾಗಿ, ಅವನ ಅಪಾರ ಕೃಪೆ ಮತ್ತು ಕಾಣಿಕೆಗಳಿಂದ ವೈಭವ-ಗಾಂಭೀರ್ಯ ಹೊಂದಿದ ಜನರು; ಅನಂತ ಸಂಪತ್ತು ಹಾಗೂ ಸೌಭಾಗ್ಯವನ್ನು ಪಡೆದಿದ್ದಾರೆ.

ಅವನ ಶುಭದಾಯಕ ಔತ್ರಿಯ ನೆರಳಲ್ಲಿ, ಗೌರವ ಮತ್ತು ಉನ್ನತಸ್ಥಾನ ಹೊಂದಿರುವ ಹುಮಾ ಪಕ್ಷಿಯು; ಆಕಾಶವಾಸಿಯಾದ 'ಅನ್‌ಖಾ' ಪಕ್ಷಿಯಂತೆ ಸುಖ ಸಂತೋಷದಿಂದ ಇರುತ್ತದೆ. ಶಾಂತಿ ಹಾಗೂ ಸಂರಕ್ಷಣಾ ಸಾಮ್ರಾಜ್ಯದ ಸಿಂಹಾಸನದ ಮೇಲೆ ಆಸೀನನಾದ, ಜಗತ್ತಿನ ಮೇಲೆ ಆಳ್ವಿಕೆ ಮಾಡುವ ಹಜರತ್ ಬಾದಶಾಹ ಗಾಜಿಯು, ಯಾವಾಗಲೂ ಉನ್ನತ ಧೈರ್ಯದೊಂದಿಗೆ ದೇವರ ಬೆಂಬಲದಿಂದ ಧರ್ಮ ಮತ್ತು ಸಂಪತ್ತಿನ ಕಾನೂನುಗಳ ಪೀಠಿಕೆಯನ್ನು ರೂಪಿಸುವ ಕಾರ್ಯದಲ್ಲಿ ಅವರನ್ನು ಮಗ್ನಗೊಳಿಸಿದನು. ಅವರು ಬಾದಶಾಹನ ಔನ್ನತ್ಯ ಹಾಗೂ ಮಹಾಘನತೆಯ ಸಂಪೂರ್ಣತೆಯಿಂದ ದೇವರ ಅಸ್ತಿತ್ವದ ಹೊರತಾಗಿ, ಯಾವುದೇ ವೈಭವದ ವ್ಯಕ್ತಿಯಿಂದ ಪ್ರಭಾವಿತರಾಗಿಲ್ಲ.

೧೦೫೪ ಹಿಜ್ರಿಯಲ್ಲಿ, ಬಾದಶಾಹನ ಕೃಪೆಯ ಹೆಚ್ಚಳದಿಂದ 'ವಿಜಯದ ಗುರುತು' ಎನಿಸಿದ ಖಾನ್‌ಖಾನಾನನ್ನು ಸೇನಾಪತಿಯ ಗೌರವ-ವಸ್ತ್ರದಿಂದ ಸನ್ಮಾನಿಸಿ; ಕರ್ನಾಟಕ ಮತ್ತು ಮಲ್ನಾಡ್‌ದ ಇನ್ನೂ ಅಜೇಯವಾದ ಕೆಲವು ಸುದೃಢ ಕೋಟೆಗಳನ್ನು ಜಯಿಸಲು; ಯಶಸ್ಸಿನ ವ್ಯವಸ್ಥೆ ಮಾಡುವ ವಿಶೇಷವಾದ ಸೈನ್ಯ ಸೈದಿ ರೆಹಾನ್ ಶೋಲಾಪುರಿ, ಪೇಶ್‌ಜಂಗ್‌ಖಾನ್, ಆಜಮ್‌ಖಾನ್ ಹಾಗೂ ಇತರ ಉನ್ನತ ಮತ್ತು ಗೌರವಾನ್ವಿತ ಮಂತ್ರಿಗಳು ಹಾಗೂ ನಾಯಕರೊಂದಿಗೆ, ಕರ್ನಾಟಕ ಮತ್ತು ಮಲ್ನಾಡಿಗೆ ಕಳುಹಿಸಲಾಯಿತು.

ಬಾದಶಾಹನ ಸೌಭಾಗ್ಯದ ಹೆಚ್ಚಳದಿಂದ, ವಿಜಯದ ಸಂಕೇತವೆನಿಸಿದ ಖಾನ್‌ಖಾನಾನು, ಈ ಪ್ರದೇಶಗಳ ಹೊರ ವಲಯಕ್ಕೆ ತಲುಪಿದ ಸ್ವಲ್ಪ ಸಮಯದಲ್ಲಿ ಪ್ರವಾದಿಗಳ ಒಳಿತು ಬಯಸುವ ಸ್ಥಿರಚಿತ್ತ ಉಳ್ಳವರ 'ಧರ್ಮದ ವಿಜಯ-ಗ್ರಂಥ' ಬರೆದನು. ಇದೇ ಕಾರಣದಿಂದ, ಹಜರತ್ ಬಾದಶಾಹ ಗಾಜಿಯು, ಮುಜಫರುದ್ದೀನ ಖಾನ್‌ಖಾನಾನಿಗೆ ತನ್ನ ಸಹನಾಮದ ಗೌರವವನ್ನು ನೀಡಿ; ಸಾಮ್ರಾಜ್ಯದ ಗೌರವಸ್ಥ ನಾಯಕರಿಗೆ ಅಸೂಯೆಯ ಕಾರಣವನ್ನಾಗಿ ಮಾಡಿದನು. ಅವನಿಗೆ, 'ಖಾನ್‌ಮೊಹಮ್ಮದ್ ಮೊಹಮ್ಮದ್ ಶಾಹಿ', ಎಂಬ ಮಹೋನ್ನತ ಬಿರುದು ನೀಡಿದನು.

ದೇವರು ಇಚ್ಛಿಸಿದರೆ, ಪ್ರಸಿದ್ಧ ವಿಜಯಗಳ ಗ್ರಂಥವಾದ ಈ ಖ್ಯಾತ 'ಮೊಹಮ್ಮದ್ ನಾಮಾ' ದಿಂದ; ಎರಡೂ ಜಗತ್ತಿನ ಕೀರ್ತಿಯ ವ್ಯವಸ್ಥೆ ಮಾಡುವೆನು. ಅದೃಷ್ಟ ಗ್ರಂಥದ ಹೊರ ಹೊದಿಕೆ ಮಾಡುವುವನು ಚಂದ್ರನ ತುದಿಯಿಂದ ನಕ್ಷತ್ರ ಹಾರಗಳ ವಿನ್ಯಾಸವನ್ನು ರೂಪಿಸಿ, ಶುದ್ಧ ಬಂಗಾರದ ಪುಟದ ಮೇಲೆ ದ್ವಿಪದಿ ಬರೆದು;

ಹೊರಹೊದಿಕೆಯನ್ನು ಸೂರ್ಯನಂತೆ ಶೃಂಗರಿಸುವನು. ವಿಜಯದ ಶಕುನ ನೋಡುವುವರು. ಈ ಗ್ರಂಥದಲ್ಲಿ ರಸ ಸಿಂಧೂರದಿಂದ ಶೃಂಗರಿಸುವನು, ವಿಜಯದ ಶಕುನ ನೋಡುವುವರು; ಅನ್ವೇಷಿಸಿ, ವಿಜಯ ಮತ್ತು ಯಶಸ್ಸಿನ ಶಕುನವನ್ನು ತಿಳಿಯುವರು.

'ಗುಲಾಮರನ್ನು ಸಂರಕ್ಷಿಸುವ ಬಾದಶಾಹನ ಶುಕುನವು, ಯಶಸ್ಸಿನ ಶಕುನ ಆಗಿದೆ, ಅದರ ಖಡ್ಗವನ್ನು ಎಳೆದು, ವಿಜಯದ ಬಾಗಿಲನ್ನು ತೆರೆದು ಬಿಡು, ನೀನು ವಿಜಯದ ಸಂಕಲ್ಪ ಮಾಡಿ, ವಾತಾವರಣದಲ್ಲಿ ರೆಕ್ಕೆ ಬಿಚ್ಚು, ಒಂದೇ ಶೈಲಿಯಲ್ಲಿ ಏಳನೆಯ ಆಕಾಶವನ್ನು ನಿನ್ನ ಬೇಟೆಯನ್ನಾಗಿ ಮಾಡಿಕೋ, ಕುದುರೆಯ ಗೊರಸಿನ ನೆರಳಿನಿಂದ ಸೂರ್ಯನ ಮುಖದ ಮೇಲೆ ಪರದೆ ಕಟ್ಟು, ಕುದುರೆಯನ್ನು ತ್ವರಿತವಾಗಿ ಓಡಿಸಿ, ಭೂಮಿಯನ್ನು ಆಕಾಶದ ರಹಸ್ಯಜ್ಞಾನಿಯನ್ನಾಗಿ ಮಾಡಿಕೋ, ನಿನ್ನ ಖಡ್ಗದ ಪವಾಡದಿಂದ, ನಾಸ್ತಿಕತೆಯ ಮಾಟವನ್ನು ಮಿಥ್ಯಗೊಳಿಸು, ನಿನ್ನ ದೆಸೆಯಿಂದ, ಧರ್ಮದ ದೇಶಕ್ಕೆ ಮಹಿಮೆಯ ಸಿಂಹಾಸನದ ಮೇಲೆ ಸ್ಥಾನ ನೀಡು, ಬಾದಶಾಹನ ಪ್ರಶಂಸೆ ಮಾಡಿ, ಜುಹೂರನೇ! ನೀನು ಕಾವ್ಯ ದೇಶದ ಅರಸನಾಗಿರುವೆ, ಎರಡೂ ಜಗತ್ತುಗಳಲ್ಲಿ, ಅಪ್ರತಿಮತೆಯ ದೊಡ್ಡ ನಗಾರಿ ಬಾರಿಸಲು ಆರಂಭಿಸು'.

■

*

ಅಧ್ಯಾಯ - ೧೨

ಹಜರತ್ ಗೇಶ್ಯೂದ ರಾಜರ ದರ್ಶನ

(ಬಾದಷಾ ಮೊಹಮ್ಮದ್ ಆದಿಲ್‌ಶಾರವರು (ಆಳ್ವಿಕೆಯ ಕಾಲ ಕ್ರಿ.ಶ.೧೬೨೬-೧೬೫೬) ಹಿಜರಿವರ್ಷ ೧೦೫೫ರಲ್ಲಿ ಜಿಲ್ಕಾಯಿದಾ (೧೧ನೇ) ತಿಂಗಳ ೫ನೇ ದಿನಾಂಕದಲ್ಲಿ ನಡೆದ ಸಯ್ಯದ್ ಹುಸೈನಿ ಗೇಸು ದರಾಜ್‌ರ ಉರೂಸಿನಲ್ಲಿ(ಪುಣ್ಯ ತಿಥಿಯ ಸಮಾರಂಭದಲ್ಲಿ) ಪಾಲ್ಗೊಂಡ ತನ್ನ ಅನುಭವವನ್ನು ಬರೆದಿಟ್ಟುಕೊಂಡದ್ದನ್ನು ಜಹೂರ್ ಬಿನ್ ಜಹೂರಿ ಈ ಹಸ್ತಪ್ರತಿಯ ಮೊದಲ ಪುಟಗಳಲ್ಲಿ ದಾಖಲಿಸಿದ್ದಾರೆ)

ದೀನ್ (ಧರ್ಮ) ಮತ್ತು ದುನಿಯಾ(ಲೌಕಿಕ ಜಗತ್ತು)ದಲ್ಲಿ ಸುಖಸಂಪತ್ತನ್ನು ದಯಪಾಲಿಸುವ ಕೀಲಿ ಕೈಯಲ್ಲಿಟ್ಟಿರುವ, ಗುಣನಡತೆಯಲ್ಲಿ ಅದ್ವಿತೀಯ ಉದಾಹರಣೆಯನಿಸಿದ, ಜನರ ಮೇಲೆ ತನ್ನ ದಯಾಸಂಪನ್ನತೆಯನ್ನು ತೋರುವ ಸುಲ್ತಾನ ಈ ಕಾಲದ ಅತ್ಯಂತ ಪ್ರಭಾವಿ ವಲೀ(ದೇವರ ಪ್ರಿಯ ಸ್ನೇಹಿತ)ಸಾಹೇಬರೆನಿಸಲ್ಪಟ್ಟ ಹಜ್ರತ್ ಸಯ್ಯದ್ ಹುಸೈನಿ ಗೇಸು ದರಾಜ್ **-ನವ್ವರುಲ್ಲಾಹಿ ಮರ್ಕದಹೂ**(ಅಲ್ಲಾಹ ಅವರ ಸಮಾಧಿಗೆ ಪವಿತ್ರ ಬೆಳಕನ್ನು ಕರುಣಿಸಲಿ) ಉರೂಸಿನಲ್ಲಿ ಪಾಲ್ಗೊಳ್ಳುವ ಸಲುವಾಗಿ ಪ್ರಯಾಣ ಬೆಳೆಸಿದ್ದರು. ಅವರು ತಮ್ಮ ಪಾವನ ಲೇಖನಿಯಿಂದ ಇಲ್ಲಿ ತಮಗಾದ ಅನುಭವವನ್ನು ಬರೆದು ಇಟ್ಟಿದ್ದರು. ಹಜ್ರತ್ ಬಾದಶಾಹ ಘಾಝಿ ಸಾಹೇಬರು(ಬಾದಶಹ ಮುಹಮ್ಮದ್ ಆದಿಲ್‌ಶಾರವರು) ವಿಶ್ವದ ಎಲ್ಲೆಡೆಯ ಭಕ್ತಜನರ ಮಹದಾಕಾಂಕ್ಷೆಯನ್ನು ಪೂರೈಸುವ ಸಲುವಾಗಿ ಸನ್ ೧೦೫೫ ಹಿಜರಿ ವರ್ಷದಲ್ಲಿ ಹಜ್ರತ್ ಷಾಹಬಾಝ್ ಬಂದೇನವಾಜ್ ಸಯ್ಯದ್ ಮುಹಮ್ಮದ್ ಹುಸೈನಿ ಗೇಸು ದರಾಜ್, **ಖದ್ದಸುಲ್ಲಾಹು ಸಿರ್ರಹೂ**(ಅವರಿಗೆ ಅಲ್ಲಾಹು ತನ್ನಲ್ಲಿನ ಶ್ರೇಷ್ಠ ದರ್ಜೆಯನ್ನು ಅನುಗ್ರಹಿಸಲಿ) ಅದ್ಭುತ ಸಂಭ್ರಮದ ಉರೂಸ್ ಸಮಾರಂಭವನ್ನು ನೆರವೇರಿಸಿದರು.

ಉರೂಸಿನ ವಿಜ್ರಂಭಣೆಯ ಸಫಲತೆಗೆ ಎಂತಹ ಅವಿಸ್ಮರಣೀಯ ಗೌರವ ದೊರಕಿತು ಎಂದರೆ ಅಂತಹ ವೈಭವ ಆ ಕಾಲದ ಯಾವ ಸುಲ್ತಾನರಿಗೂ ದೊರಕಿರಲಿಲ್ಲ. ಹುಜೂರರ ಎಲ್ಲಕಾಲದಲ್ಲೂ ನಶಿಸದೆ ಉಳಿಯುವಂತಹ ಶಾಶ್ವತ ಘನತೆ(**ಜಲಾಲ್**), ಗೌರವಕ್ಕೆ ಅರ್ಹರಾಗಿರುವ ಅವರ ಪವಿತ್ರ ಸನ್ನಿಧಿಯಲ್ಲಿ ಬಾದಷಹಾ ಜಿಲ್‌ಖಾಯಿದಾ ತಿಂಗಳ ೫ನೇ ದಿನದಂದು ಹಜ್ರತ್ ಗೇಸು ದರಾಜರ ಪವಿತ್ರ ದರ್ಗಾದ ಕಡೆಗೆ ಪ್ರಯಾಣ ಬೆಳೆಸಿದರು. ಅದೇ ದಿನ ಬಾದಷಾಹರ ಜನ್ಮದಿನವಾದುದರಿಂದ ಹಜ್ರತ್‌ರವರ ವೈಭವದ ಉರೂಸ್‌ನ ಸಂಭ್ರಮದ ಮಧ್ಯೆಯಲ್ಲಿ ತನ್ನ ಹುಟ್ಟು ಹಬ್ಬ ಆಚರಿಸಿದರು. ಅಲ್ಲಿಗೆ ಆಗಮಿಸಿ ಪ್ರದಕ್ಷಿಣೆಯಲ್ಲಿ ನಿರತ ಜನಸಮೂಹಕ್ಕೆ ಇದರಲ್ಲಿ ಭಾಗವಹಿಸುವ ಸದವಕಾಶವನ್ನು ಮಾಡಿಕೊಟ್ಟರು. ಹಾದಿಯುದ್ದಕ್ಕೂ ಪ್ರತೀ ಹಂತದಲ್ಲೂ ಬಾದಶಾಹರ ವೈಭವಪೂರ್ಣ ಘನತೆಯನ್ನು ಸಾರಿ ಮೆರೆಯುವ ರಾಜ್ಯ ಲಾಂಛನದ ಧ್ವಜಗಳು ಅಲೆಗಳಂತೆ ಬಳುಕುತ್ತಿದ್ದವು. ತಮ್ಮ ಘನತೆ ಗೌರವಗಳಿಂದ

ಈ ಸಂತಸದ ಸಮಾರಂಭದ (**ಮೆಹಫಿಲ್‌ನ**) ಅದ್ಭುತ ಸೌಂದರ್ಯದ ವೈಭವಪೂರ್ಣ ದೃಶ್ಯವನ್ನು ಜನರು ಕಂಡು ಆಸ್ವಾದಿಸಿದರು. ನರ್ತನ ಮತ್ತು ಗೀತೆಗಳಿಂದ ಸುತ್ತಲಲ್ಲಿದ್ದ ಕಾಡಿನ ಮರಮಟ್ಟುಗಳು, ಗುಡ್ಡ ಪರ್ವತಗಳನ್ನೊಳಗೊಂಡ ಪ್ರಾಕೃತಿಕ ಸೌಂದರ್ಯಕ್ಕೆ ಹೊಸ ಹುರುಪು ಬಂದಂತಿತ್ತು. **'ಮುಹೀತ್'** ಎಂಬ ಹೆಸರಿನ ಕೊಳದ ಸುತ್ತ ಸೇರಿದ ಜನರು ಆಕಾಶದಲ್ಲಿ ನಕ್ಷತ್ರಗಳು ಮಿನುಗುವಂತೆ ಕಾಣಿಸುತ್ತಿದ್ದರೆ, ಈ ಜನರ ಮಧ್ಯೆ ಇದ್ದ ಬಾದಶಾಹ ಚಂದ್ರನಂತೆ ಹೊಳೆಯುತ್ತಿದ್ದರು. ಜನ್ಮದಿನದ ಆಚರಣೆಯ ನಂತರದ ಸಭೆಯಲ್ಲಿ ಹಾಜರಿದ್ದ ಜನಸಮೂಹ ರಸ್ತೆಯ ಎರಡೂ ಬದಿಯಲ್ಲಿ ಸಾಲಾಗಿ ನಡೆದು ಸಮಾಧಿ ಸ್ಥಳದ ಕಡೆ ತೆರಳಿ, ಅಲ್ಲೇ ಸ್ಥಳಮಾಡಿಕೊಂಡು ಕೂತರು.

ಬಾದಶಾಹ ನಡೆಸಿದ ಈ ಪವಿತ್ರ ಕೈಂಕರ್ಯದ ಫಲಪ್ರದವಾಗಿ ನಂದ್‌ಭಾಲ್(ನಂದ್ಯಾಲ?) ಮತ್ತು ಇತರ ಇಲಾಖೆಗಳಿಗೆ ಸೇರಿದ ಕೋಟೆಗಳನ್ನು ಬಾದಶಾಹರ ಸೈನ್ಯ ವಶಪಡಿಸಿಕೊಂಡು ವಿಜಯಸಾಧಿಸಿದರು. ಹೀಗೆ ವಶಪಡಿಸಿಕೊಳ್ಳುವ ಮೂಲಕ ಈ ಭವ್ಯ ಕೋಟೆಗಳು ಎಷ್ಟೊಂದು ಸುದೃಢವಾಯಿತೆಂದರೆ ಎಂತಹ ಬಲಶಾಲಿ ವೈರಿಗಳಾಗಿದ್ದರೂ ಕೂಡ ಈ ಕೋಟೆಗಳ ಮೇಲೆ ದಾಳಿ ನಡೆಸಿದರೆ ಎಳ್ಳಷ್ಟೂ ಅಲುಗಾಡದಷ್ಟು ಬಲಶಾಲಿಯಾಗಿ ಮಾರ್ಪಟ್ಟಿತು. ವಿಜಯ ಯಾತ್ರೆಯ ಸುದ್ದಿ ಹರಡುತ್ತಿದ್ದಂತೆ ಹಜ್ರತ್ ಬಾದಶಾಹ ಮುಹಮ್ಮದರ ಚಹರೆಯಲ್ಲಿ ಸಂತಸ ಮೂಡಿ, ಅಲ್ಲಾಹನ ಕೃಪೆಗೆ ಕೃತಜ್ಞನಾಗಿ ತಲೆಬಾಗುವಂತಾಯಿತು. ಜನರಿಗೂ ದೀನೆ ಮುಹಮ್ಮದೀ(ಇಸ್ಲಾಮ್ ಧರ್ಮ)ಗೆ ಲಭಿಸಿದ ವಿಜಯ ಹಾಗೂ ಸಂಭ್ರಮದ ಶುಭ ಸಮಾಚಾರ ತಿಳಿದು ಅಭಿಮಾನದಿಂದ ಎದೆಯುಬ್ಬಿಸಿ ನಿಂತಂತಾಯಿತು. ಜನರ ಸಂಭ್ರಮಕ್ಕೆ ಪ್ರತಿಕ್ರಿಯಿಸಿದ ಬಾದಶಾಹ, ತನ್ನ ಅಭಿಮಾನಿಗಳ ಸಂತಸವನ್ನು ಹೆಚ್ಚಿಸಲು

ಎರಡು ಹುಸಿತೋಪುಗಳನ್ನು ಸ್ಫೋಟಿಸಲು ಆಜ್ಞೆನೀಡಿದ. ಈ ತೋಪುಗಳು ಸಿಡಿದಾಗ ಉಂಟಾದ ಭಯಂಕರ ಸದ್ದಿನಿಂದ ವೈರಿಗಳು ಮತ್ತು ವಿರೋಧಿಗಳ ಎದೆ ನಡುಗಿ, ಸುರಿಯುವ ಮಳೆಗೆ ಮಣ್ಣಿನ ದೊಡ್ಡ ಹೆಂಟೆ ಕರಗುವಂತೆ ಕುಸಿದು ನೆಲಸಮವಾಯಿತು. ಈ ವಿಜಯದ ಸಂಭ್ರಮವನ್ನು ಕಂಡು ಆಸ್ಥಾನದ ಸರ್ವ ಗೌರವಾನ್ವಿತ ಮಹನೀಯರ ಮುಖ ಸಂತಸದಿಂದ ಅರಳಿತು. ಸೋಮವಾರದಂದು ಹಜ್ರತ್ ಬಾದಷಾ ಗಾಝಿ ಸಾಹೇಬ(ವೀರಯೋಧ ಬಾದಶಹಾ ಮುಹಮ್ಮದ್ ಆದಿಲ್ ಶಾ)ರು ಅಲ್ಲಿಂದ ಪ್ರಯಾಣಿಸಿ ಹಜ್ರತ್ ಗೇಸುದರಾಜರ ಬಾರಗಾಹ(ದರ್ಗಾ)ದ ಮುಂದೆ ಹಾಜರಾದರು. ಅಲ್ಲಿ ಸಮಾಧಿಯ ಸುತ್ತ ಪವಿತ್ರ ಪ್ರದಕ್ಷಿಣೆ ಮಾಡಿದರು.

(ಬಾದಶಾಹನ ಸಲುವಾಗಿ ರಚಿಸಿದ **ಮದಾಹ ಸರಾಯಿ**(ಬಹುಪರಾಕಿನ) ದ್ವಿಪದಿಗಳು)

ಅಯ್ ಷಹೇ ಇಕ್‌ಲೀಮ್ ಹಿಮ್ಮತೇ ಖುಸ್ರೋ ಘಾಝಿ ತುಯೀ
ಘರ್ಝ್ ಸಹಾಬೇ ಬಕ್ಷತತ್ ಝುಮಕಾಂ ಗಂಜೀನ ಶುದ್

ಓ! ಸಮಸ್ತ ಭೂಖಂಡದ ಬಾದಶಾ, ಧೈರ್ಯಶಾಲಿ ವೀರಯೋಧರೆಂದರೆ ನೀವೇ ಸರಿ!
ತಮ್ಮ ದಯೆ, ಕರುಣೆಯ ಮೋಡದಿ ಸುರಿದ ಮಳೆಯಿಂದ ಸಂಪತ್ಭರಿತವಾಯಿತು
ಪ್ರತಿಯೊಂದು ಮನೆಯೂ!

ಚರ್ಖೆ ಗರ್ದಾನ್ ಬಹರ್ ರಕ್ಷತ್ ದಾದ್ ಪೈವಸ್ತಾ ಸಲಾಹ್
ಚಾರ್ ರುಕ್ನೆ ಕಿಶ್ವರ್ ಸರ್ಫೆ ಚಾರ್ ಆಯಿನಾ ಶುದ್

ಆಕಾಶದ ತುಂಬ ಕಾಣುತಿವೆ ಯುದ್ಧದ ಆಯುಧಗಳಂತೆ
ನಾಲ್ಕೂ ದಿಕ್ಕಲಿ ಇವುಗಳ ಪ್ರತಿಫಲನವಾಗಿದೆ, ನಾಲ್ಕು ಕನ್ನಡಿಯಲಿ ಕಂಡಂತೆ

ಹಜ್ರತ್ ಗಾಝಿ ಬಾದಶಾಹರು ಮನಃಪೂರ್ವಕ ನೀಡಿದ ಕೊಡುಗೆಯಿಂದಾಗಿ ಹಜ್ರತ್ ಗೇಸುದರಾಜ್‌ರ ಉರೂಸಿನ ವೈಭವವು ಅಲ್ಲಿನ ಇಡೀ ವಾತಾವರಣವನ್ನು ಚಿತ್ತಾಕರ್ಷಕವಾಗಿ ಮೂಡಿಸಿತು. ಮೆರವಣಿಗೆಯಲ್ಲಿ ಕಂದೀಲುಗಳು ಮತ್ತು ಮಶಾಲು(ದೀಪಗುಚ್ಛ)ಗಳ ಬೆಳಕಿನಲ್ಲಿ ಹಜ್ರತರ ದರ್ಗಾ ಸಮಾಧಿ ಸ್ಥಳವು ಮುಳುಗಿ ಎದ್ದು ಬೆಳಗುತ್ತಿದ್ದಂತೆ ಕಾಣಿಸುತ್ತಿತ್ತು. ಸಮಾಧಿಸ್ಥಳದ ಮುಂದೆ ಎದುರಲ್ಲಿರುವ ಕೊಳದ ದಂಡೆಯಲ್ಲಿ ಬೇಲಿಯಂತೆ ಉದ್ದಕ್ಕೂ ಸಾಲುದೀಪಗಳನ್ನು ಹಚ್ಚಿ ಬೆಳಗಿಸಿದರು. ನೋಡುಗರ ಹೃದಯ ತುಂಬುವ ಈ ದೀಪಗಳ ಪ್ರತಿಬಿಂಬ ಕೊಳದ ನೀರಿನಲ್ಲಿ ಪ್ರತಿಫಲಿಸಿದ ಬೆಳಕಿನ ಚಿತ್ರ ಹೇಗೆ ಕಾಣುತ್ತಿತ್ತೆಂದರೆ ಆಕಾಶದ ಅಂಗಳದಲ್ಲಿ ನೀರಿನ ಅಲೆಗಳು ಮೂಡಿ ಪ್ರದಕ್ಷಿಣೆ ಮಾಡುವ ಭಕ್ತರ ಪ್ರತಿಬಿಂಬವು ನಕ್ಷತ್ರದಂತೆ ಮಿನುಗುತ್ತಿರುವಂತೆ ಕಂಡುಬರುತ್ತಿತ್ತು. ಹಜ್ರತ್ ಶಹಬಾಝ್(ಗೇಸು ದರಾಜ್)ರ ಉರೂಸಿನ ವೈಭವವನ್ನು ಖಸೀದಾ(ಹೊಗಳು ಗೀತೆ) ರೂಪದಲ್ಲಿ ಹಾಡಿ ಹೊಗಳುತ್ತಿದ್ದರು.

ಖಸೀದಾ ದರ್ ತಾರೀಫ್ ಉರ್ಸ್ ಹಜ್ರತೇ ಶಾಹಬಾಝ್

(ಹಜ್ರತ್ ಶಾಹಬಾಝ್(ಬಂದೇ ನವಾಜ್ ಗೇಸು ದರಾಜ್)ರ ಉರೂಸಿನ ವೈಭವದ ಖಸೀದಾ (ಗೀತೆ)

ಉರ್ಸೆ ಶಹನ್‌ಷಾಹೆ ದೀನ್ ಹಜ್ರತೇ ಮಖ್ದೂಮ್ ಅಸ್ತ್ ಯೀಂ

ಕೆ ತವಾಫೆ ದರೇವೂ ಕಾಬಯೆ ದಿಲ್ ಕಾಮ್‌ರೋಝ್ ಅಸ್ತ್

ಧಾರ್ಮಿಕ ಸುಲ್ತಾನರೆನಿಸಿದ ಹಜ್ರತ್ ಮಖ್ದೂಮ್‌ರ(ಬಂದೇನವಾಜರ) ಉರೂಸ್ ಇದು,

ಇವರ ದರ್ಗಾದ ಪ್ರದಕ್ಷಿಣೆ ಕಾಬಾ ಎಂಬ ಶುದ್ಧ ಹೃದಯದ ಪ್ರದಕ್ಷಿಣೆಯಂತಾಗಿದೆ.

ಗುಲ್‌ಗುಲೇ ಕೋಸ್ ವನವಾಯೆ ನಯ್ ವ ಆವಾಝೆ ನಫೀರ್

ಪತ್‌ಅಯಾಬೆ ದಿಲೋ ದೀನ್ ಅಸ್ತ್ ವ ಝಿಹಾಲೆ ಉಬ್ದ ಖುಶಾ ಅಸ್ತ್

ನಗಾರಿಯ ಸದ್ದು, ಸಂಗೀತದ ಲಯ, ಶಹನಾಯಿಯ ಸುಶ್ರಾವ್ಯ ಸ್ವರ

ನಿಜ, ಇದು ಧಾರ್ಮಿಕ ಜಯವೂ ನಮ್ಮ ಸರ್ವ ಸಂಕಷ್ಟಗಳ ಪರಿಹಾರಕವೂ ಹೌದು.

ಜುಸ್ ಸದಾಯೆ ಲಿಮನಿಲ್ ಮುಲ್ಕ್ ನಯಾಯತ್ ದರ್‌ಘೋಷ್

ಕೋಸೆ ಖಿಝರ್ ಅಸ್ತ್ ದರ್‌ಗುಂಬದೇ ಊ ಗರ್ಮ್ ಸದಾ ಅಸ್ತ್

ಲಿಮನಿಲ್ ಮುಲ್ಕ್‌ನ ಹೊರತಾಗಿ ಯಾವುದೇ ಸದ್ದು ಇಲ್ಲಿ ಕೇಳುತ್ತಿಲ್ಲ

ಖಿಝರ್‌ರ ಪವಿತ್ರ ನಗಾರಿಯ ಸದ್ದು (ಗೇಸು ದರಾಜರ ದರ್ಗಾದ) ಗುಂಬಜ್‌ನ ಮೂಲಕ ಹೊರಹೊಮ್ಮುತ್ತಿದೆ.

(ಅಲ್ಲಾಹನ ನಾಮಸ್ಮರಣೆಯ ಸತತ ಘೋಷ)

(ನಬಿ/ಪ್ರವಾದಿಗಳಲ್ಲಿ ಓರ್ವರು)

ಹಿಂದುವಾನೆ ಜುಮ್ಲ ಮುಸಲ್ಮಾನೆ ಶುದಾ ಅಝೌಕೆ ಸುಜೂದ್

ಹಾಜತೇ ದೈರೋ ಹರಂ ಅಝ್ ದರಯೀಂ ಕಾಬಾ ರವಾ ಅಸ್ತ್

ಸಮಸ್ತ ಹಿಂದೂಗಳು ಸಜ್ದಾದ ವೈಭವವನ್ನು ಕಂಡು ಮುಸಲ್ಮಾನರಾದರು

ದೇವಾಲಯ ಮಸೀದಿಯ ಹರಕೆಗಳೆಲ್ಲ ಕಾಬಾದಂತಿರುವ ದರ್ಗಾಕ್ಕೆ ಸಂದವು

ರೌಝಯೇ ಅಜ್ ಅರ್ಷ್ ಬುವತ್ ಖುಲ್ದೇ ಬರೀನ್ ದಾಮನೇ ದಷ್ತ್

ಸಲ್‌ಸಬೀಲ್ ಅಸ್ತ್ ಕೆ ದರ್ ಮದ್ದೆ ನಝರ್ ಜಲ್ವನುಮಾ ಅಸ್ತ್

ಕಾಡಿನ ಪ್ರಕೃತಿ ಸೌಂದರ್ಯದ ನಡುವಿನ ದರ್ಗಾ ಷರೀಫ್ ಅರ್ಷ್‌ನಂತಿದೆ

ಸ್ವರ್ಗದ ನದಿ ಸಲ್‌ಸಬೀಲ್ ತನ್ನ ಸೌಂದರ್ಯವ ಪ್ರದರ್ಶಿಸಿದಂತೆ.

ಸ್ವರ್ಗದಲ್ಲಿರುವ ದೇವರ ಆಸ್ಥಾನ

ಹೌಝೆ ಆತಿಷ್‌ಕೆ ಬುವತ್ ತವಜ್ಜುವೆ ಆಂ ಶೋಲಯೆ ತೂರ್
ಯದೆ ಬೈಝಾಂ ಝಿಗ್ರೆಬಾಂ ಜನಾಬಷ್ ಪೈದಾ ಅಸ್ತ್

ಪವಿತ್ರ ಕೊಳವೆಂಬ ಬೆಳಕಿನ ಕುಂಡವು ತೂರ್ ಪರ್ವತದಲ್ಲಿ ಪ್ರಜ್ವಲಿಸುವ ಪ್ರಕಾಶದಂತಿದೆ

ಯದೇ ಬೈಝಾಂ*ದಲ್ಲಿ ಹೊರಹೊಮ್ಮುವ ಅದ್ಭುತ ಪ್ರಕಾಶದಂತೆ ಹುಜೂರರ (ಬಂದೇ ನವಾಜರ) ದರ್ಗಾದ ಪ್ರಭೆ ಹೊಮ್ಮುತಿದೆ.

***ಮೂಸಾರ ಪವಿತ್ರ ಹಸ್ತ**

ಹರ್ಬುಬಾಬೆ ಷುದಾ ಚಷ್ಮೆ ನಿಗರಾಂ ಘರ್ರುಖೇ ಆಬ್
ಮೌಜ್ ಚೂನ್ ಅಬ್‌ರೂಹೆ ಮಾಷೂಕ್ ಇಷಾರತ್ ಎ ಪೈಮಾಂ ಅಸ್ತ್
ಕೊಳದ ನೀರ್ಗುಳ್ಳೆಗಳು ಎದ್ದು ಈ ಸುಂದರ ದೃಶ್ಯವ ವೀಕ್ಷಿಸತೊಡಗಿವೆ
ಪ್ರೇಮಿಕೆಯ ಹುಬ್ಬಿನಂತೆ ಮನೋಲ್ಲಾಸದ ಸನ್ನೆ ಮಾಡುತಿದೆ.

ಗಿರ್ದ್‌ಆನ್ ರೌಝಯೆ ಆಲೀ ಝು ಸರ್ ಕದ್ರೋ ಷರ್ಫ್
ಹರ್‌ಗಯಾಹೆ ಕೆ ಸರ್ ಅಸ್ಖಾಕ್ ಬರಾಅರ್ ತೂಬಾ ಅಸ್ತ್
ತಮ್ಮ ಪವಿತ್ರ ದರ್ಗಾದ ನಾಲ್ಕೂ ದಿಕ್ಕಿನಲ್ಲಿ ಅಹ್ಲಾದಕರ ಹೂದೋಟವಿದೆ
ಪ್ರತಿ ಗಿಡವೂ ಇಲ್ಲಿನ ಮಣ್ಣಿನಿಂದ ಹುಟ್ಟಿಬರುವುದು ಭಾಗ್ಯವೆಂದು ಪರಿಗಣಿಸಿದೆ.

ಹಜ್ರತ್ ಬಾದಶಾಹ ಗಾಝಿಯವರ (ಸುಲ್ತಾನ ಮುಹಮ್ಮದ್‌ಶಾನ)ವೈಭವವನ್ನು ಏನೆಂದು ಹೊಗಳಲಿ! ಅವರು ತಮ್ಮ ಆಳ್ವಿಕೆಯಲ್ಲಿ ಪರಿಪಾಲಿಸುವ ಸತ್ಯ, ನ್ಯಾಯದ ಮೂಲಕ ಎಲ್ಲರನ್ನೂ ಸಮಾನವಾಗಿ ಕಾಪಾಡುತ್ತಿದ್ದಾರೆ.

ಹಯ್ಯಝು ತೆಹರೀರ್(ಉಂಬಳಿ ಕೊಡುಗೆ ದಾನಗಳನ್ನು ಬಾದಶಾಹ ನೀಡುವ ಸ್ಥಳ) ಎಂಬ ಪೀಠದಲ್ಲಿ ಕೂತು ಎಲ್ಲ ಹಿರಿಯರ, ಕಿರಿಯರ ಅಹವಾಲು, ಸಂಕಷ್ಟಗಳ ಬಗ್ಗೆ ಕೇಳಿಕೊಂಡು ತೀರ್ಮಾನಗಳನ್ನು ನೀಡುವುದು, ಕೊಡುಗೆ ಕಾಣಿಕೆಯನ್ನು ನೀಡುವುದು ಮುಹಮ್ಮದ್‌ಪುರ್‌ನ ಬಾದಶಾಹ(ಮುಹಮ್ಮದ್ ಆದಿಲ್ ಷಾ)ರ ಎಂದಿನ ರೂಢಿಯಾಗಿತ್ತು.

ಪರಮ ವೀರನೆಂಬ ಖ್ಯಾತಿಯ ತರದ್ದುದ್ ಖಾನೆಖಾನ್ ಕಟ್ಟಿಸಿದ ಕೋಟೆಯೊಂದನ್ನು ವಶಪಡಿಸಿಕೊಂಡ ಶುಭವಾರ್ತೆ ಬರುವ ಮೂಲಕ ಅಲ್ಲಾಹನ ಕೃಪೆಯಿಂದ ಸುಲ್ತಾನರಿಗೆ ಭವಿಷ್ಯದಲ್ಲಿ ವಿಜಯಸರಣಿಯೇ ತಮ್ಮ ಪಾಲಾಗುವ ಶುಭ ಸೂಚನೆ ಸಿಕ್ಕಿತು.

ಹಿಜರಿ ತಿಂಗಳು ಜಿಲ್‌ಖಾಯಿದಾದ ದಿನಾಂಕ ೧೬ರಂದು ಹಜ್ರತೇ

ಮಖ್ದೂಮ್(ಖ್ವಾಜಾ ಬಂದೇನವಾಜ್)ರ ಉರುಸು ಮುಕ್ತಾಯ ಹಂತಕ್ಕೆ ಬಂತು. ಇಲ್ಲಿಂದ ಇಸ್ಲಾಮ್ ಧರ್ಮದ ಮಹಾನುಭಾವರು ವಶಪಡಿಸಿಕೊಂಡ ಕೋಟೆಯ ಮಾರ್ಗವಾಗಿ ಸುಲ್ತಾನನ ಪರಿವಾರ ಉರೂಸಿನಿಂದ ಮುಹಮ್ಮದ್ ಪುರದ ಅರಮನೆಗೆ ಹಿಂತಿರುಗಲು ಸುವ್ಯವಸ್ಥೆಯ ನೇರಹಾದಿಯೊಂದು ದೊರೆತಂತಾಯಿತು. ಶಾಹೀ ಗುಂಬಜ್(ಖ್ವಜಾ ಬಂದೇ ನವಾಜರ ದರ್ಗಾದ ಸೂರಿನ ತುದಿಯ ಗೋಲಾಕೃತಿ)ನ ವೈಭವಪೂರ್ಣ ಸೂರ್ಯ ಕಿರಣಗಳು ವಿಶ್ವದೆಲ್ಲಡೆ ಹರಡಿತು.

ಹುಸ್ನಾಬಾದ್ ಪಟ್ಟಣದಿಂದ ವಿಜಯಶಾಲಿಯಾಗಿ ಹಿಂತಿರುಗಿ ತೆರಳಿ ಆತ್ಮಾನಂದ (ರೂಹೆ ಆಫ್ಝಾ)ನೀಡುವ ಪ್ರಫುಲ್ಲ ಫಿರೋಜಾಬಾದಿನ ವಾತಾವರಣದಲ್ಲಿ ಬೀಡುಬಿಟ್ಟು, ಶಾಹೀ ಲಾಂಛನದ ಧ್ವಜವನ್ನು ಹಾರಿಸಿದರು. ಸರೋವರದ ದಡದಿಂದ ಪಟ್ಟಣದ ಬಾಗಿಲಿನ ತನಕ ದೋಣಿಯು ಪ್ರತೀಯೊಂದು ಓಡಾಟಕ್ಕೆ ಬಳಸಿದ ಹುಟ್ಟು ಸೃಷ್ಟಿಸಿದ ನೊರೆ, ನೀರ್ಗುಳ್ಳೆಗಳ ಅಲೆಗಳನ್ನು ಬೇಧಿಸುತ್ತಾ ಹತ್ತಿರವಾಗತೊಡಗಿತು. ಸರೋವರದ ಇಲಾಖೆಯಲ್ಲಿ ತನ್ನ ಹುಕೂಮತ್ತನ್ನು (ರಾಜ್ಯಭಾರವನ್ನು) ಗಟ್ಟಿಯಾಗಿಸಿಕೊಂಡು ಮತ್ತು ಆ ಕಾಲದ ಸುಲ್ತಾನರ ವೈಭವದ ಜಗತ್ತಿನಲ್ಲಿ ತನ್ನದೇ ಆದ ವೈಶಿಷ್ಟ್ಯಪೂರ್ಣ ರಾಜಗಾಂಭೀರ್ಯದ ಛಾಪನ್ನು ಮೂಡಿಸಿದರು.

(ಆನೆಗಳ ಕಾಳಗವನ್ನು ನೋಡುವ)ತಮ್ಮ ಎಂದಿನ ಖಯಾಲಿಯಂತೆ ಬಾದಶಾಹ 'ತಖ್ತೆಮುಬಾರಕ್' ಎಂಬ ಆನೆಯನ್ನು 'ಆಲಂ ಕಮಾನ್' ಎಂಬ ಹೆಸರಿನ ಇನ್ನೊಂದು ಆನೆಯ ಜೊತೆಗೆ ಕಾಳಗ ನಡೆಸಲು ನಿಲ್ಲಿಸಿದರು. ಈ ಎರಡು ಬಲಶಾಲಿ ಕರಿಬಣ್ಣದ ಆನೆಗಳ ರೋಷ ಹೆಚ್ಚುತ್ತ ಹೋದಾಗ ಹೊರಹೊಮ್ಮಿದ ಶೌರ್ಯ ಸಾಮರ್ಥ್ಯದ ಕಾಳಗವನ್ನು ನೋಡುವಾಗ ಇವು ಪರ್ವತಗಳನ್ನುಕೂಡ ಮೆಟ್ಟಿ ಪುಡಿಗಟ್ಟಿಸುವ ಬಲವನ್ನು ಹೊಂದಿದ್ದಾವೆಂದು ಅನಿಸುತ್ತಿತ್ತು. ಅವುಗಳನ್ನು ನಿಯಂತ್ರಿಸಲು ಉಪಯೋಗಿಸಲ್ಪಡುವ ಬೆಳ್ಳಿಯ ಅರ್ಧಚಂದ್ರಾಕಾರದ ಅಂಕುಶವು ಮಾವುತನ ಕೈಯಲ್ಲಿ ಬೆಳಗುತ್ತಿತ್ತು. ಈ ದೈತ್ಯಾಕಾರದ ಆನೆಗಳು ಸೊಂಡಿಲಿನೊಂದಿಗೆ ಸೊಂಡಿಲುಜೋಡಿಸಿ ಘೀಳಿಡುವ ಕೂಗು ಇಸ್ರಾಫೀಲ್ ಎಂಬ ದೇವದೂತ ಜಗತ್ತಿನ ಅಂತಿಮ ಪ್ರಳಯಕಾಲದಲ್ಲಿ ಊದಲಿರುವ ಸೂರ್ ಎಂಬ ಕಹಳೆಯನ್ನು ಊದಿದಾಗ ಮೂಡುವ ಸ್ವರವನ್ನು ಹೋಲುವಂತೆ ಮೊಳಗಿದಂತಿತ್ತು. ಇವುಗಳ ಹೂಂಕಾರವು ಹೇಗಿತ್ತೆಂದರೆ 'ಕುಲ್ಝುಂ ಅಮ್ಮಾನ್' ಎಂಬ ಸಮುದ್ರದಲ್ಲಿ ತೂಫಾನು ಎದ್ದು ನೀರು ಚಿಮ್ಮಿ ಮೇಲಕ್ಕೇರಿ ಅಲ್ಲೋಲಕಲ್ಲೋಲವಾದಂತೆ ಕಂಡುಬರುತ್ತಿತ್ತು. ಮಾವುತರು ಅಂಕುಶದಲ್ಲಿ ಇರಿದಾಗ ಎರಡು ದೈತ್ಯ ಆನೆಗಳೂ ಪರಸ್ಪರ ಘರ್ಷಣೆಯನ್ನು ನಿಲ್ಲಿಸಿ ವಿನಯದಿಂದ ದೂರವಾಗುತ್ತಿದ್ದವು. ಬಾದಶಾಹರ ಸನ್ನೆಯಂತೆ ಎರಡೂ ಆನೆಗಳನ್ನು ಬೇರ್ಪಡಿಸಿ ದೂರ ದೂರವಾಗಿ ತಮ್ಮ ನಿಗದಿತ ಸ್ಥಾನದಲ್ಲಿ ನಿಲ್ಲಿಸಿದರು. ನಂತರ ಅರಮನೆಯ ಆಸ್ಥಾನದ ಪರಿವಾರದವರ ಆಗಮನವಾಗುತ್ತದೆ. ಮಾವುತರು ಒಬ್ಬೊಬ್ಬರಾಗಿ ಬಾದಶಾಹರ

ಮುಂದೆ ಬಂದು ಗೌರವದಿಂದ ಸಲಾಂ ಮಾಡುತ್ತಾರೆ. ಇದರ ನಂತರ ಮಾವುತರು ತಮ್ಮ ಆನೆಗಳ ಮತ್ತು ಬಾದಶಾಹರ ಶೌರ್ಯದ ಬಗ್ಗೆ ಹೊಗಳುವ ಶಾಯರಿ ಸಾಲುಗಳನ್ನು ಹಾಡುತ್ತಾರೆ:

ಫಲಕ್ ಸರೀರೇ ಷಾ ಸರ್‌ವರಾನೇ ಹಫ್ತ್ ಇಖ್‌ಲೀನ್
ಜೆ ನಖ್ಸ್ ಪಾಯೇ ತೂ ಬರ್ ಫಿರ್‌ಖೆ ಖುದ್ ನಿಹದ್ ಅಫ್ಸರ್
ಓ ಏಳು ಆಕಾಶ ಮತ್ತು ಭೂಮಿಯ ಬಲಶಾಲಿ ಬಾದಶಾಹ
ನಿಮ್ಮ ಪಾವನ ಪಾದಸ್ಪರ್ಶಿತ ಪಗಡಿಯ ತಲೆಯಲ್ಲಿ ಶುಭಸೂಚಕವಾಗಿ ಧರಿಸುವೆವು

ಚ್ಯೂ ಫೀಲೆ ಮಸ್ತ್ ತೂ ಗಿರ್ದತ್ ರಂವಾ ಅರ್ಸೆ ಜಂಗ್
ಝೆ ಕೋಸೆ ಚರ್ಕ್ ಬರ್ ಆಯತ್ ಸದಾಯೇ ಫತ್ ಹು ಝಪರ್
ನಿಮ್ಮ ಬಲಶಾಲಿ ಆನೆ ರಣರಂಗದಲ್ಲಿ ಚಲಿಸುವಾಗ
ಆಕಾಶದಿಂದ ಜಯಘೋಷ ಮೊಳಗುವುದು ಕೇಳಿಬರುತ್ತದೆ

ದಹಾನೆ ವೂ ದರೇ ಪತ್‌ಹ ಅಸ್ತ್ ವಅಸ್ ಬರಾಯೆ ಖುಶಾದ್
ಹಮೀಶಾ ಹಲ್ಕಾ ಝು ಕರ್‌ತೂಂ ಮೀರ್ಝುನ್ ಬರ್‌ದರ್
ತಮ್ಮ ಆನೆಯ ಮುಖಾರವಿಂದ ಶುಭ ವಿಜಯದ ಬಾಗಿಲಿನಂತೆ
ಸೊಂಡಿಲು ಈ ಮುಖದ ಶುಭದಾಯಕ ಅಲಂಕಾರದಂತೆ

ತಮ್ಮ ಆನೆಗಳ ಕಾಳಗದ ಆವರಣದಿಂದ ಬಿಡುವಾದ ನಂತರ ನುಸ್ರತಾಬಾದಿನ ಸಗರ ಪ್ರಾಂತ್ಯದಿಂದ ಹಿಂತಿರುಗತ್ತಿದ್ದ ಅಶ್ವದಳದ ಸೈನಿಕರನ್ನು ಕರೆಸಿಕೊಂಡರು. ಮೂರು ದಿನಗಳು ಕಳೆದ ನಂತರ ಸುಂದರ ಹಿತವಾದ ವಾತಾವರಣವುಳ್ಳ ಸಗರ ಪ್ರಾಂತ್ಯಕ್ಕೆ ತೆರಳಿ ಅಶ್ವದಳದ ದಂಡು ಬೀಡುಬಿಟ್ಟಿತು. ಅಮೀರುಲ್ ಉಮ್ರಾ(ಪ್ರಧಾನ ದಂಡನಾಯಕ) ಮುಜಫ್ಫರುದ್ದೀನ್ ಖಾನೆಖಾನ್‌ರವರ ಶೌರ್ಯ ಸಾಹಸದಿಂದ 'ಕುನ್ನೀಫಡ' ಕೋಟೆಯ ಪ್ರಾಂತ್ಯವನ್ನು ವಶಪಡಿಸಿಕೊಳ್ಳಲಾಯಿತು. ಹೀಗೆಯೇ 'ಖಿಲ್‌ಜಲಮ್' ಎಂಬ ಕೋಟೆಯನ್ನು ಕೂಡ ಸೈನ್ಯ ವಶಪಡಿಸಿಕೊಂಡು ಬಾದಶಾಹರ ಆಳ್ವಿಕೆಗೆ ಒಳಪಡುವಂತಾಯಿತು. ಇದರಿಂದ ಬಾದಶಾಹರ ಸಾಮ್ರಾಜ್ಯ ವಿಸ್ತರಣೆಗೊಂಡು ಮತ್ತಷ್ಟು ಶಕ್ತಿಶಾಲಿಯಾದಂತಾಯಿತು. ಈ ವಿಜಯದ ಶುಭವಾರ್ತೆಯಿಂದ ಬಾದಶಾಹರ ಆಸ್ಥಾನದಲ್ಲಿ ದಿನದ ಮುಂಜಾವು ಮತ್ತು ಪ್ರಾತಃಕಾಲದ ಸಮಯದ ವಾತಾವರಣದ ಸೊಬಗು, ತಂಪು ಮೂಡಿ ಮನಸ್ಸು ಪ್ರಫುಲ್ಲವಾಗುವ ಹಿತವಾದ ವಾತಾವರಣ ಉಂಟಾಯಿತು. ಈ ಸಮಯದಲ್ಲಿ ಆಯೋಜಿಸಲಾದ ಆಸ್ಥಾನದ ಮಂತ್ರಿಮಂಡಳದ ಸಭೆಯಲ್ಲಿ ಈ ಶುಭವಾರ್ತೆಯ ಜೊತೆಗೆ ನಂದ್‌ಭಾಲ್ ಮತ್ತು ಶಿರಿವಾಲದ ಕೋಟೆಗಳನ್ನು ವಶಪಡಿಸಿಕೊಂಡ ಸುವಾರ್ತೆಯೂ ಕೂಡ ಶಾಮೀಲುಗೊಂಡಿತು.

ಹೀಗೆ ಹಿಂದೆ ವಶಪಡಿಸಿಕೊಳ್ಳಲಾದ ಕೋಟೆಗಳನ್ನೂ ಸೇರಿದಂತೆ ಒಂಭತ್ತು ಕೋಟೆಗಳನ್ನು ವಶಪಡಿಸಿಕೊಂಡ ಶೌರ್ಯ ಸಾಹಸಮಯ ವಿವರಗಳನ್ನು ಚರ್ಚಿಸಲಾಯಿತು. ಈ ಒಂಭತ್ತು ಕೋಟೆಗಳನ್ನು ಅಮೀರುಲ್ ಉಮ್ರಾ (ಪ್ರಧಾನ ದಂಡನಾಯಕ) ಮುಜಫ್ಫರುದ್ದೀನ್ ಖಾನೆಖಾನ್‌ರವರು ತಮ್ಮ ಅದ್ವಿತೀಯ ಸಾಹಸ ಮತ್ತು ಶೌರ್ಯಗಳಿಂದ ಒಂಭತ್ತು ದಿನಗಳೊಳಗೆ ವಶಪಡಿಸಿಕೋಳ್ಳುವುದು ಸಾಧ್ಯವಾಗಿತ್ತು. ಈ ಒಂಭತ್ತು ಕೋಟೆಗಳನ್ನು ಸ್ವಾಧೀನಪಡಿಸಿಕೊಂಡ ಶ್ಲಾಘನೀಯ ಶೌರ್ಯವು ಖೈಬರ್‌ನ ಕೋಟೆಯನ್ನು ವಶಪಡಿಸಿಕೊಂಡ (ಪ್ರವಾದಿ ಮುಹಮ್ಮದರ ಅಳಿಯ 'ಹಜ್ರತ್ ಅಲಿ'ಯವರ) ಶೌರ್ಯಕ್ಕೆ ಸಮಾನವಾಗಿತ್ತು.

ನಂದ್‌ಭಾಲದ ಮೇಲೆ ದಾಳಿಯಿಟ್ಟು ವಶಪಡಿಸಿಕೊಂಡ ವಿವರಗಳು ನನ್ನ ಲೇಖನಿಗೆ ಸ್ಫೂರ್ತಿತುಂಬಿ ಸುಲಲಿತವಾಗಿ ಹೀಗೆ ಮೂಡಿಬಂತು:

ಈ ದಾಳಿಯು ಧರ್ಮ(ದೀನ್)ದ ತಳಪಾಯವನ್ನು ಸುದೃಢಗೊಳಿಸುವ ಸಲುವಾಗಿತ್ತು. ಬಾದಶಾಹನ ಘನತೆ(ಶಾಹೋ ಜಲಾಲ್)ಗೆ ಜಯವಾಗಲಿ, ಇವರ ಆಜ್ಞೆಯ ಮೇರೆಗೆ ಅಮೀರುಲ್ ಉಮ್ರಾ ಮುಜಫ್ಫರುದ್ದೀನ್ ಖಾನೆಖಾನ್‌ರವರು ತಮ್ಮ ಶೌರ್ಯದಿಂದ ಮತ್ತು ತಮ್ಮ ಸೇನೆಯಲ್ಲಿದ್ದ ದೊಡ್ಡದೊಡ್ಡ ಶೂರ, ವೀರರ ನೆರವಿನಿಂದ ನಾಲ್ಕೂ ದಿಕ್ಕಿನಲ್ಲಿ ನಂದ್‌ಭಾಲ್ ಕೋಟೆಗೆ ಮುತ್ತಿಗೆ ಹಾಕಿ, ದಿಗ್ಬಂಧನಮಾಡುವುದರೊಂದಿಗೆ ವೀರಾವೇಶದ ಯಲ್ಗಾರ್(ವೀರಘೋಷ) ಮಾಡಿ ಯುದ್ಧಕ್ಕೆ ಆಹ್ವಾನ ನೀಡಿದರು. ಪಟ್ಟಣದ ಸುತ್ತಲಿನ ಕೋಟೆಯ ಗೋಡೆಯನ್ನು ಯೋಧರು ಮುತ್ತಿಗೆ ಹಾಕಿ ಯುದ್ಧಕ್ಕೆ ಆಹ್ವಾನ ನೀಡಿದ ಘೋಷಣೆಯ ಪರಿಣಾಮವಾಗಿ ಭಯಭೀತರಾದ ವೈರಿಗಳು ತಾವಾಗಿಯೇ ಹೊರಗೆಬಂದರು. ಯುದ್ಧದ ತಂತ್ರವು ಎಷ್ಟು ಪರಿಣಾಮಕಾರಿಯಾಗಿತ್ತೆಂದರೆ ವೈರಿಗಳಿಗೆ ಸೆಣಸಾಟಕ್ಕೆ ಹೆಚ್ಚು ಅವಕಾಶದೊರೆಯದೆ ಸೋತರು. ಯುದ್ಧ ಪ್ರೇರಣೆಯ ವಾತಾವರಣವು ತಲ್ವಾರು, ಧನುರ್ಬಾಣಗಳೊಂದಿಗೆ ನಿಂತಿದ್ದ ವೀರಯೋಧರ ರಕ್ತಕುದಿಸಿತು, ಪ್ರಾಣಭಯವನ್ನು ಬಿಟ್ಟು ರಣರಂಗದಲ್ಲಿ ಹೋರಾಡುವ ವೀರ ಸಾಹಸಿಗರಿಗೆ ಇನ್ನಷ್ಟು ಉತ್ತೇಜನ ನೀಡುವುದಕ್ಕೆ ಸೇನಾ ನಾಯಕರು ಮುನ್ನುಗ್ಗಿ ಬಂದರು. ಉತ್ತೇಜನ ನೀಡುವ ಶೇರ್‌ಗಳನ್ನು ಈ ನಾಯಕರು ಹೀಗೆ ಹಾಡಿದರು:

ಖಿತಾ (ದ್ವಿಪದಿ)

'ರಷ್ಕ್ ಬರ್ಝ್‌ಮೆ ಶಾದ್‌ಮಾನಿ ಗಸ್ತ್ ದಶ್ತೆ ಕಾರ್‌ಝಾರ್
ತೀರ್ ಕರ್ದ್ ಅರ್ಝ್‌ಕಾಸಯೇ ಸರ್ಹಾ ಕಮಾನ್ ಚಯೇ ಆಷ್ಕಾರ್
ರಣರಂಗ ನೋಡುಗರ ಕಣ್ತುಂಬವಂತಿದೆ ಸಂತಸದ ಸಮಾರಂಭವಾಗಿದೆ
ಬಿಲ್ಲಿನಿಂದ ಹೊರಟ ಇವರ ಬಾಣಗಳು ವೈರಿಗಳ ತಲೆಗಳನು ಚೆಂಡಾಡುತಿವೆ.

ಝುಕ್ಮ್ ಹಾಯೆ ಕೊಹ್ನ ಬರ್ತನೇ ಜಂಜುಯಾನೇ ರಾಝೆ ತೈಘ್
ತಾಝಾ ಷುದ್ ಎಕ್ಸರ್ ಚ್ಯೂ ಗುಲ್ಝಾರ್ ಅಝ್‌ನಮೇ ಅಬ್‌ರೇ ಬಹಾರ್
ವೀರಯೋಧರ ದೇಹದಲ್ಲಿನ ಹಳೆಯ ಗಾಯಗಳು ಮತ್ತೆ ಹಸಿರಾದವು
ವಸಂತ ಋತುವಿನ ಆಗಮನದಿಂದ ತೋಟದಲ್ಲಿ ಹೂವುಗಳು ಅರಳಿದಂತೆ

ಈ ವೀರ ಯೋಧರ ಯುದ್ಧ ನೈಪುಣ್ಯತೆಯ ಸಂಘರ್ಷಕ್ಕೆ ಒಡ್ಡಿದ ದೇಹದ ಕುದಿಯುವ ರಕ್ತದೊಂದಿಗೆ 'ಗುರ್ಝ್‌ನುಮಾ'(ಭರ್ಚಿಯಂತಿರುವ ಆಯುಧ)ದಂತಹ ಭಾರಿ ಆಯುಧಗಳನ್ನು ಉಪಯೋಗಿಸಿಕೊಂಡು ವೈರಿಗಳ ಮೇಲೇರಿ ಹೋಗಿ ಅವರ ತಲೆಗಳನ್ನು ನುಚ್ಚುನೂರು ಮಾಡತೊಡಗಿದರು. ಇದು ಹೇಗೆ ಕಂಡಿತೆಂದರೆ ಓರ್ವ ಚಿತ್ರಕಲಾವಿದ ಈ ಸಮರ ದೃಶ್ಯದ ಹಲವು ವರ್ಣಗಳ ಚಿತ್ರವೊಂದನ್ನು ಚಿತ್ರಿಸಲು ಹಾತೊರೆದು ಬಂದು ವಿಶೇಷ ಕಲಾಕೃತಿಯೊಂದನ್ನು ರಚಿಸಲು ತೊಡಗಿದಂತೆ ಭಾಸವಾಗುತ್ತಿತ್ತು. ಕೂದಲ ಕುಂಚವನ್ನು ತಂದು ಗಾಳಿಯಲ್ಲಿ ಬಣ್ಣ ಹರಡಿ ನೆರಳುಗಳ ಮೇಲೆ ಈ ಸಮರ ದೃಶ್ಯವನ್ನು ಚಿತ್ರಿಸಲು ಶುರುಮಾಡಿದಂತೆ ಅನಿಸಿತು. ವೈರಿಗಳಲ್ಲಿ ಭಯಹುಟ್ಟಿ ಗಲಿಬಿಲಿಗೊಂಡಾಗ ವೀರಯೋಧರು ರಣರಂಗದಲ್ಲಿ ಜಯಘೋಷಗಳನ್ನು ಕೂಗುತ್ತಾ ತಮ್ಮ ಸೈನ್ಯವನ್ನು ಮುನ್ನಡೆಸಿದರು. ಕೋಟೆಯ ಸುತ್ತಲಿನ ಕಂದಕದ ಈಚೆ ದಡದಲ್ಲಿ ನಿಂತಿದ್ದ ವೀರ ಸೈನಿಕರು (ಮುಜಾಹಿದೀನ್) ಬಿಲ್ಲು ಬಾಣಗಳನ್ನು ಹಿಡಿದು ನಿಂತಿದ್ದರು. ದೊಡ್ಡ ಬಿಲ್ಲುಗಳಿಂದ ಚಿಕ್ಕಚಿಕ್ಕ ಚೂಪಾದ ಸಹಸ್ರಾರು ಬಾಣಗಳನ್ನು ಮಳೆಯೋಪಾದಿ ವೈರಿಗಳ ಮೇಲೆ ಸುರಿಸಿದರು. ವೈರಿಗಳು ಕೂಡ ತಮ್ಮ ಪ್ರಾಣವನ್ನು ಲೆಕ್ಕಿಸದೆ ಯುದ್ಧದಲ್ಲಿ ಹೋರಾಡುತ್ತಿದ್ದರು. ಥಟ್ಟನೆ 'ಷಂಶೀರ್' (ತಲವಾರಿನ) ಕಾಳಗಕ್ಕೆ ಇಳಿದು ಮುನ್ನುಗ್ಗಿದ ವೀರ ಯೋಧರು ವೈರಿಗಳ ತಲೆಯನ್ನು ಚೆಂಡಾಡತೊಡಗಿದರು.

ನಝ್ಮ್

ನಜಾಷಿ ತುರಾದಾನ್ ಸುಲ್ತಾನೆ ಘಾಝಿ
ಬರ್‌ಅಂಗೇ ತಂದ್ ಆಜಾಶೋರೇ ಮೆಹಶರ್
ಓ, ವೀರ ಸುಲ್ತಾನರೇ! ನೀವು ಹಬಷಿಯ ಸುಲ್ತಾನ ನಜಾಷಿ*ಯಂತೆ ಎಂದಿದ್ದಾರೆ ಜನ,
ರಣರಂಗದಲಿ ಹುಟ್ಟಿಸಿದಿರಿ ಅಬ್ಬರದ ಘೋಷ ಖಿಯಾಮತಿನ(ಪ್ರಳಯದ).

***(ಹಬಷಿ(ಇಥಿಯೋಪಿಯಾ)ಯ ಸುಲ್ತಾನ ನಜಾಷಿ ಎಂಬ ಧೈರ್ಯವಂತ ಮತ್ತು ಸಾಹಸಿಯಾಗಿದ್ದ)**

ಕೆ ಷುದ್ ಅರ್‌ತಿಘೆ ಕೆಹರಿಸ್ಥಾನ್ ಮೆಹರೇ ತಾಬಾಂ
ಬಖಾಕಸ್ತರ್ ಸುಬ್‌ಹೆ ಪೈಮಾಂ ಚ್ಯು ಅಖ್‌ಘರ್
ಕಬರಸ್ಥಾನವಾಗಿದ್ದ ರೋಷ ತುಂಬಿದ ರಣರಂಗದಲಿ ಮೂಡಿತು ಚಂದ್ರನ ತಂಪು

ನಸುಗತ್ತಲಿನ ಮುಂಜಾವಿನಲಿ ಮೂಡಿದ ಬೂದಿ ಮುಚ್ಚಿದ ಕೆಂಡದ ಕೆಂಪು

ಜಿಗರ್ ಕಾವಿ ಖಂಜರೆ ಕೀನಾ ಕೋಷಾಂ

ಬಿಮಿರ್ರೀಖ್ ಅಜ್‌ಮೌಜೆ ಖೂಂ ದಾಗೇ ಮುಫ್‌ಫರ್

ವೈರಿಗಳ ಎದೆಯೊಳಗೆ ಎಂತಿತ್ತೆಂದರೆ ಇರಿದ ತಲವಾರು ಧಾರೆ,

ಇರಿದು ಹಾರಿಸುತ್ತಿತ್ತು ಧರಿಸಿದ ಎದೆಗವಚಗಳ ಆಕಾಶದೆತ್ತರಕೆ.

ದ್ವೇಷವನ್ನು ಅಂತರ್ಯದಲ್ಲಿ ಶಾಶ್ವತವಾಗಿಟ್ಟುಕೊಂಡ ವೈರಿ(ಕುಫ್ಫಾರ್)ಗಳ ರಕ್ತವು ದೇಹದಿಂದ ಧಾರಾಕಾರವಾಗಿ ಹೊರಹರಿಯುತ್ತಿದ್ದಂತೆ ಕಾಪಾಡುವವರು ಯಾರೂ ಇಲ್ಲದೆ ಹುಚ್ಚರಂತೆ ಓಡಲು ವಿವಶರಾಗಿ ಓಡುತ್ತಾ ಹೋಗಿ ಅಲ್ಲಲ್ಲಿ ಕುಸಿದು ಬೀಳುತ್ತಿದ್ದರು. ಈ ರೀತಿಯಲ್ಲಿ ಯುದ್ಧವು ನಾಲ್ಕು ದಿನಗಳು ನಡೆದವು. ಅಲ್ಲಿ ಈ ಯದ್ಧ ನಿರತ ರಣರಂಗ ಎಂತಹ ಬೀಭತ್ಸ ದೃಶ್ಯ ಉಂಟುಮಾಡಿತ್ತೆಂದರೆ ಸೂರ್ಯನ ಕಿರಣದ ಝಳಕ್ಕೆ ಸಿಲುಕಿದ ಭೂಮಿಯಲ್ಲಿ ಹರಿಯುವ ಹಸಿದ ಹೆಬ್ಬಾವೊಂದು ತನ್ನ ಆಹಾರವನ್ನು ಇಡಿಯಾಗಿ ನುಂಗುವಂತೆ ವೈರಿ ಸಮೂಹವನ್ನು ವೀರ ಸಿಪಾಯಿಗಳು ಹೇಳ ಹೆಸರಿಲ್ಲದಂತೆ ನಾಶಪಡಿಸಿದರು. ವೈರಿಯ ಸೈನ್ಯದ ನಾಯಕರು ಪರಿಸ್ಥಿತಿಯನ್ನು ಕಂಡು ಇನ್ನು ಯುದ್ಧವನ್ನು ಮುಂದುವರಿಸಿದರೆ ತಮಗೆ ಉಳಿಗಾಲವಿಲ್ಲವೆಂಬುದು ತಿಳಿದು 'ಅಲ್‌ಅಮಾನ್... ಅಲ್‌ಅಮಾನ್' (ಶಾಂತಿ..ಶಾಂತಿ!) ಎಂದು ಕೂಗುತ್ತ ಶರಣಾಗತರಾಗುವ ಸೂಚನೆಯಿತ್ತರು. ಮುಂದೆ ಸ್ವಲ್ಪ ಹೊತ್ತಿನಲ್ಲಿ ವೈರಿ ಸೈನಿಕರು, ದಂಡನಾಯಕ (ಮುಜಫ್ಫರುದ್ದೀನ್) ಖಾನೆಖಾನರ ಮುಂದೆ ಬಂದು ಕೋಟೆಯ ಕೀಲಿಕೈಯನ್ನು ನೀಡುವುದಕ್ಕೆ ಸಮಯಾವಕಾಶ ಬೇಡುವ ಒಪ್ಪಂದವನ್ನು ಮಾಡಿಕೊಂಡು ಶರಣಾಗತರಾದರು. ಜಯಲಭಿಸಿದ ಕೂಡಲೇ ದಂಡನಾಯಕ ಮುಜಫ್ಫರುದ್ದೀನ್ ಖಾನೆಖಾನ್‌ರವರು ಅಲ್ಲಾಹನ ಕೃಪೆಯನ್ನು ಸ್ಮರಿಸಿ ಕೃತಜ್ಞತೆಯ ಸಜ್ದಾ(ಸಾಷ್ಟಾಂಗ ನಮಸ್ಕಾರ) ಮಾಡಿದರು. ಜೊತೆಗೆ ವಶಪಡಿಸಿಕೊಂಡ ಈ ಭೂಮಿ ವಿಶ್ವದ ಇತರ ಭಾಗಗಳಂತೆ ಸಫಲಗೊಂಡು ಬಾನಿನಲ್ಲಿರುವ ತಾರೆಯಂತೆ ಬೆಳಗಲಿ ಎಂದು ಅಲ್ಲಾಹನೊಂದಿಗೆ ದುವಾ ಮಾಡಿಕೊಂಡರು.

ವೀರ ಯೋಧರು ವಶಪಡಿಸಿಕೊಂಡ ಇನ್ನಿತರ ಒಂಭತ್ತು ಕೋಟೆಗಳ ಸುಂದರ ವಿವರಗಳನ್ನು ಇಲ್ಲಿನ ಪುಟಗಳಲ್ಲಿ ಬಿಡಿಬಿಡಿಯಾಗಿ ನೀಡಲಾಗಿದೆ:

ಒಂದನೆಯ ಕೋಟೆ **'ನಂದ್ ಭಾಲ್'**: ಈ ಕೋಟೆಯ ಬಲಿಷ್ಠವಾದ ಕಟ್ಟಡದ ವಿವರವನ್ನು ಆ ಕಾಲದ ವಾಸ್ತುಪಂಡಿತರು ಬರೆದಂತಹ ಹಲವಾರು ಪುಟಗಳನ್ನು ಆಕಾಶದಲ್ಲಿನ(ದೇವದೂತರು ಬರೆವ) ಸಹಸ್ರಾರು ಪುಸ್ತಕಗಳಲ್ಲಿ ಬರೆವಂತೆ ಅದ್ವಿತೀಯವೆಂದು ವರ್ಣಿಸಿ ಬರೆದಿದ್ದರು. ಕೋಟೆಯ ಶ್ರೀಮಂತ ಬುರುಜಿನ ದೃಶ್ಯ

ನೋಡುತ್ತಿರುವ ನೋಡುಗರ ಕಣ್ಣುಗಳನ್ನು ಸುಂದರ ಕಮಾನಿನ ಎತ್ತರಕ್ಕೆ ಸೆಳೆದೊಯ್ಯುತ್ತದೆ. ಕೋಟೆಯ ಗೋಡೆಯ ಕಲ್ಲುಗಳು ನಮ್ಮ (ಆಳ್ವಿಕೆಯ) ಅಡಿಪಾಯಕ್ಕಿಂತ ಎಷ್ಟೊಂದು ಬಲಿಷ್ಠವಾಗಿತ್ತೆಂದರೆ ಈ ಕೋಟೆ ಅಥವಾ ನಮ್ಮ ಆಳ್ವಿಕೆಯ ವಿರುದ್ಧ ಪಿತೂರಿ ನಡೆಸುವವರು ತಮ್ಮ ಅಸೂಯೆಯ ಬೆಂಕಿಗೆ ತಾವೇ ಬಲಿಯಾಗುವ ರೀತಿಯಲ್ಲಿತ್ತು!

ಇಂತಹ ಕೋಟೆಯ ಬಲಿಷ್ಠವಾದ ಆವರಣವು ನಮ್ಮ ಕಣ್ಣು ಎಲ್ಲಿಯವರೆಗೆ ನೋಡಲು ಸಾಧ್ಯವೋ ಅಲ್ಲಿತನಕ ಹೇಗೆ ಕಾಣುತ್ತಿತ್ತೆಂದರೆ ಭೂಮಿಯಲ್ಲಿ 'ಅಲ್ಮಾಸ್'ನ(ವಜ್ರದ) ರಾಶಿಯನ್ನು ಗಣಿಯಂತೆ ಇರುವ ಬೃಹದಾಕಾರದ ಪಾತ್ರೆಯಲ್ಲಿ ಬಡ ಜನರಿಗೆ ಹಂಚುವ ಸಲುವಾಗಿ ಇಟ್ಟಿದ್ದಾರೆಂದು ಮತ್ತು ಅದರ ಮೇಲೆ ಝುಮರೂದಿ(ಹಸಿರುವರ್ಣದ) ಸಿಲ್ಕ್ ಬಟ್ಟೆಯನ್ನು ಹೊದಿಸಿದ್ದಾರೇನೋ ಅನ್ನಿಸುವಂತಿತ್ತು.

ಎರಡನೆಯ ಕೋಟೆ **'ಸಿರಿವಾಲ'**: ಈ ಕೋಟೆಯ ಸೂರಿನಲ್ಲಿ 'ಮುರಸ್ಸ'ಗಳ (ವಜ್ರ ವೈಢೂರ್ಯಗಳ ಸೌಂದರ್ಯದ) ಕುಸುರಿ ಕೆಲಸದ ಸುಂದರ ಹೊಳಪಿತ್ತು. ಅದರ ಸುಂದರ 'ಕಂಗುರ'ಗಳ(ಕಮಾನುಗಳ) ಸುತ್ತ ಪ್ರದಕ್ಷಿಣೆ ಮಾಡುವ ಗಾಳಿ ಸೂರ್ಯ ಕಿರಣಗಳ ವೈಭವವನ್ನು ಹೊತ್ತು ಒಳಬಂದಿತ್ತು. ಈ ಪಟ್ಟಣದ ಇಲಾಖೆಯಲ್ಲಿ ಒಂದು ತಾಮ್ರದ ಗಣಿಯೂ ಇತ್ತು. ಇವೆಲ್ಲವುಗಳ ವೈಭವವನ್ನು 'ಮಿರ್ರೀಖ್' ಎಂಬ (ಆಕಾಶದಲ್ಲಿನ ನಕ್ಷತ್ರ ಸಮೂಹದಲ್ಲಿ ಭೂಮಿಗೆ ಅತ್ಯಂತ ಹತ್ತಿರವಿರುವ-ಧ್ರುವ?) ನಕ್ಷತ್ರವು ಕಂಡು ತನಗೆ (ಬಾದಶಾಹರು ನೀಡುವ)ಸೌಕರ್ಯ, ಸವಲತ್ತುಗಳು ಲಭಿಸಬಹುದೆಂಬ ಆಕಾಂಕ್ಷೆಯೊಂದಿಗೆ ಐದನೆಯ ಆಕಾಶದಿಂದ ಇಳಿದು ಇಲ್ಲಿಗೆ ಬಂದು ನೆಲೆಸಿರಲು ಬಯಸಿದಂತಿತ್ತು.

ಮೂರನೆಯ ಕೋಟೆ **'ಕೋಪಕುಂಡ'**: ಈ ಕೋಟೆಯಲ್ಲಿ ಶೆರ್‌ವಾನ್ ಶಾಹ ಎಂಬವನು ಕಟ್ಟಿಸಿದನೆನ್ನಲಾದ ಒಂದು ದೊಡ್ಡ ಗುಂಬಜ್ ಕೂಡ ಇತ್ತು. 'ಸುರೈಯ್ಯಾ' ಎಂಬ (ಆಕಾಶದಲ್ಲಿ ಭೂಮಿಗೆ ಅತ್ಯಂತ ದೂರವಿರುವ ನಕ್ಷತ್ರಗಳಲ್ಲಿ ಒಂದೆಂದು ಪರಿಗಣಿಸಲ್ಪಟ್ಟ) ನಕ್ಷತ್ರದ ಭವ್ಯತೆಯ ಪಡಿಯಚ್ಚಿನಂತಿತ್ತು ಮತ್ತು ಇದರ ವೈಭವದ ಎದುರು ಸೂರ್ಯನ ವೈಭವವೂ ನಾಚುವಂತಿತ್ತು. ಈ ಕೋಟೆಯ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಆನೆಗಳ ಸಂತತಿಯ ಅಭಿವೃದ್ಧಿಗೆ ಅನುಕೂಲವಾಗುವಂತೆ ಪ್ರಕೃತಿದತ್ತವಾದ ಕಾಡೊಂದನ್ನು ಸಂರಕ್ಷಿಸಲಾಗಿತ್ತು. ಈ ಕಾಡಲ್ಲಿ ಆನೆಗಳಲ್ಲದೆ ಇನ್ನಾವ ಕಾಡುಪ್ರಾಣಿಗಳೂ ಕಂಡುಬರುತ್ತಿರಲಿಲ್ಲ. ಈ ಆನೆಗಳಿಗೆ ಅಹಾರಗಳನ್ನು ನೀಡುವುದು, ಸಂತಾನಾಭಿವೃದ್ಧಿಗಾಗಿ ಆನೆ ದಂಪತಿಗಳನ್ನು ಕೂಡಿಸುವುದು ಮಾತ್ರ ಇಲ್ಲಿನ ಮಾವುತರ ಕೆಲಸವಾಗಿತ್ತು.

ನಾಲ್ಕನೆಯ ಕೋಟೆ **'ಓಬ್‌ಲಿ'**(ಹುಬ್ಬಳ್ಳಿ?): ಆ ಕಾಲದಲ್ಲಿ ತನ್ನ ಅದ್ಭುತ ಶಕ್ತಿಶಾಲಿ ವಾಸ್ತುವಿನಿಂದಾಗಿ ವಿರೋಧಿಗಳಿಗೆ ಈ ಕೋಟೆ ಸವಾಲೊಡ್ಡುವಂತಿತ್ತು. ಈ

ಕೋಟೆಯ ಗೋಡೆಗಳ ಮೇಲೆ ಬಿಲ್ಲು ಬಾಣ ಹಿಡಿದ ಸೈನಿಕರು ಪಹರೆ ಮಾಡುತ್ತಿದ್ದರು ಆಗಾಗ ಎಲ್ಲರನ್ನೂ ಎಚ್ಚರಿಸುವಂತೆ ಕಹಳೆಯನ್ನು ಊದುತ್ತಿದ್ದರು. ಈ ಕೋಟೆಯೊಳಗೆ ಒಂದು ಬೃಹತ್ತಾದ (ಕಾನ್-ಎ-ಸುರುಬ್) ಸೀಸೆಯ ಗಣಿಯಿತ್ತು. ಇದನ್ನು ನೋಡಿದಾಗ ವೈರಿಗಳ ಎದೆ ನಡುಗುವಂತಿತ್ತು.

ಐದನೆಯ ಕೋಟೆ **'ಪುರ್ ಪುರ್'** (ಸುರಪುರ?): ಈ ಕೋಟೆಯ ಕಂಗೂರ್ (ಕಮಾನು) ಸಂಜೆಯ ಆಕಾಶದಲ್ಲಿ ಮೂಡುವ **'ಶಫಕ್'**(ಸಂಜೆಗೆಂಪು)ನಂತೆ ಸುಂದರವಾಗಿ ಹೊಳೆಯುತ್ತದೆ ಮತ್ತು ಆಕಾಶವನ್ನು ತನ್ನ ತೆಕ್ಕೆಯೊಳಗೆ ತೆಗೆದುಕೊಂಡಂತೆ, ಅದರ ನೆರಳು ಭೂಮಿಯಲ್ಲಿ ಮೂಡಿದಾಗ ಸುಂದರ ಅಭೂತಪೂರ್ವ ದೃಶ್ಯ ಉಂಟುಮಾಡುತ್ತದೆ.

ಆರನೆಯ ಕೋಟೆ **ಕರ್‌ಧಾಮಸ್ತ್**: ಈ ಕೋಟೆಯ ಬಲಿಷ್ಠವಾದ ಬುರುಜಿನಿಂದಾಗಿ ಬಹಳ ಶಕ್ತಿಶಾಲಿಯೆಂದು ಹೆಸರುಗಳಿಸಿತ್ತು. ಇದರ ಗೋಡೆಯ ಬಲಿಷ್ಠತೆ ಎಷ್ಟು ಹೊಳೆಯುವಂತಿತ್ತೆಂದರೆ ಒಂದು ದೊಡ್ಡ ನಕ್ಷತ್ರ ಬಾನಿನಲ್ಲಿ (ನಯ್ಯರ್ ಸಿತಾರ)ಪ್ರಖರವಾಗಿ ಮಿನುಗುವಂತಿತ್ತು.

ಸೆ ಸಂಗೆ ಪಾಯೇ ಉಶ್ ಖುರ್ಶೀದೆ ತಾಬ
ಬುವದ್ ಹಂಶೂಂ ಹಯಾರೇ ಝುರ್ ನುಮಾಯ

ಈ ಕೋಟೆಯ ತಳಪಾಯದಲಿ ಹೊಳೆಯುತಿವೆ ಬಂಗಾರದಂತಹ ಕಲ್ಲುಗಳು ಪರೀಕ್ಷಕ 'ಕಸೌಟಿ' ಕಲ್ಲಿನ ಮೇಲೆ ಬಂಗಾರವ ತಿಕ್ಕಿದಾಗ ಮೂಡುವ ಹೊಳಪಿನಚಿತೆ.

ಏಳನೆಯ ಕೋಟೆ **'ಪೀಕಾಂಪಳ್ಳಿ'**: ಈ ಕೋಟೆಯ ಕಂಗೂರ್(ಕಮಾನು)ಗಳ ನೆರಳುಗಳಲ್ಲಿ ಶ್ರೀಮಂತರೂ, ಬಡಜನರೂ ಆಸರೆಪಡೆಯುತ್ತಿದ್ದಾರೆ. ಇದರ ಬಲಿಷ್ಠವಾದ ಅಡಿಪಾಯವೂ ಕೂಡ ಶಾಶ್ವತವಾಗಿರುವಂತದ್ದಾಗಿದೆ.

ಎಂಟನೆಯ ಕೋಟೆ **'ಕುನ್ನಿಕಿರಾ'** : ಕಬ್ಬಿಣದಂತೆ ಗಟ್ಟಿಯಾದ ತಳಪಾಯವನ್ನು ಹೊಂದಿದ ಈ ಕೋಟೆಯ ಬುರುಜಿಗೆ ತಾಗಿದಂತೆ ಗಾಳಿ ನದಿಯ ಕಡೆಗೆ ಚಲಿಸುವಾಗ ನೀರಿನ ಗುಳ್ಳೆಗಳು ಆಕಾಶದತ್ತ ಹಾರುತ್ತಿರುವಂತೆ ಮತ್ತು ಪರ್ವತಗಳು ಈ ದೃಶ್ಯವನ್ನು ತಲೆಯೆತ್ತಿನೋಡುತ್ತ ನಿಂತಿರುವಂತೆ ಕಂಡುಬರುತ್ತದೆ.

ಒಂಭತ್ತನೆಯ ಕೋಟೆ **'ಚಾಬ ಕಲ್ಮೆರಿ'** : ಈ ಕೋಟೆ ಶಕಿಶಾಲಿ ಅರಸರಿಗೆ ಸೇರಿದ ಬಲಿಷ್ಠವಾದ ಕೋಟೆಯೆನಿಸಲ್ಪಟ್ಟಿತ್ತು. ಈ ಕೋಟೆಯನ್ನು ಹತ್ತಿ ಇಳಿಯುವಾಗ ಹೇಗನಿಸುತ್ತಿತ್ತೆಂದರೆ ತನ್ನ ಅನನ್ಯತೆಯನ್ನು ತ್ಯಾಗ ಮಾಡಿ ನೆಲಕ್ಕೆ ಮುಟ್ಟಿಸಿದ ಹಾಗೆ ಅನುಭವವಾಗುತ್ತಿತ್ತು.

ಖಿತಾ (ದ್ವಿಪದಿ)

ಸರ್ ಬರ್ ಹರ್ಝೀ ಷಾ ಹರ್‌ಕಸ್ ಕೆ ಗುದಾಸ್ತ್
ಬರ್‌ಸಫ್ ಹೈ ದೌರಾಂ ಶಿಫತೇ ಖಿಶ್ತ್ ನಿಗಾಸ್ತ್
ಬಾದಶಾಹನ ಆಶೀರ್ವಾದ ಯಾರಿಗೆ ದೊರೆತಿಹುದೋ ಅವನು
ಬರೆದೊಪ್ಪಿಸಿದಂತೆ ಸರ್ವಕಾಲದ ಅವನ ತೊಂದರೆಗಳನು.

ಖಿಶ್ ಆಖೆ ಬಖಾಕೆ ದರ್‌ಗಹಶ್ ಹಂ ಚ್ಯೂ ಸಿಪರ್
ಅಝ್‌ಬಾರೆ ಸುಜೂದ್ ಸರೇ ನಿಯಾಝ್ ಬರ್‌ದಾಸ್ತ್
ನಿಮ್ಮ ದರಬಾರಿನ ನೆಲದ ಮಣ್ಣಿನಲಿ ಸಂತಸದಿ
ಸಜ್ದಾ* ಮಾಡಿದಾತ ಗರ್ವದಿಂದ ತಲೆಯೆತ್ತುವ ಘನತೆ ಪಡೆದು ಧನ್ಯನಾದ.

***(ಸಾಷ್ಟಾಂಗ ನಮಸ್ಕಾರ)**

ಈ ವಿಜಯವಾರ್ತೆ ಬಾದಶಾಹನಿಗೆ ತಲಪಿದಾಗ ತುಂಬ ಸಂತೋಷಗೊಂಡ. ಬಾದಶಾಹನ ಪರಿವಾರದವರು ಆಕಾಲದಲ್ಲಿ ಅತ್ಯತ್ತಮ ಹವೆಯ ಮತ್ತು ಆರೋಗ್ಯಕರ ವಾತಾವರಣವಿರುವ ವಿಹಾರಧಾಮವೆನಿಸಿದ ಕೋಕಿಯ(ಗೋಗಿಯ?) ಮೈದಾನಕ್ಕೆ ಹೋಗಿ ಸ್ವಲ್ಪ ಕಾಲ ಆರಾಮ ಮಾಡುವ ಸಲಹೆ ನೀಡಿದರು. ಇವರ ಹಿರಿಯರು **ಕೋಕಿಯ** (ಗೋಗಿ?) ಪ್ರದೇಶದಲ್ಲಿ ವಾಸಿಸುತ್ತಿದ್ದರು. ಇಲ್ಲಿ ಒಬ್ಬ ಹಿರಿಯ ಅಲಾ ಹಜ್ರತ್ (ಹಜ್ರತ್ ಸಯ್ಯದ್ ಚಂದಾ ಹುಸ್ಸೈನಿ?) ಇದ್ದಾರೆ, ಇವರ ಮೂಲಕ ದುವಾ ಮಾಡಿದರೆ ತಮ್ಮ ಹಾಜತ್ (ಹರಕೆ) ಅಲ್ಲಾಹನಿಂದ ಪೂರ್ಣಗೊಳ್ಳುವುದು. ಈ ಸಲಹೆಯ ಮೇರೆಗೆ ಬಾದಶಾಹ ತನ್ನ ಕುಟುಂಬ ಪರಿವಾರ ಸಮೇತ ಅಲ್ಲಿಗೆ ತೆರಳಿದರು. ಅಲ್ಲಿ ಹಜ್ರತರ ರೌಝಾ(ಸಮಾಧಿ ಸ್ಥಳ)ದ ಝಿಯಾರತ್(ಆರಾಧನೆ) ಮಾಡಿದರು. ಈರೀತಿಯಲ್ಲಿ ಅವರ ಹಿರಿತಲೆಮಾರಿನ ಹಜ್ರತ್ ಯೂಸೂಫ್ ಆದಿಲ್ ಶಾ, ಇಸ್ಮಾಯಿಲ್ ಆದಿಲ್ ಶಾ, ಇಬ್ರಾಹಿಂ ಆದಿಲ್ ಷಾ ಮತ್ತು ಶಾಹ ತಹಮಾಸ್ಫ್‌ರೂ ಕೂಡ ಝಿಯಾರತ್ ಮಾಡುತ್ತಿದ್ದರು(ಇಲ್ಲಿ ಆದಿಲ್ ಶಾಹಿ ಮೂರು ತಲೆಮಾರಿನ ಸುಲ್ತಾನರ ಸಮಾಧಿಗಳೂ ಇವೆ.) ಅಲ್ಲಿನ ಮುಜಾವರರಿಗೆ(ಆಡಳಿತ ನೋಡುವವರು) ಸಾಕಷ್ಟು ಧನಕನಕಗಳ ಇನಾಮ್ (ಕಾಣಿಕೆಯನ್ನು) ನೀಡುತ್ತಿದ್ದರು. ಮೂರು ದಿನಗಳ ಕಾಲ ಇಲ್ಲಿ ತಂಗಿರುತ್ತಿದ್ದರು. ರೌಝಾ ಷರೀಫ್(ಪವಿತ್ರ ಸಮಾಧಿ ಸ್ಥಳ)ನಲ್ಲಿ ನಝರೋ ನಿಯ್ಯತ್(ಹರಕೆ)ಯಂತೆ ಅಲ್ಲಿಗೆ ಬರುವವರಿಗೆ ಎರಡೂ ಹೊತ್ತಿನ ಊಟೋಪಚಾರಗಳನ್ನು ನೀಡುವ ವ್ಯವಸ್ಥೆಯನ್ನು ಮಾಡಿದರು. ಈ ಪವಿತ್ರ ತಬರ್‍ರುಕನ್(ಪ್ರಸಾದಗಳನ್ನು) ಸ್ವೀಕರಿಸಲು ಅಲ್ಲಿನ ಅಗರ್ಭ ಶ್ರೀಮಂತರೆನಿಸಿದವರೂ ಕೂಡ ಬಂದು **ಬರ್ಕತ್**(ಪುಣ್ಯ) ಎಂದು ಪರಿಗಣಿಸಿ ತಿನ್ನುತ್ತಿದ್ದರು. ಗುರುವಾರದ ದಿನ ಹಜ್ರತ್ ಬಾದಶಾಹ ಗಾಝಿಯವರ ತಮ್ಮ ಪರಿವಾರದ ಜೊತೆಗೆ **ಕೋಕಿ**

(ಗೋಗಿ)ಯಿಂದ ಹಿಂತಿರುಗಿ ಮುಹಮ್ಮದ್‌ಪುರದ(ಬಿಜಾಪುರದ) **ದಾರುಸ್ಸಲ್ತನತ್** (ಸುಲ್ತಾನನ ಅರಮನೆ)ನ ಹಾದಿಹಿಡಿದರು. ಆದಿಲ್ ಶಾಹಿ ಆಡಳಿತದ ಸಂಕೇತವಾದ ಚಂದ್ರ ಲಾಂಛನದ ಧ್ವಜವನ್ನು ಹಿಡಿದು ಸಾಗಿದ ಯಾತ್ರೆ ರಸೂಲ್‌ಪುರದ ಹಿತವಾದ ವಾತಾವರಣದ ಪ್ರದೇಶವನ್ನು ಸುಲ್ತಾನ ಪರಿವಾರ ಪ್ರವೇಶಿಸಿತು. ಇಲ್ಲಿನ ಶಾಹ್ ಆಲಾ ಹಜ್ರತ್ ಅಬ್ದುಲ್ಲಾ ಕುತುಬ್ ಶಾ ಸುಲ್ತಾನನ ಪರಿವಾರವನ್ನು ಸ್ವಾಗತಿಸಿ ತಾನು ನೀಡಬೇಕಾಗಿದ್ದ ಕಪ್ಪಕಾಣಿಕೆಯನ್ನು ಒಪ್ಪಿಸಿದ. ಬುಧವಾರ ಜಿಲ್‌ಹಿಜ್ಜಾ(ಮುಸ್ಲಿಂ ತಖ್ತೆಯ ೧೨ನೇ ಮಾಸ) ತಿಂಗಳ ದಿನಾಂಕ ೩ರಂದು ಸೂರ್ಯನಂತೆ ಹೊಳೆಯುವ ಆನೆಯ ಮೇಲೆ ಕೂತ ಬಾದಶಾಹ ಮುನ್ನಡೆದು ಮುಹಮ್ಮದ್‌ಪುರ ಪ್ರವೇಶಿಸಿ ಅಲ್ಲಿನ ಜನಸ್ತೋಮಕ್ಕೆ ತನ್ನ **ನೂರೆ ಜಲಾಲಿ**(ಬೆಳಕಿನ ಪ್ರಭಾವಳಿ)ಯ ಪ್ರದರ್ಶನವನ್ನು ನೀಡಿದ. ನಂತರದಲ್ಲಿ ಬಾದಶಾಹ ನೀಡಿದ ಆದೇಶದಂತೆ ತನ್ನ ಆಳ್ವಿಕೆಯ ಶಕ್ತಿಯನ್ನು ಪ್ರದರ್ಶಿಸುವ ಸಂಕೇತವಾಗಿ ಜೋರಾಗಿ ನಗಾರಿಯನ್ನು ಬಾರಿಸಲಾಯಿತು.

ಖಿತಾ (ಚೌಪದಿ)

ಅಯ್ ಖುಸ್ರವೋ ಘಾರ್ಖಿ ಬಶಕ್‌ವಯೇ ತೂ ಖಸಮ್
ಗರ್ಘ್ನಾಮೆ ತೂ ಬಾಲೀದ ಬಖುದ್ ಲೌಹೋ ಕಲಮ್
ನಿನ್ನ ರಾಜವೈಭವದ ಆಣೆ, ಓ ಬಾದಶಾಹೆ ಖುಸ್ರೋ!(ವೈಭವಪೂರ್ಣ ಸುಲ್ತಾನನೇ)
ಲೌಹೋ ಕಲಮ್*ನಲ್ಲಿ ಬರೆದ ಬರವಣಿಗೆಯ ತುಂಬ ತುಂಬಿದೆ ನಿನ್ನ ನಾಮ

*(ಮನುಷ್ಯನ ತಕ್‌ದೀರನ್ನು(ಹಣೆಬರಹವನ್ನು) ಬರೆಯುವ ಸ್ವರ್ಗದ ಲೇಖನಿ)

ಚ್ಯೂಂ ವಸ್ಲ್‌ಸಹೀ ಖದ್ದಾನ್ ಬಗುಲ್ಝಾರೆ ಜಹಾಂ
ನಾವಾಬತೂ ಫತ್ಹೆ ನೌ ಮುಬಾರಕ್ ಹರ್‌ದಮ್
ಲೋಕವೆಂಬ ಹೂದೋಟದಲ್ಲಿ ಸೇರಿದಾಗಲೆಲ್ಲ ಜಗತ್ಪ್ರಸಿದ್ಧರು
ಜಯಶಾಲಿಯಾಗುವ ಶುಭಾಶಯವನ್ನೇ ಕೋರುತ್ತಾರೆ ಹಿಂತಿರುಗುವಾಗ ನಿನಗೆ.

■

*

ಅಧ್ಯಾಯ – ೧೩

ಖವಾಸ್ ಖಾನನ ಹಿಂದಿನ ಖಿಝಿಯೇ(ಪರಿಸ್ಥಿತಿ)ಯ ಹೇಳಿಕೆ ಮತ್ತು ಶಾಹಜಹಾನನ ದೌಲತಾಬಾದ್ ಪ್ರವೇಶದ ಬಗ್ಗೆ, ದಕ್ಷಿಣ ಭಾರತವನ್ನು ಸ್ವಾಧೀನ ಪಡಿಸಿದ ವಿವರಗಳು ಈ ಅಧ್ಯಾಯದಲ್ಲಿವೆ:

ಈ ಹೇಳಿಕೆಯ ಮೊದಲ ಮಾತು ಏನಂದರೆ, ನಮ್ಮ ಈ ಪ್ರದೇಶವು ಸಂತಸದಾಯಕ ಸ್ಥಳವಾಗಿದ್ದು ಮತ್ತು ಇಸ್ಲಾಮೀ **ಮಆಶರಾನ್**(ಸಂಸ್ಕೃತಿ)ನನ್ನು ಅಭಿವೃದ್ಧಿಪಡಿಸುವ ಸಲುವಾಗಿ ನಾನು ನನ್ನ ಲೇಖನಿಯ ಮೂಲಕ ಬರೆದು **ರಬ್ಬೇ ಕುನ್‌ಫಕಾನ** (ಅಲ್ಲಾಹನ ವಶಕ್ಕೆ) ಒಪ್ಪಿಸಿದೆ. ಬುದ್ಧಿವಂತರು, ಜ್ಞಾನಿಗಳ ಮುಂದೆ ನನ್ನ ಭವಿಷ್ಯದ ಮುಂಜಾವಿನ ಉದಯದ ಬಾಗಿಲನ್ನು ತೆರೆದಿಟ್ಟಿದ್ದೇನೆ. ಯಾಕೆಂದರೆ ಈ ದೀನೆ ಪರ್‌ವರ್ ಅಲಂಗೀರ್ (ಧರ್ಮ ಪಾಲಕ ವಿಶ್ವವಿಖ್ಯಾತ) ಸುಲ್ತಾನನ ವಿಜಯ ವಾರ್ತೆಯನ್ನು ಜನರು ಕೇಳಲು ಮತ್ತು ತಿಳಿಯಲು ಸಾಧ್ಯವಾಗಬೇಕು ಮತ್ತು ಸತ್ಯವು ಪ್ರಕಟವಾಗಬೇಕೆಂಬ ಹಾರೈಕೆಯಿಂದ ನನ್ನ ಮೇಲೆ ಇರುವ ಈ ಕೃಪೆಯ ಪಗಡಿಯನ್ನು ನಾನೇ ಧರಿಸಿಕೊಂಡಿದ್ದೇನೆ.(ತಾತ್ಪರ್ಯ: ನಾನು ಈ ಲೇಖನವನ್ನು ಬರೆದಿರುವುದು ಸುಲ್ತಾನನ ಒತ್ತಾಯದಿಂದಲ್ಲ, ನಾನು ಬರೆದಿರುವುದು ನನ್ನ ಆತ್ಮತೃಪ್ತಿಗಾಗಿ ಎನ್ನುತ್ತಾನೆ ಲೇಖಕ).

ಅಶಾರ್(ದ್ವಿಪದಿ)

ಖುದ್‌ಯೂ ಗಾಝಿ ಸುಲ್ತಾನೆ ದೀನ್ ಮುಹಮ್ಮದ್ ಶಾಹ್
ಕೆ ಹಸ್ತ್ ದರ್ಘಯೇ ಊ ಸಜ್‌ದಾ ಗಾಹೇ ಹಫ್ತ್ ಇಕ್‌ಲೀಮ್

ಓ ನನ್ನ ದೊರೆಯೇ! ಧರ್ಮದ ಕಟ್ಟಾಳುಯೆನಿಸಿದ ಸುಲ್ತಾನ ಮುಹಮ್ಮದ್ ಶಾಹನೇ

ನಿಮ್ಮ ಆಸ್ಥಾನವು ಸ್ಥಳವಾಗಿದೆ ಸಜ್ದಾಮಾಡುವುದಕೆ ಸಪ್ತವಿಶ್ವದ ಜನಗಳಿಗೆ.

ಬಸಖೇ ಅಸ್ವಯೇ ತಾರ್ಖಿಮ್ ರುತ್‌ಬಯೇ ನಾಮಶ್
ಕಲಂ ಇಸ್ತಾದಯೇ ಬಯಕ್ ಪಾಯೆ ನೀ ಕುನದ್ ತಸ್‌ಲೀಮ್
ತಮ್ಮ ಹೆಸರು ಈ ಪುಟಗಳಲಿ ಮೂಡಿಬರುವಾಗ
ಲೇಖನಿ ಒಂಟಿ ಕಾಲಲಿ ನಿಂತು ಮಾಡುತಿದೆ ಸಲಾಮ್ ತಮಗೆ.

ಬಾದಶಾಹನ ವೈಭವ ಮತ್ತು ಕಾನೂನು ಪಾಲನೆಯ ವಿಧಾನ ಅಲ್ಲಾಹನ ಕೃಪೆಯಾಗಿದೆ. ಬಾದಶಾಹರ ವಂಶದವರ ಇಸ್ಲಾಮ್ ಧರ್ಮದ ನೀತಿ ನಡತೆಯ ಪರಿಣಾಮದಿಂದ ಇವೆಲ್ಲ ನಮಗೆ ದೊರಕುವುದು ಹಾಗೂ ಅನುಭವಿಸುವುದು ಸಾಧ್ಯವಾಯಿತು. ಶ್ರೇಷ್ಠ ಪುಣ್ಯವಂತರ ಜೊತೆಗೆ ಆಸ್ಥಾನದಲ್ಲಿ ಸೇರುವಂತಹ ಭಾಗ್ಯ ಅವರ ಆಜ್ಞೆಯನ್ನು ಪಾಲಿಸುವ ಮೂಲಕ ಸಾಧ್ಯವಾಗುತ್ತದೆ. ವೀರ ಯೋಧನಾದ ಶೆಹನ್‌ಷಾಹನ ಹೊಗಳುವಿಕೆ ಮತ್ತು ನಡತೆಯ ಬಗ್ಗೆ ಬರೆಯುವುದಕ್ಕೆ ತುಂಬ ಬುದ್ಧಿವಂತಿಕೆಯ ಅಗತ್ಯವಿದೆ. ಯಾಕೆಂದರೆ ಈ ಕೆಲಸವು ಹೇಗಿದೆಯೆಂದರೆ ನದಿಯ ಮೇಲೆ ಜೋರಾಗಿ ಚಲಿಸುವ ಗಾಳಿಯಲ್ಲಿ ರಭಸದಲ್ಲಿ ಹಾರುತ್ತಿರುವ ದುಪಟ್ಟಾವನ್ನು ಹಿಡಿಯಹೋದಂತೆ!

ಅಶಾರ್(ದ್ವಿಪದಿ)

ಖಿರತ್ ಕೆ ಗೂನ್ ದಂ ಅರ್ಝುದ್ ಹತಶ್ ತವಾನದ್ ಝುದ್
ಕೆ ವಸ್ಫೆ ಜಾಹೋ ಜಲಾಲಶ್ ಬರೂನ್ ಝು ಇಮ್‌ಕಾನ್ ಅಸ್ತ್
ಅವರ ತಾರೀಫು ಮಾಡಲು ಹೇಗೆ ಸಾಧ್ಯ ನನಗೆ?
ಬಾದಶಾಹನ ಘನ ವೈಭವದ ಪರಿ ನಿಲುಕದು ನನ್ನ ಊಹೆಗೆ.

ಬರೂಹೆ ಸತ್ಹೆ ಹವಾ ಅಬರ್‌ನೇಸ್ತ್ ದರ್ ತಗೋದೌ
ಝು ಬೀಮೆ ಜೌದಶ್ ದರಿಯಾಚುನಿ ಗುರಿಝಾನಸ್ತ್
ಮುಗಿಲು ತೇಲುವುದು ನಿಂತಿದೆ ಈಗ ಗಾಳಿಯ ಮೇಲೆ
ಯಾಕೆಂದರೆ, ಬಾದಶಾಹನ ಸಹಾಯ ಈಗ ಸುರಿಯುತಿದೆ ನದಿಯ ಮೇಲೆ.

ಝು ಪುಶ್ತ್ ಗರ್‌ಮಿಯೇ ಅದ್‌ಲಶ್ ನಿಗಾಹೆ ಆಶಿಕ್‌ರಾ
ಚ್ಯೂಂ ಝುಲ್ಫೆ ಕುಫ್ತಾ ಬರುಕ್ಸಾರೆ ದಿಲ್ ಫರೇಬಾ ಅಸ್ತ್
ಹೀಗೆ ಅವರ ನ್ಯಾಯದ ತೀರ್ಪಿನಿಂದ (ಜನರಿಗೆ)ಸಿಗುವ ಸುಖದಂತೆ
ಸುಂದರಿಯ ಮುಖದಲಿ ಕೂದಲರಾಶಿ ಹರಡಿಹುದು ಕಂಡ ಸಖಿನ ಖುಶಿಯಂತೆ.

ಒಟ್ಟಾರೆಯಾಗಿ ಈ ಕೃತಿ **'ಮುಬಾರಕ್ ನಾಮಾ'** (ಶುಭ ಚರಿತ್ರೆ)ದಲ್ಲಿ ಪದ್ಯಗಳೂ ಇವೆ, ಗದ್ಯವೂ ಇವೆ. ಮೊದಲಿಂದ ಕೊನೆಯ ತನಕ ಪೂರ್ತಿ ಗೊಳಿಸುವುದಕ್ಕೆ

ಹಜ್ರತ್ ಗಾಝಿ ಶಾಹ (ಮುಹಮ್ಮದ್ ಆದಿಲ್ ಶಾ) ತನ್ನ ಎಲ್ಲ ಕೆಲಸಗಳಿಗಿಂತಲೂ ಇದಕ್ಕೆ ಹೆಚ್ಚು ಆದ್ಯತೆ ನೀಡಿ ಪ್ರೋತ್ಸಾಹಿಸಿದರು. ಸರ್ವರ ಸೃಷ್ಟಿಕರ್ತನಾದ ಅಲ್ಲಾಹನ ಕೃಪೆಯೂ ನನ್ನ ಮೇಲಿತ್ತು. ಹಜ್ರತ್ ಬಾದಶಾಹನ ಮುಹಮ್ಮದೀಯ(ಧಾರ್ಮಿಕ) ಪ್ರಜ್ಞೆಯ ಒಳ್ಳೆತನವನ್ನು ನನ್ನ ಶುದ್ಧ ಹೃದಯದಿಂದ ತಿಳಿದುಕೊಂಡು ಬರೆಯಲು ತೊಡಗಿದೆ. ಯಾವುದೇ ಪೂರ್ವಗ್ರಹವಿಲ್ಲದೆ, ಸುಳ್ಳು ಹೇಳದೆ ನಾನು ಈ ವಿಚಾರವನ್ನು ವ್ಯಕ್ತಪಡಿಸಲು ಇಚ್ಛಿಸುವುದೇನೆಂದರೆ, ಪ್ರಥಮಬಾರಿ ಬರೆಯುತೊಡಗುವಾಗ ಬಾದಶಾಹರಿಗೆ ಸಂಬಂಧಪಟ್ಟ ಕೆಲವು ಮಹತ್ವಪೂರ್ಣ ಚಟುವಟಿಕೆಗಳು ನನ್ನ ಗಮನಕ್ಕೆ ಬಂದವು. ಇವುಗಳಲ್ಲಿ ಯಾವುದೇ ಒಂದು ಮಹೋನ್ನತ ಕಾರ್ಯವನ್ನು ಭೂಲೋಕದ ಇನ್ನಿತರ ಸುಲ್ತಾನರು ಕೈಗೊಳ್ಳುತ್ತಿದ್ದರೆ ಅಹಂಕಾರದಿಂದ ಬೀಗಿಕೊಳ್ಳುತ್ತಿದ್ದರು ಮತ್ತು ಅದರ ಅಮಲಿನಿಂದ ತನ್ನ ಸ್ವಯವನ್ನು ಕಳೆದುಕೊಳ್ಳುತ್ತಿದ್ದರು. (ಆದರೆ ನನ್ನ ಬಾದಶಾಹ ಹಾಗಿಲ್ಲ). ನಾನು ಅವರ ಮಹಾನ್ ಕಾರ್ಯಗಳೆಲ್ಲವುಗಳನ್ನು ಇಲ್ಲಿ ದಾಖಲೆ ಮಾಡಿಲ್ಲ, ಆದರೆ ಕೆಲವನ್ನು ಮಾತ್ರ ಆರಿಸಿ ಇಲ್ಲಿ ದಾಖಲಿಸಿಕೊಂಡಿದ್ದೇನೆ. ಯಾಕೆಂದರೆ ಇತಿಹಾಸದಲ್ಲಿ ಇವರ ಮಹೋನ್ನತ ಕಾರ್ಯಗಳ ಸೌಂದರ್ಯವು ಅರಳಿ ಕಾಲಕಾಲಕ್ಕೂ ಶಾಶ್ವತವಾಗಿ ಉಳಿದಿರಲಿ ಎಂಬುದು ನನ್ನ ಉದ್ದೇಶವಾಗಿದೆ. ಮುಹಮ್ಮದ್ ಶಾರ ಚರಿತ್ರೆಯನ್ನು ಇಕ್‌ಲೀಮೆ ಸಬಾಹ(ಸಪ್ತವಿಶ್ವಗಳ) ರಾಜ ಮಹಾರಾಜರು ಇವರಂತೆ ಮುಹಮ್ಮದೀ ಚರ್ಯೆಯನ್ನು ಅನುಸರಿಸಲು ಬಯಸಿ ಓದಲಿಚ್ಛಿಸಿದರೆ ಅನುಕೂಲವಾಗಲೆಂದು ಈ ಕೃತಿಯನ್ನು ರಚಿಸಿದೆ. ಇದರಲ್ಲಿ ಅಡಗಿರುವ ಈ ಉದ್ದೇಶವನ್ನು ಅವರು ತಿಳಿದುಕೊಳ್ಳಲಿ.

ಹಜ್ರತ್ ಬಾದಶಾಹ ಗಾಝಿಯವರ ಬಗ್ಗೆ ಹಿಂದಿನ ಪುಟಗಳಲ್ಲಿ ಹೇಳಿದಂತೆ ಇವರ ಮಹೋನ್ನತ ವಿಚಾರಗಳನ್ನು ಸಂಪೂರ್ಣವಾಗಿ ತೆರೆದಿಡಲು ನನ್ನ ಸಾಮರ್ಥ್ಯವು ಸಾಲದೆನಿಸುತ್ತದೆ. ಅವರು ನೀಡಿದ ಈ ಕೆಲಸ ನನಗೆ ಎಷ್ಟು ಸಂತಸ ತಂದಿದೆಯೆಂದರೆ ಇದನ್ನು ನಾನು ಪ್ರಕಟಿಸಲು ಕೂಡ ಅಸಮರ್ಥನಾಗಿದ್ದೇನೆ. ಅಲ್ ಹಮ್ದು ಲಿಲ್ಲಾಹ(ಎಲ್ಲ ಸ್ತುತಿಯೂ ಅಲ್ಲಾಹನಿಗೆ), ಬಾದಶಾಹರ ಈ ಮಹೋನ್ನತ ಕಾರ್ಯಕ್ರಮಗಳ ಹೊಗಳಿಕೆಯ ಬರಕತ್‌ನಿಂದ ನನ್ನ ಲೇಖನಿ ಮತ್ತು ಇಲ್ಲಿ ಬಳಸಲಾದ ಭಾಷೆಯನ್ನು ವಿಶ್ವದ ಅತ್ಯಂತ ಉತ್ತಮ ಬೆಳಕನ್ನು ಬೀರುವ ನಕ್ಷತ್ರಗಳಲ್ಲಿ ಒಂದೆಂದು ಪರಿಗಣಿಸಲಾಗಿದೆ. ಈ ಬೆಳಕು ವಿಶ್ವದ ಪೂರ್ವ ಮತ್ತು ಪಶ್ಚಿಮ ದಿಕ್ಕುಗಳಾದ್ಯಂತ ಹರಡುತ್ತಿದೆ.

ಅಶಾರ್ (ದ್ವಿಪದಿ)

ಝುಹೇ ಶೆಹನ್‌ಶಾಹೆ ಗಾಝಿ ಕೆ ಬರ್ಕ್ ಶಂಶೀರಸ್
ಚ್ಯೂಂ ಆಫ್ತಾಬೆ ಜಹಾಂತಾಬ್ ಖಿಶ್‌ತಯೇ ಆಲಂಗೀರ್

ಸದಾಸಂತಸದ ಅದೃಷ್ಟವಂತ ವೀರಯೋಧ ಬಾದಶಾಹ ಹಿಡಿದ ತಲ್ವಾರಿನ ಹೊಳಪು

ವಿಶ್ವಕ್ಕೆ ಬೆಳಗುವ ಸೂರ್ಯನಂತೆ, ಅದರ ತಾಕತ್ತು ವಿಶ್ವವನ್ನು ಪುಡಿಗಟ್ಟುವಂತಿದೆ!

ಝೆ ವಶ್ಫೆ ಜುದಶ್ ಗರ್ ಶಮ್ಮಯೇ ರಖಂ ಸಾಝುಂ
ವರ್ಖ್ ಝುನುಕ್ತಯೆ ದುರ್ರೆ ಅಫ್ಶಾನ್ ಶವದ್ ಚ್ಯೂಂ ಅಬ್ರೆ ಮತೀರ್
ಬಾದಶ್ಹಾಹರ ದಾನಶೂರತನದ ಬಗ್ಗೆ ಸ್ವಲ್ಪವೂ ಬರೆದರೆ ಸಾಕು,
ಮುತ್ತುಗಳು ಮುಗಿಲಿನಿಂದ ಮಳೆಗೆರೆಯಲು ಒಂದು ಸಣ್ಣ ಬಿಂದುವೇ ಸಾಕು.

ಬಾದಶಾಹ ಗಾಝಿ ಸಾಹೇಬರ ವ್ಯಕ್ತಿತ್ವದ ವಿಶೇಷತೆಯ ಬಗ್ಗೆ ಒಂದು ಚಿಕ್ಕ ಟಿಪ್ಪಣಿಯನ್ನು ಮಾಡ ಹೊರಟರೆ, ಹೇಗಿರುತ್ತದೆಂದರೆ ಒಂದು ಬಾಗಿಲನ್ನು ತೆರೆದರೆ ಮತ್ತೊಂದು ಮಗದೊಂದು ತೆರೆಯುತ್ತ ಹೋಗುವಂತೆ ಸಾರ್ವಭೌಮತೆಯ ವೈಭವದ ಪದರಗಳು ಬಿಚ್ಚುತ್ತ ಹೋಗುವುದು. ಹಜ್ರತ್ ಗಾಝಿ ಸಾಹೇಬರ ಆಳ್ವಿಕೆಯ ಕಾನೂನಿನ ನಿಯಮಗಳನ್ನು ನೋಡಿದರೆ, ಈ ಕಾನೂನಿನ ನಿಯಮಾವಳಿಗಳಲ್ಲಿ ಒಂದು ಹೆಚ್ಚಿನದು, ಒಂದು ಕಮ್ಮಿಮಯದು ಅನ್ನುವುದಕ್ಕೆ ಅವಕಾಶವಿರದಂತೆ ತಯಾರಿಸಿರುವ ಪರಿಯ ಬಗ್ಗೆ ಜನರು ತಲೆದೂಗುತ್ತಾರೆ. ದಕ್ಷಿಣ ಭಾರತದ ಎಲ್ಲ ಅರಸರು ಮತ್ತು ಹಿಂದುಸ್ಥಾನದ ಇತರ ಎಲ್ಲಾ ಸುಲ್ತಾನರ ಸರದಾರರೆನಿಸಿದ್ದವರನ್ನು ಕೂಡ ತನ್ನ ಶಕ್ತಿಯ ಬಲದಿಂದ ಕುಗ್ಗಿಸಿ ಬಗ್ಗಿಸುವ ಸಾಮರ್ಥ್ಯ ತಮ್ಮ ಬಾದಶಾಹರಿಗೆ ಇದೆಯೆಂದು ಆ ಕಾಲದ ಜನ ಸಾಮಾನ್ಯರು ಕೂಡ ಅರಿತಿದ್ದರು ಮಾತ್ರವಲ್ಲ ಹೆಮ್ಮೆಪಡುತ್ತಿದ್ದರು. ಈ ಸುಲ್ತಾನರು ಕಪ್ಪಕಾಣಿಕೆ ಮತ್ತು ತೆರಿಗೆಗಳನ್ನು ಒಪ್ಪಿಸುವುದನ್ನು ಯಾವಾಗಲು ತಪ್ಪಿಸಿಕೊಳ್ಳದೆ ನಿಯಮವನ್ನು ಪಾಲಿಸಿಕೊಂಡು ಬಾದಶಾಹರ ಕೃಪೆಗೆ ಪಾತ್ರರಾಗಿರುತ್ತಿದ್ದರು. ಎಂದಾದರೂ ಈ ಕಾಣಿಕೆ ಮತ್ತು ತೆರಿಗೆಯನ್ನು ನೀಡಲು ತಡವಾದರೆ ಬಾದಶಾಹರ ಕೋಪವನ್ನು ಎದುರಿಸುವ ಧೈರ್ಯವೂ ಅವರಲ್ಲಿರಲಿಲ್ಲ. ಇಂತಹ ಸಂದರ್ಭದಲ್ಲಿ ಧೈರ್ಯಗುಂದಿದ ಈ ಸಾಮಂತ ಅರಸರು ತಲೆತಗ್ಗಿಸಿಕೊಂಡು ತಮ್ಮ ಪ್ರಾಂತ್ಯವನ್ನು ಬಿಟ್ಟು ಹೊರನಡೆಯುತ್ತಿದ್ದರು. ಬಾದಶಾಹ ಗಾಝಿಯವರು ಹಿಂದುಸ್ಥಾನದ ಸುಲ್ತಾನರ ಸಾಲಿನಲ್ಲಿ ಅತ್ಯಂತ ಮಹತ್ವದ ಸ್ಥಾನವನ್ನು ಪಡೆದಿದ್ದರು ಮತ್ತು ಸೂರ್ಯನಂತೆ ಉಜ್ವಲ ಪ್ರಕಾಶದಂತಿದ್ದರು. ಇವರ ಆಳ್ವಿಕೆಯ ನಿಯಮಗಳು, ಸಾಧನೆಗಳು ಮತ್ತು ವೈಭವಗಳನ್ನು ಪಟ್ಟಿಮಾಡಿದರೆ ಸುಂದರ ಚಿತ್ರವನ್ನು ಫ್ರೇಮಿನೊಳಗಿಟ್ಟು ಪ್ರದರ್ಶನಕ್ಕಿಡುವ ಅಮೂಲ್ಯ ಕಲಾಕೃತಿಯೆನಿಸುತಿತ್ತು. ಅವರ ಸಮಕಾಲೀನ ಬಾದಶಹರಾಗಿದ್ದ ಮೊಗಲ್ ಅರಸ ಶಾಹಜಹಾನ್‌ರಿಗಿಂತ ಹೆಚ್ಚು ತಾಳ್ಮೆ ಮತ್ತು ಸಮಾಧಾನ ಹಜ್ರತ್ ಬಾದಶಾಹ ಗಾಝಿ ಮುಹಮ್ಮದ್ ಆದಿಲ್‌ಶಾರಲ್ಲಿ ಇತ್ತು. ಖವಾಸ್ ಖಾನನ್ನು ವಜಾಗೊಳಿಸಿದ್ದರಿಂದ ಬಾದಶಹರು ತುಂಬ ವ್ಯಥಿತರಾಗಿದ್ದರೂ ಪ್ರಜೆಗಳ ಸಮಕ್ಷಮದಲ್ಲಿ ಇದನ್ನು ಪ್ರದರ್ಶಿಸದೆ ತಮ್ಮ ಎಂದಿನ ಕಾರ್ಯಕ್ರಮಗಳಲ್ಲಿ ತೊಡಗಿಕೊಂಡಿದ್ದರು. ದೌಲತಾಬಾದಿಗೆ ತಮ್ಮ ನಿಯತ್ತಿನ ಸಿಪಾಯಿಗಳು ಮತ್ತು ವಫಾದಾರರಾದ ಮಂತ್ರಿಗಳೊಂದಿಗೆ ಪರ್ವತದ ಇಲಾಖೆಯ ಹಾದಿಯಲ್ಲಿ ತೆರಳಿ ತಮ್ಮ ಶಾಹಿ ದ್ವಜವನ್ನು ಹಾರಿಸಿದರು.

ಇವರ ವಿರೋಧಿಗಳು ಮತ್ತು ಬೆಂಬಲಿಗರ ಅಭಿಪ್ರಾಯಗಳನ್ನು ಪರಿಗಣಿಸಿದಾಗ ನಾವು ತಿಳಿದುಕೊಳ್ಳುವುದೇನೆಂದರೆ ಹಜ್ರತ್ ಬಾದಶಾಹ ಗಾಝಿಯವರು ತಮ್ಮ ಪರಿವಾರದ ನಮ್ರ ಸಿಪಾಯಿಗಳೊಂದಿಗೆ ಸ್ವತಹ ತಾನು ಭೇಟಿನೀಡುತ್ತಿದ್ದದ್ದು ಮಾತ್ರವಲ್ಲ, ತಮ್ಮ ಘನತೆಯ ಮಂತ್ರಿಗಳು ಮತ್ತು ವರಿಷ್ಠರನ್ನು ಕಳುಹಿಸಿ ತಮ್ಮ ಅಧೀನದ ಪ್ರಾಂತ್ಯಗಳಲ್ಲಾಗುವ ಬೆಳವಣಿಗೆಗಳ ಮಾಹಿತಿಯನ್ನು ಪಡೆದುಕೊಳ್ಳಲು ಆಗಾಗ ಕಳುಹಿಸುತ್ತಿದ್ದರು. ಬಾದಶಾಹ ಶಾಹಜಹಾನ್ ಹುಟ್ಟಿಸಿದ ಗೊಂದಲದಿಂದ ಉಂಟಾದ ಪರಿಸ್ಥಿತಿಯನ್ನು ಈ ವರಿಷ್ಠರು ಆಳವಾದ ವಿಚಾರಣೆಗಳೊಂದಿಗೆ ಮಾಹಿತಿಯನ್ನು ಒಟ್ಟುಮಾಡಿದರು. ಇವರು ನೀಡಿದ ವರದಿಯ ಪ್ರಕಾರ ಈ ಇಬ್ಬರು ಬಾದಶಾಹರ ನಡುವಿನ ವೈಮನಸ್ಸಿಗೆ ಪರಿಹಾರ ನೀಡುವ ಸಲುವಾಗಿ ಯೋಗ್ಯ ಸಂಧಾನ ಮಾರ್ಗವನ್ನು ಹುಡುಕಿ ಪರಸ್ಪರರಿಗೆ ಒಪ್ಪಿಗೆ ಯಾಗುವಂತೆ ಕ್ರಮಗಳನ್ನು ಕೂಡಲೇ ಕೈಗೊಳ್ಳಬೇಕೆಂಬ ಸಲಹೆಗಳನ್ನು ನೀಡಿದರು. ದಕ್ಷಿಣದ ಸಾಮಂತ ಸುಲ್ತಾನರು ನೀಡಬೇಕಾದ ಬಾಕಿಯ ಕಪ್ಪ ಕಾಣಿಕೆ ಮತ್ತು ತೆರಿಗೆಯನ್ನು ಮನ್ನಾಗೊಳಿಸುವ ವ್ಯವಸ್ಥೆ ಮಾಡಲಾಯಿತು. ಈ ಎಲ್ಲ ಘಟನೆಗಳ ಸತ್ಯ ಘಟನೆಗಳ ವಿವರಗಳು 'ಝಿಕ್ರೆ ಜುಲೂಸೆ ಅಶ್ರಫ್' ಎಂಬ ದಾಖಲೆಯಲ್ಲಿ ಮಂಡಿಸಲಾಗಿದೆ.

ಶೇರ್ (ದ್ವಿಪದಿಗಳು)

ಶಾಹೇ ಕೆ ಝುಮಾನಯೇ ಗುಲ್‌ಶನ್ ಅಸ್ತ್ ಅಝ್ ರೂಯಶ್
ಬಾಶತ್ ದೋಜಹಾಂ ಫಿದಾಯೆ ತಾರೇ ಮೂಯಶ್

ಬಾದಾಶಾಹರ ಮುಖಾರವಿಂದದ ಸೊಗಸೆಂದರೆ ವಸಂತ ಋತುವಿನ ಆಗಮನದಂತೆ
ಅವರ ಭುಜಕ್ಕಿಳಿದ ಕೂದಲಿನ ಸೌಂದರ್ಯಕ್ಕೆ ಎರಡೂ ಜಗತ್ತು (ಲೌಕಿಕ ಮತ್ತು ಪಾರಮಾರ್ಥಿಕ) ಮಾರುಹೋದಂತೆ.

ಆಶಾಯಶೇ ದೊಆಲಂ ಅಸ್ತವಾಫೆ ದರೆವೂಸ್ತ್
ಖುರ್‍ರಂ ನಶೋದ್ ಹರ್ ಕೆ ನಯಾಯತ್ ಸುವೇಶ್

ಅವರ ಅಸ್ಥಾನದಲ್ಲಿ ಆಗಮಿಸುವವರ ಎಲ್ಲ ಇಚ್ಛೆಗಳೂ ಸಾಕಾರವಾಗುವವು
ಅವರ ಬಳಿ ಬರದಿರುವವರು ಎರಡೂ ಜಗತ್ತಿನ ಪುಣ್ಯಫಲಗಳಿಂದ ವಂಚಿತರಾದರು!

ಬಾದಶಾಹ ಗಾಝಿಯವರು ಒಪ್ಪಿಕೊಂಡ ಸಂಧಾನಕ್ಕೆ ಎರಡು ವರ್ಷಗಳು ಕೂಡ ಕಳೆದಿರದಿದ್ದರೂ ಶಾಹಜಹಾನನ ಪಿತೂರಿಯಿಂದ ಕೆಲವು ನಿಯತ್ತಿಲ್ಲದವರು ಮತ್ತು ದುರಾಸೆಹೊಂದಿದ ಜನರು ದಕ್ಷಿಣ ಭಾರತವನ್ನು ತಮ್ಮ ವಶಕ್ಕೆ ತಂದುಕೊಳ್ಳಲು ಮಸಲತ್ತು ಮಾಡತೊಡಗಿದರು. ಈ ಅನಾವಶ್ಯಕ ವಿಚಾರಗಳಿಂದ (ದೆಹಲಿಯ

ಮೊಘಲ್) ಸುಲ್ತಾನ ಶಾಹಜಹಾನನು ತನ್ನ ಮಾವ ಆಸಿಫ್ ಖಾನನ ನೇತೃತ್ವದಲ್ಲಿ ಭಾರೀ ಸೇನೆಯನ್ನು ರವಾನಿಸುವ ಮೂಲಕ 'ನೀಲಿ ಹಿಸಾರ್'(ನೀಲಿ ಬಣ್ಣದ) ಸುಂದರ ರಾಜಧಾನಿ (ಮುಹಮ್ಮದ್‌ಪುರ ಯಾ ಬಿಜಾಪುರ)ಗೆ ಮುತ್ತಿಗೆ ಹಾಕಿಸಿ, ಬಾಣಗಳ ಮಳೆಗೆರೆಯಲು ತೊಡಗಿದರು. ತಮ್ಮ ಭಾರಿ ತೋಫಿನ ಮುಖವನ್ನು ದಕ್ಷಿಣದ ಕಡೆಗೆ ತಿರುಗಿಸಿದರು. ಆಸಿಫ್ ಖಾನ್ ಮೆಲ್ಲಮೆಲ್ಲನೆ ಸಾಗುತ್ತ ದಕ್ಷಿಣದ ಸುಲ್ತಾನರ ರಾಜ್ಯಕ್ಕೆ ಕಾಲಿಟ್ಟ. ತನ್ನ ಅಪಾರ ಸೈನ್ಯದೊಂದಿಗೆ ಮುಹಮ್ಮದ್‌ಪುರವನ್ನು ಪ್ರವೇಶಿಸಿದ. ತನ್ನ ದೊಡ್ಡ ಶೂರವೀರ ಸರದಾರರನ್ನು ಸೇರಿಸಿ ಯುದ್ಧದ ಘೋಷಣೆಯನ್ನು ಮಾಡಿ ಕೋಟೆಯನ್ನು ಅದರ ಎಲ್ಲ ವಸ್ತುಗಳೊಂದಿಗೆ ವಶಪಡಿಸಿಕೊಳ್ಳುವ ಆಜ್ಞೆಯನ್ನು ಜಾರಿಗೊಳಿಸಿದ. ಸೈನ್ಯದ ಘೋಷಣೆ, ಗಲಭೆಗಳು ಮತ್ತು ಅವರ ಶಿರಸ್ತ್ರಾಣ, ಸಮವಸ್ತ್ರಗಳ ಕಲರವ ಜನರ ಕಿವಿಗೆ ಅಪ್ಪಳಿಸಿತ್ತು. ಬಾದಶಾಹ ಗಾಝಿ ಈ ಪಿತೂರಿಯ ಆರ್ಭಟದ ಸಮಾಚಾರ ತಿಳಿದಾಗ ಇದೊಂದು ಮಕ್ಕಳಾಟದಂತೆ ಎಂದು ಅಲಕ್ಷಿಸಿ, ಉದಾಸೀನತೆ ತೋರಿದರು. ತನ್ನ ಶೂರವೀರರ ಸೈನ್ಯರನ್ನು ವೈರಿ ಸೈನಿಕರು ಎದುರಿಸಲಾರದೆ ಕೆಲವೇ ಘಳಿಗೆಗಳಲ್ಲಿ ನಾಶಹೊಂದಲಿದ್ದಾರೆಂದು ಅಂದುಕೊಂಡರು. ಈ ಯುದ್ಧ ಎರಡೂ ಕಡೆಯವರ ಮಧ್ಯೆ ನಡೆದ ತೀವ್ರ ಘರ್ಷಣೆಯೊಂದಿಗೆ ಇಪ್ಪತ್ತು ದಿನಗಳ ಕಾಲ ನಿರಂತರವಾಗಿ ನಡೆಯಿತು. ಬಾದಶಾಹರ ಶೂರವೀರರ ಸೈನ್ಯ, ಮೊಘಲರ ಸೇನೆಗೆ ತಮ್ಮ ಪರಾಕ್ರಮದಿಂದ, ಯುದ್ಧದ ನೈಪುಣ್ಯತೆ, ಕೈಚಳಕಗಳ ಮೂಲಕ ಚಳ್ಳೆಹಣ್ಣು ತಿನ್ನಿಸುತ್ತಿದ್ದರು. ಈ ದೆಸೆಯಲ್ಲಿ ವಿಜಯಮಾಲೆ ಕೈತಪ್ಪಿ ತಿರುಗುತ್ತಿರುವುದು ಅನುಭವಕ್ಕೆ ಬಂದಾಗ ಅಸಿಫ್ ಖಾನನು ಭಯದಿಂದ ತತ್ತರಿಸಿದ! ಈ ಕೋಟೆಯನ್ನು ವಶಪಡಿಸುವುದಕ್ಕಾಗಿ ಸೈನ್ಯದ ನೆತೃತ್ವ ವಹಿಸುವುದೆಂದರೆ ತನ್ನ ಎಲ್ಲ ಆಸೆಆಕಾಂಕ್ಷೆಗಳನ್ನು ದಫನಮಾಡಿಕೊಳ್ಳುವಂತೆಯೇ ಸರಿ ಎಂಬ ತೀರ್ಮಾನಕ್ಕೆ ಬಂದ. ಇದಲ್ಲದೆ ತನ್ನ ಸೈನ್ಯದ ಮೇಲಿನ ಹಿಡಿತವೂ ಸಡಿಲಾದಂತೆ ಅನಿಸತೊಡಗಿತು. ತರಗೆಲೆಗಳು ಗಾಳಿಯಲ್ಲಿ ಹಾರಿಹೋಗುವ ರೀತಿ ತನ್ನ ಸೈನ್ಯ ಓಡುತ್ತಿರುವುದು ಕಂಡು ತಾನು ಕೂಡ ಹೃದಯದಲ್ಲಿ ಬತ್ತಿಹೋದ ತನ್ನ ಆಕಾಂಕ್ಷೆಗಳನ್ನು ಮತ್ತೆಮತ್ತೆ ಅದುಮಿಕೊಳ್ಳುತ್ತಾ ಓಡಿ ಹೋಗುವ ದಾರಿಯನ್ನು ಕಂಡುಕೊಂಡು ಬಚಾವಾದ. ಈ ವಿಜಯದ ನಂತರ ಮುಹಮ್ಮದ್ ಆದಿಲ್ ಷಾ ಬಹಳ ವರ್ಷಗಳ ತನಕ ತನ್ನ ಆಳ್ವಿಕೆಯನ್ನು ಶಾಂತಿಯುತವಾಗಿ ಮುಂದುವರಿಸಿದರು. ಖವಾಸ್ ಖಾನನ ಅಪಜಯದ ಅಧ್ಯಾಯಗಳಲ್ಲಿ ಈ ಘಟನೆಯ ವಿವರಗಳನ್ನು ಉಲ್ಲೇಖಿಸಲಾಗಿದೆ.

ಅಶಾರ್(ದ್ವಿಪದಿಗಳು)

> **ಝೆ ರೂಯೆ ಸಿಝ್ಕ್ ಬದರ್ಗಾಯೆ ಖುಸ್‌ರೊ ಗಾಝಿ**
> **ಹರ್ ಆಂಖೆ ರಾಹ್ ನಯಾ ಬದ್ ಬುವದ್ ರಹೀನೆ ಕತರ್**

ಖುಸ್ರೊ ಗಾಝಿಯ ದರಬಾರಿನಲಿ ಯಾರು
ಸತ್ಯದ ಹಾದಿಯನ್ನು ತುಳಿಯದವನು ಅಪಾಯಕ್ಕೆ ಸಿಲುಕುವನು.

ಬಗಾಹೆ ರಮ್ಝ್ ಚ್ಯೂಂ ಅಸ್ತೇಗ್ ಶೋಲ ಸೀಮಾ ಬಶ್
ಶವದ್ ಬರೂಯೆ ಹವಾ ರೂಹ್ ಮುಂತಷರ್ ಚ್ಯೂಂ ಶರರ್
ರಣರಂಗದಲಿ ಅವರ ಹೊಳೆವ ತಲವಾರು ಹೊರಬಂದಾಗ
ಗಾಳಿಯಲಿ ಬೆಂಕಿ ಕಿಡಿಹಾರಿದಂತೆ ರೂಹ್ (ಜೀವ) ಪುಡಿಗಟ್ಟುತ್ತದೆ.

ಜೆ ಚರ್ಖ್ ಅಖ್ತರ್ ಬಖ್ತೆ ಅದೂ ಉಫ್ತದ್ ಬರ್ ಖಾಖ್
ಬದಾಮ್ ಮುಶಾಬಕೆ ಕಸ್ ರೀಝುತ್ ಅಝ್ ಶಿಘಾಲೆ ಅಖ್‌ಗರ್
ವೈರಿಯ ಭವಿಷ್ಯವು ಎತ್ತರದಿಂದ ಬಿದ್ದು ಮಣ್ಣು ಮುಕ್ಕುತ್ತದೆ
ಆಕಾಶದಿಂದ ವಸ್ತುವೊಂದು ಕೆಳಗೆ ದೊಪ್ಪನೆ ಬಿದ್ದಂತೆ.

ಇನ್ನೊಂದು ಮುಖ್ಯಸಂಗತಿ ಬಾದಶಾಹ ಮುಹಮ್ಮದೀ ಧರ್ಮಾವಲಂಬಿ ವ್ಯಕ್ತಿತ್ವದಲ್ಲಿ ಯಾವುದಿತ್ತೆಂದರೆ ಅವರು ಸದಾ(ಖಾತಿಮುನ್ನಬಿಯ್ಯೀನ್) ಪ್ರವಾದಿ ಮುಹಮ್ಮದರ ಧರ್ಮದ ಕೈಂಕರ್ಯದಲ್ಲಿ ನಿರತರಾಗಿರುವುದು, ತತ್ವಗಳನ್ನು ಪಾಲಿಸುವುದು ತಮ್ಮ ಎಂದಿನ ನಿಯಮವನ್ನಾಗಿ ಮಾಡಿಕೊಂಡಿದ್ದರು. ಅವರ ಮಹೋನ್ನತ ವ್ಯಕ್ತಿತ್ವ ಎಷ್ಟೊಂದು ಶಕ್ತಿಶಾಲಿಯಾಗಿತ್ತೆಂದರೆ ಕರ್ನಾಟಕ ಮತ್ತು ಮಲೆನಾಡಿನ ಪ್ರಾಂತ್ಯಗಳನ್ನು ತನ್ನ ಶೌರ್ಯದ ಮೂಲಕ ಆಳ್ವಿಕೆಗೆ ಒಳಪಡಿಸಿಕೊಂಡಿದ್ದರು. ಇದಕ್ಕಿಂತ ಹಿಂದೆ ಈ ಇಲಾಖೆಯು ರಾಮರಾಜ ಸಾಹೇಬರ ಶಕ್ತಿಶಾಲಿ ಆಳ್ವಿಕೆಗೆ ಒಳಪಟ್ಟು, ಅಲ್ಲಿನ ಅರಸರಿಂದ ತೆರಿಗೆ ವಸೂಲಿ ಮಾಡುತ್ತಿದ್ದರು. ಈ ಇಲಾಖೆಯ ಆಳ್ವಿಕೆಯು ಹೇಗಿತ್ತೆಂದರೆ ಅಗಣಿತ ಶೂರ ಸೈನಿಕರು, ಭದ್ರಕೋಟೆಯನ್ನು ಒಳಗೊಂಡು, ತನ್ನ ಬಲಶಾಲಿ ಆಳ್ವಿಕೆಯ ಬಗ್ಗೆ ರಾಮರಾಜ್‌ರ ಸಾಹೇಬರು ಹೆಮ್ಮೆಪಟ್ಟುಕೊಂಡಿದ್ದರು. ಆದರೆ ಹಜ್ರತ್ ಗಾಝಿ ಬಾದಶಾಹರು ಮುನ್ನಡೆದು ತಮ್ಮ ದುಲ್ಫಿಕಾರ್ (ಹಜ್ರತ್ ಅಲಿಯವರ ಕೈಯಲ್ಲಿರುತ್ತಿದ್ದ ಪವಿತ್ರ ತಲ್ವಾರು)ತಲವಾರಿನಂತಹ ತನ್ನ ತಲವಾರಿನ ಮೂಲಕ ವಿಜಯಗಳಿಸಿ ಇಸ್ಲಾಂ ಧರ್ಮದ ಹಿರಿಮೆಯನ್ನು ಶಾಶ್ವತಗೊಳಿಸಿದರು.

ಕರ್ನಾಟಕ ಮತ್ತು ಮಲ್ನಾಡು ಪ್ರಾಂತ್ಯದ ಪ್ರತಿಯೊಂದು ಪಟ್ಟಣಗಳನ್ನು ವಶಪಡಿಸಿಕೊಂಡರು, ಕೆಲವುಭಾಗಗಳಲ್ಲಿದ್ದ ಹಳೆಯ ನಶಿಸಲಿದ್ದ ಗುಡಿಕಟ್ಟಡಗಳನ್ನು ಬಾದಶಾಹ ನೆಲಸಮಗೊಳಿಸಿದರು. ಹಲವಾರು ವರ್ಷಗಳ ಕಾಲ ಈ ಅರಸರು ಈ ಸಮೃದ್ಧ ಭಾಗವನ್ನು ತಮ್ಮ ವಶಮಾಡಿಕೊಂಡಿದ್ದರೂ ಯಾವ ಸಾಧನೆಗಳನ್ನು ಕೂಡ ಮಾಡದೆ ಹಿಂದುಳಿದ ಪ್ರದೇಶವಾಗಿರುವುದನ್ನು ಕಂಡಿದ್ದರು. ಬಾದಶಾಹರು ಬರಿಯ ಮೂರು ವರ್ಷಗಳಲ್ಲಿ ಈ ಪ್ರದೇಶವನ್ನು ಅಭಿವೃದ್ಧಿಪಡಿಸುವ ವಿಶೇಷ ಸಾಧನೆ

ಮಾಡಿ ವಿಶ್ವದ ಎಲ್ಲ ಅರಸರೂ ಹಾಡಿಹೊಗಳುವಂತೆ ಮಾಡಿದ್ದರು. ಹಜ್ರತ್ ಬಾದಶಾಹ ಗಾಝಿಯವರ ಶಕ್ತಿ ಮತ್ತು ಸುದೃಢವಾದ ಮಾತಿನ ವೈಚಾರಿಕ ಬಲದಿಂದ ಮೂಢನಂಬಿಕೆ ಮತ್ತು ಬಹುದೇವಾರಾಧನೆಯ ಸಂಪ್ರದಾಯವು ಅಲುಗಾಡತೊಡಗಿತು. ಇದರ ಫಲವಾಗಿ (**ಬುಂದ್ ಅಝ್‌ಬುದಂದೆ ಝುನ್ನಾರ್ ಬುಂದಾನೆ ಸೀಕ್ ಬುಂದ್ ರಾಮೇಶ್‌ಬರ್ ಅಝ್ಬುವಮ್ ಜುದಾಗಸ್ತ್**) ರಾಮೇಶ್ವರದ ಪೂಜಾರಿಯೊಬ್ಬರ ಝುನ್ನಾರ್(ಜನಿವಾರ) ಬಾದಶಾಹನ ಭಯದಿಂದ ಗಂಟು ಸಡಿಲಾಗಿ ಕಳಚಿಬಿತ್ತು!

ಅಶಾರ್ (**ಚೌಪದಿಗಳು**)

ಚ್ಯೂಂ ತೈರೆ ಖುಸ್ರೋ ಗಾಝಿ ಅಲಂಶುದ್
ಉಜೂದೆ ಮುಶ್ರಿಕಾಂ ಮಹವೇ ಅದಂಶುದ್
ಅಝ್ವಾ ಇಕ್‌ಲೀಮೆ ದೀನ್ ತಗುಶ್ತ ಆಬಾದ್
ಸರೇ ಕುಫ್ಫಾರ್ ಎಕ್ಸರ್ ರಫ್ತ್ ಬರ್ಬಾದ್
ಬಾದಶಾಹನ ತಲ್ವಾರು ಶಕ್ತಿಶಾಲಿಯಾಗುವಾಗ
ಮುಶ್ರಿಕರು (ಬಹುದೇವಾರಾಧಕರು) ಎದುರಿಸಲಾಗದೆ ಓಡಿಹೋಗುತ್ತಾರೆ.
ವಿಶ್ವದಲ್ಲಿ ಧರ್ಮ ಸಂಸ್ಥಾಪನೆಯಾಗುವ ತನಕ
ಕುಫ್ಫಾರರ(ಅಧರ್ಮಿಗಳ) ಮರ್ಯಾದೆ ನಾಶವಾಗುತ್ತಲಿರುತ್ತವೆ.

ಚ್ಯೂಂ ಆಹಂಗ್ ಶಿಕ್ವಯೇ ಖಸ್ರೊವೀ ಕರ್ದ್
ಬಿನಾಯೆ ದೀನೆ ಪೈಗಂಬರ್ ಖವೀ ಕರ್ದ್
ಬಬೀನ್ ಶರಯೇ ಮುಬೀನ್ ರ ರೌನಖೇ ಖಾರ್
ಕೆ ಉಶ್ಶಾಖ್ ಅಝ್ಬುತಾನ್ ಕರ್ದಂದ್ ಇನ್ಕಾರ್
ಬಾದಶಾಹರ ತಲ್ವಾರಿನ ಘನತೆ ಹಿರಿಮೆಯ ಗೀತೆ ಹಾಡುತ್ತಿರುವಾಗ
ಪೈಗಂಬರು ಉಪದೇಶಿಸಿದ ಧರ್ಮ ಶಕ್ತಿಶಾಲಿಯಾಗುತ್ತದೆ.
ಈ ಉಪದೇಶಗಳಲಿ ಎಂತಹ ಪ್ರಭಾವಿ ಶಕ್ತಿಯಿದೆ ನೋಡಿ
ಇದರ ಅಭಿಮಾನಿಗಳು ಬಹುದೇವಾರಾಧನೆಯನ್ನು ತಿರಸ್ಕರಿಸುತ್ತಾರೆ.

ಈ ಕಾಲದಲ್ಲಿ ಬಾದಶಾಹರು ಮಾಡಿದಂತಹ ಸಾಧನೆಗಳು ಸಾವಿರಾರು ವರ್ಷಗಳ ಹಿಂದಿನ ಬಾದಶಾಹರ ಇತಿಹಾಸದಲ್ಲೂ ಕಂಡುಬರುತ್ತಿಲ್ಲ.

ಬಾದಶಾಹರ ಇನ್ನೊಂದು ವಿಶೇಷತೆಯೇನೆಂದರೆ ತಮ್ಮ ತಲ್ವಾರನ್ನು ಒರೆಯಿಂದ ತೆಗೆದಾಗ ವಿಜಯವೆಂಬುದು ಹೊಸ ಮದುಮಗಳಂತೆ ಬಂದು ಎದುರು ನಿಲ್ಲುತ್ತಿತ್ತು. ಬಾದಶಾಹ ಗಾಝಿ ಸಾಹೇಬರ ಆರೋಗ್ಯ ರಾಜಯೋಗ್ಯವಾಗಿರುತ್ತಿತ್ತು. ಇವರು ಯಾವಾಗಲೂ ಪ್ರಜೆಗಳ ಒಳಿತಿಗಾಗಿ ಮತ್ತು ಅವರನ್ನು ಸಂತಸದಿಂದ ಇಡುವ ಬಗೆ ಹೇಗೆಂದು ಯೋಚಿಸುತ್ತಿದ್ದರು. ಇದರಿಂದಾಗಿ ಅವರು ದಿನವೂ ಮಂತ್ರಿಮಂಡಳದವರನ್ನು

ಕರೆದು ಪ್ರಜೆಗಳ ಬಗ್ಗೆ ವಿಚಾರಿಸುತ್ತಿದ್ದರು. ಪ್ರಜೆಗಳ ಯೋಗ್ಯತೆಗನುಗುಣವಾಗಿ ಸತ್ಕಾರ ಮಾಡುತ್ತಿದ್ದರು. ಇದರಿಂದ ಪ್ರತಿಯೊಬ್ಬ ಬಡವ ಬಲ್ಲಿದನಾದ ಪ್ರಜೆಯೂ ಸಂತಸಪಡೆದುಕೊಳ್ಳುತ್ತಿದ್ದ.

ಶೇರ್(ದ್ವಿಪದಿ)

ಝುಮಾನಾ ಈಶ್ತ್ ಕೆ ಮಾಷೂಕ ಯೇ ಕರಿಶ್ಮಫರೋಶ್
ಬನಾರ್ಝೊ ವಿಶ್ವಾ ಡರ್ ಆವೋಶೆ ಆಶಿಕಾ ರಕ್ಸಂದ್
ಕಾಲವದು ಪವಾಡ ಮಾಡುವವರಿಗೆ ಮಾರುಹೋಗುವರು ಜನಗಳು
ಪ್ರೇಮಿಗಳು ತೆಕ್ಕೆಯಲಿ ಕುಣಿದು ನರ್ತಿಸುವವರಂತೆ!

ಮತ್ತೊಂದು ಶುಭ ಘಳಿಗೆ ಅರಸುತ್ತಾ ಬಂದಿತ್ತು! ಹಜ್ರತ್ ಬಾದಶಾಹ ಗಾಝಿಯವರು ಆಲಿಯಾ ತಾಜ್ ಜಹಾಂ ಬೇಗಂರೊಂದಿಗೆ ವಿವಾಹ ಸಂಬಂಧ ಮಾಡಿಕೊಂಡರು. ಇಸ್ಲಾಮೀ ಸಂಪ್ರದಾಯದಂತೆ ಶಬೇ ಝುಫಾಕ್(ಪ್ರಥಮ ರಾತ್ರಿ)ಗೆ ಸರಿಯಾಗಿ ನಗದಾಗಿ ಮಹರ್(ವಧು ದಕ್ಷಿಣೆ)ನ್ನು ನೀಡಿದರು. ಶುಭ ಕಾಲವೊಂದು ಹೀಗೂ ಕೂಡಿಬಂತು, ರಾಜಾಶ್ರಯವನ್ನು ಎಂದೂ ಬಯಸದಿದ್ದ ಹೆಸರಾಂತ ದೊಡ್ಡ ವಿದ್ವಾಂಸರೂ, ಗೌರವಾನ್ವಿತರೂ ಆಗಿದ್ದ ಷಾ ಅಬ್ಬಾಸ್ ಅಲ್ ಹುಸೈನಿ ಅಪರೂಪಕ್ಕೆ ದರ್ಬಾರಿಗೆ ಬಂದು ಬಾದಶಾಹರ ಘನತೆ ಗೌರವಕ್ಕೆ ಎಲ್ಲರೂ ನೋಡುತ್ತಿರುವಂತೆ ಪ್ರಥಮವಾಗಿ ಸಲಾಂ ಮಾಡಿದರು.

ಖಿತಾ (ಚೌಪದಿ)

ಸುಜೂದೆ ದರ್ಗಯೇ ವೂ ಹರ್ ಕೆ ಸರ್‌ಕರ್ದ್
ಸರ್‌ಅಝ್ ಪೈರಹನೇ ಅಫ್‌ಲಾಖ್ ಬರ್‌ಕರ್ದ್
ಜಬೀನೆ ಸರ್ವರಾನ್ ಫರ್ಶೆ ರಹೆ ಊಸ್ತ್
ಫಲಕ್ ಸರ್‌ಗರ್‌ಮೇ ತವಾಫೇ ದರ್‌ಗಯೇ ಊಸ್ತ್
ತಮ್ಮ ಆಸ್ಥಾನದಲಿ ಆಗಮಿಸಿ ಯಾರು ನಮಸ್ಕರಿಸುವರೋ
ಅವರ ತಲೆಯುಡುಪು ಆಕಾಶದೆತ್ತರಕೆ ಏರಿದಂತೆ ಅನಿಸುವುದು.
ಸರ್ದಾರರ ಹಣೆಗಳು ಬಾದಶಾಹನ ಹಾದಿಯಲಿ ಹರಡಲಾಗಿತ್ತು
ಆಕಾಶ ಅವರ ದರಬಾರಿನ ಪ್ರದಕ್ಷಿಣೆಯಲ್ಲಿ ವ್ಯಸ್ತವಾಗಿತ್ತು.

■

*

ಅಧ್ಯಾಯ – ೧೪

ಬಯಾನೆ ಮರಾತಿಫ್(ಬಾದಶಾಹರ ವೈಭವದ ಹೇಳಿಕೆಗಳು):

ಹಿಂದಿನ ಪುಟಗಳಲ್ಲಿ ಉರೂಸಿನ ಆಚರಣೆಯ ವೈಭವವನ್ನು ಕುರಿತು ಬಾದಶಾಹರ ಆಗಮನದೊಂದಿಗೆ ವಿವರಗಳನ್ನು ನೀಡಿದ್ದೇವೆ. ಇನ್ನೊಂದು ಮಾತು, ಬಾದಶಾಹ ಗಾಝಿಯವರ ಅದೃಷ್ಟ ಎಷ್ಟು ಉತ್ತಮವಾಗಿತ್ತೆಂದರೆ ವಿರೋಧಿಗಳು ಅವರ ವಿರುದ್ಧ ಎಂತಹ ಪಿತೂರಿಗಳನ್ನು ರಚಿಸಿದರೂ ತಮ್ಮ ಮೊದಲ ಹೆಜ್ಜೆಯಲ್ಲೇ ಏಳನೇ ಭೂಮಿಯ(ಪಾತಾಳದ) ಆಳದಲ್ಲಿ ಬೀಳುವಂತೆ ಮಾಡುವ ತಾಕತ್ತು ಬಾದಶಾಹರಲ್ಲಿತ್ತು. ಅವರ ತಲ್ವಾರಿನ ಧಾರೆ ವೈರಿಗಳ ಎದೆಯನ್ನು ಸೀಳಿಹಾಕುತ್ತಿತ್ತು. ಕಾಡಿನಲ್ಲಿರುವ ಸಿಂಹ ಕೂಡ ಈ ತಲ್ವಾರನ್ನು ನೋಡಿದರೆ ಭಯದಿಂದ ತನ್ನ ಕಛಾರ್(ಗುಹೆ)ನ ಒಳಗೆ ಹೋಗಿ ಅಡಗಿಕೊಳ್ಳುತ್ತಿತ್ತು. ಅವರ ಉದಾರತೆ ಮುಂಜಾವಿನ ತಂಗಾಳಿ ಜನರ ಮನಸ್ಸು ಪ್ರಫುಲ್ಲಗೊಳ್ಳುವಂತೆ ಇತ್ತು.

ಬೈತ್ (ದ್ವಿಪದಿಯಲ್ಲಿ) ('ಬೈತ್ ಬಾಝೀ' ಎಂಬ ರೀತಿಯ ಆಶು ಪದ್ಯಗಳು ಒಬ್ಬರಿಂದೊಬ್ಬರಿಗೆ ಸವಾಲು ಜವಾಬಿನಂತೆ ಸಾಗುತ್ತ ಹೋಗುವ ರೀತಿಯಲ್ಲಿರುತ್ತವೆ. ಹೆಚ್ಚಿನ ಸಲ ರಾಗವಾಗಿ ಹಾಡಲಾಗುತ್ತವೆ. ಇದಕ್ಕೆ ಕೋರಸ್ ಕೂಡ ಇರುತ್ತದೆ)

ಖಹರೆ ವೂ ಅರ್ಝ್ ಆಬೆ ಹೈವಾಂ ಶೋಲರಾ ಆರದ್ ಬುರೂನ್
ಲುತ್‌ಫೆ ವೂ ದಾರದ್ ಶರರ್‌ರಾ ದರ್‌ದಿಲೇ ದರ್ಬಾನ್ ಗ
ಅವರ ಕೋಪ ಜೀವ ಅಮೃತದಿಂದ ಬೆಂಕಿ ಹೊರ ತರಿಸುವಂತೆ
ಅವರ ಉದಾರತೆಯೆಂದರೆ ಬೆಂಕಿ ಕಿಡಿಯು ನದಿಯಾಗಿ ತಣ್ಣಗೆ ಹರಿವಂತೆ

ಸುಬ್ಹಾನಲ್ಲಾ!(ಅದ್ಭುತ ದೃಶ್ಯ ಕಂಡಾಗ ಮಾಡುವ ಉದ್ಗಾರ) ಎಂದಿಗೂ ನಾಶವಾಗದಂತಹ ಜಲಾಲ್ (ಘನತೆ) ಮತ್ತು ಜಮಾಲ್(ಸೌಂದರ್ಯ) ಅವರಲ್ಲಿದೆ!

ಇಷ್ಟೆಲ್ಲ ಇದ್ದರೂ ಅವರ ಕಣ್ಣ ಮುಂದೆ ಮಾತ್ರ ಅಲ್ಲಾಹನ ವೈಭವವೇ ತುಂಬಿದೆ. ನಿತ್ಯವೂ ಸತ್ಯವಂತರ ಜೊತೆಗೆ ಇರಲು ಬಯಸುತ್ತಿದ್ದರು ಮತ್ತು ಅವರನ್ನು ಮೆಚ್ಚುತ್ತಿದ್ದರು.

ಬೈತ್(ದ್ವಿಪದಿ)

ಬಸ್‌ಕೆ ಬಾಶತ್ ದಿಲಶ್ ಅಝ್ ನೂರೆ ಹಕೀಕತ್ ರೋಶನ್
ಘೋಶ್ ಚ್ಯೂಂ ದೀದಾ ಜೆ ಆವಾಜಶ್ ಗರ್ದದ್ ಬೀನಾ
ಅವರ ಹೃದಯ ಸತ್ಯದ ಬೆಳಕಿನಿಂದ ಬೆಳಗುತಿದೆ
ಅವರ ಧ್ವನಿ ಹೇಗಿದೆಯೆಂದರೆ ಕೇಳಿದ ಕಿವಿಗೆ ಕಣ್ಣಾಗುವ ಅಸೆ ಮೂಡುವಂತಿದೆ.

ಅವರ ದಯೆ, ಉದಾರತೆಯ ಗಾಂಭಿರ್ಯ, ಘನತೆ ಹೇಗಿತ್ತೆಂದರೆ ಸಮಾನವಾಗಿರುವಂತಹ ಉದಾಹರಣೆಯು ಇನ್ನೊಬ್ಬರಲ್ಲಿ ಕಾಣಸಿಗದು. ಹಜ್ರತ್ ಗಾಝಿ ಬಾದಶಾಹ ಉದಾರ ಹೃದಯಿಯಾಗಿದ್ದುದರಿಂದ ಖವಾಸ್ ಖಾನ್‌ನಂತಹ ವ್ಯಕ್ತಿಯನ್ನು ಕೋಟೆಯ ಪ್ರಮುಖ ಹವಾಲ್ದಾರನನ್ನಾಗಿ ನೇಮಿಸಿದ್ದರು. ಸ್ವಲ್ಪವೇ ಸಮಯದಲ್ಲಿ ಎಷ್ಟರ ಮಟ್ಟಿಗೆ ಅವರ ಹತೋಟಿ ಮೀರಿ ಎತ್ತರಕ್ಕೇರಿದನೆಂದರೆ ಬಾದಶಾಹರ ಆಸ್ಥಾನದ ವರಿಷ್ಠ ಅಧಿಕಾರಿಗಳು ಮಂತ್ರಿಗಳು ಕೂಡ ಅವನ ಆಜ್ಞೆಯನ್ನು ಪಾಲಿಸುವಂತಾಗತೊಡಗಿತು. ಯಾವುದೇ ವಾದ ವಿವಾದಗಳು ಹುಟ್ಟಿಕೊಂಡಲ್ಲಿ ಜಾಣತನ ಹಾಗೂ ಮುಂದಾಲೋಚನೆಯಿಂದ ಶಾಂತಿಯುತ ಪರಿಹಾರ ಮಾರ್ಗಗಳನ್ನು ಕಂಡುಹಿಡಿದು ತೀರ್ಮಾನಗಳನ್ನು ಮಾಡುತ್ತಿದ್ದ. ಸರಕಾರದ ಕೆಲಸಗಳನ್ನು ಶಿಸ್ತುಬದ್ಧವಾಗಿ ಮಾಡಿ ಕಡತಗಳನ್ನು ಕ್ರಮಬದ್ಧವಾಗಿ ಇಡಿಸಿದ್ದ. ಸರಕಾರದ ಆಳ್ವಿಕೆಯ ಕಾನೂನು ನಿಯಮಗಳನ್ನು ಕಟ್ಟು ನಿಟ್ಟಾಗಿ ಎಲ್ಲರೂ ಪಾಲಿಸುವಂತೆಮಾಡಿ ಗಟ್ಟಿಯಾಗಿಸಿದ. ಎಲ್ಲಿವರೆಗೆಂದರೆ ಯಾರಾದರೊಬ್ಬ ಯಾವುದಾದರೂ ಕೇರಿ ಬಾಜಾರುಗಳಲ್ಲಿ ಜಗಳದಲ್ಲಿ ನಿರತನಾಗಿ ಸಿಟ್ಟಿನಿಂದ ಕೂಗಾಡಿದರೆ ಸಾಕು, ಮಹಿಳೆಯರ ಮೇಲೆ ಕಣ್ಣುಹೊಡೆದು ಕೀಟಲೆ ಮಾಡುತ್ತಿದ್ದನೆಂಬ ಆರೋಪ ಹೊರಿಸಿ ಬಂಧಿಸಿ ಶಿಕ್ಷೆವಿಧಿಸುತ್ತಿದ್ದ!

ರುಬಾಯಿ(ಚೌಪದಿ)

ಬಯಕ್ ಇಶಾರಯೆ ಬುತಾಂ ಅಲಮೀನ್ ಖರಾಬ್ ಕುನಂದ್
ಝ ಜುಂಬಿಶೆ ಮಿಝ್ಝಾ ಖೂನೆ ಬೇ ಹಿಸಾ ಕುನಂದ್
ಝುಹೂರ್ ಪರ್ದಯೆ ದಿಲ್ ಪಾರ ಮೀ ಕುನಂದ್ ಬುತಾಂ
ಝ ಹರ್ ಇಶಾರಯೆ ಪಿನ್ಹಾ ಕೆ ದರ್ ನಿಖಾಬ್ ಕುನಂದ್
ಪ್ರೇಯಸಿ ತನ್ನ ಸನ್ನೆಯೊಂದರಿಂದ ವಿಶ್ವವ ಹಾಳುಗೆಡಹುವವಳು
ಕಣ್ಣ ರೆಪ್ಪೆಯ ಮಿಟುಕಿನಲಿ ರಕ್ತದೋಕುಳಿ ಹರಿವಂತೆ ಮಾಡುವವಳು
ಓ ಝುಹೂರ್! ಜೋಕೆ! ಹೃದಯದ ಪರದೆಯ ಹರಿದು ಚೂರು ಮಾಡುವವಳು
ಅವಕುಂಠನದೊಳಗಿಂದ ಮಾಡುವ ಸನ್ನೆಯ ಮೂಲಕ ಅವಳು!

ಖವಾಸ್ ಖಾನನ ಆಜ್ಞೆಯಿಲ್ಲದೆ ಯಾರೂ ಉಚ್ಛ್ವಾಸ ನಿಶ್ವಾಸ ಕ್ರಿಯೆಗಳನ್ನೂ ಕೂಡ ಸರಾಗವಾಗಿ ಮಾಡುವಂತಿರಲಿಲ್ಲ. ಅವನ ಒಪ್ಪಿಗೆಯಿಲ್ಲದೆ ಯಾರ ಸ್ನೇಹವನ್ನೂ ಗಳಿಸುವಂತಿರಲಿಲ್ಲ, ಯಾರನ್ನೂ ಗೆಳೆಯನನ್ನಾಗಿ ಮಾಡಿಕೊಳ್ಳುವುದು ಸಾಧ್ಯವಿರಲಿಲ್ಲ. ಇಷ್ಟು ದೊಡ್ಡ ಪದವಿಯಿದ್ದು ಕೂಡ ಅವನ ಮನಸ್ಸಿನಲ್ಲಿ ಹಜ್ರತ್ ಬಾದಶಾಹ ಗಾಝಿಯವರ ಬಗ್ಗೆ ಇದ್ದ ಅವನ ನಿಷ್ಠೆ, ನೀಯತು ಕೆಟ್ಟಿತು. ಅವರ ಮತ್ತು ಅವರ ಪರಿವಾರದವರ ವಿರುದ್ಧ ಪಿತೂರಿಯನ್ನು ರಚಿಸುವುದರಲ್ಲಿ ತೊಡಗಿದ. ಇದರ ಸುಳಿವು ಸಿಕ್ಕ ಹಜ್ರತ್ ಬಾದಶಾಹರು ಕೂಡಲೇ ಎಚ್ಚತ್ತುಕೊಂಡರು. ಇವನಿನ್ನು ಬದುಕಿದ್ದರೆ ತನ್ನ ಸಿಂಹಾಸನಕ್ಕೂ ಕಣ್ಣಿಟ್ಟು ತಮ್ಮ ವಿರುದ್ಧ ಪಿತೂರಿ ನಡೆಸುವ ಅಪಾಯವನ್ನು ಕಂಡುಕೊಂಡರು. ಸರಿಯಾದ ಸಮಯದಲ್ಲಿ ಎಚ್ಚತ್ತ ಬಾದಶಾಹ ಅವನ ರುಂಡವನ್ನು ಮುಂಡದಿಂದ ಬೇರ್ಪಡಿಸಿ ಮಣ್ಣು ಮುಕ್ಕುವಂತೆ ಮಾಡಿದರು. ಅವನ ಇತರ ಸಹಾಯಕರ ತಂಡದ ಸದಸ್ಯರನ್ನು ಕೂಡ ನಾಮಾವಶೇಷ ಮಾಡಿದರು. ಈ ಘಟನೆಯನ್ನು 'ಜುಲೂಸೆ ಅಶ್ರಫ್' ಎಂಬ ಪುಸ್ತಕದಲ್ಲೂ ದಾಖಲಿಸಲಾಗಿದೆ. ಅಲ್ಲಾಹನ ಕೃಪೆ ನಮ್ಮ ಬಾದಶಾಹರ ಮೇಲಿದೆ. ಅವರ ಘನತೆ ಮತ್ತು ಶಕ್ತಿಶಾಲಿ ಆಳ್ವಿಕೆಯ ಬಲದಿಂದ ಅವರ ರಾಜ್ಯದ ಸರದಾರರು ತಮ್ಮ ಹಣೆಯನ್ನು ಅವರ ಮುಂದೆ ನೆಲಕ್ಕೆ ಬಾಗಿಸಿ ಒಪ್ಪಿಸುವರು. ಅವರ 'ಅಲಂಗೀರ್' ತಲವಾರಿನ ಹರಿತವು ಪ್ರದರ್ಶನಗೊಂಡರೆ ಸಾಕು ಇತರ ರಾಜ್ಯಗಳು ಕೂಡ ಅವರ ಮುಷ್ಠಿಯೊಳಗೆ ಸೇರಿಕೊಳ್ಳುವುದು.

ಅವರ ಪ್ರಭುತ್ವದ ಆಜ್ಞೆಯ ಪಾಲನೆಯನ್ನು ಮಾಡದಿರುವವರಿಗೆ ಮರಣದಂಡನೆಯೇ ಶಿಕ್ಷೆಯಾಗುತ್ತಿತ್ತು.

ಶೇರ್

(ಸೂಚನೆ: ಇಲ್ಲಿ ಎರಡು ಶೇರ್‌ಗಳು ಸರಿಯಾಗಿ ಓದುವಂತಿಲ್ಲ/ ಅರ್ಥವಾಗುವ ರೀತಿಯಲ್ಲಿರದೆ ತುಂಡಾಗಿವೆ. ಓದಲು/ ಅರ್ಥೈಸಲು ಸಾಧ್ಯವಾಗುವಂತಹದ್ದನ್ನು ಮಾತ್ರ ಅನುವಾದಿಸಲಾಗಿದೆ)

ಅಜಲ್ ಝುಮಾರ್‌ಕ ಬರೂ ರವತ್ ದರ್‌ಆಂ ಸಾಅತ್
ಝು ಮೌಝು ಖೂನ್ ಬಸರ್ ಅಫ್‌ಗಂದ್ ಚ್ಯೂಂ ಝುನಾನ್ ಚಾದರ್
ಥಟ್ಟನೆ ಅವರ ಏಟಿನಿಂದ ಎರಗುವುದು ಸಾವು
ಮಹಿಳೆಯ ತಲೆಯ ದುಪಟ್ಟಿ ಕೆಳಗೆ ಬಿದ್ದಂತೆ ರಕ್ತದ ಕೋಡಿಯ ಹರಿವು.

ಬಾದಶಾಹರ ವಶಕ್ಕೆ ಬೀಳದ ಶಕ್ತಿ ಶಾಲಿಯಾದ ಯಾವುದೇ ಕೋಟೆಗಳು ವಿಶ್ವದಲ್ಲಿ ಎಲ್ಲೂ ಕಾಣಸಿಗಲಾರವು. ಅಲ್ಲಿ ವಾಸಿಸುತ್ತಿರುವ ಪ್ರಜೆಗಳ ಕಿವಿಗಳಿಗೆ ಅವರ ಸೈನಿಕರ ಮತ್ತು ಕುದುರೆಗಳ ಕಾಲಸಪ್ಪಳದ ಸದ್ದು ಕೇಳದಿರುವುದು ಅಸಾಧ್ಯ. ಅದು

ಶೋಲಾಪುರದ ಶಕ್ತಿಶಾಲಿ ಕೋಟೆಯೇ ಬೇಕಾದರೆ ಆಗಿರಲಿ! ಈ ಕೋಟೆಯ ಬುರುಜು ಸಿಕಂದರನ (ಅಲೆಕ್ಸಾಂಡರನ) ಕಪಾಲಕ್ಕೆ ನೀಡುವ ಏಟಿನಂತಿತ್ತು!

ಈ ಕೋಟೆಯನ್ನು ಕೂಡ ಬಾದಶಹರು ವಶಪಡಿಸಿಕೊಳ್ಳುವ ಗುರಿಯನ್ನು ಹೊಂದಿದ್ದರು. ಕೋಟೆಯ ರಾಜ ಸಯ್ಯದ್ ರೈಹಾನ್ ಶೋಲಾಪುರಿಯು ತನ್ನ ರಕ್ಷಣೆಗಾಗಿ ಸಾಕಷ್ಟು ಸೈನ್ಯವನ್ನು ಜಮಾಯಿಸಿಕೊಂಡಿದ್ದರೂ ಬಾದಶಾಹರು ತನ್ನ ಮೇಲೆ ದಾಳಿ ನಡೆಸಲಿದ್ದಾರೆಂಬ ಸುಳಿವು ಸಿಕ್ಕಾಗ ತನ್ನ ಕೋಟೆಯ ಮುಖ್ಯ ದ್ವಾರದ ಕೀಲಿಕೈಯನ್ನು ನೇರವಾಗಿ ದರ್ಬಾರಿಗೆ ಬಂದು ಅವರಿಗೆ ಒಪ್ಪಿಸಿ ತನ್ನ ತಲೆಯನ್ನು ಉಳಿಸಿಕೊಂಡ. ಮಾತ್ರವಲ್ಲದೆ ಸಯ್ಯದ್ ರೈಹಾನ ಶೋಲಾಪುರಿ ತನ್ನ ರಾಜಪಟ್ಟವನ್ನು ತೊರೆದು ಶರಣಾಗತನಾಗಿ ಬಾದಶಾಹರ ಆಸ್ಥಾನದ ಮಂತ್ರಿಮಂಡಳದಲ್ಲಿ ಸೇರಿಕೊಂಡ.

ಶೇರ್ (ಚೌಪದಿ)

ಖಿದ್‌ಯೂ ಗಾಝಿ ಸುಲ್ತಾನೆ ದೀನ್ ಮುಹಮ್ಮದ್ ಶಾ
ಕೆ ಹಶ್ತ್ ದರ್‌ಗಯೇ ವೂ ಖಿಬ್ಲಯೇ ಝುಮಾನೊ ಝುಮೀನ್
ಝು ಅಬ್ರೆ ಜ್ಯೂದಶ್ ಅಗರ್ ಬಾರ್‌ವರ್ ಶವಂದ್ ಅಶ್‌ಜಾರ್
ಚ್ಯೂಂ ಆಫ್ತಾಬ್ ಉಫ್ತದ್ ಸಾಯಾ ಬರ್ ಜಮೀನೆ ಝುರ್‍ರೀನ್
ಓ ವೀರ 'ಸುಲ್ತಾನೆ ದೀನ್' ಮುಹಮ್ಮದ್ ಬಾದಶಾಹ
ನಿಮ್ಮ ವ್ಯಕ್ತಿತ್ವದ ದರ್ಬಾರು ಸಮಸ್ತವಿಶ್ವದ ಪ್ರಾರ್ಥನಾ ಕೇಂದ್ರ
ನಿಮ್ಮ ದಾನದ ಮುಗಿಲಿನ ಮಳೆಯಿಂದ ಸರ್ವ ಪ್ರಕೃತಿ ನಳನಳಿಸುತಿದೆ
ಸೂರ್ಯನ ನೆರಳು ಸಮೃದ್ಧ ಭೂಮಿಯ ಮೇಲೆ ಬಿದ್ದಂತೆ.

ಶೂರ ಬಾದಶಾಹರ ಆಸ್ಥಾನದಲ್ಲಿದ್ದ ಕೆಲವು ಮಂತ್ರಿಗಳು ಹಿಂದಿನ ಬಾದಶಾಹರ ಕಾಲದಲ್ಲಿಯೂ ಕೆಲಸಮಾಡಿದ ಅನುಭವವಿದ್ದವರಿದ್ದರು. ತಾವು ಹಳೆಯ ತಲೆಮಾರಿನ ಅನುಭವಸ್ಥರು ಎಂದು ಇವರಿಗೆ ತಲೆಯಲ್ಲಿ ಬಹಳ ಅಹಂಕಾರವಿತ್ತು. ಈ ಅಹಂಕಾರಿಗಳ ವರ್ತನೆಯ ಸುಳಿವು ಬಾದಶಾಹರ ಅನುಭವಕ್ಕೂ ಬಂದಿತ್ತು. ಈ ಮಂತ್ರಿಗಳು ಅಗಾಗ ತಮ್ಮ ಚಡಪಡಿಕೆಯನ್ನು ವ್ಯಕ್ತಪಡಿಸುತ್ತ ತಮಗೆ ಈ ಪರಿಸರದಲ್ಲಿ ಇರಲು ಆಗುತ್ತಿಲ್ಲವೆಂದು ಹೇಳುತ್ತ ತಮ್ಮನ್ನು ಬಾದಶಾಹರು ಅಸ್ಥಾನದಲ್ಲಿರಲು ಒತ್ತಾಯಿಸಲೆಂದು ಆಶಿಸುತ್ತಿದ್ದರು. ಈ ಜನರ ಅಪವಿತ್ರ ಆಕಾಂಕ್ಷೆಗಳು ಎಂತಹ ಸಂದರ್ಭದಲ್ಲಿ ಹುಟ್ಟಿಕೊಂಡಿತ್ತೆಂದರೆ ಬಾದಶಾಹರ ಘನತೆಗೆ ಇಡೀ ವಿಶ್ವವೇ ಗೌರವವನ್ನು ನೀಡುತ್ತಿರುವಾಗ ಮತ್ತು ಅವರ ಶಾಹಿ ತಲ್ವಾರಿನ ಬಗ್ಗೆ ಹಲವಾರು ವಿಶ್ವ ವಿಖ್ಯಾತ ಶೌರ್ಯಪೂರ್ಣ ಕತೆಗಳು ಹುಟ್ಟಿಕೊಂಡಿರುವ ಸಂದರ್ಭದಲ್ಲಿ! ಇವೆಲ್ಲ ವಿಚಾರಗಳನ್ನು ತಿಳಿದಿದ್ದರೂ ಬಾದಶಾಹ ಬಹಳ ಶಾಂತಿಯಿಂದ ಮತ್ತು ಸಮಾಧಾನದೊಂದಿಗೆ ಮರ್ಯಾದೆಯಿಂದ ಅವರೊಂದಿಗೆ ವ್ಯವಹರಿಸುತ್ತಿದ್ದರು. ಈ ಸಂದರ್ಭದಲ್ಲಿ

ಬಾದಶಾಹರ ಒಂದು ಸಂಜ್ಞೆಗೆ ಆಸ್ಥಾನದಲ್ಲಿ ಬಂದು ಜನರು ಸಾಷ್ಟಾಂಗ ಮಾಡಲು ತಯಾರಾಗಿ ಸಾಲುಗಟ್ಟಿ ನಿಂತಿರುತ್ತಿದ್ದರು. ಬಾದಶಾಹರು ಆ ಕಾಲದ ಇತರ ಅರಸರೊಂದಿಗೆ ತುಲನೆ ಮಾಡಿ ನೋಡಿದರೆ, ಇವರು ಅತ್ಯಂತ ಚಾಣಾಕ್ಷರೂ, ಸಾಮರ್ಥ್ಯವಂತರೂ ಪ್ರಭಾವಿಯೆನಿಸಿದವರೂ ಆಗಿದ್ದರು.

ಶೇರ್

ಶಾದ್ ಕಾಮ್ ಆಕೆ ಪೈ ಬಜಾಹಶ್ ಬುರದ್
ಶುದ್ ನಿಕೋನಾಮ್ ಆಕೆ ನಾಮಶ್ ಬುರದ್
ಪುಣ್ಯವಂತರವರು ದರ್ಬಾರಿನಲಿ ತಾವು ಸಣ್ಣವರೆಂದು ತಿಳಿದುಕೊಂಡವರು
ಬಾದಶಹರ ಹೆಸರು ಹೇಳಿಕೊಂಡು ನಿಯತ್ತಿನಲ್ಲಿದ್ದವರು ಹೆಸರಾಂತರಾದರು.

ಈ ಮುಹಮ್ಮದೀಯ ಪೀಳಿಗೆಯ ಬಾದಶಾಹರ ಇನ್ನೊಂದು ವಿಶೇಷತೆಯೆಂದರೆ, ಬೇಡಿಕೊಳ್ಳುವವರ ಬೊಗಸೆಯನ್ನು ಚಿನ್ನ, ಮುತ್ತುಗಳನ್ನು ಕುತ್ತಿಗೆಯ ಎತ್ತರಕ್ಕೆ ತುಂಬಿ ನಿಲ್ಲುವಷ್ಟು ನೀಡುತ್ತಿದ್ದರು. ಪ್ರತಿಯೊಂದು ಬೇಡಿಕೆಯನ್ನೂ ಬಂಗಾರ ಬೆಳ್ಳಿಯನ್ನು ನೀಡುವ ಮೂಲಕ ಪೂರೈಸುತ್ತಿದ್ದರು. ಅತಿಥಿಗಳು ಮತ್ತು ಬೇಡಿಕೆಯನ್ನು ಮುಂದಿಡುತ್ತಿರುವ ಆಗಂತುಕರಿಗೆ ಅವರು ಮಾತಾಡುವ ಭಾಷೆಯಲ್ಲೇ ಉತ್ತರಿಸುತ್ತಿದ್ದರು (ಅಂದರೆ ಬಾದಶಾಹ ಅನೇಕ ಭಾಷೆಗಳನ್ನು ಬಲ್ಲವರಾಗಿದ್ದರು). ಮುತ್ತು ಹೆಕ್ಕುವವರು ಸಮುದ್ರದೊಳಗೆ ಹೊಕ್ಕು ಒಂದೊಂದೇ ಮುತ್ತುಗಳನ್ನು ಆರಿಸಿ ತರುವಂತೆ ಬಾದಶಾಹರ ದಾನದ ಕೈ ಕೂಡ ಪ್ರತೀಸಲವೂ ಬೇಡಿದವರಿಗೆ ನೀಡುವಾಗ ಬೊಗಸೆ ತುಂಬಿರುತ್ತಿತ್ತು. ಬಾದಶಾಹರ ನೆನಪಿನ ಶಕ್ತಿಯ ಬಗ್ಗೆ ಉಲ್ಲೇಖಿಸುವುದಾದರೆ, ಅಮ್ಮಾನ್‌ನ ಸಮುದ್ರದ ಭೋರ್ಗರೆತದ ಅಲೆಯಲ್ಲಿ ನೊರೆಯ ಗುಳ್ಳೆಗಳನ್ನು ಹೆಕ್ಕಿದಷ್ಟೂ ಇರುವಂತೆ ಅವರ ನೆನಪು ಶಕ್ತಿಯನ್ನು ಬಗೆದಷ್ಟು ಇನ್ನಷ್ಟು ಮತ್ತಷ್ಟು ಶಕ್ತಿಯುತವಾಗಿ ಹೊರಬರುವಂತಿತ್ತು.

ಶೇರ್

ಬೆ ಬಹರ್ ಕಾಫಿಲಯೆ ಮೌಜ್ ದರ್ ಝಮಾನಯೆ ವೂ
ಉನದ್ ಹಮೇಶ ಬಸರ್ ಮಂಝಿಲೇ ಹುಬಾಬೊ ದರ್ ದೂ
ಬಾದಶಹರ ಕಾಲದ ಸಮುದ್ರದಲೆಯ ಸಾಲಿನಲಿರುವ
ಸಾಗುವ ಪಯಣಿಗ ಕೂಡ ಅಲೆಯಲಿ ತನ್ನ ನೆಲೆಮಾಡಿಕೊಳುವ.

ಬಾದಶಾಹರ ನ್ಯಾಯ ತೀರ್ಮಾನ ಯಾವರೀತಿ ಇತ್ತೆಂದರೆ ಅತ್ಯಂತ ಕ್ರೋಧದ ಸಿಂಹದ ಪಂಜದ ನೆರಳಲ್ಲಿ ಕೂಡ ಜಿಂಕೆಗಳು ಬದುಕುವ ವಾತಾವರಣವಿರುವಂತಿತ್ತು. ಯಾವುದಾದರೂ ವಿಷಯದಲ್ಲಿ ಅಭಿಪ್ರಾಯ ನೀಡಬೇಕೆಂದಾಗ, ಅವರ ಅಭಿಪ್ರಾಯದ ಪಂಜಿನ ಬೆಳಕಿನಲ್ಲಿ ಹಬ್ಸಿ ಗುಲಾಮರ ಕರಿ ದೇಹದಲ್ಲೂ ಪ್ರಭಾವಳಿ ಮೂಡುವಂತಿತ್ತು.

ಅವರ ಬಿಲ್ಲಿನ ಚಲ್ಲಾ(ಹಗ್ಗ) ಪ್ರೇಯಸಿಯರ ನೀಳ ಕೂದಲಿನಂತೆ ತಿಂಗಳ ಪ್ರಥಮ ಚಂದ್ರನ ಆಕಾರದಂತಿತ್ತು. ಅವರ ಬಾಣದ ಪೀಕಾನ್(ಚೂಪಾದ ಮೊನೆ) ಸತ್ಯವನ್ನು ಶೋಧಿಸುವವರಿಗೆ ಮತ್ತು ಸರಿಯಾದ ಹಾದಿಯಲ್ಲಿ ನಡೆವವರಿಗೆ ಸಂರಕ್ಷಣೆ ನೀಡುತ್ತಿತ್ತು. ತಲೆಯ ಚೆಂಡಾಡುವ ಅವರ ತಲ್ವಾರಿನ ತಾಕತ್ತು ಹೇಗಿತ್ತೆಂದರೆ ಬಾದಶಾಹರ ಆಜ್ಞೆಯಂತೆ ತಕದೀರಿನ ತೀರ್ಮಾನ ಮಾಡುತ್ತಿತ್ತು.

ಬಾದಶಾಹರ ಮನಸ್ಸಿನಲ್ಲಿ ಯಾವುದಾದರೂ ಇರಾದೆ ಮೂಡಿತೆಂದರೆ ಅದರಿಂದ ಜಗತ್ತಿಗೆ ಬೆಳಕು ನೀಡುವಂತಿತ್ತು. ಯಕ್‌ಜಹತಿ (ಐಕ್ಯತೆ), ಧಾರ್ಮಿಕ ಸೌಹಾರ್ದದ ಅವರ ಧೋರಣೆಯಲ್ಲಿ ನಾಲ್ಕು ದಿಕ್ಕುಗಳು, ಆರು ಹಾದಿಗಳು ಒಂದೆಡೆ ಕೂಡಿ ಒಂದಾಗುತ್ತಿದ್ದವು. ಬಾದಶಾಹೆ ದೀನ್‌ಪನಾಹ್(ಧರ್ಮದ ಆಶ್ರಯದಾತ) ತನ್ನ ಪ್ರಜೆಗಳ ಪರವಾದ ಕಾರ್ಯ ಸಾಧನೆಗಳಿಗೆ ಅತ್ಯಂತ ಮಹತ್ವ ನೀಡುತ್ತಿದ್ದರು.

ಬಾದಶಾಹರು ಬಕ್ಷೀಸು ನೀಡುವಾಗ ಬೇಧಕ್ಕೆ ಅವಕಾಶವಾಗದಂತೆ ಎಲ್ಲರಿಗೂ ಸಮಾನವಾಗಿ ಹಂಚುತ್ತಿದ್ದರು. ತಮ್ಮ ಆಪ್ತರ ಮೇಲೆ ತುಂಬ ಭರವಸೆ ಇಟ್ಟುಕೊಂಡಿದ್ದರು. ಬಾದಶಹರ ಸೈನ್ಯದ ವೆಚ್ಚಕ್ಕಾಗಿ ಅವರ ಖಜಾನೆಯು ಸದಾ ತೆರೆದಿರುತ್ತಿತ್ತು. ಅವರ ದಾನಕ್ಕೆ ಕೊಡುಗೈ ಹಸ್ತ ಹೇಗಿತ್ತೆಂದರೆ ಬೊಗಸೆ ಹಿಡಿದು ನೀಡುವಾಗ ಸುರಿಯುವ ಮಳೆಯಂತೆ ಇತ್ತು. ಖಜಾನೆಯ ಒಂದು ಪಾಲು ತನ್ನ ಶೌರ್ಯವಂತ ಸೈನಿಕರಿಗಾಗಿ ಬೇರೆಯಾಗಿಯೇ ತೆಗೆದಿಡುತ್ತಿದ್ದರು. ತನ್ನ ವೈಯಕ್ತಿಕ ಆದಾಯದಿಂದ ಕೂಡ ಅಗತ್ಯವಿರುವವರಿಗೆ ಧಾರಳವಾಗಿ ದಾನವನ್ನು ನೀಡುತ್ತಿದ್ದರು. ಸರ್ಕಾರಿ ಖಜಾನೆಯ ಆದಾಯ ಮತ್ತು ಖರ್ಚುಗಳ ಲೆಕ್ಕಾಚಾರಗಳನ್ನು ತನ್ನ ಸ್ವತಹ ವಿಚಾರಣೆಯ ಮೂಲಕ ಪರಿಶೀಲಿಸುತ್ತಿದ್ದರು. ಇಂತಹ ಮೇಲ್ವಿಚಾರಣೆಯ ಕ್ರಮಗಳ ವಿವರಗಳ ಬಗ್ಗೆ ಮುಂದೆಯೂ ಇಲ್ಲಿ ಉಲ್ಲೇಖಿಸಲಾಗುತ್ತದೆ.

ನಜ್ಮ್(ದ್ವಿಪದಿ)

ಝುಹೇ ಶಹನ್‌ಶಾಹೇ ಗಾಝಿ ಕೆ ಅಫ್ಲಾಕ್
ಬುವತ್ ಅಝ್ರಾಯೆ ವೂ ಎಕ್‌ಮುಶ್ತ್ ಖಾಶಾಕ್
ಎಂತಹ ಉಜ್ವಲ ಭವಿಷ್ಯ ನಿಮದು ಓ ಶೂರ ಬಾದಶಾಹ
ಅವರು ಸಾಗುವಾಗ ಹಾದಿಯಲಿ ಎದ್ದ ಧೂಳು ಆಗಸವ ಮುಸುಕಿಹುದು.

ಚ್ಯೂಂ ಗರ್‌ದದ್ ಅಬ್‌ರೇ ಜೂದೆ ವೂ ಗೊಹರ್ ರೇಝ್
ಶವದ್ ಅಝ್ ಆಬೆ ಗೌಹರ್ ಬೆಹರೇ ಲಬರೇಸ್
ಅವರ ಸಹಾಯ ಹಸ್ತದ ಮುಗಿಲು ಮುತ್ತುಗಳ ಮಳೆಗರೆಯುತಿದೆ
ಮುತ್ತಿನ ಮಳೆಯಿಂದ ಸಮುದ್ರದ ಒಡಲು ತುಂಬಿತುಳುಕುವಂತಾಗಿದೆ.

ಜಹಾಂ ಬಕ್ಷೀಶೆ ಮಹರ್ ಅಝ್ ಹುಸ್ನೆ ರಾಯಿಶ್
ಸರೇ ಖುದ್ ಕರ್‌ದಾ ವಕ್ಫ್ ಖಾಕೆ ಪಾಯಿಶ್
ಅವರ ನ್ಯಾಯಪಾಲನೆಯ ಸೌಭಾಗ್ಯದಿಂದ ಜಗದಲಿದೆ ಶಾಂತಿ
ಈ ಔದಾರ್ಯಕ್ಕಾಗಿ ಬಾದಶಾಹನ ಕಾಲಡಿಯ ಮಣ್ಣಲಿ ತಲೆಯಿರಿಸಿದಂತೆ

ಶಿಫಾತೆ ವೂ ನಮೀ ಗುಂಜತ್ ದರ್ ಔಹಾನ್
ಕೆ ಖಾಯಿಂ ಗಶ್ತ್ ಅಝ್ ಬುನಿಯಾದೆ ಇಸ್ಲಾಂ
ಬಾದಶಾಹನ ವ್ಯಕ್ತಿತ್ವದ ಘನತೆ ನಮ್ಮ ಊಹೆಗೂ ಮೀರಿದ್ದಾಗಿದೆ
ಅವರ ಧರ್ಮಶ್ರದ್ಧೆಯಿಂದ ಇಸ್ಲಾಮಿನ ತಳಹದಿ ಗಟ್ಟಿಯಾಗಿದೆ.

ಚ್ಯುಂ ಖುರ್ಷೀದ್ ಶರ್ಫೆ ಝೀನಾಮಾ ದರ್‌ತಾಫ್ತ್
ಮುಹಮ್ಮದ್ ನಾಮಾ ನಾಮ್ ಅರ್ಶಾಹೆ ದೀನ್ ಯಾಫ್ತ್
ಈ ಸಂದೇಶಗಳ ಕೃತಿಯ ಖ್ಯಾತಿ ಸೂರ್ಯನಂತೆ ಬೆಳಗಿದಾಗ
'ಮುಹಮ್ಮದ್ ನಾಮಾ' ಎಂಬ ಹೆಸರಿಟ್ಟು ಕರೆಯಲಾಯಿತಾಗ.

ಝೆ ಮದ್‌ಹೆ ಶಾಹೆ ಗಾಝಿ ಕಾಮ್‌ರಾನಂ
ಕೆ ದರ್ ಮುಲ್‌ಕೆ ಸುಕನ್ ಸಾಹಬೆ ಖಿರಾನಂ
ಶೂರ ಬಾದಶಾಹನ ಹೊಗಳುಗೀತೆ ರಚಿಸಿದರಿಂದ ಸಾಕಷ್ಟು ಸಿದ್ಧಿಸಿದೆ
ಕಾವ್ಯಲೋಕದಲಿ ನಾನು ಖ್ಯಾತಿ ಘನತೆಯ ಸ್ಥಾನ ಸಾಧಿಸಿದೆ.

ಬುವದ್ ತಾ ಖಾಯಿಂ ಅಝೋ ದೀನೆ ಮುಹಮ್ಮದ್
ಬಿನಾಯೆ ದೌಲತೋ ಇಖ್‌ಬಾಲೆ ಶರ್‌ಮದ್
ನಿಮ್ಮ ಶಾಶ್ವತ ದಾನಧರ್ಮದ ತಳಹದಿ ಎಂದರೆ ಹೀಗಿದೆ
ಇಸ್ಲಾಮ್ ಧರ್ಮ ಇದರ ಕಾರಣದಿ ಬಲಶಾಲಿಯೆನಿಸಿದೆ.

ನೂರೆ ನಬಿ ಅಝ್ರೂ ಎ ಶಹಬಾದ್
ಫಲಕ್ ರಾ ಖಾಕೆ ರಾಯಿಶ್ ಸಜ್ದ ಗಹ್‌ಬಾದ್
ಬಾದಶಾಹರ ಮುಖದಿ ಪ್ರವಾದಿತ್ವದ ಪ್ರಭೆ ಮಿಂಚುತಲಿದೆ
ಅವರ ಕಾಲಡಿಯ ಭೂಮಿ, ಗಗನ ನಮಿಪ ಜಾಗವೆನಿಸಿದೆ.

ಬಾದಶಾಹರ ಆಜ್ಞೆಯಂತೆ ಕವಿ ನವಾಬ್ ಖಾನ್ ಬಾಬಾರವರು ಬರೆದ ನಜ್ಮ್(ಪದ್ಯ)ನ್ನು ಇಲ್ಲಿ ನೀಡಲಾಗಿದೆ:

ಬಮುಝ್ದಯೇ ಹಾತಿಫೆ ಗೈಬಂ ಸಹರೆ ನಿದಾಂ ದರ್ದಾನ್
ಕೆ ಅಯ್ ಕಲಾಮೆ ತು ಖಿರಾನೆ ಇಶ್ಕ್ ರಾ ತಫ್ಸೀರ್
ದೇವದೂತನೊಬ್ಬ ಮುಂಜಾವಿನಲಿ ನೀಡಿದ ಅಶರೀರ ಶುಭ ವಾರ್ತೆಯೊಂದ

ನಿನ್ನ ಕಾವ್ಯದಲಿ ಕುರಾನಿನ ನೈಜ ಪ್ರೇಮದ ಭಾವವಿದೆಯೆಂದ.

ಬ ಇಮ್‌ತಿಹಾನೆ ಕಲಂ ಖತ್ ಬ ಖುಶ್ ಬದಫ್ತರೆ ಚರ್ಖ್
ವರಖ್ ಬಕಫ್ ನೆ ವ ಬುನಿಯಾದೆ ಆಲಂ ಅಸ್‌ಸರ್‌ಫೀರ್
ನೀನು ಲೇಖನಿಯ ಪರೀಕ್ಷೆಯಲಿ ಗಗನದ ಪುಸ್ತಕದಿ ಬರೆಯ ತೊಡಗು
ಪುಟ ನಿನ್ನ ಕೈಯಲಿರದೆಯೂ ಭುವಿಯ ಆಳವ ನೀ ಅರಿಯುವಂತಾಗು.

ಅಝೀ ನಿದಾಯೆ ಪಯೆ ಇಜಾದ್ ಸೂರತೋ ಮಾನಾ
ದಿಲಂ ಚ್ಯೂಂ ಸಫ್‌ಹಯೆ ತಸ್ವೀರ್ ಗಶ್ತ್ ನಖ್ಶ್ ಫಿಝೀರ್
ಈ ವಾಣಿಯ ಹಿನ್ನೆಲೆಯಲಿ ಬರೆವ ಸ್ಫೂರ್ತಿ ಬರತೊಡಗಿತು
ಚಿತ್ರದ ಪುಟತೆರೆದಂತೆ ನನ್ನ ಮನವು ಅರ್ಥೈಸ ತೊಡಗಿತು.

ಬನೀಮ್ ನುಖ್ತಯೆ ದರ್‌ಆಂ ಲಹ್‌ಝೂ ಸದ್ ಹಝಾರ್ ಜಹಾಂ
ಅಯಾಂ ಶುದ್ ಆಶ್ಶಿಫತೆ ಝಾತೆ ಫಾತೆ ಹಯ್ಯೆ ಕದೀರ್
ಅರ್ಧ ಶಬ್ದ ಬರೆಯತೊಡಗಿದಂತೆ ಸಾವಿರ ವಿಶ್ವಗಳ ದರ್ಶನವಾದವು ಎನಗೆ
ಅಲ್ಲಾಹನ ಪವಿತ್ರ ಕೃಪೆಯಿಂದ ಸುಲಭ ಸಾಧ್ಯವಾದವು ಇವೆಲ್ಲ ನನಗೆ.

ಈಗ ನನ್ನ ಚಿಂತನೆಗಳ ಬಾಗಿಲುಗಳು ಒಂದೊಂದೇ ತೆರೆಯತೊಡಗಿದವು, ಬಾದಶಾಹರ ಚರಿತ್ರೆಯ ಹಿನ್ನೆಲೆಯ ವಿಶಾಲ ಪರಿಸರದ ಹರಹು ನನಗೆ ಅನುಭವವಾಗತೊಡಗಿತು. ನಾನು ಜಹೂರ್, ಆಶ್ಚರ್ಯಚಕಿತನಾಗುವ ಜೊತೆಗೆ, ಈ ರಾಜವೈಭವವ ದಾಖಲಿಸುವ ಕೆಲಸದಲ್ಲಿ ತೊಡಗುವ ತೀರ್ಮಾನ ಕೈಗೊಂಡು ಲೇಖನಿಯನ್ನು ಕೈಗೆತ್ತಿಕೊಂಡೆ.

ಮನುಷ್ಯ ತನ್ನನ್ನು ತಾನು ತಿಳಿದುಕೊಂಡವನು ನಿಜವಾದ ಮನುಷ್ಯನೆನಿಸುತ್ತಾನೆ. (ವಮನ್ ಅರಫ ನಫ್ಸಹೂ ಫಖದ್ ಅರಫ ರಬ್ಬಹೂ- ಹದೀಸೆ ಖುದ್ಸಿ) ತನ್ನನ್ನು ತಾನು ತಿಳಿದುಕೊಂಡಾತನು ಅಲ್ಲಾಹನನ್ನು ತಿಳಿದುಕೊಳ್ಳುತ್ತಾನೆ.

ಬೈತ್

ಗುಂಚ ಮಿಖಾಸ್ತ ಬೀನತ್ ರುಖೆ ಗುಲ್ ಚ್ಯೂಂ ಬಶಗುಫ್ತ್
ಸೂಯೆ ಖುದ್ದೀದ್ ವ ಬಖುಂದೇದ್ ಕೆ ಗುಲ್ ಮನ್ ಬೂದಂ
ಹೂವಾಗಿ ಅರಳಿದಾಗಿನ ತನ್ನ ಸೌಂದರ್ಯವ ನೋಡುವಾಸೆ ಮೊಗ್ಗಿಗೆ
ಅರಳಿದ ತನ್ನ ನೋಡಿ ನಕ್ಕು, ಹೂವೆಂದರೆ ನಾನೇ ತಾನೇ ಎಂದುಕೊಂಡಿತು.

ಬೆಳಕಿನ ಕಡೆ ದೃಷ್ಟಿ ಹರಿಸಿರುವವರು(ಅಂದರೆ ಸೂಫಿ ಅನುಭಾವಿಗಳು) ಕಣ್ಣುಗಳ ತಗ್ಗಿಸಿ ಮುಚ್ಚಿಕೊಂಡು ತಮ್ಮ ಪ್ರೇಮಿಯನ್ನು ಭೇಟಿಯಾಗುತ್ತಾರೆ. ಖೂನೆ ಜಿಗರಾನ್(ರಕ್ತವ

ಕುಂದಿಸಿದ ದೇಹದವರು, ಅಂದರೆ ಸೂಫಿ ಸಂತರು) ಜನಗಳ ಬಗ್ಗೆ ಮಾತಾಡುವುದು ಎಂದರೆ ಕೇಳುವವರ ಮುಖದ ಮೇಲೆ ಸಂತಸದ ತಾಜಾ ಮುತ್ತುಗಳನ್ನು ಹರಡುವಂತೆ! 'ಕಾರ್‌ಗಾಹೇ ಬಸಾರತ್'ನಲ್ಲಿ(ಕಣ್ಣಿಗೆ ಕಾಣುವ ದೃಶ್ಯ ಅಂದರೆ ಲೋಕದಲ್ಲಿ) ಕಾಣುವ ನೋಟಗಳಿಗೆ ಬಣ್ಣಗಳನ್ನು ತುಂಬುವುದಷ್ಟೇ ಚಿತ್ರಮಾಡುವ ಕಲಾಕಾರನಿಗೆ ಇರುವ ಕೆಲಸ. ಅಂತೆಯೇ, ನನಗೆ ಕಾಣುವ ನನ್ನ ಪ್ರೇಮಿಯ ಚಹರೆಯ ನಕ್ಷೆ ನನ್ನ ಕಣ್ಣ ಮುಂದಿದೆ, ನಾನು ಸಹಾ ಅದಕ್ಕೆ ಬಣ್ಣತುಂಬುವ ಕೆಲಸಮಾಡುತ್ತೇನೆ. ನಾನು ಈ ಲೇಖನಿಯಿಂದ ಆ ವೈಭವವನ್ನು ಅದರ ಎಲ್ಲ ಸೂಕ್ಷ್ಮಗಳೊಂದಿಗೆ ಪ್ರಕಟಿಸುತ್ತೇನೆಂದು ಸಾಮಾನ್ಯರಿಗೇನು ಗೊತ್ತು? ಸಾಧಕನೊಬ್ಬ ವಿಶೇಷವಾದದ್ದೇನಾದರೂ ಸಾಧಿಸಬೇಕೆಂದಿದ್ದರೆ ತನ್ನ ಸ್ವಭಾವಕ್ಕೆ ಅಂಟಿದಂತಿರದೆ ಹೊರಬಂದು ಅನೇಕ ಸಾಧ್ಯತೆಗಳನ್ನು ಹುಡುಕುವ ಪ್ರಯತ್ನಗಳನ್ನು ಮಾಡಬೇಕಾಗುತ್ತದೆ. ಕಣ್ಣುಗಳು ತನ್ನ ಮುಂದಿರುವ ಸೌಂದರ್ಯವನ್ನು(ಪ್ರೇಯಸಿಯನ್ನು) ಗುರುತಿಸದೆ ಇದ್ದರೆ, ಕಸದಬುಟ್ಟಿಯಲ್ಲಿದ್ದ ಕೊಳೆ ಬಟ್ಟೆಯ ತುಂಡು ಕಣ್ಣುಗಳ ಮೇಲೆ ಬಿದ್ದಂತೆ ಆಗಿರುತ್ತದೆ. ಅಂತರ್ಯದಲ್ಲಿ ಜ್ಞಾನಿಗಳಿಗೆ ಮಾತ್ರ ತನ್ನ ಪ್ರೇಮಿಯ ಘನತೆ ವೈಭವಗಳ ದರ್ಶನವಾಗುವುದು ಸಾಧ್ಯವಾಗುತ್ತದೆ.

ಬೈತ್

ಮನ್‌ಕುಜಾ ವಸ್ಲ್‌ಕುಜಾ ಯಾರ್ ದರ್ ಆವೋಶ್ ಆಮದ್
ಅಝ್ ಯಕೀನ್ ಆಚೆ ನಯಾಯದ್ ಬಗುಮಾನಂ ದಾದಂದ್

ನಾನೆಲ್ಲಿ, ನಿನ್ನ ಮಿಲನವೆಲ್ಲಿ? ನನ್ನ ಪ್ರಿಯತಮೆಯ ದೇಹ ನನ್ನ ತೋಳುಗಲಿ ತುಂಬಿತು

ನಿಜಕ್ಕೂ ದೊರಕಲಾರದೆಂದು ಎಣಿಸಿದ್ದು ನಿರೀಕ್ಷಿಸಿದಂತೆಯೇ ನನಗೆ ಲಭಿಸಿತು.

ನನಗೆ ದೊರೆತ ಅತ್ಯಂತ ದೊಡ್ಡ ಸೌಭಾಗ್ಯವಿದು, ನಾನು ಬಾದಶಾಹರ ವೈಭಭವವನ್ನು ಹೊಗಳುವುದರೊಂದಿಗೆ ಈ ಮಾತನ್ನು ಹೇಳುತ್ತಿದ್ದೇನೆ, ನನ್ನ ಅತ್ಯಂತ ಉತ್ತಮ ಯೋಚನೆಗಳು ಈ ಬರವಣಿಗೆಯ ಮೂಲಕ ಹೊರಹೊಮ್ಮಿದೆ. ನಾನು ಈ ಸತ್ಯವನ್ನು ಬರಹದ ಮೂಲಕ ದಾಖಲಿಸುವ ಸಾಧನೆಯನ್ನು ಮಾಡುತ್ತಿದ್ದೇನೆ.

ನಜ್ಮ್

ಚ್ಯೂಂ ಗೀರಂ ಬಕಫ್ ಕಿಲಿಕೆ ಗೌಹರ್ ನಿಗಾರ್
ಶವದ್ ಶಫಯೇ ದಿಲ್‌ಕಶ್ ಚ್ಯೂಂ ರುಕ್ಸಾರೆ ಯಾರ್

ಮುತ್ತುಗಳನ್ನು ಕಾಗದದಲ್ಲಿ ಹರಡುವ ಲೇಖನಿಯನ್ನು ಕೈಯಲ್ಲಿ ಹಿಡಿದಾಗ
ಪುಟಗಳು ಪ್ರೇಯಸಿಯ ಗಲ್ಲದಂತೆ ಸುಂದರ, ಮೃದುವಾಗುವುದು ಆಗ.

ಮನಂ ಆನ್ ಸುಕನ್ ಸಂಜ್ ಆಲಿ ಬಯಾನ್

ಕೆ ಬರ್ ದರ್‌ಗಯೆ ಫಿಕರಂ ಅಸ್ ಕದ್ರೊ ಶಾನ್
ಸುಂದರ ಭಾಷೆಯ ಒಂದು ಮಹತ್ವದ ಗ್ರಂಥವಾಗಿದ್ದೇನೆ, ನನಗೆ
ಘನತೆ ವೈಭವದ ಬಿರುದು ಗೌರವಗಳು, ತಾವಾಗೇ ಬರುತಿವೆ ನನ್ನ ಮನೆಗೆ.

ದರ್ ಆಯಂದ್ ಸಫ್ ಬಸ್ತ ಹರ್ ಸುಭಹೋ ಶಾಮ್
ಮರ್ಘೂಮೀನೆ ನಾಯಾಬ್ ಬಹರೇ ಸಲಾಂ
ಆಗಮಿಸುತಿವೆ ಸಾಲು ನಿಂತು ಪ್ರತೀ ಜಾವವೂ ಸಂಜೆಯೂ
ವಿರಳ ಯೋಚನೆಗಳು ಹರಿದುಬಂದು ಮಾಡುತಿವೆ ಸಲಾಮ್.

ಚ್ಯೂಂ ತಬ್‌ಅಂ ಝುಮಾನೀ ಶವದ್ ಬಹರಯಾಬ್
ಕುನಂ ಝುರ್ರರಾ ರೂ ಕಶೆ ಆಫ್ತಾಬ್
ನನ್ನ ದೇಹದಲಿ ಯೋಚನೆಗಳು ತುಂಬಿತುಳುಕುವಂತೆ ಆದಾಗ
ಕ್ಷುಲ್ಲಕವನ್ನೂ ಸೂರ್ಯನ ಮುಂದಿಟ್ಟು ಪಾವನಗೊಳಿಸುವೆ ಆಗ.

ಜ್ಞಾನಿಗಳು, ಪಂಡಿತರು ಬಾದಶಾಹನ ದರಬಾರಿನೊಳಗೆ ಪ್ರವೇಶಿಸುವಾಗ ಎದೆಯುಬ್ಬಿಸಿ ತಲೆಯೆತ್ತಿ ಪ್ರವೇಶಿಸಬೇಕು. ಗಗನದ ವಾತಾವರಣದ ಎತ್ತರದ ಅನುಭವ ಹೊಂದಿದವರ ಮುಂದೆ (ಅತ್ಯಂತ ಮಹತ್ವಪೂರ್ಣ ಜ್ಞಾನವಿರುವ ಪಾಂಡಿತ್ಯದ ಮುಂದೆ) ಈ ಜಾಗದಲ್ಲಿ ತುಂಬಿರುವ ಅರ್ಥಗಳ ಬೇಟೆಯಾಡುವವರು(ಜ್ಞಾನಿಗಳ ಮಾತಿನ ಅರ್ಥಗಳಿಗಾಗಿ ತಡಕಾಡುವವರು) ಯಾವ ಸಾಟಿ? ಜ್ಞಾನಿಗಳ ಮೈಖಾನಾದಲ್ಲಿ (ಶರಾಬಿನ ಅಡ್ಡೆಯಲ್ಲಿ) ವಿಹರಿಸುವವವರ ಮುಂದೆ, ಶರಾಬಿನ ಮತ್ತಿನಲಿ ಅಮಲೇರಿ ತೂರಾಡುವವರು ಒಂದು ಬಿಂದು ಹನಿಯಷ್ಟೂ ಕೂಡ ಸಮಾನರೆನಿಸಲಾರರು. ದೇವರ ಕೃಪೆಯ ಸಾಗರದಲ್ಲಿ ಮುತ್ತುಗಳ ಆರಿಸುವವರ ಎದುರು ಒಡೆದ ಮಣ್ಣಿನ ಮಡಿಕೆಯ ತುಂಡುಗಳನು ಆರಿಸುವವರು ಸಮಾನರಾಗುವುದು ಹೇಗೆ ಸಾಧ್ಯ? ಬಲಶಾಲಿ ಜಟ್ಟಿಗಳ ಶಕ್ತಿ ಪ್ರದರ್ಶನದ ಅಖಾಡಾದಲ್ಲಿ ಕಾಲಿಡುವುದು ಅಂದರೆ ಎಲ್ಲ ಮುಂದಿರುವ ಸವಾಲುಗಳನ್ನು ಸ್ವೀಕರಿಸಿ ಎದುರಿಸಲು ತಯಾರಾಗಿರುವುದಾಗಿದೆ. ಬರಿಯ ಅಸೆಯೊಂದನ್ನು ಇಟ್ಟುಕೊಂಡು ಕಾಲಿಡುವವನಂತಾಗಿರದೆ, ಆ ಸವಾಲುಗಳನ್ನು ಎದುರಿಸಿ, ಗುರಿಯನ್ನು ಸಾಧಿಸುವ ಸಾಧಕನಾಗಿ ಮುಂದಡಿಯಿಟ್ಟಿರುತ್ತೇನೆ. ತಪ್ಪು ಅರ್ಥಮಾಡಿಕೊಳ್ಳುವವರ ಪಾಲಿಗೆ ಸಿಗುವ ಕೊನೆಯ ನ್ಯಾಯವೆಂದರೆ, ನಾಚಿಗೆಗೆಟ್ಟು ಭೂಮಿಯಲ್ಲಿ ಹೊರಳಾಡುವುದಕ್ಕೆ ಬಿಟ್ಟುಬಿಡಬೇಕು. 'ಹೈಹಾತ್! ಹೈಹಾತ್!'(ಛೆ! ಛೆ!) ಈ ವಿಚಾರಗಳನ್ನು ಅರಿಯದೆ ಅಗೌರವ ತೋರುವವರ ಮೇಲೆ ನನ್ನ ವಿಚಾರಗಳ ಪ್ರಭಾವ ಅರಿವಾಗತೊಡಗಿದರೆ, ಭಯಪಟ್ಟುಕೊಂಡು ಆಘಾತಗಳಿಗೆ ತುತ್ತಾಗಿ ಬಾಯಿಯಿಂದ ನಾಲಗೆ ಉದ್ದಕ್ಕೆ ಹೊರಚಾಚಿ ನಿಲ್ಲುವುದು!

■

*

ಅಧ್ಯಾಯ - ೧೫

ಕಾವ್ಯ ಬರೆಯುವ ಕಾರಣ

ಶೇರ್

ಅಝುದೋ ಝರ್ಫ್ ವಾರಸೇ ಮಾನಾ ಮನಂ
ಹುಜ್ಜತೇ ಖಾತಿಯ್ ಬಯೆ ದಾವಾ ಮನಂ
ನಾನು ಶಬ್ಧ ಮತ್ತು ಅರ್ಥಗಳ ವಾರೀಸುದಾರ
ದಾವೆ ಮಾಡದೆಯೂ ಎಲ್ಲರ ವಾದಗಳಿಗೆ ನಾನೇ ತೀರ್ಪುಗಾರ.

ಕೆ ಮಲಿಕೆ ಇಮ್ರೋಝ್ ಜಹೂರಿ ಕುಜಾ ಅಸ್ತ್
ಫಖ್ರ್ ಬಖಿದ್‌ಭೀ ಕುನಂ ಆರಾಯಿ ಬಜಾ ಅಸ್ತ್
ಇಂದಿನ ಬಾದಶಾಹರ ಜಹೂರಿ ಎಲ್ಲಿ ಅಡಗಿಹನು
ನಾನು ಹೆಮ್ಮೆಯಿಂದ ನೀಡುವ ಹೇಳಿಕೆಯಲ್ಲಿ ಸರಿಯಾಗಿಹೆನು.

ನಾನು ಈ ಲೇಖನವನ್ನು ಬರೆಯುವ ಅಲೋಚನೆಯನ್ನು ಶುದ್ಧ ವಿಶ್ವಾಸದ ಗುಟುಕಿನೊಂದಿಗೆ (**ಸಾಫ್ ಜಾಮೆ ಯಕೀನ್**) ಪಡೆದುಕೊಂಡಿದ್ದೇನೆ. ನನ್ನ ಹೃದಯ ಪರಿಶುದ್ಧವಾಗಿದೆ, ನನ್ನ ಯೋಚನಾ ಲಹರಿಗಳು ತೆರೆದಿವೆ, ನಾನು ಅದ್ಭುತ ಪಾಂಡಿತ್ಯವನ್ನು ಹೊಂದಿರುವವನು, ಯಾವ ಶಬ್ಧಕ್ಕೆ ಏನು ಅರ್ಥ ಎನ್ನುವುದರ ಪರಿಜ್ಞಾನಹೊಂದಿದವನು. ನಾನೇ ಮಾಡಿದ ಶಬ್ಧಗಳ ಅರ್ಥಕೋಶದಿಂದ ಶಬ್ಧಧಾರೆಗಳನ್ನು ಹರಿಸುತ್ತೇನೆ. ಶೂರ ಹಜ್ರತ್ ಬಾದಶಾಹರ ಗುಣಗಾನಗಳನ್ನು ಶಬ್ಧಗಳಲ್ಲಿ ಮೂಡಿಸುವುದೆಂದರೆ ನನ್ನ ಮಟ್ಟಿಗೆ ನಾಲಗೆಯಲ್ಲಿ ಹುಟ್ಟಿಕೊಂಡು ಅರಳಿರುವ ಹೂವಿನಂತೆ. ಬಾದಶಾಹನ ಗುಣಗಾನದ ಮಾತುಗಳು ಅವರ ವ್ಯಕ್ತಿತ್ವದ ವೈಭವಕ್ಕೆ ತಕ್ಕದಾಗಿದೆ. ಅವರ ಘನತೆಯ ಸ್ಥಾನಕ್ಕೆ ಸಂಬಂಧಿಸಿದಂತೆ ಇಲ್ಲಿ ಇರುವ ಮಾತುಗಳು

ಎಲ್ಲವೂ, ಯಾವುದೇ ಕಲಬೆರಕೆ ಇಲ್ಲದ ಶುದ್ಧ ಉಲ್ಲೇಖಗಳಾಗಿವೆ. ನನ್ನ ಈ ಕೃತಿಯಲ್ಲಿ ಬಂದ ಎಲ್ಲ ಅಂಶಗಳೂ ಮತ್ತು ನನ್ನ ಅಭಿಲಾಶೆಗಳೂ ಸೇರಿ ಜಗತ್ತಿನ ಅತ್ಯಂತ ಜನಪ್ರಿಯ ಪುಸ್ತಕ **'ಮುಹಮ್ಮದ್ ನಾಮಾ'** ಆಗಿದೆ ಮತ್ತು ಇದು ನಿಜಕ್ಕೂ **'ನಾಮಯೇ ಆಲಂಗೀರ್ ಜಹಾಂಆರಾ'** (ವಿಶ್ವದ ಎಲ್ಲ ಸಾಮ್ರಾಟರ ಇತಿಹಾಸ) ಎಂದೂ ಕೂಡ ಎನಿಸಲ್ಪಡುತ್ತದೆ. ಈಗ ಈ ಕೃತಿಯನ್ನು ಬರೆಯಲು ನನಗೆ ಬಾದಶಾಹರ ಅನುಮತಿಯೂ ಪ್ರಾಪ್ತವಾಗಿದೆ. ಈ ಮೇಲಿನ ಮಾತಿನ ಅರ್ಥವೇನೆಂದರೆ ಈ ರಾಜ್ಯದ ಆಗು ಹೋಗುಗಳ ಮಾಲಿಕ ಮತ್ತು ಪಟ್ಟದ ಸುಲ್ತಾನ, ಶಹನ್‌ಶಾಹೆ ಹಜ್ರತೇ ಬಾದಶಾಹೆ ಗಾಝಿ ಸಾಹಬ್‌ರ ಆಸೆಯಂತೆ ತನ್ನ ಆಳ್ವಿಕೆಯ ಶುರುವಿನಿಂದ ಕೊನೆಯ ತನಕವೂ ನಡೆದ ಘಟನೆಗಳ ಅಧಿಕೃತ ದಾಖಲೆಯಾಗುವಂತೆ ಈ ಕೃತಿಯಲ್ಲಿ ಮೂಡಿ ಬರಬೇಕೆಂದು ಮತ್ತು ಆ ರೀತಿಯಲ್ಲಿ ನಾನು ಬರೆಯಬೇಕೆಂದು ಬಯಸಿದ್ದರು. ಈ ಕೃತಿಯ ಸಂಪುಟಗಳಲ್ಲಿ ತನ್ನ ಆಳ್ವಿಕೆಯ ಸಂಪೂರ್ಣ ಮಾಹಿತಿ ಮೂಡಿ ದಾಖಲೆಯಾಗುವಂತೆ ರಚಿಸಬೇಕೆಂದು ಬಾದಶಾಹರ ಬಯಕೆಯಾಗಿತ್ತು. ಈ ಕೃತಿಯಲ್ಲಿ ಬಾದಶಾಹರ ಆಳ್ವಿಕೆಯ ವಿಧಾನ, ರಹಸ್ಯಗಳು, ಬಹಿರಂಗ ಸಂಗತಿಗಳು, ಕಾರ್ಯವೈಖರಿಗಳ ವಿವರಗಳು ದಾಖಲಾಗಿವೆ. ಯಾಕೆಂದರೆ ಭವಿಷ್ಯದಲ್ಲಿ ಈ ಬಗ್ಗೆ ವಿವರಗಳನ್ನು ತಿಳಿಯುವ ಆಕಾಂಕ್ಷೆ ಹೊಂದಿದವರಿಗೆ, ಜ್ಞಾನಾಕಾಂಕ್ಷಿಗಳಿಗೆ ಸರಿಯಾದ ಮಾರ್ಗದರ್ಶನ ಲಭಿಸಲೆನ್ನುವುದು ಕೂಡ ಇದರ ಉದ್ದೇಶವಾಗಿದೆ.

ಇದೇ ಸಂದರ್ಭದಲ್ಲಿ ಈ ದಾಖಲೆಗಳನ್ನು ಬರೆಯುವ ಉದ್ದೇಶದೊಂದಿಗೆ ೧೦೫೧ಹಿಜರಿ ವರ್ಷದಲ್ಲಿ ಬಾದಶಾಹರ ಸಮಕಾಲೀನರಾದ ನವಾಬ್ ಮದಾರ್‌ಖಾನ್ ಬಾಬಾರ ಜೊತೆಗೆ ವಿಚಾರ ವಿಮರ್ಶೆ ನಡೆಸಿದರು. ಬಾದಶಾಹ ಗಾಝಿಯವರು ಇವರನ್ನು ನನಗೆ ಪರಿಚಯಿಸಿ ಮಾತುಕತೆ ನಡೆಸಿದರು. ಈ ರೀತಿಯಲ್ಲಿ ಚಾರಿತ್ರಿಕ ದಾಖಲೆಯನ್ನು ಬರೆಯುವವರು ಸಾಹಬೇ ಕಲಂ(ಪ್ರಮುಖ ಲೇಖಕ), ಮುಮ್ತಾಝ್ ಆಲಿಂ(ಉಚ್ಚ ಶ್ರೇಣಿಯ ಜ್ಞಾನಿ) ಆಗಿರಬೇಕು ಮತ್ತು ಒಳ್ಳೆಯ ಸಾಹಿತಿಯಾಗಿರಬೇಕು. ಈ ಕೆಲಸವನ್ನು ಮಾಡುವುದಕ್ಕೆ ಆರಿಸಲಾದ **ಜಹೂರ್ ಬಿನ್ ಜಹೂರಿ**ಯವರ ಮೇಲೆ ನನಗೆ ಸಂಪೂರ್ಣ ವಿಶ್ವಾಸವಿದೆ ಎಂದು ಬಾದಶಾಹರು ಹೇಳಿದರು. ಬಾದಶಾಹರ ಆಜ್ಞೆಯಂತೆ ನನಗೆ ಈ ಕೃತಿಯನ್ನು ಬರೆಯುವ ಜವಾಬ್ದಾರಿಯನ್ನು ವಹಿಸಿಕೊಡಲಾಯಿತು. ನವಾಬ್ ಬಾಬಾ ಸಾಹೇಬರು ತನ್ನ ವೈಭವಪೂರ್ಣ ಅರಮನೆಗೆ ನನ್ನನ್ನು ಕರೆಸಿದರು. ನನಗೆ ಅತ್ಯಂತ ವಿಶೇಷ ರೀತಿಯ ಆತಿಥ್ಯ ನೀಡಿ ನನ್ನನ್ನು ಸಂತೋಷಪಡಿಸಿದರು. ಇದರ ನಂತರ ಅವರು ದಕ್ಷಿಣದ ಸುಲ್ತಾನರಬಗ್ಗೆ ರಫಿಯುದ್ದೀನ್ ಹುಸ್ಸೈನ್ ಶಿರಾಜಿ ಬರೆದ ಐತಿಹಾಸಿಕ ದಾಖಲೆಗಳ ಪುಟಗಳನ್ನು ನನಗೆ ನೀಡಿದರು. ನನ್ನೊಂದಿಗೆ ನಡೆಸಿದ ತನ್ನ ಮಾತುಕತೆಗಳಲ್ಲಿ ಜ್ಞಾನದ ಖಜಾನೆಯ ಒಂದೊಂದೇ ಕೀಲಿಕೈಗಳನ್ನು ಉಪಯೋಗಿಸುತ್ತ ಬೇರೆಬೇರೆ ಬಾಗಿಲುಗಳನ್ನು ತೆರೆಯ ತೊಡಗಿದರು. ನಂತರ ಅವರು ತನ್ನ ಪದ್ಯಗಳನ್ನು ವಾಚಿಸಿದರು.

ಶೇರ್

ಕೆ ಐ ಶಾಯರೇ ಆಲಿ ತಬಾರ್
ಜಹಾನೇ ದಿಗರ್ ಕುನ್ ಝೆ ಸಿರ್ ಆಶ್‌ಕಾರ್
ಓ ಆಸ್ಥಾನದ ದೊಡ್ಡ ಕವಿವರ್ಯರೇ
ಮತ್ತೊಂದು ವಿಶ್ವವ ಸೃಷ್ಟಿಸುವ ರಹಸ್ಯವನ್ನು ಲೇಖನಿಯಿಂದ ತನ್ನಿ ಹೊರಗೆ.

ಕೆ ಬಾಶತ್ ದರಾಂ ಆಲಮೇ ದಿಲ್‌ಕಶಾಯೇಂ
ಝಮೀರಾ ಹಝಾರ್ ಆಸ್‌ಮಾಂ ರೂಹ್‌ನುಮಾಯೇಂ
ಆ ವಿಶ್ವ ಅಪಾರ ಆಕರ್ಷಣೀಯವೆನಿಸಿರಲಿ
ಅದರ ಭೂಮಿಯಲಿ ಸಹಸ್ರಾರು ಆಕಾಶಗಳು ಕಾಣುವಂತಿರಲಿ

ಸುಖನ್ ಸರ್‌ಕುನ್ ಅಝ್ ಸರ್‌ವರಾನೆ ದಖನ್
ಕೆ ಬಾಶದ್ ದರಕ್‌ಶಾಂ ಝೈನೇ ಸುಕನ್
ದಕ್ಷಿಣದ ಬಾದಶಾಹರ ಚರಿತ್ರೆ ಬರೆದು ಆಜ್ಞೆ ಪಾಲಿಸು
ಈ ಕಾರ್ಯದ ಮೂಲಕ ನೀ ಚರಿತ್ರೆಯ ಮೇಲೆ ಬೆಳಕು ಹರಿಸು.

ಬಕುಶ್ ಆಂಚಾ ಖೋನೆ ಇನ್‌ಶಾಯೇ ನಗಝ್
ಕೆ ಚ್ಯೂಂ ಪಿಶ್ತ ಗರ್‌ದಂದ್ ಶವದ್ ಪುರ್ ಮಗಝ್
ಹರಡಿಸು ನಿನ್ನ ಬರವಣಿಗೆಯ ಊಟದ ಚಾಪೆ(ಖೋನ್)ಯಲಿ
ಅದರಲ್ಲಿರಿಸಿದ ಹಣ್ಣುಗಳು ರಸಪೂರಿತ ಸ್ವಾದಿಷ್ಟವಾಗಿರಲಿ.

ಝೆ ಜಾಮೆ ಮಅನಿ ಬಜೋಶ್ ಆಂಚಾ
ಕೆ ಗರ್ದತ್ ಫಲಕ್ ಮಸ್ತೋ ಗಿಲ್‌ತಾಂ ಅಝಾಂ
ಅರ್ಥವಂತಿಕೆಯ ಮತ್ತೇರುವ ಶರಾಬಿನ ಮೂಲಕ ಹುರುಪು ಹರಿಸು
ಆಕಾಶವೂ ಹುಚ್ಚೆದ್ದು ಕುಣಿಯುವ ವಾತಾವರಣವ ಅದರಿಂದ ಸೃಷ್ಟಿಸು.

ನೀವು ಅಲ್ಲಾಹನಿಂದ ಬಂದ ಸಂದೇಶವನ್ನು ಈ ರೀತಿಯಲ್ಲಿ ಬರವಣಿಗೆಯ ಮೂಲಕ ಮೂಡಿಸ ಬೇಕು ಹೇಗೆಂದರೆ ಓದುವವರು ತಮ್ಮನ್ನು ತಾವೇ ಮರೆಯುವಂತೆ ಸಂಪೂರ್ಣವಾಗಿ ತನ್ಮಯರಾಗುವಂತೆ ಮಾಡಬೇಕು. ಯಾಕೆಂದರೆ, ನಾನು ಈ ಅಶರೀರವಾಣಿಯನ್ನು ಕೇಳಿದೆನಾದುದರಿಂದ ಈ ಸಂದೇಶವನ್ನು ನಿಮ್ಮ ಮುಂದಿಟ್ಟಿದ್ದೇನೆ. ನಿಮ್ಮ ಮೂಲಕ ಇಡೀ ಜಗತ್ತಿಗೆ ಈ ಸಂದೇಶವನ್ನು ಹರಡಬೇಕಾಗಿದೆ. ದಕ್ಷಿಣದ ಕಲೆ, ವಿದ್ಯೆ, ಸಾಂಸ್ಕೃತಿಕ ಸಮೃದ್ಧಿಯ ಕಾಲಘಟ್ಟದಲ್ಲಿ ಅಲ್ಲಾಹನ ಕೃಪೆಯಿಂದ ದಕ್ಷಿಣದ ಸುಲ್ತಾನರು ತಮ್ಮತಮ್ಮ ಆಳ್ವಿಕೆಯ ವೈಭವದ ಚಿತ್ರಣಗಳನ್ನು ಚರಿತ್ರೆಯ ಪುಟಗಳಲ್ಲಿ ದಾಖಲಿಸುವುದಕ್ಕೆ ಬೇಕಾದ ಕ್ರಮಗಳನ್ನು ಕೈಗೊಂಡಿದ್ದಾರೆ. ಅಕ್ಬರ್ ನಾಮಾದ ಲೇಖಕ

ಷೇಖ್ ಅಬುಲ್ ಫಝುಲ್ ತನ್ನ ಪುಣ್ಯದ ಸ್ವರೂಪದಲ್ಲಿ ಲಭಿಸಿದ ಜ್ಞಾನದ ಮೂಲಕ ಬಣ್ಣಬಣ್ಣಗಳ ಅಮೂಲ್ಯ ಅಕ್ಷರಗಳಲ್ಲಿ ಮೂಡಿಸಿ(ಈ ಪುಸ್ತಕದ ಅಕ್ಷರಗಳನ್ನು ನವರತ್ನಗಳನ್ನು ಕರಗಿಸಲಾದ ನೀರನ್ನು ಶಾಯಿಯಂತೆ ಬಳಸಿ ರಚಿಸಲಾಗಿದೆ ಎನ್ನಲಾಗುತ್ತದೆ) ರಚಿಸಿ ಅಕ್ಬರ್ ಬಾದಶಾಹನ ಮುಂದೆ ಇರಿಸಿದ್ದರು, ಮತ್ತು ಅವರೂ ಕೂಡ ತಮ್ಮ ಘನವಾದ ಜ್ಞಾನದ ಮೂಲಕ ರಚಿಸಿದ ಈ ರಚನೆಗೆ ಸರಿಸಾಟಿಯಾಗಿ ಅಕ್ಬರ್ ನಾಮಾದಂತಹ ಕೃತಿಯನ್ನು ಯಾರೂ ಕೂಡ ಬರೆಯಲು ಸಾದ್ಯವಾಗದು ಎಂದು ಹೇಳುತ್ತಿದ್ದರು. ಆ ಕಾಲದಲ್ಲಿ ಕೃತಿ ರಚನೆಯ ಈ ತೀರ್ಮಾನವನ್ನು ಬಾದಶಾಹರು ದರ್ಬಾರಿನಲ್ಲಿ ತೆಗೆದುಕೊಳ್ಳುವ ಮುಂಚೆ ಎಲ್ಲ ದೊಡ್ಡ ಪಂಡಿತರುಗಳನ್ನು ಆಹ್ವಾನಿಸಿ ಸಭೆಯನ್ನು ಕರೆದಿದ್ದರು. ಈ ಸಭೆಯಲ್ಲಿ ಪ್ರತಿಯೊಬ್ಬ ಉದ್ಧಾಮ ಪಂಡಿತರುಗಳು ತಮ್ಮ ಜ್ಞಾನ ಭಂಡಾರವನ್ನು, ಪಾಂಡಿತ್ಯವನ್ನು ತೆರೆದಿಟ್ಟರು. ಜ್ಞಾನದ ಪರೀಕ್ಷೆಯೂ ದರ್ಬಾರಿನಲ್ಲಿ ನಡೆಯಿತು. ಇದರಲ್ಲಿ ನೇರವಾದ, ಮುಖಾಮುಖಿ ಪರೀಕ್ಷೆಗಳು ನಡೆದು ಅದರಲ್ಲಿ ಷೇಖ್ ಅಬುಲ್ ಫಜಲ್ ಉತ್ತೀರ್ಣರಾಗಿದ್ದರು. ತನ್ನ ಚರಿತ್ರೆಯನ್ನು ಬರೆಯಲು ಅಬುಲ್ ಫಜಲ್‌ರವರೇ ಸರಿಯಾದವರೆಂದು ಬಾದಶಾಹ ಅಕ್ಬರನಿಗೆ ಮನದಟ್ಟಾಯಿತು. ಹೀಗೆ ಅಬುಲ್ ಫಜಲ್‌ರಿಗೆ ಈ ಕೃತಿಯನ್ನು ರಚಿಸುವ ಪರವಾನಗಿ ಸಿಕ್ಕಿತು. ಇದೇ ರೀತಿಯಲ್ಲಿ ಹಜ್ರತ್ ಬಾದಶಹ ಗಾಝಿಯವರು ಓ ಝುಹೂರ್! ನಿಮಗೆ ಅವರ ಸುಲ್ತಾನಿ ದರ್ಬಾರಿನ ಕೃಪೆಗಳ ಹಕ್ಕುದಾರರನ್ನಾಗಿ ಮಾಡಿದರು. ನಿಮಗೆ ಈ ಮುಹಮ್ಮದ್ ನಾಮಾ ಬರೆಯುವ ಪರವಾನಗಿ ಹೀಗೆ ದೊರೆಯಿತು.

ಹಜ್‌ರತ್ ಬಾದಶಾಹ ಗಾಝಿಯವರು ದರ್ಬಾರಿನಲ್ಲಿ ನನಗೆ ಈ ಕೃತಿಯ ರಚನೆಯ ಜವಾಬ್ದಾರಿ ಹೊರಿಸಿದ ನಂತರ, ಈ ಕಾಲದಲ್ಲಿ ಅಕ್ಬರ್ ನಾಮಾದಂತಹ ಕೃತಿ ರಚನೆ ಯಾರಿಂದಲಾದರೂ ಸಾಧ್ಯವೇನು? ಎಂದು ಕೇಳಿದರು. ನಾನು ವಿನೀತನಾಗಿ ಸಲಾಂ ಸಲ್ಲಿಸುತ್ತ, ಅಬಲ್ ಫಜಲ್‌ರವರು ತಮ್ಮ ಲೇಖನಿಯ ಸತ್ವ ಮತ್ತು ಜಾಣ್ಮೆಯ ಬಳಕೆಯಿಂದ ಬರೆದಂತಹ ಕೃತಿಯು ಅಮೂಲ್ಯವಾದುದು ಮತ್ತು ತನ್ನನ್ನು ಅತ್ಯಂತ ಮೇಧಾವಿ ಎಂದು ಒಪ್ಪುವಂತೆ ಮಾಡಿದ್ದಾರೆ. ಈ ಕೃತಿಯು ಅತ್ಯಂತ ಅಮೂಲ್ಯವಾದುದೆಂದು ಪರಿಗಣಿಸುವಂತೆ ರಚಿಸಿದ್ದಾರೆ ಎಂಬ ಅಭಿಪ್ರಾಯಪಡುವುದಕ್ಕೆ ಅನುಮಾನವಿಲ್ಲ ಎಂದು ಹೇಳಿದೆ. ಆದರೆ, ನನಗನಿಸುವಂತೆ ಅಕ್ಬರ್ ನಾಮಾದಲ್ಲಿರುವ ಕೊರತೆಯೇನೆಂದರೆ **ಝೀವರೆ ತೌಹೀದ್**(ದೇವರ ಕೃಪೆಯ ಅಮೂಲ್ಯ ಸ್ಮರಣೆ) ಮತ್ತು **ಪೈರಾಹನ್ ನಾತ್** (ಪ್ರವಾದಿಯವರ ಸ್ಮರಣೆಯ ತೊಡುಗೆ) ಸಂಪೂರ್ಣವಾಗಿ ಇಲ್ಲದಿರುವುದು ಎದ್ದು ಕಾಣಿಸುತ್ತದೆ. ನನ್ನ ಲೇಖನಿಯಿಂದ ಸೃಷ್ಟಿಸಿದ ಮುಹಮ್ಮದ್ ನಾಮಾದಲ್ಲಿ ವಿಶಿಷ್ಠವಾದ ಸಂದೇಶವಿದೆ. ಇದರ ಶಬ್ಧಗಳ ಅರ್ಥವ್ಯಾಪ್ತಿಯನ್ನು ಪರಿಗಣಿಸಿದರೆ ಮುತ್ತುಗಳ ಅಗಾಧ ಸಮುದ್ರ ಹುಟ್ಟಿಕೊಳ್ಳುತ್ತವೆ. ಈ ನನ್ನ ಕೃತಿಯು

ಮೊದಲಿನಿಂದ ಕೊನೆಯ ತನಕವೂ ಖುದಾಯೆ ಲಾಝುವಾಲ್(ಶಾಶ್ವತನೆನಿಸಲ್ಪಟ್ಟ ದೇವರ) ಮತ್ತು ರಸೂಲೆ ಅಹ್ಮದ್(ಪ್ರವಾದಿ ಮುಹಮ್ಮದ್)ರ ಗುಣಗಾನದ ಕಂಪು ತುಂಬಿಕೊಂಡಿದೆ. ಮತ್ತು ಇದರ ಸರಳವಾದ ಉಲ್ಲೇಖ ಸ್ವರ್ಗದ ನದಿಯಾದ ಸಲ್‌ಸಬೀಲ್‌ನಲ್ಲಿ ಶಾಂತವಾಗಿ ಹರಿಯುವ ಪರಿಶುದ್ಧ ನೀರಿನಂತೆ ಈ ಕೃತಿಯಲ್ಲಿ ಹರಿಯುತ್ತಿದೆ. ನನ್ನ ಈ ಕೃತಿ ವಿಮರ್ಶೆಯನ್ನು ಕೇಳಿದ ನಂತರ ಹಜ್ರತ್ ಬಾದಶಾಹ ಗಾಝಿ ತನ್ನ ವೈಭವೋಪೇತವಾದ ಪುಸ್ತಕ ಭಂಡಾರದಿಂದ ಅಕ್ಬರ್ ನಾಮಾ ಕೃತಿಯ ಪ್ರತಿಯೊಂದನ್ನು ತರಿಸಿದರು. ಇದನ್ನು ಓದಿ ನನ್ನ ಮಾತುಗಳ ಪರಾಮರ್ಶೆ ಮಾಡಿದರು. ನಂತರ ನ್ಯಾಯೋಚಿತವಾದ ತೀರ್ಮಾನಕ್ಕೆ ಬಂದು ಇದು ಒಂದು ರೀತಿಯಲ್ಲಿ ಭಾರತದ ಚರಿತ್ರೆಯಾಗಿದೆ. ಇದರಲ್ಲಿ ಹಿಂದೂ ಸಂಸ್ಕೃತಿಯ ವೈಭವದ ದಾಖಲೆಯಾಗಿದೆ ಎಂಬ ತೀರ್ಮಾನಕ್ಕೆ ಬಂದರು.

ರುಬಾಯಿ

ಶಹನ್‌ಶಾಹೆ ಗಾಝಿ ಜಹಾನೆ ಖುರ್‍ರಂ ಅಝ್‌ವೂಸ್ತ್
ನಜ್ಮೋ ನಸ್ತೆ ಕಾರ್‌ಗಾಹೆ ಆಲಂ ಅಝ್‌ವೂಸ್ತ್
ವೀರ ಶೆಹನ್‌ಶಾಹನ ಲೋಕ ಸಂತಸದಲಿ ತೇಲಾಡುತಿದೆ
ಲೋಕದ ಕೆಲಸಕಾರ್ಯಗಳು ಅವರ ಕೃಪೆಯಿಂದ ಚಲಿಸುತ್ತಲಿದೆ.

ಸದ್ ಶುಕ್ರೆ ಖುದಾ ಕೆ ಪಾಯಯೇ ದೀನೆ ನಬಿ
ಸುಕಾಯಿಂ ಅರ್ಶೆ ಬರೀನ್ ಮುಲ್‌ಕಮ್ ಅಜ್‌ವೂಸ್ತ್
ದೇವರಿಗೆ ಸಹಸ್ರ ಕೃಪೆಗಳು, ಇದು ನಬಿ ಬೋಧಿಸಿದ ಧರ್ಮದ ತಳಹದಿಯು
ಈ ಬಾದಶಾಹರಿಂದಾಗಿ ಬಲಿಷ್ಠವಾಗಿದೆ, ಅರ್ಷ್* ಶಕ್ತಿಶಾಲಿಯಾದಂತೆ.

(*ಸ್ವರ್ಗದಲ್ಲಿನ ದೇವರ ಆಸ್ಥಾನ)

ಸುಬ್ಹಾನಲ್ಲಾಹ್! (ದೇವರು ದೊಡ್ಡವನು) ಇಂದು ತಮ್ಮ ಶ್ರೇಷ್ಠವಾದ ಜ್ಞಾನ ಮತ್ತು ಘನತೆ ವೈಭವದ ಹಿನ್ನೆಲೆಯಲ್ಲಿ ನನ್ನ ಈ ಕೃತಿ ಮುಹಮ್ಮದ್ ನಾಮಾವನ್ನು ಹೊಗಳಿದಿರಿ ಮತ್ತು ನನಗೆ ಇದನ್ನು ಕೇಳುವ, ನನ್ನ ಅಭಿಪ್ರಾಯವನ್ನು ನಿಮ್ಮ ಮುಂದಿಡುವ ಅವಕಾಶ ಮಾಡಿಕೊಟ್ಟಿರುವಿರಿ, ಇದಕ್ಕಾಗಿ ಧನ್ಯವಾದಗಳು. ನನ್ನ ವಿಚಾರಗಳನ್ನು ವ್ಯಕ್ತಪಡಿಸಿದ ರೀತಿಯಿಂದ ಭೂಮಿ ಆಗಸವು ತೊಟ್ಟಿರುವ ಉಡುಪಿನ ಪ್ರಭೆ ಮೂಡಿತು. ಲೋಕದ ಗೌರವದ ಬೆಳಕಾದ ವೀರ ಹಜ್ರತ್ ಬಾದಶಾಹ ನನ್ನ ನಝ್ಮ್ ಪದ್ಯಗಳು ಬರೆಯುವ ರೀತಿ, ಸ್ಫೂರ್ತಿಯ ಸೆಳೆಯ ಹಿನ್ನೆಲೆಯನ್ನು ವಿಚಾರಿಸಿದರು. ಬಾದಶಾಹರು ನನ್ನ ಕೆಲವು ಬರಹ, ಪದ್ಯಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ನನ್ನ ಕೆಲವು ಪದ್ಯಗಳ ಸಾಲುಗಳು ಅಕ್ಬರ್‌ನಾಮಾದಲ್ಲಿ ಕಂಡುದಾಗಿ ಹೇಳಿದರು. ನಾನು ಇತರ ಕವಿಗಳಿಂದ ಅವರ ಕೃತಿಚೌರ್ಯ ಮಾಡುವುದಾಗಲಿ, ಎರವಲು

ಪಡೆದುಕೊಳ್ಳುವ ಕೆಲಸವನ್ನಾಗಲಿ ಮಾಡುವುದಿಲ್ಲ, ಇಂತಹ ಕೃತ್ಯಗಳಿಂದ ನಾನು ತುಂಬ ನಾಚಿಕೆಪಟ್ಟುಕೊಳ್ಳುತ್ತೇನೆ. ಬಾದಶಾಹರ ದಯೆ ಮತ್ತು ಕೃಪೆಯಿಂದ ನನಗೆ ಈ ಮುಹಮ್ಮದ್ ನಾಮಾದ ಬರೆಯುವ ಪ್ರತಿಯೊಂದು ಹಂತದಲ್ಲೂ ಬಹಳಷ್ಟು ಸಹಾಯ ಸಹಕಾರಗಳು ಅವರಿಂದ ಲಭಿಸಿತು. ಎಲ್ಲಿವರೆಗೆ ಎಂದರೆ ಬಾದಶಾಹ ತಮ್ಮ ಅಮೂಲ್ಯವಾದ ಒಂದು ಮನಸ್ಸಿನಾಳದಿಂದ, 'ಮುಲ್ಲಾ ಜಹೂರರ ಒಡಲಲ್ಲಿ ಅಲ್ಲಾಹ ಸುಬ್ಹಾನವುತಾಅಲ ಮುಹಮ್ಮದ್‌ನಾಮಾ ಬರೆಯಲು ಮತ್ತು ನಿಮ್ಮ ಬರವಣಿಗೆಯ ಶಕ್ತಿಯನ್ನು ಸಾದರಪಡಿಸಲಿಕ್ಕಾಗಿಯೇ ನಿಮ್ಮನ್ನು ಸೃಷ್ಟಿಸಿದ್ದಾನೆ' ಎಂಬ ಮಾತನ್ನು ಹೇಳಿದರು.

ಖಿತಾ

ನವಾಝಿಶೆ ಶಹೆ ಗಾಝಿ ಚ್ಯೂಂ ರುತುಬಅಂ ಅಫರೋಝ್
ಗುಝಿಸ್ತ್ ಪಾಯೆ ಕದಂ ಝ ಔಝ್‌ಗಾಹೇಂ ಇಲ್ಲಿಯ್ಯೀನ್
ನನ್ನ ದರ್ಜೆಯನ್ನು ಎತ್ತರಿಸಿದರು ಬಾದಶಾಹರು ನನಗೆ ಈ ಜವಾಬ್ದಾರಿ ವಹಿಸಿ
ನನ್ನ ಹೆಜ್ಜೆಗಳನು ಪರಮೋನ್ನತ ಇಲ್ಲಿಯ್ಯೀನ್‌ನ ಹಂತ*ಕ್ಕಿಂತ ಮೇಲೇರಿಸಿ.

(*ಸ್ವರ್ಗ ಸೋಪಾನದ ಪರಮೋನ್ನತ ಹಂತ)

ಗಿರಿಫ್ತ್ ಅರ್ಶೇ ಬರೀಂ ಚಾರ್ ರುತುಬಯೆ ಸುಕ್‌ನಂ
ಬರೂ ಯೆ ಖಾತಂ ಅನ್‌ದೇಶಯೆ ಬರ್‌ಮಿಸಲೆ ನಗೀನ್
ನನ್ನ ಕಾವ್ಯದ ನಾಲ್ಕೂದೆಸೆಗಳು ಪವಿತ್ರ ಅರ್ಷ*ನ್ನು ಮಾಡಿಕೊಂಡಿತು ಕೈವಶದಂತೆ
ಚಿಂತೆ, ಯೋಚನೆಗಳ ಉಂಗುರದಲ್ಲಿ ನಾಗಿಣಿಯ ಹೆಡೆ ಮೂಡಿದಂತೆ.

(*ಸ್ವರ್ಗದಲ್ಲಿರುವ ದೇವರ ಆಸ್ಥಾನ)

■

*

ಅಧ್ಯಾಯ – ೧೬

ಕರ್ನಾಟಕ ಮತ್ತು ಮಲೆನಾಡನ್ನು ವಶಪಡಿಸಿಕೊಂಡದ್ದು ಮತ್ತು ನವಾಬ್ ಮುಸ್ತಫಾ ಖಾನರ ಸಹಕಾರ:

ಹಲವಾರು ಪ್ರಾಂತ್ಯಗಳನ್ನು ಅಲ್ಲಾಹನ ಕೃಪೆಯಿಂದ ಮತ್ತು ಬಾದಶಾಹನ ವೈಭವಪೂರ್ಣ ಶೌರ್ಯಪರಾಕ್ರಮಗಳ ಮೂಲಕ ಜಯಿಸಲು ಸಾಧ್ಯವಾಯಿತು. ಬಾದಶಾಹ ಯಾವಾಗಲೂ ಅಲ್ಲಾಹನ ಕೃಪೆ ಮತ್ತು ಪ್ರವಾದಿಯವರ ಧಾರ್ಮಿಕ ವೈಭವವನ್ನು ಪ್ರಚಾರಗೊಳಿಸುವ ತನ್ನ ಧ್ಯೇಯದ ಪರಿಣಾಮವಾಗಿ ಇವೆಲ್ಲವನ್ನೂ ಪ್ರಾಪ್ತಿಮಾಡಿಕೊಳ್ಳುವ ಸಂದರ್ಭ ತನಗೆ ಒದಗಿತೆಂದೇ ತಿಳಿದು ವಿನಮ್ರವಾಗಿ ದೇವರಿಗೆ ಧನ್ಯವಾದವನ್ನು ಹೇಳಿಕೊಳ್ಳುತ್ತಿದ್ದರು. ಇಸ್ಲಾಮ್ ಧರ್ಮದ ಚೌಕಟ್ಟಿನೊಳಗೆ ತನ್ನ ಹೆಸರನ್ನು, ತನ್ನ ಕಾರ್ಯಕ್ರಮಗಳನ್ನು ಗುರುತಿಸಿಕೊಳ್ಳುವುದೆಂದರೆ ತನಗೆ ಅತ್ಯಂತ ಗೌರವದ ಸಂಗತಿಯೆಂದು ತಿಳಿದುಕೊಂಡಿದ್ದರು. ವಿಶ್ವದ ಅತ್ಯಂತ ಹೆಚ್ಚಿನ ಘನತೆ ಮರ್ಯಾದೆಯನ್ನು ಹೊಂದಿದ ಬಾದಶಾಹರು ವೈಭವದ ತುತ್ತತುದಿಯನ್ನು ಏರಿರುವವರಾಗಿದ್ದಾರೆ. ಸುತ್ತಲಿನ ರಾಜ್ಯಗಳನ್ನು ವಶಪಡಿಸಿಕೊಳ್ಳುವ ಬಲಶಾಲಿಯಾದ ಬಾದಶಾಹ, ರಾಜಕಿರೀಟಧರಿಸಿ ನ್ಯಾಯ ತೀರ್ಮಾನಗಳನ್ನು ಸಮಯೋಚಿತವಾಗಿ, ಅತ್ಯಂತ ನ್ಯಾಯೋಚಿತವಾಗಿ ಮಾಡುತ್ತಾರೆ. ಆಕಾಶದೊಂದಿಗೆ ಮಾತುಕತೆ ನಡೆಸಲು ಸಾಧ್ಯವಿರುವಂತಹ ದರ್ಬಾರನ್ನು ಹೊಂದಿದಂತಹ ಬಾದಶಾಹ, ದೇಶದ ಆಗುಹೋಗುಗಳನ್ನು ಹಿಡಿತದಲ್ಲಿಟ್ಟುಕೊಂಡು ರಕ್ಷಿಸುವ ರಕ್ಷಕ, ಆಧುನಿಕ ಸಿಕಂದರ್, ಅಲ್ಲಾಹನ ಸ್ನೇಹಿತರಾದ ವಲಿ(ಸೂಫಿ ಸಂತರ)ಗಳಿಗೆ ಆಶ್ರಯ ನೀಡಿ ರಕ್ಷಿಸುವ ಜವಾಬ್ದಾರಿ ಹೊತ್ತ, ಧರ್ಮ(ದೀನ್)ದ ರಕ್ಷಕ, ಇಸ್ಲಾಂ ಧರ್ಮದ ತತ್ವಗಳನ್ನು ಜಾರಿಗೆ ತರುವವರು, ದೃಢವಾದ ಬಲಶಾಲಿಯಾದ ಇರಾದೆಯನ್ನು ಹೊಂದಿದವರೆಂದರೆ ಅವರೊಬ್ಬರೆ ಹಜ್ರತ್ ಬಾದಶಾಹ ಗಾಝಿ ಸಾಹೇಬರು (ಸುಲ್ತಾನ ಮುಹಮ್ಮದ್

ಆದಿಲ್ ಷಾ). ೧೦೫೬ಹಿಜರಿ ವರ್ಷದಲ್ಲಿ ಮಲೆನಾಡು ಪ್ರಾಂತ್ಯವನ್ನು ಸೇರಿದಂತೆ ಇಡೀ ದಕ್ಷಿಣ ಭಾರತವನ್ನು ತನ್ನ ವಶಪಡಿಸಿಕೊಳ್ಳುವ ಉದ್ದೇಶವನ್ನು ಬಹಿರಂಗ ಗೊಳಿಸಿದರು. ತಮ್ಮ ಸುತ್ತಲಿನ ನೆರೆಹೊರೆಯ ರಾಜರು ಮತ್ತು ತುಂಡರಸರನ್ನು ಎಚ್ಚರಿಸಿ ತನ್ನ ಬಗ್ಗೆ ಭಯದಿಂದ ಇರಬೇಕೆನ್ನುವ ಸಲುವಾಗಿ ಈ ಘೋಷಣೆಗೆ ಹೆಚ್ಚು ಮಹತ್ವ ನೀಡಿದರು. ನವಾಬ್ ಮುಸ್ತಫಾ ಖಾನ್‌ರವರು ಮೊದಲು ಈ ದಂಡಯಾತ್ರೆಯ ತಯಾರಿಯ ಘೋಷಣೆಯನ್ನು ಮಾಡುವ ಯೋಜನೆಯನ್ನು ರಚಿಸಿದರು. ಇದರ ಒಳ್ಳೆಯ ಪ್ರತಿಫಲ ಕಂಡು ಬಾದಶಾಹರು ಮುಸ್ತಫಾರನ್ನು ತನ್ನ ಆಪ್ತ ರಕ್ಷಕರ ನಾಯಕರನ್ನಾಗಿ ನೇಮಿಸಿದರು. ನಂತರ ಅವರಿಗೆ ಭಡ್ತಿ ನೀಡಿ ಸಿಪ್ಪೇ ಸಾಲಾರ್ (ದಂಡನಾಯಕ) ಸ್ಥಾನವನ್ನು ನೀಡಲಾಯಿತು. ಕರ್ನಾಟಕದ ಮತ್ತಷ್ಟು ಸ್ಥಳಗಳನ್ನು ಮಲೆನಾಡಿನ ಪ್ರಾಂತ್ಯಗಳ ಪ್ರದೇಶಗಳನ್ನು ಬಾದಶಾಹರಿಗೆ ಅವರು ಪರಿಚಯಿಸಿದರು. ಯಾಕೆಂದರೆ ಇಲ್ಲಿನ ಗ್ರಾಮ. ಪಟ್ಟಣಗಳ ಪ್ರದೇಶಗಳಲ್ಲಿ ಬಹಳಷ್ಟು ದೊಡ್ಡದೊಡ್ಡ ಪ್ರಖ್ಯಾತ ಕೋಟೆಗಳಿವೆ. ಹಲವಾರು ಪ್ರಾಚೀನ ಕಾಲದ ಸಂಪ್ರದಾಯದ ಬಡಕಟ್ಟು ಜನಾಂಗಗಳು ಇಲ್ಲಿ ವಾಸಿಸುತ್ತಿದ್ದರು.

ಖಿತಾ

ಶೆಹನ್‌ಶಾಹೇ ಕೆ ಬಗರ್‌ದೂ ಝುಮಹರೇ ಗಿರಂಗರ್ದ್
ಝು ಹರ್ ಸಿತಾರಾ ಹಝೂರ್ ಆಫ್‌ತಾಬ್ ಬರ್‌ಜೋಶಿತ್

ತಾವು ಎಂತಹ ಬಾದಶಾಹರೆಂದರೆ ತಮ್ಮ ಕೃಪೆಯ ಹೊರತು ಗ್ರಹಣವಾದರೆ ಆಕಾಶದಲಿ

ನಕ್ಷತ್ರಗಳ ಮೂಲಕ ಸಹಸ್ರಾರು ಸೂರ್ಯರು ಕಾಣುವಂತೆ ಮಾಡಬಲ್ಲಿರಿ ಆಗಸದಲಿ.

ಬಬಹರ್ ಸಾಯಯೇ ಚತ್‌ರಶ್ ಅಗರ್ ಉಫ್ತದ್ ತಾ ಆಶದ್
ಪಲಕ್ ಜೆಆಬ್ ಬಜಾಯೆ ಹುಬಾಬ್ ಬರ್ ದೋಶತ್

ಸಮುದ್ರವು ಖಿಯಾಮ(ಅಂತಿಮ ದಿನ)ದ ತನಕ ನಿಮಗೆ ಆಸರೆ ನೀಡುವುದು
ನೊರೆಯಲಿತುಂಬಿದ ನೀರು ಆಕಾಶದಿಂದ ಭೋರ್ಗರೆವ ಮಳೆಗೆರೆಯಲಿರುವುದು.

ನ್ಯಾಯಾಧೀಶ ಬಾದಶಾಹ ಧರ್ಮಪಾಲಕರ ಆಜ್ಞೆಯಂತೆ ಜಮಾದಿಲ್ ಅವ್ವಲ್ ತಿಂಗಳ ಒಂದನೆಯ ದಿನಾಂಕದಂದು ಆಸ್ಥಾನದ ಮಂತ್ರಿಮಡಳದಲ್ಲೊಬ್ಬರಾದ ನವಾಬ್ ನಾಮ್‌ದಾರ್(ಮುಸ್ತಫಾ) ಖಾನ್‌ರವರು ನಕ್ಷತ್ರಗಳಂತೆ ಬೆಳಗುವ ಸೈನಿಕರ ತಂಡವನ್ನು ಪವಿತ್ರ ಮುಹಮ್ಮದ್‌ಪುರದ(ಬಿಜಾಪುರದ) ನಾಲ್ಕೂ ದಿಕ್ಕಿನಲ್ಲಿ ಕವಾಯತು ಮಾಡಿಸಿದರು. ಝಿಲ್ಲೆ ಇಲಾಹಿ(ಸೃಷ್ಟಿಕರ್ತನ ನೆರಳಾದ)ಬಾದಶಾಹರ ವೈಭವದಿಂದ ಮತ್ತು ಕೃಪೆಯಿಂದ ಮುಹಮ್ಮದ್‌ಪುರ ಅತ್ಯಂತ ಹೆಸರುವಾಸಿಯಾಯಿತು. ಹಜ್ರತ್

ಶೂರ ಬಾದಶಾಹರು, ತನ್ನ ದಂಡನಾಯಕ ನವಾಬ್ ಸಾಹೇಬರಿಗೆ ಮಾರ್ಗದರ್ಶನ ನೀಡಲಿಕ್ಕಾಗಿ ಕಾಲಾಚಬೂತರ್(ಕಪ್ಪು ಪೀಠ) ಮೈದಾನದಲ್ಲಿ ರಾಜವೈಭವದ ರಂಗಭೂಮಿಯನ್ನು ಸಜ್ಜುಗೊಳಿಸಿದರು. ಆ ಪೀಠದಲ್ಲಿ ಕೂತು ತನ್ನ ಸೈನ್ಯಕ್ಕೆ ತರಬೇತಿ ಮತ್ತು ಮಾರ್ಗದರ್ಶನವನ್ನು ನೀಡಿದರು. ಈ ಕಾಲಾ ಚಬೂತರಾ ಎಂಬ ಪೀಠ ಅತ್ಯಂತ ಎತ್ತರದ ದೊಡ್ಡ ವೈಭವದ ವೇದಿಕೆಯಾಗಿದ್ದು, ಇದು ಒಂಭತ್ತನೆಯ ಆಕಾಶದಿಂದ ಭೂಮಿಯ ಏಳು ಲೋಕದ ಪದರಗಳೊಳಗೆ ಸಂದೇಶವನ್ನು ನೀಡುವಂತೆ ಅನಿಸುವ ನಿಗೂಢ ವೈಭವದ ಪೀಠವೆಂಬಂತೆ ಕಾಣಿಸುತ್ತಿತ್ತು. ಇಲ್ಲಿನ ಸಭೆಯಲ್ಲಿ ಸೈನ್ಯದ ನಡಾವಳಿಯ ಬಗೆಗೆ ನೀಡುವ ಮಾರ್ಗದರ್ಶನದಲ್ಲಿ ಮೊದಲಿಗೆ ಆನೆಗಳ ಮೇಲೆ ಸವಾರಿ ಸೈನಿಕರ ದಂಡು ರಣರಂಗದಲ್ಲಿ ಹೇಗೆ ಯಾವದಿಕ್ಕಿನಲ್ಲಿ ನಡೆಸಬೇಕು, ಕಾಲಾಳು ಸೈನ್ಯವನ್ನು ಯಾವ ದಿಕ್ಕಿನಲ್ಲಿ ಮುನ್ನುಗ್ಗಿಸಬೇಕು ಎಂಬುದನ್ನು ನಿರ್ಧರಿಸಿ ಆದಿಲ್ ಶಾಹಿ ಸುಲ್ತಾನರ ಯುದ್ಧ ಕೌಶಲ್ಯದ ಪರಂಪರೆಯಲ್ಲಿ ಪಾಲಿಸುತ್ತ ಬಂದಿರುವ ಯುದ್ಧನೀತಿಯ ವಿಶೇಷ ನೈಪುಣ್ಯತೆಯ ನಿಯಮಗಳನ್ನು ತಿಳಿಸಿದರು. ತಮ್ಮ ಆದಿಲ್ ಶಾಹಿ ಆಳ್ವಿಕೆಯ ಕುರುಹಾದ ಧ್ವಜವನ್ನು ಎತ್ತರಕ್ಕೆ ಹಾರಿಸಿದರು. ಬಾದಶಾಹರು ಆಗಮಿಸಿದ ಪುಣ್ಯದಿಂದ ಸೇನಾದಂಡನಾಯಕ ನವಾಬ್ ಮುಸ್ತಫಾರ ಪರಿಚಯ ಸೈನ್ಯದ ಎಲ್ಲ ಸರದಾರರಿಗೂ ಸರಿಯಾಗಿ ಆಯಿತು. ಬಾದಶಾಹರು ಮತ್ತೆ ಎಲ್ಲರಿಗೂ ತನ್ನ ಮಾರ್ಗದರ್ಶನ ಮತ್ತು ಸಲಹೆಗಳಿಂದ ಅವರ ಕಿವಿಗಳಲ್ಲಿ ಅಮೂಲ್ಯವಾದ ಮುತ್ತುಗಳು ತುಂಬುವಂತೆ ಮಾಡಿದರು. ಇದೇ ತಿಂಗಳ ಎರಡನೇ ದಿನ ಬಾದಶಾಹರು ಅಲ್ಲಿಂದ ಹಿಂದಕ್ಕೆ ಹೊರಟರು. ತಮ್ಮ ಸೈನ್ಯದೊಂದಿಗೆ 'ಮುಹೀತ್' ಎಂದು ಕರೆಯಲಾಗುವ ಕೃಷ್ಣಾ ನದೀ ತೀರದಲ್ಲಿ ಬಾದಶಾಹರ ಪರಿವಾರ ಬೀಡುಬಿಟ್ಟಿತು. ಅಲ್ಲಿ ನಾಲ್ಕು ದಿನಗಳಕಾಲ ತಂಗಿ ಅದೇ ತಿಂಗಳ ಐದನೆಯ ದಿನಾಂಕದಂದು ಮುಹಮ್ಮದಪುರಕ್ಕೆ ಹಿಂತಿರುಗುವ ತಯಾರಿ ಮಾಡತೊಡಗಿದರು. ಅದೇ ದಿನ ದಂಡನಾಯಕ ನವಾಬ್ ಮುಸ್ತಫಾರಿಗೆ ತನ್ನ ರಾಜವೈಭವದ ಪದವಿಯನ್ನು ರಾಜದರ್ಬಾರಿನಲ್ಲಿ ನೀಡುವ ಮೂಲಕ ಬಾದಶಾಹರು ತಮ್ಮ ಕೃಪಾಕಟಾಕ್ಷವನ್ನು ಬೀರಿದರು. ನಂತರ ಪರ್ವತವನ್ನು ಪುಡಿಗಟ್ಟುವ ಸಾಮರ್ಥ್ಯವುಳ್ಳ ಬಲಶಾಲಿ ಆನೆಯನ್ನು, ಇನ್ನೊಂದು ನದಿ ನೀರನ್ನು ಲೀಲಾಜಾಲವಾಗಿ ದಾಟಬಲ್ಲ ಬಹುಸಾಮರ್ಥ್ಯದ ಆನೆಯನ್ನು, ಒಟ್ಟು ಎರಡು ಆನೆಗಳನ್ನು ಅವರಿಗೆ ತನ್ನ ಪಾಲಿನ ಕೊಡುಗೆಯಾಗಿ ನೀಡಿದರು. ಮತ್ತೆ ಚಿನ್ನ, ಹವಳ, ಮಾಣಿಕ್ಯ ಮುಂತಾದ ಬೆಲೆಬಾಳುವ ಕಲ್ಲುಗಳಿಂದ ಅಲಂಕೃತ ಲಗಾಮಿನ ಕುದುರೆಯೊಂದನ್ನು ಉಡುಗೊರೆಯಾಗಿ ನೀಡಿ ಜೊತೆಗೆ ಮುತ್ತು ಮಾಣಿಕ್ಯಗಳಿಂದ ಅಲಂಕರಿಸಲ್ಪಟ್ಟ ಒಂದು ಕತ್ತಿಯನ್ನು ಕಾಣಿಕೆಯಾಗಿ ನೀಡಿದರು. ಹೀಗೆ ತನ್ನ ಈ ದಂಡನಾಯಕನಿಗೆ ಇವೆಲ್ಲವನ್ನೂ ಅರ್ಪಿಸಿ ತನ್ನ ಪರಿವಾರ ಮತ್ತು ಸೈನ್ಯದೊಂದಿಗೆ ಕೃಷ್ಣಾ ನದಿಯನ್ನು ದಾಟಿ ತನ್ನ ರಾಜಧಾನಿಯ ಪಯಣವನ್ನು ಮುಂದುವರಿಸಿದರು.

ನಜಮ್(ದ್ವಿಪದಿ)

ಝೆ ಲುತ್ಫೆ ಶೆಹನ್‌ಶಾಹೆ ಗರ್ದೂ ಸರೀರ್
ಕೆ ಶಂಶೀರೆ ವೂ ದಶ್ತ ಆಫಾಕ್ ಗೀರ್
ಬಾದಶಾಹರ ಕೃಪೆಯಿಂದ ಆಕಾಶ ಸಿಂಹಾಸನವಾಗಿದೆ
ಯಾಕೆಂದರೆ ಅವರ ತಲವಾರು ವಿಶ್ವವಿಜೇತವಾಗಿದೆ

ಚ್ಯೂಂ ನವಾಬ್‌ವಾಲ ಗೊಹರ್ ಕಾಮ್‌ಯಾಫ್ತ್
ಬ ತಸ್ಲೀಮೆ ವೂ ಹರ್ ದೊ ಆಲಂ ಶತಾಫ್ತ್
ನವಾಬ್ ಸಾಹೇಬರ ಆಕಾಂಕ್ಷೆಗಳು ಪೂರೈಸಿದಾಗ
ಕರ್ತವ್ಯಗಳು ನೆರವೇರಿಸಲಾಗಿ ವಿಶ್ವಗಳೆರಡೂ ಚಲಿಸಲು ತೊಡಗಿದವು

ಫಲಕ್ ದರ್ ರಕಾಬಶ್ ಬಸರ್ ಶುದ್ಧ್ ರವಾಂ
ಸರಾನೆ ಸಿಪಾಹ್ ಜುಮ್ಲಾ ಅಝ್ ಸರ್‌ದರಾಂ
ಆಕಾಶ ಅವರ ಮಿದುಳಿನ ಶಕ್ತಿಯಿಂದ ನಡೆಯತೊಡಗಿತು
ಉಳಿದೆಲ್ಲ ಸಿಪಾಯಿಗಳ ಸರದಾರರ ತಂಡವೂ ಅಲ್ಲಿಂದ ಚಲಿಸತೊಗಿತು

ಅಬ್ಯಾತ್(ಎರಡು ಬೈತ್ ಪದ್ಯಗಳು)
ದಿಲೇರಾನ್ ಜಾಂಬಾಝ್ ಫೈರೋಝ್ ಜಂಗ್
ಗುಜಿಸ್ತಂದ್ ಅಝ್‌ಆಬ್ ಹಂ ಚ್ಯೂಂ ನಹಂಗ್
ಜೀವದ ಹಂಗುತೊರೆದು ಹೋರಾಡುವ ಶೂರರು ಯುದ್ಧಕಹಳೆ ಊದಿದರು
ಮೊಸಳೆಗಳಂತೆ ನದಿಯಲ್ಲಿ ಈಜಿ ವೇಗದಲ್ಲಿ ದಾಟಿದರು.

ಜೆಝುಂದ್ ಆಂಚೆ ಗರ್ಮ್ ಖುದ್‌ರಾ ದರ್ ಆಬ್
ಕೆ ಶುದ್ ಅಝ್‌ಗರೇ ಆತಿಶೀಂ ಹರ್ ಹುಬಾಬ್
ತಮ್ಮ ದೇಹಗಳನ್ನು ನದಿಯಲ್ಲಿ ಹೇಗೆ ಬಿಸಿಯಾಗಿಟ್ಟು ಕೊಂಡರೆಂದರೆ
ನೀರಿನ ಗುಳ್ಳೆಯೊಳಗೆ ಧಗಧಗಿಸುತ್ತಿರುವ ಬೆಂಕಿಯನ್ನು ಇಟ್ಟುಕೊಂಡಂತೆ!

ವಿಜಯಶಾಲಿ ಸೈನ್ಯ ನದಿಯನ್ನು ದಾಟಿ ತನ್ನ ಪಯಣ ಮುಂದುವರಿಸಿತು. ಕುದುರೆಗಳ ಗುಂಪಿನ ಓಟದಿಂದ ಮೂಡಿದ ಕಾಲಿನ ಲಾಳದ ಖರಕಟ ಸಪ್ಪಳವು ಭೂಮಿಯನ್ನು ನಡುಗಿಸಿತು. ಈ ಸಪ್ಪಳವು ಸೈನ್ಯದ ಕವಾಯತಿನ ಸದ್ದಿನೊಂದಿಗೆ ಸೇರಿ ಹುಟ್ಟಿದ ಗದ್ದಲ ಅಲ್ಲಿ ವಾಸಿಸಿದ್ದ ಎಲ್ಲ ಜನರ ಕಿವಿಗಳಿಗೂ ತಲಪಿತು. ನವಾಬ್ ಸಾಹೇಬರು ತಮ್ಮ ಸವಾರರೊಂದಿಗೆ, ನೌಕರರು, ಚಾಕರರೊಂದಿಗೆ ಮತ್ತು ದೊಡ್ಡದೊಡ್ಡ ಶ್ರೀಮಂತರು, ಆಸ್ಥಾನದ ಮಂತ್ರಿಗಳು ಸೇರಿದ್ದ ದೊಡ್ಡ ತಂಡದೊಂದಿಗೆ ಪಯಣ ಬೆಳೆಸಿತ್ತು. ಅದರಲ್ಲಿ ಫರ್ಹಾದ್ ಖಾನ್‌ನಂತಹ ರುಸ್ತುಂ ಎ ಜಮಾನಾ (ಈ ಕಾಲದ

ಹೆಸರುವಾಸಿ ಕುಸ್ತಿಪಟು) ಕೂಡ ಇವರ ಜೊತೆಯಲ್ಲಿ ಮುಂದಿನ ಸಾಲಿನಲ್ಲಿದ್ದ. ಬಾಕರ್ ಕುಂಡಾದ ಬಳಿಗೆ ಈ ಸೈನ್ಯದ ಸವಾರಿ ತಲಪಿತು. ಇಲ್ಲಿ ಬೇಹುಗಾರರು ನೀಡಿದ ಸುದ್ದಿಯಂತೆ ಈ ಇಲಾಖೆಯ ಕೊಳದ ಬಳಿ ಮುಕ್ತಿ ಎಂಬ ಒಂದು ಕೋಟೆ ಇದೆ. ಇಲ್ಲಿ ದರೋಡೆಕೋರರ ಗುಂಪೊಂದು ನೆಲೆಸಿದೆ. ದಾರಿಹೋಕರು ಬರುವುದನ್ನು ಕಾಯುತ್ತ ಆಯುಧಗಳ ನಿಶಾನೆಯಿಟ್ಟು ಈ ದರೋಡೆಕೋರರು ನಿಂತು ಕಾಯುತ್ತಿದ್ದರು. ಮವಾಲಿಗಿರಿ ಮಾಡುತ್ತ, ಹಿಂಸೆ ಮಾಡಿ ಹೆದರಿಸಿ ಬೆದರಿಸುತ್ತ ಜನರನ್ನು ಲೂಟಿ ಮಾಡುತ್ತಿದ್ದರು, ಮಹಿಳೆಯರನ್ನು ಚುಡಾಯಿಸಿ ಹಿಂಸಿಸಿ ಅವರ ಆಭರಣಗಳನ್ನು ಕಸಿಯುತ್ತಿದ್ದರು, ಪ್ರಯಾಣಿಕರನ್ನು ಎತ್ತಿಕೊಂಡು ಹೋಗುತ್ತಿದ್ದರು. ಕೋಟೆಯ ಹತ್ತಿರದಲ್ಲಿ ವಾಸಿಸುತ್ತಿರುವ ಹೆಂಗಸರು ಮಕ್ಕಳನ್ನು ಹೊಡೆದು ಬಡಿದು ಹಾಕುತ್ತಿದ್ದರು. ಅವರು ಹೊತ್ತುಕೊಂಡು ಹೋದವರನ್ನು ಜೀವಸಹಿತ ಬಿಡುತ್ತಿರಲಿಲ್ಲ. ಈ ಪರಿಸ್ಥಿಯನ್ನು ತಿಳಿದ ನವಾಬ್ ಸಾಹೇಬರು ಈ ದರೋಡೆಕೋರರ ತಂಡಕ್ಕೆ ತಕ್ಕ ಪಾಠ ಕಲಿಸುವ ಪ್ರತಿಜ್ಞೆ ಮಾಡಿಕೊಂಡರು. ಇದಕ್ಕಾಗಿ ಎರಡುದಿನ ಅಲ್ಲಿ ತಂಗಿ, ಕೆಲವು ಶೂರ ಸೈನಿಕರನ್ನು ಕರೆದುಕೊಂಡು ದರೋಡೆಕೋರರ ನೆಲೆಗೆ ನುಗ್ಗಿ ನಾಲ್ಕು ದಿಕ್ಕಿನಲ್ಲೂ ಕೋಟೆಗೆ ದಿಗ್ಬಂಧನ ಹೂಡಿದರು. ಕೋಟೆಯ ಗೋಡೆಯ ಮೇಲೆ ನೆಟ್ಟ ಗಾಜಿನ ತುಂಡುಗಳು ಫಲಪಲನೆ ಹೊಳೆಯುತ್ತಿದ್ದವು. ಬೆರಳಿನಿಂದ ಉಂಗುರವನ್ನು ಕಳಚುವಂತೆ ಸಲೀಸಾಗಿ ಗಾಜಿನ ತುಂಡುಗಳನ್ನು ಸೈನಿಕರು ಗೋಡೆಯಿಂದ ಕಿತ್ತು ತೆಗೆದರು. ಈ ಕೋಟೆಯ ಬಲಿಷ್ಠವಾದ ಬುರುಜಿನ ಮೇಲೆ ಬರ್ಚಿಗಳನ್ನು ನೆಟ್ಟು ತನ್ನ ಅಧಿಪತ್ಯವನ್ನು ಸೈನ್ಯ ಮೆರೆಯಿತು. ಕೋಟೆಯೊಳಗಿದ್ದ ವೈರಿ ದರೋಡೆಕೋರರು ತೋಪುಗಳನ್ನು ಸೈನ್ಯದ ಮೇಲೆ ಗುರಿಯಿಟ್ಟು ಚಲಾಯಿಸತೊಡಗಿದರು. ದೊಡ್ಡ ಕಲ್ಲುತುಂಡುಗಳನ್ನು ಬಲವಾದ ಕ್ಯಾಟರ್‌ಪಿಲ್ಲರ್‌ಗಳಂತಿರುವ ಮಿಂಜನೀಖ್‌ಗಳ ಮೂಲಕ ಗುರಿಯಿಟ್ಟು ವೈರಿಗಳು ಬಾದಶಾಹರ ಸೈನಿಕರ ಮೇಲೆ ದಾಳಿ ನಡೆಸಿದರು.

ದುಷ್ಟ ದ್ವೇಷಪೂರಿತ ವೈರಿಗಳು ಬಾದಶಾಹರ ಶೂರ ಸೈನಿಕರ ಮೇಲೆ ತಮ್ಮಿಂದ ಸಾಧ್ಯವಾಗುವಷ್ಟು ಪ್ರಯತ್ನಪಟ್ಟು ಹಲ್ಲೆ ನಡೆಸಿದರು. ಆದರೆ ಶೂರರಾದ ಸೈನಿಕರು ಎಂಥಹ ವೀರಾವೇಶದಿಂದ ಮುನ್ನುಗ್ಗಿದರೆಂದರೆ ಅವರ ಮುಂದೆ ವೈರಿಗಳ ಯಾವ ಆಟವೂ ನಡೆಯದಂತಾಯಿತು. ನಮ್ಮ ಸೈನಿಕರ ಶೌರ್ಯದ ಎದುರು ಕಾಡು ಮತ್ತು ಪರ್ವತ, ಬಂಡೆಗಳು ಕೂಡ ಶರಣಾಗತವಾಗುವಾಗ ಈ ದರೋಡೆಕೋರರ ಗುಂಪು ಯಾವ ಲೆಕ್ಕದ್ದು?

ಬೈತ್

ಹುಜೂಮೆ ಮೋರ್ಚಯೆ ರರೂಯೆ ಝುಮೀನ್ ಅದರ್ ಗೀರದ್
ತಫಾವುತೇ ನಕುನದ್ ಲಷ್ಕರೆ ಸುಲೇಮಾನ್ ರ

ನಮ್ಮ ಸೈನಿಕರ ತಂಡವು ಪೂರಾ ಭೂಮಿಯನ್ನು ಸುತ್ತುಗಟ್ಟುವರು
ಸುಲೇಮಾನರ ಅಗಾಧ ಸಂಖ್ಯೆಯ ಸೈನಿಕರ ಪಡೆಯಂತೆಯೇ ಬಲಿಷ್ಠರು.

ಈ ವೈರಿಗಳು ಮದ್ಯಾಹ್ನದಿಂದ ರಾತ್ರಿ ತನಕ ಯುದ್ಧ ಮುಂದುವರಿಸುವ ಪ್ರಯತ್ನ ಮಾಡಿದರು. ವೈರಿ ಪಾಳ್ಯದ ಬಹಳಷ್ಟು ಜನ ಸೈನಿಕರ ತಲವಾರಿನ ಧಾರೆಗೆ ಬಲಿಯಾಗಿ ಸಾವಿನ ತೆಕ್ಕೆಯೊಳಗೆ ಸೇರಿದರು. ಬಾದಶಾಹರ ಸೈನಿಕರಲ್ಲೂ ಕೆಲವು ವೀರ ಯೋಧರು ಹುತಾತ್ಮರಾಗಿ ಸ್ವರ್ಗವಾಸಿಗಳಾದರು.

ಶೇರ್

ಜವಾಂ ಮರ್ದಾನ್ ಶಹಾದತ್ ಬರ್ ಗುಝೀದನ್
ಝ ಜಾನ್ ಬಾಝಿ ಬಕಾಮೆ ದಿಲ್ ರಶೀದಂದ್
ಯುವ ಸೈನಿಕರು ವೀರಮರಣವನ್ನು ಬಯಸಿ ಅರಸಿದವರು
ತಮ್ಮ ಶೌರ್ಯ ಪ್ರದರ್ಶನದ ಮೂಲಕ ಮನದಾಸೆಯನ್ನು ಈಡೇರಿಸಿಕೊಂಡರು.

ಕೊನೆಗೆ ಸೋತು ಹಿಮ್ಮೆಟ್ಟಿದ ವೈರಿಗಳಲ್ಲಿ ಒಂದು ಗುಂಪು ಉಳಿದಿತ್ತು. ನಮ್ಮ ಸೈನಿಕರ ತಲವಾರಿನ ಧಾರೆಯ ಭಯದಿಂದ ಅಲ್ಲಿನ ನದಿಯ ನೀರಿಗೆ ಹಾರಿದರು, ಅವರಲ್ಲಿ ಕೆಲವರು ನೀರಿನಲ್ಲಿ ಮುಳುಗಿ ಸತ್ತರು, ಉಳಿದವರು ಕಂಬಿಕಿತ್ತರು.

ಬೈತ್

ಸಿಪಾಹೆ ಖುಸ್ರವೋ ಗಾಝಿ ಅಗರ್ ರದ್ ಸೂಯೆ ಚರ್ಖ್ ಆರದ್
ಬಯಾರದ್ ಹಮ್‌ಲ ಗರ್ದಂದ್ ರ ಚ್ಯೂಂ ಗರ್ದ್ ಅಝ್‌ಜಾಯೇ ಬುರ್ದಾರದ್
ಖುಸ್ರೊ ಗಾಝಿಯವರ ಸೈನ್ಯದ ದಾಳಿಯ ಗುರಿ ಆಕಾಶದತ್ತ ಮಾಡಿಹುದು
ಎಂತಹ ದಾಳಿ ಮಾಡುವರೆಂದರೆ ಆಕಾಶ ತುಂಬ ಹೊಗೆ ಮುಸುಕುವುದು.

ಸೈನಿಕರ ಪರಾಕ್ರಮದ ಎದುರು ವೈರಿಗಳು ನಿಲ್ಲಲಾಗದೆ ಕೋಟೆಯನ್ನು ಖಾಲಿಮಾಡಿ ಭಯದಿಂದ ಓಡಿಹೋದರು. ದಂಡನಾಯಕ ನವಾಬ್ ಸಾಹೇಬರು ಆ ಸ್ಥಳದಲ್ಲಿ ಠಿಕಾಣಿ ಹೂಡಿ, ಅಲ್ಲಿನ ಕೋಟೆಯನ್ನು ಮತ್ತೆ ಗಟ್ಟಿಯಾಗಿಸಿದರು. ಅಲ್ಲಿಗೆ ಅವಶ್ಯಕವಾಗಿರುವ ಸಾಮಾನು ಸರಂಜಾಮುಗಳನ್ನು ತರಿಸುವ ವ್ಯವಸ್ಥೆಯನ್ನು ಮಾಡಿದರು. ಮರುದಿನ ಅಲ್ಲಿಂದ ಹೊರಟು ಕರ್ನಾಟಕ ರಾಜ್ಯದ ಗಡಿಯ ಕಡೆಗೆ ಪ್ರಯಾಣ ಬೆಳೆಸಿದರು.

ನಜ್ಮ್

ರಂವಾಗಸ್ತ್ ನವಾಬ್ ಗರ್ದೂಜನಾಬ್
ಝುಫರ್ ಹಂ ಇನಾ ನುಸ್ರತ್ ಅಂದರ್ ರಿಕಾಬ್

ನವಾಬ್ ಸಾಹೇಬರ ವೈಭವವು ಆಕಾಶದತ್ತ ಏರಿತು
ವಿಜಯವು ಲಗಾಮು ಹಿಡಿದು ಸಾಗಿ ಆಕಾಶದೆತ್ತರಕೆ ಹಾರಿತು

ಸೆಪೆಹರ್ ಅಸ್ಪಯೆ ರೌನಕೆ ಕಾರ್ಖಿಶ್
ಝಿ ಜೌದಾ ಕಮರ್ ಟರ್ಕಶ್ ಆವರ್ದ್ ಪೇಶ್
ತಮ್ಮ ಕಾ;ರ್ಯದ ವೈಖರಿಯಿಂದ ಎತ್ತರದ ಗುರಿ ತಲಪಿದರು
ಮೂರನೆಯ ಆಕಾಶದ ಜೌಝಾ* ಕಕ್ಷೆಯಿಂದ ಚೂಪಾದ ಬಾಣ ಬಿಟ್ಟವರು.

***ಆಕಾಶದಲ್ಲಿ ಒಂದು ಗ್ರಹ ಸುತ್ತುವ ಕಕ್ಷೆ**

ಖಿರದ್ ಗಶ್ತ್ ಜೀರಾನ್ ಆಂ ಕದ್‌ರೋ ಶಾನ್
ಕೆ ನಾಝುತ್ ಬವೂ ದೌಲತೇ ಜಾವಿದಾಂ
ಬುದ್ಧಿಶಕ್ತಿಯು ಘನತೆ ಗೌರವವನ್ನು ತನ್ನ ನೆರೆಹೊರೆಯನ್ನಾಗಿಸಿತು
ಇದರೊಂದಿಗೆ ಸಿರಿಸಂಪತ್ತು ಗರಿಕೆದರಿ ಕುಣಿಯತೊಡಗಿತು.

ಎಲ್ಲ ವ್ಯವಸ್ಥೆಗಳನ್ನು ಮಾಡಿದ ನಂತರ ತಮ್ಮ ಶಕ್ತಿಶಾಲಿ ಸೈನ್ಯ ಮತ್ತು ಕೆಲವು ಆಯ್ದ ಮುಖ್ಯ ಪರಿವಾರದ ಪ್ರಮುಖರೊಂದಿಗೆ ಗದಗದ ಬಳಿಯ ಲಕ್ಕೀರ್‌ಗೆ ಸಮೀಪಿಸಿದರು. ಅಲ್ಲಿನ ಫಲವತ್ತಾದ ಸುಂದರ ಭೂಮಿ ಮತ್ತು ಅಲ್ಲಿನ ಸರದಾರರ ಆತ್ಮೀಯ ಸ್ವಾಗತದಿಂದ ಸೇನಾದಂಡನಾಯಕ ನವಾಬ್ ಸಾಹೇಬರು ಮತ್ತು ಸಂಗಡಿಗರು ಸಂತಸಗೊಂಡರು. ಅಲ್ಲಿನ ಪ್ರಮುಖ ಗೌರವಾನ್ವಿತ ಹಿರಿಯರನ್ನು ಭೇಟಿಯಾದರು. ಅಲ್ಲಿಂದ ಪಯಣ ಮುಂದುವರಿಸಿ ನದಿಯ ತಟದಲ್ಲಿ ಇಳಿದು ಸ್ವಲ್ಪಕಾಲ ತಂಗಿದರು. ಇಲ್ಲಿನ ಜನರ ನಾಯಕನೊಬ್ಬ ಬಹಳ ಕ್ರೂರಿಯಾಗಿದ್ದು ಬಹಳ ಕಾಲದಿಂದ ಸಾಮಾನ್ಯರ ಮೇಲೆ ಸತತವಾಗಿ ದೌರ್ಜನ್ಯ ನಡೆಸಸುತ್ತಿದ್ದ. ಈ ಜನರ ನಾಯಕ ರುಸ್ತುಮೇ ಝುಮಾನಾನ ಕೆಟ್ಟ ವರ್ತನೆ, ಗೂಂಡಾಗಿರಿ, ದೌರ್ಜನ್ಯದ ವರ್ತಮಾನ ಬಾದಶಾಹರಿಗೆ ಅವರ ಅತ್ಯಂತ ನಿಕಟವರ್ತಿಯೊಬ್ಬರ ಮೂಲಕ ದರ್ಬಾರಿಗೂ ತಲಪಿತ್ತು. ಈ ಸುಖಸಂಭ್ರಮದ ಕಾಲಘಟ್ಟದಲ್ಲಿ ಸಂಘರ್ಷದ ಅನಾವಶ್ಯಕ ವಾತಾವರಣದ ಸುದ್ದಿ ಸುಲ್ತಾನರ ದರ್ಬಾರಿಗೆ ತಲಪಿ ಬಾದಶಾಹ ಈ ಕುತಂತ್ರ ಮಾಡುವ, ದ್ವೇಷವನ್ನು ಹಬ್ಬುತ್ತಿರುವ ಜನರನ್ನು ಸರಿದಾರಿಗೆ ತರಲು ತನ್ನ ಆಸ್ಥಾನದ ಪ್ರಮುಖರನ್ನು ಕಳುಹಿಸಿದರು. ಈರೀತಿ ಕುತಂತ್ರ, ಹಿಂಸೆ ಮಾಡುವ ಇವರ ಜಾಡನ್ನು ಹಿಡಿದು ಸಮಸ್ಯೆಯನ್ನು ನಿವಾರಿಸುವುದಕ್ಕೆ ಬಾದಶಾಹರು ತುಂಬ ಸಲ ಪ್ರಯತ್ನ ಮಾಡಿದ್ದರು. ಆದರೆ ಈ ಪ್ರಯತ್ನಗಳೆಲ್ಲವೂ ಫಲಪ್ರದವಾಗಿರಲಿಲ್ಲ. ಈ ಸಮಸ್ಯೆಯನ್ನು ಮಾತುಕತೆಯ ಮೂಲಕ ಮತ್ತು ಬಲಪ್ರಯೋಗಿಸುವ, ಹುಸಿಭಯ ಹುಟ್ಟಿಸುವ ಮೂಲಕ ಪರಿಹಾರ ಕಂಡುಕೊಳ್ಳುವ ನವಾಬ್ ಸಾಹೇಬರ ಪ್ರಯತ್ನಗಳು ಸಫಲವಾಗದೆ ಹೋಯಿತು. ರುಸ್ತುಮೆ ಝುಮಾನಾ ಎಂಬ ಈ ಜನರ ನಾಯಕ ಯಾರ ಮಾತನ್ನು ಕೂಡ ಕೇಳುವ ಸ್ಥಿತಿಯಲ್ಲಿರಲಿಲ್ಲ.

ತಾನು ಸಾವನ್ನಾದರೂ ಒಪ್ಪಿಕೊಳ್ಳುವೆನೇ ಹೊರತು ನಿಮ್ಮ ವಶಕ್ಕೆ ಬರಲಾರೆನೆನ್ನುವಷ್ಟು ಹಟಮಾರಿಯಾಗಿದ್ದ.

ರುಬಾಯಿ

ಅಸ್ಲ್ ದೌಲತ್ ಚುನೀದನೇ ಪಂದ್ ಅಸ್ತ್
ಪಂದ್ ನಶ್ನೂ ಹಮೇಶಾ ದರ್ ಬಂದ್ ಅಸ್ತ್
ಸಲಹೆಯನ್ನು ಕೇಳಿ ಪಾಲಿಸುವುದು ನಿಜ ಶ್ರೀಮಂತಿಕೆಯಾಗಿದೆ,
ಕೇಳದವನಿಗೆ ಭಾಗ್ಯದ ಬಾಗಿಲು ಮುಚ್ಚಿರುತ್ತದೆ.

ಹರ್ ಕೆ ಅಝ್‌ರಾಸ್ತಿ ಇನಾನ್ ಬರ್‌ತಾಫ್ತ್
ಕುರ್‌ದಯೇ ಖುದ್ ಝ ಚರ್ಖ್ ಕಜರೂ ಬಾಫ್ತ್
ಸತ್ಯದ ಲಗಾಮು ಹಿಡಿದವನು ಯಾರೇ ಆದರೂ ಅವನು
ತನ್ನ ಗುರಿಯನ್ನು ಒರಟಾದ ಆಕಾಶದಲ್ಲೂ ಸಾದಿಸಬಲ್ಲನು.

ಒರಟಾದ ರುಸ್ತುಮೇ ಝುಮಾನಾ ಬಾದಶಾಹ ಮತ್ತು ನವಾಬ್ ಸಾಹೇಬರ ಬಗ್ಗೆ ಕೆಟ್ಟದಾದ ಅಭಿಪ್ರಾಯ ಹೊಂದಿದ್ದು ಅದರಿಂದ ಹೊರಬರಲು ಒಂದು ಕ್ಷಣವೂ ತಯಾರಾಗಿರಲಿಲ್ಲ.

ಬೈತ್

ಹರ್‌ಕೆ ಬಾಬದ್ ಗೆಹರಾನ್ ಯಾರ್ ಶವತ್
ದೌಲತೇ ವೂ ಹಮಾ ಅದ್‌ಬಾರ್ ಶವತ್
ಯಾರು ಕೆಟ್ಟವರ ನಿಕಟ ಸ್ನೇಹಿತನಾಗಿರುತ್ತಾನೋ
ಅವನು ತನ್ನ ಎಲ್ಲ ಸಂಪತ್ತನ್ನೂ ಕಳೆದುಕೊಳ್ಳುವನು.

ರುಸ್ತುಮೇ ಝುಮಾನಾನ ಹಿಡಿತದಲ್ಲಿರುವ ಸಮಸ್ತ ಪ್ರದೇಶದಲ್ಲಿ ಯಾರಾದರೂ ಅವನು ಮಾಡುತ್ತಿರುವ ದೌರ್ಜನ್ಯದ ಬಗ್ಗೆ ಉಸಿರೆತ್ತಿದರೆ ಸಾಕು ಅವರನ್ನು ಇಲ್ಲವಾಗಿಸಿಬಿಡುತ್ತಿದ್ದ. ಅವನ ದುಷ್ಟತನ ಹದ್ದುಮೀರಿತ್ತು. ಅವನ ಅಹಂಕಾರಕ್ಕೆ ತಕ್ಕ ಶಾಸ್ತಿಮಾಡುವ ಕಾಲ ಸಮೀಪಿಸಿತ್ತು. ಅವನನ್ನು ಅವನಿರುವ ಪ್ರದೇಶದಿಂದ ಮರ್ಯಾದೆಯಿಂದ ಕರೆತಂದು ದರ್ಬಾರಿನಲ್ಲಿ ಹಾಜರಿಪಡಿಸ ಬೇಕೆಂದೂ, ಇದಕ್ಕೆ ಒಪ್ಪದಿದ್ದರೆ ಅವನನ್ನು ಬಂಧಿಸಿ ಕರೆದು ತನ್ನಿ ಎಂದೂ ತನ್ನ ಸರದಾರರಿಗೆ ಬಾದಶಾಹ ಆಜ್ಞೆಯಿತ್ತರು. ಈ ಕಾರ್ಯಕ್ಕಾಗಿ ತನ್ನ ಸರದಾರರಿಗೆ ಕೆಲವು ದಿನಗಳ ಗಡುವನ್ನೂ ನೀಡಿದರು. ಈ ಆಜ್ಞೆಯಂತೆ ರುಸ್ತುಮೇ ಝುಮಾನ ಅಡಗಿರುವ ನೈಹಳ್ಳಿಗೆ ಸರದಾರರು ಪಯಣ ಬೆಳೆಸಿದರು. ಅಲ್ಲಿ ನೋಡಿದರೆ ರುಸ್ತುಮೇ ಝುಮಾನಾನ ಪ್ರತಿರೂಪದಂತಿರುವ ಅವನ ಸಹಚರರು ಕೆಲವರು ಎದುರಾದರು. ಇವರು ಕೂಡ ಅವನಂತೆಯೇ

ಕ್ರೂರರೂಪಿಗಳಾಗಿದ್ದರು. ಈ ಪರಿಸ್ಥಿತಿಯಲ್ಲಿ ನಿಜವಾದ ರುಸ್ತುಮ ಯಾರೆಂಬ ಬಗ್ಗೆ ಅನುಮಾನ ಮೂಡಿತು. ಗಲಿಬಿಲಿಗೊಂಡ ಬಾದಶಾಹರ ದೂತರು ಹಿಂತಿರುಗಿಬಂದರು. ನವಾಬ್ ಸಾಹೇಬರು ತುಂಬ ಜಾಗರೂಕತೆ ಮತ್ತು ಬುದ್ಧಿವಂತಿಕೆಯಿಂದ ಬಾದಶಾಹರ ಪರವಾಗಿ ಏಕಾಂಗಿಯಾಗಿ ಅವನನ್ನು ಭೇಟಿಮಾಡಲು ಹೋದರು. ಅವನ ಠಿಕಾಣಿಯ ಬಳಿ ಬಂದು ಅವನಿಗೆ ಬುದ್ಧಿಯ ಮಾತುಗಳನ್ನು ಹೇಳಿ ಒಪ್ಪಿಸಲು ಪ್ರಯತ್ನಿಸಿದರು. ವ್ಯರ್ಥ ಕಾಲ ಹರಣ ಮಾಡದೆ ಶರಣಾಗತನಾದರೆ ಅವನಿಗೆ ಒಳಿತಿದೆ ಎಂದು ಉಪದೇಶಿಸಿದರು. ಒಪ್ಪದಿದ್ದರೆ ಮುಂದೆ ಎದುರಿಸಬೇಕಾಗಿಬರುವ ಅನಾಹುತಗಳ ಬಗ್ಗೆ ಎಚ್ಚರ ನೀಡಿದರು. ಅವನಿಗೆ ಸೇರಿದ ಸಾಮಾನು ಸರಂಜಾಮುಗಳು, ಆನೆ, ಕದುರೆಗಳು, ಸಂಪತ್ತು ಗಳನ್ನು ಸಂಪೂರ್ಣವಾಗಿ ಬಾದಶಾಹರ ಸುಪರ್ದಿನಲ್ಲಿರುವ ಸರಕಾರಿ ಖಜಾನೆಯಲ್ಲಿ ಅವನ ಹೆಸರಿನಲ್ಲಿ ಜಮಾ ಮಾಡಲಾಗುವುದು ಎಂಬ ಬಾದಶಾಹರ ಆಜ್ಞೆಯ ವಿವರಗಳನ್ನು ನೀಡಿದರು.

ಶೇರ್

> **ಅಗರ್ ಶಹೆನ್‌ಶಾಹೆ ಗಾಝಿ ಕುನದ್ ಇಶಾರಾ ಬಚರ್ಖ್**
> **ಕೆ ಆಫ್ತಾಬೆ ಜಹಾಂ ತಾಬರಾ ಬಗೀರದ್ ಬಬಂದ್**
> ವೀರ ಬಾದಶಾಹರು ಆಕಾಶಕ್ಕೆ ಆಜ್ಞೆ ನೀಡಿ ಆದೇಶಿಸಿದರೆ
> ಜಗಕೆ ಬೆಳಕು ನೀಡುವ ಸೂರ್ಯನನ್ನು ಕೂಡ ಬಂಧಿಸಿ ತರುವರು.
>
> **ಬನೀಮ್ ಚಶ್ಮ ಗಧನ್ ಅರ್ಝ್‌ಖತ್ತೆ ಮಜ್‌ರಹ್ ಸೆಪೆಹರ್**
> **ಕುಶದ್ ಚ್ಯೂಂ ಜರ್‍ರಾ ಸರ್ ಆಫ್ತಾಬ್‌ರ ಬಕಮಂದ್**
> ಬಾದಶಾಹರು ಕಣ್ಣುಮಿಟುಕಿಸುವ ಸಂಜ್ಞೆ ನಕ್ಷತ್ರಗಳ ಮಧ್ಯೆ ಗೆರೆಎಳೆದಂತೆ
> ಮಣ್ಣಿನಿಂದ ಆಕಾಶದಲಿ ಸೂರ್ಯನ ಮೇಲೆ ಮುಸುಕೆಳೆವಂತೆ.

ನವಾಬ್ ಸಾಹೇಬರ ಬೆದರಿಕೆ, ಸಮಾಧಾನಕರ ಮಾತುಕತೆಗೆ ರುಸ್ತುಂ ಎ ಝುಮಾನಾ ಒಪ್ಪಿ ಶರಣಾಗತನಾಗಿ ಕೆಟ್ಟದಾರಿಯನ್ನು ತೊರೆದು ಒಳ್ಳೆಯ ಹಾದಿಗೆ ಬರುವುದಕ್ಕೆ ತಯಾರಾದ. ನವಾಬ್ ಸಾಹೇಬರ ಸಿಫಾರಸು ಸಲಹೆ ಸೂಚನೆಯ ವಿನಂತಿಗೆ ನ್ಯಾಯಪರಿಪಾಲಕ ಹಾಗೂ ಹೃದಯವಂತನಾದ ಬಾದದಶಾಹ ರುಸ್ತುಮೆ ಝುಮಾನಾನಿಗೆ ಕ್ಷಮೆ ನೀಡಿ ಅವನು ತನ್ನ ಕೈಯೊಳಗಿಟ್ಟುಕೊಂಡಿದ್ದ ಪ್ರದೇಶವನ್ನು ಅವನಿಗೇ ಬಿಟ್ಟುಕೊಟ್ಟು ಅಲ್ಲಿನ ಜನರಿಗೆ ತೊಂದರೆಯಾಗದಂತೆ ನೋಡಿಕೊಳ್ಳುವ ಜವಾಬ್ದಾರಿಯನ್ನು ವಹಿಸಿಕೊಟ್ಟರು.

ಶೇರ್

> **ಹರ್ ಕೆ ಅರ್ಝ್ ಲುತ್ಫೆ ಖುಸ್‌ರವೋ ಗಾಝಿ**

ಯಾಫ್ತ್ ಸರ್‌ಮಾಯೆಯೇ ಸರ್‌ಫರಾಝಿ
ಬಾದಶಾಹರ ಮೆಹರಬಾನಿಯ ವರ ಪಡೆದವನು
ಗೌರವ ಶ್ರೀಮಂತಿಕೆಯ ಫಲವ ಅನುಭವಿಸುವವನು.

ನಾಮೆವೂ ದರ್ ಝಮಾನಾ ದಶ್ತ್ ಬುಲಂದ್
ಪೇಶೆ ವೂ ಚರ್ಖ್ ಸರ್ ಬಖೇಶ್ ಅಫ್‌ಗಂದ್
ಬಾದಶಾಹರ ಹೆಸರು ಮೇರು ಪರ್ವತದೆತ್ತರ ಏರಿತು
ಆಕಾಶವೂ ಅವರ ಎದುರು ತನ್ನ ತಲೆ ತಗ್ಗಿಸಿತು.

ಈ ಘಟನೆಯ ನಂತರ ರಮಜಾನ್ ತಿಂಗಳ ೩೦ನೇ ದಿನದಂದು ನವಾಬ ಸಾಹೇಬರು ಮುಂದಿನ ಪ್ರಯಾಣ ಬೆಳೆಸಿದರು. ಮುಂದೆ ಈ ಪ್ರದೇಶದಲ್ಲಿ ಖಾನ್ ಝುಫರ್‌ನೊಂದಿಗೆ ಭೇಟಿಯಾಯಿತು. ಇವನು ಕೂಡ ಆ ಕಾಲದ ಕ್ರೂರಿಯೆನಿಸಿರುವ ವ್ಯಕ್ತಿಯಾಗಿದ್ದ. ಬಾದಶಾಹರ ಆಜ್ಞೆಯನ್ನು ಪಾಲಿಸುವ ಮೂಲಕ, ಶಾಹಜಿ ರಾಜಾ ಕರ್ನಾಟಕದ ಗಡಿಯ ರಕ್ಷಣೆಗಾಗಿ ಪ್ರಯಾಣ ಬೆಳೆಸಿ ಅಲ್ಲಿಗೆ ತಲಪಿದ್ದರು. ಇದೇ ರೀತಿ ಮಲ್ನಾಡಿನ ಪ್ರದೇಶದ ಜಮೀನ್ದಾರ ನಾಯಕರೊಬ್ಬರ ಸುಪುತ್ರ ರಮಜಾನಿನ ೪ನೇ ದಿನಾಂಕದಂದು ನವಾಬರ ಕೈಕೆಳಗಿನ ನೌಕರಿಗೆ ಸೇರಿಕೊಂಡ. ಕರ್ನಾಟಕದ ರಕ್ಷಣೆಗಾಗಿ ೧೦೦೦ ಕದುರೆ ಸವಾರರು ಮತ್ತು ೨೦೦೦ ಕಾಲಾಳುಗಳು ನವಾಬ್ ಸಾಹೇಬರ ಸೈನ್ಯದೊಂದಿಗೆ ಸೇರಿಸಲಾಯಿತು. ಸ್ವತಹ ಆಯುಧವನ್ನು ಹಿಡಿದು ಶ್ರೀರಂಗಪಟ್ಟಣದ ರಾಜನನ್ನು ಎದುರಿಸುವುದಕ್ಕಾಗಿ ೩೦೦೦ ಸೈನಿಕರು ಮತ್ತು ೨೦೦೦ಕುದುರೆ ಸವಾರರೊಂದಿಗೆ ನವಾಬ್ ಸಾಹೇಬರು ಅಲ್ಲಿಗೆ ತಲಪಿದರು. ಎರಡನೆಯ ಹಂತದಲ್ಲಿ ಹರಹನನ ಹಳ್ಳಿಯ ರಾಜ ದಾದು ನಾಯಕನನ್ನು ಎದುರಿಸಲು ೨೦೦೦ ಸೈನಿಕ ಕಾಲಾಳುಗಳು ಮತ್ತು ೩೦೦ ಕುದುರೆ ಸವಾರರನ್ನು ಕಳುಹಿಸಲಾಯಿತು. ನವಾಬ್ ಸಾಹೇಬರು ಅಲ್ಲಿಂದ ಹಂತ ಹಂತವಾಗಿ ಪ್ರಯಾಣವನ್ನು ಮುಂದುವರಿಸುತ್ತಾ, ಶಿಕ್ರಿಪಟ್ಟಣದಲ್ಲಿ ತಂಗಿದರು. ಅಲ್ಲಿ ಅಂಬರ್ ಖಾನ್, ಜಹಜಾ ರಾವ್ತ್, ಅಬ್ಬಾಜಿ ಖಹಶಕ್ಕ, ಕಿನಕ್ ನಾಯಕ್ ಮುಂತಾದವರು ನವಾಬ್ ಸಾಹೇಬರ ವಿಜಯಶಾಲಿ ಸೈನ್ಯದ ಜೊತೆ ಸೇರಿಕೊಂಡರು. ದಿರಿಶ್ಪಾಯಿ ಲಕ್ಮೀರ್ ತನ್ನ ಹನ್ನೆರಡು ಸಾವಿರ ಕಾಲಾಳು ಸೈನಿಕರು ಮತ್ತು ೨೦೦ ಕದುರ ಸವಾರರೊಂದಿಗೆ ಮತ್ತು ದೇಸಾಯಿ ಕೊಪ್ಪಲಿನಿಂದ ೧೨೦೦೦ ಕಾಲಾಳು ಸೈನಿಕರು ೨೦೦ ಕುದುರೆ ಸವಾರರು, ಹಾಗೆಯೇ ಮಲೆನಾಡಿನ ರಾಜ ಬಾಲಾಜಿ ಹೈಬತ್ ರಾವ್ ದೊಡ್ಡ ಸೈನ್ಯದೊಂದಿಗೆ ನವಾಬ್ ಸಾಹೇಬರ ಸಹಯೋಗಕ್ಕಾಗಿ ಆಗಮಿಸುವುದಕ್ಕೆ ಒಪ್ಪಿಕೊಂಡರು. ಅಲ್ಲಿಂದ ಪ್ರಯಾಣಿಸುತ್ತಾ ಮುಂದುವರಿದು ಶಿವಗಂಗಾಕ್ಕೆ ತಲಪಿದರು. ಈ ಶಿವಗಂಗಾ ಒಂದು ದೊಡ್ಡ ಪರ್ವತದ ಮೇಲೆ ಇದ್ದು, ಇದು ಮುಸ್ಲಿಮೇತರರ ಪವಿತ್ರ ಕ್ಷೇತ್ರವಾಗಿದೆ.

ಖಿತಾ

ಅಜಬ್ ಕೋಹೇ ಕೆ ಅಖ್ಲ್ ಅಝ್ದೀದನೆ ಆಂ
ಶುದೀ ಅಶ್ಯರ್ ಕೆ ರೂಯೆ ಗರ್ದಾನ್
ಇದೊಂದು ವಿಶೇಷ ಪರ್ವತವಾಗಿ ಇದರ ಕೃಪೆಯಿಂದ ಬುದ್ಧಿ ಬೆಳೆದು
ಆಕಾಶದೆತ್ತರದಿಂದ ನೋಡುವವನಿಗೆ ಸರಿಸಮಾನವಾಗಿ ಕಾಣಿಸುವುದು.

ಝಿ ಬಶ್ ರಫ್ ಅತ್ ಬಸುನಯೆ ಏಝುದೇ ಪಾಕ್
ದರೂ ಹಂಚ್ಯೂಂ ಸದಾ ಪೇಚೀದಯೆ ಅಫ್ಲಾಖ್
ನೋಡಿ ಅಲ್ಲಾಹನ ಸೃಷ್ಟಿ, ಎಂತಹ ಮಹಾನ್ ಕೃತಿಯಿದು
ಕೂಗಿದರೆ ಪ್ರತಿಧ್ವನಿ ಮೂಡುತ್ತಾ ಆಕಾಶಕ್ಕೆ ಏರುವುದು.

ಈ ಪರ್ವತವು ಒಂದೇ ಬೃಹತ್ತಾದ ಬಂಡೆಯಿಂದ ಉಂಟಾಗಿದೆ. ಅಲ್ಲಾಹನ ಸೃಷ್ಟಿ ಎಂತಹ ಪಾವನವಾಗಿದೆಯೆಂದರೆ ಇಂತಹ ಬಂಡೆಯ ಮೇಲಿಂದ ಒಂದು ನೀರಿನ ಧಾರೆ ಭೂಮಿಗೆ ಹರಿಯುತ್ತಿದೆ. ಅಲ್ಲಿನ ಆಕಾಶದಲ್ಲಿ ಚಂದ್ರ ಎಂತಹ ಸುಂದರವಾಗಿದೆಯೆಂದರೆ ಅದರ ಬೆಳಕು ಹಾಲಿನಂತೆ ಬೆಳ್ಳಗೆ ಮತ್ತು ಮಗುವಿಗೆ ತಾಯಿಯ ಎದೆಹಾಲು ಉಣ್ಣಿಸಲು ಹರಿಸುವ ಧಾರೆಯಂತೆ ಬೆಳಕು ಹರಿದು, ಸೂರ್ಯನ ಕಿರಣದ ಬಟ್ಟಲಲ್ಲಿ ಸುರಿದು ತಂದಂತಿದೆ. ನವಾಬ್ ಸಾಹೇಬರು ದೇವರ ಸೃಷ್ಟಿಯ ಈ ಅದ್ಭುತ ಚೆಲುವನ್ನು ಆಸ್ವಾದಿಸುತ್ತಾ, ತನ್ನ ಅನುಯಾಯಿಗಳಿಗಿಂತ ಮುನ್ನಡೆದು ಹೋದರು. ಅದೇ ಹಾದಿಯಲ್ಲಿ ಮಸ್ತಿ(ಮಾಸ್ತಿ ?)ಯ ಜಾಗೀರುದಾರರು, ಮದ್‌ರಾ(ಮಧುರೈ ?), ತಂಜಿ ಮತ್ತು ತಜಾವರ್(ತಂಜಾವೂರು?) ಪ್ರದೇಶದ ಜಾಗೀರುದಾರರು ಭೇಟಿಯಾದರು. ರಾಯಿಲ್ ಎಂಬವನು ಈ ಪ್ರಾಂತ್ಯದ ರಾಜನಾಗಿದ್ದ. ಇವನ ವಿರುದ್ಧ ಅಲ್ಲಿನ ಜನ ಕೋಪಗೊಂಡು ನವಾಬರ ಮುಂದೆ ಬಂದು ತಮ್ಮ ಸಂಕಷ್ಟಗಳನ್ನು ಹೇಳಿಕೊಂಡರು. ರಾಯಲ ಸೀಮೆಯ ಪ್ರಾಂತ್ಯದ ಪರಿಸ್ಥಿತಿ ಅತ್ಯಂತ ಕೆಟ್ಟದಾಗಿತ್ತು. ಈ ರಾಜನಿಂದ ಮುಕ್ತಿಪಡೆದು ಪ್ರಾಂತ್ಯದ ಸುಧಾರಣೆಯಾಗಬೇಕೆಂದು ನವಾಬ್ ಸಾಹೇಬರ ಮುಂದೆ ಇಲ್ಲಿನ ಜನ ಕೇಳಿಕೊಂಡರು. ಓರ್ವ ಕುತಂತ್ರಿಯಾದ ಬಾಹ್ಮಣ ನಕ್ಕತ್ತ ಸೋಮಯಾಜಿಯನ್ನು ಇಲ್ಲಿನ ರಾಜ ತುಂಬ ಗೌರವದಿಂದ ತನ್ನ ಗುರುವೆಂದು ಪರಿಗಣಿಸಿದ್ದ. ಇವನು ತುಂಬ ಕೆಟ್ಟ ಸ್ವಭಾವದವನಾಗಿದ್ದ. ಈ ಪ್ರಾಂತ್ಯದ ಸಾಮಂತನಾಗಿ ಈ ಬ್ರಾಹ್ಮಣನನ್ನು ನೇಮಕಮಾಡಿದ್ದ. ಮಾಸ್ತಿಯ ಜಾಗೀರುದಾರರು ಕೂಡ ಜನರನ್ನು ಹೆದರಿಸಿ ಬೆದರಿಸಿ ಕಂದಾಯ, ತೆರಿಗೆಯ ರೂಪದಲ್ಲಿ ಲೂಟಿಮಾಡಿ ತಮ್ಮ ತಿಜೋರಿಯನ್ನು ತುಂಬಿಸಿಕೊಳ್ಳುತ್ತಿದ್ದರು. ಸಮಸ್ತ ಕರ್ನಾಟಕ ರಾಜ್ಯದಲ್ಲಿ ಕಾಲಾಳುಗಳು, ನೌಕರ ಚಾಕರರು, ಕುದುರೆ ಸವಾರರು, ಆನೆಗಳು, ಮಾವುತರು ಲೆಕ್ಕಕ್ಕೆ ಸಿಗದಷ್ಟು ವಿಪುಲ ಸಂಖ್ಯೆಯಲ್ಲಿ ಇದ್ದರು. ಇಲ್ಲಿನ ರಾಜನ ಅವಸ್ಥೆಯೂ ರಾಜಾ ಬಾಜಿಯ ಹಾಗೆಯೇ ಇತ್ತು. ಈ ರಾಜನ ಅರಮನೆಯ ಜನಾನಾದಲ್ಲಿ ೨೪

ಪತ್ನಿಯರಿದ್ದರು. ಈ ಹೆಂಗಸರು ಶ್ರೀಮಂತ ಉಡುಪು ಮತ್ತು ಬೆಲೆಬಾಳುವ ಆಭರಣಗಳನ್ನು ಧರಿಸಿ ಐಶ್ವರ್ಯದಲ್ಲಿ ತೇಲುತ್ತಿದ್ದರು. ತನ್ನ ಸಿಂಹಾಸನದ ನಾಲ್ಕು ದಿಕ್ಕಲ್ಲೂ ಹತ್ತು ಸಾವಿರ ಉಪಪತ್ನಿಯರನ್ನು ಇಟ್ಟುಕೊಂಡಿದ್ದ. ಐದುಸಾವಿರ ಆನೆಗಳು, ಮೂರು ಲಕ್ಷ ಕಾಲಾಳುಗಳ ದಂಡು ಯಾವಾಗಲೂ ಅವನ ಮುಂದೆ ಇರುತ್ತಿತ್ತು. ತಂಜಾವೂರಿನ ರಾಜಾ ಕೂಡ ಇದೇ ರೀತಿಯಲ್ಲಿ ತನ್ನ ವೈಭವಪೂರಿತ ಸುಖದಸುಪ್ಪತ್ತಿಗೆಯ ಬದುಕನ್ನು ಬದುಕುತ್ತಿದ್ದ. ಅವನು ತನ್ನ ವೈಭವ ಮತ್ತು ಸಂಪತ್ತಿನ ಒಡೆತನದಲ್ಲಿ ರಾಜಾ ಬಾಜಿಗಿಂತ ಕಮ್ಮಿಯೇನಿರಲಿಲ್ಲ. ರಾಯಿಲ್ ತನ್ನ ವೈಯ್ಯಕ್ತಿಕ ಅನುಭವದ ಮೂಲಕ ನೋಡುವಾಗ ನವಾಬ್ ಸಾಹೆಬರ ಶಕ್ತಿ ಮತ್ತು ಅವರ ಘನತೆ ತುಂಬ ಎತ್ತರಕ್ಕಿರುವುದು ಅವನ ಅನುಭವಕ್ಕೆ ಬಂತು. ನವಾಬ್ ಸಾಹೇಬರ ನೆರಳಲ್ಲಿರುವುದರಿಂದ ಬಹಳಷ್ಟು ತನಗೆ ಲಾಭವಿದೆಯೆಂದು ನಿರ್ಧರಿಸಿದ. ತನ್ನ ಸ್ವಂತ ಆಳ್ವಿಕೆ ನಡೆಸುವುದರಿಂದ ಅಷ್ಟೇನೂ ಲಾಭವಿಲ್ಲವೆಂಬ ತೀರ್ಮಾನಕ್ಕೆ ಬಂದ. ಅವನು ತನ್ನ ಸೈನ್ಯದ ೩,೦೨,೦೦೦ ಕಾಲಾಳುಗಳು, ೧೦೦ ಆನೆಗಳನ್ನು ನವಾಬ್ ಸಾಹೇಬರ ಮನಸ್ಸು ಗೆಲ್ಲುವುದಕ್ಕಾಗಿ ಸಹಾಯಕ್ಕೆ ಕಳುಹಿಸಿಕೊಟ್ಟ. ಮುಂದೆ ತನ್ನಜೊತೆ ಸ್ನೇಹಬೆಳೆಸಲೆಂದು ಆಶಿಸಿದ. ಇದರಿಂದ ತನ್ನ ಜೊತೆ ಬಾದಶಾಹರು ಒಳ್ಳೆಯ ಸಂಬಂಧ ಇಟ್ಟುಕೊಳ್ಳಲೆಂದು ಬಯಸಿದ.

ಇಲ್ಲಿನ ಪ್ರದೇಶದ ಇತರ ರಾಜ ಮಹಾರಾಜರು ಕೂಡ ತಮ್ಮ ವೈಭವದಲ್ಲಿ ಕಮ್ಮಿಯೇನಿಲ್ಲವೆಂದು ಅಲ್ಲಿಗೆ ಬಂದ ಒಬ್ಬ ವರದಿಗಾರ ನವಾಬ್ ಸಾಹೇಬರ ಗಮನ ಸೆಳೆಯುವ ಪ್ರಯತ್ನ ಮಾಡಿದ. ಅಮ್ಮಾ ರಾಜಾ, ತಂಜಾವೂರಿನ ಬಜ್‌ಬೂ ರಂಗನಾಥ ಮತ್ತು ರಾಜಾ ಮತ್ತೂರರ ಬಳಿ ೧೦೦ ರತ್ನ ಮಾಣಿಕ್ಯದ ಭಂಡಾರಗಳಿದ್ದಾವೆ, ಕೋಯಿಲ್ ಪಟ್ಟಿಣಂ ಬಂದರು ಪ್ರದೇಶಗಳು ಇವರ ವಶದಲ್ಲಿದೆ. ಕೋಯಿಲ್ ಪಟ್ಟಿಣಂನ ಸಮುದ್ರದಲ್ಲಿ ಮುತ್ತು ಹವಳಗಳ ಭಂಡಾರವಿದ್ದು, ರೂಬಿ ಮತ್ತು ವಜ್ರವೈಡೂರ್ಯದ ದಾಸ್ತಾನು ಅಲ್ಲಿ ಇದೆ. ಪ್ರತೀವರ್ಷವೂ ಹಲವು ಲಕ್ಷ ತೆರಿಗೆ ಕೂಡ ಜಮೆಯಾಗುತ್ತದೆ. ಅವರ ಆಳ್ವಿಕೆಯ ಪ್ರದೇಶದಲ್ಲಿ ಮಾಣಿಕ್ಯ ಮತ್ತು ವಜ್ರವೈಢೂರ್ಯಗಳ ಗಣಿಯೂ ಹೇರಳವಾಗಿದೆ. ಸಮುದ್ರದ ತಟ ಮತ್ತು ಖುಷ್ಕಿ ಮತ್ತು ತರಿ ಭೂಮಿಯು ೫ಲಕ್ಷ ಮೈಲಿನ ವ್ಯಾಪ್ತಿಯ ಪ್ರದೇಶ ಅವರ ವಶದಲ್ಲಿತ್ತು, ಎಂಬ ಈ ವರದಿಯನ್ನು ನವಾಬ್ ಸಾಹೇಬರ ಮುಂದಿಟ್ಟು ಗಮನ ಸೆಳೆಯಲು ಪ್ರಯತ್ನಿಸಿದವನು ಒಬ್ಬ ಕುತಂತ್ರಿ ದೂತನಾಗಿದ್ದ.(ಇವನು ಇಲ್ಲಿನ ಪ್ರಾಂತೀಯ ಅರಸ ರಾಯಿಲನದೂತನಾಗಿದ್ದು ತನ್ನ ಮೇಲೆ ಗಮನವಿರಿಸದಂತೆ ನವಾಬ್ ಸಾಹೇಬರ ಗಮನವನ್ನು ಇತರ ರಾಜರ ಮೇಲೆ ಹರಿಸುವಂತೆಮಾಡಿ ತನ್ನ ಕುಕೃತ್ಯಕ್ಕೆ ಪರದೆಹಾಕುವ ಮತ್ತು ತನ್ನ ಪ್ರಾಂತ್ಯದಿಂದ ದೂರ ಸಾಗಹಾಕುವ ಪ್ರಯತ್ನ ಮಾಡಿದ್ದ)ನವಾಬ್ ಸಾಹೇಬರಿಗೆ ಮಧ್ಯವರ್ತಿಯೋರ್ವನಿಂದ ಇವನ ಕುತಂತ್ರ ಬಯಲಿಗೆ ಬಂದಾಗ ಆ

ಕುತಂತ್ರಿಯ ಉದ್ದೇಶವನ್ನು ಅರಿತುಕೊಂಡರು. ಅವನ ಮಾತುಗಳಿಗೆ ಬೆಲೆಕೊಡದೆ ಅಲಕ್ಷಿಸಿ ಅಲ್ಲಿಂದ ತನ್ನ ಪ್ರಯಾಣವನ್ನು ಮುಂದುವರಿಸಿದರು. ವೇಲೂರಿನ ಬಳಿ ಪುನ್ನವೈ ಎನ್ನುವ ರಸ್ತೆಯಲ್ಲಿ ಪ್ರಯಾಣಿಸುವಾಗ ರಾಯಿಲನ ರಾಜ್ಯದ ಗಡಿ ಹತ್ತಿರವಾಗುತ್ತಾಬಂತು. ರಾಯಿಲನ ಕುತಂತ್ರಿ ದೂತ ತನ್ನ ಚಾಕಚಕ್ಯತೆಯಿಂದ, ಬಣ್ಣದ ಮಾತುಗಳಿಂದ ನವಾಬ್ ಸಾಹೇಬರನ್ನು ತನ್ನ ಮೋಡಿಗೊಳಪಡಿಸಲು ಮತ್ತೆ ಪ್ರಯತ್ನಿಸಿದ. ಆದರೆ ಅವನ ಪ್ರಯತ್ನಗಳು ಸಫಲವಾಗಲಿಲ್ಲ. ನವಾಬ್ ಸಾಹೇಬರು ತಮ್ಮ ಅಭಿಪ್ರಾಯವನ್ನು ಬಿಟ್ಟುಕೊಡದಂತೆ ಅಂಟಿಕೊಂಡಿದ್ದರು. ಈ ವಿಷಯ ರಾಯಿಲ್ ಮತ್ತು ಅವನ ದೂತನ ನಡುವಿನ ಸಂಗತಿಯಾಗಿದೆಯೆಂದು ಅವನನ್ನು ಉಪೇಕ್ಷಿಸಿದ್ದರು. ನವಾಬ್ ಸಾಹೇಬರು ಕೆಲವು ದಿನಗಳು ಅಲ್ಲಿ ತಂಗಿದರು. ಅಲ್ಲಿನ ಕೆಲವು ಮಣ್ಣಿದಾರರು(?) ಮತ್ತು ರಾಯಿಲ್‌ನ ಮಧ್ಯೆ, ಒಂದು ಸಮಾಲೋಚನೆಯ ಏರ್ಪಾಡು ಮಾಡಿದರು. ರಾಯಿಲ ನಿಟ್ಟಿನಿಂದ ಯಾವುದೇ ಜಗಳ, ತಕರಾರು ಮಾಡಿದರೆ ನನಗೆ ನೀವು ತಿಳಿಸಿ ಎಂದು ನವಾಬ್ ಸಾಹೇಬರು ಸಲಹೆ ನೀಡಿ, ಅವರಿಗೆ ಸಹಾಯ ಮಾಡುವ ಆಶ್ವಾಸನೆಯನ್ನು ನೀಡಿದರು. ರಾಜ ರಾಯಿಲನನ್ನು ಕರೆದು ಮಾತಾಡುವಾಗ ಇವನು ಒಬ್ಬ ಹಾದಿತಪ್ಪಿಸುವ ದುರ್ಬುದ್ಧಿಯವನಾಗಿ ಕಂಡು ಬಂತು. ಇತರರು ಮಾಡಿದ ಸಹಾಯಕ್ಕೆ ಕೃತಾರ್ಥನಾಗಿರುವ ಬದಲಿಗೆ ಕೃತಘ್ನನಾಗಿರುವ ಸ್ವಭಾವದವನೆಂಬ ಅಭಿಪ್ರಾಯ ಅವರಲ್ಲಿ ಮೂಡಿತು.

ಬೈತ್

ಹರ್ ಕೆ ಶುಕುರಾನಯೇ ಎಹಸಾನೆಯೆ ಶಹೆ ದೀನ್ ನಕುನದ್
ಕೆ ಬುರದ್ ನಾಮೆ ಶುಕ್ರ್ ಝುಹ್ರೆ ಹಲಾಯಿಲ್ ಗರ್‌ದತ್

ಧರ್ಮಬೀರು ಬಾದಶಾಹನ ಕೃಪೆಯ ನೆನಪಿಟ್ಟು ಕೊಳ್ಳದೆ ಕೃತಘ್ನನಾಗಿರುವವನು ಅವನು **ಝುಹ್ರೆ ಹಾಲಾಯಿಲ್**(ಹಾಲಾಹಲ ವಿಷ)ನ ಹೆಸರು ಧನ್ಯವಾದವೆಂದು ತಿಳಿದವನು.

ರಾಯಿಲ್ ಒಬ್ಬ ಕೆಟ್ಟ ಮನಸ್ಸಿನವನು ಮತ್ತು ಬಾದಶಹಾರು ತೋರಿದ ಕೃಪೆಗಳನ್ನು ನೆನಪಿಟ್ಟುಕೊಳ್ಳದ ಕೃತಘ್ನನಾಗಿದ್ದ. ಇದಲ್ಲದೆ ಅವನು ಹಾದಿತಪ್ಪಿದ ತನ್ನ ಒರಟ ಮಗನೊಬ್ಬನಿಗೆ ಕರ್ನಾಟಕದ ಆಸ್ಥಾನದಲ್ಲಿ ಪ್ರಮುಖ ಸ್ಥಾನ ನೀಡಿ ತಪ್ಪು ಮಾಡಿದ್ದ. ಇದಲ್ಲದೆ ತಾನು ಪಡೆದ ಸಹಾಯಕ್ಕೆ ಕೃತಾರ್ಥನಾಗಿರದೆ ಕೃತಘ್ನನಾಗಿದ್ದ. ಗೋಲ್ಕಂಡಾದಲ್ಲಿ ನಡೆದ ಯುದ್ಧದಲ್ಲಿ ಅವನಿಗೆ ಅಪಜಯವಾದ ನಂತರವೂ, ತನ್ನ ಅಹಂಕಾರವನ್ನು ಬಿಟ್ಟಿರಲಿಲ್ಲ. ವರ್ಷಂಪ್ರತಿ ಬಾದಶಹರಿಗೆ ನೀಡಬೇಕಾದ ಕಪ್ಪಕಾಣಿಕೆಯನ್ನು ಕೂಡ ನಿಯತ್ತಿನಿಂದ ನೀಡದೆ ತಪ್ಪಿಸಿಕೊಳ್ಳುತ್ತಿದ್ದ. ಬಾದಶಹಾರು ಇವನ ವಿರುದ್ಧ ದೂರು ತಂದ ದೂತರಿಗೆ ಅಭಯ ನೀಡಿ, ಸಹಾಯ ಮಾಡುತ್ತೇವೆಂಬ

ಆಶ್ವಾಸನೆಯನ್ನು ನೀಡಿದರು. ರಾಯಿಲ್‌ನ ಆಪ್ತನೊಬ್ಬನಿಗೆ ಈ ವಿಷಯ ತಿಳಿದಾಗ, ನವಾಬ್ ಸಾಹೇಬರ ಬಳಿ ಓಡೋಡಿ ಬಂದ. ಅವರ ಮುಂದೆ ವಿನೀತನಾಗಿ ರಾಯಿಲನಿಗೆ ಒಂದು ವಾರದ ಅವಧಿ ನೀಡಲು ಬಿನ್ನೈಸಿಕೊಂಡ. ಮುಲ್ಲಾ ಅಹ್ಮದ್ ಎಂಬ ಒಬ್ಬ ಭರವಸೆಯ ಸಲಹಾಕಾರರು ನೆಲ್ಲಿಪಟ್ಟನ್ ಹತ್ತಿರದ ಪರ್ವತದ ಮೇಲೆ ರಾಯಿಲ ಮತ್ತು ನವಾಬ್ ಸಾಹೇಬರ ಮುಖಾಮುಖಿ ಭೇಟಿಗೆ ವ್ಯವಸ್ಥೆ ಮಾಡಿದರು. ದೂತರಿಗೆ ತಿಳಿಯದಂತೆ ಈ ಭೇಟಿಯನ್ನು ಮಾಡಿಸಿದ್ದರು. ನವಾಬ್ ಸಾಹೇಬರ ಒಂದು ರಹಸ್ಯ ಸೇನಾತುಕಡಿಯನ್ನು ಯಾರಿಗೂ ಕಾಣದರೀತಿಯಲ್ಲಿ ಅಡಗಿರುವಂತೆ ನಿಲ್ಲಿಸಿದ್ದರು.

ಬೈತ್

> **ಬಪೇಶೇ ಸಿಪಾಹೆ ಖಿದ್‌ಯೂ ಜಹಾನ್**
> **ಗುರ್ಝೂದತ್ ಝೆ ಪೈದಾ ಶವದ್ ಆಸ್‌ಮಾನ್**
> ಬಾದಶಾಹನ ಸಿಪಾಯಿಗಳ ಮುಂದೆ
> ಭೂಮಿಯೂ ಕೂಡ ಆಕಾಶವಾಗಿ ಬದಲಾಗುತ್ತದೆ.
>
> **ಚುನಾ ಬರ್.ಝಮೀನಸ್ ಝೆ ಝುಂರ್ಝಾ ಇತಾಬ್**
> **ಚ್ಯೂಂ ಝುರ್ರ.ಬಾಶತ್ ಝೆಹಂ ಆಫ್‌ತಾಬ್**
> ಭೂಮಿಯ ಮೇಲೆ ಸಿಪಾಯಿಗಳ ಸಿಟ್ಟು ಭುಗಿಲೆದ್ದಾಗ
> ಭೂಮಿಯ ಮಣ್ಣು ಸೂರ್ಯನ ಉರಿ ಬೆಂಕಿಯಾಗುವುದು

ಮುಲ್ಲಾ ಅಹ್ಮದ್ ಸಾಹೇಬರನ್ನು ತಮ್ಮ ಪ್ರತಿನಿಧಿಯನ್ನಾಗಿ ಕಳುಹಿಸುವಾಗ, ಇದೊಂದು ತೋರಿಕೆಯ ಕ್ರಮವಾಗಿದ್ದು ಇದರಿಂದ ಅವನು ತನ್ನನ್ನು ಸುಧಾರಿಸಿಕೊಳ್ಳುವ ಅವಕಾಶ ನೀಡುವುದಕ್ಕಾಗಿ ಈ ಕ್ರಮವನ್ನು ಕೈಗೊಳ್ಳುತ್ತಿದ್ದೇವೆಂಬ ಸೂಚನೆಯನ್ನು ನವಾಬ್ ಸಾಹೇಬರು ನೀಡಿದರು. ನಮ್ಮೊಂದಿಗೆ ಮಾತುಕತೆಗೆ ಬರುವುದಾದರೆ, ಮುಖಾಮುಖಿ ನಮ್ಮೆದುರು ಕೂತು ಚರ್ಚೆ ನಡೆಸಲಿ. ಇಲ್ಲಿಗೆ ಬರುವುದು ಅವನಿಗೆ ಬಹುದೂರದ ಮಾತೇನಲ್ಲ. ಇಲ್ಲಿಂದ ಹೆಚ್ಚೆಂದರೆ ವೇಲೂರಿಗೆ ಏಳು 'ಕೋಸ್' ದೂರವಿರುವುದು. ಅವನು ಈ ಕಾರಣಕ್ಕಾಗಿ ಬರುವುದಕ್ಕೆ ಹಿಂದೆ ಸರಿಯುವುದಾದರೆ ಅಥವಾ ಬಾರದಿದ್ದರೆ, ನಾವು ಭವಿಷ್ಯದಲ್ಲಿ ತಳೆಯಬೇಕಾದ ನಿಲುವಿನ ಬಗ್ಗೆ ಮುಂದೆ ಯೋಚಿಸುವೆವು. ಇದು ಹಿಂದೆ ಅದೇ ರೀತಿಯಲ್ಲಿ ನಡೆದ ಘಟನೆಯ ಕಾಲದ ಪುನರಾವರ್ತನೆಯಂತಾಗಿತ್ತು! ಹಿಂದೆ ಇಂತಹದೇ ಸಂದರ್ಭದಲ್ಲಿ ಬಾಲಾ ಗಂಗಾಶ್ ಕೂಡ ಸಂಧಾನದ ಮಾತುಕತೆಗೆ ಬರಲು ನಿರಾಕರಿಸಿದ್ದ. ಅವನು ಅದರಿಂದ ಬಹಳಷ್ಟು ಸಂಕಷ್ಟಗಳನ್ನು ಎದುರಿಸಬೇಕಾಯಿತು.

ನಸೀಹತ್(ಸಲಹಾ ಗೀತೆ)

ನಸೀಹತ್ ಫೋಶ್‌ಕುನ್ ಅಝ್ ಮರ್ದೆದಾನಾ
ಕೆ ದುರ್ಬಾಯತ್ ತಲಬ್ ಕರ್ದನ್ ಝೆದರಿಯಾ
ಸಲಹೆ ಕೇಳು ನೀ ಬುದ್ಧಿವಂತನಿಂದ
ಮುತ್ತುಗಳು ಹೆಕ್ಕಲಾಗುವುದು ಮಾತ್ರ ಸಮುದ್ರದಿಂದ.

ನವಾಬ್ ಸಾಹೇಬರು ಇಂತಹದ್ದನ್ನೆಲ್ಲ ಬಿಲ್ಕುಲ್ ಮೆಚ್ಚುತ್ತಿರಲಿಲ್ಲ, ಆದರೂ ಬಂಕಣ್ಣ ಸೋಮಯಾಜಿಯನ್ನು ಭರವಸೆಯ ಪ್ರತಿನಿಧಿ ಮುಲ್ಲಾ ಅಹ್ಮದ್ ಸಾಹೇಬರೊಂದಿಗೆ ಸಂಧಾನಕ್ಕೆ ಕಳುಹಿಸಿದರು. (ಬಾದಶಾಹಾರ ದಂಡನಾಯಕರ ಲ್ಲೊಬ್ಬರಾದ) ಶಾಜಿ ರಾಜಾರು ತಮ್ಮ ದೊಡ್ಡ ದೇವತೆಯೊಂದರ ಮೇಲೆ ಆಣೆಯಿಟ್ಟು ತಾನು ಅವನನ್ನು ಹಿಡಿದು ನಿಮ್ಮಮುಂದೆ ತರುತ್ತೇನೆಂಬ ಆಶ್ವಾಸನೆಯನ್ನು ನೀಡಿದರು. ನಾನು ಮನಃಪೂರ್ವಕ ಪ್ರಯತ್ನಪಟ್ಟು ಈ ಸಮಸ್ಯೆಯನ್ನು ಬಗೆಹರಿಸುತ್ತೇನೆಂದು ಶಪಥ ಮಾಡಿದರು. ಈ ಜವಾಬ್ದಾರಿ ನನಗೆ ಸೇರಿದ್ದು ಎಂದರು. ಹೀಗೆ ಎಲ್ಲರ ಒಪ್ಪಿಗೆಯ ಮೇರೆಗೆ ಮುಂದುವರಿಯುವ ನಿರ್ಣಯ ಕೈಗೊಳ್ಳಲಾಯಿತು. ಮುಂದೆ ಪ್ರಯಾಣಿಸಿ ವೇಲೂರನ್ನು ಪ್ರವೇಶಿಸಿದರು. ಕೆಟ್ಟ ಬುದ್ಧಿಯ ರಾಜ ರಾಯಿಲ್ ತನ್ನ ಸೈನಿಕರನ್ನು ಜಮೆಮಾಡಿ ತಯಾರಾಗಿ ನಿಂತಿದ್ದ. ಬಾದಶಾಹರ ಸೈನಿಕರು ಕೂಡ ಅಲ್ಲಿ ತಯಾರಾಗಿ ನಿಂತಿದ್ದರು. ಈ ಸೈನಿಕರೆಲ್ಲರಿಗೂ ರಾಯಿಲ ತನ್ನ ಕಡೆಯಿಂದ ಚಿನ್ನ, ಬೆಳ್ಳಿ ಮತ್ತು ಪೋಷಾಕುಗಳನ್ನು ನೀಡಿ ವೇಲೂರಿನಿಂದ ಹೊರಗೆ ಸಾಗಿರಿ ಎಂದು ಅಮಿಷ ತೋರಿಸಿದ. ನಾನು ಇಲ್ಲಿ ಖಾಯಮ್ಮಾಗಿ ಇರುವವನೆಂದೂ ಹೇಳಿದ. ಇಲ್ಲಿನ ಎಲ್ಲ ಬಾಜಾರು, ರಸ್ತೆ ನನ್ನದೇ ಆಗಿದೆ ಎಂದ. ಬಾದಾಶಹಾರ ದಂಡನಾಯಕರು ಮತ್ತು ಸರದಾರರು ಈ ಕುತಂತ್ರಿ ರಾಜಾ ರಾಯಿಲ ಬಹಳ ಕೆಟ್ಟ ಮನಸ್ಸಿನವನು, ಅವನ ತಂತ್ರಕ್ಕೆ ಬಲಿಯಾಗದಿರಿ, ಅವನ ಅಮಿಷವನ್ನು ಸ್ವೀಕರಿಸದಿರಿ ಎಂದು ಸೈನಿಕರಿಗೆ ಹೇಳಿದರು. ಈ ರಾಜ ರಾಯಿಲ ಯುದ್ಧಕ್ಕೆ ತಯಾರಾಗಿ ನಿಂತಿದ್ದಾನೆ, ಅವನ ಯಾವ ತಂತ್ರಕ್ಕೂ ಬಲಿಯಾಗದಿರಿ ಎಂದು ಬಾದಶಾಹರಿಗೆ ವರದಿ ಕಳುಹಿಸಿದರು. ನವಾಬ್ ಸಾಹೇಬರು ಈ ವರ್ತಮಾನ ತಿಳಿದು ಆಶ್ಚರ್ಯ ಪಡಲಿಲ್ಲ. ಈ ನೀತಿಗೆಟ್ಟವನ ಸೈನ್ಯವನ್ನು ಮಟ್ಟಹಾಕುವುದು ಒಂದು ಕ್ಷುಲ್ಲಕ ತಮಾಷೆಯ ಆಟವೆಂದು ಪರಿಗಣಿಸಿದರು. ಅವನ ವಿರುದ್ಧ ಜಿಹಾದ್(ಧರ್ಮ ಯುದ್ಧ) ಯುದ್ಧ ಹೂಡಲು ತಯಾರಾದರು.

ನಜ್ಮ್

ಸಿಪೆ ಸಾಲಾರೆ ಶೆಹನ್‌ಶಾಹೆ ಗಾಝಿ
ಮುಹಮ್ಮದ್ ಮುಸ್ತಫಾ ಖಾನ್ ಆಂ ಕೆ ಅಫ್ ಲಾಖ್
ವೀರ ಬಹದ್ದೂರ ಬಾದಶಾಹರ ದಂಡಿನ ಸೇನಾಧಿಪತಿಯಂತೆ

ಮುಹಮ್ಮದ್ ಮುಸ್ತಫಾ ಖಾನ್ ಎತ್ತರದ ಗಗನದಂತೆ

ಝೆ ಅಬ್‌ರೆ ತೈರೆ ವೂ ದರ್ ಖುಲ್‌ಜುಮೆ ಖೂನ್
ನುಮಾಯದ್ ಚ್ಯೂಂ ಬರೂ ಬಹರೆ ಖಾಶಾಖ್
ಅವರ ತಲವಾರಿನ ಹೊಳಪಿನಿಂದ ಹರಿದ ರಕ್ತದ ಕೋಡಿ
ಸಮುದ್ರದ ಮೇಲೆ ತೇಲುವಂತೆ ಕಸ ಕೊಳೆಗಳ ರಾಡಿ.

ಸಮ್ಮಾಖ್ ರಾಮೆ ಅಸ್ಸಮೇ ಸತಾಯಿಷ್
ಬಸಾನೆ ಕುಷ್ತದಾಂ ಉಫ್ತಾದ ದರ್ ಖಾಕ್
ಅವರ ಬಾಣದ ತುದಿಯ ಹರಿತಚೂಪಿನ ಹೊಳಪಿಗೆ ಬಲಿಯಾದಂತೆ
ಮಣ್ಣಿನ ಪುಡಿಯಾಗುವನು ಅರೆವಕಲ್ಲಿನಲಿ ಸಿಲುಕಿದವನಂತೆ.

ಹಾದಿತಪ್ಪಿದ ಕುತಂತ್ರಿ ರಾಯಿಲ್ ಎತ್ತರತಗ್ಗಿನ ರಸ್ತೆಯಿಂದ ಸಾಗುತ್ತಾ ಮುಖ್ಯರಸ್ತೆಗೆ ಬರುತ್ತಿರುವಾಗ ಜೋರಾಗಿ ಗುಲ್ಲೆಬ್ಬಿಸುತ್ತಾಬಂದ. ಅವನ ಹೃದಯದಲ್ಲಿ ದ್ವೇಷ ತುಂಬಿ ತುಳುಕುತ್ತಿದ್ದುದರಿಂದ ಅವನ ಈ ವರ್ತನೆಗೆ ಕಾರಣವಾಗಿತ್ತು. ಇವನೊಂದಿಗೆ ಸಂಧಾನಕ್ಕೆ ಬಂದಿದ್ದ ಮುಲ್ಲಾ ಆಹ್ಮದರನ್ನು ವಾಪಾಸು ಕಳುಹಿಸಿದ.

ಬೈತ್

ಕೈಶುವತ್ ಪಾಕ್ ದಿಲೆ ತೀರಯೆ ದರೂನ್
ದರ್ ಕುನದ್ ಸೀನ ಸಾಫ್ ಅಝ್ ಸಾಬೂನ್
ಹೇಗಾಗುತ್ತದೆ, ಕಪಟದ ಕಿಟ್ಟ ಹಿಡಿದ ಹೃದಯದ ಶುದ್ಧಿ
ಸಾಬೂನಿನಿಂದ ಪದೇಪದೇ ತೊಳೆದರೂ ಇದೆ ಹೃದಯದಲಿ ಅಶುದ್ಧಿ.

ನವಾಬ್ ಸಾಹೇಬರ ಗುಮಾನಿ ಸರಿಯಾಗಿತ್ತು, ವೆಂಕಟಪ್ಪ ಸ್ವಾಮಿಯನ್ನು ಕಳುಹಿಸುವ ಸಲಹೆಯ ವಿರುದ್ಧ ಶಾಜಿ ರಾಜಾರ ಅಭಿಪ್ರಾಯ ಕೂಡ ಸರಿಯಾಗಿತ್ತು. ಹೀಗಿದ್ದರೂ ನವಾಬ್ ಸಾಹೇಬರು ಇವರ ಸಮ್ಮುಖದಲ್ಲಿ ಹಳೆಯ ಮಾತುಕತೆ ನಡೆದಿರುವ ವಿಚಾರದ ಯಾವುದೇ ಮಾತೆತ್ತಲಿಲ್ಲ. ಯಾಕೆಂದರೆ ಬಾದಶಾಹರ ಮೇಲೆ ನವಾಬ್ ಸಾಹೇಬರಿಗೆ ಅತ್ಯಂತ ಗಾಢವಾದ ಸ್ನೇಹ ಮತ್ತು ಗೌರವಾದರಗಳು ತುಂಬಿದ್ದವು. ತನ್ನ ಈ ಘಟನೆಯ ಬಗ್ಗೆ ಯುದ್ಧಹೂಡುವುದು ಒಳಿತೋ ಅಥವಾ ಮತ್ತೆ ಸಂಧಾನದ ಸಲಹೆ ಮುಂದುವರಿಸುವುದೋ ಎಂಬ ತೀರ್ಮಾನದಲ್ಲಿನ ಇರಿಸುಮುರಿಸು ತನ್ನಲ್ಲಿರುವುದನ್ನು ನಿವಾರಿಸಲೋಸ್ಕರವಾಗಿ ಕಲಾಮೇ ರಬ್ಬಾನಿ(ದೇವರ ಸಂದೇಶಗಳ ಕೃತಿ–ಕುರಾನ್)ಯಿಂದ ನೇಕ್ ಫಾಲ್(ಪವಿತ್ರ ಭವಿಷ್ಯ ಕೇಳುವ) ವಿಚಾರಕ್ಕೆ ಬಂದರು. ಪ್ರಾಸಂಗಿಕವಾಗಿ ಕುರಾನಿನ ಈ ವಾಕ್ಯ "ಪತಹ್‌ನಾ ಅಬ್‌ವಾಬಸ್ಸಮಾಯಿ ಬಿಮಾ ಮಸ್ಸತ್‌ಹುಂ" (ನಾನು ಅವರಿಗಾಗಿ ಆಕಾಶದ ಬಾಗಿಲುಗಳನ್ನು ತೆರೆದಿದ್ದೇವೆ) ಎದುರಿಗೆ ಬಂತು. ಇದರಿಂದ ಪತಹ್ ಅಥವಾ ಗೆಲುವಿನ ಸೂಚನೆ ತಿಳಿದುಬಂದಂತಾಯಿತು.

ಶೇರ್

ಆನಾಂ ಕೆ ರಹೆ ಕಿಶ್ವರೇ ಇರ್ಫಾಂ ಗಿ ರಂದ್
ಅಸ್ಸೀನಯೇ ಖೇಸ್ ಫಾಲೆ ಇರ್ಫಾಂ ಗಿ ರಂದ್
ಯಾರು ಅಲ್ಲಾಹನ ಮರ್ಜಿಯ ಹಾದಿಯನ್ನು ಹುಡುಕುತ್ತಾರೋ
ಅವರು ತಮ್ಮ ಹೃದಯದಲಿ **ಫಾಲೆ ಇರ್ಫಾಂ**(ಪವಿತ್ರ ಪರಿಚಯ) ಪಡೆಯುತ್ತಾರೆ

ಸಾಹಿಬೆ ನರ್ಝ್ರಾನ್ ಬೇತಫಾವುಲ್ ಹರ್‌ದಂ
ಬೆಖುದ್ ಶುದಾ ಜಿಸ್‌ಮೆ ಖೀಸ್ರಾ ಜಾನ್ ಗಿರಂದ್
ಪವಿತ್ರ ಫಾಲ್(ಭವಿಷ್ಯ) ನೋಡದೆ ಹಾದಿಯ ಅರಿಸಿಕೊಂಡವನು
ಹಾದಿತಪ್ಪಿ ತನ್ನ ದೇಹದಲಿ ಪ್ರಾಣವಕಳಕೊಂಡವನು.

ಈ ಭವಿಷ್ಯ ಸೂಚನೆಯ ಸಂದೇಶ ಸಿಕ್ಕಿದ್ದಕ್ಕೆ ಅಲ್ಲಾಹನಿಗೆ ಧನ್ಯವಾದ ಹೇಳಿ ಬಾದಶಾಹರ ಆಸ್ಥಾನದ ಕಡೆ ತೆರಳುವ ನೇರ ಹಾದಿಯಲ್ಲಿ ಹೋಗದೆ ಮಗದೊಂದು ಹಾದಿ ಹಿಡಿದು ರಾಯಿಲನ ಪ್ರಾಂತ್ಯದ ಎರಡು ಮಾರು ದೂರದಲ್ಲಿ ಬೀಡುಬಿಟ್ಟರು. ಮೊದಲದಿನ ರಾಯಿಲನಿಗೆ ಸೈನ್ಯ ಹಿಂತಿರುಗಿ ಹೋಯಿತು ಎಂಬ ವರ್ತಮಾನ ಸಿಕ್ಕು ಖುಶಿಯಾಗಿತ್ತು. ರಸ್ತೆ ಬದಲಿಸಿ ಪುನ್ನವಿ ಘಾಟ್‌ನ ರಸ್ತೆಯ ಮೂಲಕ ಪಯಣಿಸಿ ಇಲ್ಲಿಗೆ ಬಂದು ಬಾದಶಹರ ಸೈನ್ಯ ತಲಪಿದೆಯೆಂದು ನಾಲ್ಕನೆಯ ದಿನ ಥಟ್ಟನೆ ಅವನಿಗೆ ಸುದ್ದಿ ತಿಳಿದುಬಂತು. ಈ ಸೈನ್ಯದಲ್ಲಿ ೮೦,೦೦೦ ಕಾಲಾಳುಗಳಿದ್ದರು. ಅಲ್ಲಿನ ಸಂಪೂರ್ಣ ಕ್ಷೇತ್ರವನ್ನು ಸೇನೆ ತನ್ನ ವಶಪಡಿಸಿಕೊಂಡಿದೆ ಎಂಬ ವರ್ತಮಾನವೂ ಅವನಿಗೆ ತಲಪಿತು. ಈ ಸುದ್ದಿ ತಿಳಿದ ಕೂಡಲೇ ಅವನು ಚಿಂತೆಗೀಡಾದ ಮತ್ತು ಇದೇನಾಯಿತು ಹೇಗಾಯಿತು ಎಂದು ಆಶ್ಚರ್ಯ ಚಕಿತನಾಗಿ ತಳಮಳಗೊಂಡ. ಯುದ್ಧದ ಹಜ್ಜೆ ಇಡಲೇಬೇಕಾಗುತ್ತದೆಂದು ತೀರ್ಮಾನಿಸಿ, ಪುನ್ನವಿ ಘಾಟ್ ಕಡೆ ತೆರಳಿದ. ಈ ಮಧ್ಯೆ ಬಾದಶಾಹರ ಸೈನ್ಯದಲ್ಲಿ ಅಸದುಲ್ ಖವಾನೀನ್ ಎಂಬ ಯೋಧನೊಬ್ಬನಿಗೆ ಬೇಧಿಯ ಅನಾರೋಗ್ಯವಾಯಿತು. ನವಾಬ್ ಸಾಹೇಬರು ಮಾಸ್ತಿಯಿಂದ ಮುಂದುವರಿದರು. ಜಿಲ್ ಹಿಜ್ಜಾ ತಿಂಗಳ ಪ್ರಥಮ ದಿನದಂದು ಯುದ್ಧವು ಶುರುವಾಯಿತು. ಅಸದುಲ್ ಖವಾನಿನ್ ಇತರ ೨೦೦೦ ಸೈನಿಕರೊಂದಿಗೆ ಗದಗ ಲಕ್ಷ್ಮೇಶ್ವರದ ಹಾದಿಯ ಮೂಲಕ ಪಯಣಿಸಿ ಘಾಟಿಯ ರಸ್ತೆ ತಲಪಿದ. ಜೊತೆಗೆ ಇನ್ನಿತರರು ಕೂಡ ಪುನ್ನವಿ ಘಾಟಿಗೆ ಬಂದು ತಲಪಿದರು. ಈ ಘಾಟಿ ಹಿಂದಿನ ಪುಟಗಳಲ್ಲಿ ವಿವರವಾಗಿ ನಿವೇದಿಸಲಾದಂತೆ ಬಹಳ ಹಿಂದೆ ಇದ್ದ ರುಸ್ತುಮೇ ಝುಮಾನಾನ ಅಂಕಿತಕ್ಕೊಳಗಾದ ದರೋಡೆ ಕೋರರ ಪ್ರಾಂತ್ಯವಾಗಿತ್ತು. ಘಾಟಿಯ ಆ ಕಡೆಯಲ್ಲಿ ಕುತಂತ್ರಿಗಳಾದ ರಾಯಿಲನ ದೊಡ್ಡ ತಂಡ ಜಮೆಯಾಗಿತ್ತು. ಬಾದಶಾಹರ ಸೈನ್ಯದ ಸರದಾರರು ಬೆಟ್ಟದ ತುದಿಯ ಮೇಲೆ ಕಣ್ಣಿಟ್ಟು ನೋಡುತ್ತಿದ್ದರು. ನವಾಬ್ ಸಾಹೇಬರು ತಮ್ಮ ಬೆಂಕಿಯ ಕೆಂಡಗಳನ್ನು ಉಗುಳುವ ತಲವಾರನ್ನು ಝುಲಪಿಸುತ್ತಾ

ವಿರೋಧಿಗಳ ಮೇಲೆ ದಾಳಿಯಿಟ್ಟರು. ವಿರೋಧಿ ಸೈನ್ಯದ ಮೇಲೆ ಆಕ್ರಮಣ ಮಾಡುತ್ತಾ ರಾಯಿಲನ ಹಿಡಿತದಲ್ಲಿನ ಪ್ರಾಂತ್ಯದೊಳಗೆ ನುಗ್ಗಿದರು.

ಬೈತ್

ಸರೇ ಮುಶ್ರಿಕಾನ್ ಬರ್ ಝಮೀನ್ ಸರ್ ಬಸರ್
ಝ ಆಮದ್ ಶುದೆ ಖಲ್ಕ್ ಶುದ್ ಬೇ ಸುಪರ್

ಮುಶ್ರಿಕರ ತಲೆಗಳು ರಾಶಿ ಬಿದ್ದಿದ್ದವು ನೆಲದಲ್ಲಿ ಒಂದರ ಮೇಲೊಂದರಂತೆ
ವೈರಿ ನಾಲಾಯಕರು ದಿಕ್ಕಾಪಾಲಾದರು ಅವರ ಆಗಮನದಂತೆ.

ಆ ಇಲಾಖೆಯಲ್ಲಿ ಒಂದು ಕೊಳವಿತ್ತು. ಈ ಕೊಳದ ದಡದಲ್ಲಿ ಅಸದುಲ್ ಖವಾನಿನ್ ತನ್ನ ಸುಪರ್ದಿನಲ್ಲಿದ್ದ ಸೈನಿಕರ ತಂಡದ ಅರ್ಧಭಾಗದಷ್ಟು ಸೈನಿಕರ ಜೊತೆಗೆ ಬಂದು ತಳವೂರಿದ. ಇಲ್ಲಿಂದ ನೋಡುವಾಗ ಘಾಟಿಯ ಕಣಿವೆಗಳು ಶವಗಳ ರಾಶಿಯಿಂದ ತುಂಬಿಹೋಗಿತ್ತು. ಭಯದಿಂದ ಆ ಕಡೆ ಜನ ಎಂದಿನಂತೆ ಬಂದು ಹೋಗುವುದನ್ನು ನಿಲ್ಲಿಸಿದ್ದರು. ಇಪ್ಪತ್ತು ದಿನಗಳ ಕಾಲ ಶವಗಳನ್ನು ಎತ್ತಿ ಘಾಟಿಯನ್ನು ತೆರವು ಮಾಡುವ ಕೆಲಸ ಮುಂದುವರಿಯಿತು. ಈ ಸಮಯದಲ್ಲಿ ಅಸದುಲ್ ಖವಾನಿನ್‌ಗೆ ಬೇಧಿಶುರುವಾಗಿ ಅನಾರೋಗ್ಯವುಂಟಾಯಿತು. ಈ ಅನಾರೋಗ್ಯದಿಂದಾಗಿ ಅಸದ್ ಖಾನ್(ಅಸದುಲ್ ಖವಾನಿನ್) ತಮ್ಮ ಸೈನಿಕರೊಂದಿಗೆ ವಾಪಸಾಗಿ ಕೊಳದಿಂದ ಐದು ಮೈಲಿ ದೂರದಲ್ಲಿದ್ದ ಮಾಸ್ತಿಗೆ ತಲಪಿದರು.

ಉಳಿದ ಸರದಾರರು ಕೂಡ ಕೊಳದ ದಡದಲ್ಲಿ ತಮ್ಮ ಹಿಡಿತವನ್ನು ಗಟ್ಟಿಮಾಡಿಕೊಂಡರು. ರಾಯಿಲನಿಗೆ ಈ ಸುದ್ದಿ ತಲಪಿದಾಗ, ಅವನು ಅಲ್ಲಿಂದ ಹೊರಟು ಬುಕುರಿಯುತ್ತಂ ತಲಪಿದ. ಬುಕುರಿಯುತ್ತಂನಲ್ಲಿ ಹಿಂದೆ ನವಾಬ್ ಸಾಹೆಬರೊಂದಿಗೆ ಭೇಟಿ ಮಾಡಲು ಮತ್ತು ಸಲಹೆ ಸಂಧಾನಗಳನ್ನು ಸ್ವೀಕರಿಸಲು ಬಂದಿದ್ದ. ಅಲ್ಲಿಂದ ತನ್ನ ಕೆಲವು ಸೈನಿಕರೊಂದಿಗೆ ಕೃಷ್ಣ ದುರ್ಗ ಕೋಟೆಗೆ ತೆರಳಿದ. ಈ ಕೋಟೆಯ ಬಹು ಪ್ರಖ್ಯಾತವಾಗಿದ್ದು ಇದರ ವೈಭವವನ್ನು ಮತ್ತು ಕಟ್ಟಡದ ಬಲವನ್ನು ಭೂಮಿ ಆಕಾಶಗಳು ಹೊಗಳುತ್ತಿದ್ದಂತಿತ್ತು. ಇಲ್ಲಿಂದ ಯುದ್ಧಹೂಡುವ ಉದ್ದೇಶದಿಂದ ರಾಯಿಲ ಒಂದು ಲಕ್ಷ ಕಾಲಾಳುಗಳನ್ನು ೧೨೦೦ ಕುದುರೆ ಸವಾರಿ ಸೈನಿಕರನ್ನು ತಯಾರಿ ಮಾಡಿದ.

ಬುಧವಾರದ ದಿನ ತನ್ನ ಸೈನಿಕರನ್ನು ಸೇರಿಸಿಕೊಂಡು ಕೃಷ್ಣ ದುರ್ಗ ಕೋಟೆಯಿಂದ ರಾಯಿಲ ಹೊರಟ. ನವಾಬ್ ಸಾಹೇಬರ ಸೈನ್ಯ ಬೀಡುಬಿಟ್ಟ ಸ್ಥಳದಿಂದ ೫ ಮೈಲು ದೂರದ ಪ್ರದೇಶ ತಲಪಿದ. ಶಾಜಿ ರಾಜ ಮತ್ತು ಅಸದ್ ಖಾನ್ ಇಬ್ಬರು ದಂಡನಾಯಕರು ರಾಯಿಲ ತಮ್ಮನ್ನು ಎದುರಿಸಲು ಮುಂದೊತ್ತಿ ಬರುತ್ತಿದ್ದಾನೆಂಬ ವರ್ತಮಾನ ತಿಳಿದು ಕೂಡಲೇ ನವಾಬ್ ಸಾಹೇಬರಿಗೆ ಸುದ್ದಿ ಮುಟ್ಟಿಸಿದರು. ನವಾಬ್

ಸಾಹೇಬರು ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ತಮಗೆ ಸೈನಿಕರ ಒಂದು ಸಹಾಯಕ ತಂಡವನ್ನು ಕಳುಹಿಸಬೇಕೆಂಬ ವಿನಂತಿಯನ್ನೂ ಮಾಡಿದರು. ಈ ಸುದ್ದಿ ತಲಪಿದ ಕೂಡಲೇ ನವಾಬ್ ಸಾಹೇಬರು ಎರಡು ಮೈಲು ದೂರ ಪ್ರಯಾಣಿಸಿ ಪುನ್ನವಿ ಘಾಟಿಯಲ್ಲಿ ನೆಲೆ ಮಾಡಿ ನಿಂತರು. ತಮ್ಮ ಸಿಪಾಯಿಗಳ ಸರದಾರರಿಗೆ ಕಾಲಾಳುಗಳು ಮತ್ತು ಕುದುರೆ ಸವಾರರನ್ನು ಶಾಜಿ ರಾಜಾರಿಗಾಗಿ ಕಳುಹಿಸಿಕೊಟ್ಟರು. ಇದಲ್ಲದೆ ಸ್ವತಹ ತಾವು ಕೂಡ ೪೦೦೦ ಸೈನಿಕರನ್ನು ಕರೆದುಕೊಂಡು ವೈರಿ ನೆಲೆಯ ಹಿಂದಿನ ಹಾದಿಯಲ್ಲಿ ಪಯಣಿಸಿದರು. ಜೊತೆಗೆ ತಾನು ಅಲ್ಲಿಗೆ ಬರುವ ತನಕ ಯುದ್ಧವನ್ನು ಶುರು ಮಾಡದಿರಿ ಮತ್ತು ನಾನು ಕೂಡ ಅಲ್ಲಿಗೆ ಹೊರಟಿದ್ದೇನೆ ಎಂಬ ಸಂದೇಶವನ್ನೂ ಕಳುಹಿಸಿದರು. ಇದರ ನಂತರ ಸಂದೇಶವನ್ನು ಕಳುಹಿಸುವ ಹಾದಿ ಕಡಿದುಬಿಟ್ಟಿತು. ಮಹಾ ದಂಡನಾಯಕರು ಕೆಲವೇ ಎರಡು ಮಾರುಗಳ ದೂರದಲ್ಲಿರುವ ಬಗೆಗಿನ ಸಂದೇಶ ಮಾತ್ರ ತಲಪಿತ್ತು. ತಾನೂ ಬರಲಿದ್ದೇನೆ ಎಂಬ ಸಂದೇಶ ಇನ್ನೂ ತಲಪಿರಲಿಲ್ಲ. ಅಷ್ಟರಲ್ಲಿ ಯುದ್ಧ ಪ್ರಾರಂಭವಾಯಿತು. ನವಾಬ್ ಸಾಹೇಬರು ರಣರಂಗದಿಂದ ೩ ಫರ್ಲಾಂಗು ದೂರದಲ್ಲಿದ್ದರು. ಸಿಂಹದಂತೆ ಘರ್ಜಿಸುತ್ತಾ ನಡೆದ ಅಸದುಲ್ ಖವಾನೀನರ ನೇತೃತ್ವದ ಸೈನ್ಯ ರಾಯಿಲನ ಸೇನೆಯ ಮೇಲೆ ಎಂತಹ ಗಂಭೀರ ದಾಳಿಯಿಟ್ಟರೆಂದರೆ ವಿರೋಧಿ ಸೈನ್ಯದ ರಕ್ತದ ಕೋಡಿ ಹರಿದು ಭೂಮಿ ತುಂಬ ಹರಡಿತು. ಇವರ ತಲ್ವಾರಿನಿಂದ ಶಿರಗಳನ್ನು ಹೊಲಗಳಲ್ಲಿ ಪಸಲುಗಳನ್ನು ಕಟಾವು ಮಾಡುವಂತೆ ಕೊಯ್ದು ಹಾಕಿತು. ರಕ್ತದ ನದಿಯು ಎಷ್ಟೊಂದು ಧಾರಾಕಾರವಾಗಿ ಹರಿಯುತ್ತಿತ್ತೆಂದರೆ ಮೀನುಗಳು ಕೂಡ ಈಜಾಡಲು ಸಾಧ್ಯವಾಗುವಂತಿತ್ತು.

ನಜ್ಮ್

ಚ್ಯೂಂ ಬುರುಝ್ ಗರಾನ್ ಸರ್ ನಮೂದಾರೆ ದಶ್ತ್
ಝ್ ದಸ್ತೆ ದಿಲೆರಾನ್ ಘುರ್ ಆಬ್ ತಾಬ್
ಗದೆಯು ತನ್ನ ತಲೆಯನ್ನು ತೋರಿಸುವಾಗ
ಹೊಳೆಯುವುದು ಶೂರ ಎದೆಗಾರರ ಕೈಯಲ್ಲಿ

ಸರೆ ಆಹಿನಿ ಪೈಕರಾಂ ಪಹನ್ ಶುದ್
ಬರೂವೆ ಝಮೀನ್ ಹಂ ಚ್ಯೂಂ ರೌಘನ್ ಬರ್ ಆಬ್
ಶಿರಸ್ತ್ರಾಣ ಧರಿಸಿದ ಸೈನಿಕರ ಉರುಳಿದ ತಲೆಗಳು ಹೇಗೆ ಕಾಣುತ್ತಿತ್ತೆಂದರೆ
ಭೂಮಿಯಲ್ಲಿ ಹರಿವ ನೀರಲಿ ತೇಲುವ ಎಣ್ಣೆಯಂತೆ.

ಫಲಕ್ ಝುದ್ ಝ್ ಖೂನ್ ಬಾರಿ ಅಬ್ರೆ ತೈಘ್
ಬದರಿಯಾ ಎ ಖೂನ್ ಘೋತ ಝುದ್ ಆಫ್ತಾಬ್

ತಲವಾರಿನ ಧಾರೆ ಎಂತಹದೆಂದರೆ ಆಕಾಶಕೂಡ ಆಗುವುದು ರಕ್ತಮಯ
ಸೂರ್ಯನು ಕೂಡ ಮುಳುಗುತ್ತಾನೆ ರಕ್ತದ ಸಮುದ್ರದಲಿ.

ಝ ಖೂನ್ ಆಸ್‌ಮಾನ್ ಲಾಲಾ ಗೂನ್ ಶುದ್ ಬಬೀನ್
ಕೆ ಫೈರೋಝ ಖೂನ್ ಗಸ್ತ್ ಲಾಲೆ ಮುಝಾಬ್
ನೋಡಿ ಕೆಂಪಾದವು ಗಗನತುಂಬ ರಕ್ತದ ಕೋಡಿ ಹರಿದು
ಫೈರೋಝಾ* ಕೆಂಬಣ್ಣಕ್ಕೆ ತಿರುಗಿ ಮಾಣಿಕ್ಯವಾದಂತೆ

(*ನೀಲವರ್ಣದ ಬೆಲೆಬಾಳುವ ಕಲ್ಲು)

ಝಬಸ್ ಮೌಜ್ ದರ್ ಬಹರೆ ಖೂನಾಬ್ ಗಸ್ತ್
ಸದಫ್ ಚ್ಯೂಂ ಕಫೇ ನೌ ಉರೂಸಾಂ ಖಿಝಾಬ್
ಸಮುದ್ರದ ಅಲೆಗಳು ತುಂಬಿದ ರಕ್ತದ ಕೋಡಿಯಾದವು
ಮದುಮಗಳ ಕೈಯ ಮಧುರಂಗಿಯಂತೆ ಕಡಲಚಿಪ್ಪುಗಳು ಬಣ್ಣಪಡೆದವು.

ಮಹಾ ಗದೆಗಳ ಹೊಡೆತದಿಂದ ವೈರಿಗಳ ಶಿರದ ಹಣೆಯ ಭಾಗ ಪುಡಿಗಟ್ಟಿ ಬಿದ್ದು, ಪರ್ವತದ ಮತ್ತು ಕಾಡಿನ ನೆಲದ ಮಣ್ಣಿನಲ್ಲಿ ಸೇರಿಹೋದವು. ಈ ಶೂರ ಸೈನಿಕರ ಸಿಟ್ಟಿನ ಬೆಂಕಿಯಿಂದ ಉಂಟಾದ ತಾಪದಿಂದ ಕುಲ್ಝುಮ್ ಹಾಗೂ ಉಮ್ಮಾನ್ ಸಾಗರದ ಅಲೆಗಳು ಎತ್ತರೆತ್ತರ ಉಕ್ಕಿ, ಸೌದೆಯ ರಾಶಿಗೆ ಬೆಂಕಿ ಬಿದ್ದು ಜ್ವಾಲೆ ಭುಗಿಲೆದ್ದಂತೆ ಕಂಡುಬರುತ್ತಿತ್ತು. ವಿರೋಧಿಗಳು ಸುಸ್ತಾಗಿ, ಅನಿವಾರ್ಯವಾಗಿ ಹಿಂತಿರುಗಿ ಹೋಗುವ ಹಾದಿಯನ್ನು ಹುಡುಕತೊಡಗಿದರು. ಅಸದ್ ಖಾನರ ಜೊತೆಗೆ ಯುದ್ಧದಲ್ಲಿ ಭಾಗವಹಿಸಿದ್ದ ಹಿರಿಯ ಮಂತ್ರಿವರ್ಯರು ವೈರಿಸೈನ್ಯದ ಹಿಂಬದಿಯ ಮಾರ್ಗದಿಂದ ಒಳನುಗ್ಗಿ ವೈರಿಗಳನ್ನು ಸದೆಬಡಿದರು. ಜಗದೇವರಾಯನ ಅಧಿಕಪ್ರಸಂಗದ ಮಾತುಗಳಿಂದಾಗಿ ವೈರಿಗಳು ರಣರಂಗದಲ್ಲಿ ಮತ್ತಷ್ಟು ತೊಂದರೆಗಳಿಗೆ ಒಳಗಾಗಬೇಕಾಯಿತು. ಅವನು ಇದನ್ನು ಮನಗಂಡು ಹೆದರಿ ಕೋಟೆಯೊಳಗೆ ಹೋಗಿ ಅಡಗಿಕೊಂಡ. ತಾನು ೩೬ ಮಜಬೂತಾದ ಕೋಟೆಗಳ ಒಡೆಯನಾಗಿದ್ದೇನೆ. ನೀನು ನನ್ನಜೊತೆ ಎದ್ದುನಿಂತು ನಿನ್ನ ರಾಜ್ಯವನ್ನು ಗೆಲ್ಲಬೇಕಾಗಿದೆ, ನನಗಂತೂ ಯಾವುದರ ಗೊಡವೆಯೂ ಇಲ್ಲ, ನೀನು ಧೈರ್ಯದಿಂದ ಮುನ್ನುಗ್ಗು ಎಂಬ ಸಂದೇಶವನ್ನು ರಾಯಿಲನಿಗೆ ಕಳುಹಿಸಿದ. ಈ ಘಟನೆಗಳ ಮಧ್ಯೆ ನವಾಬ್ ಸಾಹೇಬರು ಹೆಚ್ಚಿನ ಪ್ರಮಾಣದ ಧೈರ್ಯದಿಂದ ಮುಂದುವರಿದಿದ್ದರು. ಈ ಹುಂಬರ ಜೊತೆಗೆ ಯುದ್ಧದಲ್ಲಿ ಕ್ಷಿಪ್ರ ಕಾರ್ಯಾಚರಣೆ ನಡೆಸಿ ಸೋಲಿಸಿದ ನಂತರ ತಮ್ಮ ಎಲ್ಲ ಸೇನೆಯ ದಂಡನಾಯಕರು, ಸರದಾರರನ್ನು ಕರೆದು ಆತಿಥ್ಯನೀಡಿದರು. ತಮ್ಮ ಸ್ವಂತ ಸರಕಾರಿ ಖಜಾನೆಯಿಂದ ಕುದುರೆಗಳು ಮತ್ತು ರಾಜಪೋಷಾಕುಗಳನ್ನು ನೀಡಿ ಗೌರವಿಸಿದರು. ಎಲ್ಲರನ್ನೂ ಸಂತೃಪ್ತರನ್ನಾಗಿಸಿ ತನ್ನ ಸಿಪಾಯಿಗಳ ದಂಡಿನೊಂದಿಗೆ ಅಲ್ಲಿಂದ ಮುಂದೆ ಪ್ರಯಾಣ ಬೆಳೆಸಿದರು.

ನಜ್ಮ್

ಝುಬಸ್ ಲಷ್ಕರ್ ಹರ್‌ತರಫ್ ದರ್‌ರಸೀದ್
ಝುಮೀನ್ ಶುದ್ ಝು ಚಷ್ಮೆ ಫಲಕ್ ನಾಪದೀದ್
ನಾಲ್ಕೂ ದಿಕ್ಕಿನಿಂದ ಸೈನ್ಯ ಸುತ್ತುವರಿದಾಗ
ನೆಲದಲಿ ನಿಂತು ಮೇಲಕ್ಕೆ ನೋಡಿದರೆ ಆಕಾಶ ಕಾಣದು

ಝು ಖರ್‌ತೂಮ್ ಪಿಲಾನ್ ದರಿಯಾ ಶುಕೋಹ್
ಪುರಝು ಅಝುದಹಾ ಗಸ್ತ್ ಸೊಹರಾ ವಕೋಹ್
ಅನೆಗಳದಂಡು ಸೊಂಡಿಲುಗಳನ್ನಿಳಿಸಿದಾಗ ಸಮುದ್ರ ತುಂಬಿ ನಿಂತಿತು.
ಕಾಡು ಮತ್ತು ಪರ್ವತಗಳಲಿ ಹೆಬ್ಬಾವುಗಳ ಹಿಂಡು ತುಂಬಿ ಹರಿದಾಡಿದಂತಾಯಿತು.

ಝುಮೀನ್ ದರ್‌ತಹೇ ಪಾಯೇ ಫೀಲಾನೆ ಮಸ್ತ್
ಬಸಾನೇ ಸಿಫಾಲೆ ಸುಬುಕ್ ದರ್ ಶಿಕಸ್ತ್
ಸ್ಥನ್ಯದ ಅಸಂಖ್ಯಾತ ಆನೆಗಳ ಕಾಲ್ತುಳಿತದಿಂದ ಭೂಮಿ ಗುಳಿಬಿದ್ದವು
ಬೀಸುಕಲ್ಲಿನಲಿ ಸಿಕ್ಕು ಅರೆದು ಪುಡಿಯಾಗಿ ಒಳಸೇರುವಂತೆ.

ನವಾಬ್ ಸಾಹೇಬರು ತಮ್ಮ ಎಂದಿನ ಘನತೆ ಗಾಂಭೀರ್ಯದೊಂದಿಗೆ ಪುನ್ನವಿ ಘಾಟಿಯ ಮೇಲೆ ಬಂದಿಳಿದರು. ಘಾಟಿಯ ರಸ್ತೆಯಲ್ಲಿ ಇನ್ನಿತರ ಪಯಣಿಗರ ಜೊತೆ ಇವರೂ ಆಗಮಿಸಿ ಪರ್ವತದ ಮೇಲೆ ಮೈದಾನದಲ್ಲಿ ತಂಗಿದರು. ಅಲ್ಲಿ ವೈರಿಗಳ ಶಿರಚ್ಛೇದಗೊಳಿಸಿ ಸಾಹಸ ಮೆರೆದ ಸರದಾರರಿಗೆ ಚಿನ್ನದ ಉಡುಗೊರೆ ನೀಡಿ ಗೌರವಿಸಿದರು. ಘಾಟಿಯು ನಾಲ್ಕೂ ದಿಕ್ಕಲ್ಲಿ ಹಲವಾರು ವೈರಿಗಳ ಶಿರಚ್ಛೇದಗೊಳಿಸಲ್ಪಟ್ಟ ಶವಗಳು ಹರಡಿದ್ದ ದೃಶ್ಯವು ರಕ್ತದ ಮಡುವಲ್ಲಿ ಶಿರಗಳನ್ನು ಯಾರೋ ಸಮಾಧಿ ಮಾಡಿರಬೇಕು ಎಂಬ ಅನುಮಾನ ಹುಟ್ಟಿಸುವಂತಿತ್ತು. ಆಕಾಶವು ಅವರ ಶಿರಗಳನ್ನು ಮಾಯ ಮಾಡಿರಬೇಕೆಂದು ಅನಿಸುವಂತೆ ಶವಗಳ ಗುರುತು ಹಚ್ಚಲು ಸಾಧ್ಯವಾಗದ ಪರಿಸ್ಥಿತಿ ಉಂಟಾಗಿತ್ತು. ಈ ವೈರಿಗಳನ್ನು ಸರ್ವನಾಶ ಮಾಡಿದ ನಂತರ ಕೆರೆಯ ದಡದಲ್ಲಿನ ರಸ್ತೆಯಲ್ಲಿ ಅನುಯಾಯಿಗಳ ಜಯಕಾರದ ಘೋಷಗಳೊಂದಿಗೆ ಮುಂದುವರಿದು ಅಸದುಲ್ ಖವಾನೀನ್ ತಂಗಿದ ಸ್ಥಳಕ್ಕೆ ಬಂದು ತಲಪಿದರು. ಅಲ್ಲಿಂದ ತಮ್ಮ ಎಲ್ಲ ಸೈನ್ಯದೊಂದಿಗೆ ಮೊದಲ ಕೋಟೆ ಅತ್‌ಕಸ್‌ಗರಿ(?) ತಲಪಿದರು. ನಂತರ ಮೊಹರ್‍ರಂ ತಿಂಗಳ ನಾಲ್ಕನೆಯ ದಿನ ಕೃಷ್ಣದುರ್ಗ ಕೋಟೆಯ ಸಮೀಪ ತಮ್ಮ ಬೀಡುಬಿಟ್ಟರು. ನಂತರ ಜನರು ನೀಡಿದ ಸೂಚನೆಯಂತೆ ಕೋಟೆಯ ಎಡಭಾಗದಲ್ಲೊಂದು ರಹಸ್ಯ ಸುರಂಗ ಮಾರ್ಗದ ಮೂಲಕ ನಗರದ ಹೊರಭಾಗಕ್ಕೆ ತಲಪುವುದು ಸಾಧ್ಯವಾಗುತ್ತದೆಂಬ ಸುದ್ದಿ ತಿಳಿಯಿತು. ಇದರಿಂದಾಗಿ

ನವಾಬ್ ಸಾಹೇಬರು ತಮ್ಮ ಕುದುರೆಯನ್ನೇರಿ ರಹಸ್ಯ ಸುರಂಗದ ಮಾರ್ಗದಲ್ಲಿ ಮೊದಲು ಪ್ರಯಾಣಿಸಿದರು. ಉಳಿದವರು ಪ್ರಯಾಣಿಸಿ ಬಂದು ಬೆಟ್ಟದ ಮೇಲೆ ನಿಂತು ಅವರ ಜೊತೆಗೆ ಸೇರಿದರು. ಹೀಗೆ ಥಟ್ಟನೆ ಗೊತ್ತುಗುರಿಯಿಲ್ಲದೆ ಬಾಣ ಮತ್ತು ತೋಪುಗಳನ್ನು ಚಲಾಯಿಸುವುದು ಸೈನ್ಯದ ಸಾಮಾನ್ಯ ನಿಯಮಗಳ ವಿರುದ್ಧವಾಗಿದೆ ಎಂಬ ಅಭಿಪ್ರಾಯವನ್ನು ಅವರ ಅನುಯಾಯಿಗಳು ವ್ಯಕ್ತಪಡಿಸಿದರು. ವಸ್ತುಸ್ಥಿತಿ ಹೀಗಿದ್ದರೂ ಸೈನಿಕರು ಮುಂದೆ ನುಗ್ಗಿ ನಡೆಯುತ್ತಿದ್ದರು. ಇದೇ ಸಮಯದಲ್ಲಿ ಸೈನ್ಯದಲ್ಲಿದ್ದ ಯುವ ಸೈನಿಕರು ಈ ಪಟ್ಟಣದ ಬಳಿಯ ಗ್ರಾಮವೊಂದನ್ನು ವಶಪಡಿಸಿಕೊಂಡು ಬೆಂಕಿ ಹಚ್ಚಿದರು. ಕೋಟೆಯನ್ನು ವಶಪಡಿಸಿಕೊಳ್ಳುವ ಇವರ ಪ್ರಯತ್ನ ಹೇಗಿತ್ತೆಂದರೆ ಪ್ರಿಯಕರನೊಬ್ಬ ತನ್ನ ಪ್ರೇಯಸಿಯನ್ನು ತೆಕ್ಕೆಗೆ ತೆಗೆದುಕೊಳ್ಳಲು ತೋಳನ್ನು ತೆರೆದು ಕರೆವಂತೆ ಮುಂದೊತ್ತಿ ನಡೆಯುತ್ತಿದ್ದರು. ಕೋಟೆಯ ಬುರುಜನ್ನು ವಶಪಡಿಸಿಕೊಳ್ಳುವ ತಮ್ಮ ಪ್ರಯತ್ನವನ್ನು ಮುಂದುವರಿಸಿದರು. ಸ್ವಲ್ಪ ಸಮಯದಲ್ಲಿ ಕೋಟೆಯ ಪ್ರಮುಖ ಬುರುಜಿನ ಸಮೀಪಕ್ಕೆ ತಲಪಿದರು. ನವಾಬ್ ಸಾಹೇಬರು ಈ ವಿಜಯದ ಸಂತೋಷವಾರ್ತೆಯನ್ನು ಕೇಳುತ್ತಲೇ ಆನಂದ ತುಂದಿಲರಾಗಿ ಅಲ್ಲಾಹನ ಕೃಪೆಗೆ ಧನ್ಯವಾದಹೇಳಿದರು. ಎಲ್ಲ ಸೈನಿಕರಿಗೆ ಕೃಷ್ಣಗಿರಿಯ ಕೋಟೆಯನ್ನು ವಶಪಡಿಸಿಕೊಳ್ಳುವ ಯೋಜನೆ ಸಂಪೂರ್ಣ ಸಫಲವಾಗುವ ತನಕ ಜನರನ್ನು ಸೆರೆಹಿಡಿದು ವಿಚಾರಣೆಗೆ ಒಳಪಡಿಸುವ ಕಾರ್ಯವನ್ನು ನಿಲ್ಲಿಸಲು ಆಜ್ಞೆ ನೀಡಿದರು.

ನಜ್ಮ್

ಸರಾನೆ ಸಿಪಾಹೇ ಶೆಹನ್‌ಶಾಹೆ ಗಾಝಿ
ಪಯೆ ಖಿಲ್‌ಅಗೀರಿ ದುಯಿದಂದ್ ಯಕ್ಸರ್
ವೀರ ಬಾದಶಾಹರ ದಂಡಿನ ಸರದಾರರು
ಕೋಟೆಯ ಕೈವಶಕ್ಕಾಗಿ ಶ್ರಮಿಸುವರು.

ಬರಾಮತ್ ಫರೋಶ್ ನಬುರ್ದ್ ಅಝ್‌ದೊ ಜಾನಿಬ್
ಕಝಾಂ ರಫ್ತ್ ಬರ್‌ಬಾದ್ ಗೋಘಾಯೆ ಮೆಹಶರ್
ಎರಡೂ ದಿಕ್ಕಲ್ಲಿ ದಾಳಿ ನಡೆದು ಘೋಷಣೆಯ ಕೂಗು ಮೊಳಗುವುದು
ಇದರಿಂದ ಮೆಹಶರ್* ಮೈದಾನದಲ್ಲಿನ ಗದ್ದಲಕೂಡ ಕೇಳಿಸದಂತಾಗುವುದು

(ಅಂತಿಮದಿನದ ಪಾರಮಾರ್ಥವಿಚಾರಣೆಯಲ್ಲಿ ಸಮಸ್ತ ಸೃಷ್ಟಿಯು ಪಾಲ್ಗೊಳ್ಳುವ ಸಭೆ)

ಝುನೋಕೆ ಸನಾಹ ಕೆ ದರ್ ಜುಂಬಿಶಾಮದ್
ಖರಾಶೀದ ಶುದ್ ಸೀನಯೆ ಛರ್ಖೆ ಅಕ್‌ಝರ್
ಎಸೆದ ಬಾಣದ ಚೂಪುತುದಿಯ ರಭಸಕ್ಕೆ

ನೀಲ ಆಕಾಶದ ಎದೆಯೂ ಆಗುವುದು ಪುಡಿಪುಡಿ.

ಶುದ್ ಅಝ್ ಸದ್‌ಮಯೆ ಸುಮ್‌ಹಾನೂನ್ ನೂರ್‌ದಾಂ
ಬಸಕ್ ಹೇ ಫಲಕ್ ದಲೂವೆಚಾಹೇ ಮಕ್‌ಅರ್
ಅವರ ಕುದುರೆಗಳ ಕಾಲ ಸಪ್ಪಳಕೆ ಮೈದಾನ ಮತ್ತು ಕಾಡು ಪರವಶವಾಗುತ್ತವೆ
ಆಕಾಶದ ವಿಶಾಲ ಸೂರು ಆಳವಾದ ಬಾವಿಯಂತೆ ಪರಿವರ್ತನೆಗೊಂಡಿದೆ.

ವೈರಿಗಳು ಕೋಟೆಯ ಆವರಣದ ಗೋಡೆಗಳ ಮೇಲೆ ನಿಂತು ತೋಪುಗಳನ್ನು ಸಿಡಿಸಿ, ಬಾಣಗಳನ್ನು ಹೂಡುವ ಮೂಲಕ ಬಾದಶಾಹರ ಸೈನ್ಯದ ಮೇಲೆ ದಾಳಿ ಶುರುಮಾಡಿದರು. ಸಿಡಿದ ತೋಪಿನ ಬೆಂಕಿ ಭುಗಿಲೇಳುವ ದೃಶ್ಯ ಹೇಗಿತ್ತೆಂದರೆ ತಲವಾರದ ಹರಿತ ಧಾರೆಯಲ್ಲಿ ಮೂಡುವ ಮಿಂಚಿನ ಕಿಡಿಯಂತಿತ್ತು. ಕಿಂಡಿಯಲ್ಲಿ ಇಣುಕುವ ಹುಳಗಳು ಒಳಹೊರಗೆ ಹೋಗುವಂತೆ ತೋಪಿನ ಬಾಯಿಯಲ್ಲಿ ಬೆಂಕಿ ಮೂಡಿ ಮಾಯವಾಗುತ್ತಿತ್ತು. ಬೆಂಕಿಯ ಜ್ವಾಲೆಯಿಂದಾಗಿ ಶಿರಸ್ತ್ರಾಣದ ಸರಪಳಿಗಳು ತಲೆಯಿಂದ ಹೊರಬಂದವು. ಭಾರಿ ಬಿಲ್ಲಿನಲ್ಲಿ ಕಲ್ಲುಗಳನ್ನಿಟ್ಟು ಹಾರಿಸುತ್ತಿರುವುದರಿಂದ ಭೂಮಿ ಗುಳಿಬಿದ್ದು ಕಲ್ಲುಗಳ ಮೈದಾನದಂತಾಯಿತು.

ವೈರಿ ಸೈನಿಕರು ಆವರಣದ ತೋಪುಗಳ ಬುರುಜುಗಳಿಂದ ಬಾಣಗಳ ಮಳೆಗರೆಯಲು ಪ್ರಯತ್ನಿಸುತ್ತಿರುವುದನ್ನು ಈ ರಣರಂಗದಲ್ಲಿ ನಡೆದ ಯುದ್ಧದಲ್ಲಿ ಭಾಗವಹಿಸಿದ ಸರದಾರರು ಗಮನಿಸಿದರು. ಕೋಟೆಯ ಒಳಗಿನ ಪಾಯದ ಭಾಗದಲ್ಲಿ ಒಂದು ಸುರಂಗದ ಬಾಗಿಲನ್ನು ಕಂಡು ಅದನ್ನು ತೆರೆದುದರಿಂದ ವೈರಿ ಸೈನಿಕರ ಸನಿಹಕ್ಕೆ ಹೋಗಲು ಸಾಧ್ಯವಾಯಿತು. ಈ ಶೂರ ಸೈನಿಕರು ಒಂದೇಸವನೆ ಪ್ರವೇಶಿಸಿದ್ದರಿಂದ ವೈರಿ ಸೈನಿಕರ ಎದೆ ಝಲ್ಲೆಂದಿತು. ಬಾದಶಾಹರ ಸೈನ್ಯದ ದಾಳಿ ಹೇಗಿತ್ತೆಂದರೆ ಶಿಕಾರಿ ಹದ್ದು ತನ್ನ ಬಲಿಯನ್ನು ವೇಗವಾಗಿ ಹಾರಿ ರಪ್ಪನೆ ಹಿಡಿದು ತಂದಂತಿತ್ತು. ಈ ಹೇಡಿ ವೈರಿಗಳು ಹೂಡಿದ ಬಾಣಗಳು ಗುರಿತಲಪದೆ ಸಿಕ್ಕಸಿಕ್ಕ ಕಡೆ ಬಿದ್ದು ಗಲಿಬಿಲಿಗೊಂಡರು. ಕೊನೆಯ ದಿನದಂದು ಈ ವೈರಿಗಳು 'ಶರಣಾಗತ ಶರಣಾಗತ' ಎಂದು ಬೊಬ್ಬಿಡುತ್ತಾ ಶರಣಾಗಿ ಮರುಕ್ಷಣ ಮೌನವಾಗಿಬಿಟ್ಟರು. ಪ್ರಥಮ ದಿನದ ನಗಾರಿ ಮೊಳಗುವುದರಿಂದ ಹಿಡಿದು ಹನ್ನೊಂದನೆಯ ದಿನದ ನಗಾರಿವಾದ್ಯ ಮೊಳಗುವ ತನಕ ಬಾಣಗಳು ಮತ್ತು ತೋಪುಗಳ ಹಾರಾಟಗಳ ಮೂಲಕ ಯುದ್ಧ ಮುಂದುವರಿಯಿತು. ನವಾಬ್ ಸಾಹೇಬರು ಶುಕ್ರವಾರದ ರಾತ್ರಿಯಂದು ಮೂರನೇ ನಗಾರಿ ವಾದ್ಯ ಮೊಳಗಿದಾಗ ತಮ್ಮ ಡೇರೆಗೆ ಹೋಗಿ ಬಾದಾಶಾಹರ ಆಳ್ವಿಕೆಯ ಒಳಿತಿಗಾಗಿ, ಇಸ್ಲಾಂ ಧರ್ಮದ ಏಳಿಗೆಗಾಗಿ, ಸಂಪತ್ತು ಮತ್ತು ಘನತೆ ಗೌರವಗಳ ಉನ್ನತಿಗಾಗಿ, ವೈರಿಗಳು ನಿರ್ನಾಮವಾಗಲೆಂದು ಹಾರೈಸುತ್ತ ಅಲ್ಲಾಹನ ಕೃಪೆಯಾಚಿಸುವ ದುವಾ ಮಾಡಿದರು.

ಜಗದೇವ ರಾಯನಿಗೆ ನೀಡಿದ ಆಶ್ವಾಸನೆಯಂತೆ ಆತನ ಕೈಗೆ ಕೃಷ್ಣದುರ್ಗದ ಕೋಟೆಯ ಕೀಲಿ ಕೈಯನ್ನು ನೀಡಿದರು. ನವಾಬ್ ಸಾಹೇಬರು ಕೋಟೆಯ ಜವಾಬ್ದಾರಿ ವಹಿಸಿಕೊಡುವ ಜೊತೆಗೆ ಅವನನ್ನು ತಮ್ಮ ಸಾಮಂತರನ್ನಾಗಿ ನೇಮಿಸಿದರು. ಕೋಟೆಯ ಒಳಗೆ ಅಗತ್ಯ ವಸ್ತುಗಳ ಕೊರತೆಯಾಗದಂತೆ ವ್ಯವಸ್ಥೆ ಮಾಡಿದರು. ಕೋಟೆಯ ಗೋಡೆಯಲ್ಲಿ ಯದ್ಧದಿಂದಾಗಿ ಆದಂತಹ ಹಾನಿಯನ್ನು ಸರಿಪಡಿಸಲು ಕೂಡ ರಿಪೇರಿಯ ವ್ಯವಸ್ಥೆ ಮಾಡಿದರು.

ನಜ್ಮ್

ಬ ಇಖ್‌ಬಾಲೆ ಶೆಹನ್‌ಶಾಹೆ ಮಲಿಕ್ ಎ ದೀನ್
ಚ್ಯೂಂ ಮಸ್ತೂ ಹು ಶುದ್ ಖಿಲ್‌ಅಯೇ ಘುಖ್ತನೀನ್
ಧರ್ಮ ಪಾಲಕ ಬಾದಶಾಹರ ಪುಣ್ಯದಿಂದ
ಗೆದ್ದುದಾಯಿತು ಬೃಹತ್ ಶಕ್ತಿಶಾಲಿ ಕೋಟೆಯೊಂದ.

ಅಝೀ ಮುಝ್ದು ಪುರ್‌ಗಶ್ತ್ ಶೆಹರೋ ದಯಾರ್
ಚ್ಯೂಂ ಗೋಶೆ ಸದಫ್ ಅಝ್ ದುರ್‍ರಯೇ ಶಹವಾರ್
ಈ ಶುಭವಾರ್ತೆಯಿಂದ ಆನಂದ ತುಂದಿಲರಾದರು ನಗರ ಗ್ರಾಮದ ಜನ
ಅಮೂಲ್ಯವಾದ ಮುತ್ತು ಚಿಪ್ಪಿನ ಕಿವಿಯ ಮೂಲಕ ಹೊರಬಂದಂತೆ.

ಬುವದ್ ರೋಶನ್ ಅಶ್ಯಾಹೆ ಗಾಝಿ ಜಹಾನ್
ಬತಯೆ ಫಶ್ ದಿಬಾಜೆ ತಾಜೆ ನಿಹಾಂ
ಸಮಸ್ತ ವಿಶ್ವವು ಬಾದಶಾಹ ವೀರ ದೊರೆಯಿಂದ ಬೆಳಗಲಿ
ಅವರ ರೇಶ್ಮೆಯ ನುಣುಪಿನ ಖಡ್ಗವು ಅಡಗಿದೆ ಕಿರೀಟದಲಿ.

ಕುದಂಗಶ್ ನಶಾನ್ ದಾದ್ ಅಝ್‌ಮಾಹೋ ಮೆಹರ್
ಬುವತ್ ಖಾನ್‌ಝಾದೆ ಕಮಾನಶ್ ಶೆಪೆಹರ್
ಅವರು ತೊಟ್ಟ ಬಾಣ ಚಂದ್ರ ಸೂರ್ಯರ ನೇರ ಗುರಿ ಇಟ್ಟಿತ್ತು
ಅವರ ದನುಸ್ಸು ಇಡುವ ಭುಜವೂ ಬಲಶಾಲಿಯಾಗಿತ್ತು.

■

*

ಅಧ್ಯಾಯ - ೧೭

ನವಾಬ್ ಮುಸ್ತಫಾ ಸಾಹೇಬರು ಕಿಷನ್ ದುರ್ಗಾ ಕೋಟೆಯುನ್ನು ವಶಪಡಿಸಿಕೊಳ್ಳುವುದು ಹಾಗೂ ಅಸದುಲ್ ಖವಾನೀನನಿಗೆ ವೀರಭದ್ರ ಕೋಟೆಯನ್ನು ಗೆಲ್ಲುವ ಗುರಿಯಿಟ್ಟು ರವಾನಿಸುವುದು ಮತ್ತು ಈ ಗುರಿಯ ನಿಟ್ಟಿನಲ್ಲಿ ತಾವೂ ಶಾಮೀಲಾಗುವುದು:

ಧೈರ್ಯ, ಸಾಹಸ ಮತ್ತು ಶಕ್ತಿಶಾಲಿ ತಾಕತ್ತಿನ ಪ್ರತೀಕವಾಗಿದ್ದ ಶೂರ ಬಾದಶಾಹ ಇಡೀ ವಿಶ್ವವನ್ನು ತಮ್ಮ ವಶಕ್ಕೆ ತೆಗೆದುಕೊಳ್ಳುವ ಇಚ್ಛೆಯನ್ನು ಹೊಂದಿದ್ದರು. ವಿಜಯಶಾಲಿ ಕುದುರೆಯನ್ನು ನಾಲ್ಕು ದಿಕ್ಕಿನಲ್ಲಿ ಓಡಿಸುತ್ತಿದ್ದರು. ಸಫಲದ ದಿಸೆಯ ಆರು ಹಾದಿಗಳನ್ನು ದಾಟಿದರು. ಶೂರ ಬಾದಶಾಹರ ಚುರುಕಾದ ಹದ್ದುಬಸ್ತಿನ ಶಿಸ್ತು ಪಾಲಿಸುವ ಗುಣ ಮತ್ತು ರೀತಿ ಹಾಗೂ ಘನತೆ, ನಸೀಬಿನ ಪುಣ್ಯಗಳಿಂದ, ನವಾಬ್ ಸಾಹೇಬರ ಸಹಕಾರದಿಂದ ಕೃಷ್ಣದುರ್ಗದ ಕೋಟೆಯನ್ನು ಗೆಲ್ಲುವುದು ಸಾಧ್ಯವಾಯಿತು.

ಖಾನ್ ಅಸದುಲ್ ಖವಾನೀನ ತನ್ನ ಒಬ್ಬ ಬಲಶಾಲಿ ಸಿಪಾಯಿ ಗದಗ್ ಲಕ್ಷ್ಮೇಶ್ವರದ ದೇಸಾಯಿ ಎಂಬ ಯುವಕನನ್ನು ಜಗದೇವ್ ರಾವ್‌ನ ವೀರಭದ್ರಕೋಟೆಯನ್ನು ಹತ್ತಲು ಮತ್ತು ವಿವರಗಳನ್ನು ಸಂಗ್ರಹಿಸಿ ತರಲು ಮೊದಲೇ ರವಾನಿಸಿದ್ದ. ಜಗದೇವ ರಾಯನಿಗೆ ಈ ಸುದ್ದಿ ತಲಪಿದಾಗ, ತನ್ನ ರಕ್ಷಣೆಗಾಗಿ ತಯಾರಿ ಮಾಡಿಕೊಂಡು ಗಟ್ಟಿಯಾಗಿ, ಬಲಶಾಲಿಯಾಗಿ ನಿಂತಿದ್ದ. ಬಿಲ್ಲು ಬಾಣ ಹೂಡುವ ಪರಿಣತರ ಒಂದು ತಂಡವನ್ನು ಆ ರಸ್ತೆಯ ಮೇಲೆ ಕಣ್ಣಿಟ್ಟಿರಲು ಆದೇಶಿಸಿದ್ದ. ದೇಸಾಯಿ ಅಲ್ಲಿಗೆ ತಲಪಿದಾಗ, ಕಾಡಿನ ಬದಿಯ ಕೊಳ ಇರುವಲ್ಲಿ ತಲವಾರು ಹಿಡಿದು ವೈರಿಗಳ ಒಂದು ತಂಡವನ್ನು ಹೆದರಿಸಿ ಓಡಿಸಿದ. ಸರಹದ್ದಿನ ಮುಖ್ಯ ಬಾಗಿಲನ್ನು ಶಕ್ತಿಶಾಲಿ ಯುವಕರು ತಮ್ಮ ಮುಷ್ಟಿಯೊಳಗೆ ಮಾಡಿಕೊಂಡಿದ್ದಾರೆ. ಈ

ಸಂದರ್ಭದಲ್ಲಿ ನೀವು ಆದಷ್ಟು ಬೇಗನೆ ಇಲ್ಲಿಗೆ ಆಗಮಿಸಬೇಕೆಂದು ನವಾಬ್ ಸಾಹೇಬರಿಗೆ ಸಂದೇಶವನ್ನು ಕಳುಹಿಸಿದ. ನವಾಬ್ ಸಾಹೇಬರು ೨೦೦ ಕುದುರೆ ಸವಾರರು ಮತ್ತು ಕಾಲಾಳುಗಳ ತಂಡವನ್ನು ದೇಸಾಯಿಯ ಸಹಾಯಕ್ಕಾಗಿ ಕಳುಹಿಸಿದರು. ರಾತ್ರಿ ಕಳೆದಾಗ ಬೆಳಿಗ್ಗೆ ಕೆಲವು ಸಿಪಾಯಿಗಳೊಂದಿಗೆ ಅಸದ್ ಖಾನ ತಂಗಿರುವ ಸ್ಥಳಕ್ಕೆ ಹೋದರು. ಮದ್ಯಾಹ್ನ ಎರಡು ಗಂಟೆಯ ಹೊತ್ತಿಗೆ ನವಾಬ್ ಸಾಹೇಬರು ತಮ್ಮ ಎಲ್ಲ ಮಂತ್ರಿಗಳೊಂದಿಗೆ ಹಿಂದಿನ ಹಾದಿಯ ಮೂಲಕ ಪ್ರಯಾಣಬೆಳೆಸಿದರು. ನವಾಬ್ ಸಾಹೇಬರು ತಲಪುವ ಮೊದಲು ಅಹ್ವಾನ ನೀಡದಿದ್ದರೂ ಗ್ರಾಮಾಂತರದಿಂದ ಬಂದ ಹೆಚ್ಚು ಕಮ್ಮಿ ಒಂದು ಲಕ್ಷ ಅನಾಗರಿಕರಂತೆ ಕಾಣುವ, ಕಂಗಾಲಾದ ಜನರ ತಂಡವೊಂದು ಅಲ್ಲಿಗೆ ತಲಪಿ ಗಲಾಟೆ ಮಾಡಲು ಶುರುಮಾಡಿದ್ದರು. ವೈರಿಸೈನಿಕರು ಚಿಕ್ಕ ಚಿಕ್ಕ ತಂಡಗಳಾಗಿ ಬಾದಶಾಹರ ಸೈನ್ಯದ ಮೇಲೆ ಧಾಳಿಯಿಡಲು ತಯಾರಾಗಿದ್ದರು. ಸೈನಿಕರು ಬಿಲ್ಲಿಗೆ ಬಾಣಹೂಡಿ ಅವರ ತಂಡಕ್ಕೆ ನುಗ್ಗಿದರು. ಇನ್ನೊಂದು ಕಡೆ ರಣರಂಗದಲ್ಲಿ ಶೂರ ಸೈನಿಕರು ಕೋಪಾವಿಷ್ಠರಾಗಿ ಮುನ್ನುಗ್ಗಿ ತಮ್ಮ ಧ್ವಜವನ್ನು ಊರಿದರು. ಅವರ ಖಡ್ಗಗಳ ಮೂಲಕ ಬೆಂಕಿಯ ಕಿಡಿಗಳು ಹಾರುವಾಗ ತಲೆಯ ಪಕ್ಕದಲ್ಲಿ ಸೂರ್ಯನ ಕಿರಣಗಳು ಇಣುಕುತ್ತಿರುವಂತೆ ರಾತ್ರಿಯಲ್ಲಿ ಹೊರಡುವ ಬಾವಲಿಗಳು ಅಪ್ಪಿತಪ್ಪಿ ಹಗಲಲ್ಲಿ ಹಾರಿಬಂದು ಕಣ್ಣುಕಾಣದೆ ನಲಕ್ಕೆ ಉರುಳುತ್ತಿರುವಂತೆ ಕಂಡುಬರುತ್ತಿತ್ತು. ವೈರಿಗಳು ಬಾಣಗಳ ಬಲೆಯೊಳಗೆ ಬಿದ್ದ ಗಿಡುಗಗಳಂತೆ, ತಲೆ ಅರ್ಧ ಕತ್ತರಿಸಲ್ಪಟ್ಟ ಜುಬಾಂ ಮಾಡಿದ ಕೋಳಿಗಳು ತಟಪಟನೆ ಚಡಪಡಿಸುತ್ತ ಬಿದ್ದಿರುವಂತೆ ಕಂಡು ಬಂದವು.

ನಜ್ಮ್

ಗರಿಫ್ತ್ ಅರ್ಝ್ ದಮೇ ತೈರ್ ಸೀಮಾ ಗೂಲ್
ಫಲಕ್ ಚ್ಯೂಂ ಕಶ್ಫ್ ಜಾಯೆ ದರ್ ಬಹರೇ ಖೂನ್
ಖಡ್ಗದ ಅಲಗಿನ ಹರಿತ ಹೊಳೆಯುವ ಸೀಸದಂತೆ
ರಕ್ತದ ಸಮುದ್ರದಲ್ಲಿ ಆಕಾಶ ಸ್ಥಳ ಮಾಡಿ ಕೂತಂತೆ.

ದಮೇ ತೈರ್ ಝ ಅಂಗೂನ ಖುರ್ದಯೇ ಬಘರಖ್
ಕೆ ಅರ್ಝ್‌ಖೂನ್ ಶುದೆ ಮೌಜ್‌ಝುನ್ ಗರ್‌ಬೊ ಶರಖ್
ಖಡ್ಗಗಳ ಭಯದಿಂದ ತಗ್ಗಿದ ವೈರಿತಲೆ ಹರಿತ ಅಲಗಿಗೆ ಬಲಿಯಾಗುತ್ತದೆ
ಪೂರ್ವ ಪಶ್ಚಿಮಗಳಲ್ಲಿ ರಕ್ತದ ಕೋಡಿ ಹರಿಯ ತೊಡಗುತ್ತದೆ.

ಸನಾನೆ ಸರ್ ಬಔಜೆ ಸುರೈಯಾ ರಸಾನಂದ್
ಚಶ್ಮೆ ಕವಾಕಿಬ್ ಫಲಕ್ ಖೂನ್ ಪಶಾನಂದ್
ತಲವಾರಿನ ಧಾರೆಯ ತುದಿ ಸುರೈಯ್ಯಾ ನಕ್ಷತ್ರಕ್ಕೆ ತಗಲುವುದು

ಆಕಾಶದ ನಕ್ಷತ್ರಗಳ ಕಣ್ಣುಗಳಿಂದ ರಕ್ತ ಸುರಿಯುವುದು.

ದರಾಂ ರಮ್ಘ್‌ಗಾಹೆ ಅಝ್‌ಖಿಶಾದೆ ಕಮಾನ್
ಚ್ಯುಂ ತರ್‌ಕಶ್ ಪುರ್ ಅಝ್ ತೀರ್ ಕಶ್ತ್ ಆಸ್‌ಮಾನ್
ರಣರಂಗದಲಿ ನಮ್ಮ ಶೂರರು ಬಿಲ್ಲು ಬಿಡಿಸಿದಾಗ
ಬಾಣಗಳಿಂದ ಆಕಾಶ ತುಂಬುವುದು ಆಗ.

ಕೆಟ್ಟದ್ದನ್ನೇ ಯೋಚಿಸುವ ವೈರಿಗಳು ಬಂದಿಯಾದ ಜೀವಂತ ಹಕ್ಕಿಗಳಂತೆ ಪಂಜರದಿಂದ ಹೊರಬಂದು ಹಾರಾಡುವುದಕ್ಕೆ ಇನ್ನೂ ತಯಾರಾಗಿರಲಿಲ್ಲ, ತಕ್ಷಣವೇ ಮಾರಣಾಂತಿಕ ಹಲ್ಲೆ ನಡೆದು ಸಾಮೂಹಿಕವಾಗಿ ಕೊಲ್ಲಲ್ಪಟ್ಟರು. ಖಡ್ಗದ ತೀಕ್ಷ್ಣ ಹೊಡೆತದಿಂದ ವೈರಿಗಳ ಎದೆಯ ರಕ್ತನಾಳಗಳು ಮತ್ತು ಶ್ವಾಸಕೋಶದ ನಾಳಗಳು ರೇಶ್ಮೆಯ ಗೂಡಿನಿಂದ ನೂಲು ಸುತ್ತುಸುತ್ತಿ ತಿರುಗಿ ಹೊರಬರುವಂತೆ ಹರಿದು ಬರುತ್ತಿದ್ದವು. ರಣರಂಗದ ಗುಲ್ಲು ಗಲಭೆಗಳಲ್ಲಿನ ವಾತಾವರಣದ ಬಿಸಿಯಿಂದ ನಾಚಿಗೆಗೆಟ್ಟ ವೈರಿಗಳು, ಹರಿಯುವ ನದಿಯಲ್ಲಿ ವಯಸ್ಸಾದ ಭಾರಿ ಮೊಸಳೆಯೊಂದು ಬಾಯಿತೆರೆದು ಬೆಂಕಿ ಉಗುಳುವಂತೆ ಮೈದಾನದಲ್ಲಿ ನಿಂತಿದ್ದರು. ಇಂತಹ ಭಯಂಕರ ಪರಿಸ್ಥಿತಿಯಲ್ಲಿ ವೀರ ಬಹುಭುಜರ ಬಾಣಗಳು ವೈರಿಗಳ ಎದೆಯೊಳಗೆ ವೇಗವಾಗಿ ಹೊಕ್ಕು ಹೇಗೆ ಹೊರಬರುತ್ತಿತ್ತೆಂದರೆ, ತಿರುಗುತ್ತಿರುವ ಅರೆಯುವ ಚಕ್ರದಿಂದ ಹೊರಹಾರುತ್ತಿರುವ ದಾಳಿಂಬೆ ಹಣ್ಣಿನ ಬೀಜಗಳು ಅರೆದು ರಸಹೊರಹೊಮ್ಮಿ ಶರಾಬಿನ ರೂಪದಲ್ಲಿ ಹರಿದುಬರುವಂತೆ ಕಾಣಿಸುತ್ತಿತ್ತು.

ನಜ್ಮ್

ಝುಬಸ್ ತೀರ್ ಬಾರಾನ್ ದರಾನ್ ರಝ್ಮ್‌ಗಾಹ್
ಹರ್ ಅಫ್ಲಾಕ್ ಸೈಲಾಬೆ ಖೂನ್ ಬಸ್ತ್‌ರಾ
ರಣರಂಗದಲಿ ಬಿಲ್ಲುಬಾಣದ ಅಸ್ತ್ರ ಪರಿಣಿತರು
ಆಕಾಶದಲಿ ರಕ್ತದ ಕೋಡಿಯನ್ನು ಹರಿಯಬಿಟ್ಟರು.

ಪರೋ ಹಶ್ತ್ ಬರ್‌ರೂಯೆ ಚರ್ಖೆ ಬರೀನ್
ಝು ಪೈಖಾನೆ ಹವಾ ಪರ್ದಾಯೆ ಆಹನೀ
ರಕ್ತ ಧಾರೆಯು ಆಕಾಶದ ಎತ್ತರಕೆ ಹರಿಯಬಿಟ್ಟಿತು
ಬಾಣದ ಮಳೆಯಿಂದ ಗಾಳಿಯು ಕಬ್ಬಿಣದ ಪರದೆಯಂತಾಗಿ ಮಾರ್ಪಟ್ಟಿತು.

ಖದಂಗ್ ಅಝ್‌ತಮಾನೆ ರೂಹ್ ಬಫ್‌ತಾನ್ ಬದಾಶ್ತ್
ಬಹರ್ ಗೋಶಯೆ ಸದ್ ಖಿರ್‌ಮನೆ ಜಾಂ ಗುದಾಶ್ತ್
ಬಿಲ್ಲಿನ ಗುರಿಯನ್ನು ತಲೆತಿರುಕ ವೈರಿಗಳತ್ತ ನೆಟ್ಟರು

ಸಾವಿರಾರು ಗುಪ್ಪೆಗಳಂತೆ ವೈರಿ ದೇಹಗಳ ಉರುಳಿಸಿಬಿಟ್ಟರು.

ಫತಾದ್ ಅರ್ಝ್‌ತುಫ್ ಮೆಹರ್ ಹಾಯೆ ತಫಂಗ್
ಚ್ಯೂಂ ಖುರ್ಷೀದೆ ಆತಿಷ್ ಬ ಮೈದಾನೆ ಜಂಗ್
ತೊಟ್ಟ ಬಾಣಗಳಂತೆ ಥೂ! ಹೀನಸ್ಥಿತಿಯ ಮರಣ ನಿಮ್ಮದು
ಸೂರ್ಯನು ಯುದ್ಧರಂಗದಲಿ ಭುಗಿಲು ಎಬ್ಬಿಸಿದಂತೆ.

ಶೂರ ಸೈನಿಕರು ತಮ್ಮೆಲ್ಲ ಬಲಹಾಕಿ ಮುಂದೊತ್ತಿ, ವೈರಿಗಳ ಸೈನ್ಯವನ್ನು ಸಂಕಷ್ಟಕ್ಕೆ ಸಿಲುಕಿಸಿದರು. ವೈರಿಗಳ ತಲೆಯಮೇಲೆ ತಮ್ಮ ಶಕ್ತಿಶಾಲಿ ತುಳಿತಗಳಿಗೆ ಸಿಕ್ಕು ಮುಖಗಳನ್ನು ಕೋಟೆಯಕಡೆಗೆ ತಿರುಗಿಸಿದರು. ವೈರಿ ಸೈನಿಕರಿಗೆ ನಮ್ಮ ಶೂರ ಸೈನಿಕರ ಶಕ್ತಿಯ ಅಂದಾಜು ಮನದಟ್ಟಾದಾಗ ತಮ್ಮ ಸೋಲು ನಿಖರವೆಂದು ತಿಳಿದುಕೊಂಡರು. ಬಾದಶಾಹರ ಸೈನಿಕರು ನಮ್ಮ ಶಿರವನ್ನು ಪುಡಿಗಟ್ಟಿ ಮಣ್ಣಾಗಿಸುತ್ತಾರೆಂದು ಮನದಟ್ಟು ಮಾಡಿಕೊಂಡು ಅವರಿಗೆ ಶರಣಾಗತರಾಗಿಬಿಡುವ ನಿಶ್ಚಯ ಮಾಡಿಕೊಂಡು ಮುಂದೆ ಬಂದರು. ಜಗದೇವರಾಯನ ಅಳಿಯ ಮತ್ತು ಸಹೋದರ ಇಬ್ಬರೂ ಒಪ್ಪಂದ ಮಾಡಿಕೊಂಡು ವೀರಭದ್ರ ಕೋಟೆಯ ಮುಖ್ಯದ್ವಾರದ ಕೀಲಿ ಕೈಯನ್ನು ನವಾಬ್ ಸಾಹೇಬರಿಗೆ ಒಪ್ಪಿಸಿದರು.

ನಜ್ಮ್

ಆಫ್ತಾಬೆ ಝುಫರ್ ಝು ಶರ್‌ಖೆ ದೀನ್
ಪರ್‌ತು ಅಂದಾಫ್ತ್ ಬರ್ ಝುಮಾನೋ ಝುಮೀನ್
ವಿಜಯದ ಸೂರ್ಯ ಧರ್ಮ ಸಂಸ್ಥಾಪನೆಗಾಗಿ
ಭೂಮಿ ಮತ್ತು ಸಮಸ್ತ ಜಗದಲಿ ಅವರ ಬೆಳಕು ಬೀಳುತಿದೆ.

ನೂರೆ ಇಸ್ಲಾಂ ಶುದ್ ಜಹಾಂ ಅಫ್‌ರೋಝ್
ಯಾಫ್ತ್ ಖುರ್‌ಷೀದ್ ತಾಲಯಿ ಆಫ್‌ರೋಝ್
ಇಸ್ಲಾಮಿನ ಬೆಳಕು ಜಗತ್ತಿಗೆ ಪ್ರಭೆ ನೀಡಿತು
ಸೂರ್ಯನು ಬೆಳಕು ಚೆಲ್ಲುವ ಹಾದಿ ಪಡೆಯಿತು.

ಬಹರ್ ಶುಕ್ರಾನಾ ಚರ್ಖ್ ಸಜ್‌ದಾ ಕುನಾನ್
ಫೌಜ್ ಸುಲ್ತಾನೆ ದೀನ್ ನಮೂನ್ ಬಯಾನ್
ಧನ್ಯವಾದ ಹೇಳುವ ಸಲುವಾಗಿ ಆಕಾಶ ಸಾಷ್ಟಾಂಗ ಮಾಡಿತು
ಬಾದಶಾಹನ ಸೈನ್ಯ ಘನತೆ ಗೌರವದೊಂದಿಗೆ ಪ್ರಕಟಗೊಂಡಿತು.

ಶಾಹೆ ಘಾಝಿ ಖುದ್‌ಯೊ ಆಲಂಗೀರ್
ಮಝ್‌ಹರೆ ಝಾತೆ ಪಾಕೆ ಹಯ್ಯೊಖದೀರ್

ಶೂರ ಬಾದಶಾಹ ಜಗತ್ತನ್ನು ಆಳುವವರಿದ್ದಾರೆ
ಅಲ್ಲಾಹ ಹಯ್ಯೊಖದೀರ್*ನ ನೆರಳಂತೆ ಇದ್ದಾರೆ

*(ಅಲ್ಲಾಹನ ಹೆಸರುಗಳಲ್ಲೊಂದು- ಅಮರನು ಮತ್ತು ಸೃಷ್ಟಿಕರ್ತನು)

ಆಂಖೆ ತೈರಶ್ ಚ್ಯೂಂ ಸರ್ ಬರ್ ಅಫ್‌ರಾಝುದ್
ಸರ್ ಕುಶಾರಾ ಝೆಪಾ ದರ್ ಅಂದಾಝುದ್
ಬಾದಶಾಹರ ಖಡ್ಗ ತಲೆಯೆತ್ತಿ ಮೇಲೇಳುತಿದೆ
ವೈರಿಯ ಕಾಲೆಳೆದು ಎತ್ತಿ ಬಿಸುಟುತಿದೆ.

ತಾ ಬುವದ್ ಕಿಶ್ವರ್ ಬಕಾ ಆಬಾದ್
ಝಫರ್ ಅಸ್ತೈಗ್ ಷಯೇ ಮುಝಫ್ಫರ್‌ಬಾದ್
ಈ ದೇಶ ಎಲ್ಲಿವರೆಗೆ ಇರುವುದೋ ಅಲ್ಲಿತನಕ ಸುಖವಾಗಿರಲಿ
ಮುಝಪ್ಪರಾಬಾದಿನ ಬಾದಶಾಹನ ಖಡ್ಗ ಸದಾ ಜಯಗಳಿಸಲಿ.

ವೀರಭದ್ರ ಕೋಟೆಯ ವಿಜಯದ ನಂತರ ಬಾಲಾರಾವ್‌ರನ್ನು ಉಸ್ತುವಾರಿ ನೋಡಿಕೊಳ್ಳುವುದಕ್ಕೆ ನೇಮಿಸಿ ನವಾಬ್ ಸಾಹೇಬರು ಪಯಣ ಮುಂದುವರಿಸಿದರು. ವಿಜಯ ಹಾಗೂ ಘನತೆ ಗೌರವದೊಂದಿಗೆ ಹಜ್ರತ್ ಬಾದಶಾಹ ಗಾಝಿಯವರ ಜೈಕಾರದ ನೀಲವರ್ಣದ ಧ್ವಜವನ್ನು ಒಂಭತ್ತು ಕೋಟೆಗಳಲ್ಲಿ ಹಾರಿಸಿದ ನವಾಬ್ ಸಾಹೇಬರು ವೀರಬಧ್ರ ಕೋಟೆಯನ್ನು ಕೂಡ ವಶಪಡಿಸಿಕೊಂಡರು. ಅಲ್ಲಿ ಎರಡು ದಿನಗಳು ನಿಂತು ಎಲ್ಲರೀತಿಯ ವ್ಯವಸ್ಥೆ ಮಾಡಿ, ನಗರದ ಆವರಣವನ್ನು ಗಟ್ಟಿಯಾಗಿಸುವುದಕ್ಕೆ ವ್ಯವಸ್ಥೆ ಮಾಡಿ, ಬಾಲಾಜಿ ಹೈಬತ್ ರಾವ್‌ನಿಗೆ ಕಾಲಾಳುಗಳು ಮತ್ತು ಕುದುರೆ ಸವಾರರ ತಂಡವನ್ನು ನೀಡಿ ನೋಡಿಕೊಳ್ಳುವ ಜವಾಬ್ದಾರಿ ವಹಿಸಿಕೊಟ್ಟರು. ಜಗದೇವರ ಅಳಿಯ ಮತ್ತು ಸಹೋದರನಿಗೆ ಪ್ರಾಣಭಿಕ್ಷೆ ನೀಡಿ ಸ್ವತಂತ್ರರಾಗಿರಲು ಬಿಟ್ಟುಕೊಟ್ಟರು. ಮೊಹರ್ರಂ ತಿಂಗಳ ೧೨ನೇ ದಿನಾಂಕದಂದು ಅಲ್ಲಿಂದ ಮುಂದೆ ಪ್ರಯಾಣಬೆಳೆಸಿದರು.

ರುಬಾಯಿ

ನಿಕೋನಾಮಿ ಕೆ ಬಾಶತ್ ನಿಯತಶ್ ಪಾಕ್
ಬಗರ್ದ್ ದಾಮನೆ ಊ ಗರ್ದದ್ ಅಫ್‌ಲಾಕ್
ಒಳ್ಳೆಯವನ ಅವನು ಅಂತರ್ಯದಲಿ ಶುದ್ದಿ ಹೊಂದಿರುವವನು
ಅವರ ಆಶ್ರಯದ ನೆರಳ ಚಕ್ರದಲಿ ಆಕಾಶವು ಕೂಡ ಚಲಿಸಿತು

ಅಯಾ ಗರ್ದತ್ ಝ ತೈಗಶ್ ಜೋಹರೇ ಫತಾಹ್
ಬುವತ್ ಪೈವಸ್ತ ತೀರಶ್ ರೈ ಬರೇ ಫತಾಹ್

ಅವರ ಖಡ್ಗದಿಂದ ಜಯದ ಸುಳಿವು ಸಿಗುವುದು
ಅವರೆಸೆದು ನಾಟಿದ ಬಾಣ ಜಯಕೆ ಆಶ್ರಯ ನೀಡುವುದು.

ನವಾಬ್ ಸಾಹೇಬರು ವಿಜಯೀ ಸೈನ್ಯದೊಂದಿಗೆ ಮುಂದುವರಿದಾಗ ಅವರ ಸಕಲ ಸೇನೆಯ ಹೆಜ್ಜೆಗಳ ಸಪ್ಪಳಕ್ಕೆ ಭೂಮಿ ನಡುಗತೊಡಗಿತು. ಅವರ ಕುದುರೆಸವಾರರ ಸೈನ್ಯದ ಕದುರೆಗಳ ಓಟದ ಕರಕಟ ಶಬ್ಧದಿಂದ ಮೈದಾನ ಮತ್ತ ಕಾಡು ಆಕಾಶದ ಕಡೆ ತಿರುಗತೊಡಗುತ್ತಿತ್ತು. ಇದರಿಂದ ಅಲ್ಲಿ ಹೊಸದಾಗಿ ಮೂಡಿದ ಮಣ್ಣಿನ ರಾಶಿಯು ನಕ್ಷತ್ರಗಳ ಕಣ್ಣಲ್ಲಿ ಕಾಡಿಗೆ ಇಟ್ಟಂತಿತ್ತು. ಬಂಗಾರ ವರ್ಣದ ಧ್ವಜದಲ್ಲಿ ಕೆಂಪು ಬಣ್ಣದ ಜರಿಯ ಮೇಲೆ ಬಿದ್ದ ಸೂರ್ಯನ ಕಿರಣಗಳು ವಿಶೇಷ ಸುಂದರ ಬೆಳಕಿನ ಚಿತ್ತಾರ ಮೂಡಿಸಿತ್ತು. ಮೇಲೆ ಗುರಿಯಿಟ್ಟ ಬಾಣದ ತುದಿಯಲ್ಲಿನ ಚೂಪಾದ ಮೊನೆಯ ಮೂಲಕ ನಕ್ಷತ್ರಗಳ ಕಣ್ಣುಗಳ ನಡುವೆ ಬಿಂದಿಯನ್ನು ಹಚ್ಚಿದಂತೆ ಕಾಣುತ್ತಿತ್ತು, ಅವನ್ನು ಕೆಳಗೆ ಗುರಿಯಿಟ್ಟಲ್ಲಿ ತಿರುಗುವ ಆಕಾಶ, ಎದೆಕವಚವನ್ನು ಧರಿಸಿದ ಶೂರನ ಕೈಯಲ್ಲಿನ ಎತ್ತಿಹಿಡಿದ ಢಾಲಿನಂತೆ ಕಾಣುತ್ತಿತ್ತು.

ನಜ್ಮ್

ಸರ್ ಅಝ್ ದೋಶೇ ಗರ್ದೂನ್ ಅಲಂ ಡರ್‌ಕಶೀದ್
ಬ ಖುರ್ಷೀದೆ ತಾಬ ಕಲಂ ಬರ್‌ಕಶೀದ್
ತಲೆಯ ಮೇಲಿನ ಆಕಾಶದ ಭುಜ ಧ್ವಜವನ್ನು ಎತ್ತಿ ಹಿಡಿಯಿತು
ಹೊಳೆಯುವ ಸೂರ್ಯನ ಕಿರಣಗಳು ಹಣೆಬರಹದ ಲೇಖನಿಯು ಗೆರೆಯಂತಾಯಿತು

ಶುದ್ ಅಝ್‌ಹಾಯೆಹೂ ದಶ್ತೊ ದರ್ ಪುರ್ ಖರೋಷ್
ಚ್ಯೂಂ ದರಿಯಾಕೆ ತೂಫಾನ್ ದರಯಾದ್ ಬಜೋಶ್
ಸೈನಿಕರ ಘೋಷ ಸದ್ದುಗಳಿಂದ ಕಾಡುಮೇಡಲ್ಲಿ ಗುಲ್ಲೆದ್ದಿತು
ಸಮುದ್ರದಲಿ ತೂಫಾನು ರಭಸದಿಂದ ನುಗ್ಗುತ್ತ ಬರುವಂತಿತ್ತು.

ಝುನೂಕೆ ಸನಾಹಾಯೆ ಬರೂಹೆ ಹವಾ
ಚ್ಯೂಂ ಮುರ್‌ಗಾನೆ ಬಿಸ್‌ಮಿಲ್ ತ್ವಕೀದೇ ಹುಮಾ
ಬಾಣಗಳ ಚೂಪು ಮೊನೆ ಗಾಳಿಯ ಮೇಲೆ ಹರಿದಾಡಿತು
ಹುಮಾ* ಹಕ್ಕಿಯು ತುಡಿಯುವ ಜುಬಾಂ ಕೋಳಿಯಂತಾಯಿತು.

*(ಹುಮಾ ಒಂದು ಶುಭದಾಯಕ ಹಕ್ಕಿ. ಅದರ ಆಯುಷ್ಯ ನೀಳವಾಗಿರುತ್ತದೆಂಬ ನಂಬಿಕೆಯಿದೆ)

ಶುದ್ ಅಝ್ ಫೌಜೆ ಫೀಲಾನೆ ಜಂಗೀ ಅಯಾಂ

ಬಹರ್ ಸೂ ಯೆ ಚಂದೀ ಹರ್ಘೂರ್ ಆಸ್‌ಮಾಂ
ಆನೆಗಳ ಸೈನ್ಯ ರಣರಂಗದಲಿ ಸಾಗುವುದು ಕಾಣುವಾಗ
ಎಲ್ಲ ದಿಕ್ಕುಗಳಲ್ಲಿ ಸಾವಿರಾರು ಆಕಾಶಗಳು ಕಂಡುಬರುವುದು.

ನವಾಬ್ ಸಾಹೇಬರು ಹಿಂತಿರುಗಿ ಬರುವ ಸುದ್ದಿಯಿಂದ ವೈರಿಗಳ ಗುಂಪಿನಲ್ಲಿ ತೂಫಾನು ಎದ್ದಂತಾಯಿತು. ಇವರ ಮೇಲಿನ ಘನತೆ ಗೌರವ ಮತ್ತು ಭಯದಿಂದ ವೈರಿಗಳಲ್ಲಿ ಅಡಿಯಿಂದ ಮುಡಿತನಕ ನಡುಕ ಮೂಡಿ ಕೈ ಬೆರಳುಗಳು ಕೊಳೆತು ಕಳಚಿಬಿದ್ದಂತಾಯಿತು.

ತಮ್ಮ ಮನೆಯವರು ಮತ್ತು ಮನೆಯಲ್ಲಿರುವ ಸಾಮಾನುಗಳ ಸುರಕ್ಷೆಯ ಬಗ್ಗೆ ನೆನೆದು ವ್ಯಥೆಯಿಂದ ವೈರಿಗಳ ಹೃದಯದ ಪರಿಸ್ಥಿತಿ ಹಳೆಯ ಮಹಲಿನ ತಳಪಾಯ ಒಡೆದು ಬಿದ್ದಂತಾಯಿತು. ಕಹಳೆಗಳನ್ನು ಊದುವಂತೆ ತಲೆಯನ್ನು ತಗ್ಗಿಸಿ ಚೀರುತ್ತ ಕೂಗುತ್ತ ಪರ್ವತ ಕಾಡುಗಳತ್ತ ಎಲ್ಲೆಂದರಲ್ಲಿ ಓಡತೊಡಗಿದರು. ಜಗದೇವರಾಯ ಕೂಡ ಶರಣಾಗತನಾದನೆಂಬ ಸುದ್ದಿ ತಿಳಿದಾಗ ಅವರ ಪರಿಸ್ಥಿತಿಯು ಇನ್ನಷ್ಟು ಕಂಗೆಟ್ಟು ಹೋಯಿತು. ಜಗದೇವರಾವ್ ಎಂದರೆ ಹಿಂದೆ ಒಂದು ಕಾಲದಲ್ಲಿ ಇಲ್ಲಿನ ಪ್ರಖ್ಯಾತ ರಾಜನಾಗಿದ್ದ. ಆದರೆ ಅವನ ಅಹಂಕಾರ ಮತ್ತು ಸಂಪತ್ತಿನ ಮದದಿಂದಾಗಿ ತನ್ನ ತಲೆಯನ್ನು ಆಕಾಶದ ಕಡೆಗೆ ಇಟ್ಟಿದ್ದ. ಈಗ ಅವನು ತುಂಬ ತೊಂದರೆಗೊಳಗಾಗಿ ತನ್ನೆಲ್ಲ ಅಹಂಕಾರವನ್ನು ದೂರವಿಟ್ಟು ಸಾಮಾನ್ಯನಾಗಿ ನವಾಬ್ ಸಾಹೇಬರ ಆಶ್ರಯಕ್ಕೆ ಬಂದಿದ್ದ. ಅವರ ಮಾತುಗಳನ್ನು ತನ್ನ ಕಿವಿಯ ಆಭರಣವನ್ನಾಗಿಸಿಕೊಂಡು ಅಂದರೆ ಹೇಳಿದಂತೆ ಮಾಡಲು ಒಪ್ಪಿಕೊಂಡು ಬಂದಿದ್ದ. ಬಲಿಷ್ಠವಾದ ದೇವ ದುರ್ಗ ಕೋಟೆಯನ್ನು ನವಾಬ್ ಸಾಹೇಬರ ವಶಕ್ಕೆ ಒಪ್ಪಿಸಿದ. ಹಿಂದೆ ದೊಡ್ಡದೊಡ್ಡ ಬಲಶಾಲಿ ರಾಜರು ಕೂಡ ಯುದ್ಧದಲ್ಲಿ ಜಯಿಸಲು ಸಾಧ್ಯವಾಗದ ದೇವವದುರ್ಗ ಕೋಟೆಯನ್ನು ನವಾಬ್ ಸಾಹೇಬರು ವಶಪಡಿಸಿಕೊಳ್ಳುವಲ್ಲಿ ಜಯಶಾಲಿಗಳಾಗಿದ್ದರು.

ಅಭ್ಯಾತ್

ಝುಫರ್ ಆಮದ್ ಬಯಿಸ್ತಿಖ್‌ಬಾಲೆ ನವಾಬ್
ಪಲಕ್ ರಾ ಗುಫ್ತ್ ಬಹರ್ ಸಜ್ದಾ ಬಶತಾಫ್ತ್
ನವಾಬರ ಬಳಿ ವಿಜಯ ತಾನೇ ಚಲಿಸುತ್ತ ಬಂತು
ಆಕಾಶಕ್ಕೆ ಹೇಳಲಾದಂತೆ ಅದು ಸಜ್ದಾ ಮಾಡಲು ಓಡಿತು.

ಬವತ್ ಮಹರ್ ಶಹೆ ದೀನ್ ದರ್‌ದಿಲೇ ವೂ
ಶರದ್‌ಗರ್ ಅರ್ಷ್ ಗರ್‌ದದ್ ಮಂಝಿಲೆ ವೂ
ಬಾದಶಾಹರ ಕೃಪೆಯು ಅವರ ಹೃದಯದಲ್ಲಿರುವುದು

ತಂಪು ಹುಟ್ಟಿಸುವ ಈ ಕೃಪೆ ಅರ್ಷ್ ತಲಪುವಂತಹದು.

(ಸ್ವರ್ಗಲೋಕದಲ್ಲಿನ ಅಲ್ಲಾಹನ ಸಿಂಹಾಸನ)

ಅಲಂ ಗರ್ದೀದ ಝಿಆಂ ದರ್ ಸರ್‌ಫರಾಝಿ
ಕೆ ಸಾಝಿದ್ ಜಾನ್ ಫಿದಾಯಿ ಶಾಹೆ ಗಾಝಿ
ಎತ್ತರದ ಘನತೆಯಲಿ ಅವರ ಧ್ವಜ ಅರಳಿ ಹಾರಾಡುವುದು
ಶೂರ ಬಾದಶಾಹರ ಮೇಲೆ ಜೀವ ಪಣ ಇಟ್ಟವರದು.

ಈ ಬಲಿಷ್ಠ ಕೋಟೆಯ ಬಲದ ಬಗ್ಗೆ ಲೇಖನಿಯಿಂದ ಬರೆಯಲು ತೊಡಗಿದಾಗ ಲೇಖನಿಯ ಬಿಂದುವೊಂದೇ ಸಾಕು ಆಕಾಶವನ್ನು ಆವರಿಸಿ ಹೊರಬರುವುದು. (ಉತ್ಪ್ರೇಕ್ಷೆಯ ಮಾತು –ಕೋಟೆಯ ಶ್ರೇಷ್ಟತೆಯ ಬಗ್ಗೆ ಬರೆಯ ತೊಡಗುವಾಗ ಶಬ್ಧಗಳಲ್ಲಿ ಮೂಡಿಸಲಾಗದ ಸ್ಥಿತಿಯನ್ನು ಹೇಳುತ್ತಾನೆ) ಕೋಟೆಯ ಗೋಡೆಯ ತಳಪಾಯದ ಬಲಿಷ್ಠತೆಯ ಎದುರಲ್ಲಿ ನಯ್ಯರೆ ಆಝಂ ಎನ್ನುವ ಆಕಾಶದ ದೊಡ್ಡ ನಕ್ಷತ್ರವು ಕೂಡ ಚಿಕ್ಕ ಮಕ್ಕಳು ತಾಯ ಮಡಿಲಲ್ಲಿ ಅಡಗುವಂತೆ ತನ್ನ ತಲೆಯನ್ನು ಬಾಗಿಸಿ ಅಡಗಿರಲು ಬಯಸುತ್ತದೆ. ಕೋಟೆಯ ಒಳಗೆ ಒಂದೇ ಕಲ್ಲಿನಿಂದ ಮಾಡಿದ ದೊಡ್ಡ ಹೌಝ್(ಕೊಳ) ಮಾಡಿದ್ದಾರೆ. ಅದರ ನೀರಿನ ಹನಿಯ ಗೌರವಾರ್ಥ ಹರಿಯುವ ನದಿಯ ಅಲೆಗಳ ಕೈಗಳನ್ನು ಒಮ್ಮೆ ಎದೆಯ ಮೇಲಿಟ್ಟು ಇನ್ನೊಮ್ಮೆ ತಲೆಯ ಮೇಲಿಟ್ಟು ನಮಸ್ಕರಿಸುತ್ತಿದೆ. ಕೊಳದ ಪವಿತ್ರ ನೀರು ಸ್ವಚ್ಛ ಮತ್ತು ಸಿಹಿ ಹೇಗಿದೆ ಎಂದರೆ ಜೇನು ಸವಿದಂತಹ ಮಾತುಗಳನ್ನಾಡುವ ಹುಡುಗಿಯರ ನಾಲಗೆಯಂತಿದೆ.

ಈ ಕೊಳದ ನೀರನ್ನು ಯಾರೇ ಕುಡಿದರೂ ತನ್ನ ಬದುಕಿನ ಅರ್ಥ ಹಾಗೂ ಉದ್ದೇಶವನ್ನು ಅರಿತವನಾಗಿರುತ್ತಾನೆ, ಮತ್ತು ಓಡುತ್ತಾನೆ(ಅಂದರೆ ಬದುಕಿನ ಹಾದಿಯಲ್ಲಿ ಗೆಲುವನ್ನು ಸಾಧಿಸುತ್ತಾನೆ).

ಕೊಳದ ನಾಲ್ಕೂ ದಿಕ್ಕಿನಲ್ಲಿ ಅಗಸರು ತಲೆ ತಗ್ಗಿಸಿ ಕೆಲಸದಲ್ಲಿ ನಿರತರಾಗಿರುವಂತೆ, ಈ ನೀರನ್ನು ಹೊರತುಪಡಿಸಿ ಬೇರೆ ಯಾವ ನೀರಿನಿಂದಲೂ ಬಟ್ಟೆ ಸ್ವಚ್ಛವಾಗದು ಎನ್ನುತ್ತಿರುವಂತಿತ್ತು. ಈ ಕೊಳದ ಸುತ್ತ ಸುಂದರ ವಾತಾವರಣವನ್ನು ಹುಟ್ಟಿಸುವ ಗಿಡ ಮರಗಳ ಹೂಹಣ್ಣುಗಳು ತುಂಬಿದ ವಿಶಾಲವಾದ ತೋಟವಿದೆ. ತುಂಬ ಆಕರ್ಷಕ ಮತ್ತು ಮನಮೋಹಕವಾದ ಈ ತೋಟವೆಷ್ಟು ವಿಶಾಲವಾಗಿದೆ ಎಂದರೆ ತೋಟದ ಮಾಲಿ ಒಂದೇ ದಿನದಲ್ಲಿ ಇಡೀ ತೋಟವನ್ನು ಸುತ್ತಿ ಬರುವುದು ಅಸಾಧ್ಯವಾಗಿತ್ತು.

ಖಿತಾ

ಫಲಕ್ ಝೀರೆ ಹರ್ ನಖ್ಲ್ ಪುರ್ ಬರ್‌ಗೋ ಬಾರ್
ಚ್ಯೂಂ ತ್ವಿಫ್‌ಲಾನ್ ಪಯ್ ಮೇವಾ ದರ್ ಇಂತೆಝೂರ್
ಆಕಾಶದ ಕೆಳಗೆ ಯಾವುದೋ ಮರಗಳು ನಿಂತಿರುವಂತೆ
ಅದರ ಫಲವನ್ನು ಮಕ್ಕಳು ಅಪೇಕ್ಷಿಸಿ ಕಾಯುತಿರುವಂತೆ.

ಅಯಾನ್ ನಾರ್ಜೀಲ್ ಅಝ್‌ದರಖ್ತ್ ಆಜಾಂ
ಕೆ ಬಾಶತ್ ಶುಗೂ ದರ್ ಬರೀಮಿಯೇ ಕುಶಾಂ
ಅಲ್ಲಿ ನೋಡಿ, ತೋಟದಿ ತಲೆದೂಗುವ ತೆಂಗಿನ ಮರಗಳು
ಶರಾಬು ಹೊಯ್ಯುತಿರುವಂತೆ ಶರಾಬಿಗಳಿಗೆ, ಹೂಜೆಯ ಕೊಳವೆಗಳು.

ನವಾಬ್ ಸಾಹೇಬರು ಈ ಕೋಟೆಯಲ್ಲಿ ಐದು ದಿನಗಳ ಕಾಲ ತಂಗಿದರು. ಇಲ್ಲಿನ ತೋಟಗಳಲ್ಲಿ ಅಡ್ಡಾಡಿ ಅವರ ಮನಸ್ಸು ಪ್ರಫುಲ್ಲಗೊಂಡು ಆನಂದತುಂದಿಲರಾದರು. ಎಲ್ಲರ ಜೊತೆಗೆ ಸಂಭ್ರಮಿಸಿ ತನ್ನ ಧನ್ಯವಾದಗಳನ್ನು ಹೇಳಿದರು. ಹಸನ್ ಖಾನ್ ಮಿಯಾಂ, ಯಾಕೂಬ್ ಮತ್ತು ದಿಲಾವರ್ ಖಾನ್‌ರಿಗೆ ಒಂದು ಸಾವಿರ ಕುದುರೆಸವಾರರ ತಂಡದೊಂದಿ ಮುನ್ನಡೆಯುವಂತೆ ಆದೇಶ ನೀಡಿದರು. ತಾವು ಒಳರಸ್ತೆಯ ಮೂಲಕ ಒಂದು ಸೈನ್ಯತುಕಡಿಯೊಂದಿಗೆ ಪ್ರಯಾಣಬೆಳೆಸಿದರು. ಆನಂದಬಾದಿನ ಬಳಿಯ ಹಳ್ಳಿಯೊಂದರಲ್ಲಿ ತಲಪಿದಾಗ ಅಲ್ಲಿ ಕೆಲವು ದಿನಗಳ ಕಾಲ ವಿಶ್ರಾಂತಿ ಪಡೆದರು. ಆ ಗ್ರಾಮದ ಆವರಣ ಹಿಂದೆ ಕೆಡವಲಾದುದನ್ನು ಸರಿಪಡಿಸಲು ಕ್ರಮ ಕೈಗೊಂಡರು. ಅವರಲ್ಲಿ ಭರವಸೆಯ ಮತ್ತು ಅರ್ಹ ವ್ಯಕ್ತಿಯೊಬ್ಬನನ್ನು ಆರಿಸಿ ಅಲ್ಲಿನ ಆಡಳಿತ ವ್ಯವಸ್ಥೆಯನ್ನು ನೋಡಿಕೊಳ್ಳಲು ನೇಮಕಾತಿ ಮಾಡಿ ತಮ್ಮ ಪ್ರಯಾಣವನ್ನು ಮುಂದುವರಿಸಿದರು. ಮುಂದೆ ಅವರು ಅಮರಾವತಿ ತಲಪಿದರು. ಇಲ್ಲಿಂದ ಆನಂದಬಾದ್ ಮೂರು ಮೈಲಿ ದೂರದಲ್ಲಿತ್ತು. ಅಮರಾವತಿಯಲ್ಲಿ ಅವರು ತಂಗಿದರು. ಸಾಕಷ್ಟು ಶ್ರಮ ಮತ್ತು ಸುವ್ಯವಸ್ಥೆಯೊಂದಿಗೆ ಇಲ್ಲೊಂದು ಬಲಿಷ್ಠ ಕೋಟೆಯನ್ನು ಕಟ್ಟಬೇಕೆಂಬ ಅಭಿಲಾಶೆ ಅವರಲ್ಲಿ ಮೂಡಿತು. ಇದು ಎಂತಹ ಕೋಟೆಯಾಗಿರಬೇಕೆಂದರೆ ದೇವದೂತರ ಗುಂಪು ಬುರುಜಿನ ಕಮಾನುಗಳಲ್ಲಿ ತಮ್ಮ ರೆಕ್ಕೆಯನ್ನು ಬಿಡಿಸಿಕೊಂಡು ಸೃಷ್ಟಿಕರ್ತನ ಸುಂದರ ಪ್ರಕೃತಿಯ ಸೃಷ್ಟಿಯನ್ನು ನೋಡುತ್ತ ಕೂತಿರುವಂತಿರಬೇಕು. ನವಾಬ್ ಸಾಹೇಬರು ಅಮರಾವತಿಯ ೨೯೦೦೦ ತೆಂಗಿನ ಮರಗಳ ಸುಂದರ ತೋಟವನ್ನು ನೋಡಲು ಹೋದರು. ಈ ತೆಂಗಿನ ಮರಗಳ ತಲೆಯ ಸೋಗೆಯ ಗರಿಗಳ ಸುಂದರ ಛತ್ರಿ ಸಿದ್ರ ಮತ್ತು ತೂಬ (ಸ್ವರ್ಗ ಲೋಕದಲ್ಲಿರುವ ಪವಿತ್ರ ಮರ ಮತ್ತು ಸ್ವರ್ಗದ ತೋಟ)ದ ಹಾಗಿನ ಭವ್ಯತೆ ಇತ್ತು. ತೆಂಗಿನ ಮರದ ಸೋಗೆಗಳ ಹಸಿರು ಚಾಮರದಡಿಯ ವಾತಾವರಣದಲ್ಲಿ

ಸಾವಿರಾರು ಮುಗಿಲುಗಳಿಗೆ ಆಸರೆ ಪಡೆಯುವ ಆಸೆ ಹುಟ್ಟಿಸುವಂತಿತ್ತು. ಈ ತೋಟದಲ್ಲಿ ಸುತ್ತಾಡಿದ ನಂತರ ನವಾಬ್ ಸಾಹೇಬರು ಅಮರಾವತಿಯಿಂದ ಆನಂದ್ ಬಾದ್‌ಗೆ ಪಯಣಿಸಿದರು.

ಖಿತಾ

ಝೆ ಲುತ್ಫೆ ಶಾಹೆ ಘಾಝಿ ಮುಸ್ತಫಾ ಖಾನ್
ಗುಲೇ ಇಕ್‌ಬಾಲ್ ಚೀದಾ ಝೆ ಬಾಗೇ ದೌರಾನ್
ಮುಸ್ತಫಾ ಖಾನರ ಘನತೆ ವೀರ ಬಾದಶಾಹರ ಕೃಪೆಯಿಂದ
ನಸೀಬಿನ ಕೆಲವು ಹೂಗಳನ್ನು ಆರಿಸಿದರು ಈ ತೋಟದಿಂದ

ಝೆ ರಾಯೆ ವೂ ಜಹಾಂ ಆಂ ರೋಶ್ನಿ ಯಾಫ್ತ್
ಕೆ ಚರ್ಖ್ ಅರ್ಝ್ ಮೆಹರೆ ತಾಬಾಂ ರೂಯೆಬರ್ತಾಫ್ತ್
ಅವರು ಅಭಿಪ್ರಾಯ ನೀಡಿದಂತೆ ಜಗದಲಿ ಬೆಳಕು ಮೂಡಿತು
ಅವರ ಕೃಪೆಯಿಂದ ಆಕಾಶದಲಿ ಚಂದ್ರನ ಮುಖವು ಇನ್ನಷ್ಟು ಬೆಳಗಿತು.

ನವಾಬ್ ಸಾಹೇಬರ ಕಣ್ಣಿನಲ್ಲಿ ಈ ಕೋಟೆಯ ಬಳಿಯಲ್ಲಿರುವ ಎಲ್ಲಮ್ಮ ಗಿರಿ ಮತ್ತು ಆಸುಪಾಸಿನ ಪ್ರಾಂತ್ಯವನ್ನು ತಮ್ಮ ಇಲಾಖೆಗೆ ಸೇರಿಸಿಕೊಳ್ಳಬೇಕೆಂಬ ಇಚ್ಛೆ ಮೂಡಿತ್ತು. ಇದರ ಸಲುವಾಗಿ ಸಾಕಷ್ಟು ಶೂರ ವೀರ ಎದೆಗಾರಿಕೆಯುಳ್ಳ ಮತ್ತು ಕೋಟೆಗಳನ್ನು ಗೆಲ್ಲಬಲ್ಲ ಪರಿಣಿತ ಸರದಾರರ ತಂಡ ತಮ್ಮ ಆಕಾಂಕ್ಷೆಯನ್ನು ನೆರವೇರಿಸಲು ಅಗತ್ಯವಿದೆಯೆಂದುಕೊಂಡರು. ಶೂರ ಬಾದಶಾಹರ ಅವರ ಘನತೆ ಮತ್ತು ಗೌರವವನ್ನು ಉನ್ನತ ಮಟ್ಟಕ್ಕೇರಿಸುವ ಉದ್ದೇಶ ಮತ್ತು ಅಲ್ಲಾಹನ ಕೃಪೆಯನ್ನು ಸದಾ ನೆನೆಯುವಂತಹ ಶೂರರನ್ನು ಈ ಕೆಲಸದಲ್ಲಿ ನೇಮಿಸಬೇಕೆಂಬ ಯೋಚನೆಯೂ ಅವರಲ್ಲಿತ್ತು. ಈ ಕಾರಣಕ್ಕಾಗಿ ನವಾಬ್ ಸಾಹೇಬರು ಅಮರಾವತಿಯಿಂದ ಆನಂದಬಾದದ ಕಡೆಗೆ ಪಯಣಿಸುವಾಗ ಮಧ್ಯೆ ಈ ಯೋಚನೆ ಮೂಡಿದ್ದರೂ ಅಲ್ಲಿ ನಿಲ್ಲದೆ ಮುಂದೆ ನಡೆದಿದ್ದರು. ನವಾಬ್ ಸಾಹೇಬರು ತಮ್ಮ ಜೊತೆಯಲ್ಲಿರುವ ಅಸದುಲ್ ಖವಾನೀನ್‌ರ ಮುಂದೆ ತನ್ನ ಈ ಯೋಚನೆಯನ್ನುಮುಂದಿಟ್ಟರು. ಖಾನ್ ಅಸದುಲ್ ಖವಾನೀನ್ ಎಂದರೆ ಜಯಶೀಲ ವೀರ ಯೋಧ, ವೈರಿಗಳ ಸೈನ್ಯದೊಳಗೆ ನುಗ್ಗಿ ಸಾಲನ್ನು ಪುಡಿಗಟ್ಟುವ, ಭೂಮಿ ತುಂಬ ತನ್ನ ಯೋಗ್ಯತೆ, ಬಲದಿಂದ ಆವರಿಸುವವನಾಗಿದ್ದು, ಜಯದ ಸಂಕೇತವೆನಿಸಿದ್ದ. ನವಾಬ್ ಸಾಹೇಬರ ಅನುಮತಿ ಪಡೆದು, ಸೈನಿಕರ ತಂಡವನ್ನು ಕರೆದುಕೊಂಡು ಶೀಘ್ರದಲ್ಲೇ ಈ ಉದ್ದೇಶ ಸಾಧನೆಗಾಗಿ ಹೊರಟುನಿಂತರು. ಅತ್ಯಂತ ಶೀಘ್ರವಾಗಿ ಎಲ್ಲಮ್ಮಗಿರಿಯ ಹತ್ತಿರ ತಲುಪಿ, ವಿಜಯದ ಪ್ರಥಮ ಹೆಜ್ಜೆಯ ಸಂಕೇತಗಳನ್ನು ಹಾಜರಿಪಡಿಸಿಕೊಂಡರು.

ಶೇರ್

ಶುದ್ ಅಝ್ ಅಕ್ಸೆ ಶೇರೆ ಅಲಂ ಆಸ್‌ಮಾನ್
ಕೊಹನ್ ಬೇಶಯೆ ಪುರ್ ಜಶೇರೆ ಝಿಯಾನ್
ಆಕಾಶವಾಯಿತು ಸಿಂಹ ಧ್ವಜದ ಪ್ರಭೆಯಿಂದ
ದಟ್ಟಕಾಡು ತುಂಬಿತು ಸಿಂಹದ ಸಿಟ್ಟಿನ ಅಟ್ಟಹಾಸದಿಂದ.

ಚ್ಯೂಂ ತೈಘಯೇ ದಿಲೇರಾನ್ ನಮೂದ್ ಅಝ್‌ಗಸ್ತ್
ಫಲಕ್ ಅಝ್ ಸರ್ ಮೆಹರೂಮಾ ದರ್ ಗುಝಸ್ತ್
ಶೂರರ ಒರೆಯಿಂದ ಹರಿತ ತಲವಾರು ಹೊರಬರುವಾಗ
ಹೊಳಪಿಗೆ ಚಂದ್ರ ಸೂರ್ಯರನ್ನು ಬಿಟ್ಟು ಆಕಾಶ ಹಿಂದೆ ಸರಿವುದಾಗ.

ಈ ಕೋಟೆಯನ್ನು ಸುಲಭದಲ್ಲಿ ನಾವು ಗೆಲ್ಲಲಾರೆವು ಎಂದು ಪ್ರಮುಖ ಸರದಾರರು ಮತ್ತು ಮಂತ್ರಿಗಳು ಅಭಿಪ್ರಾಯಪಟ್ಟರು. ಯಾಕೆಂದರೆ ಇದು ಬಹಳ ಪುರಾತನ ಕಾಲದ್ದಾಗಿದ್ದು ತುಂಬ ಬಲಿಷ್ಠವಾಗಿದೆ. ಎರಡು ದೊಡ್ಡ ಆಳವಾದ ಕಂದಕಗಳು ಇದರ ಸುತ್ತ ಇದೆ. ಇದರಲ್ಲಿ ತುಂಬಿದ ನೀರು ಉಮ್ಮಾನ್ ಸಮುದ್ರದಂತೆ ಭೀಕರ ಅಲೆಗಳನ್ನು ಎಬ್ಬಿಸಿ ಎದೆನಡುಗಿಸುವಂತಿದೆ. ಅಸದ್ ಖಾನ್ ಈ ಅಭಿಪ್ರಾಯಗಳನ್ನು ಕೇಳಿ ಎದೆಗುಂದಲಿಲ್ಲ. ಶೂರ ಹಜ್ರತ್ ಬಾದಶಾಹರ ಆಶೀರ್ವಾದದ ಕೃಪೆಯಿಂದ ಭೂಮಿಯ ನಾಲ್ಕು ದಿಕ್ಕುಗಳು ಮತ್ತು ಆರು ದಿಶೆಗಳನ್ನು ಕೂಡ ಒಂದೇ ಪೆಟ್ಟಿನಲ್ಲಿ ಜಯಿಸಬಲ್ಲ ತಾಕತ್ತು ಪಡೆದಿರುವ ನನಗೆ ಇದೆಲ್ಲ ಯಾವ ಲೆಕ್ಕದ್ದು ಎಂದ. ಈ ಕೋಟೆಯನ್ನು ವಶಪಡಿಸಿಕೊಳ್ಳುವುದಕ್ಕೆ ಇನ್ಯಾವ ವಿಶೇಷ ಪರಿಣಿತಿ ನನಗೆ ಬೇಕಾಗಬಹುದು ಎಂಬುದರ ಮಾಹಿತಿಕೊಡಿ ಎಂದು ಕೇಳಿಕೊಂಡ. ಈ ಮಾತಿಗೆ ಮಂತ್ರಿ ಮಹೋದಯರು ಮತ್ತು ಪ್ರಮುಖರು ಉತ್ತರಿಸದೆ ಮೌನವಾಗಿಬಿಟ್ಟರು. ಇನ್ನೊಂದೆಡೆ ಸಕಲ ಸೈನ್ಯ ತಯಾರಾಗಿ ಆನೆಗಳ ತಂಡವನ್ನು ಪ್ರಥಮ ಸಾಲಿನಲ್ಲಿ ಮುಂದಿರಿಸಿ ನಡೆಸಿಕೊಂಡು, ತಮ್ಮ ಎಲ್ಲ ಹುರುಪುಗಳನ್ನು ಒಂದುಗೂಡಿಸಿ, ಸಕಲ ಸಡಗರಗಳೊಂದಿಗೆ, ಜಯಘೋಷಗಳು, ರಣಕಹಳೆಗಳನ್ನು ಮೊಳಗಿಸುತ್ತಾ ಸೈನ್ಯವು ಎಲ್ಲಮ್ಮ ಗಿರಿಯ ಕೋಟೆಯ ಕಡೆ ಯದ್ಧದ ಲಲಕಾರ ಮಾಡುತ್ತ, ರಣವಾದ್ಯಗಳೊಂದಿಗೆ ಪಯಣವನ್ನು ಬೆಳೆಸಿದರು. ವೈರಿಗಳು ಈ ಬಹದ್ದೂರ ಸಿಪಾಯಿಗಳ ಲಲಕಾರವನ್ನು ಗುಲ್ಲು ಗೌಜಿಗೆ ಭಯಗೊಂಡು ಕೋಟೆಯ ಒಳಗಿನಿಂದ ಹೊರಬಂದು ನೋಡತೊಡಗಿದರು. ತೋಪುಗಳು, ಬಾಣಗಳು ಒಂದೇ ಸವನೆ ಮಳೆಗೆರೆಯುವಂತೆಯೇ, ಸೈನ್ಯ ಒಳನುಗ್ಗಿ ಬರುತ್ತಿರುವುದು ಕಂಡು ಕೋಟೆಯ ಸೈನಿಕರು ಕೋಟೆಯೊಳಗಿನ ಸುರಕ್ಷಿತ ತಾಣವನ್ನು ಹುಡುಕತೊಡಗಿದರು. ಯುದ್ಧ ಶುರುವಾಯಿತು. ಖಾನ್ ಅಸದ್ ಖವಾನೀನ್ ತನ್ನ ಅಸಂಖ್ಯಾತ ಸೈನಿಕರೊಂದಿಗ ತೋಪು ಮತ್ತು ಬಾಣಗಳನ್ನು

ಹೊಸತಾಗಿ ದಟ್ಟ ಕವಿದ ಮೋಡಗಳಿಂದ ಸುರಿವ ಬೋರ್ಗರೆವ ರಭಸದ ಮಳೆಯಂತೆ ಗುಡುಗು ಮಿಂಚಿನೊಂದಿಗೆ ಬೆಂಕಿಯ ಮಳೆ ಗರೆದರು. ಇವೆಲ್ಲ ಕಾರ್ಯಗಳು ಸಮಯೋಚಿತವಾಗಿ ಎಣಿಸಿದಂತೆ ನಡೆಯುತ್ತಿರುವಾಗ ಅಸದ್ ಖಾನ್ ಆನಂದೋತ್ಸಾಹದೊಂದಿಗೆ ಕೋಟೆಯ ಮುಖ್ಯ ದ್ವಾರದ ಕಡೆ ಸೈನ್ಯದೊಂದಿಗೆ ನಡೆದರು. ಬಾದಶಾಹರ ಶೂರ ಸೈನಿಕರು ನೋಡುವಾಗ ಕೋಟೆಯ ಬಾಗಿಲು ಶಕ್ತಿಶಾಲಿ ಕಬ್ಬಿಣದ ಸಲಾಕೆಗಳಿಂದ ರಚಿಸಲಾಗಿದೆಯೆಂದು ತಿಳಿದುಬಂತು. ಅವರು ಪರಿಶೀಲಿಸುವಾಗ ಇದನ್ನು ದೊಡ್ಡ ಕಬ್ಬಣದ ಸುತ್ತಿಗೆಗಳಿಂದ ಮಾತ್ರ ಒಡೆಯುವುದು ಸಾಧ್ಯ, ಯಾಕೆಂದರೆ ಕಬ್ಬಿಣದ ಚೂಪಾದ ಮೀನಿನ ಮುಳ್ಳುಗಳು ಭೂಮಿಯಲ್ಲಿ ಹೂತಿಟ್ಟಂತೆ ಮೂಡಿಬಂದು, ಹಲ್ಲುಗಳಂತೆ ಹೊರಗೆ ಕಾಣುವ ಚೂಪು ಬಾಣದ ತುದಿಗಳಂತೆ ರಚಿಸಲ್ಪಟ್ಟು ಬಾಗಿಲು ತುಂಬ ತುಂಬಿರುವ ಈ ಮಹಾದ್ವಾರವನ್ನು ಬೇಧಿಸಲು ಅತ್ಯಂತ ಶಕ್ತಿಶಾಲಿ ದೊಡ್ಡ ಗಾತ್ರದ ಸುತ್ತಿಗೆಗಳಿಂದ ಮಾತ್ರ ಸಾಧ್ಯವೆಂದು ತೀರ್ಮಾನಿಸಿದರು.

ಶೇರ್

> **ಸಪಾಯೆ ಖುಸ್ರವೋ ಗಾಝಿ ಅಗರ್ ಬರ್ ಆಸ್ಮಾನ್ ತಾಝುದ್**
> **ಫಲಕ್ ರಾ ಝುಮೀನ್ ಚ್ಯೂಂ ಸೀನಯೆ ಖುಸ್ಮಾನ್ ಎಕೇ ಸಾಝುದ್**
> ವೀರ ಬಾದಶಾಹರ ಶೂರ ಸೈನಿಕರು ಆಕಾಶದ ಮೇಲೆ ದಾಳಿನಡೆಸಿದರೆ
> ವೈರಿಗಳ ಎದೆಯ ಬಗೆದಂತೆ ಗಗನವನ್ನು ಭುವಿಯಮಡಿಲಿಗೆ ಸೇರಿಸುವರು.

ಅಸದುಲ್ ಖವಾನೀನ್ ನಾರಯೇ ಹೈದರಿ('ಯಾ ಅಲಿ' ಎಂಬ ಘೋಷ)ಯೊಂದಿಗೆ ಕೋಟೆಯ ಮುಖ್ಯ ಮಹಾದ್ವಾರವನ್ನು ಒಡೆದು ಎರಡನೆಯ ಬಾಗಿಲಕಡೆ ತೆರಳಿದ. ವೈರಿಗಳು ಅಚ್ಚರಿಯಿಂದ ಗರಬಡಿದವರಂತಾದರು. ಕೋಟೆಯ ಗೋಡೆಯ ಎತ್ತರದ ತುದಿಯ ಮೇಲೆ ಹತ್ತಿ ಅವಿತುಕೊಂಡರು. ಆದರೆ ಈ ಜಯಶಾಲಿ ಬಹದ್ದೂರ ಸಿಪಾಯಿಗಳು ಕೂಡಲೇ ವೈರಿಗಳನ್ನು ಗುರುತಿಸಿ ಬೆನ್ನುಹತ್ತಿ ಬಾಣಗಳಿಂದ ಹೊಡೆದು ಉರುಳಿಸಿದರು.

ನಜ್ಮ್

> **ಝಿ ಬಸ್ ಮರ್ದ್ದಾರಾ ಬರ್ ಸರೇ ಆಮದ್ ಸಿನಾನ್**
> **ಶುದ್ ಅಲ್ಮಾಸ್ ತರ್ ಮಗ್ಝ್ ದರ್ ಉಸ್ತಿಖ್ವಾನ್**
> ಗಂಡಸರ ತಲೆಯೊಳಗೆ ಹಲವು ಬಾಣಗಳು ಚುಚ್ಚಿದವು
> ಎಲುಬುಗಳ ಮಜ್ಜೆಯ ಒಳಗೆ ಬಾಣಗಳ ಮೊನೆಗಳು ಸೇರಿದವು.
>
> **ಝಿನೋಕೆ ಸನಾಹಾ ಕೆ ಶುದ್ ಸೀನಾ ಬಂದ್**

ಫಲಕ್ ದಶ್ತ್ ಅಝ್‌ಮೌಜೇ ಖೂನ್ ಸರ್‌ಬುಲಂದ್
ಬಾಣಗಳ ಚೂಪು ತುದಿಯ ಇರಿತದಿ ಎದೆಬಡಿತ ನಿಂತು ಹೋಯಿತು
ಆಕಾಶದಿ ರಕ್ತದ ಕೋಡಿ ಹರಿದು, ಗರ್ವದಿ ತಲೆಯೆತ್ತಿದಂತಾಯಿತು.

ಕಾಡಿನ ಸಿಂಹದ ಮರಿಗಳಂತೆ ಜೀವತೆರಲು ಕೂಡ ತಯಾರಾಗಿರುವ ವೀರ ಸೈನಿಕರ ಮುಖದ ಮೇಲಿನ ಗಾಯಗಳನ್ನು ಕಂಡು ಖಡ್ಗಗಳು ಮತ್ತು ಬಾಣಗಳು ನಗುತ್ತಿದ್ದವು. ಈ ಬಹದ್ದೂರರು ತಮ್ಮ ಖಡ್ಗಗಳಿಂದ ಪರ್ವತಗಳ ಮೇಲೆ ಹೊಡೆದರೆ ಏಳನೆಯ ಆಕಾಶದ ಎತ್ತರಕ್ಕೆ ಬೆಂಕಿಯ ಕಿಡಿಯು ಹಾರುತ್ತದೆ. ಆ ಯುವ ಸರದಾರರು ತಮ್ಮೆದುರಲ್ಲಿ ರಕ್ತದ ನದಿ ಹರಿಯುತ್ತಿದ್ದರೆ ಅದರ ವೇಗವನ್ನು ಹಿಂದಿಕ್ಕಿ ಮುಂದುವರಿಯುತ್ತಾರೆ. ಚೂಪಾದ ತುದಿಯ ಬಾಣಗಳನ್ನು ಎದುರಿಸುತ್ತಿರುವ ಈ ಶೂರ ಸಿಪಾಯಿಗಳು ವೈರಿಗಳ ಆತ್ಮಗಳು ಹಕ್ಕಿಗಳಂತೆ ಹಾರುತ್ತಿರುವುದನ್ನು ಕೂಡ ಕಂಡುಹಿಡಿದು ತಡೆದು ನಿಲ್ಲಿಸಿಬಿಡುತ್ತಿದ್ದರು. ತಕ್‌ದೀರ್ ಎಂಬ ಹಣೆಬರಹದ ಬಗ್ಗೆ ಅಂದಾಜು ಇರುವ ಈ ಸರದಾರರು ತಮ್ಮ ಬಿಲ್ಲನ್ನು ಎಳೆದ ರಭಸದಿಂದ ವೈರಿಗಳು ಅಲ್ಲಲ್ಲಿ ಚದುರಿದಂತೆ ಇದ್ದವರು ಒಂದೇ ಸ್ಥಳಕ್ಕೆ ಬಂದು ಶವಗಳ ರಾಶಿಯಾಗಿ ಬಿದ್ದು ಬಿಡುವರು. ಇವರ ಮೊನಚಾದ ಬಾಣಗಳು ವೈರಿಗಳ ಹಣೆಬರಹಗಳು ಉಲ್ಟಾಹೊಡೆಯುವಂತೆ ಮಾಡಿ ಅಟ್ಟಾಡಿಸಿ ಹೊಡೆದುರುಳಿಸಿ ನೆಲಮಾಳಿಗೆಗಳಲ್ಲಿ ಬೀಳುವಂತೆ ಮಾಡುತ್ತಿದ್ದವು.

ಖಿತಾ

ರಂವಾ ಗಸ್ತ್ ಸೈಲಾಬೆ ಖೂನ್ ಅಝ್ ಹಿಝಂಗ್
ಪುರ್ ಅಝ್ ಲಾಲ್ ಶುದ್ ಚರ್‌ಖೇ ಫೈರೋಝ ರಂಗ್
ಬಾಣಗಳಿಂದ ರಕ್ತದ ಕೋಡಿ ಹರಿಯತೊಡಗಿತು
ನೀಲ ವರ್ಣದ ಆಕಾಶವೂ ಕೆಂಪಾಗಿಹೋಯಿತು.

ಝಬಸ್ ತೀರ್ ಗರ್ದ್ ಅಸ್ ಜಿಗರ್‌ಹಾ ಗುಝಾರ್
ನಫಸ್ ದಶ್ತ್ ದರ್ ಸೀನಹಾ ತೀರ್ ಮಾರ್
ಅಸಂಖ್ಯಾತ ಬಾಣಗಳು ಎದೆಗಳನಿರಿದು ಹೊರಬಂದವು
ಶ್ವಾಸ ನಿಶ್ವಾಸ ಎದೆಯಲ್ಲಿ ಸರ್ಪಗಳಂದದಿ ಬುಸುಗುಟ್ಟಿದವು.

ಸೋತು ನೊಂದು ಬೆಂದ ವೈರಿಗಳು ಹತಾಶರಾಗಿ ಪಟ್ಟಣದ ಆವರಣದ ಗೋಡೆಯ ಕಮಾನುಗಳ ಒಳಗೆ ಸಪೂರ ಕಠಿಣವಾದ ಜಾಗಗಳಲ್ಲಿ ಅಡಗಿ ನಿಂತು ತಲೆ ಹೊರಹಾಕಿ ಬಾಣಗಳನ್ನು ಧಾರಾಕಾರವಾಗಿ ಮಳೆಗರೆಯುತ್ತಿರುವುದನ್ನು ಗಂಡೆದೆಯ ವೀರ ಯುವ ಸರದಾರರು ಕಂಡರು. ಹೊತ್ತು ಕಳೆದರೂ ವೈರಿಗಳು ತಮ್ಮ ಈ ಕೃತ್ಯವನ್ನು ನಿಲ್ಲಿಸುವಂತೆ ಕಂಡುಬರಲಿಲ್ಲ. ಇದನ್ನು ಕಂಡ ಬಹದ್ದೂರ ಸರದಾರರು

ಈ ವೈರಿಗಳ ಮೇಲೆ ಮೊನಚಾದ ಬಾಣಗಳನ್ನು ಗುರಿಯಿಟ್ಟು ಹೊಡೆದು ಉರುಳಿಸಿ ಮಣ್ಣುಪಾಲಾಗಿಸಿದರು. ಕರಿ ದೈವಗಳಂತೆ ಕಾಣುವ ಮುಖಗಳ ಬೃಹತ್ ಶರೀರದ ಆನೆಗಳನ್ನು ಮುಂದೆ ಕಳುಹಿಸಿ ಮುಖ್ಯದ್ವಾರದ ಕಡೆಯಲ್ಲಿ ವೈರಿಗಳ ದಾಳಿಯನ್ನು ಎದುರಿಸಿದರು. ವೈರಿ ಸೈನ್ಯದ ಆನೆಗಳು ಹೆದರಿ ಕಂಗಾಲಾಗಿ ತಮ್ಮ ಸೊಂಡಿಲುಗಳನ್ನು ಸುತ್ತಿಕೊಂಡು ಹಿಂಜರಿದವು. ಅವರ ಆನೆಗಳ ಮೇಲಿದ್ದ ಮಾವುತರಿಗೆ ಬಾಣಗಳು ತಗಲಿ ಒಣ ಎಲೆಗಳು ಮರದಿಂದ ಉರುಳುವಂತೆ ನೆಲಕ್ಕೆ ಬಿದ್ದರು. ಬಾದಶಾಹರ ಸೈನ್ಯದ ಆನೆಗಳು ಕೋಟೆಯ ಬಾಗಿಲೊಳಗೆ ನುಗ್ಗಿದವು. ಇವುಗಳಲ್ಲಿ ಕೆಲವು ಆನೆಗಳಿಗೆ ಸಣ್ಣಪುಟ್ಟ ಗಾಯಗಳು ಆಗಿದ್ದವಾದರೂ ಲೆಕ್ಕಿಸದೆ ಮುಂದುವರಿದಿದ್ದವು.

ಗೆದ್ದೇ ತೀರುವೆವೆಂದು ಧೃಢನಿಶ್ಚಯ ಮಾಡಿಕೊಂಡ ಬಾದಶಾಹರ ಬಹದ್ದೂರ ಸಿಪಾಯಿಗಳು ನೋಡುವಾಗ ಆನೆಗಳಿಗುಂಟಾದ ಗಾಯಗಳ ನೋವಿನಿಂದ ಅಸಾಧ್ಯ ಸಿಟ್ಟಾಗಿದ್ದವು. ಇವುಗಳ ಕ್ರೋಧದ ಬೆಂಕಿಯಿಂದ ಆಕಾಶದಲ್ಲಿ ದೂರದಲ್ಲಿ ಕಾಣುವ **'ಅಬೂಕ್'** ನಕ್ಷತ್ರದ ಎತ್ತರದ ತನಕ ಜ್ವಾಲೆ ಎದ್ದಿತ್ತು. ಕೋಟೆಯನ್ನು ತಮ್ಮ ವಶಕ್ಕೆ ಪಡೆದುಕೊಳ್ಳಲು ಧೈರ್ಯಮಾಡಿಕೊಂಡರು. ಒರೆಯಿಂದ ಕತ್ತಿಗಳನ್ನು ಹಿರಿದು ಕೋಟೆಯ ಗೋಡೆಯಲ್ಲಿ ದೊಡ್ಡ ತೂತು ಕೊರೆದು ಹಾದಿ ಮಾಡಿಕೊಂಡರು. ಬೆಂಕಿಯಕಿಡಿ ತಟ್ಟನೆ ಹಾರುವಂತೆ ಉತ್ಸಾಹದಿಂದ ಒಳಗೆ ನುಗ್ಗಿದರು. ಕತ್ತಿಗಳನ್ನು ಝುಲಪಿಸುತ್ತ ಮುನ್ನಡೆದು ಅವರ ಮೇಲೆ ಮುಗಿಬಿದ್ದರು. ಹೀಗೆ ಸಿಪಾಯಿಗಳು ಕೋಟೆಯ ಒಳಗೆ ಸೇರಿದರು. ವೀರ ಸರದಾರರ ತಲ್ವಾರುಗಳು ವೈರಿಗಳ ಶಿರವನ್ನು ಕೊಚ್ಚಿಹಾಕುತ್ತಿರುವಂತೆ ಮುನ್ನಡೆದರು. ವೈರಿಗಳ ಶವಗಳಿಂದ ಹರಿದ ರಕ್ತದ ಕೋಡಿ ಒಂದು ಕಾಲುವೆಯಾಗಿ ಹರಿಯುವಂತೆ ಕಂಡುಬಂತು.

ಶೇರ್

> **ಝು ಖೂನೆ ಬಾರಿ ತೈರ್ ಅಲ್ಮಾಸ್ ಗೂನ್**
> **ಗುಝಿಶ್ತ್ ಅಝ್ ದರೋದಸ್ತ್ ಸೈಲಾಬೆ ಖೂನ್**
> ವಜ್ರದ ಹೊಳಪಿನ ಖಡ್ಗ ಬೀಸಿದಾಗ ರಕ್ತದ ಮಳೆಗರೆದಂತೆ
> ಮನೆಮಠಗಳಲಿ ಕಾಡುಗಳಲಿ ರಕ್ತದ ನದಿ ತುಂಬಿಹರಿವಂತೆ.

ಕಡಿಯಲಾದ ವೈರಿಗಳ ಶಿರಗಳು ಎಷ್ಟೊಂದು ಸಂಖ್ಯೆಯಲ್ಲಿ ರಾಶಿಯಾಗಿ ಅಲ್ಲಲ್ಲಿ ಬಿದ್ದಿತ್ತೆಂದರೆ, ಯಾರಾದರೂ ಇದನ್ನು ತಿಳಿಯದೆ ನಡೆದುಕೊಂಡು ಹೋದಲ್ಲಿ ಅಂಗವಿಕಲರಂತೆ ಎಡವಿ ಬಿದ್ದು ಎದ್ದು ನಡೆಯುವಂತಾಗುತ್ತಿತ್ತು!

ಅಬ್ಯಾತ್

> **ಜೆಬರ್ಕ್ ತೈರೆ ದಿಲೆರಾನೆ ಖುಸ್ರವೋ ಗಾಝಿ**

ಪಹರ್ ಗಸ್ತ್ ಸರಾಪಾಯೆ ಅಬ್ರೆ ಖೂನೆ ಅಫ್ಘಾನ್
ಬಾದಶಾಹರ ಯುವ ಸಿಪಾಯಿಗಳ ಖಡ್ಗದ ಹೊಳೆವ ಮಿಂಚಿನಿಂದ
ಆಕಾಶದಲಿ ತೇಲುವ ಮುಗಿಲು ರಕ್ತದ ಮಳೆಗೆರೆವಂತಾಯಿತು.

ಝೆಯೆ ಶೆಹನ್‌ಶಾಹೆ ಸಾಹಬೇ ಖಿರಾನೆ ದಾಯೆ ಮಸಾಫ್
ಹಿಝುಂಗೆ ವೂ ನಗ್‌ಝೂದತ್ ಝೆ ಫೌಜೆ ಖಸ್ಮೆ ನಶಾನ್
ವಿಜಯಶಾಲಿ ಬಾದಶಾಹರನು ನೋಡಿ, ರಣರಂಗದಲಿ ಎಂತಹ ಪುಣ್ಯವಂತ
ಅವರ ಬಾಣ ವೈರಿಯ ಘಾಸಿಗೊಳಿಸುವುದು ಮಾತ್ರವಲ್ಲ ಕೊಂದೇ ಹಾಕುವಂತೆ.

ಬಖೂನೆ ರಝ್ಮೆ ಚ್ಯೂಂ ತೀರಶ್ ಸಲಾಹೇ ಫತ್ಹೆ ಝುಂದ್
ದಹಾನೆ ಝುಕ್ಮೆ ಝೆ ಪೈಕಾನ್ ಬರ್ ಆವರ್ದ ದಂದಾನ್
ಯುದ್ಧದಲಿ ಹರಿವ ರಕ್ತದಲಿ ಅವರ ಬಾಣಗಳು ಕೂಗಿ ವಿಜಯವ ಕರೆಯುತಿವೆ
ಚೂಪಾದ ಬಾಣಗಳಿಂದ ಗಾಯಾಳುವಿನ ಹಲ್ಲುಗಳು ಉದುರುತಿವೆ.

ವಿಜಯಶಾಲಿ ನೇತಾರ ಅಸದುಲ್ ಖವಾನೀನ್ ದಿನದ ಕಾಲು ಭಾಗದಿಂದ ಪೂರ್ತಿಯಾಗುವ ತನಕ ತೋರಿದ ಶೌರ್ಯ, ವೀರೋಚಿತ ಕಾರ್ಯಗಳಿಂದ ಎಲ್ಲಮ್ಮ ಗಿರಿಯನ್ನು ಜಯಿಸಿ ತನ್ನ ಯುದ್ಧನೈಪುಣ್ಯ ಮತ್ತು ಯುವೋತ್ಸಾಹಕ್ಕೆ ಪುರಾವೆ ನೀಡಿದ. ಈ ಬಹದ್ದೂರ ಸಿಪಾಯಿಗಳ ದೃಢ ಹೆಜ್ಜೆಗಳು ನಿಖರವಾಗಿದ್ದು ಹೊಳೆಯುತ್ತಿದ್ದವು, ೧೨೦೦ ಬಿಲ್ಲು ಬಾಣಗಳ ಪರಿಣಿತರು ಅಸುನೀಗಿದ್ದರು, ಇಸ್ಲಾಂ ಧರ್ಮದ ಬಹದ್ದೂರ ಸಿಪಾಯಿಗಳ ಕಪಿಮುಷ್ಠಿಯೊಳಗೆ ೩೦೦೦ ವೈರಿ ಸೈನಿಕರು ಸೆರೆಯಾಗಿದ್ದರು. ನಾರಾಯಣಿ ಎಂಬ ಮಹಿಳಾ ಮಣಿಯೊಬ್ಬಳು ತನ್ನ ಕರಿ ಶಕ್ತಿಶಾಲಿ ಆನೆಗಳ ೪೦೦೦ ಹಿಂಡೊಂದನ್ನು ಪರ್ವತದ ಮೇಲೆ ನಿಲ್ಲಿಸಿ ವೈರಿಗಳ ಪಡೆಗೆ ನೆರವಾಗಿ ಬಂದಳು. ಅವಳು ನೋಡುವಾಗ ಹುಸೈನಿ ಅಂಬರ್ ಖಾನ್ ಮತ್ತು ಇನ್ನಿತರ ಪ್ರಮುಖ ದಂಡನಾಯಕರು ಕೋಟೆಯ ಬಳಿ ನಿಂತಿರುವುದನ್ನು ಕಂಡು ತನ್ನ ಸೈನ್ಯದೊಂದಿಗೆ ವಾಪಸಾದಳು. ಇತ್ತ ಕೋಟೆಯನ್ನು ಗೆದ್ದ ಸುದ್ದಿ ಸಿಕ್ಕ ನವಾಬ್ ಸಾಹೇಬರು ಅಲ್ಲಾಹನಿಗೆ ಧನ್ಯವಾದದ 'ಶುಕ್ರಾನಾ ಸಜ್‌ದಾ' ಪ್ರಾರ್ಥನೆಗೆ ತೆರಳಿದರು. ಬಾದಶಾಹರ ಆಳ್ವಿಕೆ ಹೀಗೆಯೇ ಜಯಶಾಲಿಯಾಗಿ ಶಾಂತಿ, ಐಶ್ವರ್ಯದೊಂದಿಗೆ ಚಿರಕಾಲ ಬಾಳಿರಲಿ ಎಂದು ದುವಾ ಮಾಡಿದರು. ಈ ಕೋಟೆಯನ್ನು ಜಯಿಸಿದ ಪ್ರಕ್ರಿಯೆಯಲ್ಲಿ ವಿಶ್ವದ ಜನರಿಗೆ ಬಾದಶಾಹರ ಕೊಡುಗೆ ಅಡಕವಾಗಿತ್ತು. ಮರುದಿನ ಎಲ್ಲಮ್ಮ ಗಿರಿಯಿಂದ ಧ್ವಜದೊಂದಿಗೆ ಮುಂದಿನ ಪ್ರಯಾಣವನ್ನು ಬೆಳೆಸಿದರು.

ಖಿತಾ

ಆನಾ ಕೆ ನಿಯಾರಂದ್ ದೊ ಆಲಂ ಬನಝರ್
ದಾರಂದ್ ಬಸರೇ ಅಫ್ಸರ್ ಮಿನ್ನತ್ ಯಕ್ಸರ್

ಯಾರು ಎರಡೂ ಜಗತ್ತನ್ನು ಅರಿಯದಿರುವನೋ
ಅವನು ಇತರರ ಶಿರದ ಮೇಲೆ ತನ್ನ ಕೃಪೆಯ ಹಸ್ತ ಇಡುವನು.

ದರ್‍ರಾಹೆ ಝುಫರ್ ರಸ್ತೀ ಫತಹ ಕುನಂದ್
ಹರ್ ರೋಝ್ ಪಯೇ ಮುಖಾಮೆ ಇಕ್‌ಲೀನ್ ಎ ಜಿಗರ್
ಅವರು ಜಯಶಾಲಿಯಾಗುವುದು ನೇರ ಮಾರ್ಗಗಳಿಂದ
ಪ್ರತೀದಿನ ಹೊಸತೊಂದು ವಿಶ್ವವ ಜಯಿಸಲು ಯತ್ನಿಸುತ್ತಾರೆ.

ಪ್ರತೀ ದಿನವೂ ಹಜ್ರತ್ ಬಾದಶಾಹರ ಜಯಶಾಲಿಗಳಾದ ವರ್ತಮಾನ ಜಗದಗಲ ವ್ಯಾಪಿಸಿತ್ತು. ನವಾಬ್ ಸಾಹೆಬರ ಶೌರ್ಯ ಮತ್ತು ಕಾರ್ಯಕುಶಲತೆಯ ಆಶ್ಚರ್ಯಜನಕ ಸಂಗತಿಗಳು ಅಲ್ಲಿನ ಇಲಾಖೆಯ ಜನರ ಮೇಲೆ ಭಯ ಭಕ್ತಿ ಗೌರವ ಮೂಡುವ ವಿಶೇಷತೆಯನ್ನು ಪಡೆದಿದ್ದವು. ಅವರ ಸೈನ್ಯ ಆ ಕಡೆ ಬರುತ್ತಿದೆಯೆಂಬ ಸೂಚನೆ ಸಿಕ್ಕಿದಾಗ ಇಲಾಖೆಯಲ್ಲಿ ವಾಸಿಸುತ್ತಿದ್ದ ಸಾಮಾನ್ಯ ಜನರು ಭಯಭೀತರಾಗಿ ತಮ್ಮ ಮನೆ ಮಠಗಳನ್ನು ತೊರೆದು ಪರ್ವತಗಳ ಮೇಲೆ ಓಡಿ ತಲೆಮರೆಸಿಕೊಳ್ಳುತ್ತಿದ್ದರು.

ಅಬ್ಯಾತ್

ಝು ಹೈಬತ್ ಕಾಫಿರಾನ್ ಅಝ್ಖಾರ್ ರಫ್ತಂದ್
ಬ ಪಾಯೇ ಖೀಶ್ತನ್ ಚ್ಯೂಂ ಕಾರ್ ರಫ್ತಂದ್
ಚಕಿತರಾದ ಈ ಕಾಫಿರರು ತಾವೇ ಓಡಿ ಅಡಗಿಕೊಳ್ಳುತ್ತಿದ್ದರು
ಕಾಲಲ್ಲಿ ಮುಳ್ಳು ಚುಚ್ಚಿದಂತೆ ಅನಿಸಿ ಓಡುತ್ತಿದ್ದರು.

ನಫಸ್ ದರ್ ಸೀನಯೆ ಶಾಂ ಮಾನಿಂದ್ ಮಿಸ್ಮಾರ್
ವಝು ಆಮಿಸ್ಮಾರ್ ಉಫ್ತಾದಂದ್ ಬರ್ ದಾರ್
ಅವರ ಎದೆಯಲ್ಲಿ ಶ್ವಾಸವು ತೂಗಿತ್ತೊಂದು ಕೀಲಿಯ ಮೇಲೆ
ಆ ಕೀಲಿಯಿಂದ ಬಿದ್ದುಬಿಟ್ಟರು ಶೂಲದ ಮೇಲೆ.

ಝು ಬೇತಾಬಿ ಬ ಖಾಕ್ ಉಫ್ತಾನ್ ವ ಖೆಝಾಂ
ಶುದಂದ್ ಅಝ್ ನಕ್ಷೆ ಪಾಯೆ ಖುದ್ ಗುರೇಝಾಂ
ತಳಮಳಗೊಂಡು ಮಣ್ಣಿಗೆ ಬಿದ್ದವರು ಚಿಂತಿತರೂ ಚಕಿತರೂ ಆಗಿದ್ದಾರೆ
ತಮ್ಮ ಹೆಜ್ಜೆಯ ಗುರುತನ್ನೇ ಗುರುತಿಸಲಾರದವರಾಗಿದ್ದಾರೆ.

ನವಾಬ್ ಸಾಹೇಬರು ಎಲ್ಲ ಜಖಂ ಗೊಂಡ ವಸ್ತುಗಳಿಗೆ ರಿಪೇರಿ ಮಾಡಲು, ಅಲ್ಲಲ್ಲಿ ಬಿದ್ದು ಹೋದ ಕೋಟೆಯ ಗೋಡೆಗಳ ಭಾಗಗಳನ್ನು ಸರಿಪಡಿಸಲು ಏರ್ಪಾಡು ಮಾಡಿ ತಮ್ಮ ಪ್ರಯಾಣವನ್ನು ಸೈನಿಕರೊಂದಿಗೆ ಮುಂದುವರಿಸಿದರು. ಈ ಜಯಶೀಲರಾದ ಸೈನ್ಯದ ದಂಡಯಾತ್ರೆಯ ವರ್ತಮಾನ ವಿರಂಜಪೂರ್‌ನ ಅರಸರಿಗೆ

ತಲಪಿದಾಗ ಆತ ತುಂಬಾ ಭಯಗೊಂಡು ಚಿಂತಿತನಾದ. ತನ್ನ ಸೊತ್ತು ಸರಂಜಾಮುಗಳನ್ನು ಕಟ್ಟಿಕೊಂಡು ಅರಮನೆಯನ್ನು ತೊರೆದು ಓಡಿ ಹೋಗುವುದರಲ್ಲಿ ತನಗೆ ಒಳಿತಿದೆಯೆಂದುಕೊಂಡ. ಈ ಉದ್ದೇಶದಿಂದ ವಿರಂಜಪೂರಿನ ದೇವಸ್ಥಾನಕ್ಕೆ ಹೊರಟ. ಈ ದೇವಸ್ಥಾನದ ಗೋಡೆಯು ಫಿರಂಗಿ(ಫ್ರೆಂಚ್)ಗಳ ಚರ್ಚಿನ ಹಿಂಭಾಗಕ್ಕೆ ತಾಗಿದಂತೆ ಇತ್ತು. ಚರ್ಚಿನ ಮುಂದಿನ ಭಾಗದಲ್ಲಿ ತೋಟದಂತಿರುವ ಸುಂದರ ಮೈದಾನವಿತ್ತು. ರಾಜ ದೇವಸ್ಥಾನದಿಂದ ಹೊರಬಂದ. ದೇವಸ್ಥಾನದಲ್ಲಿದ್ದ ದೇವರ ಮೂರ್ತಿಯನ್ನು ನವಾಬ್ ಸಾಹೇಬರ ಸೈನ್ಯ ನಾಶಮಾಡ ಬಹುದೆಂಬ ಭಯದಿಂದ ಊರವರು ಮೂರ್ತಿಗಳನ್ನು ಕಿತ್ತು ತೆಗೆದು ಬಾವಿಯೊಳಗೆ ಹಾಕಿದರು. ಅಳವಂದ ಪರ್ವತ ಶ್ರೇಣಿಯ ಬಳಿಯಲ್ಲಿಟ್ಟಿದ್ದ ಮೂರ್ತಿಗಳಸುರಕ್ಷೆಗಾಗಿ ಅವನ್ನು ಕೂಡ ತೆಗೆದು ಬಾವಿಗೆ ಹಾಕಿದರು. ತಮ್ಮ ಅವಶ್ಯಕ ವಸ್ತುಗಳನ್ನು, ಸೊತ್ತುಗಳನ್ನು ಮನೆಯಲ್ಲೇ ಬಿಟ್ಟು ಸುರಕ್ಷೆಗಾಗಿ ಜನರು ಊರು ಬಿಟ್ಟು ದೂರ ಓಡಿಹೋದರು. ವಿರಂಜಪೂರಿನ ರಾಜ ಕೂಡ ಹೊರಬಂದು ಅಡಗಿಕೊಳ್ಳಲು ಹೊರಟು ಸ್ವಲ್ಪದೂರವಷ್ಟೇ ಹೋಗುವಷ್ಟರಲ್ಲಿ ನವಾಬ್ ಸಾಹೇಬರು ಎದುರಾದರು. ನವಾಬ್ ಸಾಹೇಬರು ತನ್ನ ಸನಿಹವಾದರೆಂದು ತಿಳಿದು ರಾಜನು ಹಿಂತಿರುಗಿ ವಿರಂಜಪೂರದತ್ತ ಮುಖ ಮಾಡಿ ಓಡ ತೊಡಗಿದ. ನವಾಬ್ ಸಾಹೇಬರು ರಾಜನನ್ನು ಮತ್ತು ಅವನ ಸಂಗಡಿಗರನ್ನು ಹಿಡಿದು ಬಂಧಿಸಲು ತನ್ನ ಸೈನ್ಯಕ್ಕೆ ಆದೇಶವನ್ನು ನೀಡಿದರು. ಸೈನಿಕರಿಗೆ ಮೂರ್ತಿಗಳನ್ನು ಬಾವಿಯಿಂದ ತೆಗೆಯಲು ಕೂಡ ಆದೇಶ ನೀಡಿದರು. ಊರವರು ಕಿತ್ತು ಬಾವಿಗೆಸೆದಾಗ ಕೈಕಾಲುಗಳು ತುಂಡಾದ ಕೆಲವು ಮೂರ್ತಿಗಳನ್ನು ಸೈನಿಕರು ಬಾವಿಯಿಂದ ಎತ್ತಿ ನೆಲದ ಮೇಲೆ ಇಟ್ಟರು. ಇವುಗಳ ಪೈಕಿ ಒಂದು ದೊಡ್ಡ ಮೂರ್ತಿಯನ್ನು ಹಗ್ಗದಿಂದ ಎಳೆದು ಹೊರತೆಗೆಯಲು ತುಂಬ ಪ್ರಯಾಸಪಟ್ಟರೂ ಕೂಡ ಬಾವಿಯಿಂದ ಹೊರತೆಗೆಯಲು ಸಾಧ್ಯವಾಗಲಿಲ್ಲ. ಬಾದಶಾಹರ ಸೈನ್ಯದ ಭಯದಿಂದ ಎಂಬಂತೆ ಈ ದೊಡ್ಡ ಮೂರ್ತಿ ಆಳವಾಗಿ ಬಾವಿಯೊಳಗೆ ಹೋಗುತ್ತಾ ನೀರಲ್ಲಿ ಲೀನವಾಗಿಬಿಟ್ಟಿತು. ನವಾಬ್ ಸಾಹೇಬರು ಅಲ್ಲಾಹನಿಗೆ ಧನ್ಯವಾದ ಹೇಳುತ್ತಲೇ ವಜೀಫಾ ಓದಿ .ಪ್ರಾರ್ಥಿಸಿದರು. ಬಾದಶಾಹರ ಹೆಸರಿನಲ್ಲಿ ಮತ್ತು ಅವರ ರಾಜ್ಯದ ಹಾಗೂ ಅವರ ಸಂಗಾತಿಗಳ ಬಗ್ಗೆ ತಾರೀಫ್ ಮಾಡುತ್ತ ಪದ್ಯ ಬರೆದು ಎಲ್ಲರೆದುರು ಓದಿ ಹೇಳಿದರು.

ಖಿತಾ

ಬದೌರೆ ಶಾಹೆ ದೀನ್ ಪರ್‌ವರ್ ಕೆ ಬಾಜ್ ಅರ್ಝ್ ಖುಶ್‌ರವಾಂ ಗೀರದ್

ಬ್ರಹ್‌ಮನ್ ಬುದ್ ಶಿಕನ್ ಬುದ್‌ಖಾನ ಮಸ್‌ಜಿದ್ ಶುದ್ ತಮಾಷಾ ಕುನ್

ಧರ್ಮಪಾಲಕ ಬಾದಶಾಹರ ಆಳ್ವಿಕೆಯಲ್ಲಿ ಅರಸರಿಂದಲೂ ತೆರಿಗೆ ವಸೂಲಿಮಾಡುವರು

ಬ್ರಾಹ್ಮಣಕೂಡ ಮೂರ್ತಿಗಳನ್ನು ಒಡೆದ, ತಮಾಷೆ ನೋಡಿ, ದೇವಾಲಯ ಮಸೀದಿಯಾಯಿತು.

ಬನೆಹ್ ಸರ್ ಬರ್ ದರೇ ವೂ ಗರ್ ಹವಾಯೆ ಸರ್‌ವರೀ ದಾರೀ
ಝೆ ಖಾಕೇ ರಹ್ ಗುರ್ಝಾರಿಶ್ ಚಾರ್ ವೇ ಬರ್ ಚರ್ಖೆ ವಾಲಾ ಕುನ್
ಶಿರವನಿಡು, ಬಾದಶಾಹರ ಮುಂದೆ, ನೀನು ಸಂತಸ ಪಡೆಯಬೇಕಾದರೆ
ಯಾಕೆಂದರೆ ಅವರು ನಡೆವ ರಸ್ತೆಯ ಮಣ್ಣು ಆಕಾಶದೆತ್ತರದ ಘನತೆ ಪಡೆದಿದೆ.

ಎಲ್ಲಮ್ಮಗಿರಿಯ ಕೋಟೆಯ ವಿಜಯದ ನಂತರ ವಿರಂಜಪೂರದ ಕಡೆಗೆ ಪಯಣಕ್ಕೆ ತಯಾರಿ ಮಾಡತೊಡಗಿದರು. ಈ ವಿರಂಜಪುರವೆಂದರೆ ಹಿಂದೆ ಕೋಟೆಬಿಟ್ಟು ಓಡಿಹೋದ ರಾಜನ ಪ್ರದೇಶವಾಗಿದೆ. ನವಾಬ ಸಾಹೇಬರು ಇಲ್ಲಿಂದ ರಾಯಿಲನಿಗೆ ಎಚ್ಚರ ನೀಡುವುದಕ್ಕಾಗಿ ಮುತವರ್ಜಿವಹಿಸಿದರು. ಈ ಮಧ್ಯೆ ಬಾದಶಾಹರ ಗೌರವದ ಎಲ್ಲೆಯು ಆಕಾಶದೆತ್ತರದ ಸಿಂಹಾಸನಕ್ಕೆ ತಲಪುವಂತಾಯಿತು. ಅವರ ಮರ್ಯಾದೆಯ ಪ್ರಭೆ ತನ್ನ ವಿಶ್ವವನ್ನು ಗೆಲ್ಲುವ ಶಕ್ತಿಯ ತಲವಾರಿನ ಖೂಬಿಯಿಂದ ವಿಶ್ವದ ಅನೇಕ ಭಾಗಗಳನ್ನು ತಮ್ಮ ವಶಕ್ಕೆ ಪಡೆದುಕೊಂಡು ವಿಜಯದ ಕಿರೀಟವನ್ನು ಧರಿಸಿದ್ದರು. ಇದೇ ಬಾದಶಾಹರು ಯಾರಿಗೂ ಸಾಟಿಇಲ್ಲದವರಾಗಿದ್ದಾರೆ, ಇದು ಅಲ್ಲಾಹನ ಕೃಪೆಗೆ ಹಿಡಿದ ಕನ್ನಡಿಯಾಗಿದೆ. ಇವರ ನಸೀಬಿನ ಬರಕತ್‌ನಿಂದ ನವಾಬ್ ಸಾಹೇಬರು ಅತ್ಯಂತ ಬಲಿಷ್ಠವಾದ ಎಲ್ಲಮ್ಮಗಿರಿ ಕೋಟೆಯನ್ನು ವಶಪಡಿಸಿಕೊಳ್ಳಲು ಸಾಧ್ಯವಾಯಿತು. ಇವರ ಜಯಶಾಲಿ ಸರದಾರರ ಶೌರ್ಯ ಪರಾಕ್ರಮದ ದೆಸೆಯಿಂದ ವಿರಂಜಪೂರ್ ಕೂಡ ವಶಕ್ಕೆ ಬಂತು. ನವಾಬ್ ಸಾಹೇಬರು ಸೈನ್ಯಕ್ಕೆ ಸ್ವಲ್ಪ ಕಾಲದ ಆರಾಮ ನೀಡುವುದಕ್ಕಾಗಿ ಅಲ್ಲಿ ಕೆಲವು ದಿನಗಳು ತಂಗುವ ಏರ್ಪಾಡು ಮಾಡಿದರು. ನಂತರ ರಾಯಿಲ್‌ನಿಗೆ ಎಚ್ಚರ ನೀಡುವ ಸಲುವಾಗಿ ಅಲ್ಲಿಂದ ಮುಂದುವರಿದರು. ಸೈನಿಕ ಪಡೆಯೊಂದಿಗೆ ವೇಲೂರಿಗೆ ಹತ್ತಿರಹತ್ತಿರವಾದರು. ಒಂದು ದೊಡ್ಡ ದೇವಾಲಯದಲ್ಲಿ ಹೋಗಿ ನಿಂತರು. ಇಲ್ಲಿಂದ ವೇಲೂರಿಗೆ ಒಂದು ಮೈಲಿ ದೂರದಲ್ಲಿದೆ. ಇಲ್ಲಿ ತಂಗಿದ ಉದ್ದೇಶವೇನೆಂದರೆ ಬಾದಶಾಹರಿಂದ ಒಂದು ದೊಡ್ಡ ಸಂಖ್ಯೆಯ ಸೈನ್ಯದ ತಂಡವನ್ನು ಪಡೆಯುವುದಾಗಿತ್ತು. ಜೊತೆಗೆ ತನ್ನ ಸೈನ್ಯದ ಯವ ಉತ್ಸಾಹಿ ತಂಡಕ್ಕೆ ಮುಂದೆ ಹೋಗಿ ವೇಲೂರಿನ ಕೋಟೆಯ ಮೇಲೆ ದಾಳಿ ಮಾಡುವ ಸಲುವಾಗಿ ಆದೇಶನೀಡಿ, ಅಲ್ಲಿ ಹೋಗಿ ಕಟ್ಟಿಗೆಯ ಬಾಣಗಳ ಮಳೆಗೆರೆಯಬೇಕೆಂಬ ಸೂಚನೆಯನ್ನು ನೀಡಿದರು. ವೈರಿಗಳ ಮನೆ ಮಠಗಳಿಗೆ ಮತ್ತು ಹೊಲಗದ್ದೆಗಳಿಗೆ ಬೆಂಕಿ ಹಾಕಲು ಸೂಚನೆ ನೀಡಿದರು. ಅದೇ ದಿನ ಬಾದಶಾಹರಿಗೆ ಬೇಡಿಕೆ ಸಲ್ಲಿಸಲಾದಂತೆ ದೊಡ್ಡ ಸಂಖ್ಯೆಯ ಸೈನಿಕ ತಂಡವು ಬಂದು ತಲಪಿತು. ವೇಲೂರಿನ ಕೋಟೆಯ ಮೇಲೆ ಎಷ್ಟು ಬಾಣಗಳ ಸುರಿಮಳೆ ಗೈದರೆಂದರೆ ಕೋಟೆಯೊಳಗಿನ ಜನರು ಹೊರಗೆ ಬರುವುದು ಅಸಾಧ್ಯವಾಯಿತು. ಎರಡನೆಯ ದಿನ ವೈರಿಗಳ ತಂಡ ಕೋಟೆಯೊಳಗೆ

ಒಗ್ಗಟ್ಟಾಗಿ ಪ್ರತಿ ದಾಳಿಗೆ ತಯಾರಾದರು. ಇದು ಕೆಟ್ಟ ವಿಚಾರಗಳನ್ನೇ ಯಾವಾಗಲು ಯೋಚಿಸುವ ರಾಜ ರಾಯಿಲನ ಕುತಂತ್ರಗಳಿಂದ ಸಾಧ್ಯವಾಯಿತು. ಅವರು ತಮ್ಮ ಅತ್ಯಂತ ಶಕ್ತಿಶಾಲಿಯೆನಿಸಿದ ಪರ್ವತಗಳನ್ನು ಪುಡಿಗಟ್ಟುವ ಸಾಮರ್ಥ್ಯದ ಆನೆಯ ಮೇಲೆ ಸವಾರಿಯಾಗಿ ರಾಮುಲು ಎಂಬವನ ನೇತೃತ್ವದಲ್ಲಿ ೧೦,೦೦೦ ಸಿಪಾಯಿಗಳೊಂದಿಗೆ ಕೋಟೆಯಿಂದ ಹೊರಬಂದು ರಣರಂಗದಲ್ಲಿ ಮುಖಾಮುಖಿಯಾಗಲು ತಯಾರಾದರು. ವೈರಿಗಳ ಸೈನ್ಯದ ಸಂಖ್ಯೆಯೂ ಕೂಡ ಅತ್ಯಂತ ಹೆಚ್ಚಾಗಿತ್ತು. ರಾಮುಲು ಯುದ್ಧ ಘೋಷಮಾಡಿದ್ದ. ನವಾಬ್ ಸಾಹೇಬರು ತನ್ನ ಸೈನ್ಯವನ್ನು ಮೂರು ಭಾಗವನ್ನಾಗಿ ಮಾಡಿ ಅವರನ್ನು ಎದುರಿಸಲು ಯೋಜನೆಯನ್ನು ತಯಾರಿಸಿದರು. ಘೂಲ್ ಶಾಜಹಾನಿ ಎಂಬ ಶೂರ ಸರದಾರನ ನೇತೃತ್ವದಲ್ಲಿ **'ಮೈಮನಾ'** ಬಲಭಾಗದಲ್ಲಿ ಆಕ್ರಮಿಸುವಂತೆ ರೂಪಿಸಿ ತಂಡ ರಚಿಸಿದರು. **'ಮೈಸರಾ'** ಅಥವಾ ರಾಮುಲನ ಎಡಭಾಗದಲ್ಲಿ ದಾಳಿ ನಡೆಸಲು ತಯಾರಿಸಿದ ಸೇನಾತುಕಡಿಯ ನೇತೃತ್ವವಹಿಸಲು ಶೂರ ದಿಲಾವರ್ ಖಾನರಿಗೆ ಆದೇಶನೀಡಿದರು.

ವೈರಿಯ ಸೈನ್ಯ ಸಂಖ್ಯೆ ಎಷ್ಟೊಂದಿತ್ತೆಂದರೆ ರಣರಂಗ ಮತ್ತು ಅಸುಪಾಸಿನ ಪರ್ವತಗಳೂ ತುಂಬಿದ್ದವು. ಅವರ ಓಡಾಟದ ಗಲಾಟೆ, ನೆಲದಿಂದ ಎದ್ದ ಧೂಳು ನೀಲ ಆಕಾಶವನ್ನು ಕೂಡ ಮುತ್ತಿ ಮುಸುಕಿತ್ತು.

ಶೇರ್

ಝೆ ಕುಫ್ಫಾರ್ ಎಕ್ಸರ್ ಝುಮೀನ್ ಶುದ್ ಸಿಯಾಹ್
ಚ್ಯೂಂ ರೋಝೆ ಜಝಾ ರೂಹೆ ಎಹ್ಲೆ ಗುನಾಹ್
ವೈರಿಗಳಿಂದಾಗಿ ಖಾಲಿಯಾಗಿ ಹಗುರವಾಯಿತು ಭೂಮಿ
ಅಂತಿಮ ವಿಚಾರಣೆಯ ದಿನದಂದು ಪಾಪಿಷ್ಠರ ಮುಖ ಕಪ್ಪಿಟ್ಟಂತೆ.

ಬಜುಂಬೆ ಸಿಪಾಹಿ ದಖೀಲೆ ಮಜೂಸ್
ದರ್ ಆಫಾಕ್ ಶುದ್ ರೂ ಸಫೇದ್ ಆಂಬೂಸ್
ಸಿಪಾಯಿಗಳ ವೇಷದಲ್ಲಿ ವೈರಿಗಳು ಬಂದಂತೆ
ವಿಶ್ವದಲಿರುವ ಬಿಳಿ ವರ್ಣದ ಕಟ್ಟಿಗೆ ತಿರುಗಿ ಕಪ್ಪಾದಂತೆ.

ಗರೂಹೆ ಶಿಯಾರೂ ಜೊ ಶಾಮೆ ಫಿರಾಕ್
ಲಬಾಲಬ್ ಝೆದಿಲ್‌ತಾ ಬಲಬ್ ಅಝ್ ನಿಫಾಕ್
ಕಪ್ಪಾದ ಮುಖದ ವೈರಿಗಳ ಗುಂಪು ನಿಶೆಯ ವಾತವರಣದಂತೆ
ಹೃದಯದಿಂದ ಮೆದುಳಿನ ತನಕ ಇವರಲಿ ಅಶುದ್ಧಿ ತುಂಬಿರುವಂತೆ

ಚ್ಯೂಂ ಖರೆ ಸಂಗೆ ರಾಹ್ ಖಾಲ್ ಬರ್ರೂಯೆ ಶಾನ್
ಗಿರಾಹ್ ಖಾರೆ ಖುಶ್ತಿ ಬರಾಬರ್ ವೆ ಶಾನ್

ಕ್ಯೆಮರ ತೋರಿಸುವ ನಿಶಾನಿ ತಿಳಿಯದೆ ಪಯಣಿಸುವ ಸವಾರಿ ಕತ್ತೆಯಂತೆ
ವೈರಿಗಳು ಚಲಿಸುವರು ಹಣೆಯಲ್ಲಿ ಕೊಂಬಿರುವ ಘೇಂಡಾ ಮೃಗದಂತೆ.

ಚುನಾ ತೀರಗಸ್ತ್ ಅಝ್ ಸಿಯಾಹಾನೆ ಜಹಾನ್
ಕೆ ಖುರ್ಷೀದ್ ಅಝ್ ಚಸ್ಮೆ ಖುದ್ ನಿಹಾನ್
ವೈರಿಗಳ ಕರ್‍ರಗಿನ ವ್ಯವಹಾರ ಗುಣದಿಂದ ವಿಶ್ವಕ್ಕೆ ಕತ್ತಲು ಬಡಿಯಿತು
ಸೂರ್ಯ ತನ್ನ ಕಿರಣಗಳ ಬೆಳಕು ಬೀರಿದರೂ ಬೆಳಗಾಗದಾಯಿತು.

ನವಾಬ್ ಸಾಹೇಬರು ಇವೆಲ್ಲವನ್ನೂ ಪರಿಶೀಲಿಸುವಾಗ ವೈರಿಗಳ ದ್ವೇಷ ಮಿತಿಮೀರಿರುವಂತೆ ಮತ್ತು ಅವರ ದ್ವೇಷದ ಧ್ವಜವನ್ನು ಎತ್ತರಕ್ಕೇರಿಸಿ ಹಾರಿಸುತ್ತಿದ್ದಾರೆಂದು ಅನಿಸಿತು. ತಮ್ಮ ಎಲ್ಲ ಸೇನಾನಿ, ಮಂತ್ರಿಗಳನ್ನು ಕರೆಸಿ ಸಲಹೆ ಪಡೆದು ವೇಲೂರಿನ ಕೋಟೆಯ ಎದರಿನಲ್ಲಿರುವ ಕೊಳದ ದಂಡೆಯ ಮೇಲೆ ನಿಂತು ನಮ್ಮ ಧ್ವಜವನ್ನು ಹಾರಿಸಲು ನಿರ್ದೇಶನ ನೀಡಿದರು.

ನಜ್ಮ್

ಅಲಂ ಅಂಚೆ ಜಲ್ವಾ ಪರ್ದಾಝ್ ಗಶ್ತ್
ಕೆಯಕ್ ನೇಝು ಬಾಲಾ ಝು ಗರ್ದೂ ಗುಝಿಶ್ತ್
ಧ್ವಜವನ್ನು ಹೇಗೆ ಅಷ್ಟೆತ್ತರಕೆ ಹಾರಿಸಿದರೆಂದರೆ
ಆಕಾಶದ ಎತ್ತರಕ್ಕೆ ತಲಪುವಂತೆ ಬಾಣಹಾರಿಸಿದರೆ

ಝು ಅಕ್ಸೆ ದರ್‌ಖಶ್ ಬನಕ್ಶ್ ಅಝ್ ಸೆಪೆಹರ್
ಅಂಯಾಂ ಗಸ್ತ್ ಚ್ಯೂಂ ಪರ್ ತಾವೂಸೆ ಮೆಹರ್
ಆಕಾಶದ ಅಂಗಳದಲಿ ಧ್ವಜದ ಬೆಳಕಿನ ನೆರಳು
ನವಿಲು ತನ್ನ ರೆಕ್ಕೆಯ ಬಿಚ್ಚಿದಂತೆ ಸುಂದರ ಕುರುಳು.

ಝು ರಾಯಾತೆ ರಂಗೀನ್ ಕೆ ಆಮತ್ ಪದೀದ್
ಹವಾ ಅಶ್ಮಫಕ್ ಪರ್ದಾ ಬರ್‍ರವೂ ಕಶೀದ್
ಈ ವರ್ಣರಂಜಿತ ಪತಾಕೆಗಳು ಹಾರಾಡುತ್ತಿರುವಂತೆ
ಸಂಜೆಗತ್ತಲಿನಲಿ ಗಾಳಿ ಕೆಂಬಣ್ಣದ ಪರದೆಯನು ಎಳೆಯುತಿರುವಂತೆ.

ಪುರೋಶೀದನೆ ಕೋಸ್ ಬರ್ ಕೋಹೆಸಾರ್
ಬರಾವರ್‌ದ್ ಅಝ್ ಶೋರೆ ಮೆಹಶರ್ ದಮಾರ್
ಪರ್ವತದಲಿ ನಗಾರಿಯ ಸದ್ದು ಜೋರಾಗಿ ಕೇಳಿಸುತಿದೆ
ಮೆಹಶರದ ಮೈದಾನದಲ್ಲಿ ಭಯಾನಕ ಗಲಾಟೆ ಎದ್ದಂತಿದೆ.

ಶಾಜಿ ರಾಜ ಮತ್ತು ಇನ್ನಿತರ ಹಿಂದೂ ಸೇನಾನಿಗಳನ್ನು, ದಿಲಾವರ್ ಖಾನ್ ಹಾಗೂ ರಾಗು ಬೆಹಮನ್‌ರನ್ನು ನಿಜಾಂ ಶಾಹಿ ನೇತೃತ್ವದ ಸೈನ್ಯದ ತಂಡದತ್ತ ಕಳುಹಿಸಿದರು. ಸಯ್ಯಿದಿ ರೆಹಾನ್ ಶೋಲಾಪುರಿ, ರುಸ್ತುಂ ಜಮಾನ್. ಹುಸೈನಿ ಅಂಬರ್ ಖಾನ್, ಪೇಶ್ ಜಂಗ್ ಖಾನ್, ಅಬ್ದುಲ್ಲಾ ಖುದಾವಂದ್ ಖಾನ್ ಈ ಐದು ಸೇನಾನಿಗಳನ್ನು ಬೆಹಲೋಲ್ ಶಾಹಜಹಾನಿಯವರ ನೇತೃತ್ವದ ಸೈನ್ಯದ ತುಕಡಿಯ ಮೊದಲ ಸಾಲಿನ ಜವಾಬ್ದಾರಿ ನೀಡಿದರು. ಅಸದುಲ್ ಖವಾನೀನ್‌ನಿಗೆ ಶಾಜಿ ರಾಜಾರ ಸೈನ್ಯದ ಹಿಂದೆ ಜಾಗರೂಕತೆಯಿಂದ ಅವರಿಗೆ ಬೆಂಬಲ ನೀಡುತ್ತ ಸುದೃಢವಾದ ಹೆಜ್ಜೆಯನ್ನಿಡುತ್ತಿರಬೇಕೆಂಬ ಸೂಚನೆಯನ್ನು ನೀಡಿದರು. ತಮ್ಮ ಸ್ವಂತ ನೇತೃತ್ವದ ಸಿಪಾಯಿಗಳ ತಂಡಕ್ಕೆ ಎಲ್ಲಕ್ಕಿಂತಲೂ ಎದುರಿಗಿರುವ ವೈರಿಗಳನ್ನು ಎದುರಿಸುವ ಜವಾಬ್ದಾರಿಯನ್ನು ನೀಡಿ ಕಳುಹಿಸಿದರು. ನವಾಬ್ ಸಾಹೇಬರು ಸ್ವತಹ ಕೆಲವು ಯುವ ಸೇನಾನಿಗಳೊಂದಿಗೆ ಕೊಳದ ದಂಡೆಯಲ್ಲಿ ನಿಂತು ನಿರ್ದೇಶಿಸುತ್ತಾ ಸಮಸ್ತ ಸೇನೆಯನ್ನು ರಣರಂಗದತ್ತ ಬೀಳ್ಕೊಟ್ಟರು.

ಅಬ್ಯಾತ್

ದಿಲೇರಾನೆ ಜಾಂಬಾಸ್ ಸಾಬಿತ್ ಕದಮ್
ಚ್ಯೂಂ ಕರ್‌ದಂದ್ ತೈಗ್ ದರಕ್ಷಾನೆ ಅಲಮ್
ದೃಢ ಹೆಜ್ಜೆಯ ಶೂರ ಸಿಪಾಯಿಗಳು ಬಂದರು
ಹೊಳೆವ ಧ್ವಜಹಾರಿಸುವಂತೆ ತಲ್ವಾರನ್ನು ಹಿರಿದು ನಿಂತರು.

ಶುದ್ ಅರ್ಝ್ ದೆಹಶತೇ ತೈಗೇ ಶಾನೇ ಆಫ್‌ತಾಬ್
ಜೆ ಚಶ್ಮೆ ಕವಾಕಿಬ್ ರಂವಾ ಹಂಚು ಆಬ್
ಅವರ ತಲವಾರಿನ ಹೊಳಪಿಗೆ ಸೂರ್ಯನೂ ಹೆದರಿದ
ನಕ್ಷತ್ರಗಳ ಕಣ್ಣಿನಿಂದ ಹರಿದ ನೀರಿನಂತೆ ಕರಗಿ ಹೋದ.

ಬಕಫ್ ತೈಗೂ ಬುರ್ಝೇ ಗಿರಾಂ ಸರ್ ಬದೋಶ್
ಚ್ಯೂಂ ದರಿಯಾಯೆ ಜೋಶಾಂ ಸರಫಾ ಖರೋಶ್
ಭಾರದ ಢಾಲು ಹಿಡಿದ ಮುಷ್ಠಿಯೊಂದಿಗೆ ತಲ್ವಾರು ತಲೆ ಭುಜ ಸವರುವಾಗ
ಭೋರ್ಗರೆವ ಸಮುದ್ರದಂತೆ ಸರ್ವವೂ ಗುಲ್ಲೆದ್ದುಬಿಡುತ್ತದೆ.

ನಿಹಾದಂದ್ ರೂಹ್ ಸೂಯೆ ದಸ್ತೆ ನಿಬರ್ದ್
ಝು ಗರ್ದೆ ಶಿಪಾ ರಫ್ತ್ ಗರ್ದೂ ಬದರ್ದ್
ರಣರಂಗದತ್ತ ಸಿಪಾಯಿಗಳು ಮುಂದಡಿಯಿಡುವಾಗ
ಎದ್ದ ಧೂಳಿನಿಂದ ಆಕಾಶವೂ ಕವಿದು ಮುಸುಕಾಗುವುದು.

ಯುದ್ಧ ಘೋಷವಾದಾಗ ರಣಕಹಳೆ ಮೊಳಗುವ ಸದ್ದು, ನಗಾರಿಯ ಬಡಿತದಿಂದ ಭೂಮಿ ಹಾಗೂ ಕಾಲ, ಜಲಪ್ರಳಯದ ಸೂಚನೆಯ ಕಹಳೆಯನ್ನು ಒಡೆದು ಹೊರಬಂದ ಭೀಕರ ಸದ್ದು, ಊದುವ ದೇವದೂತ ಇಸ್ರಾಫಿಲ್ ಕೈಯಿಂದ ಜಾರಿ ಭೂಮಿಗೆ ಕಹಳೆ ಬಿದ್ದ ಸದ್ದು ಕೇಳಿಬಂದಂತೆ ನಡುಗಿಬಿಟ್ಟವು. ಸರ್ವ ಸೇನಾನಿ, ಸಿಪಾಯಿಗಳು ವೈರಿಸೈನ್ಯದ ಸೈತಾನರ ಮೇಲೆ ರಕ್ತ ಪಿಪಾಸು ಖಡ್ಗಗಳನ್ನು ಹಿಡಿದು ಮುಗಿಬಿದ್ದರು.

ವೈರಿಗಳು ಬಾಣಗಳ ಪರಿಣಿತರಾಗಿದ್ದು, ಬಾಣಗಳ ಮಳೆಗೆರೆಯುತ್ತಾ ಮುಂದೊತ್ತಿ ಬಂದರು. ಭೂಮಿಯಿಂದ ಮಣ್ಣು, ಧೂಳು ಎಬ್ಬಿಸುತ್ತಾ ಒಂದೇ ಸವನೆ ತೋಪುಗಳನ್ನು ಎಸೆಯುತ್ತಾ ಭಯಂಕರ ಸದ್ದು ಗದ್ದಲಗಳನ್ನೆಬ್ಬಿಸುತ್ತ, ಭೂಮಿ, ಆಕಾಶ, ಪರ್ವತ, ಕಣಿವೆಗಳನ್ನು, ಹರಿವನದಿಗಳನ್ನು ಏರಿಬಂದ ಪರಿ ಕೇಳುಗರ ಕಿವಿ ತಮ್ಮಟೆ ಒಡೆದುಹೋಗುವಂತಿತ್ತು.

ಬಾದಶಾಹರ ಸೈನ್ಯದ ಕಡೆಯಿಂದ ಮಿಂಚು ಹಾರುವಂತೆ ಹಾರಿದ ತೋಪುಗಳು ಭಯಂಕರ ಸದ್ದಿನೊಂದಿಗೆ ಸಮುದ್ರದ ಒಳಗೆ ಬಿದ್ದಂತೆ ಸಿಡಿದು ಹಾರಿದ ಪರಿಯ ಎದುರು ವೈರಿಗಳ ಬಾಣಗಳ ಹಾರಾಟ ನೀರಲ್ಲೆದ್ದ ಗುಳ್ಳೆಗಳಂತಿತ್ತು. ಮಜಬೂತಾದ ಬಾಣಗಳ ಪೆಟ್ಟು ಜಾದೂ ನಡೆದಂತೆ ಭೂಮಿಯ ಆಳಕ್ಕೆ ಹೋಗಿ 'ತಹತುಸ್ಸರಾ' ಅಥವಾ ಪಾತಾಳಕ್ಕೆ ತಲಪುತ್ತಿತ್ತು. ಸಿಪಾಯಿಗಳು ವೈರಿಗಳ ಬಾಣಗಳನ್ನು ತಾಜಾ ತಾಜಾ ಹಣ್ಣುಗಳನ್ನು ಕತ್ತರಿಸುವಂತೆ ರಕ್ತದಾಹದ ಖಡ್ಗಗಳಿಂದ ಕಡಿದು ಹಾಕಿದರು. ವೈರಿಗಳ ಶಿರಗಳನ್ನು ವಸಂತದ ಋತುವಿನಲ್ಲಿ ಉರುಳುವ ಎಲೆಗಳಂತೆ ಉದುರಿಸಿ ನೆಲಸಮಗೊಳಿಸಿದರು.

ನಜ್ಮ್

> **ಬರ್ ಅಫ್ರಾಕ್ತ್ ಸರೆ ತೈರ್ ಆಯಿನಯೆ ಫಾಮ್**
> **ಫರೋ ರೇಖ್ತ್ ಲಾಲೆ ತರ್ ಅಝ್ ಸೀಮೆ ಖಾಮ್**
> ಗಾಜಿನ ಹೊಳಪಿನ ಖಡ್ಗದ ಮೊನೆ ಎಷ್ಟು ಚೂಪಾಗಿತ್ತೆಂದರೆ
> ಮೆದು ಬೆಳ್ಳಿಯ ಉಂಗುರದಿಂದ ಕೆಂಪುಕಲ್ಲು ಬಿದ್ದಹೋದಂತೆ.

> **ಚ್ಯೂಂನಾ ಸರ್‌ಫಶಾಂ ಶಂಶೀರೆ ಗೀನ್**
> **ಕೆ ಬ ಆಸ್‌ಮಾನ್ ಸರ್‌ಗರಾಂ ಶುದ್ ಝಮೀನ್**
> ಖಡ್ಗದ ಹಿಡಿಯೂ ಸ್ವಾಮಿನಿಷ್ಠೆಯ ಪ್ರತೀಕವಾಯಿತು
> ತಿರುಗುವ ಆಕಾಶ ಭೂಮಿಯಾದಂತಾಯಿತು.

> **ಬರೂವೆ ಹವಾ ಅಕ್ಸೆ ಶಂಶೀರೆ ತೇಝ್**
> **ಶಫಕ್ ಬಸ್ತ್ ಚ್ಯೂಂ ಅಬ್ ಶುದ್ ಬರ್‌ಖರೇಝ್**

ಗಾಳಿಯಲಿ ಬೀಸಿದ ಖಡ್ಗದ ಹೊಡೆತದ ರಭಸಕೆ
ಮುಗಿಲು ಸಿಡಿಲುಸ ಮಿಂಚು ಸಿಡಿಸಿದಂತಾಯಿತು.

ಚ್ಯೂಂ ಶುದ್ ಖೂನ್ ಫಿಶಾಂ ತೈಘ್ ಅಲ್ಮಾಸ್ ಬಾರ್
ಖುರ್ಘಾ ಜೌಹರ್ಖೇಶ್ ಕರ್ದ್ ಆಶ್ಕಾರ್
ರಕ್ತಪಿಪಾಸು ಖಡ್ಗಗಳು ವಜ್ರದಂತೆ ಹೊಳೆವ ಮೊನೆಯನ್ನು ತೋರಿಸಿದಂತಾಯಿತು
ಸಾವು ಎಲ್ಲರ ಮುಂದೆ ತನ್ನ ಮುಖವನ್ನು ಪ್ರದರ್ಶಿಸಿದಂತಾಯಿತು.

ಶೂರರ ಕತ್ತಿಯ ಹೊಡೆತದಿಂದ ವೈರಿಗಳ ಎದೆ, ಹೊಟ್ಟೆಗಳ ಹರಿದು ಬಗೆದು ಒಳಗೆ ಚೂಪಾದ ಮೊನೆ ಹೊಕ್ಕಿತು. ಬಾದಶಾಹರ ಸೇನಾನಿಗಳ ಸಿಟ್ಟಿಗೆ ತುತ್ತಾದ ಸೈನಿಕರು ಶಾಂತಿ ಮಂತ್ರವ ಪಠಿಸುತ್ತ ತಮ್ಮ ತಲೆ ತಗ್ಗಿಸಿ ನಿಂತರು. ಹೀಗೆ ಮಾಡದಿರುತ್ತಿದ್ದರೆ ವೈರಿಗಳ ಶಿರಗಳು ವಿಶ್ವದ ಅಂತಿಮ ದಿನವೆನಿಸಿದ ಖಯಾಮತ್ ತನಕ ಎದ್ದೇಳುತ್ತಿರಲಿಲ್ಲ.

ಬಾದಶಾಹರ ಸಿಪಾಯಿಗಳು ಶಿರಚ್ಛೇದಗೊಳಿಸುವ ತಲವಾರಿನಿಂದ ಒಂದೇ ಪೆಟ್ಟಿಗೆ ವೈರಿಗಳ ಅನೇಕ ಶಿರಗಳನ್ನು ಹೇಗೆ ಕತ್ತರಿಸಿದರೆಂದರೆ ಅವರ ದೇಹ ಭೂಮಿಯಮೇಲೆ ಬಿದ್ದು ಕಸದ ರಾಶಿಯ ಜೊತೆಗೆ ಸೇರಿಹೋಗಿ ಮಾಯವಾದವು. ನವಾಬ್ ಸಾಹೇಬರ ಸೈನ್ಯ ಸಂಪೂರ್ಣವಾಗಿ ಯುವ ಉತ್ಸಾಹದ ಚಿಲುಮೆಯಾಗಿ ಶೌರ್ಯವನ್ನು ತೋರಿಸುತ್ತ ಕೆಡುಕನ್ನೇ ಯೋಚಿಸುವ ವೈರಿಗಳೊಂದಿಗೆ ಯುದ್ಧನಿರತರಾದರು. ಆನೆಯ ಮೇಲೆ ಕೂತಿದ್ದ ದೆವ್ವದಂತಹ ರಾಮುಲು ನೋಡುವಾಗ ಎರಡೂ ಕಡೆಯಿಂದ ಪರಸ್ಪರ ಎದುರುಬದುರಾಗಿ ಕಾಳಗದಲ್ಲಿ ಸಂಪೂರ್ಣ ನಿರತರಾಗಿರುವ ದೃಶ್ಯ ಕಂಡುಬಂತು. ಇದನ್ನು ನೋಡಿ ಹಿಂತಿರುಗಿದ. ಮತ್ತೆ ೧೮,೦೦೦ ಕಾಲಾಳುಗಳು ಮತ್ತು ಕರಿಬಣ್ಣದ ಮದೋನ್ಮತ್ತ ಆನೆಗಳನ್ನು ಕರೆದುಕೊಂಡು ನವಾಬ್ ಸಾಹೇಬರತ್ತ ನಡೆದ. ಇಸ್ಲಾಂ ಧರ್ಮದ ಕಟ್ಟಾಳುವಾದ ನವಾಬ್ ಸಾಹೇಬರ ಜೊತೆಗೆ ಕೆಲವೇಕೆಲವು ನಂಬಿಕಸ್ಥ ಸೇನಾನಿಗಳು ಇದ್ದರು. ಇವರ ಸಂಖ್ಯೆ ಹೆಚ್ಚು ಕಮ್ಮಿ ೧೦–೧೨ಜನರಿಗಿಂತ ಹೆಚ್ಚಿರಲಿಲ್ಲ, ಇವರಿಗೆ ನವಾಬ್ ಸಾಹೇಬರು ಯುದ್ಧದ ಕೆಲವು ಜವಾಬ್ದಾರಿಯನ್ನು ವಹಿಸಿಕೊಟ್ಟರು. ರಾಮುಲು ಕೊಳದ ದಡಕ್ಕೆ ಬಂದ. ಇಲ್ಲಿಗೆ ಬಂದ ಅವನ ಉದ್ದೇಶ ಇಲ್ಲಿಂದ ಮೇಲಿನ ಇನ್ನೊಂದು ಬದಿಗೆ ಹೋಗಬೇಕೆಂದಿತ್ತು. ಅಷ್ಟರಲ್ಲಿ ನವಾಬ್ ಸಾಹೇಬರು ಬಿಲ್ಲುಬಾಣ ಸಂಗ್ರಹದ ಕೋಣೆಯೊಳಗೆ ತ್ವರಿತವಾಗಿ ಪ್ರವೇಶಿಸಿ ಬಾಣಗಳನ್ನು ಎತ್ತಿಕೊಂಡು ರಾಮುಲುವಿನತ್ತ ಒಂದರಮೇಲೆ ಒಂದರಂತೆ ಮೂರು ಬಾಣಗಳನ್ನು ಗುರಿಯಿಟ್ಟು ಹೊಡೆದರು. ಆದರೆ ಬಾಣ ಗುರಿಮುಟ್ಟಲಿಲ್ಲ. ರಾಮುಲು ಕೆಳಗಿನ ಭಾಗವನ್ನು ಬಿಟ್ಟು ಓಡಲು ಪ್ರಯತ್ನಿಸುವಾಗ ಕುದುರೆಯ ರಿಕಾಬಿನಿಂದ ಕಾಲುತೆಗೆದು ಬೆನ್ನ ಮೇಲೆ ನಿಂತು ಅಲ್ಲಾಹನ ತೀರ್ಮಾನದಂತೆ ಗುರಿಯಿಟ್ಟು ನವಾಬ್ ಸಾಹೇಬರು ಮತ್ತೊಂದು ಬಾಣಹೊಡೆದಾಗ ನೇರವಾಗಿ

ರಾಮುಲುನ ಭುಜಹೊಕ್ಕಿತು. ಅವನು ಮೈದಾನದಿಂದ ಭುಜಮುರಿದು ಕುಂಟುತ್ತ ಓಡುವ ಹಾದಿಯನ್ನು ಹುಡುಕುತ್ತಿದ್ದ.

ನಜ್ಮ್

ಬಯಕ್ ತೀರೆ ನವಾಬ್‌ವಾಲ ಗುಹರ್
ಸಫೇ ಕಾಫಿರಾಂ ಝೇರೋ ಝಬರ್
ನವಾಬ್ ಸಾಹೇಬರ ಒಂದೇ ಬಾಣದಿಂದ
ವೈರಿಗಳ ಸಮುದಾಯ ಅಲ್ಲೋಲಕಲ್ಲೋಲವಾಯಿತು.

ಬರೂನ್ ಜಸ್ತ್ ಅಝ್ ಶುಸ್ತೆ ಸಾಫಿಶ್ ಕಿಝಂಗ್
ಚ್ಯುಂ ತೀರೇ ಶಹಾಬ್ ಅಸ್ಸಿಫರೋ ರಂಗ್
ರಣರಂಗದಲಿ ಬಿಲ್ಲುಗಳಿಂದ ಬಾಣಗಳು ಹೊರಟಾಗ
ಆಕಾಶದಿಂದ ಎರಡು ಬಣ್ಣಗಳ ಬೆಂಕಿಯುಗುಳುವ ಬಾಣ ಹೊರಟಂತೆ

ಚುನಾ ಜಸ್ತ್ ತೀರ್ ಅಝ್ ಕಮಾನ್ ದರ್ ಮಸಾಫ್
ಕೆ ಸೇ ಮರ್ಘ್ ರಾ ದೋಖ್ತ್ ಬರ್ ಕೋಹೆ ಕಾಫ್
ರಣರಂಗದಿಂದ ಬಾಣಗಳು ಬಿಲ್ಲಿನಿಂದ ಹೊರಟಾಗ
ವೇಗದ ಸದ್ದು ಕಾಲ್ಪನಿಕ ಪಕ್ಷಿಗೂ, ಪರ್ವತಕ್ಕೂ ಕೇಳಿಬರುವುದು.

ಶುದ್ ಅಝ್ ನೈಶೇಪಿಕಾಂ ಗೀರೊದಾರ್
ದಹಾನೆ ಫಲಕ್ ಪುರ್ ಝ ದಂದಾನೆ ಮಾರ್
ಅವರ ಬಾಣಗಳ ಮೊನೆಗೆ ಎಂತಹ ಬಲಿಷ್ಠ ಹಿಡಿತವಿದೆ ಎಂದರೆ
ಆಕಾಶದ ಮುಖದಲ್ಲಿ ಸರ್ಪಗಳ ಹಲ್ಲುಗಳು ತುಂಬುತ್ತವೆ.

ಅಗರ್ ಕೋಹ್ ಸಹರಾ ಶವದ್ ಪುರ್ ಗುಝನ್
ಝಮೀರ ನುಮಾರ್ಝದ್ ಆಂ ಹೇಚ್ ವಝನ್
ಹನ್ನೆರಡು ಕೋಡುಗಳಿರುವ ಜಿಂಕೆಗಳಿಂದ ಪರ್ವತ ಕಾಡುಗಳು ತುಂಬಿದರೂ
ಭೂಮಿಗೆ ಇವುಗಳಿಂದಾಗಿ ಭಾರವೇನೂ ಆದಂತಿರದು.

ಚ್ಯೂಂ ಶೇರೇ ಜಿಯಾಂ ರೂನಹದ್ ಸೂಯೆ ಶಾಂ
ನಬೀನದ್ ದಿಗರ್ ಹೇಚ್ ಕಸ್‌ರೌ ಶಾಂ
ಸಿಟ್ಟಾದ ಭೀಕರ ಸಿಂಹ ಅವರತ್ತ ನುಗ್ಗುತ್ತಿರುವಾಗ
ಅವರಿಗೆ ತಮ್ಮ ಎದುರಿನಲ್ಲಿರುವ ಯಾರೂ ಕಾಣದಾಗದು.

ಖಾನ್ ಅಸದುಲ್ ಖವಾನಿನರಿಗೆ ಈ ಸುದ್ದಿ ತಲಪಿದಾಗ ರಾಮಲು ಹದಿನೆಂಟು ಸಾವಿರ ಕಾಲಾಳುಗಳೊಂದಿಗೆ ನವಾಬ್ ಸಾಹೇಬರ ಹತ್ತಿರ ತಲಪಿದ್ದಾನೆಂಬ ಸುದ್ದಿ

ತಲಪಿದಾಗ ತನ್ನ ಎಲ್ಲ ಶಕ್ತಿಯನ್ನು ಒಗ್ಗೂಡಿಸಿಕೊಂಡು ಮುಖ್ಯದ್ವಾರದ ಕಡೆಗೆ ನುಗ್ಗಿ ಎರಡು ಸಾವಿರ ಸಿಪಾಯಿಗಳೊಂದಿಗೆ ಬಲ ಪ್ರಯೋಗಿಸಿ ಬಾಗಿಲು ತೆರೆದ. ಬಾಗಿಲು ತೆರೆದಾಗ ವೈರಿಗಳೊಂದಿಗೆ ಮುಖಾಮುಖಿಯಾಗಿ ವೈರಿಗಳ ಸೈನ್ಯದ ಮಧ್ಯಭಾಗದ ಮೇಲೆ ಎಗರಿದರು. ಪ್ರತೀ ಹೆಜ್ಜೆಯಲ್ಲೂ ವೈರಿಗಳನ್ನು ಕೊಂದು ರಾಶಿಹಾಕಿದರು.

ವೈರಿಗಳು ನೋಡುವಾಗ ಅಸದುಲ್ ಖವಾನೀನ್ ಏಕಾಂಗಿಯಾಗಿ ಬಾಗಿಲ ಮೂಲಕ ಹೊರಬರುತ್ತಿರುವುದು ಕಂಡು, ನಾಲ್ಕೂ ನಿಟ್ಟಿನಿಂದ ಭೀಕರ ಈಟಿಗಳನ್ನು ಹಿರಿದು ಮುತ್ತಿಗೆ ಹಾಕಿದರು. ಅಸದ್ ಖಾನ್‌ರ ಕುದುರೆಯ ಕಾಲಿಗೆ ಈಟಿಯಿಂದ ಇರಿದರು. ಅಸದ್ ಖಾನ್ ಕುದುರೆಯಿಂದ ಕೆಳಗಿಳಿದು ನೆಲದ ಮೇಲೆ ನಿಂತರು. ಅವರು ತಮ್ಮ ಖಡ್ಗವನ್ನು ಒರೆಯಿಂದ ತೆಗೆದರು. ಅವರ ಈ ತಲವಾರನ್ನು ಒಮ್ಮೆ ಬೀಸಿದರೆ ಸಾಕು, ವೈರಿಗಳ ತಲೆಯನ್ನು ಒಡೆದು ಹಾಕುವಷ್ಟು ಹರಿತವಾಗಿತ್ತು. ಅದನ್ನು ಹಿಡಿದು ವೈರಿಗಳೊಂದಿಗೆ ಏಕಾಂಗಿಯಾಗಿ ಹೋರಾಡ ತೊಡಗಿದರು. ಈ ಮಧ್ಯೆ ವೈರಿಗಳ ದೊಡ್ಡದೊಂದು ಗುಂಪು ತ್ವರಿತವಾಗಿ ನಡುವೆ ಸೇರಿಕೊಂಡರು. ಅಸದುಲ್ ಖವಾನೀನ್ ನಡುವೆ ಸಿಕ್ಕಿಬಿದ್ದರು. ಥಟ್ಟನೆ ಅವರ ಕೈಯಿಂದ ಖಡ್ಗ ಜಾರಿ ಬಿದ್ದುಬಿಟ್ಟಿತು. ಅಸದ್ ಖಾನ್‌ರ ಹಿಂದಿನಿಂದ ವೈರಿಗಳು ಜುಬ್ಬಾವನ್ನು ಹಿಡಿದು ಎಳೆದಾಗ ಗಟ್ಟಿಯಾಗಿ ಮಜಬೂತಾಗಿ ನಿಂತಿದ್ದರಿಂದ ಅವರನ್ನು ಅಲುಗಾಡಿಸದಾದರು. ಅಸದ್ ಖಾನ್‌ರ ಮೈಮೇಲೆ ಇಪ್ಪತ್ತೈದು ಗಾಯಗಳಾಗಿದ್ದವು. ಆದರೂ ಅವರು ಶೌರ್ಯದಿಂದ ಹೋರಾಡುತ್ತಾ ಸೊಂಟದಲ್ಲಿದ್ದ ಕತ್ತಿಯನ್ನು ತೆಗೆದು ವೈರಿಗಳ ಎದೆಗಳನ್ನು ಇರಿದು ಕಾಮನ ಬಿಲ್ಲಿನ ಬಿಳಿಯ ರೇಶ್ಮೆ ಯ ನೂಲಿನ ಉಂಡೆಯನ್ನು ಅದ್ವಿತೀಯ ಶಕ್ತಿಯ ಬಲದಿಂದ ಹರಿದಂತೆ ಎಳೆದು ಹಾಕಿದಂತಾಯಿತು. ಈ ಸುದ್ದಿ ನವಾಬ್ ಸಾಹೇಬರಿಗೆ ತಲಪಿದಾಗ ಬಾದಶಾಹರ ಸಿಪಾಯಿಗಳು ಅತ್ತ ಧಾವಿಸಿದರು. ಇವರು ತಲಪುವ ಮೊದಲು ಅಸದುಲ್ ಖವಾನೀನನ ಸೈನ್ಯದ ವೀರ ಸರದಾರರಲ್ಲಿ ಓರ್ವರಾದ ಹಸನ್ ಆಘಾ ಎಂಬ ಶೂರ ಸಿಪಾಯಿ ಎಲ್ಲರಿಗೂ ಧೈರ್ಯತುಂಬಿ ಅಸದುಲ್ ಕವಾನೀನರ ಸಹಾಯಕ್ಕೆ ಧಾವಿಸಿ ತನ್ನ ಕುದುರೆಯ ಮೇಲೆ ಏರಿಸಿದ.

ಈ ಮಧ್ಯೆ ನವಾಬ್ ಸಾಹೇಬರು ಉಪಯೋಗಿಸುವ ಡೋಲಿಯಂತಹ ಸಿಂಹಾಸನವನ್ನು ಎಲ್ಲ ಸಿಪಾಯಿಗಳು ಸೇರಿ ತಂದರು. ಗಾಯಾಳು ಅಸದುಲ್ ಖವಾನೀನನನ್ನು ಅದರ ಮೇಲೆ ಕೂರಿಸಿ ಹೊತ್ತು ನವಾಬ್ ಸಾಹೆಬರ ಮುಂದೆ ತಂದು ನಿಲ್ಲಿಸಿದರು. ಇಲ್ಲಿನ ತನಕ ನಡೆದ ಯುದ್ಧದಲ್ಲಿ ಬಹಳಷ್ಟು ವೈರಿಗಳು ನಾಶವಾಗಿದ್ದರು. ಐದು ಸಾವಿರದ ಎಂಟುನೂರು ವೈರಿ ಕಾಲಾಳುಗಳ ಮುಂಡದಿಂದ ರುಂಡ ಹಾರಿಸಲಾಗಿತ್ತು. ಹಸಿರು ವರ್ಣ ಹಾಸಿದ ಡೇರೆಯಲ್ಲಿ ಕಪ್ಪು ನಕ್ಷತ್ರಗಳು ಬಾದಶಾಹರ ಸೇವೆಯಲ್ಲಿ ನಿರತವಾಗಿತ್ತು. ಇದು ಮುಗಿದು, ಪ್ರಭಾಪೂರ್ಣ ದಿನ ತನ್ನ ಕಪ್ಪು ಬಟ್ಟೆಯನ್ನು ತೊರೆದು ಬೆಳಕು ನೀಡಲು ತೊಡಗಿದಾಗ (ಅಂದರೆ ರಾತ್ರಿ

ನಿದ್ದೆಯಲ್ಲಿ ಕಳೆದು ಬೆಳಗಾದಾಗ) ಕೋಟೆಯ ಒಳಗೆ ನವಾಬ್ ಸಾಹೇಬರನ್ನು ಕರೆದುಕೊಂಡು ಬರಲಾಯಿತು. ಕೋಟೆಯು ನವಾಬ್ ಸಾಹೇಬರ ವಶವಾಯಿತು. ಈ ಸಮಯದಲ್ಲಿ ಪ್ರಮುಖ ಸೇನಾನಿಗಳು ಮತ್ತು ಮಂತ್ರಿಗಳು ಬೈಲೂಲ್ ಖಾನ್ ಎಂಬ ಓರ್ವ ಸೇನಾನಿ ಇಷ್ಟೆಲ್ಲ ವಿದ್ಯಮಾನಗಳು ನಡೆದಿದ್ದರೂ ರಣರಂಗದಲ್ಲಿ ಪ್ರವೇಶಿಸದೆ ಇದ್ದುದರಿಂದ ಅವನ ಬಳಿಯಲ್ಲಿರುವ ಸುಸಜ್ಜಿತ ಸೈನ್ಯ ತಂಡ ಇಷ್ಟರ ತನಕ ಉಪಯೋಗವಾಗದೆ ಹಾಗೆಯೇ ಉಳಿದಿದೆ ಎಂದು ಪದೇಪದೇ ಹೇಳಿ ಚರ್ಚಿಸಲಾರಂಬಿಸಿದರು. ಹೀಗೆ ಅವನನ್ನು ಮತ್ತು ಸೈನ್ಯ ತಂಡವನ್ನು ಉಪಯೋಗಿಸದೆ ಬಿಡುವುದು ಬುದ್ಧಿವಂತಿಕೆಯ ಸಂಗತಿಯಲ್ಲ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು. ಬಾದಶಾಹರ ಕೃಪೆಯಿಂದ ಅಲ್ಲಿಂದ ಯಾವುದೇ ಕೆಟ್ಟಸುದ್ದಿ ಇದುವರೆಗೆ ಬಂದಿಲ್ಲ ಎಂದಷ್ಟೇ ನವಾಬ್ ಸಾಹೇಬರು ಹೇಳಿದರು. ಇಷ್ಟು ಹೇಳಿ ಕೋಟೆಗೆ ಸಂಬಂಧದ ಕೆಲಸಕಾರ್ಯಗಳಲ್ಲಿ ಮಗ್ನರಾದರು. ದಿನದ ನಂತರ ತನ್ನ ಸೈನ್ಯದೊಂದಿಗೆ ವೇಲೂರು ಕಡೆ ಪ್ರಯಾಣಿಸಲು ತಯಾರಾದರು. ಈ ಮಧ್ಯೆ ಬೈಲೂಲ್ ಖಾನ್ ತನ್ನ ಸೈನಿಕರ ಗುಂಪನ್ನು ಕರೆದುಕೊಂಡು ಯುದ್ಧದ ಮೈದಾನದ ರಸ್ತೆಯ ಮೂಲಕ ಬಂದು ವಶಪಡಿಸಲು ಪ್ರಯತ್ನ ಮಾಡುತ್ತಿದ್ದಾನೆಂಬ ವರ್ತಮಾನ ತಲಪಿತು. ಅವನ ನಿಜವಾದ ಉದ್ದೇಶವೇನೆಂದರೆ ಪರ್ವತದ ಹಿಂದಿನಿಂದ ಬಂದು ವೈರಿಗಳನ್ನು ಎದುರಿಸಿ ನಾಶಪಡಿಸುವುದಾಗಿತ್ತು. ನವಾಬ್ ಸಾಹೇಬರು ಈ ಸುದ್ದಿ ತಿಳಿದು ನಸುನಕ್ಕು, 'ನಾವಂತೂ ಅಲ್ಲಿಂದ ಸರಿದು ಮುಂದುವರಿದಿದ್ದೇವೆ. ಅಲ್ಲಿ ವೈರಿಗಳು ಯಾರೂ ಈಗ ಉಳಿದಿಲ್ಲ. ಅವನ ಉದ್ದೇಶ ಈಡೇರುವುದಕ್ಕೆ ಅಲ್ಲಿ ಯಾರೂ ಇಲ್ಲವಲ್ಲಾ' ಎಂದರು.

ಈ ಗುಸುಗುಸು ಸುದ್ದಿ ಹರಡುತ್ತಿದ್ದಂತೆ ಸೈನಿಕ ತಂಡದವರು ತಮ್ಮ ತಮ್ಮ ಡೇರೆಗಳಲ್ಲಿ 'ಬೈಲುಲ್ ಖಾನ್ ವೈರಿಗಳ ಮೇಲೆ ದಾಳಿಮಾಡಲು ಬರುತ್ತಿದ್ದಾನೆ' ಎಂದು ಕೂಗೆಬ್ಬಿಸಿ ತಮಾಷೆ ಮಾಡ ತೊಡಗಿದರು. ನವಾಬ್ ಸಾಹೇಬರು ತಮಗೆ ದೊರಕಿದ ದೊಡ್ಡರೀತಿಯ ವಿಜಯವನ್ನು ಕುರಿತು ಸಂಭ್ರಮ ಪಡುತ್ತಾ ಹೀಗೆ ಹೇಳಿದರು, 'ಬಾದಶಹರ ಆಳ್ವಿಕೆಯ ಕಾಲದ ವಿಜಯ ಯಾತ್ರೆಯಲ್ಲಿ ಯಾರೂ ಕಂಡು ಕೇಳದಿರುವ ಅತ್ಯಂತ ಮಹತ್ವದ ವಿಜಯ ಈಗ ನಮ್ಮ ಪಾಲಾಗಿದೆ. ಬಾದಶಾಹರ ಸುದೀರ್ಘ ಆಳ್ವಿಕೆ ಮತ್ತು ವಿಶ್ವದ ಎಲ್ಲೆಡೆಯಲ್ಲಿ ಜಯಭೇರಿ ಬಾರಿಸಲಿರುವ ಶುಭಸೂಚನೆಯನ್ನು ನೀಡುವ ವಿಜಯವಾಗಿದೆ'.

ಅಬ್ಯಾತ್

> **ಶಹನ್ ಶಾಹೆ ಗಾಝಿಕೆ ಚ್ಯೂಂ ಅಬ್ರೆ ತೈಗಷ್**
> **ಬೆ ಮೈದಾನ್ ಹೇಚಾ ಕುನತ್ ಕೂಫಿಶಾನಿ**

ವೀರ ಬಾದಶಹರ ಹರಿತ ಖಡ್ಗದ ಮುಗಿಲು ಕವಿದಾಗ
ರಣರಂಗದಲಿ ಹರಿಯುವುದು ರಕ್ತದ ಹೊಳೆ.

ನಿಹಾಲೆ ಝುಫರ್ ಬರ್‌ತೂಬ ರಸಾನಂದ್
ಸವದ್ ಚರ್ಖೆ ನೀಲೋಫರಿ ಅರ್‌ಘವಾನಿ
ವಿಜಯದ ಶುಭವಾರ್ತೆಯು ಅವರಿಗೆ ತಲಪುವಾಗ
ನೀಲ ಕಮಲ ಬಣ್ಣದ ಆಕಾಶ ಕೇಸರದ ವರ್ಣಕ್ಕೆ ತಿರುಗುವುದು

ಝು ನಾಮೇ ಮುಹಮ್ಮದ್ ಬಸರ್ ತಾಜ್‌ದಾರಾ
ಬರೂ ಖತ್ಮ್ ಕರ್‌ದೇ ಸಾಹಬ್ ಖರಾನಿ
ಪ್ರವಾದಿ ಮುಹಮ್ಮದರ ನಾಮದ ಬಲದಿಂದ ಇಟ್ಟಿಹರು ತಲೆಗೆ ಕಿರೀಟವ
ಛಲವಿದೆ ಶಾಹಿ ಆಳ್ವಿಕೆಯ ಕೊನೆತನಕ ಹೀಗೆಯೇ ಮುಂದರಿವ.

ಮೂರ್ಖ ವೈರಿಗಳು ಪೆಟ್ಟುತಿಂದು ನಾಶವಾಗುವಾಗ ನವಾಬ್ ಸಾಹೇಬರು ವೇಲೂರಿನ ಪಟ್ಟಣದ ಗಡಿತನಕ ವಶಮಾಡಿಕೊಳ್ಳುವಂತೆ ಆದೇಶ ನೀಡಿದರು. ಭೀಕರ ಕಂಪನ ಮೂಡಿಸುವಂತೆ ಬೆಂಕಿಯ ಬಾಣಗಳ ಮಳೆಯನ್ನು ಕೋಟೆಯ ಮೇಲೆ ಸುರಿಸಿ ಎಂದು ಸೈನ್ಯಕ್ಕೆ ನಿರ್ದೇಶನ ನೀಡಿದರು. ಈ ಬಾಣಗಳ ಬೆಂಕಿಯಿಂದ ಕೋಟೆಯ ಕಮಾನುಗಳ ಮೇಲೆ ಬೆಂಕಿ ಬಿದ್ದು ಜೋರಾಗಿ ದಹಿಸತೊಡಗಿತು. ಎರಡು ಬೆಂಕಿಯ ಕಿಡಿಗಳು ರಾಯಿಲನ ಡೇರೆಯ ಮಹಿಳಾ ಕಕ್ಷೆಯ ಮೇಲೆ ಬಿದ್ದಿತು. ಇದರಿಂದ ರಾಯಿಲ ತುಂಬ ಭಯಪಟ್ಟು, ಅತ್ಯಂತ ಯೋಚನೆಗೀಡಾದ. ರಾಯಿಲನು ತುಂಬ ಪ್ರಕ್ಷುಬ್ದನಾಗಿ ಯಾವ ಹಾದಿಯೂ ಕಾಣದೆ ಕುಬ್ಜದೇಹದವನಾಗಿ ಶರಣಾಗತನಾಗುವ ಇಚ್ಛೆಯನ್ನು ನವಾಬ್ ಸಾಹೇಬರ ಮುಂದೆ ದೂತರನ್ನು ಕಳುಹಿಸುವ ಮೂಲಕ ಪ್ರಕಟಿಸಿದ. ೫೦ಲಕ್ಷ ನಗದು ಜುಲ್ಮಾನೆ, ೧೫೦ ಆನೆಗಳನ್ನು ನೀಡುವ ಮೂಲಕ ಶರಣಾಗಬೇಕೆಂಬ ಕರಾರನ್ನು ನವಾಬ್ ಸಾಹೇಬರು ಮುಂದಿಟ್ಟರು. ಇದಕ್ಕೆ ಒಪ್ಪಿದ ರಾಯಿಲ ೫೦ ಆನೆಗಳನ್ನು ಕೂಡಲೇನಿಡಿದ. ಬಾಕಿ ನಗದು ಮತ್ತು ಆನೆಗಳ ಜುಲ್ಮಾನೆ ಭರಿಸಲು ಸ್ವಲ್ಪ ಸಮಯದ ಅವಕಾಶವನ್ನು ನೀಡಲು ಕೇಳಿಕೊಂಡನು. ತಾನು ಶಾಶ್ವತವಾಗಿ ಬಾದಶಾಹರ ಸೇವಕನಾಗಿ ಮತ್ತು ತಮ್ಮ ಆಜ್ಞೆಯಂತೆ ನಡೆದುಕೊಳ್ಳುವುದಾಗಿ ನವಾಬ್ ಸಾಹೇಬರಿಗೆ ರಾಯಿಲ ಶಪಥ ನೀಡಿದ.

ನವಾಬ್ ಸಾಹೇಬರು ಒಂದು ತಿಂಗಳ ತನಕ ವೇಲೂರಿನಲ್ಲಿ ತಂಗಿದರು. ಮುಂದಿನ ತಮ್ಮ ರಾಜ್ಯ ವಿಸ್ತರಣೆಗಾಗಿ ಯಾವ ರಾಜ್ಯಗಳ ಮೇಲೆ ದಾಳಿ ಮಾಡಬೇಕೆಂದು ನಿಗದಿ ಪಡಿಸಿಕೊಂಡು ಮುಂದಿನ ಪ್ರಯಾಣ ಬೆಳೆಸಿದರು.

ಖಿತಾ

ಸಿಪಾಹೆ ಹರ್ಝುತೇ ಸುಲ್ತಾನೆ ದೀನ್ ಶಹೆ ಗಾಝೀ
ಬಹರ್ ತರ್ಫ್ ನಹದ್ ರೂಹೆ ಮುಝುಫ್ಫರೋ ಮನ್ಸೂರ್
ಧರ್ಮನಿಷ್ಠ ಶೂರ ಹಜ್ರತ್ ಬಾದಶಾಹ ಎಂತಹ ಅದೃಷ್ಟಶಾಲಿ,
ಎತ್ತ ತಿರುಗಿಸಿದರೂ ತನ್ನ ಮುಖವ, ಅತ್ತ ಖಂಡಿತ ವಿಜಯಶಾಲಿ.

ಝುಫರ್ ಬೆಪೇಶ್ ಬುವದ್ ಅಝ್ ಬರಾಯೆ ಇಸ್ತಿಗ್ಬಾಲ್
ಝು ಇಝ್ ಬಾಜ್ ಪರಿಶ್ತಂದ್ ಕೈಸರೋ ಫಖ್ಫೂರ್
ಓಡುತಿಹುದು ಮುಂದೆ ಜಯ, ಆತುರದಿ, ಸ್ವಾಗತಿಸುವ ಸಲುವಾಗಿ
ಎಲ್ಲ ಅರಸರು ಕಪ್ಪವ ಕೈನೀಡಿ ಕೊಡುತಿಹರು ಶರಣಾಗತರಾಗಿ.

ರಾಯಿಲನಿಗೆ ಅಂತಿಮ ಷರರತ್ತುಗಳ ಘೋಷಣೆ ಮಾಡಿ, ತನ್ನ ಸೈನ್ಯದೊಂದಿಗೆ ಮತ್ತಷ್ಟು ಕೋಟೆಗಳನ್ನು ವಶಪಡಿಸುವ ಸಲುವಾಗಿ ನವಾಬ್ ಸಾಹೇಬರ ಮುಂದಿನ ಪ್ರಯಾಣ:

ನೈತಿಕತೆ ಮತ್ತು ಏಕದೇವೋಪಾಸನೆಯನ್ನು ದೃಢವಿಶ್ವಾಸವನ್ನಾಗಿಸಿಕೊಂಡ, ಯುವ ಉತ್ಸಾಹದ ಚಿಲುಮೆ ಯಾಗಿರುವ ನವಾಬ್ ಸಾಹೇಬರು ಮುಂಜಾನೆ ಎದ್ದು ಶಾಸ್ತ್ರೋಕ್ತವಾಗಿ ಮುಖ ಕೈಕಾಲು ತೊಳೆಯುವ ಕ್ರಮವಾಗಿ ವಝೂ ಮಾಡಿ, ಪ್ರತೀದಿನ ಸುಬಹ್ ನಮಾಜ್‌ಗಾಗಿ ಹಾಸಿದ 'ಜಾನಿಮಾಸ್' ಚಾಪೆಯಲ್ಲಿ ಅಲ್ಲಾಹನಿಗಾಗಿ 'ಸಜ್ದಾ' ಎಂಬ ಸಾಷ್ಟಾಂಗ ನಮಸ್ಕಾರ ಮಾಡಿ, ಬಾದಶಾಹರ ಒಳಿತು, ಏಳಿಗೆಗಾಗಿ ದುವಾವನ್ನು ಮಾಡುತ್ತಾರೆ. ನವಾಬ್ ಸಸಾಹೇಬರು ಒಂದು ತಿಂಗಳಕಾಲ ತಂಗಿದ ನಂತರ ವೇಲೂರಿನಿಂದ ಹೊರಟು ಮುಂದಕ್ಕೆ ಪ್ರಯಾಣಿಸುತ್ತಾ ವಿರಂಜಪುರದ ಸುಂದರ ವಾತಾವರಣವನ್ನು ಸವಿಯುತ್ತಾ ನಗರ ಪ್ರದೇಶವನ್ನು ಪ್ರವೇಶಿಸಿದರು. ವಿರಂಜಪುರದಲ್ಲಿ ಕೆಲವು ದಿನಗಳ ಕಾಲ ತಂಗಿದರು. ಇಲ್ಲಿ ತಂಗಿದ ದಿನಗಳಲ್ಲಿ ಮಿಲಾದುನ್ನಬಿ ಆಚರಣೆಯ ದಿನವೂ ಬಂತು. ಆ ದಿನದಂದು ಜಶ್ನೆ ಮೌಲೂದ್ ಹಜ್ರತ್ ಮುಹಮ್ಮದ್ ಸರ್ವರೇ ಕಾಯನಾತ್ ಅಲೈಹಿ ಅಫ್ಜಲು ತಹಿಯ್ಯಾತ್ ವ ಅಕ್ಮಲುಸ್ಸಲವಾತ್ (ಸಮಸ್ತ ಭೂ ಮಂಡಲದ ಸರದಾರ ಹಜ್ರತ್ ಮುಹಮ್ಮದ್‌ರವರ ಹುಟ್ಟು ಹಬ್ಬದ ಆಚರಣೆಯ ಸಮಾರಂಭ) ವಿಜ್ರಂಭಣೆಯಿಂದ ಆಚರಿಸಿದರು. ರುಚಿಕರವಾದ ಆಹಾರವನ್ನು ತಯಾರು ಮಾಡಿಸಿ ಔತಣವನ್ನು ಏರ್ಪಡಿಸಿ ಊಟದ ಚಾಪೆಯಲ್ಲಿ ತಂದಿಡಿಸಿದರು. ದುವಾಖಾನಿ ಓದಿಸುವ ಮೂಲಕ ಅಲ್ಲಾಹನಿಗೆ ಕೃತಜ್ಞತೆ ಸಲ್ಲಿಸಿ, ಎಲ್ಲರಿಗೂ ಊಟ ಬಡಿಸಿದರು.

ನಜ್ಮ್

ಮುಸಮ್ಮಾ ಅಹ್ಮದೇ ಮುಖ್ತಾರ್ ಖುಸ್ರವೋ ಗಾಝಿ

ಕೆ ನಯ್ಯರೇ ಝುಫರ್ ಅಸ್ತೈಗಯೇ ವೂ ಬುವದ್ ತಾಬಾ
ವೀರ ಬಾದಶಾಹರ ಹೆಸರಲ್ಲಿ ಅಹ್ಮದ್ ನಾಮವೂ ಶಾಮೀಲಾಗಿದೆ
ವಿಜಯದ ತಾರೆ ಅವರ ತಲವಾರಿನ ಹೊಳಪಿನಲ್ಲಿ ಅಡಗಿದೆ.

ಬಯಕ್ ಇಶಾರಯೇ ಕದಂಗಶ್ ಗಝಿಸ್ತಾ ಅಸ್ತಯೇ ಚರ್ಖ್
ಬನೀಮ್ ದಮೆ ತೈಗಷ್ ಗಿರಿಫ್ತ ಹರ್ ದೊ ಜಹಾಂ
ಒಂದು ಸೂಚನೆ ಸಾಕು, ಬಾಣವು ಆಕಾಶವನ್ನು ತೂರಿ ಹೋಗುವುದು
ಸಾಕು ಅವರ ತಲವಾರಿನ ಅರ್ಧಪೆಟ್ಟು, ಭೂಮಿ ಆಕಾಶಗಳು ಕೈವಶವಾಗುವುದು.

ಬಹರ್ ತರಫ್ ಕೆ ನಹದ್ ರೂಹ್ ಸಿಪಾಹೆ ಹಜ್ರತೆ ಶಾಹ್
ನವೇದೆ ಪತ್ಹ ಬಗೋಶ್ ಆಯದ್ ಝಿ ಜಮೀನೊ ಝುಮಾಂ
ವೀರ ಹಜ್ರತ್ ಬಾದಶಾಹರ ಸಿಪಾಯಿಗಳ ತಂಡ ಯಾವೆಡೆ ಮುಖ ಮಾಡುವುದೋ
ಅಲ್ಲೆಲ್ಲ ವಿಜಯದ ಸಂತೋಷ ವಾರ್ತೆ ಭೂಮಿ ಆಕಾಶಗಳು ಕೇಳಿಸಿಕೊಳ್ಳುವುದು.

ಮೌಲೂದೇ ಹಜ್ರತ್ ಮುಹಮ್ಮದ್ ಖಾತಮುನ್ನಬಿಯೀನ್ (ಪ್ರವಾದಿ ಮುಹಮ್ಮದ್ ಪೈಗಂಬರರ ಹುಟ್ಟುಹಬ್ಬದ) ಆಚರಣೆಯನ್ನು ಮಾಡಿದ ದಿನ ಮೀರ್ ಸಯ್ಯದ್ ಖಾನ್ ಮತ್ತು ಅಸುದುಲ್ ಖವಾನೀನರ ಗಾಯಗಳು ವಾಸಿಯಾದ ಸಂತೋಷವೂ ಶಾಮೀಲಾಗಿತ್ತು. ನಿಜಕ್ಕೂ ನೋಡಿದರೆ, ಒಂದು ಗಾಯ ಇನ್ನೂ ವಾಸಿಯಾಗುವುದಿತ್ತು. ವಾಸಿಯಾದ ಗಾಯಗಳು ಎಷ್ಟೊಂದು ಆಳ ಮತ್ತು ಅಪಾಯಕಾರಿಯಾಗಿತ್ತೆಂದರೆ ಇವುಗಳಲ್ಲಿ ಒಂದು ಗಾಯವಾದರೂ ಭೀಕರ ಸರ್ಪವೊಂದರ ಮೇಲೆ ಆಗುತ್ತಿದ್ದರೆ ಅದು ಸತ್ತೇ ಹೋಗುತ್ತಿತ್ತು. ಈ ಎಲ್ಲ ಸಂತಸಗಳ ದಿನ ಸಮಸ್ತ ಸೈನ್ಯಕ್ಕೆ ಉಡುಗೊರೆ ಮತ್ತು ಕಾಣಿಕೆಗಳ ಖಜಾನೆಯನ್ನು ತೆರೆದು ನೀಡಲಾಯಿತು.

ನಜ್ಮ್

ಕಸೇ ಲಾಫೆ ಜವಾಂ ಮರ್ದಿ ಝುನಂದ್ ದರ್ ಅರ್ಸಯೆ ಹಿಮ್ಮತ್
ಕೆ ಹರ್‌ದಂ ಜಾಂ ಫಿಝಾಯೆ ಕುಸ್ರವೋ ಸಾಹಬ್ ಖರಾನ್ ಸಾಝುದ್
ಯಾರು ರಣರಂಗದಲಿ ಶೌರ್ಯ ಸಾಹಸವ ಪ್ರದರ್ಶಿಸುವನೋ
ಅವನು ನಿಜಕ್ಕೂ ವೀರ ಬಾದಶಹರಿಗಾಗಿ ಪ್ರಾಣವನು ಒತ್ತೆ ಇಡುವವನು.

ಝುಹೆ ಶೆಹನ್‌ಶಾಹೆ ಗಾಝಿ ಕೆ ಅಝ್ ಅಬ್ರೆ ಸಖಾಯೆ ವೂ
ಫಲಕ್ ದರ್ ಬಹರೆ ಗೌಹರ್ ಚ್ಯೂಂ ಸದಫ್ ಖುದ್ರಾ ನಿಯಾ ಸಾಝುದ್
ವೀರ ಬಾದಶಾಹರು ಎಷ್ಟೊಂದು ಪುಣ್ಯವಂತರು, ಅವರ ಕೃಪೆಯ ಮಳೆಯಾಗುವುದು

ಮುತ್ತುಗಳು ಚಿಪ್ಪಿನೊಳಗೆ ಸೇರಿಕೊಂಡಂತೆ, ಆಕಾಶವು ಸಮುದ್ರದೊಳಗೆ ಅಡಗಿಕೊಳ್ಳುವುದು.

ಝೆ ತಾಫೀರೆ ತಫೇ ದೂದಶ್ ದಮೆ ಶಂಶೀರ್ ದರ್ ಈಂಜಾ
ಝೆ ಹರ್ ಝುಕ್‌ಮೇ ಹಝೂರಾಂ ಸೈನೇ ಝುರ್ ಚ್ಯೂಂ ಖೂಂ ರಂವಾ ಸಾಝುದ್
ಅವರ ಕೃಪಾಕಟಾಕ್ಷದ ಹಸ್ತದಿಂದ ರಣರಂಗದಲಿ ಆಗುವ ತಲವಾರಿನ ಪೆಟ್ಟಾಗುವುದು
ಪ್ರತಿ ಗಾಯದಿಂದ ಒಸರುವ ರಕ್ತದಂತೆ, ಸಂಪತ್ತಿನ ಸಾವಿರಾರು ತೊರೆಗಳು ಹರಿಯುವುದು.

ಕಮಂದೆ ವೂ ಸರೇ ಕಿಶ್ವರ್ ಕುಶಾಯಾನ್ ರಾ ಬೆ ಬಂದ್ ಆರದ್
ಸಮಂದೆ ವೂ ಕೆ ಜವ್‌ಲಾನೆ ಝಮೀರಾ ಆಸ್‌ಮಾಂ ಸಾಝುದ್
ಬಾದಶಾಹರ ಶಕ್ತಿಯುತ ಜಾಲಕ್ಕೆ ಸಮಸ್ತ ಅರಸರನ್ನು ಸೆರೆಹಿಡುವ ತಾಕತ್ತಿರುವುದು
ಅವರ ಕುದುರೆಯು ಭೂಮಿಯ ಮೈದಾನವನ್ನು ಆಕಾಶವಾಗಿ ಪರಿವರ್ತಿಸುವುದು.

ನವಾಬ್ ಸಾಹೇಬರು ಅಸದುಲ್ ಖವಾನೀನನನ್ನು ಕರೆದುಕೊಂಡು ಗುಡಿಯಾಟ್ಟಂ ಸಮೀಪದ ಪ್ರದೇಶಕ್ಕೆ ತೆರಳಿದರು. ಜಗದೇವನ ರಾಜ್ಯದ ಗಡಿಗೆ ಸಂಬಂಧಿಸಿದಂತೆ ಒಂದು ವಿವಾದವಿರುವುದು ಕಂಡುಬಂತು. ಗುಡಿಯಾಟ್ಟಂನ ಈ ಕೋಟೆ ಬಾದಶಹರ ಸರಹದ್ದು ಮತ್ತು ಜಗದೇವನ ಗಡಿಯ ಮಧ್ಯೆಯಲ್ಲಿತ್ತು. ಇದು ವಿವಾದಾತ್ಮಕವಾಗಿರುವುದರಿಂದ ಪರ್ವತದ ತುದಿಯನ್ನು ಒಡೆದು ಬೀಳಿಸುವಂತೆ ಗುಡಿಯಾಟ್ಟಂನ ಕೋಟೆಯನ್ನು ತುಂಡುತುಂಡಾಗಿಸಿ ಒಡೆದು ನಾಶ ಮಾಡಿರೆಂದು ನವಾಬ್ ಸಾಹೇಬರು ಆಜ್ಞೆಯಿತ್ತರು. ಹೀಗೆಯೇ ವೈರಿಗಳ ಅಹಂಕಾರವನ್ನು ಒಡೆದು ನೆಲಸಮ ಮಾಡುವಂತಾಗಲೆಂದು ಆಶಿಸಿದರು. ಆಜ್ಞೆ ಸಿಕ್ಕಕೂಡಲೇ ಸಿಪಾಯಿಗಳು ಪಿಕ್ಕಾಸು, ಸನಿಕೆ, ಹಾರೆಗಳನ್ನು ಹಿಡಿದುಕೊಂಡು ಕೋಟೆಯ ತಳಪಾಯವನ್ನು ಒಡೆದು ಒಗೆದು ಬಿಟ್ಟರು. ಆ ಕೋಟೆಯ ಒಂದು ಕಂದಕವನ್ನು ಹೇಗೆ ಮುಚ್ಚಿದರೆಂದರೆ ವೈರಿಗಳ ತೆರೆದ ಬಾಯೊಳಗೆ ಕೆಸರು ಮಣ್ಣನ್ನು ತುಂಬಿದಂತೆ ಗೋಡೆ ಒಡೆದ ಮಣ್ಣನ್ನು ತುಂಬಿ ನೆಲವನ್ನು ಸಮತಟ್ಟಾಗಿಮಾಡಿದರು.

ಅಲ್ಲಿಂದ ಮುಂದಕ್ಕೆ ಪ್ರಯಾಣ ಬೆಳೆಸಿ ಝಂಬೂರಿನ (ಅಂಬೂರು?) ಕೋಟೆಯ ಬಳಿ ತಲಪಿದರು.

ಇದು ಬರಗಲ್ಲಾ ಪರ್ವತದ ತುತ್ತತುದಿಯಲ್ಲಿದ್ದು ಅಬೂಕ್ ಎಂಬ ನಕ್ಷತ್ರದ ಎತ್ತರಕ್ಕೆ ಸಮನಾಗಿ ಸೆಟೆದು ನಿಂತ ಕೋಟೆಯಾಗಿತ್ತು. ಆಕಾಶದತ್ತ ಮುಖಮಾಡಿದ

ಬಲಿಷ್ಠ ಶಕ್ತಿಶಾಲಿ ಕೋಟೆಯಾಗಿದ್ದು, ಬುರುಜಿನ ಮೇಲಿಟ್ಟ ತೋಪುಗಳು ಏಳು ವಿಧದ ಲೋಹಗಳಿಂದ ಮಾಡಿದ ಬಲಿಷ್ಠ ಆಯುಧವಾಗಿತ್ತು. ಬಾದಶಾಹರ ಸೈನಿಕರು ಈ ಕೋಟೆಯೊಳಗೆ ಪ್ರವೇಶಿಸಿದರು. ಅವರ ಹಿಂದೆ ಕುದುರೆ ಸವಾರಿ ಸೈನ್ಯ ವಾಯುವೇಗದಿಂದ ಒಳಹೊಕ್ಕು ಪಟ್ಟಣದೊಳಗೆ ಪ್ರವೇಶಿಸಿತು. ಸ್ವಲ್ಪ ಹೊತ್ತಿನಲ್ಲಿ ಸಂಪೂರ್ಣವಾಗಿ ಊರನ್ನು ಸುತ್ತುವರಿದು ಘೇರಾಯಿಸಿದರು. ಯುದ್ಧದ ವಾತಾವರಣ ಮೂಡಿಸಿ ಧ್ವಜವನ್ನು ಹಾರಿಸಿದರು. ರಣರಂಗದಲ್ಲಿ ಸೈನಿಕರ ಕೂಗು ಗದ್ದಲಗಳು ಪ್ರಳಯಾಂತಕ ಸೂರ್ ಕಹಳೆಯು ಮೊಳಗಿದಂತಿತ್ತು. ರಣರಂಗದ ಗುಲ್ಲು ಗಲಭೆ ಘೋಷಣೆಗಳು ಆಕಾಶದ ಎತ್ತರಕ್ಕೆ ಕೇಳುವಂತೆ ಭೀಕರವಾಗಿತ್ತು. ವೈರಿಗಳು ಕೋಟೆಯೊಳಗಿನಿಂದ ಮಿಂಚಿನಂತಹ ತೋಪುಗಳನ್ನು ಹಾರಿಸಿ ಕೋಟೆಯ ಪರಿಸರ ಮತ್ತು ಗೋಡೆಗಳಲ್ಲಿ ದೊಡ್ಡದೊಡ್ಡ ತೂತುಗಳನ್ನು ಕೊರೆದರು. ತೋಪುಗಳನ್ನು ಹಾರಿಸಿದ್ದರಿಂದ ಹೊರಬಂದ ಬೆಂಕಿಯಿಂದ ನಾಲ್ಕೂ ನಿಟ್ಟಿನಲ್ಲಿ ಬೆಳಕು ಮೂಡಿದಂತಾಯಿತು. ಹೀಗೆ ಸೈನಿಕರಿಗೂ ಉತ್ಸಾಹ ಮೂಡಿ ಎಚ್ಚರ ಮೂಡಿತು.

ನಜ್ಮ್

ಝು ಮಗ್ಝ್ ಸರಾಂ ಶೋಲಾ ಶುದ್ ಸರ್‌ಬುಲಂದ್
ಕಶೀದರ್ಝ್ ದುಖಾನ್ ಚರ್ಕ್ ರಾಹ್ ದರ್ ತಮಂದ್
ಸೇನಾನಿಗಳ ತಲೆಯಲ್ಲಿ ಸಿಟ್ಟಿನ ಬೆಂಕಿ ಭುಗಿಲೆದ್ದಿತು
ಆಕಾಶವನ್ನು ಅದರಿಂದೆದ್ದ ಹೊಗೆಯು ಆವರಿಸಿತು.

ಚುನಾ ಝುರ್ಬ ಝುನ್ ಆತಿಶ್ ಅಫ್ರೋರ್ಝ್ ಗಶ್ತ್
ಕೆ ಅಝ್ ಶೋಲ ಶುದ್ ಮೋಜಿಝುನ್ ಕೊಹ್ ವ ದಸ್ತ್
ತೋಪುಗಳಿಂದ ಹೊರಟ ಬೆಂಕಿಯ ರಭಸಕ್ಕೆ ಬೆಳಕು ಹಬ್ಬುವುದು
ಕಾಡು ಪರ್ವತಗಳು ಬೆಂಕಿಯ ಜ್ವಾಲೆಗೆ ತುತ್ತಾದವು.

ತಫಂಗ್ ಅಝ್ ತುಫೆ ಮೆಹ್‌ರಯೇ ಆತಿಶೀ
ಬ ಅಖ್‌ಘರ್ ಬರ್ ಆಮೇಖ್ತ್ ಚಿರ್‌ಮೆ ಝುಮೀನ್
ಬಾಣಗಳ ಮೊನೆಯಿಂದ ಹೊರಟ ಬೆಂಕಿಯ ಜ್ವಾಲೆಯಿಂದ
ಕೆಂಡವು ಕೂಡ ಭೂಮಿಯ ಪದರದ ಮೇಲೆ ಅಂಟುವುದು.

ಫಲಕ್ ದಂಬದಂ ಅಸ್ಸದಾಯೆ ತಫಂಗ್
ಬಸರ್ ತರುಫ್ತಾದಯೇ ಬ ಮೈದಾನಯೇ ಜಂಗ್
ಬಾಣಗಳ ಮಳೆಗರೆವ ಆರ್ಭಟದ ಸದ್ದಿಗೆ
ಯುದ್ಧದ ಮೈದಾನದಲಿ ಮಂಕು ಕವಿದಿದೆ ಬುದ್ಧಿಗೆ.

ತೋಫುಗಳ ಭೋರ್ಗರೆತದ ಸದ್ದಿಗೆ ವಾತಾವರಣವು ಹೇಗಾಯಿತೆಂದರೆ ಇದರ ಬೇಗೆಗೆ ಚಂದ್ರನ ಬೆಳಕು ಕೂಡ ಬಿಸಿಯೇರಿತು. ತೋಪಿನ ಬೆಂಕಿಯ ಕೆಂಡವು 'ಫಲಕುಲ್ ಅಫ್ಲಾಕ್'(ಕೊನೆಯ(ಏಳನೆ) ಆಕಾಶವನ್ನು)ನ್ನು ವೇಗದಿಂದ ಮಿಂಚಿನಂತೆ ಸಾಗಿ ಸೇರಿತು. ಆಕಾಶದ ಹಳೆಯ ಹೆಬ್ಬಾವು ಬೆಂಕಿಯ ಬೇಗೆಗೆ ಹೆದರಿ ನೀರುನೀರಾಗಿ ಕರಗಿ ಕಾಡಿನ ಕಡೆಗೆ ಚೀರಾಡುತ್ತಾ ತಂಪನರಸುತ್ತ ನದಿಯ ತೊರೆಗಳ ಕಡೆಗೆ ಹರಿದಾಡತೊಡಗಿತು. ತಲವಾರಿನ ಹರಿತದ ಹೊಳಪಿನಿಂದ ಸೈನಿಕನ ಎದೆಕವಚ ಕಳಚಿ ಬಿದ್ದಂತೆ ಮುಗಿಲು ದೊಪ್ಪನೆ ಭೂಮಿಗೆ ಬಿದ್ದುಬಿಟ್ಟಿತು. ಸೈನಿಕನ ದೇಹದ ನೀಲವರ್ಣದ ಲೋಹ ಕವಚಗಳು ಹರಿದಂತೆ ತುಂಡು ತುಂಡಾಗಿ ಆಕಾಶವು ರಣರಂಗದಲ್ಲಿ ಬಿದ್ದುಬಿಟ್ಟಿತು. ಎದೆಕವಚವು ಬಾಣಗಳ ಮೊನೆಯ ಹೊಡೆತದ ರಭಸದಿಂದ ಘಾಸಿಯಾದದ್ದರಿಂದ ಜೇನುಗೂಡಿಗೆ ಹೊಡೆದಾಗ ಜೇನು ಹುಳಗಳ ದಂಡು ಹೊರಗೆ ಧಾವಿಸುವಂತೆ ಒಂದೇಸವನೆ ಸಿಟ್ಟಿನಿಂದ ಧಾವಿಸಿ ಸೇನಾನಿಗಳು ಮುನ್ನುಗ್ಗಿದರು. ರಣರಂಗದಲ್ಲಿ ಯುದ್ಧನಿರತ ಸಿಪಾಯಿಗಳು ತಮ್ಮ ಈಟಿಮೊನೆಗಳ ಚೂಪನ್ನು ತಮ್ಮ ಬೆರಳುಗಳಿಂದ ತಿರುಗಿಸಿ ಎಸೆದರೆಂದರೆ ಆಕಾಶವನ್ನು ಕೂಡ ತನ್ನ ಬಟ್ಟಲಿನಂತಹ ಕಕ್ಷೆಯಿಂದ ಹೊರಹಾಕುವ ತಾಕತ್ತಿನಿಂದ ಕೂಡಿತ್ತು.

ಶೇರ್

ಝುನೋಕೆ ಸನಾ ಖೂನ್ ದರ್‌ಆಮದ್ ಬಜೋಶ್
ಚ್ಯುಂ ರೂಯೆ ಝುಮೀನ್ ಶುದ್ ಹವಾ ಲಾಲ್ ಪೋಶ್
ಈಟಿಗಳ ಮೊನೆಯ ಏಟಿನ ರಭಸಕೆ ರಕ್ತ ಹರಿದು ಚಿಮ್ಮಿತು
ಕೆಂಪು ಬಟ್ಟೆಯನು ಭೂಮಿ ಧರಿಸಿದಂತಾಯಿತು.

ದರಿಖ್ಶಂದನೇ ಬರ್ಖೆ ತೈಘ್ ಅಝ್ ಸಫಹರ್
ದರ್ ಆವೇಖ್ತ್ ಆಖಿರ್ ಸರೇ ಮಾಹೋ ಮೆಹರ್
ಆಕಾಶದಿ ಮಿಂಚು ಕೋಲಿನಂತೆ ಮಿಂಚುವ ತಲವಾರಿನ ಹೊಳಪು ಹೀಗಿಹುವುದು
ಆಕಾಶ ಮತ್ತು ಚಂದ್ರನ ಕೊನೆಯ ಭಾಗವ ಕೂಡ ತುಂಡರಿಸಿ ಹಾಕುವುದು.

ಬಾದಶಾಹರ ಬಹದ್ದೂರ ಸಿಪಾಯಿಗಳು ದೃಢಹೆಜ್ಜೆಯಿಂದ ಕೋಟೆಯನ್ನು ಸುತ್ತುವರಿಯುವುದಕ್ಕೆ ಹೇಗೆ ಮುಂದುವರಿದರೆಂದರೆ ಘೂತ್ಕರಿಸುವ ಬ್ರಹದಾಕಾರದ ಸರ್ಪವೊಂದು ಓರೆಕೋರೆಯಾಗಿ ಹೊರಳುತ್ತಾ ಪರ್ವತದತ್ತ ಹೋಗುವಂತೆ ಕಾಣಿಸುತ್ತಿತ್ತು. ಎಲ್ಲರೂ ಒಂದಾಗಿ ಘೋಷಣೆಗಳನ್ನು ಕೂಗುತ್ತ ಶೌರ್ಯ ಪರಾಕ್ರಮದೊಂದಿಗೆ ಕೋಟೆಯ ಬಾಗಿಲಿಗೆ ತಲಪಿದರು. ತಮ್ಮ ಬಿಲ್ಲುಗಳನ್ನು ಹೆಗಲೇರಿಸಿ ಬಾಣಗಳ ಮಳೆಗರೆಯಲು ತೊಡಗಿದರು. ಕೋಟೆಯ ಆವರಣದ ಕಮಾನುಗಳ ಮೇಲೆ ಬಾಣಗಳ

ಸುರಿಮಳೆ ಗೈದು, ವೈರಿಗಳನ್ನು ಎಷ್ಟೊಂದು ಸತಾಯಿಸಿದರೆಂದರೆ ಎದೆಯನ್ನು ಸೀಳಿ ಹೃದಯ ಹೊರಬರುವಂತೆ ಮಾಡಿದರು. ಸ್ವಲ್ಪ ದೂರದಲ್ಲಿ ನಿಂತು ನವಾಬ್ ಸಾಹೇಬರು ಈ ವಿದ್ಯಮಾನಗಳನ್ನು ಗಮನಿಸುತ್ತಿದ್ದರು. ನಂತರ ಕೆಲವು ಯುವ ಸೇನಾನಿಗಳ ಒಂದು ತಂಡದೊಂದಿಗೆ ಹೋಗಿ ಹತ್ತಿರದ ದಡಹಳ್ಳಿ ಎಂಬ ಒಂದು ಸಣ್ಣ ಗ್ರಾಮದಲ್ಲಿ ತಮ್ಮ ಡೇರೆಯನ್ನು ಹಾಕಿದರು. ವೈರಿಗಳು ದೂರದಿಂದ ನವಾಬ್ ಸಾಹೇಬರ ಧ್ವಜವನ್ನು ಕಂಡು ಕೋಟೆಯ ಮೇಲಿನಿಂದ ಒಂದು ಜಬರ್ದಸ್ತಾದ ತೋಪನ್ನು ಉಡಾಯಿಸಿದರು. ಒಡೆಯುವ ಅದರ ಕರ್ಕಶವಾದ ಶಬ್ಧಕ್ಕೆ ಪರ್ವತದ ಎದೆ ಒಡೆದು ಏಳು ಆಕಾಶದತ್ತ ಅದರ ತುಣುಕುಗಳು ಹಾರಿದವು. ಬಾದಶಾಹರ ಪುಣ್ಯದ ನೆರಳು ನವಾಬ್ ಸಾಹೇಬರ ತಲೆಯ ಮೇಲಿದ್ದುದರಿಂದ ನವಾಬ್ ಸಾಹೇಬರು ಇದರಿಂದ ಪಾರಾಗಿದ್ದರು. ತೋಪಿನಿಂದ ಹೊರಟ ಬೆಂಕಿ ಚೆಂಡು ನವಾಬ್ ಸಾಹೇಬರ ತಲೆಯ ಮೇಲಿಂದ ಹಾದು ಪರ್ಹಾದ್ ಖಾನನ ಮಗನನ್ನು ಶರಣಾಗತನನ್ನಾಗಿ ಮಾಡಿದ್ದ ಕಟ್ಟಡದ ಗೋಡೆಗೆ ತಗಲಿ ಅದನ್ನು ಒಡೆದು ತೂರಿಹೋಗಿ ಪರ್ವತಕ್ಕೆ ತಗಲಿ ಪರ್ವತ ನುಚ್ಚುನೂರಾಯಿತು!

ಶೇರ್

ಹರ್‌ಕೆ ಬಾಶತ್ ನಿಯ್ಯತಶ್ ಬಾಖುಶ್ ರಹೋ ಗಾಝಿ ದುರುಸ್ತ್
ದರ್ ದೊ ಆಲಂ ಲುತ್ಫೆ ಹಕ್ ಉರಾ ನಿಗೇಹಬಾನಿ ಕುನದ್
ಯಾರ ವಿಶ್ವಾಸ ಶೂರ ಬಾದಶಾಹನ ಮೇಲೆ ಪ್ರಾಮಾಣಿಕವಾಗಿರುತ್ತದೋ
ಅಲ್ಲಾಹನ ಕೃಪೆಯಿಂದ ಎರಡೂ ಲೋಕದಲ್ಲಿ ಅವನಿಗೆ ಸಹಾಯದೊರಕುವುದು.

ನವಾಬ್ ಸಾಹೇಬರು ತಮ್ಮ ಪ್ರಾಮಾಣಿಕತೆ ಮತ್ತು ಧರ್ಮನಿಷ್ಠೆಯಿಂದಾಗಿ ಸದಾ ವೀರ ಬಾದಶಾಹರ ಗೆಲುವು, ಸಫಲತೆಗೆ ಅಲ್ಲಾಹನ ಕೃಪೆಗಾಗಿ ಮಾಡುತ್ತಿರುವ ದುವಾದ ಫಲವಲ್ಲದೆ ಬೇರಿನ್ನಾವ ಕಾರಣವೂ ಅಲ್ಲವೆಂದು ದೃಢವಾಗಿ ನಂಬಿದ್ದರು. ಸಂಪೂರ್ಣ ಶಕ್ತಿ ಮತ್ತು ಶೌರ್ಯವನ್ನು ಪ್ರದರ್ಶಿಸುತ್ತಾ ಬೆಂಕಿಯಂತಹ ಬಾಣಗಳ ಮೊನೆಯನ್ನು ಗುರಿಯಿಡುವ ಸಂದರ್ಭದಲ್ಲಿ ತನ್ನ 'ಅಖೀಖ್' ಎಂಬ ಪವಿತ್ರ ತಸ್ಬೀಹ್ ಅಥವಾ ಜಪಸರದಲ್ಲಿ ಬೆರಳಾಡಿಸುತ್ತಿರದೆ, ಗುರಿಯಕಡೆ ಸಂಪೂರ್ಣವಾಗಿ ಲಕ್ಷ್ಯ ಇಡುವ ಕಾರ್ಯತತ್ಪರತೆಯನ್ನು ಮೆರೆದಿದ್ದರು. ತನ್ನ ಮಿಂಚಿನಂತೆ ಮಿಂಚುವ ತಲವಾರನ್ನು ಸಂಶಾದ್ ಎಂಬ ಹೆಸರಿನ ಮರದಿಂದ ಮಾಡಿದ ಲಾಟಿ ಯೆಂದು ತಿಳಿದು ಸದಾ ಅತೀವ ಧೈರ್ಯದಿಂದ ರಣರಂಗದಲ್ಲಿ ಮುನ್ನುಗ್ಗುತ್ತಿದ್ದರು.

ಶೇರ್

ದರ್ ರಹೇ ಸಿದ್‌ಕ್ ಬದಾವಯೆ ನಿರೋದ್ ಕಾರ್ ಅಝ್ ಪೇಶ್
ಯಕ್ ಕದಂ ಹರ್‌ಕೆ ಅಝ್ ಪೇಶ್ ಖುದ್ ನಹದ್ ಬೇಶ್ತರ್ ಅಸ್ತ್

ಸತ್ಯಮಾರ್ಗದಲಿ ಸವಾಲಿನಿಂದ ಮಾತ್ರ ಕಾರ್ಯ ಸಫಲವಾಗದು
ದೃಢ ಹೆಜ್ಜೆಯೊಂದ ಮುಂದಿಟ್ಟಲ್ಲಿ ಒಳ್ಳೆಯ ಕೆಲಸದಲಿ ಸಾಧ್ಯ ಗರಿತಲಪುವುದು.

ಖೂಳ ವೈರಿಗಳು ದಿನದ ಮೊದಲಭಾಗದಿಂದ ಹನ್ನೊಂದು ಗಂಟೆಯ ತನಕ ಯುದ್ಧದ ಪ್ರಯಾಸ ಮಾಡುತ್ತಿದ್ದರು. ಅವರು ನೋಡುವಾಗ ನವಾಬ್ ಸಾಹೇಬರು ತಮ್ಮ ಶೂರ ಸಿಪಾಯಿಗಳೊಂದಿಗೆ ಕೋಟೆಯ ಮುಖ್ಯದ್ವಾರದ ಕಡೆಗೆ ತಲಪಿದರೆಂಬುದನ್ನು ಕಂಡಾಗ ವೈರಿಗಳು ತತ್ತರಿಸಿ 'ಶಾಂತಿ... ಶಾಂತಿ..' ಎಂದು ಕೂಗುತ್ತ ತಮಗೆ ಜೀವದಾನ ನೀಡಿ ಎಂದು ಶರಣಾಗತರಾದರು. ಬನ್ನೂರು ಕೋಟೆಯ ಮುಖ್ಯದ್ವಾರದ ಕೀಲಿಕೈಯನ್ನು ನವಾಬ್ ಸಾಹೇಬರಿಗೆ ಒಪ್ಪಿಸಿದರು.

ಶೇರ್

ಝುಲುತ್ಫೆ ಖುಸ್ರವೋ ಗಾಝಿ ಸಝುದ್ ಸಾಫ್ ದಿಲಾನ್
ಬಯಕ್ ಇಶಾರ ಬಗೀರದ್ ಹರ್ ದೊ ಆಲಂ ರ
ವೀರ ಬಾದಶಾಹರ ಕೃಪೆಯಿಂದ ಸ್ವಚ್ಛಮನಸ್ಸಿನವರು ಅರ್ಹರು
ಒಂದು ಸಂಜ್ಞೆಯ ಮೂಲಕ ಎರಡೂ ವಿಶ್ವವನ್ನು ವಶಪಡಿಸುವರು.

ಕುನದ್ ಫಖರ್ ಬಯೀಮುಝ್ದು ಸರ್ವರಾನೇ ಜಹಾಂ
ಕೆ ಫರ್ಶ್ ದರ್ ಗಯೇ ಖುದ್ ಫಾಂದ್ ಮಸ್‌ಲದೇ ಹಿಂ ರ
ಈ ಶುಭವಾರ್ತೆಯಿಂದ ವಿಶ್ವದ ಬಾದಶಾಹ ಹೆಮ್ಮೆ ಪಡುವರು
ಬಾದಶಾಹರ ದರಬಾರಿನ ಕಾಲುಚಾಪೆ ಅವರ ಸಂಬಂಧದ ಅಹ್ವಾನ ನೀಡುವುದು.

■

*

ಅಧ್ಯಾಯ - ೧೮

ಆಂಬೂರ್ ಕೋಟೆಯನ್ನು ವಶಪಡಿಸಿಕೊಂಡ ನಂತರ ನವಾಬ್ ಸಾಹೇಬರ ಆಸ್ಥಾನದಲ್ಲಿ ಸನ್ಮಾನ ಸಮಾರಂಭ ಮತ್ತು ರಾಯದುರ್ಗ ಕೋಟೆಯನ್ನು ವಶಪಡಿಸುವ ಕಾರ್ಯ ಹಾಗೂ ಅದರ ಕಾರಣಗಳ ವಿವರ:

ಯುದ್ಧದ ವಾತಾವರಣ ಮತ್ತು ಬಾದಶಾಹರ ಶೌರ್ಯದ ಬಗ್ಗೆ ಹೊಗಳು ಗೀತೆಗಳನ್ನು ಕಟ್ಟಿ ಹಾಡಲು ಬಂದ ಹೊಗಳು ಭಟ್ಟರು ತಮ್ಮ ರಚನೆಗಳನ್ನು ನವಾಬ್ ಸಾಹೇಬರ ಮುಂದೆ ಪ್ರಸ್ತುತ ಪಡಿಸಿದರು. ಬಾದಶಾಹರ ಆಸ್ಥಾನದ ವೈಭವ, ಘನತೆಯನ್ನು ಹಾಡಿ ಹೊಗಳಿದರು. ನವಾಬ್ ಸಾಹೇಬರು ತಿಪ್ತೂರ್ ಕೋಟೆಯುನ್ನು ವಶಪಡಿಸಿಕೊಂಡಿದ್ದರು. ಯುದ್ಧದ ಸಂದರ್ಭದಲ್ಲಿ ಕೋಟೆಗೆ ಆದ ಜಖಂಗಳನ್ನು ರಿಪೇರಿ ಮಾಡಿಸಲು ವ್ಯವಸ್ಥೆ ಮಾಡಿದರು ಮತ್ತು ಮೂಲಭೂತ ಅವಶ್ಯಕತೆಗಳ ಪೂರೈಕೆಗೂ ವ್ಯವಸ್ಥೆ ಮಾಡಿದರು. ಕೆಲವುದಿನ ಅಲ್ಲಿ ತಂಗಿದ ನಂತರ ಆನಂದಾಬಾದ್ ಕಡೆಗೆ ಪ್ರಯಾಣ ಬೆಳೆಸಿದರು. ಈ ಸಂದರ್ಭದಲ್ಲಿ ಬಾದಶಾಹರ ಮಂತ್ರಿಗಳಲ್ಲೊಬ್ಬರಾದ ಏತ್‌ಬಾರ್ ಖಾನ್‌ರವರಿಗೆ ರತ್ನಖಚಿತ ಖಡ್ಗ, ಚಿನ್ನದ ಲಗಾಮಿನ ಕುದುರೆಯೊಂದನ್ನು ಕಳುಹಿಸಿದರು. ಯಾಕೆಂದರೆ ಇವರ ಸಹಾಯದಿಂದ ವೇಲೂರಿನ ಆಸುಪಾಸಿನ ಕೋಟೆಗಳನ್ನು ವಶಪಡಿಸುವುದು ಸಾಧ್ಯವಾಗಿತ್ತು. ನವಾಬ್ ಸಾಹೇಬರು ಈ ಶಾಹಿ ಉಡುಗೊರೆಯನ್ನು ಕಳುಹಿಸಿ ಸಂತಸಪಟ್ಟುಕೊಂಡು ಆನಂದಾಬಾದ್ ತಲಪಿದರು. ಸ್ವತಹ ವೀರ ಬಾದಶಾಹರು ಈ ಶುಭವಾರ್ತೆ ತಿಳಿದು ಸರ್ವ ಮಂತ್ರಿ, ಸೇನಾನಿಗಳಿಗೆ ತಮ್ಮ ಸಂತಸ, ಶುಭಾಶಯಗಳನ್ನು ತಲಪಿಸಿದರು. ಮರುದಿನ ಇಲ್ಲಿಂದ ಮುಂದುವರಿದು ರಾಜಾ ಗಂಗಾವತಿಯ ಪ್ರಾಂತ್ಯವನ್ನು ತಲಪಿದರು. ರಾಜಾ ಗಂಗಾವತಿ ಬಾದಶಾಹರ ಸೇನಾನಿಗಳ ಹಾಗೂ ಸೈನ್ಯದ ಘನತೆ ಗಾಂಭೀರ್ಯಗಳನ್ನು ಗಮನಿಸಿ ನಾನು ನಿಮ್ಮ ಜೊತೆಗೆ ಸ್ನೇಹವನ್ನು ಬಯಸುತ್ತೇನೆ ಮತ್ತು ನಿಷ್ಠೆಯಿಂದ ಇರುತ್ತೇನೆಂದು ಹೇಳಿದ.

ನವಾಬ್ ಸಾಹೇಬರ ಅಧೀನಕ್ಕೆ ಒಂದು ದೊಡ್ಡರೀತಿಯ ಕಾಣಿಕೆಯನ್ನು ನೀಡಿದ. 'ನನ್ನ ಅಗತ್ಯ ನಿಮಗೆ ಯಾವಾಗ ಬೇಕೆಂದು ಅನಿಸುತ್ತದೋ, ಆಗ ನನಗೆ ತಿಳಿಸಿದಲ್ಲಿ ನಾನು ನಿಮ್ಮ ನೆರವಿಗೆ ಬರಲು ತಯಾರಾಗಿರುತ್ತೇನೆ' ಎಂಬ ಆಶ್ವಾಸನೆಯನ್ನೂ ನೀಡಿದ.

ಖಿತಾ

ಬ ಖಾಕೆ ದರ್‌ಗಯೇ ಸುಲ್ತಾನೆ ಗಾಝಿ
ಬನೇಹ್ ಸರ್‌ತಾಬ್‌ಯಾಬಿ ಸರ್ಫರಾಝಿ
ವೀರ ಬಾದಶಾಹರ ದರ್ಬಾರಿನ ಮಣ್ಣಿನಲಿ
ನಿನ್ನ ತಲೆಯನ್ನು ತಾಗಿಸು, ಆಗುವಿ ನೀ ಜಯಶಾಲಿ

ಸಮಂದೆ ವೂ ಚ್ಯೂಂ ಆಯತ್ ದರ್ ತಗೋದೌ
ಕುನದ್ ಚರ್ಖೆ ಕೊಹನ್ ರಾ ಬರ್ ಮಹನೌ
ಬಾದಶಾಹರ ಕುದುರೆ ಹೊರಟು ಓಡತೊಡಗಿದಾಗ
ಹಳೆಯ ಆಕಾಶದಲಿ ಹೊಸ ಬಿದಿಗೆಯ ಚಂದ್ರನುದಯಿಸುವನಾಗ.

ಚ್ಯೂಂ ಗೀರದ್ ತೈಘೆ ಆಲಂಗೀರ್ ದರ್ ದಸ್ತ್
ಶವದ್ ಅಝ್‌ಬಾದಾ ಪತ್‌ಹೋ ಝಫರ್ ಮಸ್ತ್
ಬಾದಶಾಹ ವಿಶ್ವವಿಜೇತ ತಲವಾರು ಹಿಡಿದುಕೊಂಡಾಗ
ವಿಜಯದ ಬಟ್ಟಲು ತುಂಬಿ ನಶೆಯೇರುವಂತಾಗುವುದು.

ನವಾಬ್ ಸಾಹೇಬರು ರಾಜನೀಡಿದ ಕಪ್ಪಕಾಣಿಕೆಗಳನ್ನು ಸ್ವೀಕರಿಸಿ ಗಂಗಾವತಿಯಿಂದ ಮುಂದೆ ಪ್ರಯಾಣ ಬೆಳೆಸಿದರು. ಜಗದೇವನ ಆಳ್ವಿಕೆಗೆ ಒಳಪಟ್ಟ ತಿರುಪತ್ತೂರ್ ಕೋಟೆಯ ಸನಿಹ ತಲಪಿದರು. ನಾಲ್ಕೂ ನಿಟ್ಟಿನಲ್ಲಿ ಕೋಟೆಯನ್ನು ಸುತ್ತುವರಿದು ತಿರುಪತ್ತೂರ್ ಗಡಿಯ ಸಮೀಪ ನಿಂತರು. ಅಶುದ್ಧ ಚರ್ಯೆಯ ವೈರಿಗಳನ್ನು ಸುತ್ತುವರಿದು ಸಂಕಷ್ಟಕ್ಕೀಡು ಮಾಡಿದರು. ಬಾದಶಾಹರ ಶೂರ ಸೇನಾನಿಗಳ ಅಬ್ಬರವನ್ನು ಕಂಡು ಧೃತಿಗೆಟ್ಟ ವೈರಿಗಳು 'ಶಾಂತಿ.... ಶಾಂತಿ' ಎಂದು ಕೂಗುತ್ತಾ ಶರಣಾಗತರಾಗುವ ಇಚ್ಛೆ ಪ್ರಕಟಿಸಿ, ನವಾಬ್ ಸಾಹೇಬರ ಮುಂದೆ ನಿಂತು ಕೋಟೆಯ ಮಹಾದ್ವಾರದ ಕೀಲಿಕೈಯನ್ನು ನೀಡಿದರು.

ಖಿತಾ

ಷಾಹೇ ಕೆ ಝಫರ್ ಪೇಶ್‌ರೂ ಲಷ್ಕರೆ ಊಸ್ತ್
ಗಂಜೀನಯೆ ಫತ್ಹ್ ಜೌಹರೇ ಖಂಜರ್ ಊಸ್ತ್
ಏನು ಪುಣ್ಯವಂತನೋ ಬಾದಶಾಹ, ಸೈನ್ಯದ ಎದುರಲಿರುವುದು ಜಯದ ನಡೆ

ವಿಜಯಗಳ ಖಜಾನೆಯಿರುವುದು ಅವರ ಶಕ್ತಿಯುತ ತಲವಾರಿನ ಮೊನೆಯೆಡೆ.

ಶಾಹಾನೆ ಜಹಾಂಬಾದ್ ಪನಾಹ್ ಅವುದಂದ್
ಝೂಆಂಕೆ ರುವಯೀ ಕೆ ಸಾಯಯೆ ನಬಿ ಬರ್ ಸರೇ ಊಸ್ತ್
ವಿಶ್ವದ ಎಲ್ಲ ಬಾದಶಾಹರು ಅವರ ಆಸರೆಗಾಗಿ ಬರುತಾರೆ
ಅವರ ತಲೆಮೇಲೆ ಇರುವುದು ನಬಿಯ ನೆರಳು, ಎಲ್ಲೆಲ್ಲಿ ಅವರು ಚಲಿಸುತ್ತಾರೆ.

ನವಾಬ್ ಸಾಹೇಬರು ಬಾದಶಾಹರ ದರ್ಬಾರಿಗಳಲ್ಲಿ ಓರ್ವ ವಿಶ್ವಾಸಾರ್ಹ ವ್ಯಕ್ತಿಯನ್ನು ಕುದುರೆ ಮತ್ತು ಅವಶ್ಯಕ ವಸ್ತುಗಳನ್ನು ನೀಡಿ ತಿರುಪತ್ತೂರಿನ ಕೋಟೆಯನ್ನು ನೋಡಿಕೊಳ್ಳುವ ಜವಾಬ್ದಾರಿ ವಹಿಸಿದರು. ನವಾಬ್ ಸಾಹೇಬರು ಶೀಘ್ರವಾಗಿ ಕಾವೇರಿ ಪಟ್ಟಣಂ ಕಡೆಗೆ ಪ್ರಯಾಣಿಸಿದರು. ಬೈಲೂಲ್ ಖಾನ್ ಶಾಹಜಾನಿ ಹಿಂದೆ ನುಡಿದಂತೆ ಕ್ಲಪ್ತ ಸಮಯದಲ್ಲಿ ತನ್ನ ಸೈನ್ಯದೊಂದಿಗೆ ಬಂದು ಸೇರಿಕೊಂಡ. ನವಾಬ್ ಸಾಹೇಬರು ಅವನಿಗೆ ಸಮಾಧಾನ ಮತ್ತು ಧೈರ್ಯ ನೀಡಿ ಪ್ರತಿಯೊಂದರಲ್ಲೂ ಸರಿಯಾಗಿ ಕಣ್ಣಿಟ್ಟುಕೊಂಡು ಜಾಗರೂಕರಾಗಿರುವಂತೆ ಹೇಳಿ ಎರಡು ದಿನಗಳು ಕಾವತಿ ಪಟ್ಟಣಂನಲ್ಲಿ ತಂಗಿದರು. ಅಲ್ಲಿಂದ ತಮ್ಮ ವಿಜಯಶಾಲಿ ಸೈನಿಕರ ದಂಡಿನೊಂದಿಗೆ ಮುಂದೆ ಪ್ರಯಾಣ ಬೆಳೆಸಿದರು.

ಶೇರ್

ರಂವಾಗಸ್ತ್ ಲಷ್ಕರ್ ಚ್ಯೂಂ ಅಬ್ರೇ ಬಹಾರ್
ಶುದ್ ಅರ್ಝ್ ಬರ್ಖೆ ತೈಗ್ ಆಸ್‌ಮಾನ್ ಶೋಲಬಾರ್
ವಸಂತ ಋತುವಿನ ಆಗಮನದಂತೆ ಬಾದಶಾಹರ ಸೈನ್ಯ ಪಯಣಿಸಿದೆ
ಬಾದಶಾಹರ ತಲವಾರಿನ ಹೊಳಪಿನಿಂದ ಆಕಾಶ ಬೆಳಗಿದೆ

ಸಿಪರ್ ಗರ್ದಿಶ್ ಆಮೋಶ್ ಅಫ್ಲಾದ್ ಗಶ್ತ್
ಅಲಂ ಅರ್ಝ್ ಸರ್ತೆ ಹರ್ದೊ ಆಲಂ ಗುಝಿಸ್ತ್
ಆಕಾಶದುದ್ದಕೆ ತಿರುಗುತ್ತಿದೆ ಚಕ್ರದಂತೆ
ಅವರ ಧ್ವಜ ಎರಡೂ ವಿಶ್ವದಲ್ಲಿ ರಾರಾಜಿಸುತ್ತಿದ್ದಂತೆ.

ನವಾಬ್ ಸಾಹೇಬರು ತಮ್ಮ ಬಲಶಾಲಿ ಗೌರವಾನ್ವಿತ ಸೈನ್ಯದೊಂದಿಗೆ ಹಸನರಾಯ ದುರ್ಗದ ಕಡೆ ಪ್ರಯಾಣ ಬೆಳೆಸಿದರು. ಈ ಕೋಟೆಯು ದೊಡ್ಡ ದೊಡ್ಡ ಪರ್ವತಗಳ ಮಧ್ಯೆ ಎತ್ತರದ ಸ್ಥಳದಲ್ಲಿ ತುಂಬ ಶಕ್ತಿಯುತವಾಗಿ, ಬಹಳ ಎತ್ತರಕ್ಕೆ ಕಟ್ಟಲ್ಪಟ್ಟಿದೆ. ಆ ಕೋಟೆಯ ಒಂದು ಮೂಲೆಯಲ್ಲಿ ಒಂದು ಶಕ್ತಿಶಾಲಿ ಬುರುಜನ್ನು ಕಟ್ಟಲಾಗಿದೆ. ಅದರ ವಿಸ್ತಾರವಾದ ತಳಪಾಯ ಬಹಳ ಎತ್ತರದ್ದಾಗಿದ್ದು ಅದರ ನೆರಳು ಭೂಮಿಯ ಮೇಲೆ ಬಿದ್ದಿತ್ತು. ಕೋಟೆಯ ಎದುರು ತುಂಬ ವಿಶಾಲವಾದ

ಒಂದು ಧ್ವಜ ಹಾರಾಡುತ್ತಿತ್ತು. ನವಾಬ್ ಸಾಹೇಬರು ತಮ್ಮ ಯುವ ಶಕ್ತಿಶಾಲಿ ಸೈನಿಕರ ತಂಡಕ್ಕೆ ತಮ್ಮ ಸಂಪೂರ್ಣ ಬಲ ಮತ್ತು ಶಕ್ತಿಯೊಂದಿಗೆ ಕೋಟೆಯ ಗಡಿಯ ಗೋಡೆಗಳ ಮೇಲೆ ದಾಳಿ ಮಾಡಿರೆಂದು ಆಜ್ಞೆ ನೀಡಿದರು. ಪ್ರತೀ ಗೋಡೆಗಳ ಕಮಾನುಗಳು ತುಂಡಾಗಿ ಬಿದ್ದು ಅದರಡಿಯಲ್ಲಿ ವೈರಿ ಸೈನಿಕರು ಸಿಲುಕಿ ನಾಶವಾಗುವಂತೆ ದಾಳಿ ನಡೆಸಿರೆಂದೂ ಸೂಚನೆಗಳನ್ನು ನೀಡಿದರು. ನಿಮ್ಮ ಕೈಯಲ್ಲಿರುವ ಹರಿತವಾದ ಖಡ್ಗಗಳಿಂದ ಅವರ ನಾಮಾವಶೇಷವಾಗುವಂತೆ ಅವರ ಮೇಲೆ ಮುಗಿದು ಬೀಳಬೇಕೆಂದು ಹುರಿದುಂಬಿಸಿದರು. ಪ್ರಳಯದ ದಿನ ವಿಶ್ವ ನಾಶಹೊಂದುವಾಗ ಸೂರ್ಯ ಕೆಂಪಗೆ ಕಾದು ಕೆಂಡಕಾರುವಂತೆ ರಕ್ತದಿಂದ ವೈರಿಗಳ ದೇಹವನ್ನು ತೊಯ್ದು ಹಾಕಿರೆಂದು ತನ್ನ ಸೈನ್ಯಕ್ಕೆ ಧೈರ್ಯತುಂಬುವ ಮಾತುಗಳನ್ನು ಹೇಳಿ ಕಳುಹಿಸಿದರು.

ಶೇರ್

ಚ್ಯೂಂ ಶಂಶೀರ್ ನಾಮೆ ಊರಾನ್ ಶುದ್ ಬುಲಂದ್
ಖುರ್ಘಾ ಗಶ್ತ್ ಅಜ್ ಮೌಜೆ ಖೂನ್ ಕೂಚಯೆ ಬಂದ್
ಬಾದಶಾಹರ ಹೆಸರಲ್ಲಿ ಎತ್ತರಕೆ ತಲವಾರುಗಳು ಏಳುವುದು
ರಕ್ತದ ಕೋಡಿ ಹರಿವ ಹಾದಿಯಲಿ ಸಾವೇ ಕೊನೆಯಾಗುವುದು.

ಝು ಬಶ್ ಮೌಜೆ ಕೂನಾಬ್ ಡರ್ ಹರ್ ತರಫ್
ಸಿಫರ್ ಗಶ್ತ್ ಗರ್‌ನೆ ಶನಾ ಚ್ಯೂಂ ಕಸಫ್
ಹರಿಯಿತು ರಕ್ತದ ಕೋಡಿ ಎಲ್ಲ ದಿಕ್ಕುಗಳೆಡೆ
ವಾತಾವರಣ ಬಿಸಿಯೇರಿ ದುರ್ವಾಸನೆ ಬೀರಿತೆಲ್ಲೆಡೆ.

ಚ್ಯೂಂ ಝುಕ್ಮೆ ದಿಲೆರಾನ್ ಝು ದರಿಯಾಯೆ ಜಂಗ್
ಅಯಾಂ ಗಸ್ತ್ ಹಂ ಚ್ಯೂಂ ದಹಾನೆ ನೆಹಂಗ್
ಈ ಯುದ್ಧದ ಸಾಗರದಲಿ ಬಹಾದುರರ ಗಾಯಗಳು
ಆಗುವುದು ಅಗಲ ತೆರೆದಂತೆ ಮೊಸಳೆಗಳ ಬಾಯಿಗಳು.

ಝು ದೆಹಶತ್ ದಿಲೇ ಖುದ್‌ಸಿಯಾಂ ಆಪ್ ಗಶ್ತ್
ಫಲಕ್ ಗರ್ದ್ ಖುದ್ ಹಂ ಚ್ಯೂಂ ಗರ್ದಾಬ್ ಗಶ್ತ್
ಶುದ್ಧ ಹೃದಯಿ ಸಿಪಾಯಿಗಳ ಭಯದಿ ವೈರಿ ಸಮೂಹ ತತ್ತರಿಸಿದೆ
ಸ್ವತಹ ತನ್ನ ವ್ಯೂಹ ಚಕ್ರದಲಿ ಆಕಾಶ ಸುತ್ತಾಡ ತೊಡಗಿದೆ.

ಎರಡೂ ಕಡೆಗಳಿಂದ ಹಾರಾಡುವ ಬಾಣ, ತಲವಾರು ತೋಪುಗಳ ಅರ್ಭಟದಲ್ಲಿ ರಾತ್ರಿ, ಹಗಲು ಒಮ್ಮೆ ಈಕಡೆ ಒಮ್ಮೆ ಆಕಡೆ ಜಯವಾಲುತ್ತಿರುವಂತೆ ಭೀಕರ ಯುದ್ಧ ನಡೆಯಿತು. ಇಲ್ಲಿನ ಕಾಡು, ನಾಡುಗಳಲ್ಲಿ ಮಣ್ಣಿನ ರಾಶಿಯ ಹೊರತು, ಮುಳ್ಳುಗಳು ಹರಡಿರುವುದು ಬಿಟ್ಟರೆ ಬೇರೇನೂ ಕಾಣದಾಯಿತು.

ಯುದ್ಧದ ಮೈದಾನದಲ್ಲಿ ಶಕ್ತಿಯುತ ಸಿಪಾಯಿಗಳು ದೊಡ್ಡ ನದಿಯಲ್ಲಿ ಬಲಶಾಲಿ ಮೊಸಳೆಗಳು ಒಂದು ಇನ್ನೊಂದರ ಮೇಲೆ ದಾಳಿ ನಡೆಸಿ ಕಾದಾಡುತ್ತಿರುವಂತೆ ಭೀಕರ ಕಾಳಗದಲ್ಲಿ ನಿರತರಾಗಿದ್ದರು. ರಣರಂಗದಲ್ಲಿ ಯುದ್ಧನಿರತ ಆನೆಗಳು ಬಿಸಿಯೇರಿದ ಹವೆಯಲ್ಲಿ ಸೆಖೆಯಿಂದಾಗಿ ದೊಡ್ಡ ಕೊಳದ ನೀರಿನಲ್ಲಿ ತಮ್ಮ ಸೊಂಡಿಲುಗಳಲ್ಲಿ ನೀರನ್ನು ಎತ್ತಿ ಭೋರ್ಗರೆವ ಸಮುದ್ರದ ಅಲೆಗಳು ನೀರನ್ನು ಚಿಮ್ಮಿಸುವಂತೆ ಮೈಮೇಲೆ ಸುರಿದುಕೊಳ್ಳುತ್ತಿದ್ದವು. ರಣರಂಗದ ವಾತಾವರಣ ಅಗ್ನಿ ಮತ್ತು ಮಿಂಚು ಮಳೆಗರೆವಂತೆ ಕಂಡು ಬಂತು. ಶಾಂತವಾಗಿರುವ ಹುಮಾ ಪಕ್ಷಿ ಬೆಂಕಿ ನುಂಗಿ ಉಗುಳುವ ಪಕ್ಷಿಯಾಗಿ ಮಾರ್ಪಟ್ಟಿತು.

ಶೇರ್

ಝೆ ತಾಬೆ ಆತಿಶೇ ಕೆಹರೇ ದಿಲಾವರಾನ್
ಫಲಕ್ ಬಚಶ್ಮೆ ಸುಹಾ ಹಂಚ್ಯೂಂ ದೂದೊ ರೌಝನ್
ಶೂರ ಸಿಪಾಯಿಗಳ ಸಿಟ್ಟಿನ ಬೆಂಕಿ ಭುಗಿಲು ಹಬ್ಬಿದಂತೆ
ಆಕಾಶ ಥರಥರಗುಟ್ಟುತಿದೆ ಕೀಟಗಳ ಹಾರಾಟದ ಸದ್ದಿನಂತೆ.

ವೈರಿಗಳ ಪಾಳಯದಲ್ಲಿ ಭೀಕರ ಗದ್ದಲ ಮಾಡುವ ಸೈನಿಕರು ಸಾಕಷ್ಟು ದೊಡ್ಡ ತೋಪುಗಳನ್ನು ಮದ್ಯಾಹ್ನ ದಿಂದ ಸಂಜೆಯ ನಮಾಜಿನ ಹೊತ್ತಿನ ತನಕ ಉಡಾಯಿಸಿ ಭೀಕರವಾಗಿ ಕಾದಾಡುತ್ತ ಯುದ್ಧದ ಸಮುಯುವನ್ನು ಎಳೆಯುತ್ತಿದ್ದರು. ರಾತ್ರಿಯಾದಾಗಲೂ ಎರಡೂ ಕಡೆಯಲ್ಲಿ ಭೀಕರ ಕಾಳಗ ನಡೆದು ಬೆಳಗ್ಗಿನ ತನಕವೂ ಮುಂದುವರಿಯಿತು. ಈ ಅಶುದ್ಧ ವೈರಿಗಳು ಮುಂದೆ ಎದುರಿಸುವ ಶಕ್ತಿ ಕಳೆದುಕೊಂಡರು. ಸ್ವಲ್ಪ ಹೊತ್ತಿನಲ್ಲೇ ವೈರಿ ಸೈನಿಕರು 'ಅಲ್ ಅಮಾನ್...' ಶಾಂತಿ ಶಾಂತಿ ಎಂದು ಕೂಗುತ್ತ ಶರಣಾಗತರಾಗುವ ಸೂಚನೆಯನ್ನು ನೀಡಿದರು. ಮಾತುಕತೆ ನಡೆಸಿ ತಮ್ಮ ಸೋಲನ್ನು ಒಪ್ಪಿಕೊಂಡು ಹಸನರಾಯ ದುರ್ಗ ಕೋಟೆಯ ಮಹಾದ್ವಾರದ ಕೀಲಿಕೈಯನ್ನು ನವಾಬ್ ಸಾಹೇಬರ ಮಡಿಲಲ್ಲಿ ಹಾಕಿದರು. ಈ ವಿಜಯದ ಘೋಷವು ಸಪ್ತವಿಶ್ವದ ಬಾದಶಾಹರುಗಳ ಕಿವಿಯಲ್ಲಿ ಗುಂಯ್‌ಗುಟ್ಟತೊಡಗಿದವು. ಮರ್ಯಾದಸ್ಥ ಗೌರವಾನ್ವಿತ ಜನರ ಬಾಯಿಯಲ್ಲಿ ಬಾದಶಾಹ ಮುಹಮ್ಮದರ ಬಗ್ಗೆ ಹೊಗಳಿಕೆಯ ಮಾತುಗಳನ್ನಾಡತೊಡಗಿದರು.

ಅಶಾರ್

ಝೆಯೇ ಶಾಹೆ ಫಾಝಿ ಕೆ ದೀನೇ ಪೈಗಂಬರ್
ಬುವತ್ ಖಾಯಿಂ ಅಝ್ ನಾಮೆ ವೂ ತಾಬ ಮಹಶರ್
ಎಷ್ಟೊಂದು ಘನತೆವೆತ್ತವರು ವೀರ ಬಾದಶಾಹ, ಪೈಗಂಬರರ ಧರ್ಮವು
ಶಾಶ್ವತ ವಿರುವುದು ಅವರ ಹೆಸರಲ್ಲಿ ಅಂತಿಮ ಪ್ರಳಯದ ತನಕವೂ.

ಝೆ ಅರ್ಷೆ ವೂ ಫಲಕ್ ಸರ್ವರಾಂ ರ
ದಹದ್ ತಾಜೆ ದಾರ ವ ತಖ್ತೆ ಸಿಕಂದರ್
ಅವರ ಸಿಂಹಾಸನದ ದೆಸೆಯಿಂದ ಸರದಾರರ ತಲೆಯೂ ಆಕಾಶದೆತ್ತರ,
ನೀಡಿದ ದಾರಾನಿಗೆ ಕಿರೀಟವ, ಸಿಕಂದರನಿಗೆ ಸಿಂಹಾಸನದ ವರ.

ಝೆ ತಾಸೀರೆ ಅದ್ಲೆ ಕಫಶ್ ಗಾಹೆ ಹೇಜಾ
ಶವದ್ ಬರ್ಖ್ ಎ ಶಂಶೀರ್ ದರಿಯಾ ಎ ಗೌಹರ್
ಅವರ ಚಪ್ಪಲಿಗಳ ಪುಣ್ಯದಿಂದ ನ್ಯಾಯ ಸಿಗುವುದು
ಹೊಳೆಯುವ ತಲವಾರು ಮುತ್ತುಗಳ ಸಮುದ್ರವಾಗುವುದು.

ಪಯ್ ಮಶ್ಕ್ ತಸ್ಖೀರೆ ಇಕ್‌ಲೀಮೆ ದಿನ್‌ಹಾ
ಕುನದ್ ಹರ್ ಝಮಾ ಮುಲ್ಕೆ ದೀಗರ್ ಮುಸಕ್ಖರ್
ವಿಶ್ವ ವಿಜಯ ಯಾತ್ರೆಯ ತರಬೇತಿಯಲ್ಲಿ ನಿರತರಾಗಿರುವುದು
ಇತರ ದೇಶಗಳನ್ನು ವಶಪಡಿಸಿಕೊಳ್ಳುವ ಎಲ್ಲಕಾಲದಲೂ ಗುರಿ ಇರುವುದು.

ಹಸನ ರಾಯದುರ್ಗ ಕೋಟೆ ಜಯಿಸಿದ ನಂತರ ರಾಯದುರ್ಗದೊಳಗೆ ಪ್ರವೇಶ

ತಮ್ಮ ಉದಾತ್ತ ವಿಚಾರಗಳು, ಗಟ್ಟಿಯಾದ ನಿಲುವುಗಳು ಮತ್ತು ಅವರಿಗಿರುವ ಸರಿಯಾದ ಮುನ್ನೋಟಗಳ ಜ್ಞಾನ ಮತ್ತು ಲೇಖನಿಯ ಶಕ್ತಿಯ ಜೊತೆಯಲ್ಲಿದ್ದುದರಿಂದ ನವಾಬ್ ಸಾಹೇಬರ ಈ ವಿಜಯ ಯಾತ್ರೆಯ ನೆನಪಿಗಾಗಿ ಬಾದಶಾಹರ ಘನತೆ, ಗೌರವ ತಾರೀಫಿನ ನಿಮಿತ್ತವಾಗಿ ಒಂದು ಸಿಂಹಾಸನವನ್ನು ರಚಿಸಿ ಸಿಂಗರಿಸಿದರು. ಇವೆಲ್ಲವೂ ಅಲ್ಲಾಹನ ಕೃಪೆ ಮತ್ತು ನವಾಬ್ ಸಾಹೇಬರ ಆಶೀರ್ವಾದದಿಂದ ಹಸನ ರಾಯದುರ್ಗ ಕೋಟೆಯನ್ನು ವಶಪಡಿಸಿಕೊಳ್ಳುವುದು ಸಾಧ್ಯವಾಯಿತು. ಸೃಷ್ಟಿಕರ್ತನಾದ ಅಲ್ಲಾಹನ ಕೃಪೆಗೆ ನಾವೆಲ್ಲರೂ ಕೃತಜ್ಞತೆಯನ್ನು ಸಲ್ಲಿಸಬೇಕಾಗುವುದು ಯಾಕೆಂದರೆ ಅಲ್ಲಾಹನ ಕೃಪೆಯಿಂದ ವಿಶ್ವದ ದೇಶಗಳಲ್ಲಿ ಸಿಂಹಾಸನಾರೂಢರಾದ ಎಲ್ಲ ಬಾದಶಾಹರವರಿಗೆ ನಮ್ಮ ವಿಜಯದ ವಾರ್ತೆ ತಲಪಬೇಕೆಂದೂ ಅಪೇಕ್ಷಿಸಿದರು. ನವಾಬ್ ಸಾಹೇಬರು ಕೋಟೆಯ ಗೋಡೆಗಳು, ಮತ್ತಿತರ ಭಾಗಗಳ ರಿಪೇರಿ ಮಾಡುವ ವ್ಯವಸ್ಥೆಮಾಡಿ ತಮ್ಮ ಉನ್ನತ ಮಟ್ಟದ ಸೇನಾನಿ, ಸರದಾರರು, ಮಂತ್ರಿಗಳು, ಅಮೀರರು, ಸಲಹೆಗಾರರು ಸೈನಿಕರೊಂದಿಗೆ ರಾಯದುರ್ಗ ಪಟ್ಟಣದತ್ತ ಪ್ರಯಾಣಬೆಳೆಸಿದರು. ಅಲ್ಲಿ ನೋಡುವಾಗ ಒಂದು ದೊಡ್ಡ ಗೋಲಾಕಾರದ ಬಂಡೆಕಲ್ಲು ದೊಡ್ಡ ಆನೆಯಂತೆ ಕಾಣಿಸುತ್ತಿತ್ತು. ಇದು ಒಂದು ಎತ್ತರದ ಸ್ಥಳದಲ್ಲಿದ್ದು ಅದರ ಸನಿಹದಲ್ಲಿ ದೊಡ್ಡ ಕೋಟೆ ಯೂ ಇತ್ತು. ಈ ಕೋಟೆಯನ್ನು ಈ ದೊಡ್ಡಬಂಡೆ ಸುತ್ತುವರಿದಿತ್ತು. ಈ ರೀತಿಯ ವೈಶಿಷ್ಟ್ಯಮಯವಾದ ಕೋಟೆ ಪರ್ವತ ಬಂಡೆಯ ದೃಶ್ಯವು ಯಾರು ಕೂಡ ತಮ್ಮ ಕನಸಿನಲ್ಲೂ ಕಂಡಿರದ ಅದ್ಭುತ ಮಾದರಿಯದ್ದಾಗಿತ್ತು.

ಅಭ್ಯಾತ್

ಭುವತ್ ಅಂಜುಮ್ ಅಯಾಂ ಅಝ್ ಔಜೆ ಆಂ ಕೋಹ್
ಬಸಾನೆ ಕುಶ್ತ ಹರ್ ಪೇಶಾನಿಯೆ ಫೀಲ್
ನಕ್ಷತ್ರವೊಂದ ಕಂಡಂತೆ ಪರ್ವತದ ತುದಿಯಿಂದ ಕೋಟೆ ಕಂಡುಬಂತು
ಕೋಟೆಯ ಆವರಣದ ಗೋಡೆಯು ಆನೆಯ ಹಣೆಯಂತಿತ್ತು.

ಆ ಶಕ್ತಿವಂತ ಕೋಟೆಯ ಬುರುಜಿನ ನೆರಳು ಹಾಗೂ ಅದರ ಬಲಶಾಲಿ ತಳಪಾಯದ ನೆರಳು ಭೂಮಿಯನ್ನು ಆವರಿಸಿಕೊಂಡಿತ್ತು. ಸೂರ್ಯನು ಎತ್ತರದಿಂದ ನೀಡುವ ಕಿರಣಗಳು ಕಮಾನಿನ ಮೇಲೆ ಬಿದ್ದು ನೆರಳು ಚಿತ್ತಾರ ಬಿಡಿಸಿತ್ತು.

ಅಭ್ಯಾತ್

ಬರೂವೆ ಝುಮೀನ್ ಕಿಲಯೆ ಆಂಚೀಂ
ನದೀದಸ್ತ್ ಚಶ್ಮೆ ಸಿಫರ್ ಬರಿ
ಈ ಭೂಮಿಯಲ್ಲಿ ಇಂತಹ ಕೋಟೆ
ಎಂತಹ ಅತಿ ಸೂಕ್ಷ್ಮ ದೃಷ್ಟಿಯೂ ಕಾಣದಿರುವಂತಿದೆ.

ನಸೀಮೆ ಅಝಾಂ ಖಿಲ ಗರ್ ಸುಬ್ಹ ದಮ್
ಬಸಹನೆ ಗುಲಿಸ್ತಾಂ ಗುಝಾರತ್ ಕದಮ್
ಮುಂಜಾವಿನ ತಂಗಾಳಿ ಕೋಟೆಯ ಮೇಲೆ ಚಲಿಸುವಾಗ
ಹೂ ದೋಟದಲ್ಲಿ ಸಂಚರಿಸಿದ ಹಿತ ಅನುಭವಿಸಿತಾಗ.

ಶವದ್ ದುರ್ಜ್ ಹರ್‌ಗುಂಚಾ ಬುರ್ಜೆ ಮತೀನ್
ದಮದ್ ತಾ ಅಬದ್ ಕೋಹೆ ಕಾಫ್ ಅಜ್ಝುಮೀನ್
ಕೋಟೆಯ ಶಕ್ತಿಶಾಲಿ ಬುರುಜಿನ ಪ್ರತೀ ಮೆಟ್ಟಲುಗಳು ಹೂಗಳಂತಿವೆ
ಶಾಶ್ವತವಾಗಿ ಹೊಳೆಯುತ್ತಿರುತ್ತದೆ ಈ 'ಕೋಹೆ ಕಾಫ್' ಪರ್ವತವು ಭೂಮಿಯ ಮೇಲೆ.

ಬಿನಾಯೆ ಮತಾನತ್ ಝ ಬುರ್ಜಿಶ್ ಖವೀ
ಫಲಕ್ ಝೇರೆ ವೂ ಗರ್ಮ್ ಬಾಲಾ ರವೀ
ಕೋಟೆಯ ಶಕ್ತಿಶಾಲಿ ಬುರುಜಿನ ವಾಸ್ತು ಹೀಗಿದೆ
ಆಕಾಶದ ಅರಳುಮುಖವೂ ಇದರ ಅಡಿಯಿರುವಂತಿದೆ.

ನವಾಬ್ ಸಾಹೇಬರು ಪಟ್ಟಣದ ಗಡಿಯ ಗೋಡೆಯನ್ನು ಆವರಿಸುವಂತೆ ಸುತ್ತುವರಿಯಲು ತನ್ನ ಸೈನಿಕರಿಗೆ ಆದೇಶವನ್ನು ನೀಡಿದರು. ನಾಲ್ಕೂದಿಕ್ಕಿನಿಂದ ಬೆಂಕಿ ಹಚ್ಚಲು ತನ್ನ ಸಿಪಾಯಿಗಳಿಗೆ ಹೇಳಿದರು. ವೈರಿಗಳ ಬದುಕನ್ನು ಸಂಕಷ್ಟಕ್ಕೀಡು

ಮಾಡಿ ಮಣ್ಣಿನ ರಾಶಿಯನ್ನಾಗಿ ಮಾಡಿರೆಂದು ಹೇಳಿ ಹುರಿದುಂಬಿಸಿದರು. ಈ ಬಹದ್ದೂರ ಸಿಪಾಯಿಗಳ ತಲವಾರಿನ ಹೊಳಪು ಆಕಾಶದ ಸೂರ್ಯನ ಕಿರಣದ ಹೊಳಪಿಗೆ ಸಮಾನವಾಗಿದೆ. ಇವರ ತಲವಾರಿನ ಹೊಡೆತಕ್ಕೆ ವೈರಿಗಳ ರಕ್ತವು ತೂಫಾನಿನ ವೇಗದಲ್ಲಿ ಹರಿದು ಹೊಮ್ಮುತ್ತಿರುವುದು ನಮ್ಮ ಪರಿಕಲ್ಪನೆಗೆ ಮೀರಿದ ಅನುಭವವನ್ನು ಕೊಡುವಂತಹ ಒಂದು ಅದ್ಭುತ ಸಂಗತಿಯಾಗಿದೆ. ಅವರ ಬಾಣಗಳ ಮೊನೆಯ ವೇಗದ ಶಬ್ಧದ ಮೂಲಕ ಮಲಕುಲ್ ಮೌತ್ ಅಥವಾ ಸಾವಿನ ದೇವ ದೂತನು ಒಂದು ನದಿಯ ದಡದಲ್ಲಿ ಮೀನುಹಿಡಿವ ಮೀಂಚುಳ್ಳಿ ತನ್ನ ಹೊಂಚನ್ನು ನೀರಿನೊಳಗೆ ಹಾರಿ ಧುಮ್ಮಿಕ್ಕಿ ಕೊಕ್ಕಿನಲ್ಲಿ ಹಿಡಿದು ತರುವಂತೆ ವೈರಿಗಳ ಪ್ರಾಣವನ್ನು ಕಿತ್ತುಕೊಳ್ಳುತ್ತಿದ್ದ.

ಈಟಿಯನ್ನು ಗುರಿಯಿಟ್ಟು ಎಸೆವ ಪರಿಣಿತ ಸೈನಿಕರ ದಂಡು ಎಸೆದ ಈಟಿಗಳು ವೈರಿ ತಲೆಗಳ ಒಡೆದು ಮಿದುಳು ಬಳ್ಳಿ ಹೊರಗೆ ಚಾಚುವಂತೆ ಮಾಡುತ್ತಿತ್ತು ಮತ್ತು ಅವುಗಳು ಹಳೆಯ ಕಸದ ರಾಶಿಯಂತೆ ಒಟ್ಟಾಗಿ ಒಂದು ದೊಡ್ಡ ಹೊಂಡಕ್ಕೆ ಬೀಳುತ್ತಿತ್ತು. ಅವರ ಬಣ್ಣಬಣ್ಣದ ಬಿದುರಿನ ಗಟ್ಟಿಯಾದ ಬೆತ್ತದಿಂದ ಮಾಡಿದ ಬಾಣಗಳು ವೈರಿಗಳ ಎದೆಯನ್ನು ಹರಿದು ಚೂರು ಮಾಡುವುದು.

ನಜ್ಮ್

ದಮೇ ತೈಗ್ ದರ್ ದಂ ಗುಝಿಶ್ತ್ ಆಝಿಸ್ತ್ ಸೆಫೆಹರ್
ಸಫಖ್ ಖೇಝ್ ಶುದ್ ಖುಬ್ಬಯೇ ಮಾಹೋ ಮೆಹರ್
ತಲವಾರಿನ ಪೆಟ್ಟು ಎಂತಹ ಮಜಬೂತಿನದು
ಚಂದ್ರ ತಾರೆಯ ಗುಂಬಜು ಕೂಡ ಕೆಂಪಾಗುವುದು.

ಶುದ್ ಅಝ್ ಫರ್‌ತೂಯೆ ಖಂಜರೋ ತೈಗೋ ತೇಝ್
ಚ್ಯೂಂ ರೇಗೇ ರಂವಾ ದಶ್ತ್ ದರ್ ರೇಝ್ ರೇಝ್
ತಲವಾರು ಮತ್ತು ಕತ್ತಿಯ ಹರಿತ ಧಾರೆಯಿಂದಾಯಿತು
ಕಾಡು ನಾಡುಗಳಲ್ಲಿ ನೆಲವು ಮರಳಿನಂತೆ ನುಚ್ಚುನೂರಾಯಿತು.

ಝು ಬುರ್ಜ್‌ದರಾನ್ ಸರ್ ಬ ಮೈದಾನೆ ಜಂಗ್
ಝು ಬಸ್ ಪೆಹಲೆ ಗರ್ದೆದ್ ಚರ್ಕ್ ದೊ ರಂಗ್
ಈಟಿ ನಿಪುಣರ ಎಸೆತದಿಂದಾಗಿ ಒಡೆದವು ಅವರ ತಲೆಗಳು
ಆಕಾಶದ ಅಂಗಳವು ಬದಲಾಗಿ ಮೂಡಿತು ಎರಡು ಬಣ್ಣಗಳು.

ಜುದಾ ಗಶ್ತ್ ಅಂಜುಮ್ ಝು ಹರ್ ಪೈ ಕರಶ್
ಬರೂ ಆಮದ್ ಅಸ್ಸುಬಹೇ ಮಗ್‌ಝೋ ಶರಶ್
ತಾರೆಗಳು ಒಡೆದು ಚೂರಾಗಿ ಹರಡುವಂತೆ ನಾಲ್ಕು ದಿಕ್ಕುಗಳಲ್ಲೂ,
ಅವರ ತಲೆಗಳೊಡೆದು ಹೊರಬಂದ ಮಿದುಳುಗಳು ಹರಡಿದವು ಎಲ್ಲೆಲ್ಲೂ.

ನವಾಬ್ ಸಾಹೇಬರು ನೋಡುವಾಗ ಯದ್ಧರಂಗದ ಎರಡೂ ಕಡೆಗಳಲ್ಲಿ ಹೋರಾಟವು ಜೋರಾಗುತ್ತಿರುವುದು ಕಂಡು ಅವರು ದೊಡ್ಡ ತೋಪನ್ನು ಉಡಾಯಿಸಲು ಪರ್ವತದ ತುದಿಯ ಮೇಲೆ ಗುರಿಯಿಟ್ಟು ಉಡಾಯಿಸಿ ಪರ್ವತಗಳೆಲ್ಲವೂ ಅಲುಗಾಡುವಂತೆ, ವೈರಿಗಳ ಅಹಂಕಾರ ಒಡೆದು ಅವರನ್ನು ನಾಮಾವಶೇಷವಿಲ್ಲದಂತೆ ಮಾಡಲು ಆಜ್ಞೆ ನೀಡಿದರು. ಈ ದೊಡ್ಡ ಬಲಶಾಲಿ ತೋಪು ಏಳು ತೋಪುಗಳ ಶಕ್ತಿಯುಳ್ಳ ಏಕೈಕ ತೋಪಾಗಿದೆ. ಇದು ಒಡೆದಾಗ ಆಗುವ ಆಸ್ಫೋಟಕ್ಕೆ ಮೈದಾನ, ಪರ್ವತಗಳ ತುದಿಗಳನ್ನು ಪುಡಿಗಟ್ಟುವ ಸಾಮರ್ಥ್ಯವಿದೆ.

ವೈರಿಗಳ ಪಾಳಯದಲ್ಲಿ ಯುದ್ಧವು ತೀವ್ರಗೊಂಡಂತೆ ಅತ್ಯಂತ ತಳಮಳವವುಂಟಾಯಿತು. ಅವರು ನೋಡುವಾಗ ತೋಪಿನ ಆಘಾತದಿಂದ ವೈರಿ ಸೈನಿಕರ ದೇಹಗಳು ನುಚ್ಚುನೂರಾಗಿ ಬೆಂದು ಹೋಗಿದ್ದವು. ಈ ವೈರಿಗಳು ಭಯಭೀತರಾಗಿ ಮತ್ತು ಸಹಿಸಲಾರದೆ ಎಲ್ಲರೂ ಶರಣಾಗತರಾಗುವ ಇಚ್ಛೆ ಪ್ರಕಟಿಸುತ್ತಾ 'ಅಲ್ ಅಮಾನ್...' ಶಾಂತಿ ಶಾಂತಿ ಎಂದು ಕೂಗತೊಡಗಿದರು. ಸೋಲೊಪ್ಪಿಕೊಂಡು ಎಲ್ಲರೂ ಕೋಟೆಯ ಮಹಾದ್ವಾರದ ಕೀಲಿಕೈಯನ್ನು ನವಾಬ್ ಸಾಹೇಬರಿಗೆ ಒಪ್ಪಿಸಿದರು. ಈ ರೀತಿ ನವಾಬ್ ಸಹೇಬರು ವೀರ ಹಜ್ರತ್ ಬಾದಶಾಹರ ಆಶೀರ್ವಾದದೊಂದಿಗೆ ಈ ರಾಯದುರ್ಗ ಬಹು ವಿಶಾಲವಾದ ಕೋಟೆಯನ್ನು ವಶಪಪಡಿಸಿಕೊಳ್ಳುವುದರಲ್ಲಿ ಜಯಶಾಲಿಯಾದರು. ಕೊನೆಯಲ್ಲಿ ಇಂತಹ ದೊಡ್ಡ ಜಯವನ್ನು ಸಾಧಿಸಲು ನೆರವಾದ ಅಲ್ಲಾಹನಿಗೆ ಕೃತಜ್ಞತೆಯನ್ನು ವ್ಯಕ್ತಪಡಿಸಿದರು. ಪ್ರಯಾಣವನ್ನು ಮುಂದುವರಿಸುತ್ತ ನವಾಬ್ ಸಾಹೇಬರು ಅಲ್ಲಿನವರಿಗೆ ಈ ಕೋಟೆಯ ಹೆಸರನ್ನು ಬದಲಾಯಿಸಿ 'ಬಾದಶಾಹ ದುರ್ಗ' ಎಂದು ಕರೆಯಿರಿ ಎಂದು ಅಲ್ಲಿನ ಜನರಿಗೆ ಹೇಳಿದರು. ಕೋಟೆಯ ಮರಮತು ಮಾಡಲು ಮತ್ತು ಎಲ್ಲ ಸೌಕರ್ಯಗಳನ್ನು ಅಲ್ಲಿನವರಿಗೆ ಒದಗಿಸುವ ವ್ಯವಸ್ಥೆ ಮಾಡಿ ವೀರಭದ್ರ ದುರ್ಗದ ಕಡೆ ತೆರಳಿದರು.

ಖಿತಾ

ದರ್ ಝುಮಾನೇ ಶಹನ್‌ಶಾಹೆ ಗಾಝಿ ಮುಲ್ಕ್ ಗೀರಿಯೇ ಜಹಾಂ ರಿವಾಜ್ ಗಿರಿಫ್ತ್

ಕೆ ಬತ್ತೈಗಯೆ ಇಶಾರಯೆ ದರ್ ಎಕ್‌ದಂ ನೀ ತವಾನ್ ಅಝ್‌ದೋ ಕೌನ್ ಬಾಜ್ ಗಿರಿಫ್ತ್

ವೀರ ಬಾದಶಾಹರ ಕಾಲದಿ ಜಗತ್ತಿನ ಇತರ ರಾಜ್ಯಗಳನ್ನು ವಶಪಡಿಸುವ ಪರಂಪರೆ ಬೆಳೆದಿತ್ತು

ಜಗತ್ತಿನ ಜನ ಕಪ್ಪಕಾಣಿಕೆಯ ತಂದೊಪ್ಪಿಸಲು ಅವರ ತಲವಾರಿನ ಏಕೈಕ ಸಂಕೇತ ಸಾಕಾಗಿತ್ತು.

ರಾಯದುರ್ಗ ಕೋಟೆಯುನ್ನು ಜಯಿಸಿದ ಬಳಿಕ ನವಾಬ್ ಸಾಹೇಬರ ಬೆಹದರ್(ಬೀದರ್)ನ ಕಡೆ ಪ್ರಯಾಣ– ನಾಮಕೂರ್ ಪಟನ್‌ನಲ್ಲಿ ರತ್ನಗಿರಿ ಕೋಟೆಗೆ ಸಂಬಂಧಿಸಿದ ವಾದವಿವಾದ ಇತ್ಯರ್ಥಗೊಳಿಸಿದ ಘಟನೆ– ಹೀಗೆಯೇ ಅಲ್ಲಿನ ಆಸುಪಾಸಿನ ಕೋಟೆಗಳ ಮಧ್ಯೆ ಇದ್ದ ವಿರಸಗಳನ್ನು ಇತ್ಯರ್ಥಗೊಳಿಸಲು ಯತ್ನ ಮತ್ತು ವಶಪಡಿಸಿಕೊಳ್ಳುವ ಪ್ರಕ್ರಿಯೆ– ನಂತರ ಹಜ್ರತ್ ಖ್ವಾಜಾ ಬಂದೇನವಾಜರ ಉರೂಸಲ್ಲಿ ಪಾಲ್ಗೊಳ್ಳುವ ಇರಾದೆಯೊಂದಿಗೆ ಪಯಣ:

ಈ ಜಗತ್ತನ್ನು ಗೆಲ್ಲುವ ಬಾದಶಾಹರ ನುಡಿಮುತ್ತುಗಳು ಅವರ ಘನತೆ ಗೌರವ ಅವರ ಸ್ವತಹ ಊಟದ ಚಾಪೆಯ ಮೇಲೆ ಇರುತ್ತದೆ. ಬಾದಶಾಹರ ಒಳ್ಳೆಯ ನಡತೆಯ ಉದಾಹರಣೆಗಳು ಆಕಾಶದ ಪುಟಗಳಲ್ಲಿ ಬರೆಯಲಾಗಿದೆ. ವೀರ ಬಾದಶಾಹರ ಬರಕತ್ತಿನ ದೆಸೆಯಿಂದ ರಾಯದುರ್ಗದ ಕೋಟೆಯನ್ನು ತುಂಬ ಉತ್ತಮ ರೀತಿಯಲ್ಲಿ ಜಯಿಸಿದರು. ಈ ವಿಜಯವಾರ್ತೆಯ ಬಗ್ಗೆ ತಿಳಿದು ಗೌರವಾನ್ವಿತ ವ್ಯಕ್ತಿಗಳು ನವಾಬ್ ಸಾಹೇಬರ ಬಗ್ಗೆ ಗೌರವ ತಾಳಿದರು. ಎಲ್ಲರೂ ಸೇರಿ ಅಲ್ಲಿಂದ ವೀರಭದ್ರ ದುರ್ಗದ ಕಡೆ ಪ್ರಯಾಣವನ್ನು ಬೆಳೆಸಿದರು. ಪ್ರಯಾಣದ ಮಧ್ಯೆ ರತ್ನಗಿರಿಯ ಕೋಟೆಗೆ ತಲಪುವ ರಸ್ತೆಯಲ್ಲಿ ಈ ಕೋಟೆಯ ರಾಜ ಜಗದೇವನ ಆಜ್ಞೆಯಂತೆ ಅನ್ಯರಿಗೆ ಪ್ರವೇಶ ತಡೆಯ ಒಂದು ಬಂಕರವನ್ನು ನಿರ್ಮಿಸಿ ಅಲ್ಲಿಂದ ಹೋಗಿಬರವವರನ್ನು ತಡೆದು ನಿಲ್ಲಿಸಿ ತಪಾಸಣೆಗೆಯ್ಯುವ ಕ್ರಮವನ್ನು ಕೈಗೊಂಡಿದ್ದಾನೆಂಬ ವರ್ತಮಾನ ಸಿಕ್ಕಿತು. ಅಲ್ಲಿ ೭೦೦೦ಕಾಲಾಳುಗಳ ಸೈನ್ಯ, ಯುದ್ಧಕ್ಕೆ ತರಬೇತಿಪಡೆದ ಕುದುರೆಗಳು, ಯುದ್ಧದ ಆಯುಧಗಳೇ ಮುಂತಾದ ಸಾಮಾನು ಸರಂಜಾಮುಗಳ ಶೇಖರಣೆ ಮಾಡಿದ್ದಾನೆಂದೂ ತಿಳಿದುಬಂತು. ಈ ಖೇದಕರ ವಾರ್ತೆಯನ್ನು ಕೇಳಿದ ನವಾಬ್ ಸಾಹೇಬರು ತಮ್ಮ ಮುಖ್ಯ ಸೇನಾ ಸರದಾರ ಅಬುಲ್ ಫತ್ತಾಹ್‌ನನ್ನು ನಾಲ್ಕುನೂರು ಸೈನಿಕರ ಜೊತೆಗೆ ರತ್ನಗಿರಿಯ ಕಡೆಗೆ ರವಾನಿಸಿದರು. ದಾರಿಯಲ್ಲಿ ವೈರಿಗಳು ತೀರ್ಮಾನದಂತೆ ಕೋಟೆಯ ಮಹದ್ವಾರದ ಕೀಲಿಕೈಯನ್ನು ಶಾಂತಿಯುತವಾಗಿ ನೀಡಿದರೆ ಸರಿ, ಇದಕ್ಕೆ ತಪ್ಪಿದಲ್ಲಿ ನಾನು ನನ್ನ ಸೈನಿಕರೊಂದಿಗೆ ಧರ್ಮ ಯುದ್ಧಕ್ಕಾಗಿ ಹೊರಟು ನಿಂತವನು ಕೂಡಲೇ ರತ್ನಗಿರಿಗೆ ಆಗಮಿಸುತ್ತೇನೆ ಎಂಬ ತನ್ನ ನಿರ್ಧಾರ ಮತ್ತು ಮುನ್ಸೂಚನೆಯನ್ನು ನೀಡಿ ನವಾಬ್ ಸಾಹೇಬರು ಕಳುಹಿಸಿದರು. ತನ್ನ ಸರದಾರರನ್ನು ಕಳುಹಿಸಿದ ಬಳಿಕ, ಕನಕಗರಿ ಕೋಟೆಯ ಬಳಿ ತಂಡ ಹೋಗುವಾಗ ಜಗದೇವನ ಆಜ್ಞೆಯಂತೆ ರಸ್ತೆ ತಡೆಯ ಬಂಕರ್ ಇಟ್ಟಿದ್ದನ್ನು ತೆಗೆದುಹಾಕಿ ಸೈನಿಕರನ್ನು ಅಲ್ಲಿಂದ ಹಿಂದಕ್ಕೆ ಕರೆಸಿಕೊಂಡ ವಾರ್ತೆ ಸಿಕ್ಕಿ ಇದೊಂದು ರೀತಿಯಲ್ಲಿ ತಮ್ಮ ವಿಜಯವೆಂದು ಪರಿಗಣಿಸಲಾಯಿತು.

ಅವರಮೇಲೆ ಯುದ್ಧ ಹೂಡುವ ತೀರ್ಮಾನ ಮಾಡಿಕೊಂಡು ನವಾಬ್ ಸಾಹೇಬರ ಸೈನಿಕರು ಕನಕಗಿರಿ ಊರ ಮೇಲೆ ಆಕ್ರಮಣಕ್ಕೆ ತೊಡಗಿದರು. ಶಕ್ತಿಶಾಲಿ

ಯುವ ಬೇಲ್ದಾರರ(ಒಡೆಯುವ ನಿಪುಣರ) ತಂಡವೊಂದು ಊರ ಗಡಿಯ ಗೋಡೆಗಳನ್ನು ಒಡೆದು ಹಾಕುವ ಕೆಲಸದಲ್ಲಿ ನಿರತರಾದರು. ಗೋಡೆಗಳಲ್ಲಿ ತೂತು ಕೊರೆಯುವಾಗ ವೈರಿಗಳು ಹತಾಶರಾಗಿ ಬೇರೆದಾರಿ ಕಾಣದೆ ಮುಖ್ಯದ್ವಾರವನ್ನು ಬಿಟ್ಟು ಇನ್ನೊಂದು ದ್ವಾರದ ಮೂಲಕ ಓಡಿಹೋದರು. ಹೀಗೆ ಕನಕಗಿರಿ ಕೋಟೆಯು ಆ ದಿನ ಶಕ್ತಿಶಾಲಿ ಬಾದಶಾಹರ ವಶವಾಯಿತು.

ಖಿತಾ

ಅಗರ್ ಖ್ವಾಹಿ ಬಸಾಹಾನೆ ಜಹಾಂ ಪತ್‌ಹೋ ಝಫರ್‌ಯಾಬಿ
ಬಗೂ ಬಾ ಖುಸ್‌ರವೋ ಗಾಝಿ ಕೆ ತಾಯೀಂ ರುತ್‌ಬಯೆ ದರ್ಯಾಬಿ

ಈ ತರ ನೀನು ಇಚ್ಛಿಸುವಿಯಾದರೆ ವಿಜಯಪಡೆಯಲು ವಿಶ್ವದ ಬಾದಶಾಹನ ಜೊತೆ ಸೇರಿಕೋ, ಈ ವೀರ ಜಯಶಾಲಿ ಬಳಿ ಇರುವುದು ವಿಜಯದ ಸೋಪಾನ.

ಪತತ್ ಖುರ್ಷೀದ್ ದರ್ ಪಾಯೆ ತೂ ಚ್ಯೂಂ ನಕ್ಷೆ ಕದಂ ಹರ್‌ದಂ
ಝು ಖಾಕೆ ದರ್ಗಯೆ ಜಾಹಶ್ ಬಸರ್ ಗರ್ ತಾಜೇ ಝುರ್‌ಯಾಬಿ

ನಿನ್ನ ಕಾಲಿಗೆ ತಲೆಬಾಗುವ ಸೂರ್ಯ ಅವರ ಹೆಜ್ಜೆಯ ಹಾದಿಯಲಿ ಸದಾ ನಡೆದರೆ ದರಬಾರಿನ ಮಣ್ಣಿನಲಿ ಸೇರಿಕೋ, ಹೊಳೆವ ಕಿರೀಟವ ಬಯಸುವೆ ಎಂದಾದರೆ.

ನವಾಬ್ ಸಾಹೇಬರು ದುರ್ಗದ ಕೋಟೆಯಲ್ಲಿ ಸ್ವಲ್ಪ ಕಾಲ ಇದ್ದು ಮುಂದದುವರಿದು ಕನಕಗಿರಿಯ ಕೋಟೆಗೆ ಬಂದರು. ನವಾಬ್ ಸಾಹೇಬರ ಆಜ್ಞೆಯಂತೆ ಮಹಾದಂಡನಾಯಕ ಅಬುಲ್ ಫತ್ತಾಹ್ ರತ್ನಗಿರಿಗೆ ಹೋಗಿ ತಲಪಿದ. ಅಲ್ಲಿ ವೈರಿಗಳು ಕೋಟೆಯಲ್ಲಿ ಕೂತು ಕುತಂತ್ರಗಳನ್ನು ಹೆಣೆಯುತ್ತಾ ದ್ವೇಷದ ಕಾರ್ಯಗಳನ್ನು ಸಂಯೋಜಿಸುತ್ತಾ ಯುದ್ಧದ ತಯಾರಿಯಲ್ಲಿ ಅವಕಾಶಕ್ಕಾಗಿ ಕಾಯುತ್ತಿದ್ದರು. ನವಾಬ್ ಸಾಹೇಬರಿಗೆ ಈ ಸುದ್ದಿ ತಲಪಿದಾಗ ಕನಕಗಿರಿಯಿಂದ ತಮ್ಮ ಸರದಾರರು ಮತ್ತು ಅಧಿಕಾರಿಗಳ ತಂಡವನ್ನು ಕರೆದುಕೊಂಡು ರತ್ನಗಿರಿಯಕಡೆಗೆ ಪ್ರಯಾಣಬೆಳೆಸಿದರು. ಈ ಯುವೋತ್ಸಾಹದ ಸೈನಿಕರು ಅಲ್ಲಿಗೆ ತಲಪಿದ ಕೂಡಲೇ ಪಟ್ಟಣದ ಗಡಿಯ ಗೋಡೆಯ ಸುತ್ತ ಸೇರಿ ತಮ್ಮ ಎಲ್ಲ ಶಕ್ತಿಯನ್ನು ಒಗ್ಗೂಡಿಸಿ ರಣಕಹಳೆಯನ್ನು ಊದಿ ಮೊಳಗಿಸುತ್ತ ಸಿಡಿಲು ಮಿಂಚುಗಳಂತೆ ಸದ್ದುಗಳನ್ನು ಸ್ಫೋಟಿಸುತ್ತ, ನಗಾರಿ ತಬ್ಲಾಗಳನ್ನು ಬಾರಿಸುತ್ತಾ ಯುದ್ಧದ ಸೂಚನೆ ನೀಡುತ್ತ, ವೈರಿಗಳ ಎದೆಗಳನ್ನು ನಡುಗಿಸುತ್ತಾ ಯುದ್ಧದಲ್ಲಿ ತೊಡಗಿದರು. ಬಾದಶಾಹರ ಸೈನಿಕರ ಯುದ್ಧ ಕೌಶಲದಿಂದ ವೈರಿಗಳ ತಲೆಯೊಳಗಿನ ಮಿದುಳು ಹಣ್ಣನ್ನು ಒತ್ತಿ ಬೀಜವನ್ನು ಹೊರತಂದರು. ಕೂಡಲೇ ಹದ್ದುಗಳು ಹಾರಿಬಂದು ಹೊರಬಂದ ಮಿದುಳನ್ನು ಕುಕ್ಕಿ ಎತ್ತಿಕೊಂಡು ಹೋದವು.

ಬಾದಶಾಹರ ಸೈನಿಕರ ರಕ್ತದಾಹದ ಬೆಂಕಿಯುಗುಳುವ ತಲವಾರುಗಳಿಂದ ಹೊಗೆಯ ಮುಗಿಲು ಮುತ್ತಿ ಮಿಂಚಿನ ಕಿಡಿಗಳ ಸಮುದ್ರವವನ್ನು ತನ್ನೊಳಗೆ ಹುದುಗಿಸಿಕೊಂಡಿತ್ತು. ರಣರಂಗದಲ್ಲಿ ಬಿಸಿಯೇರಿದ ವಾತಾವರಣದಲ್ಲಿ ವೈರಿ ಸೈನಿಕರು ದಾಹದಿಂದ ಸೊರಗಿ ತಂಬಿಗೆಯ ಮುಂದಿಟ್ಟು ನೀರಿಗಾಗಿ ಹಾತೊರೆವ ಪಯಣಿಗರಂತೆ ನೀರು...ನೀರು... ಎಂದು ಕೂಗತೊಡಗಿದರು. ಎರಡೂ ಕಡೆಯಲ್ಲಿ ಒಂದೇ ರೀತಿಯಲ್ಲಿ ಭೀಕರ ಯುದ್ಧ ನಡೆಯಿತು. ರಕ್ತದ ಸಾಗರದಲ್ಲಿ ತೂಫಾನು ಎದ್ದು ಬೆಂಕಿ ಸ್ಫೋಟಕಗೊಂಡು ಹೊರಡುವ ಮಿಂಚಿನಂತಾಗಿ, ಸೂರ್ಯನ ಹಣೆಯ ಮುಂದೆ ಹಾದು ಜೋರಾಗಿ ಚಲಿಸಿತು. ಈ ಭೀಕರ ಯುದ್ಧದ ದೆಸೆಯಿಂದ ವೈರಿಗಳು ಭಯಭೀತರಾಗಿ ಇಕ್ಕಟ್ಟಿನ ರಸ್ತೆಯೊಂದರ ಮೂಲಕ ಪಟ್ಟಣದ ಕಡೆಗೆ ಪಲಾಯನ ಮಾಡಿದರು. ಉಳಿದವರು ಕೂಡ ತಮ್ಮ ಜೀವ ರಕ್ಷಿಸುವಂತೆ ಬೇಡುತ್ತ, ಅಮನ್...ಅಮನ್.. ಶಾಂತಿ ಶಾಂತಿ... ಎಂದು ಕೂಗುತ್ತೋಡಿದರು. ಬಾಣದಲ್ಲಿ ಪರಿಣಿತ ಸೈನಿಕರು ಸೂರ್ಯನ ಕಿರಣಗಳ ಗೆರೆಯ ಓಟದಂತಹ ವೇಗದಲ್ಲಿ ಶರ ನೈಪುಣ್ಯದ ಗುರಿಯಿಟ್ಟು ಹಾರಿಸಿದಾಗ ಪೂರ್ವದಿಂದ ಪಶ್ಚಿಮದ ದಿಕ್ಕಿನ ಕಡೆ ಸಾಗುವಂತೆ ಕಂಡುಬಂತು. ರಕ್ತದಾಹದ ಬಾಣಗಳ ಮೊನೆಗಳು ಭೂಮಿಯಲ್ಲಿ ಬಿದ್ದ ರಾಶಿ ಕಾಣುವಾಗ ಕಲ್ಲಿನ ದೊಡ್ಡ ಪೆಟ್ಟಿಗೆಯೊಂದರಲ್ಲಿ ತುಂಬಿಸಿಟ್ಟಂತೆ ಕಂಡುಬರುತ್ತಿತ್ತು.

ಖಿತಾ

ಝು ರೆಹಬರ್ ಝು ದಿಲ್‌ಹಾ ಗಿರಹ್ ಬಾಝ್ ಗರ್ದ್
ಗೊಹರ್ ಹಾಯೆ ಜಾನೆ ಸಖ್ತನ್ ಆಗಾಝ್ ಕರ್ದ್
ಸ್ವತಹ ಬಾದಶಾಹರ ಮನಸು ಅವರಿಗೆ ಹಾದಿತೋರಿಸುವುದು
ಶುರು ಮಾಡುವರು ಹೀಗೆ ಬೆಳಬಾಳುವ ಮುತ್ತುಗಳನ್ನು ಆರಿಸುವುದು.

ಖಿಝಂಗ್ ಅಫ್‌ಗಾನ್ ರಾ ಬ ದರಿಯಾಯೆ ಖೂನ್
ಕಮಾನ್ ರಫ್ತ್ ಚ್ಯೂಂ ಮೌಜ್ ಅಝ್‌ಕಫ್ ಬರೂನ್
ಬಾಣಗಳ ಸುರಿಮಳೆಯಿಂದ ಸಾಗರವು ರಕ್ತಮಯವಾಯಿತು
ಬಿಲ್ಲುಗಳಿಂದ ಹೊರಟ ತೂಫಾನಿನಲ್ಲಿ ನೊರೆಯ ರಾಶಿ ಮೂಡಿತು.

ಬದಶ್ತೆ ವಘಾ ತೈಗ್ ತಾರಿಕ್ ಶಿಗಾಫ್
ಚುನಾ ಗಶ್ತ್ ಬ ಪುರ್ದಿಲಾನೆ ಸೀನಾ ಸಾಫ್
ನಿಷ್ಠೆಯ ಮೈದಾನದಲಿ ಕಡಿವ ತಲವಾರ
ಮೇಲಿರದು ಇದರ ಪ್ರಭಾವ ಸ್ವಚ್ಛ ಹೃದಯದವರ.

ರಾಝು ನಿಹಾನೆ ಖಿಝಾ ವೋ ಕದರ್

ಬಯಾಂ ಕರ್ದ್ ದರ್ ನೀಮೆ ದಮ್ ಸರ್‌ಬಸರ್
ಸಾವು ಬದುಕಿನ ನಡುವಿನ ರಹಸ್ಯ ಅಡಗಿದೆ ಹೀಗೆ
ವಿವರಿಸಿದರೂ ಮುಗಿಯದು ಆದರೂ ಸೋತುಹೋಗುವ ಹಾಗೆ

ಬಾದಶಾಹರ ಸೈನಿಕರಲ್ಲಿ ಕೆಲವರು ಗಾಯಗೊಂಡು ರಕ್ತಸಿಕ್ತರಾಗಿದ್ದರು. ಆದರೂ ತಮ್ಮ ತಲೆಮೇಲೆ ಸುಲ್ತಾನರ ಧ್ವಜವನ್ನು ಹಾರಿಸುತ್ತ ತಂದು ರತ್ನಗಿರಿಯ ಗಡಿಯಲ್ಲಿ ಹೂತರು. ಗಡಿಯ ಮೂರುದಿಕ್ಕಿನನ ಗೋಡೆಗಳು ಸುರಕ್ಷಿತವಾಗಿದ್ದವು. ತಮ್ಮ ರಕ್ತಸಿಕ್ತ ತಲವಾರಿನ ಶಕ್ತಿ ಎಷ್ಟಿತ್ತೆಂದರೆ ಒಂದು ಸಲ ಬೀಸಿದರೆ ಸಾಕು, ಕಾಡೆತ್ತು ಮತ್ತು ಹುಲಿ ಎರಡನ್ನೂ ಒಮ್ಮೆಲೇ ಮುಗಿಸುವುದು ಮಾತ್ರವಲ್ಲ ಅವುಗಳ ದೇಹದ ಭಾಗಗಳು ಖೀಮಾದಂತೆ ಚೂರುಚೂರಾಗಿ ಹಾರಿ ಆಕಾಶದ ಸುರೈಯ್ಯಾ ಎಂಬ ನಕ್ಷತ್ರದ ಮೇಲೆ ಸಿಂಪಡಿಸಿದಂತಾಗುತ್ತದೆ. ತಮ್ಮ ಪಾಪ ಕರ್ಮಗಳು ಮತ್ತು ದ್ವೇಷ ಭಾವನೆಗಳನ್ನು ಹೊತ್ತುಕೊಂಡ ವೈರಿ ಸಮೂಹದವರಿಗೆ ಬಾದಶಾಹರ ಆಕ್ರೋಶ ಹೇಗಿದೆ ಎಂಬುದನ್ನು ಪರಿಚಯಿಸಿದರು.

ಅಭ್ಯಾತ್

ನಫ್ಸೆ ಗರಂ ಶೋಲಬಾರ್ ತಫಂಗ್
ದರ್ ಗಿರಿಫ್ತ್ ಆಚಾಂ ಬ ಉರ್‌ಸಯೇ ಜಂಗ್
ಬಿಸಿರಕ್ತದ ಮನುಷ್ಯ ಮತ್ತು ಬೆಂಕಿಯುಗುಳುವ ಬಾಣ
ಇವೆರಡೂ ರಣರಂಗವನು ತಮ್ಮ ಮುಷ್ಠಿಯೊಳಗಿರಿಸಿಕೊಂಡಿವೆ ಕಾಣ.

ಕೆ ಸುಫರ್ ಬರ್‌ಸರೆ ಜವಾಂ ಮಾರ್ದಾನ್
ಗಶ್ತ ಚ್ಯೂಂ ದೂದ್ ಗಿರ್ದ್ ಖುದ್ ಗರ್ದಾನ್
ಯುವ ಶಕ್ತಿ ಚಕ್ರದಂತೆ ಗಿರಗಿರನೆ ಸುತ್ತುತಿದೆ
ಹವೆಯಲಿ ಹೊಗೆಯು ಸುತ್ತುತ್ತ ತಿರುಗುತಿರುವಂತಿದೆ.

ಇಸ್ಲಾಂ ಧರ್ಮದ ಬಹದ್ದೂರರು ರಣರಂಗದಲ್ಲಿ ತಮ್ಮ ಅಗ್ನಿಯುಗುಳುವ ಬಾಣಗಳನ್ನು ಸಿಹಿ ಹಣ್ಣನ್ನು ಮೂಸುವ ಹಾಗೆ ಚುಂಬಿಸಿ ಬಿಲ್ಲೇರಿಸಿ ಹಾರಿಸುತ್ತಿದ್ದರು. ವೈರಿಗಳ ಸೈನ್ಯವನ್ನು ಮರುಭೂಮಿಯಲ್ಲಿ ಕಾಣುವ ಮೃಗಜಲದ ರೀತಿಯ ಭ್ರಮೆಯನ್ನು ಹುಟ್ಟಿಸಿ ಸಾವಿನ ಮೈದಾನಕ್ಕೆ ಅಟ್ಟಿದರು. ಯುದ್ಧರಂಗದ ಗಲಾಟೆ ಊರಿನ ಗಡಿಯಲ್ಲಿಂದಲೇ ಶುರುವಾಗಿ ಹದ್ದು ಮೀರಿ ಬೆಳೆಯಿತು. ರಂಗಸಿಂಗಾರವೆಂಬ ಹೆಸರಿನ ಪರ್ವತಗಳನ್ನು ಒಡೆಯುವ ಸಾಮರ್ಥ್ಯದ ಬಲಿಷ್ಠ ಆನೆಯನ್ನು ಊರ ಗಡಿಯನ್ನು ಒಡೆದುಹಾಕುವುದಕ್ಕೆ ಕಳುಹಿಸಿದರು. ಆನೆಯು ಊರ ಗಡಿಯ ಗೋಡೆಗೆ ಢಿಕ್ಕಿ ಹೊಡೆದಾಗ ಅದರಿಂದ ಕಲ್ಲುಗಳು ಅತ್ತಿತ್ತ ಸರಿದು ಬಹದ್ದೂರ ಸಿಪಾಯಿಗಳ

ಕಾಲಬುಡಗಳಲ್ಲಿ ಬಿದ್ದವು. ಗೋಡೆಗಳ ಅಡಿಗಲ್ಲು ಒಡೆಯುವಾಗ ಸಿಕಂದರ (ಅಲೆಕ್ಸಾಂಡರ್) ಕಟ್ಟಿದ ಆವರಣದ ಗೋಡೆಯಂತಹ ಬಲಿಷ್ಠವಾಗಿರುವಂತೆ ಕಂಡುಬಂತು. ಆನೆಯ ಎದುರು ಇನ್ನೂ ಎತ್ತರದ ಗೋಡೆಗಳಿವೆಯೆಂದು ತಿಳಿದುಬಂದಾಗ ಅದು ತನ್ನ ಎರಡು ಕಾಲುಗಳನ್ನು ಮತ್ತು ಸೊಂಡಿಲನ್ನು ಎತ್ತಿ ಗೋಡೆಗಳ ಮೇಲೆ ಶಕ್ತಿಹಾಕಿ ತುಳಿದಾಗ ಎದುರು ಬದಿಗೆ ದೊಪ್ಪನೆ ಬಿದ್ದು ನೆಲಸಮವಾಯಿತು. ವೈರಿಗಳಿಗೆ ಆನೆಯ ಸೊಂಡಿಲು ಹೇಗೆ ಕಂಡಿತೆಂದರೆ ಘಟಸರ್ಪವೊಂದು ತಮ್ಮ ಎದುರು ಸುತ್ತುಹಾಕಿದ ಹಾಗೆ ಕಂಡಿತು.

ಬೈತ್

ಅಝ್‌ದಹಾ ಬಾಝಿಯೆ ಖರ್ತೂಂನೆ ಖಂ ಅಂದರ್ ಖಮೇ ವೂ
ಕರ್ದ್ ದರ್ ಹರ್ ಕದ್‌ಮೇ ಶೋಲೆ ಖಯಾಮತ್ ಬರ್‌ಪಾ

ಸುತ್ತುಹಾಕಿದ ಸೊಂಡಿಲು ಕಂಡರೆ ದೇಹವನು ಸುತ್ತಿಕೊಂಡ ಘಟಸರ್ಪದ ಹಾಗಿದೆ
ಒಂದೇ ಪೆಟ್ಟಿಗೆ ಪ್ರತೀ ಹೆಜ್ಜೆಯಲ್ಲೂ ಜಲಪ್ರಳಯದ ಗದ್ದಲವನ್ನು ಹುಟ್ಟಿಸುತ್ತದೆ.

ಕಪ್ಪು ಮುಖದ ದೆವ್ವದಂತಹ ದೊಡ್ಡ ದೇಹದ ಆನೆ ಊರಿನ ಗಡಿಯ ಗೋಡೆಗಳನ್ನು ಒಡೆದು ಹಾಕಿತು. ಇದು ವೈರಿಗಳಿಗೆ ದೇಹದ ಅಂಗಾಂಗಗಳನ್ನು ಕಡಿದು ಹಾಕಿದಂತೆ ಅನಿಸಿ ಭಯಭೀತರಾಗಿ ಕಾಡು ಮೇಡುಗಳತ್ತ ಓಡಿ ಹೋದರು. ಹೀಗೆ ಈ ಊರು, ಸಂಪದ್ಭರಿತ ವೈಭವದ ರಾಜ್ಯದ ಭಾಗವಾಗಿ ಬಾದಶಾಹರ ಕೈವಶವಾಯಿತು. ಯುವಶಕ್ತಿ ಚೈತನ್ಯಗಳನ್ನೊಳಗೊಂಡ ಬಾದಶಾಹರ ಸೈನಿಕರು ಕೋಟೆಯ ಮಹಾದ್ವಾರವನ್ನು ತೆರೆದು ಒಳನುಗ್ಗಿದರು. ಊರಿನ ಸುತ್ತ ಘೇರಾಯಿಸಿ ವಶಪಡಿಸಿಕೊಂಡರು. ಮೊದಲು ಪರ್ವತದ ನಡುವಿನ ಭಾಗದ ಮೇಲೆ ಆಕ್ರಮಣ ನಡೆಸಿದರು. ಇದಕ್ಕೆ ಕಾರಣ ಪರ್ವತದ ತುದಿಯ ಕೋಟೆಗೆ ತಲಪುವ ಹಾದಿಯು ತುಂಬ ಕಷ್ಟಕರವಾಗಿತ್ತು. ಇಕ್ಕಟ್ಟಾಗಿ ಎತ್ತರ ತಗ್ಗುಗಳಿಂದ ಕೂಡಿ ಮರಳಿನಂತಹ ಮಣ್ಣು ತುಂಬಿತ್ತು. ಇದರಿಂದಾಗಿ ಊರಿನ ಹಿಂದಿನ ಭಾಗವನ್ನು ತಲಪಿ ಅಲ್ಲಿನ ಗಡಿಯ ಗೋಡೆಯ ಮೂಲಕ ಹಲ್ಲೆ ನಡೆಸುವ ಯೋಜನೆ ಹೂಡಿದರು. ಹಿಂದಿನ ರಸ್ತೆಯಮೂಲಕ ತಲಪಿ ವೈರಿಗಳ ಠಿಕಾಣಿಗಳ ಮೇಲೆ ಬುರುಜುಗಳ ಮೇಲೆ ಬೆಂಕಿಯ ಬಾಣಗಳನ್ನು ಗುರಿಯಿಟ್ಟು ಮಳೆಗೆರೆದು ದಹಿಸತೊಡಗಿದರು. ವೈರಿಗಳು ತಮ್ಮ ಜೀವಕ್ಕೆ ಸಂಚಕಾರವೆಂದು ತಿಳಿದು ಕೋಟೆಯ ಒಳಗೆ ಕಾವಲುಕಾಯುವ ತಮ್ಮ ಯೋಧರ ಜೊತೆಗೆ ಜಗಳಕ್ಕಿಳಿದರು. ಈ ಮಧ್ಯೆ ವೈರಿಗಳ ಊರಲ್ಲಿ ಬರಗಾಲ ಬಂದಿತು. ಧಾನ್ಯಗಳು, ಅಕ್ಕಿ ಗೋದಿ ಮುಂತಾದ ಅವಶ್ಯಕ ಸಾಮಾಗ್ರಿಗಳ ಕೊರತೆ ಕಾಡಿತು. ಇಂತಹ ಸಂಕಷ್ಟದ ಪರಿಸ್ಥಿತಿಯಲ್ಲಿ ತಮ್ಮ ಕುಟುಂಬಗಳನ್ನು ರಕ್ಷಿಸುವ ಸಲುವಾಗಿ ಒಂದು ತುಂಡು ರೊಟ್ಟಿಚೂರಿಗಾಗಿ ತಮ್ಮ ಮಕ್ಕಳು ಮರಿಗಳನ್ನು ಮಾರಾಟ ಮಾಡತೊಡಗಿದರು. ನೆಲದ ಮಣ್ಣನ್ನು ತಿನ್ನುವ ವಸ್ತುವೆಂಬಂತೆ ಎತ್ತಿ ತಮ್ಮ ಸೆರಗಿನಲ್ಲಿ

ಸುತ್ತಿಟ್ಟುಕೊಂಡಿದ್ದರು. ಈ ಪರಿಸ್ಥಿತಿಯನ್ನು ನೋಡಿದ ಬಾದಶಾಹರ ಮಂತ್ರಿಗಳು, ಸೇನಾನಿ ಸರದಾರರು ಬಂದು ನವಾಬ್ ಸಾಹೇಬರಿಗೆ ವರದಿನೀಡಿ ರತ್ನಗಿರಿಯ ಕೋಟೆಯ ಭೂಮಿಯಲ್ಲಿ ಧಾನ್ಯದ ಒಂದು ಬೀಜವೂ ಕೂಡ ಮೊಳಕೆ ಬರುವ ಸ್ಥಿತಿಯಲ್ಲಿಲ್ಲವೆಂದು ಹೇಳಿದರು.

ಈ ಪರಿಸ್ಥಿತಿಯಲ್ಲಿ ಉತ್ತಮ ತೀರ್ಮಾನವೆಂದರೆ ಈಗ ರತ್ನಗಿರಿಯನ್ನು ಸ್ವತಂತ್ರವಾಗಿ ಬಿಟ್ಟುಬಿಡಿ ಎಂಬ ಸಲಹೆಯನ್ನು ನವಾಬ್ ಸಾಹೇಬರಿಗೆ ನೀಡಿದರು. ನವಾಬ್ ಸಾಹೇಬರು ಈ ಪರಿಸ್ಥಿತಿಯ ಹಿನ್ನೆಲೆ ಮತ್ತು ಮುಂದಿನ ಪರಿಣಾಮಗಳನ್ನು ಆಲೋಚಿಸಿ, 'ನಾಲ್ಕು ದಿನಗಳ ಒಳಗೆ ಕೋಟೆ ನಮ್ಮ ಕೈವಶವಾದರೆ ಉತ್ತಮ, ಇಲ್ಲವಾದರೆ ನಾನು ಈ ಊರಿನಿಂದ ಮುಂದಕ್ಕೆ ಪಯಣ ಮಾಡುವುದಿಲ್ಲ' ಎಂದು ತನ್ನ ತೀರ್ಮಾನವನ್ನು ನೀಡಿದರು. ನವಾಬ್ ಸಾಹೇಬರು ಈ ಮಾತನ್ನು ಹೇಳಿ ಎರಡು ದಿನಗಳೂ ಕಳೆದಿರಲಿಲ್ಲ, ವೈರಿಗಳು ಬಾದಶಾಹರ ಸೈನ್ಯದ ಭಯದಿಂದ ಅತ್ಯಂತ ನಾಚಿಕೊಂಡು ಮುಖವನ್ನು ತಗ್ಗಿಸಿ ಬಗ್ಗಿಸಿ ನಾವು ಶರಣಾಗತರಾಗಿದ್ದೇವೆ, ನಮಗೆ ಆಶ್ರಯ ನೀಡಿರೆಂದು ಬೇಡಿಕೊಳ್ಳುತ್ತಾ ಕೋಟೆಯ ಬೀಗದ ಕೈಯನ್ನು ನವಾಬ್ ಸಾಹೇಬರ ವಶಕ್ಕೆ ಒಪ್ಪಿಸಿದರು. ನವಾಬ್ ಸಾಹೇಬರು ಅಲ್ಲಾಹನ ಕೃಪೆಯ ಉಡುಗೊರೆಯೆಂದು ಪರಿಗಣಿಸಿ, ಬಾದಶಾಹರ ಪುಣ್ಯವೆಂದು ತಿಳಿದರು. ತನ್ನ ಶೂರ ಸೈನಿಕರು, ಸರದಾರರು, ಸೇನಾನಿಗಳಿಗೆ ಶಹಬಾಸ್‌ಗಿರಿ ನೀಡಿ ಗೌರವಿಸಿದರು. ಇದರ ನಂತರ ಕೋಟೆ ಮತ್ತು ಊರ ಗಡಿಯ ಆವರಣದ ಗೋಡೆಗಳಿಗೆ ರಿಪೇರಿ ಮಾಡಲು ವ್ಯವಸ್ಥೆ ಮಾಡಿ ಮುಂದೆ ಪ್ರಯಾಣಮಾಡಿದರು. ಈ ದೊಡ್ಡ ವಿಜಯದ ದುಂದುಭಿ, ಘನತೆಯ ಅಟ್ಟಹಾಸ ನಾಲ್ಕೂ ದಿಕ್ಕುಗಳಲ್ಲಿ ಹಬ್ಬಿತು. ವೈರಿಗಳು ತಮ್ಮೊಳಗೆ ಭಯಭೀತರಾಗಿ ತಮ್ಮ ಮನೆ ಮಠಗಳನ್ನು ತೊರೆದು ಕಾಡುಮೇಡುಗಳತ್ತ ನಡೆದರು. ಈ ವೈರಿಗಳ ಒಂದು ತಂಡ ಮೇಲುಗಿರಿ ಮತ್ತು ಅರ್ಜುನ್ ದುರ್ಗದೊಳಗೆ ಅಡಗಿ ಕೂತರು. ಅವರು ತಮ್ಮ ಶರಣಾಗತಿಯ ಇಚ್ಛೆಯ ಮಾತುಗಳನ್ನು ನವಾಬ್ ಸಾಹೇಬರ ಮುಂದಿಟ್ಟು ಅವರು ಹೇಳುವ ತೀರ್ಮಾನಕ್ಕೆ ಬದ್ಧರಾಗಿದ್ದೇವೆಂದು ತಿಳಿಸಿದರು.

ನವಾಬ್ ಸಾಹೇಬರು ಎರಡೂ ಕೋಟೆಗಳನ್ನು ತಮ್ಮ ವಶಕ್ಕೆ ಪಡೆದುಕೊಂಡು, ಸುಲ್ತಾನ್ ಬಾದಶಾಹರ ದರ್ಬಾರಿನ ಪ್ರಮುಖ ಸರದಾರರ ವಶಕ್ಕೆ ಒಪ್ಪಿಸಿದರು. ಇದರ ನಂತರ ವೆಲಿಯಕೊಟ್ಟದ ಕಡೆ ನಡೆದರು. ಈ ಇಲಾಖೆಯನ್ನು ಶ್ರೀ ರಾಮ ಲಕ್ಷ್ಮಣರು ದ್ವಾಪರಾಯುಗದಲ್ಲಿ ನಿರ್ಮಿಸಿದ್ದರೆಂಬ ಪ್ರತೀತಿ ಇತ್ತು. ಅಲ್ಲಿ ತಲಪಿದಾಗ ಆ ಊರಿನ ಆವರಣದ ಗೋಡೆಯು ಶಿಥಿಲಗೊಂಡು ನೆಲಸಮವಾಗಿತ್ತು. ನವಾಬ್ ಸಾಹೇಬರು ಅಲ್ಲಿ ತಲಪಿದಾಗ ಮಾಡಿದ ಮೊದಲ ಕಾರ್ಯವೆಂದರೆ ಈ ಆವರಣದ ಗೋಡೆಯನ್ನು ಮರುನಿರ್ಮಾಣ ಮಾಡಿಸಿದ್ದು. ಈ ಮಧ್ಯೆ ಬಾದಶಾಹರು ತಮ್ಮ ಮುಖ್ಯ ಸರದಾರರು, ಸೇನಾನಿಗಳು, ಮಂತ್ರಿಗಳನ್ನು ನವಾಬ್ ಸಾಹೇಬರ ಜೊತೆಗೆ

ಸಾಧ್ಯವಾದಷ್ಟು ಬೇಗನೆ ಬಂದು ದರ್ಬಾರಿನಲ್ಲಿ ಸೇರಬೇಕೆಂದು ಆಹ್ವಾನ ನೀಡಿದರು. ಅಸದುಲ್ ಖವಾನಿನ್, ಶಾಜಿ ರಾಜ ಮತ್ತಿತರ ಸರದಾರರನ್ನು ಈ ಊರನ್ನು ನೋಡಿಕೊಳ್ಳುವ ಜವಾಬ್ದಾರಿಯನ್ನು ವಹಿಸಿಕೊಟ್ಟು ನವಾಬ್ ಸಾಹೇಬರು ಮತ್ತು ಸಂಗಡಿಗರೊಂದಿಗೆ ಬಾದಶಾಹರನ್ನು ಭೇಟಿಮಾಡಲು ಹೊರಟರು. ನವಾಬ್ ಸಾಹೇಬರು ಬಾದಶಾಹರನ್ನು ಭೇಟಿಮಾಡಲು ಹೋಗುವಾಗ ಆಗಲೇ ಸಂಗ್ರಹಿಸಲಾದ ಅಪಾರ ಸಂಪತ್ತು, ನಗದು, ಚಿನ್ನ ವಜ್ರವೈಢೂರ್ಯಗಳು ತುಂಬಿದ ಸಂದೂಕ, ವಿವಿಧ ತರದ ಉಡುಗೊರೆಗಳು, ಕಾಣಿಕೆಗಳನ್ನು ತಮ್ಮ ಜೊತೆಗೆ ತೆಗೆದುಕೊಂಡು ರಾಜಧಾನಿಯತ್ತ ಪ್ರಯಾಣಬೆಳೆಸಿದರು. ಪ್ರತೀ ಹಂತದ ಪ್ರಯಾಣವನ್ನು ಮುಗಿಸಿ ಕೃಷ್ಣಾನದಿಯ ದಡಕ್ಕೆ ತಲಪಿದರು. ವೀರ ಹಜ್ರತ್ ಬಾದಶಾಹರಿಗೆ ನವಾಬ್ ಸಾಹೇಬರು ಮತ್ತು ತಂಡದವರು ಆಗಮಿಸುತ್ತಿದ್ದಾರೆಂಬ ವರ್ತಮಾನ ತಿಳಿದು ತುಂಬ ಸಂತಸಪಟು ್ಟಕೊಂಡರು, ತಮ್ಮ ಘನತೆಯ ಶ್ರೀಮಂತಿಕೆಯನ್ನು ತೋರುತ್ತ ಸ್ವತಹ ಬಾದಶಾಹರು ತಮ್ಮ ಪವಿತ್ರ ರಾಜಧಾನಿ ಮುಹಮ್ಮದ್‌ಪುರದಿಂದ ಹೊರಟು ಅವರನ್ನು ಎದುರುಗೊಂಡು ಸ್ವಾಗತಿಸಲು ಹೊರಟರು.

ವೀರ ಹಜ್ರತ್ ಬಾದಶಾಹರ ಸತ್ಕಾರ, ಗೌರವವನ್ನು ಕಂಡು ಅಸುಪಾಸಿನ ಎಲ್ಲಾ ರಾಜ್ಯಗಳ ಜನ ನೋಡುತ್ತಿದ್ದು ಆಶ್ಚರ್ಯ ಚಕಿತರಾಗಿದ್ದರು. ಹಜ್ರತ್ ಬಾದಶಾಹರು ನವಾಬ್ ಸಾಹೇಬರಿಗೆ ತುಂಬ ರೀತಿಯ ಉಡುಗೊರೆ, ಗೌರವಗಳನ್ನು ನೀಡಿ ಗೌರವಿಸಿದರು. **ಖಿಲ್‌ಅತ್ ಜಾಹೋಜಲಾಲ್** (ಬಾದಶಾಹಿ ಗೌರವದ ಪೋಷಾಕು) ತೊಡಿಸಿ ಮನ್ನಣೆ ನೀಡಿದರು. ಅವರ ಸೊಂಟಕ್ಕೆ ವಜ್ರ ವೈಢೂರ್ಯಗಳಿಂದ ಸಿಂಗರಿಸಲ್ಪಟ್ಟ ಒರಸೆಯೊಂದಿಗೆ ಶಾಹಿ ಕತ್ತಿಯನ್ನು ಸಿಕ್ಕಿಸಿ ಗೌರವಿಸಿದರು. ಚಿನ್ನದ ಲಗಾಮು ಹಾಕಿದ ಮಜಬೂತಾದ ಕುದುರೆಯನ್ನು ಉಡುಗೊರೆಯಾಗಿ ನೀಡಿದರು. ಪರ್ವತವನ್ನು ಪುಡಿಗಟ್ಟುವ ತಾಕತ್ತಿನ ದೊಡ್ಡ ಆನೆಯನ್ನೂ ನೀಡುವ ಮೂಲಕ ಅವರ ರಹ್ಮತ್‌ನ ಮುಗಿಲಿನಿಂದ ನವಾಬ್ ಸಾಹೇಬರ ಮೇಲೆ ಮಳೆಗೆರೆದರು. ಹೀಗೆ ಅವರನ್ನು ಗೌರವಿಸಿ ನಾಲ್ಕುದಿನ ಅರಮನೆಯಲ್ಲಿ ತನ್ನಜೊತೆ ಇರಿಸಿ ಅತಿಥಿ ಸತ್ಕಾರ ನೀಡಿದರು. ತನ್ನ ಆಸ್ಥಾನದ ಎಲ್ಲ ಗೌರವಾನ್ವಿತ ಮಂತ್ರಿಗಳು, ಸರದಾರರು, ಪಂಡಿತರು, ತಜ್ಞರನ್ನು ಅವರಿಗೆ ಪರಿಚಯಿಸಿದರು. ಐದನೆಯ ದಿನ ಜನ ನೋಡಲು ಕಾತರಿಸುವ, ದೇವರು ಕೂಡ ನೋಡಿ ಸಂತಸ ಪಡುವಂತಿರುವ ತಮ್ಮ ಎಲ್ಲ ಭಾರಿ ಸಂಖ್ಯೆಯ ಸೈನ್ಯವನ್ನು ಅವರ ವಶಕ್ಕೆ ನೀಡಿದರು. ವಿಶ್ವದ ಇನ್ನಷ್ಟು ವೈಭವದ ವಿಜಯ ಯಾತ್ರೆಯಲ್ಲಿ ಪಾಲ್ಗೊಳ್ಳಲು ನವಾಬ್ ಸಾಹೇಬರು ಪ್ರಯಾಣಬೆಳೆಸಿದರು.

ನಜ್ಮ್

ಝುಹೆ ಶಾಹೆ ಗಾಝಿ ಕೆ ಇಕ್‌ಲೀಮೆ ದೀನ್
ಡರಾವರ್ದ್ ಯಕ್ಸರ್ ಬಝೇರೆ ನಗೀನ್

ಎಷ್ಟೊಂದು ಪುಣ್ಯವಂತರು ಬಾದಶಾಹರು ದುನಿಯಾ ಎ ಇಸ್ಲಾಮ್
ಖಂಡಿತವಾಗಿಯೂ ಬರಲಿದೆ ಅವರ ಹಿಡಿತಕ್ಕೆ ಒಳಗಾಗಲಿದೆ ಜಗವು

ಖದ್ಯೂ ಕೆ ಗರ್ದೇದ್ ರೋಝೆ ನಹಸ್ತ್
ಝೆ ಗರ್ದೆ ರಹಶ್ ಕಾರ್ ಗರ್ದೂ ದುರಸ್ತ್
ಬಾದಶಾಹರು ಮಾಡುವರು ಕೆಡುಕಿನ ನಹಸ್ತ್ ದಿನ
ಅವರ ಹಾದಿಯ ಘನತೆಯಿಂದ ಬದಲಿಸುವರು ಆಗಿ ಶುಭದಿನ.

ಹುಮಾಯೆ ಝಫರ್ ಗಶ್ತ ಗಿರ್ದೆ ಸರಶ್
ಸರೆ ತಾಜ್‌ದಾರಾನ್ ಬುವತ್ ಬರ್ ದರಶ್
ಅವರ ಶಿರದ ನಾಲ್ಕೂ ದಿಕ್ಕಿನಲಿ ಶುಭ ಹುಮಾ ಪಕ್ಷಿ ಚಲಿಸುತ್ತಿರುವುದು
ಅವರ ಆಸ್ಥಾನದ ಚೌಕಟ್ಟಿನಲಿ ಬಾದಶಾಹರುಗಳ ತಲೆಗಳು ಬಾಗುತಿರುವುದು.

ಜಹಾಂ ತಾಝೆ ನೂರೆ ನಬಿ ರೋಶನಸ್ತ್
ಝೆ ಅಂಜುಂ ಫಲಕ್ ಇರ್ಝ್ಝತೇ ಗುಲ್ಶನಸ್ತ್
ಎಲ್ಲಿಯ ವರೆಗೆ ಪ್ರವಾದಿಯ ಪ್ರಭೆ ಬೆಳಗಗುತ್ತಿರುವುದೋ
ಆಕಾಶದ ತಾರೆಗಳು ನಮ್ಮ ಭೂಮಿಯ ಘನತೆಯೆನಿಸುವುದು.

ಮುಬಾರಕ್ ಬಶಹಬಾದ್ ಫತ್ಹೋ ಝಫರ್
ಝೆ ಹುಕುಮಶ್ ರವಾಂ ಗಶ್ತ್ ಹರ್ ಬೆಹರೋ ಬರ್
ಶುಭವಾಗಲಿ ವಿಜಯಶಾಲಿ ಮಾದಶಾಹನ ವೈಭವದ ಘನತೆಗೆ
ಅವರ ಹುಕೂಮತಿನಿಂದ ನಡೆಯುತಿದೆ ಸಾಗರ ಭುವಿ ಜಗತು

ಭುವತ್ ಶಿಜ್ದಗಾಹೆ ಜಹಾಂ ದರ್ಗಹಶ್
ಜಬೀನೆ ಫಲಕ್ ವಕ್ಫೆ ಖಾಕೆ ರಹಶ್
ಅವರ ದರಬಾರಿನ ಸ್ಥಾನ ವಿಶ್ವದ ಪ್ರಾರ್ಥನೆಯ ಜಾಗ
ಆಕಾಶದ ಹಣೆಯೂ ಅವರ ಹಾದಿಯ ಮಣ್ಣಾಗಿ ಬಿಡುವುದಾಗ.
....(ಈ ಪದ್ಯದ ಜಾಗ ಖಾಲಿಯಾಗಿದೆ)

ಬಾದಶಾಹರ ಘನತೆ ವೈಭವಗಳು ಪೂರ್ವದಿಂದ ಹುಟ್ಟುವ ಸೂರ್ಯನಂತೆ ಹೊಳೆಯುತ್ತ, ಬೆಳಗುತ್ತಿದೆ. ವಿಶ್ವದ ದೊಡ್ಡ ದೊಡ್ಡ ಮರ್ಯಾದಸ್ಥ ಜನರು ಬಾದಶಾಹರ ಗೌರವದ ಧ್ವಜವನ್ನು ಎತ್ತಿ ಹಿಡಿದಿದ್ದಾರೆ. ಹೀಗೆಯೇ ವಿಶ್ವದ ಅನೇಕ ದೇಶಗಳ ಘನತೆವೆತ್ತ ಬಾದಶಾಹರು ಕೂಡ ತಮ್ಮ ಮಾತುಗಳ ಮೂಲಕ ಹಜ್ರತ್ ಬಾದಶಾಹರನ್ನು ಹೊಗಳಿ ಗುಣಗಾನ ಮಾಡುತ್ತಿದ್ದರು. ಬಾದಶಾಹರ ವೈಭವದ ಹಿರಿಮೆ ಗರಿಮೆಯನ್ನು ಕೂಡ ತಮ್ಮದೇ ಆದ ರೀತಿಯಲ್ಲಿ ಹಾಡಿ ಹೊಗಳುತ್ತಿದ್ದರು.

■

*

ಅಧ್ಯಾಯ – ೧೯

ಮತ್ತೆ ಹಜರತ್ ಗೇಸೂದ ರಾಜರ ದರ್ಶನಕ್ಕೆ

ದಿನಾಂಕ ೯ರ ಜಿಲ್ ಖಾಯಿದ ತಿಂಗಳ ಹಿಜರಿ ವರ್ಷ ೧೧೩೭ರಲ್ಲಿ ಹಜ್ರತ್ ವೀರ ಬಾದಶಾಹರು ಮಖ್‌ದೂಮೆ ಆಲಮೇ ಹಖೀಕತೋ ಮಜಾಸ್ ಹಜ್ರತ್ ಸಯ್ಯದ್ ಮುಹಮ್ಮದ್ ಹುಸೇನ್ (ಖ್ವಾಜಾ ಬಂದೇ ನವಾಜ್) ಗೇಸುದರಾಜ್‌ರವರ ಉರೂಸಿನ ಪುಣ್ಯದಿನದಲ್ಲಿ ಭಾಗವಹಿಸುವುದಕ್ಕಾಗಿ ಗುಲ್ಬರ್ಗಾಕ್ಕೆ ಮಹಮ್ಮದ್‌ಪುರದಿಂದ (ಬಿಜಾಪುರದಿಂದ) ಹೊರಟರು. ತಮ್ಮ ಗೌರವಾನ್ವಿತ ಧ್ವಜವನ್ನು ಎತ್ತರದಿಂದ ಹಾರಿಸುತ್ತ, ತಮ್ಮ ವಿಜಯೋತ್ಸವದ ಸುದ್ದಿಯನ್ನು ಘೋಷಣೆಗಳ ಮೂಲಕ ಹಬ್ಬಿಸುತ್ತಾ, ಆಕಾಶದ ತುದಿಯಲ್ಲಿ ಛಾಪಿಸುತ್ತಾ ಪಯಣಿಸಿದರು.

ನಜ್ಮ್

ಬ ಉರುಸೇ ಹಜ್‌ರತೇ ಮಗ್ದೂಂ ಕುಸ್ರವೋ ಗಾಝಿ
ಚ್ಯೂಂ ಬರ್ ಸಮಂದೇ ಸಾಅದತ್ ನಶಿಸ್ತ್ ವ ಗಸ್ತ್ ರಂವಾ
ವೀರ ಹಜ್ರತ್ ಬಾದಶಾಹರು ಹಜ್‌ರತ್ ಮಗ್ದೂಮರ ಉರೂಸಿಗೆ
ಪವಿತ್ರ ಕುದುರೆಯ ಮೇಲೆ ಕೂತು ನಾಗಾಲೋಟದಲಿ ಸಾಗುತ ಪಯಣಿಸಿದರಲ್ಲಿಗೆ.

ಬರಹೇ ಗುಝುರ್ ಶಹನ್‌ಶಾಹೆ ದೀನ್ ಜಬೀ ಸೋಝುಂದ್
ಝು ಬಹರೆ ಸಜ್‌ದಯೆ ಶುಕ್‌ರಾನಯೇ ಸರ್‌ವರಾನೇ ಜಹಾಂ
ಅವರ ಹಾದಿಯಲಿ ಬಾದಶಾಹ ಕೂಡ ತಮ್ಮ ಹಣೆಯನು ತಗ್ಗಿಸುವರು
ಕೃತಜ್ಞತೆಯ ಸೂಸುವ ನಮಸ್ಕಾರ ವಿಶ್ವದ ಬಾದಶಾಹರು ಕೂಡ ಮಾಡುವರು.

ಮಾತಿನಲ್ಲಿ ಹೇಳಲಾಗದು, ಈ ಸಂತ ಶ್ರೇಷ್ಠರ ಪವಿತ್ರ ಉರೂಸಿನ

ಸಂಭ್ರಮವವನ್ನು. ಮೆಹಫಿಲ್‌ನ ಸಭೆಯ ವೈಭವದ ವಿವರಗಳನ್ನು ನಮ್ಮ ಲೇಖನಿಯಲ್ಲಿ ಮೂಡಿಸಲು ಸಾಧ್ಯವಾಗದು.

ಘನತೆ ಹಿರಿಮೆಯ ಶ್ರೇಷ್ಠರೆನಿಸಿದ ಹಜ್ರತ್ ಬಾದಶಾಹರು ಖುತುಬುಲ್ ಅಖ್ತಾಬರ ಪವಿತ್ರ ಉರೂಸಿನ ರಸ್ತೆಯಲ್ಲಿ ನಡೆಯುತ್ತ ಹೋಗುವಾಗ ಅಲ್ಲಿನ ಇಲಾಖೆಯ ಎಲ್ಲ ಪ್ರಮುಖ ಗೌರವಾನ್ವಿತ ವ್ಯಕ್ತಿಗಳು, ಶೂರ ವೀರರ ಗುಂಪುಗಳು ಒಟ್ಟಾಗಿ ಜೊತೆ ಸೇರಿ ಕಾಲ್ನಡಿಗೆಯಲ್ಲಿ ಚಲಿಸುತ್ತಾ ತಮ್ಮೊಳಗೆ ತುಂಬ ಹೆಮ್ಮೆ ಪಟ್ಟುಕೊಂಡರು. ಹೀಗೆ ಪ್ರತೀ ವರ್ಷದ ಜಿಲ್ ಖಾಯಿದಾ ತಿಂಗಳಲ್ಲಿನ ಇದೇ ಸಂದರ್ಭದಲ್ಲಿ ಬಾದಶಾಹರ ಪಟ್ಟಾಭಿಷೇಖದ ವಾರ್ಷಿಕ ಸಂಭ್ರಮವೂ ಆಚರಿಸುವ ಪರಂಪರೆ ಹುಟ್ಟಿಕೊಂಡಿತು. ಆಸುಪಾಸಿನ ರಾಜ್ಯದ ಅರಸರು ಕೂಡ ಬಾದಶಾಹರು ಆಚರಿಸುತ್ತಿರುವಂತೆ ತಮ್ಮ ಪಟ್ಟಾಭಿಷೇಖದ ವಾರ್ಷಿಕ ಉತ್ಸವವನ್ನು ಈ ಉರೂಸ್ ಸಮಾರಂಭದ ಜೊತೆಗೆ ಆಚರಿಸತೊಡಗಿದರು. ಈ ಸಮಾರಂಭದ ವೈಭವವನ್ನು ಹೆಚ್ಚಿಸಲು ಏಳು ವಿಶ್ವದ ಸರದಾರರನ್ನು ಆಹ್ವಾನಿಸಿ ಈ ಸಂತಸದ ಸಂಭ್ರಮದಲ್ಲಿ ಪಾಲ್ಗೊಳ್ಳಲು ಅವಕಾಶಮಾಡಿಕೊಡಲಾಗಿತ್ತು. ಸಂತಸದ ಕ್ಷಣಗಳನ್ನು ತುಂಬುವ ಸಂಗೀತದ ಲಯದಲ್ಲಿ ಆಕಾಶದಲ್ಲಿ ಡೋಲು ಬಾರಿಸುತ್ತ ಹಾಡುತ್ತಿದ್ದರೆನಿಸುತ್ತದೆ. ಕಾಮನಬಿಲ್ಲುಗಳು ಸಂಗೀತದ ಲಯದಲ್ಲಿ ನಕ್ಷತ್ರಗಳಂತೆ ಕುಣಿದು ಕುಪ್ಪಳಿಸುತ್ತಿವೆ. ಕಾಡುಗಳು ಪರ್ವತಗಳು ನೃತ್ಯಗಾತಿಯರ ಹೆಜ್ಜೆಗಳ ತಾಳಗಳಲ್ಲಿ ಮಗ್ನವಾಗಿ ಎತ್ತರದ ತುದಿಯಿಂದ ದೊಡ್ಡ ಪಕ್ಷಿಗಳು ಹಾರಾಡಿ ಕುಣಿವಂತೆ ಕಾಣುತ್ತಿತ್ತು. ಶಾಹೀನ್ ಪಕ್ಷಿ ತನ್ನ ಹಾರಾಡುವ ಪರಿಣಿತಿಯ ಪ್ರದರ್ಶನವನ್ನು ನೀಡತೊಡಗುತ್ತದೆ. ಸಾಮಾನ್ಯವಾಗಿ ಮೌನಿಯಾಗಿರುವ ಪಕ್ಷಿಗಳು ಕೂಡ ತಮ್ಮ ಕಣ್ಣುಗಳನ್ನು ಮಿಟಕಿಸುತ್ತ ಈ ಸಮಾರಂಭದ ವೈಭವವನ್ನು ಆಸ್ವಾದಿಸುತ್ತಿದ್ದವು. ಜಿಂಕೆಗಳ ಮರಿಗಳು ಅಲ್ಲಿನ ಕಾಡಿನಲ್ಲಿ ತಾಯಿ ಜಿಂಕೆಗಳ ಮಡಿಲಲ್ಲಿ ಬಂದಿಯಾಗಿದ್ದು, ಸಂಗೀತ ಸಮಾರಂಭದ ದೃಶ್ಯಗಳನ್ನು ಆಸ್ವಾದಿಸುವ ತೀವ್ರವಾದ ತುಡಿತವುಂಟಾಗಿ ಅಲ್ಲೇ ನರ್ತಿಸುವ ಆಸೆಮೂಡಿ ಕುಣಿದಾಡ ತೊಡಗಿದವು.

ಹೀಗಯೇ ಗಂಡು ಜಿಂಕೆ ಈಗಷ್ಟೇ ಶಿಕಾರಿಗಳ ಜಾಲದೊಳಗೆ ಬಿದ್ದಂತೆ ತಾನು ಎಂದಿನಂತೆ ಸೆರೆಯಿಂದ ಹೊರಬರುವುದಕ್ಕೆ ತೊಳಲಾಡುವುದು ಬಿಟ್ಟು, ತನ್ನ ಬಲಿಷ್ಠ ಕಾಲುಗಳನ್ನು ಜಾಡಿಸುತ್ತಾ ಸಂಗೀತದ ಸಂಭ್ರಮದಲ್ಲಿ ಪಾಲುಗೊಳ್ಳಲು ತುಡಿಯುತ್ತಿದ್ದಂತೆ ಕಂಡುಬಂತು.

ನಜ್ಮ್

ಝುದಿಲ್ ಜೋಯಾನೆ ಸರೆಮಸ್ತೆ ಲಂಸೆ ಸಾಕ್
ಚುನಾ ಪುರ್‌ಷುದ್ ಝು ಇಶ್ರತ್ ಬಝ್ಮೆ ಆಫಾಕ್
ಸಾಕಿಯ ಸ್ಪರ್ಶದ ದೆಸೆಯಿಂದ ಹೃದಯ ಸಂತಸಗೊಂಡಿದೆ

ವೈಭವದ ಈ ಸಮಾರಂಭದ ಸಂತಸ ತುಂಬಿಬಂದ ಹಾಗಿದೆ.

ಕಿ ಅಝ್ ಮೌಜೇ ಶರಾಬ್ ಅಂದರ್ ದರೋದಶ್ತ್
ಹಝಾರಾಂ ಕುಲ್‌ಝುಮ್ ಮಿ ಮೌಜ್‌ಝುನ್ ಗಶ್ತ್
ಶರಾಬಿನ ನೆರೆ ಉಕ್ಕಿ ಕಾಡು ನಾಡು ತುಂಬಿ ಹರಿಯುವುದು
ಸಾವಿರಾರು ಸಾಗರಗಳ ತೆರೆಗಳು ಹುಚ್ಚೆದ್ದು ಕುಣಿದವು.

ಹವಾ ರಂಗೆ ಬಹಾರೇಂ ಯಾಸ್ಮೀನ್ ಯಾಫ್ತ್
ಝಮೀನ್ ಆರಾಯಿಷೆ ಖುಲ್ದೇ ಬರೀಂ ಯಾಫ್ತ್
ವಾತವರಣದಲಿ ಸುಗಂಧ ಪುಷ್ಪಗಳ ಪರಿಮಳ ತುಂಬಿತು
ಭೂಮಿಯು ಸ್ವರ್ಗಸದೃಶ ಸುಂದರವಾಯಿತು.

ಝ ಶಬ್‌ನಂ ಶಬ್ಖ ಯಕ್ಸರ್ ಗಸ್ತ್ ಸೈರಾಬ್
ಬರಂಗೇ ಶೀಸಯೆ ಸಬ್ಝ್ ಅಝ್ ಮೈನಾಬ್
ಇಬ್ಬನಿ ತೊಟ್ಟಿಕ್ಕುವುದರಿಂದ ಹಸಿರು ಲೋಕ ತಪ್ತವಾಯಿತು
ಹಸಿರು ಗಾಜಿನ ಪಾತ್ರೆಯಿಂದ ನಶೆಯು ತೊಟ್ಟಿಕ್ಕುವಂತಾಯಿತು.

ಬುಲೇ ಸಾಗರ್ ಝ ಜೈಬೇ ಜುಮ್ಲ ಸರ್‌ಝದ್
ದೊಆಲಂ ಗೌತ ದರಿಯಾ ಖುವ್ವತೇ ಬರ್‌ಝದ್
ಶರಾಬಿನ ಬಟ್ಟಲಿನ ಒಡಲಿನಿಂದ ಸುಗಂಧ ಪುಷ್ಪ ಉದುರುವುದು
ಎರಡೂ ಜಗತ್ತು ತನ್ನೆಲ್ಲ ಶಕ್ತಿಗೂಡಿಸಿ ಸಮುದ್ರದೊಳಗೆ ಜಿಗಿತಹೊಡೆಯುವುದು.

ಹೀಗೆ ಹಜ್ರತ್ ಬಾದಶಾಹರು ಮಹಮ್ಮದೀಯ ಧರ್ಮದ ಶ್ರೇಷ್ಠ ಗುಣಗಳಿಂದ ಈ ತಿಂಗಳ ೧೨ನೆಯ ದಿನಾಂಕದಂದು ಹಸನಾಬಾದ್ ಪಟ್ಟಣದ ಘನತೆಯನ್ನು ಹೆಚ್ಚಿಸಿ ಈ ಸಂತಸದ ಸಮಾರಂಭದ ವಾತಾವರಣವನ್ನು ಸಂಪೂರ್ಣಗೊಳಿಸಿದರು. ನವಾಬ್ ಸಾಹೇಬರು ಬಾದಶಾಹರ ಆಜ್ಞೆಯ ಮೇರೆಗೆ ಕರ್ನಾಟಕ ಮತ್ತು ಮಲೆನಾಡಿನ ರಾಜ್ಯಗಳತ್ತ ವಿಜಶಾಲಿ ಸೈನಿಕರೊಂದಿಗೆ ಈ ರಾಜ್ಯಗಳನ್ನು ವಶಪಡಿಸಿಕೊಳ್ಳುವುದಕ್ಕಾಗಿ ಪ್ರಯಾಣ ಮುಂದುವರಿಸಿದರು. ಹೊರಡುವಾಗ ಬಾದಶಾಹರ ಸಿಂಹಾಸನಕ್ಕೆ ಸಲಾಂ ಮಾಡಿ ನಮಸ್ಕರಿಸಿದರು.

ನವಾಬ್ ಸಾಹೇಬರಿಗೆ ಬಾದಶಾಹರು ತಮ್ಮ ದರ್ಬಾರಿನಲ್ಲಿ ಉನ್ನತ ದರ್ಜೆಯನ್ನು ನೀಡಿ ಗೌರವಿಸಿದರು. ಅವರ ಜೊತೆಯಲ್ಲಿ ದೊಡ್ಡದೊಡ್ಡ ಹೆಸರಾಂತ ಪ್ರಮುಖರು ಬಂದವರು ನವಾಬ್ ಸಾಹೇಬರಿಗೆ ಸಂದ ಈ ಗೌರವವನ್ನು ನೋಡಿ ಸಂತಸಪಟ್ಟರು. ಎರಡನೆಯ ದಿನ ಹಜ್ರತ್ ಬಾದಶಾಹರು ಅಲ್ಲಿಂದ ಹೊರಟು ದರ್ಗಾದ ಎದುರಿನಲ್ಲಿರುವ ದೊಡ್ಡ ಕೊಳದ ಕಡೆ ಹೋಗಿ ಅಲ್ಲಿನ ಎತ್ತರದ ಜಾಗದಲ್ಲಿ ಕೂತರು. ಈ ಕೊಳದಲ್ಲಿ ನೀರು ಕೋಳಿಗಳು ಅಲೆಗಳನ್ನೆಬ್ಬಿಸುತ್ತ ಈಜಾಡುತ್ತಿದ್ದವು.

ಅದರ ಹರಿಯುವ ನೀರಿನ ಸ್ವಾದವನ್ನು ಸವಿದವರ ಬದುಕು (ಸ್ವರ್ಗದ ಅಮೃತನೀರನ್ನು ಕುಡಿದು ಅಮರತ್ವಪಡೆದ) ಖಿಝುರ್ ನಬಿಯಂತಾಗುವುದು. ದರ್ಗಾ ಷರೀಫಿನ ಗುಂಬಜದ ಎತ್ತರ ಬಾದಶಾಹರ ಘನತೆಯ ಎದುರು ಆಶ್ಚರ್ಯಕರವಾದ ರೀತಿಯಲ್ಲಿ ಢಿಕ್ಕಿಹೊಡೆವಂತಿತ್ತು. ಅಲ್ಲಿನ ಭೂಮಿಯು ಈ ವರ್ಣರಂಜಿತ ಸಂಭ್ರಮದ ಖುಷಿಯಲ್ಲಿ ಸ್ವರ್ಗದ ವಾತಾವರಣವನ್ನು ಸೃಷ್ಟಿಸಿತ್ತು. ಅತ್ಯಂತ ಮನೋಲ್ಲಾಸ ಸೂಸುವ ಹರಿದ್ವರ್ಣದ ಸೊಗಸಿನೊಂದಿಗೆ ಅಲ್ಲಿನ ವಾತಾವರಣವನ್ನು ಸಿಂಗರಿಸಿತ್ತು. ಅಲ್ಲಿನ ಸುತ್ತಮುತ್ತಲಿನ ತೋಟದಲ್ಲಿ ಮುಂಜಾವಿನ ಹವೆಯ ತಂಪಾದ ಓಟದ ಸಂಗೀತ ಎಂತಹ ಮನೋಲ್ಲಾಸವನ್ನು ನೀಡುತ್ತಿತ್ತೆಂದರೆ ಪ್ರತಿಯೊಂದು ಅರಳಿದ ಹೂವುಗಳಲ್ಲಿ ಯಾರೋ ಪರಿಣಿತ ಸಂಗೀತಗಾರನು ರಾಗವೊಂದನ್ನು ಮೀಟಿ ಸುಶ್ರಾವ್ಯ ತರಂಗದ ಅಲೆಗಳನ್ನು ಹರಡಿಸಿದಂತೆ ಅನಿಸುತ್ತಿತ್ತು. ಹಾಡುಗಾರರ ಹಾವಭಾವಗಳಿಂದ, ಕಣ್ಣುಗಳನ್ನು ಕುಣಿಸುತ್ತ ನೀಡುವ ಸನ್ನೆಗಳೊಂದಿಗೆ ನೃತ್ಯಗಾರರು ಕುಣಿಯುವ ಕುಣಿತದಿಂದ ಮೈಮರೆತ ಪ್ರೇಕ್ಷಕರು ಒಬ್ಬರ ಮೇಲೊಬ್ಬರು ಬಿದ್ದುಕೊಂಡಂತೆ ಚಕಿತರಾಗಿ ನೋಡುತ್ತಿದ್ದರು. ನೃತ್ಯಗಾತಿಯರು ಸೊಂಟವನ್ನು ತಿರುಗಿಸುತ್ತ ಪ್ರಷ್ಠಭಾಗವನ್ನು ಕುಣಿಸುತ್ತಿದ್ದುದರಿಂದ ಮಲ್ಲಿಗೆ, ಸೇವಂತಿಗೆ ಹೂಗಳ ಸಾವಿರಾರು ಗುಚ್ಛಗಳು ಅವರ ಮುಖವನ್ನು ಚುಂಬಿಸುತ್ತಿತ್ತು.

ಖಿತಾ

ಝ ರಕ್ಕಾಸಾನ್ ಜಹಾಂಶುದ್ ಇಸ್ರತ್ ಅಂದೋಝ್
ದಮೀದ್ ಅಝ್ ಹರ್ ತರಫ್ ಸದ್ ಶುದ್ ಎ ನೌರೋಝ್
ನೃತ್ಯಗಾತಿಯರ ನೃತ್ಯಕ್ಕೆ ಮರುಳಾಗಿ ವಿಶ್ವ ಸಂತಸದಿಂದ ಓಲಾಡಿತು
ಎಲ್ಲೆಡೆ ಬೆಳಕು ಹರಡತೊಡಗಿದಂತೆ ಮುಂಜಾವಿನ ವಾತಾರಣ ಮೂಡಿತು.

ಫರೋಝ ಶುದ್ ಚರಾಗೆ ಕಾಮ್‌ರಾನಿ
ಮೊಹಿಯ ಗಶ್ತ್ ಬಝ್ಮೆ ಶಾದ್‌ಮಾನಿ
ವಿಜಯಶಾಲಿ ದೀಪ ಬೆಳಕು ತಂದಿತು
ಎಲ್ಲರಿಗೂ ಸಂತಸದ ಸಮಾರಂಭ ಲಭಿಸಿತು.

ಕಾಡು ಮತ್ತು ನಾಡಿನಲ್ಲಿ ಈ ರಂಗುರಂಗಿನ ಸಮಾರಂಭಗಳಿಂದ ವರ್ಣರಂಜಿತವಾಗಿ ಸಿಂಹ ಮತ್ತು ಚಿರತೆಗಳು ಒಂದನ್ನೊಂದು ಸೇರಿಕೊಂಡು ಹವಳದ ಕೆಂಪು ಚಿಪ್ಪಿನಂತಾದವು. ಕಡವೆಯ ಮತ್ತು ಜಿಂಕೆಯ ಕೋಡುಗಳಿಂದ ಹೊಳೆಯು ಮಾಣಿಕ್ಯಗಳನ್ನು ಸಿಂಪಡಿಸುವುದರಿಂದ ಪರ್ವತಗಳಲ್ಲಿಂದ ನೀರಿನ ಅಬ್ಬಿಯಂತೆ ಬೀಳುತ್ತಿತ್ತು, ಅಬ್ಬಿಯಿಂದ ಸಿಡಿಯುವ ಹನಿಗಳ ಮೂಲಕ ಚಂದನದ ಪರಿಮಳ ಕಾಡಿನ ಕೃಷ್ಣಮೃಗದ ಉತ್ಪನ್ನವಾದ 'ಮುಷ್ಕ್'ನ ಸುವಾಸನೆಯೊಂದಿಗೆ ಬೆರೆತು

ಹೃದಯವನ್ನು ಪ್ರಫುಲ್ಲಗೊಳಿಸಿ ತಂಪಾಗಿಸಿತು. ಅಂಬರ್ ಅಥವಾ ಪನ್ನಂಬರದ ಸುಗಂಧದಿಂದ ಜನರ ಮನಸ್ಸು ಸ್ವರ್ಗದ ಹೂಗೊಂಚಲುಗಳು ತಮ್ಮ ಸುತ್ತ ತಿರುಗುತ್ತಿರುವ ಉಲ್ಲಾಸದ ಅನುಭವ ಪಡೆಯುತ್ತಿತ್ತು. ಸಂತಸದ ಸಮಾರಂಭದಲ್ಲಿ ಪ್ರಫುಲ್ಲ ವದನರಾಗಿ ಕೂತಿದ್ದ ಮಹಾನುಭಾವರ ಭುಜದಿಂದ ಭುಜಕ್ಕೆ ತಾಗುವಂತೆ ಲೋಬಾನದ ಕುಂಡದಲ್ಲಿ ಮುಷ್ಕನ ಸುಗಂಧದ ಹೊಗೆಯನ್ನು ಪರಂಪರೆಯ ಕ್ರಮದಂತೆ ಹರಡಿಸುತ್ತ ಒಬ್ಬರಿಂದೊಬ್ಬರಿಗೆ ಕೈ ಬದಲಾಯಿಸುತ್ತ ಎಲ್ಲರಿಗೂ ತಲಪುವಂತೆ ಸಾಗುತ್ತಿತ್ತು.

ನಜ್ಮ್

ಝಹೇ ಮುಝುಮ್ಮರ್ ಬಜ್ಮೆ ಆಂ ಶಾಹೆ ದೀನ್
ದಝೂ ಗರ್ದಿಶ್ ಅಮೋಕ್ತೆ ಚರ್ಖೇ ಬರೀನ್
ಧರ್ಮನಿಷ್ಠ ಬಾದಶಾಹರ ಘನತೆಯ ಸುಗಂಧಹೊಗೆಯ ಆಘ್ರಾಣಿಸುವ ಸಭೆಯಿದು
ಆಕಾಶವೂ ತಿರುಗುವ ತನ್ನ ಗುಣವನ್ನು ಪ್ರದರ್ಶಿಸುತ್ತಿರುವುದು.

ಚ್ಯೂಂ ಕೋಹೇಸ್ತೆ ಬಝುದ್ ಅಖ್ಲ್ ಹೈರಾನ್ ಬೂದ್
ಕೆ ಚೌಗಾನೆ ವೂ ದಶ್ತೆ ಖೂಬಾನೆ ಬೂದ್
ಅಲ್ಲಿನ ಪರ್ವತಗಳು ಕೂಡ ಆಶ್ಚರ್ಯ ಚಕಿತವಾಗಿದ್ದವು
ಯಾಕೆಂದರೆ ಅಲ್ಲಿನ ಮೈದಾನವು ಹರಿದ್ವರ್ಣದ ತೋಟವಾದವು.

ಚ್ಯೂಂ ಸೀಮಿ ಅಝೂರ್ ಆಂ ಆಶಿಫ್ತಾ ಅಯ್ ಮೂಯೇಂ
ಕುಶದ್ ಅಝ್‌ದುಕಾಂ ಝುಲ್ಫೆ ಮುಷ್ಕಿಂ ಬರೂಯೆ
ಅವರ ಕೂದಲುಗಳಿಗೆ ಮಲ್ಲಿಗೆಯ ಹೂ ಮುಡಿಸಲಾಗಿದೆ
ಹೊಗೆ ತೆರೆಸಿತು ಕೂದಲು, ಮುಖ ಮುಷ್ಕಿಯ ಪರಿಮಳ ಬೀರಿದೆ.

ಗುಲಾಬಿ ಹೂಗಳಿಂದ ತುಂಬಿದ ಗಿಡಗಳ ರಾಶಿಯಿಂದ ಈ ಹೂದೋಟದಲ್ಲಿ ಅಡ್ಡಾಡುವವರ ಮನಸ್ಸನ್ನು ಪ್ರಫುಲ್ಲಗೊಳಿಸುತ್ತಿತ್ತು. ಬಾದಶಾಹರ ಊಟದ ಸುವ್ಯವಸ್ಥೆಯ ದೊಡ್ಡ ಚಪ್ಪರ ಎಷ್ಟೊಂದು ವಿಶಾಲವಾಗಿಗತ್ತೆಂದರೆ ನೋಡುವವರಿಗೆ ಆಕಾಶವೂ ಒಂದು ರೊಟ್ಟಿಯಂತೆ ಕಾಣಿಸುತ್ತಿತ್ತು. ಬಾದಶಾಹರ ಸಮಾರಂಭದ ವೈಭವವನ್ನು ಎಲ್ಲಾ ಬರಹಗಾರರು ಲೇಖಕರು ಹಾಡಿ ಹೊಗಳುತ್ತಿದ್ದರು. ಬಾದಶಾಹರ ವಿಜಯೋತ್ಸವದ ಬಗ್ಗೆ ಶುಭಹಾರೈಕೆಗಳು ಮುತ್ತುಗಳುದಿರಿದಂತೆ ಹರಡಿದ್ದವು.

ನಾನು ಈ ವೈಭವದ ಮುಹಮ್ಮದ್ ನಾಮದ ಲೇಖಕ ನನಗೆ ಅವ್ಯಕ್ತ ಮೂಲದಿಂದ ಹೊಳೆದ ಆಶು ಕವನ 'ಖಸೀದ ಎ ಸಲಾಂ'ನ್ನು ನಜ್ಮ್ ಪಂಕ್ತಿಯನ್ನಾಗಿ ರಚಿಸಿ ಬಾದಶಾಹ ಹಜ್ರತರ ಮುಂದೆ ಇರಿಸಿದೆ. ಇದನ್ನು ಓದಿದ ಬಾದಶಾಹರು ಇದೊಂದು

ಅತ್ಯಂತ ಉತ್ತಮ ಕೃತಿಯೆಂದೂ, ಎಲ್ಲರಚನೆಗಳಿಗಿಂತ ಭಿನ್ನ ಆಯಾಮವನ್ನು ಪ್ರದರ್ಶಿಸಿದೆ. ಅಲ್ಲಿ ಸೇರಿದ ಸಭಿಕ ಶ್ರೋತೃಗಳು ಈ ಖಸೀದ ದ್ವಿಪದಿಯನ್ನು ತುಂಬ ಮೆಚ್ಚಿ ತಲೆದೂಗಿದರು. ಈ ಖಸೀದದ ಒಂದು ಮಾದರಿಯನ್ನು ಇಲ್ಲಿ ನೀಡುತ್ತಿದ್ದೇನೆ.

ಖಸೀದ (ಹಜ್ರತ್ ಬಂದೇನವಾಜರ ಸಲಾಂ ಗೀತೆ)

ಅಸ್ಸಲಾಂ ಎ ಮಝ್‌ಹರೆ ಅಸ್ರಾರೆ ರಬ್ಬುಲ್ ಆಲಮೀನ್
ಅಸ್ಸಲಾಂ ಏ ಗೌಹರೇ ಖತಮುಲ್ ಮುರ್ಸಲೀನ್
ಸೃಷ್ಟಿಕರ್ತನ ರಹಸ್ಯಗಳ ಕನ್ನಡಿ ನೀವು ನಿಮಗೆ ಸಲಾಂ
ಪ್ರವಾದಿಯವರು ಆಯ್ದ ಮುತ್ತು ನೀವು, ನಿಮಗೆ ಸಲಾಂ.

ಅಸ್ಸಲಾಂ ಎ ಸರ್ವರೇ ದೀನ್ ಹಜ್ರತೆ ಗೇಸುದರಾಜ್
ಹರ್ ದೊ ಆಲಂ ರ ಬುವದ್ ಪೇಶೇ ದರತ್ ಸರ್ ಬರ್ ಝಮೀನ್
ಇಸ್ಲಾಂ ಧರ್ಮದ ಸರದಾರ ಹಜ್ರತ್ ಗೇಸುದರಾಜ್ ನಿಮಗೆ ಸಲಾಂ
ವಿಶ್ವದ ತಲೆಯು ನಿಮ್ಮ ಭೂಮಿಗೆ ನಮಿಸುವುದು ತಲೆಬಾಗಿ.

ಅಸ್ಸಲಾಂ ಅಯೆ ಮತ್ಲಯೆ ದೀವಾನೆ ಫೈಜೆ ಲಂಎಝಲ್
ಸಫ್ ಎ ಮದ್‌ಹತ್ ಬೂದ್ ಮಜ್ಮು ಎ ಇಲ್ಮುಲ್ ಯಕೀನ್
ಅಲ್ಲಾಹನ ಕೃಪೆಯ ನಿಮ್ಮ ದರ್ಬಾರಿನಿಂದ ಉದಯಿಸುವ ನಿಮಗೆ ಸಲಾಂ
ಅಲ್ಲಾಹನ ನಂಬಿಕೆಯ ಜ್ಞಾನ ಕುರಾನ್ ನಿಮ್ಮನ್ನು ಹೊಗಳುವುದು.

ಬರ್‌ಸರೆ ತಖ್ತೆ ರಿಸಾಲತ್ ದರ್ ಕಫೆ ಶಾಹೆ ರುಸುಲ್
ಹಲ್ಕಯೆ ಗೇಸೂಯೆ ಮುಷ್ಕಿ ಶುಮಾ ಅಂಗುಸ್ತರೀನ್
ನಿಮ್ಮ ತಲೆ ಪ್ರವಾದಿಯ ತಲೆದಿಂಬಿನ ಕೆಳಗಿದೆ, ನಿಮ್ಮ ಹಸ್ತ ಪ್ರವಾದಿಯ ಹಸ್ತದಲಿ
ಮುಷ್ಕ ಪರಿಮಳದ ನಿಮ್ಮ ಕೂದಲರಾಶಿ ಉಂಗುರದಂತೆ.

ಏಯ್ ಹಸನ್ ಖುಲ್ಕಿ ಹುಸೈನ್ ಆಯೀನ್ ಝು ರೆಹಾನೆ ಕಸ್‌ಲತ್
ಸರ್ ಖತೆ ಅರ್‌ವಾಹ್ ದಾರತ್ ದರ್ ನಝರ್ ರೂಹುಲ್ ಅಮೀನ್
ಓ ಇಮಾಮ್ ಹಸನ್‌ರ ಗುಣವಂತ, ಇಮಾಮ್ ಹುಸೈನರ ಗುಣದ ದರ್ಪಣದಂತೆ ನಿಮ್ಮ ನಡತೆ
ನಿಮ್ಮ ದರ್ಜೆ ಹಜ್ರತ್ ಜಿಬ್ರೀಲ್ ಆತ್ಮಕ್ಕೆ ಶಾಂತಿನೀಡುವ ದೂತನ ದೃಷ್ಟಿಯಲಿ ಉನ್ನತವೆನಿಸಿದೆ.

ಬಾ ಮುಹಮ್ಮದ್ ಶಾಹೆ ಗಾಝಿ ಶುದ್ ಝು ಫೈಝು ಎತಿಕಾತ್
ಗರ್ಮೆ ತೌಫ ದರ್ಗಹತ್ ಎಯ್ ಸರ್ವರೇ ದುನಿವೊ ದೀನ್

ಬಂದೇನವಾಜರ ಕೃಪೆಯಿಂದ ಮುಹಮ್ಮದ್ ಶಾಹ ಆದರು ವೀರ ಬಾದಶಾಹ
ಅವರ ದರ್ಗಾದ ಪ್ರದಕ್ಷಿಣೆಯಲ್ಲಿ ನಿರತರು ವಿಶ್ವದ ಖ್ಯಾತ ಬಾದಶಾಹರು.

ಕೋಸೆ ಎಕ್‌ತಾಲಿ ಸದಾಯೆ ಪತ್ಹ್ ಓ ನಸ್ರ್ ಇಕ್‌ಲೀನೆ ವೂ
ಅಶ್ಕಿಕೋ ನಾಮೇ ವಾಲಾಯಿಶ್ ಬಚರ್‌ಖೇ ಹಫ್ತ್‌ಮೀನ್
ಅವರ ಒಂದು ಚಪ್ಪಾಳೆಯ ಸದ್ದು ಸಾಕು, ವಿಶ್ವವು ಕೈವಶವಾಗುವುದು
ಅವರ ನಾಮದ ಪ್ರಭೆ ಸಪ್ತ ಆಕಾಶದಲಿ ಹರಡಿರುವುದು.

ಸದ್ ಹರ್ಘೂರ ಹಂ ಚ್ಯೂಂ ಖೈಸರ್ ಗಿರ್ದ್ ಖಶ್‌ರಶ್ ದರ್ ತವಾಫ್
ಖಾಸ್ ರೋಜೆ ದರ್ಗಹೆ ಜಾಹಶ್ ಬುವದ್ ಖಾಖಾನೆ ಚೀನ್
ಖೈಸರ್ ಬಾದಶಾಹ* ತನ್ನ ಮಹಲಲ್ಲಿ ಕೋಟಿಸಲ ಸುತ್ತಿದರೇನು ಬಂತು
ಗೇಸುದರಾಜರ ದರ್ಗಾದ ಕಸಗುಡಿಸುವವಗೆ ಸಾಟಿಯಾಗರು ಚೀನಾದ ರಾಜಮಹಾರಾಜರು.

***ರೋಮಿನ ಚಕ್ರವರ್ತಿ**

ಬಸ್‌ಕೆ ಜ್ಯೂದಶ್ ಬೇತಲಬ್ ಕಾಮೇ ದಿಲೆ ಆಲಂ ದೆಹತ್
ದಸ್ತೆ ಸಾಯಿಲ್ ಮಾನ್ದಾ ಅಝ್ಜಿಮಾ ಝರ್‌ದಾಸ್ತಲ್
ಅವರ ಅಭಯಹಸ್ತವೆಂದರೆ ಬೇಡದವರಿಗೂ ನೀಡುವ ದಯಾಪರತೆ ಇಹದಿ
ಕೈಎತ್ತಿ ಬೇಡುವರು ಇಲ್ಲಿ ಚಿನ್ನದ ದಾಸ್ತಾನುದಾರರು ಸಹ.

ತಬ್‌ಅಂ ಅಝ್ ಕೈಝ್ ಮದ್ಹತ್ ಬಾದ್ ದರ್ ಬಝ್ಮೆ ಬಯಾಂ
ರೂಹ್ ಬಕ್ಷಿ ಮಿ ಕುನದ್ ಝೀಂ ಶಾಹೆ ಬೈತೆ ದಿಲ್ ನಶೀಂ
ಅವರ ಹೊಗಳು ಗೀತೆ ಬರೆದು ನನ್ನ ಆರೋಗ್ಯ ಸುಧಾರಿಸಿ ದೊರೆಯಿತು ಆತ್ಮಶಾಂತಿ
ಇಲ್ಲಿನ ದರ್ಗಾದ ಶಾಹರಿಂದ ನನ್ನ ಆತ್ಮಕೆ ದೊರಕಿತು ಶಾಂತಿ

ಬಾದ್ ಯಾರಬ್ ಹಂ ಚ್ಯೂಂ ಗೇಸುವೇ ಹುಸೈನಿ ಶಾಹಬಾಝ್
ತಾ ಅಬದ್ ಉಮ್‌ರೇ ಮುಹಮ್ಮದ್ ಶಾಹೆ ದೀನೆ ಪರವರ್ ದರಾಝ್
ಯಾ ಅಲ್ಲಾಹ ಆಗಲಿ ಹುಸ್ಯೆನಿ ಶಾಹಬಾದರ ಉದ್ದ ಕೂದಲಿನಂತೆ
ಧರ್ಮನಿಷ್ಠಬಾದಶಾಹ ಮುಹಮ್ಮದ್ ಷಾರ ಆಯುಷ್ಯವೂ ದೀರ್ಘವಾಗಲಿ.

ಖಸೀದಾ ದರ್ ಮದ್‌ಹೆ ಮಮ್‌ದೂದ್(ಬಾದಶಾಹರ ಘನತೆಯ ಹೊಗಳು ಗೀತೆ)

ಹುಬ್ಬಿ ಶಹೆ ಇಕ್‌ಲೀನೆ ಹಿಮ್ಮತ್ ಖುಸ್ರವೋ ಆಲೀ ತಬಾರ್
ಗಶ್ತ ಅಝ್ ಗರ್ದೇ ರೆಹತ್ ಗರ್ದೂ ಗರ್ದಾಂ ಆಶ್ಕಾರ್

ನನ್ನ ಪ್ರಿಯ ವೀರ ಜಗದೇಕ ಬಾದಶಾಹ ಖುಸ್ರೊ ಮಹಾಚೇತನ
ಅವರ ಹಾದಿಯ ಧೂಳಿನಿಂದ ಆಗುವುದು ಹೊಸ ಜಗದ ಹುಟ್ಟು.

ಅಝ್ನಿಮೆ ಸರ್ ಚಸ್ಮಯೆ ಜೂದೆ ತೂ ಚ್ಯೂಂ ಜೌಹರ್ ಪರೋಶ್
ಮಿತವಾಂ ಜೌಹರ್ ಬದಾಮಾ ಕರ್ದನ್ ಅಶ್ ಚೌಬೇ ಖಯಾರ್
ನಿನ್ನ ಅಭಯದ ಒಸರಿನ ಮಾತ್ರದ ಬಗೆ ವಜ್ರವ್ಯಾಪಾರಿಗೆ ತಿಳಿದಿದೆ
ಅವನ್ನು ತನ್ನ ಕೋಲಿನಿಂದ ಹೇಗೆ ಸಾರಿಸಿ ಪೇರಿಸಿ ಇಡುವುದೆಂದು.

ಗರ್ ನಸೀಮೆ ಬಕ್ಷಸಸ್ತ್ ಬರ್ ಆತಿಷೆ ಸೋಝಾಂ ವಿಝುದ್
ಶೋಲ ಗರ್ದದ್ ಪೀಸಯ ಝುರ್ ದಾನಯೆ ಜೋಹರ್ ಶರಾರ್
ಮುಂಜಾವಿನ ತಾಜಾ ತಂಗಾಳಿ ಭುಗಿಲೆದ್ದ ಬೆಂಕಿಯ ಮೇಲೆ ಬಿದ್ದಾಗ
ಕಿಡಿಯೊಂದು ಸಂಪತ್ತಿನ ಚೀಲದ ಮೇಲೆ ಬಿದ್ದರೆ ಆಗುವುದು ಭುಗಿಲು.

ತೈಘೆ ಖೂರೇಝುತ್ ಕೆ ಮೀಝುದ್ ಅಝೋ ರಂಗೆ ಹಿನಾ
ಚರ್ಬ್ ದಸ್ತೀ ಕರ್ದ್ ಅಝ್ ಮಗ್‌ಝೂ ಅದೂ ದರ್ ಕಾರ್‌ಝಾರ್
ಬಾದಶಾಹರ ರಕ್ತದಾಹದ ತಲವಾರಿನಿಂದ ಹರಿಯುವುದು ಬಣ್ಣ ಮದುರಂಗಿಯ ತರದಿ
ತರಿದು ಚೂರುಚೂರಾಗಿಸುವುದು ಅದು ವೈರಿ ರುಂಡವ ರಣರಂಗದಿ.

ಗರ್ ಫತದ್ ಅಝ್ ಆತಿಷೇ ಖಹರತ್ ಶರಾರೆ ಬರ್ ಜಮೀನ್
ಸಬ್‌ಝು ಎಕ್ಸರ್ ಖೂನ್ ಪರೆ ತಾವೂಸ್ ಕೆಝುದ್ ದಾಗ್‌ದಾರ್
ಅವರ ಸಿಟ್ಟಿನ ಬೆಂಕಿಯ ಕಿಡಿ ಭೂಮಿಯ ಮೇಲೆ ಬಿದ್ದಂತೆ
ನವಿಲ ಹಸಿರುಗರಿಗೆ ಕಲೆಯಾಗಿ ಬದಲಾಗುವುದು ಕೆಂಬಣ್ಣದಂತೆ.

ಗರ್ಮ ಜವುಲಾನೆ ಕುಶ್ತ ತಾ ರುಖಶ್ ಚ್ಯೂಂ ದರ್ ಮೈದಾನೆ ರಿಝುಂ
ಫೌಜೆ ಆದಾ ರಫ್ತ ಬರ್ಬಾದೆ ಫನಾ ಹಂ ಚ್ಯೂಂ ಉಬಾರ್
ಯುದ್ಧ ಬಿಸಿಯೇರುವುದು ರಣರಂಗದಲಿ ಬಾದಶಾಹರ ಚಹರೆ ಕಂಡುಬರುವನಕ
ವೈರಿಗಳ ಸೈನ್ಯ ಮೆಲ್ಲಮೆಲ್ಲಗೆ ಉದುರಿ ಬೀಳುವುದು ಬೂದಿಯಂತೆ.

ಉಫ್ತದ್ ಅಝ್ ಕೋಹಾನೆ ಹುದ್ ಗಾವೋ ಝಮೀನ್ ದರ್ ಝೇರೆ ಕೌ
ಸದ್‌ಮತೇ ನಾಲಶ್ ಚ್ಯೂಂ ಅಂದಾಝುದ್ ಖಲಲ್ ದರ್ ಕೋಹೆಸಾರ್
ಕೆಳಗಿನ ಪದರದಿಂದ ಮೇಲೆ ಬರುತ್ತದೆ ಮಣ್ಣಿನರಾಶಿಯ ಒಳಗಿಂದ ಭೂಮಿ
ಬಾದಶಾಹನ ಚಪ್ಪಲಿಯ ಸದ್ದು ಪರ್ವತಗಳ ಮಧ್ಯದಿಂದ ಕೇಳಿಬಂದಂತೆ.

ದಿಲ್ ನಶೀನೆ ರುಖಶ್ ಕೆ ಖೂಬಾನ್ ರ ಝುಶೌಖೆ ಬಾಲಿ ವೂ
ಚ್ಯೂಂ ದಿಲೇ ಆಶಿಕ್ ರವದ್ ಅಝ್ ಕಫೆ ಅನಾನೆ ಇಖ್ತಿಯಾರ್
ಅವರ ಮುಖಾರವಿಂದದ ಚೆಲುವು ನೋಡುಗರ ಕಣ್ಣಿಗೆ ಹಬ್ಬ

ಪ್ರೇಮಿಯ ಹೃದಯ ತನ್ನ ಹಿಡಿತದಿಂದ ಕಳಚಿಕೊಂಡಂತೆ.

ತುಂದ್ ತೇಝೀ ಆಂಚುನೀ ಬಾಶತ್ ಅಗರ್ ದರ್‌ಝೆರೆ ಆನ್
ಆಹುವೆ ಚಶ್ಮೆ ಬುತಾರ ನೀ ತವಾಂ ಕರ್ದನ್ ಶಿಕಾರ್
ಅವರ ಗಂಭೀರ ಚಂಚಲತೆಯ ತುಂಟಾಟ ಎಂತಿಹುದೆಂದರೆ
ಕುವರಿಯರ ಚಿಗರೆಗಣ್ಣುಗಳನು ಹಿಡಿದಿಡುವುದು ಶಿಕಾರಿಯಂತೆ.

ಸಬ್ಝಯೇ ಖತ್ತೆ ಬುತಾನ್‌ರ ಗರ್ದೆ ಖಿಜಿಲತ್ ಊ ದಹದ್
ಆನ್ ಸುಬುಕ್‌ರವ್ ಚ್ಯೂಂ ಕುನದ್ ಆಹಂಗೆ ಸೈರೇ ನೇಝುದಾರ್
ಕಪ್ಪುಬಿಳಿ ಪಟ್ಟೆಕುದರೆಯನು ಬಾದಶಹರು ಏರಿದಾಗ ಉಳಿದ ಕುದುರೆಗಳು ನಾಚುತ್ತವೆ
ಅವೆಷ್ಟೇ ವೇಗವಾಗಿರಲಿ, ಶಬ್ದವೇಗ ಮೀರಿ ಅವರ ಬಾಣ ತಲಪುವುದಾಗ.

ಸೂರತೆ ನುಸ್ರತ್ ಶುದ್ ಅಝ್ ಆಯಿನಯೇ ನಾಲಶ್ ಅಯಾನ್
ಶಾಹೆ ದೀನ್ ಚ್ಯೂಂ ಶುದ್ ಬರ್ ಆನ್ ರಕ್ಷೆ ಫಲಕ್ ಪೈಮಾಂ ಸವಾರ್
ಅದರ ಲಾಳದ ಹೊಳಪಿನಿಂದ ಯುದ್ಧದಲಿ ಜಯ ಪ್ರಾಪ್ತವಾಗುವುದು
ಬಾದಶಾಹ ವಾಯುವೇಗದ ಕುದುರೆಯ ಮೇಲೆ ಸವಾರಿಯಾದಾಗ.

ಈಂ ದುವಾ ಗರ್ದೆದ್ ವಿರ್ದ್ ಜುಮ್ಲಾ ಶಾಹಾನೆ ಜಹಾನ್
ದರ್ ಸನಾಯೆ ಖುಸ್ರವೋ ಗಾಝಿ ಝೆ ರೂಯೆ ಇಫ್ತಿಕಾರ್
ಈ ದುವಾಗಳು ಮತ್ತೆ ಕೇಳಿಬರುತಿರಲಿ ವಿಶ್ವದ ಎಲ್ಲ ಬಾದಶಾಹರು
ಹೆಮ್ಮೆಯಿಂದ, ವೀರ ಬಾದಶಾಹರ ಒಳಿತಿಗಾಗಿ ಪ್ರಾರ್ಥಿಸುವಾಗ.

ಬಾದ್ ಯಾರಬ್ ಹಂ ಚ್ಯೂಂ ಗೇಸುಯೇ ಹುಸೈನಿ ಶಾಹಬಾದ್
ತಾ ಅಬದ್ ಉಮ್ರೆ ಮುಹಮ್ಮದ್ ಶಾಹೆದೀನೆ ಪರ್‌ವರ್ ದರಾಝ್
ಯಾ ಅಲ್ಲಾಹ ಆಗಲಿ ಹುಸೈನಿ ಶಾಹಬಾದರ ಉದ್ದ ಕೂದಲಿನಂತೆ
ಧರ್ಮನಿಷ್ಠ ಬಾದಶಾಹ ಮುಹಮ್ಮದ್ ಷಾರ ಆಯುಷ್ಯವೂ ದೀರ್ಘವಾಗಲಿ.

ದರ್ಗಾಷರೀಫಿನ ಮುಂದೆ ಸೂಫಿ ಸಮಾದ ಸಂಗೀತ ಕೂಟದ ವ್ಯವಸ್ಥೆ

ಈ ತಿಂಗಳ ೧೬ನೇ ದಿನದಂದು ಹಜ್ರತ್ ಗೇಸುದರಾಜರ ಉರುಸಿನ ರಾತ್ರಿ ದೀಪ ಬೆಳಗುವ ಆಚರಣೆ ಶುರುವಾಗುತ್ತದೆ. ಬಾದಶಾಹರ ಆಜ್ಞೆಯಂತೆ ದರ್ಗಾದ ಎದುರು ಸಮಾ ಸಂಗೀತ ಕೂಟದ ವ್ಯವಸ್ಥೆ ಮಾಡಲಾಯಿತು. ಈ ಸಮಾರಂಭದ ಆಚರಣೆಯ ಅಂಗವಾಗಿ ರಂಗು ರಂಗಿನ ದೀಪಗುಚ್ಛಗಳನ್ನು ಸುತ್ತಲೂ ಜೋಡಿಸಿಡುವ ವ್ಯವಸ್ಥೆ ಮಾಡಲಾಗಿತ್ತು. ದರ್ಗಾದ ಅಭಿಮಾನಿ ಭಕ್ತರು ಈ ಸಮಾರಂಭವನ್ನು

ಕಣ್ತುಂಬ ನೋಡಿ ಸಂತಸಪಡಲು, ದೀಪದ ಆಕರ್ಷಣೆಯಿಂದ ತಮ್ಮ ರೆಕ್ಕೆಗಳನ್ನು ಅರಳಿಸಿದ ದುಂಬಿಗಳಂತೆ ಸುತ್ತ ಜಮಾಯಿಸಿದ್ದರು. ದೀಪಗಳು ಮತ್ತು ದೀಪಗುಚ್ಛಗಳ ಬೆಳಕಿನ ಪ್ರತಿಬಿಂಬ ಕೊಳದ ನೀರಿನಲ್ಲಿ ಪ್ರೇಮಿ ತನ್ನ ಪ್ರೇಮಿಕೆಯ ಸುಂದರ ಪ್ರತಿಬಿಂಬವನ್ನು ನೋಡಲು ಆಸೆಪಡುವ ರೀತಿಯಲ್ಲಿ ಪ್ರತಿಫಲಿಸುತ್ತಿತ್ತು. ಆಕಾಶದ ದೃಶ್ಯ ಈ ದೀಪ ವೈಭವವನ್ನು ಹೇಗೆ ಚಕಿತವಾಗಿ ನೋಡುತ್ತಿತ್ತೆಂದರೆ, ಸೂರ್ಯನ ರಶ್ಮಿಯ ಜಾಲದಲ್ಲಿ ವಿಶ್ವಕ್ಕೆ ಮತ್ತೊಂದು ಬೆಳಕು ನೀಡಿದಂತೆ ಆಗಿದೆಯೋ ಎಂಬಂತೆ, ಪೂರ್ವದಿಂದ ಪಶ್ಚಿಮದಿಕ್ಕಿನ ಕಡೆ ಚಲಿಸುವ ಬೆಳಕಿನ ಪುಂಜವು ರಾತ್ರಿಯಲಿ ಮತ್ತೆ ಮುಂಜಾವಿನ ಬೆಳಗು ಮೂಡಿಸಲು ಬಂದಿದೆಯೇನೋ ಎಂಬ ಅಚ್ಚರಿಯಲ್ಲಿ ಮುಳುಗಿತ್ತು. ಈ ವರ್ಣರಂಜಿತ ಬೆಳಕಿನ ಸಮಾರಂಭದ ಪೂರ್ಣ ದೃಶ್ಯವನ್ನು ಕಣ್ಣುಗಳು ತಮ್ಮ ದೃಷ್ಟಿಯನ್ನು ಆಕಾಶದೆತ್ತರಕ್ಕೆ ಏರಿಸುವ ಮೂಲಕ ನೋಡಲು ತವಕಿಸುತ್ತಿದ್ದವು.

ಪಟಾಕಿ ಬೆಳಕಿನ ಆತಿಷ್‌ಬಾಜಿಯ ಮೂಲಕ ಸ್ಫೋಟಕ ಪರಿಣತರು ಅತ್ಯಂತ ಸುಂದರ ಅದ್ಭುತ ದೃಶ್ಯಗಳನ್ನು ಪ್ರದರ್ಶಿಸಿ ಮನಸ್ಸನ್ನು ಸಂತಸದಲ್ಲಿ ಮುಳುಗುವಂತೆ ಮಾಡಿದರು. ಈ ಬೆಳಕಿನ ಪುಂಜಗಳ ವೈವಿಧ್ಯಮಯ ದೃಶ್ಯಗಳಿಂದಾಗಿ ಆಕಾಶದ ನಕ್ಷತ್ರಗಳ ಮಿನುಗಾಟಗಳು ಮತ್ತಷ್ಟು ಬೆಳಗಿದ್ದವು.

ಹೂವುಗಳು ಅರಳಿದಾಗ ಹೂದೋಟವು ಚಂದ್ರನಂತೆ ಬೆಳಗಿದವು. ಮಲ್ಲಿಗೆ ಹೂಗಳು ತಮ್ಮ ಸೆರಗಿನ ಎಡೆಗಳಿಂದ ಅರಳಿ ಇಣುಕುತ್ತಿದ್ದವು. ಅಲ್ಲಿ ಹಬ್ಬಿದ ಬೆಳಕಿನ ಹರವು ಪರ್‌ವೀನನ ಪಂಜವನ್ನು ಕೂಡ ನುಚ್ಚುನೂರು ಮಾಡಿತ್ತು. ಸಹಸ್ರಾರು ದೀಪಗಳ ಬೆಳಕಿನ ಕಿರಣಗಳಿಂದ ಚಂದ್ರನೂ ಮತ್ತಷ್ಟು ಬೆಳಗುವಂತಾಯಿತು.

ಅಭ್ಯಾತ್

ಬಹರ್ ಸೂ ಅಝ್ ಪರೋಫೇ ಶಮ್ಮ ವ ಫಾನೂಸ್
ನಮೂದ ಝರ್ರರಾ ಕುರ್ಷಿದೆ ಪಾಬೂಸ್
ನಾಲ್ಕೂದಿಕ್ಕಿನಲಿ ಬೆಳಗುವ ದೀಪಗುಚ್ಛಗಳ ಬೆಳಕಿನಿಂದ
ಈ ಮಣ್ಣುಭೂಮಿಯು ಬೆಳಗಿಹುದು ಸೂರ್ಯನ ಕಿರಣದಂತೆ

ದರೋದಸ್ತ್ ಆಂಚಾ ಪುರ್‌ಗಸ್ತ್ ಅಝ್ ನೂರ್
ಕೆ ಹರ್ ಬರ್ಗ್ ಗಯಾ ಶುದ್ ಮಶ್‌ಅಲೇ ತೂರ್
ಕಾಡು ನಾಡುಗಳು ಬೆಳಕಿನಿಂದ ಝುಗಮಗಿಸಿದವು
ಪ್ರತೀ ಗಿಡಮರ ಎಲೆಗಳು ಕೂಡ ಬೆಳಗಿ ಬೆಳಕು ನೀಡಿದವು.

ಬಸಹರಾ ಶುದ್ ತಜಲ್ಲಿ ಆಂ ಕದರ್ ಜಮಾ

ಕೆ ಶಾಕೇ ಆಹ್‌ವಾನ್ ಅಘರೋಕ್ತ್ ಚ್ಯೂಂ ಶಮಾ
ಮೈದಾನ ಬೆಳಕಿನ ಕಿರಣಗಳಿಂದ ಹೀಗೆ ತುಂಬಿ ಬೆಳಗಿತು
ಮರಗಿಡಬಳ್ಳಿ ಶಾಖೆಕೂಡ ಬೆಳಕಿನಿಂದ ತೊಯ್ದಿತು.

ಝು ಫರ್ತೆ ರೋಶನಿ ದರ್ಬಝ್ಮೆ ದೌರಾನ್
ಸುಮಾನದ್ ಅಶ್ಮಬೇ ನಿಶಾನೇ ಜುಝು ಝುಲ್ಫೆ ಖೂಬಾನ್
ಈ ಚಲಿಸುವ ಬೆಳಕಿನ ಉದಾತ್ತತೆಯ ಕಾರಣದಿಂದಿಹುವುದು
ಪ್ರೇಯಸಿಯ ಸುಂದರ ಕೂದಲು ಕಗ್ಗಿನರಾತ್ರಿಯಂತೆ ಹೊಳೆಯುವುದು.

ವೀರ ಹಜ್ರತ್ ಬಾದಶಾಹರು ಸಂಪೂರ್ಣ ಪ್ರಾಮಾಣಿಕತೆ ಮತ್ತು ನಿಷ್ಠೆಯಿಂದ ಈ ಪವಿತ್ರ ದರ್ಗಾದ ಆರಾಧನೆಗಾಗಿ ಶಾಹಿ ಎಹರಾಮ್ ಅಥವಾ ರಾಜವೈಭವದ ಚದ್ದರ್ ಹಾಕಿ ಪವಿತ್ರ ಸಮಾಧಿಯ ಪ್ರದಕ್ಷಿಣೆಮಾಡುವ ಮೂಲಕ ಹಜ್ರತೆ ಪೀರೆ ದಸ್ತಗೀರ್ ಬಂದೇನವಾಜರ ಮೇಲೆ ಭಕ್ತಿಯಿಂದ ನಡೆದುಕೊಂಡರು. ಇದೇ ತಿಂಗಳ ೨೦ನೆಯ ದಿನಾಂಕದಂದು ತನ್ನ ಶರವೇಗಿ ಕುದುರೆಯ ಲಗಾಮು ಹಿಡಿದುಕೊಂಡು ದಕ್ಷಿಣದ ಹಿರಿಯ ಬಾದಶಾಹರ ಆಳ್ವಿಕೆಯ ಇತಿಹಾಸ ಪ್ರಸಿದ್ಧ ಬೀದರ ನಗರದತ್ತ ಪ್ರಯಾಣಿಸಿದರು.

ತಮ್ಮ ಎಲ್ಲ ಮಂತ್ರಿಗಳು ಮತ್ತು ಎಲ್ಲ ಆಸ್ಥಾನಿಕ ಪಂಡಿತರು, ಸರರದಾರರು, ಪರಿವಾರದವರು ಸೇರಿದ ದೊಡ್ಡ ಮೆರವಣಿಗೆಯಂತಹ ಸಾಲು ಆಗಸದಲ್ಲಿನ ನಕ್ಷತ್ರಗಳ ಸಾಲಿನಂತೆ ಬೆಳಗುತ್ತ ಹಾದಿಯಲ್ಲಿ ಶಿಸ್ತಿನಿಂದ ಪ್ರಯಾಣ ಮುಂದುವರಿಯಿತು. ಬಾದಶಾಹರಿಗೆ ಹಿಡಿದ ಬೆಳ್ಗೊಡೆಯ ಹೊಳಪು ಸಂಪೂರ್ಣ ವಾತಾವರಣವನ್ನು ಹೆಗೆ ಬೆಳಗಿತ್ತೆಂದರೆ ಸಾಧಾರಣ ಮಣ್ಣಿನ ತುಣುಕು ಹರಳು ಕೂಡ ಮಿಂಚಿನಂತೆ ಹೊಳೆಯುತ್ತಿತ್ತು. ಕಿರಣದ ಸಾವಿರಾರು ಗೆರೆಗಳು ಜಗತ್ತನ್ನು ಬೆಳಗುವ ಸೂರ್ಯನ ಬೆಳಕಿನಂತೆ ವಾತಾವವರಣದಲ್ಲಿ ಹರಡಿತ್ತು.

ಇದೇ ತಿಂಗಳ ೨೫ನೇ ದಿನಾಂಕದಂದು ವೀರ ಹಜ್ರತ್ ಬಾದಶಾಹರು ಬೀದರ ಶಹರದ ಸುಂದರ ವಾತಾವರಣದಲ್ಲಿ ತಮ್ಮ ಸೈನ್ಯ ಮತ್ತು ಪರಿವಾರದೊಂದಿಗೆ ತನ್ನ ಎಲ್ಲ ಘನತೆ ಗೌರವಗಳೊಂದಿಗೆ ಬೀದರದ ಕೋಟೆಯ ಬಾಗಿಲಬಳಿ ತೆರಳಿದರು. ಇಲ್ಲಿಂದ ನಗರವು ಅರ್ಧ ಮೈಲು ದೂರದಲ್ಲಿದೆ. ಇದೇ ಸ್ಥಳದಲ್ಲಿ ಹಜ್ರತ್ ಷಾ ಮಿನಲ್ಲಾ ಮುಹಮ್ಮದ್ ಅಲ್ ಹುಸ್ಸೈನಿ ಗೇಸುದರಾಜ್‌ರ ದರ್ಗಾ(ಬಹುಷಃ ಇದು ಖ್ವಾಜಾ ಬಂದೇನವಾಜರ ಮೊಮ್ಮಗರ ದರ್ಗಾ–ಅನು) ಇದೆ. ಇಲ್ಲಿನ ಅನೇಕ ಸುಲ್ತಾನರು(ಬಹಮನಿ) ಈ ದರ್ಗಾದ ಮೇಲೆ ತುಂಬ ಭಕ್ತಿ, ಗೌರವದಿಂದ ನಡೆದು ಕೊಳ್ಳುತ್ತಿದ್ದರು. ಸ್ವತಹ ವೀರ ಬಾದಶಾಹರು ಕೂಡ ಇಲ್ಲಿ ನಿಂತು ಫಾತಿಹಾ(ಕುರಾನ್‌ನ ಮೊದಲಭಾಗ) ಓದಿದರು. ಅವರ ಪ್ರಾರ್ಥನೆಯ ಪುಣ್ಯದಿಂದ ಕೋಟೆಯ ಕಡೆಗೆ

ಬಂದರು. ತಮ್ಮ ಸಂಪೂರ್ಣ ಗೌರವ, ಘನತೆ ಗಾಂಭೀರ್ಯದೊಂದಿಗೆ ರಾಜ ಸಿಂಹಾಸನದಲ್ಲಿ ಕೂತರು. ಸರ್ವ ಮಂತ್ರಿಗಳು, ಸರದಾರರು, ಪರಿವಾರದವರು ನಗರದ ನಾಲ್ಕೂ ದಿಕ್ಕಿನಲ್ಲಿ ಅಲ್ಲಲ್ಲಿ ಆಕಾಶದೆತ್ತರದ ಶಿಬಿರ ಹಾಕಿ ಸಿಂಗರಿಸಿದ್ದರು. ಬಾದಶಾಹರ ಆಜ್ಞೆಯಂತೆ ಎಲ್ಲ ಬೀದರದ ಮಹನೀಯರು, ಪ್ರಮುಖರನ್ನು ದರ್ಗಾದ ಪ್ರದಕ್ಷಿಣೆ ಮಾಡಲು ಹೇಳಿದರು. ಇದರಿಂದ ಅವರ ಆತ್ಮದಿಂದ ದೊರೆಯುವ ಅದ್ಭುತ ಶಾಂತಿ ಸಮೃದ್ಧಿ ಎಲ್ಲರಿಗೂ ಪ್ರಾಪ್ತಿಯಾಗಲೆಂದು ಹಾರೈಸಿದರು.

ನಜ್ಮ್

ರೌಝಯೆ ಶಾಹೇ ಮಿನಲ್ಲಾಹ್ ತಜಲ್ಲಿ ಗಾಹ್ ಅಸ್ತ್
ಮುದ್ದುಆಯೇ ದೋ ಜಹಾಂ ಅಸ್‌ದರೇ ವೂ ದಿಲ್‌ಖಾಹ ಅಸ್ತ್
ಹಜ್ರತ್ ಶಾಹ ಮಿನಲ್ಲಾಹರ ದರ್ಗಾದ ಬೆಳಕು ಮೂಡಿದೆ
ಎರಡೂ ಜಗದ ಹರಕೆ, ಆಸೆಗಳು ನೆರವೇರಲೆನ್ನುವ ಹಾರೈಕೆಯಾಗಿದೆ.

ರಾಹೆ ವೂ ಚ್ಯೂಂ ಮಿಸಯೆ ನಾದೀದ ಬಹಕ್ಕ್ ಮುತ್ತಸಿಲ್ ಅಸ್ತ್
ರಹೆಏ ನೂರ್ ವೇ ಕೆ ಬಾ ವರ್ದಾ ನಿಬರ್ದ್ ಗುಮ್ರಾಹ್ ಅಸ್ತ್
ಅವರ ಹಾದಿ ಒಂದೇ ಕ್ಷಣದಲ್ಲಿ ಅಲ್ಲಾಹನೊಂದಿಗೆ ಮಾಡುವುದು ಮಿಲನ
ಯಾರು ಅವರ ಹಾದಿಯಲಿ ನಡೆಯಲೊಲ್ಲನೋ ಅವನು ಹಾದಿತಪ್ಪಿದವನು.

ಪೇಸೇ ಸಾಹೆಬೆ ನಝರಾನ್ ಮುಂತಖಬ್ ಸನೇ ಖುದಾ ಅಸ್ತ್
ಬಹರ್ ಜಾನ್ ಬಾಝಿಯೆ ಉಶ್ಯಾಕ್ ಶಹಾದದ್ ಗಾಹ್ ಅಸ್ತ್
ಅತ್ಯಂತ ಬುದ್ಧಿಶಾಲಿಗಳಲ್ಲಿ ಇವರನ್ನು ಆರಿಸಿದ ಅಲ್ಲಾಹನ ಮರ್ಮವು
ಪ್ರೇಮಿಗಳು ತಮ್ಮ ಜೀವತೊರೆಯಲು ಈ ಸ್ಥಳ ಪರ್ಯಾಪ್ತವು.

ರೇಗೆ ರಾಹಶ್ ಹಮಾ ಯಾಕೂತೆ ದಿಲ್ ಅಫ್ರೋಝ್ ಬೂದ್
ಹರ್ ಕೆ ರೆಹ್ ಯಾಫ್ತ್ ಬರ್‌ಆಂ ಅಝ್ ದಿಲೇ ಖೀಶ್ ಆಗಾಹ ಅಸ್ತ್
ಅವರ ಹಾದಿಯ ಮಣ್ಣು ಸುಂದರ ಮಾಣಿಕ್ಯದಂತೆ
ಇಲ್ಲಿ ಯಾರು ಅವರ ಹಾದಿ ತಿಳಿದನೋ, ಆತ ತನ್ನ ಮನವ ತಿಳಿದಂತೆ.

ಸರ್‌ಫುರೂ ದಸ್ತ್ ಝಮೀನ್ ಚ್ಯೂಂ ಶಫಕ್ ಅಝ್ ಖಾಕೇ ದರಸ್ತ್
ಫಲಕೆ ಸಬ್ಝ್ ಖಬಾ ಬಂದಯೇ ಈಂ ದರ್ಗಾಹ್ ಅಸ್ತ್
ಧನ್ಯವಾಯಿತು ಭೂಮಿ, ಧನ್ಯ ಆಕಾಶ ಅವರ ಹಾದಿಯ ಮಣ್ಣಿಂದ
ಹಸಿರು ಚಾದರದ ಗಗನವಾಗಿದೆ ಈ ಭಕ್ತನ ದರ್ಗಾದಿಂದ.

ಖುಬ್ಬಯೇ ವೂ ಕೆ ಬುವತ್ ಖಿಬ್ಲಯೇ ಮಲಿಕೋ ಮಲ್‌ಕೂತ್
ಕಯೇ ಬಗರ್ದಿಶ್ ರಸದ್ ಅಝ್ ಮೆಹರ್‌ಗೂತ್ ಗರ್‌ಮಾಹ ಅಸ್ತ್

ಅವರ ಗುಂಬಜ್ ದೇವದೂತರಿಗೆ ನಮಸ್ಕರಿಸುವ 'ಖಿಬ್ಲ' ಸ್ಥಳ,
ಸೂರ್ಯನೂ ಅಲ್ಲಿಗೆ ಆಗಮಿಸಿ ಪ್ರದಕ್ಷಿಣೆ ಮಾಡುವ ಸ್ಥಳ.

ವಸ್ಫ್ ಈಂ ರೌಝುಯೆ ಆಲೀಂ ಝ ಸರೆ ಕದ್ರ್ ವ ಶರ್ಫ್
ಬರ್ ಸರೇ ಮಸ್‌ಹಫ್ ತಕ್‌ದೀರ್ ಚ್ಯೂಂ ಬಿಸ್ಮಿಲ್ಲಾಹ್ ಅಸ್ತ್
ಈ ದರ್ಗಾ ಷರೀಪಿನ ಘನತೆ ಗೌರವಗಳು ಹೇಗಿವೆ ಎಂದರೆ
ಕುರಾನ್ ಓದುವ ಮೊದಲು ಬಿಸ್ಮಲ್ಲಾಹ್*ಗೆ ಇರುವ ದರ್ಜೆಯಂತೆ.

*('ಶುರುಮಾಡುತ್ತೇನೆ ಅಲ್ಲಾಹನ ಹೆಸರಿನಲ್ಲಿ' ಎಂಬ ಆರಂಭ ಸೂಕ್ತಿ)

ದೀದಯೆ ದಿಲ್ ಬಕುಶ ವಸ್ಪತೆ ಹಕ್ ದರ್ಯಾಬ್
ಖಬ್ಬಯೇ ವೂ ಬನಿಗಾಹ್ ಕರ್ ಕುದ್‌ರತೆ ಮುತುಲಖ್ ದರ್ಯಾಬ್
ನಿನ್ನಂತರಂಗದ ಚಕ್ಷುವ ತೆರೆ, ಅಲ್ಲಾಹನ ಗುಣವ ತಿಳಕೋ
ಅವರ ಗುಂಬಜದತ್ತ ನೋಡು, ಅಲ್ಲಾಹನ ಸೃಷ್ಟಿರಹಸ್ಯವ ತಿಳಕೋ.

ಅಲ್ಲಾಹನ ಕೃಪೆಯಿಂದ ನನಗೆ ಈ ಮುಹಮ್ಮದ್ ನಾಮಾ ಬರೆಯುವ ಪವಿತ್ರ ಸಂದರ್ಭವು ಪೀರೆ ದಸ್ತಗೀರರ ದರ್ಗಾಷರೀಫ್‌ನಲ್ಲಿ ಕೂತಿದ್ದಾಗ ದೊರೆಯಿತು. ಹಜ್ರತರ ದರ್ಗಾಷರೀಫಿನ ಪ್ರದಕ್ಷಿಣೆ ಮಾಡುವ ಅವಕಾಶವೂ ದೊರೆಯಿತು.

ನಜ್ಮ್

ಹಜ್ರತೆ ಶಾಹೆ ಕಲಾಂ ಖಿಬ್ಲಯೆ ಈಮಾನೆ ಝುಹೂರ್
ಆಂಖೆ ಕುರ್ಷೀದ್ ಬಕಾಯಾಫ್ತ್ ಅಝೋ ಕಿಲ್‌ಅತೇ ನೂರ್
ಹಿರಿಯ ಸಂತ ಹಜ್ರತ್ ಧೃಢವಿಶ್ವಾಸದ ಹಾದಿಯ ತಿಳಿಸುವರು
ತಮ್ಮ ಚಾದರದ ಹೊಳಪಿನಿಂದ ಸೂರ್ಯನ ಬೆಳಗುವವರು.

ಖತ್ರಾ ಗರ್ ಚಕತ್ ಅಝ್ ಷಹದ್ ವಿಲಾಯಿಶ್ ತಾಹಷರ್
ಹಂ ಚ್ಯೂಂ ಮನ್ಸೂರ್ ಝಂದ್ ಬಾಂಗೆ ಅನಲ್ ಹಕ್ ಝಂಬೂರ್
ಅವರ ಸಂತತ್ವದ ಹಿರಿತನದ ಜೇನಹನಿಯೊಂದು ಬಿದ್ದರೂ ಸಾಕಾಗುವುದು
ಪ್ರಳಯದ ತನಕ ಜೇನುಗೂಡಲಿ ಮನ್ಸೂರರ' ಅನಲ್ ಹಕ್' ಘೋಷ ಮೊಳಗುವುದು.

ಇಸ್ತಖಾನ್ ದರ್ ತನೆ ಝುಲ್‌ಮತ್ ಝದ್‌ಗಾನ್ ಅಝ್ ಮಹರಷ್
ಚ್ಯೂಂ ತಬಾಷೀರೆ ಸಹರ್ ಮಗ್ಝ್ ನಾ ಬಂದತ್ ಅಝ್ ನೂರ್
ಕತ್ತಲೆಯಲಿ ಬದುಕುವವರಿಗೆ ಅವರ ಕೃಪೆ ದೇಹದಲ್ಲಿ ಎಲುಬಿನ ಹಂದರದಂತೆ
ಮುಂಜಾವಿನ ಬೆಳಕು ಸೂರ್ಯನ ಕಿರಣಬೀಳುವ ತನಕ ಪೂರ್ಣವಾಗದಂತೆ

ತಾಲಿಬಾನ್ ಪೇಶೆ ದರಶ್ ಜುಮ್ಲಾ ತನ್ ಸಾಖ್ತಾ ಅಂದ್
ಅಲಮೇ ದೌಲತೇ ಜಾವೇದ್ ಬರ್ ಅಫ್‌ರಾಖ್‌ತಾ ಅಂದ್
ಅವರ ದರ್ಬಾರಿನಲ್ಲಿ ಅವರ ಪ್ರೇಮಿಗಳು ತಮ್ಮ ದೇಹವ ಬಾಗಿಸಿದ್ದಾರೆ
ಅವರ ಎಂದೂ ನಾಶವಾಗದ ಸಂಪತ್ತಿನ ಧ್ವಜವ ಎತ್ತಿಹಿಡಿದಿದ್ದಾರೆ.

ಗಿರ್ದೆ ಹರ್ ನಕ್ಲ್ ದರೊ ಜುಮ್ಲ ನಶೀನಾನೆ ಬಹಿಶ್ತ್
ತೌಕೆ ಹಸ್‌ರತ್ ಬಗುಲೂ ಬೇಶ್ ತರೋ ಫಾಕ್ತಾ ಅಂದ್
ಸ್ವರ್ಗದ ತುಂಬ ವಾಸಿಸುವವರ ನಾಲ್ಕೂ ದಿಕ್ಕಿನಲಿ ಅವರಿಸಿದ ಮರವಿದೆ
ಇದರಿಂದ ಅವರ ಆಸೆ ಆಕಾಂಕ್ಷೆಗಳು ಸೆರಗಲ್ಲಿ ತುಂಬಿವೆ.

ಖೂನೆ ಉಶ್ಶಾಖ್ ನುಮಾಯದ್ ಬಝುಮೀ ಆಬೆ ರವಾಂ
ಸರ್ ಬಸರೆ ಫರ್ಶ್ ಝು ರೇಗ್ ಶಫಖ್ ಅಂದಾಖ್ತಾ ಅಂದ್
ಭೂಮಿಯ ಹರಿವ ನದಿಯಲ್ಲಿ ಪ್ರೇಮಿಗಳ ರಕ್ತ ಕಂಡುಬರುತಿದೆ
ಈ ಮಣ್ಣಿನಲಿ ಅವರ ರಕ್ತದ ಕೆಂಬಣ್ಣ ಹರಡಿದೆ.

ಈಂ ನಆಂ ಅಸ್ತ್ ಕೆ ಗರ್ದೆ ಬಹರ್ ಸೂಯೆ ರವಾಂ
ಲಾಲೆ ನಾಬ್ ಅಸ್ತ್ ಕೆ ಆವರ್ಝುದಯೆ ಗದಾಖ್ತಾ ಅಂದ್
ಇವರು ಅವರಲ್ಲ, ಹೋಗುವವರು ಎಲ್ಲರ ಹಿಂದೆ
ಯಾಕೆಂದರೆ ಬಹುಮೂಲ್ಯ ಮಾಣಿಕ್ಯ ಆಗುವುದು ಕಾಲ ಕಳೆದಂತೆ

ಅಝ್ ರವಾಂ ಬಕ್ಷಿಯೆ ವೂ ಆಬೇ ಬಕಾ ಗಶ್ತ್ ಕಿಜಲ್
ಸರ್ ಖರೂಯೀ ಬಜುಝ್ ಈಂ ಆಬ್ ನಗರ್ದದ್ ಹಾಸಿಲ್
ಅಮೃತವು ಅವರ ಕೃಪಾಕಟಾಕ್ಷದ ಎದುರು ಕಿರಿದೆನಿಸುವುದು
ಸಫಲತೆ ಬರಿಯ ಅವರು ನೀಡಿದ ನೀರಿನಿಂದ ಸಾಧಿಸುವುದು.

ಈ ಬೀದರ್ ನಗರವನ್ನು ನೋಡಿದ ನಂತರ ಬಾದಶಾಹರು ಖಂಡಿತವಾಗಿಯೂ ಈ ನಗರ ನೋಡುಗರ ಕಣ್ಣಿಗೆ ಅತ್ಯಂತ ಸುಂದರವಾಗಿದೆ ಎನ್ನುವುದನ್ನು ಒಪ್ಪಿಕೊಂಡರು. ಇಲ್ಲಿನ ಭೂಮಿಯ ಮೇಲ್ಮೈ ಚಹರೆ ಆಕಾಶದಂತೆ ನೀಲವರ್ಣದ್ದಾಗಿದೆ. ಇಲ್ಲಿನ ಆಕಾಶ ತಿಳಿ ಕೆಂಬಣ್ಣದಿಂದ ಆವರಿಸಿದೆ. ತಾಜಾ ಹಸಿರಿನ ಮರಗಿಡ ಪೊದೆ ಪೈರುಗಳು ಮುಂಜಾವಿನ ತಂಗಾಳಿಯ ಸ್ಪರ್ಷದಿಂದ ಎಲ್ಲೆಡೆಯಲಿ ನೆರಳಾಗಿರುತ್ತದೆ. ಬಾದಶಾಹರಿಗೆ ಸಂಪೂರ್ಣ ಆರಾಮಸಿಗುವಂತೆ ಎಲ್ಲರೀತಿಯ ಸೌಲಭ್ಯಗಳನ್ನು ನೀಡಲಾಯಿತು. ಅವರ ಆಗಮನದ ಗೌರವಾರ್ಥ ಸಂತಸದ ಕೂಟವೊಂದನ್ನು ಏರ್ಪಡಿಸಿ ವೇದಿಕೆಯನ್ನು ಸಿಂಗರಿಸಲಾಯಿತು. ಅವರು ಈ ಸಂಭ್ರಮದಲ್ಲಿ 'ಬಾದಯೆ ಗುಲ್ ರಂಗೆ ಗುಲ್ಬಾಂಗ್' ಎಂಬ ಶರಬತ್ತಿನ ಬಟ್ಟಲನ್ನು ಅಲ್ಲಿಗೆ ಆಗಮಿಸಿದವರೆಲ್ಲರಿಗೂ ಹಂಚಿದರು. ನೃತ್ಯಗಾತಿಯರ

ಹಾಡಿನ ಮೂಲಕ ಅಮಿತ ಸಂತಸದ ಬಾಗಿಲನ್ನು ತಮಗಾಗಿ ತೆರೆದುಕೊಂಡರು. ಹಜ್ರತ್ ಬಾದಶಾಹರ ಹೊಗಳುವ ಈ ಪದ್ಯವನ್ನು ಹಾಡುಗಾತಿಯರು ಹಾಡಿದರು:

ಅಭ್ಯಾತ್

ಎಯ್ ಶಹನ್‌ಶಾಹೆ ಕಿಶ್ವರೇ ಇಕ್ಬಾಲ್ ಶಮಯೇ ಬಝ್ಮಿ ತೂ ಬಾದ್ ಮಶ್‌ಅಲೇ ತೂರ್

ಅಝ್ ಗುಬಾರೆ ರಹೇ ನೋಗಶ್ತ್ ಬುಲಂದ್ ಚಿತ್ರ್ ಖಾಖಾನ್ ವ ಕೈಸರೋ ಫಕ್ ಫೂರ್

ಓ ಜಗದೇಕ ಬಾದಶಾಹಪುಣ್ಯವಂತನೇ ನಿನ್ನ ಪದ್ಯದಸಾಲಿನ ಬೆಳಕು ತೂರ್ ಪರ್ವತದ ತುದಿಯದು

ನಾಲ್ಕೂ ದಿಕ್ಕಿನಲಿ ಹರಡುವ ನಿನ್ನ ಧೂಳು ಕೈಸರ್ ಖಾಕಾನರಿಗಿಂತ ಎತ್ತರದ ಹಿರಿಮೆಯದು.

■

*

ಅಧ್ಯಾಯ – ೨೦

ಹಜ್ರತ್ ಶೂರ ಬಾದಶಾಹ ವಾಪಾಸು ಹೋಗುವ ಹಾದಿಯಲ್ಲಿ ಅಬ್ದುಲ್ಲಾ ಕುತುಬ್ ಷಾನ ಪಿತೂರಿ ನಡೆಸುತ್ತಿರುವ ವರ್ತಮಾನ ಬಂತು. ನವಾಬ್ ಸಾಹೇಬರು ಅವನ ಮೇಲೆ ದಾಳಿ ನಡೆಸಲು ಖುದ್ದಾಗಿ ಮಹಮದ್‌ಪುರದತ್ತ ಧಾವಿಸಿದರು.

ದೇವರ ದಯೆ ಎಷ್ಟೊಂದು ವೈಶಿಷ್ಟ್ಯ ಈ ಜಗದೊದ್ಧಾರಕ ಅಲ್ಲಾಹನ ಕೃಪೆ, ಅವನ ಮಹಿಮೆ ಮತ್ತು ಮುಹಮ್ಮದ್ ಮುಸ್ತಫಾ ಪೈಗಂಬರರ ಹೆಸರಿನ ಜೊತೆಗೆ ರಾಜ್ಯದ ಕಾನೂನು ಮಾಡಲಾಗಿದೆ. ಜಗತ್ತಿನ ದೇಶಗಳೊಂದಿಗೆ ಸಂಬಂಧವೇರ್ಪಡಿಸಲ್ಪಟ್ಟಿದೆ. ಸುಲ್ತಾನ್ ಮುಹಮ್ಮದ್ ಷಾ ಬಾದಶಾಹರಿಗೆ ಕೂಡ ಅಲ್ಲಾಹನು ತನ್ನ ಧಾರ್ಮಿಕ ಬಳುವಳಿಯನ್ನು ನೀಡಿ ಎತ್ತರದ ಸ್ಥಾನದಲ್ಲಿಟ್ಟು ಗೌರವಿಸಿದ್ದಾನೆ. ಬಾದಶಾಹರು ಹಜ್ರತ್ ಮುಸ್ತಫಾ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವ ಸಲ್ಲಮರ ಧ್ಯೇಯವಾಕ್ಯವನ್ನು ಮುಂದಿರಿಸಿಕೊಂಡು ಆಳುವಿಕೆಯನ್ನು ನಡೆಸುವುದು ತನ್ನ ಕರ್ತವ್ಯವೆಂದು ತಿಳಿದಿದ್ದರು. ಅವರು ಅಲ್ಲಾಹನ ತೀರ್ಮಾನದ ಮುಂದೆ ತನ್ನ ತಲೆಯನ್ನು ಬಾಗಿಸಿ ಪಾಲಿಸುತ್ತಿದ್ದರು. ಕುಲ್ಝುಮ್ ಮತ್ತು ಉಮ್ಮಾನ್ ಸಮುದ್ರದ ನೀರನ್ನು ಒಂದು ಹನಿಯೆಂದು ತಿಳಿದು ಪೈಗಂಬರರು ಮತ್ತು ಅಲ್ಲಾಹ ಪದತಳದಲ್ಲಿ ಇರಿಸಿ ಆಗಾಧವಾದ ಆರಾಧನೆ ಗೈದಿದ್ದರು. ಈ ವಿಶ್ವದ ಏಕೈಕರೆನಿಸಿದ ಸುಲ್ತಾನರು ಇವೆಲ್ಲವೂ ಸೃಷ್ಟಿಕರ್ತ ಅಲ್ಲಾಹನ ಕೃಪೆ, ಆಶಿರ್ವಾದ ಮತ್ತು ಕೊಡುಗೆಗಳಿಂದ ತನ್ನ ಎಲ್ಲ ಸಾಧನೆಗಳು ಕಾರ್ಯರೂಪಕ್ಕೆ ಬಂದವು ಎಂದು ದೃಢವಿಶ್ವಾಸವನ್ನು ಹೊಂದಿದ್ದರು. ಅವರನ್ನು ಬಾದಶಾಹನನ್ನಾಗಿ ಮಾಡಿ ಜಗತ್ತಿಗೆ ಇದನ್ನು ತಿಳಿಸಲು ಅಲ್ಲಾಹ ಬಯಸಿದ್ದಾನೆ. ಈ ದೀನೆ ಮುಹಮ್ಮದ್ ರಾಜ್ಯದ ಪ್ರತೀಯೊಂದು ನಗರ, ಪಟ್ಟಣ, ಊರುಗಳ ಜನರನ್ನು ಸುಭಿಕ್ಷೆಯೊಂದಿಗೆ ಪೊರೆದು ಕಾಪಾಡುವುದು ಬಾದಶಾಹರಿಂದ ಸಾಧ್ಯವಾದದ್ದು ಕೂಡ ಅಲ್ಲಾಹನ ಕೃಪೆಯಾಗಿದೆ.

ಮೇಲಿನ ಎಲ್ಲ ವಿವರಗಳ ಹಿನ್ನೆಲೆಯೇನೆಂದರೆ ಶೂರ ಬಾದಶಾಹ ಬೀದರ್‌ನಲ್ಲಿ ತಂಗಿದ್ದಾಗ ಅವರ ಕೆಲವು ದೊಡ್ಡ ಅಧಿಕಾರಿಗಳ ಮೂಲಕ ಕರ್ನಾಟಕ ದೇಶದಲ್ಲಿ ಮೀರ್ ಜುಮ್ಲ ಮತ್ತು ಕುತುಬ್ ಷಾ ಕೆಲವು ವೈರಿಗಳನ್ನು ಸೇರಿಕೊಂಡು ಕಿರುಕುಳ ನೀಡಲು ತೊಡಗಿದ್ದಾನೆಂಬ ವರ್ತಮಾನ ತಲಪಿದ್ದು. ಬಾದಶಾಹರು ಈ ಸುದ್ದಿಕೇಳಿ ಕುತುಬ್ ಷಾನ ಮೇಲೆ ತುಂಬ ಸಿಟ್ಟಾದರು. ಕುತುಬ್ ಷಾನಿಗೆ ಎಚ್ಚರ ನೀಡುವುದಕ್ಕಾಗಿ ಪ್ರಮುಖ ಸೇನಾನಿ ಸಾಲಾರ್ ಮುಝುಫರುದ್ದೀನರನ್ನು ಮುಹಮ್ಮದೀ ಜುಹೂರ್‌ರ ಮುಂದೆ ಹಾಜರಾಗಲು ಆದೇಶನೀಡಿದರು. ಯಾಕೆಂದರೆ ಕುತುಬ್ ಷಾನು ಕರ್ನಾಟಕ ಪ್ರದೇಶವನ್ನು ಹಾಳುಗೆಡವಿ ಸಂಪೂರ್ಣ ನಾಶದತ್ತ ಸಾಗುತ್ತಿದ್ದಾನೆಂದು ತಿಳಿದುಬಂತು. ಶಕ್ತಿಶಾಲಿ ಮತ್ತು ಪ್ರಖ್ಯಾತ ಗೋಲ್ಕೊಂಡ ಕೋಟೆಯನ್ನು ಕೂಡ ಕೆಡಿಸಿಬಿಟ್ಟಿದ್ದಾನೆಂದು ಕೂಡ ಕೇಳಿಬಂತು. ಈ ಮಧ್ಯೆ ಇಬ್ನೆ ಹಕೀಮ್ ಮುಹಮ್ಮದ್ ಹುಸೈನ್ ಷಾಹಜಹಾನಿಯವರ ಲಿಖಿತ ಬೇಡಿಕೆಯನ್ನು ಬಾದಶಾಹರಿಗೆ ತಲಪಿಸಿದ್ದರು. ಇದರಂತೆ ಕುತುಬ್ ಷಾನ ಕಡೆಯ ಎಲ್ಲರೀತಿಯ ಪಿತೂರಿಗಳು ಮೀರ್ ಜುಮ್ಲಾನಿಂದ ನಡೆಯುತ್ತಿರುವುದಕ್ಕೆ ಕುತುಬ್ ಷಾ ನ ಕುತಂತ್ರಗಳೇ ಕಾರಣವೆಂದೂ, ಇಲ್ಲಿನ ಪ್ರಜೆಗಳಿಗೆ ಆಗುತ್ತಿರುವ ಕಿರುಕಳ ಗಲಾಟೆಗಳು ಮೀರ್ ಜುಮ್ಲಾನಿಂದ ನಡೆಯುತ್ತಿರುವುದಕ್ಕೆ ಕುತುಬ್ ಷಾನೇ ಜವಾಬ್ದಾರಿಯೆಂದು ನಾನು ಪರಿಗಣಿಸುತ್ತೇನೆ ಎಂದಾಗಿ ಅದರಲ್ಲಿ ಬರೆಯಲಾಗಿತ್ತು.

ಸೇನಾನಿ ತನ್ನ ಸೈನ್ಯದೊಂದಿಗೆ ಹೊರಡಲು ತಯಾರಾಗಿದ್ದಾಗ ಈ ವಿಷಯ ತಿಳಿದು ನಿಂತುಬಿಟ್ಟರು. ಕುತುಬ್ ಷಾನಿಗೆ ಈ ವರ್ತಮಾನ ತಿಳಿದಾಗ, ಅವನು ತನ್ನ ಒಳಿತು ಶರಣಾಗತಿಯಲ್ಲೇ ಇದೆ ಎಂದು ಅರಿತುಕೊಂಡು ಅವರಿಗೆ ತನ್ನ ನಡವಳಿಕೆಯಲಿ ಆದ ಬದಲಾವಣೆಯನ್ನು ತೋರಿಸುವುದಕ್ಕಾಗಿ ಬಹಳ ದೊಡ್ಡ ಪ್ರಮಾಣದ ಉಡುಗೊರೆ ಕಪ್ಪಕಾಣಿಕೆಗಳನ್ನು ಕಳುಹಿಸಿ ಸಮಾಧಾನ ಪಡಿಸಲು ಪ್ರಯತ್ನಿಸಿದ. ದಿಲ್‌ಹಜ್ ತಿಂಗಳ ೧೦ನೇ ದಿನ ಹಜ್ರತ್ ಬಾದಶಾಹರು ಬೀದರ್ ಪಟ್ಟಣದಿಂದ ಹೊರಟು ನಾಲ್ಕು ದಿನಗಳ ನಂತರ ಹಸ್ನಾಬಾದ್ ತಲಪಿದರು. ಪೂರ್ಣ ಪ್ರಮಾಣದ ನಿಷ್ಠೆ ಪ್ರಾಮಾಣಿಕತೆಯಿಂದ ದಸ್ತಗೀರ್ ಮುಶರ್ರಫ್‌ರವರ ದರ್ಗಾದಲ್ಲಿ ಹಾಜರಾಗಿ, ಪ್ರದಕ್ಷಿಣೆ ಮಾಡಿ ಆರಾಧನೆಗೈದರು. ಇಲ್ಲಿ ಐದು ದಿನಗಳ ಕಾಲ ತಂಗಿದ್ದರು. ನವಾಬ್ ಸಾಹೇಬರಿಗೆ ಕರ್ನಾಟಕ ರಾಜ್ಯದ ಆಗುಹೋಗುಗಳನ್ನು ನೋಡಿಕೊಳ್ಳುವ ಜವಾಬ್ದಾರಿ ನೀಡಿ ತನ್ನ ರಾಜಧಾನಿ ಮುಹಮ್ಮದ್‌ಪುರದತ್ತ ಪ್ರಯಾಣ ಬೆಳೆಸಿದರು. ಮುಹರ್ರಂ ತಿಂಗಳ ಮೊದಲದಿನ ಬಿದಿಗೆಯ ಚಂದ್ರದರ್ಶನದ ದಿನ ತಮ್ಮ ಅರಮನೆಯ ಆಸ್ಥಾನದ ಸಿಂಹಾಸನದಲ್ಲಿ ಆಸೀನರಾದರು. ಮುಖ್ಯ ವಿಚಾರವೆಂದರೆ ನವಾಬ್ ಸಾಹೇಬರು ಬಾದಶಾಹರ ಹುಕುಮಿನಂತೆ ಹಸ್ನಾಬಾದಿನಿಂದ ತಮ್ಮ ಸೈನ್ಯದೊಂದಿಗೆ ಪ್ರಯಾಣಿಸುತ್ತಾ ಜೀಜಿಯ ಇಲಾಖೆಯ ಗಡಿ ತಲಪಿದಾಗ ಮೀರ್ ಜುಮ್ಲಾ ಮತ್ತು

ಕುತುಬ್ ಷಾ ಕಿರುಕುಳ ಮಾಡತೊಡಗಿದ. ನವಾಬ್ ಸಾಹೇಬರು ಬಾದಶಾಹರಿಗೆ ಕುತುಬ್ ಷಾ ಮತ್ತು ಕರ್ನಾಟಕದ ಕೆಲವು ವೈರಿ ರಾಜರು ಸೇರಿಕೊಂಡು ದಂಗೆಯೇಳುವ ತಯಾರಿಯಲ್ಲಿದ್ದಾರೆಂದು ಸಂದೇಶಕಳುಹಿಸಿದರು.

ಸಂದೇಶದಲ್ಲಿ ಮೀರ್ ಜುಮ್ಲ ಕುತುಬ್ ಷಾ ಮತ್ತು ಕರ್ನಾಟಕದ ಕೆಲವು ರಾಜರು ಅಂತರ್ಯದಲ್ಲಿ ದ್ವೇಷವನ್ನು ಇಟ್ಟುಕೊಂಡು ಬಾದಶಾಹರ ವಿರುದ್ಧ ದಂಗೆಯೇಳುವ ತಯಾರಿ ಮಾಡುತ್ತಿದ್ದಾರೆ. ಈ ಸಂದರ್ಭದಲ್ಲಿ ಬಾದಶಾಹರು ತಮ್ಮ ವಿಶ್ವಾಸಿ ಅಧಿಕಾರಿಗಳು, ಗವರ್ನರರನ್ನು ಕರೆಸಿ ಸಲಹೆ ಪಡೆದು ಅವರ ಜೊತೆ ಚರ್ಚಿಸಿದಲ್ಲಿ ಯುದ್ಧವನ್ನು ತಡೆಯುವ ಯೋಜನೆಗಳನ್ನು ತಯಾರಿಸುವುದು ಬುದ್ಧಿವಂತಿಕೆಯ ಹೆಜ್ಜೆಯೆನಿಸಲ್ಪಡುವುದು ಎಂದು ತಿಳಿಸಿದರು. ಇದರ ಬಗ್ಗೆ ಬಾದಶಾಹರು ಕೂಲಂಕುಶವಾಗಿ ಆಲೋಚಿಸಿ, ತಮ್ಮ ಪ್ರಧಾನ ಸೇನಾನಿ ಖಾನ್ ಝುಫರ್ ತ್ವಾನ್‌ರನ್ನು ರುಸ್ತುಮೇ ಜಮಾನ್, ಅಫ್ಝಲ್ ಖಾನ್ ಮತ್ತಿತರ ಪ್ರಮುಖ ಮಂತ್ರಿಗಳು ಅಧಿಕಾರಿಗಳನ್ನು ನವಾಬ್ ಸಾಹೇಬರ ಸಹಾಯಕ್ಕಾಗಿ ಕಳುಹಿಸಿದರು. ಈ ಸುದ್ದಿ ಮೀರ್ ಜುಮ್ಲ, ಕುತುಬ್ ಷಾನಿಗೆ ತಲಪಿದಾಗ ಅತ್ಯಂತ ಭಯಭೀತನಾದ. ಕುತುಬ್ ಷಾ ಸ್ವತಹ ಚರ್ಚಿಸಲು ನವಾಬ್ ಸಾಹೇಬರ ಬಳಿ ಬಂದು ಅವರಿಗೆ ತನ್ನ ಶರಣಾಗತಿಯ ಕರಾರು ಪತ್ರವನ್ನು ಮುಂದಿಟ್ಟ. ತನ್ನ ಸೈನಿಕರನ್ನು ಕರೆದುಕೊಂಡು ಹಿಂತಿರರುಗಿದ. ನವಾಬರ ಸಹಾಯಕ್ಕಾಗಿ ಹೊರಟ ಸೇನಾನಿ ಅರ್ಧ ಹಾದಿಯಲ್ಲಿ ಬಾದಶಾಹರ ಅಪ್ಪಣೆಯ ಮೇರೆಗೆ ವಿರಂಜ್‌ಪುರ ಕೋಟೆಯಲ್ಲಿ ತಂಗಿದರು. ನವಾಬ್ ಸಾಹೇಬರು ತನ್ನ ಜೊತೆಗಿದ್ದ ಸೈನಿಕ ದಂಡಿನ ಜೊತೆಗೆ ಜಕಮನ್ನ ಮತ್ತು ತಿರುನಾಮಲೈ ಕೋಟೆಗಳನ್ನು ವಶಪಡಿಸುವ ಯೋಜನೆ ತಯಾರಿಸಿದರು. ದೇವರ ದಯೆ ಮತ್ತು ಕೃಪೆಯಿಂದ ಈ ಎರಡೂ ಕೋಟೆಗಳನ್ನು ಒಂದೇ ದಿನದಲ್ಲಿ ವಶಪಡಿಸಿಕೊಂಡರು. ಈ ಕೋಟೆಗಳನ್ನು ವಶಪಡಿಸಿಕೊಳ್ಳುವ ಸಂಪೂರ್ಣ ದೃಶ್ಯವನ್ನು 'ಫತಹ್ ನಾಮ' ಎಂಬ ಸುಂದರ ಖಸೀದಾ ಗೀತೆಯ ಮೂಲಕ ಈ ಗ್ರಂಥದಲ್ಲಿ ಮೂಡಿಸಲಾಗಿದೆ.

ನಜ್ಮ್

ಖುಸ್ರವೋ ಬಹರೋಬರ್ ಮುಹಮ್ಮದ್ ಷಾ
ಮಸ್ನತ್ ಆರಾಯಿಯೆ ದೀನೊ ಫೈಗಂಬರ್
ಭೂಮಿ ಆಕಾಶಗಳ ಒಡೆಯ ಬಾದಶಾಹ ಮುಹಮ್ಮದ್ ಷಾ
ದೀನೆ ಪೈಗಂಬರರ ಸಿಂಹಾಸನದಲ್ಲಿ ಆರೂಢರಾದವರು.

ಜೌಹರೇ ತೈಘೆ ಆಬ್‌ದಾರೆ ದಸ್ತ್
ಮೌಜಯೆ ಕುಲ್ಝುಮೇ ಕರ್ಝಾ ವೊ ಕದರ್
ಅವರ ಕೈಯ ತಲವಾರು ಹೊಳೆಯುವ ಕಿರಣದಂತಿದೆ

ಸಾವು ಬದುಕನ್ನು ನೀಡುವ ಕುಲ್ಜುಮ್ ಸಮುದ್ರದ ಅಲೆಯಂತಿರುವುದು.

ನೇಶ್ತ್ ಆ ಮೌಜ್ ಗರ್ ನಿಹಾನೆ ಪಾ
ಆಬ್ ಶುದ್ ಬಹರ್ ರಾ ಝಿರಾ ದರ್‌ಬಝ್
ಬಾದಶಾಹರ ಎದುರುಎಂತಹ ಉಬ್ಬರದ ನೀರ ಹರಿವೂ
ಅವರ ಇರಾದೆಯ ಹಾದಿಯ ತಡೆದು ನಿಲ್ಲಿಸದು

ಖಸೀದಾ (ಫತಾಹ್ ನಾಮಾ)

ಉಫ್ತದ್ ಬಾದೇ ಆತಿಶೇ ಕಹ್‌ರಶ್‌ಅಫ್‌ಗಂದ್ ಗರ್ ಬಸೂಯೆ ಬಹರ್ ಗುಝರ್
ಅವರ ಕ್ರೋಧದ ಬೆಂಕಿ ಭುಗಿಲೆದ್ದಾಗ ಸಮುದ್ರವೂ ಬಿಸಿಯೇರುತ್ತದೆ

ಕತ್ರ ಗರ್ದದ್ ಶರಾರೊ ಆಬೆ ಆತಿಶ್ ಮಾಹ್‌ಯಾನೆ ಶೋಲ ಮೌಜೆ ಖಾಕಸ್ತನ್
ಬೆಂಕಿ ಕಿಡಿಗಳು ಭುಗಿಲೇಳುತ್ತವೆ ಸಮುದ್ರದ ಮೀನುಗಳನ್ನು ಸುಟ್ಟು ಹಾಕುತಿದೆ

ಪೇಶ್ ಜಂಗೆ ಆವರಾನೆ ಲಶ್ಕರೇ ಶಾಹ್
ಗಾಹ್ ಜವುಲಾನೆ ರಕ್ಷೆ ಪತ್ಹೊ ಝಪರ್
ಬಾದಶಾಹರ ಸೈನ್ಯ ರಣರಂಗ ಪ್ರವೇಶಿಸಿದಾಗ
ವಿಜಯದ ಹೊಳಪಿನ ರಂಗೇರುತ್ತದೆ ಮೈದಾನದಲಿ.

ಖಿಲಾ ಗಿರಿ ಬುವದ್ ಚುನಾ ಆಸಾನ್
ಕೆ ಬಗೀರಂದ್ ಮೈ ಕುಶಾಂ ಸಾಗರ್
ಕೋಟೆಯನು ವಶಪಡಿಸುವುದು ಅವರಿಗೆಷ್ಟು ಸುಲಭ
ಶರಾಬಿಗಳು ನಶೆಯ ಬಟ್ಟಲನು ಎತ್ತಿದಂತೆ

ರೋಝೆ ರಝ್ಮ್ ಅಝ್ ಹೈಬತೇ ಊ ಚ್ಯೂಂ
ಫತದ್ ದಝ್ಝ್ ಬರ್ ಶೋರ್ ಅರ್‌ಸಯೇ ಮೆಹಷರ್
ಯುದ್ಧದ ದಿನ ಅವರ ಭಯದಿಂದ ಹಾಗಾಗುತ್ತದೆ,
ಮಹಷರದ ಮೈದಾನದಲ್ಲಿನ ಗಲಾಟೆಯಂತೆ

ಖಸ್ಮ್ ರಾ ಪೇಚದ್ ಅಝ್ಝುಮಾನೆ ಹಿರಾಸ್
ಪಾಬದಾಮಾ ಝೆ ಚಾಕ್ ಹಾಯೆ ಜಿಗರ್
ವೈರಿಗಳನ್ನು ಭಯದ ಲಗಾಮಿನ ಮೂಲಕ ಎಳೆಯುತ್ತಿರುತ್ತಾರೆ,
ಅವನ ಎದೆ ಚೂರಾಗುವತನಕ.

ಚ್ಯೂಂ ಶುವದ್ ಅಝ್‌ಖಯಾಲೆ ಖಂಜರೆ ವೂ
ಜಾನೆಜಂಗ್ ಆವ್‌ರಾನ್ ಬಹರೇ ಮುಬ್‌ಹರ್

ಅವರ ಕತ್ತಿಯ ನೆನಪಾದಂತೆ
ವೈರಿಗಳ ಜೀವ ಹಾರಿಹೋಗುವುದು.

ದುಷ್ಮನೆ ಹೇರಾ ಸರ್ ಖಂಜರೇ ಖೇಶ್
ಖುರ್ದ್ ಆಂ ಲೆಹರ್ಝೂ ಬರ್ ಜಿಗರ್ ಖಂಜರ್
ವೈರಿಗಳು ಭಯದಿಂದ ತಮ್ಮ ಸ್ವಂತ ಕತ್ತಿಯಿಂದಲೇ,
ತಮ್ಮ ಎದೆಯ ಸೀಳಿಕೊಳುವರು.

ಸದ್ಮಯೆ ಗುರುಝೆ ವೂ ದೋ ಪೈಕರ್ ರಾ
ದಹದ್ ಅಸ್ಪೀನಯೆ ಅದೂ ಮಿಗ್‌ಘರ್
ಅವರ ಈಟಿ ಭರ್ಚಿಯ ಪೆಟ್ಟಿನಿಂದ,
ವೈರಿ ಎದೆ ಸೀಳಿ ಇಬ್ಭಾಗವಾಗುವುದು

ಗಾಹೆಹೇಜಾ ಶಹನ್‌ಶಾಹೆ ಗಾಝಿ
ಅಫ್‌ಗಂದ್ ಗರ್ ಬ ಫೌಜೆ ಕಸಂ ನಝರ್
ವೀರ ಶೆಹನ್‌ಶಾಹರ ಸೈನಿಕರ ದೃಷ್ಟಿ ಎಲ್ಲಿ ಬೀಳುವುದೋ,
ಅಲ್ಲಿನ ಸ್ಥಳ ಆಗುವುದು ಬಿಕೋ.

ಜೌಹರ್ ಅಸ್ತೈಫ್ ಚ್ಯೂಂ ಶಗೂಫ ಝಿಯಾದ್
ರೀಝುದ್ ಅಝ್‌ಹಂ ಝುಖುದ್ ಬಜ್ಜೈಬೇ ಶಿಪರ್
ಅವರ ತಲವಾರಿನ ಹೊಳಪು ಅರಳಿದ ಹೂವಿನಂತೆ,
ಅವರ ಮಡಿಲಲ್ಲಿ ಬೀಳುವುದು

ತೈಘೆ ತೇರಶ್ ದರ್ಮಿಯಾನ್ ಆಯದ್
ಕೋಹ್ ಪೆಹಲೂ ತಹೀ ಕುನದ್ ಝುಕಮರ್
ಬಾಣಗಳ ಮಿಂಚಿನ ಹೊಳಪು ಪರ್ವತಗಳ ಮೇಲೆ ಬಿದ್ದರೆ,
ನಡುವಿನಲ್ಲೇ ಇಬ್ಭಾಗವಾಗುವುದು.

ಮಾನ್‌ದಾ ಖಶ್‌ಮಶ್ ಝು ಮೊಹರಾ ಎ ಸರ್‌ಖೇಶ್
ತಾ ಬಝುದ್ ಬಝುದ್ ದರೆ ಶಸ್ದ
ಅವರು ಉರುಳಿಸಿದ ದಾಳಗಳಿಂದ ಅಳಿದುಳಿದ ವೈರಿಗಳು,
ವ್ಯಥಿತರಾಗಿ ಅಲ್ಲಲ್ಲಿ ಚದುರಿಹೋದರು.

ಇಸ್ತಖಾನಶ್ ಚ್ಯೂಂ ಕಾಬತೈನೆ ಖುಮಾರ್
ಗಶ್ತ್ ಗಲ್‌ತಾನ್ ಬಮೌಜೆ ಖೌಫೊ ಕತರ್
ವೈರಿ ಎಷ್ಟು ಗಟ್ಟಿ ಎಲುಬಿನ ಶಕ್ತನಾದರೂ,

ಭಯ ಭೀತಿಯ ತೂಫಾನಿನಲ್ಲಿ ಮುಳುಗಿ ಹೋಗುವ.

ಕಸ್ಮೆ ವೂ ರಫ್ತ್ ಚ್ಯೂಂ ಬಸೂಯೆ ಫಸಾದ್
ದರ್ ರಗೆ ಖುದ್ ಖಲೀದ ಚ್ಯೂಂ ನಶ್ತರ್
ಬಾದಶಾಹರ ವಿರುದ್ಧ ಪಿತೂರಿಗೆ ತೊಡಗಿದರೆ,
ತನ್ನ ನರಗಳ ಮೇಲೆ ತಾನೇ ಚೂರಿ ಹಾಕಿಕೊಂಡಂತೆ!

ಹರ್ ಕೆ ಎಕ್ದಂ ರ್ಝುಕೀನ ವೂ ದಂರ್ಝುದ್
ಖುರ್ದ್ ಬರ್‌ಸೀನ ಅರ್ಝ್ ನಫಸ್ ಖಂಜರ್
ಯಾರೇ ಅವರ ವೈರಿಯಾಗುವರೋ,
ತನ್ನ ಎದೆಗೆ ಸ್ವತಃ ತಲವಾರವ ಇರಿದು ಕೊಳುವ.

ಹುಕ್‌ಮೆ ವೂ ದರ್ ಶವದ್ ಇಶಾರ ನುಮಾ
ಗೀರದ್ ಆಯಿನಾ ರೂಯೆ ಇಶ್‌ಕಂದರ್
ಬಾದಶಾಹರ ಆಜ್ಞೆ ಸಂಕೇತಗಳು ನೀಡಲಾದರೆ,
ಸಿಕಂದರನ ಮುಖವೂ ಕನ್ನಡಿಯಲ್ಲಿ ಮೂಡುವುದು.

ಶಹನಯೇ ಅಮ್ರೆವೂ ಪರೋಶ್ ಉನದ್
ತಖ್ತೆ ಖಾಕಾನ್ ಬತಾರಿಕೆ ಖೈಸರ್
ಅವರ ಆಜ್ಞೆಯ ಮರೆತವನು,
ಖಾಕಾನ್ ಯಾ ಖೈಸರ್ ಅರಸರ ಪಟ್ಟವ ದೂರೀಕರಿಸಿದಂತೆ.

ನೈಯೆ ವೂ ಬುರದ್ ದಹಾನೆ ಸಿಹಾಬ್
ಗರ್‌ಝುಂದ್ ಹರ್‌ಫ್ ತುಂದ್ ಅರ್ಝ್ ತುಂದರ್
ಅವರ ಯಾವುದೇ ಸಂಗತಿಯ ನಿಷಿದ್ಧಗೊಳಿಸಿದರೆ,
ಅದು ಕತ್ತಲ ಮುಗಿಲ ಪರದೆಯ ಸರಿಸಿದಂತೆ.

ತಾರೆವೂ ಅರ್ಝ್ ಹಿಮಾಯತೆ ಖಬ್‌ಶಸ್
ವರ್‌ಖೆ ಶೋಲಾರ ಬುವದ್
ಅವರ ಆಸನದ ಕಟಕಟೆಯ ಸರಳುಗಳು ಕಾಣಿಸುವವು,
ಬೆಂಕಿಯ ಕೆಂಡಗಳ ಸಲಾಕೆಯಂತೆ.

ಅಸ್‌ಮಾನ್ ಚ್ಯೂಂ ದುಖಾನ್ ಬರ್ ಆಯೆರ್ಝುತ್
ಗರ್ದ್ ರಾಯೆದ್ ಬೆ ಬರ್ಝ್ಮೆ ವೂ ಮುಜ್ಮರ್
ಆಕಾಶದಲ್ಲಿ ಹೊಗೆ ಆವರಿಸಿದಾಗ ಗಾಳಿಯ ಚಲನೆ,
ವಾತಾವರಣದಲಿ ಸುಗಂಧವ ಹರಡುವುದು.

ಬಸ್ ಕೆ ಪುರ್ ಶುದ್ ಜಹಾಂ ಅಝ್ ಆಶಾಯಿಶ್
ದರ್ ಝುಮಾ ಖುದ್‌ಯುಂ ನೇಕ್ ಅಖ್ತರ್
ಸಮಸ್ತ ವಿಶ್ವ ಅವರ ಶೃಂಗಾರದಿ ಮುಳುಗಿಹುದು,
ಅವರು ಈ ಕಾಲದ ಸಚ್ಚಾರಿತ್ರ್ಯವಂತ ಬಾದಶಾಹ.

ಹರ್ ಕೆ ಮಕಹೂರೆ ವೂ ನಿಹಾಂ ಬಝುಮಿ
ಹರ್‌ಕೆ ಮಂಝೂರೆ ವೂ ಫಲಕ್ ಮಂಝುರ್
ಯಾರ ಮೇಲಾದರೂ ಅವರು ಸಿಟ್ಟಾದರೆ ಭೂಮಿಪಾಲಾಗುವನು,
ಪ್ರೀತಿಪಡೆದವ ಆಕಾಶಕ್ಕೇರುವನು.

ತಾ ಬ ಇಕ್ಬಾಲೆ ಶಾಹ್ ಕಿಶೋರೆ ಬಕ್ಷ್
ಗಶ್ತ್ ನವಾಬ್ ಕಾಮ್‌ಯಾಬ್ ಝಫರ್
ಬಾದಶಾಹರ ನೆರಳು ಇರುವತನಕ ನವಾಬ್,
ಸಾಹೇಬರು ವಿಜಯಶಾಲಿಯಾಗುವರು ಎಂದೆಂದೂ.

ಶರಯೆ ದೀನೆ ಮುಹಮ್ಮದೀ ದರ್‍ಯಾಫ್ತ್
ತಾದರೆ ಸೀನಯೆ ಬಂದ್‌ರಾ ಮೈಸರ್
ಅವರು ದೀನೆ ಮುಹಮ್ಮದರ ಶರೀಯತನ್ನು ಪಡೆದರು,
ಮುಚ್ಚಲ್ಪಟ್ಟ ಹಾದಿ ತೆರೆದು ಸುಗಮವಾಯಿತು.

ಅಂ ವು ಮಾನ್‌ದಾ ಜಾವಾನೆ ಬಜಹಾಂ
ಅಯ್ ಕುಶಾ ಲುತ್ಫೆ ಶಾಹೆ ದೀನ್ ಪರ್‌ವರ್
ನಾನು ವಿಶ್ವದ ಆರಿಸಲಾದ ಒರ್ವ ವ್ಯಕ್ತಿ,
ಧರ್ಮಧುರಂಧರ ಬಾದಶಾಹನ ಆಶಿರ್ವಾದ ಪಡೆದವನು.

ಮನ್ ಕೆ ಪರ್ತ್‌ವೆ ತವಜ್ಜುವೆ ಶಾಹ್
ಮುಸ್ತಫಾ ಖಾನ್ ಚ್ಯೂಂ ಖುಸ್‌ರ ವೋ ಖಾವರ್
ನಾನು ಬಾದಶಾಹರ ಕೃಪೆಗೊಳಗಾದವನು,
ಮುಸ್ತಫಾ ನವಾಬ್ ಕೂಡ ಘನತೆಗೌರವ ಪಡೆದವರು.

ಯಕ್ ಶಬೇ ದರ್ಮಿಯಾನೆ ದೊ ಖಿಲಾ ಗಿರಿಫ್ತ್
ಹರ್‌ಯಕೇ ಅಝ್ ನಹುಂ ಫಲಕ್ ಬರ್ತರ್
ಒಂದೇ ದಿನದಿ ಎರಡು ಕೋಟೆಗಳ ಜಯಿಸಿದರು,
ಅವು ನವ ಆಕಾಶಗಳಿಗೂ ಸವಾಲಾಗಿದ್ದ.

ಖಿಲಯೆ ಜಂಕಮ್ಮ ಕೆ ಚರ್‌ಖೆ ಕೊಹನ್
ಅಗರ್ ಅಸ್ ಕಂಗುರಶ್ ಬರ್ ಆರದ್ ಸರ್
ಹಿರಿದಾದ ಜಂಗಮ್ಮ ಕೋಟೆ ಆಕಾಶದೆತ್ತರ,
ಅದರ ಕಮಾನುಗಳು ಗಗನದಿ ಹೊರಗಿಣುಕುವುದು.

ಉಫ್ತದ್ ಅರ್ಝ್ ಹೈರತೇ ಅಚಾಂ ಬರ್ಝುಮಿ
ಕೆ ನುಮಾಯದ್ ಅರ್ಝೂ ಬದಹರ್ ಅಸರ್
ಭುವಿಯು ಇದೆಲ್ಲವ ನೋಡಿ ಚಕಿತಗೊಂಡಿತು,
ಸರ್ವವಿಶ್ವದಿ ಇದರ ಪ್ರಭಾವ ಶಾಶ್ವತವಾಯಿತು.

ಗರ್ ಶವದ್ ಅರ್ಝ್ ಹಿಸಾರೆ ತಿರ್ನಾಮಲ್
ತಬೆ ಫಸ್ಸಾದೆ ಮನ್ ಸುಖನ್ ಗುಶ್ತರ್
ತಿರುನಾಮಲೈಯ ಆವರಣದಿ ಬಂದಿಯಾಗಿಸಿದರೂ,
ನಾ ಬಲಿಷ್ಠ ಕವಿದೇಹದವನಾಗಿರುವೆ.

ಝೆ ನಮೇ ಅಬ್‌ರೆ ಖಾಮಯೇ ಅಂ ತಾಹಶರ್
ಕೋಹೆಖಾಫ್ ಅರ್ಝ್ಮೀನ್ ಬರ್‌ಆರದ್ ಸರ್
ನನ್ನ ಲೇಖನಿಯ ಶಾಯಿ ತೀರದು ಅಂತಿಮದಿನತನಕ,
ಬರೆಯುತಿರುವೆ ಪರ್ವತ ಕೊಹೆಕಾಫ್ ಭೂಮಿಯಿಂದ ಕಿತ್ತರೂ ಕೂಡ.

ಲಂಗರಶ್ ತಾಶದ್ ಅಸ್ತ್ ಸಾಯಾ ಫಿಗನ್
ಸರರ್‌ಕಶಾರಾ ಕಸೀದ್ ಆರ ಬಸರ್
ಸಮುದಾಯದ ಅಡುಗೆ ಮನೆ ಅವರ ಅಭಿಮಾನಿಗಳಿಗೆ ಆಸರೆ,
ಅಜ್ಞೆ ಮೀರಿದವರ ತಲೆದಂಡ.

ಬಾದಶಾಹ ಸಿಪಹರ್ ಗರ್‌ದಾಹ
ನೇಶ್ತ್ ಮದ್‌ಹೆ ತು ಹದ್ ಎ ದಾನೀಶ್ವರ್
ಓ ಘನತೆಯ ಬಾದಶಾಹ, ನಿನ್ನ ವೈಭವದ ದರ್ಬಾರು,
ಜ್ಞಾನಿಗೆ ನಿನ್ನ ಹೊಗಳಲು ಮೇರೆ ಇರದು.

ತಾಜೆ ತೈಘೆ ತೂ ದರ್ ಕಲಮ್ ರೂಹೆ ಕುಫ್ರ್
ದಸ್ತೆ ಕುಫ್ಫಾರ್ ಶುದ್ ಕಲಮ್ ಎಕ್ಸರ್
ನಿನ್ನ ತಲವಾರು ವೈರಿಕುಲದ ದೇಶದಲಿ ಬೀಸಿದರೆ,
ವೈರಿಗಳ ಕೈಗಳನ್ನು ಕಡಿದು ಮಾಡುವುದು ನಾಶ.

ದಶ್ತ್ ಹರ್ ಖಿಲಯೇ ಕವೀ ಬುನಿಯಾದ್
ಚ್ಯೂಂ ಕತೆ ಮೌತ್ ಜುಮ್ಲ ಝೀರೋ ಝಬರ್
ಬಲಿಷ್ಠ ತಳಪಾಯದ ಕೋಟೆಗಳೂ ಉರುಳಿದವು,
ಸಾಗರದ ಅಲೆಗಳು ಅಪ್ಪಳಿಸಿದಾಗ ಅಲ್ಲೋಲ ಕಲ್ಲೋಲವಾದಂತೆ.

ಹರ್ ಹಿಸಾರೆ ಗರ್ಝ್ ಉಸ್ತುವಾರೀ ಹ
ಆಹೀನ್ ಪಾಯಾ ಬೂದ್ ಚ್ಯೂಂ ಖೈಬರ್
ಯಾವುದೇ ಕೋಟೆಯು ಬಲಿಷ್ಠವಾಗಿ ಖೈಬರ್
ಕೋಟೆಯಂತಿರಲಿ, ವಶಪಡಿಸಿಕೊಂಡರು ಇವರು.

ಖಾಸ್ತ್ ಮಾಂದ್ ಗರ್ದ್‌ಬಾದ್ ಅಝ್‌ಜಾಯೆ
ಹಂ ಚ್ಯೂಂ ಗರ್ದಾಬ್ ಬಂದ್ ಅಂದರ್
ಇದ್ದಂತೆಯೇ ಕೋಟೆಗಳು ಮಣ್ಣಿನ ರಾಶಿಗಳಾದವು
ಸಮುದ್ರದ ಒಳಗೆ ನೀರಿನ ಸುಳಿಗೆ ಸಿಕ್ಕಂತೆ.

ಸರ್ವರೆ ಶಾಹೆ ದೀನ್ ಪನಾಹ್ ತೂ ಇ
ದಾಗ್ ತೈಫೆ ತೂ ದಾಗೆ ಫತ್ ಹೊ ಝಫರ್
ಓ ಬಾದಶಾಹರ ಸರದಾರ, ಧಾರ್ಮಿಕ ಆಸರೆ ನೀವೇ!
ನಿಮ್ಮ ತಲವಾರಿನ ಗೆಲುವು ವಿಜಯಕಹಳೆ.

ಅಬ್ರೆ ಜೌದತ್ ಫಹೇ ಫರ್ ಅಫ್ಶಾನಿ,
ಖತ್ರ ಬರ್ ಝಮೀನ್ ಚಟಾನಂದ್ ಅಗರ್
ತಮ್ಮ ಕೃಪೆಯ ಮಳೆ ಎಲ್ಲೇ ಬಿದ್ದರೂ ಸಾಕು,
ಬಂಗಾರವಾಗುವುದು ಒಂದು ಹನಿಬಿದ್ದರೂ ಕೂಡ.

ಹಂ ಚ್ಯೂಂ ಕುರ್ಷೀದ್ ತಾ ಬರೋಝೆ ನುಶೂರ್
ಚ್ಯೂಂಶುದ್ ಅಝ್‌ಖಾಕೆ ಚಸ್ಮ ಚಸ್ಮಯೆ ಝರ್
ಅಂತಿಮದಿನದ ತನಕ ಬೆಳಗುವ ಸೂರ್ಯನಂತೆ,
ಮಣ್ಣಿನ ಕಣಗಳಾಗುವವು ಬಂಗಾರದ ಚೂರು.

ಅಬ್ರೆ ನಿಸಾನ್ ಅಗರ್ ಲಬೇ ಕುದ್‌ರಾ
ಕುನದ್ ಅಝ್ ಲುಜ್ಜಯೆ ಸಹಾಬಶ್ ತರ್
ತಲವಾರಿಂದ ತನ್ನ ತುಟಿಯನ್ನು ಸವರಿದರೆಂದರೆ
ಮುಗಿಲು ಲಜ್ಜೆಯಿಂದ ತೊಯ್ದು ಹೋಗುವುದು.

ಕುಶ್ತ ಅಝ್ ಮೌಜ್ ಕತ್‌ರದರ್ ದಾಮನ್
ಹರ್ ಝಮಾನ್ ಸದ್ ಹಝಾರ್ ಬೆಹರ್ ಫರ್
ಮಡಿಲಲ್ಲಿ ರಭಸದ ಅಪಾಯ ಸಹಸ್ರಾರು ಸಮುದ್ರಗಳಲಿರಲಿ,
ಬಾದಶಾಹನ ಮುಂದೆ ಹನಿಯಂತೆ.

ಪೇಶೆ ರೂಯೆ ತೂ ನಯ್ಯರೆ ಆಝಂ
ಕೇಶರಾ ಖ್ವಾಂದ್ ದರ್ ರಹೇ ಅಹ್‌ಕರ್
ನಿನ್ನ ಮುಂದೆ ದೊಡ್ಡ ನಕ್ಷತ್ರ ನಯ್ಯರೆ ಆಝಂ,
ರಸ್ತೆಯಲ್ಲಿ ಬಿದ್ದ ಸಾಮಾನ್ಯವಸ್ತುವಿನಂತೆ.

ಸಾಫ್ ತಬಾನ್ ಬಝ್ಮೆ ಮದ್‌ಹತ್‌ರ
ನಫ್ಸ್ ಅಸ್ಸೀನ ಸರ್‌ಝಂದ್ ಚ್ಯೂಂ ಸೆಹರ್
ಈ ಹೊಗಳು ಗೀತೆಯಿಂದ ಆರೋಗ್ಯವಂತರ
ಎದೆಯು ಮುಂಜಾವಿನ ಹವೆಯಂತೆ ಶುದ್ಧವಾಗಿದೆ.

ಖಾಕೆ ರಾಹೆ ತೂ ಅಂ ನ ಖಾಕಾನಿ
ಅನ್ವರಿ ಬಾಯಿದಂ ಸನಾ ಗುಸ್ತರ್
ನಾನು ನಿನ್ನ ಹಾದಿಯ ಧೂಳು, ಸುಲ್ತಾನನಲ್ಲ,
ನಾನು ಅನ್ವರಿಯಾಗಿ ನಿನ್ನ ಹೊಗಳುತ್ತಿದ್ದೇನೆ

ತೋತಿಯೆ ತಬ್ ಅಂ ಅಝ್ ಪರ್ ಆಫ್ತಾದ್
ರೇಝಿದ್ ಅಝ್ ತಂಗೆ ಕೋಹಸಾರ್ ಅಗರ್
ಗಿಳಿ ತಡೆಯಿಲ್ಲದೆ ಹಾರಿ ದುರ್ಗಮ ಪರ್ವತವನ್ನೂ ದಾಟುತಿದೆ,
ಹೀಗೆ ನನ್ನ ಆರೋಗ್ಯವೂ ಸಹಾ.

ಬದ್‌ವಾ ಕುನ್ ಝಹೂರ್ ಖತ್ಮೆ ಸುಖನ್
ಕೆ ಝೀ ಹರ್‌ಮುದ್ದುವಾ ದುವಾ ಕುಶ್ತರ್
ಝಹೂರ್, ಪ್ರಾರ್ಥನೆಯೊಂದಿಗೆ ಈ ಪದ್ಯವ ಕೊನೆಗೊಳಿಸು,
ಇಚ್ಛೆ ನಿನ್ನದು ಪವಿತ್ರ ದುವಾ ಮಾತ್ರ.

ತಾಕೆ ಬಾಶದ್ ಬುಲಂದ್ ದರ್ ದೋ ಜಹಾಂ
ಗುಲ್‌ಗುಲೆ ಪತ್ತ್ ದೀನೆ ಪೈಗಂಬರ್
ಸಮಸ್ತ ವಿಶ್ವದಲಿ ದೀನೆ ಪೈಗಂಬರರ,
ಇಸ್ಲಾಂ ಧರ್ಮದ ಘೋಷವು ಹಬ್ಬಿ ಪಸರಿಸಲಿ

ಬಾಗ್ ಬರ್ ಜುಮ್ಲಯೆ ಶಹಾನ್ ಘಾಲಿಬ್
ಶಾಹೆ ಆದಿಲ್ ಮುರಾದ್ ನೇಕ್ ಅಖ್ತರ್
ಬಾದಶಾಹ ಆದಿಲ್ ಷಾ ಜಗದೆಲ್ಲ ಸುಲ್ತಾನರಿಗಿಂತ
ಮೇಲುಗೈ ಸಾಧಿಸಲಿ, ಸತ್ಯ ಪ್ರಾಮಾಣಿಕರವರು.

ಝೀವರೆ ಘೋಶೆ ತೂ ಗಿರಾನಶ್ ಬಾದ್
ಖಬ್ರೆ ಪತ್ಥೆ ನೌ ಝು ಹರ್ ಕಿಶೋರ್
ನಿಮ್ಮ ಕಿವಿಯೋಲೆ ಗೌರವ ಘನತೆಯ
ಚಿನ್ಹೆಯಾಗಲಿ ವಿಶ್ವದೆಲ್ಲೆಡೆ ವಿಜಯದುಂಧುಬಿ ಮೊಳಗುತಿರಲಿ.

ಖುತುಬ್ ಷಾನ ಕುತಂತ್ರ ಪಿತೂರಿಯ ಕಾರ್ಯಗಳ ಹತ್ತಿಕ್ಕಿದ ಬಳಿಕ ಉಳಿದ ಇತರ ಕೋಟೆಗಳ ಮೇಲಿನ ದಾಳಿ ಮತ್ತು ಜೀಜಿಯ ಕೋಟೆಗೆ ನವಾಬ್ ಸಾಹೇಬರು ತಲಪುವುದು ಹಾಗೂ ಸೇನಾನಿ ಮುಝುಫ್ಫರುದ್ದೀನ್‌ರ ಮರಣ.

ಬಾದಶಾಹ ಮತ್ತು ಅವರ ಸೈನ್ಯ ಯಾವ ರಾಜ್ಯ ಹಾಗೂ ಪಟ್ಟಣವನ್ನು ದಾಳಿ ನಡೆಸುವಾಗ ಮಾಡುವ ಹೊಡೆತದ ವೇಗ ಆಕಾಶವನ್ನೂ ಮೀರಿ ಸಾಗುತ್ತದೆ. ವೀರ ಹಜ್ರತ್ ಬಾದಶಾಹರ ಸೈನ್ಯ ಯಾವದಿಕ್ಕಿಗೆ ಮುಖ ಮಾಡುತ್ತಾರೋ ಏಳು ಭೂಮಿಗಳಲ್ಲಿ ಕೂಡ ಅದರ ವಿಜಯದ ಸದ್ದು ಕೇಳಿ ಬರುತ್ತದೆ.

ನಜ್ಮ್

ಕುಸ್ರವೋ ಗಾಝಿ ಮುಹಮ್ಮದ್ ಷಾ ಗಝುಬ್ ಶಂಶೀರೆ ವೂ
ಮೀ ಶವದ್ ರೋಶನ್ ಚರಾಗೆ ದೀನ್ ಖೈರುಲ್ ಮುರ್‌ಸಲೀನ್
ವೀರ ಹಜ್ರತ್ ಮುಹಮ್ಮದ್ ಷಾರ ಖಡ್ಗವು
ಇಸ್ಲಾಂ ಧರ್ಮದ ದೀಪವನ್ನು ಬೆಳಗಿಸುವುದು.

ಜುರ್ ಅ ಅಝುಬ್ ಜಾಮೆ ಲುತ್ಫಶ್ ಹರ್ ಕೆ ಯಾಬದ್ ತಾ ಅಬದ್
ನಯ್ಯರೇ ಕದ್‌ರೋ ಶರಫ್ ಪೂರ ಬತಾಬ್‌ದಾರ್ ಝು ಜಬೀನ್
ಅವರ ಕೃಪೆಯ ಶರಾಬಿನ ಒಂದು ಗುಟುಕಾದರೂ ಸಿಕ್ಕಲ್ಲಿ ಕುಡಿಯಲು
ಸದಾ ಕಾಲಕ್ಕೂ ಅವನ ಮರ್ಯಾದೆಯ ನಕ್ಷತ್ರ ಹಣೆಯಲ್ಲಿ ಮಿನುಗುತಿರುತದೆ.

ಹರ್ ಕೆ ಏರ್‌ಝುತ್ ಮೆಹರೆ ವೂ ಗರ್ದೆ ಶರಶ್ ಗರ್ದದ್ ಶೀಪಹರ್

ಆಂಖೆ ಅಝುಬ್ ಕೀನಶ್ ಝುಂದ್ ದಮ್ ದರ್‌ಕಶತ್ ಊರ ಝುಮೀನ್
ಅವರ ಕೃಪೆಯ ಫಲವನ್ನು ತಲೆಯ ಮೇಲಿಟ್ಟು ಕೊಳುವವನ ತಲೆ ಎತ್ತರದಲಿರುವುದು
ಅವರ ಮೇಲೆ ದ್ವೇಷಪಡುವವನನ್ನು ಭೂಮಿ ಒಳಗೆಳೆದುಕೊಳುವುದು.

ಅರ್ಜುಮನ್‌ದಾನ್ ಅಸ್ತವಾಫೆ ದರ್ಗಯೇ ವೂ ಬೆಹರಮನ್
ಸರ್ ಬುಲಂದಾನ್ ಜುಮ್ಲ ಅಝ್ ಗರ್ದೆ ರಹಿಶ್ ಗರ್ದೂ ನಶೀನ್
ಬಾದಶಾಹರ ದರ್ಬಾರಿನ ಕಡೆ ಯಾರು ಪ್ರದಕ್ಷಿಣೆ ನಡೆಸಿದರೋ ಅವರು ಲಾಭಪಡೆದರು
ಅವರ ತಲೆಯು ಎತ್ತರದ್ದಾಯಿತು, ಸಮೀಪವರ್ತಿಯಾದರು ಅವರ ಹಾದಿನಡೆದದವರು.

ಶಹನಯೆ ರಾಯಿಶ್ ಚ್ಯೂಂ ಗರ್ಮೆ ಆಲಮೇ ಆರಾಯಿ ಶವದ್
ಜಾಬೆಹತ್ ಖುರ್ಷಿದ್ ರಾ ಚ್ಯೂಂ ಮೋಮ್ ದರ್ ಝೇರೇ ನಗೀನ್
ಅವರ ಅಭಿಪ್ರಾಯದಿಂದ ವಿಶ್ವದಲಿ ಪ್ರಭೆಯಿರುವುದು
ಉಂಗುರದ ಹರಳ ಕೆಳಗೆ ಮೇಣ ಸವರಿದಾಗ ಹೊಳಪ ನೀಡುವಂತೆ.

ಬಾದಶಾಹರ ಪುಣ್ಯದಿಂದ ಜಂಕಮ್ಮ ಹಾಗೂ ತಿರುನಾಮಲ್ಯೆ ಕೋಟೆಯನ್ನು ವಶಪಡಿಸುವ ಮೂಲಕ ತನ್ನ ರಾಜ್ಯದೊಳಗೆ ಸೇರಿಸಿಕೊಳ್ಳುವುದು ಸಾಧ್ಯವಾಯಿತು. ಬಾದಶಾಹರ ಅಪ್ಪಣೆಯ ಮೇರೆಗೆ ನವಾಬ್ ಮುಸ್ತಫಾ ಖಾನ್ ತನ್ನ ಸೈನ್ಯದೊಂದಿಗೆ ಜೀಜೀ ಕೋಟೆಯ ಕಡೆ ತೆರಳಿದರು. ದೊಡ್ಡ ಪರ್ವತದ ತುದಿಯಲ್ಲಿ ಬಲಿಷ್ಠವಾದ ವೇದ್ ಎಂಬ ಕೋಟೆಯಿದೆ. ಅದರ ಎತ್ತರ ಆಕಾಶಕ್ಕೆ ಸವಾಲೊಡ್ಡುವಂತಿದೆ. ಅದರ ತಳಪಾಯ ಮತ್ತು ಗೋಡೆಯ ಭಾರವನ್ನು ಭೂಮಿ ಹೊರುವ ಎತ್ತು ಮೀನಿನ ಎದೆಯಮೇಲೆ ನಿಂತು ಎತ್ತಿ ಹಿಡಿದಿದೆ. ಅಲ್ಲಿಂದ ಆಕಾಶದತ್ತ ಮುಖಮಾಡಿರುವ ಈ ಕೋಟೆಯನ್ನು ಆಕಾಶದಿಂದ ನೋಡಿದರೆ ತೆರೆದ ಅದರ ಕಂದಕದ ದೃಶ್ಯ ದೊಡ್ಡ ಮೊಸಳೆಯೊಂದು ಬಾಯಿತೆರೆದು ನಿಂತಂತೆ ಕಾಣುತ್ತದೆ.

ಅಭ್ಯಾತ್

ಕೋಹೆ ಕಾಫ್ ಅಝ್ ಪಾಯಯೆ ಅಶ್ ಡರ್ ಇನ್‌ಫೆಆಲ್
ಸಾಯಯೇ ವೂ ದಾಮೆ ಉನ್ ಕಾ ಯೆ ಖಯಾಲ್
ಪರ್ವತ ಕೋಹೆ ಕಾಫ್ ಕೂಡ ಈ ಕೋಟೆಯ ಬಲವನ್ನು ನೋಡಿ ತಲೆತಗ್ಗಿಸಿದೆ
ಅದರ ನೆರಳು ಹಕ್ಕಿಗಳಿಗೆ ಹಾಕಿದ ಜಾಲದಂತೆ ಹರಡಿದೆ.

ಸರ್ ಕುಶಾಂ ಗಿರ್ದೆ ಆಂ ಹಿಸ್ನೆ ಹಸೀನ್
ಮಾಂದಾ ಚ್ಯೂಂ ನಕ್‌ಷೆ ಕದಂ ಸರ್ ಬರ್ ಝುಮೀನ್
ಈ ಬಲಿಷ್ಠ ಕೋಟೆಯ ನಾಲ್ಕೂ ದಿಕ್ಕಿನಲಿ ಚಾರಣರು ಹತ್ತಲು ಯತ್ನಿಸಿದಲ್ಲಿ
ಭೂಮಿಯ ಮೇಲಿಂದ ಕದಲಲಾರವು ಅವರ ಹೆಜ್ಜೆಗಳು.

ಅಖ್ಲ್ ವೊ ತಕ್ದೀರ್ ಅಸ್ಪಯೆ ತಸ್‌ಖೀರೆ ಆಂ
ಮೀ ಶುದೀ ಝುಂಜೀರ್ ಪಾಯೆ ಆಖಿಲಾಂ
ಅದನ್ನು ವಶಪಡಿಸಿಕೊಳಲು ಮಾಡಿದ ಯತ್ನವು
ಬುದ್ಧಿವಂತರ ಕಾಲಿಗೆ ಕಟ್ಟಲಾದ ಸಂಕೋಲೆಯಾಗಿದೆ.

ನವಾಬ್ ಸಾಹೆಬರು ದೀರ್ಘವಾಗಿ ಈ ಎರಡೂ ಕೋಟೆಗಳ ಮೇಲೆ ದೃಷ್ಟಿ ಹರಿಸಿ ಯೋಚಿಸಿದಾಗ ಇಲ್ಲಿ ನಾವು ಕೆಲಕಾಲ ತಂಗಬೇಕೆಂದು ತೀರ್ಮಾನ ಮಾಡಿದರು.

ಕೋಟೆಯನ್ನು ಮಿಂಚಿನಂತೆ ಆಕ್ರಮಿಸಬೇಕಾಗಿದೆ ಎಂದು ತಮ್ಮ ಎಲ್ಲ ಮಂತ್ರಿಗಳು, ಸರದಾರರು ಅಧಿಕಾರಿಗಳಿಗೆ ನವಾಬ್ ಸಾಹೇಬರು ಅಪ್ಪಣೆ ಮಾಡಿದರು. ಕೋಟೆಯ ಕಮಾನುಗಳ ಮೇಲೆ ಧಾಳಿ ಹೇಗೆ ನಡೆಸಬೇಕೆಂದರೆ ಅವು ಆಕಾಶದೆತ್ತರಕ್ಕೆ ಹಾರುವಂತೆ ಮಾಡಬೇಕು ಎಂದು ಹೇಳಿದರು. ವೈರಿಗಳ ದೇಹಗಳನ್ನು ಎಂದೂ ಇದ್ದಿಲ್ಲವೆಂಬಂತೆ ಮಣ್ಣುಮುಕ್ಕಿಸಬೇಕಾಗಿದೆ. ವೈರಿಗಳ ಕುಟುಂಬಕ್ಕೆ ಸೇರಿದ ಮನೆ ಮಠ ಸೊತ್ತುಗಳನ್ನು ಮತ್ತೆಂದೂ ಮರು ನಿರ್ಮಿಸಲಾರದ ರೀತಿಯಲ್ಲಿ ನಾಶಪಡಿಸಿ ಎಂದು ಸೈನ್ಯಕ್ಕೆ ಆಜ್ಞಾಪಿಸಿದರು. ನವಾಬ್ ಸಾಹೇಬರ ಆಜ್ಞೆಯಿಂದ ರೋಮಾಂಚನ ಗೊಂಡ ಯುವ ಬಹದ್ದೂರ ಸಿಪಾಯಿಗಳು ಹುಮ್ಮಸ್ಸಿನೊಂದಿಗೆ ನಾಲ್ಕೂ ದಿಕ್ಕಿನಲ್ಲಿ ಮೊದಲು ಮೈದಾನದತ್ತ ನಡೆದರು. ಗಡಿಯನ್ನು ಈ ಮೂಲಕ ಘೇರಾವು ಮಾಡಿಕೊಂಡು ತಯಾರಾಗಿ ನಿಂತರು. ಈ ಘೇರಾವು ಬಹಳ ಹೊತ್ತಿನ ತನಕ ನಡೆಯಿತು. ಎರಡು ಕಡೆಯಲ್ಲೂ ಈ ಮೌನದ ಸಮಯ ಹೆಚ್ಚುತ್ತಲಿರುವಂತೆ ಅನಿಸಿತ್ತು. ಶಾಜಿರಾಜಾ ಬಣ್ಣ ಬದಲಾಯಿಸುವ, ನಯದ ಸೋಗಿನಲ್ಲಿರುವ ಹೆಸರಾಂತ ಮೋಸಗಾರನೂ ಕುತಂತ್ರಿಯೂ ಆಗಿದ್ದ. ಅವನು ತನ್ನ ಚೌಕಿದಾರನನ್ನು ದೂತನನ್ನಾಗಿಸಿ ಒಂದು ಬಿನ್ನಹ ಪತ್ರದೊಂದಿಗೆ ಕಳುಹಿಸಿದ. ಈ ಬಿನ್ನವತ್ತಳೆಯಲ್ಲಿ ಈ ದಿನ ತಾನು ಕೆಲವು ಕಾಲ ನನ್ನ ಸೈನ್ಯ, ಸಾಮಾನು ಸರಂಜಾಮುಗಳೊಂದಿಗೆ ಈ ನನ್ನ ಊರಲ್ಲಿ ಆರಾಮ ಮಾಡಬೇಕೆಂದು ನಾನು ಇಚ್ಛಿಸಿದ್ದೇನೆ ಎಂದು ಬರೆದಿದ್ದ. ನವಾಬ್ ಸಾಹೇಬರು ತನ್ನ ಉತ್ತರದಲ್ಲಿ 'ನಿನ್ನ ಕುತಂತ್ರಗಳ ಮೂಲಕ ಯೋಜನೆಗಳನ್ನು ತಯಾರು ಮಾಡಿ ತಲೆತಪ್ಪಿಸಿಕೊಳ್ಳುವ ಕ್ರಮ ನಮ್ಮಲ್ಲಿ ನಡೆಯದು, ಬದಲಿಗೆ ನಮ್ಮ ಮಧ್ಯೆ ವೈಷಮ್ಯವನ್ನು ಹೆಚ್ಚಿಸುವ ಸಂಗತಿಯಾಗಿ ಮಾರ್ಪಾಡಾಗಲಿದೆ ಎಂದೆನಿಸುತ್ತದೆ' ಎಂದು ಹೇಳಿ ಕಳುಹಿಸಿದರು. ಶಾಜಿರಾಜನಿಗೆ ಈ ಉತ್ತರ ತಲಪಿದಾಗ ಮತ್ತೆ ಉತ್ತರವಾಗಿ ಇನ್ನೊಂದು ಸಂದೇಶವನ್ನು ಕಳುಹಿಸಿದ.

'ಇಲ್ಲಿ ಸೈನ್ಯದ ಶಿಬಿರಗಳಲ್ಲಿ ಆಹಾರ ಧಾನ್ಯ ತುಂಬ ದುಬಾರಿ ಮತ್ತು ಕೊರತೆ ಇದೆ. ಇದರಿಂದಾಗಿ ನನಗೆ ನನ್ನ ರಾಜ್ಯಕ್ಕೆ ಹೋಗಲು ಅನುಮತಿಯನ್ನು ನೀವು ದಯಪಾಲಿಸಬೇಕು' ಎಂದು ಶಾಜಿರಾಜ ಸಂದೇಶವನ್ನು ಕಳುಹಿಸಿದ. ಈ ಶಾಜಿರಾಜ

ಬಹಳ ಕುತಂತ್ರಿ ಮತ್ತು ಬೇರೆಯುವರನ್ನು ಹಾದಿ ತಪ್ಪಿಸುವ ಕೆಲಸದಲ್ಲಿ ನಿಷ್ಣಾತನಾಗಿದ್ದಾನೆಂದು ತಿಳಿದು ಸಾಮಾನ್ಯರಂತೆ ವೇಷ ಬದಲಿಸಿದ ಸೈನಿಕರ ಒಂದು ತಂಡವನ್ನು ಅವನಲ್ಲಿಗೆ ನವಾಬ್ ಸಾಹೇಬರು ಕಳುಹಿಸಿ ಬಹಳ ಜಾಗರೂಕತೆಯಿಂದ ಅವನನ್ನು ಸೆರೆಹಿಡಿದು ತನ್ನ ಬಳಿಗೆ ತರಲು ಹೇಳಿದರು. ಅವನ ಬಳಿಯಿರುವ ಸಂಪತ್ತು, ಸಾಮಾನು ಸರಂಜಾಮುಗಳನ್ನು ಎತ್ತಿ ತಂದು ಬಾದಶಾಹರ ಖಜಾನೆಗೆ ಒಪ್ಪಿಸಿ ಮತ್ತು ಅವನ ಉಳಿದೆಲ್ಲ ಸೊತ್ತುಗಳನ್ನೂ ನಾಶಪಡಿಸಿರೆಂದು ಸೂಚಿಸಿದರು.

ಅಭ್ಯಾತ್

ಖಿದ್‌ಯೂ ಕೆ ಗಿರ್ದೂನ್ ಪರಿಸ್ತಾರ್ ವೂ ಅಸ್ತ್
ಖಝಾ ಕಬ್ಝಯೆ ತೈಘೆ ಕೂಬಾರ್ ಕುವಸ್ತ್

ಬಾದಶಾಹರ ದೌಲತು ಎಂದರೆ ಎಂತಹದು! ಅವರ ನಾಲ್ಕೂ ಸುತ್ತಲ್ಲಿ ಲೆಕ್ಕವಿಲ್ಲದ ಅಭಿಮಾನಿಗಳು
ಸಾವು ಅವರ ರಕ್ತಪಿಪಾಸು ಖಡ್ಗದ ಮುಷ್ಠಿಯಲಿರುವುದು.

ಅಗರ್ ತೀರರಾಯೆ ಝುಬಕ್ತೆ ವಿಝುಂ
ಬರಾಹೆ ಖಿಲಾಫಶ್ ಗುರುಝಾರಸ್ತ್ ಕದಂ

ಅವರ ಹಾದಿಯಲಿ ನಡೆಯದವನು ಬಹಳ ಮೂರ್ಖನೆನಿಸುವನು
ಅವರ ವಿರೋಧಿಯಾಗಿದ್ದವನು ಕೂಡ ತಿಳಿವಳಿಕೆ ಇಲ್ಲದವನೆನಿಸುವನು.

ನವಾಬ್ ಸಾಹೇಬರು ಬಾದಶಾಹರ ಆಜ್ಞೆಯಮೇರೆಗೆ ಶಾಜಿ ರಾಜಾನಿಗೆ ಕೈಕಟ್ಟಿಹಾಕಿ ಕೋಟೆಯ ಸ್ಥಳಕ್ಕೆ ತಂದರು. ಕೆಲವು ಕಾಲದಿಂದ ನವಾಬ್ ಸಾಹೇಬರು ನರ ದೌರ್ಬಲ್ಯದ ರೋಗದಲ್ಲಿ ನರಳುತ್ತಿದ್ದು, ಅದು ಉಲ್ಬಣಿಸಿ ಗುಣಮುಖರಾಗದೆ ಹಾಸಿಗೆ ಹಿಡಿದು ಸ್ವಲ್ಪ ಕಾಲದ ನಂತರ ನವಾಬ್ ಸಾಹೇಬರು ಇಹಲೋಕ ತ್ಯಜಿಸಿದರು.

ನವಾಬ್ ಸಾಹೇಬರ ಅಂತಿಮಯಾತ್ರೆಯ ಬಳಿಕ ಜೇಜಿ ಕೋಟೆಯನ್ನು ವಶಪಡಿಸಿಕೊಳ್ಳುವ ಯತ್ನ ಸಡಿಲಾಯಿತು. ಬಾದಶಾಹರ ಆಜ್ಞೆಯಂತೆ ಸೇನೆಯ ಮಹಾದಂಡನಾಯಕನ ಸ್ಥಾನವನ್ನು ಸರದಾರ ಮುಝುಫ್ಫರುದ್ದೀನರ ಹೆಸರಿಗೆ ನೀಡಲಾಯಿತು. ಅವರು ಆಗ ತಾರಪತ್ರಿ ರಾಜ್ಯದ ಗವರ್ನರರಾಗಿದ್ದರು. ಬಾದಶಾಹರ ಆಜ್ಞೆ ತಲಪಿದ ಕೂಡಲೆ ಅವರು ಜೇಜಿ ಕೋಟೆಗೆ ತಲಪಿದರು. ಅವರು ಬಾದಶಾಹರ ಕೆಲಸವನ್ನು ನಬಿಯವರ ಧರ್ಮದ ಕಾರ್ಯವೆಂದು ತಿಳಿದು ಕೈಗೆತ್ತಿಕೊಳ್ಳುತ್ತಿದ್ದರು. ಬಾದಶಾಹರ ಆಜ್ಞೆಯಂತೆ ಈ ಸೇನಾಧಿಪತಿ ತನ್ನ ಕೆಲವು ಬುದ್ಧಿವಂತ ಮತ್ತು ಆಯ್ದ ಅಧಿಕಾರಿಗಳು ಹಾಗೂ ಶೂರ ಸೈನಿಕ ಅಂಗರಕ್ಷಕರೊಂದಿಗೆ ಪ್ರಯಾಣ ಬೆಳೆಸಿದ್ದರು.

ಝೆ ಫೌಜಿ ದಿಲಿರಾನೆ ವಾಲ ಗುಹರ್
ಬಮೌಜ್ ಅಂದರಾಮದ್ ಮುಹೀತೆ ಕತರ್
ಬಹದ್ದೂರ ಸೈನಿಕರಿಂದ
ಎದ್ದ ಭಯಂಕರ ತೂಫಾನು ಶಾಂತವಾಯಿತು.

ಫರೋಗೆ ಸುಪರ್‌ಹಾಯಿ ಆಯಿನಾಯೆ ತಾಬ್
ಫಗಂದ್ ಆತಿಶೇ ರಶ್ಕ್ ದರ್ ಆಫ್‌ತಾಬ್
ಸುಂದರ ಕನ್ನಡಿಯ ಪ್ರತಿಫಲಿತ ಬೆಳಕು
ಸೂರ್ಯನ ಮೇಲೆ ಪೇರಿಸಲಾಯಿತು ಆಸೆಯ ಬೆಂಕಿ.

ಸುಪರ್ ಬುರುದ್ ಅಚ್ಛರ್‌ಕೆ ಗರ್ದಾನ್ ಗರ್ದ್
ಕಮಾನ್‌ದಾರ್ ರಾ ಶುದ್ ಝಫ್ರೆ ಪೇಶೆ ಬುರುದ್
ಆಕಾಶದಲ್ಲಿ ಕವಿದ ಧೂಳಿನ ಮೋಡ ಪಸರಿಸಲು ತೊಡಗಿತು
ಬಿಲ್ಲುಬಾಣದ ಪಟುಗಳಿಗೆ ಮುಂದಿನ ಜಯದ ಸಂಕೇತ ಕಾಣತೊಡಗಿತು.

ಸೈನ್ಯ ಜೀಜಿ ಕೋಟೆಯ ಬಳಿ ಬಂದಾಗ ಜಯದ ಧ್ವಜವನ್ನು ಮೈದಾನದಲ್ಲಿ ಹಾರಿಸಲಾಯಿತು. ಸೇನಾನಿ ಮುಝಫ್ಫರುದ್ದೀನ್ ಆಗಮಿಸಿದ್ದರಿಂದ ವೈರಿಗಳಲ್ಲಿ ಭಯದ ಕರಿನೆರಳು ಆವರಿಸಿತು. ಇವರು ಕೋಟೆಗಳನ್ನು ಗೆಲ್ಲುವುದು ಇವರಿಗೆ ಎಷ್ಟು ಸುಲಭವಾಗಿತ್ತೆಂದರೆ ಲೋಟದಲ್ಲಿ ತುಂಬಿದ ಶರಾಬನ್ನು ಎತ್ತಿ ಕುಡಿದ ಹಾಗೆ! ಸೇನಾನಿ ಮುಝಫ್ಫರುದ್ದೀನ್ ನೋಡುವಾಗ ಈ ವೈರಿಗಳು ಕೋಟೆಯ ಆವರಣದಿಂದ ಹೊರಗೆ ಬರದಿರುವುದು ಕಂಡುಬಂತು.

ಎಲ್ಲ ಮಂತ್ರಿಗಳು, ಅಧಿಕಾರಿಗಳಿಗೆ ಹಾಗೂ ಸರದಾರರಿಗೆ ಕೋಟೆಯ ಒಳಗೆ ನುಗ್ಗಲು ತಯಾರಾಗಿರೆಂದು ಸೇನಾಧಿಪತಿ ಆಜ್ಞೆ ನೀಡಿದರು. ನಾಲ್ಕು ದಿಕ್ಕಿನಲ್ಲೂ ಎಲ್ಲ ಶೌರ್ಯವಂಚಿತ ವೀರರಂತೆ ಮೈದಾನದೊಳಗಿ ಪ್ರವೇಶಿಸಿರೆಂದರು. ಈ ಕಾರ್ಯ ನೆರವೇರಲಿಕ್ಕಾಗಿ ಅಫ್ಜಲ್ ಖಾನರನ್ನು ಮುಂದೆ ಕಳುಹಿಸಲಾಯಿತು. ಇದರಿಂದ ವೈರಿಗಳು ಯುದ್ಧಕ್ಕಾಗಿ ರಣರಂಗಕ್ಕೆ ಆಗಮಿಸಲಿ ಎಂಬುದು ನಿರೀಕ್ಷೆಯಾಗಿತ್ತು. ಅಫ್ಜಲ್ ಖಾನ್ ತನ್ನ ಶೌರ್ಯ ತಾಕತ್ತನ್ನು ಹಿಡಿತದಲ್ಲಿಟ್ಟುಕೊಂಡು ಕೋಟೆಯ ಅವರಣದ ಕಡೆ ಹೋಗುತ್ತಿದ್ದರು. ಆಗ ವೈರಿಗಳು ಬಾಣಗಳ ಮಳೆಗೆರೆಯಲು ತೊಡಗಿದರು. ಅಫ್ಜಲ್ ಖಾನರು ಹತ್ತಿರದ ಪರ್ವತವೊಂದರ ಹಿಂದೆ ಅವಿತುಕೊಂಡರು. ಈ ಮಧ್ಯೆ ಸೇನಾಧಿಪತಿ ಮುಝಫ್ಫರುದ್ದೀನ್ ಸರ್ವ ತಯಾರಿಯೊಂದಿಗೆ ಸೈನ್ಯದೊಂದಿಗೆ ಪರ್ವತದ ಹಾದಿಯಲ್ಲಿ ಹಿಂದಿನಿಂದ ಅಲ್ಲಿಗೆ ತಲಪಿದರು. ಸೈನಿಕರೆಲ್ಲರೂ ದೊಡ್ಡದಾಗಿ ಜಯಘೋಷದೊಂದಿಗೆ ಮುನ್ನುಗ್ಗಿದರು. ವೈರಿಗಳು ಕೋಟೆಯ

ಮೇಲಿನಿಂದ ಸಹಸ್ರಾರು ಬಾಣಗಳ ಮಳೆಗೈಯ್ಯುತೊಡಗಿದರು. ಆದರೆ ಸೇನಾಧಿಪತಿಯವರು ತಮ್ಮ ಸಂಪೂರ್ಣ ಶೌರ್ಯ ಸಾಹಸಗಳಿಂದ ಬಾಣಗಳ ಹೊಡೆತವನ್ನು ತನ್ನ ಮೇಲೆ ಹೂ ಮಳೆಗೆರೆದಂತೆ ಎಂದು ಕ್ಷುಲ್ಲಕವಾಗಿಸಿದರು.

ಕೋಟೆಯನ್ನು ವಶಪಡಿಸಿಕೊಳ್ಳುವ ಕಟ್ಟಕಡೆಯ ಎಲ್ಲ ತಯಾರಿ ಮಾಡಿಕೊಂಡು ತಮ್ಮ ಶೌರ್ಯವನ್ನು ಸೇನಾಧಿಪತಿ ತೋರುವುದರೊಂದಿಗೆ ರಣರಂಗದಲ್ಲಿ ಯುದ್ಧದ ಕೋಲಾಹಲ ಶುರುವಾಯಿತು. ಬಹದ್ದೂರ ಸಿಪಾಯಿಗಳು ತಮ್ಮ ಎಲ್ಲ ಶೌರ್ಯವನ್ನು ಎದೆಯುಬ್ಬಿಸುವ ಮೂಲಕ ಪ್ರದರ್ಶಿಸುತ್ತ, ಮೊದಲು ಗಂಭೀರವಾದ ಹೆಜ್ಜೆಯಿಡುತ್ತ ಸಿಂಹವು ತನ್ನ ಮುಂದಿನ ಶಿಕಾರಿಯನ್ನು ಹಿಡಿಯಲು ಹೊರಟಂತೆ ಕೋಟೆಯ ಒಳ ಮೈದಾನದತ್ತ ನುಗ್ಗಿದರು.

ನಜ್ಮ್

ಬಜಸ್ತನ್ ದರಾಮದ್ ಖಿರ್ಝಂಗ್ ಅಂಚಾ
ಕೆ ಶುದ್ ಬಾ ಝಮೀನ್ ಸೀನಯೆ ಸಾಫ್ ಆಸ್‌ಮಾನ್
ಕೋಟೆಯೊಳಗೆ ಅವರು ನುಗ್ಗಿದುದರಿಂದ
ಶುದ್ಧ ಎದೆಯ ಆಕಾಶ ಭೂಮಿಯಾಗಿ ಪರಿವರ್ತನೆಗೊಂಡಿತು.

ಜಿಗರ್‌ಗಾಹೆ ಶೇರಾಂ ಜೆ ಶಮ್‌ಶೀರೆ ತೇಝ್
ಚುನಾದಸ್ತ್ ದರ್ ದಶ್ತ್ ವ ದರ್ ರೇಝ್ ರೇಝ್
ಧೈರ್ಯವಂತ ಸಿಂಹಗಳ ತಲವಾರುಗಳ ಧಾರೆಗೆ
ತತ್ತರಿಸಿ ಹೋದವು ಕಾಡು ನಾಡುಗಳೆಲ್ಲ.

ಕೆ ಅಝ್ ರೇಝುಸ್ ರೇಝುಹಾಯೆ ಜಿಗರ್
ಜಮೀನ್ ಶುದ್ ಪುರ್ ಅಝ್ ರೇಝುಯೇ ಲಾಲ್‌ತರ್
ಅವರ ಖಡ್ಗದ ಧಾರೆಗೆ ಸಿಲುಕಿ ಎದೆ ಚೂರು ಚೂರಾಯಿತು
ಭೂಮಿ ತುಂಬ ರಕ್ತದ ಕೆಂಬಣ್ಣದಿಂದ ತೊಯ್ದು ಹೋಯಿತು.

ಕೋಟೆಯ ಪ್ರತಿಯೊಂದು ಬುರುಜಿನ ಗೋಡೆಗಳಲ್ಲಿ ನಿಂತ ಸಿಪಾಯಿಗಳು ವೈರಿಗಳ ಬಾಣಗಳನ್ನು ಎದುರಿಸುತ್ತ ಅಚಲವಾಗಿ ನಿಂತಿದ್ದರು. ಅಲ್ಲಿಂದ ಕದಲುವುದೆಂದರೆ ವೀರ ಸಿಪಾಯಿಗಳು ತಮ್ಮ ಶೌರ್ಯಕ್ಕೆ ಅಗೌರವ ಸೂಚಕವೆಂದು ತಿಳಿದುಕೊಂಡಿದ್ದರು. ಇನ್ನೊಂದೆಡೆ ಖಡ್ಗಗಳನ್ನು ಝಳಪಿಸುತ್ತಾ ಸಿಪಾಯಿಗಳು ವೈರಿಗಳನ್ನು ತಂಡ ತಂಡವಾಗಿ ನಿರ್ನಾಮ ಮಾಡುತ್ತಿದ್ದರು. ತೋಪುಗಳು ಸಿಡಿಸಿದ್ದರಿಂದ ಮತ್ತೇರಿದ ಆನೆಗಳು ಪರ್ವತದ ತುದಿಯಿಂದ ಕಳಗೆ ನುಗ್ಗ ತೊಡಗಿದವು.

ಆನೆಗಳ ಓಡಾಟದಿಂದ ಧೂಳು ಇಡೀ ಪ್ರದೇಶವನ್ನು ಆವರಿಸಿತು. ರಣರಂಗದಲ್ಲಿ

ಯುದ್ಧದ ಬೆಂಕಿ ಎರಡೂ ಕಡೆಯಿಂದ ಭುಗಿಲೆದ್ದವು. ಕೋಟೆಯ ಬುರುಜುಗಳ ಮೇಲೆ ಹತ್ತುವ ಪ್ರಯತ್ನ ಜಾರಿಯಲ್ಲಿತ್ತು. ಬಾದಶಾಹರ ಸಿಪಾಯಿಗಳು ತಮ್ಮ ಪ್ರಯತ್ನವನ್ನು 'ಜಿಹಾದ್' ಧರ್ಮಯುದ್ಧವೆಂದು ಪರಿಗಣಿಸಿಕೊಂಡಿದ್ದರು. ವೈರಿಗಳ ಕಪಟ ಕುತಂತ್ರಗಳ ಬಗ್ಗೆ ಇವರಿಗೆ ತಿಳಿವಳಿಕೆ ಇರಲಿಲ್ಲ.

ನಜ್ಮ್

ಚುನಾ ಮೌಜ್‌ಝುನ್ ಗಶ್ತ್ ಬಹರೇ ಮುಸಾಫ್
ಕೆ ಗುಂಶುದ್ ಬಗಿರ್ದಾಫ್ ಚ್ಯೂಂ ಕೋಹೆಕಾಫ್
ಶಾಂತ ಸಮುದ್ರದಲ್ಲಿ ತೂಫಾನು ಆಗಮಿಸಿದಾಗ
ಅಲ್ಲೋಲಕಲ್ಲೋಲದಲ್ಲಿ ಕೋಹೆ ಕಾಫ್ ಪರ್ವತವೂ ಮುಳುಗುವುದು.

ಸನಾನೆ ಸೀನ ಕಾವಿ ಜೆ ಸರ್‌ದರ್ ಗರಿಫ್ತ್
ಫಲಕ್‌ರಾ ಅಸ್ಜಾ ಸೈಲೆ ಖೂನ್ ದರ್‌ಗಿರಿಫ್ತ್
ವೈರಿಗಳ ಕಡೆಯಿಂದ ಕುತಂತ್ರಗಳು ನಡೆದಾಗ
ಆಕಾಶದಲ್ಲಿ ರಕ್ತದ ಕಾಲುವೆ ಹರಿಯುತ್ತದೆ.

ಝು ಖೂನ್ ಬಾರಿಯೆ ತೈಘೆ ಪುರ್ ಆಬ್‌ತಾಬ್
ಶಿಪರ್ ಗಸ್ತ್ ಸರ್ ಚಶ್ಮಯೆ ಲಾಲೆ ನಾಬ್
ಅವರ ಮಿಂಚುವ ಖಡ್ಗಗಳಿಂದ ರಕ್ತ ತೊಟ್ಟಿಕ್ಕುತ್ತಿರುವಾಗ
ನೀರಿನ ಬುಗ್ಗೆಯಲ್ಲಿ ಮಾಣಿಕ್ಯದ ಹರಳುಗಳು ಮೂಡುತ್ತವೆ.

ಆನೆಗಳ ಮೇಲಿದ್ದ ಮಾವುತ ಸೈನಿಕರು ಬಾಣಗಳನ್ನು ಆಕಾಶದಲ್ಲಿ ಹಾರಾಡುವ ಹದ್ದು ತನ್ನ ಶಿಕಾರಿಯನ್ನು ಕಂಡು ವೇಗದಲ್ಲಿ ಭೂಮಿಯತ್ತ ಧಾವಿಸುವಂತೆ ಎರಗಿ ವೈರಿಗಳ ಮೇಲೆ ಹಲ್ಲೆ ನಡೆಸಿದರು. ಜಯಶಾಲಿ ಸೈನ್ಯದ ಗುರಿಕಾರರು ವೈರಿಗಳ ಎದೆಗೆ ಗುರಿಯಿಟ್ಟು ಹೊಡೆಯುತ್ತಿದ್ದರು. ವೈರಿಗಳು ಇವನ್ನೆಲ್ಲ ಎದುರಿಸುವ ತಾಕತ್ತಿಲ್ಲದೆ ನೊಂದು ಬೆಂದು ವಿವಶರಾಗಿ ಓಡುವ ಹಾದಿಯನ್ನು ಹುಡುಕುತ್ತ ಯೋಚಿಸುತ್ತಿದ್ದರು. ಬಾದಶಾಹರ ಸೈನಿಕರು ಅವರ ಬೆನ್ನು ಹಿಡಿದು ಓಡಿಸುತ್ತಾ ಕೋಟೆಯ ಆವರಣದಲ್ಲಿ ಘೇರಾವ್ ಮಾಡಿದರು. ವೈರಿಗಳ ಮೇಲೆ ತಮ್ಮ ಸಂಪೂರ್ಣ ಸಿಟ್ಟನ್ನು ತೀರಿಸಿಕೊಂಡು ಸದೆಬಡಿದು ಕೋಟೆಯನ್ನು ವಶಪಡಿಸಿಕೊಂಡರು.

ರಾಜಾ ಜೀಜಿ ನೋಡುವಾಗ ಅವನ ಸಂಪೂರ್ಣ ಸಾಮಾನು ಸರಂಜಾಮುಗಳು ಮತ್ತು ಕುದುರೆಗಳು ನಾಶವಾಗಿರುವುದು ಕಂಡುಬಂತು. ತಾನು ಕೂಡ ಸಂಪೂರ್ಣವಾಗಿ ಈ ಸರದಾರರ ಕೈಯಲ್ಲಿ ಸೆರೆಯಾಗಿಬಿಟ್ಟೆನೆಂಬ ಅನುಭವವಾಯಿತು. ಅತ್ಯಂತ ದುಃಖತಪ್ತನಾಗಿ, ಭಯಭೀತನಾಗಿ ಅಲ್ಲೇ ಸನಿಹದಲ್ಲಿದ್ದ ಒಂದು ಪರ್ವತದ ತುದಿಯ

ಚಿಕ್ಕ ವೇದ್ ಎಂಬ ಕೋಟೆಯಲ್ಲಿ ಹೋಗಿ ಕೂತ. ದಿನದ ಮೊದಲಿನಿಂದ ಸಂಜೆಯ ನಮಾಜಿನ ಸಮಯದ ತನಕ ಯದ್ಧ ನಡೆಯುತ್ತಲೇ ಇತ್ತು. ರಾತ್ರಿ ಹೊತ್ತಿನಲ್ಲಿ ನಡೆದ ದಾಳಿಯಿಂದ ಧೈರ್ಯಗುಂದಿದ ರಾಜ 'ಅಲ್ ಅಮಾನ್! ಅಲ್ ಅಮಾನ್!' ಶಾಂತಿ...ಶಾಂತಿ ಎಂದು ಕೂಗುತ್ತ ತನ್ನ ದೇಹವನ್ನು ಕುಗ್ಗಿಸಿಕೊಂಡು ಸೇನಾನಿ ಮುಝುಫ್ಫರುದ್ದೀನ್‌ರ ಎದುರು ತನ್ನ ಪಹರೆಯವರೊಂದಿಗೆ ಬಂದು ನಾನು ತಮ್ಮ ಸೇವಕನಾಗಿರುತ್ತೇನೆಂದು ಘೋಷಿಸಿದ. ಇಸ್ಲಾಂ ಧರ್ಮದ ಬೆಳಕು ನೀಡುವ ಸೂರ್ಯನ ಕಿರಣಗಳು ನಾಲ್ಕೂದಿಕ್ಕಿನಲ್ಲಿ ಹರಡಿ ಬೆಳಕು ನೀಡುತ್ತಿತ್ತು. ಈ ವಿಜಯದ ದುಂದುಭಿ ಏಳು ಆಕಾಶ ಮತ್ತು ಭೂಮಿಯ ನಾಲ್ಕು ಕೋಣೆಗಳಲ್ಲಿ ಮೊಳಗಿ ಇಸ್ಲಾಂನ ಸರದಾರರ ವಿಜಯವಾರ್ತೆಯ ಸುದ್ದಿ ಹರಡಿತು.

ಮೀರ್ ಜುಮ್ಲ ಕುತುಬ್ ಷಾ ತನ್ನ ದೊಡ್ಡ ದೇಹವನ್ನು ಹೊರಳಿಸುವಂತೆ ನಡೆಯುತ್ತಾ ಅಂಗರಕ್ಷರನ್ನು ಕೂಡಿಕೊಂಡು, ತನ್ನ ಸೈನಿಕರ ಚಿಕ್ಕ ತುಕಡಿಯೊಂದಿಗೆ ಸಂಪತ್ತಿನ ಆಸೆಯಿಂದ ರಾಜಾ ಜೀಜಿಯ ಸಹಾಯಕ್ಕೆ ಬಂದ. ಸಿಫೆ ಸಾಲಾರ್ (ಸೇನಾನಿ)ಮುರಝುಫ್ಫರುದ್ದೀನರು ಜೀಜಿಯ ಕೋಟೆಯಂತಹ ಬಹುದೊಡ್ಡ ಕೋಟೆಯನ್ನು, ಅದೂ ಕೂಡ ಒಂದೇ ದಿನದಲ್ಲಿ ವಶಪಡಿಸಿಕೊಂಡರೆಂಬ ವರ್ತಮಾನ ತಿಳಿದು ಭಯಭೀತನಾದ. ಭಯದಿಂದ ನಡುಗುತ್ತ ಬಂದು ತಾನು ನಿಮ್ಮ ವೈರಿಗಳಿಗೆ ಸಹಾಯ ಮಾಡಲು ಬಂದು ತಪ್ಪು ಮಾಡಿದೆನೆಂಬುದನ್ನು ತಿಳಿಸಿ ಕ್ಷಮೆಯಾಚಿಸಿದ. ಯುದ್ಧ ನಿಪುಣ ಬಹದ್ದೂರನೆಂದು ಹೆಸರಾಂತನಾದ ಈ ಕುತುಬ್ ಷಾ ತಾನೆಂದೂ ಇಂತಹ ತಪ್ಪುಗಳನ್ನು ಮುಂದೆ ಮಾಡುವುದಿಲ್ಲವೆಂಬ ಭಾಷೆಯನ್ನು ನೀಡಿದ. ಈ ರೀತಿ ಮಾಡಿದ್ದರಿಂದ ಈತ ತನಗೆ ಇದಿರಾಗಿದ್ದ ದೊಡ್ಡ ಕಂಟಕವೊಂದರಿಂದ ಪಾರಾದ. ಸೇನಾನಿಯವರು ರಾಜಾ ಜೀಜಿಯನ್ನು ಸೆರೆಹಿಡಿದು ಅವನ ಸಂಪೂರ್ಣ ಸಂಪತ್ತು, ಮಾಲು ಸಾಮಾನುಗಳೊಂದಿಗೆ ಬಾದಶಾಹರ ಖಜಾನೆಗೆ ತುಂಬಲು ಕಳುಹಿಸಿದರು.

ಅಭ್ಯಾತ್

ಸುಲ್ತಾನೆ ದೀನೆ ಶೆಹನ್‌ಶಾಹೆ ಗಾಝಿ ಕೆ ಆಫ್‌ತಾಬ್
ಗರ್ದಾತ್ ಬತೌಫೇ ದರ್ಗಯೆ ವೂ ಹರ್ ಸೆಹರ್ ರವಾಂ
ಸುಲ್ತಾನ್ ಧಾರ್ಮಿಕ ವೀರ ಬಾದಶಾಹನ ಮುಂದೆ ಸೂರ್ಯನೂ
ಪ್ರದಕ್ಷಿಣೆ ನಡೆಸುವುದು ಅವರ ದರ್ಬಾರಿನ ಸುತ್ತ ಪ್ರತಿದಿನದ ಮುಂಜಾನೆ.

ಎಕ್ ಜುರ ಹರ್‌ಕೆ ಯಾಫ್ತ್ ಝ ಜಾಮೆ ಇನಾಯತಶ್
ಚ್ಯೂಂ ಆಫ್‌ತಾಬ್ ಗಶ್ತ್ ಸಸರ್ ಅಫ್‌ರೋಝ್ ದರ್ ಜಹಾಂ
ಯಾರೇ ಆಗಲಿ ಅವರ ದಯೆಯ ಶರಬತ್ತಿನ ಗುಟುಕು ಕುಡಿದವನು
ಜಗದಲಿ ಎತ್ತರ ಹಾಗೂ ಘನತೆಯ ಸೂರ್ಯನಂತೆ ಬೆಳಗುವನು.

ಬಾದಶಾಹರ ಈ ಅದ್ಭುತ ವಿಜಯ ಯಾತ್ರೆಯ ಘನತೆ ಮತ್ತು ವೈಭವಪೂರ್ಣ ಜಯದ ಸಂತೋಷಾರ್ಥ ಬಾದಶಾಹರ ಆಳ್ವಿಕೆಯು ಅಮರವಾಗಲೆಂದು ಹಾಗೂ ಇಸ್ಲಾಂ ಧರ್ಮ ಬಲಶಾಲಿಯಾಗಿ ಇರಲು ಎಲ್ಲರೂ ದುವಾ ಪ್ರಾರ್ಥನೆ ಮಾಡಿದರು. ಬಾದಶಾಹರ ಪರಿವಾರದ ಸದಸ್ಯನಾದ ನಾನು ಜಹೂರಿ ಹೃದಯಾಂತರಾಳದಿಂದ ಶುಭಾಶಯಗಳನ್ನು ಕೋರುತ್ತೇನೆ. ಜೀಜಿ ಕೋಟೆಯ ವಿಜಯದ ಒಂದು ಖಸೀದ ಹೊಗಳು ಗೀತೆಯನ್ನು ಬರೆದು ಬಾದಶಾಹರ ಮುಂದೆ ಇಡುತ್ತಿದ್ದೇನೆ.

ಖಸೀದಾ ಯೆ ಫತಹನಾಮ ಖಿಲಯೆ ಜೀಜಿ

(ಜೀಜಿ ಕೋಟೆಯ ವಿಜಯ ಯಾತ್ರೆಗೆ ಸಂಬಂಧಿಸಿದ ಹೊಗಳು ಗೀತೆ)

ಝುಯೇ ಜಮಾಲೆ ತೂ ಹೈರತ್ ಫಿಝಾಯೇಂ ಹಫ್ತೆಬಯಾನ್
ಬ ಮಿಸ್ರೆ ಹುಸ್ನ್ ತೂ ಗೂಂಗಶ್ತ ಯೂಸುಫೆ ಕಿನಾನ್
ನಿಮ್ಮ ಸುಂದರ ವ್ಯಕ್ತಿತ್ವದ ಬಗೆಗೆ ಏನ ಹೇಳಲಿ ಅಂತೆ,
ನಿಮ್ಮ ಸೌಂದರ್ಯ ಈಜಿಪ್ಟಲ್ಲಿ ಕಾಣೆಯಾದ ಯೂಸೂಫರಂತೆ.

ಝು ಇಸ್ತಮಾಯೆ ಹದೀಸೆ ಜಮಾಲ್ ಬೇಮಿಸ್ರತ್
ಶವದ್ ಚ್‌ಯೂಂ ದೀದಯೆ ಖುರ್ಷಿದ್ ಗೋರಿಶೆ ನೂರ್ ಅಫ್ಶಾಂ
ನಿನ್ನ ಸುಂದರ ವಾಣಿಯ ಕೇಳಿ,
ಸೂರ್ಯ ಪ್ರಭೆಯ ಚೆಲ್ಲುವನು ತನ್ನ ಕಣ್ಣುಗಳಿಂದ.

ಗುಝಿಸ್ತ ಮೌಜೆ ತಜಲ್ಲಿ ಅಝ್ ಔಝು ಅರ್ಶೇ ಬರಿ
ಬಜಲ್ವ ಗಾಹೆ ಜಮಾಲತ್ ಜೆ ಜುಂಬಿಶೆ ಮಿಸ್ಗಾ
ನಿನ್ನ ಸಿಂಹಾಸನದಿಂದ ಹೊರಡುವ ಪ್ರಭೆಯ ತೂಫಾನು,
ಈ ವಿಶ್ವದ ಸೌಂದರ್ಯ ಅರಳುವುದು ನಿನ್ನ ಕಣ್ಣರೆಪ್ಪೆಗಳ ಇಶಾರೆಯಿಂದ.

ದಿಲ್ ಅಝ್ ಖಯಾಲ್ ಚ್ಯೂಂ ಗರ್ದದ್ ಮುಹೀತೆ ನೂರೆ ಖುದಾ
ಕೆ ಅಝ್ ರುಖೆ ತೂ ಜಮಾಲೆ ಮುಹಮ್ಮದೀ ಅಸ್ತ್ ಅಯಾಂ
ನಿಮ್ಮ ಯೋಚನೆಯೊಳಗೆ ದೇವನ ಪ್ರಭೆಯಲ್ಲಿ ಬಿದ್ದುಬಿಡುವೆ,
ನಿನ್ನ ಮುಖದಲ್ಲಿ ಮುಹಮ್ಮದೀ ಪ್ರಭೆ ಮೂಡಿಬರುತಿದೆ.

ಪನಾಹೆ ದೀನೆ ಮುಹಮ್ಮದ್ ಶಹನ್‌ಶಾಹೆ ಗಾಝಿ
ತುಯೀ ತೊ ಹುಕ್ಮೆ ತೂ ಬರ್ ಕಾಯಿನಾತ್ ಬಶ್‌ತ ರವಾಂ
ವೀರ ಶಹನ್‌ಶಾಹ್ ಮುಹಮ್ಮದ್ ಧರ್ಮಪಾಲಕ
ನಿನ್ನ ಆಜ್ಞೆ ವಿಶ್ವದ ತುಂಬ ಪಾಲಿಸಲಾಗುತಿದೆ

ಶರಫ್ ಝು ನಾಮೆ ತೂ ಬಾಶದ್ ಕಿತಾಬೆ ಶಾಹಿರಾ
ಕಿತಾಅತೆ ತೂ ಬುವತ್ ತಾಅತೆ ಶಾಹಾನೆ ಜಹಾಂ
ನಿನ್ನ ಹೆಸರಿನ ಘನತೆಯಿಂದಲೇ ಬಾದಶಾಹರ ಪದವಿ
ನಿನ್ನ ಆಜ್ಞೆಯ ಪಾಲನೆ ಅಲ್ಲಾಹನ ಆಜ್ಞಾಪಾಲನೆ ಮಾಡಿದಂತೆ.

ಝು ಲುಜ್ಜಯೇ ಕರ್‌ಮತೇ ನೀ ಮೌಜ್ ನೆ ಗರ್ದೂನ್
ಝು ರೆಹ್ ಗುಝಾರೆ ತೂ ಏಕ್ ಮುಶ್ತೆ ಖಾಕ್ ಸದ್ ಖಾಖಾನ್
ನಿನ್ನ ದಯೆಯ ಕರುಣೆ ಒಂಭತ್ತ ಸಾರಿ ಸುತ್ತುವ ಏರು ಸುಳಿಯಂತೆ
ನಿನ್ನ ಹಾದಿಯ ಒಂದು ಮುಷ್ಟಿ ಮಣ್ಣು ನೂರು ಚೀನದ ಅರಸರಿಗೆ ಸಮ.

ಫರೋಗೆ ಹುಬ್ಬಯೆ ಚತ್ರೆ ತೂ ಫರ್‍ರೆ ಸುಬ್ಹಾನಿ
ಫಿಝಾಯೆ ಅರ್ಸಯೆ ಜಾಹೆ ತೂ ಜುಬ್ಬಯೆ ಶಾಹಾನ್
ನಿನ್ನ ದರ್ಬಾರಿನ ಗುಂಬಜದ ಹೊಳಪು ದೇವರ ಘನಗಾಂಭೀರ್ಯದಂತೆ
ನಿನ್ನ ಘನತೆ ಗೌರವಗಳು ಬಾದಶಾಹರ ಜುಬ್ಬಾ ಉಡುಗೆಯಂತೆ

ಫಲಕ್ ಝು ಪಾಯಯೇ ಕರದ್ ಕಿಬ್ಲ ದುರುಸ್ತ್
ಕೆ ಪಾಸೆ ಅಮ್ರೆ ತೂ ಬಾಶತ್ ನಮಾಝು ತಾಜ್‌ವರಾನ್
ಆಕಾಶ ನಿನ್ನ ರಾಜ್ಯದ ಗಡಿಯ ನೋಡಿ ಖಿಬ್ಲಾದ ದಿಕ್ಕು ಸರಿಪಡಿಸುತ್ತದೆ
ನಿನ್ನ ಆಜ್ಞೆಯನ್ನು ಪಾಲಿಸುವುದು ಬಾದಶಾಹರ ನಮಾಜಾಗುತ್ತದೆ.

ಫಿಝಾಯೆ ಸುಪರ್ದಿಯೆ ಕಿಸ್ಮತೆ ದವಾನ್ ನಶಾತ್
ಬದಸ್ತೆ ಸಾಖಿ ಬಝ್ಮ ತೂ ಸಾಗರೆ ದೌರಾನ್
ನಿನಗಾಗಿ ವಾತಾವರಣ ಸದಾ ಸಂತಸವ ನೀಡುವುದು
ಸಾಖಿಯ ಕೈಗಳಿಂದ ನಿನ್ನ ಮೆಹಫಿಲ್‌ನ ಶರಾಬು ಬಟ್ಟಲಿನ ಸಾಲುಗಳು ಸಾಗುತ್ತವೆ.

ಚ್ಯೂಂ ಆಫ್ತಾಬೆ ಸಖಾಯೆ ತು ಜಲ್ವಗರ್ ಗರ್ದದ್
ಶವದ್ ಬರೂವೆ ಹವಾ ಝುರ್‍ರಯೆ ಗುಹರ್ ಅಫ್‌ಶಾನ್
ನಿಮ್ಮ ದಯೆಯ ಸೂರ್ಯ ಉದಯಿಸುವಾಗ
ಗಾಳಿಯ ಮೇಲೆ ಮುತ್ತುಗಳು ಹರಡುತ್ತವೆ.

ಸದಫ್ ಕುಶದ್ ಚ್ಯೂಂ ಗುಹರ್ ಶಿಕಂಜಯೇ
ಬದೌರೆ ಜೂದೆ ತೂ ಆಬೆ ಜುಯೀದ ಜೆನಿಶಾನ್ ದರಿಯಾರ
ಸಮುದ್ರದೊಳಗೆ ಮುತ್ತು ಚಿಪ್ಪಿನೊಳಗೆ ರೂಪುಗೊಳ್ಳುವಂತೆ
ನಿಮ್ಮ ಕೃಪೆಯೂ ಕೂಡ ಹನಿ ರೂಪದ ಮುತ್ತಿನಂತೆ.

ಜೆಬಸ್ ಕೆ ಕಾರೆ ಖಲಾಯಿಕ್ ನಿಹಾದ ರೂ ಬಕುಶಾದ್
ಝ ಪರ್‌ತೆ ಜೂದ್ೋ ಸಖಾಯೆ ಶಹೇ ಝಮೀನೋ ಝಮಾನ್
ಕೈಗೊಂಡಿದಿರಿ ನೀವು ಆಳ್ವಿಕೆಯ ಕೆಲಸಗಳನ್ನು ಸಂತಸದಿಂದ
ಪ್ರಜೆಗಳ ಕೆಲಸವನೆರವೇರಿಸುವ ಪರಿ ವಿಶ್ವದ ಬಾದಶಹನ ಗುಣದಂತೆ

ಶುದಸ್ತ್ ಚ್ಯೂಂ ದರೆ ಮಸ್ಜಿದ್ ದರೇ ಕಝಾ ಇನೆ ಬಾಝ್
ಝಬಾರೆ ಝರೇ ಹಮೇ ದರ್‌ಸಜ್ದ ಮಾಂದ್ ಶುಕ್ರೆ ಕನಾನ್
ನಿಮ್ಮ ಖಜಾನೆ ತುಂಬಿದ ದರಬಾರು ಮಸೀದಿಯ ಚೌಕಟ್ಟಿನಂತೆ
ಪ್ರತಿಯೊಬ್ಬನೂ ಕೃತಜ್ಞತೆಯ ಸಜ್‌ದವನ್ನು ನೆರವೇರಿಸುತ್ತಿದ್ದಾರೆ.

ಚನಾ ಬ ಅಹದೆ ತೂ ದರ್‌ಹಾ ಫಿತ್ನ ಬಸ್ತ ಶುದ್ ಅಸ್ತ್
ಜ ಚಶ್ಮೆ ವಾ ನಕುನದ್ ಅಝ್ಬುಯೆ ನಝಾರಯೆ ಬುತಾನ್
ನಿಮ್ಮ ಕಾಲದಲ್ಲಿ ಕುತಂತ್ರಗಳು ಯಾಕೆಂದರೆ ನಿಂತು ಹೋಗಿದ್ದವು
ಬಾದಶಹರ ಕಣ್ಣು ಅಲ್ಲಿಂದ ಮೂರ್ತಿಗಳ ನೋಡಲಾರದಾಗಿತ್ತು.

ಬ ಕಾಝಾನಯೆ ದೌರಾನ್ ಝ ಫ್ಯಝ ಮಾದಲತ್ ಅಸ್ತ್
ರಫೂ ಬಚಿಲ್ಲ ಕುನದ್ ತೀರೆ ಚಾಕೆ ಜೈಬೆ ತಮಾನ್
ಜಗದಲಿ ಜಾರಿಯಿದೆ ನಿಮ್ಮ ಕೊಡುಗೆಯ ಯಾದಿಯ ಸಾಲಿನಂತೆ
ಹರಿದ ಬಾಣದ ಒರೆಯ ಯಾರೋ ಹೊಲಿದಿರುವಂತೆ.

ಜೆ ಅಬ್ರೆ ಅದ್‌ಲೆ ತೂ ಅಝ್‌ಬಸ್‌ಕೆ ಶುದ್ ಜಹಾನ್ ಸರ್ ಸಬ್ಜ್
ಚ್ಯೂಂ ಸಬ್ಜ ಮೀಂ ಚರರ್ಸದ್ ಆಹು ಝಬಾನ್ ಶೇರೆ ಝಿಯಾನ್
ನಿನ್ನ ನ್ಯಾಯದ ಮುಗಿಲ ಮಳೆಯಿಂದ ಜಗತ್ತು ಹಸಿರಾಯಿತು
ಹಸಿರ ಮೇಯುವ ಹರಿಣವೂ, ಅದನು ತಿನ್ನುವ ಸಿಂಹವೂ ಬದುಕಿತು.

ಬ ಆಬ್‌ತಾಬ್ ತಂವಾರೇಖ್ತ್ ಶಮ ಎ ಕಾಪೂರಿ
ಝ ಮನೆ ಹಿಬ್ಝ ತೂ ಅಝ್ಮ ಹತಾಬೆ ತಾರೆ ಕಿತಾನ್
ಸಂಪೂರ್ಣ ಗೌರವ ಘನತೆಯೊಂದಿಗೆ ಕರ್ಪೂರಕ್ಕೆ ಹಚ್ಚಿದ ಬೆಳಕಿನಂತೆ
ನೂಲಿನಂದದ ಬೆಳಕು ನಿಧಾನಕ್ಕೆ ಪ್ರಖರವಾಗುತಿದೆ.

ಝ ಮೋಮ್ ಸೂರತೇ ತಿಫ್ಲ್ ಅಝ್ ಕುಶಂದ್ ಜಾನಿಬೆ ವೂ
ಶವದ್ ಚ್ಯೂಂ ದೂದ್ ಜೆ ಪಿಸ್ತಾನೆ ಶೋಲ ಶೀರೆ ರವಾಂ
ಪುಟ್ಟ ಮಗು ಅತ್ತು ಹಾಲಿಗಾಗಿ ಮೊಲೆಯ ಎಳೆದಾಗ
ಎದೆಹಾಲಿನ ಒರತೆ ಚಿಮ್ಮಿ ಹರಿಯುವುದು ಚೀಪಿ ಎಳೆದಾಗ.

ಬ ಪೇಶಯೆ ಶುಗ್‌ನಯೆ ಅದ್ಲೆ ತೂ ಅರ್ಝ್ ಪಯೆ ಕಿದ್ಮತ್
ಕಮರ್ ಬ ಹಲ್ಕಯೆ ಜಂಜೀರ್ ಬಸ್ತ ನೌಶೇರ್‌ವಾನ್
ಬಾದಶಾಹರ ನ್ಯಾಯಯುತ ತೀರ್ಮಾನಗಳ ಜಾರಿಯಿಂದಾಗಿ
ನೌಶೇರ್‌ವಾನ್ ಬಾದಶಾಹ ಕೂಡ ತನ್ನ ಸೊಂಟದಲ್ಲಿ ಕೋಳತೊಟ್ಟು ನಿಂತಿಹನು.

ಬದೌರೆ ಹಿಳ್ಮೆ ತೂ ದರಿಯಾ ಚುಖಾನ್ ಮೌಜೆ ಕಶೀತ್
ದೆಹತ್ ಝು ಕತ್‌ರಯೆ ದೆಹಾನೆ ಹುಬಾಬ್ ರಾ ದಂದಾನ್
ನಿನ್ನ ಶಾಂತಿಯುತ ಕಾಲದಿ ಸಮುದ್ರದಲಿ ಉಬ್ಬರವಿಳಿತ ಆದಾಗ
ನೀರುಗುಳ್ಳೆಯ ಬಿಂದು ಹನಿಯ ಅಗಿದು ಅಳಿಸಿಬಿಡುವುದು.

ಝು ಬೀಮೆ ಅದ್‌ಲೆ ತೂ ಶುದ್ ಚಿಲ್ಲಯೆ ಕಮಾನ್ ಎಕ್ಸರ್
ಬಗೋಶೆ ಕಜ್ರುವೆ ಶಾನ್ ಚ್ಯೂಂ ಹಝಾರ್ ಪಾಯಾ ನಿಶಾನ್
ಅವರ ನ್ಯಾಯ ತೀರ್ಮಾನದಿಂದ ಬಿಲ್ಲಿನ ಹಗ್ಗ ನೇರವಾಯಿತು
ಅಡಗಿರುವ ತಳಪಾಯದ ಮೂಲೆಗಳನು ಯಾರೋ ಸರಿಪಡಿಸಿದಂತೆ.

ಮುಖಾಲೆಫತ್ ಚ್ಯೂಂ ಗುರುಝಾರದ್ ಕದಂ ಬರಾಯೆ ಖಿಲಾಫ್
ಫತದ್ ಜೆ ಆಬ್ ಲಯೆ ಪಾಯೆಖೀಶ್ ದರ್ ಝಿಂದಾನ್
ನಿಮ್ಮ ವಿರೋಧಿ ನಿಮ್ಮ ವಿರುದ್ಧ ಹೆಜ್ಜೆಗಳನಿಟ್ಟಾಗ
ಅವನ ಪಾದಗಳಲ್ಲಿ ಬೆಂಕಿ ಗುಳ್ಳೆಗಳೆದ್ದಂತಾಗಿ ಜೈಲು ಪಾಲಾಗುವನು.

ಹಝಾರ್ ಸುಬ್ಹೆ ಸಾದತ್ ದಮೀದ್ ಅರ್ಝ್ ಹರ್ ಸೂ
ಝು ಗರ್ದ್ ರಾಹೆ ಸಮಂದತ್ ಬೆ ಅರ್ಸೆಯೆ ದೌರಾನ್
ಸಹಸ್ರಾರು ಬಾರಿ ಮುಂಜಾವಿನ ಬೆಳಕ ಕಿರಣಗಳು ಬೆಳಗತೊಡಗಿದವು
ಈ ಜಗದಲಿ ನಿನ್ನ ಸಮರ ಕುದುರೆ ನಡೆವ ಹಾದಿಯಲಿ ಹುಟ್ಟಿದ ಧೂಳಿನಿಂದ.

ನಿಗಾವರಿ ಕೆ ಬ ತಶ್ಬೀಹೆ ನಾಲೆ ವೂ ಮಾಹೆನೋ
ಬುಲಂದ ನಾಮ್ ಬುವತ್ ಹಂ ಚ್ಯೂಂ ಅಬ್ ರೂಯೆ ಖುಬಾನ್.
ಆ ಕುದುರೆಯ ಲಾಳದ ಸೌಂದರ್ಯ ಬಿದಿಗೆಯ ಚಂದ್ರನಂತೆ
ಸುಂದರ ಹುಬ್ಬಿನಂತೆ ಅದರ ಹೆಸರೂ ಸಹ ಪ್ರಸಿದ್ಧವಾಯಿತು.

ಬಗಾಹೆ ಗರಂ ರವೀ ಬರ್ ದವದ್ ಬಕುಲ್ಲ ವಕೋಹ್
ಚುನಾಕೆ ನಶ್‌ಅಯೇ ಮೈ ದರ್‌ದಿಮಾಗೆ ಸರ್ ಮಸ್ತಾನ್
ಪರ್ವತ ಮತ್ತು ಅದರ ತುದಿಯ ಮೇಲೆ ವೇಗವಾಗಿ ಓಡುವುದು
ಶರಾಬಿನ ನಶೆಯಿಂದ ಪ್ರಜ್ಞೆ ಕಳೆದುಕೊಂಡು ಓಲಾಡುತ್ತಿರುವವನಂತೆ ಕಾಣುವುದು.

ಝುಬಾತ್ ಹಮ್ಲಯೆ ಆಂ ಬರ್ಖ್‌ರೌ ಚ್ಯೂಂ ಮೌಜೆ ಸರಾಬ್
ಝುನ ಫೌಜೆ ಕಸ್ಮ್ ನುಮಾಯದ್ ಬಸತ್ ಹೈ ಖಾಕ್ ನಿಶಾನ್
ವೈರಿಗಳ ಆಕ್ರಮಣವೆಂದರೆ ಶರಾಬಿನ ಮರೀಚಿಕೆಯಂತೆ
ವೈರಿಗಳ ಸೈನ್ಯ ಮಣ್ಣಿನ ಮೇಲೆ ಹೀಗೆ ಕಾಣುತ್ತಿದೆ.

ಗಹೇ ಮಸಾಫ್ ಝು ಅಂದಾಜೆ ನಾವಕೆ ತೂ ಶವದ್
ಕಮಂದೆ ಮೌಜಯೇ ಖೂನ್ ಝು ಬೆ ಕಂಗುರೇ ಕೀವಾನ್.
ನಿನ್ನ ಬಾಣಪ್ರಯೋಗದ ದೆಸೆಯಿಂದ ಉಂಟಾದ
ರಕ್ತದ ತೂಫಾನು ಕೋಟೆಯ ದೈತ್ಯ ಕಮಾನುಗಳು ರಕ್ತದಿಂದ ತೊಯ್ದುಹೋದವು.

ಬಯಕ್ ಇಶಾರಯೆ ಕುದಂಗತ್ ಗುಝಿಸ್ತ ಅಝ್ ನೆಹ್‌ಚರ್‌ಖ್
ಬನೀಮೆ ದಮ್ ದಮೆ ತೈಗತ್ ಗಿರಿಫ್ತ ಹರ್ ದೊ ಜಹಾನ್
ನಿಮ್ಮ ಒಂದು ಸನ್ನೆ ಸಾಕು, ಒಂಭತ್ತು ಆಕಾಶಗಳು ಹಾದು ಬರುತ್ತವೆ.
ನಿಮ್ಮ ಖಡ್ಗದ ಅರ್ಧ ಬೀಸು ಸಾಕು ಎರಡೂ ವಿಶ್ವಗಳು ವಶವಾಗುತ್ತವೆ.

ಝುಬಾನೆ ತೈಘ್ ತೂ ನಾ ಕರ್ದಯೆ ಸರ್ ಫಸಾನಯೆ ಜಂಗ್
ಬಖೂನೆ ಖೇಶ್ ಫರೊಖುಫ್ತ ಕಸ್ಮೆ ದರ್ ಎ ಕುಫ್ತಾನ್
ನಿನ್ನ ತಲವಾರಿನ ಒಂದೇ ಹೊಡೆತಕ್ಕೆ ರಣರಂಗದ ಕತೆ ಮುಗಿಯುವುದು,
ಇದರ ರಕ್ತದ ಕಾಲುವೆ ಹರಿದು ಹೋಗುವುದು ಮಲಗಿದ ವೈರಿಗಳ ಮನೆತನಕ.

ಬಪೇಶೆ ತಾಝು ದಿಮಾಗಾನೆ ಬಾಗ್ ಅಝ್ ನಿಖತ್
ಬುವದ ಚ್ಯೂಂ ದಸ್ತಯೆ ಗುಲ್ ಗುರ್ಝೆ ರುಸ್ತುಮೆ ದಸ್ತಾನ್
ಬುದ್ಧಿವಂತರ ಮುಂದೆ ಹೂದೋಟದ ಸುಗಂಧಭರಿತ ಹೂಗಳು
ರುಸ್ತಮೆ ಜಹಾನ್‌ನ ಈಟಿ ಆಗುವುದು ಹೂಗುಚ್ಛದಂತೆ.

ಝು ಖೂನೆ ಪಿಶಾನಿ ತೈಘೆ ತೂ ಖಾರ್ ಮಾಯಿ ಅಸ್ತ್
ಝು ಪುಶ್ತೆ ಗಾಂವ್ ಝುಮೀನ್ ಹಂ ಚ್ಯೂಂ ಪಂಜಯೆ ಮರ್ಜಾನ್
ನಿನ್ನ ತಲವಾರಿನ ಪೆಟ್ಟಿನಿಂದ ಹರಿದ ರಕ್ತದ ಕೋಡಿ ಮುಳ್ಳು ಮೀನಿನಂತೆ
ಭೂಮಿಯ ಮೇಲೆ ಹವಳದ ಪಂಜವು ನೆಟ್ಟಂತೆ.

ಝು ತಾಬೆ ಆತಿಷೆ ಖೆಹರೆ ತೂ ಗಾಹೆ ಹರ್ ಬೊಜಿದಾಲ್
ಜೆಹದ್ ಚ್ಯೂಂ ಬರ್ಖ್ ಝು ಫಿರ್‍ಬೆ ಸಿಪೆಹರ್ ಖಾಹ ಕಶಾಂ
ರಣರಂಗ ನಿನ್ನ ಖಡ್ಗದ ರೋಷದ ಬೇಗೆಯಿಂದ
ನಕ್ಷತ್ರ ಪುಂಜದಲಿ ಮಿನುಗುವ ಸುಂದರ ಹೊಳಪಿನಂತೆ.

ಬಖೂನೆ ರಝ್ಮ್ ಚ್ಯೂಂ ಅಜ್ ಹಲ್ಕ ಹಲ್ಕಯೆ ಜೌಹರ್
ಶವದ್ ಬಕುರ್ದನೆ ಖೂನೆ ತೈಘೆ ತೇಝ್ ಜುಮ್ಲ ದಹಾನ್
ರಣರಂಗದ ಮೈದಾನದಲಿ ರಕ್ತದೋಕುಳಿ ಮೂಡಿದೆ
ನಿನ್ನ ಹರಿತ ಖಡ್ಗವು ಎಲ್ಲ ವೈರಿಗಳ ಮುಖದ ರಕ್ತ ಕುಡಿದಿದೆ.

ಮುಖಾಲಿಫಾನೆ ತುರಾ ಅಝ್‌ಪಯೇ ಜಿಗರ್‌ಖಾಯೆ
ದಹಾನೆ ಝಕ್ಮ್ ಝ ಪೈಕಾನ್ ಬರಾವರದ್ ದಂದಾನ್
ನಿನ್ನ ವಿರೋಧಿಗಳಿಗೆ ಎದೆಯೊಳಗಿಂದ
ಬಾಣಗಳಿಂದ ಹೊಡೆದು ಗಾಯಗೊಳಿಸಿ ದಂತಭಗ್ನಗೊಳಿಸುತ್ತಾರೆ.

ಗಹೇ ಕೆ ಅಝ್‌ದಮೆ ತೈಘತ್ ಚರಾಗೆ ಫತ್ಹೊ ಝಫರ್
ಬಝ್ಮ್ ರಝ್ಮ್ ಶವದ್ ರಶ್ಕೆ ಮೆಹರ್ ನೂರ್ ಅಫ್ಶಾನ್
ಎಲ್ಲೆಲ್ಲ ನೀ ವಿಜಯಶಾಲಿಯಾಗುವೆಯೋ ಅಲ್ಲಿ ನಿನ್ನ ಖಡ್ಗದ ಶಕ್ತಿಯಿಂದ
ರಣರಂಗವು ಚಂದ್ರನಂತೆ ಬೆಳಕು ಚೆಲ್ಲುವಂತಾಗುತ್ತದೆ.

ಬೆ ಬೇತಾಬೆ ಅದೂ ಗರ್ದದ್ ಅಂದ್ರಾನೆ ಸಾಅತ್
ದರೂನೆ ಝಕ್ಮೆ ಖುದ್ ಅಝ್‌ಬೀಮೆ ಚ್ಯೂಂ ಫತೀಲಯೆ ನಿಹಾನ್
ವೈರಿಗಳನು ಒಂದೇ ಸಲಕ್ಕೆ ಹೊಡೆದು ಹೊರತರುವರು.
ಘಾಸಿಗೊಳಿಸುತ್ತಾರೆ ಗಾಯಗಳಿಂದ ಕರುಳು ಹತ್ತಿಯ ಬತ್ತಿಯಂತೆ ಎಳೆದು

ಫರೋ ರವದ್ ಬಝುಮೀನೆ ಅಝ್ಮ್ ಸಿಫಾಯೆ ಅದೂ
ಚ್ಯೂಂ ಪೀಲೆ ಮಸ್ತೆ ತೂ ಗರ್ದದ್ ಬದಶ್ತೆ ರಮ್‌ಝ ರವಾನ್
ವೈರಿ ಸೈನಿಕರನ್ನು ರುದ್ರ ಭೂಮಿಯತ್ತ ಎಳೆಯುತ್ತದೆ,
ರಣರಂಗದಲಿ ಮದಮತ್ತ ಆನೆ ಓಡುತ್ತಿರುವಂತೆ.

ತಬಾರಕಲ್ಲಾ ಅಝಾನ್ ಬಹರೆ ಜೋಶ್ ಆಸ್ಮಾನ್ ಬಘುಗಾನ್
ಕೆ ಗಾಹೆ ಹಮ್ಲಾ ದರ್ ಆಯತ್ ಚ್ಯೂಂ ಅಬ್ರೆ ಫರೋಶ್
ದೇವರ ಕೃಪೆಇರಲಿ! ಏನು ಸಾಗರದ ಅಬ್ಬರ ಮುಗಿಲ ಗರ್ಜನೆ
ರಣರಂಗದಲ್ಲಿ ಹೊಗೆತುಂಬಿದ ಆಕಾಶ ಕೆಳಗಿಳಿದು ಬಂದಂತೆ.

ದರಾಂ ಝಮಾನ್ ಕೆ ಬಔಜೆ ಸಮಾಂ ಕುಶದ್ ಖರ್‌ತೂಮ್
ಗಹೇ ಕೆ ಖೂನೆ ಶಫಕ್ ಬರ್ ಫಶಾನ್‌ದ್ ಅಝ್ ದಂದಾನ್
ಆ ಕಾಲದಲ್ಲಿ ಆನೆ ಸೊಂಡಿಲನ್ನು ಆಕಾಶದತ್ತ ಎತ್ತಿದಾಗ
ವೈರಿಗಳ ಹಲ್ಲುಗಳ ಸಾಲಿನಿಂದ ತೊಟ್ಟಿಕ್ಕುತ್ತದೆ ಕೆಂಪು ರಕ್ತದ ಹನಿಗಳು.

ದೆಹದ್ ಬಕಶ್ತಿ ಅಫ್ಲಾಕ್ ಬಾದ್‌ಬಾನ್ ಝುನೆಹಂಗ್
ಬಸಾನೆ ಬಹರ್ ಬರ್ ಅಂಗೇಝುದ್ ಅಝ್ಝುಮೀನ್ ತೂಫಾನ್
ನಿನ್ನ ಮಜಬೂತಾದ ಹಾಯಿ ಹಡಗಿನ ಮೇಲೆ ನಡೆದರೆ ಮೊಸಳೆಯ ಆಕ್ರಮಣ
ಭೂಮಿಯಿಂದ ಹೊರಡುವ ಬಿರುಗಾಳಿ ಸಮುದ್ರವನ್ನು ಹೊಡೆದು ಬಡಿಯುವುದು.

ಚ್ಯೂಂ ಅಝ್‌ದಯೇ ಕೆ ಕುಶದ್ ಕೋಹೆ ಕಾಫ್ ರ ಬೆನಪಝ್
ಝು ಪೈಕರಶ್ ಶುದಾ ಕರ್‌ತೂ ಫಿತ್‌ನಯೇ ಖೇಝ್ ಅನಾನ್
ಹೆಬ್ಬಾವು ಕೋಹೆಕಾಫ್ ಪರ್ವತವನ್ನು ತನ್ನ ಉಸುರಿನಿಂದ ಎಳೆದಂತೆ
ಆನೆ ತನ್ನ ಸೊಂಡಿಲಿಂದ ರಣರಂಗದಲಿ ಘೀಳಿಟ್ಟಂತಾಗುವುದು.

ನೆ ಅಂಜುಮಸ್ತ್ ಬಚರ್‌ಖೆ ಕುಹನ್ ಕೆ ಖರ್‌ತುಮಶ್
ಜೆ ಚಶ್ಮಯೆ ಮಹೊ ಖುರ್ಶೀದ್ ಗಶ್ತ ಕತ್ರ ಫಿಶಾನ್
ಒಂಭತ್ತು ನಕ್ಷತ್ರಗಳು ಆಕಾಶದಲಿವೆ ಅದರ ಸೊಂಡಿಲಲಿ
ಚಂದ್ರ ತಾರೆಯರನ್ನು ಪರಿವರ್ತಿಸುವುದು ಒಂದು ಬಿಂದುವಿನಂತೆ.

ಸೆಪರ್ ರಾ ಅಫ್‌ಗಂದ್ ಝು ರೆ ಪಾ ಪೈಕರೆ ಕಸ್ಮ್
ಅಗರ್ ಇಶಾರ ನುಮಾಯದ್ ಬಾದ್ ಖದ್ ಯೂ ಜಹಾನ್
ವೈರಿಗಳನ್ನು ತಮ್ಮ ಪಾದದ ಕೆಳಗೆ ಜಜ್ಜಿ ಬಿಡುವರು
ಆಜ್ಞೆ ದೊರೆತರೆ ಬಾದಶಾಹರಿಂದ

ಬಚಶ್ಮೆ ಮೆಹರ್ ಕುಶದ್ ತೂ ತಯಾಝ್ ತಾರಿಫೆ ಚರ್ಖ್
ನಿಗಾಹೆ ಶಾಹೆ ದಹತ್ ಗರ್ ಬಝುರ್‍ರ ತಾಬೊ ತವಾನ್
ಆಕಾಶ ತನ್ನ ಚಂದ್ರನನ್ನು ಕಿತ್ತು ತರುವನು ಬಿದ್ದರೂ ಸಾಕು.
ಬಾದಶಾಹರ ದೃಷ್ಟಿ ಒಂದು ಹೊಳೆವ ಚಿಕ್ಕ ಕಣದ ಮೇಲೆ

ಝು ಲುತ್ಫೆ ಕುಸ್ರವೋ ಗಾಝಿ ಚ್ಯೂಂ ಜಾನೆಜಾನ್ ಯಾಫ್ತ್
ನವಾಝಿಶೆ ಕೆ ನಬಾಝುದ್ ಬಾದ್ ಝುಮೀನೊ ಝುಮಾನ್
ಬಾದಶಾಹರ ಘನತೆ ಗೌರವಗಳಿಂದ ನನ್ನ ಜೀವಕ್ಕೆ ಜೀವ ಬಂತು,
ಅವರ ಕೃಪೆ, ಆತಿಥ್ಯ ಈ ಜಗತ್ತು ಮತ್ತು ಆಕಾಶವೂ ಸಾಲದು ತುಂಬಿಸಲು.

ಸಮಂದೆ ಫತ್ಹ ಸುವೇ ಸೇತ್ ಬಂದ್ರಾ ಮುಬ್‌ಶರ್
ಬ ಅಮ್ರೆ ಶಾಹೆ ಜಹಾನ್ ಬಕ್ಷ್ ಸಾಕ್ತ್ ಗರ್ಮ್ ಅನಾನ್
ಬಾದಶಾಹರ ಕುದುರೆ ಎತ್ತಕಡೆ ಹೋದರೂ ಶುಭವಾರ್ತೆಯ ತರುವುದು
ಯಾಕೆಂದರೆ ಬಾದಶಾಹರ್ ಆಜ್ಞೆ ಅದರ ಲಗಾಮನ್ನು ಹಿಡಿದಿರುವುದು.

ಚ್ಯೂಂ ಮೈಕಶೀ ಕೆ ಕುಶದ್ ಜಾಮ್ ವ ನೀಲೆ ಸುಕ್ಲ್ ಕುನದ್
ಗಿರಿಫ್ತ್ ಖಿಲಯೆ ಜೀಜಿ ವ ಶುದ್ ಬಮದ್‌ರ ರವಾನ್
ಶರಾಬಿನ ಗುಟುಕನ್ನು ಸೇವಿಸಿ ಬಟ್ಟಲನ್ನು ಮುಂದಿನವನಿಗೆ ನೀಡಿದಂತೆ
ಜೀಜಿಯ ಕೋಟೆಯನ್ನು ಜಯಿಸಿ ತೆರಳಿದರು ಮದುರೈಯ ಕಡೆಗೆ

ಚೆ ಖಿಲ್‌ಅಕೆ ಝೆ ಬುರ್‌ಜಿಶ್ ಬುವದ್ ಬಚಶ್ಮೆ ಖಿರದ್
ಸೆಪೆಹರ್ ಹಫ್‌ತುಂ ಚ್ಯೂಂ ತೋಪೆ ಹಫ್ತ್ ಜೋಶೆ ಅಯಾನ್
ಏನೊಂದು ಸುಂದರ ಕೋಟೆ! ಅದರ ಬುರುಜು ನೆಟ್ಟದೃಷ್ಟಿಯಿಂದ ನೋಡಿದರೆ
ಏಳೂ ತೋಪುಗಳು ತಮ್ಮ ತಾಕತ್ತನ್ನು ತೋರಿಸುವುದು.

ಚ್ಯೂಂ ಮುಶ್ತೆ ರೇಗ್ ಕೆ ಗೀರದ್ ಕಸೆ ಬದಾಮನೆ ಕೋಹ್
ನುಮಾಯದ್ ಅಝ್ ತಯೇ ಬುರ್‌ಜಿಶ್ ಕವಾಕೆ ಬೇತಾಬ
ಒಂದು ಮುಷ್ಟಿ ಮಣ್ಣನು ಯಾವುದಾದರೂ ಪರ್ವತದ ಅಡಿಗೆ ಹಾಕಿದಲ್ಲಿ
ಆ ಕೋಟೆಯ ಬುರುಜಿನಲ್ಲಿ ಹೊಳೆವ ಹೊಳೆವ ನಕ್ಷತ್ರಗಳು ಪ್ರಿಫಲಿಸುವವು ಅಲ್ಲಿ

ಬಝುರ್ ಬೆತೈಗ್ ಚುನಿ ಖಿಲ ಝೇರೆ ಚರ್ಖೆ ಕಬೂದ್
ನ ಕರ್ದ್ ಫತ್ಹಾ ಕಸೇ ಚ್ಯೂಂ ಶಹನ್‌ಶಾಹೆ ದೌರಾನ್
ಅವರ ಖಡ್ಗದ ಒಂದೇ ಪೆಟ್ಟಿಗೆ ನೀಲ ಆಕಾಶಕ್ಕೆ ಹಾರುತ್ತದೆ
ಈ ರೀತಿಯ ವಿಜಯ ವಿಶ್ವದ ಯಾವ ಬಾದಶಾಹನೂ ಸಾಧಿಸಿಲ್ಲವೆನಿಸುತ್ತದೆ.

ಹಝಾರ್ ಫತ್‌ಹ ಚುನಿ ಹರ್‌ಝಮಾ ಮುಬಾರಕ್ ಬಾತ್
ಝೆ ಲುತ್ಫೆ ಅಹ್ಮದೆ ಮುರ್‌ಸಿಲ್ ಬಶಾಹೆ ಮುಲ್ಕೆ ಸಿತಾನ್
ಶುಭವಾಗಲಿ ನಿನಗೆ, ಇಂತಹ ವಿಜಯ ಲಭಿಸಿದೆ ನಿನಗೆ ಕಾಲಕಾಲದಲಿ
ಇದು ಪೈಗಂಬರರ ಆಶಿರ್ವಾದವಾಗಿದೆ ಈ ರಾಜ್ಯದ ಬಾದಶಾಹನಿಗೆ.

ಜಹಾಂ ಪನಾಹ್ ಶಹನ್‌ಶಾಹೆ ದೀನ್ ಪನಾಹ್ ತುಯಿ
ದಹದ್ ಬ ಜೌಹರೇ ತೈಗೆ ತೂ ಬಾಜ್ ತಾಜೆ ಜಹಾಂ
ವಿಶ್ವದ ರಕ್ಷಕ ಧರ್ಮಪಾಲಕ ಶೆಹನ್‌ಶಾಹ ನೀನೇ ನಮ್ಮ ರಕ್ಷಕನು
ನಿನ್ನ ತಲವಾರಿನ ಬಲವ ಕಂಡು ಕಪ್ಪನೀಡುವರು ಪ್ರತಿಯೊಬ್ಬ ಬಾದಶಾಹನು.

ಸಖುನ್‌ವರಿ ಕೆ ಮದ್‌ಹತ್ ತರಾಝ್ ಶೊಹ್‌ರತ್ ಯಾಫ್ತ್
ಬನೀಮ್ ನುಖ್ತ ಮುಸಖ್ಖರ್ ನಮೂದ್ ಕೌನೊ ಮಕಾನ್
ಈ ಕಾವ್ಯದ ದೆಸೆಯಿಂದ ನಿನ್ನ ಹೊಗಳುವ ನನಗೆ ಗೌರವದೊರಕಿದೆ
ಅರ್ಧ ಬಿಂದುವಿನ ಮೂಲಕ ವಿಶ್ವವ ಭರಿಸುವೆ ಪದತಲದಲ್ಲಿ.

ಮನ್‌ಅ ಮಸೀಹೆ ಬಯಾನಂ ಕೆ ದರ್ ಸನಾಯೆ ನಝ್ಮ್
ಝೆ ಮೌಜಿಝೆ ಸುಖ್‌ನಂ ಜಿಸ್ಮೆ ಫಿಕ್ರ್ ಯಾಫ್ತ ಜಾನ್
ನಾನು ಕಾವ್ಯದ ಮಸೀಹಾ ಆಗಿದ್ದೇನೆ ಪದ್ಯ ಸೃಷ್ಟಿಯ ಕಾರ್ಯದಲಿ
ನನ್ನ ಕಾವ್ಯದ ಪವಾಡದಿಂದ ಕಲ್ಪನೆಯ ದೇಹಕೆ ಜೀವ ನೀಡುವೆನು.

ಝಮಾನಯೆ ದಿಗರ್ ಅಸ್ತಬ್ ಯಕೀಶ್ ಮೀ ಶಾಝಂ
ಅಗರ್ ಝಮಾನಾ ನಸಾಝದ್ ಬಮನ್ ಮುರಾ ಚೆ ಝಬಾನ್
ನನ್ನ ಆರೋಗ್ಯವಂತ ಸೃಜನಶೀಲ ಕ್ರಿಯೆಯಿಂದ ಬೇರೆ ಜಗವ ಸೃಷ್ಟಿಸುವೆ
ನನ್ನ ಜೊತೆಯಲಿ ಜಗವಿರದರೇನಂತೆ ನನಗೆ ನನ್ನ ಭಾಷೆಯಿದೆ.

ಜೆ ಬಸ್ ಕೆ ಕುರ್ಬೆ ಝಹೂರ್ ಅಝ್ ಮದಾಹಿ ತೂ ಪಝೋದ್
ಶುದಂ ಮುಕರ್‍ರಿಬೆ ದರ್ಗಾಯೆ ಹಜ್ರತೆ ಸುಬ್‌ಹಾನ್
ನಿಮ್ಮ ಹೊಗಳು ಕಾವ್ಯ ರಚನೆಯ ದೆಸೆಯಿಂದ ಓ ಝಹೂರ್ ಪದವಿದೊರೆಯಿತು
ನಿನಗೆ,
ನೀನಾದೆ ಬಾದಶಾಹರ ಸಮೀಪವರ್ತಿ, ದರಬಾರಿನಲಿ.

ಹಮೇಶ ಥಾ ಕೆ ಬುವತ್ ಗರ್ಮ್ ಆಲಮೆ ಅಫ್‌ಸುರ್‌ದರಿ
ಫರೋಗೆ ನೆಹ್ರೆ ನಬ ಅಝ್‌ದಿಲೆ ಖುದಾ ಬಿ ನಾನ್
ವರ್ಣರಂಜಿತ ಲೋಕದಲ್ಲಿ ವಾತಾವರಣ ತಾಜಾವಾಗಿರಲೆಂದು
ದೇವರನ್ನು ನೋಡುವ ಹೃದಯದಲಿ ಪ್ರವಾದಿಯ ಬೆಳಕು ಸದಾ ಉಳಿಯಲಿ.

ಝೆ ಔಝೆ ಕದ್ರೊ ಶರಫ್ ಬಾತ್ ಹುಬ್ಬಯೆ ಚಿತ್ರತ್
ಚ್ಯೂಂ ಆಫ್‌ತಾಬ್ ಜಹಾಂ ತಾಬ್ ತಾ ಅಬದ್ ತಾಬಾನ್
ನಿಮ್ಮ ಗೌರವ ಘನತೆಯ ಎತ್ತರ ನಿಮ್ಮ ಮಹಲಿನೆತ್ತರಕೆ ನಿಲುವುದು
ವಿಶ್ವಕೆ ಬೆಳಕು ನೀಡುವ ಸೂರ್ಯನ ಕಿರಣಗಳು ಅಂತ್ಯದ ತನಕ ಬೆಳಗುವಂತೆ.

ಜೀಜಿ ಕೋಟೆಯ ವಿಜಯದ ನಂತರ ಅಫ್ಜಲ್ ಖಾನ್ ಅಲ್ಲಿನ ಸಂಪತ್ತು ಸೊತ್ತುಗಳ ಸಮೇತ ಶಾಜಿ ರಾಜಾನನ್ನು ಬಂಧಿಸಿ ತಂದುದು.

ಶಾಜಿ ರಾಜಾನನ್ನು ಕೈಕೋಳಹಾಕಿ ಬಂಧಿಸಿ ತಂದದ್ದು ಯಾಕೆಂದರೆ ಈ ಪಿತೂರಿಯ ಮೂಲ ಅವನೇ ಆಗಿದ್ದ. ಈ ಕಾರ್ಯವನ್ನು ನೆರವೇರಿಸಿದ ಸೇನಾನಿ ಅಫ್ಜಲ್ ಖಾನ್‌ನಿಗೆ ಬಾದಶಾಹರ ಕಡೆಯಿಂದ ಬಹುಮಾನ ಘೋಷಿಸಲಾಯಿತು. ಹೀಗೆ ಬಾದಶಾಹರು ಅಲ್ಲಾಹನ ಏಕಾಧಿಪತ್ಯವನ್ನು ದೃಢವಾಗಿ ನಂಬಿದವರು ಮತ್ತು ಅವನ ಬಗ್ಗೆ ಹೊಗಳುತ್ತಾ ಅವನ ಮುಂದೆ ಸಾಷ್ಟಾಂಗ ನಮಸ್ಕಾರ ಮಾಡುವವರೂ ಆಗಿದ್ದಾರೆ. ತನ್ನ ಸತ್ಯ ದೃಷ್ಟಿಯಿಂದ ಪವಿತ್ರ ಕುರಾನ್ ಪಡೆದ ನಬಿ ಪ್ರವಾದಿಯವರಿಗೆ ಘನತೆ ಗೌರವ ಸೂಚಿಸಿ ನಡೆಯುವವರಾಗಿದ್ದಾರೆ.

ಖಿತಾ

ನಾತೇ ಮುಹಮ್ಮದ್ ಕೆ ತಹಯ್ಯುರ್ ಫಿಝಾ ಅಸ್ತ್
ಖಾಲೊಖತ್ ಶಾಹಿದೆ ಹಮ್ದೆ ಖುದಾ ಅಸ್ತ್
ನಬಿ ಮುಹಮ್ಮದರ ಸ್ತುತಿಸುವುದು ಆಳವಾದ ಜ್ಞಾನದ ಮಾತಾಗಿದೆ
ಅವರನ್ನು ಸ್ತುತಿಸುವುದೆಂದರೆ ಅಲ್ಲಾಹನ ಸ್ತುತಿಸಿದಂತಾಗಿದೆ.

ಹರ್ ಕೆ ಬನಾರ್ಝಾರಯೆ ಆಂ ದರ್ ಶತಾಫ್ತ್
ಮಾನಯೆ ದಿಬಾಚಯೆ ತೌಹೀದ್ ಯಾಫ್ತ್
ಯಾರು ಅವರ ದರುಶನಕೆ ಕಾದಿಹರೋ
ಏಕದೇವಾತ್ಮದ ತೌಹೀದ್ ತತ್ವದ ಅನುಭವಪಡೆದರು.

ಪೈಗಂಬರರ ಸ್ತುತಿಯನ್ನು ನಾಲಗೆ ಆಡುವುದು ಅಲ್ಲಾಹನ ಕೃಪೆಯಿಂದ ಮಾತ್ರ ಸಾಧ್ಯವಾಗುತ್ತದೆ. ಅವರ ಸ್ತುತಿಯನ್ನು ಕೇಳುವ ಶಕ್ತಿಯೂ ಕೂಡ ಅಲ್ಲಾಹನ ಕೃಪೆಯಿಂದ ಮಾತ್ರ ಸಾಧ್ಯವಾಗುವುದು.

ಖಿತಾ

ಜಾಯೆ ಕೆ ಸುಖ್‌ನೆ ತಮಾಮ್ ಮಕ್ಸದ್ ಗರ್ದದ್
ದಿಬಾಚಯೆ ಹಂದೆ ನಾತೆ ಅಹಮದ್ ಗರ್ದದ್
ಮುಕ್ತಾಯಗೊಳ್ಳುವಾಗ ನಮ್ಮ ಮಾತುಗಳು
ಶುರುವಾಗುತ್ತದೆ ಮುನ್ನುಡಿಯಂತೆ ಅಹ್ಮದ್ ನಬಿಯವರ ಮಾತುಗಳು

ದರ್ವಾದಿಯೆ ನಾತ್ ಪಜೆ ಸರ್ ಕರ್ದ ಕಲಮ್
ತಾ ಗಿರದ್ ಸರೆ ನಾಮೆ ಮುಹಮ್ಮದ್ ಗರ್ದದ್
ಸ್ತುತಿಯ ಧಾರೆಯಲಿ ಲೇಖನಿಯ ಉಪಯೋಗಿಸ ತೊಡಗುವವನು
ಮುಹಮ್ಮದ್ ಪೈಗಂಬರರ ಸ್ತುತಿಯೊಂದಿಗೆ ಶುರುಮಾಡುವನು.

ಯಾರದ್ದಾದರೂ ಘನತೆಯ ಪದವಿಯನ್ನು ಸ್ತುತಿಸುವುದು ಲೇಖಕನ ಪುಣ್ಯದಿಂದಲೇ ಸಾಧ್ಯವಾಗುತ್ತದೆ. ಮುಖ್ಯವಾಗಿ ಜಗತ್ತಿನ ಆಯ್ದ ಗೌರವಾನ್ವಿತರಾದ ಬಾದಶಾಹರ ಹೊಗಳು ಗೀತೆಯ ಬರೆಯುವುದೆಂದರೆ ಸಾಧ್ಯವಾಗುವುದು ಅತ್ಯಂತ ಮೇಧಾವಿ ಪಾಂಡಿತ್ಯಪೂರ್ಣ ವ್ಯಕ್ತಿಗೆ ಮಾತ್ರ.

ನಜ್ಮ್

ವಸ್ತೆ ಸುಲ್ತಾನೆ ದೀನ್ ಚಹೆ ಗಾಝಿ
ಅಕ್ಲೆ ಕುಲ್ ಕೆ ತವಾಂದ್ ಇನ್‌ಶಾ ಕರ್ದ್

ಧರ್ಮನಿಷ್ಠ ಬಾದಶಾಹರ ಸ್ತುತಿಯನ್ನು ಕಾವ್ಯದ ಮೂಲಕ ತರುವುದು ಸಂಪೂರ್ಣ ಪಾಂಡಿತ್ಯವನ್ನು ಧಾರೆಯೆರೆಯುವ ಮೂಲಕ ಮಾತ್ರ ಸಾಧ್ಯವಾಗುವುದು.

ಬಾದಶಾಹೇ ಕೆ ಅಬ್ರ್ ಪೇಶ್ ಕಫಶ್
ಸರ್ ನಿಯಾರದ್ ಝ ಶರ್ಮ್ ಬಾಲಾಕರ್
ಎಂತಹ ಬಾದಶಾಹರು! ಯಾರದೇ ಖಡ್ಗವಾಗಿರಲಿ, ಅವರ ಹಾವುಗೆಗಳ ಮುಂದೆ ಬಾಗುವುದು
ಅವರ ಮುಂದೆ ನಾಚಿ ತಲೆತಗ್ಗಿಸುವವರ ಘನತೆ ಎತ್ತರಕೇರುವುದು.

ಅಸ್ಸಹಾಬೆ ಕಫಶ್ ಚ್ಯೂಂ ಪರ್‌ತೂಯೆ ಮೆಹರ್
ಸೈಲೆ ಝರ್ ರೂ ಬಕೋಹೆ ಸೆಹರಾ ಕರ್ದ್
ಅವರ ಅಂಗೈಯ ಮೂಲಕ ಹೊರಡುವ ಕೃಪೆಯ ಧಾರೆ
ಬಂಗಾರದ ನದಿ ತೊರೆ ಪರ್ವತ ಕಾಡುಗಳಲಿ ತುಂಬಿ ಹರಿಯುವುದು.

ಗೌಹರ್ ಅಝ್ ಶರ್ಮೆ ಅಬ್ರೆ ಬಕ್ಷಿಸೆ ವೂ
ಚ್ಯೂಂ ಅರ್ಕ್ ಜ ಬರೂಅಯೆ ದರಿಯಾ
ಅವರ ಉದಾರ ಕೊಡುಗೆಯ ಮಳೆಯಿಂದ
ನೀರಾಗಿ ಹರಿಯುತ್ತದೆ ಮುತ್ತು, ಸಮುದ್ರ ಸೇರುವುದು ನಾಚಿಕೆಯಿಂದ.

ಹಖ್ ಆಲಾ ಅಝ್ ಕದ್ರೆವಾಲಾ ಇಶ್
ಕುದ್ರತೆ ಖೇಶ್‌ರ ತಮಾಷಾಕರ್
ಅಲ್ಲಾಹ ಬಾದಶಾಹರ ಘನತೆ ಗೌರವಗಳನ್ನು ಏರಿಸುತ್ತಾನೆ
ತನ್ನ ಸೃಷ್ಟಿಯ ಚಮತ್ಕಾರವನ್ನು ಸಾದರಪಡಿಸಿದ್ದಾನೆ.

ಬಾದಶಾಹರದು ಏನು ಗರಿಮೆ ಗೌರವ! ಅವರ ಈ ವೈಭವವನ್ನು ನೋಡಲು ಇತರ ರಾಜ್ಯಗಳ ಬಾದಶಹರು ನೋಡಲು ಆಗಮಿಸುತ್ತಾರೆ. ಅವರ ಆರೋಗ್ಯಪೂರ್ಣ ದೇಹದ ನಿಲುವು, ಕೃಪಾಸಾಗರ ಗುಣದ ಫಲವಾಗಿ ಆಕಾಶದ ಸ್ವರ್ಗದ ಪವಿತ್ರ ಮರದ ಹಣ್ಣು ಮತ್ತು ಹೂವುಗಳು ಭೂಮಿಯಲ್ಲಿ ಹಂಚಲಾಗುತ್ತಿದೆ. ಅವರ ಆಳ್ವಿಕೆಯ ಕಾಲದಲ್ಲಿ ಸುಖಸಂತೃಪ್ತಿಯ ಕಾಲವಾಗಿತ್ತು. ಆಕಾಶವೂ ಕೂಡ ಅವರ ಎದುರು ಬೆನ್ನುಬಾಗಿ ಸಾಷ್ಟಾಂಗ ನಮಸ್ಕಾರ ಮಾಡುತ್ತಿತ್ತು. ನೆರೆಹೊರೆಯ ಸಮಸ್ತ ಅರಸರು ಮತ್ತು ಗೌರವಾನ್ವಿತ ಮಹನೀಯರು ಅವರ ದರಬಾರಿನ ಮಣ್ಣನ್ನು ತಮ್ಮ ಘನತೆ ಗೌರವಗಳ ಸಂಕೇತವೆಂದು ಪರಿಗಣಿಸುತ್ತಿದ್ದರು. ಅವರ ಮಿಂಚಿನಂತೆ ಹೊಳೆಯುವ ಖಡ್ಗ ವೈರಿಗಳನ್ನು ರಕ್ತದ ಮಡುವಿನಲ್ಲಿ ಮುಳುಗಿಸಿ ಬಿಡಬಲ್ಲುದು.

ಅವರ ಬಾಣದ ಮೊನೆಯ ಹರಿತದಿಂದ ಆಕಾಶದ ಎದೆ ಹರಿತ ಚೂರಿಯಿಂದ ಕತ್ತು ಕೊಯ್ದ ಹಕ್ಕಿಯಂತೆ ಚಡಪಡಿಸುತ್ತದೆ. ಅವರ ಬಾಣದ ಮೈಮೇಲೆ ಸಾವಿನ ಫರಮಾನು ಬರೆದಿರುತ್ತದೆ. ಅವರ ಕತ್ತಿಯ ಹೊಳೆವ ಸೌಂದರ್ಯ ವಿಜಯಶಾಲಿಯಾದ ಬೆಲೆಬಾಳುವ ಮುತ್ತಿನಂತಿದೆ. ಅವರ ರಣರಂಗದ ನಗಾರಿ ದೂರದ ಮಿರ್‍ರಿಖ್ ನಕ್ಷತ್ರವನ್ನು ಕೂಡ ಅಲಗಾಡಿಸಿಬಿಡುತ್ತದೆ. ಜಗತ್ತಿನ ಮಹಾ ಬಾದಶಾಹರ ಕಿವಿಗಳಲ್ಲಿ ಮೊಳಗುತ್ತಿರುತ್ತದೆ. ಅವರ ಕ್ರೋಧದ ಮಹಾ ಸಮುದ್ರದ ಉಬ್ಬರದ ಹರಿವು ಕೋಹೆಕಾಫ್‌ನಂತಹ ಮಹಾ ಮೇರು ಪರ್ವತವನ್ನು ಕೊಚ್ಚಿಕೊಂಡು ಹೋಗುವಂತಿದೆ.

ಖಿತಾ

ಖದ್ಯೂ ಬೆಹರೊಬರ್ ಸುಲ್ತಾನೆ ದೀನ್ ಪರ್‌ವರ್ ಕೆ ಅಝ್ ತೈಘಶ್
ಬಗರ್ದೂನ್ ಮೆಹರೆ ತಾಬಾನ್ ಹರ್ ಸೆಹರ್ ಬರ್ದಾಬೆ ಖೂನ್ ಗರ್ದದ್

ಭೂಮಿಆಕಾಶಗಳ ಬಾದಶಾಹ ಧರ್ಮನಿಷ್ಠ ಸುಲ್ತಾನನ ಖಡ್ಗದ ಹರಿತದಂತೆ ಹೊಳೆವ ಚಂದ್ರ ತನ್ನ ಉದಯದ ಬೆಳಗನ್ನು ಮಾಡುವನು ರಕ್ತಕೆಂಪಾಗಿಸುವಂತೆ.

ಖಝಾ ಚ್ಯೂಂ ಕದ್ರೆ ಶಾಹಾನಾ ಜಹಾಂ ಖ್ವಾಹಿದ್ ಬಘಝಾಯಿದ್
ಬತೌಫೆ ದರ್‌ಹಶೇ ಕದ್ರೊ ಶರಫ್‌ರ ರೆಹನಮೂ ಗರ್ದತ್

ಸಾವು ಬಾದಶಾಹನಿಂದ ಅನುಮತಿ ಕೇಳುತ್ತಾನೆ, ಯಾರಿಗಾದರೂ ಹೊಡೆವ ಆಜ್ಞೆ ತಂದರೆ
ಬಾದಶಾಹರ ದರ್ಬಾರಿನ ಪ್ರದಕ್ಷಿಣೆಮಾಡಿ ಅನುಮತಿ ಕೇಳುತ್ತದೆ.

ಬಾದಶಾಹರ ಸ್ತುತಿಯ ಸಂಪತ್ತನ್ನು ಹೊರತರುವುದೆಂದರೆ ಮುತ್ತುಗಳನ್ನು ಸಮುದ್ರದಿಂದ ಹೆಕ್ಕಿ ತರುವಂತೆ. ಯಾಕೆಂದರೆ ಅವರ ವೈಭವದ ಹರಿವು ಸಮಸ್ತ ವಿಶ್ವದ ಉದ್ದಗಲಕ್ಕೆ ವ್ಯಾಪಿಸಿದೆ. ಅವರ ಪುಣ್ಯದಿಂದ ಜೇಜಿಯ ಕೋಟೆ ಈ ದೌಲತಿನ ಭದ್ರ ಆಳ್ವಿಕೆಯ ಮುಷ್ಠಿಯೊಳಗೆ ಬಂತು. ಸೇನಾಧಿಪತಿ ಮುಝಫ್ಫರುದ್ದೀನರು ತನ್ನ ಶೂರ ಮತ್ತು ವಿಜಯಶಾಲಿ ಅಫ್ಜಲ್ ಖಾನ್‌ನನ್ನು ಅವನು ಸೂರೆ ಮಾಡಿ ತಂದ ಸಂಪತ್ತು ಸಾಮಾನುಗಳ ಜೊತೆಗೆ ೮೯ಆನೆಗಳನ್ನು ಸೇರಿದಂತೆ ಸಂಪೂರ್ಣವಾಗಿ ಎಲ್ಲವನ್ನೂ ಬಾದಶಾಹರ ದರ್ಬಾರಿಗೆ ಬೀಳ್ಕೊಟ್ಟರು.

ಆ ಆನೆಗಳ ಹಿಂಡುಗಳು ಎಂತಹ ಶಕ್ತಿಶಾಲಿಗಳೆಂದರೆ ಪರ್ವತಗಳನ್ನು ಪುಡಿಗಟ್ಟುವ ಸಾಮರ್ಥ್ಯವನ್ನು ಹೊಂದಿದ್ದವು. ಶಾಜಿರಾಜನ ಕುತಂತ್ರಗಳ ಬಗ್ಗೆ ಮತ್ತು ಹೀನ ಬದುಕಿನ ಬಗ್ಗೆ ಹಿಂದೆ ನಾವು ಉಲ್ಲೇಖ ಮಾಡಿದಂತೆ ಅವನಿಗೆ ಕೈಕೋಳ ತೊಡಿಸಿ ಕರೆದುಕೊಂಡು ಬಂದರು. ಅಫ್ಜಲ್ ಖಾನ್ ಹಂತ ಹಂತವಾಗಿ ಪ್ರಯಾಣಮಾಡುತ್ತಾ ಬಾದಶಾಹರ ದರ್ಬಾರಿಗೆ ತಲಪಿದಾಗ ಶೂರ ಬಾದಾಶಾಹರು ಗುಲ್‌ಬಾನ್ ಮಹಲಿನಲ್ಲಿ ನೌರೋಝ್ ಉತ್ಸವವನ್ನು ಸಂಘಟಿಸಿ ಭಾಗವಹಿಸಿದ್ದರು.

ಈ ಅರಮನೆ ತುಂಬ ಸುಂದರವಾಗಿದ್ದು ನೋಡುವಾಗ ಕಟ್ಟಿದವರ ಕಲೆಗಾರಿಕೆಯ ಬಗ್ಗೆ ಚಕಿತರಾಗುವಂತಿದೆ. ಬಾದಶಾಹರ ಆಪ್ತರು ನಾಲ್ಕು ಮಾರು ದೂರದಲ್ಲಿ ತಲೆದಿಂಬಲ್ಲಿ ಪವಡಿಸಿದಂತೆ ಆರಾಮವಾಗಿ ಕೂತಿದ್ದರು.

ಅಭ್ಯಾತ್

ಝಹೇ ಇಮಾರತೆ ಜಹಾಂ ಪರ್‌ವರ್ ಜಹಾಂಆರಾ
ಕಿಯಾಫ್ತ್ ರೌನಕ್ ಅಝೂ ಕಾರ್ಖಾನಯೆ ತಕ್‌ದೀರ್
ಏನು ಮನತುಂಬುವ ಸುಂದರ ಮಹಲಿದು
ಜಗದ ಪುಣ್ಯಗಳ ತೀರ್ಮಾನಗಳು ಇಲ್ಲೇ ನಡೆಯುವುದು

ಫತದ್ ನಿಗಾಹ್ ಬಬಾಲಯೆ ಆಸ್‌ಮಾನೆ ನಹುಂ
ಝ ಬಾಮೆ ವೂ ನಗರ್ದದ್ ಶಕ್ಸೆ ವೆಹಂ ಗರ್ ದರ್‌ಝೀರ್
ಒಂಭತ್ತನೆಯ ಆಕಾಶದಿಂದ ಮಹಲನ್ನು ವೀಕ್ಷಿಸಿದರೂ
ಅದರ ಒಳಕೋಣೆಗಳು ಎಷ್ಟಿವೆಯೆಂಬುದನ್ನು ಅಂದಾಜು ಮಾಡಲಾರ.

ಬಝೀರೆ ಸಾಯೆ ಬಾಮಶ್ ಚ್ಯೂಂ ತಾಯಿರಾನೆ ಖಫಸ್
ಖುಶಾದ ಬಾಲ್ ಝಖತ್ತೆ ಶುಆಯೆ ಮೆಹರೆ ಸಬ್ಝ್
ಅದರ ಕೋಣೆಗಳ ಕಟ್ಟಡಗಳ ನೆರಳಲ್ಲಿ ಜಗದ ಪಾರಿವಾಳಗಳು
ತನ್ನ ರೆಕ್ಕೆಗಳನು ತೆರೆದು ಹಸಿರು ಹೊಳಪನ್ನು ನೀಡುತ್ತಿವೆ.

ಝ ತುಂದ್ ರವೇ ಬದರ್‌ವಾಝಯೆ ಅಶ್ ಚ್ಯೂಂ ಗಾಹ್ ಖಿರಾಂ
ದೆಹಂದ್ ಲಾಲಯೆ ಉಸ್‌ರಾನ್ ಅಝ್ ಬಸಾಝ ಜಂಜೀರ್
ಜೋರಾಗಿ ಬೀಸುವ ಗಾಳಿಯಿಂದಾಗಿ ಮಹಲಿನ ಬಾಗಿಲು ಮೆಲ್ಲಮೆಲ್ಲನೆ
ಸಂಕಲೆಗಳ ಸದ್ದಿನ ಲಯದಿಂದ ಮನಸೂರೆಗೊಳ್ಳತ್ತದೆ.

ಝ ಬಸ್ ಶಗುಪ್ತ ಬಹರ್ ಶೂ ದರೋ ಗುಲೇ ಇಶರತ್
ಸದಾಯೆ ಖಂದ ಜೆಗುಂಚಯೆ ತಸ್‌ವೀರ್
ಮಹಲಿನ ಸುತ್ತಲೆಲ್ಲ ಸುಗಂಧಭರಿತ ಹೂಗಳು ಅರಳಿವೆ
ಪ್ರತೀ ಹೂಗಳಿಂದ ಸುಸ್ವಾಗತದ ಆಶಯ ಹೊರಟಿವೆ.

ಅಫ್ಝಲ್ ಖಾನ್ ಬಾದಶಹರನ್ನು ಭೇಟಿಯಾಗಲು ದರಬಾರನ್ನು ತಲಪಿದಾಗ ಅಲ್ಲಿ ಈ ಲೇಖಕ ಮಹಮ್ಮದಿ ಝಹೂರ್ ಕೂಡ ಆಸ್ಥಾನದಲ್ಲಿ ಉಪಸ್ಥಿತನಿದ್ದ. ಅಫ್ಝಲ್ ಖಾನರು ಬಾದಶಾಹರ ಅತ್ಯಂತ ನಿಕಟ ಮತ್ತು ಪ್ರಿಯ ಆಪ್ತರಲ್ಲಿ ಒಬ್ಬರೆಂದು ಮುಹಮ್ಮದಿ ಝಹೂರ್‌ಗೆ ಮನದಟ್ಟಾಯಿತು. ಬಾದಶಾಹರು ಅಫ್ಝಲ್ ಖಾನರಿಗೆ ಈ ಸಂದರ್ಭದಲ್ಲಿ ಉಡುಗೊರೆ ಕಾಣಿಕೆಗಳನ್ನು ನೀಡಿದರು ಮತ್ತು ಒಂದು ಸೊಂಟಕ್ಕೆ

ಕಟ್ಟಿಕೊಳ್ಳುವ ವಜ್ರ ವೈಢೂರ್ಯಗಳಿಂದ ಸಿಂಗರಿಸಲ್ಪಟ್ಟ ದೊಡ್ಡ ಖಡ್ಗವೊಂದನ್ನು ಉಡುಗೊರೆಯಾಗಿ ನೀಡಿದರು. ಅಫ್ಜಲ್ ಖಾನ್ ಬರುವಾಗ ಬಂಧಿಯಾಗಿಸಿ ಕರತಂದ ಶಾಜಿ ರಾಜಾನನ್ನು ಭಯಾನಕವಾದ ಜೈಲಿನೊಳಗೆ ಹಾಕಲಾಯಿತು. ನಗರದ ಜನರು ಬಾದಶಾಹರ ಹೃದಯವಂತಿಕೆ, ಮಾನವೀಯತೆ, ಪ್ರೀತಿಯನ್ನು ಕಂಡವರು ಶಾಜಿರಾಜನ ಮೇಲೆ ಇಂತಹ ಕಠಿಣ ಸಜೆಯನ್ನು ನೀಡಿದ್ದು ಕಂಡು ಆಶ್ಚರ್ಯ ಚಕಿತರಾಗಿದ್ದರು. ಇವನು ಖಂಡಿತವಾಗಿಯೂ ಏನೋ ದೊಡ್ಡ ಕುತಂತ್ರ ಪಿತೂರಿ ಮಾಡಿರಬೇಕೆಂದೂ ಈ ಕಾರಣಕ್ಕಾಗಿ ಬಂಧಿಸಿ ಜೈಲು ಶಿಕ್ಷೆ ನೀಡಿರಬೇಕೆಂದೂ ಅವರಿಗೆ ಮರುಕ್ಷಣವೇ ಮನದಟ್ಟಾಗಿತ್ತು. ಇವನನ್ನು ಬಿಡುಗಡೆ ಮಾಡಿದರೆ ಈತ ಮನುಷ್ಯನ ರಕ್ತದ ರುಚಿಹಿಡಿದ ಹಿಂಸ್ರ ಪಶುವಿನಂತೆ ನುಗ್ಗಿ ನಾಶಪಡಿಸುವನೆಂದು ಬಾದಶಾಹನ ಆಸ್ಥಾನದ ಪ್ರಮುಖರು ಅಭಿಪ್ರಾಯಪಟ್ಟರು. ಅವರಲ್ಲಿ ಕೆಲವರು 'ಇಂತಹ ಹರಾಮ್‌ಕೋರನನ್ನು ಜೈಲಿನಿಂದ ಹೊರಗೆ ಬಿಡುವುದೆಂದರೆ ಘಟಸರ್ಪವನ್ನು ಪಾದವನ್ನು ಕಡಿಯಲು ಬಿಟ್ಟಂತೆ, ಚೇಳನ್ನು ಕೈಯ ಕಡಿಯಲು ಬಿಟ್ಟಂತೆ, ಜೇನುಗೂಡಿಗೆ ಕಲ್ಲೆಸೆದಂತಾಗ ಬಹುದು' ಎಂದು ಅಭಿಪ್ರಾಯಪಟ್ಟರು.

ಖಿತಾ

> **ಕಾಮ್‌ಗಾರಿ ಝೆ ಸುಲ್ಫಾ ಯೆ ಚಶ್ಮ್ ನತುವಾಂ ಸರ್ಫ ಝೀಂ ಮಾಮ್‌ಲಾ ಬುರ್ದ್**
> **ಗುಲೇ ಲಚೀದ್ ಅಝ್ ನಿಹಾಲೆ ಸರೋಕಶಿ ಹೇಕಜ್ಸ್ ಆಬ್ ಅಸ್ಸರಾ ನಖುರ್ದ್**
> ದೃಷ್ಟಿಬದಲಿಸುವ ಮನುಷ್ಯನಿಂದ ಕಾರ್ಯಸಾಧನೆಯ ಆಸೆ ಇಡದಿರಿ
> ಅವನಿಂದ ಕೆಲಸ ಮಾಡಿಸಿ ನಿಮ್ಮ ಮಹತ್ ಕಾರ್ಯವ ಕೆಡಿಸದಿರಿ.
>
> **ಗುಲ್ ನಚೀದ್ ಅಝ್ ನಿಹಾಲೆ ಸರೋಕಸೆ**
> **ಹೇಜ್ ಕಸ್ ಆಪ್ ಅಸ್ಸರಾಬ್ ನಕುರ್ದ್**
> ಹೂವು ಬಲಿಷ್ಠ ಕೊಂಬೆಗಳಲಿ ಹುಟ್ಟುವುದಿಲ್ಲ
> ಯಾರು ಕೂಡ ಮೃಗಜಲದಿಂದ ನೀರು ಕುಡಿದಿಲ್ಲ.

ಹಜ್ರತ್ ಬಾದಶಾಹ ಗಾಝಿ ಜಗತ್ತಿನಲ್ಲಿ ಅಪರಾಧಿಗಳಿಗೆ ಕ್ಷಮಾದಾನ ನೀಡುವುದಕ್ಕೆ ಪ್ರಸಿದ್ಧರಾಗಿದ್ದರು. ಅವರು ಶಾಜಿರಾಜಾನನ್ನು ಖಾನ್ ಅಹ್ಮದ್ ಖಾನ್‌ರವರ ಸುಪರ್ದಿಗೆ ವಹಿಸಿಕೊಟ್ಟರು. ಶಾಜಿಯನ್ನು ಆ ಕಾಲದ ಅತ್ಯಂತ ಬಲಿಷ್ಠವೆಂದು ಪರಿಗಣಿಸಲ್ಪಟ್ಟ ಪ್ರಸಿದ್ಧ ಕೊಂಡಾಣ ಕೋಟೆಯಲ್ಲಿ ಒಂದು ಏಕಾಂತ ಕೋಣೆಯಲ್ಲಿ ಬಂಧಿಸಿಡಲು ಬಾದಶಾಹರ ಆಜ್ಞೆಯಾಗಿತ್ತು. ಅವನು ತನ್ನ ತಪ್ಪನ್ನು ಒಪ್ಪಿಕೊಂಡು ಪಶ್ಚಾತ್ತಾಪ ಪಟ್ಟುಕೊಂಡರೆ ಕುಂದರಪ್ಪಿ ಮತ್ತು ನೆಲಕ್ಕೂರು ಕೋಟೆಗಳ ಜೊತೆಗೆ ಈ ಕೊಂಡಾಣ ಕೋಟೆಯೂ ಸೇರಿದಂತೆ ಮೂರು ಕೋಟೆಗಳನ್ನು ಬಾದಶಹರಿಗೆ ಸಮರ್ಪಿಸಿದಲ್ಲಿ ಶಾಜಿರಾಜನನ್ನು ಬಿಡುಗಡೆ ಮಾಡಲಾಗುವುದು ಎಂದು ತೀರ್ಮಾನಿಸಲಾಯಿತು.

ಬಾದಶಾಹರ ಆಜ್ಞೆಯಲ್ಲಿ ಯಾವ ಕೊರತೆಯನ್ನಾಗಲಿ ಮಾರ್ಪಾಡು ಮಾಡದೆ ಖಾನ್ ಅಹ್ಮದ್ ಖಾನರು ಜಾರಿಗೆ ತಂದರು. ಬಾದಶಾಹರ ಕೃಪೆಯ ತೀರ್ಮಾನಗಳು ಶಾಜಿ ರಾಜನ ಗಮನಕ್ಕೆ ಬಂದಂತೆ ಕರಾರು ಪತ್ರವೊಂದನ್ನು ಬರೆದು ಮೂರು ಕೋಟೆಗಳನ್ನೂ ಅವರ ಕೈಗೆ ಒಪ್ಪಿಸಿದ. ಶಾಜಿ ರಾಜ ಪತ್ರಬರೆದು ಬಾದಶಾಹರ ದರ್ಬಾರಿಗೆ ಕಳುಹಿಸಿಕೊಟ್ಟ ವಿಷಯ ತಿಳಿದು ಅಲ್ಲಿದ್ದ ಅವನ ಎರಡು ಮಕ್ಕಳು ಆಶ್ಚರ್ಯ ಮತ್ತು ಸಂತೋಷ ಏಕಕಾಲಕ್ಕೆ ಉಂಟಾಗಿ ತನ್ನ ಅಪ್ಪ ಸರಿಯಾದ ಕ್ರಮ ಕೈಗೊಂಡನೆಂದು ಸಮಾಧಾನ ಪಟ್ಟುಕೊಂಡನು.

ನಜ್ಮ್

ಸುಮ್ಮೆಯೆ ಅಹ್ಮದೆ ಮುರ್‌ಸಿಲ್ ಶಹೆ ಗಾಝಿ ಕೆ ದರ್ಗಾ ಹಶ್
ಫನಾಹೆ ರುತುಬಯೆ ಸಂಜಾನ್ ಸೆಪೆಹರ್ ಹಫ್ತ್ ನೀ ಬಾಶದ್
ಬಾದಶಾಹರ ಹೆಸರು ಪ್ರವಾದಿ ನಬಿ ಅಹ್ಮದ್‌ರ ಹೆಸರಿನ ಜೊತೆಗಿದೆ, ಅವರ ದರ್ಬಾರು
ಸಪ್ತದಿಕ್ಕುಗಳಿಂದ ಬರುವವರಿಗೆ ಆಶ್ರಯ ನೀಡುವರು.

ಜಹಾನ್ ಝೆ ಅಂಗೂನಯೆ ರೌನಕ್ ಯಾಫ್ತ್ ಅಝ್ ಪೈರಾಹೆ ಕಫಶ್
ಕೆ ದಸ್ತೆ ಮಾಹ್ ಅಸ್ತಾರೆ ಖಿತಾಂ ದರ್ ಆಸ್ತೀನ್ ಬಾಶತ್
ಜಗತ್ತು ಅವನು ನೆಯ್ದ ಜಾಲದ ನೈಯ್ಗೆಯಿಂದ ಬೆಳಕು ಪಡೆಯಿತು
ಚಂದ್ರನಂತಹ ಹೊಳೆವ ಕೈ ರೇಶ್ಮೆಯನುಣುಪಿನ ಬಟ್ಟೆಯ ತೋಳಲ್ಲಿ ಅಡಗಿತು.

ಕಸೆ ಗರ್ಝ್ ದರ್ಗಹೆ ಜಾಹಶ್ ಬ ಪೆಚದ್ ಸರ್ ಝೆನಾಕಾಮಿ
ಗುರ್ಝೂರದ್ ಗರ್ ಕದಂ ಬರ್ ಆಸ್‌ಮಾನ್ ಝೆರೆ ಝಮೀನ್ ಬಾಶದ್
ಅವರ ದರ್ಬಾರಿನಲಿ ಯಾರಾದರೂ ನುಸುಳಲು ಯತ್ನಿಸಿದರೆ ಶಿರಚ್ಛೇದವಾಗುವುದು
ತನ್ನ ಪಾದವನ್ನು ಆಕಾಶದಲ್ಲಿಡಲು ಯತ್ನಿಸಿದಲ್ಲಿ ಮಣ್ಣುಪಾಲಾಗುವುದು.

ಖುವತ್ ಶರ್ಮಿಂದಯೆ ಎಹ್‌ಸಾನೆ ವೂ ಸರ್‌ತಸರ್ ಆಲಂ
ಝಹೆ ಸುಲ್ತಾನೆ ದೀನ್ ಪರ್‌ವರ್ ಶಹನ್‌ಶಾಹೆ ಹಮೀಂ ಬಾಶದ್
ಅವರ ಕೃಪಾಕಟಾಕ್ಷದ ಪರಿಕಂಡು ವಿಶ್ವದೆಲ್ಲೆಡೆಯ ಜನ ತಲೆತಗ್ಗಿಸಿ ನಾಚಬೇಕು
ಏನು ವೈಭವ ನಿನ್ನದು ಧರ್ಮನಿಷ್ಠ ಸುಲ್ತಾನ! ಬಾದಶಾಹರೆಂದರೆ ಹೀಗಿರಬೇಕು.

ಶಾಜಿರಾಜ ಸ್ವಭಾವತ ದೊಡ್ಡ ಅಪರಾಧಿ ಮತ್ತು ದ್ವೇಷ ಗುಣವೆತ್ತವನಾಗಿದ್ದ. ಅವನ ಕುತಂತ್ರ ಮತ್ತು ದುರ್ಬುದ್ಧಿಯನ್ನು ಗಂಟುಕಟ್ಟಿ ಸಮುದ್ರದೊಳಗೆ ಹಾಕಿದರೆ ಸಾಗರವೂ ಒಂದೇ ಸವನೆ ಕರ್‍ರಗಾಗಿ ಮಾರ್ಪಟ್ಟುಬಿಡುವುದು. ಆದರೆ ಬಾದಶಾಹರ

ಕರುಣೆ ಮತ್ತು ಕೃಪೆಯಿಂದ, ಅವರ ಕೃಪೆಯ ಬೆಳಕಿನಿಂದ ಶಾಜಿಗೆ, ಮುಹಮ್ಮದೀ ಜಹೂರಿಯ ಸಮ್ಮುಖದಲ್ಲಿ ಅವನ ಕಲ್ಪನೆಗೂ ಮೀರಿದ ಕೊಡುಗೆ ನೀಡಿದರು. ಅವನ ಹಳೆಯ ರಾಜ್ಯದ ಸಿಂಹಾಸನ ಮತ್ತೆ ದೊರಕುವಂತೆ ಮಾಡಿದರು.

ನಜ್ಮ್

ಮುಹೀತೆ ಗಗೌಹರೇ ನುಶ್ರತ್ ಶಹೆ ಗಾಝಿ ಕೆ ಅಝ್ ಹಿಕ್ಮತಶ್
ಫಲಕ್ ಗರ್ ಸರ್ ಬಬೇಚತ್ ಪಾಯೆ ತಾ ಸರ್ ಝೇರ್ ಝೇರ್ ಉಫ್ತದ್
ಶೂರ ಬಾದಶಾಹ ಸಹಾಯ ಮಾಡುವ ಆರೋಗ್ಯದಲ್ಲಿ ಮುತ್ತುಗಳು ತುಂಬಿವೆ ಅವರ ಬುದ್ಧಿ
ಆಕಾಶ ಅವರ ಮೇಲೆ ತನ್ನ ಪಾದವಿರಿಸಿದರೆ ಆಗುವುದು ಅದು ಸಹಾ ಚೂರುಚೂರು.

ಹುಸೂದ್ ಜಾಯೆ ವೂ ದರ್ ತಯ್ಯೆ ರಾಹೆ ಆಝ್ರೂ ಹರ್‌ದಮ್
ಝು ಚೀಂ ಜಿಬ್ಹಯೆ ಖುದ್ ಬರ್‌ದಮೇ ಶಂಶೀರ್ ತೇಝ್ ಅಫ್ತದ್
ಅವರ ಸಾಧನೆ ಘನತೆಗಳ ಬಗ್ಗೆ ನಂಜು ಕಾರುವವರು, ನಂಜನ್ನು ಉಗುಳುತ್ತಲೇ ಇರುವರು
ಅವರು ಸ್ವತಹ ತಮ್ಮ ಮುಖದಮೇಲೆ ಹರಿತ ತಲ್ವಾರುಗಳನ್ನು ಹೊಡೆಯುತಲಿರುವರು.

ಝು ವಶ್‌ಫೆ ತೈಫೆ ತೀರಶ್ ಗರ್ ಸುಕನ್ ದರ್ ಗುಲ್‌ಸಿತಾಂ ಕೇಝುದ್
ನಸೀಮೆ ಸುಬ್ಹ ದಮ್ ಚ್ಯೂಂ ಶಬ್ನಮೇ ಗುಲ್ ರೇಝ್ ರೇಝ್ ಉಫ್ತದ್
ಅವರ ಖಡ್ಗ, ಬಾಣಗಳ ಹಿರಿಮೆಯ ವಿವರವನ್ನು ಹೂಗಳು ಜಗದಲಿ ಅರುಹಿದವು
ಮುಂಜಾವಿನ ತಂಗಾಳಿ ಬೀಸಿದಾಗ ಹೂವ ಇಬ್ಬನಿಗಳು ಹನಿಹನಿಯಾಗಿ ತೊಟ್ಟಿಕ್ಕವು.

ಝು ಜಾಮೆ ಮೆಹರೆ ವೂ ಜಾನ್ ದರ್‌ತನ್ ಆಯದ್ ತಾಜ್‌ದಾರಾರ
ಝು ತಾಬೆ ಕೈರೆ ವೂ ಆತಿಶ್ ಬಿಝೋರೆ ರಿಶ್ಕೀರ್ ಉಫ್ತದ್
ಅವರ ಕರುಣಾರಸದ ಶರಾಬನ್ನು ಗುಟುಕರಿಸಿದ ಬಾದಶಹಾರುಗಳ ಜೀವ ಅರಳುವುದು
ಅವರ ಕ್ರೋಧಾಗ್ನಿಗೆ ತುತ್ತಾದರೆ ಚರ್ಮವೂ ಸುಲಿದು ಹೊರಬರುವುದು.

ಝು ವಸ್ಫೆ ಗುಲ್ಶನೆ ಖುಲ್‌ಕಶ್ ಅಗರ್ ದಸ್ತಾನ್ ಸರ್ ಆಯದಮ್
ಸಬಾ ಬರೂಯೆ ಗುಲ್ ಚ್ಯೂಂ ಝುಲ್ಫೆ ಖೂಬಾಂ ಮುಶ್ಕೀಝ್ ಉಫ್ತದ್
ಅವರ ಸನ್ನಡತೆಯ ಹೂದೋಟದ ಸುಂದರ ವಾತಾವರಣದಲಿ ಅಭಿಮಾನಿಗಳು ಚಲಿಸಿದಾಗ

ಗಾಳಿಯು ಹೂಗಳ ತಡವಿ ಸುಗಂಧ ತುಂಬಿ ಕೂದಲಿನ ಮೇಲಿಂದ ಸಾಗುವುದು.

ಆಫಾಖ್ ಬಗಾಮೆ ಖುಸ್ರೋ ಗಾಝಿ ಬಾದ್
ಈನಾಮ ಬನಾಮೆ ಖುಸ್ರೊ ಗಾಝಿ ಬಾದ್
ಆಕಾಶದ ಎತ್ತರಕೆ ಬಾದಶಾಹರ ಒಂದು ಹಜ್ಜೆ ಅಂತರದಷ್ಟಿದೆ
ಈ ಗ್ರಂಥ ಬಾದಶಾಹರ ಹೆಸರಿಗೆ ಮುಡಿಪಾಗಿದೆ.

ಅಝ್ ಲುಫ್ತೆ ನಬಿಯ್ಯೆ ಅರಬಿ ಆಬೆ ಬಖಾ
ಚ್ಯೂಂ ಬಾದಾ ಬಜಾಮೆ ಖುಸ್ರೊ ಗಾಝಿ ಬಾದ್
ನಬಿ ಮುಹಮ್ಮದರ ಕೃಪೆಯಿಂದ ಅಮೃತದೊರೆತು
ಶರಾಬಿನ ಗುಟುಕನು ಕುಡಿದಂತೆ ಬಾದಶಾಹರು ಸ್ವೀಕರಿಸಿದರು.

ಸೃಷ್ಟಿಕರ್ತನ ಗುಲಾಮನಾಗುವುದಕ್ಕೆ ಸಾಷ್ಟಾಂಗ ನಮಸ್ಕಾರ ಯಾ ಸಜ್ದಾ ಮಾಡುವುದರ ಮೂಲಕ ಅವನಿಗೆ ಸಲ್ಲಿಸುವ ವಿಶ್ವದ ದೊಡ್ಡ ಕೃತಜ್ಞತೆಯ ಕಾಣಿಕೆಯಾಗಿದೆ. ಅಲ್ಲಾಹನ ಸ್ತುತಿ ಮತ್ತು ಭಕ್ತಿ ಎಂದೂ ನಶಿಸದ ಸಂಪತ್ತಾಗಿದೆ. ಇದು ಬದುಕಿನಲ್ಲಿ ಎಂದೆಂದಿಗೂ ಅವಶ್ಯಕವೆನಿಸಿದೆ. ಜಗತ್ತಿನಲ್ಲಿ ಎಲ್ಲಕಾಲದಲ್ಲೂ ಬೆಳಕು ಬೀರುವ ಮನುಷ್ಯರು ದೇವರನ್ನು ನೋಡಲು ಬಯಸಿದಾಗ ಪ್ರವಾದಿಯವರ ಸ್ತುತಿಯನ್ನು ಮೊದಲು ಮಾಡಿದ ನಂತರ ಶುರುಮಾಡುತ್ತಾರೆ. ಯಾಕೆಂದರೆ ಪ್ರವಾದಿಯವರ ವಾಣಿಯೊಂದಿದೆ 'ಮನ್ ರಾ ಅನ್ ಫಕದ್ ರಾ ಅಲ್' ಯಾರು ನನ್ನನ್ನು ನೋಡುವರೋ ಅವರು ಅಲ್ಲಾಹನನ್ನು ನೋಡುವರು. ಈ ವಿವರದೊಂದಿಗೆ ದೇವರ ಶಾಂತಿ, ಕರುಣೆಯನ್ನು ಪಡೆಯಲು ಹವಣಿಸುವವರು ಅವನ ಪವಿತ್ರ ಅಭಯದ ನೆರಳನ್ನು ಪಡೆಯುವರು.

ಖಿತಾ

ಅಸ್ರಾರೆ ಖುದಾ ಕಲಾಮೆ ಖೈರುಲ್ ಬಶರ್ ಅಸ್ತ್
ಖೈರಿಯತೆ ದಿಲ್ ಝ ನಾಮೆ ಖೈರುಲ್ ಬಶರ್ ಅಸ್ತ್
ಅಲ್ಲಾಹನ ಪವಿತ್ರ ರಹಸ್ಯ ಸಂದೇಶಗಳು ಪ್ರವಾದಿಯ ವಾಣಿಯಲ್ಲಿವೆ
ಹೃದಯದ ಆರೋಗ್ಯ ಪ್ರವಾದಿಯವರ ಹೆಸರಿನಲ್ಲಿದೆ.

ಅಝ್ ಇಶ್ಕ್ ಬ ಬೀನಾಯೆ ದಿಗರ್ ಚೇ ಕಬರ್
ಈಂ ಸೈದ್ ಹಮೀ ಬದಾಮೆ ಖೈರುಲ್ ಬಶರಸ್ತ್
ಇತರರ ಕಣ್ಣಿನ ಪ್ರೇಮ ಹೇಗೆ ತಿಳಿಯುವುದು
ಈ ಜ್ಞಾನ ನಮಗೆ ಸಿಕ್ಕಿರುವುದು ಪ್ರವಾದಿಯವರ ದೆಸೆಯಿಂದ.

ಶೂರ ಹಜ್ರತ್ ಬಾದಶಾಹರ್‌ವರ ಆರೋಗ್ಯವು ಪ್ರವಾದಿಯವರ ಮೇಲಿನ ಪ್ರೇಮ ಮತ್ತು ಅಲ್ಲಾಹನಿಗೆ ಧನ್ಯವಾದ ನೀಡುವ ಸ್ತುತಿಯಿಂದ ಸೇವೆಯ ಸಾಷ್ಟಾಂಗ ಪ್ರಣಾಮವನ್ನು ಕೈಗೊಳ್ಳುವುದರಿಂದ ಚೆನ್ನಾಗಿರುತ್ತಿತ್ತು. ಅವರಂತಹ ಜನರು ಪ್ರವಾದಿ ಮುಹಮ್ಮದ್‌ರ ಬೆಳಕಿನ ಪ್ರಭಾವಪಡೆದು ಬಾದಶಾಹರ ಒಳ್ಳೆಯತನವನ್ನು ಹಾಡಿ ಹೊಗಳುವುದು ವಿಶ್ವದ ದೊಡ್ಡ ಜನರ ಮುಂದೆ ಹೇಳುವುದು ಒಂದೊಂದಾಗಿ ಬಾಗಿಲುಗಳನ್ನು ತೆರೆದಂತೆ.

ಅಭ್ಯಾತ್

ಶಾಹೇ ಕೆ ಬಝ್ಮೆ ಬಕ್ತ್ ಒ ಇಕ್ಬಾಲ್
ಝು ಆಂ ಕೆ ಖಸೀದೆ ಜಾನೆ ಇಜ್‌ಲಾಲ್
ಎಂತಹ ಸುಂದರ ಭವ್ಯ ಪುಣ್ಯವಂತ ಬಾದಶಾಹರ ಅದ್ಭುತ ಸಮಾರಂಭ
ಇಲ್ಲಿ ಪುಣ್ಯದ ಶರಾಬಿನ ಗುಟುಕು ನೀಡಲಾಗುತ್ತಿದೆ.

ಗಝ್ ರೇಜಸೇ ನೀಮ್ ಜುರಯೆ ಆಂ
ಶುದ್ ತಾಜುವರಿ ನಸೀಬೆ ಶಾಹಾನ್
ಅವರ ಶರಾಬಿನ ಅರ್ಧಗುಟುಕು ಯಾರಮೇಲಾದರೂ ಬಿದ್ದರೆ
ಪುಣ್ಯವಂತ ಬಾದಶಾಹರ ಯಾದಿಯಲ್ಲಿ ಶಾಮೀಲಾಗುತ್ತಾರೆ.

ಝು ಬಂದಾ ತಾಝು ಬೆ ನಯಾಝು
ಸುಲ್ತಾನೆ ದಖನ್ ಖಿಝಿಯೋ ಗಾಝಿ
ಬಯಸದೆ ಪಡೆದ ಕರೀಟದ ಒಡೆಯರಿವರು
ಅವರು ದಖ್ಖನಿನ ಸುಲ್ತಾನ ವೀರ ಬಾದಶಾಹರು.

ದಾನಾಯೆ ಮಿಝಾಜೆ ನಾಝಿನಾನ್
ಬಿನಾಯೆ ನಿಹಾನ್ ಹಕ್ ಗುಝೀನಾನ್
ನಾಜೂಕಿನ ದೇಹದ ಆರೋಗ್ಯವನ್ನು ತಿಳಿದವರು
ರಹಸ್ಯವಾದ ಸತ್ಯವನ್ನು ಬೆಳಕಿಗೆ ತರುವವರು.

ಮಾಶೂಕ್ ಝುಮಾನಾ ಬರ್ ದರೇ ವೂಸ್ತ್
ನೆಹ ಚರ್ಖ್ ಚ್ಯೂಂ ಹಲ್ಕಯೆ ಬರ್‌ದಾರೆ ವೂಸ್ತ್
ಸಮಸ್ತ ವಿಶ್ವದ ಪ್ರೇಮಿಕೆಯು ಅವರ ಮನೆಯಲ್ಲಿದೆ
ಒಂಭತ್ತು ಆಕಾಶಗಳು ಬಾದಶಾಹರನ್ನು ನಾಲ್ಕೂ ದಿಕ್ಕಲ್ಲಿ ಸುತ್ತುವರಿದಿದೆ.

ಅಲ್ಲಾಹನು ಯಾರನ್ನು ಬೇಕಾದರೂ ಬಾದಶಾಹನ ದರ್ಜೆಗೆ ಏರಿಸುತ್ತಾನೆ. ಆದರೆ ಅವರ ಕೈಕೆಳಗೆ ಕೆಲಸ ಮಾಡುವವರು ಅವರ ಯಾವುದೇ ಕೆಲಸದ ಸಂದರ್ಭದಲ್ಲಿ ಕೊರತೆಯನ್ನು ಮಾಡಕೂಡದು. ಈ ಕ್ರಮದಲ್ಲಿ ಈ ರಾಜ್ಯದ ಪ್ರಜೆಗಳು ಬಾದಶಾಹನ

ಆಜ್ಞೆಗೆ ಅನುಸಾರ ನಡೆದರೆ ಈ ರಾಜ್ಯದ ಮತ್ತು ಅವರ ಎಲ್ಲ ನಿರೀಕ್ಷೆ ಮತ್ತು ಆಕಾಂಕ್ಷೆಗಳನ್ನು ನೆರವೇರಿಸುತ್ತಾನೆ. ಬಾದಶಾಹ ಈ ರಾಜ್ಯದ ಆಳ್ವಿಕೆಯ ಕೆಲಸದಲ್ಲಿ ತೀವ್ರರೀತಿಯಲ್ಲಿ ತೊಡಗಿದ್ದರೂ ಕೂಡ ಈ ಧೋರಣೆಯನ್ನು ಕೈಬಿಡಲಾರ.

■

*

ಅಧ್ಯಾಯ – ೨೧

ಬಾದಶಹಗೆ ಮಗಳು ಹುಟ್ಟಿದರು

ಬಾದಶಾಹರ ದೈಹಿಕ ಆರೋಗ್ಯದಲ್ಲಿ ವಸಂತದ ಕುರುಹು ಕಾಣಿಸಿದಾಗ ಹುರುಪು, ಯೌವ್ವನದ ಕಂಪು ಮತ್ತು ಹೊಸ ಚೈತನ್ಯ ಮೂಡಿದಾಗ ನೃತ್ಯ, ಸಂಗೀತದ ಸಮಾರಂಭಗಳನ್ನು ಏರ್ಪಾಡು ಮಾಡುತ್ತಿದ್ದರು. ತನ್ನ ರಾಜ್ಯದ ಪ್ರಜೆಗಳನ್ನು ಸಂತಸದಲ್ಲಿರಿಸಲು, ವಾತಾವರಣವನ್ನು ರಸಮಯ ಗೊಳಿಸಲು ತೋಟದ ಸುಗಂಧ ಪೂರ್ಣ ತಾಜಾ ಹೂಗಳನ್ನು ತನ್ನ ಸ್ನೇಹಿತರ ಮೇಲೆ ಮಳೆಗೈಯ್ಯುತ್ತಿದ್ದರು. ಇದರ ಸುಂಗಧದಿಂದ ಚೈತನ್ಯಪೂರ್ಣ ಹವೆಯು ಚಲಿಸುತ್ತಿರುತ್ತದೆ. ಈ ಅಧ್ಭುತ ಸ್ವಾರಸ್ಯಕರ ವಾತಾವರಣದಿಂದ ಪ್ರೇಮದ ಹೂಬಾಣಗಳು ಬಾದಶಾಹರ ಮೇಲೆ ಚಲಿಸುತ್ತವೆ. ಪ್ರೇಮಮಯ ರಸಾಸ್ವಾದನೆಯ ಆಕಾಂಕ್ಷೆಯ ಕಾಮನೆಗಳು ಬಾದಶಾಹರ ತೊಡೆಯಮೇಲೆ ಕೂರಲು ಹವಣಿಸಿವೆ. ಪ್ರೇಮ ಪ್ರೇಮಿಕೆಯರ ಆಕರ್ಷಣೆಯು ಮನುಷ್ಯನ ಬದುಕಲ್ಲಿ ಪ್ರಾಚೀನ ಕಾಲದಿಂದಲೇ ನಡೆದು ಬಂದ ನಿಯಮವಾಗಿದೆ. ಈ ಪ್ರೇಮಿಕೆ ಪ್ರಿಯಕರರ ಮಿಲನ ಸಮಾವೇಶವ ನೆರವೇರಿಸುವ ಮುತ್ತುಗಳಿಂದ ಒಂದು ಹೊಳೆವ ನಕ್ಷತ್ರವು ಬಾದಶಾಹನ ಬೆರಳ ಉಂಗುರದ ಹರಳಾಗಿ ಮಾರ್ಪಟ್ಟಿತು. ಅದು ಬಾದಶಾಹರ ಪರ್ದಾದಾರಿ ಅಂತಃಪುರದಲ್ಲಿ ಸೇರಿಕೊಂಡಿತು. ಆ ಪುಣ್ಯವಂತೆ ಘನತೆ ಗೌರವಗಳ ಪ್ರತೀಕವಾಗಿದ್ದ ಹಜ್ರತ್ ಬೇಗಂ ಸುಲ್ತಾನಳಾಗಿದ್ದಳು. ಬಾದಶಾರೊಂದಿಗೆ ಮಿಲನದ ಅವಕಾಶವನ್ನು ಪಡೆದಳು. ಇವಳು ಘನತೆವೆತ್ತ ಪ್ರಸಿದ್ಧ ಸಯ್ಯದ್ ಮನೆತನದ ಷಾ ನಬಿಯ್ಯುಲ್ ಹುಸೈನಿಯವರ ಮಗಳಾಗಿದ್ದಳು. ಇವರ ಜೊತೆಗೆ ನಿಕಾಹ ನಡೆಯಿತು. ಅಲ್ಲಾಹನ ಕೃಪೆಯಿಂದ ಸ್ವಲ್ಪ ಕಾಲಾನಂತರ ಈ ದಂಪತಿಗಳ ಹೂದೋಟದಲ್ಲಿ ಒಂದು ಪವಿತ್ರ ಹೂ ಅರಳಿತು. ಸನ್ ೧೦೪೫ ಹಿಜರಿ

ವರ್ಷದ ಜಮಾದಿಲ್ ಅವ್ವಲ್ ತಿಂಗಳ ಮೂರನೇ ದಿನಾಂಕದಂದು ಶನಿವಾರದ ಮುಂಜಾನೆ ೫ಗಂಟೆಗೆ ಇವರಿಗೆ ಮಗುಹುಟ್ಟಿತು. ಈ ಮಗು ಹುಟ್ಟಿದ ಘಳಿಗೆ 'ಸಾದ್' ಯಾ ಶುಭವೆಂದು ಪರಿಗಣಿಸಲ್ಪಟ್ಟಿತು. ಈ ಶುಭವಾರ್ತೆಯನ್ನು ರಾಜ್ಯದೆಲ್ಲೆಡೆ ಹರಡುವ ವ್ಯವಸ್ಥೆ ಮಾಡಲಾಯಿತು.

ಬಾದಶಾಹರಿಗೆ ಹುಟ್ಟಿದ ಈ ಮಗು ಅತ್ಯಂತ ಬೆಲೆಬಾಳುವ ಮತ್ತು ಸುಂದರ ಮುತ್ತಾಗಿತ್ತು. ವಿಶ್ವಕ್ಕೆ ಸಂತಸ ತಂದ ಈ ವಾರ್ತೆ ಬಾದಶಾಹರ ಪಾಲಿಗೆ ದೊರೆತ ಒಂದು ಎತ್ತರದ ಪದವಿಯಾಗಿತ್ತು. ಹಜ್ರತ್ ಬಾದಶಾಹರಿಗೆ ಪುಣ್ಯವಂತ ಹೆಣ್ಣುಮಗು ಹುಟ್ಟುವ ಮೂಲಕ ಅಲ್ಲಾಹನ ಪವಿತ್ರ ಕೊಡುಗೆಗೆ ಧನ್ಯವಾದದ ಪ್ರಾರ್ಥನೆ ಮಾಡುವುದರೊಂದಿಗೆ ತಮ್ಮ ಸ್ವಂತ ಗಳಿಕೆಯಿಂದ ದಾನಧರ್ಮದ ಮುಗಿಲು ಕವಿದು ಮಳೆಗೈದರು. ಬಂಗಾರದ ಮಳೆ ಎಷ್ಟೊಂದು ಜೋರಾಗಿ ಸುರಿಯಿತೆಂದರೆ ಭೂಮಿ, ಪರ್ವತಗಳು ಬಂಗಾರದಿಂದ ಆವೃತವಾದವು. ಮುತ್ತುಗಳ ಸಾಗರದ ಉಬ್ಬರವು ಸುರೈಯ್ಯಾ ನಕ್ಷತ್ರದೊಂದಿಗೆ ಘರ್ಷಣೆನಡೆಸಿತು. ಈ ಸಂತಸಭರಿತ ವಾತಾವರಣದ ಎಲೆಎಲೆಗಳಾದಿಯಾಗಿ ಹೂಹೂಗಳಾದಿಯಾಗಿ ಸ್ವರ್ಗದ ಸಿದರಾ, ತೂಬಾ ವೃಕ್ಷಗಳೂ ಕೂಡ ಅವರ ಅನುಯಾಯಿಗಳಾಗಿ ಮಾರ್ಪಾಡುಹೊಂದಿದರು. ಸಮಾರಂಭಕ್ಕಾಗಿ ರಚಿಸಿದ ಡೇರೆಗಳ ನೆರಳುಗಳು ನಕ್ಷತ್ರಗಳ ಹಗ್ಗಗಳಿಂದ ಎಳೆದು ನಿಲ್ಲಿಸಲಾಗಿತ್ತು. ಇವುಗಳ ಡೇರೆಗಳ ತಳಪಾಯದ ಗರಿಮೆ ಸ್ವರ್ಗದ ಸಿದರಾ ವೃಕ್ಷದೆತ್ತರಕ್ಕೇರಿತ್ತು.

ಸಂಪೂರ್ಣರೀತಿಯಲ್ಲಿ ಎಲ್ಲ ಸುಂದರ ಕಟ್ಟಡಗಳಿಗೆ ಮಕ್ಮಲ್ ಮತ್ತು ಪೀತಾಂಬರದ ಪರದೆಗಳಿಂದ ಸಿಂಗರಿಸಲ್ಪಟ್ಟಿತು. ಈ ಪರದೆಗಳನ್ನು ಸರಿಸಿ ನೋಡಿದಲ್ಲಿ ಸಹಸ್ರಾರು ಸುಂದರ ದೃಶ್ಯಗಳು ಕಂಡುಬರುವುದು. ಸ್ವಾಗತಕ್ಕಾಗಿ ಕಹಳೆ, ಶಹನಾಯಿ ವಾದ್ಯಗಳು ಸಂತಸದ ರಾಗವನ್ನು ನುಡಿಸುತ್ತಿದ್ದವು. ಈ ಸಂತಸದ ಅದ್ಭುತ ಕ್ಷಣಗಳ ಸಂಗೀತದ ಅಲೆಗಳು ಜಗದಗಲ ಜನರ ಕಿವಿಗಳಿಗೆ ಆಪ್ಯಾಯಮಾನವ ನೀಡುತ್ತಿದ್ದವು.

ಈ ಸಮಾರಂಭದ ವೈಭವಕ್ಕೆ ಮೆರುಗು ನೀಡಲು ಒಂದು ಎಂತಹಾ ಅದ್ಭುತ ವ್ಯವಸ್ಥೆಯನ್ನು ಮಾಡಿದ್ದರೆಂದರೆ ಶರಾಬಿನ ಗುಟುಕು ಗುಟುಕು ಸೇರಿ ವಾತಾವವರಣವನ್ನು ಮತ್ತೇರಿಸಿತ್ತು. ಶರಾಬಿನ ಬಟ್ಟಲು ತುಂಬುವ ಸಾಕಿಗಳು ತಮ್ಮ ಸುಂದರ ಕೈಗಳಿಂದ ಸುರಿಯುವ ಮೂಲಕ ಖುಷಿ ಮತ್ತು ಹುಮ್ಮಸ್ಸನ್ನು ಕೆರಳಿಸುತ್ತಿದ್ದರು. ಸಹನೆಯ ಕಟ್ಟೆಯು ಒಡೆಯದಂತೆ ತಡೆದು ನಿಲ್ಲಿಸುವುದು ಸಾಧ್ಯವಾಗದ ರೀತಿಯಲ್ಲಿ ಸಮ್ಮೋಹಕ ಕಣ್ಣುಗಳ ಮೂಲಕ ಹೃದಯವೆಂಬ ಬಟ್ಟಲಲ್ಲಿ ಶರಾಬನ್ನು ಹೊಯ್ಯುತ್ತಿದ್ದರು. ಮುಶ್ಕ್ ಸುಗಂಧದ ಹೊಗೆ ಸುಂದರ ಕುಂಡಗಳಿಂದ ಹೊರಟು ಹಬ್ಬುತ್ತಾ ಸುಂದರ ಕೂದಲರಾಶಿಯನ್ನು ಸುಗಂಧದ ಚಾಮರವನ್ನಾಗಿ ಮಾಡಿತ್ತು. ಮುಶ್ಕ್ ಪರಿಮಳದ ಸುಮಧುರ ವಾತಾವರಣ ಅಲ್ಲೆಲ್ಲ ಹಬ್ಬಿ ಮತ್ತೇರಿಸಿತ್ತು, ಆತ್ಮಕ್ಕೆ ಅದ್ವಿತೀಯವೆನಿಸುವ

ಸುಗಂಧದ ಬಟ್ಟೆ ಹೊದಿಸಲ್ಪಟ್ಟಿತ್ತು. ಜಾಫ್ರಾನಿ ಕೇಸರಿ ಬಣ್ಣದ ಕನ್ನಡಿಗಳಲ್ಲಿ ಪ್ರತಿಫಲಿಸುವ ಹಸಿರು ಆಕಾಶ ಮಾಣಿಕ್ಯದಂತೆ ಹೊಳೆಯುತ್ತಿತ್ತು. ಸಮಾರಂಭದಲ್ಲಿ ಬಣ್ಣದೋಕುಳಿಯ ಸಂಭ್ರಮ ಶುರುವಾಯಿತು. ಎಷ್ಟೊಂದು ಬಣ್ಣಗಳನ್ನು ಹಾರಿಸಲಾಯಿತೆಂದರೆ ಅಕಸ್ಮಾತ್ ಬಾದಶಾಹರ ಬಿಳಿ ರೇಶ್ಮೆ, ಮಕ್ಮಲಿನಜುಬ್ಬಾ ಬಟ್ಟೆಗಳ ಮೇಲೆ ಬಿದ್ದು ರಂಗುಬದಲಾಗಿ ಜಾಫ್ರಾನಿ ಬಣ್ಣದ ಮಕ್ಮಲ್‌ಬಟ್ಟೆಯಾಗಿ ಪರಿವರ್ತನೆಗೊಂಡಿತು.

ಈ ರಂಗೇರಿದ ಸಮಾರಂಭದಲ್ಲಿ ಕಾರಂಜಿಯಂತೆ ಪುಟಿದೇಳುವ ರಸಾಸ್ವಾದನೆಯಯನ್ನು ಅನುಭವಿಸುತ್ತ ಮತ್ತಿನಿಂದ, ತಲ್ಲೀನರಾಗಿ ಹಾಡುವ ಗಾಯಕರಿಂದಾಗಿ ಈ ಸಂತಸದ ವಾತಾವರಣದಲ್ಲಿ ಸಭಿಕರು ಆನಂದಪರವಶರಾಗಿ ಸುಖಭೋಗದ ಲಯದಲ್ಲಿ ತಲ್ಲೀನರಾಗಿ ಉತ್ತೇಜನದ ಪರಾಕಾಷ್ಟೆ ತಲಪಿದರು. ಮುಸ್ಕ್ ಮತ್ತು ಚಂದನದ ಸುಂಗಂಧದಲ್ಲಿ ಮುಳುಗಿ ಎದ್ದಂತಿರುವ ನಾಜೂಕಾದ ಕನ್ಯೆಯರು ಯಾರೂ ಮುಟ್ಟದ ಅನಘ್ರಾನಿತ ಸುಮಗಳು ಖುಶಿಯಿಂದ ಮತ್ತೇರಿದ ತಮ್ಮ ಸಮ್ಮೋಹಕ ಅಂಗಾಂಗಳ ಕುಣಿಸುತ್ತ ಮದವೆತ್ತ ದುಂಬಿಗಳ ಆಕರ್ಷಿಸಲು ನಡೆಸುವ ಹಾವಭಾವಗಳು, ವೈಯ್ಯಾರದ ಬಲುಕು ನಡೆಯಿಂದ ಅಲ್ಲಿನ ಜನರ ಉಲ್ಲಾಸವು ಮುಗಿಲು ಮುಟ್ಟಿತು. ಈ ಕನ್ಯೆಯರು ಅಲ್ಲಿ ನೆರೆದ ಜನರನ್ನು ಮೋಹಕ ಸ್ವರ್ಗಲೋಕದಲ್ಲಿ ತೇಲಾಡುತ್ತ ಸೃಷ್ಟಿಸಿದ ಮತ್ತಿನ ವಾತಾವರಣದಲ್ಲಿ ದೊಡ್ಡ ತೂಫಾನು ಎದ್ದಂತಾಯಿತು. ಶರಾಬಿನ ಬಟ್ಟಲನ್ನು ಹೊತ್ತ ನೃತ್ಯಗಾತಿಯರು ಹೊಳಪಿನ ಜರಿಯ ಆಕರ್ಷಕ ಮೈಮಾಟ ಎದ್ದು ಕಾಣುವಂತೆ ಹುಚ್ಚುಗಟ್ಟಿಸುವ ತೆಳು ಬಟ್ಟೆಗಳನ್ನು ತೊಟ್ಟು ತೆಳುವಾದ ಪಾರದರ್ಶಕ ಅವಕುಂಠನದ ಒಳಗಿನಿಂದ ಮೂಡಿದ ಸುಂದರ ಮುಖದಲ್ಲಿ ಮಾದಕ ನಗೆ ಚೆಲ್ಲುತ್ತ ತಮ್ಮ ಸೊಂಟಗಳನ್ನು ಲಯಬದ್ಧವಾಗಿ ಅಲುಗಾಡಿಸುತ್ತಾ ಕಾಮನನ್ನು ಆಹ್ವಾನಿಸುವ ಮಾಟಗಾತಿಯರ ನೃತ್ಯ ಪವಾಡವನ್ನು ತೋರಿಸುತ್ತಾ ನೋಡುವವರ ತಾಳ್ಮೆಯನ್ನು ಪರೀಕ್ಷೆಗೊಡ್ಡಿದ್ದರು. ತಮ್ಮ ಕಣ್ಣುಗಳನ್ನು ಕುಣಿಸುತ್ತ, ಬಂಗಾರ ವರ್ಣದ ಜರಿಗಳಿಂದ ಅಲಂಕೃತ ಹೊಳೆವ ಕಣ್ಣ ರೆಪ್ಪೆಗಳನ್ನು ಮಿಟುಕಿಸುತ್ತಾ ಈ ಮಾಟಗಾತಿಯರು ತಮ್ಮ ಅದ್ಭುತ ಸೌಂದರ್ಯವನ್ನು ಪ್ರದರ್ಶಿಸುತ್ತಾ ನಾಜೂಕಾದ ಕೈಗಳಿಂದ ಸ್ತೋತೃಗಳ ಎದೆ, ಮೈಗಳನ್ನು ತಡವುತ್ತ ಹೃದಯಸೂರೆಗೊಳ್ಳುವಂತೆ ಕಾಮನೆಗಳ ಸಾಗರದೊಳಗೆ ಈಜಾಡಲು ಕರೆನೀಡುತ್ತಿದ್ದರು. ತಮ್ಮ ನಾಜೂಕಾದ ಮೆತ್ತಗಿನ ಮೊಲೆಗಳನ್ನು ಎತ್ತಿ ಹಿಡಿದು ಕುಣಿಸುತ್ತಾ ಪ್ರೇಮಿಗಳ ಮದೋನ್ಮತ್ತ ಮನಸ್ಸನ್ನು ಸಂಯಮದ ಬಂಧನದಿಂದ ಮುಕ್ತಗೊಳಿಸಿ, ಖುಷಿ, ಆನಂದೋತ್ಸಾಹದ ಚಿಲುಮೆಯನ್ನು ಚಿಮ್ಮಿಸುತ್ತ ಕಾಮವನ್ನು ಕೆರಳಿಸುತ್ತಿದ್ದರು. ಕೆಲವು ನೃತ್ಯಗಾತಿಯರು ತಮ್ಮ ಕೈಗಳನ್ನು ಎದೆಯ ಮೇಲಿಟ್ಟುಕೊಂಡು ಕುಣಿಯುತ್ತ ವೀಕ್ಷರ ಎದೆ ನಡುಗಿಸುತ್ತಾ, ಅನಂಗರಂಗದ ಪಳಗಿದ ನೃತ್ಯಗಾತಿಯರು ನೋಡುವವರ ಮೇಲೆ ತಮ್ಮ ಸುಕೋಮಲ ಹೃದಯಗಳನ್ನು ಎಸೆದು ಸಮ್ಮೋಹಿತರನ್ನಾಗಿ ಮಾಡುತ್ತಿದ್ದರು.

ತಮ್ಮ ಕೋಮಲವಾದ ದೇಹವನ್ನು ವೀಕ್ಷಕರ ಮಡಿಲಲ್ಲಿ ಹಾಕಿಬಿಟ್ಟು ಆನಂದ ಸಾಗರದಲ್ಲಿ ತೇಲಿಸಿಬಿಡುತ್ತಿದ್ದರು.

ನಜ್ಮ್

ಝುಸೂಕೆ ಅಂಬರಿ ಮುಯಾನೆ ತನ್ನಾರ್ಝ್
ದಿಲೇ ಸಾಹಿಬ್ ದಿಲಾನೆ ಆಮದ್ ಬಪರ್‌ವಾರ್ಝ್
ಸುಗಂಧಭರಿತ ಗುಂಗುರು ಕೂದಲಿನ ಸುರುಳಿಗಳಿಂದ
ಹೃದಯವಂತರ ಮನಸ್ಸು ಹಾರಿ ಕುಣಿಯಿತು ಆನಂದದಿಂದ.

ಬ ರಕ್ಕಾಸಿಯೆ ಬುತಾನ್ ಅಝ್ ಜಾಯೆ ಜಸ್ತಂದ್
ಝುಶೋಕಿಯೆ ಶೀಷಯೆ ದಿಲ್ಹಾ ಶಿಕಸ್ತಂದ್
ಸುಂದರ ನೃತ್ಯಗಾತಿಯರ ಕುಣಿತದ ಹೆಜ್ಜೆಸಪ್ಪಳದಿಂದ
ಅವರ ಹಾವಭಾವಗಳಿಂದ ಹೃದಯ ಚೂರಾಯಿತು ಮತ್ತಿನಿಂದ.

ಝುರಕ್ಸೆ ನಗ್ಮಯೆ ಪರ್ದಾರ್ಝಾನೆ ನೌಖೇರ್ಝ್
ಚನಾ ಶುದ್ ಬಝ್ಮೆ ದೌರಾನ್ ಇಸ್ರತಂಗೇರ್ಝ್
ಈ ಕನ್ಯೆಯರ ಹಾಡು ಕುಣಿತಗಳಿಂದ
ಸಮಾರಂಭದ ಜಗತ್ತು ಅದ್ಭುತ ರೀತಿಯಲಿ ರಂಗೇರಿತ್ತು.

ಕೆ ಅಝ್ ಶಾದಿಯೆ ದಫೆ ಕುರ್ಶೀದ್ ದರ್‌ದಸ್ತ್
ಬ ರಕ್ಕಾಸಿಯೇ ಫಲಕ್ ಅಝ್‌ಜಾಯೆ ಬರ್ ಜಸ್ತ್
ಕೈಯಲ್ಲಿ ಸಂತಸದ ಅಲೆಗಳನ್ನು ಹೊರಡಿಸುವ ಮಿನುಗುವ 'ದಫ್' ತಮಟೆ ಇತ್ತು,
ನೃತ್ಯಗಾತಿ ಕನ್ಯೆಯರ ಕುಣಿತದ ಆಕರ್ಷಣೆಯಿಂದ ಆಕಾಶವೂ ಕುಣಿದೆದ್ದಿತು.

ಜಹಾಂ ಗಶ್ತ್ ಆಂಚಾ ಬ ಅಯ್‌ಶೇ ದಮ್‌ಸಾರ್ಝ್
ಕೆ ಉನ್‌ಕಾ ಶುದ್ ಚ್ಯೂಂ ಬುಲ್‌ಬುಲ್ ನಗ್‌ಮ ಪರ್‌ದಾರ್ಝ್
ಜಗತ್ತೆಲ್ಲ ಈ ಸಂತಸದ ಸಮಾರಂಭದಲಿ ಮಂತ್ರಮುಗ್ಧವಾಗಿದೆ
ಅವರ ಸಾಮಾನ್ಯ ಹಕ್ಕಿ ಕೂಡ ಮಾರ್ಪಟ್ಟು ಹಾಡುವ ಬುಲ್‌ಬುಲ್ ಆಗಿದೆ.

ಗುಲೇ ಸಾಗರ್ ದಮೀದ್ ಅಝ್‌ಬಾಗೆ ಅಯ್ಯಾಮ್
ಸಬಾ ಅಝ್ ಮೌಜ್ ಮಿ ಉಫ್ತಾದ್ ದರ್ದಾಂ
ಶರಾಬಿನ ಅಮಲು ಸೂಸುವ ಹೂವು ಈ ಸಮಾರಂಭದ ತೋಟದಿ ಅರಳಿ ಮಿನುಗಿತು
ಶರಾಬಿನ ಮತ್ತಿನಿಂದ ವಾತಾವರಣದ ಗಾಳಿಯೂ ಆಕರ್ಷಣೆಗೆ ಒಳಗಾಯಿತು.

ಪ್ರಜೆಗಳ ಕರುಣಾಮಯ ಸ್ನೇಹಿತನ ಕಡೆಯಿಂದ ವೈಭವದ ಊಟಉಪಚಾರದ ಏರ್ಪಾಡು ಆಗಿತ್ತು. ಊಟದ ಚಾಪೆಯನ್ನು ದೊಡ್ಡ ವಿಶಾಲವಾದ ಡೇರೆಯ ಮೈದಾನದಂತೆ ಕಾಣುವ ವಿಸ್ತಾರ ಸ್ಥಳದಲ್ಲಿ ಹಾಕಿದ್ದರು. ರಾಜ್ಯದ ಜನರಿಗೆ ಬಾದಶಾಹರು ಮಾಡಿದ ಅದ್ದೂರಿಯ ವ್ಯವಸ್ಥೆಯ ಭೋಜನ ಶಾಲೆಯಲ್ಲಿ ಆಗಮಿಸಿದ ಅತಿಥಿಗಳೆಲ್ಲರಿಗೂ ಊಟಉಪಚಾರಗಳಿಗೆ ಯಾವುದೇ ರೀತಿಯ ಕೊರತೆಯಾಗದಂತಹ ಏರ್ಪಾಡು ಮಾಡಿದ್ದರು. ಇಲ್ಲಿ ಆಗಮಿಸಿದ ಪ್ರಜೆಗಳು ತಮ್ಮ ಬದುಕಿನ ಎಲ್ಲ ಜಂಜಾಟಗಳನ್ನು ಕೆಲಕಾಲ ಮರೆಯುವಂತೆ ವ್ಯವಸ್ಥೆ ಮಾಡಲಾಗಿತ್ತು ಮಾತ್ರವಲ್ಲ ಅವರು ದೈನಂದಿನ ಆಹಾರಕ್ಕಾಗಿ ಶ್ರಮಪಡುವ ಅಗತ್ಯವಿಲ್ಲವೆಂಬ ಭ್ರಮೆ ಮೂಡುವಂತಹ ಆಕರ್ಷಕ ವ್ಯವಸ್ಥೆ ಮಾಡಲಾಗಿತ್ತು. ದೊಡ್ಡ ದೊಡ್ಡ ಆಕರ್ಷಕ ಚರಿಗೆಗಳಲ್ಲಿ ಆಡು ಕುರಿಗಳ ಮಾಂಸದ ಪಲ್ಯದ ಪಾತ್ರೆಗಳು ಎಲ್ಲರೆದುರು ಅಲಂಕರಿಸಿ ಇಡಲಾಗಿತ್ತು. ಹಸಿವನ್ನು ಕೆರಳಿಸುವ ಅದರ ಕಂಪು ಭೋಜನ ಶಾಲೆಯಲ್ಲದೆ ಅದರ ಸುತ್ತಮುತ್ತ ಹರಡಿತ್ತು. ಸೂರ್ಯನ ಬೇಗೆಯ ಬಿಸಿಬಿಸಿಯಾದ ರೊಟ್ಟಿಗಳು ಆಕಾಶದ ತಂದೂರು ಒಲೆಯಿಂದ ಸುಡುವ ಮೂಲಕ ರಾಶಿರಾಶಿ ರೊಟ್ಟಿಗಳು ಕೂತವರ ಬಳಿಗೆ ಬರುತ್ತಲೇ ಇದ್ದವು. ಸ್ವಾದಿಷ್ಟ ಕೋಳಿಯ ಕರಿದ ಕಬಾಬುಗಳ ರಾಶಿ ಬಿಸಿಬಿಸಿಯಾಗಿ ಬಡಿಸಲಾಗುತ್ತಿತ್ತು. ಇನ್ನೂ ಅನೇಕ ರೀತಿಯ ವ್ಯಂಜನಗಳು, ಭಕ್ಷ್ಯಗಳು, ತಿಂಡಿಗಳನ್ನು ಸಾಲು ಸಾಲಾಗಿ ಸೇವಕರು ತಂದು ಊಟಕ್ಕೆ ಕೂತವರಿಗೆ ಬಡಿಸುತ್ತಲೇ ಇದ್ದರು. ಇವೆಲ್ಲ ಬಾದಶಾಹರ ಕಡೆಯಿಂದ ದೊರೆತ ಅಪರೂಪದ ರಾಜವೈಭದ ಭೋಜನವಾಗಿತ್ತು. ಇಲ್ಲಿ ಉಂಡವರು ತೃಪ್ತಿಯಿಂದ ಅಲ್ಲಾಹನ ನೆನೆದು ತಮಗೆ ಉಣಿಸಿ ತೃಪ್ತಿ ಪಡಿಸಿದ ಬಾದಶಾಹರಿಗೆ ಶುಭವಾಗಲಿ, ಜಯವಾಗಲಿ, ನೂರು ವರ್ಷಕಾಲ ಬದುಕಲಿ ಎಂದು ಹಾರೈಸುತ್ತ ದುವಾ ಪ್ರಾರ್ಥನೆ ಮಾಡುತ್ತಿದ್ದರು. ಈ ಮೂಲಕ ಇದು ಅವರ ರಾಜ್ಯದ ಆಳ್ವಿಕೆಗೆ, ಬಾದಶಾಹರ ಆರೋಗ್ಯಕ್ಕೆ, ಅಭ್ಯುದಯಕ್ಕೆ ಮತ್ತು ರಾಜ್ಯದ ಸಮಸ್ತ ಜನರ ಏಳಿಗಾಗಿ ಮಾಡುವ ಪ್ರಾರ್ಥನೆಯ ಸಮಾರಂಭವೂ ಆಗಿ ಮಾರ್ಪಟ್ಟಿತ್ತು.

ನಜ್ಮ್

ನೆಅಮತೆ ನಾತೆ ನಬಿ ಬಾಕೆ ಮುಹಯ್ಯ ಬಾಶದ್
ದೋ ಜಹಾಂ ರೇಝೂ ಖೌರೆ ಖ್ವಾನೆ ಶಹೆ ಗಾಝಿಬಾದ್
ಪ್ರವಾದಿ ಮುಹಮ್ಮದರ ಸ್ತುತಿಯ ವೈಭವವಿರುವುದೋ
ಅಲ್ಲಿ ಶೂರ ಬಾದಶಾಹರ ಭೋಜನಾಲಯದಲ್ಲಿ ಜನ ಆಹಾರ ಸ್ವೀಕರಿಸುವರು.

ಜಾವಿದಾನ್ ಅಝ್ ಕರಮೇ ಹಜ್ರತೆ ಸುಲ್ತಾನೆ ರುಸುಲ್
ದಸ್ತೆ ಇಕ್ಬಾಲ್ ಬದಾಮಾನೆ ಶಹೆ ಗಾಝಿ ಬಾತ್
ಅವರು ಪ್ರವಾದಿ ಹಜ್ರತ್‌ರವರ ಕೃಪೆಯಿಂದ ಜಯಶೀಲರಾಗುವರು
ಅವರ ಪುಣ್ಯ ಹಸ್ತ ಶೂರ ಬಾದಶಾಹರ ತಲೆಯಮೇಲಿರುವುದು.

ದರಬಾರಿನ ದೊಡ್ಡದೊಡ್ಡ ಅಧಿಕಾರಿಗಳು, ಸಮಸ್ತ ವಜೀರರು, ಸೇನಾನಿಗಳು, ಸರದಾರರು ಬಾದಶಾಹರಿಗೆ ಸಂತಾನ ಪ್ರಾಪ್ತಿಯಾದ ಸಂದರ್ಭದ ಶುಭಹಾರೈಕೆ ಮಾಡಿದರು. ಇವರೆಲ್ಲರೂ ಸೇರಿ ವಜ್ರವೈಢೂರ್ಯಗಳಿಂದ ಸಿಂಗರಿಸಲ್ಪಟ್ಟ ಒಂದು ಸುಂದರ ತೊಟ್ಟಿಲನ್ನು ಮಗುವಿಗೆ ಉಡುಗೊರೆಯಾಗಿ ನೀಡಿದರು. ತೊಟ್ಟಿಲಿನ ದಡೆಗಳಲ್ಲಿ ಕೊರೆದು ಹುಗಿಸಿದ ಅಮೂಲ್ಯವಾದ ವಜ್ರ, ವೈಢೂರ್ಯ, ಮಾಣಿಕ್ಯ ಮುತ್ತು, ರೂಬಿಯ ಹರಳು ಕಲ್ಲುಗಳು ಹೊರಡಿಸುವ ಕಣ್ಣುಕೂರೈಸುವ ಹೊಳಪಿನ ಕಿರಣಗಳು ಸುಂದರ ಬಟ್ಟೆಗಳನ್ನು ತೊಟ್ಟ ಮಗುವಿನ ಮುಖದ ಮೇಲೆ ಚಿತ್ತಾರ ಬರೆದು ಕುಣಿಯುತ್ತಿತ್ತು.

ತರತರಹದ ಬೆಲೆಬಾಳುವ ಕಾಣಿಕೆ ಉಡುಗೊರೆಯ ಕೊಡುಗೆಗಳು ಬಂಗಾರ ಬೆಳ್ಳಿಯ ದೊಡ್ಡ ಹರಿವಾಣದಲ್ಲಿ ಸಿಂಗರಿಸಿಟ್ಟಿದ್ದರು. ಈ ಸಂದರ್ಭದಲ್ಲಿ ಬಾದಶಾಹರ ಸಿಪಾಯಿಗಳು ಬೆಲೆಬಾಳುವ ಬಟ್ಟೆ ತೊಟ್ಟು ನಿಂತು ಬಾದಶಾಹರಿಗೆ ಶುಭಾಶಯಗಳನ್ನು ಸಲ್ಲಿಸುತ್ತಿದ್ದರು. ಹೀಗೆ ಈ ಸಮಾರಂಭವು ರಜಬ್ ತಿಂಗಳ ೧೨ದಿನಾಂಕದಿಂದ ಗುರುವಾರ ರಾತ್ರಿ ಕೊನೆಗೊಂಡಿತು. ಬಾದಶಾಹರ ಆಜ್ಞೆಯಂತೆ ಅರಮನೆಯ ಆವರಣದ ಗೋಡೆಗಳ ಮೇಲೆ, ಎದುರು ವಿಶಾಲವಾದ ಪ್ರದೇಶದ ನಾಲ್ಕುದಿಕ್ಕಿನಲ್ಲೂ ದೀಪಗಳ ಸಾಲನ್ನು ಇಟ್ಟು ಸಿಂಗರಿಸಲಾಯಿತು. ಅರಮನೆಯ ಒಳಗಿನ ಕೋಣೆಗಳಲ್ಲಿ ರಂಗುರಂಗಿನ ದೀಪಗುಚ್ಛಗಳನ್ನು ನೇತುಹಾಕಿ ಹಚ್ಚಿಟ್ಟಿದ್ದರು. ಒಟ್ಟು ೯ಲಕ್ಷ ದೀಪಗಳನ್ನು ಒಮ್ಮೆಲೇ ಹಚ್ಚಿ ಬೆಳಗಿದರು. ನೋಡುವವರು ಈ ದೀಪಗಳ ಸೌಂದರ್ಯವನ್ನು ಕಣ್ಣುತುಂಬಿಕೊಂಡರು ಮಾತ್ರವಲ್ಲ ಈ ಅದ್ಭುತ ದೃಶ್ಯವನ್ನು ಕಂಡು ಮಂತ್ರಮುಗ್ಧರಾದರು. ಆಕಾಶದ ಸಮಸ್ತ ಸಕ್ಷತ್ರಗಳು ಭೂಮಿಗೆ ಬಂದು ತಟಸ್ಥವಾಗಿ ನಿಂತಿವೆಯೆಂದೂ, ಬಾದಶಾಹರ ಸೇವೆಯಲ್ಲಿ ನಿರತವಾಗಿವೆ ಎಂದೂ ಅನಿಸುತ್ತಿತ್ತು. ಈ ಬೆಳಕು ತುಂಬಿದ ಆನಂದಮಯ ರಾತ್ರಿಯಲಿ ಕೆಲವು ಪವಿತ್ರಾತ್ಮರಾದ ಬೆಳಕಿನ ಜನರು (ಸೂಫಿ ಸಂತರು) ರಚಿಸಿದ ತಮ್ಮ ಪದ್ಯಗಳನ್ನು ಬಾದಶಾಹರ ಮುಂದೆ ಓದಿದರು.

ದೀಪ ಮತ್ತು ಹಣತೆಗಳಿಂದ ಆಕಾಶ ಎಷ್ಟೊಂದು ಹೊಳೆಯಿತೆಂದರೆ ಪೂರ್ವದಿಂದ ಪಶ್ಚಿಮದ ತನಕ ದೀಪಗುಚ್ಛಗಳ ಸಾಲುಗಳು ದಟ್ಟವಾಗಿ ಕಂಡುಬಂದವು.

ಬೈತ್

ಜಹಾಂ ಆಂಚಾ ರೋಶನ್ ಬದೌರಾನೆ ಶಹೆ ಗಾಝಿ
ಕೆ ಹರ್ ತಾರೆ ಕಿತಾಂ ಶಮಾ ರಹೆ ಮೆಹತಾಬೆ ತಾಬಾ ಶುದ್
ಶೂರ ಬಾದಶಾಹರ ನಾಲ್ಕೂದಿಕ್ಕಿನ ವಿಶ್ವವಿಡೀ ಬೆಳಗುತ್ತಿದೆ
ರೇಶ್ಮೆಯ ನೂಲಿನಂತೆ ನೇರವಾದ ಸಾಲಿನಲ್ಲಿ ದೀಪಗಳು ಚಂದ್ರನ ಹಾದಿಯಲಿದೆ.

ಶೂರ ಹಜ್ರತ್ ಬಾದಶಾಹ ತನ್ನ ಸುಂದರವಾಗಿ ಸಿಂಗರಿಸಲ್ಪಟ್ಟ ಸಿಂಹಾಸನದಲ್ಲಿ

ವಿಜಯಶಾಲಿ ಗತ್ತಿನೊಂದಿಗೆ ಠೀವಿಯಿಂದ ಕೂತಿದ್ದರು. ಎದುರಲ್ಲಿ ರಾಜ್ಯದ ದೊಡ್ಡದೊಡ್ಡ ಮಹನೀಯರು ಮತ್ತು ಬಾದಶಾಹರ ಆಪ್ತರು ತಮ್ಮ ತಲೆ ತಗ್ಗಿಸುವ ಮೂಲಕ ಗೌರವವನ್ನು ಸೂಚಿಸುತ್ತಾ ಸಾಲಾಗಿ ಆಸನಗಳಲ್ಲಿ ಕೂತಿದ್ದರು. ಬಾದಶಾಹರ ವೈಭವದ ಸತ್ಕಾರ ಸಮಾರಂಭದ ದೃಶ್ಯವನ್ನು ವೀಕ್ಷಿಸುತ್ತಿದ್ದರು. ಈ ಸಮಾರಂಭವು ಇದೇ ರೀತಿಯ ವೈಭವದೊಂದಿಗೆ ೪೦ ದಿನಗಳಕಾಲ ಸತತವಾಗಿ ನಡೆಯಿತು. ಸಾಕಿಯು ಸಂತಸದ ಶರಾಬನ್ನು ಹೊಯ್ಯುವ ಕೆಲಸವನ್ನು ಮುಂದುವರಿಸುವ ಮೂಲಕ ಈ ಸಮಾರಂಭದಲ್ಲಿ ಕೂತಿದ್ದವರಿಗೆ ಆತಿಥ್ಯ ನೀಡುತ್ತಿದ್ದರು.

ಖಿತಾ

ಹಮೇಶ ತಾಕೆ ದೆಹದ್ ಕಾಮೆ ದಿಲ್ ಖುದಾಯೆ ಕರೀಮ್
ಬಶಾಹೆ ದೀನ್ ತರಫ್ ಜಾವಿದಾನ್ ಮುಬಾರಕ್ ಬಾದ್
ಓ ಕರುಣಾಳು ಅಲ್ಲಾಹನೇ! ಇವರ ಪ್ರತಿಹೆಜ್ಜೆಯಲ್ಲೂ ಜಯಪ್ರಾಪ್ತಿಯಾಗಲಿ
ಓ ಬಾದಶಾಹ ನೀ ಸಂತಸದ ಪುಣ್ಯಶಾಲಿ, ನಿನಗೆ ಶುಭವಾಗಲಿ.

ಝು ಲುತ್ಫೆ ಅಹ್ಮದೆ ಮುರ್‌ಸಿಲ್ ಬಶಾಹೆ ಮುಲ್ಕಿಸ್ತಾನ್
ಹಝಾರ್ ಜಶ್ನ್ ಚುನೀ ಹರ್ ಝಮಾನ್ ಮುಬಾರಕ್ ಬಾದ್
ನಬಿ ಅಹ್ಮದರ ಕೃಪಾಕಟಾಕ್ಷದಿಂದ ನೀವು ಈ ರಾಜ್ಯದ ಬಾದಶಾಹ ಆಗಿದಿರಿ ಇಲ್ಲಿ
ವೈಭವದ ಸಮಾರಂಭ ಸಾವಿರಾರು ಸಲ ಬರಲಿ ಪ್ರತಿ ಕಾಲದಲ್ಲೂ, ಶುಭವಾಗಲಿ.

ಈ ರಾಜದರಬಾರಿನ ವೈಭವಪೂರ್ಣ ಶುಭಸಮಾರಂಭ ಮತ್ತು ಬಾದಶಾಹರಿಗೆ ದೊರಕಿದ ಅಮಿತವಾದ ಪುಣ್ಯದ ಫಲವು ದೊರೆತಿರುವುದು ಅವರು ಕಾಲಕಾಲಕ್ಕೆ ಮಾಡುತ್ತ ಬಂದಿರುವ ಅಲ್ಲಾಹನ ಸ್ತುತಿ ಮತ್ತು ಸತ್ಕಾರ್ಯಗಳ ಬದಲಿಗೆ ಎಂಬುದನ್ನು ಮನಗಾಣಬೇಕಾಗಿದೆ. ಹಜ್ರತ್ ಮುಹಮ್ಮದ್ ಮುಸ್ತಫಾ ಪ್ರವಾದಿಯ ದಿವ್ಯ ಪ್ರಭೆಯ ಪ್ರತಿಫಲವಾಗಿ ಈ ಪುಣ್ಯ ಕಾರ್ಯಗಳನ್ನು ನಡೆಸುವ ಅವಕಾಶವು ದೊರೆತಿದೆ, ತಮ್ಮ ಆಧ್ಯಾತ್ಮ ಸಾಧನೆಯ ದಿವ್ಯ ಪ್ರಭೆಯಿಂದ ಬೆಳಗುವ ಕಣ್ಣಿನ ಅನುಭಾವಿಗಳು, ಅಲ್ಲಾಹನ ಸ್ನೇಹಿತರಾದ ಸೂಫಿ ಸಂತರ ಪ್ರಾರ್ಥನೆಯ ಫಲವಾಗಿ ಈ ವೈಭವದ ಆಳ್ವಿಕೆ ನಡೆಸುವ, ಮಹತ್ಕಾರ್ಯಗಳನ್ನು ಮಾಡುವ ಅವಕಾಶವು ಬಾದಶಾಹರಿಗೆ ದೊರೆತಿದೆ.

ನಜ್ಮ್

ಮುಹಮ್ಮದ್ ಷಾಹ ಗಾಝಿ ಸರ್ವರೆ ದೀನ್ ಮಝ್‌ಹರೆ ಇರ್ಫಾನ್
ಕೆ ನಾಝಿಲ್ ಗಶ್ತ ಅಝ್ ಹಕ್ ಆಯತೆ ತೌಫೀಕ್ ದರ್ ಶಾನಶ್
ಶೂರ ಬಾದಶಾಹ ಮುಹಮ್ಮದ ಧರ್ಮ ಸೇವಕ ಅಲ್ಲಾಹನನ್ನು ತಿಳಿದವನು
ಅಲ್ಲಾಹನ ಕೃಪೆಯಿಂದ ನೀಡಿದ, ವೈಭವದ ಕಾರ್ಯಗಳನ್ನು ಮಾಡುವ ಅವಕಾಶವನು.

ಸುಖನ್ ಸಂಜೀಯೆ ಶಾನ್ ಅಝ್ ಬಾರ್‌ಗಾಹೆ ಕಿಬ್ರಿಯಾ ಬಾಯದ್
ಕೆ ಗೀರದ್ ನುಕ್ತಯೆ ಪರ್‌ವಾಝ್ ಅಝ್ ಬಯಾನೆ ಶೌಕತ್ ಉಶ್ಯಾನಶ್

ಉತ್ತಮ ಮಾತುಗಳನ್ನು ಆಡುವ ಅವಕಾಶ ದೊರೆತಿರುವುದರಲಿ ಅಲ್ಲಾಹನ ಕೃಪೆಯಿಹುದು
ಅವರ ಮಾತಿನಲ್ಲಿರುವ ಜಾಣ್ಮೆ ಮತ್ತು ಸಲಹಾಪೂರ್ಣ ಗುಣಗಳು ಕಾಣುವುದು.

ಝಹೇ ಸುಲ್ತಾನೆ ದೀನ್ ಪರ್‌ವರ್ ಕೆ ದರ್ ರೋಝೆ ವಿಘಾ ಬಾಶದ್
ತುಲೂಯೆ ನಯ್ಯರೆ ನುಸ್ರತ್ ಝ ಬರ್ಖೆ ತೈಘೆ ಬರ್‍ರಾನಶ್

ಶೂರ ಬಾದಶಾಹ ಎಷ್ಟೊಂದು ಧರ್ಮನಿಷ್ಠರು, ಯುದ್ಧದಲಿ
ಅವರ ಹರಿತ ತಲವಾರಿನ ಹೊಳೆವ ಮಿಂಚಿನಿಂದ ಮೂಡುವನು ವಿಜಯೀ ಸೂರ್ಯ.

ಝಫರ್ ಪೈವಸ್ತ ಬಾಶದ್ ಹಲ್ಕ ಡರ್ ಗೋಶೆ ರಿಕಾಬೆ ವೂ
ಬ ಫತ್ಹೆ ಆಸ್‌ಮಾನಿ ಪೈತ್‌ವಾನ್ ಬುರ್ದನ್ ಝ ಪೈಕಾನಶ್

ವಿಜಯವೆಂಬುದು ಬಾದಶಾಹರ ಕುದುರೆಯ ರಿಕಾಪಿನಲ್ಲಿ ಅಡಗಿಹುದು
ಅವರ ಬಾಣದ ಮೊನೆ ಮೂಲಕ ಆಕಾಶದಿಂದ ಜಯಮಾಲೆ ಉದುರುವುದು.

ಭವಿಷ್ಯದ ಬಗ್ಗೆ ಸೂಕ್ಷ್ಮವಾಗಿ ಯೋಚಿಸಿದಾಗ ನನಗೆ ಅನಿಸಿದ್ದೇನೆಂದರೆ, ಹಲವಾರು ಮಹತ್ವದ ಸಂಗತಿಗಳನ್ನು ಬದಿಗಿಟ್ಟು ಬಾದಶಾಹನನ್ನು ಬರೀ ಸ್ತುತಿ ಮಾಡುವುದು ನನ್ನ ಉದ್ದೇಶವೂ ಅಲ್ಲ, ಧೋರಣೆಯೂ ಅಲ್ಲ. ಬಾದಶಾಹನ ಜನ ಮೆಚ್ಚುವ ಅನೇಕ ವೈಯ್ಯಕ್ತಿಕ ಗುಣಗಳಿವೆ, ವಿಶ್ವದಾದ್ಯಂತ ಅವರಿಗೆ ಬಹುಪರಾಕು ಹಾಕುವವರೂ ಇದ್ದಾರೆ. ಬರಿಯ ಸ್ತುತಿಯಿಂದ ಅವರಿಗಾಗಲಿ ನನಗಾಗಲೀ ಯಾವುದೇ ಉಪಯೋಗವಾಗದು. ಆದುದರಿಂದ ಅವರ ಅನೇಕ ಗುಣವಿಶೇಷಗಳನ್ನೂ ಸಾಧನೆಗಳನ್ನು ದೂರವಿಟ್ಟು ಬರಿಯ ಸ್ತುತಿಯು ಅಗತ್ಯವಿಲ್ಲದ ಕೆಲಸವೆಂದು ತೀರ್ಮಾನಕ್ಕೆ ಬಂದೆ. ಅವರ ವಿಶ್ವವನ್ನು ಆಳುವ ತಾಕತ್ತಿನ ಮಾತಿನ ಮರ್ಮವನ್ನೂ ತಿಳಿದು ಬರೆಯುವುದು ಉತ್ತಮವೆಂದು ನನಗೆ ಅನಿಸಿತು. ಇದು ಪದ್ಯಗಳ ಮೂಲಕವಾಗಲಿ ಗದ್ಯದ ಮೂಲಕವಾಗಲಿ ಮೂಡಿದರೆ ಭವಿಷ್ಯದಲ್ಲಿ ಶುದ್ಧ ಹೃದಯದ ಬಾದಶಾಹರ ಬದುಕು ವ್ಯಕ್ತಿತ್ವ ಮತ್ತು ಆಳ್ವಿಕೆಯ ಮಹತ್ವದ ವಿವರಗಳ ಇದೊಂದು ದಾಖಲೆಯಂತೆ ಉಪಯೋಗಕ್ಕೆ ಬರಲಿ ಎಂಬ ಆಶಯದಿಂದ ನಾನು ಈ ಗ್ರಂಥವನ್ನು ಬರೆಯಲು ತೊಡಗಿದ್ದೇನೆ. ವೈಭವಪೂರ್ಣ ರಾಜಮನೆತನದ ಇತಿಹಾಸ 'ಮುಹಮ್ಮದ್ ನಾಮಾ'ವನ್ನು ಬರೆಯುವ ಕಾರ್ಯವನ್ನು ಕೈಗೆತ್ತಿಕೊಂಡೆ.

■

*
ಅಧ್ಯಾಯ - ೨೨

ಜೀಜಿಯ ಗೆಲುವು ಮತ್ತು ಕ್ಷಿಲಗುಂಡಿಯ ವಿಜಯ

ಈ ಎಲ್ಲ ವಿವರಗಳ ಸಾರಾಂಶವೇನೆಂದರೆ ಜೀಜಿಯ ಬಲಶಾಲಿ ಕೋಟೆಯನ್ನು ಬಾದಶಾಹನ ಪುಣ್ಯದಿಂದ ಮತ್ತು ಅಲ್ಲಾಹನ ಕೃಪೆಯಿಂದ ವಿಜಯಶಾಲಿಯಾಗಿ ರಾಜ್ಯದ ಆಳ್ವಿಕೆಯ ಗಡಿಯೊಳಗೆ ಸೇರಿಸಿಕೊಂಡದ್ದಾಯಿತು. ಇದರಿಂದ ಷಾ ಅಬ್ದುಲ್ಲಾ ಕುತುಬ್ ಷಾ, ಬಾದಶಾಹರ ಆಳ್ವಿಕೆಯ ಶಕ್ತಿಶಾಲಿ ತಳಪಾಯವಾಗಿ ಬೆಂಬಲಿಗನಾಗಿದ್ದವನು ಒಂದು ಮನವಿಯನ್ನು ಬಾದಶಾಹರ ಅಭಿನಂದನೆಯನ್ನು ಮಾಡುತ್ತಾ, ಮುಹಮ್ಮದ್ ಜಹೂರ್‌ನ ಎದುರು ದರ್ಬಾರಿನಲ್ಲಿ ಮಂಡಿಸಲು ತಲಪಿಸುವ ಮೂಲಕ ಬಿನ್ನಹ ಮಾಡಿಕೊಂಡ. ಈ ಬಿನ್ನವತ್ತಲೆಯಲ್ಲಿನ ಒಕ್ಕಣೆ ಹೀಗಿತ್ತು:

'ನಿಮ್ಮ ಎಂದಿನ ನ್ಯಾಯ ಪರಿಪಾಲನೆ ಮತ್ತು ಸ್ನೇಹಪೂರ್ಣ ಗುಣದೊಂದಿಗೆ ವ್ಯವಹರಿಸುವ ಕ್ರಮಕ್ಕೆ ಸರಿಯಾಗಿ ನಿಮ್ಮೊಂದಿಗೆ ವಿನಯಪೂರ್ಣ ಬಿನ್ನಹವೊಂದನ್ನು ಮಾಡಲು ಬಯಸುತ್ತೇನೆ. ನಿಮ್ಮ ಈ ರಾಜ್ಯಕ್ಕೆ ಮತ್ತು ಇಲ್ಲಿನ ಪ್ರಜೆಗಳ ಮೇಲೆ ನಿಮ್ಮಂತಹ ನಿಷ್ಠಾವಂತ, ನ್ಯಾಯಪೂರ್ಣ, ವೈಭವಪೂರ್ಣ ಸುಖಸಂಪತ್ತನ್ನು ದೊರೆಯುವಂತೆ ಮಾಡಿದ ಆಳ್ವಿಕೆಯ ನೆರಳಿನ ಛತ್ರಿಯು ಇಲ್ಲವಾದಲ್ಲಿ, ಜನರಿಗೆ ಯಾವುದೇ ರೀತಿಯ ರಕ್ಷಣೆಯೂ ಇಲ್ಲದೆ ಗಂಭೀರ ಸಮಸ್ಯೆ ಉಂಟಾಗ ಬಹುದು. ಇಂತಹ ಸಂದರ್ಭದಲ್ಲಿ ನಿಮ್ಮ ವಿರುದ್ಧ ನಡೆಯುತ್ತಿರುವ ವೈರಿಗಳ ದುಷ್ಟ ಸಂಚಿನ ಸುದ್ದಿಗಳು ನಿಮಗೆ ತಲಪದೆ ಹೋದರೆ ಗಂಡಾಂತರವಾಗಬಹುದೆಂಬ ದೃಷ್ಟಿಯಿಂದ ನಿಮಗೆ ಒಂದು ಅತ್ಯಂತ ಮಹತ್ವದ ಸಂಗತಿಯನ್ನು ತಿಳಿಸಲು ಯತ್ನಿಸುತ್ತಿದ್ದೇನೆ. ನನಗೆ ಸಿಕ್ಕಿದ ಮಹತ್ವಪೂರ್ಣ ಗುಪ್ತಚರ ವಾರ್ತೆಯಂತೆ ಮೊಗಲರ ಕಡೆಯಿಂದ ಅತ್ಯಂತ ದೊಡ್ಡರೀತಿಯ ಆಪತ್ತು ಸದ್ಯದಲ್ಲೇ ತಮ್ಮ ಸಿಂಹಾಸನದ ಮೇಲೆ ಬಂದೆರಗುವ

ಅಪಾಯವಿದೆ. ಈ ಬಗೆಗೆ ಸುದ್ದಿನೀಡುವ ಮುಖಾಂತರ ನಾನು ಎಚ್ಚರಿಸುವುದಕ್ಕಾಗಿ ಈ ಪತ್ರವನ್ನು ಬರೆದಿದ್ದೇನೆ. ನಾನು ನಿಮ್ಮ ರಾಜ್ಯದ ರಕ್ಷಣೆಯ ನೆರವಿಗಾಗಿ ೪ಲಕ್ಷ ಮೌಲ್ಯದ ಸಂಪತ್ತಿನ ಕಾಣಿಕೆ, ೪ ಭಾರಿ ಬೆಲೆಬಾಳುವ ಅಮೂಲ್ಯ ರೂಬಿ ಮಾಣಿಕ್ಯದ ಹರಳುಗಳನ್ನು ನಿಮ್ಮ ಘನತೆವೆತ್ತ ಬಾದಶಾಹರ ಆಳ್ವಿಕೆಯ ರಾಜ ದರ್ಬಾರಿಗೆ ನೀಡಲು ಆಶಿಸುತ್ತೇನೆ. ಇದರಿಂದ ನಿಮಗೆ ನಿಮ್ಮ ರಾಜ್ಯದ ಸಂರಕ್ಷಣಾತ್ಮಕ ಕೆಲಸಗಳಿಗೆ ತಯಾರಿ ನಡೆಸಲು ಉಪಯೋಗಕ್ಕೆ ಬರಬಹುದೆಂದು ತಿಳಿದಿದ್ದೇನೆ. ಇದರ ಬದಲಿಗೆ ತಮ್ಮ ಕರುಣಾಮಯ ದೃಷ್ಟಿಯ ಮೂಲಕ ಕರ್ನಾಟಕ ಮತ್ತು ಮಲ್ನಾಡಿನ ಕೆಲವು ಕೋಟೆಗಳನ್ನು ಹಾಗೂ ಕುಂಡಿಕುಟ್ಟಾದ ಕೋಟೆ, ಕುಕತ್ ಪ್ರಾಂತ್ಯವನ್ನು ನನಗೆ ಒಪ್ಪಿಸಬೇಕಾಗಿ ಈ ಮೂಲಕ ಕೇಳಿಕೊಳ್ಳುತ್ತಿದ್ದೇನೆ'.

'ಇದರಿಂದಾಗಿ ನಾನು ಈ ಕೋಟೆಗಳನ್ನು ವಶಪಡಿಸಿಕೊಂಡು ಆಳುವ ಮೂಲಕ ವೈರಿಗಳ ದಾಳಿಯಿಂದ ನಾಶವಾಗುವುದು ತಡೆಯುವಂತಾಗಲಿ ಎನ್ನುವುದು ನನ್ನ ಉದ್ದೇಶವಾಗಿದೆ. ವೈರಿಗಳ ದಾಳಿಯಿಂದ ಈ ಕೋಟೆ ಮತ್ತು ಪ್ರಾಂತ್ಯವನ್ನು ರಕ್ಷಿಸುತ್ತೇನೆ. ಯುದ್ಧದಲ್ಲಿ ಏನಾದರೂ ಸೂರೆಯಾದ ಸಂಪತ್ತು ಸಿಕ್ಕಲ್ಲಿ ನನ್ನ ಜೊತೆಗೆ ಇರಿಸಿಕೊಳ್ಳುತ್ತೇನೆ'.

ಹಜ್ರತ್ ಬಾದಶಾಹ ಗಾಝಿಯವರು ಖುತುಬ್ ಷಾನ ಈ ಪತ್ರ ಮತ್ತು ಅದರಲ್ಲಿ ಅಡಗಿರುವ ಅವನ ಆಕಾಂಕ್ಷೆಯಂತೆ ಕುಂಡಿಕುಟ್ಟಾದ ಕೋಟೆ, ಕುಕತ್ ಪ್ರಾಂತ್ಯವನ್ನು ಅವನಿಗೆ ಒಪ್ಪಿಸಿದರು. ಕುತುಬ್ ಷಾ ಈ ಕೊಡುಗೆ ದೊರಕಿದಾಗ ತನ್ನ ಕುದುರೆಗಳು, ಸೇನೆಯ ಸಿಪಾಯಿಗಳೊಂದಿಗೆ ಕುಂಡಿಕುಟ್ಟಾ ಕೋಟೆಯ ಕಡೆ ಪ್ರಯಾಣಿಸಿದ. ಅಲ್ಲಿಗೆ ತಲಪಿದಾಗ ಆ ಕೋಟೆಯ ರಾಜ ತನ್ನ ಪ್ರಾಂತ್ಯ, ತನ್ನ ಸೇನೆ, ತನ್ನ ಸಂಪತ್ತಿನ ಬಗ್ಗೆ ಅಭಿಮಾನವಿಟ್ಟು ಕೊಂಡವನಾಗಿದ್ದುದರಿಂದ ಕುತುಬ್ ಷಾ ಮೀರ್ ಜುಮ್ಲಾನ ಉಪಸ್ಥಿತಿ, ಅನುಪಸ್ಥಿತಿಯ ಬಗ್ಗೆ ಗಣನೆ ನೀಡದೆ ಉಪೇಕ್ಷಿಸಿದ. ಅವನೊಬ್ಬ ಕಪಟಿ ಮತ್ತು ಬರಿಯ ತೋರ್ಪಡಿಕೆಯ ಮನುಷ್ಯನೆಂದು ಆ ರಾಜ ತಿಳಿದಿದ್ದ. ಇದರಿಂದಾಗಿ ಇವರಿಬ್ಬರೊಳಗೆ ಯುದ್ಧಕ್ಕೆ ತಯಾರಿ ನಡೆಯಿತು. ತನ್ನ ಒರಟು ಬುದ್ಧಿಯೊಂದಿಗೆ ರಾಜ ಕೋಟೆಯೊಳಗೆ ಕೂತು ಗಟ್ಟಿಮಾಡಿಕೊಂಡಿದ್ದ. ಮೀರ್ ಜುಮ್ಲಾ ತನ್ನ ಸೇನೆಯೊಂದಿಗೆ ಕೋಟೆಯನ್ನು ಸುತ್ತವರಿದ. ಯುದ್ಧದ ವಾತಾವರಣವು ಬಿಸಿಯೇರಿತು. ಬಾದಶಾಹರ ದಳದ ಸೈನಿಕರ ತಾಕತ್ತು ತಿಳಿದ ಅವನು ಭಯದಿಂದ ತತ್ತರಿಸಿಕೊಂಡು ಎದೆಬಡಿತ ಹೆಚ್ಚಿ ಅನಾರೋಗ್ಯ ಆವರಿಸಿಕೊಂಡಿತು. ಈ ಕುತುಬ್ ಷಾನನ್ನು ಕೊಂದರೂ ಬಾದಶಾಹರ ಪರವಾದ ಇನ್ನೊಬ್ಬ ಕುತುಬ್ ಷಾ ಸೃಷ್ಟಿಯಾಗಬಹುದು ಅವರನ್ನೆಲ್ಲ ನಾನು ಹೇಗೆ ಶಿಕ್ಷಿಸಲು ಸಾಧ್ಯ ಎಂದು ಯೋಚಿಸ ತೊಡಗಿದ. ಇದರಿಂದ ಲಾಭ ನಷ್ಟಗಳೇನು ಎಂಬುದನ್ನು ಲೆಕ್ಕಹಾಕತೊಡಗಿದ. ಹಜ್ರತ್ ಬಾದಶಾಹರು ಯಾವಾಗ ಬೇಕಾದರೂ ತನ್ನ ಒಂದು

ಸಂಜ್ಞೆಯ ಮೂಲಕ ಇಲಾಖೆಯ ಸಮಸ್ತ ರಾಜರುಗಳನ್ನು ಸೋಲಿಸಿ ಕೆಲಸಕ್ಕೆ ಬಾರದವರಂತಹ ಸ್ಥಿತಿಗೆ ತಲಪಿಸಬಹುದು.

ಇಂತಹ ಪರಿಸ್ಥಿತಿಯಲ್ಲಿ ಶರಣಾಗತನಾಗುವ ಅವಕಾಶ ಮತ್ತೆ ಸಿಗಲಾರದು ಎಂದುಕೊಂಡು, ತನಗೆ ಇರುವ ಒಂದೇ ದಾರಿಯೆಂದರೆ ಬಾದಶಾಹರಿಗೆ ಶರಣಾಗತರಾಗಿ ಅವರ ಆಜ್ಞೆಯಂತೆ ನಡೆದುಕೊಳ್ಳುವುದರಿಂದ ಮಾತ್ರ ಮುಕ್ತಿ ಸಾಧ್ಯವೆಂದು ರಾಜ ತೀರ್ಮಾನಕ್ಕೆ ಬಂದ. ಹೀಗೆ ಯೋಚಿಸಿ ಯುದ್ಧ ಮಾಡದೆ ಕೋಟೆಯ ಹೊರಬಂದು ಶಾಂತಿ ಒಪ್ಪಂದವನ್ನು ಪ್ರಕಟಿಸಿದ. ಮೀರ್ ಜುಮ್ಲ ಕುತುಬ್ ಷಾ ಈ ರಾಜನನ್ನು ಕೋಟೆಯಿಂದ ಹೊರ ಹಾಕುವ ಕರಾರು ಪತ್ರ ಮಾಡಿಕೊಂಡು ಕೋಟೆಯನ್ನು ತನ್ನ ವಶಕ್ಕೆ ಪಡೆದುಕೊಂಡ. ಪರಾಜಯಗೊಂಡು ಅಸ್ಥಿತ್ವವನ್ನು ಕಳೆದು ಕೊಂಡ ರಾಜ ಅಲ್ಲಿಂದ ಹೊರಗೆ ಹೊರಟುಹೋದ. ಗೆದ್ದ ಕುಂಡಕುಟ್ಟ ಕೋಟೆಯನ್ನು ಬಾದಶಾಹರ ಆಳ್ವಿಕೆಗೆ ಸೇರಿಸಿಕೊಂಡ. ಮುಂದುವರಿದ ಕುತುಬ್‌ಷಾ ಅಲ್ಲಿ ಹತ್ತಿರದ ಚಿಕ್ಕ ಕೋಟೆ ಚಂದ್ರಗುತ್ತಿಯನ್ನು ತನ್ನ ಚಿಕ್ಕ ಸೈನ್ಯವನ್ನು ಬಳಸಿಕೊಂಡು ಮತ್ತು ಅಲ್ಲಿನ ಆಸುಪಾಸಿನ ಜನರನ್ನು ತನ್ನೆಡೆ ಸೆಳೆಯುವುದರ ಮೂಲಕ ವಶಪಡಿಸಿಕೊಂಡ. ಈ ಕೋಟೆಯನ್ನು ಕೂಡ ಮೀರ್‌ಜುಮ್ಲ ಕುತುಬ್ ಷಾ ವಶಪಡಿಸಿಕೊಂಡು ತನ್ನ ಮೂರುದಿಕ್ಕಿನ ಪ್ರದೇಶಗಳನ್ನು ಅನಾಯಾಸವಾಗಿ ತನ್ನ ವಶಕ್ಕೆ ಪಡೆದುಕೊಂಡು ಜಯಶಾಲಿಯಾದ. ಕುತುಬ್ ಷಾ ತಾನು ಗೆದ್ದ ಚಂದ್ರಗುತ್ತಿ ಕೋಟೆಯನ್ನು ಬಾದಶಾಹರಿಗೆ ಒಪ್ಪಿಸದೆ ತಾನೇ ತನ್ನ ಸುಪರ್ದಿನಲ್ಲಿಟ್ಟುಕೊಂಡ. ತನ್ನ ಅಂತರಂಗದ ಹರಾಮಿತನವನ್ನು ಈರೀತಿ ಪ್ರದರ್ಶಿಸುವ ಮೂಲಕ ತನ್ನ ನಿಜಗುಣವನ್ನು ಬಹಿರಂಗ ಮಾಡಿಕೊಂಡು ತನ್ನ ಮರ್ಯಾದೆ ಕಳಕೊಳ್ಳುವ ಕೆಲಸ ಮಾಡಿದ. ತನ್ನಲ್ಲಿರುವ ಪುರುಷತ್ವ, ಶೌರ್ಯದ ಗುಣವನ್ನು ಬದಿಗಿಟ್ಟು ಕುತಂತ್ರದ ಮೂಲಕ ಸಮತೋಲನವನ್ನು ಕಳೆದುಕೊಂಡು ಗೊತ್ತು ಗುರಿಯಿಲ್ಲದೆ ಮನಸ್ಥಿತಿಯ ಹಿಡಿತವನ್ನು ಕಳೆದುಕೊಂಡು ಶರಾಬು ಕುಡಿದ ಅಮಲಿನಲ್ಲಿ ಅಮಲುಕೋರನೊಬ್ಬ ವರ್ತಿಸುವಂತೆ ವರ್ತಿಸತೊಡಗಿದ. ತನ್ನ ಸೈನಿಕರನ್ನು, ಎಷ್ಟು ಸಾಧ್ಯವೋ ಅಷ್ಟು ಸಂಪತ್ತನ್ನು ಜೊತೆಗೆ ತೆಗೆದುಕೊಂಡು ಅಲ್ಲಿಂದ ಹೊರಟು ಅಲ್ಲೇ ಸಮೀಪದಲ್ಲಿರುವ ಚಿಕ್ಕ ಚಂದ್ರಗುತ್ತಿ ಕೋಟೆಗೆ ತಲಪಿದ. ಆ ಕೋಟೆಯ ಮಗ್ಗುಲಲ್ಲಿರುವ ಜನರನ್ನು ತನ್ನ ಕಡೆ ಸೇರಿಸಿಕೊಂಡು ಆ ಕೋಟೆಯಲ್ಲಿ ಠಿಕಾಣಿ ಹೂಡಿದ. ತಾನೊಬ್ಬ ಹರಿದ ಬಾಲದ ತೋಳದಂತೆ ಅಲ್ಲಲ್ಲಿ ಓಡಾಡುತ್ತಾ ಎಷ್ಟು ಕಾಲ ಬದುಕುವುದು ಸಾಧ್ಯವೆಂದು ಯೋಚಿಸದೆ ತಲೆತಿರುಕನಂತೆ ಹಿಂದೆ ಗಳಿಸಿದ್ದ ಒಳ್ಳೆಯ ಹೆಸರನ್ನು, ಗೌರವವನ್ನು ಕಳೆದುಕೊಂಡು ಬಾದಶಾಹರನ್ನು ವಂಚಿಸುವ ಮೂಲಕ ವಂಚಕನೆಂದು ಕರೆಸಿಕೊಂಡ.

ನಜ್ಮ್

ಗಲತ್ ಅಸ್ತ್ ಈಂಕೆ ಸುಖ್ಲಿಕಾರ್ ಕುನದ್

ಸಗೆ ದೀವಾನ ಕೈ ಶಿಕಾರ್ ಕುನದ್

ಈ ಮಾತು ಸುಳ್ಳು, ಓರ್ವ ಮೂರ್ಖ ಒಳ್ಳೆಯ ಕೆಲಸ ಮಾಡುವನೆಂಬುದು
ಹುಚ್ಚು ನಾಯಿ ಯಾತಕ್ಕಾಗಿ ಕಚ್ಚಲು ಬರುತ್ತದೆ ಎಂಬುದ ತಿಳಿಯುವುದು.

ಇಝ್ಝುತೆ ಕೀಸ್ತನ್ ದೆಹತ್ ಬರ್ಬಾದ್
ಹರ್‌ಕೆ ಬಾ ಸುಫ್‌ಲ ಏತ್‌ಬಾರ್ ಕುನದ್

ತನ್ನ ಮರ್ಯಾದೆಯನ್ನು ಕಳಕೊಳ್ಳವವನು
ಮೂರ್ಖತೆಯ ಮೇಲೆ ಭರವಸೆ ಇಡುವವನು.

ನಶವದ್ ಕಾಮ್‌ಯಾಬ್ ನಾಕಾಮಿ
ಕೆ ಝುಬಾಂ ದರ್ ದಹಾನೆ ಮಾರ್ ಕುನದ್

ಯಾವಾಗಲೂ ಜಯಶೀಲವಾಗುವುದಿಲ್ಲ ಅಕ್ರಮ ನಡೆಸುವವನು
ತನ್ನ ನಾಲಗೆಯನ್ನು ಸರ್ಪದ ಬಾಯಲ್ಲಿ ಇಟ್ಟು ತೋರಿಸುವವನು.

ಕರಮೆ ಶಬ್ ತಾಬೆ ಶಮಾ ರಹೇ ನುಶೂದ್
ಕಾರೆ ಖುರ್ಷೀದ್ ಕೆ ಶರಾರ್ ಕುನದ್

ಉಪಕಾರದ ಬೆಳಕು ಕತ್ತಲೆಯಲಿ ಹಾದಿ ತೋರಿಸುವುದು
ಸೂರ್ಯನ ಕೆಲಸವೆಂದರೆ ತಾಪದಿಂದ ಸುಡುವುದು.

ಮೀರ್ ಜುಮ್ಲಾನ ಸ್ವಾಮಿದ್ರೋಹದ ಕೃತ್ಯ, ಅವನ ಮೂರ್ಖತನ ಮತ್ತು ದ್ವೇಷದ ವರ್ತನೆಯ ಸಮಾಚಾರ ವಿಶ್ವದ ನಾಲ್ಕೂ ಮೂಲೆಗಳಲ್ಲಿ ಹಬ್ಬಿತು. ವೀರ ಹಜ್ರತ್ ಬಾದಶಾಹರಿಗೆ ಈ ವಾರ್ತೆ ತಲಪಿ ಕುತುಬ್ ಷಾ ಇಂತಹ ಹೀನ ಕೆಲಸ ಮಾಡಿದ್ದರ ಬಗ್ಗೆ ತಿಳಿದಾಗ ಅವನನ್ನು ಹಿಡಿದು ಬಾದಶಾಹರ ಮುಂದೆ ನಿಲ್ಲಿಸಬೇಕೆಂಬ ಅಭಿಪ್ರಾಯ ಆಸ್ಥಾನದಲ್ಲಿ ವ್ಯಕ್ತವಾಯಿತು. ಹೀಗೆ ಅವನನ್ನು ದರ್ಬಾರಿನಲ್ಲಿ ತಂದು ನಿಲ್ಲಿಸಿದಾಗ ಬಾದಶಾಹರು ತಮ್ಮ ಪ್ರಜ್ಞೆಯನ್ನು ಕಳೆದುಕೊಳ್ಳದೆ ಸಹನೆ, ಬುದ್ಧಿವಂತಿಕೆಯನ್ನು ತೋರಿ ಅವನ ಜಿಗುಟು ಬುದ್ಧಿಯ ಮೂರ್ಖತನಕ್ಕೆ ನಕ್ಕುಬಿಟ್ಟರು! ಅವನಿಗೆ ಕ್ಷಮಾದಾನ ನೀಡಿ ತಮ್ಮ ಹೃದಯವೈಶಾಲ್ಯತೆಯನ್ನು ತೋರಿ ಮೆರೆದರು. ಬಾದಶಾಹರು ಆ ಕ್ಷಣದಲ್ಲಿ ತನ್ನ ಸಿಟ್ಟನ್ನು ಪ್ರದರ್ಶಿಸಿದ್ದರೆ ಕುತುಬ್ ಷಾ ಅವರ ಸಿಟ್ಟಿನ ಬೆಂಕಿಯ ತಾಪದ ತಲವಾರಿಗೆ ಬಲಿಯಾಗಿ ಕಾದ ಕೆಂಡದ ಮೇಲೆ ಮುಗಿಲಿನಿಂದ ಸುರಿದ ಮಳೆಹನಿಯಂತೆ ಮಾಯವಾಗಿಬಿಡುತ್ತಿದ್ದ. ಹಾಗೆ ನೋಡಿದರೆ ಮೀರ್ ಜುಮ್ಲಾ, ಕುತುಬ್ ಷಾ ಅನೇಕ ರೀತಿಯ ತಪ್ಪುಗಳನ್ನು ಹಿಂದೆಯೂ ಮಾಡಿದ್ದರಾದರೂ, ಬಾದಶಾಹ ಇವನ್ನೆಲ್ಲ ತಿಳಿದೂ ತಿಳಿಯದವರಂತೆ ನಟಿಸಿದರು.

ಈ ಕುತಂತ್ರಿ ಮತ್ತು ದಗಲ್‌ಬಾಜಿ ಎನಿಸಲ್ಪಟ್ಟ ಮೀರ್ ಜುಮ್ಲಾ ಕುತುಬ್ ಷಾನನ್ನು ಬಾದಶಾಹರ ದರಬಾರಿಗೆ ಕರೆಸಿ ಎಚ್ಚರಿಕೆ ನೀಡಲಾಯಿತು. ಯಾಕೆಂದರೆ

ಅವನು ಕರ್ನಾಟಕ ಮತ್ತು ಮಲ್ನಾಡಿನ ಪ್ರಾಂತ್ಯಗಳನ್ನು ಒಡೆಯುವ ಪಿತೂರಿ ಕೂಡ ನಡೆಸಿದ್ದ. ಅವನಿಗೆ ನೀಡಿದ್ದ ಕೋಟೆ ಮತ್ತು ಪ್ರಾಂತ್ಯವನ್ನು ವಾಪಾಸು ಪಡೆದು ಎಚ್ಚರಿಕೆಯನ್ನು ನೀಡಲಾಯಿತು. ಇದರ ನಂತರ ಮುಝಫ್ಫರುದ್ದೀನ್ ಖಾನ್ ಮುಹಮ್ಮದರನ್ನು ಮುಹಮ್ಮದೀ ಜಹೂರ್‌ರ ಮುಂದೆ ಕರೆಯಲಾಯಿತು. ಅವರಿಗೆ ಸೇನಾನಾಯಕನ ಬಿರುದಾಂಕಿತ ಸಂಕೇತದ ಉಡುಪನ್ನು ನೀಡಲಾಯಿತು. ಜೊತೆಗೆ ಸೊಂಟಕ್ಕೆ ಕಟ್ಟಿಕೊಳ್ಳಲು ಒಂದು ಅಮೂಲ್ಯ ವಜ್ರವೈಢೂರ್ಯದ ಹರಳುಗಳನ್ನು ಕೂರಿಸಿ ಸಿಂಗರಿಸಲ್ಪಟ್ಟ ಕತ್ತಿಯನ್ನು ಉಡುಗೊರೆಯಾಗಿ ನೀಡಲಾಯಿತು. ಬಾದಶಾಹರ ಆಜ್ಞೆಯಂತೆ ಕುಂಡಿಕುಟ್ಟದ ಕೋಟೆಯನ್ನು ಅವರ ವಶಕ್ಕೆ ನೀಡಲಾಯಿತು.

ನಜ್ಮ್

ಶಾಹೆ ದೀನ್ ಸುಲ್ತಾನೆ ಗಾಝಿ ತಾಜ್ ಬಕ್ಷೆ ಸರ್‌ವರಾನ್
ಸಾಯಯೆ ಲುತ್ಫಶ್ ಪನಾಹೆ ಬಾದಶಾಹಾನೆ ಜಹಾನ್
ಶೂರ ಬಾದಶಾಹ ತನ್ನ ಎಲ್ಲ ಸರದಾರರಿಗೆ ಕಿರೀಟಗಳನ್ನು ನೀಡಲಿದ್ದಾರೆ
ಅವರ ಕೃಪಾಕಟಾಕ್ಷದ ನೆರಳಲ್ಲಿ ವಿಶ್ವದ ಬಾದಶಾಹರು ಶರಣಾಗುತ್ತಿದ್ದಾರೆ.

ಹರ್ ಕೆ ದಮ್ ಅಝ್ ಮೆಹರೆ ವೂ ಝದ್ ಶುದ್ ಪಲಕ್‌ರಾ ದಸ್ತಗೀರ್
ಹರ್ ಕೆ ಅಝ್‌ವೇ ಎಕ್ ನಝರ್ ದರ್ಯಾಫ್ತ್ ಶುದ್ ಸಾಹಬ್ ಹರಾನ್
ಯಾರು ಅವರ ಕೃಪೆಯ ಅರಿತರೋ ಆಕಾಶದ ಎತ್ತರದ ಘನತೆ ಪಡೆದರು
ಯಾರು ಅವರ ದೃಷ್ಟಿಯ ಅರಿತರೋ ಅವನು ಗೌರವಾನ್ವಿತ ಪದವಿ ಪಡೆದರು.

ಬಾದಶಾಹರ ಆಜ್ಞೆಯಂತೆ ಅಮಾನ್ ಖಾನ್‌ನನ್ನು ಸೈನ್ಯದೊಂದಿಗೆ ಕರ್ನಾಟಕದ ಕಡೆ ಕಳುಹಿಸಲಾಯಿತು.

ಶೇರ್

ಹಿಮ್ಮತನೆ ಸೌಲತಾನೆ ರಮ್ಝ್ ದೀದಾ
ಬಕಫ್ ತೈಘೋ ಸಿಫರ್ ದರ್‌ಸರ್ ಖಸೀದ
ರಣರಂಗದಲಿ ವೀರ ಸರದಾರರ ಶೌರ್ಯ ಕಂಡುಬಂತು
ತಲೆಯ ಮೇಲೆ ಅವರು ತಲವಾರನ್ನು ಸೆಳೆದು ನಿಂತರು

ಸಮಂದೆ ಬರ್ಖ್ ರೌ ಅಝ್‌ಜಾದ ಜಹಾಂ ಝಂದ್
ಫಲಕ್ ರಾ ಬರ್ಸರೆ ಆತಿಶ್ ನಶಾನಂದ್
ವೇಗದ ಕುದುರೆ ಸಂಪೂರ್ಣ ವಿಶ್ವವನ್ನು ಸುತ್ತಿಬಂತು
ಗಗನದೆಡೆ ಬೆಂಕಿಯುಗುಳುವ ಶರವೇಗದಲಿ ಗುರಿಯಿಟ್ಟಂತೆ.

ಬ ಅಹಂಗೆ ಜಿಹಾದ್ ಅಶ್ಯಾದ್‌ಮಾನಿ
ಸರಾಫಾ ಗಸ್ತಗರ್ ಜಾಂಫಿಶಾನಿ
ಶೌರ್ಯ ಮೆರೆವ ಘೋಷದ ಆನಂದದಿಂದ
ಎಲ್ಲರೂ ಆತ್ಮಾಹುತಿಗೆ ತಯಾರಾಗಿ ನಿಂತರು.

ಝು ಬಸ್ ಝೌಕೆ ಗಝಾ ದರ್ಕಿಂದ ಯಕ್ಸರ್
ಚ್ಯೂಂ ಖಂದಾ ಖಂದಯೆ ಚ್ಯೂಂ ಸುಬ್‌ಹೆ ಮೆಹಶರ್
ಶೌರ್ಯ ಮೆರೆವ ಹುಮ್ಮಸ್ಸಿನಲ್ಲಿ ಅವರು ಪಟ್ಟರು ಸಂತಸದಿ
ಪ್ರಳಯದ ದಿನದ ಶುಭ ತೀರ್ಮಾನ ಪಡೆದಂದದಿ.

ಸಫೀರೆ ನಾಯೆ ರೂಯೀನ್ ಬರ್ ಫಲಕ್ ರಫ್ತ್
ಫಲಕ್ ಅಜ್‌ಝು ಶುದೋ ಹೋಶ್ ಅಝ್ ರಫ್ತ್
ಮಂಗಳವಾದ್ಯದ ಆನಂದಮಯ ಧ್ವನಿ ಆಕಾಶಕ್ಕೇರಿತು
ಆಕಾಶ ತನ್ನ ಸ್ವಯವ ಕಳೆದುಕೊಂಡಿತು.

ಶಾಹಿ ನಗಾರಿಯ ಸದ್ದು ಬಾನೆತ್ತರದ ನಕ್ಷತ್ರ 'ಅಬೂಖ್'ಗೆ ಕೇಳುವ ತನಕ ಹಬ್ಬಿತು. ಜೊತೆಗೆ ನಡೆವ ಸೈನಿಕರು ಎಷ್ಟೊಂದು ಸಂಖ್ಯೆಯಲ್ಲಿದ್ದರೆಂದರೆ ಅವರ ಹಜ್ಜೆಗಳ ಸಪ್ಪಳಕ್ಕೆ ಎದ್ದ ದಟ್ಟವಾದ ಧೂಳಿನ ಕಾರ್ಮೋಡವು ಆಕಾಶವನ್ನು ಕವಿಯಿತು. ಅಮಾನ್ ಖಾನ್ ತನ್ನ ಪ್ರಯಾಣದ ಹಾದಿಯನ್ನು ನಿರ್ದಿಷ್ಟ ಗುರಿ ತಲಪುವ ಉದ್ದೇಶದಿಂದ ಹಾಕಿದ ಯೋಜನೆಯಂತೆ ಪ್ರಯಾಣಿಸುತ್ತಾ ಚಂದ್ರಗುತ್ತಿ ಕೋಟೆಯ ಬಳಿ ತಲಪಿದ. ಈ ಕೋಟೆಯು ಕುಂಡಿಕುಟ್ಟ ಕೋಟೆಯಿಂದ ನಾಲ್ಕು ಮೈಲಿ ದೂರದಲ್ಲಿದೆ. ವಿಜಯಯಾತ್ರೆಯಲ್ಲಿ ಮೂಡಿದ ಲವಲವಿಕೆಯ ಸಂತಸ ಮೂಡಿತ್ತು. ಅವರ ಆಗಮನದ ಶುಭ ಸಮಾಚಾರ ಆ ಇಲಾಖೆಯ ಎಲ್ಲರಿಗೂ ತಲಪಿತು.

ಬಾದಶಾಹರ ಸೈನಿಕರು ಮುಂದುವರಿದು ಚಂದ್ರಗುತ್ತಿ ಕೋಟೆಯ ಬಳಿಯ ಹಳ್ಳಿಯನ್ನು ಸುತ್ತುವರಿದು ನಿಂತರು. ಬಿಲ್ಲುಗಾರರು ಕೋಟೆಯ ಬಾಗಿಲ ಮೇಲೆ ಸತತವಾಗಿ ಬಾಣಗಳನ್ನು ಹಾರಿಸಿದರು. ವಿಜಯಯಾತ್ರೆಯ ಬಂದ ಸೂಚನೆಯಾಗಿ ವೃತ್ತವೊಂದನ್ನು ರಚಿಸಿದರು. ನಂತರ ಸಾವಕಾಶವಾಗಿ ಮುನ್ನುಗುತ್ತ ನಡೆದರು. ಕೋಟೆಯ ಒಳಗೆ ವೈರಿಗಳು ಪ್ರತೀ ಬುರುಜಿನ ಕಮಾನುಗಳನ್ನು ಹಿಡಿದು ನಿಂತಿದ್ದರು. ಬಾದಶಾಹರ ಸೈನಿಕರತ್ತ ವಿರೋಧಿ ಸೈನಿಕರು ಅಪಾಯಕಾರಿ ತೋಪುಗಳನ್ನು ಮತ್ತು ವೇಗದ ಶರಗಳನ್ನು ಹಾರಿಸಿದರು. ಬಾದಶಾಹರ ಸೈನಿಕರು ಈ ರಣರಂಗದಲ್ಲಿ ತಮ್ಮ ಬಿಲ್ಲು ಬಾಣಗಳನ್ನು ತೆಗೆದು ಅವರತ್ತ ಹೊಳೆಯುವ ಬೆಂಕಿಯುಗುಳುವ ಬಾಣಗಳಿಂದ ವೈರಿಗಳ ಜೀವ ಹಕ್ಕಿಗಳನ್ನು ಹೊಡೆದು ಹಾರಿಸಿದರು. ಅವರ ಜೀವ, ದೇಹಗಳನ್ನು ಸಂಪೂರ್ಣವಾಗಿ ನಾಶಮಾಡಿದರು. ಹೃದಯವನ್ನು ಬಗೆದುಹಾಕುವ ಬಾಣಗಳಿಂದಾಗಿ

ದ್ವೇಷವೇ ದೇಹವಾಗಿರುವ ಕೂಳರ ಮೇಲೆ ಮಳೆಗೈದ ಬಾಣಗಳಿಂದ ಎಷ್ಟೊಂದು ತೂತುಗಳಾದುವೆಂದರೆ ಸಾವಿನ ಕಣ್ಣುಗಳು ಇವನ್ನು ಆಶ್ಚರ್ಯಚಕಿತ ದೃಷ್ಟಿಯಿಂದ ನೋಡತೊಡಗಿತು. ಯಮದೂತ 'ಮಲಕುಲ್ ಮೌತ್' ಅವರ ಜೀವಹೋಗುವವರೆಗೆ ಕಾಯುತ್ತ ಕೂತಿದ್ದ.

ನಜ್ಮ್

ಝೆ ಚಂಗಾಲ್ ಕೆಹ್ರೆ ಹಝೀಂ ಬರಾಂಮಸ್ತ್
ಚುನಾ ಫಿರ್ಕ್ ಆದಾ ಬಹಂ ದರ್ಶ್ ಶಿಕಿಫ್ತ್
ಸೋತ ವೈರಿಗಳು ಪೆಟ್ಟುತಿಂದ ನೋವಿನಿಂದ ಗರ್ಜಿಸುತಿಹರು
ವೈರಿಗಳ ಪಂಗಡಗಳು ಪರಾಜಯದಲ್ಲಿ ಬಿದ್ದಿಹರು.

ಕೆ ಅರ್ಝ್ ಹರ್ ಸೆರೆ ಮುಯೆ ಶಾನ್ ದರ್ ಗುರ್ಝೀರ್
ಬಪಾಯೆ ಅಜಲ್ ರಫ್ತ್ ಸದ್‌ಖಾರ್ ತೇರ್ಝ್
ಎಲ್ಲ ದಿಕ್ಕಿನಲ್ಲೂ ಒಂದು ರೀತಿ ಗಾಳಿಯು ಬೀಸಿ ಬರತೊಡಗಿದವು
ಸಾವಿನ ಹೆಜ್ಜೆಗಳು ಅವರನ್ನು ಚೂಪು ಮೊನೆಯ ಮುಳ್ಳುಕುಂಟೆಯಲಿ ಎಸೆದವು.

ಝೆ ಮೈದಾನೆ ಹೇಂಚಾ ಬಜಾಯೆ ಗುಬಾರ್
ಬರಾಮದ್ ಹರ್ಝಾರ್ ಅಬ್ರೆ ಖೂನ ಬಾರ್
ರಣರಂಗದಲಿ ಧೂಳಿನ ಹೊಗೆಯೇಳುವ ದೃಶ್ಯ ಬದಲಿದೆ
ಅಲ್ಲಿ ಹರಿಯುವ ರಕ್ತದ ಕೋಡಿ ಮುಗಿಲಾಗಿ ಮಳೆಗೆರೆಯುತಿದೆ.

ಝಮೀನ್ ಶುದ್ ಝೆ ಸೈಲಾಬೆ ಖೂನ್
ಪರೋ ರೇಫ್ತ್ ಬಗರ್ದಾಬೆ ಖೂನ್
ಅಲ್ಲಿನ ಭೂಮಿಯಲಿ ಹರಿವ ರಕ್ತದ ತೂಫಾನೆದ್ದಿತು
ರಕ್ತದ ಕೋಡಿಯಲಿ ಸುಂಟರಗಾಳಿ ಬೀಸಿ ಸುಳಿಯೆದ್ದಿತು.

ನಿಹಾದಂದ್ ರೌ ಜುಮ್ಲ ದರ್ ಇನ್ ಹಿಝಾಂ
ಗಿರಫ್ತಂದ್ ದರೆ ಖಿಲಾ ಯಕ್ಸರ್ ಮುಕಾಂ
ಎಲ್ಲ ವೈರಿ ಸಮೂಹ ಪರಾಜಯಹೊಂದುತ್ತ ಹೋದರು
ಕೋಟೆಯ ಬಾಗಿಲನ್ನು ಒಂದೆಡೆ ಹಿಡಿದು ನಿಂತು ಜಯಶಾಲಿಯಾದರು.

ಖಾನ್ ಝುಫರ್ ತುಮಾನ್(ಖಾನ್ ಝುಫರ್) ಕೆಲವು ದಿನಗಳಲ್ಲಿ ಈ ಕಾರ್ಯಗಳ ಉಸ್ತುವಾರಿ ಸಂಪೂರ್ಣಗೊಂಡ ನಂತರವೂ ಸ್ವಲ್ಪಕಾಲ ಅಲ್ಲೇ ನೆಲೆಸಿದರು. ಇಲ್ಲಿನ ವೈರಿಸೈನಿಕರನ್ನು ಅದೇ ಕೋಟೆಯ ಆಜುಬಾಜುಗಳಲ್ಲಿ ನಿಲ್ಲಿಸಿ, ಮೀರ್‌ಜುಮ್ಲಾನ ಕಣ್ಣಮುಂದೆಯೇ ನಾಶಗೊಳಿಸುವುದು ಅವನ ಉದ್ದೇಶವಾಗಿತ್ತು. ಖಾನ್ ತುಮಾನ್

ಎಲ್ಲ ವೈರಿಗಳನ್ನು ಒಂದೇಪೆಟ್ಟಿಗೆ ಮಣ್ಣುಪಾಲಾಗಿಸಿದ. ತನ್ನ ಕೈಕೆಳಸವರನ್ನು ಕೂಡ ಅಲ್ಲೇ ತೈನಾತುಗೊಳಿಸಿ ಅಲ್ಲಿಇಲ್ಲಿ ಅನಾವಶ್ಯಕವಾಗಿ ತಿರುಗಾಡುವುದಕ್ಕೆ ಪ್ರತಿಬಂಧಿಸಿದ.

ಶೇರ್

> **ಹವಾಯೆ ದಶ್ತ್ ಘನಾಯೆ ಶರಾರಾ ಕಾಫೀ ಅಸ್ತ್**
> **ಸರ್ಖಾಯೆ ಸರ್‌ಕಶೀ ಶೋಲಯೆ ಯಕ್ ಪುರ್‌ಆಬ್ ಅಸ್ತ್**
> ಕಾಡಿನಲ್ಲಿ ಸಂಚರಿಸುವ ಗಾಳಿ ಬೆಂಕಿ ಕೆಂಡಗಳ ನಂದಿಸುವುದಕೆ ಸಾಕು
> ದಂಗೆಯೇಳುವವರಿಗೆ ಶಿಕ್ಷೆ ನೀರಿನೊಳಗೇಳುವ ಬೆಂಕಿಯ ಭುಗಿಲು ಸಾಕು.

ಈ ಸರಿಯಾದ ತೀರ್ಮಾನವನ್ನು ಎಲ್ಲ ವೀರಯೋಧರ ಎದುರು ಇಟ್ಟು ಅವರೆಲ್ಲರನ್ನು ಚಂದ್ರಗುತ್ತಿ ಕೋಟೆಯಿಂದ ನಿರ್ಗಮಿಸಲು ಹೇಳಿದ. ಮೀರ್ ಜುಮ್ಲಾನಿಗೆ ಅಲ್ಲಿ ತನ್ನ ಸೈನ್ಯವಿಲ್ಲದ ಪರಿಸ್ಥಿತಿಯು ಅರಿವಿಗೆ ಬಂತು. ಅವನು ತುಂಬ ವ್ಯಥಿತನಾದ. ಅವನ ಶಕ್ತಿ ಮತ್ತು ತಾಳ್ಮೆಯ ಸೊಂಟ ಮುರಿದಂತಾಯಿತು.

ಅವನ ತಲೆಯಲ್ಲಿ ಅಹಂಕಾರ ಮತ್ತು ವಿದ್ರೋಹದ ಮುಳ್ಳುಕುಂಟೆಗಳ ಕಾಡು ಬೆಳೆಯತೊಡಗಿದಂತೆ ಅತ್ಯಂತ ದೊಡ್ಡ ರೀತಿಯಲ್ಲಿ ಅಹಂಕಾರ ಮೂಡತೊಡಗಿತು. ದಂಗೆಯೇಳುವ ಉತ್ಸಾಹ ಬೆಳೆಯತೊಡಗಿತು. ತನ್ನ ಸಂಪತ್ತನ್ನು, ಕುದುರೆಗಳು ಮತ್ತು ಸಿಪಾಯಿಗಳನ್ನು ಒಟ್ಟುಗೂಡಿಸುವ ಮೂಲಕ ಪ್ರತಿರೋಧದ ಸಂಚು ಅವನಲ್ಲಿ ಭುಗಿಲೇಳತೊಡಗಿತು. ನಿಜವೇನೆಂದರೆ ಇವೆಲ್ಲ ವೂ ಅವನದಾಗಿರದೆ, ಮೊಗಲರ ಒಂದು ತುಂಡು ಸೈನ್ಯ ಮತ್ತು ರಾಜಪೂತರ ಸೈನ್ಯದ ತುಕಡಿ ಇವನ ಜೊತೆಗೆ ಕೈಜೋಡಿಸಿತ್ತು. ಈ ಹಿನ್ನೆಲೆಯಲ್ಲಿ ಅವನ ಅಹಂಕಾರ ಹುಚ್ಚೆದ್ದು ಕುಣಿದಿತ್ತು. ಇದರ ಬಲದಿಂದ ಬಾದಶಾಹರ ಆಳ್ವಿಕೆಯ ವಿರುದ್ಧ ದಂಗೆಯೇಳುವುದಕ್ಕೆ ಮತ್ತು ಸ್ವತಂತ್ರಗೊಳ್ಳುವ ಘೋಷಣೆಯನ್ನು ವಿರೋಧಿಗಳಿಗೆ ತಲಪಿಸುವ ಕೆಲಸದಲ್ಲಿ ನಿರತನಾದ. ಹಗೆ ತೀರಿಸುವ ಉದ್ದೇಶದಿಂದ ವಿರೋಧಿಗಳನ್ನು ಸೇರಿಸಿ ಯುದ್ಧಕ್ಕೆ ಸಜ್ಜುಗೊಳ್ಳುವಂತೆ ಮಾಡಿದ. ಆ ಶಕ್ತಿಶಾಲಿ ಕೋಟೆಯೊಳಗೆ ನಿಂತು ತನ್ನ ಸೈನ್ಯವನ್ನು ಅಲ್ಲಲ್ಲಿ ಗುಪ್ತವಾಗಿ ತೈನಾತುಗೊಳಿಸಿದ. ಮುಹಮ್ಮದ್ ಖಾನ್ ಲೋಧಿ ಎಂಬ ಅತ್ಯಂತ ಶೂರನೆಂದು ಹೆಸರುವಾಸಿಯಾದವನನ್ನು ತನ್ನೊಂದಿಗೆ ಸೇರಿಸಿಕೊಂಡು, ತನ್ನ ಹೆಸರನ್ನು ಎಲ್ಲ ಸೈನ್ಯದ ನೇತಾರನನ್ನಾಗಿ ಘೋಷಿಸಿಕೊಂಡು ಮುಂದೆ ನಿಂತ. ಆದರೆ ತನ್ನ ನರಿಬುದ್ಧಿಯ ತಂತ್ರಗಳು ಭಯಂಕರ ಸಿಂಹದ ಎದುರುನಿಲ್ಲದು ಎನ್ನುವುದನ್ನು ಮರೆತಿದ್ದ. ಮುಹಮ್ಮದ್ ಖಾನ್ ಲೋದಿ ವೈರಿ ಸೈನ್ಯದ ಧ್ವಜವನ್ನು ಹಾರಿಸುತ್ತಾ ಮುಂದುವರಿದ. ಖಾನ್ ನುಸ್ರತ್ ಖರೀಂಖಾನ್ ಅಲ್ಲಿ ತಲಪುತ್ತಲೇ ಅವನೆದಿರು ತನ್ನ ಶೌರ್ಯವನ್ನು ಪ್ರದರ್ಶಿಸತೊಡಗಿದ.

ನುಸ್ರತ್ ಖಾನನ ಸೈನಿಕರು ಎರಡು ಮೈಲಿಗಳ ಅಂತರದಲ್ಲಿ ತಮ್ಮ ಬೀಡು

ಬಿಟ್ಟಿದ್ದರು. ಮುಹಮ್ಮದ್ ಖಾನ್ ಲೋಧಿಯ ಈಟಿ ಬರ್ಚಿಗಳನ್ನು ಹಿಡಿದ ಸೈನಿಕರ ಮೇಲೆ ಎಡ ಬಲದಿಕ್ಕುಗಳಿಂದ ದಾಳಿಮಾಡಲು ತೊಡಗಿದರು. ತಮ್ಮ ದಾಳಿಯಿಂದ ವೈರಿ ಸೈನಿಕರನ್ನು ಸದೆಬಡೆದು ಮಣ್ಣು ಮುಕ್ಕಿಸಲು ತೊಡಗಿದರು. ಮುಹಮ್ಮದ್ ಖಾನ್ ಲೋಧಿ ಭಯದಿಂದ ನಡುಗಿ ತನ್ನ ಜೀವ ಕಾಪಾಡಿಕೊಳ್ಳುವ ಉದ್ದೇಶದಿಂದ ಓಡಲು ಸನ್ನದ್ಧನಾದ. ಇವನ ಸೈನಿಕರಿಗೆ ಇದರ ಫಲವೇನಾಗುತ್ತದೆಂದು ಕೂಡಲೇ ತಿಳಿಯಿತು. ಸೋತುಹೋದವರಿಗೆ ರಕ್ತದಾಹಿ ತಲವಾರುಗಳ ರುಚಿ ತಾಗಿ ಮರಣದ ಹಾದಿ ಕಾಣತೊಡಗಿತು.

ಖಿತಾ

> **ನಸೀಮೆ ಫತ್ಹ ಆಮದ್ ದರ್ ವಝೀದನ್**
> **ಝುಫರ್ ಚ್ಯೂಂ ಪೇಶ್‌ಕಾರಾನ್ ದರ್ ದುವೀದನ್**
> ವಿಜಯವೆಂಬ ತಂಗಾಳಿ ಚಲಿಸತೊಡಗಿತು
> ವಿಜಯ ತಾನೇ ಓಡುತ್ತ ಬಂದಿತು.
>
> **ಗುಲೆ ನುಶ್ರತ್ ಶಿಗಫ್ತ್ ಅಝ್ ಬಾಗೇ ಇಖ್ಬಾಲ್**
> **ಪುರ್ ಅಝ್ ಗುಲ್ ಗಶ್ತ್ ದಾಮಾನೇ ಮಹೋಸಾಲ್**
> ವಿಜಯದ ಹೂ ಗೌರವದ ತೋಟದಲ್ಲಿ ಅರಳಿತು
> ಹೂಗಳಿಂದ ಕಾಲದ ಸೆರಗು ತುಂಬಿತು.

ಈ ಸೈನಿಕರನ್ನು ಕಳಿಸುವವನು ಅಲಿಯ್ ಖುತುಬ್ ಷಾನ ಗುರುಶಿಷ್ಯ ಪರಂಪರೆಗೆ ಸೇರಿದ ಮೀರ್ ಜುಮ್ಲಾನಾಗಿದ್ದ. ಬಾದಶಾಹರಿಗೆ ಈ ಯುದ್ಧಕ್ಕೆ ಸೈನ್ಯವನ್ನು ಕಳುಹಿಸುವ ಇಚ್ಛೆ ಇರಲಿಲ್ಲ. ಯಾಕೆಂದರೆ ತಮ್ಮ ಓರ್ವ ಸಾಮಾನ್ಯ ಮಂತ್ರಿಯನ್ನು ಕೂಡ ವೈರಿಗಳು ಎದುರಿಸುವುದು ಕಷ್ಟಸಾಧ್ಯವೆಂದೂ, ಇವರನ್ನು ಸಂಪೂರ್ಣವಾಗಿಸೋಲಿಸಿ ಸುಲಭವಾಗಿಮಣ್ಣು ಮುಕ್ಕಿಸಬಹುದೆಂಬುದು ಅವರ ಅಭಿಪ್ರಾಯವಾಗಿತ್ತು.

ಮೀರ್ ಜುಮ್ಲಾ ನಡೆದ ವಿದ್ಯಮಾನಗಳನ್ನು ಕಂಡು ಆಶ್ಚರ್ಯ ಚಕಿತನಾದ ಹಾಗೂ ತಲೆಯ ಮೇಲೆ ಕೈಯಿಟ್ಟುಕೊಂಡು ರೋಧಿಸತೊಡಗಿದ. ಖಾನ್ ನುಸ್ರತ್ ಖರೀನ್ ತನ್ನ ಸಿಪಾಯಿಗಳೊಂದಿಗೆ ಕುಂಡಿಕುಟ್ಟ ಕೋಟೆಯ ಸನಿಹ ತಲಪಿದಾಗ ಎಲ್ಲ ವೈರಿಗಳ ಕಾಲುಗಳು ನಡುಗತೊಡಗಿದವು. ಭಯಭೀತರಾಗಿ ತಮ್ಮ ಎದೆಯನ್ನು ಬಡಿಯುತ್ತ ಕಾಡುಮೇಡುಗಳಲ್ಲಿ ಓಡಿಹೋಗಿ ತಲೆಮರೆಸಿಕೊಳ್ಳತೊಡಗಿದರು. ಕುತಂತ್ರಿ ಮೀರ್ ಜುಮ್ಲ ತನ್ನ ಸೈನಿಕರ ಸೋಲು ಮತ್ತು ಮುಹಮ್ಮದ್ ಖಾನ್ ಲೋದಿಯ ಮರಣವಾರ್ತೆ ತಿಳಿದು ತನ್ನ ಈ ವಿಫಲ ಕಾರ್ಯಕ್ಕೆ ದೊರಕಿದ ಫಲದಿಂದ ನೊಂದುಬೆಂದು ದುಃಖಿಸಿದ. ಇವರ ಮುಂದೆ ತೀರ ಸಣ್ಣವನಾಗಿ ಶರಣಾಗತನಾಗು

ವುದರಲ್ಲಿ ತನ್ನ ಒಳಿತು ಇದೆಯೆಂದು ತೀರ್ಮಾನಿಸಿ ತಾನು ಬಾದಶಾಹನ ಕೃಪಾಕಟಾಕ್ಷದಡಿಯಲ್ಲಿರುವುದು ಲೇಸೆಂದು ತಿಳಿದುಕೊಂಡ. ಕೊನೆಗೆ, ತನ್ನ ಓರ್ವ ದೂತನನ್ನು ಕೂಡಲೇ ಖಾನ್ ಝುಫರ್ ಕರೀಮರ ಬಳಿಗೆ ಕರಾರರು ಪತ್ರವನ್ನು ಬರೆದು ಕಳುಹಿಸಿದ. ಎರಡು ಲಕ್ಷ ಐವತ್ತು ಸಾವಿರ ತಪ್ಪುಕಾಣಿಕೆ, ಹಿಂದಿನ ಬಾಕಿ ಉಳಿದಿದ್ದ ಕಾಣಿಕೆಯ ಚಿನ್ನದ ಪಾಲನ್ನು ಬಾದಶಾಹರ ಆಸ್ಥಾನಕ್ಕೆ ತಲಪಿಸುತ್ತೇನೆಂದೂ, ಜೊತೆಗೆ ಬಿನ್ನವಿಸುತ್ತೇದ್ದೇನೇನಂದರೆ ಕುಂಡಿಕುಟ್ಟ ಕೋಟೆಯಲ್ಲಿ ಸಿಗುವ ಸಂಪತ್ತು ಮತ್ತು ಖುತುಬ್ ಷಾರಿಗೆ ಉಡುಗೊರೆಯಾಗಿ ನೀಡಿದ ಕೂಕತ್ವಾರ್ ಪ್ರಾಂತ್ಯವನ್ನು ನನಗೆ ಮತ್ತೆ ನೀಡಿ ಕರುಣಿಸಿ ಎಂದು ಬರೆದು ಬೇಡಿಕೊಂಡನಲ್ಲದೆ ತನ್ನ ಈ ಕುಕೃತ್ಯವನ್ನು ಮನ್ನಿಸಿ, ಅಭಯವನ್ನು ನೀಡಿರೆಂದು ಕೇಳಿಕೊಂಡನು. ಯುದ್ಧದಿಂದಾಗಿ ಕೋಟೆಗೆ ಆದ ನಷ್ಟವನ್ನು ಭರಿಸುತ್ತೇನೆ ಮತ್ತು ನನ್ನೆಲ್ಲ ತಪ್ಪುಗಳನ್ನು ಮನ್ನಿಸಿ ಕ್ಷಮಿಸಿ ಪೊರೆಯಬೇಕೆಂದು ಬೇಡಿಕೊಳ್ಳುತ್ತೇನೆಂದು ಕೂಡ ಆ ಭಿನ್ನವತ್ತಲೆಯಲ್ಲಿ ನಿವೇದಿಸಿಕೊಂಡನು. ಜೊತೆಗೆ ಸರ್ವ ಕುತುಬ್ ಷಾ ಪರಂಪರೆಯವರನ್ನು ನೀಚರೆಂದೂ, ಒಂದೇರೀತಿಯವರೆಂದೂ ತಿಳಿಯುವುದು ಸುಲಭ ಸಾಧ್ಯವಲ್ಲವೆಂದು ತಿಳಿಯುವುದು ತರವಲ್ಲವೆಂದೂ ತಿಳಿಸಿದ. ಕೋಟೆಯೊಳಗೆ ಈಗ ಇರುವ ಸಂಪತ್ತಿನಲ್ಲಿ ಸ್ವಲ್ಪಪಾಲು ನಾಶವಾಗಿದೆ.

ಖಾನ್ ಝುಫರ್ ತುಮಾನ್ ಖಾನರು ಮೀರ್ ಜುಮ್ಲಾನ ದೂತನನ್ನು ಗೌರವದೊಂದಿಗೆ ಆಹ್ವಾನಿಸಿದ. ಅವನಿಗೆ ರಾಜಾಥಿತ್ಯವನ್ನು ನೀಡಿದರು.

ಶೇರ್

ಬಂದ ಅರ್ಝ್‌ಸಹೂ ಗರ್ ಗುನಾಹ್ ಕುನದ್
ತಕಿಯಾ ಬಾಯದ್ ಬ ಲುತ್ಫೆ ಷಾಹ ಕುನದ್
ಯಾರಾದರೂ ಒಬ್ಬ ಅರಿವಿಲ್ಲದೆ ತಪ್ಪು ಮಾಡಿದ್ದರೆ
ಬಾದಶಾಹರ ತೀರ್ಮಾನದ ಮೇಲೆ ಭರವಸೆ ಇಡಬೇಕಾಗುವುದು.

ತಾ ಗುನಾಹಶ್ ದಹದ್ ಏವಾಜೆ ಸವಾಬ್,
ಗುಲೆ ಉಮ್ಮೀದೆ ವೂ ಶವದ್ ಸೈರಾಬ್
ಈ ತಪ್ಪುಗಳನ್ನು ಸುಧಾರಿಸಿಕೊಂಡರೆ ಸರಿಯೆಂದು ಬದಲಾಗಬಹುದು
ಆಸೆಗಳ ಹೂಗಳು ತೋಟದಲಿ ಅರಳಿ ನಳನಳಿಸಬಹುದು.

ಮೀರ್ ಜುಮ್ಲಾನ ಈ ಎಲ್ಲ ಬೇಡಿಕೆಗಳ ಅರ್ಜಿ ಯಾ ಬಿನ್ನವತ್ತಳೆಯನ್ನು ಬಾದಶಾಹನ ಆಸ್ಥಾನದ ದರ್ಬಾರಿನ ಮುಂದಿಡಲಾಯಿತು. ಈ ಬೇಡಿಕೆಗಳನ್ನು ಆಲಿಸಿದ ಬಾದಶಾಹ, ಮೀರ್ ಜುಮ್ಲಾನ ಎಲ್ಲ ತಪ್ಪುಗಳನ್ನು ರಾಜೋಚಿತ ಕರುಣೆ ಮತ್ತು ಕೃಪೆಗಳೊಂದಿಗೆ ಮಾಫಿಮಾಡಲಾಯಿತು. ಬಾದಶಾಹರ ಕೃಪಾಕಟಾಕ್ಷದ

ಮುಗಿಲಿನ ಮಳೆಸುರಿಯಲಾಗಿ ಅವನ ದೇಹವನ್ನುತೊಯ್ದುಹಾಕಿದಂತಾಯಿತು. ಅವನ ಕುಕೃತ್ಯಗಳ ಕಟ್ಟುಗಳನ್ನು ಬಿಡಿಸಿದಲ್ಲಿ ಅದರ ನೆರಳು ಬೆಂಕಿಯ ಮೇಲೆ ಬಿದ್ದರೆ ಭುಗಿಲೆದ್ದು ತಂದೂರಿನ ಮಡಕೆಯ ಹೊರಗೆ ಜ್ವಾಲೆ ಹೊರಬರುವಂತೆ ಮೂಡುವ ದೃಶ್ಯ ಭಯಾನಕವಾಗಿತ್ತು. ಅವನ ಕುತಂತ್ರಗಳ ಛಾಯೆ ಬೆಳಗುವ ಸೂರ್ಯನ ಮೇಲೆ ಬಿದ್ದರೆ ಕೂಡಲೇ ಕತ್ತಲೆ ಆವರಿಸಿ ಬಿಡುವಂತಿತ್ತು. ಹೀಗೆ ಮೀರ್ ಜುಮ್ಲಾನು ಬಿತ್ತಿದ ದ್ವೇಷದ ಮುಳ್ಳಿನ ಬೀಜ ಬಾದಶಾಹರ ಕೃಪೆಯಿಂದ ತಾಜಾ ಹೂಗಳನ್ನು ಬಿಡುವ ಗಿಡವಾಗಿ ಪರಿವರ್ತನೆಗೊಂಡವು. ಅವನು ತನ್ನ ತಲೆಯನ್ನು ಭೂಮಿಯ ಮೇಲಿಟ್ಟು ತನ್ನ ನಿವೇದನೆಯನ್ನು ಮುಂದಿಟ್ಟಿದ್ದ. ಈಮೂಲಕ ಬಾದಶಾಹರ ಹುಕುಮನ್ನು ಪಾಲಿಸುವ ಅನುಯಾಯಿಯಾಗಿ ಮಾರ್ಪಟ್ಟು, ಸತ್ಯ ಮತ್ತು ಪ್ರಾಮಾಣಿಕತೆಯ ಆಭರಣಗಳನ್ನು ಧರಿಸಿಕೊಂಡ.

ಖಾನ್ ಝಫರ್ ಕರೀಮರು ಬಾದಶಾಹರ ಆಜ್ಞೆಯಂತೆ ಕುಂಡಿಕುಟ್ಟ ಕೋಟೆ ಮತ್ತು ಪ್ರಾಂತ್ಯವನ್ನು ಹಿಂದಿನಂತೆ ಮೀರ್ ಜುಮ್ಲಾನ ಸುಪರ್ದಿಗೆ ಒಪ್ಪಿಸಿದರು. ಐದುವರೆ ಲಕ್ಷ ಹವನ್ ಕಾಣಿಕೆಯ ಜೊತೆಗೆ ನಾಲ್ಕು ಬೆಳೆಬಾಲುವ ಮಾಣಿಕ್ಯದ ಹರಳುಗಳನ್ನು ಅವನಿಂದ ವಸೂಲಿಮಾಡಿ ಮುಹಮ್ಮದ್ ಝುಹೂರಿಯ ಬಳಿಗೆ ಕಳುಹಿಸಬೇಕೆಂದೂ ಆಜ್ಞೆ ನೀಡಲಾಯಿತು. ಈ ನಾಲ್ಕು ಬೆಲೆಬಾಳುವ ಮಾಣಿಕ್ಯದ ಹರಳುಗಳು ಎಷ್ಟು ಅಮೂಲ್ಯವಾಗಿತ್ತೆಂದರೆ ಆ ಕಾಲದ ಯಾವುದೇ ಚಿನ್ನದ ವ್ಯಾಪಾರಿಯ ಊಹೆಗೂ ನಿಲುಕಲಾರದ್ದಾಗಿದ್ದವು. ಇದಾದನಂತರ ತಮ್ಮ ಸೈನ್ಯವನ್ನು ನಡೆಸಿಕೊಂಡು ಮತ್ತೆ ಕರ್ನಾಟಕದತ್ತ ಚಲಿಸತೊಡಗಿದರು. ಇದರ ಉದ್ದೇಶ ಪಿಲಗೊಂಡ ಕೋಟೆಯನ್ನು ವಶಪಡಿಸಿಕೊಳ್ಳುವುದಾಗಿತ್ತು. ಈ ಕೋಟೆಯ ರಾಜಧಾನಿ ಪಾಲಘಾಟ್ ಪಟ್ಟಣ ಕರ್ನಾಟಕದ ಪ್ರಾಂತ್ಯದೊಳಗಿತ್ತು. ಸೈನ್ಯವು ರುದ್ದಗಾ ಗ್ರಾಮದ ಆಜುಬಾಜು ತಲಪಿದಾಗ ಪಿಲಗೊಂಡ ನಾಲ್ಕು ಮೈಲಿನ ದೂರದಲ್ಲಿತ್ತು. ಇದರ ಮಧ್ಯೆ ಬಾದಶಾಹರ ಕೃಪೆಯ ಫರ್ಮಾನು ಖಾನ್ ಝಫರ್ ಖಾನ್‌ಗೆ ತಲಪಿತು. ಸೈಯದಿ ರಿಹಾನ್ ಶೋಲಾಪುರಿಯವರ ಸ್ನೇಹಿತ ಅತ್ಯಂತ ಕ್ರೂರಿಯೂ ಪ್ರಜಾಪೀಡಕನೂ, ಕಪಟಿಯೂ ಆದ ಅಂಬರ್ ಕಾಲಾನನ್ನು ಸೆರೆ ಹಿಡಿಯಬೇಕೆಂಬುದಾಗಿಯೂ ಅಥವಾ ಹಾಗಾಗದಿದ್ದಲ್ಲಿ ಕೂಡಲೇ ಅವನ ಶಿರಚ್ಛೇದಮಾಡಬೇಕೆಂಬ ಆಜ್ಞೆ ಈ ಫರ್ಮಾನಿನಲ್ಲಿತ್ತು. ಬಾದಶಾಹರೊಂದಿಗೆ ಕೆಟ್ಟದಾಗಿ ವ್ಯವಹರಿಸುವ ಮೂಲಕ ವೈರತ್ವಹೊಂದಿರುವವರಿಗೆ ಸರಿಯಾದ ಶಿಕ್ಷೆ ವಿಧಿಸಿದಾಗ ಜನರಿಗೆ ಒಂದು ಉದಾಹರಣೆಯ ರೂಪದಲ್ಲಿ ಮಾದರಿಯಾಗಿರಲಿ ಎಂಬುದು ಅವರ ಇಚ್ಛೆಯಾಗಿತ್ತು.

ಖಿತಾ

ಹರ್‌ಕೆ ಗರ್‌ದತ್ ಬಕಜ್‌ರವೀ ಮಗ್‌ರೂರ್
ಹಂ ಚ್ಯೂಂ ಕರ್ ಚಂಗ್ ಬರ್ ಕನಾರಯೆ ಆಬ್

ಯಾರು ತನ್ನ ಕುತಂತ್ರದಿಂದ ಅಹಂಕಾರಿಯಾಗುವನೋ ಅವನು
ಕತ್ತೆ ಕೊಳದ ಮುಂದೆ ಚಲಿಸುವಾಗ ತನ್ನ ನೆರಳನೋಡಿ ಕೆರಳಿದಂತಾಗುವನು.

ಪಾಯಶ್ ಅರ್ಝ್ ಕಜ್‌ರವಿ ಅಸ್ತ್ ಮಿಖ್‌ರಾಜಿ
ತಾ ಸರಶ್‌ರಾ ಜುದಾ ಕುನದ್ ದರಿಯಾಬ್
ಅವನ ಕುತಂತ್ರದಿಂದ ತನ್ನ ಕಾಲನ್ನು ತಾನೇ ಎಳೆದುಕೊಂಡಂತೆ
ತನ್ನ ತಲೆಯನ್ನು ತಾನೇ ಶಿರಚ್ಛೇದ ಮಾಡಿಕೊಂಡಂತೆ.

ಅಂಬರ್ ಕಾಲಾ ಒಂದು ಸಹಸ್ರ ಶೂರ ಕುದುರೆ ಸವಾರ ಸೈನಿಕರನ್ನು ಹೊಂದಿದ್ದ. ಸ್ವತಹ ಶೂರನೆನಿಸಿದ ಅವನನ್ನು ಹಿಡಿಯುವುದು ಅಥವಾ ಕೊಲ್ಲುವುದು ಸುಲಭಸಾಧ್ಯವಾದ ಮಾತಾಗಿರಲಿಲ್ಲ. ಬಾದಶಾಹರ ಪ್ರಾಮಾಣಿಕ ಪ್ರತಿನಿಧಿಯಾದ ಖಾನ್ ನುಸ್ರತ್ ಕರೀಮ್‌ಗೆ ಕೂಡ ಇದು ಅಸಾಧ್ಯದ ಮಾತಾಗಿ ಕಂಡಿತ್ತು. ಇದಕ್ಕಾಗಿ ಬಹಳ ಸೂಕ್ಷ್ಮಯೋಜನೆಗಳ ತಯಾರಿ ಅಗತ್ಯವೆಂಬ ತೀರ್ಮಾನಕ್ಕೆ ಬಂದಿದ್ದ. ಈ ಅಪಾಯಕಾರಿ ಕೆಲಸಕ್ಕೆ ಅಗತ್ಯವೆಂದು ಭೈರಂ ಖಾನ್‌ರ ಮಕ್ಕಳು ಮತ್ತು ರುಸ್ತುಮೆ ಜಹಾನ್‌ರನ್ನು ತನ್ನ ಬಳಿ ಕರೆಸಿಕೊಂಡ. ಈ ಮೂಲಕ ವಿಶ್ವಾಸಪೂರ್ಣ ಬಲಶಾಲಿ ಗಳಿಂದ ಸಲಹೆ ಕೇಳುವುದು ಅವನ ಉದ್ದೇಶವಾಗಿತ್ತು. ಅಂಬರ್ ಕಾಲಾನಿಗೆ ತನ್ನನ್ನು ಸೆರೆಹಿಡಿಯುವ ಪ್ರಯತ್ನ ನಡೆಯುತ್ತಿದೆ ಎಂಬ ಯಾವ ಸುಳಿವೂ ಇರಲಿಲ್ಲ. ಈ ಬಲಶಾಲಿ ಮಂತ್ರಿವರ್ಯರು ತಲಪಿ ಕರೆದಾಗ ಅಂಬರ್ ಕಾಲಾ ತನ್ನಲ್ಲಿರುವ ಶೂರ ಸೈನಿಕರ ಬಲದ ಮತ್ತು ತನ್ನ ಶೌರ್ಯದ ಅಹಂಕಾರದೊಂದಿಗೆ ನಾನು ನೀವು ಬೀಡುಬಿಟ್ಟಲ್ಲಿಗೆ ಬರುವುದಿಲ್ಲ, ನಾನಿಲ್ಲೇ ಇರುತ್ತೇನೆಂದು ಬಾದಶಾಹರ ಸೇನಾಧಿಪತಿಯ ಆಜ್ಞೆಯನ್ನು ತಿರಸ್ಕರಿಸಿದ. ಇದರ ಬದಲಿಗೆ ಏಳುಸಾವಿರ ಯೋಧರನ್ನು ನಿಮಗೆ ನೀಡುತ್ತೇನೆಂದೂ ಹೇಳಿದ.

ಖಾನ್ ಮುಹಮ್ಮದ್ ಕರೀಮ್‌ಗೆ ಅಂಬರ್ ಕಾಲಾ ಮತ್ತು ರುಸ್ತುಂ ಜಹಾಂನೊಂದಿಗೆ ನಡೆದ ಮಾತು ಕತೆಗಳ ವಿವರ ತಿಳಿಯದೆ ಅವನ ಕೋರಿಕೆಗೆ ಒಪ್ಪಿಗೆ ನೀಡಿದ. ಅಂಬರ್ ಕಾಲಾ ತನ್ನ ಕೆಲವು ನಿಷ್ಠಾವಂತ ಬೆಂಬಲಿಗರೊಂದಿಗೆ ಡೇರೆಯೊಳಗೆ ನಡೆದ. ಖಾನ್ ನುಸ್ರತ್ ಕರೀಮನೊಂದಿಗೆ ಮಾತುಕತೆ ನಡೆದಾಗ ಆತ ನಾನು ತನ್ನ ಪ್ರಾಂತ್ಯಕ್ಕೆ ಹೋಗಿ ಸೈನ್ಯದ ತಯಾರಿ ಮಾಡಿ ಮತ್ತೆ ಹಿಂತಿರುಗಿ ಬರುವೆನೆಂಬ ಮಾತು ನೀಡಿದ. ಈ ಮಾತಿಗೆ ಉತ್ತರಿಸಿದ ಖಾನ್ ನುಸ್ರತ್ ಕರೀಮ್, ನಮಗೆ ಈಗ ಮಹತ್ವದ ಕೆಲಸವಿದೆ, ತ್ವರಿತವಾಗಿ ನಾವು ಪಿಲಿಗುಂಡ ಕೋಟೆಯನ್ನು ವಶಪಡಿಸಿಕೊಳ್ಳಬೇಕಾಗಿದೆ, ಈ ಹೊತ್ತಲ್ಲಿ ಬಾದಶಾಹರ ಆಜ್ಞೆಯನ್ನು ತಿರಸ್ಕರಿಸುವುದು ಪ್ರಾಮಾಣಿಕ ಸೇವಕರಿಗೆ ತರವಲ್ಲ. ಪ್ರಾಮಾಣಿಕ ಸೇವಕರಿಗೆ ಕೂಡ ಇದು ಇಷ್ಟವಾದ ನಡತೆಯಲ್ಲ, ಎಂದರು. ಅಂಬರ್ ಕಾಲಾ ತನ್ನ ಸಂಬಂಧ ಈ ಕೋಟೆಯೊಂದಿಗೆ

ನಿಷ್ಠಾವಂತಿಕೆಯದ್ದು ಮತ್ತು ನನಗೆ ಅಲ್ಲಿಗೆ ಹೋಗಬೇಕಾಗಿದೆ. ನೀವು ನನಗೆ ಅನುಮತಿ ನೀಡದಿದ್ದರೂ ಪರವಾಗಿಲ್ಲ ನಾನು ಅಲ್ಲಿಗೆ ಹೋಗಿಯೇ ತೀರುತ್ತೇನೆಂದು ಹಟಹಿಡಿದ. ಖಾನ್ ನುಸ್ರತ್ ಕರೀಮರಿಗೆ ಅಂಬರ್ ಕಾಲಾ ತಾನು ಹಿಡಿದ ಹಟವನ್ನು ಸಡಿಲಿಸಲಾರನೆಂದೂ, ಅವನ ಹಿಂಬಾಲಕರನ್ನು ಕೂಡ ತಡೆದು ನಿಲ್ಲಿಸುವುದು ಸಾಧ್ಯವಾಗದೆಂದು ತಿಳಿದು, ಈಗ ನಾನು ಬಾದಶಾಹರ ಆಜ್ಞೆಯನ್ನು ಪಾಲಿಸದಿದ್ದರೆ ಮುಂದೆ ನಾಚಿತಲೆ ತಗ್ಗಿಸಬೇಕಾಗಬಹುದೆಂದು ಯೋಚಿಸಿದ.

ತುಂಬ ಜಾಗ್ರತೆ ಮತ್ತು ಬುದ್ಧಿವಂತಿಕೆಯೊಂದಿಗೆ ತನ್ನ ಬಳಿಯಿದ್ದು ತಲವಾರು ಹಿಡಿದು ನಿಂತಿದ್ದ ದೌಲತ್ ಖವಾಸ್‌ಖಾನ್ ಎಂಬ ಜಮಾದಾರ ಯೋಧನಿಗೆ ಮತ್ತಿತರ ಯೋಧರು ಸನ್ನೆ ಮಾಡಿ ತನ್ನ ಡೇರೆಯ ಹಿಂದೆ ಕರೆದು ನೀವು ಪರದೆಯ ಹಿಂದೆ ನಿಂತು ಅವನ ಮೇಲೆ ನಿಗಾ ಇಡುವಂತೆ ಆಜ್ಞಾಪಿಸಿದ. ಅಂಬರ್ ಕಾಲಾನನ್ನು ನಮ್ಮ ಜೊತೆ ಮಾತುಕತೆಗಾಗಿ ಬರುವಂತೆ ಆಹ್ವಾನಿಸಿ ಪರದೆಯ ಹಿಂದೆ ನಿಂತು ತೀವ್ರವಾಗಿ ಗಮನಿಸಿರೆಂದು ಸೂಚಿಸಿದ. ಸಮಯನೋಡಿ ಅವನ ಮೇಲೆ ಬಿದ್ದು ಸೆರೆಹಿಡಿಯಿರಿ. ಈ ಅವಕಾಶ ಸಿಗದಿದ್ದರೆ ಕೂಡಲೇ ಅವನ ಮೇಲೇರಿ ಶಿರಚ್ಛೇದ ಮಾಡಿರೆಂದು ಗುಪ್ತವಾಗಿ ಆಜ್ಞೆನೀಡಿದ. ಖಾನ್ ನುಸ್ರತ್ ಖಾನ್ ತನ್ನ ಡೇರೆಯ ಒಳಗೆ ಹೋಗಿ ತನ್ನ ಬೆಂಬಲಿಗರೊಂದಿಗೆ ಹೊರಟ ಅಂಬರ್ ಕಾಲಾನನ್ನು ತನ್ನ ಬಳಿ ಕರೆಸಿದ. ಅಂಬರ್ ಕಾಲಾ ಒಳಗೆ ಬಂದಾಗ ಬಾದಶಾಹರ ಇಚ್ಛೆಯಂತೆ ನೀನು ನಿನ್ನ ತಲವಾರನ್ನು ನನ್ನ ವಶವೊಪ್ಪಿಸಬೇಕೆಂದು ಸೇನಾಧಿಪತಿ ಹೇಳಿದರು. ಅಂಬರ್ ಕಾಲಾ ಈ ಮಾತನ್ನು ಕೇಳಿ ಸಿಟ್ಟಾಗಿ ತನ್ನ ತಲವಾರಿಗೆ ಕೈಹಾಕಿದಾಗ ತಟ್ಟನೆ ವಲೀ ಖಾನ್ ಎಂಬ ಯೋಧ ತನ್ನ ಶಿಕಾರಿಯ ಮೇಲೆ ರೋಷದಿಂದ ಎರಗುವ ಸಿಂಹದಂತೆ ಹಾರಿ ಬಂದು ತನ್ನ ತಲವಾರನ್ನು ಬೀಸಿ ಅವನ ಶಿರಚ್ಛೇದ ಮಾಡಿದ. ಅವನ ರಕ್ಷಣೆಗೆ ಬಂದ ಕೆಲವು ಅಂಬರ್ ಕಾಲಾನ ಸೈನಿಕರನ್ನು ಕೂಡ ಕೊಚ್ಚಿ ಕೊಂದುಹಾಕಿದ. ಈ ಗುಲ್ಲು ಗಲಾಟೆಯ ಸದ್ದು ಕೇಳಿ ಸೈನಿಕರು ಡೇರೆಯ ಪರದೆ ತರೆದು ಒಳಗೆ ನುಗ್ಗಿದರು. ಈ ಸಂದರ್ಭದಲ್ಲಿ ಮುಝುಫ್ಫರುದ್ದೀನ್ ಖಾನ್ ಮುಹಮ್ಮದ್ ಎಂಬ ಬಾದಶಾಹರ ಸೈನಿಕ ತನ್ನ ತಲವಾರನ್ನು ಹಿರಿದು ಹೊರಗೆ ನುಗ್ಗಿ ಅಂಬರ್ ಕಾಲಾನ ಕಡಿದ ಶಿರವನ್ನು ಮೈದಾನದ ಮಧ್ಯೆ ಎಸೆದ. ಅಂಬರ್ ಕಾಲಾನ ಸೈನಿಕರು ಇದನ್ನು ನೋಡಿದಾಗ ಬಾದಶಾಹರ ಸೈನಿಕರ ಸಿಟ್ಟು ಮತ್ತು ಆಕ್ರೋಶದ ದೃಶ್ಯವನ್ನು ಕಂಡು ಭಯಭೀತರಾಗಿ ತಮ್ಮ ಜೀವ ಕೈಯಲ್ಲಿ ಹಿಡಿದುಕೊಂಡು ಓಡಿದರು. ಹೀಗೆ ಖಾನ್ ನುಸ್ರತ್ ಖಾನ್ ತನ್ನ ಯೋಜನೆಯಲ್ಲಿ ಜಯಶೀಲನಾಗಿ ಬಾದಶಾಹರ ಗೌರವ ಮತ್ತು ಅಪಾರ ಕೃಪೆಗೆ ಪಾತ್ರನಾದ. ಈ ಸುದ್ದಿ ಹಜ್ರತ್ ಶೂರ ಬಾದಶಾಹರ ಆಸ್ಥಾನಕ್ಕೆ ತಲಪಿದಾಗ ಮುಹಮ್ಮದ್ ಝುಹೂರಿಯ ಎದುರಲ್ಲಿ ಖಾನ್ ಮುಹಮ್ಮದ್ ನುಸ್ರತ್ ಖಾನ್‌ನಿಗೆ ಉಡುಗೊರೆ, ಗೌರವದೊಂದಿಗೆ ಶಾಹಿ ತಲ್ವಾರನ್ನು ನೀಡಿ

ರಾಜಮರ್ಯಾದೆಯೊಂದಿಗೆ ಸೊಂಟಕ್ಕೆ ಕಟ್ಟಿದರು. ಈ ಮೂಲಕ ಅವನಿಗೆ ಶಾಹಿ ಗೌರವದೊಂದಿಗೆ ಎಲ್ಲರೀತಿಯ ರಾಜಮರ್ಯಾದೆಯ ಬಾಗಿಲನ್ನು ತೆರೆದಿಟ್ಟಂತಾಯಿತು.

ನಜ್ಮ್

ಖುಶಾ ಆಂ ಬಂದಯೆ ಫರ್‌ಕಿಂದ ಇಖ್ಬಾಲ್
ಕೆ ಅಝ್ ಅಲ್ತಾಫೆ ಶೆಹ್ ಮಾನಿಂದ್ ಬಯಖಾಲ್
ಆ ಮನುಷ್ಯ ಎಂತಹ ವೈಭವಪೂರ್ಣ ಪುಣ್ಯವಂತ
ಬಾದಶಾಹನ ಗೌರವದ ಕೃಪೆಯಿಂದ ಆತ ಕೃತಾರ್ಥನಾದಂತ.

ಝುಲುತ್ಫೆ ಶಾಹ್ ಕದ್ರಶ್ ಫಝೂಯಿದ್
ಬಜುಝ್ ದುವಾಯೆ ಅಝ್‌ದಿಗಾರ್ ನಿಯಾಯತ್
ಬಾದಶಾಹರ ಕೃಪೆಯಿಂದ ಅವನ ಮರ್ಯಾದೆಯ ದರ್ಜೆ, ಘನತೆ ಹೆಚ್ಚಿತು
ಇವೆಲ್ಲವೂ ಅಲ್ಲಾಹನ ಕರುಣಾಕೃಪೆಯಿಂದಲೇ ದೊರೆಯಿತು.

ಚ್ಯೂಂ ಬಾಶದ್ ಬಂದಾ ಯಕ್‌ದಿಲ್ ಬಾಖುದಾವಂದ್
ನಿಹಾಲೆ ತಾಲಯಿಶ್ ಗರ್ದದ್ ಬರೂಮಂದ್
ಯಾರು ತನ್ನ ದೇವರ ಮುಂದೆ ಸ್ವಚ್ಛ ಹೃದಯದವನಾಗುವನೋ
ಅವನ ಪುಣ್ಯ ಮತ್ತು ನಸೀಬು ಹೆಚ್ಚು ಶ್ರೀಮಂತವಾಗುವುದು.

ಕಸೇ ನಕ್ದೇ ಹಯಾತೆ ಜಾವಿದಾ ಯಾಫ್ತ್
ಕೆ ಅಝ್ ಮೆಹ್ರೇ ಮುಹಮ್ಮದ್ ಷಾ ಜಾ ಯಾಫ್ತ್
ಮನುಷ್ಯ ಸುಖದ ದೀರ್ಘ ಆಯುಷ್ಯದ ಉಡುಗೊರೆ ಪಡೆದಂತೆ
ಇದಾಗಿದೆ ಬಾದಶಾಹ ಮುಹಮ್ಮದ್ ಶಾಹನ ಕೃಪಾಕಟಾಕ್ಷದ ಕಾಣಿಕೆಯಂತೆ.

ಝುಹೆ ಸುಲ್ತಾನೆ ಫಾಝಿ ಮಝ್ಹರೇ ಹಕ್
ಕೆ ಹಕ್‌ದಾದಸ್ತ್ ಪೂರ ಕದ್‌ರೆ ಮುತ್‌ಲಕ್ತ್
ಎಂತಹ ಭವ್ಯವಾದ ಶೂರ ಬಾದಶಾಹ ಅಲ್ಲಾಹನ ಕೃಪೆಗೆ ಭಾಗಿಯಾದವನು
ಅಲ್ಲಾಹನ ಆಶಿರ್ವಾದದೊಂದಿಗೆ ಅವರ ಹಣೆಬರಹ ಬರೆದವನು.

ಝು ಲುತ್ಫೆ ವೂ ಸರ್ಫರಾಝಿಯೆ ಜಹಾಂರ
ಝು ಕೆಹರಶ್ ಜಾಂ ಗುದಾಝಿಯೆ ದುಶ್ಮನಾರ
ಅವರ ಕೃಪಾಕಟಾಕ್ಷದಿಂದ ಈ ಸರ್ವ ವಿಶ್ವದಲಿ ಮಂಗಳವಾಗುತಿದೆ
ಅವರ ದ್ವೇಷಕ್ಕೆ ವಿರೋಧಿಗಳ ಪ್ರಾಣ ಆಹುತಿಯಾಗುತದೆ.

ಹೀಗೆ ಖಾನ್ ನುಸ್ರತ್ ಕರೀಮ್ ತನ್ನ ಪ್ರಾಮಾಣಿಕ ಸೇವೆಯಿಂದ ಒಳ್ಳೆಯ

ಪುಣ್ಯ ಭವಿಷ್ಯವನ್ನು ಕಾಣುವಂತಾಯಿತು. ಬಾದಶಾಹನ ಅಂತಃಪುರದಿಂದ ಒಬ್ಬಳು ಒಳ್ಳೆಯ ಸೇವಕಿಯನ್ನು ಅವನ ಸೇವೆಗಾಗಿ ಒಪ್ಪಿಸಲಾಯಿತು.

ಖಾನ್ ನುಸ್ರತ್ ಕರೀಮ್ ರುದದ್ ಗ್ರಾಮದ ಗಡಿಯಿಂದ ಹೊರಟು ಪಿಲುಗೊಂಡ ಕೋಟೆಯ ಕಡೆ ಪ್ರಯಾಣಬೆಳೆಸಿದರು.

ನಜ್ಮ್

ಸಿಪಾಹೆ ಶೆಹೆನ್‌ಶಾಹೇ ಕಿಶ್ವರಿಸ್ತಾನ್
ಚ್ಯೂಂ ಗಸ್ತ್ ಅಸ್ಪಯೆ ಕಿಲಗಿರಿ ರವಾನ್
ವಿಶ್ವದ ಬಾದಶಾಹರ ಸಿಪಾಯಿಗಳು
ಹೋದರು ಕೋಟೆಯ ವಶಪಡಿಸಲು

ಝೆ ಫೌಝೆ ನೆಹಂಗಾನ್ ದರಿಯಾ ಖರೋಶ್
ದರೋ ದಶ್ತ್ ಝುಗೂನ ಆಮದ್ ಬಜೋಶ್
ಮೊಸಳೆಗಳಂತಹ ಸೈನ್ಯದ ದಂಡಿನಿಂದ ಸಮುದ್ರದಲಿ ಅಲ್ಲೋಲಕಲ್ಲೋಲ ವಾಯಿತು
ಕಾಡು ನಾಡುಗಳು ರೋಮಾಂಚನಗೊಂಡು ಸ್ಫೂರ್ತಿ ಪಡೆದಂತಾಯಿತು.

ಕೆ ಹರ್ ಕುಲ್ಲಯೆ ಕೋಹ್ ಹಂ ಚ್ಯೂಂ ಹುಬಾಬ್
ಗುರುಖಿಶ್ತ್ ಅಝ್‌ಸರೆ ಚಶ್ಮಯೆ ಆಫ್‌ತಾಬ್
ಪ್ರತಿಯೊಂದು ಪರ್ವತದ ತುದಿಗಳಾದವು ನೀರ್ಗುಳ್ಳೆಯಂತೆ
ಸೂರ್ಯನ ಕಿರಣಗಳಿಂದ ಉದ್ಭವಿಸಿ ಹರಡಿದಂತೆ.

ಪಿಲುಗೊಂಡ ಕೋಟೆಗೆ ಬಾದಶಾಹರ ಸೈನ್ಯ ತಲಪಿದಾಗ ಜಯದ ಸಂಕೇತಗಳು ಆಕಾಶದಲ್ಲಿ ಮೂಡಿದಂತೆ ಕಾಣಿಸುತ್ತಿತ್ತು. ವಿರೋಧಿಗಳ ಕಿವಿಗಳಲ್ಲಿ ನಗಾರಿಗಳ ಬಡಿತದ ಸದ್ದು ಕೇಳಿಬರುತ್ತಿದ್ದಂತೆ ಭಯಭೀತರಾಗಿ ಗಲಿಬಿಲಿಗೊಂಡದ್ದರಿಂದ ಅಲ್ಲಿನ ಸಂಪೂರ್ಣ ವಾತಾವರಣದಲ್ಲಿ ಗುಲ್ಲೆಬ್ಬಿಸಿತು. ಬಾದಶಾಹರ ಸೈನ್ಯದ ಸೇನಾಧಿಪತಿ ಖಾನ್ ನುಸ್ರತ್ ಕರೀಮ್ ಮುಝಫ್ಫರುದ್ದೀನ್ ಖಾನ್ ಮುಹಮ್ಮದ್ ತನ್ನ ಸೈನಿಕರೊಂದಿಗೆ ಕೋಟೆಯ ಮುಂದೆ ಡೇರೆ ಹಾಕಿ ತಳವೂರಿದರು. ಈ ಕೋಟೆಯನ್ನು ತದೇಕಚಿತ್ತದಿಂದ ನೋಡುತ್ತಿದ್ದರು. ಈ ಕೋಟೆಯು ದೊಡ್ಡ ಪರ್ವತದ ತುದಿಯಲ್ಲಿ ಕಟ್ಟಲಾದ ಬಲಶಾಲಿಯಾದ ಕಟ್ಟಡವಾಗಿತ್ತು. ಎಷ್ಟು ಎತ್ತರದಲ್ಲಿದೆಯೆಂದರೆ ವಿಶ್ವದ ಅತ್ಯಂತ ಎತ್ತರದ ಪರ್ವತವೆನಿಸಲ್ಪಟ್ಟ ಕೋಹೆ ಕಾಫ್‌ನಿಂದ ಒಂದು ಕಲ್ಲನ್ನು ಎಸೆದರೆ ಎತ್ತರದಲ್ಲಿ ಹಾರುವ ಹದ್ದುಗಳು ಗಾಳಿಯಲ್ಲಿ ತೇಲುತ್ತ ತಮಗಿಂತಲೂ ವೇಗದಿಂದ ಬರುತ್ತಿರುವ ಆ ಕಲ್ಲನ್ನು ಕಂಡು ತಮ್ಮೊಳಗೆ ನಾಚಿಕೊಂಡವು.

ಭೂಮಿಯ ಒಡಳೊಳಗೆ ಈ ಕೋಟೆಯ ಶಕ್ತಿಶಾಲಿ ಅಡಿಪಾಯ ಹೇಗಿತ್ತೆಂದರೆ ಭೂಮಿಯನ್ನು ಹೊತ್ತ ಎತ್ತು ತನ್ನ ಕೋಡುಗಳನ್ನು ಅಲುಗಾಡಿಸಿದರೆ ಇಡೀ ಕಟ್ಟಡವು ನೇರವಾಗಿ ಪಾತಾಳಕ್ಕೆ ತಲಪುವಂತೆ ಮಜಬೂತಾಗಿ ಕಟ್ಟಲಾಗಿತ್ತು. ಕೋಟೆಯ ಸುಂದರ ಕಮಾನುಗಳು ಚಂದ್ರಿಕೆಯ ಆಕಾರದಂತೆ ಕಂಡುಬರುತ್ತಿತ್ತು. ಕೋಟೆಯ ಬುರುಜಿಗೆ ತಲಪಲು ಮಾಡಿದ ರಸ್ತೆಯ ಎತ್ತರದ ಓರೆಕೋರೆಗಳು ರಾತ್ರಿಯಲ್ಲಿ ನಕ್ಷತ್ರಗಳ ಸಾಲುಗಳು ಆಕಾಶದಲ್ಲಿ ಮಿನುಗುವ ಗೆರೆಗಳಂತೆ ಕಾಣುವ ಆಕಾರದಲ್ಲಿತ್ತು.

ಸೈನ್ಯವು ಕೋಟೆಯನ್ನು ತಲಪುವ ಹಾದಿಯಲ್ಲಿ ತಮ್ಮನ್ನು ಸ್ವಾಗತಿಸುತ್ತಿರುವಂತೆ ಅಲ್ಲಲ್ಲಿ ಜನರು ಸಂತಸ ಮತ್ತು ಸಂಭ್ರಮವನ್ನು ಆಚರಿಸುತ್ತಿರುವುದು ಕಂಡುಬರುತ್ತಿತ್ತು. ಪರ್ವತದ ತುದಿಯ ನಾಲ್ಕೂದಿಕ್ಕುಗಳಲ್ಲಿ ಆಕಾಶವನ್ನು ಚುಂಬಿಸುತ್ತಿರುವಂತೆ ಕೋಟೆಯ ಭವ್ಯ ಕಟ್ಟಡವು ಕಂಡುಬರುತ್ತಿತ್ತು. ಅದರ ಸುತ್ತಲಿನ ಆವರಣದ ಗೋಡೆಗಳ ಸಾಲುಗಳು ಅಲೆಕ್ಸಾಂಡರನು ಕಟ್ಟಿದ 'ಸದ್ದೆಸಿಕಂದರಿ'ಯ ಆವರಣದ ಬಲಿಷ್ಠ ಗೋಡೆಗಳನ್ನು ನಾಚಿಸುವಂತಿತ್ತು. ಕೋಟೆಯ ಆವರಣದ ಸುತ್ತಲಿನ ದೊಡ್ಡ ಆಳವಾದ ಕಂದಕ ಸುಂದರವಾಗಿ ಮತ್ತು ಭೀಭತ್ಸವಾಗಿ ಕಾಣುತ್ತಿತ್ತು. ಕಂದಕದ ಅಗಾಧ ನೀರಿನಲ್ಲಿ ಬಾಯಿ ತೆರೆದು ನಿಂತ ಹಲವಾರು ಭೀಕರ ರೂಪದ ಮೊಸಳೆಗಳು ಕಂಡುಬರುತ್ತಿದ್ದವು.

ಬೈತ್

ಗರ್ ಶವದ್ ಹರ್‌ಫೇ ರಖಂ ಅಝ್ ವಸ್ಫೆ ಆಂ ಹಿಸ್ನೆ ಹಸ್ವೀನ್
ಸಫ್ಹ ಯೆ ಸಹ್ರಾ ಗರ್ದದ್ ಹರ್ ಕತ್ರ ನುಕ್ತಯೆ ಅಹನೀನ್
ಈ ಬಲಿಷ್ಠ ಕೋಟೆಯ ಬಗ್ಗೆ ಕಾವ್ಯ ಬರೆಯುವುದೆಂದರೆ
ಭೂಮಿಯನ್ನು ಕಾಗದವ ಮಾಡಿ ಕಬ್ಬಿಣದ ಬೊಟ್ಟು ಇಟ್ಟು ಬರೆದಂತೆ.

ಖಾನ್ ಝುಫರ್ ತುಮಾನ್ ಈ ಕೋಟೆಯ ಆವರಣವನ್ನು ನೆಟ್ಟದೃಷ್ಟಿಯಿಂದ ನೋಡುತ್ತ ವಶಪಡಿಸಿಕೊಳ್ಳುವ ತನ್ನ ಯಾವಯೋಜನೆಯ ಮೂಲಕ ಕಾರ್ಯಸಫಲ ಗೊಳ್ಳಬಹುದು ಎಂಬ ಲೆಕ್ಕ ಹಾಕುತ್ತ, ಯೋಚಿಸುತ್ತ ತದೇಕದೃಷ್ಟಿಯಿಂದ ನೋಡುತ್ತ ಕುಳಿತಿದ್ದರು. ಅವನ ಸೈನಿಕರು ಮತ್ತು ಎಲ್ಲ ಮಂತ್ರಿ ಸಹಚರರು ಕೋಟೆಯನ್ನು ಸುತ್ತುವರಿದು ನಿಂತು ಅವನ ಆಜ್ಞೆಗಾಗಿ ಕಾಯುತ್ತಿದ್ದರು. ಖಾನ್ ಝುಫರ್ ಕರೀಮ್ ತುಮಾನ್ ಕೋಟೆಯ ಮೇಲೆ ದಾಳಿನಡೆಸಲು ತಯಾರಾದಾಗ ಸಯ್ಯದಿ ರಿಹಾನ್ ಶೋಲಪುರಿಯವರ ಮಗ ತನ್ನ ಸಂಗಡಿಗರೊಂದಿಗೆ ಈ ಕೋಟೆಯ ಒಳಗಿದ್ದ. ಅವರು ಸಮಯ ನೋಡಿ ದ್ವೇಷದ ಕಿಡಿ ಹೊತ್ತಿಸಲು ಅವಕಾಶ ಕಾಯುತ್ತಿದ್ದ. ಅಲ್ಲಿನ ಇಲಾಖೆಯ ಆಸುಪಾಸಿನ ರಾಜರನ್ನು ತನ್ನ ತಂತ್ರಗಳಲ್ಲಿ ಸೇರಿಸಿಕೊಳ್ಳುವ ಪ್ರಯತ್ನಮಾಡಲು ಶುರುಮಾಡಿದ.

ತನ್ನ ಜೊತೆ ೪ಲಕ್ಷ ಕಾಲಾಳುಗಳು ಮತ್ತು ೪೦ಸಾವಿರ ಆನೆಗಳನ್ನು ಹೊಂದಿದ

ಮೈಸೂರಿನ ರಾಜನ ತಂತ್ರದಿಂದ ಸಯ್ಯದಿ ರಿಹಾನನ ಮಗ ಈ ಕೋಟೆಯ ಒಳಗೆ ಓಡಿಬಂದಿದ್ದ. ಜಗದೇವನ ಪ್ರಾಂತ್ಯದ ಎಲ್ಲ ಕೋಟೆಗಳನ್ನು ಮೈಸೂರ ರಾಜ ತನ್ನ ವಶಮಾಡಿಕೊಂಡಿದ್ದ. ಇವನ್ನೆಲ್ಲ ತನ್ನ ವಶಕ್ಕೆ ತರಲು ಬಾದಶಾಹರ ದಿವಂಗತ ಸೇನಾನಿ ನವಾಬ್ ಮುಸ್ತಫಾ ಖಾನ್ ಹಿಂದೆ ಬಹಳಷ್ಟು ಪ್ರಯತ್ನ ಪಟ್ಟು ಅಮಿತ ಸಾಹಸದೊಂದಿಗೆ ವಶಪಡಿಸಿಕೊಂಡದ್ದನ್ನು ಹಿಂದೆ ನಾವು ವಿವರಿಸಿದ್ದೆವು. ಕರ್ನಾಟಕ ಮತ್ತು ಮಲೆನಾಡನ್ನು ಅಭಿವೃದ್ಧಿಗೊಳಿಸಿ ಮಹತ್ವದ ಬದಲಾವಣೆಯನ್ನು ತಂದಿದ್ದರು. ತಮ್ಮ ಎದುರು ಈ ವೈರಿಗಳು ತಮ್ಮಲ್ಲಿರುವ ಅಗಾಧ ಸೈನ್ಯದ ಬಗ್ಗೆ ಅಹಂಕಾರಪಡುತ್ತ ಶಾಂತಿಯ ಪಟ್ಟಣ ಮತ್ತು ಮನಮೋಹಕ ಹೆಣ್ಣುಗಳ ರಾಜ್ಯವೆನಿಸಲ್ಪಟ್ಟ ಮೈಸೂರನ್ನು ಹಾಳುಗೆಡವಿ ಕುಲಗೆಡಿಸಿಬಿಟ್ಟಿದ್ದ.

ನಜ್ಮ್

ಗರ್ ಅಝ್ ಫಿತ್‌ನಯೆ ಕೆ ಶಾನೇ ಝಮೀನೋ ಝಮಾನ್
ಶವದ್ ತೀರ ಚ್ಯೂಂ ಶಾಮೆ ಝುಲ್ಫೇಂ ಬುತಾನ್
ಈ ಕಾಲದ ಕುತಂತ್ರ ಹರಡುವ ಜನರು
ಸುಂದರ ಕನ್ಯೆಯರ ಕೂದಲ ರಾಶಿಯಲಿ ಅಡಗಿದರು.

ಕೆ ಕುರ್ಶೀದೆ ತೈಘೆ ಬಹರೋ ಬರ್
ಬರಾರದ್ ಸರ್ ಅಝ್ ಔಜೆ ಫತ್ಹೋ ಝಫರ್
ಬಾದಶಾಹರ ತಲವಾರಿನ ಹೊಳಪು
ವಿಜಯದ ತುದಿಯತ್ತ ತಲಪುವುದು.

ಮೈಸೂರಿನ ರಾಜ ಮತ್ತು ಸೈಯ್ಯದಿ ರಿಹಾನನ ಮಗನ ವಿರೋಧದ, ಕುತಂತ್ರ ಹೆಜ್ಜೆಗಳ ಸುದ್ದಿ ಖಾನ್ ಝಫರ್ ಕರೀಮ್‌ಗೆ ತಲಪಿದಾಗ ಸುದ್ದಿಗೆ ಅಷ್ಟಾಗಿ ಮಹತ್ವನೀಡಲಿಲ್ಲ. ಯಾಕೆಂದರೆ ಇವನ್ನೆಲ್ಲ ಎದುರಿಸುವ ತಾಕತ್ತು ಇದ್ದ ಅವನಿಗೆ ತನ್ನ ಧೈರ್ಯ ಸಾಹಸಗಳ ಬಗ್ಗೆ ಭರವಸೆಯಿತ್ತು. ಈ ಕೆಟ್ಟ ಸುದ್ದಿಯ ಬಗ್ಗೆ ತನ್ನ ಹೃದಯದಲ್ಲಿ ಒಂದಿನಿತು ವಿಷಾದಕೂಡ ಮಾಡಿಕೊಳ್ಳಲಿಲ್ಲ. ತನ್ನ ತಾಕತ್ತು ಮತ್ತು ಧೈರ್ಯದ ಬಗ್ಗೆ ಅವನಲ್ಲಿ ವಿಶ್ವಾಸವಿತ್ತು. ತನ್ನ ಎಲ್ಲ ಬಲವನ್ನು ಉಪಯೋಗಿಸಿಕೊಂಡು ಕೋಟೆಯನ್ನು ವಶಪಡಿಸಿಕೊಳ್ಳುವ ತೀರ್ಮಾನ ಮಾಡಿದ.

ಬಾದಶಾಹರ ವೀರ ಯುದ್ಧನಿಪುಣ ಸೈನಿಕರು ತಮ್ಮ ಸಂಪೂರ್ಣ ತಾಕತ್ತಿನೊಂದಿಗೆ ಕ್ರೋಧವನ್ನು ಪ್ರಕಟಿಸುತ್ತ ನಾಲ್ಕೂ ದಿಕ್ಕಿನಲ್ಲಿ ಕೋಟೆಯನ್ನು ವಶಪಡಿಸಿಕೊಳ್ಳುವುದಕ್ಕೆ ಹೋರಾಟದಲ್ಲಿ ತೊಡಗಿದರು. ಬಣ್ಣಬಣ್ಣಗಳ ಚೂಪಾದ ಬಾಣಗಳನ್ನು ತೊಟ್ಟ ಪರಿಣಿತ ಬಿಲ್ಲುಗಾರ ಸೈನಿಕರು ಪರ್ವತದ ಕೆಳಗೆ ಇದ್ದ ವೈರಿ ಸೈನಿಕರ ಮೇಲೆ ಗುರಿಯಿಟ್ಟು ದಾಳಿನಡೆಸಿದರು. ಒಂದೇ ಪೆಟ್ಟಿಗೆ ಶಿರವನ್ನು ಒಡೆದು

ಹಾಕಬಲ್ಲ ಚೂಪಾದ ಮತ್ತು ಹೊಳೆಯುವ ತಲವಾರುಗಳೊಂದಿಗೆ ವೈರಿಸೈನ್ಯದ ಒಳ ನುಗ್ಗಿ ಆಘಾತಕಾರಿ ಆಕ್ರಮಣವನ್ನು ಮಾಡಿದರೀತಿ ಹೇಗಿತ್ತೆಂದರೆ ಅಲ್ಲಿ ಸಿಡಿದ ರಕ್ತವು ಆಕಾಶದಲ್ಲಿನ ಮಿರ್‍ರೀಖ್(ಜ್ಯುಪಿಟರ್) ನಕ್ಷತ್ರದ ಮೇಲೆ ಸಿಡಿದು ಕರ್‍ರಗೆ ಕಾಣತೊಡಗಿತು. ಕಬ್ಬಿಣದ ಚೂಪು ಮೊನೆಯು ರಣರಂಗದಲ್ಲಿ ವೈರಿಗಳು ಧರಿಸಿದ ಕಬ್ಬಿಣದ ಎದೆಗವಚಗಳನ್ನು ತುಂಡರಿಸಿತ್ತು. ಹೀಗೆ ಹರಿದ ರಕ್ತದ ಕೋಡಿಯು ಹರಿಯುತ್ತ ಮೂಡಿದ ಕೆಂಪಾದ ಬುಗ್ಗೆಗಳು ಬಣ್ಣಬಣ್ಣಗಳ ವಸ್ತುಗಳ ಬಾಜಾರಿನಂತೆ ಕಾಣತೊಡಗಿದವು.

ನಜ್ಮ್

ಬಫಿರ್ಕೆ ಸರಾಂ ಬರ್ಫೆ ತೈಗ್ ದುವಿದಂ
ಚುನಾಗಶ್ತ್ ಆತಿಶ್ ಫಿಶಾಂ ದಂಬದಂ
ಸರದಾರರ ಗುಂಪುಗಳ ತಲವಾರುಗಳು ಮೂಡಿಸಿದ ಮಿಂಚಿನಲಿ
ರಣರಂಗ ತುಂಬಿ ಮುಳುಗಿತು ಸಿಡಿಮದ್ದು ಸಿಡಿವಾಗಿನ ಬೆಂಕಿ ಭುಗಿಲಲಿ.

ಕೆ ಹರ್ ಕತ್‌ರಯೆ ಖೂನ್ ಬಂಗೇ ಶರಾರ್
ಶುದ್ ಅಝ್ ಹಲ್‌ಕಯೆ ಹಾಯೆ ಝಿರಾ ಆಶ್ಕಾರ್
ಬೆಂಕಿ ಕಿಡಿಗಳಂತೆ ಸಿಡಿದು ರಕ್ತದ ಹನಿಗಳು ಹರಿದುಬಂದವು
ವೈರಿಸೈನಿಕರು ಧರಿಸಿದ ಮೈಯ ಕವಚಗಳಲ್ಲಿ ತೂತುಗಳ ಮೂಡಿದವು.

ಝು ಗೀರೆ ಕಮಾನ್ ಗ್ಯಾನಿ ನಸಬ್
ದಲೇ ರೋಝ್ ರಾ ಕರ್ದ್ ಗುರ್ಬಾಲೆ ಶಬ್
ತಮ್ಮ ಬಿಲ್ಲಿನಿಂದ ಹೊರಟ ಬಾಣಗಳಿಂದ ಚತುರ ಬಿಲ್ಲುಗಾರರು
ದಿನದ ಪ್ರಖರ ಬೆಳಕನ್ನು ರಾತ್ರಿಯ ಕತ್ತಲಾಗಿಸಿದರು.

ದರಾ ರಝ್ಮ್‌ಕೆ ಚರ್ಖ್ ಸೀಮಾಬ್ ಗೂನ್
ಚುನಾಗಶ್ತ್ ಸೈಲೆ ಖೋರ್ ಅಝ್ ಮೌಜೆ ಖೂನ್
ರಣರಂಗದಲಿ ನಡೆದ ಹೋರಾಟದಿಂದ ಹೊಳೆವ ಆಕಾಶ ಬದಲಾಯಿತು
ರಕ್ತದ ಕೋಡಿಹರಿವ ಪ್ರದೇಶವಾಗಿ ಕೆಂಬಣ್ಣಕ್ಕೆ ತಿರುಗಿತು.

ಕೆ ಅಝ್ ತಾರಕಶ್ ದೀದಯೆ ಆಫ್‌ತಾಬ್
ಬರೂಂನ್ ಜಶ್ತ್ ಚ್ಯೂಂ ಅಝ್ ಹಮೇ ಮೈ ಹುಬಾಬ್
ಸೂರ್ಯನ ಕಣ್ಣುಗಳು ಕೂಡ ಹುಡುಕ ತೊಡಗಿತು ಹೀಗೆ
ಶರಾಬಿನ ಬಟ್ಟಲಿನಿಂದ ಅಮಲು ಹರಿದುಬಂದ ಹಾಗೆ.

ಚುನಾ ಶುದ್ ಜಿಗರ್ ಬಂದ್ ನೋಕೆ ಸನಾ

ಕೆ ಅರ್ಝ್ ಜೆಸ್ಮ್ ಚ್ಯೂಂ ಖೂನ್ ರಂವಾ ಗಸ್ತ್ ಜಾನ್
ಖಡ್ಗದ ಮೊನೆಯಿಂದ ಎದೆ ಇಂತು ಹರಿಯಿತು
ದೇಹದಿಂದ ಜೀವಹರಣಮಾಡುವಷ್ಟು ರಕ್ತದ ಕೋಡಿ ಹರಿಯಿತು.

ಯದ್ಧರಂಗದಲ್ಲಿ ಎಷ್ಟೊಂದು ಭೀಕರವಾಗಿ ಕಾಳಗ ನಡೆಯಿತೆಂದರೆ ಖಡ್ಗಗಳ ಬೀಸುರಭಸಕ್ಕೆ ಹರಿದ ರಕ್ತದ ಕಾಲುವೆ ಆಕಾಶದೆತ್ತರಕೆ ಹರಿಯುತ್ತಿರುವಂತೆ ಕಂಡುಬಂತು. ವೈರಿಸೈನ್ಯ ಸಮೂಹದ ಗುಂಪುಗಳು ಕೋಟೆಯ ಗೋಡೆಗಳ ಮೇಲೆ ಸಾಲಾಗಿ ನಿಂತು ಸಿಡಿಲಿನಂತೆ ಅರ್ಭಟಿಸುವ ತೋಪುಗಳನ್ನು ಸಿಡಿಸುತ್ತ ಬೆಂಕಿ ಗುಂಡುಗಳ ಮಳೆಗೆರೆಯುತ್ತಿದ್ದರು. ಕೋಟೆಯ ಒಳಗಿನಿಂದಲೂ ಕ್ರೂರಿಗಳಾದ ವೈರಿಗಳು ಬಾದಶಾಹರ ಸೈನಿಕರ ಮೇಲೆ ಆಕ್ರಮಣಮಾಡುತ್ತಿದ್ದರು. ಆದರೆ ಹುತಾತ್ಮರಾಗಲು ತಯಾರಾಗಿದ್ದ ಬಾದಶಾಹರ ಸೈನಿಕರು ಸರಿಯಾದ ರೀತಿಯಲ್ಲಿ ಶಿಸ್ತುಬದ್ಧವಾಗಿ ಒಗ್ಗಟ್ಟಾಗಿ ನಿಂತು ಇವನ್ನು ಎದುರಿಸುತ್ತಿದ್ದರು. ಅವರ ಮೇಲೆ ಘಾತಕ ಹಲ್ಲೆಮಾಡುವ ಮೂಲಕ ತಿರುಗೇಟುನೀಡುವ ಘೋಷಣೆಗಳನ್ನು ಕೂಗುತ್ತಿದ್ದರು.

ಬಾದಶಾಹರ ಸೈನ್ಯದ ಹಲವು ಸೈನಿಕರು ಹತರಾಗಿ ಹರಿದ ರಕ್ತದ ಕಾಲುವೆಯನ್ನು ಗಣನೆಗೆ ತಂದುಕೊಳ್ಳದೆ ಕ್ಷುಲ್ಲಕವಾದ ಆಟದ ತಮಾಷೆಯೆಂದೇ ಇದನ್ನು ಪರಿಗಣಿಸಿದ ಶೂರಸೈನಿಕರು ವಿಚಲಿತರಾಗಿರಲಿಲ್ಲ. ವೈರಿ ಸಮೂಹದ ಶಿರಗಳನ್ನು ಶರಾಬಿನ ಬಟ್ಟಲಾಗಿಸಿ ಅದರಲ್ಲಿ ಹರಿವ ರಕ್ತವನ್ನು ಶರಾಬಿನಂತೆ ಹೀರಲು ಹೊರಟ ಬಾದಶಾಹರ ಸೈನಿಕರು ವೈರಿಗಳನ್ನು ವಿಧವಿಧದ ಹಣ್ಣುಗಳನ್ನು ಮಾರುವ ವ್ಯಾಪಾರಿಗಳೆಂದು ಪರಿಗಣಿಸಿದ್ದರು. ತಮಗೆ ಆದ ಎಲ್ಲ ಗಾಯ, ನೋವುಗಳನ್ನು ದೇವರು ಕರುಣಿಸಿದ ಪುಣ್ಯದ ನಿಶಾನೆಯೆಂದು ತಿಳಿದಿದ್ದರು.

ನಜ್ಮ್

ರಶ್ಕ್ ಬರ್ಝ್ಮ್ ಶಾದ್‌ಮಾನಿ ಗಶ್ತ್ ದಸ್ತೆ ಕಾರಝಾರ್
ತೀರ್ ಕರ್ದ್ ಅರ್ಝ್‌ಕಾಸಯೆ ಸರ್ಹಾ ಕಮಾನ್ ಚ ಆಶ್ಕಾರ್
ರಣರಂಗದ ವಾತಾವರಣ ನಮಗೆ ಸಂತಸದ ಮೈದಾನ, ನಮ್ಮ ಆಕಾಂಕ್ಷೆಯಾಗಿಹುದು
ಯಾಕೆಂದರೆ ನಮ್ಮ ಬಾಣಗಳಿಂದ ವೈರಿ ಶಿರಗಳ ಬುರುಡೆಗಳು ಹೊರಬರುವುದು.

ಝುಕ್ಮ್ ಹಾಯೆ ಕೊಹನಾ ಬರ್ತನೇ ಜಂಗ್ ಜುಯಾನ್ ರ ಝಿತೈಗ್
ತಾಗ ಶುದ್ ಯಕ್ಸರ್ ಚ್ಯೂಂ ಗುಲ್ಝಾರ್ ಅರ್ಝ್ ನಮೇ ಅಬ್ರೇ ಬಹಾರ್
ಖಡ್ಗಗಳ ಹಳೆಯ ಗಾಯದ ಕಲೆ ಸಿಪಾಯಿಗಳ ದೇಹದಲಿ
ಇದೆ, ತಾಜಾ ಹೂದೋಟದಲಿ ವಸಂತದಲಿ ಹನಿವ ಮಳೆಬಿಂದುಗಳಂದದಲಿ.

ಈಟಿ ಎಸೆವ ಪಟುಗಳ ದಾಳಿಯಿಂದ ಬಾದಶಾಹರ ವೀರ ಯೋಧರ ದೇಹದಿಂದ ಹರಿವ ರಕ್ತದ ದೃಶ್ಯದ ಚಿತ್ರವನ್ನು ಮಾಡಬಯಸುವ ಕಲಾವಿದ ಮುಷ್ಕ್ ಸುಗಂಧದಲ್ಲಿ ಅದ್ದಿದ ಕುಂಚದಿಂದ ಬಣ್ಣ ಹಾಕಿ ಚಿತ್ರ ಮೂಡಿಸಬೇಕಾಗಬಹುದು.

ಎರಡೂ ಕಡೆಗಳಿಂದ ಈ ರೀತಿಯ ಭೀಕರ ಮಾರಾಮಾರಿ ಎಷ್ಟು ದೀರ್ಘ ಸಮಯದ ತನಕ ನಡೆದರೂ ಕೋಟೆಯು ವಶವಾಗಲಿಲ್ಲ. ಈ ಸಂದರ್ಭದಲ್ಲಿ ಖಾನ್ ಜಫರ್ ಕರೀಮ್ ತನ್ನ ಸೈನ್ಯಕ್ಕೆ ಆಜ್ಞೆನೀಡಿ ಕೋಟೆಯ ತಳಪಾಯದಿಂದ ಪರ್ವತದ ತುದಿಯ ತನಕ ಸುರಂಗ ತೋಡಲು ತೊಡಗುವಂತೆ ಸೂಚಿಸಿದ. ಕೂಡಲೇ ಸುರಂಗ ತೋಡುವ ಪರಿಣಿತರ ತಂಡ ಸುರಂಗದ ಕೆಲಸ ಶುರುಮಾಡಿದರು. ಸುರಂಗ ತಳಪಾಯದ ತನಕ ತೋಡಿದಾಗ ಒಂದು ಡಬ್ಬಿಯೊಳಗೆ ಸಿಡಿಮದ್ದನ್ನು ತುಂಬಿ ಸ್ಫೋಟಿಸಲು ಅಣಿಮಾಡಿ ಕೋಟೆ ನಡುಗುವಂತೆ ಮಾಡುವ ಯೋಜನೆಯನ್ನು ತಯಾರಿಸಿದರು. ಸುರಂಗದ ಉದ್ದಗಲ ನೋಡುವುದಕ್ಕೆ ಮಂತ್ರಿಯಾಗಿದ್ದ ಫತೇ ಖಾನ್ ಖಾದಿರಿಯನ್ನು ನೇಮಿಸಲಾಯಿತು. ಅವನು ತನ್ನ ಜನರನ್ನು ಕರೆದು ಅಳೆದು ಮಾಪನ ಮಾಡಿಸಿದ. ಇದರ ಉದ್ದೇಶವೆಂದರೆ ಬಲಿಷ್ಠವಾದ ಈ ಕೋಟೆಯ ತಳಪಾಯವನ್ನು ನಾಲ್ಕೂ ನಿಟ್ಟಿನಲ್ಲಿ ಒಂದೇ ಸವನೆ ಒಡೆಯುವುದಾಗಿತ್ತು. ಫತೇ ಖಾನ್ ಖಾದಿರಿ ಮತ್ತು ಈ ಕೆಲಸದಲ್ಲಿ ತಮ್ಮ ಜೀವವನ್ನು ಪಣವಾಗಿಡಲು ತಯಾರಾಗಿದ್ದ ಅವನ ಶೂರ ಬಲಿಷ್ಠ ಸಹಚರರು ಸತ್ತರೂ ಸ್ವರ್ಗದಲ್ಲಿ ಆರಾಮವಾಗಿರುವ ಕನಸುಕಾಣುತ್ತ ಈ ಕಾರ್ಯದಲ್ಲಿ ತೊಡಗಿದರು. ಈ ಬಲಿಷ್ಠ ಕಾರ್ಯಾಚರಣೆಯ ವಿವರಗಳನ್ನು ಕೇಳಿದ ಸೇನಾಧಿಪತಿಗೆ ತನ್ನ ಶೂರ ಸೈನಿಕರ ಜೀವಕ್ಕಾಗಲಿರುವ ಅಪಾಯವನ್ನು ನೆನೆದು ಚಿಂತಿತನಾದ. ತನ್ನ ಕಡೆಯಿಂದ ಈ ಸೈನಿಕರಿಗೆ ಹೆಚ್ಚುವರಿ ಸಹಾಯಕ್ಕಾಗಿ ಬೆಂಬಲಿಗರನ್ನು ಕಳುಹಿಸುವ ಏರ್ಪಾಡು ಮಾಡಿ ಅವರ ಆತ್ಮಸ್ಥೈರ್ಯವನ್ನು ಹೆಚ್ಚಿಸಿದ. ಬಾದಶಾಹರು ಕೂಡ ತನ್ನ ಕೃಪೆಯನ್ನು ತೋರಿ ಒಂದು ಸಾವಿರ ಶೂರ ಬುದ್ಧಿವಂತ ಸೈನಿಕರನ್ನು ಅವರ ಸಹಾಯಕ್ಕೆ ನೀಡಿದರು. ಹೀಗೆ ಕೋಟೆಯನ್ನು ವಶಪಡಿಸಿಕೊಳ್ಳುವ ಕಾರ್ಯಾಚರಣೆಯು ಶುರುವಾಯಿತು.

ಖಾನ್ ನುಸ್ರತ್ ಕರೀಮನ ಆಜ್ಞೆಯಂತೆ ಸುರಂಗದ ಒಳಗೆ ಸೈನಿಕರು ನುಗ್ಗಿದರು. ಕೆಲಸವನ್ನು ಸಂಪೂರ್ಣಗೊಳಿಸಿ ಸುರಂಗದೊಳಗೆ ಸಿಡಿಮದ್ದುಗಳನ್ನು ತುಂಬಿ ಪರ್ವತದ ಮೇಲೆ ಏರಿ ಸುರಕ್ಷಿತ ಪ್ರದೇಶದಲ್ಲಿ ನಿಂತು ಬೆಂಕಿಕೊಟ್ಟು ಸಿಡಿಸಿದರು. ನೆಲದೊಳಗಿನ ಸಿಡಿಮದ್ದು ಒಡೆದ ಆರ್ಭಟಕ್ಕೆ ಬಲಿಷ್ಠವಾದ ಕೋಟೆಯ ಬುರುಜು ಕಮಾನುಗಳು ಒಡೆದು ಚೂರಾಗಿ ವೈರಿಗಳ ತಲೆಗಳ ಮೇಲೆ ಉರುಳಿದವು. ಈ ವೈರಿಗಳು ಖಜಾನೆಯ ಆಸೆಯಲ್ಲಿ ಹೋದ ಖಾರೂನನು ಭೂಮಿಯೊಳಗೆ ಹುಗಿದು ಹೋದಂತೆ ಕೋಟೆಯ ಅವಶೇಷಗಳಡಿಯಲ್ಲಿ ಸಿಲುಕಿ ಭೂಮಿಯೊಳಗೆ ಹುಗಿದು ಹೋದರು. ಹೀಗೆ ಮೆಲ್ಲಮೆಲ್ಲಗೆ ಪರ್ವತದ ಹಾದಿಯು ಸೈನಿಕರಿಗೆ ಸುಗಮವಾಯಿತು. ಈಗಂತೂ ಬಾದಶಾಹರ

ಸೈನಿಕರ ಆಕ್ರಮಣದಿಂದ ಭಯಭೀತರಾಗಿ ವೈರಿಗಳು ಹೊರಬಂದರು. ಸೈನಿಕರು ವೈರಿಗಳನ್ನು ಸದೆಬಡಿಯತೊಡಗಿದರು. ಇಂತಹ ಸಂದರ್ಭದಲ್ಲಿ ಥಟ್ಟನೆ ತುಂಬ ಭೀಕರವಾದ ಬರಗಾಲ ಬಂದಿತು. ಜನರು ಬಿಸಿಲ ಬೇಗೆಯಿಂದ ಮತ್ತು ಹಸಿವಿನಿಂದ ವಿಲವಿಲನೆ ಒದ್ದಾಡತೊಡಗಿದರು. ನೆಲವೆಲ್ಲ ಒಣಗಿ ಬಿರುಕುಬಿಟ್ಟವು. ಬೆಳೆಗಳೆಲ್ಲ ಒಣಗಿ ಉಣಲು ದವಸಧಾನ್ಯಗಳಿಲ್ಲದೆ ತಮ್ಮ ಕೈಗಳನ್ನು ತಾವೇ ಕಡಿಯತೊಡಗಿದರು, ಕೆರೆ ಬಾವಿಗಳೆಲ್ಲ ಬತ್ತಿ ಕುಡಿಯಲು ನೀರಿಲ್ಲದೆ ಉಗುಳಬೇಕಾದ ಉಗುಳನ್ನು ಬಾಯೊಳಗೆ ಶೇಖರಿಸಿಕೊಂಡು ನೀರಿನಂತೆ ನುಂಗತೊಡಗಿದರು.

ಎಷ್ಟರವರೆಗೆ ಈ ಪರಿಸ್ಥಿತಿ ತಲಪಿತೆಂದರೆ ಆಹಾರದ ಒಂದೊಂದು ಧಾನ್ಯದ ಕಾಳಿಗಾಗಿ ತಮ್ಮ ಮಾನವನ್ನು ಮಾರಾಟಮಾಡುವಂತಹ ಅನಿವಾರ್ಯ ದಾರುಣ ಪರಿಸ್ಥಿತಿ ಬಂದೊದಗಿತು. ಈ ಭೀಕರ ಬರಗಾಲ ಮತ್ತು ಯುದ್ಧದ ಪರಿಸ್ಥಿತಿ ಬಹುಕಾಲ ಮುಂದುವರಿದುದರಿಂದ ಸಂಕಷ್ಟಗಳಿಗೆ ತುತ್ತಾಗಿ ಹಸಿವು ನೀರಡಿಕೆಯಿಂದ ತಾಳಲಾರದೆ ತಾಳ್ಮೆಗೆಟ್ಟ ವೈರಿಗಳು ಹತಾಶ ಸ್ಥಿತಿಯಲ್ಲಿ ಶರಣಾಗತರಾದರು. ಕೋಟೆಯಲ್ಲಿ ಬಹುಕಾಲ ಬಂದಿಯಂತಾದ ರಾಜ ಸಂಕಷ್ಟಗಳನ್ನು ಎದುರಿಸಲಾರದೆ ಅಧೀರನಾಗಿದ್ದ. ಭಯಭೀತನಾಗಿ ತನ್ನ ದರ್ಬಾರಿನ ಜನಗಳನ್ನು ಕರೆದು ತುರ್ತಾಗಿ ಸಭೆಕರೆದು ಸಮಾಲೋಚನೆ ನಡೆಸಿದ. ಎಲ್ಲರ ಅಭಿಪ್ರಾಯವೂ ಯುದ್ಧನಿಲ್ಲಿಸಿ ಶರಣಾಗತರಾಗುವುದರಲ್ಲಿ ಒಳಿತಿದೆಯೆಂದಾಗಿತ್ತು. ಬಾದಶಾಹರ ಸೇನಾಧಿಪತಿ ಖಾನ್ ಜಫರ್ ತುಮಾನರ ಬಳಿ ವಿನೀತನಾಗಿ ರಾಜ ತಪ್ಪೊಪ್ಪಿಕೊಂಡು ಕ್ಷಮಾಪಣೆ ಬೇಡಿಕೊಂಡ. ತಾನು ಪಿಲುಗೊಂಡ ಕೋಟೆಯನ್ನು ಬಾದಶಾಹರ ಸುಪರ್ದಿಗೆ ಒಪ್ಪಿಸುವುದಾಗಿ ಹೇಳಿದ. ಹೀಗೆ ರಾಜ ತಲೆತಗ್ಗಿಸಿ ಬಾದಶಾಹರ ಸೇನಾಧಿಪತಿ ಖಾನ್ ತುಮಾನರಿಗೆ ಕೋಟೆಯನ್ನು ಒಪ್ಪಿಸಿದ. ಈ ಕೋಟೆಯ ವಿಜಯದ ನಂತರ ವಿಶ್ವದಾದ್ಯಂತ ಜಯಘೋಷದೊಂದಿಗೆ ಸರ್ವ ಬಾದಶಾಹರುಗಳು ಬಹುಪರಾಕು ಹಾಕಿ ಬಾದಶಾಹರನ್ನು ಅಭಿನಂದಿಸಿದರು. ಅಲ್ಲಾಹನ ಈ ಕೃಪೆಯನ್ನು ಅನುಭವಿಸಿ ನೋಡಿದ ಜನರು ಆಶ್ಚರ್ಯಚಕಿತರಾದರು.

ಈ ಯುದ್ಧದಲ್ಲಿ ಪಡೆದ ಪ್ರಚಂಡ ವಿಜಯ, ಕೋಟೆಯ ಜಯ, ಇಸ್ಲಾಮಿನ ಧರ್ಮವಿಜಯದ ಸಂತಸ ಸಂದರ್ಭದಲ್ಲಿ ಹಜ್ರತ್ ಬಾದಶಾಹರು ಅಲ್ಲಾಹನಿಗೆ ಧನ್ಯವಾದ ಸಮರ್ಪಿಸಿದರು. ಈ ಪಿಲುಗೊಂಡ ಕೋಟೆಗೆ 'ತಖ್ತೆಮುಬಾರಕ್' ಎಂಬ ಹೆಸರಿಟ್ಟರು.

ಶೇರ್

ತಖ್ತೊ ಬಖ್ತ್ ದೌಲತೊ ಇಖ್ಬಾಲ್ ಯಾರಬ್ಬೆ ಜಾವಿದಾನ್
ಆಲಮೆ ಆರಾ ಅರ್ಘು ಶಹನ್‌ಶಾಹೆ ಫಲಕ್ ದರ್ಗಾಹಬಾದ್

ಓ ದೇವರೇ! ಸಿಂಹಾಸನ, ಪುಣ್ಯ, ಗೌರವಗಳೆಲ್ಲ ಒದಗುವುದು
ಇವೆಲ್ಲ ಆಕಾಶದ ಒಡೆಯನಿಂದಾಗಿ ಎಂಬುದು ಜಗದಲಿ ಜಾಹೀರಾಗಿರುವುದು.

ತಾಕೆ ಬಾಶದ್ ದರ್ ಜಹಾಂ ರಸ್ಮೆ ಮುಬಾರಕ್ ಬಾದೇ ಫತಾಹ್
ಖುವ್ವತೇ ದೀನೇ ಮುಹಮ್ಮದ್ ಅಝ್ ಮುಹಮ್ಮದ್ ಶಾಹಬಾದ್
ವಿಶ್ವದಲಿ ವಿಜಯದ ಶುಭಾಶಯಗಳ ಘೋಷಗಳು ಶಾಶ್ವತವಾಗಿರಲಿ
ಪೈಗಂಬರರ ಧರ್ಮದ ಘನತೆ ಮುಹಮ್ಮದ್ ಷಾ ಬಾದಶಾಹನಿಂದಾಗಿ ಹೆಚ್ಚಲಿ.

(ಇಲ್ಲಿ ಮುಂದಿನ ಸಾಲುಗಳು ಖಾಲಿಯಾಗಿವೆಯೆಂದು ಬರೆಯಲಾಗಿದೆ)

ಎಲ್ಲ ವಿಜಯಗಳೂ ಬಾದಶಾಹರಂತಹ ಪುಣ್ಯಶಾಲಿಗಳಿಗೆ ಪ್ರಾಪ್ತಯಾಗುವುದು ಅಲ್ಲಾಹನಿಂದ. ಇದು ಅವರಿಗೆ ಮತ್ತು ಅವರ ಸಹಚರರಿಗೆ ಒದಗಿದ ಅವನ ಕರುಣಾಮಯ ಕೃಪೆಯ ಬೆಳಕಾಗಿದೆ. ಇದರ ಮೂಲಕ ಅಲ್ಲಾಹನ ಆಶಿರ್ವಾದವು ದೊರೆಯುತ್ತದೆ. ಅಲ್ಲಾಹನ ಈ ಬೆಳಕು ಪೈಗಂಬರರಾದ ಮುಹಮ್ಮದರ ದುವಾ ಬೆಂಬಲದೊಂದಿಗೆ ಪ್ರಾಪ್ತವಾಗುವುದು ಸಾಧ್ಯ. ಇದು ಹಜ್ರತ್ ಬಾದಶಾಹರಿಗೆ ಮುಹಮ್ಮದೀ ನೆರಳಲ್ಲಿ ದೊರೆತಿದೆ.

ಶೇರ್

ಖಾಖಾನೆ ದಖನ್ ತಾಜ್‌ವರೇ ಅರ್ಷೆ ಸರೀರ್
ಗಝ್ ಮದ್ದತೇ ವೂ ಶವದ್ ಶುಕನ್ ಆಲಂಗೀರ್
ದಕ್ಷಿಣದ ಬಾದಶಾಹ, ರಾಜಗದ್ದುಗೆಯ ಕಿರೀಟಧಾರಿಯಾಗಿಹರು
ಅವರ ಹೊಗಳಿ ಕೊಂಡಾಡುವರು ಜಗತ್ತಿನಾದ್ಯಂತ ಸರ್ವರು.

ಹರ್‌ಸಫ ಶವದ್ ಫೈರತೇ ನೇಹ್ ದಫ್ತರೇ ಚರ್ಖ್
ಯಕ್ ಶಮ್ಮ ಜೆಲುತ್ಫಶ್ ಅಝ್ ನುಮಾಯಮ್ ತೆಹರೀರ್
ಒಂಭತ್ತು ಆಕಾಶದ ಕೊಟಡಿಯಲಿ ಅವರ ತಾರೀಫುಗಳ ದಾಖಲೆ ಬರೆಯುವುದು
ಅವರ ಪುಣ್ಯಕಾರ್ಯಗಳ ಒಂದಿನಿತು ವಿವರಗಳನ್ನು ಕೂಡ ನಮೂದಿಸಲು ಸಾಧ್ಯವಾಗದು.

■

*

ಅಧ್ಯಾಯ - ೨೩

ಮೈಸೂರು ವಿಜಯ

ಬಾದಶಾಹರ ದಿನನಿತ್ಯದ ಚಟುವಟಿಕೆಗಳು ಮತ್ತು ಅಭ್ಯಾಸಗಳ ಬಗ್ಗೆ ವಿವರಗಳನ್ನು ನೀಡುವುದಾದರೆ ಅವರು ದೀಪಗಳ ಬೆಳಕಿನಂತೆ ಜಗತ್ತನ್ನು ಬೆಳಗುವವರಾಗಿದ್ದಾರೆನ್ನ ಬಹುದು. ಅವರ ಯೋಚನೆಗಳು ಮತ್ತು ವಿಚಾರಗಳು ಶುದ್ಧ ಮನಸ್ಸಿನ ನ್ಯಾಯಯುತ ಜಗತ್ತಿನಲ್ಲಿ ವಾಸಿಸುವ ದೈವೀ ಪುರಷನಂತಿದೆ. ಅವರೊಂದಿಗೆ ಪ್ರೀತಿ ವಿಶ್ವಾಸ ತೋರುವವರು ಅವರೊಂದು ಸೂರ್ಯನ ಬೆಳಕಿನಂತೆ ಬೆಳಕು ನೀಡುವ ಪ್ರಭೆಯಂತೆ ಎಂದು ನಂಬುತ್ತಾರೆ. ಅವರ ಬಲಿಷ್ಠ ಭುಜಬಲದ ತಾಕತ್ತು ಹೇಗಿತ್ತೆಂದರೆ ಅವರ ಮುಷ್ಠಿಯನ್ನು ಬಿಡಿಸಿ ಸೋಲಿಸಲು ದೊಡ್ಡ ರುಸ್ತುಂಗಳಿಗೂ ಸಾಧ್ಯವಾಗದು. ಅವರ ದಾನಧರ್ಮದ ಕಾರ್ಯಗಳ ಫಲಸ್ವರೂಪವಾಗಿರುವ ಆಭರಣಗಳು ಓಲೆಯನ್ನು ಧರಿಸಿದವರು ಮುಂಜಾವಿನ ಸೂರ್ಯನ ಕಿರಣಗಳ ತಂಪನ್ನು ಅನುಭವಿಸುತ್ತಿರುವರೆಂದೇ ಭಾವಿಸುವರು. ಅವರ ವಿಜಯಸರಣಿಗಳ ಮಾಲೆಯ ಉದ್ದಕ್ಕೆ ನೇತಾಡಿಸಿದರೆ ಆಕಾಶದಲ್ಲಿನ ಔಜ್ ನಕ್ಷತ್ರ ತಲಪುವಷ್ಟು ನೀಳವಾಗುತ್ತವೆ. ಅವರ ಖಡ್ಗದ ತಾಕತ್ತು ಸಾವು ಬದುಕುಗಳ ನಿರ್ಣಯವು ಕುಲ್ಝುಮ್ ಸಾಗರದ ಆಳದಂತಿದೆ. ಈ ಎಲ್ಲ ವಿವರಗಳ ಸಾರಾಂಶವೇನೆಂದರೆ ಸೃಷ್ಟಿಕರ್ತ ಅಲ್ಲಾಹನ ಕೃಪೆ ಮತ್ತು ಬಾದಶಾಹರ ನಸೀಬು, ಪುಣ್ಯಕಾರ್ಯಗಳಿಂದಾಗಿ ಪಿಲುಗುಂಡ ಕೋಟೆಯಂತಹ ಬಲಿಷ್ಠ ಕೋಟೆಯನ್ನು ಖಾನ್ ನುಸ್ರತ್ ಕರೀಮ್ ಮುಝುಫ್ಫರುದ್ದೀನ್ ಖಾನ್ ಮುಹಮ್ಮದ್‌ನ ನೇತೃತ್ವದಲ್ಲಿ ಜಯಿಸಲು ಸಾಧ್ಯವಾಯಿತು. ಅಲ್ಲದೆ ಅವರಿಗೆ ಹಜ್ರತ್ ಬಾದಶಾಹರನ್ನು ನೋಡಿ ಆನಂದಿಸುವ ಇಚ್ಛೆ ಮನವೆಂಬ ಕನ್ನಡಿಯಲ್ಲಿ ಭಾಪಿತವಾಗಿತ್ತು.

ಬಾದಶಾಹರ ಆಸ್ಥಾನದ ವೈಭವಪೂರ್ಣ ದೃಶ್ಯವನ್ನು ನೋಡುವುದೆಂದರೆ ದೇವರು

ಪ್ರತ್ಯಕ್ಷವಾಗುವ ಅನುಭವದಂತಿರುತ್ತದೆ. ಸೇನಾಧಿಪತಿ ಖಾನ್ ನುಇಸ್ರತ್ ಕರೀಮ್ ಖಾನ್ ಒಮ್ಮೊಮ್ಮೆ ಯೋಚಿಸುತ್ತಾರೇನೆಂದರೆ ಶಾಹಿ ಕೆಲಸಕಾರ್ಯಗಳನ್ನು ಬಿಟ್ಟು ದೂರವಾಗಿದ್ದು ಅಲ್ಲಾಹನ ಕೃಪಾಕಟಾಕ್ಷಕ್ಕಾಗಿ ಹಾತೊರೆಯುವ ಫಕೀರನಾಗುವ ಆಸೆಮೂಡುತ್ತದೆ. ಹರಿತ ತಲವಾರಿನ ಧಾರೆಯ ಆಸರೆಯಿಂದ ಬಿಡುಗಡೆಯನ್ನು ಬಯಸುತ್ತಾರೆ. ರಾಜ್ಯದ ಮತ್ತು ಸುಲ್ತಾನರ ಆಳ್ವಿಕೆಯ ಕೆಲಸಕಾರ್ಯಗಳನ್ನು ತೊರೆದು ಸ್ವತಂತ್ರವಾಗುವ ಇಚ್ಛೆಯಾಗುತ್ತದೆ. ತನ್ನ ಪ್ರೇಯಸಿಯಂತೆ ತನ್ನ ಬಳಿಯಲ್ಲೇ ಇರುವ ವೈಭವಪೂರ್ಣ ಶಾಹಿ ಉಡುಗೊರೆಯಾಗಿ ಪಡೆದ ತಲವಾರನ್ನು ದೂರವಿಡುವ ಇಚ್ಛೆ ಮೂಡುತ್ತದೆ. ತುಂಡಾದ ಬಿಲ್ಲಿನಂತೆ ಒಂದು ಮೂಲೆಯಲ್ಲಿ ಬಿದ್ದಿರುವ ಆಸೆಮೂಡುತ್ತದೆ. ಆದರೆ ಈ ರೀತಿಯ ವೈರಾಗ್ಯಪೂರ್ಣ ಆಲೋಚನೆಗಳಿಂದ ಬಾದಶಾಹರು ತುಂಬ ಸಂದಿಗ್ಧದಲ್ಲಿ ಬಿದ್ದುಬಿಡುತ್ತಾರೆ. ಯಾವುದಾದರೂ ವೈರಿಗಳು ಸಿಂಹಾಸನದ ಮೇಲೆ ಕೂತರೆ, ವಿರೋಧಿಗಳು ಸಂದರ್ಭನೋಡಿ ಕುತಂತ್ರಗಳನ್ನು ಮಾಡಿದರೆ ಎಂಬ ಯೋಚನೆಗಳು ಮನದಲ್ಲಿ ಮೂಡಿದಾಗ ಬಾದಶಾಹರ ಸನಿಹ ಇರುವ ಅವಕಾಶವನ್ನು ಕಳೆದುಕೊಳ್ಳುವ ಭಯವೂ ಅವರಿಸಿತು. ಒಂದು ಕ್ಷಣವೂ ಬಾದಶಾಹರ ಸಾನಿಧ್ಯದಿಂದ ದೂರವಾಗುವುದನ್ನು ನಾನು ಸಹಿಸಿಕೊಳ್ಳಲಾರೆನೆಂಬ ಆತಂಕವೂ ಕೂಡ ಸೇನಾಧಿಪತಿಯ ಮನಸ್ಸನ್ನು ಆವರಿಸುತ್ತಿರಲು ವೈರಾಗ್ಯದ ಆಲೋಚನೆಯನ್ನು ದೂರಮಾಡಿಕೊಳ್ಳುತ್ತಿದ್ದರು. ಆದರೆ ಇಂತಹ ಯೋಚನೆಗಳು ಆಗಾಗ ಅವರ ಮನಸ್ಸಿನಲ್ಲಿ ಕತ್ತಲೆಬೆಳಕಿನ ಆಟದಂತೆ ಮೂಡಿ ಮಾಯವಾಗುತ್ತಲೇ ಇತ್ತು.

ಆದರೆ ಸೇನಾಪತಿಯ ಹೃದಯ ಲೌಕಿಕ ವ್ಯವಹಾರಗಳು, ಆಸೆ ಅಮಿಷಗಳಿಂದ ಬೇಸರಿಸಿಹೋಗಿತ್ತು. ಒಂದು ದಿನ ಅವರು ಒಂದು ಅರ್ಜಿಪತ್ರವನ್ನು ತುಂಬ ವಿನೀತನಾಗಿ ಬಾದಶಾಹರ ಆಸ್ಥಾನದಲ್ಲಿರುವ(ಲೇಖಕ) ಮಹಮ್ಮದ್ ಜಹೂರರ ಸಮ್ಮುಖಕ್ಕೆ ತಲಪಿಸಿದರು. ಈ ಅರ್ಜಿಪತ್ರದಲ್ಲಿ "ನಾನು ಅತ್ಯಂತ ಸಣ್ಣ ಸಾಮಾನ್ಯ ಮನುಷ್ಯನಾಗಿ ನಿಮ್ಮ ಪ್ರೀತಿಗೆ ಕೃತಜ್ಞತೆಯನ್ನು ಸಲ್ಲಿಸುತ್ತೇನೆ. ನನ್ನ ಸಂಪೂರ್ಣ ಆಯು ನಿಮ್ಮ ಸೇವೆಯಲ್ಲಿ ಸುಖವಾಗಿ ಕಳೆದೆ. ಇದು ನನಗೆ ಎಂದೂ ಬಯಸದೆ ದೊರೆತ ಭಾಗ್ಯವೆಂದು ಪರಿಗಣಿಸಿದ್ದೇನೆ. ನಿಮ್ಮಿಂದ ನಾನು ನಿಷ್ಠಾವಂತ ಪ್ರಮುಖ ಸೇನಾಧಿಪತಿಯ ಹುದ್ದೆಯನ್ನು ಕಾಣಿಕೆಯ ರೂಪದಲ್ಲಿ ಪಡೆದೆ. ಸತತವೂ ತಮ್ಮ ಸರಕಾರದೊಂದಿ ಸಂಪರ್ಕವಿಟ್ಟುಕೊಂಡಿದ್ದೆ. ಆದರೆ ನಾನು ವಿನಯ ಪೂರ್ವಕವಾಗಿ, ಪ್ರೀತಿಯಿಂದ ಮತ್ತು ಪ್ರಾಮಾಣಿಕತೆಯೊಂದಿಗೆ ವಿನಂತಿಸಿಕೊಳ್ಳುವುದೇನೆಂದರೆ ಸೇನಾಧಿಪತಿಯ ಪದವನ್ನು ತಮ್ಮ ಅತ್ಯಂತ ಭರವಸೆಯ ಯಾರಿಗಾದರೂ ಒಪ್ಪಿಸಿ ನನ್ನನ್ನು, ಈ ಚಿಕ್ಕ ಸೇವಕ, ಸಾಮಾನ್ಯ ವ್ಯಕ್ತಿಯನ್ನು ದಯವಿಟ್ಟು ತಮ್ಮ ಸೇವೆಯಿಂದ ಬರಖಾಸ್ತುಗೊಳಿಸಿ ವಿಮುಕ್ತನನ್ನಾಗಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ನಾನು ಬರೇ ನಿಮ್ಮ ಸಾನಿಧ್ಯ

ಮತ್ತು ಸ್ನೇಹವನ್ನು ಮಾತ್ರ ಬಯಸುತ್ತೇನೆ. ನನ್ನ ಉಳಿದಿರುವ ಆಯುಷ್ಯ ಪೂರ್ಣ ನಿಮ್ಮ ಕೃಪಾಕಟಾಕ್ಷದಡಿಯಲ್ಲಿ ಬದುಕಲು ಬಯಸುತ್ತಿರುತ್ತೇನೆ. ನಿಮ್ಮ ಸೇವೆಗೆ ಯಾವತ್ತಾದರೂ ನನ್ನ ಅಗತ್ಯವಿದ್ದಲ್ಲಿ ಕರೆದರೆ ಕೂಡಲೇ ಹಾಜರಾಗಲು ತಯಾರಾಗಿರುತ್ತೇನೆ" ಎಂದು ಬರೆಯಲಾಗಿತ್ತು.

ಈ ಅರ್ಜಿಯ ವಿವರಗಳು ಬಾದಶಾಹರ ಸಮ್ಮುಖದಲ್ಲಿ ಓದಿ ಹೇಳಿದಾಗ ಅವರು ತಮ್ಮ ರಾಜಗಾಂಭೀರ್ಯದಿಂದ ಸ್ವೀಕರಿಸಿ ಅರ್ಥೈಸಿಕೊಂಡರೂ, ಅದರ ಹೃದಯಕ್ಕೆ ಸನಿಹವಾದ ಮುಗ್ಧ ಒಕ್ಕಣೆಯಿಂದ ಆಕರ್ಷಿತರಾಗಿ ಮತ್ತೊಮ್ಮೆ ಓದಿಸಿ ಕೇಳಿಸಿಕೊಂಡರು. ತಮ್ಮ ಅತ್ಯಂತ ಆಪ್ತರಿಂದ ಸಲಹೆ ಕೇಳಿದರು. ಇವರ ಪೈಕಿ ಆಧ್ಯಾತ್ಮ ಮತ್ತು ಪ್ರಾಮಾಣಿಕತೆಯ ವ್ಯಕ್ತಿತ್ವವುಳ್ಳ 'ಸಖೈನುಲ್ ಮಲಿಕ್' ಎಂಬ ಬಿರುದಾಂಕಿತ, ಲೌಕಿಕ ಹಾಗೂ ಪಾರಮಾರ್ಥಿಕ ಜ್ಞಾನದಲ್ಲಿ ಉಚ್ಚಕೋಟಿಯ ಪಂಡಿತರೆಂದು ಪರಿಗಣಿಸಲ್ಪಟ್ಟ, ಸಯ್ಯದ್ ಅಲಿ ಮುಹಮ್ಮದ್ ಹುಸ್ಸೈನಿಯವರ ಪರಂಪರೆಯ ತಮ್ಮ ನಡತೆ, ಘನತೆ ಹಿರಿತನದಲ್ಲಿ ಆಧ್ಯಾತ್ಮಕ್ಕೆ ಸಂಬಂಧಿಸಿದ ಗ್ರಂಥಗಳನ್ನು ಬರೆಯುವುದರಲ್ಲಿ ಪ್ರಮುಖರೆನಿಸಲ್ಪಟ್ಟ ಸೈಯ್ಯದ್ ನೂರುಲ್ಲಾರು ಕೂಡ ಒಬ್ಬರಾಗಿದ್ದರು.

ಖಾನ್ ನುಸ್ರತ್ ಮುಹಮ್ಮದ್ ಖಾನ್‌ರ ಈ ಪತ್ರಕ್ಕೆ ಅವರಿಗೆ ಸಮಾಧಾನವಾಗುವ ರೀತಿಯಲ್ಲಿ ಏನೆಂದು ಉತ್ತರಿಸಲಿ ಎಂದು ಬಾದಶಾಹರು ಇವರುಗಳ ಸಲಹೆಯನ್ನು ಯಾಚಿಸಿದರು. ಯಾಕೆಂದರೆ ಅವರು ಬಾದಶಾಹರ ಅತ್ಯಂತ ಆಪ್ತ ಮತ್ತು ಪ್ರಾಮಾಣಿಕ ಸೇವಕರಲ್ಲಿ ಒಬ್ಬರಾಗಿದ್ದರು. ಮಾತ್ರವಲ್ಲ, ಬಾದಶಾಹರ ಸಾನ್ನಿಧ್ಯವನ್ನು ಯಾವಾಗಲೂ ಬಯಸುವವರಾಗಿದ್ದಾರೆ. ಆದುದರಿಂದ ತಾವು ಸ್ವತಹ ಅವರ ಬಳಿಗೆ ಹೋಗಿ ಅವರನ್ನು ಕಾಣಬೇಕೆಂಬ ಸಲಹೆಯನ್ನು ಎಲ್ಲರೂ ಒಮ್ಮತದಿಂದ ನೀಡಿದರು. ಬಾದಶಾಹರು ಅಪಾಯಕಾರಿಯಲ್ಲದ ಹತ್ತಿರದ ಬಳಸು ಹಾದಿಯಲ್ಲಿ ಪ್ರಯಾಣಿಸಿ ಖಾನ್ ನುಸ್ರತ್ ಖಾನ್‌ರನ್ನು ಭೇಟಿಯಾದರು. ತಮ್ಮ ಎಂದಿನ ಚಾತುರ್ಯ, ಬುದ್ಧಿವಂತಿಕೆಯಿಂದ ಅವರನ್ನು ಸಮಾಧಾನಪಡಿಸಿ ಸೇನಾಧಿಪತಿಯಾಗಿ ಹಿಂದಿನಂತೆಯೇ ಇರಲು ಒಪ್ಪಿಸಿದರು. ಅವರಿಗೆ ರಾಜ ಮರ್ಯಾದೆಯ ಕಾಣಿಕೆ ಉಡುಗೊರೆನೀಡಿ ಸೊಂಟಕ್ಕೆ 'ಶಂಶೀರೆ ಮುರಸ್ಸಾ' ಯಾ ಮಾಣಿಕ್ಯಗಳನ್ನು ಹಚ್ಚಲಾದ ಒರೆಯ ಕತ್ತಿಯನ್ನು ಸಯ್ಯದ್ ನೂರುದ್ದೀನರ ಹಸ್ತದಿಂದ ಕಾಣಿಕೆಯಾಗಿ ನೀಡಿದರು. 'ನುಸ್ರತ್ ಉನ್ವಾನ್' ಎಂಬ ಬಿರುದನ್ನೂ ನೀಡಿ ಗೌರವಿಸಿದರು.

'ಸರ್ ಖೈರುಲ್ ಮುಮಾಲಿಕ್'(ಸರ್ವ ದೇಶಗಳ ಸರದಾರ) ಬಿರುದಾಂಕಿತ ಸಯ್ಯದ್ ನೂರುಲ್ಲಾರು ಅಲ್ಲಾಹನ ಪರಿಚಿತ ಭಕ್ತರಾಗಿದ್ದು (ಸಯ್ಯದೇ ಮಾರಿಫತ್) ಮತ್ತು ಅಲ್ಲಾಹ ಕೃಪಾಕಟಾಕ್ಷದ ಸ್ವರೂಪರಾಗಿದ್ದರು. ಅವರು ದೈವೀಪುರುಷರೂ, ಮುಹಮ್ಮದ್ ಪೈಗಂಬರರ ನಡೆದ ಹಾದಿಯಲ್ಲಿ ಸುಶಿಕ್ಷಿತರಾಗಿ ಬೆಳೆದವರಾಗಿದ್ದರು.

ಸಯ್ಯದ್ ಅಥವಾ ಪೈಗಂಬರರ ವಂಶ ಪರಂಪರೆಯ ಕುಲದಲ್ಲಿ ಹುಟ್ಟಿದವರಾಗಿದ್ದರು. ಇಂತಹ ಅದ್ವಿತೀಯ ದರ್ಜೆಯ ಮಹನೀಯನನ್ನು ಕಳುಹಿಸಿ ಸೇನಾಪತಿಯವರಿಗೆ ಸಮಾಧಾನಪಡಿಸುವ ವ್ಯವಸ್ಥೆಯನ್ನು ಮಾಡಲಾಯಿತು. ಹೀಗೆ ಅವರು ಮುಹಮ್ಮದೀ ಜಹೂರ್‌ರ ಅಪ್ಪಣೆ ಪಡೆದು ಮುಹಮ್ಮದ್‌ಪುರ ತಲಪಿದರು. ಸ್ವಲ್ಪ ದೂರ ಕ್ರಮಿಸಿದ ನಂತರ ಮುದಗಲ್ ಕೋಟೆಯ ಅಸುಪಾಸು ತಲಪಿದರು. ಕೋಟೆಯ ಅವರಣದ ಗೋಡೆಯ ಬಾಗಿಲಿನ ಮುಂದೆ ಒಂದು ವಿಶಾಲವಾದ ಮೈದಾನವಿದೆ. ಇಲ್ಲಿನ ವಾತಾವರಣ ಅತ್ಯಂತ ಆಕರ್ಷಣೀಯವಾಗಿತ್ತು. ಅಲ್ಲಿ ಬೀಸುವ ತಂಗಾಳಿ ಅತ್ಯಂತ ಚೇತೋಹಾರಿಯಾಗಿದ್ದು ಪದಗಳ ಮೂಲಕ ವಿವರಿಸಲಾಗದ ಅನುಭವವಾಗುತ್ತಿತ್ತು.

ಅಲ್ಲಿ ಹಾಕಲಾದ ಬಟ್ಟೆಯ ಶಾಮಿಯಾನ ತುಂಬ ಸುಂದರ, ಆಕರ್ಷಕವಾಗಿತ್ತು. ಅವುಗಳ ಪೈಕಿ ಒಂದು ಅಮೂಲ್ಯ ಬೆಲೆಬಾಳುವ ಬಂಗಾರದ ಜರಿಗಳಿಂದ ಅಲಂಕೃತ ಡೇರೆಯೊಂದು ಹಾಕಲಾಗಿತ್ತು. ಅಲ್ಲಿಗೆ ಹೋಗಿ ಸಂಜೆಯ ಅಸರ್ ನಮಾಜ್ ಪ್ರಾರ್ಥನೆಯನ್ನು ಮಾಡಿದರು. ಅಲ್ಲಿ ಸಾರ್ವಜನಿಕರಿಗಾಗಿ ಧಾರ್ಮಿಕ ಪ್ರವಚನದ ಸಭೆಯೊಂದನ್ನು ನಡೆಸಿ, ಅಲ್ಲಾಹನ ಅನುಗ್ರಹಗಳು, ಉದಾತ್ತ ಗುಣಗಳ ಗುಣಗಾನವನ್ನು ತಮ್ಮ ಪ್ರವಚನದಲ್ಲಿ ಹೇಳಿದರು. ಇದನ್ನು ಕೇಳಿದ ಜನರ ಮನಸ್ಸು ತುಂಬಿಬಂತು. ಅವರ ದೇವತಾನುಗ್ರಹದ ಸಂಪೂರ್ಣ ಅನುಭವದೊಂದಿಗೆ ಪ್ರಫುಲ್ಲಿತರಾದರು. ರಾತ್ರಿ ತಂಗುವ ಸಮಯವಾದಾಗ ರಾತ್ರಿ ಎಚ್ಚರದಿಂದ ಕಾಯುವ ಚೌಕೀದಾರ ಕಾವಲುದಾರರನ್ನು ನಿಲ್ಲಿಸಿ ಆರಾಮ ಮಾಡುವ ಉದ್ದೇಶದಿಂದ ಹಾಸಿಗೆಯಲ್ಲಿ ಪವಡಿಸಿದರು. ತಮ್ಮೊಂದಿಗಿದ್ದ ಕುದುರೆಗಳು ಮತ್ತು ಇತರ ಅವಶ್ಯಕ ಸಾಮಾಗ್ರಿಗಳನ್ನು ಡೇರೆಯ ಹೊರಗೆ ಇರಿಸಿದರು. ಸಂಜೆ ಮಗ್ರಿಬ್ ನಮಾಜಿನ ನಂತರ ಆರು ಗಂಟೆಯ ಹೊತ್ತಿಗೆ ಥಟ್ಟನೆ ಅಲ್ಲಾಹನ ಇಚ್ಛೆಯಂತೆ ಆಘಾತಕಾರಿ ತೂಫಾನು ಜೋರಾಗಿ ಬೀಸಿತು. ಇದರಿಂದ ಮಣ್ಣು ಧೂಳು ಎದ್ದುದರಿಂದ ರಸ್ತೆ ಕಾಣದಾಯಿತು. ನಸುಬೆಳಕಿನ ಸಮಯದಲ್ಲಿ ಕತ್ತಲಾವರಿಸಿತು.

ಕತ್ತಲು ಎಂಥಹ ದುರ್ಗಮವಾಗಿತ್ತೆಂದರೆ ಒಬ್ಬರು ಇನ್ನೊಬ್ಬರ ಮುಖ ಕೂಡ ಕಾಣಿಸದಂತಿತ್ತು. ಇಂತಹ ಭಯಾನಕ ಕಗ್ಗತ್ತಲೆ ಆವರಿಸಿತ್ತೆಂದರೆ ನಾಲ್ಕೂದಿಕ್ಕಿನಲ್ಲಿ ಕರಿ ಕಾರ್ಮೋಡಗಳು ಆಕಾಶವನ್ನು ಮುಚ್ಚಿ ಕ್ಷಣಾರ್ಧದಲ್ಲಿ ಜಡಿಮಳೆ ಗುಡುಗು ಸಿಡಿಲು ಮಿಂಚುಗಳು ಉಂಟಾಗಿ, ಭೋರ್ಗರೆವ ಮಳೆಗೆ ತೊಯ್ದು ಚಾದರುಗಳು ತೊಪ್ಪೆಯಾದವು. ಸಿಡಿಲು ಗುಡುಗುಗಳ ಅರ್ಭಟದಿಂದ ಭಯಾನಕ ಶಬ್ಧಗಳುಂಟಾಗಿ ಆಕಾಶದ ಎತ್ತರಕ್ಕೆ ಜನರ ಕೂಗು ಮುಟ್ಟುವಂತಿತ್ತು. ಪರ್ವತಗಳಿಂದ ನೀರು ಧುಮ್ಮಿಕ್ಕಿ ಹರಿದು ಬಂತು. ಭೀಕರ ಮಳೆಗಾಳಿಯಿಂದ ನಾಲ್ಕೂದಿಕ್ಕಿನಲ್ಲಿ ಭಯ ಆತಂಕಗಳು ಆವರಿಸಿದವು. ಮಳೆಯ ಅರ್ಭಟದಿಂದ ಭೂಮಿ ಒಡೆದು ಪರ್ವತಗಳು ಕುಸಿದು ಭೀಕರ ದೃಶ್ಯ ಮೂಡಿತು.

ಸಿಡಿಲು ಮಿಂಚುಗಳ ಆರ್ಭಟದ ಜೊತೆಗೆ ಸುರಿದ ಭೀಕರ ಜಡಿ ಮಳೆಯಿಂದ ಸಂಪೂರ್ಣ ಪರ್ವತ ಮತ್ತು ಭೂಮಿ ಅದರ ಭೀಕರ ಸದ್ದಿನಿಂದ ತನ್ನ ಮುಖವನ್ನು ಬಿಚ್ಚಿ ಬಗೆದು ಹರಿದು ಸಾಗರದ ಅಲೆಯಂತೆ ಎದ್ದುಬಿದ್ದು ಮುತ್ತಿನ ಚಿಪ್ಪು ತನ್ನ ಬಾಯಿ ತೆರೆ ಮುಗಿಲು ಸುರಿಸುವ ಮಳೆಯ ಹನಿಗಳನ್ನು ಚಿಕ್ಕ ಮಗುವು ಹಾಲುಕುಡಿಯುವುದಕ್ಕೆ ಹಾತೊರೆಯುವಂತೆ ಆಪೋಶನ ಮಾಡಿಕೊಂಡಿತ್ತು. ಆ ಜಡಿಮಳೆಯಿಂದ ಎಲ್ಲ ಪ್ರದೇಶದ ಮೈದಾನ ದಜ್ಲಾ ನದಿಯಂತೆ ಉಕ್ಕಿ ಹರಿದು ಭೂಮಿ ಜಲಾವೃತವಾಗಿತ್ತು. ಎಷ್ಟೊಂದು ನೀರು ತುಂಬಿತ್ತೆಂದರೆ ನೆಲ ಮತ್ತು ಸಾಗರ ಒಂದೇ ಆಗಿತ್ತು. ಇಂತಹ ಮಳೆಯ ಭೋರ್ಗರೆತದೊಂದಿಗೆ ಕಗ್ಗತ್ತಲು ಆವರಿಸಿದ್ದರಿಂದ ಲಾಭಪಡೆದು ಕೆಲವು ಡಕಾಯಿತರು ಅಡಗುತ್ತ ಬಹಳ ಚಾಲಾಕಿನಿಂದ ಅಂಬೆಗಾಲು ಹಾಕುತ್ತ ಮೆಲ್ಲಗೆ ಡೇರೆಯಒಳಗೆ ಪರದೆ ಜಮಖಾನಗಳ ಒಳಗೆ ನುಗ್ಗಿ ಬಂದರ್ ಮದಾರುಲ್ ಮಲಿಕ್ ಎನಿಸಲ್ಪಟ್ಟ ಸಯ್ಯದ್ ನೂರುಲ್ಲಾರಿಗೆ ದರೋಡೆಕೋರರು ನುಗ್ಗಿದ ಸುಳಿವು ಸಿಕ್ಕಿತು. ಅವರು ಡೇರೆಯ ಒಳಗಿದ್ದ ಜನರನ್ನು ಹೊರಹೋಗಿ ದರೋಡೆಕೋರರನ್ನು ಜಾಗರೂಕತೆಯಿಂದ ಹಿಡಿಯಲು ಸೂಚಿಸಿದರು. ನಿಜಕ್ಕೂ ಆ ರಾತ್ರಿ ಬಹಳ ಭಯಾನಕವಾಗಿತ್ತು. ಆದರೆ ಈ ಕಗ್ಗತ್ತಲನ್ನು ದಿನದ ಬೆಳಕೆಂದು ತಿಳಿದ ಅವರ ಸಹಚರರು ಈ ಕಳ್ಳರನ್ನು ನೀರಿನ ಜನರೆಂದು ತಿಳಿದು ಹಿಡಿದುಬಿಟ್ಟರು. ಹೀಗೆ ತಮ್ಮ ಚಾಕಚಕ್ಯತೆ ಮತ್ತು ಕ್ಷಿಪ್ರ ಕಾರ್ಯಾಚರಣೆಯ ಮೂಲಕ ಡಕಾಯಿತರನ್ನು ಹಿಡಿಯುವುದರಲ್ಲಿ ಸಫಲರಾದರು. ಬಂಧನಕ್ಕೊಳಗಾಗಿ ಭಯಭೀತರಾದ ಈ ದರೋಡೆಕೋರರು ಕೈ ಜೋಡಿಸಿಕೊಂಡು ಕಾಲುಗಳನ್ನು ಬಾಗಿಸಿ ಮೊಣಕಾಲೂರಿ ನಡುಗುತ್ತ ಕ್ಷಮಾಯಾಚನೆ ಮಾಡತೊಡಗಿದರು.

ಈ ಜಡಿಮಳೆ ಸತತವಾಗಿ ಮುಂಜಾವಿನ ತನಕ ಭೀಕರವಾಗಿ ಬಿರುಗಾಳಿ, ಸಿಡಿಲು ಮಿಂಚುಗಳ ಜೊತೆಗೆ ಗುಲ್ಲೆಬ್ಬಿಸುತ್ತಾ ಧಾರಾಕಾರವಾಗಿ ಸುರಿಯುತ್ತಿತ್ತು.

ನಜ್ಮ್

ಚುನಿ ಅಬ್ರೇಕೆ ಗಾಹ್ ಬಾರಿಶೇಂ ಆಂ
ಖಿರತ್ ಗಶ್ತಿ ಸರಾಫಾ ಚಶ್ಮ್ ಹೈರಾನ್
ಕಾರ್ಮೋಡದಿಂದ ಮಳೆಯ ಅರ್ಭಟ ಹೀಗಿತ್ತು
ಮಿದುಳು ಕೂಡ ಆತಂಕ ಭಯಗಳಿಂದ ತೊಯ್ದಿತು.

ಚುನಾ ಗರ್ದೇದ್ ಗರ್ಮ್ ಕತ್ರ ಭಾರಿ
ಕೆ ದರಿಯಾ ಆಬ್ ಗಶ್ತ್ ಅರುಘ್ ಶರ್ಮ್ ಸಾರಿ
ಬಿಸಿಯಾದ ಅಪಾಯಗಳು ಇಷ್ಟೊಂದು ಮಳೆಗೆರೆಯುತಿದೆ
ಸಾಗರದ ಅಘಾಧ ನೀರು ಕೂಡ ನಾಚುತಿದೆ.

ಶಬೇ ತಾರ್ ವ ಹವಾಯೇಂ ತೇಝ್ ಒ ಗಹೇ ಅಬ್ರ್
ರಬೂದೆ ಹೋಶ್ ಅಸ್ಸರ್‌ಹಾ ಝು ದಿಲ್ ಸಬ್ರ್
ಕಗ್ಗತ್ತಲ ರಾತ್ರಿ, ಬೀಸುವ ಬಿರುಗಾಳಿ, ಮುಗಿಲ ಆರ್ಭಟವು
ಮನದ ತಾಳ್ಮೆ, ಎಚ್ಚರಗಳನು ಹಾರಿಸಿ ಹೋದವು.

ಪಯೆ ಹರ್ ಸೈಲ್ ಸದ್ ಕಲ್ಝುಮ್ ರಂವಾ ಶುದ್
ಬದರಿಯಾ ಖತ್ರಯೆ ವೂ ಸರ್‌ಗರಾಂ ಶುದ್
ಈ ಭೀಕರ ಬಿರುಗಾಳಿಯಿಂದ ಸಹಸ್ರಾರು ಕುಲ್ಝುಂನಂತಹ ಸಾಗರಗಳು ಹರಿಯ ತೊಡಗಿದವು
ಈ ಮಳೆಯ ಹನಿಗಳಿಂದ ಸಾಗರವೂ ಆತಂಕಗೊಂಡಿತು.

ಝುದೆ ಚೀ ಬರ್‌ಜಬೀ ಚ್ಯೂಂ ಅಬ್ರ್ ಅಝ್ ಬರ್ಖ್
ನಮಾಂದ್ ದರ್ಮಿಯಾನೆ ಬೆಹರೋಬರ್ ಫರ್ಖ್
ಮುಗಿಲಿನಿಂದ ಹೊರಟ ಮಿಂಚು ಎಂತಹ ಪ್ರಖರವಾಗಿತ್ತೆಂದರೆ
ಸಾಗರ ಮತ್ತು ಭೂಮಿಯ ಅಂತರವ ತಿಳಿಯುವುದು ಕಷ್ಟಸಾಧ್ಯವಾಯಿತು.

ಬಾದಶಾಹರ ಪುಣ್ಯ ಮತ್ತು ಕೃಪೆಯ ನೆರಳು ಅಲ್ಲಿನ ಇಲಾಖೆಯ ಜನರ ಮೇಲೆ ಆದಾಗ ತಮ್ಮ ಧನ್ಯವಾದಗಳನ್ನು ಹೇಳಿದರು. ಹೀಗೆ ಅಲ್ಲಿನ ಪ್ರಜೆಗಳು ಬಿರುಗಾಳಿ ಮಳೆಯಿಂದ ಆದ ನಷ್ಟವನ್ನು ಭರಿಸಿದ ಬಾದಶಾಹರನ್ನು ಹಾಡಿ ಹೊಗಳಿದರು.

ನಜ್ಮ್

ನಿಕೊನಾಮಿ ಕೆ ಬಾಯಿದ್ ಸರ್‌ಫರಾಜಿ
ಝು ಲುತ್ಫೆ ಹಜ್ರತೆ ಸುಲ್ತಾನೆ ಗಾಝಿ
ಒಳ್ಳೆಯ ಹೆಸರಿನ ಹಿನ್ನೆಲೆ ಇದ್ದುದರಿಂದ ಅವರಿಗೆ ಸನ್ಮಾನದೊರೆಯಿತು
ಇವೆಲ್ಲವೂ ಹಜ್ರತ್ ಸುಲ್ತಾನ್ ಬಾದಶಾಹರ ಕೃಪೆಯಿಂದಾಯಿತು.

ದಮದ್ ಸುಬ್‌ಹೆ ಸಾದತ್ ಅಝ್ ಜಬೀ
ಶವದ್ ನೇಕ್ ಅಖ್ತರೀ ನಕ್ಷೇ ನಗೀ
ಗೌರವದ ಸೂರ್ಯನ ಕಿರಣದಿಂದ ಘನತೆಯೆಂಬ ಬೆಳಗಾದವು
ಅವರ ಪುಣ್ಯಶಾಲಿ ನಡೆಯಿಂದ ಬಣ್ಣಬಣ್ಣಗಳ ಹರಳುಗಳಾದವು.

ಬುವತ್ ಕದ್ರೋ ಶರಫ್ ಪೈರಾಯಯೆ ವೂ
ಬುರದ್ ಖುರ್ಷೀದಯೆ ನೂರ್ ಅಝ್ ಸಾಯಯೇ ವೂ
ಮರ್ಯಾದೆ ಗೌರವಗಳು ಅವರ ಉಡುಗೆತೊಡುಗೆಯಾಗಿದೆ

ಬೆಳಕು ನೀಡುವ ಸೂರ್ಯ ಅವರ ನೆರಳಿನಿಂದ ಹೊಳೆಯುತಿದೆ.

ಕುನದ್ ರಾಯಶ್ ಹುಕುಮ್ ರಾನೀ

ಜಹಾಂರಾ ಗುಲ್ಶನೇ ಅಮ್ನೊ ಅಮಾನಿ

ಅವರ ಉತ್ತಮ ಅಭಿಪ್ರಾಯಗಳು ಆಳ್ವಿಕೆಯ ನಡೆಸಲು ಸಹಾಯ ನೀಡುತಿದೆ
ಭುವಿಯ ಉದ್ದಅಗಲಕ್ಕೆ ಶಾಂತಿ ಸಮೃದ್ಧಿಯ ತೋಟವ ಮಾಡಿದೆ.

'ಸರ್ಖೈಲುಲ್ ಮುಮಾಲಿಕ್' (ವಿಶ್ವದ ಸರ್ವ ದೇಶಗಳಿಗೆ ಆಶಿರ್ವಾದ ನೀಡುವವರು) ಸಯ್ಯದ್ ನೂರುಲ್ಲಾ ಮುದಗಲ್ ಕೋಟೆಯಿಂದ ಹೊರಟು ಸ್ವಲ್ಪ ದೂರದ ತನಕ ಪಯಣಿಸುತ್ತಿದ್ದಂತೆ ತಮ್ಮ ಗುರಿಯ ವಚಾರದಲ್ಲಿ ಯೋಚಿಸುತ್ತಿದ್ದರು. ಖಾನ್ ನುಸ್ರತ್ ಕರೀಮ್ ತನ್ನ ಸೈನ್ಯ ತಂಡದೊಂದಿಗೆ ಬಾದಶಾಹರು ಹೇಳಿದಂತೆ ನಡೆಯುವ ನಿಯತ್ತಿನೊಂದಿಗೆ ಅವರ ಪ್ರಾಣರಕ್ಷಿಸುವ ಸಲುವಾಗಿ ತನ್ನ ಜೀವ ಬಲಿನೀಡುವ ಕಂಕಣಬದ್ಧನಾಗಿ ತಖ್ತೆ ಮುಬಾರಕ್ ಅಥವಾ ಪಿಲುಗುಂಡ ಕೋಟೆಯಿಂದ ಬಾಗಲ್‌ಕೋಟೆಯ ಸಮೀಪ ತೆರಳಿದರು. ಈ ಸಮಯದಲ್ಲಿ ಸಯ್ಯದ್ ನೂರುಲ್ಲಾ ಕೂಡ ಪ್ರಯಾಣದ ವೇಗವನ್ನು ಹೆಚ್ಚಿಸುವ ಮೂಲಕ ಅಲ್ಲಿಗೆ ತಲಪಿದರು. ಮುಝುಫ್ಫರುದ್ದೀನ್ ಖಾನ್ ಮುಹಮ್ಮದ್ ಸಯ್ಯದ್ ನೂರಲ್ಲಾರನ್ನು ಭೇಟಿಮಾಡಿದಾಗ ಅವರನ್ನು ತುಂಬು ಹೃದಯದಿಂದ ಗೌರವಿಸಿ ಆಥಿತ್ಯ ನೀಡಿದರು. ಸೇನಾಧಿಪತಿ ಖಾನರ ಆಜ್ಞೆಯಂತೆ ಅವರ ಆರಾಮಕ್ಕಾಗಿ ಒಂದು ವಿಶೇಷ ಸುಸಜ್ಜಿತ ಕೋಣೆಯನ್ನು ಸಜ್ಜುಗೊಳಿಸಲಾಯಿತು. ಅವರನ್ನು ಸಂತಸಗೊಳಿಸುವ ಸಲುವಾಗಿ ಸೇನಾಧಿಪತಿ ಖಾನರು ಅಲ್ಲೇ ಸ್ವಲ್ಪಕಾಲ ಜೊತೆಯಲ್ಲಿ ಕಳೆದರು. ಅವರು ದೈವೀ ಸಂಜಾತರೂ ಮಹಾತ್ಮರೂ ಆದುದರಿಂದ ಅವರ ಮಾತುಗಳು ವ್ಯಥಿತ ಮತ್ತು ವ್ಯಗ್ರ ಮನಸ್ಸಿಗೆ ಶಾಂತಿ ಸಮಾಧಾನಗಳು ಉಂಟಾಗುತ್ತಿತ್ತು. ಅವರ ಸರಿಯಾದ ಮಾರ್ಗದರ್ಶನದಿಂದ ಮುಂದೆ ಮಾಡಲಿರುವ ಕೆಲಸಕಾರ್ಯಗಳು ಸುಗಮವಾಗುತ್ತಿದ್ದವು.

ಹೃದಯವನ್ನು ಸೂರೆಗೊಳ್ಳುವಂತಹ ನಾಜೂಕಿನ, ಬುದ್ಧಿವಂತಿಕೆಯ, ಜ್ಞಾನವೃದ್ಧಿಯ ಬಹಳಷ್ಟು ಮಾತುಕತೆಗಳ ಸರಣಿ ಜಾರಿಯಲ್ಲಿತ್ತು. 'ಖಾನ್ ಝುಫರ್ ಕರೀಮ್ ಖಾನ್ ಮುಹಮ್ಮದರೇ, ನೀವು ಮುಹಮ್ಮದ್ ಜಹೂರರ ಅಪೇಕ್ಷೆಯಂತೆ ಇಲ್ಲಿಗೆ ಆಗಮಿಸಿದಿರಿ. ಇದರಿಂದ ನನಗೆ ತುಂಬ ಸಂತಸವಾಯಿತು. ಯಾಕೆಂದರೆ ಇದು ಗೌರವವೆಂಬ ಐಶ್ವರ್ಯವನ್ನು, ದಯಾಪರತೆಯ ಶ್ರೀಮಂತಿಕೆಯನ್ನು ಮೆರೆವ ಘನತೆವೆತ್ತ ಮಹಾನುಭಾವರು ನೀಡಿದ ಸಲಹೆಯಾಗಿದೆ. ಸತ್ಯದ ಸಾರ್ವಭೌಮ ಅಲ್ಲಾಹನ ಕರುಣಾಮಯ ದೃಷ್ಟಿಯನ್ನು ಪಡೆಯಲು ಅತ್ಯಂತ ದೀರ್ಘ ಸಮಯದ ತನಕ ನೋವು ಸಂಕಷ್ಟಗಳನ್ನು ಎದುರಿಸಬೇಕಾಗುವುದೋ ಅದೇರೀತಿಯಲ್ಲಿ ನೀವು ಕೂಡ ಬಾದಶಾಹರ ದರ್ಬಾರಿನ ಸೇವೆಯಲ್ಲಿ ನಮಸ್ಕಾರ ಮಾಡಲು ಅವಕಾಶ

ಸಿಗಲು ಪ್ರಾಮಾಣಿಕ ಅಭಿಲಾಷೆಯೊಂದಿಗೆ ಕೆಲಸಮಾಡಬೇಕಾಗಿದೆ. ಇದೇರೀತಿಯ ಅಭಿಲಾಷೆ ನಿಮ್ಮಲ್ಲಿರುವುದರಿಂದ ನಿಮ್ಮನ್ನು ಇಲ್ಲಿಯ ತನಕ ಸಾಧನೆಯನ್ನು ಸಾಧಿಸುವ ಹಾದಿತೋರಿಸಿದೆ ಅಂತೆಯೇ ಮುಂದೆ ನಿಮಗೆ ಈ ಪ್ರಾಮಾಣಿಕ ಗುರಿಯೇ ನಿಮಗೆ ಹಾದಿಯನ್ನು ತೋರಿಸುವುದು. ನನ್ನ ಅಭಿಪ್ರಾಯ ಪ್ರಕಾರ ನೀವು ಇಲ್ಲಿಂದ ಬೀಳ್ಕೊಂಡು ತಖ್ತೆ ಮುಬಾರಕ್ ಯಾ ಪಿಲಿಗೊಂಡ ಕೋಟೆಯನ್ನು ನೋಡಿಕೊಳ್ಳುವ ಜವಾಬ್ದಾರಿಯನ್ನು ವಹಿಸಲು ತೆರಳುವುದು ಒಳ್ಳೆಯದು. ಯಾಕೆಂದರೆ ನೀವು ಅಲ್ಲಿ ಹೋಗಿ ಕರ್ನಾಟಕ ಮತ್ತು ಮಲೆನಾಡಿಗೆ ಸಂಬಂಧಿಸಿದ ಅತ್ಯಂತ ಗುರುತರವಾದ ಜವಾಬ್ದಾರಿಯನ್ನು ನಿಭಾಯಿಸಬೇಕಾಗಿದೆ. ಹೀಗೆ ನೀವು ನಿಮ್ಮ ಕರ್ತವ್ಯವನ್ನು ಸಾಂಗವಾಗಿ ನೆರವೇರಿಸಿದಲ್ಲಿ ಬಾದಶಾಹರ ಕೃಪೆಯನ್ನು ಸಂಪೂರ್ಣವಾಗಿ ಗಳಿಸುವುದು ಸಾಧ್ಯವಾಗುತ್ತದೆ' ಎಂದು ಸುಧೀರ್ಘವಾಗಿ ಸಮಾಧಾನಚಿತ್ತದಿಂದ ಸಯ್ಯದ್ ನೂರುಲ್ಲಾರು ಬೋಧಿಸಿದರು.

ಖಾನ್ ನುಸ್ರತ್ ಝುಫರ್ ಕರೀಮ್ ತನ್ನೆಲ್ಲ ಶಕ್ತಿಯನ್ನು ಉಪಯೋಗಿಸಿ ಈ ಲಾಭದಾಯಕ ಹಾಗೂ ಹೃದಯಕ್ಕೆ ಸಾಂತ್ವನ ನೀಡಬಲ್ಲ ಬೋಧನೆಯನ್ನು ಕೇಳಿ ಸರ್ಖೈಲುಲ್ ಮುಮಾಲಿಕ್ ಯಾ ವಿಶ್ವದ ಸಮಸ್ತ ದೇಶಗಳನ್ನು ಆಶೀರ್ವದಿಸುವ ಸಯ್ಯದ್ ನೂರುಲ್ಲಾ 'ಬಾದಶಾಹರನ್ನು ಭೇಟಿಯಾಗುವ ಮತ್ತು ಅವರ ಕೃಪಾಕಟಾಕ್ಷಕ್ಕೆ ಸಂಪೂರ್ಣ ಒಳಗಾಗುವ ಅವಕಾಶ ನನಗಿರುವುದಿಲ್ಲ. ಅದನ್ನು ಸಾಧಿಸಿ ವಶಪಡಿಸಿಕೊಳ್ಳುವುದಕ್ಕೆ ಎಲ್ಲರೀತಿಯ ಸತ್ಯ ಪ್ರಾಮಾಣಿಕತೆ ಮತ್ತು ಅದಮ್ಯ ಪ್ರೀತಿಯ ಹಾದಿಯನ್ನು ಹುಡುಕಬೇಕಾಗುತ್ತದೆ. ಇದಕ್ಕಾಗಿ ನಿಮ್ಮ ಅಮೂಲ್ಯವಾದ ಜೀವವನ್ನು ಅವರಿಗಾಗಿ ತ್ಯಾಗಮಾಡಬೇಕಾಗಿಬಂದರೂ ಸರಿ, ಆಗ ಮಾತ್ರ ನಿಮ್ಮ ಗುರಿ ಸಾಧಿಸುವುದು ಸಾಧ್ಯವಾಗುವುದು. ನನ್ನ ಮಾತಿನ ತಾತ್ಪರ್ಯವೇನೆಂದರೆ, ಪ್ರೇಮವನ್ನು ಆಕಾಂಕ್ಷೆಯ ಸಫಲತೆಯನ್ನು ಹುಡುಕುವ ಸಾಗರದ ಹಾದಿಯನ್ನಾಗಿಸಿಕೊಂಡವರ ಪೈಕಿ ಕೂಡಲೇ ಜಿಗಿತಕ್ಕೆ ಹಾರುವವರು, ಆಗಾಗ ತಮ್ಮ ಉದ್ದೇಶದ ಹಾದಿತಪ್ಪಿಬಿಡುತ್ತಾರೆ.' ಎಂದು ಉಪದೇಶಿಸಿದರು. ಸಯ್ಯದ್ ನೂರುಲ್ಲರವರು ಸೇನಾಪತಿ ಖಾನ್‌ರು ತನ್ನ ನಿರ್ಧಾರಕ್ಕೆ ಅಂಟಿಕೊಂಡಿದ್ದಾರೆಂದು ತಿಳಿದು ತನ್ನ ಸ್ವಚ್ಛ ಪ್ರಾಮಾಣಿಕ ಆಧ್ಯಾತ್ಮ ಸಂಬಂಧಿ ಶಕ್ತಿಯಿಂದ ಮತ್ತು ದೈವೀ ಶಕ್ತಿಯ ಪವಾಡಗಳ ಮೂಲಕ ಅವರ ಮೇಲೆ ಪ್ರಭಾವ ಬೀರಿ ಬಾದಶಾಹರ ಪರವಾಗಿರುವ ಲೌಕಿಕ ಕೆಲಸಕಾರ್ಯಗಳಿಂದ ವಿಮುಖರಾಗದೆ ಎಂದಿನಂತೆ ಮುಂದುವರಿಯುವಂತೆ ಮಾಡಿದರು.

ನಂತರದಲ್ಲಿ ಸಯ್ಯದ್ ನೂರುಲ್ಲಾರ ಉಪದೇಶವನ್ನು ಚೆನ್ನಾಗಿ ಅರಗಿಸಿಕೊಂಡು ತನ್ನ ಮನೋವಿಕ್ಷಿಪ್ತತೆಗೆ ಸಮಾಧಾನ ತಂದುಕೊಳ್ಳುವ ಮೂಲಕ ಖಾನ್ ನುಸ್ರತ್ ಝುಫರ್ ಕರೀಮ್ ಎಂದಿನಂತೆ ಬಾದಶಾಹರ ಕೈಂಕರ್ಯದಲ್ಲಿ ತನ್ನನ್ನು ಇಡಿಯಾಗಿ ತೊಡಗಿಸಿಕೊಂಡರು. ಈ ಘಟನೆಗಳ ನಂತರದ ಕಾಲಘಟ್ಟದಲ್ಲಿ ಬಾದಶಾಹರ

ಕೃಪಾಕಟಾಕ್ಷದಿಂದ ೯ ಬಲಿಷ್ಠ ಮತ್ತು ವೈಭವಪೂರ್ಣ ಕೋಟೆಗಳನ್ನು ಜಯಿಸಿದರು. ತಮ್ಮ ವಿಜಯಶಾಲಿ ಖಡ್ಗದ ಮೂಲಕ ಸರ್ವ ವೈರಿಗಳನ್ನು ಸದೆಬಡಿಯುವ ತನಕ ಒರೆಯೊಳಗೆ ಸೇರಿಸಲಿಲ್ಲ. ತನ್ನ ಸಂಪೂರ್ಣ ಬಲ ಮತ್ತು ಶೌರ್ಯದಿಂದ ತನ್ನ ಜೀವದ ಹಂಗುತೊರೆದು ಈ ಸೇನಾಧಿಪತಿ ಬಾದಶಾಹರ ಘನತೆಯನ್ನು ತುತ್ತತುದಿಗೇರಿಸಿದ. ಇದಾದ ನಂತರ ಸಯ್ಯದ್ ನೂರುಲ್ಲಾರಂತಹ ಮಹಾ ಧಾರ್ಮಿಕ ಪಂಡಿತ ಹಾಗೂ ಆಧ್ಯಾತ್ಮದ ಮೇರು ಹಂತದ ಮಾರಿಫತೆ ರಬ್ಬಾನಿ (ದೇವತಾ ಮನುಷ್ಯ) ಎನಿಸಿದ ಮಹಾನುಭಾವ ಸೇನಾಪತಿ ಖಾನ್ ನುಸ್ರತ್ ಝುಫರ್ ಕರೀಮ್‌ರ ಒಳಿತಿಗಾಗಿ ಪ್ರಾರ್ಥನಾಕೂಟದೊಂದಿಗೆ ಸಾರ್ವಜನಿಕರಿಗಾಗಿ ಭೋಜನಕೂಟವನ್ನು ಏರ್ಪಡಿಸಿದರು. ಈ ಭೋಜನ ಕೂಟದಲ್ಲಿ ಹಲವಾರು ರೀತಿಯ ಸ್ವಾದಿಷ್ಟ ಭೋಜನವನ್ನು ಅವರ ಹೆಸರಲ್ಲಿ ಸಾರ್ವಜನಿಕರಿಗೆ ಉಣಬಡಿಸಿದರು. ಶೂರ ಹಜ್ರತ್ ಬಾದಶಾಹರ ಪರವಾಗಿ ಫಾತಿಹಾ ಪ್ರಾರ್ಥನಾ ಕೂಟವನ್ನು ಅಲ್ಲಾಹನಿಗೆ ಹೇಳುವ ಧನ್ಯವಾದದ ರೂಪದಲ್ಲಿ ಅಂಬರ್, ಅತ್ತರ್ ಸುಂಗಧಗಳನ್ನು ಹಬ್ಬಿಸಿ ಹೂದೋಟದ ವಾತಾವರಣದಂತೆ ನಾಲ್ಕೂ ದಿಕ್ಕಿನಲ್ಲಿ ಹರಡಿಸಿ ಸುಗಂಧಮಯ ಪರಿಸರದಲ್ಲಿ ನೆರವೇರಿಸಿದರು.

ಖಾನ್ ನುಸ್ರತ್ ಮುಝುಫ್ಘರರ ಮನಃಪರಿವರ್ತನೆಯ ನಂತರದಲ್ಲಿ ಹಿಂದಿನಂತೆ ಸೇನಾಪತಿಯ ಹುದ್ದೆಯನ್ನು ಮತ್ತೆ ಕೈಗೆತ್ತಿಕೊಂಡದ್ದರಿಂದ ಸಂಪೂರ್ಣ ಭರವಸೆಗೆ ಅರ್ಹರಾದ 'ಮದಾರುಲ್ ಮುವಾಲಿಕ್' ಯಾ ಹಲವು ದೇಶಗಳಲ್ಲಿ ವಿಶ್ವಾಸಯೋಗ್ಯರೆನಿಸಲ್ಪಟ್ಟ ಬಿರುದಾಂಕಿತ ಸಯ್ಯದ್ ನೂರುಲ್ಲಾರು ಈ ಬೆಳವಣಿಗೆಯನ್ನು ಬಾದಶಾಹರ ಪರವಾದ ದೊಡ್ಡ ಮಹತ್ತರವಾದ ಜಯುವಾಗಿದೆ ಎಂದು ಅರ್ಥೈಸಿಕೊಂಡಿದ್ದರು. ನಂತರ ಅವರು ತುಂಬ ಉತ್ತಮ ತಳಿಯ ಅತ್ಯಂತ ವೇಗವಾಗಿ ಓಡಬಲ್ಲ ಎರಡು ಕುದುರೆಗಳನ್ನು ಸೇನಾಪತಿ ಖಾನ್ ನುಸ್ರತ್ ಝುಫರ್ ಕರೀಮ್ ರವರಿಗೆ ಉಡುಗೊರೆಯ ರೂಪದಲ್ಲಿ ನೀಡಿದರು. ಈ ಕುದುರೆಗಳ ಕಾಲಿನ ಗೊರಸುಗಳು ಹಾಗೂ ಅವುಗಳಿಗೆ ಹಾಕಿದ ಬಲಿಷ್ಠ ಲಾಳಗಳಿಂದ ವಾಯುವೇಗದಲ್ಲಿ ಓಡುವಾಗ ಹೆಜ್ಜೆಮೂಡಿದ ಹಾದಿಯ ಭೂಮಿಯಲ್ಲಿ ಗುಳಿಬೀಳುತ್ತಿತ್ತು. ಇಂತಹ ಉಚ್ಛಶ್ರೇಣಿಯ ಕುದುರೆಗಳನ್ನು ಖಾನ್ ನುಸ್ರತ್ ಝುಫರ್ ಕರೀಮ್‌ರಿಗೆ ನೀಡಿ ಗೌರವಿಸಿದರು. ಬಾದಶಾಹರ ಆಜ್ಞೆಯಂತೆ ಖಾನ್ ನುಸ್ರತ್ ಝುಫರ್ ಕರೀಮರು ರಾಜ್ಯದಲ್ಲಿ ತಮಗೆ ಇಷ್ಟವಿರುವ ಆಳ್ವಿಕೆಯ ವಿಭಾಗದ ಯಾವ ಜವಾಬ್ದಾರಿಯನ್ನು ಆಯಲು ಬಯಸುತ್ತಾರೋ ಅದನ್ನು ಅವರ ಇಚ್ಛೆಯಂತೆ ಆರಿಸಬಹುದೆಂದು ಸೂಚಿಸಲಾಯಿತು. ಅವರು ಆರಿಸುವ ಇಲಾಖೆಯ ನೇತೃತ್ವವನ್ನು ನೀಡಲಾಗುವುದೆಂದು ವಾಗ್ದಾನ ಮಾಡಲಾಯಿತು. ಹೀಗೆ ಸೇನಾಪತಿಯುವರು ಬಾದಶಾಹರ ನಿಕಟವರ್ತಿ ಅನುಯಾಯಿಗಳಲ್ಲಿ ಒಬ್ಬನಾಗಿ ಸೇವೆಸಲ್ಲಿಸುವ ಅವಕಾಶವನ್ನು ಗಳಿಸಿದರು. ಹಜ್ರತ್

ಬಾದಶಾಹರು ಅವರ ಮೇಲೆ ತಮ್ಮ ಸಂಪೂರ್ಣ ಕೃಪೆಯನ್ನು, ವಿಶ್ವಾಸವೆಂಬ ಗೌರವವನ್ನು ನೀಡಿ ಪೊರೆದರು. ಸೇನಾಪತಿ ಖಾನ್ ನುಸ್ರತ್ ಝುಫರ್ ಕರೀಮ್ ಕೂಡ ಅವರ ಸೇವೆಯಲ್ಲಿ ಹೆಚ್ಚುಕಮ್ಮಿ ಮೌನವಾಗಿಯೇ ಇದ್ದು, ಬಾದಶಾಹರನ್ನು ಹೊಗಳುವ ಮತ್ತು ಕೃತಜ್ಞತೆಯನ್ನು ಸಲ್ಲಿಸುವ ಸಲುವಾಗಿ ಮಾತ್ರ ಬಾಯಿಬಿಟ್ಟು ಮಾತಾಡುತ್ತಿದ್ದರು. ತಾನು ಭಾಗವಹಿಸಿದ ಎಲ್ಲ ಸಭೆ ಸಮಾರಂಭಗಳಲ್ಲಿ ಅವಕಾಶ ಸಿಕ್ಕಿದಷ್ಟೂ ಬಾದಶಾಹರ ಹೃದಯ ವೈಶಾಲ್ಯತೆ, ಕೃಪಾಗುಣಗಳ ಬಗ್ಗೆ ಒಳ್ಳೆಯ ಮಾತುಗಳನ್ನು ಸಭಿಕರಿಗೆ ಹೇಳುತ್ತಿದ್ದರು.

ನಜ್ಮ್

ಝುಹೆ ಸುಲ್ತಾನೆ ದೀನ್ ಪರ್‌ವರ್ ಕೆ ಅಫ್ಲಾಕ್
ಬುವದ್ ದರ್ ಖಿದ್ಮತೆ ವೂ ಚಿಸ್ತ್ ಚಾಲಾಕ್
ಎಂತಹ ವೈಭವದ ಸುಲ್ತಾನ ಧರ್ಮಧುರಂಧರರು
ಆಕಾಶವೂ ಸಹ ಅವರ ಕೈಕಂಕರ್ಯಕ್ಕೆ ತಯಾರು.

ಜಹಾಂ ರೋಶನ್ ಝುರಾಯೆ ಅನ್ವರೇ ಊಸ್ತ್
ಫಲಕ್ ಯಕ್ ಬಂದಯೇ ಫರ್‌ಮಾನ್ ಬರಾವೂಸ್ತ್
ಜಗತ್ತು ಅವರ ವಿಚಾರಗ:ಳಿಂದ ಬೆಳಕು ಪಡೆಯುವುದು
ಗಗನವೂ ಕೂಡ ನಿಷ್ಠಾವಂತ ಸೇವಕನಂತೆ ಅವರ ಮುಂದೆ ನಿಲ್ಲುವುದು.

ಸುಹಾಗರ್ ನೂರ್ ಅಝ್ರಾಯಿಶ್ ಬಯಾಬದ್
ಬಯುಕ್ ದಮ್ ದಸ್ತೆ ಮೆಹರೋಮಾ ಬತಾಬದ್
ಅವರ ವಿಚಾರಗಳಿಂದ ಪ್ರಭಾವಲಯವೊಂದು ಮೂಡುವುದು
ಚಂದ್ರ ತಾರೆಯರ ಕೈಗಳಿಗೆ ಕೂಡ ಹೊಳಪು ನೀಡುವುದು.

ಮುನವ್ವರ್ ಸಾಝ್ ಬಝ್ಮೆ ಆಖ್ರಿ ನಶ್
ರಿವಾಜ್ ಅಫ್‌ಝಾ ಕಾರೆ ಅಹ್ಲೆ ಬೀನಶ್
ಬಾದಶಾಹರ ಸಭೆಸಮಾರಂಭಗಳು ವಿಶೇಷವಾಗಿ ಸಿಂಗರಿಸಲ್ಪಟ್ಟವು
ಯಾಕೆಂದರೆ ಇವು ಜ್ಞಾನಿಗಳಿಂದ ಶುರುವಾಗಲ್ಪಟ್ಟಿದ್ದವು.

ರುಕಶ್ ನೂರೆ ನಬೀರಾ ಜಲ್ವಗಾಹೇಸ್ತ್
ಕೆ ದರ್ಗಾವೇ ದೊ ಆಲಮ್ ರಾ ಪನಾಹೇಸ್ತ್
ಬಾದಶಾಹರ ಮುಖಾರವಿಂದ ನಬೀ ಮುಹಮ್ಮದರಿಂದ ಬೆಳಗುವುದು
ಅದು ಎರಡೂ ಜಗತ್ತುಗಳಿಗೆ ಆಶ್ರಯವಾಗುವುದು.

ಖಾನ್ ನುಸ್ರತ್ ಝುಫರ್ ಕರೀಮ್ ಮುಝುಫ್ಫರುದ್ದೀನ್ ಖಾನ್ ಮುಹಮ್ಮದ್‌ರು

ಸರ್ಖೈರುಲ್ ಮುಮಾಲಿಕ್ ಸಯ್ಯದ್ ನೂರುಲ್ಲಾರವರಿಗೆ ಗೌರವಾದರಗಳೊಂದಿಗೆ ಮುಹಮ್ಮದ್ ಜಹೂರರ ಬಳಿಗೆ ಹೋಗುವ ಸಲುವಾಗಿ ಭಾವಪೂರ್ಣವಾಗಿ ವಿದಾಯ ಹೇಳಿದರು. ಇದಾದನಂತರ ಅವರು ತನ್ನ ಎಂದಿನ ಸೇನಾಧಿಪತಿ ಹುದ್ದೆಗೆ ಸಂಬಂಧಿಸಿದ ಕಾರ್ಯಕಲಾಪಗಳಲ್ಲಿ ತನ್ನನ್ನು ತೊಡಗಿಸಿಕೊಂಡರು.

ಅತ್ತ ಬಬ್‌ರಿ ಕೋಟೆಯಲ್ಲಿ ತನ್ನ ವಿದ್ರೋಹದಿಂದಾಗಿ ಕಾರಾಗ್ರಹದಲ್ಲಿ ಬಿದ್ದಿದ್ದ ಸಯ್ಯದ್ ರೆಹಾನ್ ಶೋಲಾಪುರಿಯ ಮಗ ತನ್ನ ಕುತಂತ್ರದ ಕೆಲಸಗಳಿಗೆ ಪಶ್ಚಾತ್ತಾಪ ಪಟ್ಟುಕೊಂಡು ಕ್ಷಮೆಯಾಚಿಸಿದ್ದರಿಂದ ಬಾದಶಾಹರ ಸೇವಕರಾಗಿ ಪರಿವರ್ತನೆ ಹೊಂದಿದ.

ನಜ್ಮ್

ಸಿಪೆಸಾಲಾರ್ ಶಹನ್‌ಶಾಹೆ ಗಾಝಿ
ದಹದ್ ಚರ್ಖೆ ಬರೀನ್ ರಾ ಸರ್ಫರಾಝಿ
ಏನೊಂದು ಘನತೆ ಶೂರ ಸೇನಾಧಿಪತಿಯವರದು
ಆಕಾಶಕ್ಕೆ ಕೂಡ ವಿಜಯಶಾಲಿಯ ದರ್ಜೆನೀಡಿದರು.

ಬ ಅಝ್ಮೆ ಮುಲ್ಕ್‌ಗೀರಿ ಕಮರ್ ಬಸ್ತ್
ಫಲಕ್ ರಾ ಬಖ್ಶ್ ಹಮೇ ಕತ್‌ರಾಖ್ ಬರ್‌ಬಸ್ತ್
ರಾಜ ಕೈಂಕರ್ಯದ ಜವಾಬ್ದಾರಿಗೆ ಅವರು ಕಟಿಬದ್ಧರಾದರು
ಗಗನವನ್ನು ಕೂಡ ತನ್ನ ಕೈಂಕರ್ಯದಿಂದ ಸಂಪೂರ್ಣ ಬಾಗಿಸಿದರು.

ಖಾನ್ ನುಸ್ರತ್ ಝುಫರ್ ಕರೀಮ್ ತನ್ನ ಎಲ್ಲ ಮಂತ್ರಿಗಳು, ಸಹಯಾತ್ರಿಗಳು, ಅಮೀರರು ಮತ್ತು ಸೈನ್ಯದೊಂದಿಗೆ ಮೈಸೂರಿನ ರಾಜನಿಗೆ ಎಚ್ಚರಿಕೆಯನ್ನು ನೀಡಲು ಜಗದೇವ್ ಇಲಾಖೆಗೆ ತೆರಳಿದರು. ಹೀಗೆ ಮಾಡುವುದರಿಂದ ಅವರು ತನ್ನ ದುಲ್ಫಕಾರ್ ತಲವಾರಿನ ದೆಸೆಯಿಂದ ಮೈಸೂರಿನ ರಾಜನಿಂದ ಆ ಕೋಟೆಯನ್ನು ವಶಪಡಿಸಿಕೊಳ್ಳುವ ಉದ್ದೇಶ ಸಾಧನೆಯಾಗಬೇಕಿತ್ತು. ಅಲ್ಲದೆ ಎಲ್ಲ ಕುತಂತ್ರಿ ವೈರಿಗಳಿಗೆ ತಕ್ಕ ಶಿಕ್ಷೆ ನೀಡುವುದು ಕೂಡ ಅವರ ಉದ್ದೇಶವಾಗಿತ್ತು.

ಜಗದೇವ್ ಪ್ರಾಂತ್ಯದ ಕೋಟೆಗಳ ಹತ್ತಿರ ತಲಪಿದಾಗ ಈ ಶೂರ ಬಾದಶಾಹರ ಸೈನಿಕರ ಆಕ್ರೋಶದ ಗುಲ್ಲು ಗಲಾಟೆಯೆದ್ದು ವೈರಿ ರಾಜ್ಯದ ವೈರಿಸಮೂಹಕ್ಕೆ ಕೆಡುಕಾಲ ಸಮೀಪಿಸಿದಂತೆ ಅನಿಸಿ ಚಿಂತಾಕ್ರಾಂತರಾದರು. ಭಯಭೀತರಾಗಿ ತಮ್ಮ ಮುಖದ ಮೇಲೆ ನೆಲದ ಮಣ್ಣಿನ ಧೂಳು ಹಾರಿಸುತ್ತ ಶಾಂತಿ.......ಶಾಂತಿ ಎಂದು ಕೂಗುತ್ತ ವೈರಿಗಳು ತಮ್ಮ ಜೀವ ಮತ್ತು ಮರ್ಯಾದೆಯನ್ನು ಕಾಪಾಡಿಕೊಳ್ಳುವ ಸಲುವಾಗಿ ಅಲ್ಲಿಂದ ಕಾಲುಕಿತ್ತರು. ಹೀಗೆ ಬಾದಶಾಹರ ಭಾಗ್ಯಶಾಲಿ ಸೈನ್ಯತಂಡ ತಮ್ಮ ಮಿಂಚಿನಂತಹ

ಖಡ್ಗಗಳನ್ನು ಬೀಸಿ ಹಲವು ವೈರಿಗಳ ದೇಹದಿಂದ ಶಿರವನ್ನು ಉಚ್ಚಾಟಿಸಿದರು. ಈ ಸನ್ನಿವೇಶವು ಪ್ರಳಯಕಾಲದ ಅವತಾರದಂತಿತ್ತು. ವೈರಿಗಳು ಇದರಲ್ಲಿ ತಮ್ಮತಮ್ಮ ಸಾಮಾನುಗಳನ್ನು ಕೈಯಲ್ಲಿ ಹಿಡಿದುಕೊಂಡು ಪರ್ವತದಂತೆ ಮೌನವಾಗಿ ನಿಂತಿದ್ದರು. ಇನ್ನೊಂದೆಡೆ ಬಹಾದ್ದೂರ ಸಿಪಾಯಿಗಳು ಮೈಯರಕ್ತದ ಬಿಸಿಯಲ್ಲಿ ಹೂಡಿದಂತಹ ಯುದ್ಧದಿಂದ ತಮ್ಮ ಖಡ್ಗಗಳಲ್ಲಿ ಹರಿವ ರಕ್ತದ ಕಾಲುವೆಯು ಅಲ್ಲಿನ ಪರ್ವತಗಳ ಕಡೆ ಹರಿಯತೊಡಗಿತು. ಈ ಧರ್ಮಯುದ್ಧದ ಮೈದಾನದ ಶೂರ ಸೈನಿಕರ ಸಿಟ್ಟಿನ ಬೆಂಕಿಯಿಂದ ವೈರಿಗಳ ಸರದಾರರು ಮಣ್ಣು ಮುಕ್ಕಿದರು. ಅವರ ಹೆಸರು ನಿಶಾನಿಗಳು ಕೂಡ ಯಾರಿಗೂ ಕೂಡ ಕಾಣದಂತಾಯಿತು.

ನಜ್ಮ್

> **ಜಹಾಂ ಯಕ್ಸರ್ ಅಝ್ ಜಹದೇ ಅಹ್ಲೇ ಜಿಹಾದ್**
> **ಚುನಾ ರೂದರ್ ಆಬಾದಿ ದಮನ್ ನಿಹಾದ್**
> ಧರ್ಮಯುದ್ಧದ ಸರದಾರರಿಂದ ಯತ್ನದಿಂದ ಈ ಜಗವು
> ಬೆಳಕು ಪಡೆದು ಜನತೆ ಸರ್ವಸಂಪನ್ನವಾದವು.
>
> **ಕೆ ಶುದ್ ಸಿರ್ಝು ಫರ್ಮಾನ್ ಖುರ್ಶೀದ್ ಮಾಹ್**
> **ಬಹರ್ ಗೋಷಾ ಸದ್ ಮಸ್‌ಜಿದ್ ವ ಖಾನಖಾಹ್**
> ಚಂದ್ರ ಸೂರ್ಯರು ಕೂಡ ಅವರಿಗೆ ನಮಸ್ಕಾರ ಮಾಡುವರು
> ಎಲ್ಲೆಡೆ ನೂರಾರು ಮಸೀದಿಗಳು, ಧರ್ಮಾಶ್ರಮಗಳಾದವು.
>
> **ಝ ಬುತ್‌ಖಾನೆಹ ಮಸ್ಜಿದ್ ಆರಾಸ್ಥನ್**
> **ದುವಾ ಬಹರೆ ಸುಲ್ತಾನೆ ದೀ ಖಾಸ್ತನ್**
> ಅವರ ಮೂರ್ತಿಪೂಜಕರ ಆಲಯಗಳ ಬದಲಿಗೆ ನಾವು ಮಸೀದಿಗಳ ಕಟ್ಟಿಸಿದೆವು
> ನಾವು ಬಾದಶಾಹ ದರ್ಮದುರಂದರ ಸುಲ್ತಾನನಿಗಾಗಿ ದುವಾಮಾಡುವೆವು.
>
> **ಕೆ ತಾ ಲುತ್ಫೆ ಹಕ್ ಝ ಬೆ ಜಾನೊ ತನ್ ಅಸ್ತ್**
> **ಝ ನೂರೆ ಮುಹಮ್ಮದ್ ಜಹಾಂ ಗುಲ್ಶನಸ್ತ್**
> ಸೃಷ್ಟಿಕರ್ತ ಅಲ್ಲಾಹನ ಕೃಪೆಯಿಂದಲೇ ನಮ್ಮ ದೇಹ ಆತ್ಮಗಳಿವೆ
> ಮುಹಮ್ಮದ್ ಪೈಗಂಬರರ ಪ್ರಭೆಯಿಂದ ಈ ಜಗತ್ತು ಹೂದೋಟವಾಗಿದೆ.

ಜಗದೇವನ ರಾಜ್ಯದ ಎಲ್ಲ ಕೋಟೆಗಳನ್ನು ಬಾದಶಾಹರ ಆಳ್ವಿಕೆಗೆ ಒಳಪಡುವಂತೆ ವಶಪಡಿಸಿಕೊಂಡು ಈ ಅಷ್ಟೈಶ್ವರ್ಯದ ರಾಜ್ಯದೊಳಗೆ ಸೇರಿಸಿಕೊಳ್ಳಲಾಯಿತು. ಆದರೆ ಅವುಗಳ ಪೈಕಿ ಬಲಿಷ್ಠ ಕೋಟೆ ಕೃಷ್ಣಗಿರಿ ಮಾತ್ರ ಮೈಸೂರಿನ ರಾಜ ತನ್ನ ಬಳಿಯಿರುವ ಸೈನ್ಯ ಮತ್ತು ಕುದುರಾಳುಗಳ ಶಕ್ತಿಯ ಹಿನ್ನೆಲೆಯ ಧೈರ್ಯದಿಂದ

ಕೈವಶಮಾಡಿಕೊಂಡು ಬಿಟ್ಟುಕೊಟ್ಟಿರಲಿಲ್ಲ. ಖಾನ್ ನುಸ್ರತ್ ಝುಫರುದ್ದೀನ್ ಕರೀಮ್ ತನ್ನ ಸೈನ್ಯದೊಂದಿಗೆ ಆ ಬಲಿಷ್ಠ ಕೋಟೆಯ ಮೇಲೇರಿ ಹೋದರು. ಅವರ ಸಿಪಾಯಿಗಳು ಕಾಡಿನ ಸಿಂಹಗಳಂತೆ ಭಯಾನಕ ರೂಪದಂತಿದ್ದರು. ತಮ್ಮ ಬೆಂಕಿಯುಗುಳುವ ಜ್ವಾಲಾಮುಖಿಯಂತಿರುವ ತಲವಾರುಗಳ ಗರ್ವದಿಂದ ಯುದ್ಧದ ಧ್ವಜವನ್ನು ಎತ್ತಿಕೊಂಡು ಸಮರ ಸಾರಿದರು. ಬಲಿಷ್ಠ ಕುದುರೆಗಳನ್ನು ನಾಗಾಲೋಟದಿಂದ ಓಡಿಸಿಕೊಂಡು ವೈರಿ ಸೇನೆಯ ಮೇಲೆ ಮುಗಿಬಿದ್ದರು. ಈ ರಕ್ತದಾಹದ ವೈರಿಗಳ ಮೇಲೆ ಭಯಂಕರ ಶಬ್ಧದೊಂದಿಗೆ ಸ್ಫೋಟಿಸುವ ತೋಪುಗಳ ಮಳೆಗೈದರು. ಈ ರಣರಂಗವು ಅಹಂಕಾರಿ ವೈರಿಗಳನ್ನು ನಾಶಮಾಡಿ ಮಣ್ಣು ಸೇರಿಸಿದರು. ಧರ್ಮದುರಂಧರರಾದ ಬಹದ್ದೂರ ಸಿಪಾಯಿಗಳು ಪರ್ವತ ಬೆಟ್ಟಗಳ ಒಂದು ತುದಿಯಿಂದ ಇನ್ನೊಂದು ತುದಿಗೆ ಹತ್ತಿ ಇಳಿಯುತ್ತಾ ಅಲ್ಲಿ ಇರಿಸಲಾದ ಹಳೆಯ ಕಾಲದ ದೊಡ್ಡ ತೋಪಿನ ತನಕ ತಲಪಿದರು. ತಮ್ಮ ಬಲಿಷ್ಠವಾದ ತಾಕತ್ತಿನೊಂದಿಗೆ ಪರ್ವತದ ಮೇಲೆ ಕಟ್ಟಿಸಲಾದ ಕೋಟೆಯನ್ನು ತಮ್ಮ ವಶಪಡಿಸಿಕೊಂಡರು.

ಈ ಬಹದ್ದೂರ ಸಿಪಾಯಿಗಳು ರಣಚಂಡಿಗಳಂತೆ ಹೋರಾಡುವ ಪರಿಯನ್ನು ತಮ್ಮ ಕಣ್ಣಾರೆ ನೋಡಿ ವೈರಿಗಳು ಭಯಭೀತರಾದರು. ಅವರ ತಾಳ್ಮೆಯು ಶಕ್ತಿಯನ್ನು ಕಳೆದುಕೊಂಡಿತು. ತೋಪುಗಳ ಆರ್ಭಟ, ಬಾಣಗಳ ವೇಗದ ಹಾರಾಟದಿಂದ ಬಹದ್ದೂರ ಸಿಪಾಯಿಗಳ ಜೀವದ ಹಂಗು ತೊರೆದು ಹೋರಾಡುವ ಹಿಮ್ಮತ್ತಿನ ನಿಲುವನ್ನು ಕಂಡು ವೈರಿಗಳುನಡುಗಿದರು. ಕೋಟೆಯ ಕಮಾನುಗಳ ಸಾಲು ತೋಪಿನ ಆಘಾತಕ್ಕೆ ಸಿಲುಕಿ ನರಕದ ಬೆಂಕಿಯ ಏಳು ಕೊಪ್ಪರಿಗೆಗಳೊಳಗೆ ಬಿದ್ದುಬಿಟ್ಟಂತೆ ಆಳದ ಮೃತ್ಯುಕೂಪದೊಳಗೆ ಬಿದ್ದವು. ತಲ್ವಾರುಗಳಿಂದ ತೊಟ್ಟಿಕ್ಕ ರಕ್ತದ ಹನಿಗಳು ದಟ್ಟಮೋಡಗಳಿಂದ ಸುರಿವ ಮಳೆಯಂತೆ ಧಾರಾಕಾರವಾಗಿ ಸುರಿದು ರಣರಂಗದ ಮೈದಾನವನ್ನು ರಕ್ತದಿಂದ ತೊಯ್ದುಬಿಟ್ಟಿತು. ಸಿಪಾಯಿಗಳ ಬೆಂಕಿ ಭುಗಿಲೆದ್ದಂತಿರುವ ಸಿಟ್ಟಿನ ಅರ್ಭಟವು ಆಕಾಶದಲ್ಲಿನ ಮಿರ್ರೀಕ್ ನಕ್ಷತ್ರದ ತನಕ ಕೇಳಿಬಂತು. ಯುದ್ಧರಂಗದಲ್ಲಿ ಹಳೆಯ ವಯಸ್ಸಾದ ಭಾರಿಗಾತ್ರದ ಹೆಬ್ಬಾವು ಭಯಾನಕವಾಗಿ ಬುಸುಗುಟ್ಟುವಂತೆ ಕೇಳಿಬರುತ್ತಿತ್ತು. ಖಾನ್ ನುಸ್ರತ್ ಝುಫರ್ ಕರೀಮ್ ನೋಡುವಾಗ ಈ ವೈರಿಗಳ ಸೈನ್ಯ ಸಮೂಹ ಕೋಟೆಯೊಳಗೆ ಹೆಚ್ಚಿನ ಸಂಖ್ಯೆಯಲ್ಲಿ ಸೇರಿದ್ದರೆಂಬುದು ತಿಳಿದು ಹತ್ಯಾರುಗಳನ್ನು ಧರಿಸಿದ ತನ್ನ ವೀರ ಸಿಪಾಯಿ ಸಮೂಹ ಅರ್ಭಟಿಸುತ್ತಾ ಓಡಿ ಕೋಟೆಯ ಮುಂಬಾಗಿಲ ಬಳಿ ತಲಪಿದರು. ಅಲ್ಲಿ ಕ್ಷಿಪ್ರದಾಳಿ ನಡೆಸಿ ವೈರಿಗಳನ್ನು ಸರ್ವನಾಶ ಮಾಡಿ ಸಾವಿನ ಮಣ್ಣು ತಿನ್ನಿಸಿದರು.

ರಣರಂಗದ ಅತ್ಯಂತ ಬಲಿಷ್ಠ ಸಿಂಹದಂತಹ ಸಿಪಾಯಿಗಳು ಕೋಟೆಯ ಬುರುಜಿನ ಮೇಲೆ ಹತ್ತಿದರು. ತಮ್ಮ ಸಂಪೂರ್ಣ ತಾಕತ್ತಿನ ಧೈರ್ಯಶಾಲಿ ಹೆಜ್ಜೆಗಳನ್ನಿರಿಸುತ್ತ ಜೀವದಹಂಗುತೊರೆದು ಕೋಟೆಯನ್ನು ವಶಪಡಿಸಿಕೊಳ್ಳುವ ಕಾರ್ಯಕ್ಕೆ

ಧುಮುಕಿದರು. ಈ ಮಧ್ಯೆ ಬೈಲೋಲ್ ಖಾನ್ ಶಾಹಜಹಾನಿಯ ಮಕ್ಕಳಾದ ಎರಡು ಮಕ್ಕಳು ಮಿಂಚಿನಂತಹ ವೇಗದಲ್ಲಿ ಬುರುಜಿಗೆ ತಾಗಿದ ಕೋಟೆಯ ಗೋಡೆಯ ಮೇಲೆ ಚಂಗನೆ ಜಿಗಿದರು. ಅಲ್ಲಿ ಕೆಲವು ಯುವ ಸಹಸಿಪಾಯಿಗಳು ತೈನಾತಾಗಿ ನಿಂತು ದಾಳಿಗಾಗಿ ಕಾಯುತ್ತಿದ್ದರು. ಇಲ್ಲಿಂದ ಶೀಘ್ರ ವೇಗದ ಬಾಣಗಳನ್ನು ಬಿಲ್ಲಿಗೆ ಹೂಡಿ ವೈರಿಗಳ ಎದೆಗಳಿಗೆ ಗುರಿಇಟ್ಟು ಹೇಗೆ ಹೊಡೆದರೆಂದರೆ ಅವು ಕೆಂಪು ತಲೆದಿಂಬಿನಂತಾದವು. ಕೊಕ್ಕಿನಲ್ಲಿ ಶರಗಳನ್ನು ಇಟ್ಟುಕೊಂಡ ಹದ್ದುಗಳಂತೆ ಮೃಗವೊಂದರ ಮೇಲೆ ಹಟಾತ್ತಾಗಿ ದಾಳಿ ನಡೆಸಿದಂತೆ ಸಿಪಾಯಿಗಳು ವೈರಿಗಳ ಮೇಲೆ ಎಗರಿದರು. ಇಂತಹ ಎತ್ತರದ ಕೋಟೆಯ ಗೋಡೆಗಳ ಮೇಲೆ ನಿಂತು ವೀರ ಸಿಪಾಯಿಗಳು ಎಂತಹ ದಾಳಿ ನಡೆಸಿದರೆಂದರೆ ವೈರಿ ಸಮೂಹ ಮೇಲಿನಿಂದ ಕೆಳಗೆ ದೊಪ್ಪನೆ ಬಿದ್ದು ಸಾಯುತ್ತಿದ್ದರು. ಹೀಗೆ ಶೂರ ಬಹದ್ದೂರ ಸಿಪಾಯಿಗಳು ತಮ್ಮ ತಲವಾರಿನಿಂದ ವೈರಿ ಸಮೂಹವನ್ನು ರಕ್ತದ ಮಡುವಿನಲ್ಲಿ ಹಾಕಿ ಕೆಡವಿದರು.

ಮತ್ತೆ ಈ ಕುತಂತ್ರಿ ಕಡುವೈರಿಗಳ ಸಮೂಹ ತಮ್ಮ ಕೈಕಾಲುಗಳನ್ನು ಝಾಡಿಸುತ್ತ ಓಡುತ್ತ ಹಿಂದಿನ ಬಾಗಿಲ ಮೂಲಕ ಪಲಾಯನಗೈಯತೊಡಗಿದರು. ಆದರೆ ಘನತೆವೆತ್ತ ಬಲಿಷ್ಠ ಸಿಪಾಯಿಗಳು ಅವರನ್ನು ಹಿಂಬಾಲಿಸಿ ಓಡಿಸುತ್ತ ಬಹಳಷ್ಟು ಮಂದಿಯನ್ನು ಹಿಡಿದು ತಮ್ಮ ರಕ್ತದಾಹಿ ಖಡ್ಗಗಳನ್ನು ಬೀಸಿ ಕೊಂದು ಹಾಕಿದರು. ಹೀಗೆ ಕೃಷ್ಣಗಿರಿಯ ಕೋಟೆ ಬಾದಶಾಹರ ವಶಕ್ಕೆ ಬಂದು ಅವರ ಘನತೆವೆತ್ತ ವೈಭವದ ಆಳ್ವಿಕೆಗೆ ಒಳಪಟ್ಟಿತು.

ಅಭ್ಯಾತ್

ನಸೀಮೆ ದೌಲತೋ ಇಖ್ಬಾಲ್ ಸರ್‌ಮತ್
ವಝೀದ್ ಅಝ್ ಗುಲ್ಶನೆ ದೀನೆ ಮುಹಮ್ಮದ್
ಸಂಪತ್ಭರಿತ ಮರ್ಯಾದಸ್ಥ ಸದಾಕಾಲ ಮುನ್ನಡೆವ ಸವಿತಂಗಾಳಿಯಿದು
ಮುಹಮ್ಮದ್ ಪೈಗಂಬರರ ಉಪದೇಶದ ಹೂದೋಟದಿಂದ ಹೊರಟಿಹುದು.

ಬ ಇಖ್ಬಾಲೇ ಮುಹಮ್ಮದ್ ಷಾಹ ಗಾಝಿ
ನಸೀಬೆ ಎಹ್ಲೆ ದೀನ್ ಸರ್‌ಫರಾಝಿ
ಶೂರ ಹಜ್ರತ್ ಬಾದಶಾಹ ಮುಹಮ್ಮದ್ ಷಾಹರ ಶೌರ್ಯದಿಂದ
ಶ್ರೇಷ್ಠ ಧರ್ಮದ ಘನತೆ ಹೆಚ್ಚಿತು ಅವರ ಸಾಧನೆಯಿಂದ.

ಜಹಾಂ ಇಶ್ರತ್ ಕದಾಯಿ ದೀನೆ ಪರ್ವರಾನ್ ಗಶ್ತ್
ಫಲಕ್ ಗಿರ್ದೆ ಸರೆ ನೇಕ್ ಅಖ್ತರಾನ್ ಗಶ್ತ್
ಈ ಜಗವು ಪುಣ್ಯಶಾಲಿಗಳ ಸಂತಸದ ಮನೆಯಾಯಿತು
ಈ ನಿಯತ್ತಿನ ಜನಗಳ ತಲೆಗಳ ಮೇಲೆ ಆಕಾಶವು ನೆರಳಾಯಿತು.

ಗುಲೇ ಇಶ್ರತ್ ದಮೀದ್ ಅಝ್ ಬಾಗೆ ಅಯ್ಯಾಮ್
ಕೆ ಅಝ್ ಸರ್ ತಾಝು ಶುದ್ ಗುಲ್ಜಾರೆ ಇಸ್ಲಾಮ್
ಸಂತಸದ ಪುಷ್ಪಗಳು ಕಾಲದ ಹೂದೋಟದಲಿ ಅರಳಿವೆ
ಅದರ ಸುಗಂಧದಿಂದ ಇಸ್ಲಾಮಿನ ಹೂದೋಟಕೆ ತಾಜಾತನ ಬಂದಿದೆ.

ಖಾನ್ ನುಸ್ರತ್ ಕರೀಮ್ ಮುಝುಫ್ಫರುದ್ದೀನ್ ಖಾನ್ ಮುಹಮ್ಮದರು ಧರ್ಮನಿಷ್ಠ ಬಾದಶಾಹರ ಪರವಾಗಿ ಕೃಷ್ಣಗಿರಿ ಕೋಟೆಯನ್ನು ಜಯಿಸಿ ವಿಜಯಶಾಲಿಯಾದರು. ಅಲ್ಲಿಂದ ತನ್ನ ಸೈನ್ಯವನ್ನು ಕರೆದುಕೊಂಡು ಮೈಸೂರಿನ ರಾಜನ ಮೇಲೆ ದಾಳಿ ನಡೆಸಲು ಹೊರಟರು.

ಶೇರ್(ಅಶಾರ್)

ಝು ಫೌಝು ದಿಲೇರಾನೆ ದರಿಯಾ ಶಿಕೋಹ್
ಬದಾಮಾನೆ ಸೆಹರಾ ನಿಹಾಗಶ್ತ್ ಕೋಹ್
ಘನಗಾಂಭಿರ್ಯ ವಿಶಾಲ ಸಾಗರದಂತೆ ಈ ಬಹಾದ್ದೂರರ ಸೈನ್ಯವಾಗಿಹುದು
ಮೈದಾನದ ಬದಿಯಲ್ಲಿ ಚಲಿಸಿದರೆ ಪರ್ವತವೂ ಮುಳುಗಿದಂತೆ ಕಾಣುತಿಹುದು.

ಬಹರ್ ಶೂ ಯೆ ಶೇರಾನ್ ದಶ್ತೆ ಮಸಾಫ್
ಚ್ಯೂಂ ಶಂಶೀರೆ ಖುದ್ ಬಾಝುಫರ್ ಸೀನ ಸಾದ್
ಈ ವಿಶಾಲ ರಣರಂಗದಲಿ ಎದೆಬಿರಿದು ಮುಂದೊತ್ತುತ್ತಿರುವ ಸಿಂಹಗಳು
ತಮ್ಮ ವಿಜಯೀ ಖಡ್ಗಗಳನ್ನು ಜಳಪಿಸುತ್ತ ನಡೆವ ಶುದ್ಧ ಹೃದಯಿಗಳು.

ಖ್ರೋಶಾನ್ ವ ಜೋಶಾನ್ ಬಹಾಂ ಹಂಗೆ ಜಂಗ್
ಬಸಹರಾ ರವಾಂ ಚ್ಯೂಂ ಬದರಿಯಾ ನಹಂಗ್
ಯುದ್ಧ ಘೋಷವ ಧೈರ್ಯ ಶೌರ್ಯಗಳೊಂದಿಗೆ ಕೂಗುತ್ತ
ನಡೆದರು ಮೈದಾನದತ್ತ ನದಿಯಂತೆ ಹರಿದು ಹರಡುತ್ತ.

ಮೈಸೂರಿನ ರಾಜ ತನ್ನ ಸುರಕ್ಷೆಗಾಗಿ ಹಾದಿ ಹುಡುಕುತ್ತಾ ಯೋಚಿಸಿ ಕೊನೆಗೆ ತನ್ನ ಕೋಟೆಯೊಳಗೆಯೇ ಅಡಗಿ ಕೂತಿರುವುದು ಒಳ್ಳೆಯದೆಂದು ತೀರ್ಮಾನಿಸಿಕೊಂಡ. ತನ್ನ ನಿಕಟವರ್ತಿಗಳುಲ್ಲ ಸೈನ್ಯದ ಕಾಲಾಳು ತಂಡವೊಂದನ್ನು ಹೊರಗೆ ಕಳುಹಿಸಿದ. ಬಾದಶಾಹರ ಸೈನಿಕರು ಮೈಸೂರಿನ ಕೋಟೆಯ ಸುತ್ತುವರಿಯುವುದಕ್ಕಾಗಿ ತಮ್ಮ ಪ್ರಾಣದ ಹಂಗುತೊರೆದು ಕಾರ್ಯರೂಪಿಸಿ ಕಂಕಣಬದ್ಧರಾದರು. ಸೈನ್ಯ ಸುತ್ತುವರಿದಾಗ ಉಂಟಾದ ಗುಲ್ಲು ಗಲಾಟೆಯಿಂದ ವೈರಿಗಳ ಹೃದಯಗಳು ಹಳೆಯ ಕಟ್ಟಡದ ಗೋಡೆಗಳು ಬಿದ್ದುಹೋಗುವಂತೆ ಚೂರುಚೂರಾಗಿಬಿಟ್ಟಿತು. ರಣರಂಗದಲ್ಲಿ ಯುವ ಹೋರಾಟಗಾರ ಸಿಪಾಯಿಗಳು ಘೇರಾಯಿಸುತ್ತ ಸನಿಹವಾಗುತ್ತ ಕೋಟೆಯನ್ನು ಒಂದು

ಹನಿ ನೀರಿನ ಬಿಂದುವಿನಾಕಾರದ ವೃತ್ತವಾಗಿಸುವ ಮೂಲಕ ಮುಷ್ಠಿಯೊಳಗೆ ಮಾಡಿಕೊಂಡರು. ಇದರ ನಂತರ ಕೋಟೆಯ ಮೇಲೆ ಹತ್ತಿದರು. ವೈರಿಗಳನ್ನು ಒಬ್ಬರ ನಂತರ ಇನ್ನೊಬ್ಬರಂತೆ ಬಲಿಯಾಗಿಸಿಕೊಂಡರು. ವೈರಿಗಳ ಕಡೆಯಿಂದಲೂ ಸಾಕಷ್ಟು ಜೋರಾಗಿ ಪ್ರತಿದಾಳಿ ಎದುರಿಸಬೇಕಾಗಿ ಬಂತು. ತೋಪುಗಳ ಹಾರಾಟವೂ ನಡೆದಿತ್ತು. ಆದರೆ ಬಾದಶಾಹರ ಶೂರ ಸೈನಿಕರು ದಿಟ್ಟಹೆಜ್ಜೆಗಳನ್ನಿಟ್ಟು, ಈ ಎಲ್ಲ ಅಪಾಯಗಳನ್ನು ಕ್ಷುಲ್ಲಕವೆಂದು ಪರಿಗಣಿಸಿ, ಕೋಟೆಯ ಪ್ರತೀ ಬರುಜುಗಳನ್ನು ನವವಧುವಿನ ಕೊಠಡಿಯನ್ನು ಉತ್ಸುಕತೆಯಿಂದ ಪ್ರವೇಶಿಸುವ ವರನಂತೆ ಒಳಪ್ರವೇಶಿಸಿ ವೈರಿಗಳ ರಕ್ತದ ಕೋಡಿ ಹರಿಸಿದರು. ಎದೆ ಇರಿಯುವ ಹರಿತವಾದ ಖಡ್ಗಗಳಿಂದ ತೊಟ್ಟಿಕ್ಕುವ ಕೆಂಪುರಕ್ತವನ್ನು ಬಹಾದ್ದೂರ ಸಿಪಾಯಿಗಳು ನೀಲವರ್ಣಕ್ಕೆ ತಿರುಗಿಸಿದರು. ಬಾದಶಾಹರ ಸೈನಿಕರ ಮುತ್ತಿನಂತಹ ದೇಹದಲ್ಲಿ ವೈರಿಗಳ ಈಟಿಗಳ ಪ್ರಹಾರದಿಂದ ಉಂಟಾದ ಸಾವಿನ ದಾಖಲೆಯನ್ನು ಸಾವಿನ ದೇವದೂತರು ಕೂಡ ತಮ್ಮ ಲೇಖನಿಯ ಮೂಲಕ ಬರೆಯುವಾಗ ಬಹಳಷ್ಟು ಮುಜುಗರಪಟ್ಟುಕೊಂಡು ಬರೆದರು. ಆದರೆ ಈ ಶೂರ, ವಿಜಯಶಾಲಿಗಳಾದ ಬಹದ್ದೂರ ಸಿಪಾಯಿಗಳು ತಮ್ಮ ಹೊಳಪಿನ ತಲವಾರುಗಳ ಹೊಡೆತದಿಂದ ಮೈಸೂರಿನ ರಾಜರ ಇಲಾಖೆಗೆ ಸೇರಿದ ನಾಲ್ಕು ಕೋಟೆಗಳನ್ನು ಕೂಡ ಜಯಿಸಿದರು. ಇದನ್ನು ಈ ರಾಜ ತನ್ನ ಮುಷ್ಠಿಯೊಳಗೆ ಮಾಡಿಕೊಂಡು ಈ ಹಿಂದೆ ಬಹಳಕಾಲದಿಂದ ಅನುಭವಿಸುತ್ತಿದ್ದ.

ಈ ಸಂದರ್ಭದಲ್ಲಿ ವೈಭವದಿಂದ ಕೂಡಿದ ಬಾದಶಾಹರ ಕಡೆಯಿಂದ ಸೇನಾಧಿಪತಿ ಖಾನ್ ಝುಫರ್ ತುಮಾನ್ ಖಾನ್ ಮುಹಮ್ಮದರಿಗೆ ಒಂದು ಫರ್ಮಾನುಬಂತು. ಶೃಂಗರಾಜನೆಂಬ ಸೇನಾಧಿಪತಿಯೊಬ್ಬ ವೇಲೂರಿನ ಕೋಟೆಯಲ್ಲಿ ತಂಗಿದ್ದು ತನ್ನ ದುಷ್ಟಬುದ್ಧಿಯನ್ನು ಪ್ರದರ್ಶಿಸುವ ಜೊತೆಗೆ ಕುತಂತ್ರಗಳನ್ನು ಮಾಡುತ್ತಿದ್ದಾನೆ, ಅವನು ನಮ್ಮ ಮೇಲೆ ದಾಳಿನಡೆಸುವ ತನ್ನ ಕೆಟ್ಟ ಉದ್ದೇಶಗಳನ್ನು ಸಫಲಗೊಳಿಸುವ ನಿಟ್ಟಿನಲ್ಲಿ ಮೀರ್ ಜುಮ್ಲಾ ಖುತುಬ್ ಷಾನನ್ನು ತನ್ನ ಪ್ರತಿನಿಧಿಯಾಗಿಸಿ ತನ್ನ ಕೆಲಸದಲ್ಲಿ ತೊಡಗಿಸುವುದಕ್ಕೆ ಕಾರ್ಯಕ್ರಮ ರೂಪಿಸಿದ್ದಾನೆ. ಅವನ ಮೂಲಕ ಪತ್ರಬರೆಸಿ ಐದು ಲಕ್ಷ ಹವನ್ ಮತ್ತು ಇನ್ನೂರ ಐವತ್ತು ಆನೆಗಳನ್ನು ಮೊಗಲರಿಂದ ಸಹಾಯ ಪಡೆಯುವುದಕ್ಕಾಗಿ ಕಳುಹಿಸಿದ್ದಾನೆಂಬ ವಿಷಯದ ಬಗ್ಗೆ ಫರ್ಮಾನು ಬರುತ್ತದೆ.

ಮೀರ್ ಜುಮ್ಲ ಈ ಷಡ್ಯಂತ್ರದಲ್ಲಿ ಶಾಮೀಲಾಗಿ ಶೃಂಗರಾಜನೊಂದಿಗೆ ಮಾತಿನ ಕರಾರುಮಾಡಿಕೊಂಡು ಮೊಗಲರ ಸಹಾಯ ಯಾಚಿಸುವ ಮೂಲಕ ಅವರಿಗೂ ಅಮಿಷವನ್ನು ತೋರಿಸುವ ಕೆಲಸವನ್ನೂ ಮಾಡಿ ಈ ಮೂಲಕ ಬಾದಶಾಹರ ವಿರುದ್ಧ ದ್ವೇಷಸಾಧನೆಯನ್ನು ಮಾಡಲು ಯೋಜಿಸಿದ. ಅವನ ಉದ್ದೇಶ ಈ ಪ್ರಾಂತ್ಯದಲ್ಲಿ ತಮ್ಮ ವಿದ್ರೋಹದ ಸಂಚು ಹೇಗಾದರೂ ಮಾಡಿ ಫಲಿಸಬೇಕಾಗಿತ್ತು. ಆದರೆ ಅವನಿಗೆ

ಹಾಗೂ ಅವನ ಸಹಕಾರಿಯಾಗಿದ್ದ ವಿನಾಶಕಾರಿ ಬುದ್ಧಿಯ ಶೃಂಗರಾಜನಿಗೆ ಈ ವಿದ್ರೋಹದ ಕೃತ್ಯದಿಂದ ಮುಖಭಂಗ ಕಠಿಣವಾದ ಶಿಕ್ಷೆ ಅನುಭವಿಸ ಬೇಕಾಗುತ್ತದೆಂಬುದು ತಿಳಿದಿರಲಿಲ್ಲ. ಮುಂದೆ ಈ ವಿದ್ರೋಹದ ಫಲಿತಾಂಶ ಹೀಗೆಯೇ ಆಯಿತು. ಈ ಕೆಲಸಗಳಿಗೆ ಮುಕ್ತಾಯ ಹಾಡುವ ಸಂದರ್ಭದಲ್ಲಿ ಕೊನೆಯಲ್ಲಿ ಅವನಿಗೆ ಸೋಲಿನ ಸಾಲುಗಳೇ ಎದುರಾಗಿ ಮೂಲೆಸೇರುವಂತಾಯಿತು. ಆ ಕಾಲದ ಕೆಲವು ತಿಳುವಳಿಕೆಯುಳ್ಳ ಜ್ಞಾನಿಗಳು ಹಾಗೂ ಬುದ್ಧಿವಂತರು ಮೈಸೂರಿನ ರಾಜನನ್ನು ಓರ್ವ ಪ್ರಭಾವಿ ರಾಜನೆಂದು ಪರಿಗಣಿಸಿರಲಿಲ್ಲ. ಪ್ರಜೆಗಳು ಕೂಡ ಈ ರಾಜನ ಪ್ರಸ್ತುತತೆ ಮತ್ತು ಅಪ್ರಸ್ತುತತೆಯ ಗಣನೆಯನ್ನೇ ಮಾಡುತ್ತಿರಲಿಲ್ಲ. ಅವನ ರಾಜ್ಯವನ್ನು ವಶಪಡಿಸಿಕೊಳ್ಳುವಾಗ ಮತ್ತು ಅವನ ಆಳ್ವಿಕೆಯನ್ನು ಕೊನೆಗೊಳಿಸುವಾಗ ಬಾದಶಾಹರ ಸೈನ್ಯಕ್ಕೆ ಜನರ ಬೆಂಬಲ ಸಿಕ್ಕಿತ್ತು. ಹಾಗೆಯೇ ಶೃಂಗರಾಜನ ಆಳ್ವಿಕೆಯನ್ನು ಕೊನೆಗೊಳಿಸಿ ಬಾದಶಾಹರ ದಂಡು ವೇಲೂರಿನ ಕೋಟೆಯ ಕಡೆ ಪ್ರಯಾಣ ಬೆಳೆಸಲು ತೀರ್ಮಾನಿಸಿತು. ಮೈಸೂರಿನ ರಾಜನ ಕೈವಶದಲ್ಲಿದ್ದ ಚಿಕ್ಕ ಚಿಕ್ಕ ಕೆಲವು ಕೋಟೆಗಳನ್ನು ಬಾದಶಾಹರ ಶೂರ ಸೈನಿಕರು ವಶಪಡಿಸಿಕೊಂಡರು. ಸೇನಾಧಿಪತಿ ಖಾನ್ ನುಸ್ರತ್ ಕರೀಮ್ ಈ ಚಿಕ್ಕಪುಟ್ಟ ಕೋಟೆಗಳನ್ನು ವಶಪಡಿಸಿಕೊಂಡ ನಂತರ ತನ್ನ ಸೈನ್ಯದೊಂದಿಗೆ ವೇಲೂರಿನ ಕೋಟೆಯನ್ನು ವಶಪಡಿಸಿಕೊಳ್ಳುವ ಸಲುವಾಗಿ ಪ್ರಯಾಣ ಬೆಳೆಸಿದರು.

ವೇಲೂರಿನ ಕೋಟೆ ತಲಪಲು ಹೊರಟವರು ಎರಡು ಮೂರು ಹಂತಗಳು ಮಾತ್ರ ಚಲಿಸಿ ಪಯಣದ ಹಾದಿ ಇನ್ನೂ ಪೂರ್ಣಗೊಳಿಸಿರಲಿಲ್ಲ, ಅಷ್ಟರಲ್ಲಿ ಮೈಸೂರಿನ ರಾಜ ದ್ವೇಷದಿಂದ ಕೂಡಿ ಬಾದಶಾಹರ ವಿರುದ್ಧ ವಿದ್ರೋಹದ ಸಂಚು ಹೂಡಿದ್ದಾನೆಂಬ ಸುಳಿವು ಸಿಕ್ಕಿತು. ಈತನು ದಾಸರಾಜನೆಂಬ ಹೆಸರಿನವನನ್ನು ತನ್ನ ಪೇಶ್ವನನ್ನಾಗಿ ಮಾಡಿ ಅಸಂಖ್ಯಾತ ಕುದುರೆಗಳು, ಸಾಮಾನು ಸರಂಜಾಮುಗಳ ಜೊತೆಗೆ ತನ್ನ ಸೈನ್ಯವನ್ನು ನೀಡಿ ಕಾವಲಿ ಎಂಬ ಕೋಟೆಯ ಸರಹದ್ದಿಗೆ ಬಾದಶಾಹರ ಸೈನ್ಯದ ವಿರುದ್ಧ ಯುದ್ಧಕ್ಕೆ ಕಳುಹಿಸಿದ. ಸೇನಾಧಿಪತಿ ಖಾನ್ ಝುಫರ್ ತುಮಾನ್‌ರಿಗೆ ಈ ವರ್ತಮಾನ ಸಿಕ್ಕಿದ ಕೂಡಲೇ ಈ ವಿದ್ರೋಹವನ್ನು ಹುಟ್ಟಿದಲ್ಲೇ ನಾಶಪಡಿಸುವುದಕ್ಕಾಗಿ ಸಯ್ಯದ್ ಮಸೂದ್‌ನ ನೇತೃತ್ವದಲ್ಲಿ ಸೇನಾತುಕಡಿಯೊಂದನ್ನು ಅನುಗೊಳಿಸಿ ಅಲ್ಲಿಗೆ ಹೋಗುವುದಕ್ಕೆ ಸಜ್ಜಾದರು. ಸಯ್ಯದ್ ಮಸೂದ್ ಹೋರಾಟಕ್ಕೆ ತಯಾರಾಗಿ ನಿಂತ ತನ್ನ ಸೈನಿಕರು ಹಾಗೂ ಜೊತೆಗಾರರೊಂದಿಗೆ ಪ್ರಯಾಣ ಬೆಳೆಸಿ ಕಾವಲಿಪಟ್ಟಣ ಕೋಟೆಯ ಬಳಿ ತಲಪಿದ. ಅಲ್ಲಿ ಈ ದುಷ್ಟಬುದ್ಧಿಯ ದಾಸರಾಜ ಕೆಲವು ಕೆಟ್ಟ, ಸ್ವಭಾವತಹ ಕ್ರೂರಿಯಾದ ಜೊತೆಗಾರರ ದಂಡಿನೊಂದಿಗೆ ಈ ಬಹದ್ದೂರ ಸಿಪಾಯಿಗಳನ್ನು ಎದುರಿಸಿ ಯುದ್ಧಹೂಡುವ ಸಲುವಾಗಿ ಒಂದು ತಂಡವನ್ನು ತಯಾರುಮಾಡಿ ನಿಂತಿದ್ದ. ಆದರೆ ಈ ಬಹದ್ದೂರ ಸೈನಿಕರನ್ನು ನೋಡಿ, ಅವರ ಧೈರ್ಯ ಮತ್ತು ಸಾಹಸದ ನಡೆಯ ಪ್ರಭಾವ ಅವರ ಮೇಲೆ ಬೀರಿತು. ಯುದ್ಧದ

ವಾತಾವರಣ ಮೂಡಿತು. ಯುದ್ಧವಲ್ಲಿ ಶಿರಗಳನ್ನು ಮಡಿಗಟ್ಟುವ ತಲವಾರುಗಳಿಂದ ವೈರಿಗಳ ರಕ್ತದ ಕೋಡಿ ಹರಿಯುವ ಧಾರೆ ನೀಲಾಕಾಶದ ತನಕ ಹರಿದುದು ಕಂಡು ವೈರಿಗಳ ಹುಮ್ಮಸ್ಸಿನ ಹಡಗು ಅಲ್ಲೋಲಕಲ್ಲೋಲವಾಯಿತು.

ಸಯ್ಯದ್ ಮಸೂದ್ ನೇತೃತ್ವದ ಸೈನಿಕರ ತಂಡದ ಈಟಿ, ಭರ್ಚಿಗಳು ಗುರಿಕಾರರು ನಡೆಸಿದ ಭೀಕರ ಹಲ್ಲೆಯಿಂದ ಅವರ ಬಲಿಷ್ಠ ಶಿರಗಳಲ್ಲಿ ತೂತುಬಿದ್ದು ಕೊರೆದು ಕರಗಿಹೋದವು. ಬಿಲ್ಲುಬಾಣಗಳ ಪಟುಗಳ ಶರಗಳು ಚಲಿಸುವ ವೇಗದಲ್ಲಿ ಅವರ ತಲೆಯನ್ನು ಶಂಖದ ಪಂಜದ ಬಲಿಷ್ಠ ಮುಷ್ಠಿಯೊಳಗೆ ಬಿಗಿಹಿಡಿದಂತೆ ಕಚ್ಚಿಹಿಡಿದು ಕಳಚಿ ಬೀಳಿಸಿತು. ಕೋಳಿಮರಿಯು ಗೋಡೆಯ ಮೇಲಿಂದ ಹಾರಿ ಮುಗಿಬಿದ್ದು ಧಾನ್ಯವನ್ನು ಕುಕ್ಕಿದಂತೆ ವೈರಿಗಳ ಸೈನ್ಯದ ಮೇಲೆ ಬಾದಶಾಹರ ಸೈನಿಕರು ದಾಳಿನಡೆಸಿದರು. ಈ ದುಷ್ಟ ವೈರಿಗಳ ಎದೆಗಳನ್ನು ಇರಿದ ಗಾಯವು ಹಣೆಯಲ್ಲಿ ಧರಿಸಿದ ಸಿಂಧೂರದಂತೆ ಎದ್ದು ಕಾಣುತ್ತಿತ್ತು. ಅತ್ಯಂತ ಹರಿತ ಮೊನೆಯ ಈಟಿಗಳಿಂದ ವೈರಿಗಳ ಎದೆಗಳ ಮೇಲೆ ನಾಟಿ ಬಿದ್ದ ಹೆಣಗಳ ರಾಶಿ ಮೈದಾನದಲ್ಲಿ ಮುಳ್ಳುಗಳು ಮೂಡಿದಂತೆ ಕಂಡುಬಂದವು. ತೋಪು ಮತ್ತು ತಲವಾರುಗಳ ಮೂಲಕ ಮೂಡಿದ ಭೀಕರ ಬೆಂಕಿ ಪೂರ್ವ ಪಶ್ಚಿಮ ದಿಕ್ಕುಗಳಲ್ಲಿ ಭುಗಿಲೆದ್ದಿತು. ಈ ಭೀಕರ ಕಾದಾಟದಿಂದ ಪರ್ವತದಂತಹ ಕೋಟೆಯ ಭಾಗಗಳು ಮುರಿದು ಬಿದ್ದು ಮೇಣದ ಬತ್ತಿಯಂತೆ ಕರಗಿ ನೀರಾಗಿ ಹರಿಯಿತು. ಅಥವಾ ಸೂರ್ಯನ ಶಾಖದಿಂದ ನೀರ್ಗುಳ್ಳೆಗಳು ಒಡೆದು ನಾಶವಾದಂತೆ ಕಾಣಿಸುತ್ತಿತ್ತು.

ನಜ್ಮ್

ತಫಂಗ್ ಅಝ್ ತುಫೇ ಕಹರ್ ಜಂಗ್ ಆವರಾನ್
ಬರುವೇ ಹವಾ ಹಲ್ಕಾ ಝುದ್ ಚ್ಯೂಂ ದುಕಾನ್
ಯುದ್ಧ ನಿರತ ಸೈನಿಕರು ಎಷ್ಟೊಂದು ಸಿಟ್ಟಿನೊಂದಿಗೆ ಬಾಣ ಹೂಡಿದರು
ಗಾಳಿಯ ಮೂಲಕ ಹೊಗೆಯು ಆಕಾಶದ ತನಕ ಆವರಿಸುವಂತೆ ಮಾಡಿದರು.

ಕೆ ಶುದ್ ಬರ್ಝೆ ಖೂನಾಬ್ ದೋಶೆ ಬರೂಶ್
ಪರೋ ರೇಖ್ತ್ ಅಸ್ಸುಬಹೇ ಮಗ್‌ಝೋ ಸರಶ್
ವೈರಿಗಳ ಶಿರ ಮತ್ತು ಎದೆಗಳು ರಕ್ತದ ಕಾಲುವೆಯಲ್ಲಿ ಮುಳುಗಿದವು
ಅವರ ತಲೆಯೊಳಗಿನ ಮಿದುಳ ಬಳ್ಳಿ ಹೊರಬಂದವು.

ಶುದಝ್ ನೋಕೆ ಪೈಕಾನ್ ಖೂನ್ ಆಬ ಯೆ ಬಾರ್
ಬಹರ್ ಸೂಯೆ ಸದ್ ಕಾನ್ ಲಾಲ್ ಆಶ್‌ಕಾರ್
ಅವರ ತಲವಾರಿನ ಮೊನೆಯಲ್ಲಿ ಹರಿದ ರಕ್ತ ಮಳೆ ನೀರಲ್ಲಿ ಹರಿಯಿತು
ಕೆಂಪು ಮಾಣಿಕ್ಯದ ನೂರು ಗಣಿಗಳು ಹೊರಬಂದಂತಾಯಿತು.

ಝೆ ಬಸ್ ತೀರೆ ಬಾರಾನ್ ಜಹಾಂ ತೀರೆ ಗಶ್ತ್
ಕೆ ಶುದ್ ಬರ್ಕೆ ಶಂಶೀರ್ ಆತಿಶ್ ಫಿಶಾಂ
ಬಾಣಗಳ ಮಳೆಯಿಂದ ಭೂಮಿಯೆಲ್ಲ ತಿರುಗಿಮುರುಗಿ ಬಿದ್ದವು
ತಲವಾರು ಝಳಪಿಸುವಾಗ ಹೊಮ್ಮಿದ ಮಿಂಚು ಬೆಂಕಿಯ ಮಳೆ ಸುರಿಸಿತು.

ಯುದ್ಧನಿರತ ಯೋಧರು ವೇಗವಾಗಿ ಬೀಸುತ್ತಿರುವ ತೂಫಾನಿನ ಅಲೆಗಳನ್ನು ಹಾವಿನಂತೆ ಸುತ್ತಿಹಾಕಿದರು. ಈ ಕುಲ್ಝುಮ್‌ನಂತಹ ಸಾಗರದಲ್ಲಿ ವೈರಿ ಮೊಸಳೆಗಳನ್ನು ಹೊರಗೆ ಎಳೆದೆಳೆದು ಹಾಕತೊಡಗಿದರು. ಈ ವೈರಿಗಳ ದೇಹದಿಂದ ತುಂಡರಿಸಲ್ಪಟ್ಟ ಶಿರಗಳು ಪ್ರತಿಶೋಧದ ಕಾಡಿನಲ್ಲಿ ರಾಶಿರಾಶಿ ಕಂಡುಬಂದವು. ಸಯ್ಯದ್ ಮಸೂದನಿಗೆ ಈ ವೈರಿಗಳು ಯುದ್ಧರಂಗದಿಂದ ಕಾಲುಕಿತ್ತು ಓಡಿದಂತೆ ಕಂಡುಬಂದಂತೆ ಅನಿಸಿತು. ಅವನು ಬಹಾದ್ದೂರ ಯುದ್ಧನಿರತರೊಂದಿಗೆ ತನ್ನ ಅನುಯಾಯಿಗಳೊಂದಿಗೆ ಕ್ಷಿಪ್ರದಾಳಿಯನ್ನು ನಡೆಸಿದಾಗ ವೈರಿ ಸೈನ್ಯದ ಧೈರ್ಯ ಉಡುಗಿ ಚೆಲ್ಲಾಪಿಲ್ಲಿಯಾಗಿ ಓಡಿದರು. ವೈರಿಗಳ ಮುಂದಾಳು ದೇವದಾಸರಾಜನ ದೇಹದಿಂದ ಶಿರವನ್ನು ಮರದಿಂದ ಗೆಲ್ಲೊಂದನ್ನು ಕಡಿದು ಹಾಕುವಂತೆ ಕಡಿದು ಜನರಲ್ಲಿ ಭಯಮೂಡಿಸುವಂತೆ ಸಾರ್ವಜನಿಕ ರಸ್ತೆಯಲ್ಲಿ ಎಸೆದರು. ಬಹಳಷ್ಟು ವೈರಿ ಸೈನಿಕರನ್ನು ಬಾದಶಾಹರ ಬಹದ್ದೂರ ಸಿಂಹಗಳಂತಹ ಸೈನಿಕರು ಬಂದಿಸಿ ವಶಪಡಿಸಿಕೊಂಡರು. ಅವರಲ್ಲಿ ಕೆಲವರು ತಮ್ಮ ಜೀವ ಉಳಿಸಿಕೊಳ್ಳಲು ಅಲ್ಲಿಂದ ಕಾಲುಕಿತ್ತರು. ಮೈಸೂರ ರಾಜನು ತನ್ನ ಕಣ್ಣಾರೆ ಯುದ್ಧದ ಈ ದೃಶ್ಯಗಳನ್ನು ನೋಡಿದಾಗ ತುಂಬ ನಾಚಿಕೆಯಿಂದ ತಲೆತಗ್ಗಿಸಿಕೊಂಡ. ತನ್ನನ್ನು ತಾನು ನಾಚಿಕೆಯ ವಸ್ತ್ರದಿಂದ ಸುತ್ತಿಕೊಂಡು ಒಂದು ಮೂಲೆಯಲ್ಲಿ ಅಡಗಿ ಕೂತನು.

ಸೇನಾಧಿಪತಿ ಖಾನ್ ನುಸ್ರತ್ ಕರೀಮ್ ಖಾನ್ ವೇಲೂರಿನ ಕೋಟೆಯ ಕಡೆ ಪಯಣಿಸುವ ಹಾದಿಯಲ್ಲಿ ಈ ಘಟನೆಗಳ ವರ್ತಮಾನದ ಜೊತೆಗೆ ಸಯ್ಯದ್ ಮಸೂದನ ನೇತೃತ್ವದ ಸೇನಾ ತುಕಡಿಗಳಿಸಿದ ವಿಜಯದ ಶುಭವಾರ್ತೆ ತಲಪಿದಾಗ ಬದಾಶಾಹರ ಆಳ್ವಿಕೆಯು ಹೀಗೆ ಬಹಳಕಾಲ ಜಯಶೀಲವಾಗಿರಲೆಂದು ಹಾರೈಸಿ, ಅವರ ಅಯುರಾರೋಗ್ಯ ಧನಸಂಪತ್ತಿನ ವೃದ್ಧಿಗಾಗಿ ಅಲ್ಲಾಹನಲ್ಲಿ ಪ್ರಾರ್ಥಿಸಿದರು. ಖಾನ್ ನುಸ್ರತ್ ಕರೀಮನ ಶಿಫಾರಸಿನ ಮೇರೆಗೆ ಹಜ್ರತ್ ಶೆಹನ್‌ಶಾಹ ಬಾದಶಾಹರು ಈ ವಿಜಯಕ್ಕೆ ಮುಹಮ್ಮದ್ ಜಹೂರಿಯ ಮೂಲಕ ಸಯ್ಯದ್ ಮಸೂದನನ್ನು ತನ್ನ ಮಂತ್ರಿ ಮಂಡಳದಲ್ಲಿ ಸೇರಿಸಿಕೊಂಡು 'ಮಸೂದ್ ಎ ಫಾಲಿ' ಅಥವಾ 'ಮಸೂದ್ ಎಂಬ ಅಮೂಲ್ಯ ವ್ಯಕ್ತಿ' ಎಂಬ ಬಿರುದನ್ನು ದಯಪಾಲಿಸಲಾಯಿತು. ಮನಸೂರೆಗೊಳ್ಳುವ ಸಮಾರಂಭದಲ್ಲಿ ಬಾದಶಾಹರ ದರ್ಬಾರಿನಲ್ಲಿ ಈ ಸನ್ಮಾನ ನಡೆದು ರಾಜೋಕ್ತ ಉಡುಗೊರೆ, ಕಾಣಿಕೆಗಳನ್ನು ನೀಡಲಾಯಿತು. ಖಾನ್ ಝುಪರ್ ತುಮಾನ್‌ರು ಸಯ್ಯದ್ ಮಸೂದ್‌ನಿಗೆ ಯುವಕರ ಒಂದು ಸೈನಿಕರ ತಂಡವನ್ನು

ನೀಡಿ ಚಾವಲಿಪಟ್ಟಣ ಕೋಟೆಯನ್ನು ನೋಡಿಕೊಳ್ಳುವ ಉಸ್ತುವಾರಿಯ ಜವಾಬ್ದಾರಿಯನ್ನು ನೀಡಿ ವೈರಿಗಳು ಮತ್ತೆ ಕುತಂತ್ರ ಮಾಡಲು ತಲೆಯೆತ್ತದಂತೆ ಜಾಗರೂಕತೆಯಿಂದ ಇರುವಂತೆ ವ್ಯವಸ್ಥೆಮಾಡಿದರು. ಸೊಂಟ ಮುರಿದ ನವಿಲು ತನ್ನ ಗೂಡಿನಿಂದ ಹೊರಬರುವ ತಾಕತ್ತು ಕಳೆದುಕೊಂಡಂತೆ, ವೈರಿಗಳು ತಮ್ಮ ಅಡ್ಡೆಯಿಂದ ಹೊರಬರದಂತೆ ಮಾಡಬೇಕೆಂದು ಯೋಜಿಸಲಾಗಿತ್ತು.

ಶೃಂಗರಾಜನಿಗೆ ಬಾದಶಾಹರ ಸೈನ್ಯ ಬಂದ ಸುದ್ದಿ ತಿಳಿದಾಗ ತನ್ನ ಬಳಿ ಇದ್ದ ಸೇನೆ ಮತ್ತು ಸೇನಾ ಸಾಮಾಗ್ರಿಗಳನ್ನು ಒಟ್ಟುಗೂಡಿಸಿಕೊಂಡು ಭಯಭೀತನಾಗಿ ಓಡುತ್ತ ತನ್ನ ಸುರಕ್ಷೆಗಾಗಿ ಕೋಟೆಯೊಳಗೆ ಹೋದ. ಈ ಕುದುರೆಗಳು ಮತ್ತು ಸೈನಿಕರನ್ನು ಸೇರಿಸಿ ಗರ್ವದಿಂದ ನಾನೇ ಕೋಟೆಯ ರಾಜನೆಂದು ಘೋಷಿಸಿಕೊಂಡ. ಆದರೆ ಅವನು ಯೋಚಿಸಿದಂತೆ ಆಗಲಿಲ್ಲ. ಬಾದಶಾಹರ ವಿಜಶಾಲಿ ಸೈನ್ಯ ಅಲ್ಲಿ ತಲಪಿ ಅವನನ್ನು ಮತ್ತು ಅವನ ಸೈನಿಕರನ್ನು ಸೋಲಿಸಿದರು.

ಖಾನ್ ನುಸ್ರತ್ ಝುಫರ್ ಕರೀಮ್ ವೇಲೂರಿನ ಕೋಟೆಯ ಸನಿಹ ತಲಪಿದಾಗ ಹತ್ತಿರದ ವೀರಬದ್ರ ಕೋಟೆಯು ಅವನ ಕಣ್ಣಿಗೆ ಬಿತ್ತು. ಈ ಕೋಟೆಯು ಶತಮಾನಗಳಿಂದ ಪಾಳುಬಿದ್ದಿತ್ತು. ಇದರ ಬುರುಜು ನಿಂತಿದ್ದ ತಳಪಾಯ ಅತ್ಯಂತ ಬಲಿಷ್ಠವಾಗಿತ್ತು. ಈ ಕೋಟೆಯ ಕಮಾನುಗಳ ಸುಂದರ ಹೊಳಪು ಭೂಮಿಯನ್ನು ಬೆಳಗುವ ಸೂರ್ಯನ ಹೊಳಪಿನೊಂದಿಗೆ ಸೇರಿ ಇಮ್ಮಡಿಯಾಗಿ ಕಣ್ಣಿಗೆ ಕುಕ್ಕುವಂತೆ ಪ್ರತಿಫಲಿಸುತ್ತಿತ್ತು. ಗೋಡೆಗಳ ಕೆಲವು ಭಾಗಗಳು ಮುರಿದು ಬಿದ್ದಿದ್ದವು. ಆದರೆ ಬುರುಜು ಬಲಿಷ್ಠವಾಗಿದ್ದು ಯಾವುದೇ ರೀತಿಯ ಬಿರುಕಾಗಲಿ ಘಾಸಿಯಾಗಲಿ ಆಗದೆ ತನ್ನ ಸೌಂದರ್ಯವನ್ನು ಉಳಿಸಿಕೊಂಡಿತ್ತು. ಬುರುಜುಗಳಲ್ಲಿ ಇರಿಸಲಾಗಿದ್ದ ತೋಪುಗಳನ್ನು ಎಂತಹ ಆಶ್ಚರ್ಯಕರ ರೀತಿಯಲ್ಲಿ ಜೋಡಿಸಿಟ್ಟಿದ್ದರೆಂದರೆ ಅದು ಹತ್ತಿರದಲ್ಲಿ ನೋಡಿದರೆ ಕಂಡುಬರುತ್ತಿದ್ದರೂ ಸ್ವಲ್ಪ ದೂರದಲ್ಲಿ ನಿಂತು ನೋಡಿದರೆ ಕಾಣದಂತೆ ವಿಶೇಷರೀತಿಯಲ್ಲಿ ಇರಿಸಿದ್ದರು. ಆದರೆ ಅಲ್ಲಾಹನ ಕೃಪೆಯಿಂದ ಬಾದಶಾಹರ ಪುಣ್ಯ ಮತ್ತು ಭಾಗ್ಯದಿಂದ ಖಾನ್ ನುಸ್ರತ್ ಕರೀವ್ ವೇಲೂರಿನ ಕೋಟೆಯನ್ನು ವಶಪಡಿಸಿಕೊಳ್ಳುವುದರಲ್ಲಿ ಜಯಶಾಲಿಗಳಾದರು.

ಬಾದಶಾಹರ ಸೇನಾಧಿಪತಿ ಸಂಪೂರ್ಣವಾಗಿ ವೇಲೂರಿನ ಕೋಟೆಯ ಮೇಲಿನ ತನ್ನ ಹಿಡಿತವನ್ನು ಮಜಬೂತಾಗಿ ಮಾಡಿಕೊಂಡರು. ಇವರ ಪ್ರಾಮಾಣಿಕ ನಿಯತ್ತು, ಶೌರ್ಯಕ್ಕಾಗಿ ಮತ್ತು ಅತ್ಯಂತ ಅಮೂಲ್ಯವಾದ ಅವರ ಸೇವೆಗಾಗಿ ಒಡೆಯನಾದ ಬಾದಶಾಹರ ಕಡೆಯಿಂದ ಮುಹಮ್ಮದ್ ಜಹೂರರ ಮೂಲಕ ಶಾಹಿ ಉಡುಗೊರೆಗಳು, ಕಾಣಿಕೆಗಳನ್ನು ಕಳುಹಿಸಲಾಯಿತು. ಕರ್ನಾಟಕ ಮತ್ತು ಮಲೆನಾಡಿನ ಆಸುಪಾಸಿನ ರಾಜರು ಕೂಡ ಕಪ್ಪಕಾಣಿಕೆಯನ್ನು ನೀಡಿದರು. ಈ ಉದ್ದೇಶದಿಂದ ಬದ್ರಾ ಪ್ರಾಂತ್ಯದ

ರಾಜನಿಗೂ ಎಂದಿಗಿಂತ ಹೆಚ್ಚಿನ ಮೌಲ್ಯದ ಕಪ್ಪಕಾಣಿಕೆಯನ್ನು ನೀಡಬೇಕೆಂದು ಆಜ್ಞೆಮಾಡಲಾಯಿತು. ಯಾಕೆಂದರೆ ಬಾದಶಾಹರ ಕೃಪೆ, ಆಶೀರ್ವಾದಗಳ ಸೂರ್ಯ ನಿಮ್ಮ ತಲೆಯ ಮೇಲೆ ಸದಾಕಾಲ ಕಾಪುನೀಡಿ ಪೊರೆಯುತ್ತಿರಬೇಕೆಂಬುದು ಸದಾಶಯವಾಗಿದೆ. ಭದ್ರಾ ಪ್ರಾಂತ್ಯದ ರಾಜನು ಬಾದಶಾಹರ ಸೇನಾಧಿಪತಿ ಖಾನ್ ಝುಪರ್ ಕರೀಮರ ಈ ಆಜ್ಞೆಯನ್ನು ತನಗೆ ನೀಡುವ ಜೊತೆಗೆ ಅಭಯದ ಆಶ್ವಾಸನೆಯನ್ನು ಅರ್ಥಮಾಡಿಕೊಂಡು ವಿನೀತನಾಗಿ ಒಂದು ಅರ್ಜಿಪತ್ರವನ್ನು ತನ್ನ ಚೌಕಿದಾರನ ಕೈಯಲ್ಲಿ ನೀಡಿ ಸೇನಾಧಿಪತಿ ಮುಝುಫ಼ರುದ್ದೀನ್ ಖಾನ್ ಬಳಿಗೆ ರವಾನಿಸಿದ. ಈ ವಿನಂತಿ ಪತ್ರದಲ್ಲಿ ತನಗೆ ಸ್ವಲ್ಪ ಕಾಲಾವಕಾಶ ನೀಡಬೇಕೆಂದು ಕೇಳಿಕೊಳ್ಳಲಾಗಿತ್ತು. ಈ ಸೇವಕ ಸದಾಕಾಲ ನಿಮ್ಮ ಸೇವಕನಾಗಿರುತ್ತಾನೆಂದು ತನ್ನ ಬಗ್ಗೆ ಆಶ್ವಾಸನೆಯನ್ನೂ ನೀಡಿದ. ಯಾಕೆಂದರೆ ಮೈಸೂರಿನ ರಾಜ ತನ್ನ ಮೇಲೆ ದ್ವೇಷಕಟ್ಟಿಕೊಂಡು ನನ್ನ ಪ್ರಾಂತ್ಯವನ್ನು ವಶಪಡಿಸಿಕೊಳ್ಳಲು ಹವಣಿಸಿದ್ದಾನೆಂದೂ, ಈ ಪ್ರಾಂತ್ಯದಲ್ಲಿ ಜನರ ಮೇಲೆ ದೌರ್ಜನ್ಯ, ದಮನಕಾರಿ ಕೃತ್ಯಗಳಿಂದ ಭಯಭೀತರನ್ನಾಗಿ ಮಾಡಲು ಪ್ರಯತ್ನಿಸುತ್ತಿದ್ದಾನೆಂದೂ ಅವನು ತನ್ನ ಪತ್ರದಲ್ಲಿ ವ್ಯಕ್ತಪಡಿಸಿದ್ದ.

ಈ ಕಾರಣಕ್ಕಾಗಿ ನಿಮ್ಮ ವಿನೀತ ಸೇವಕನಾದ ನಾನು ನಿಮ್ಮೊಂದಿಗೆ ವಿನಂತಿಸಿ ಕೊಳ್ಳುವುದೇನೆಂದರೆ ಬಾದಶಾಹರ ಸೇನಾಧಿಪತಿ ಖಾನ್ ನುಸ್ರತ್ ಕರೀಮರು ಈ ವಿಚಾರಕ್ಕೆ ಮಹತ್ವ ನೀಡಿ ಜಾಗರೂಕರಾಗಿರಿ. ಈ ಕುತಂತ್ರಿ ಮೈಸೂರಿನ ರಾಜ ಧಿಮಾಕಿನಿಂದ ತನ್ನ ಹದ್ದು ಮೀರಿರುವುದರಿಂದ ನನ್ನ ಪ್ರಾಂತ್ಯದೊಳಗೆ ಪ್ರವೇಶಿಸದಂತೆ ಎಚ್ಚರಿಕೆ ನೀಡಿ ನಮ್ಮನ್ನು ಕಾಪಾಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ನಿಮ್ಮ ಕಪ್ಪಕಾಣಿಕೆಯ ಬೇಡಿಕೆಯನ್ನು ಕ್ಲಪ್ತ ಸಮಯದಲ್ಲಿ ಬಾದಶಾಹರ ಸುಪರ್ದಿಗೆ ಒಪ್ಪಿಸುವ ಆಶ್ವಾಸನೆಯನ್ನು ನೀಡುತ್ತೇನೆ ಎಂದು ಪತ್ರದಲ್ಲಿ ಭದ್ರಾ ಪ್ರಾಂತ್ಯದ ರಾಜ ಬಿನ್ನೈಸಿಕೊಂಡಿದ್ದ. ಪರಿಸ್ಥಿತಿಯನ್ನು ಅವಲೋಕಿಸಿ ಪರಾಮರ್ಶಿಸಿದ ಸೇನಾಧಿಪತಿ ನುಸ್ರತ್ ಕರೀಮ್ ಅವನ ಬೇಡಿಕೆಯನ್ನು ಮಂಜೂರು ಮಾಡಿದ.

ಬಾದಶಾಹರ ಆಜ್ಞೆಯ ಮೇರೆಗೆ ತನ್ನೊಂದಿಗಿದ್ದ ದೊಡ್ಡ ಪದವಿಯ ಮಂತ್ರಿಗಳು, ಶೂರ ಸೇನಾನಿ ಸರದಾರರೊಂದಿಗೆ ವೇಲೂರಿನ ಕೋಟೆಯಿಂದ ಹೊರಟು ತನ್ನ ವಿಜಯಶಾಲಿ ವೀರ ಸೈನಿಕರೊಂದಿಗೆ ಮೈಸೂರಿನ ರಾಜನನ್ನು ಎದುರಿಸುವುದಕ್ಕಾಗಿ ಪ್ರಯಾಣಬೆಳೆಸಿದರು.

ನಜ್ಮ್

ಸೂಯೆ ಬದ್ರಾ ಚ್ಯೂಂ ಖಾನ್ ನುಸ್ರತ್ ಗುಝೀನ್
ರವಾಂ ಗಶ್ತ್ ಬಾ ಶೇರೆ ಮರ್ದಾನೆ ದೀನ್
ಬದ್ರಾ ಪ್ರಾಂತ್ಯದತ್ತ ಖಾನ್ ನುಸ್ರತ್ ಪಯಣಿಸಿ ಅಲ್ಲಿ ತಂಗಿದರು

ಧರ್ಮಧುರಂಧರ ಬಹದ್ದೂರ ಸಿಂಹಗಳಂತಹ ಸರದಾರರೊಂದಿಗೆ ಅಲ್ಲಿಗೆ ತೆರಳಿದರು.

ಝುಬಸ್ ಫೌಜಿ ನಾಮ್ ಆವರಾನೇ ಕೋಹದಶ್ತ್
ಚ್ಯೂಂ ದರಿಯಾ ಎ ಜೋಶಾನ್ ಕರೋಶಿಂದ ಗಶ್ತ್
ಈ ಪರ್ವತ ಕಾಡುಗಳು ಸೇನೆ ಆಗಮಿಸಿದಂತೆಯೇ
ಕೇಳಿಸಿಕೊಂಡವು ಸಾಗರದ ನೀರಿನ ಭೋರ್ಗರೆತದಂತೆಯೇ.

ಶುದ್ ಅಝ್ ಝಿರಾ ಪೋಶಾನೆ ಫೌಲಾದೆ ಜಂಗ್
ಬಹರ್ ಸೂ ರವಾಂ ದಜ್ಲಯೆ ಪುರ್ ನಹಂಗ್
ಈ ಸಿಪಾಯಿಗಳು ಲೋಹದ ಎದೆಗವಚಗಳನ್ನು ಧರಿಸಿ ಆಗಮಿಸಿದ ಹಾಗೆಯೇ
ಕಂಡುಬಂತು ಎಲ್ಲ ದಿಕ್ಕುಗಳಲ್ಲೂ ದಜ್ಲಾ ಸಮುದ್ರ ಅವಚಿಕೊಂಡ ಹಾಗೆ.

ಪೈ ಹಮ್ ರವಾಂ ಆಹೀನೆ ಪೈಕರಾನ್
ಸುಪರ್ ದರ್ ಸರಾವರ್ದ್ ಯಕ್ಷರ್ ಸರಾನ್
ಅವರೊಂದಿಗೆ ಬಾಣಹೂಡುವ ಬಿಲ್ಲುಗಾರ ಶೂರರು ಇದ್ದರು
ತಲೆಯೆತ್ತಿ ಗರ್ವದಿಂದ ಅವರು ಕಾಲುಹಾಕುತ್ತಿದ್ದರು.

ಶುದಂದ್ ಆಂ ಚುನಾ ಗರ್‌ಮೆರೋ ಸರ್‌ಬಸರ್
ಕೆ ಬಸ್ತಂದ್ ಅಝ್ ಬರ್ಖೆಲಾಮೆ ಕಮರ್
ಬಿಸಿಗಾಳಿಯೂ ಕೂಡ ಅವರಿಗೆ ತಲೆತಗ್ಗಿಸಿ ನಮಸ್ಕಾರ ಮಾಡುತ್ತಿತ್ತು
ಜೊತೆಗೆ ಮಿಂಚು ಕೂಡ ತನ್ನ ಮಿಂಚುವ ಸೊಂಟವನ್ನು ಕಟ್ಟಿಕೊಂಡು ತಯಾರಾಗಿತ್ತು.

ಸೈನ್ಯವು ಮುಂದೆ ಪ್ರಯಾಣಿಸಿದಾಗ ಬಾದಶಾಹರ ಕಡೆಯಿಂದ ಅವರ ರಾಜದರ್ಬಾರಿನ ಕೃಪೆಯ ಸಂತಸದ ವಾರ್ತೆ ಎಲ್ಲರಿಗೂ ಕೇಳಿಸಲಾಯಿತು. ಬೆಹರ್ ಖಾನರ ಮಗ ಶೆಹನ್‌ಶಾಹ್ ಇಬ್ರಾಹಿಂ ಖಾನ್‌ರ ಮಗನಾಗಿದ್ದ ಬಾದಶಾಹರು ಅತ್ಯಂತ ಬೆಲೆಬಾಳುವ ಉಡುಗೊರೆಗಳನ್ನು ಸೊಂಟದಲ್ಲಿ ಧರಿಸುವ ಅಮೂಲ್ಯ ಕತ್ತಿಯನ್ನು ಕಳುಹಿಸಿದ್ದರು. ಖಾನ್ ನುಸ್ರತ್ ಕರೀಮ್ ಇಂತಹ ಅಮೂಲ್ಯ ಉಡುಗೊರೆ ಗಳನ್ನು ನೀಡಿದ್ದಕ್ಕಾಗಿ ಬಾದಶಾಹರಿಗೆ ಕೃತಜ್ಞತೆಯ ನಮಸ್ಕಾರ ಮಾಡಿದ. ಈ ರೀತಿ ಗೌರವಾದರಗಳನ್ನು ನೀಡುವ ಪರಂಪರೆ ಅಪ್ಪ ಇಬ್ರಾಹಿಂ ಖಾನರ (ಎರಡನೆ ಇಬ್ರಾಹಿಂ ಆದಿಲ್ ಷಾ) ಕಾಲದಿಂದ ನಡೆದು ಬಂದಿತ್ತು. ವಿಶ್ವಮಾನ್ಯ ಬಾದಶಾಹರ ಮೂಲಕ ತನಗೆ ದೊರೆತ ಉಡುಗೊರೆ ಗೌರವಗಳನ್ನು ನೆನೆಯುತ್ತ ಉತ್ಸಾಹದೊಂದಿಗೆ, ವೈರಿ ರಾಜರನ್ನು ಸೋಲಿಸುವ ಮೂಲಕ ರಾಜ್ಯದ ಗಡಿಯನ್ನು ವಿಸ್ತರಿಸುವ ದಂಡಯಾತ್ರೆಯನ್ನು ಮುಂದುವರಿಸಿ ಅಣ್ಣೂರು ಎಂಬ ಸ್ಥಳಕ್ಕೆ ತಲಪಿದರು. ಅಲ್ಲಿ

ಭದ್ರದ ರಾಜನ ಕೋಟೆಯಿತ್ತು. ಸೈನ್ಯವು ಅಲ್ಲಿಗೆ ತಲಪಿದಕೂಡಲೇ ಅಲ್ಲಿದ್ದ ಕೆಲವು ವೈರಿಗಳನ್ನು ನದಿಯಲ್ಲಿ ಮಣ್ಣು ಸೇರಿ ಹರಿಯುವ ಹಾಗೆ ಓಡುವಂತೆ ಮಾಡಿದರು. ಬಾದಶಾಹರ ಅಗಣಿತ ಇಸ್ಲಾಮಿ ಸೈನ್ಯದ ಕುದುರೆಗಳ ಕಾಲುಗಳ ಗೊರಸುಗಳ ಖರಖರ ಸದ್ದು ಅದರಿಂದ ಹುಟ್ಟುವ ಧೂಳು ಆಕಾಶದಿಂದ ಕಾಣುವ ಸೂರ್ಯನ ಕಿರಣಗಳನ್ನು ಕೂಡ ಮಂದಗೊಳಿಸಿತು. ಈ ಗುಲ್ಲು ಗಲಾಟೆಯಿಂದ ಭಯಭೀತರಾದ ಮೈಸೂರಿನ ರಾಜನ ಪ್ರಾಂತ್ಯದ ಗಡಿಮೇರೆಗಳು ಚೆಲ್ಲಾಪಿಲ್ಲಿಯಾದವು. ಅಲ್ಲಿನ ಪ್ರಜೆಗಳ ಮೇಲೆ ಸೈನ್ಯದ ಆಟಾಟೋಪದ ಪ್ರಭಾವವುಂಟಾಗಿ ಭಯ ಭೀತರಾದದರು. ಭಯದಿಂದ ವೈರಿಗಳ ಮೈಯ ಎಲುಬುಗಳು ಸೀಸದಂತೆ ಕರಗಿ ನೀರಾಗಿ ಮೈದಾನುಗಳು ಹಾಗೂ ಕಾಡುಪ್ರದೇಶಗಳಲ್ಲಿ ಹರಿಯತೊಡಗಿತು.

ಅಭ್ಯಾತ್

ಚುನಾಶುದ್ ಕಾರ್‌ಗರ್ ಹೈಬತ್ ಬ ಕುಫ್ಫಾರ್
ಕೆ ಅಝ್ ಹಲ್ಕಯೆ ಪುರ್‌ಪೇಚ್ ಝುನ್ನಾರ್
ಈ ವೈರಿಗಳ ಮೇಲೆ ಭಯದ ಛಾಯೆ ಆವರಿಸಿತು
ಅವರ ಜನಿವಾರಗಳಲ್ಲಿ ಗಂಟು ಬಿದ್ದಂತಾಯಿತು.

ಚ್ಯೂಂ ಮಾರೆ ಕುಶ್ತ ಬರ್ ಗರ್‌ದಂದ್ ಬೇರೂನ್
ಬಖಾಕೆ ತೀರ ಗಲ್ತಿದಂದ್ ದರ್ ಖೂನ್
ಸರ್ಪ ತನ್ನ ಬಿಲದಿಂದ ತಲೆ ಯಾವಾಗ ಹೊರಹಾಕುವುದೋ
ಆಗ ರಕ್ತದ ರಾಡಿಯಲ್ಲಿ ಮುಳುಗಿ ಮಣ್ಣು ಸೇರುವುದು.

ಶೈತಾನನ ಪ್ರತಿರೂಪದಂತಿದ್ದ ಮೈಸೂರಿನ ರಾಜ ತನ್ನ ರಾಜ್ಯ ಸಂಪೂರ್ಣವಾಗಿ ಕೈಯಿಂದ ಜಾರಿಹೋಗುತ್ತಿದೆ ಹಾಗೂ ತಾನು ಸೋಲುತ್ತಿದ್ದೇನೆಂದು ತಿಳಿದಾಗ ಸಿಟ್ಟು, ದ್ವೇಷದಿಂದೊಡಗೂಡಿ ಕುತಂತ್ರಗಳನ್ನು ಮಾಡತೊಡಗಿದ. ನಿಜವಾಗಿ ಇವು ಅವನ ಹುಂಬತನ ಮತ್ತು ಬೆಲೆಯಿಲ್ಲದ ಯೋಚನೆಗಳಾಗಿದ್ದವು. ಅಲ್ಲಲ್ಲಿ ಚದುರಿದ್ದ ತನ್ನ ಸೇನೆ ಮತ್ತು ಸೇನಾ ಸಾಮಾಗ್ರಿಗಳು, ಹತ್ಯಾರುಗಳನ್ನು ಒಟ್ಟುಸೇರಿಸಿ, ಬಾಲಾಜಿ ಹೈಬತ್ ರಾವ್‌ನನ್ನು ತನ್ನ ಜೊತೆಗೆ ಕರೆದುಕೊಂಡ. ತನ್ನ ಸೈನ್ಯದಲ್ಲಿ ಅವನನ್ನು ಸೇರಿಸಿಕೊಂಡು ಯುದ್ಧದ ಧ್ವಜವನ್ನು ಎತ್ತಿಹಿಡಿದು ತನ್ನ ಯುದ್ಧಾಕಾಂಕ್ಷೆಯನ್ನು ಪ್ರಕಟಿಸಿದ. ಬಾಲಾಜಿ ಹೈಬತ್ ರಾವ್ ಯಾರೆಂದರೆ ಹಿಂದೆ ಬಾದಶಾಹರ ಆಸ್ಥಾನದಲ್ಲಿ ಅಧಿಕಾರ ಪಡೆದ ಓರ್ವ ಪ್ರತಿಷ್ಠಿತ ವ್ಯಕ್ತಿಯಾಗಿದ್ದ. ತನ್ನ ದುಷ್ಕೃತ್ಯಗಳಿಂದಾಗಿ ಶಿಕ್ಷೆಗೆ ಗುರಿಯಾಗಿ ಹೊರಹಾಕಲ್ಪಟ್ಟ ನಂತರ ವೈರಿಗಳೊಂದಿಗೆ ಸೇರಿಕೊಂಡಿದ್ದ. ಬಾಲಾಜಿ ಹೈಬತ್ ರಾವ್ ಬಾದಶಾಹರ ಸೈನಿಕರ ವಿರುದ್ಧ ಯುದ್ಧಹೂಡಲು ಮುಂದುವರಿದಾಗ ಸೇನಾಧಿಪತಿ ಖಾನ್ ನುಸ್ರತ್ ಝುಫರ್ ತುಮಾನರಿಗೆ ಇದರ ಸುಳಿವು ಸಿಕ್ಕಿತು. ಈ ಸುದ್ದಿ ತಲಪಿದ ಕೂಡಲೇ ಈ

ವೈರಿಗಳನ್ನು ಓಡಿಸುವುದಕ್ಕಾಗಿ ತನ್ನ ಎಂದಿನ ನಿಷ್ಠಾವಂತ ವಿಶ್ವಾಸಾರ್ಹ ಸರದಾರ ಸಯ್ಯದ್ ಮಸೂದ್‌ನ ನೇತೃತ್ವದಲ್ಲಿ ಯುವಕರ ದೊಡ್ಡ ಸೈನ್ಯತಂಡದೊಂದಿಗೆ ರಣರಂಗಕ್ಕೆ ವೈರಿಗಳು ತಲಪುವ ಮುಂಚೆಯೇ ಹೋಗಿ ನಿಲ್ಲಿಸಿದ.

ಸಯ್ಯದ್ ಮಸೂದ್ ತನ್ನ ತಂಡದೊಂದಿಗೆ ಹಾದಿಯಲ್ಲಿ ಪ್ರಯಾಣಿಸುತ್ತ ವೈರಿ ಸೈನ್ಯಗಳ ಎದುರು ತಲಪಿದರು. ಈ ಧೈರ್ಯಶಾಲಿ ಬಲಿಷ್ಠ ಸೇನೆಯ ಸರದಾರರು ರಣರಂಗಕ್ಕೆ ತಲಪಿದಾಗ ವೈರಿಗಳು ತಲವಾರುಗಳನ್ನು ಎತ್ತಿಹಿಡಿದು ಎದುರಿಸುವುದಕ್ಕಾಗಿ ಮುಂದೊತ್ತಿದರು. ಭೀಕರ ಯುದ್ಧದ ತೂಫಾನು ಮಹಾ ಸಾಗರ ಕುಲ್ಜುಮ್‌ನಲ್ಲಿ ದೊಡ್ಡ ಅಲೆಗಳೆದ್ದಂತೆ ರಣರಂಗದಲ್ಲಿ ಅಲ್ಲೋಲಕಲ್ಲೋಲವಾಯಿತು. ಈ ಕುತಂತ್ರಿ ದುಷ್ಟಬುದ್ಧಿಯ ವೈರಿಗಳ ಕರುಳನ್ನು ಎಳೆದು ಹಾಕುವ ಹದ್ದುಗಳು ನೀರುಕೋಳಿಗಳನ್ನು ಎಗರಿಸಿಕೊಂಡೊಯ್ಯುತ್ತಿದ್ದವು. ಬಾದಶಹರ ಬಹದ್ದೂರ ಸಿಪಾಯಿಗಳ ರಕ್ತಸಿಕ್ತ ಎದೆಗಳು ಕೆಂಬಣ್ಣದ ಮೈದಾನಗಳಂತೆ ಕಂಡುಬಂದು, ಅದರಲ್ಲಿ ಗಾಯಗಳ ಹೂಗಳು ಅರಳಿದಂತೆ ಕಾಣಿಸಿತು. ತೋಪಿನಿಂದ ಹೊರಟ ಬೆಂಕಿಯುಂಡೆಗಳು ಮಳೆಗರೆದಾಗ ಅದರ ಜ್ವಾಲೆ ಆಕಾಶದ ಸುರ್ೈಯ್ಯಾ ನಕ್ಷತ್ರದ್ ಎತ್ತರಕ್ಕೆ ತಲಪಿತ್ತು. ತೋಪುಗಳ ಆಸ್ಫೋಟದ ಗರ್ಜನೆಗೆ ವೈರಿಗಳ ತಲೆಬುರುಡೆಗಳು ಚೂರುಚೂರಾಗಿ ಮಣ್ಣುಸೇರಿದವು.

ನಜ್ಮ್

ತಫಂಗ್ ಆಂಚ ಗಶ್ತ್ ಆತಿಶ್ ಫರೋಝ್
ಕೆ ಶುದ್ ಹರ್ ಶರರ್ ಶೋಲಯೆ ಬರ್ಕ್ ಸೋಝ್
ಬೆಂಕಿಯುಗುಳುವ ಬಾಣಗಳು ಚಲಿಸಿದವು ಎಂತು
ಎಲ್ಲ ಕಿಡಿಗಳೂ ಜ್ವಾಲೆಯಾಗಿ ಭುಗಿಲೆದ್ದಿತು.

ಚುನಾ ಗರ್ಮ್ ಶುದ್ ಕುರ್‍ರಯೆ ಕಾರ್ ಸಾದ್
ಕೆ ಜಸ್ತ್ ಅಸ್‌ಫಲಕ್ ಕುತುಬ್ ಹಂ ಚ್ಯೂಂ ಶರಾರ್
ರಣರಂಗವು ಕುದಿದು ಎಷ್ಟೊಂದು ಬಿಸಿಯೇರಿತು
ಕುತುಬ್ ಎಂಬ ನಕ್ಷತ್ರವೂ ಕೂಡ ಗಗನದಿಂದ ಕಿಡಿಯಾಗಿ ಉರುಳಿತು.

ಹಿಝಂಗ್ ಜಿಗರ್ ಹಾ ಶುದ್ ಅಲ್ಮಸ್ ತೇಝ್
ಸಿಪರ್ ಗಶ್ತ್ ಅಝ್ ಖುಬ್ಬಯೇ ಯಾಕೂತ್ ಖೇಝ್
ಖಡ್ಗಗಳ ಧಾರೆ ಅವರನ್ನು ಹರಿತ ವಜ್ರದಂತೆ ಹರಿದುಹಾಕಿತು
ಮಾಣಿಕ್ಯದ ಗಣಿಯಂತೆ ರಕ್ತ ಹೊರ ಹರಿಯಿತು.

ಝೆ ಬರ್‌ಜಸ್ತನ್ ಜೆ ಪೈಕೆ ಜಾನೆ ಸಿತಾನ್
ಬಲಾ ಖೇಝ್ ಶುದ್ ಖಾನ ಹಾಯೆ ಕಮಾನ್

ಜೀವ ಹರಣಗೊಳಿಸುವ ತೀವ್ರ ಬಾಣಗಳು ಹಾರಾಡಿದವು
ಬಿಲ್ಲಿನ ಕಮಾನುಗಳು ಆಪತ್ತಿನ ಗುಲ್ಲೆಬ್ಬಿಸಿದವು.

ಝೆ ಶೆಹಮೇ ದಿಲೇರಾನೆ ಫೈರೋಝ್ ಜಂಗ್
ಪೈ ನಾಲಯೆ ಅಲ್ ಅಮಾನ್ ಬೈದ್ ರಂಗ್
ಈ ಪುಣ್ಯವಂತ ಬಹದ್ದೂರರ ಬಾಣಗಳ ಹಾರಾಟದಿಂದ
ಶಾಂತಿ ಶಾಂತಿ ಎಂಬ ಕೂಗು ಹೊರಟಿತು ವೈರಿಗಳ ಗಂಟಲುಗಳಿಂದ.

ಝೆ ರೆಹ್‌ಗಶ್ತ್ ಅಝ್ ಹಲ್ವಾ ಯಕ್ಸರ್ ದಹಾನ್
ಬರಾವರ್ದ್ ಅಝ್‌ನೋಂಕೆ ಪೈಕಾ ಝುಬಾನ್
ಅವರ ಮುಖಗಳು ಒಂದೇ ಸವನೆ ಒಡೆದು ಹೋದವು
ಬಾಣಗಳ ಮೊನೆ ತಾಗಿದ ರಭಸಕೆ ಅವರ ನಾಲಗೆಗಳು ಹೊರಚಾಚಿದವು.

ಬಿಲ್ಲು ಬಾಣಗಳ ಪಟುಗಳು ಒಂದೇ ಸವನೆ ಹೊಡೆದ ಬಾಣಗಳ ಮಳೆಯಿಂದ ವೈರಿಗಳ ಉಸಿರಾಟವು ನಿಂತುಹೋದಂತಾಯಿತು. ಒಂದರ ಹಿಂದೆ ಒಂದರಂತೆ ಬಾಣಗಳು ಸಾಲಾಗಿ ಹಾರಿದ್ದರಿಂದ ವೈರಿ ಸೈನ್ಯದ ಪರಿಸ್ಥಿತಿ ಕಬಾಬ್ ಬೇಯುವ ಕಡ್ಡಿಗೆ ಸಿಲುಕಿ ಬೆಂಕಿಯಲ್ಲಿ ಸುಟ್ಟು ಬೆಂದಂತಾಯಿತು. ಸಯ್ಯದ್ ಮಸೂದ್ ಯುದ್ಧದ ಪ್ರತಿಯೊಂದು ಆಯಾಮಗಳ ಪರಿಣಿತನಾಗಿದ್ದ. ವೈರಿ ಸೈನ್ಯದವರು ಸೋತು ಸುಣ್ಣವಾಗಿ ಕಾಲುಗಳು ಸವೆದು ಸೋತುಹೋಗುತ್ತಿರುವುದನ್ನು ಕೂಡಲೇ ಗಮನಿಸಿದ್ದ. ಬಾಲಾಜಿ ಹೈಬತ್ ರಾವ್ ತನ್ನ ನಮಕ್ ಹರಾಮ್ ಬುದ್ಧಿಯಿಂದಾಗಿ ಕರುಣೆಯಿಲ್ಲದ ತಲವಾರಿನಿಂದ ಶಿರಚ್ಛೇಧಗೊಳಿಸಲ್ಪಟ್ಟು ಸಾಮಾನ್ಯರು ನಡೆಯುವ ರಸ್ತೆಯ ಮೇಲೆ ಎಸೆಯಲ್ಪಟ್ಟಿದ್ದ. ಇವನ ಮಾಡಿದಂತಹ ಸ್ವಾಮಿದ್ರೋಹದ ಕೃತ್ಯಗಳ ಪರಿಣಾಮವು ಒಂದು ಪಾಠವಾಗಲೆಂದು ಹಾರೈಸಲಾಯಿತು.

ಈ ಘಟನೆಯ ನಂತರ ಯಾರು ಕೂಡ ಬಾದಶಾಹರ ಮುಂದೆ ಇಂತಹ ಸ್ವಾಮಿದ್ರೋಹದ ಕೆಲಸಗಳನ್ನು ಮಾಡದಿರಲೆಂಬ ಎಚ್ಚರಿಕೆಯನ್ನು ನೀಡಲಾಯಿತು.

ಶೇರ್

ಹರ್ ಕೆ ದಂ ಝುತ್ ಅಝ್ ಕಿಲಾಫೆ ಖುಸ್ರವೋ ದುನಿಯಾ ವೊ ದೀನ್
ತಾ ಅಬದ್ ಗೋಯೆ ಸರೇ ವೂ ಮಾನ್ ದೆ ಗಲ್ತಾನ್ ಬರ್ ಝುಮೀನ್
ಧರ್ಮಧುರಂದರ ಜಗದ ಬಾದಶಾಹರ ವಿರುದ್ಧ ಸೊಲ್ಲೆತ್ತುವರು
ಶಾಶ್ವತವಾಗಿ ತಮ್ಮ ಶಿರವನ್ನು ಮಣ್ಣಿನೊಳಗೆ ಸೇರಿಸಲ್ಪಡುವರು.

ಸುಸ್ತಾಗಿ ಕೈಚೆಲ್ಲಿ ಕೂತ ಕೆಟ್ಟಚಾಳಿಯ ಮೈಸೂರಿನ ರಾಜ ತನ್ನ ಸೈನ್ಯ ಬಾದಶಾಹರ ಶೂರ ಸರದಾರರ ಹರಿತ ಖಡ್ಗಗಳ ಮುಂದೆ ಸೋತುಹೋಗಿ ಸೋಲಿನ ಸಾಗರದಲ್ಲಿ

ಮುಳುಗಿಹೋಯಿತೆಂಬ ವಾರ್ತೆ ಕೇಳಿ ಹಾಗು ಬಾಲಾಜಿ ಹೈಬತ್ ರಾವನ ಶಿರಚ್ಛೇಧವಾಗಿ ಬಹದ್ದೂರ ಸಿಪಾಯಿಗಳ ಕುದುರೆಗಳ ಕಾಲ ಗೊರಸಿನಡಿಯಲ್ಲಿ ಮಣ್ಣು ಸೇರಿತೆಂಬ ವರ್ತಮಾನದಿಂದ ಅವನ ಎದೆಬಡಿತ ಭಯದಿಂದ ಎಷ್ಟೊಂದು ತೀವ್ರವಾಯಿತೆಂದರೆ ತನ್ನಮೇಲೆ ತಾನೇ ಜಿಗುಪ್ಸೆಪಟ್ಟುಕೊಂಡ. ಪಶ್ಚಾತ್ತಾಪ ಪಟ್ಟುಕೊಂಡು ಕ್ಷಮೆಯಾಚಿಸುತ್ತ ತನಗೆ ಜೀವದಾನ ಮಾಡಬೇಕೆಂದು ಬೇಡಿಕೊಳ್ಳುತ್ತ ತನ್ನ ದಿವಾನನ್ನು ಸೇನಾಧಿಪತಿ ಖಾನ್ ಝುಫರ್ ತುಮಾನನ ಬಳಿ ಕಳುಹಿಸಿದ. ಅವನ ಮೂಲಕ ಕಳುಹಿಸಿದ ಸಂದೇಶ ಹೀಗಿತ್ತು: "ನನ್ನಲ್ಲಿ ಜಮೆಯಾಗಿರುವ ಸಂಪತ್ತಿನ ಬೊಕ್ಕಸದಿಂದ ಹಾಗೂ ನನ್ನ ರಾಜ್ಯದಲ್ಲಿ ವಸೂಲಾಗುವ ಪ್ರತಿ ವರ್ಷದ ಕಂದಾಯ, ತೆರಿಗೆಗಳಿಂದ ಕಪ್ಪಕಾಣಿಕೆಯಾಗಿ ಬಾದಶಾಹರ ದರ್ಬಾರಿಗೆ ಪ್ರತಿ ವರ್ಷವೂ ಒಪ್ಪಿಸುತ್ತೇನೆಂದು ವಾಗ್ದಾನ ಮಾಡುತ್ತೇನೆ".

ಮೈಸೂರು ರಾಜನ ಹೇಳಿಕೆಯ ಸಂದೇಶವನ್ನು ಸೇನಾಧಿಪತಿ ಖಾನ್ ನುಸ್ರತ್ ಕರೀಮ್ ಬಾದಶಾಹರ ತೀರ್ಮಾನಕ್ಕಾಗಿ ಕಳುಹಿಸಿದರು. ಬಾದಶಾಹರು ಇದಕ್ಕೆ ಉತ್ತರಿಸಿ, ಮೈಸೂರು ರಾಜನ ಪ್ರಾಂತ್ಯದಲ್ಲಿ ಇರುವ ಪಾಳು ಬಿದ್ದಿರರುವ ಭೂಮಿಯನ್ನು ವಶಪಡಿಸಿಕೊಂಡಿರುವುದನ್ನು ಅವನಿಗೆ ಹಿಂತಿರುಗಿಸಬೇಕೆಂದು ಆಜ್ಞೆ ಮಾಡಿದರು. ಬಧ್ರದ ಪ್ರಾಮಾಣಿಕ ನಿಷ್ಠಾವಂತ ಸೇವಕನಂತಿರುವ ರಾಜ ಬಾದಶಾಹರ ಸಹಾಯ ಮತ್ತು ಕೃಪೆಗಾಗಿ ತನ್ನ ಧನ್ಯವಾದವನ್ನು ಹೇಳಿದ. ತನಗೆ ಮುಂದೆಯೂ ಇದೇರೀತಿಯಲ್ಲಿ ಬಾದಶಾಹರು ತಮ್ಮ ಕೃಪೆಯನ್ನು ತೋರಿ ಪೊರೆಯಬೇಕೆಂದೂ ಬಿನ್ನೈಸಿಕೊಂಡ.

ಯುದ್ಧರಂಗದ ಅಜೇಯ ಸರದಾರ ಝುಫರುದ್ದೀನ್ ಖಾನ್ ಮುಹಮ್ಮದ್‌ರನ್ನು ಬಾದಶಾಹರು ತನ್ನ ಪರವಾಗಿ ಮೈಸೂರು ರಾಜನ ಬಳಿ ಕಳುಹಿಸಿ ಎಚ್ಚರಿಕೆಯನ್ನು ನೀಡಲಾಯಿತು. ಅವನು ತನ್ನ ಬಳಿ ಜಮೆಯಾಗಿರುವ ಲೆಕ್ಕವಿಲ್ಲದಷ್ಟು ನಗದು ಮತ್ತು ಎಲ್ಲ ಸಂಪತ್ತು, ಸಾಮಾನು ಸರಂಜಾಮುಗಳನ್ನು, ಸೊಂಡಿಲುಗಳ ನೆರಳಲ್ಲಿ ನೀರಿನ ಒರತೆ ಮೂಡಿಸುವ ತಾಕತ್ತಿನ ಐವತ್ತು ಯುದ್ಧನಿಪುಣ ಆನೆಗಳನ್ನು ಖಾನ್ ಝುಫರ್ ಕರೀಮರಿಗೆ ನೀಡ ಬೇಕೆಂದು ಬಾದಶಾಹರು ಆಜ್ಞೆಮಾಡಿದರು. ಖಾನ್ ನುಸ್ರತ್ ಮುಝುಫ್ಫರುದ್ದೀನ್ ಮುಹಮ್ಮದ್ ಈ ರಾಜರುಗಳು ಒಪ್ಪಿಸಿದ ಸಂಪತ್ತು ಸಾಮಾಗ್ರಿಗಳನ್ನು ತಮ್ಮ ಜೊತೆಗೆ ಸಾಗಿಸಿ ಬಾದಶಾಹರ ದರ್ಬಾರಿಗೆ ತಲಪಿಸಿದರು. ಅವರಿಗೆ ಸರ್ವಕಾಲವೂ ವಿಜಯದ ದುವಾ ಪ್ರಾರ್ಥನೆಯನ್ನು ಮಾಡಿ ವಿಶ್ವದ ಎಲ್ಲ ಸರದಾರರ ಹಾಗೂ ಬಾದಶಾಹರ ಅವಶ್ಯಕ ಆಕಾಂಕ್ಷೆಗಳನ್ನು ಪೂರೈಸುವ ಶಕ್ತಿಯು ದೊರಕಲಿ ಎಂದು ಹಾರೈಸಿದರು.

ರುಬಾಯಿ

ತಾ ಬಾ ಅಮ್ರೆ ಹೈ ನಯೇ ಹಿಮ್ಮತಾಹೆ ದರ್ ಇಕ್‌ಲೀನ್ ಉಜೂದ್
ಅಹ್ಲೆ ದೀನ್ ಬಾಶಂದ್ ಅಝ್ ದೀನೆ ಮುಹಮ್ಮದ್ ಪತ್‌ಹ ಯಾಬ್
ಅಲ್ಲಾಹನ ಆಜ್ಞೆಯಿಂದ, ಬಾದಶಾಹರ ಶೌರ್ಯದಿಂದಾಗಿ ಈ ವಿಶ್ವ ತಲೆಯೆತ್ತಿ ನಿಂತಿದೆ
ಧರ್ಮಪಾಲಕರೆಂದರೆ ಮುಹಮ್ಮದರ ಧರ್ಮಕ್ಕೆ ವಿಜಯ ತಂದವರು.

ಖುಸ್ರವೋ ಗಾಝಿ ಲಕಬ್ ಕಿಶ್ವರ್ ಸತಾನ್ ಬಾದಾ ಮುದಾಮ್
ಚರ್ಕ್ ಗರ್ದಾನ್ ಬಾದ್ ಅಝ್ ಗಿರ್ದೆ ರಾಹ್ ವೂ ಬಹ್ರಯಾಬ್.
ಅವರ ಪದವಿ ಗೌರವಾನ್ವಿತ ವಿಜಯೀ ಶೂರ ಸದಾ ವಿಶ್ವವಿಜೇತರು
ತಿರುಗುತ್ತಿರುವ ಆಕಾಶವೂ ನಾಲ್ಕೂದಿಕ್ಕಿನಲಿ ಸುತ್ತುತ್ತಿರುವುದರಿಂದ ಜಯಿಸಿದೆ.

ಸೂಚನೆ: ಈ ಪುಸ್ತಕದ ಲೇಖನಗಳು ಪೂರ್ಣಗೊಂಡವು. ಇದರ ಹೆಸರು 'ಮುಹಮ್ಮದ್ ನಾಮಾ' ಎಂದಿಡಲಾಗಿದೆ. ಇದು ಎರಡನೆ ಇಬ್ರಾಹಿಂ ಆದಿಲ್ ಷಾನ ಮಗ ಶಾಹೆ ಸಿಕಂದರ್ ಬಾದಶಾಹ ಮುಹಮ್ಮದ್ ಷಾ, (ಅನಾರಲ್ಲಾಹು ಬುರ್ಹಾನಹು– ಅಲ್ಲಾಹ ಅವರು ಬಿಟ್ಟುಹೋದ ನಿಶಾನೆಗಳನ್ನು ಹೊಳೆಯುವಂತೆ ಮಾಡಲಿ!) ದಕ್ಷಿಣ ಭಾರತದ ಸುಲ್ತಾನರ ಆಳ್ವಿಕೆಯ ವಿವರಗಳ ದಾಖಲೆಯಾಗಿದೆ. ಮೌಲವಿ ಜಹೂರಿಯವರ ಮಗ ಮೌಲಾನಾ ಮುಹಮ್ಮದ್ ಜಹೂರ್ ಈ ಪುಸ್ತಕ ದಾಖಲೆಯ ಲೇಖಕರಾಗಿದ್ದಾರೆ. ಇದನ್ನು ಗಯಾ ಜಿಲ್ಲೆಯ ನರ್ಹತ್‌ನಲ್ಲಿ ವಾಸಿಸುವ ಸಯ್ಯದ್ ಫಸೀ ಅಹ್ಮದ್ ದಬಾಜಿಯವರು ೧೯೨೦ಯಲ್ಲಿ ತನ್ನ ಕೈಬರಹದಲ್ಲಿ ಯಥಾಪ್ರತಿಯನ್ನು ಮಾಡಿದರು.

■

ಆದಿಲಶಾಹಿ ಅರಸು ಮನೆತನ ವಿಜಾಪುರದವರಾದ ನಮಗೆಲ್ಲ ಒಂದು ಹೆಮ್ಮೆ. ರಾಜಕೀಯ ಇತ್ಯಾದಿಗಳನ್ನು ಬಿಟ್ಟರೂ ಶಿಲ್ಪ-ಸಾಹಿತ್ಯಕ್ಷೇತ್ರಗಳಿಗೆ ಅದು ನೀಡಿದ ಕೊಡುಗೆ ಲೋಕಮಾನ್ಯವಾದುದು. ಈ ಕೊಡುಗೆಗಳಲ್ಲಿ ಶಿಲ್ಪದ ಬಗ್ಗೆ ಆಗಾಗ ಆಸಕ್ತಿ ವಹಿಸಿದ ನಾವು, ಸಾಹಿತ್ಯವನ್ನು ಅಲಕ್ಷಿಸುತ್ತ ಬಂದಿದ್ದೇವೆ. ಇದಕ್ಕೆ ಕಾರಣ, ಈ ಸಾಹಿತ್ಯ ದಖಣಿ ಉರ್ದು, ಪರ್ಶಿಯನ್‌ಗಳೆಂಬ ಅಪರಿಚಿತ ಭಾಷೆಗಳಲ್ಲಿರುವುದು ಮತ್ತು ಬಹಳಷ್ಟು ಕೃತಿಗಳು ಅಪ್ರಕಟಿತವಾಗಿರುವುದು. ಹೀಗಿದ್ದೂ ನಮ್ಮ ಸಾಂಸ್ಕೃತಿಕ ಆಸ್ತಿಯಾಗಿರುವ ಈ ಸಾಹಿತ್ಯದ ರಕ್ಷಣೆ, ಅನುವಾದ, ಪ್ರಸಾರ ನಮ್ಮ ಕರ್ತವ್ಯವಾಗಿದೆ.

ಇಂತಹ ಕಾರ್ಯಗಳನ್ನು ಪೂರೈಸುತ್ತ ಬಂದ ನಮ್ಮ 'ವಚನಪಿತಾಮಹ ಡಾ॥ ಫ.ಗು. ಹಳಕಟ್ಟಿ ಸಂಶೋಧನ ಸಂಸ್ಥೆ'ಯ ಮೂಲಕ ಈ ಕರ್ತವ್ಯವನ್ನು ಈಡೇರಿಸಲು ಯೋಚಿಸಿದ ಫಲ 'ಆದಿಲಶಾಹಿ ಸಾಹಿತ್ಯ ಪ್ರಕಟನ ಯೋಜನೆ'. ಈ ಕಾರ್ಯ ಭಾವಿಸಿದಷ್ಟು ಸುಲಭವಲ್ಲ. ಅಲ್ಲಲ್ಲಿ ಚದರಿ ಹೋಗಿರುವ ಪ್ರಕಟಿತ-ಅಪ್ರಕಟಿತ ಕೃತಿಗಳನ್ನು ಶೋಧಿಸುವ, ಸಂಗ್ರಹಿಸುವ, ಅನುವಾದಿಸುವ, ಪರಿಷ್ಕರಿಸಿ ಪ್ರಕಟಿಸುವ ಹಂತಗಳಲ್ಲಿ ವಿದ್ವಾಂಸರು ಶ್ರಮಿಸಬೇಕಾಗುತ್ತದೆ. ನಮ್ಮ ಸುದೈವಕ್ಕೆ ಸಮರ್ಥ ಯೋಜಕರಾದ ಡಾ.ಎಂ.ಎಂ.ಕಲಬುರ್ಗಿಯವರು, ಆದಿಲಶಾಹಿ ಅಭ್ಯಾಸಿಗಳಾದ ಡಾ. ಕೃಷ್ಣ ಕೊಲ್ಹಾರಕುಲಕರ್ಣಿಯವರು ಈ ಯೋಜನೆಯ ಹೊಣೆಹೊತ್ತಿದ್ದಾರೆ. ಸಲಹಾಸಮಿತಿಯ ಸದಸ್ಯರು-ಅನುವಾದಕರು ಈ ಕಾರ್ಯದಲ್ಲಿ ಆಸ್ಥೆವಹಿಸಿದ್ದಾರೆ. ಇವರೆಲ್ಲರ ಸಹಯೋಗದಲ್ಲಿ ಕನ್ನಡಕ್ಕೆ ಹೊಸದೊಂದು ಆಕರ ಸಂಪತ್ತು ಹೊರಬರುತ್ತಲಿರುವುದು ಸಂತೋಷದ ಸಂಗತಿಯಾಗಿದೆ.

ಎಂ. ಬಿ. ಪಾಟೀಲ

ಅಧ್ಯಕ್ಷರು, ಬಿ.ಎಲ್.ಡಿ.ಇ ಸಂಸ್ಥೆ, ಬಿಜಾಪುರ
ಜಲಸಂಪನ್ಮೂಲ ಸಚಿವರು, ಕರ್ನಾಟಕ ಸರಕಾರ

ಮುದ್ರಣ : ಪ್ರಿಂಟ್ ಪಾಯಿಂಟ್, ಮೊ : 97390 67359